
ಪ್ರೊ. ಎಂ.ವಿ. ಸೀತಾರಾಮಯ್ಯ ಸಮಗ್ರ ಸಾಹಿತ್ಯ

ಜೀವನಚರಿತ್ರೆ–ಅನುವಾದ ಸಂಪುಟ

ಸಂಪುಟ ೮

(ಭಾಗ - ೨)



ಪ್ರೊ. ಎಂ.ವಿ. ಸೀತಾರಾಮಯ್ಯ ಸಮಗ್ರ ಸಾಹಿತ್ಯ

ಸಂಪುಟ – ೮ (ಭಾಗ – ೨)

ಜೀವನಚರಿತ್ರೆ–ಅನುವಾದ ಸಂಪುಟ

ಸಂಪಾದಕರು

ಪ್ರೊ|| ಜಿ. ಅಶ್ವತ್ಥನಾರಾಯಣ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

Prof. M.V. Seetharamaiah Samagra Sahithya - Vol 8 - (Part 2), (Complete works of Prof. M.V. Seetharamaiah: Biography and Translations Vol. 8 Part 2); Edited by **Prof. G. Ashwathanarayana,** Published by **K.R. Ramakrishna**, Commissioner, Department of Kannada and Culture, Kannada Bhavan, J.C.Road, Bengaluru - 560 002.

ಮುದ್ರಿತ ವರ್ಷ : ೨೦೧೩
ಪ್ರತಿಗಳು : ೧೦೦೦
ಪುಟಗಳು : ೮೦ + ೫೪೬
ಬೆಲೆ : ರೂ. ೧೩೦.೦೦

ರಕ್ಷಾಪುಟ ವಿನ್ಯಾಸ : ಮಯೂರ ಪ್ರಿಂಟ್ ಆ್ಯಡ್ಸ್

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆ್ಯಡ್ಸ್
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜನಪ್ರಿಯ ಸಾಹಿತ್ಯ ಪ್ರಕಾಶನದಡಿ ಹಲವಾರು ಪ್ರಕಟಣಾ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯರೂಪಕ್ಕೆ ತರಲಾಗುತ್ತಿದೆ. ಈಗಾಗಲೇ ಇಲಾಖೆಯು ಎಂ.ಗೋಪಾಲಕೃಷ್ಣ ಅಡಿಗ, ಹುಯಿಲಗೋಳನಾರಾಯಣರಾಯ, ನಾಡೋಜ ಚೆನ್ನವೀರ ಕಣವಿ, ಕೆ.ಎಸ್.ನರಸಿಂಹಸ್ವಾಮಿ ಹೀಗೆ ಪ್ರಮುಖ ಸಾಹಿತಿಗಳ ಸಮಗ್ರ ಸಾಹಿತ್ಯ ಪ್ರಕಟಣೆಗಳನ್ನು ಹೊರತಂದಿರುತ್ತದೆ. ಪ್ರಸಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರೊ.ಎಂ.ವಿ.ಸೀತಾರಾಮಯ್ಯನವರ ಜನ್ಮಶತಮಾನೋತ್ಸವದ ಅಂಗವಾಗಿ ಹಂತ ಹಂತವಾಗಿ ಅವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಲು ಉದ್ದೇಶಿಸಿದೆ. ಅದರಲ್ಲಿ ಈಗಾಗಲೇ ನಾಲ್ಕು ಸಂಪುಟಗಳನ್ನು ಹೊರತರಲಾಗಿದೆ. ಒಬ್ಬ ಲೇಖಕರ ಸಮಗ್ರ ಅಧ್ಯಯನ ಮಾಡಲು ಅನುಕೂಲವಾಗಬೇಕೆಂಬುದು ಈ ಯೋಜನೆಯ ಆಶಯ.

'ರಾಘವ' ಎಂಬ ಕಾವ್ಯನಾಮದಿಂದ ಖ್ಯಾತರಾಗಿದ್ದ ಪ್ರೊ. ಎಂ.ವಿ. ಸೀತಾರಾಮಯ್ಯ ಅವರು ಕವನ, ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ಗ್ರಂಥ ಸಂಪಾದನೆ, ಕಾವ್ಯಮೀಮಾಂಸೆ, ಸಂಶೋಧನೆ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದವರು. ಐದು ದಶಕಗಳ ಕಾಲ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸುವುದರ ಜೊತೆಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ಹಸ್ತಪ್ರತಿಶಾಸ್ತ್ರ ಎಂಬ ನೂತನ ಸಂಶೋಧನಾ ಕ್ಷೇತ್ರವನ್ನು ಆರಂಭಿಸಿ ಅಳಿಸಿ ಹೋಗುತ್ತಿದ್ದ ಪ್ರಾಚೀನ ಸಾಹಿತ್ಯದ ಸಂಗ್ರಹ, ಸಂರಕ್ಷಣೆಯತ್ತ ನಾಡಿನ ಗಮನವನ್ನು ಸೆಳೆದ ಅಚ್ಚುಕಟ್ಟಾದ ಬರವಣಿಗೆಗೆ ಹೆಸರಾದ ಪ್ರೊ.ಎಂ.ವಿ.ಸೀತಾರಾಮಯ್ಯ ಅವರು ಅನನ್ಯ ಸಾಧಕರು.

ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಸಾಹಿತ್ಯ ರಚನೆಯನ್ನು ಆರಂಭಿಸಿ, ಹಳಗನ್ನಡ ಪರಂಪರೆ ಮತ್ತು ಆಧುನಿಕ ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯದ ಹೊಸತನಗಳನ್ನು ಮೈಗೂಡಿಸಿಕೊಂಡು ಸಾಹಿತ್ಯ ಸೃಷ್ಟಿಗೆ ತೊಡಗಿದ ಎರಡೂ ಪರಂಪರೆಗಳ ಭವ್ಯ ಸೇತು ಪ್ರೊ. ಎಂ.ವಿ.ಸೀತಾರಾಮಯ್ಯನವರು. ಸೃಜನಶೀಲ ಸಾಹಿತ್ಯದ ಜೊತೆಜೊತೆಗೆ ಸಂಶೋಧನಾತ್ಮಕ ಸಾಹಿತ್ಯವನ್ನು ಬೆಳೆಸಿದ ಅವರದು ಬಹುಮುಖ ಪ್ರತಿಭೆ. ಅಧ್ಯಯನ-ಅಧ್ಯಾಪನಗಳಲ್ಲಿ ಅಪಾರ ಅನುಭವ ಪಡೆದಿದ್ದ ಪ್ರೊ. ಎಂ.ವಿ.ಸೀತಾರಾಮಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ ಕನ್ನಡ ಭಾಷೆಯ ಸರ್ವಾಂಗೀಣ ಬೆಳವಣಿಗೆಗೆ ಗಣನೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ, 'ಮುಗಿಯದ ಮಾಯೆ' ಕವನ ಸಂಕಲನಕ್ಕೆ ದೇವರಾಜ್ ಬಹದ್ದೂರ್ ಬಹುಮಾನ,

'ತೊಟ್ಟಿಲು ತೂಗುವ ಕೈ' ನಾಟಕಕ್ಕೆ, 'ಜೀವನ ನಾಟಕ' ಕಾದಂಬರಿಗೆ ರಾಜ್ಯ ಸರ್ಕಾರದ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸಿ, 'ಆಸ್ವಾದ' ಅಭಿನಂದನ ಗ್ರಂಥ ಹೀಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ.

ಪ್ರೊ. ಎಂ.ವಿ.ಸೀತಾರಾಮಯ್ಯ ಅವರ ಸಮಗ್ರ ಸಾಹಿತ್ಯವನ್ನು ಇಲಾಖಾ ವತಿಯಿಂದ ಪ್ರಕಟಿಸಲು ಸಹಕರಿಸಿದ ಬಿ.ಎಂ.ಶ್ರೀ ಪ್ರತಿಷ್ಠಾನದ ಡಾ॥ ನಾ.ಗೀತಾಚಾರ್ಯ ಅವರಿಗೂ ಈ ಸಂಪುಟವನ್ನು ಸಂಪಾದಿಸಿಕೊಟ್ಟ ಹಾಗೂ ಕರಡಚ್ಚು ತಿದ್ದಿದ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತದೆ.

ಪ್ರೊ. ಎಂ.ವಿ. ಸೀತಾರಾಮಯ್ಯ ಅವರ ಸಮಗ್ರ ಸಾಹಿತ್ಯ ಪ್ರಕಟಣೆಯನ್ನು ಹೊರತರಲು ಸಹಕರಿಸಿದ ಶ್ರೀಮತಿ ದುರ್ಗಾ ಸಿ. ಆವರ್ತಿ, ಜಂಟಿ ನಿರ್ದೇಶಕರು (ಕಾರ್ಯಕ್ರಮ), ಶ್ರೀಮತಿ ಎನ್. ಶಾಂತಮ್ಮ, ಕಾರ್ಯಕ್ರಮ ಅಧಿಕಾರಿ, ಪ್ರಕಟಣಾ ಶಾಖೆ ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು. ಈ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು.

ನಾಡಿನ ಸಂಶೋಧನಾ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಪ್ರೊ.ಎಂ.ವಿ.ಸೀತಾರಾಮಯ್ಯ ಅವರ ಕೃತಿಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ಒದಗಿಸುವುದು ನಮ್ಮ ಆಶಯವಾಗಿರುತ್ತದೆ. ವಿದ್ವಾಂಸರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಪಡೆದುಕೊಂಡರೆ ನಮ್ಮ ಶ್ರಮ ಸಾರ್ಥಕ.

ಬೆಂಗಳೂರು
೨೮.೮.೨೦೧೩

(ಕೆ.ಆರ್. ರಾಮಕೃಷ್ಣ)
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

'ಯೋಜನೆಯನ್ನು ಕುರಿತು'
ಎಂ.ವಿ.ಸೀ. ಜನ್ಮಶತಮಾನೋತ್ಸವ–ಹಸ್ತಪ್ರತಿ ಅಧ್ಯಯನವರ್ಷ

ಪ್ರೊ. ಎಂ.ವಿ. ಸೀತಾರಾಮಯ್ಯನವರು ಕನ್ನಡ ಸಾಹಿತ್ಯದಲ್ಲಿ ಮರೆಯಲಾಗದ ಸೇವೆಯನ್ನು ಸಲ್ಲಿಸಿ 'ರಾಘವ' ಕಾವ್ಯನಾಮದ ಕವಿ, ಕಲಾವಿದ, ವಿದ್ವಾಂಸರಾಗಿ ಹೆಸರು ಮಾಡಿದ್ದಾರೆ. ಕಥೆ, ಕಾದಂಬರಿ, ಕವನ, ಲಲಿತಪ್ರಬಂಧ, ನಾಟಕ, ಮಕ್ಕಳ ಸಾಹಿತ್ಯದಂಥ ಸೃಜನಶೀಲ ಸಾಹಿತ್ಯ ಪ್ರಕಾರದಲ್ಲಿ ಪ್ರಮುಖರಾಗಿದ್ದಾರೆ. ಪಾಂಡಿತ್ಯ ಕ್ಷೇತ್ರದಲ್ಲೂ ಅಪಾರವಾದ ವಿದ್ವತ್ತನ್ನು ದಾಖಲಿಸಿರುವ ಶ್ರೇಷ್ಠದರ್ಜೆಯ ವಿದ್ವಾಂಸರಾಗಿದ್ದಾರೆ. ಕನ್ನಡದ ಮೊಟ್ಟಮೊದಲ ಕೃತಿ 'ಕವಿರಾಜಮಾರ್ಗ'ವನ್ನು ಶ್ರೀವಿಜಯಕೃತವೆಂದು ನಿರ್ಣಯಿಸಿದ ಕೀರ್ತಿ ಇವರದು. ತಿಮ್ಮಪ್ಪದಾಸರ ಕೃತಿಗಳ ಮೂಲಕ ಅದ್ವೈತ ಕೀರ್ತನ ಸಾಹಿತ್ಯವನ್ನು ಪರಿಚಯಿಸಿದ್ದಾರೆ. ಪ್ರಾಚೀನ ಕನ್ನಡ ವ್ಯಾಕರಣ, ಕನ್ನಡ ಕಾವ್ಯಮೀಮಾಂಸೆಯಂತಹ 'ಶಾಸ್ತ್ರಸಾಹಿತ್ಯ'ವನ್ನು ತಲಸ್ಪರ್ಶಿಶೋಧಿಸಿದ್ದಾರೆ.

ನಾಡು–ನುಡಿ, ಹೋರಾಟ–ಸಂಘಟನಾ ಕ್ಷೇತ್ರದಲ್ಲೂ ಎಂ.ವಿ.ಸೀ.ಯವರು ಸಾಧಕರಾಗಿದ್ದಾರೆ. ಇಳಿವಯಸ್ಸಿನಲ್ಲೂ ಅನಾರೋಗ್ಯದ ನಡುವೆಯೂ ಕನ್ನಡಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತ ಕಾರ್ಯಕರ್ತರನ್ನು ಪ್ರೋತ್ಸಾಹಿಸುತ್ತಿದ್ದರು. ಆಚಾರ್ಯ ಬಿ.ಎಂ.ಶ್ರೀ ಅವರ ಹೆಸರಿನಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಸ್ಥಾಪಿಸಿ ನಾಡಿನ ಹೆಮ್ಮೆಯ ಸಂಶೋಧನ ಸಂಸ್ಥೆಯಾಗಿ ಕಟ್ಟಿದರು.

ಇಂತಹ ಹಲವು ಸಾಧನೆಗಳ ನೇತಾರರಾದ ಎಂ.ವಿ. ಸೀತಾರಾಮಯ್ಯನವರು ಪ್ರತಿಷ್ಠಾನದ ಮೂಲಕ 'ಹಸ್ತಪ್ರತಿಶಾಸ್ತ್ರ' ಎಂಬ ನೂತನ ಸಂಶೋಧನ ಕ್ಷೇತ್ರವನ್ನೇ ತೆರೆದು, ಅಳಿಸಿಹೋಗುತ್ತಿದ್ದ ಪ್ರಾಚೀನ ಓಲೆಗರಿ–ಕಾಗದದ ಹಸ್ತಪ್ರತಿಗಳ ಸಂಗ್ರಹ–ಸಂರಕ್ಷಣೆಯತ್ತ ನಾಡಿನ ಗಮನ ಸೆಳೆದು ಹೊಸಪಡೆ ನಿರ್ಮಾಣವಾಗಲು ಪ್ರೇರಕರಾದರು. ಇದೀಗ ಈ ಕ್ಷೇತ್ರ ಸುಪುಷ್ಟವಾಗಿ ಬೆಳೆದು 'ಹಸ್ತಪ್ರತಿ ಅಧ್ಯಯನ' ಎಂಬ ಇನ್ನೊಂದು ಸಂಶೋಧನ ಕ್ಷೇತ್ರವನ್ನು ರೂಪಿಸುತ್ತಿದೆ. ಇದನ್ನು ಇನ್ನಷ್ಟು ವ್ಯಾಪಕವಾಗಿಸುವ ಉದ್ದೇಶದಿಂದ ಎಂ.ವಿ.ಸೀ. ಅವರ ಶತಮಾನೋತ್ಸವ ವರ್ಷವನ್ನು 'ಹಸ್ತಪ್ರತಿ ಅಧ್ಯಯನ ವರ್ಷ' ಎಂದು ಘೋಷಿಸಿ ನಾಡಿನಾದ್ಯಂತ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಎಂ.ವಿ.ಸೀ. ಸಮಗ್ರ ಸಾಹಿತ್ಯ, ಸಂಸ್ಮರಣ ಸಂಪುಟ ಮತ್ತು ಇನ್ನೂ ಕೆಲವು ಕೃತಿಗಳ ಪ್ರಕಟಣೆ, ರಾಜ್ಯಾದ್ಯಂತ ವಿಚಾರಗೋಷ್ಠಿ, ನಾಡು–ನುಡಿ ಜಾಗೃತಿ ಕಾರ್ಯಕ್ರಮಗಳನ್ನು, ಕಮ್ಮಟಗಳನ್ನು ನಡೆಸುವುದು ಇತ್ಯಾದಿ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ಯೋಜನೆಗಳಲ್ಲಿ ಬಹಳ ಮುಖ್ಯವಾದದ್ದು ಸಮಗ್ರ ಸಾಹಿತ್ಯ ಸಂಪುಟ ಪ್ರಕಟನೆ. ಇದನ್ನು ಕನ್ನಡ ಸಂಸ್ಕೃತಿ ಇಲಾಖೆ ಪೂರ್ತಿಯಾಗಿ ವಹಿಸಿಕೊಂಡು ನಮ್ಮ ಬಹುದೊಡ್ಡಭಾರವನ್ನು ಇಳಿಸಿರುವುದಕ್ಕಾಗಿ ಪ್ರತಿಷ್ಠಾನ ಇಲಾಖೆಯ

ಕಾರ್ಯದರ್ಶಿಗಳಿಗೂ, ನಿರ್ದೇಶಕರಿಗೂ ಕರ್ನಾಟಕ ಸರ್ಕಾರಕ್ಕೂ ಆಭಾರಿಯಾಗಿದೆ. ಇದರ ಫಲವಾಗಿ ಇದೀಗ ನಿಮ್ಮ ಮುಂದೆ ಈ ಸಂಪುಟಗಳಿವೆ.

ಈ ಸಂಪುಟಗಳ ಸಿದ್ಧತೆಗೆ ಉತ್ಸವ ಸಮಿತಿ ಒಂದೊಂದು ಸಂಪುಟಕ್ಕೆ ಒಬ್ಬೊಬ್ಬ ಸಂಪಾದಕರನ್ನು ನಿಯೋಜಿಸಲು ತೀರ್ಮಾನಿಸಿ ಇಲಾಖೆಗೆ ಸೂಚಿಸಿತು. ಇಲಾಖೆ ನಮ್ಮ ಸೂಚನೆಯನ್ನು ಅಂಗೀಕರಿಸಿ ಅವರುಗಳಿಗೇ ಆಯಾ ಸಂಪುಟಗಳ ಸಂಪಾದನೆಯ ಹೊಣೆಯನ್ನು ವಹಿಸಿದೆ. ಆಯಾ ಸಂಪಾದಕರು ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅವರುಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎಂ.ವಿ.ಸೀತಾರಾಮಯ್ಯನವರು ೧೦೦ ಗ್ರಂಥಗಳನ್ನೂ, ನೂರಾರು ಲೇಖನಗಳನ್ನೂ ಬರೆದಿದ್ದು, ಅವುಗಳನ್ನೆಲ್ಲ ೧೨ ಸಂಪುಟಗಳಲ್ಲಿ ಅಡಕಗೊಳಿಸಿ ಯಾವ ಯಾವ ಸಂಪುಟಗಳಲ್ಲಿ ಯಾವ ಯಾವ ಕೃತಿ–ಲೇಖನಗಳಿರಬೇಕೆಂಬ ಸಂಯೋಜನೆಯ ಜವಾಬ್ದಾರಿಯನ್ನು ಕಾರ್ಯದರ್ಶಿಗಳಾದ ಡಾ. ನಾ. ಗೀತಾಚಾರ್ಯ ಅವರು ನಿರ್ವಹಿಸಿದ್ದಾರೆ ಅವರೊಂದಿಗೆ ಇನ್ನೊಬ್ಬ ಕಾರ್ಯದರ್ಶಿಗಳಾದ ಎಸ್.ವಿ. ಶ್ರೀನಿವಾಸರಾವ್ ಸಹಕರಿಸಿದ್ದಾರೆ. ಅವರಿಗೆ ಸಮಿತಿ ಕೃತಜ್ಞವಾಗಿದೆ. ಅದರಂತೆಯೇ ಈ ಸಂಪುಟಗಳು ಸಿದ್ಧವಾಗಿದ್ದು, ಈ ರೀತಿ ವಿಂಗಡಿಸಲಾಗಿದೆ.

೧) ಎಂ.ವಿ.ಸೀ. ಕಾವ್ಯ ಸಂಪುಟ
೨) ಎಂ.ವಿ.ಸೀ. ಸಣ್ಣಕಥೆಗಳ ಸಂಪುಟ
೩) ಎಂ.ವಿ.ಸೀ. ಪ್ರಬಂಧಗಳು, ವ್ಯಕ್ತಿಚಿತ್ರಗಳ ಸಂಪುಟ
೪) ಎಂ.ವಿ.ಸೀ. ಕಾವ್ಯಮೀಮಾಂಸೆ – ಸಾಹಿತ್ಯ ವಿಮರ್ಶೆ ಸಂಪುಟ
೫) ಎಂ.ವಿ.ಸೀ. ಅವರ ಮಕ್ಕಳ ಸಾಹಿತ್ಯ ಮತ್ತು ನಾಟಕ ಸಂಪುಟ
೬) ಎಂ.ವಿ.ಸೀ. ಅವರ ಗ್ರಂಥಸಂಪಾದನೆ – ಹಸ್ತಪ್ರತಿಶಾಸ್ತ್ರ ಸಂಪುಟ
೭) ಎಂ.ವಿ.ಸೀ. ಅವರ ಮುನ್ನುಡಿ – ಲೇಖನ – ಭಾಷಣ ಸಂಪುಟ
೮) ಎಂ.ವಿ.ಸೀ. ಜೀವನ ಚರಿತ್ರೆ – ಅನುವಾದ ಸಂಪುಟ
೯) ಎಂ.ವಿ.ಸೀ. ಅವರ ಇಂಗ್ಲೀಷ್ ಲೇಖನ ಸಂಪುಟ
೧೦) ಎಂ.ವಿ.ಸೀ. ಅವರ ವ್ಯಾಕರಣ, ಛಂದಸ್ಸಂಪುಟ
೧೧) ಎಂ.ವಿ.ಸೀ. ಅವರ ವಿಚಾರ ಸಾಹಿತ್ಯ ಸಂಪುಟ
೧೨) ಎಂ.ವಿ.ಸೀ. ಅವರ ಕಾದಂಬರಿ ಸಂಪುಟ

ತಮ್ಮ ಕೃತಿಗಳ ಹಕ್ಕನ್ನು ಎಂ.ವಿ.ಸೀ. ಅವರೇ ಉಯಿಲಿನ ಮೂಲಕ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನಕ್ಕೆ ನೀಡಿದ್ದಾರೆ. ಅದನ್ನು ಅವರ ಮಕ್ಕಳಾದ ಎಂ.ಎಸ್. ಭಾಸ್ಕರ್, ಎಂ.ಎಸ್. ರಾಮಪ್ರಸಾದ್, ಎಸ್.ಟಿ. ರಾಧಾಕೃಷ್ಣ, ಎಂ.ಎಸ್. ಶೇಷಾದ್ರಿನಾಥ್ ಮತ್ತು ಶಾರದಾನಾಗರಾಜ್ ಅವರುಗಳು ಸಮ್ಮತಿಸಿ ಸಂತೋಷವಾಗಿ ಪ್ರತಿಷ್ಠಾನದೊಂದಿಗೆ, ಕನ್ನಡ ಸಂಸ್ಕೃತಿ ಇಲಾಖೆಗೆ ಕೈಜೋಡಿಸುವ ಮೂಲಕ ಕನ್ನಡದ ಧೀಮಂತಸಾಹಿತಿ – ವಿದ್ವಾಂಸ – ಸಂಘಟಕ ಪ್ರೊ. ಎಂ.ವಿ. ಸೀತಾರಾಮಯ್ಯನವರ ಸಮಗ್ರ ಸಾಹಿತ್ಯ ಈ ಶತಮಾನೋತ್ಸವ ಸಂದರ್ಭದಲ್ಲಿ ಕನ್ನಡಿಗರಿಗೆ ದೊರಕುವಂತಾಗಿರುವುದಕ್ಕೆ ನಮಗೆ ಸಂತಸವಾಗಿದೆ.

ಡಾ. ಪಿ.ವಿ. ನಾರಾಯಣ
ಅಧ್ಯಕ್ಷರು
ಎಂ.ವಿ.ಸೀ. ಶತಮಾನೋತ್ಸವ ಸಮಿತಿ

ಪ್ರೊ. ಎಂ.ಎಚ್. ಕೃಷ್ಣಯ್ಯ
ಗೌರವಾಧ್ಯಕ್ಷರು
ಎಂ.ವಿ.ಸೀ. ಶತಮಾನೋತ್ಸವ ಸಮಿತಿ

ಸಂಪಾದಕರ ಅರಿಕೆ

ಕನ್ನಡ ಸಾಹಿತ್ಯ ಇಪ್ಪತ್ತನೇ ಶತಮಾನದಲ್ಲಿ ಪ್ರವರ್ಧಮಾನವಾದಷ್ಟು ಹಿಂದಿನ ಯಾವ ಶತಮಾನದಲ್ಲೂ ಕಾಣುವುದಿಲ್ಲ. ಯಾವ ಒಬ್ಬ ಕವಿ ಅಥವಾ ಸಾಹಿತಿ ಇಲ್ಲವೇ ವಿದ್ವಾಂಸನಾಗಲಿ ಅಕ್ಷರಶಃ ನೂರಾರು ಕೃತಿಗಳನ್ನು ಒಬ್ಬನೇ ರಚಿಸಿದ ಉದಾಹರಣೆಗಳು ಇಲ್ಲ. ಇನ್ನು ಕಥೆ, ಕಾದಂಬರಿ, ನಾಟಕ, ಪ್ರಬಂಧ, ಜೀವನಚರಿತ್ರೆ, ಆತ್ಮಕಥೆ, ವಿಮರ್ಶೆ, ಕಾವ್ಯ ಮೊದಲಾದ ಹತ್ತಾರು ಸಾಹಿತ್ಯ ಪ್ರಕಾರಗಳಲ್ಲಿ ವಿಪುಲ ಸಾಹಿತ್ಯ ರಚಿಸಿದ ಮಹಾನ್ ವ್ಯಕ್ತಿಗಳು ಇಪ್ಪತ್ತನೇ ಶತಮಾನದಲ್ಲಿ ಮಾತ್ರ ವಿಶೇಷವಾಗಿ ಕಂಡುಬರುತ್ತಾರೆ. ಪತ್ರಿಕೆಗಳು ಎಂಬ ಪತ್ರಿಕೆಗಳ ಪ್ರಕಾರ ವೈವಿಧ್ಯಮಯವಾಗಿ ಬೆಳೆದಿದ್ದು ಇನ್ನೊಂದು ವಿಶೇಷವಾಗಿದೆ. ಎಷ್ಟೋ ಲೇಖಕರು ಪತ್ರಿಕಾಲೇಖಕರಾಗಿ ಮೆರೆದಿದ್ದಾರೆ, ಗ್ರಂಥಲೇಖಕರಾಗಿಯೇ ಇಲ್ಲ. ಧಾರಾವಾಹಿಯಾಗಿ ಪುಸ್ತಕಗಳು ಪ್ರಕಟವಾದರೂ ಗ್ರಂಥಗಳಾಗಿ ಪ್ರಕಟವಾಗದಿರುವ ನಿದರ್ಶನಗಳು ಉಂಟು. ಇನ್ನು ಅಪ್ರಕಟಿತ ಭಾಷಣಗಳು ಅಸಂಖ್ಯಾತವಾಗಿವೆ. ಹೀಗಾಗಿ ಒಬ್ಬ ಹಿರಿಯ ಲೇಖಕನ ಸಮಗ್ರ ಸಾಹಿತ್ಯ, ಪತ್ರಿಕೆ, ಪುಸ್ತಕ, ಭಾಷಣ, ಪತ್ರಗಳು ಮೊದಲಾದ ರೂಪಗಳಲ್ಲಿ ಚೆದರಿ ಹೋಗಿರುವುದು ಹೆಚ್ಚು.

ಇಂಥ ಸನ್ನಿವೇಶದಲ್ಲಿ ಕನ್ನಡದಲ್ಲಿ ಒಬ್ಬ ಸಾಹಿತಿಯ, ಕವಿಯ ವಿದ್ವಾಂಸನ ಸಮಗ್ರ ಕೃತಿಗಳನ್ನು ಅಧ್ಯಯನ ಮಾಡಿ ಮಹಾಪ್ರಬಂಧ (ಪಿಎಚ್.ಡಿ)ಗಳನ್ನು ರಚಿಸುವ ಪರಂಪರೆ ಪ್ರಾರಂಭವಾಯಿತು.

ಅಂತೆಯೇ ಸಮಗ್ರ ಕೃತಿಗಳ ಪ್ರಕಟನೆ ಪ್ರಾರಂಭವಾಯಿತು. ಕೆಲವರದು ಏಕ ಸಂಪುಟದಲ್ಲಿ ಮತ್ತೆ ಕೆಲವರದು ಹಲವು ಸಂಪುಟಗಳಲ್ಲಿ ಪ್ರಕಟವಾಗಿವೆ. ಈ ದಿಸೆಯಲ್ಲಿ ಪ್ರಕಾಶನ ಸಂಸ್ಥೆ, ವಿಶ್ವವಿದ್ಯಾಲಯ, ಕನ್ನಡ ಸಂಸ್ಕೃತಿ ಇಲಾಖೆಗಳು ಪ್ರಮುಖ ಪಾತ್ರ ವಹಿಸಿವೆ. ಬಿ.ಎಂ.ಶ್ರೀ, ಕೈಲಾಸಂ, ಶ್ರೀರಂಗ, ಜಿ.ಎಸ್. ಶಿವರುದ್ರಪ್ಪ, ಕುವೆಂಪು, ಡಿ.ವಿ.ಜಿ, ಶಂ.ಬಾ.ಜೋಶಿ, ಗಳಗನಾಥ, ಮುದ್ದಣ, ಹುಯಿಲಗೊಳ ನಾರಾಯಣ ರಾಯರು, ಸಮಗ್ರ ದಾಸಸಾಹಿತ್ಯ, ಸಮಗ್ರ ವಚನಸಾಹಿತ್ಯ ಇತ್ಯಾದಿ ಸಮಗ್ರ ಕೃತಿಗಳ ಮಾಲೆ ಪ್ರಕಟವಾಗಿವೆ. ಇದರಿಂದ ಎಲ್ಲೆಲ್ಲೂ ಚೆದುರಿ ಹೋದ, ಹಸ್ತಪ್ರತಿಯಲ್ಲಿದ್ದ ಕೃತಿಗಳೆಲ್ಲ ನಾಡಿನ ಜನತೆಗೆ, ಓದಿಗೆ ಅಧ್ಯಯನಕ್ಕೆ ಸಿಗುವಂತಾಗಿದೆ.

ಕನ್ನಡ ಮತ್ತು ಸಂಸ್ಕೃತ ಇಲಾಖೆಯು ಶತಮಾನೋತ್ಸವದ ಸಾಹಿತಿಗಳ ಸಮಗ್ರ ಸಾಹಿತ್ಯ ಪ್ರಕಟನಾ ಯೋಜನೆಯಡಿಯಲ್ಲಿ ಈಗಾಗಲೇ ಹಲವಾರು ಪ್ರಸಿದ್ಧ ಸಾಹಿತಿ, ಕವಿ, ವಿದ್ವಾಂಸರ ಕೃತಿಗಳನ್ನು ಸಮಗ್ರವಾಗಿ ಪ್ರಕಟಿಸಿ ನಾಡಿಗೆ ಮಹೋಪಕಾರ ಮಾಡಿದೆ. ಈ ದಿಸೆಯಲ್ಲಿ ಇದೀಗ ರಾಘವ ಕಾವ್ಯನಾಮದಿಂದಲೂ ಮೈವೆಂಸೀ ಕಾವ್ಯನಾಮದಿಂದಲೂ ಪ್ರಖ್ಯಾತರಾದ ಎಂ.ವಿ. ಸೀತಾರಾಮಯ್ಯನವರು ನಮ್ಮ

ನಾಡಿನ ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರು. ಇವರ ಸಮಗ್ರ ಸಾಹಿತ್ಯ ಸಂಪುಟಗಳು ಹೊರಬರುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ.

ಹೊಸಗನ್ನಡದ ಆಚಾರ್ಯಪುರುಷರಾದ, ಬಿ.ಎಂ.ಶ್ರೀ, ತೀ.ನಂ.ಶ್ರೀ, ಕುವೆಂಪು, ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃ., ಡಿ.ವಿ.ಜಿ. ಮಾಸ್ತಿ ಮೊದಲಾದವರ ಮಾರ್ಗದರ್ಶನದಲ್ಲಿ ತಮ್ಮ ಜೀವನಪಥ ಹಾಗೂ ಸಾಹಿತ್ಯಪಥಗಳನ್ನು ರೂಪಿಸಿಕೊಂಡ ಎಂ.ವಿ.ಸೀ. ಅವರು ಅರ್ಧಶತಮಾನಕ್ಕೂ ಹೆಚ್ಚಿನ ಕಾಲ ಕನ್ನಡ ಸಾರಸ್ವತ ಲೋಕಕ್ಕೆ ಕಥೆ, ಕವನ, ಕಾದಂಬರಿ ನಾಟಕ, ಅನುವಾದ, ಗ್ರಂಥ ಸಂಪಾದನೆ, ಕಾವ್ಯಮೀಮಾಂಸೆ ಸಂಶೋಧನೆ, ಶಾಸ್ತ್ರಸಾಹಿತ್ಯ, ಮಕ್ಕಳಸಾಹಿತ್ಯ ಮೊದಲಾದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಅಧ್ಯಯನ ಮಾಡಿ ನೂರಾರು ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಕನ್ನಡಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಹಸ್ತಪ್ರತಿ ಶಾಸ್ತ್ರದ ಕ್ಷೇತ್ರದಲ್ಲಿ ಗಣ್ಯಕಾರ್ಯ ಮಾಡಿದ್ದಾರೆ. ಸಂಶೋಧನೆಗೇ ಪ್ರಾಶಸ್ತ್ಯ ನೀಡಿ ತಮ್ಮ ಗುರುಗಳಿಂದ ಬಿ.ಎಂ.ಶ್ರೀ ಅವರ ಹೆಸರಿನಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವೆಂಬ ಸಂಶೋಧನ ಸಂಸ್ಥೆ ಪ್ರಾರಂಭಿಸಿ, ಲೋಚನ ಎಂಬ ವಿದ್ವತ್ ನಿಯತಕಾಲಿಕೆಯನ್ನು ಅನೇಕ ಸಂಶೋಧನಕೃತಿಗಳನ್ನು ಆ ಸಂಸ್ಥೆಯ ಮೂಲಕ ಹೊರತಂದಿದ್ದಾರೆ. ಕನ್ನಡ ಚಳವಳಿಯಲ್ಲಿ ಪಾತ್ರವಹಿಸಿದ್ದಾರೆ. ಕ್ರಿಯಾಶಾಲಿ ಸಾಹಿತಿಗಳಾಗಿ ಅನೇಕ ಯುವಸಾಹಿತಿಗಳಿಗೆ ಸ್ಫೂರ್ತಿ ಮಾರ್ಗದರ್ಶನ ನೀಡಿದ್ದಾರೆ. ಕನ್ನಡ ಸಾಹಿತ್ಯ ದಿಗಂತಗಳನ್ನು ವಿಸ್ತರಿಸಿದ್ದಾರೆ. ಕನ್ನಡದಲ್ಲಷ್ಟೇ ಅಲ್ಲದೆ ಇಂಗ್ಲಿಷಿನಲ್ಲಿಯೂ ಪರಿಣತರಾಗಿದ್ದ ಎಂವಿಸೀ ಅವರು ಇಂಗ್ಲಿಷಿನಲ್ಲೂ ಹಲವಾರು ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. ಇಂಗ್ಲೀಷಿನಿಂದ ಕನ್ನಡಕ್ಕೆ ಕನ್ನಡದಿಂದ ಇಂಗ್ಲಿಷಿಗೆ ಹತ್ತಾರು ಕೃತಿಗಳನ್ನು ಅನುವಾದಿಸಿದ್ದಾರೆ.

ಜೀವನಚರಿತ್ರೆಗಳ ಇತಿಹಾಸವನ್ನು ಕುರಿತು ಅವರು ರಚಿಸಿದ ಸಮಗ್ರಾವಲೋಕನ ಕೃತಿ ಕನ್ನಡ ಜೀವನಚರಿತ್ರೆ, ಶಾಸ್ತ್ರಸಾಹಿತ್ಯ, ಕವಿರಾಜಮಾರ್ಗ, ಹಸ್ತಪ್ರತಿಶಾಸ್ತ್ರದ ಮಣಿಹ ಗ್ರಂಥ ಮೊದಲಾದವು ಕನ್ನಡಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ.

ಇದೀಗ ಎಂ.ವಿ.ಸೀ. ಅವರ ಸಮಗ್ರ ಕೃತಿಗಳು ೧೨ ಸಂಪುಟಗಳಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟವಾಗುತ್ತಿದೆ. ಈಗಾಗಲೇ ಎಂ.ವಿ.ಸೀ. ಸಣ್ಣಕತೆಗಳ ಸಂಪುಟ ಎಂ.ವಿ.ಸೀ. ಪ್ರಬಂಧಗಳು, ವ್ಯಕ್ತಿಚಿತ್ರಗಳ ಸಂಪುಟ (೩) ಎಂ.ವಿ.ಸೀ. ಕಾವ್ಯಮೀಮಾಂಸೆ–ಸಾಹಿತ್ಯ ವಿಮರ್ಶೆ (೨) ಭಾಗಗಳು (೪) ಎಂ.ವಿ.ಸೀ. ಮಕ್ಕಳ ಸಾಹಿತ್ಯ ಮತ್ತು ಮಕ್ಕಳ ನಾಟಕ ಸಂಪುಟ (೫) ಪ್ರಕಟವಾಗಿವೆ ಜೀವನ ಚರಿತ್ರೆ ಮತ್ತು ಅನುವಾದ ಸಂಪುಟ (೮) ಉಳಿದ ಸಂಪುಟಗಳಾದ ಮುನ್ನುಡಿ ಲೇಖನ, ಭಾಷಣ ಸಂಪುಟ (೭) ವ್ಯಾಕರಣ ಛಂದಸ್ಸು ಸಂಪುಟ (೬) ಗ್ರಂಥ ಸಂಪಾದನೆ ಮತ್ತು ಹಸ್ತ ಪ್ರತಿ ಶಾಸ್ತ್ರ ಸಂಪುಟ (೯) ವಿಚಾರ ಸಾಹಿತ್ಯ ಸಂಪುಟ (೧೦) ಎಂ.ವಿ.ಸೀ. ಅವರ ಇಂಗ್ಲಿಷ್ ಲೇಖನಗಳು ಗ್ರಂಥಗಳು ಸಂಪುಟ (೧೧) ಕಾದಂಬರಿ ಸಂಪುಟ (೧೨) ಇವು ಹಸ್ತಪ್ರತಿ ಹಂತದಲ್ಲಿವೆ. ಹತ್ತು ಸಾವಿರಕ್ಕೂ ಹೆಚ್ಚಿನ ಪುಟಗಳಲ್ಲಿ ೧೦೦ಕ್ಕೂ ಮಿಕ್ಕ ಗ್ರಂಥಗಳನ್ನು ನೀಡಿರುವ ಎಂ.ವಿ.ಸೀ. ಅವರ ಕೃತಿಗಳು, ಲೇಖನಗಳು

ನಾಡಿನಾದ್ಯಂತ ಚೆದುರಿ ಹೋಗಿವೆ. ಅಚ್ಚಾದ ಹಲವಾರು ಲೇಖನಗಳು ಗ್ರಂಥಗಳು ಸಮಗ್ರ ಸಾಹಿತ್ಯಕ್ಕೆ ಸೇರಿಸಲು ಲಭ್ಯವಾಗಿಲ್ಲ. ಉದಾಹರಣೆಗೆ ಈ ಜೀವನಚರಿತ್ರೆ ಮತ್ತು ಅನುವಾದ ಸಂಪುಟದಲ್ಲಿ ಸೇರಬೇಕಾದ ಶಿಲಾಮುಖಿ ಅನುವಾದಿತಕೃತಿ ಮತ್ತು ಇತರ ಹಲವಾರು ಅನುವಾದಿತ ಲೇಖನಗಳು ಹುಡುಕಿದರೂ ಸಿಕ್ಕಿಲ್ಲ. ಹಾಗಾಗಿ ಇಲ್ಲಿ ಸೇರಿಲ್ಲ. ಅನುವಾದಿತ ಕಥೆಗಳನ್ನು ಸಣ್ಣಕಥೆಗಳ ಸಂಪಾದಕರು ತಮ್ಮ ಸಂಪುಟದಲ್ಲಿ ಸೇರಿಸದಿದ್ದ ಪ್ರಯುಕ್ತ ಇಲ್ಲಿ ಸೇರಿಸಿದೆ. ಜೀವನಚರಿತ್ರೆ, ವ್ಯಕ್ತಿಚಿತ್ರಗಳಲ್ಲಿ ಹಲವಾರನ್ನು ಇತರ ಸಂಪುಟಗಳ ಸಂಪಾದಕರು ತಮ್ಮ ಸಂಪುಟಗಳಲ್ಲಿ ಸೇರಿಸಿಕೊಂಡಿದ್ದು ಈಗಾಗಲೇ ಆ ಸಂಪುಟಗಳು ಪ್ರಕಟವಾಗಿರುವುದರಿಂದ ಆ ಬರಹಗಳನ್ನು ಮಾಲೆಯಲ್ಲಿ ಪ್ರನರುಕ್ತವಾಗಬಾರದೆಂಬ ಕಾರಣದಿಂದ ಈ ಸಂಪುಟದಲ್ಲಿ ಸೇರಿಸಿಲ್ಲ. ಇನ್ನು ಅನುವಾದ ವಿಭಾಗದಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಎಂ.ವಿ.ಸೀ. ಅವರು ಅನುವಾದಿಸಿರುವ ಕಥೆ, ಕಾದಂಬರಿ, ಪ್ರಬಂಧ ವಿಜ್ಞಾನ, ಸ್ತೋತ್ರ, ಮೊದಲಾದುವನ್ನು ಮಾತ್ರ ಸಂಗ್ರಹಿಸಲಾಗಿದೆ. ಕನ್ನಡದಿಂದ ಇಂಗ್ಲಿಷಿಗೆ ಎಂವಿಸೀ ಅವರು ಯುಧಿಷ್ಠಿರ, ಮೊದಲಾದ ಕೃತಿಗಳನ್ನು ಹತ್ತಾರು ಲೇಖನಗಳನ್ನು ಅನುವಾದಿಸಿದ್ದಾರೆ. ಅವುಗಳು ಇಂಗ್ಲಿಷ್ ಲೇಖನ ಗ್ರಂಥಗಳ ಸಂಪುಟದಲ್ಲಿ ಪ್ರಕಟವಾಗುವುದರಿಂದ ಇಲ್ಲಿ ಸೇರಿಲ್ಲ. ಹೀಗಾಗಿ ಎಂವಿಸೀ ಅವರ ಸಮಗ್ರ ಜೀವನಚರಿತ್ರೆಗಳ ಬರಹಗಳೂ ಅನುವಾದಗಳು ಹಲವು ಸಂಪುಟಗಳಲ್ಲಿರುವ ಅನುವಾದ ಬರಹಗಳನ್ನು ಸಮೀಕ್ಷಿಸಿದರೆ ಎಂ.ವಿ.ಸೀ. ಅವರ ಸಮಗ್ರ ಅನುವಾದ ಸಾಹಿತ್ಯದ, ಜೀವನಚರಿತ್ರೆ ಸಾಹಿತ್ಯದ ಕೊಡುಗೆ ಏನೆಂಬುದು ತಿಳಿಯುತ್ತದೆ.

ಪ್ರಕೃತ ಜೀವನ ಚರಿತ್ರೆ ಮತ್ತು ಅನುವಾದ ಸಂಪುಟದಲ್ಲಿ ಆತ್ಮಕಥೆ (ಪ್ರಸಿದ್ಧ) ಜೀವನಚರಿತ್ರೆ (ಅಪೂರ್ಣ) ಜೀವನಚರಿತ್ರೆ ವಿಭಾಗದಲ್ಲಿ ಅನುವಾದ ವಿಭಾಗದಲ್ಲಿ ೨ ಕಾದಂಬರಿಗಳು ೨ ಕಥಾಸಂಗ್ರಹಗಳು ೨ ಬಿಡಿ ಕಥೆಗಳು ೧ ವಿಜ್ಞಾನಗ್ರಂಥ ೧ ಸ್ತೋತ್ರಗ್ರಂಥ ಹಾಗೂ ಅನುಬಂಧಗಳೂ ಸೇರಿವೆ.

ನವೋದಯ ಸಾಹಿತಿಗಳಲ್ಲಿ ಅನೇಕರು ಕೇವಲ ಕವಿ ಸಾಹಿತಿಗಳಷ್ಟೇ ಆಗಿರಲಿಲ್ಲ ವಿದ್ವಾಂಸರೂ ಆಗಿದ್ದರು. ಅವರಲ್ಲಿ ಎಂ.ವಿ.ಸೀ. ಅವರೂ ಒಬ್ಬರು. ನವ್ಯ ಸಾಹಿತ್ಯ ಮತ್ತು ನವ್ಯೋತ್ತರ ಸಾಹಿತಿಗಳಲ್ಲಿ ಅನೇಕರು ಕೇವಲ ಕವಿ ಸಾಹಿತಿಗಳು ಆಗಿದ್ದಾರೆ ವಿದ್ವಾಂಸರು, ಸಾಹಿತಿಗಳು ಬಹು ಭಾಷಾ ಪರಿಣತರಾಗಿದ್ದರು. ಆದರೆ ಆಧುನಿಕ ತಲೆಮಾರಿನಲ್ಲಿ ಇವರ ಸಂಖ್ಯೆ ಅತ್ಯಲ್ಪ ಹಾಗಾಗಿ ಅನುವಾದ ಸಾಹಿತ್ಯದಲ್ಲಿ ಶಾಸ್ತ್ರಗ್ರಂಥಗಳ ಅನುವಾದಕರು ಕಡಿಮೆ ಎಂದು ನನ್ನ ಅನಿಸಿಕೆ ಈ ಹಿನ್ನೆಲೆಯಿಂದ ನೋಡಿದಾಗ ಎಂವಿಸೀ ಅವರ ಕೊಡುಗೆ ಕನ್ನಡಕ್ಕೆ ಗಣ್ಯವಾಗಿದೆ. ಈ ಸಂಪುಟದಲ್ಲಿ ಅನುವಾದ ಸಾಹಿತ್ಯಕ್ಕೆ ನೀಡಿದ ಕೊಡುಗೆ ಗಮನಿಸುವಂಥದ್ದಾಗಿದೆ.

ಈ ಸಂಪುಟವನ್ನು ಸಂಪಾದಿಸುವಲ್ಲಿ ಅಚ್ಚಿನಪ್ರತಿಗಳನ್ನು ಹಸ್ತಪ್ರತಿಯನ್ನು (ಸೌಂದರ್ಯಲಹರಿ) ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ, ಎಂ.ವಿ.ಸೀ. ಪುತ್ರರಾದ ಎಂ.ಎಸ್. ಭಾಸ್ಕರ್, ಎಂ.ಎಸ್. ರಾಮಪ್ರಸಾದ್, ಅವರು ಪ್ರತಿಷ್ಠಾನದ ಕಾರ್ಯದರ್ಶಿ ನಾ. ಗೀತಾಚಾರ್ಯರೂ ನೆರವಾಗಿದ್ದಾರೆ. ಈ ಸಂಪುಟವನ್ನು ಸಂಪಾದಿಸಲು

ಆ ಮೂಲಕ ಎಂ.ವಿ.ಸೀ. ಅವರ ಜೀವನ ಚರಿತ್ರೆ ಮತ್ತು ಅನುವಾದ ಕೃತಿಗಳನ್ನು ಅಧ್ಯಯನ ಮಾಡಲು, ಈ ಸಂಪುಟ ಸಂಪಾದಿಸಲು ಅವಕಾಶವಿತ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರಿಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೂ ಋಣಿಯಾಗಿದ್ದೇನೆ. ಈ ಸಂಪುಟ ಸುಂದರವಾಗಿ ಹೊರಬರಲು ಮಯೂರ ಪ್ರಿಂಟ್ ಆ್ಯಡ್ಸ್‌ನ ಸತೀಶ್ ಅವರು ಶ್ರಮಿಸಿದ್ದಾರೆ. ಅವರಿಗೆ ವಂದನೆಗಳು. ಜೀವನಚರಿತ್ರೆ ಮತ್ತು ಅನುವಾದ ಕೃತಿಗಳ ಬಗ್ಗೆ ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ಬರೆದಿದೆ.

ಎಂ.ವಿ.ಸೀ. ಅವರ ಸಮಗ್ರ ಜೀವನದ ಸಾಹಿತ್ಯ ಪಥ, ಸೂಚಿಗಳನ್ನು ಅವರನ್ನು ಕುರಿತ ಗ್ರಂಥ ಸಂಚಿಕೆ ಸೂಚಿಕೆಗಳನ್ನು ಓದುಗರ ಅನುಕೂಲಕ್ಕಾಗಿ ಅನುಬಂಧದಲ್ಲಿ ಕೊಡಲಾಗಿದೆ. ಕನ್ನಡದಲ್ಲಿ ಜೀವನಚರಿತ್ರೆಗಳನ್ನು ಅನುವಾದಗಳನ್ನು ಓದುವ, ಅಧ್ಯಯನ ಮಾಡುವವರಿಗೆ ಈ ಸಂಪುಟ ಉತ್ತಮ ಕೊಡುಗೆಯೆಂದು ನಂಬಿದ್ದೇನೆ.

ತಾ. ೩೧-೩-೨೦೧೨ — ಪ್ರೊ॥ ಜಿ. ಅಶ್ವತ್ಥನಾರಾಯಣ

ಬೆಂಗಳೂರು — (ನಿವೃತ್ತ ಕನ್ನಡ ಪ್ರಾಧ್ಯಾಪಕ)

ಪ್ರಸ್ತಾವನೆ

ಜೀವನ ಚರಿತ್ರೆ ಮತ್ತು ಆತ್ಮಕಥೆ

ಎಂ.ವಿ.ಸೀ. ಅವರು ಎಂಬತ್ತು ವರ್ಷಗಳ ಕಾಲ (ಜನನ ೯ ಸೆಪ್ಟೆಂಬರ್, ೧೯೯೦ ಮರಣ : ೯–೯–೧೯೯೦) ಬದುಕಿ ಬಾಳಿದರು. ಸುಮಾರು ಅರ್ಧ ಶತಮಾನದ ಕಾಲ ಹೊಸಗನ್ನಡದ ನವೋದಯ ಕಾಲದಿಂದ ನಮ್ಮ ದಲಿತ ಬಂಡಾಯದ ಚಳವಳಿ ಕಾಲದವರೆಗೆ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಕಣ್ಣಾರೆ ಕಂಡವರಾಗಿದ್ದರು. ಅಧಿಕವಾಗಿ ನವೋದಯ ಕಾಲದ ಕೃತಿಗಳನ್ನು ರಚಿಸಿದರು. ಕುವೆಂಪು ಅನಕೃ ಅವರಂತೆ ಸಾಹಿತ್ಯ ಕೃತಿಗಳನ್ನು ಶಾಸ್ತ್ರಕೃತಿಗಳನ್ನು ಹತ್ತಾರು ಪ್ರಕಾರಗಳಲ್ಲಿ ರಚಿಸಿದ ಸೃಜನಶೀಲತೆ ಪಾಂಡಿತ್ಯ ಅವರದು.

ಕವನ, ಮಕ್ಕಳ ಸಾಹಿತ್ಯ, ಸಣ್ಣಕಥೆ, ಕಾದಂಬರಿ, ವಿಮರ್ಶೆ, ನಾಟಕ, ಜೀವನ ಚರಿತ್ರೆ, ವ್ಯಕ್ತಿಚಿತ್ರ, ಕಾವ್ಯ ಮೀಮಾಂಸೆ, ವ್ಯಾಕರಣ, ಅಲಂಕಾರ, ಗ್ರಂಥಸಂಪಾದನೆ ಮೊದಲಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ ಮತ್ತು ರಚಿಸಿದ್ದಾರೆ ಸುಮಾರು ೧೦೦ ಗ್ರಂಥಗಳನ್ನು ಪೈಕಿ, ಸಂಪಾದಿಸಿರುವ ಕವಿರಾಜಮಾರ್ಗ, ಪ್ರಾಚೀನ ಕನ್ನಡ ವ್ಯಾಕರಣಗಳು, ಅರ್ಚನ, ಶಾಸ್ತ್ರ ಸಾಹಿತ್ಯ, ಕನ್ನಡ ಜೀವನ ಚರಿತ್ರೆ ಮುಂತಾದ ಕೃತಿಗಳು ಎಂ.ವಿ.ಸೀ. ಅವರು ಕನ್ನಡಕ್ಕೆ ಕೊಟ್ಟ ಶ್ರೇಷ್ಠಕಾಣಿಕೆಗಳಾಗಿವೆ. ಅವರು ಜೀವನ ಚರಿತ್ರೆ–ವ್ಯಕ್ತಿಚಿತ್ರ ಅನುವಾದಿತ ಕೃತಿಗಳು, ಆತ್ಮಕಥೆಗಳಿಗೆ ಸಂಬಂಧಿಸಿದಂತೆ ರಚಿಸಿದ ಕೃತಿಗಳ ವಿವರ ಹೀಗಿದೆ. ನಾಲ್ಕು ಬಗೆಯ ವರ್ಗೀಕರಣದಲ್ಲಿ ಇಲ್ಲಿ ಕೊಟ್ಟಿದೆ.

I ಗ್ರಂಥಗಳು:

೧. ಯುಧಿಷ್ಠಿರ (ಮಕ್ಕಳಿಗಾಗಿ) ರಾಷ್ಟ್ರೋತ್ಥಾನ ಪರಿಷತ್ ಪ್ರಕಟನೆ ೧೯೭೩.
೨. ಕವಿ ರನ್ನ (ಸಂಕ್ಷಿಪ್ತ ಜೀವನ) ರಾಷ್ಟ್ರೋತ್ಥಾನ ಪರಿಷತ್ ಪ್ರಕಟನೆ ೧೯೭೬
೩. ವೈಣಿಕ ವಿದ್ವಾನ್ ಎಲ್. ರಾಜಾರಾವ್ ಐ.ಬಿ.ಎಚ್. ಪ್ರಕಟನೆ ೧೯೮೩
೪. ರಾಜರಾಜವರ್ಮ (ಇಂಗ್ಲಿಷಿನಿಂದ ಅನುವಾದ) ಕೆ.ಎಂ. ಜಾರ್ಜ್ ಮೂಲ ಲೇಖಕರು.) ಕೇಂದ್ರ ಸಾಹಿತ್ಯ ಅಕಾಡೆಮಿ
೫. ಪ್ರತಿಮಾಗೃಹ (ವ್ಯಕ್ತಿಚಿತ್ರಗಳು) ರಾಘವ ಪ್ರಕಾಶನ ೧೯೯೦
೬. ವಿವೇಕಾನಂದ (ತೆಲುಗಿನಿಂದ ಅನುವಾದ ಮೂಲ ನೆಲ್ಲೂರಿನ ಶ್ರೀಮತಿ ಕೃಷ್ಣಕುಮಾರಿ) ವಿವೇಕ ಪಬ್ಲಿಷರ್ಸ್, ೧೯೫೧.
೭. ಗುರು–ಹಿರಿಯರು ಮತ್ತು ಗೆಳೆಯರು (ಅಪ್ರಕಟಿತ)
೮. ಟಿ.ಎಸ್. ವೆಂಕಣ್ಣಯ್ಯ (ಇಂಗ್ಲಿಷ್) ಮೈಸೂರು ವಿ.ವಿ.೧೯೮೫.

6

೯. ಮುದ್ದಣ (ಇಂಗ್ಲಿಷ್) ಕೇಂದ್ರ ಸಾಹಿತ್ಯ ಅಕಾಡೆಮಿ ೧೯೮೯.
೧೦. ಶ್ರೀರಾಮಕೃಷ್ಣ ಪರಮಹಂಸರು ರಾಘವ ಪ್ರಕಾಶನ ೧೯೯೦.
೧೧. ನಾಡೋಜ ಶ್ರೀ.

II ವ್ಯಕ್ತಿಚಿತ್ರಗಳು (ಬಿಡಿ ಬರಹಗಳು) ಕನ್ನಡ ವಿಶ್ವಕೋಶಕ್ಕೆ ಬರೆದವು.

ಕನ್ನಡ ವಿಶ್ವಕೋಶಕ್ಕೆ ೨೬ಕ್ಕೂ ಹೆಚ್ಚು ಲೇಖನಗಳನ್ನು ಕನ್ನಡ ಗ್ರಂಥಗಳ ಬಗ್ಗೆ, ಸಾಹಿತಿಗಳ ಬಗ್ಗೆ ಬರೆದಿದ್ದಾರೆ. ಆ ಪೈಕಿ ವ್ಯಕ್ತಿಗಳನ್ನು ಕುರಿತು ಬರೆದ ಸಂಕ್ಷಿಪ್ತ ವ್ಯಕ್ತಿ ಪರಿಚಯದ ಬರಹಗಳು ಇಲ್ಲಿವೆ.
೧. ಅಯ್ಯಾಶಾಸ್ತ್ರಿ ಸೋಸಲೆ.
೨. ಕುಮಾರವ್ಯಾಸ.
೩. ಚೌಂಡರಸ
೪. ಕಾನಕಾನಹಳ್ಳಿ ವರದಾಚಾರ್ಯ
೫. ತಿಮ್ಮಪ್ಪದಾಸರು
೬. ತುಂಬಲೂರಾಚಾರ್ಯ
೭. ನೃಪತುಂಗ
೮. ನಾರಾಯಣದಾಸರು
೯. ನಾರಾಯಣಶಾಸ್ತ್ರಿ
೧೦. ಪಂಪ
೧೧. ಮೋಟಗಾನಹಳ್ಳಿ ಶಂಕರಶಾಸ್ತ್ರಿ
೧೨. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ
೧೩. ರಾಜಪುರೋಹಿತ ನಾರಾಯಣ ಶ್ರೀನಿವಾಸ
೧೪. ವಾಸುದೇವಾಚಾರ್ಯ
೧೫. ಶ್ರೀ ವಿಜಯ

III ಇತರರ ಗ್ರಂಥಗಳಲ್ಲಿ/ಪತ್ರಿಕೆಗಳಲಿ ಬರೆದ ವ್ಯಕ್ತಿಚಿತ್ರಗಳು

೧. ವಿ.ಸೀ. ನಾನು ತಿಳಿದಹಾಗೆ (ವಿ.ಸೀ. ೭೫ ಗ್ರಂಥ, ಬೆಂಗಳೂರು ೧೯೭೩)
೨. ನನ್ನನ್ನು ಕಡೆದ ರೂವಾರಿ ಡಿ.ವಿ.ಜಿ. (ಕರ್ಮವೀರ ೮-೯-೨೯೭೦)
೩. ನಾನು ಕಂಡ ತೀನಂಶ್ರೀ (ಕನ್ನಡ ನುಡಿ ೨೯-೧೦-೧೯೬೬)
೪. ನಾನು ಕಂಡ ಶಿವರುದ್ರಪ್ಪನವರು (ಸ್ನೇಹಕಾರ್ತೀಕ, ಬೆಂಗಳೂರು, ೧೯೭೭)
೫. ಕಲಾತಪಸ್ವಿ ಕೆ. ವೆಂಕಟಪ್ಪ (ಕನ್ನಡ ನುಡಿ).
೬. ವಾಗ್ಗೇಯಕಾರ ವಾಸುದೇವಾಚಾರ್ಯ (ವಾಗ್ಗೇಯಕಾರ ವಾಸುದೇವಾ ಚಾರ್ಯ ೧೯೬೫, ಪುಟ ೨೪೧-೨೪೪, ಮೈಸೂರು).
೭. ನಾನು ಕಂಡ ಕೆ. ಗೋಪಾಲಕೃಷ್ಣರಾವ್ (ಕನ್ನಡ ನುಡಿ ೧-೩೧. ೧೯೬೮ ಪುಟ ೪)

೮. ಡಿ.ವಿ. ಗುಂಡಪ್ಪನವರ ಪೂರ್ಣ ವ್ಯಕ್ತಿತ್ವ (ಸಾರ್ವಜನಿಕ, ಬೆಂಗಳೂರು, ೧೦–೧೧–೨೯೭೯)
೯. ಎತ್ತರದ ವ್ಯಕ್ತಿ (ಬೆಳ್ಳಾವೆ ವೆಂಕಟನಾರಣಪ್ಪ) ಅಪ್ರಕಟಿತ)
೧೦. ಗುರುವಿನ ಒಂದು ಭಾವಚಿತ್ರ (ಟಿ.ಎಸ್. ವೆಂಕಣ್ಣಯ್ಯ) ಸವಿನೆನಪು ಗ್ರಂಥ ೧೯೭೦.
೧೧. ಗುರುಸ್ಮರಣೆ (ವೆಂಕಣ್ಣಯ್ಯ) ಅನಂತರಂಗ ಪ್ರಕಾಶನ ಮೈಸೂರು, ೧೯೭೭.
೧೨. ವಿನಯಶಾಲಿ ವೀರ ಕನ್ನಡಿಗ–ರಸಷಷ್ಟಿ ಮೈಸೂರು, ೧೯೮೦. ಪುಟ ೯೫
೧೩. ಬಳ್ಳಾರಿ ಸಮ್ಮೇಳನ (೧೯೭೮) ಅದರ ಅಧ್ಯಕ್ಷರು : ಕನ್ನಡ ನುಡಿ ೨೧–೫–೨೯೭೮, ಪುಟ ೧೧೬–೧೧೮.
೧೪. ಪೂಜ್ಯ ಕೃಷ್ಣಶಾಸ್ತ್ರಿಗಳಿಂದ ನಾನು ಕಲಿತ ಪಾಠ (ಎ.ಆರ್.ಕೃ. ಜೀವನ ಸಾಧನೆ. ಪ್ರ.ಕ. ವಿಶೇಷ ಸಂಚಿಕೆ, ಮೈಸೂರು ವಿವಿ. ೧೯೭೧.)
೧೫. ಕನ್ನಡದ ಹೊಸಗನ್ನಡ ಸಾಹಿತ್ಯದಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ಸ್ಥಾನ, ಜೀವನ (೧೩–೪) ೧೯೫೨, ಪುಟ ೧೧೩.
೧೬. ಕಲೆಯಲ್ಲಿ ಪರಿಪಕ್ವ ಸ್ಥಿತಿಯನ್ನು ಮುಟ್ಟಿರುವವರು. (ಗಾನಕೋಕಿಲ ಜಿ. ಚನ್ನಮ್ಮ ಸನ್ಮಾನ ಸಂಚಿಕೆ, ಬೆಂಗಳೂರು, ಪುಟ ೧೯–೨೦).
೧೭. ಜ್ಯೋತಿರ್ಲಿಂಗಾನುಭವಿ ಶ್ರೀ ಜಚನಿ (ದಾಸೋಹ ಗೌರವ ಗ್ರಂಥ, ಬೆಂಗಳೂರು, ೧೯೬೩, ಪುಟ ೧–೧೮).
೧೮. ನುಡಿಸೇವೆ : ಸ್ವರ್ಣರಶ್ಮೀ ಸಂಚಿಕೆ, ಬೆಂಗಳೂರು, ೧೯೭೯, ಪುಟ ೧೧–೧೨.
೧೯. ಪೂಜ್ಯ ಎ.ಆರ್.ಕೃ. ಅವರನ್ನು ಕುರಿತು ನಾಲ್ಕು ನೆನಪಿನ ಮಾತು. (ಕನ್ನಡ ನುಡಿ ೨೧–೪/೫ ೧೯೬೮).
೨೦. ಸಾಹಿತ್ಯ–ರಾಜರತ್ನಂ ಅವರ ಪರಿಚರ್ಯೆ – ರಾಜಮಾರ್ಗ, ಬೆಂಗಳೂರು–೧೯೮೦.

IV ವ್ಯಕ್ತಿಚಿತ್ರ/ಜೀವನ ಚರಿತ್ರೆ ಗ್ರಂಥಗಳನ್ನು ಕುರಿತ ವಿಮರ್ಶಾ ಬರಹಗಳು:
೧. ಕನ್ನಡ ಜೀವನ ಚರಿತ್ರೆ (ವಿಮರ್ಶಾ ಗ್ರಂಥ) : ಕ.ಸಾ.ಪ. (೧೯೭೩). (ಆಧುನಿಕ ಸಾಹಿತ್ಯ ಸಮೀಕ್ಷೆ–೧ ರಲ್ಲಿ ಪುನರ್ಮುದ್ರಿತವಾಗಿದೆ. ೨೦೦೦. ಪ್ರ: ಬಿ.ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಬೆಂಗಳೂರು).
೨. ವಿದೇಶೀ ಲೋಕೋಪಕಾರಿಗಳು (ಜೀವನ ಚರಿತ್ರೆ, ಎಲ್. ಸ್ವಾಮಿರಾವ್, ಈ ಗ್ರಂಥದ ವಿಮರ್ಶೆ (ಕನ್ನಡ ನುಡಿ)

V ವ್ಯಕ್ತಿಗಳನ್ನು ಕುರಿತು ಅನೇಕ ಉಪನ್ಯಾಸಗಳನ್ನು ಮಾಡಿದ್ದಾರೆ.
ವಿವರಗಳು ಲಭ್ಯವಿಲ್ಲ

VI ಎಂ.ವಿ.ಸೀ. ಅವರ ಇತರ ಗ್ರಂಥಗಳಲ್ಲಿ (ಜೀವನ ಚರಿತ್ರೆಯ ಲೇಖನಗಳು)

ಬಾಳಿನ ಬುತ್ತಿ ಗ್ರಂಥದಲ್ಲಿ ಶ್ರೀ ಬಸವಣ್ಣನವರು, ಪುರಂದರದಾಸರು ಲೇಖನಗಳು.

VII ಬಾನುಲಿ ಬರಹಗಳು :

೧. ಬಾಲ ಬಸವೇಶ್ವರ (ರೂಪಕ, ಮಕ್ಕಳ ಕಾರ್ಯಕ್ರಮ ಆಕಾಶವಾಣಿ)

೨. ಜಿ.ಪಿ.ರಾಜರತ್ನಂ (ಭಾಷಣ– ಆಕಾಶವಾಣಿ)

೩. ಪುರಂದರದಾಸರು ಮತು ದಾಸಕೂಟ (ಭಾಷಣ– ಆಕಾಶವಾಣಿ)

VIII ಇಂಗ್ಲಿಷ್ ಗ್ರಂಥಗಳು : (ಜೀವನ ಚರಿತ್ರೆಗೆ ಸಂಬಂಧಿಸಿದಂತೆ)

Muddanna, (Central Sahithya Academy 1989)

ಇಂಗ್ಲಿಷ್ ಲೇಖನಗಳು (ಜೀವನ ಚರಿತ್ರೆಗೆ ಸಂಬಂಧಿಸಸಿದಂತೆ) (ಭಾರತೀಯ ಸಾಹಿತ್ಯ ವಿಶ್ವಕೋಶಕ್ಕೆ ಬರೆದ ಕಿರು ಲೇಖನಗಳು)

1. Brahma Shiva
2. Chamarasa
3. Chikkadevaraja
4. Durga Shiva
5. Mummadi Krishna Raja
6. Basavappa Sastry
7. Halakatti P.G.
8. Sarvajna.
9. Ranna.
10. Sree Purandaradasa, life and thought (9th National Geetha Gayana Yagna. Bangalore 1981)
11. Chavunda Raya and Attimabbe (march of Karnataka Magazine 1981 March issue)

ಎಂ.ವಿ.ಸೀ. ಅವರು ಸಾಕಷ್ಟು ಜೀವನ ಚರಿತ್ರೆ ಸಾಹಿತ್ಯವನ್ನು ವೈವಿಧ್ಯಮಯವಾಗಿ ಕನ್ನಡಕ್ಕೆ ನೀಡಿದ್ದಾರೆ ಎಂಬುದು ಮೇಲಿನ ಪಟ್ಟಿಯಿಂದ ವಿದಿತವಾಗುತ್ತದೆ. ಈ ಪೈಕಿ ಕೆಲವು ಸಣ್ಣ ಗ್ರಂಥಗಳಾಗಿ ಬಂದಿವೆ. (ವೈಣಿಕ ವಿದ್ವಾನ್ ಎಲ್. ರಾಜಾರಾವ್, ಯುಧಿಷ್ಠಿರ, ಕವಿರತ್ನ ಇತ್ಯಾದಿ) ವ್ಯಕ್ತಿಚಿತ್ರಗಳಲ್ಲಿ ಕೆಲವು ಪ್ರತಿಮಾಗೃಹ ಎಂಬ ಗ್ರಂಥದಲ್ಲಿ ಬಂದಿವೆ. ಆದರೆ ಉಳಿದೆಲ್ಲ ಲೇಖನಗಳು ಪ್ರತ್ಯೇಕ ಗ್ರಂಥರೂಪದಲ್ಲಿ ಬಂದಿಲ್ಲ. ಬರುವುದು ಅಗತ್ಯವಿದೆ.

ಈ ಬರಹದಲ್ಲಿ ಕೆಲವು ಜೀವನಚರಿತ್ರೆಯ ಗ್ರಂಥಗಳನ್ನು ಹಾಗೂ ವ್ಯಕ್ತಿಚಿತ್ರದ ಲೇಖನಗಳನ್ನು ಮತ್ತು ವಿಮರ್ಶಾ ಜೀವನಚರಿತ್ರೆ ಗ್ರಂಥವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಎಂ.ವಿ.ಸೀ. ಅವರ "ಜೀವನ ಚರಿತ್ರೆ ಸಾಹಿತ್ಯ" ಎಂಬ ವಿಷಯುವಾಗಿ ಮಹಾಪ್ರಬಂಧವನ್ನು ಯಾರಾದರೂ ರಚಿಸಬಹುದಾಗಿದೆ. ಎಂ.ವಿ.ಸೀ ಅವರ ಅಪ್ರಕಟಿತ ಬರಹಗಳು ಪತ್ರಿಕೆಗಳಲ್ಲಿ ಬರೆದವು (ಗಮನಕ್ಕೆ ಬಾರದವು) ಇವೆ.

ಅವುಗಳನ್ನು ಪತ್ತೆ ಹಾಕಿ ಪ್ರಕಟಿಸುವ ಅಗತ್ಯವಿದೆ.

ಕನ್ನಡ ಸಾಹಿತ್ಯದ ಜೀವನ ಚರಿತ್ರೆಗಳಿಗೆ ಆತ್ಮಕಥೆಗಳಿಗೆ ಸಂಬಂಧಿಸಿದಂತೆ ಹಲವು ಪಿಚ್.ಡಿ ಗ್ರಂಥಗಳು ಬಂದಿವೆ. ಅವುಗಳಲ್ಲಿ ಎಂ.ವಿ.ಸೀ. ಅವರ ಜೀವನ ಚರಿತ್ರೆ ಸಾಹಿತ್ಯದ ಬಗ್ಗೆ ವಿಶೇಷ ಗಮನಕೊಟ್ಟಿಲ್ಲ. ಎಂ.ವಿ.ಸೀ. ಅವರಿಗೆ ಇಂಗ್ಲಿಷಿನಲ್ಲಿ ಪ್ರಭುತ್ವವಿತ್ತು. ಮುದ್ದಣವನ್ನು ಕುರಿತು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಅದು ಕನ್ನಡಕ್ಕೆ ಅನುವಾದ ಆಗಬೇಕು. ಅವರ ಇಂಗ್ಲಿಷ್ ಬರಹಗಳಲ್ಲಿ ಕನ್ನಡದಿಂದ ಆದ ಅನುವಾದಗಳಿವೆ. ಇಂಗ್ಲಿಷಿನಲ್ಲೇ ಸ್ವತಂತ್ರವಾಗಿ ಬರೆದವು ಇವೆ. ಇಂಗ್ಲಿಷಿನಿಂದಲೂ ಅನುವಾದಿಸಿದ್ದಾರೆ. ಅವರ ಇಂಗ್ಲಿಷ್ ಬರಹಗಳ ಸಮಗ್ರ ಸಂಪುಟ ಪ್ರಕಟವಾದರೆ ಕನ್ನಡದ ಕೊಡುಗೆಯನ್ನು ಇಂಗ್ಲಿಷಿನಲ್ಲಿ ಕೊಟ್ಟ ಶ್ರೇಷ್ಠ ಲೇಖಕರು ಒಬ್ಬರೆಂದು ತಿಳಿಯುತ್ತದೆ.

ಕನ್ನಡ ವಿಶ್ವಕೋಶದ ಲೇಖನಗಳು

ವ್ಯಕ್ತಿಚಿತ್ರಗಳನ್ನು ನಿರ್ಬಂಧರಹಿತ ರಚನೆಗಳು ಮತ್ತು ನಿರ್ಬಂಧಯುಕ್ತ ರಚನೆಗಳು ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಅಂಕಣ ಬರಹಗಳು ನಿರ್ಬಂಧ ಸಹಿತ ವ್ಯಕ್ತಿ ಚಿತ್ತಗಳಾಗಿರುತ್ತವೆ. ಕಾಲಮಿತಿ ಕಾರಣದಿಂದ (ಪ್ರತಿ ವಾರವೂ ಸಕಾಲಕ್ಕೆ ಬರೆಯಬೇಕು) ಪುಟದ ಮಿತಿ ಕಾರಣದಿಂದ, ವ್ಯಕ್ತಿ ಚಿತ್ರಗಳನ್ನು ತೃಪ್ತಿಕರವಾಗಿ ನೀಡಲಾಗುವುದಿಲ್ಲ. ಹಾಮಾನಾ–ಎಚ್ಚೆಸ್ಕೆ ಅವರ ಬರಹಗಳಲಿ ಈ ಮಿತಿಗಳನ್ನು ಕಾಣಬಹುದು. ಉದಾಹರಣೆಗೆ ಮಹಾಪುರಾಣ ಕುರಿತು ೨೪,೦೦೦ ಶ್ಲೋಕಗಳ ಸಂಸ್ಕೃತ–ಕನ್ನಡಾನುವಾದದ ಬೃಹತ್ ಗ್ರಂಥದ ಕಿರುಪರಿಚಯವನ್ನು ಅಂಕಣಪುಟದ ಮಿತಿಯಲ್ಲಿ ಹಾಮಾನಾ ಒಂದೆಡೆ ಕೊಟ್ಟಿದ್ದಾರೆ. ಇದರಿಂದ ಕೃತಿಗೆ ನ್ಯಾಯ ಸಿಕ್ಕೀತೆ ? ಗುರು ಗ್ರಂಥದ ಬಗ್ಗೆ ಲಘು ಪರಿಚಯ ಲೇಖನವನ್ನು ಕರಿಯ ಕನ್ನಡಿಯಲ್ಲಿ ಹಿಡಿದಂತೆ ಎಂದು ವಾದಿಸಬಹುದು. ಆದರೆ ಅದರಲ್ಲಿ ಸತ್ಯ ಎಷ್ಟಿದೆ? ಪ್ರತಿಮಾಗೃಹದಲ್ಲಿ ಎಂ.ವಿ.ಸೀ ಅವರು ಕಾಲದ ಮಿತಿಯಿಲ್ಲದೆ ಬರೆದಿರುವುದರಿಂದ ಕಾಲಂ ಸಂಕ್ಷಿಪ್ತತೆ ಕಾಣುವುದಿಲ್ಲ ಮತ್ತು ವ್ಯಕ್ತಿತ್ವ ನಿರೂಪಣೆ ಮುಖ್ಯವಾದುದರಿಂದ ಜೀವನ ಚರಿತ್ರಾಂಶಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿಲ್ಲ.

ಆದರೆ ಕನ್ನಡ ವಿಶ್ವಕೋಶದಲ್ಲಿ ಎಂ.ವಿ.ಸೀ ಅವರು ಬರೆದ ವ್ಯಕ್ತಿ ಪರಿಚಯದ ಟಿಪ್ಪಣಿ ರೂಪದ ಬರಹಗಳಿಗೆ ಅಂಕಣ ಬರಹದ ಮಿತಿಗಳು ಅನ್ವಯವಾಗುತ್ತವೆ. ಈ ಬರಹಗಳಲ್ಲಿ ಜೀವನದ ಮುಖ್ಯ ಘಟನೆಗಳು ಮತ್ತು ಕೃತಿಗಳ ಉಲ್ಲೇಖ ಅಲ್ಲೊಂದು ಇಲ್ಲೊಂದು ಮಾತು ಕಾಣುತ್ತದೆ. ಏಕೆಂದರೆ ವಿಶ್ವಕೋಶಕಾರರು ತಮ್ಮದೇ ಆದ ಚೌಕಟ್ಟನ್ನು ಹಾಕಿಕೊಂಡಿರುತ್ತಾರೆ. ಅನಿವಾರ್ಯವಾಗಿ ಅದನ್ನು ಲೇಖಕರು ಪಾಲಿಸಬೇಕಾಗುತ್ತದೆ. ಕನ್ನಡ ವಿಶ್ವಕೋಶಕ್ಕೆ ಎಂ.ವಿ.ಸೀ. ಅವರು ಬರೆದ ವ್ಯಕ್ತಿ ಪರಿಚಯದ ಲೇಖನಗಳಿವು : ೧. ಸೋಸಲೆಅಯ್ಯಾ ಶಾಸ್ತ್ರಿ. ೨. ಕಾನಕಾನಹಳ್ಳಿ ವರದಾಚಾರ್ಯ, ೩. ನಾರಾಯಣ ಶಾಸ್ತ್ರಿ ಎನ್.ಎಸ್, ೪. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ, ೫. ಮೋಟಗಾನಹಳ್ಳಿ ಶಂಕರಶಾಸ್ತ್ರಿ, ೫. ಮೋಟಗಾನಹಳ್ಳಿ ಶಂಕರಶಾಸ್ತ್ರಿ, ೬. ನಾರಾಯಣ ಶ್ರೀನಿವಾಸರಾಜ ಪುರೋಹಿತ, ೭. ವಾಸುದೇವಾರ್ಯ

ಲೇಖನಗಳು ಮುಖ್ಯವಾದವು. ಇವರೆಲ್ಲರ ಸಾಧನೆ–ಕನ್ನಡಕ್ಕೆ ಕೊಟ್ಟ ಕೊಡುಗೆ ಅಪಾರವಾದರೂ ಇವರನ್ನು ಕುರಿತ ಬರಹಗಳಲ್ಲಿ ಪ್ರತಿ ಲೇಖನವೂ ೨ ಪುಟದ ಒಳಗೇ ಇದೆ. ಯಾರು? ಏನು? ಎಂದಷ್ಟೆ ಇವರ ಬಗ್ಗೆ ಪರಿಚಯ ಆಗುತ್ತದೆ. ವಿಶ್ವಕೋಶದ ವಿನ್ಯಾಸವೂ ಹಾಗೆಯೇ ಇರುತ್ತದೆ ಅನ್ನಿ.

ನಾಡೋಜ ಬಿ.ಎಂ.ಶ್ರೀ.

ಜೀವನ ಚರಿತ್ರೆಯ ಗುಂಪಿಗೆ ಸೇರುವ ಇನ್ನೊಂದು ಗ್ರಂಥ ನಾಡೋಜ ಬಿ.ಎಂ.ಶ್ರೀ ಇದರಲ್ಲಿ ಜನನ ಮರಣ ಜೀವನ ಉದ್ಯೋಗ ಬಡ್ತಿ ಪ್ರಶಸ್ತಿಗಳ ಯಾಂತ್ರಿಕ ವಿವರಗಳಿಲ್ಲ ನಿಜ. ಆದರೆ ಒಬ್ಬ ನಾಡೋಜನ ಆತ್ಮ ಎಲ್ಲಿದೆ ? ಪ್ರತಿಭೆ ಎಲ್ಲಿದೆ ? ವ್ಯಕ್ತಿತ್ವದ ವೈಶಿಷ್ಟ್ಯ ಎಲ್ಲಿದೆ ಎಂಬುದನ್ನು ಎಂ.ವಿ.ಸೀ. ಗುರುತಿಸಿದ್ದಾರೆ. ಅವರ ಅಂತಶ್ಶಕ್ತಿ ಜೀವನದುದ್ದಕ್ಕೂ ಹೇಗೆ ಹೊರಹೊಮ್ಮಿತ್ತು ಎಂಬುದರ ಚರಿತ್ರೆ ಇಲ್ಲಿದೆ. ಅವರ ಸೇವೆಯ ಹಲವು ಮುಖಗಳಲ್ಲಿ ಹೇಗೆ ಹೊರಹೊಮ್ಮಿತ್ತು ಎಂಬುದರ ಚರಿತ್ರೆ ಇಲ್ಲಿಗೆ ಪರಿಷತ್ತಿನ ಉಪಾಧ್ಯಕ್ಷರು, ಕನ್ನಡ ಪ್ರಾಧ್ಯಾಪಕರು ಮೈ.ವಿ.ವಿ. ರಿಜಿಸ್ಟ್ರಾರ್, ರಾಜಸೇವಾ ಪ್ರಸಕ್ತರು. ಸಂಸ್ಕೃತ ಪ್ರೇಮಿ ಗುರುಭಕ್ತ ಬಿ.ಎಂ.ಶ್ರೀ. ಅವರ ಷಣ್ಮುಖ ಪ್ರೇಮ ಸಾಧನೆಗಳನ್ನು ಎಂ.ವಿ.ಸೀ. ಚಿತ್ರಿಸಿದ್ದಾರೆ. ಒಂದು ರೀತಿಯಲ್ಲಿ ವಿಮರ್ಶಾತ್ಮಕ ಗ್ರಂಥ–ಪ್ರಬಂಧ ಸಂಗ್ರಹ ಗ್ರಂಥ. ಬಿ.ಎಂ.ಶ್ರೀ ಅವರ ಅಂತರಂಗದ ಚರಿತ್ರೆಯ ಗ್ರಂಥ ಇದು. ಇನ್ನೊಂದು ವೈಶಿಷ್ಟ್ಯವೆಂದರೆ ಒಮ್ಮೆ ಕುರಿತು ಬರೆದ ಗ್ರಂಥವಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಬಿ.ಎಂ.ಶ್ರೀ. ಅವರ ಒಂದೊಂದು ಮುಖವನ್ನು ಚಿತ್ರಿಸಿದ ಬರಹಗಳ ಸಂಕಲನ ಇದು. ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯನ್ನು ಹೀಗೂ ಬರೆಯಬಹುದು ಎನ್ನಿಸುವ ಗ್ರಂಥ ಇದು. ವಿಮರ್ಶಾತ್ಮಕ ಚಿಂತನೆಯ ಗುರುಭಕ್ತಿ ಗ್ರಂಥ.

ಎಂ.ವಿ.ಸೀ. ಅವರ ವ್ಯಕ್ತಿಚಿತ್ರಗಳು (ಇತರ ಕೃತಿಗಳಲ್ಲಿ)

ಕನ್ನಡ ಜೀವನ ಚರಿತ್ರಕಾರರಲ್ಲಿ ಎಂ.ವಿ.ಸೀ. ವಿಶಿಷ್ಟ ಬರಹಗಾರರಾಗಿದ್ದಾರೆ. ಆತ್ಮಕಥೆಯನ್ನು ಪ್ರತ್ಯೇಕವಾಗಿ ಬರೆದಿರುವುದರ ಜತೆಗೆ ಅಲ್ಲಲ್ಲಿ ಬಿಡಿಲೇಖನಗಳಲ್ಲಿ ಆತ್ಮಕಥೆಯ ತುಣುಕುಗಳು ಸಿಗುತ್ತವೆ. ಉದಾಹರಣೆಗೆ, 'ನಾನು ಮತ್ತು ನನ್ನ ಸಾಹಿತ್ಯ' ಎಂಬ ಪ್ರಾಚೀನ ಕನ್ನಡ ವ್ಯಾಕರಣಗಳು, ಗ್ರಂಥದ ಬಗ್ಗೆ ಮಾಡಿದ ಭಾಷಣದ ಲಿಖಿತರೂಪದ ಲೇಖನದಲ್ಲಿ ಗ್ರಂಥ ರಚನೆಯ–ಹಿನ್ನೆಲೆಯನ್ನು ಹೇಳಿಕೊಂಡಿದ್ದಾರೆ. (ಪುಟ ೨೫೦–೨೫೩ ನಾನು ಮತ್ತು ನನ್ನ ಸಾಹಿತ್ಯ ಎಂ.ವಿ.ಸೀ.: ಸಂಪುಟ ೩ ಪ್ರಬಂಧಗಳು ಮತ್ತು ವ್ಯಕ್ತಿ ಚಿತ್ರಗಳು–ಸಂ. ಮಧುಸೂದನ್ – ಕಸಂ೧).

ಬಾಳಿನ ಬುತ್ತಿ

'ಬಾಳಿನ ಬುತ್ತಿ' ಗ್ರಂಥವನ್ನು ಎಂ.ವಿ.ಸೀ. ಅವರು ಕಥಾ ಪ್ರಬಂಧ

ಸಂಕಲನವೆಂದು ಕರೆದಿದ್ದಾರೆ. ಆದರೆ ಅದರಲ್ಲಿ ಕೆಲವು ಜೀವನ ಚಿತ್ರಣಗಳಿವೆ.

ಶ್ರೀ ಬಸವಣ್ಣನವರು ಲೇಖನ (ಪುಟ ೩೦೧–೩೨೦) ಬಸವಣ್ಣನವರ ಜೀವನ–ವಚನಗಳ ವಿಮರ್ಶೆಯ ಲೇಖನವಾಗಿದೆ. ಶ್ರೀ ಪುರಂದರದಾಸರು ಲೇಖನವೂ (ಪುಟ ೩೩೪–೩೪೩) ದಾಸರ ವ್ಯಕ್ತಿತ್ವದ ಚಿತ್ರಣ ನೀಡುವ ವ್ಯಕ್ತಿ ಚಿತ್ರವಾಗಿದೆ. ಇಲ್ಲಿ ತೌಲನಿಕ ನೋಟವಿದೆ. ಪುರಂದರದಾಸರ 'ಧರ್ಮವೇ ದಿವ್ಯವೆಂಬ ಮಂತ್ರ'ವನ್ನು ಕುರಿತು ಬರೆಯುತ್ತಾ ಇದರಲ್ಲಿ ಬುದ್ಧದೇವನ ಬೋಧೆ ಬಿಂಬಿತವಾಗಿದೆ. ಕ್ರಿಸ್ತನವಾಣಿ ಕೇಳಿ ಬರುತ್ತದೆ, ಮಹಾತ್ಮಾಗಾಂಧಿ ಅವರ ಮನೋಧರ್ಮದ ಮುಂಗಾಣಿಕೆ ಇದೆ. ಮಹಾತ್ಮರೆಲ್ಲ ಕಾಣವುದೊಂದೇ ಸತ್ಯದರ್ಶನ ಎಂದು (ಪು. ೩೪೩. ಎಂ.ವಿ.ಸೀ. ಸಂಗ್ರ ಸಂಪುಟ (೩) ಸಂ). ಮಧುಸೂದನ್ ಎಂದಿದ್ದಾರೆ.

ಶ್ರೀರಾಮಕೃಷ್ಣ ಪರಮಹಂಸರು

ಎಂ.ವಿ.ಸೀ. ಅವರು ಬರೆದಿರುವ ೧೬ ಪುಟಗಳ ಜೀವನ ಚರಿತ್ರೆ ರೋಮೇರೋಲಾ ಅವರು ಬರೆದ ಗ್ರಂಥದ ಸಾರಸಂಗ್ರಹ ಇದು. ೧೯೨೮–೨೯ರ ಅವಧಿಯಲ್ಲಿ ರಚಿತವಾದುದು. ೧೯೯೦ರಲ್ಲಿ ಮುದ್ರಿತವಾಗಿದೆ. ಸಾರವತ್ತಾದ ಒಂದು ದೀರ್ಘ ಲೇಖನ ಈ ಗ್ರಂಥ ಎನ್ನಬಹುದು. ಸಾಮಾನ್ಯರಿಗೆ ವಿದ್ಯಾರ್ಥಿಗಳಿಗೆ ಶ್ರೀ ರಾಮಕೃಷ್ಣ ಪರಮಹಂಸರ ಪರಿಚಯ ಸುಲಭವಾಗಿ ಈ ಗ್ರಂಥ ಮಾಡಿಕೊಡುತ್ತದೆ. (ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟಗಳಲ್ಲಿ ೮ನೇ ಸಂಪುಟಕ್ಕೆ ಸೇರಬೇಕಾದದ್ದು ಸಂಪುಟ ೩ರಲ್ಲಿ ಸೇರಿದೆ).

ಯುಧಿಷ್ಠಿರ ಮತ್ತು ರನ್ನ (ಮಕ್ಕಳ ಗ್ರಂಥಗಳು)

ಯುಧಿಷ್ಠಿರ ಪುಸ್ತಕದಲ್ಲಿ ಧರ್ಮರಾಯನ ವ್ಯಕ್ತಿಚಿತ್ರಣವಿದೆ. ಮಹಾಭಾರತದಲ್ಲಿ ಬರುವ ಯಕ್ಷಪ್ರಶ್ನೆಯ ಪ್ರಸಂಗ ಮತ್ತು ಸ್ವರ್ಗಾರೋಹಣ ಪ್ರಸಂಗವನ್ನು ಪುಟ್ಟ ಪುಟ್ಟ ವಾಕ್ಯಗಳಲ್ಲಿ ಮಕ್ಕಳಿಗೆ ತಿಳಿಯುವಂತೆ ಬರೆದಿದ್ದಾರೆ. ನಮ್ಮ ನಾಡಿನ ಮಹಾಕಾವ್ಯಗಳ ಭಾಗಗಳನ್ನು ಮಕ್ಕಳಿಗೆ ಹೇಗೆ ತಿಳಿಸಬೇಕು ಎಂಬುದಕ್ಕೆ ಈ ಪುಟ್ಟ ಗ್ರಂಥ ಒಂದು ಮಾದರಿ ಆಗಿದೆ.

ರನ್ನ ಗ್ರಂಥವೂ ೪೦ ಪುಟಗಳ ಪುಟ್ಟಗ್ರಂಥ. ವಿದ್ಯಾರ್ಥಿಗಳಿಗಾಗಿ ಬರೆದದ್ದು. ನಮ್ಮಲ್ಲಿ ಸಾಹಿತ್ಯವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮಕ್ಕಳ ಯಾವ ಯಾವ ವಯಸ್ಸಿಗೆ ಯಾವ ಮಟ್ಟದಲ್ಲಿ ಬರೆಯಬೇಕೆಂದು ತಿಳಿದು ಬರೆದವರು ಕೆಲವೇ ಮಂದಿ. ದೇವುಡು, ಹೊಯ್ಸಳ, ಪಂಜೆ, ಜಿ.ಪಿ. ರಾಜರತ್ನಂ ಅಂಥವರು. ನರ್ಸರಿ ಮಟ್ಟದ (೬ ವರ್ಷದವರೆಗೆ) ಸಾಹಿತ್ಯ ; ಪ್ರಾಥಮಿಕ ಶಾಲಾ ಮಟ್ಟದ (೬–೧೨ ವಯಸ್ಸಿನವರೆಗೆ) ಕಿಶೋರ ಸಾಹಿತ್ಯ ; ಹೈಸ್ಕೂಲ್ ಮಟ್ಟದ (೧೨ ರಿಂದ ೧೮ರ ವರೆಗೆ) ವಿದ್ಯಾರ್ಥಿ ಸಾಹಿತ್ಯ ಅಥವಾ ಯುವಕ ಸಾಹಿತ್ಯ ಎಂದು ತಿಳಿದು ಅವರವರ ಮಟ್ಟಕ್ಕೆ ತಕ್ಕ ಭಾಷೆ, ವಿಷಯ ನಿರೂಪಣೆ ಮಾಡಬೇಕು ಎಂದು ದೇವುಡು ಹೇಳುತ್ತಿದ್ದರು. ರನ್ನ ಕೃತಿ ಮಕ್ಕಳ ಸಾಹಿತ್ಯ (೧೨ರ ವರೆಗೆ) ಅಲ್ಲ ೧೨

ರಿಂದ ೧೪ರ ವರೆಗಿನ ಟೀನ್ ಏಜರ್ಸ್ (ಹದಿವಸ್ಕರು) ಎಂದು ಕರೆಯಲ್ಪಡುವ ವಿದ್ಯಾರ್ಥಿಗಳಿಗೆ (ಹೈಸ್ಕೂಲ್, ಪಿ.ಯು.ಸಿ) ರಚಿಸಿದ ವಿದ್ಯಾರ್ಥಿ ಸಾಹಿತ್ಯ ರನ್ನ ಗ್ರಂಥ. ಇದಕ್ಕೆ ಒಂದು ಉದಾಹರಣೆಯನ್ನು ಈ ಗ್ರಂಥದಿಂದ ಕೊಡಬಹುದು. ಗದಾಯುದ್ಧದಲ್ಲಿ ಅಜಿತ ಪುರಾಣದಲ್ಲಿರುವಂತೆ ಕಥೆಗೆ ಬೇಕಿಲ್ಲದ ವರ್ಣನೆಗಳ ಹಾವಳಿಯಿಲ್ಲ; ಓದುಗರು ಮತವಿಚಾರ ಶಾಸ್ತ್ರದ ಮರುಭೂಮಿಯಲ್ಲಿ ಪ್ರಯಾಣ ಮಾಡಿ ಬಳಲಬೇಕಾಗಿಲ್ಲ; ಮೊದಲಿಂದ ಕಡೆಯವರೆಗೆ ವೀರ, ಕರುಣ, ರೌದ್ರ, ಅದ್ಭುತ ರಸಗಳ ಪ್ರವಾಹದಲ್ಲಿ ರನ್ನ ನಮ್ಮನ್ನು ತೇಲಿಸಿಕೊಂಡು ಹೋಗುತ್ತಾನೆ ರಸಘಟ್ಟಿ ಎಂಬ ಮಾತು ಅಜಿತಪುರಾಣಕ್ಕಿಂತ ಹೆಚ್ಚಾಗಿ ಈ ಕಾವ್ಯಕ್ಕೆ ಸಲ್ಲುತ್ತದೆ. (ಪುಟ ೩೦).

ಹೂವಾಡಿಗಿತ್ತಿಯಲ್ಲಿ ಕವನಗಳನ್ನು ಮಕ್ಕಳಿಗಾಗಿ ಸೊಗಸಾಗಿ ಬರೆದ ಎಂ.ವಿ.ಸೀ. ಅವರ ಈ ಗ್ರಂಥವನ್ನು ಮಕ್ಕಳಿಗಾಗಿ ಬರೆದಿಲ್ಲ ಎನಿಸುತ್ತದೆ. ಆದರೆ ಮಕ್ಕಳ ಸಾಹಿತ್ಯ ವಿಭಾಗದಲ್ಲಿ ಇದು ಪರಿಗಣಿತವಾಗಿದೆ.

ವೈಣಿಕ ವಿದ್ವಾನ್ ಎಲ್. ರಾಜಾರಾವ್

ಈ ಗ್ರಂಥ ಐಬಿಎಚ್‌ನ ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯಲ್ಲಿ (ಪ್ರ. ೫೧೯) ಪ್ರಕಟವಾಗಿದೆ ೧೯೮೩ರಲ್ಲಿ ೫೨ ಪುಟಗಳ ಈ ಗ್ರಂಥದಲ್ಲಿ ವೀಣೆ ರಾಜಾರಾಯರ ವಿದ್ವತ್, ವ್ಯಕ್ತಿತ್ವ, ಜೀವನದ ಸುಂದರ ನಿರೂಪಣೆಯಿದೆ. ರಾಜಾರಾಯರ ಆತ್ಮೀಯತೆ ಲೇಖಕರಿಗೆ ಎಷ್ಟಿದೆ ಎಂದರೆ ಅವರ ಬಗ್ಗೆ ಬರೆಯುತ್ತ ತಮ್ಮ ಕಥೆಗೆ ಇಳಿದುಬಿಡುತ್ತಾರೆ. ತೃತೀಯ ಪುರುಷ ನಿರೂಪಣೆಯಿಂದ ಪ್ರಥಮ ಪುರುಷ ನಿರೂಪಣೆಗೆ ಇಳಿದುಬಿಡುತ್ತಾರೆ. ಉದಾಹರಣೆಗೆ ಈ ಮಾತನ್ನು ನೋಡಬಹುದು (ಪುಟ ೫) "ನಮ್ಮ ರಾಜ ಬೆಳೆದಿದ್ದು ಇಂಥಾ ಸಂಗೀತ ವಾತಾವರಣದಲ್ಲಿ ಈ ಪುಸ್ತಕದ ಲೇಖಕನೂ ಆ ಗೋಷ್ಠಿಗಳ ಸ್ವರೂಪವನ್ನೂ ಬಲ್ಲವನಾದ್ದರಿಂದ......." ವೈಯಕ್ತಿಕ ಟೀಕೆಗಳನ್ನು ಅನಗತ್ಯವಾಗಿ ಸೇರಿಸಿದ್ದಾರೆ ಆತ್ಮೀಯತೆ ಕಾರಣದಿಂದ. ಉದಾಹರಣೆಗೆ (ಪುಟ ೫೨)...... ಅವರಿಗೆ ೩ನೇ ಮದುವೆ ೪೦ನೇ ವಯಸ್ಸಿನಲ್ಲಿ ಆಯಿತು. ೧೫ ವರ್ಷಗಳಲ್ಲಿ ೧೦ ಮಕ್ಕಳ ತಂದೆ ಆದರು; ಎಲ್ಲ ಭಾಗ್ಯಗಳ ಜತೆಗೆ ಸಂತಾನ ಭಾಗ್ಯ ಸ್ವಲ್ಪ ಮಿತಿಮೀರಿಯೇ ದೊರೆಯಿತು ಎನ್ನಬೇಕು....." ವಿಷಯ ನಿರೂಪಣೆ ಹೇಗೇ ಇರಲಿ. ಭಾಷಾ ಶೈಲಿ ಕಣ್ಣಿಗೆಕಟ್ಟುವಂತಿದೆ. ರಾಜಾರಾಯರ ತಂದೆ ಲಕ್ಷ್ಮಿನಾರಣಪ್ಪನವರು ಮೈಸೂರಿನ ಬಂಡಿಕೇರಿಯಲ್ಲಿದ್ದಾಗ ಆ ಮನೆಯ ಪರಿಸರದ ವರ್ಣನೆಯನ್ನು ಎಂವಿ.ಸೀ. ಮಾಡಿರುವುದು ಹೀಗೆ (ಪು. ೫–೬) "ಸುತ್ತ ಮುತ್ತ ಗೊಲ್ಲರ ಹಟ್ಟಿಗಳು ; ಯಾವ ಗಲ್ಲಿ ಹೊಕ್ಕರೂ ಅಲ್ಲಿ ಓಡಾಡುವ ಜನಕ್ಕಿಂತ, ಓಡಾಡುವ, ಮಲಗಿ ಮೆಲಕುಹಾಕುವ ಹಸುಕರುಗಳು ಅಡ್ಡನಿಂತ ಮಹಿಷಪುರಿಯ ಮಹಿಷಗಳು : ಅರ್ಧ ಮೇದ ಜೋಳದ ಕಡ್ಡಿಯ ನೆಲ್ಲು ಹುಲ್ಲಿನ ಕಸಕಡ್ಡಿಯ ಹರವು ಗೋಮಯ, ಗಂಜಳಗಳ ಪರಿಮಳ; ಕೆಸರಿನಲ್ಲಿ ಕಮಲ ಹುಟ್ಟುವಂತೆ ಕಲಾಕುಸುಮ ಅರಳುವುದು ಇಂಥಲ್ಲಿಯೇ ಎಂದು ಕಾಣುತ್ತದೆ.

ಈ ಭಾಗ ಮೈಸೂರಿನಲ್ಲಿ ಬಂಡಿಕೇರಿ ಎಂಬ ಪ್ರಸಿದ್ಧವಾಗಿತ್ತು". ಹೀಗೆ ಪರಿಸರವನ್ನು ವಿವರಿಸಿ ಇಲ್ಲಿ ೨೫-೩-೧೯೦೯ ರಲ್ಲಿ ಭೈರವಿ ಲಕ್ಷ್ಮಿನಾರಾಣಪ್ಪನವರ ೩ನೇ ಮಗನಾಗಿ ರಾಜಾರಾಯರು ಜನಿಸಿದರು ಎನ್ನುತ್ತಾರೆ, ಲೇಖಕರು. ವೀಣೆ ರಾಜಾರಾಯರ ಬಗ್ಗೆ ಬಂದ ಮೊದಲ ಜೀವನ ಚರಿತ್ರೆ ಇದಾದ್ದರಿಂದ ಇದಕ್ಕೆ ಸಂಗೀತ ಪ್ರಪಂಚದಲ್ಲಿ ವಿಶೇಷ ಮಹತ್ವವಿದೆ.

ಪ್ರತಿಮಾಗೃಹ (ವ್ಯಕ್ತಿ ಚಿತ್ರಗಳು)

ವ್ಯಕ್ತಿತ್ವದ ವಿಶಿಷ್ಟ ಮುಖಗಳನ್ನು ಎತ್ತಿ ತೋರಿಸುವುದು ವ್ಯಕ್ತಿ ಚಿತ್ರಗಳ ವೈಶಿಷ್ಟ್ಯ. ಕನ್ನಡದಲ್ಲಿ ವ್ಯಕ್ತಿಚಿತ್ರಗಳ ಸರಮಾಲೆಯನ್ನು ಮೊದಲಿಗೆ ಬರೆದವರಲ್ಲಿ ಅನಕೃ ಭಾರದ್ವಾಜ್, ಸಿದ್ಧವನಹಳ್ಳಿ ಕೃಷ್ಣಶರ್ಮ, ಎಚ್ಚೆಸ್ಕೆ ಮುಖ್ಯರು. ಅಲ್ಲಿಂದ ಈಚೆ ಅನೇಕರು ವ್ಯಕ್ತಿಚಿತ್ರಗಳನ್ನು ಬರೆದಿದ್ದಾರೆ ; ಬರೆಯುತ್ತಿದ್ದಾರೆ. ಸುಮಾರು ೩೦ಕ್ಕೂ ಹೆಚ್ಚಿನ ವ್ಯಕ್ತಿಚಿತ್ರಗಳ ಸಂಗ್ರಹದ ಪುಸ್ತಕಗಳು ಕನ್ನಡದಲ್ಲಿ ಬಂದಿವೆ. ಎಂ.ವಿ.ಸೀ. ಅವರು ಮೊದಲಿಗೆ ವ್ಯಕ್ತಿಚಿತ್ರಗಳನ್ನು ಬರೆದವರಲ್ಲಿ ಒಬ್ಬರು. 'ಪ್ರತಿಮಾಗೃಹ' ಗ್ರಂಥದಲ್ಲಿ ಕನ್ನಡದ ಪ್ರಸಿದ್ಧ ವಿದ್ವಾಂಸರ ಕವಿಗಳ ಪ್ರತಿಭಾ ಮುಖದ ಪರಿಚಯವಿದೆ. ಈ ವ್ಯಕ್ತಿಚಿತ್ರಗಳ ಗ್ರಂಥದಲ್ಲಿ ವ್ಯಕ್ತಿಗಳ ಹೆಸರನ್ನು ಕೆಲವೆಡೆ ಸೂಚಿಸಿದ್ದಾರೆ ಮತ್ತೆ ಕೆಲವೆಡೆ ವಿಶೇಷಣಗಳಿಂದ ಶೀರ್ಷಿಕೆ ಕೊಟ್ಟಿದ್ದಾರೆ. ತಕ್ಷಣ ಓದುಗನಿಗೆ ಲೇಖನ ಓದಿದ ಹೊರತು ಯಾರು ಎಂದು ತಿಳಿಯುವುದಿಲ್ಲ. ಉದಾಹರಣೆಗೆ ಈ ಶೀರ್ಷಿಕೆಗಳನ್ನು ಗಮನಿಸಿ :

೧.ನುಡಿನಾಡಿಯ ಗೊಮ್ಮಟ (ಎಂ. ಗೋವಿಂದ ಪೈ)
೨.ವಿದ್ಯಾರ್ಥಿಯಾಗಿ ನಾನು ಕಂಡಂತೆ (ಬಿ.ಎಂ.ಶ್ರೀ)
೩.ಗುರುವಿನ ಒಂದು ಭಾವಚಿತ್ರ (ಟಿ.ಎಸ್. ವೆಂಕಣ್ಣಯ್ಯ)
೪.ಗುರುಸ್ಥಾನೀಯರು (ಮಾಸ್ತಿ)
೫.ಕಲಾ ತಪಸ್ವಿ (ಕೆ. ವೆಂಕಟಪ್ಪ)
೬.ಸ್ನೇಹ-ಸಾಹಿತ್ಯ ಪರಿಚಯ (ಜಿ.ಪಿ. ರಾಜರತ್ನಂ)

ಉಳಿದ ವ್ಯಕ್ತಿಚಿತ್ರಗಳ ಶೀರ್ಷಿಕೆಗಳಲ್ಲಿ ವ್ಯಕ್ತಿಗಳ ಹೆಸರನ್ನು ಹೇಳಿದ್ದಾರೆ :

೧.ಪೂಜ್ಯ ಎ.ಆರ್.ಕೃ ಅವರನ್ನು ಕುರಿತು ನಾಲ್ಕು ನೆನಪಿನ ಮಾತು.
೨.ನನ್ನನ್ನು ಕಂಡರಿಸಿದ ರೂವಾರಿ ಡಿ.ವಿ.ಜಿ.
೩.ನಾನು ಕಂಡ ತೀ.ನಂ.ಶ್ರೀ
೪.ಕಾಂಚಾಣ ಕವಿ ಬೇಂದ್ರೆ
೫.ವಿ.ಸೀ. ನಾನು ತಿಳಿದ ಹಾಗೆ.

ಈ ಲೇಖನಗಳಲ್ಲಿ ಕಂಡುಬರುವ ಲೇಖಕರ ಅನುಭವ ವಿಶಿಷ್ಟವಾಗಿದೆ.

ಇಲ್ಲಿ ಬಂದ ಲೇಖನಗಳೆಲ್ಲ ಈಗಾಗಲೇ ಪತ್ರಿಕೆಗಳಲ್ಲಿ ವಿವಿಧ ಸಂಭಾವನೆ ಗ್ರಂಥಗಳಲ್ಲಿ ಬಂದಿವೆ. ಅವುಗಳಲ್ಲಿ ಆಯ್ದು ಲೇಖನಗಳ ಸಂಗ್ರಹ ಈ ಗ್ರಂಥವಾಗಿದೆ. ಎಂ.ವಿ.ಸೀ. ಅವರ ನಿಧನದ ನಂತರ ಪ್ರಕಟವಾಗಿದೆ. ಈ ರೀತಿ ಸಂಗ್ರಹವನ್ನು ತರಲು ಅವರೇ ನಿರ್ಧರಿಸಿ 'ಗುರುಹಿರಿಯರು ಗೆಳೆಯರು'

ಎಂದು ಹೆಸರಿಟ್ಟಿದ್ದರು. ಆಮೇಲೆ 'ಪ್ರತಿಮಾಗೃಹ' ಎಂದು ಅವರು ಬದಲಿಸಿದದರು. ಪ್ರತಿ ವ್ಯಕ್ತಿಚಿತ್ರ ಕುರಿತು ಒಂದು ಕವನವನ್ನೂ ಆ ವ್ಯಕ್ತಿಯ ಭಾವಚಿತ್ರವನ್ನೂ ಸೇರಿಸಬೇಕೆಂದೂ ಪ್ರಯತ್ನಿಸುತ್ತಿದ್ದರು. ನಿಜಕ್ಕೂ ಇದು ವಿನೂತನ ಚಿಂತನೆ ಆಗಿತ್ತು. ಈ ಸಂಗ್ರಹದಲ್ಲಿ ದಿವಂಗತರಾದವರ ಬಗೆಗಿನ ವ್ಯಕ್ತಿಚಿತ್ರಗಳನ್ನು ಮಾತ್ರ ಕೊಡಲು ಉದ್ದೇಶಿಸಿದ್ದರಿಂದ ಪ್ರತಿಮಾಗೃಹವೆಂಬ (ಭಾಸನ ಪ್ರತಿಮಾ ನಾಟಕದ ಸ್ಫೂರ್ತಿ) ಅರ್ಥಪೂರ್ಣ ಹೆಸರನ್ನು ಇಟ್ಟಿದ್ದರು. ಈ ಕೃತಿಯಲ್ಲಿ ಹತ್ತು ಜನರು ಸಾಹಿತ್ಯ-ಕಲಾಕ್ಷೇತ್ರಗಳಲ್ಲಿ ದಿಗ್ಗಜರೆನ್ನಿಸಿಕೊಂಡಿದ್ದಾರೆ. ಈ ವ್ಯಕ್ತಿಚಿತ್ರಗಳ ವ್ಯಕ್ತಿಗಳಲ್ಲಿ ಕೆಲವರನ್ನು ಹತ್ತಾರುಬಾರಿ ಕಂಡಿದ್ದಾರೆ. ಅವರ ಬಳಿಯಲ್ಲಿ ಕೆಲಸ ಮಾಡಿ ಅವರಿಂದ ಬಾಳಿಗೆ ಬೆಳಕನ್ನು ಪಡೆದಿದ್ದಾರೆ. ಮತ್ತೆ ಕೆಲವರನ್ನು ಒಂದೆರಡು ಬಾರಿ ಅಷ್ಟೆ ಕಂಡಿದ್ದಾರೆ ಎರಡುಸಲವಷ್ಟೆ ಗೋವಿಂದ ಪೈ ಅವರನ್ನು ಎಂ.ವಿ.ಸೀ. ಕಂಡಿದ್ದಾರೆ. ಮೊದಲಸಲ ಪರಿಷತ್ತಿನಲ್ಲಿ ಎಂ.ವಿ.ಸೀ. ಸಹಾಯಕ ಕಾರ್ಯದರ್ಶಿ ಆದಾಗ (೧೯೪೧). ಆಗ ಅವರ ರೇಖಾಚಿತ್ರ ಪಡೆದು ಅವರಿಂದಲೇ ಸಹಿಪಡೆದಿದ್ದರು. ಎರಡನೇಬಾರಿ ೧೯೫೧ರಲ್ಲಿ ಮಾಸ್ತಿ ಅವರ ಮನೆಯಲ್ಲಿ ಕಂಡಿದ್ದರು. ಆ ಸಮಯದಲ್ಲಿ ಎಂ.ವಿ.ಸೀ. ಅವರ ಮನೆಗೂ ಬಂದಿದ್ದರು. ಹಲವಾರು ಬಾರಿ ಪತ್ರವ್ಯವಹಾರ ಮಾಡಿದ್ದರು. ಮಾತು ಚಿತ್ರ ಎರಡೂ ಮಾಧ್ಯಮಗಳಲ್ಲೂ ಭಾವನಿರೂಪಣೆಯನ್ನೂ ವ್ಯಕ್ತಿತ್ವ ನಿರೂಪಣೆ ಮಾಡಲು ಎಂ.ವಿ.ಸೀ. ಎಷ್ಟು ಸಮರ್ಥರಾಗಿದ್ದರು ಎಂಬುದನ್ನು ಈ ಲೇಖನ ತಿಳಿಸುತ್ತದೆ. ಗೋವಿಂದ ಪೈ ಅವರನ್ನು ಕುರಿತು ಅವರು ನೀಡುವ ಶಬ್ದಚಿತ್ರ ಇದು.

"ಗೋವಿಂದ ಪೈ ಅವರನ್ನು ನೆನೆದಾಗಲೆಲ್ಲ ನನ್ನ ಮುಂದೆ ಬರುವುದು ಅವರ ಭವ್ಯ ವ್ಯಕ್ತಿತ್ವ ಅವರ ಸ್ಥೂಲ ಶರೀರ. ಸ್ಥೂಲತೆಗೆ ತಕ್ಕ ಎತ್ತರ ; ಎತ್ತರಕ್ಕೆ ತಕ್ಕ ದುಂಡು ಮುಖ, ಮುಖದ ಮಾಟಕ್ಕೆ ತಕ್ಕ ತುಂಬುಗೆನ್ನೆ ; ಅಗಲ ಹಣೆ, ಹಣೆಯ ಅಂಚಿನಲ್ಲಿ ತೂಗುವ ತುರುಗಲು ಹುಬ್ಬು; ಮುಂದಕ್ಕೆ ಚಾಚಿದ ಗೆಡ್ಡೆಮೂಗು; ಮೇಲ್ತುಟಿಯನ್ನು ಮುಚ್ಚಲು ಎಳಸಾದ ಉಬ್ಬಿ ಬಾಗಿದ ಮೀಸೆ ; ಉಪ್ಪು ಮೆಣಸು ಬೆರೆಸಿದ ಬಣ್ಣದ್ದು ; ಕ್ರಾಪು ಕತ್ತರಿಸಿದ ನರೆತ ಕೂದಲಿನ ದಪ್ಪ ತಲೆಯ ಮೇಲೆ ಸಣ್ಣದಾಗಿ ಕಾಣುವ ಬಿಳಿಯ ಖಾದಿ ಟೊಪ್ಪಿಗೆ, ಗುಜ್ಜುಗೊರಲೂ ; ಉಬ್ಬಿದೆದೆ, ತೊಟ್ಟಿದ್ದು ಉಟ್ಟಿದ್ದು ಒರಟು ಖಾದಿ ಬಟ್ಟೆಯ ಬನೀನು, ಜುಬ್ಬ ಅಥವಾ ಮೋಟು ಷರಟು (ಪುಟ ೧ ಪ್ರತಿಮಾಗೃಹ).

ಕಣ್ಣೆದುರಿಗೆ ಒಬ್ಬ ವ್ಯಕ್ತಿಯನ್ನು ಸಚಿತ್ರವಾಗಿ ವರ್ಣಿಸುವ ಹಾಗೆಯೇ ಒಬ್ಬ ವ್ಯಕ್ತಿಯ ಕಾರ್ಯ ವೈಖರಿಯನ್ನು ಬಣ್ಣಿಸಬಲ್ಲರು "ಎಷ್ಟೇ ಸಣ್ಣ ಕೆಲಸವಾಗಲಿ ಅದನ್ನು ಹೊತ್ತಿಗೆ ಗೊತ್ತಿಗೆ ಮಾಡಬೇಕು. ಅವರದ್ದು ಮರೆವಿನ ಸ್ವಭಾವ ಅಲ್ಲ ; ಆದರೂ ಸ್ಮರಣಶಕ್ತಿಯ ಮೇಲೆ ಎಲ್ಲ ಭಾರವನ್ನೂ ಹಾಕಕೂಡದು ಎಂದು ಅವರ ಅನುಭವಸಿದ್ಧವಾದ ಅಭಿಪ್ರಾಯ. ಆದರೆ ಕಾರ್ಯಕ್ರಮವನ್ನು ನೆನಪು ಮಾಡಿಕೊಡುವ ಆಲೇಖ್ಯಪಟ್ಟಿ ಅವರ ಮೇಜಿನ ಮೇಲೆ ಇರುತ್ತಿರಲಿಲ್ಲ ; ಅವರ ಜೇಬಿನಲ್ಲಿ ಸದಾ ಒಂದು ಬಿಳಿಯ ಕಾರ್ಡು ಅದರ ಮೇಲೆ ಮಾಡಬೇಕಾದ ಕೆಲಸಗಳನ್ನು

ಬರೆದಿಟ್ಟುಕೊಂಡಿರುತ್ತಿದ್ದರು. ಪ್ರತಿ ಕಾರ್ಯಸೂಚಿಯನ್ನೂ ಒಂದು ಚೌಕಳಿ ಹಾಕಿ ಅದರಲ್ಲಿ ಗುರುತಿಸುತ್ತಿದ್ದರು. ಕೆಲಸ ಮಾಡಿಯಾದಮೇಲೆ ಚೌಕಳಿಯನ್ನು ಕ್ರಾಸ್ ಮಾಡುತ್ತಿದ್ದರು. ಈ 'ಕೆಲಸ ಮಾಡಿಯಾಯಿತು' ಎಂದು ಎರಡೂ ಕಡೆಯೂ ಕಾರ್ಡು ಭರ್ತಿಯಾದಮೇಲೆ ಕ್ರಾಸ್ ಮಾಡದೆ ಉಳಿದಿದ್ದ ಕಾರ್ಯ ಸೂಚಿಗಳನ್ನು ಹೊಸಕಾರ್ಡಿಗೆ ವರ್ಗಾಯಿಸಿಕೊಂಡು ಅದನ್ನು ಬಳಿಯಲ್ಲಿ ಇಟ್ಟುಕೊಳ್ಳುತ್ತಿದ್ದರು." (ಪುಟ ೩೯) ನಿಕಟವರ್ತಿಗಳಿಗಾರಿಗೂ ತಿಳಿಯದ ಸಂಗತಿಯನ್ನು ಎಂ.ವಿ.ಸೀ. ಇಲ್ಲಿ ಹೇಳಿದ್ದಾರೆ.

ಈ ವ್ಯಕ್ತಿಚಿತ್ರಗಳ ವಿಶೇಷವೆಂದರೆ ಈ ವ್ಯಕ್ತಿಗಳ ಬಗ್ಗೆ ಕೆಲವು ವಿಶಿಷ್ಟ ವ್ಯಕ್ತಿತ್ವದ ಸಂಗತಿಗಳನ್ನು (ಮತ್ತೆಲ್ಲೂ ಸಿಗದ ಸಂಗತಿಗಳನ್ನು) ತಿಳಿಸುತ್ತಾರೆ. ಈ ಕೆಳಕಂಡ ನಿದರ್ಶನಗಳನ್ನು ಗಮನಿಸದರೆ ತಿಳಿಯುತ್ತದೆ. ನಮ್ಮಲ್ಲಿ ಅನೇಕರು ಬರೆದ ವ್ಯಕ್ತಿಚಿತ್ರಗಳಲ್ಲಿ ಸಾಮಾನ್ಯ ಸಂಗತಿಗಳೇ ಇದ್ದು ಈ ರೀತಿಯ ಅಪರೂಪದ ವಿವರಗಳು ಸಿಗುವುದಿಲ್ಲ. ಗೋವಿಂದ ಪೈ ಅವರ ಬಗ್ಗೆ ಬರೆಯುತ್ತಾ ಹೇಳುತ್ತಾರೆ. "೧೯೪೧ ಏಪ್ರಿಲ್ ೧೨ ರಂದು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ವಸಂತ ಸಾಹಿತ್ಯೋತ್ಸವದಲ್ಲಿ ಪಾಲ್ಗೊಂಡು ಒಂದು ಉಪನ್ಯಾಸ ನೀಡಲು ಬೆಂಗಳೂರಿಗೆ ಬಂದಿದ್ದರು. ಅವರು ಉಪನ್ಯಾಸ ಮಾಡುವ ಮುನ್ನಾದಿನ "ಪರಿಷತ್ತಿನ ಸಭಾಂಗಣದ ಮಧ್ಯಭಾಗದಲ್ಲಿ ಪೂರ್ವಾಭಿಮುಖವಾಗಿ ಸಜ್ಜುಗೊಳಿಸಿದ್ದ ವೇದಿಕೆಯ ಮೇಲೆ ನಿಂತು ಉಪನ್ಯಾಸ ಮಾಡುತ್ತಿದ್ದವರ ಎದುರಿನಲ್ಲಿ ಗೋವಿಂದ ಪೈ ಜಮಖಾನದ ಮೇಲೆ ಸಾಮಾನ್ಯ ಶ್ರೋತೃಗಳಿಗೆ ಕುರ್ಚಿಗಳನ್ನು ಒದಗಿಸಿರಲಿಲ್ಲ" (ಪು. ೧) ಈ ಜಮಖಾನದ ಪರಿಸ್ಥಿತಿ ಎಂ.ಆರ್.ಶ್ರೀ ಕಾಲದಲ್ಲೂ ಇತ್ತು. ಇನ್ನೊಂದು ಪ್ರಸಂಗ ಹೀಗಿದೆ :

ಬಿ.ಎಂ.ಶ್ರೀ ಬಗ್ಗೆ ಬರೆಯುತ್ತಾ ಹೇಳುತ್ತಾರೆ. ೧೯೩೮ರ ಮಾರ್ಚಿ ತಿಂಗಳಿನಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಪಾಠಮಾಡಿದರು. ಸೆಂಟ್ರಲ್ ಕಾಲೇಜಿನಲ್ಲಿ ಮಹಡಿ ಮೇಲಿನ ಉತ್ತರ ದಿಕ್ಕಿನ ಕಡೆಯ ಮೂಲೆ ಕೋಣೆಯಲ್ಲಿ ಪಾಠ ನಡೆಯಿತು. ಏಳು ದಿನಗಳ ಕಾಲ ಪ್ರತಿದಿನ ೧೧ ಗಂಟೆಯಿಂದ ೫ ಗಂಟೆಯವರೆಗೂ ಅವಿಶ್ರಾಂತ ೬ ಗಂಟೆಗಳ ನಿರಂತರ ಉಪನ್ಯಾಸ" ಆ ಉಪನ್ಯಾಸಗಳನ್ನು ಕೇಳಿದ ಎಂ.ವಿ.ಸೀ. ಈ ಸಂಗತಿ ಬಗ್ಗೆ ಹೇಳುವ ಮಾತು. "ಕನ್ನಡ ಕಾವ್ಯ ಕಾವೇರಿಯ ಪ್ರವಾಹ, ರಸಸಮಾರಾಧನ ಸಪ್ತಾಹ... ಜಗತ್ತಿನಲ್ಲಿ ಎಲ್ಲಿಯೇ ಆಗಲಿ ಈ ರೀತಿ ಏಳು ದಿನ ಅಖಂಡ ಪಾಠ ಪ್ರವಚನವನ್ನು ಮಾಡಿದ ದಾಖಲೆ ಇದೆಯೋ ಇಲ್ಲವೋ ನಾ ಕಾಣೆ ! ಷೇಕ್ಸ್‌ಪಿಯರಿನ ನಾಟಕವನ್ನು ಸೆಂಟ್ರಲ್ ಕಾಲೇಜಿನಲ್ಲಿ ಒಂದೇ ದಿನ ೮ ಗಂಟೆಗಳ ಕಾಲ ಮಾಡಿದರೆಂದು ಅವರ ವಿದ್ಯಾರ್ಥಿನಿ ಜಯಲಕ್ಷ್ಮಿ ಎಂಬುವರು ನನಗೆ ಹೇಳಿದ್ದಾರೆ.

'ಪ್ರತಿಮಾಗೃಹ' ಓದುತ್ತಿದ್ದರೆ. ಜೀವಂತ ವ್ಯಕಿಗಳ ಪ್ರದರ್ಶನ ಶಾಲೆಯಾಗಿ ಕಾಣುತ್ತದೆ. ವರ್ಣನೆ. ಪ್ರಸಂಗಗಳ ನಿರೂಪಣಾ ವೈಖರಿ ನಮ್ಮನ್ನು ಬೆರಗು ಗೊಳಿಸುತ್ತವೆ. ಅನೇಕ ಕಡೆಗಳಲ್ಲಿ ಲೇಖಕರು ಸ್ವಾನುಭವವನ್ನು ನಿರೂಪಿಸುವಲ್ಲಿಯೂ

ಅವರ ಬದುಕಿನ ವೈಯಕ್ತಿಕ ಸಂಗತಿಗಳೂ ಕುತೂಹಲಕಾರಿಯಾಗಿ ನಿರೂಪಿತವಾಗಿವೆ. ನಮ್ಮಲ್ಲಿ ಅನೇಕ ಜನ ಬರೆದ ವ್ಯಕ್ತಿಚಿತ್ರಗಳಲ್ಲಿ ಲೇಖಕರ ಬದುಕಿನ ಅನುಭವಗಳು ಹೀಗೆ ನಿಕಟವಾಗಿ ನಿರೂಪಿತವಾಗಿರುವುದು ಕಂಡುಬರುವುದಿಲ್ಲ. ತೀ.ನಂ.ಶ್ರೀ.ಗೂ, ಎಂ.ವಿಸೀ. ಅವರಿಗೂ ಎಂಥ ನಿಕಟಬಾಂಧವ್ಯ ಇತ್ತು ಎಂದರೆ ನಿಜಕ್ಕೂ ನಮ್ಮ ಜೀವನದಲ್ಲಿ ಅಂಥ ವ್ಯಕ್ತಿ ಸಿಗಬಾರದೆ ಎನ್ನಿಸುತ್ತದೆ. ನಾ ಕಂಡ ತೀ.ನಂ.ಶ್ರೀ. ಬರಹದಲ್ಲಿ ಎಂ.ವಿಸೀ. ಹೇಳುತ್ತಾರೆ.

"ತೀ.ನಂ.ಶ್ರೀ. ಅವರನ್ನು, ಭೇಟಿ ಆದಾಗ ೧೯೨೭ರಲ್ಲಿ ನಾನು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ. ೧೬ ವರ್ಷ ನನಗೆ. ತೀ.ನಂ.ಶ್ರೀ. ಗೆ ೨೦ ವರ್ಷ ಎಂ.ಎ. ವಿದ್ಯಾರ್ಥಿ. ಇಡೀ ಬಾಳಿನ ಉದ್ದಕ್ಕೂ ಸುಪ್ರೀಂಕೋರ್ಟು ಆಗಿದ್ದರು ನನಗೆ" ಎನ್ನುತ್ತಾರೆ ಎಂ.ವಿ.ಸೀ. ಅವರ ಗುರು-ಶಿಷ್ಯ ಸಂಬಂಧ ಕೇವಲ ಪಾಠ ಪ್ರವಚನಗಳಿಗೂ ಸೀಮಿತ ಆಗಿರಲಿಲ್ಲ. ಬಾಳಿಗೆ ಅವಿಭಾಜ್ಯ ಸಂಬಂಧ ಆಗಿತ್ತು. ಎಂ.ವಿ.ಸೀ. ಅವರ ಬಾಳಿನ ಪ್ರತಿ ಸಮಸ್ಯೆಯನ್ನು ತೀನಂಶ್ರೀ ಅವರಲ್ಲಿ ನಿವೇದನೆ ಮಾಡಿಕೊಳ್ಳುತ್ತಿದ್ದರು. ಅವರ ಅಪ್ಪಣೆಯಂತೆ ನಡೆದುಕೊಳ್ಳುತ್ತ "ನಾನು ಬರೆದ ಚಿತ್ರಕ್ಕೆ ಏನು ಹೆಸರಿಡಬೇಕು?-ನಾನು ಬರೆದ ಪದ್ಯ, ಕಥೆ ಪ್ರಬಂಧ ಹೇಗಿದೆ? - ನನ್ನ ತಂದೆ ನನಗೊಂದು ಹೆಣ್ಣನ್ನು ನೋಡಿ ಒಪ್ಪಿಗೆ ಕೊಟ್ಟಿದ್ದಾರೆ. ನಾನು ಒಪ್ಪಿಕೊಳ್ಳಲೇ? ಬಿ.ಎ. ಪರೀಕ್ಷೆಗೆ ಐಚ್ಛಿಕ ವಿಷಯ ಯಾವುದನ್ನು ಆರಿಸಿಕೊಳ್ಳಲಿ? ಎಂ.ಎ. ಪಾಸಾಯಿತು, ಏನು ಮಾಡಲಿ ? ನನ್ನ ತಂದೆ ಸಾಲವನ್ನು ನನ್ನ ಪಾಲಿನದು ಮಾತ್ರ ತೀರಿಸಲೇ ? ಅಷ್ಟನ್ನೂ ತೀರಿಸಲೇ?" ಈ ಎಲ್ಲ ಸಮಸ್ಯೆಗಳಿಗೂ ತೀನಂಶ್ರೀ ಫೈನಲ್ ಆಗಿತ್ತು. ಇದರಿಂದ ತೀನಂಶ್ರೀ ಅವರ ವ್ಯಕ್ತಿತ್ವ ಏನೆಂದು ತಿಳಿಯುತ್ತದೆ. ತೀನಂಶ್ರೀ ಇವರಿಗಷ್ಟೇ ಅಲ್ಲ ಎಷ್ಟೋ ಜನ ವಿದ್ಯಾರ್ಥಿಗಳ ಪಾಲಿಗೂ ಬಾಳಿನಗುರು ಆಗಿದ್ದರು. ನನಗೆ ನೆನಪಿರುವ ಹಾಗೆ, ತೀನಂಶ್ರೀ ಅವರು ಕನ್ನಡ ನಿಘಂಟಿನ ಸಂಪಾದಕರಾಗಿದ್ದಾಗ ಸಾಹಿತ್ಯ ಪರಿಷತ್ತಿಗೆ ನಿಘಂಟು ಸಭೆಗಳಿಗೆ ಬಂದಾಗ, ಸಂಜೆ ಸಭೆ ಮುಗಿಯುವ ವೇಳೆಗೆ ಅವರ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅವರನ್ನು ಮನೆಗೆ ಕರೆದುಕೊಂಡು ಹೋಗಲು-ಗಂಡು ಮಕ್ಕಳು ಕುಟುಂಬದವರಲ್ಲಿ ಹೇಳಿಕೊಳ್ಳಲಾರದ ಸಂಕಟಗಳನ್ನು ತೀ.ನಂ.ಶ್ರೀ. ಅವರಲ್ಲಿ ತೋಡಿಕೊಂಡು ಪರಿಹಾರ ಸಮಾಧಾನ ಹೊಂದುತ್ತಿದ್ದರು. ಒಮ್ಮೆ ಅಂಥ ವಿದ್ಯಾರ್ಥಿನಿಯ ಮಗ-ನನ್ನ ಮಿತ್ರ ಹೇಳಿದ ಮಾತಿದು. ತೀನಂಶ್ರೀ ನಮ್ಮಮ್ಮನಿಗೆ ಕಾಲೇಜು ಮೇಷ್ಟ್ರು ಅಷ್ಟೇ. ಅಲ್ಲ ಬಾಳಿನ ಸಂಜೀವಿನೀ ಮೇಷ್ಟ್ರು. "ಅವರು ಬಂದು ಮಾತಾಡಿ ಹೋದರೆ ನಮ್ಮಮ್ಮ ನಿಶ್ಚಿಂತೆ ಆಗುತ್ತಾರೆ. ನೆಮ್ಮದಿ ತಾಳಿ ಸಂತೋಷದಿಂದ ಇರುತ್ತಾರೆ" ಎಂ.ವಿ.ಸೀ. ಅವರು ಎಂಥ ವಾಸ್ತವದ ಚಿತ್ರಣ ಕೊಟ್ಟಿದ್ದಾರೆ ಎಂಬುದಕ್ಕಾಗಿ ಈ ಮಾತನ್ನು ಹೇಳುತ್ತಿರುವೆ. ಹೀಗೆ ಡಿ.ವಿ.ಜಿ. ವೆಂಕಟಣ್ಣಯ್ಯ ವೆಂಕಟಾದ್ರಿ, ಎ.ಆರ್.ಕೃ. ಬಗ್ಗೆ ಬರೆದ ವ್ಯಕ್ತಿಚಿತ್ರಗಳಲ್ಲಿ ಅವರ ಜೀವನಚರಿತ್ರೆಯ ಮೆಟ್ಟಿಲುಗಳನ್ನು ಕಾಣುತ್ತೇವೆ.

ಒಬ್ಬ ವ್ಯಕ್ತಿಯ ಜೀವನದ ಏಕನಿಷ್ಠೆಯನ್ನು ಎಂ.ವಿ.ಸೀ. ಅವರು ಈ ವ್ಯಕ್ತಿ ಚಿತ್ರಗಳಲ್ಲಿ ಗುರುತಿಸುತ್ತಾರೆ. ಇದು ವ್ಯಕ್ತಿಚಿತ್ರಗಳ ವಿಶೇಷಗಳಲ್ಲಿ ಒಂದು. ವಿ.ಸೀ.

ಬಗ್ಗೆ ಬರೆಯುತ್ತಾ ಹೇಳುತ್ತಾರೆ. ಅವರ ರುಮಾಲು ಮುಚ್ಚು ಕೊರಳಪಟ್ಟಿಯ, ಕೆನೆ ಬಣ್ಣದ ಅಂಗಿ, ತೆಳ್ಳಗೆ ನಿರಿನಿರಿಯಾಗಿ ಚೆಲ್ಲಾಡುವ ಬಿಳಿಯದೋತ್ರ, ಒಂದೇ ಮಾದರಿಯ ಚಪ್ಪಲಿಗಳು ಎಂದು ಅವರ ಉಡುಪನ್ನು ವರ್ಣಿಸುತ್ತಾ ಹೇಳುವ ಮಾತಿದು. "೩೦ರ ಹರೆಯಲ್ಲಿ ಪೋಷಾಕಿನ ಮಾದರಿಯಲ್ಲಿ ತಾವು ತೋರಿದ ನಿಷ್ಠೆಯನ್ನು ೪೦ ವರ್ಷಗಳ ಕಾಲ ಏಕಪ್ರಕಾರವಾಗಿ ಕಾಯ್ದುಕೊಂಡು ಬರಲು ಅದು ಯಾವ ಬಟ್ಟೆಯ ಅಂಗಡಿಯ ದರ್ಜಿಯನ್ನು ಗುತ್ತಿಗೆ ಹಿಡಿದಿದ್ದರೊ ಕಾಣೆ" ಎನ್ನುತಾರೆ.

ಅವರು ಉಡುಪಿನ ವಿಷಯದಲ್ಲಷ್ಟೇ ಅಲ್ಲ. ಉಳಿದ ವಿಷಯಗಳಲ್ಲೂ ಅಷ್ಟೆ. ನಾನು ಕಂಡಂತೆ, ಜೀವಿತ ಪೂರ್ತಿ, ಕಾಫಿಪೌಡರನ್ನು ಮನೆಗೆ ವಿಶ್ವೇಶ್ವರಪುರದ ಸಜ್ಜನರಾವ್ ದೇವಸ್ಥಾನದ ಬಳಿಯ ಫ್ಲೇವರ್ ಕಾಫಿ ಸೆಂಟರ್‌ನಿಂದ ತರುತ್ತಿದ್ದರು. ಅವರ ಕ್ಷೌರಕ್ಕೆ ಕ್ಷೌರಿಕ ಮನೆಗೆ ಬರುತ್ತಿದ್ದ. ಸುಮಾರು ೪೦ ವರುಷಗಳ ಕಾಲ ಒಬ್ಬನೇ ಕ್ಷೌರಿಕ. ಹೀಗೆ ಓದಲು ಪ್ರಾರಂಭಿಸಿದರೆ ಕೆಳಗಿಡಲಾಗದ ಪುಸ್ತಕ. ಎಂ.ವಿ.ಸೀ. ಅವರ ಬದುಕಿನ ಪ್ರಭಾವಗಳನ್ನು ಕುರಿತ ಸ್ವಾರಸ್ಯಕರ ಗ್ರಂಥ ಪ್ರತಿಮಾಗೃಹ, ವ್ಯಕ್ತಿಚಿತ್ರಗಳ ಅಪೂರ್ವಗ್ರಂಥ.

ಕೊನೆಯದಾಗಿ, ಕನ್ನಡ ಜೀವನ ಚರಿತ್ರೆ ಗ್ರಂಥದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇದು ಜೀವನ ಚರಿತ್ರೆ ಗ್ರಂಥವಲ್ಲ. ಕನ್ನಡ ಜೀವನ ಚರಿತ್ರೆಗಳ ಇತಿಹಾಸದ ಗ್ರಂಥ. ವಿಮರ್ಶೆಯ ಗ್ರಂಥ. ಒಂದು ವರುಷದ ಕಾಲ ಕನ್ನಡದಲ್ಲಿ ಬಂದಿದ್ದ (ಅವರಿಗೆ ದೊರೆತಷ್ಟು) ಜೀವನ ಚರಿತ್ರೆಗಳನ್ನು ಅಧ್ಯಯನ ಮಾಡಿ ಬರೆದ ಗ್ರಂಥ ಇದು. ಕನ್ನಡದಲ್ಲಿ ಈ ಬಗೆಯ ಗ್ರಂಥ ಇದೇ ಮೊದಲು. ಈ ಗ್ರಂಥದಲ್ಲಿ ಜೀವನ ಚರಿತ್ರೆಯ ಸ್ವರೂಪ ಕುರಿತು ಹೇಳಿರುವ ಮಾತುಗಳು ಗಮನಾರ್ಹವಾಗಿವೆ. ಎಂ.ವಿ.ಸೀ. ಅವರು ಜೀವನ ಚರಿತ್ರೆ ಸಾಹಿತ್ಯವನ್ನು ೪ ಭಾಗಗಳಾಗಿ ವರ್ಗೀಕರಿಸುತ್ತಾರೆ.

ಜೀವನ ವಿವರ : ಜನನ, ಮರಣ ದಿನಾಂಕ, ವಿದ್ಯಾಭ್ಯಾಸ, ವೃತ್ತಿ ರಚಿಸಿದ ಕೃತಿಗಳ ವಿವರಗಳನ್ನೊಳಗೊಂಡದ್ದು ಜೀವನ ವಿವರ ಬರಹ. ವೆಂಕಟೇಶ ಸಾಂಗ್ಲಿ ಅವರ ಸಿರಿಗನ್ನಡ ಗ್ರಂಥಕರ್ತರ ಕೋಶ ಇದಕ್ಕೆ ನಿದರ್ಶನ.

ಜೀವನ ವೃತ್ತಾಂತ : ಕವಿಯ ಕಾಲ, ಜೀವನ, ಕೃತಿಗಳ ಪರಿಚಯ ನೀಡುವ ಜೀವನ ವೃತ್ತಾಂತವು, ಜೀವನ ವಿವರಕ್ಕಿಂತ ಹೆಚ್ಚಿನ ಮೈತುಂಬಿಕೊಂಡಿದ್ದು ಲೇಖಕನ ವೈಯಕ್ತಿಕ ದೃಷ್ಟಿಯನ್ನು ಸ್ವಲ್ಪಮಟ್ಟಿಗೆ ಪ್ರತಿಬಿಂಬಿಸುತ್ತದೆ.

ಕನ್ನಡ ವಿಶ್ವಕೋಶದ ಲೇಖನಗಳು ಆರ್. ನರಸಿಂಹಾಚಾರ್ಯರ ಕವಿಚರಿತೆಯ ಬರಹಗಳೂ ಇದಕ್ಕೆ ನಿದರ್ಶನವಾಗಿವೆ.

ಜೀವನ ಚರಿತ್ರೆ : ಪ್ರಸಂಗಮಣಿಮಾಲೆಯ ನಡುವೆ ಲೇಖಕನ ಬಂಧು ಬಂಧುರ ವ್ಯಾಖ್ಯಾನವಾಹಿನಿ ಸೂತ್ರಪ್ರಾಯವಾಗಿ ಹರಿದಾಗ ಜೀವನ ಚರಿತ್ರೆ ಮೈದಾಳುತ್ತದೆ. ಉದಾ : ಕೆ. ವಾಸುದೇವಾಚಾರ್ಯರು.

ವ್ಯಕ್ತಿಚಿತ್ರ : ಜೀವನ ವೃತ್ತಾಂತಕ್ಕೂ ಪೂರ್ಣಪ್ರಮಾಣದ ಜೀವನ ಚಿತ್ರಕ್ಕೂ

18

ಮಧ್ಯಸ್ಥ ರಚನೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ದೀಪ-ಮಾಲೆ, ಎಚ್ಚೆಸ್ಕೆ ಅವರ ಬದುಕು ಬೆಳಕು ಉದಾಹರಣೆಗಳು.

ಆತ್ಮಕಥೆ : ಕೃತಿನಾಯಕನೇ ಲೇಖಕ. ಸಾಕ್ಷಿಸ್ಥಾನದಲ್ಲಿ ಲೇಖಕ ನಿಂತು ತಮ್ಮ ಒಳ ಹೊರಗು ಎಲ್ಲವನ್ನೂ ಇದ್ದಂತೆ ತೋರುವ ಜೀವನ ಕಥೆ. ಸತ್ಯವ್ರತರ ಸ್ಥಿತಪ್ರಜ್ಞರ ಆತ್ಮದರ್ಶನವಿದು. ಗಾಂಧಿ, ವಿಶ್ವೇಶ್ವರಯ್ಯರ ಆತ್ಮಕಥೆ. ಸಂಖ್ಯಾದೃಷ್ಟಿಯಿಂದ ಹೇಳಬಹುದಾದರೆ ಸ್ವಾತಂತ್ರ್ಯಪೂರ್ವದಲ್ಲಿ ಸು. ೫೦೦ ಜೀವನಚರಿತ್ರೆಗಳು ೫೦ ವರ್ಷಗಳ ಅವಧಿಯಲ್ಲಿ ಪ್ರಕಟವಾಗಿವೆ. ೧೯೪೭ ರಿಂದ ೧೯೭೨ರ ವರೆಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸು. ೬೧೨ ಜೀವನ ಬರಹ ಪುಸ್ತಕಗಳು ಪ್ರಕಟವಾಗಿವೆ. (ಎಂ.ವಿ.ಸೀ. ಅವರ ಪ್ರಕಾರ) ೧೯೭೨ ರಿಂದ ಈಚೆಗೆ ಸುಮಾರು ೪೦ ವರ್ಷಗಳಲ್ಲಿ ೪೦೦ ಜೀವನ ಚರಿತ್ರೆಗಳು ಪ್ರಕಟವಾಗಿರಬಹುದೆಂದು ನನ್ನ ಅಂದಾಜು. ಒಟ್ಟಿನಲ್ಲಿ ಎಂದರೆ ೨೦ನೇ ಶತಮಾನದ ಅಂತ್ಯದವರೆಗೆ (೨೦೦೦ ವರೆಗೆ) ೧೬೦೦ ರಿಂದ ೨೦೦ ಜೀವನ ಚರಿತ್ರೆಗಳು ಕನ್ನಡದಲ್ಲಿ ಪ್ರಕಟವಾಗಿವೆ ಎಂದು ಊಹಿಸಬಹುದು ಈ ಬಗ್ಗೆ ಸಮಗ್ರ ಜೀವನ ಚರಿತ್ರೆ ಸೂಚಿ ಸಿದ್ಧಪಡಿಸಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯಗಳು ಇಂಥ ಯೋಜನೆಗಳನ್ನು ಕೈಗೊಳ್ಳಬೇಕು. ಸಂಶೋಧಕರಿಗೆ ಆಗ ಉಪಯುಕ್ತ ಸಾಮಗ್ರಿಸಿಗುತ್ತದೆ.

ಜೀವನ ಚರಿತ್ರೆಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಕಟಿಸಿದ ಲೇಖಕರಲ್ಲಿ ಸುಬೋಧ ಎಂ. ರಾಮರಾಯರು ಅಗ್ರಗಣ್ಯರು. ಕನ್ನಡ ಜೀವನ ಚರಿತ್ರಕಾರರಲ್ಲಿ ಇತಿಹಾಸ ನಿರ್ಮಿಸಿದವರು. ಎಲ್ಲ ಬಗೆಯ ಜೀವನ ಚರಿತ್ರೆಗಳನ್ನು ೨೦೦ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅಪಾರ ಮಾಹಿತಿ, ಸುಲಭದ ಭಾಷೆ, ಅಗ್ಗದ ಬೆಲೆ. ವಿಶಾಲದೃಷ್ಟಿಯ ಬರಹ ಅವರ ಜೀವನ ಚರಿತ್ರೆಗಳ ವೈಶಿಷ್ಟ್ಯ ಅವರ ದಾರಿಯಲ್ಲೇ ನಡೆದು ನೂರಾರು ಗ್ರಂಥಗಳನ್ನು ಪ್ರಕಟಿಸಿದ ಪ್ರಕಾಶಕರು ಇನ್ನಿಬ್ಬರು ಎಂದರೆ ಐ.ಬಿ.ಎಚ್. ಪ್ರಕಾಶನ ಮತ್ತು ರಾಷ್ಟ್ರೋತ್ಥಾನ ಪ್ರಕಾಶನ. ಇನ್ನು ಖಾಸಗಿ ಪ್ರಕಾಶಕರು, ಲೇಖಕರು ಶಕ್ತ್ಯಾನುಸಾರ ಜೀವನಚರಿತ್ರೆಗಳನ್ನು ಪ್ರಕಟಿಸಿದ್ದಾರೆ.

ಈ ಎಲ್ಲ ಜೀವನ ಚರಿತ್ರೆಗಳನ್ನು ಎಂ.ವಿ.ಸೀ. ಅವರು ಧಾರ್ಮಿಕ ಮಹಾಪುರುಷರು (ಇವರನ್ನು ಕುರಿತು ಕೃತಿಗಳೇ ಕನ್ನಡದಲ್ಲಿ ಜಾಸ್ತಿ) ಸಮಾಜ ಸುಧಾರಕರು, ರಾಷ್ಟ್ರಪುರುಷರು, ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರ ಆತ್ಮಚರಿತ್ರೆಗಳು-ವ್ಯಕ್ತಿಚಿತ್ರಗಳು-ಸಂಭಾವನಾ ಗ್ರಂಥಗಳೂ ಎಂದು ವರ್ಗೀಕರಿಸಿ ಕನ್ನಡ ಜೀವನ ಚರಿತ್ರೆಗಳು ಗ್ರಂಥದಲ್ಲಿ ವಿಮರ್ಶಿಸಿದ್ದಾರೆ.

ಎಂ.ವಿ.ಸೀ. ಅವರು ತಮ್ಮ ವಿಮರ್ಶಾ ಗ್ರಂಥದಲ್ಲಿ ತಾವು ಓದಿ ಪರಿಶೀಲಿಸಿದ ಗ್ರಂಥಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಕೆಲವೆಡೆ ಕೃತಿಗಳ ಪರಿಚಯವನ್ನಷ್ಟೇ ಮಾಡಿದ್ದಾರೆ. ಕೆಲವೆಡೆ ಉಲ್ಲೇಖ ಮಾತ್ರ ಮಾಡಿದ್ದಾರೆ. ಕೆಲವೆಡೆ ವಿಮರ್ಶೆಮಾಡಿ ಮೌಲ್ಯಮಾಪನ ಮಾಡಿದ್ದಾರೆ. ಈ ಬಗ್ಗೆ ಅವರು ಹೇಳಿದ ಮಾತು ಗಮನಾರ್ಹವಾಗಿದೆ. (ಪು. ೨೧೬) "ಈ ಎರಡೂವರೆ ದಶಕಗಳಲ್ಲಿ (೧೯೪೭

ರಿಂದ ೧೯೭೨ರ ವರೆಗೆ) ಪ್ರಕಟವಾದ ೬೧೨ ಜೀವನ ಚರಿತ್ರೆಗಳ ಒಟ್ಟು ಬೆಳೆಯ ಬೇರೆ ಬೇರೆ ತೆನೆಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಇಂದಿಗೂ ಜೊಳ್ಳಿನ ಕಾಳಿನ ಭಾಗವೇ ಹೆಚ್ಚು, ರಾಶೀಯೇನೋ ದೊಡ್ಡದಾಗಿಯೇ ಕಂಡಿದೆ. ಒಂದೆರಡುಮೂರನ್ನು ತೂರಿ ಕೇರಿ ನೋಡಿದ್ದರ ಫಲಿತಾಂಶವನ್ನು ಮಾತ್ರ ಇಲ್ಲಿ ತಿಳಿಸಿದೆ" ಎಂದಿದ್ದಾರೆ. ಎಂ.ವಿ.ಸೀ. ಅವರು ತಾವೇ ಓದಿದ ಗ್ರಂಥಗಳ ಬಗ್ಗೆ ವಿಸ್ತಾರವಾಗಿ ಬರೆದಿದ್ದಾರೆ. ವಿಶ್ವೇಶ್ವರಯ್ಯನವರನ್ನು ಕುರಿತು ಡಿ.ವಿ.ಜಿ., ತಿ. ತಾ. ಶರ್ಮ, ಮಾಸ್ತಿ ವಿಶ್ವೇಶ್ವರಯ್ಯನವರೇ ಬರೆದ, ನನ್ನ ಕಾರ್ಯನಿರತ ಜೀವನದ ನೆನಪುಗಳು, ಈ ನಾಲ್ಕು ಗ್ರಂಥಗಳ ಸಮೀಕ್ಷೆಯನ್ನು ನೋಡಬಹುದು. ವಿ.ಎಸ್. ನಾರಾಯಣರಾಯರ ಸರ್ ಎಂ.ವಿ. ಅವರನ್ನು ಕುರಿತ ಬೃಹದ್ಗ್ರಂಥ ಆ ಕಾಲಕ್ಕೆ ಪ್ರಕಟವಾಗಿರಲಿಲ್ಲ. ಕನ್ನಡದಲ್ಲಿ ವಿಶ್ವೇಶ್ವರಯ್ಯ ಸಾಹಿತ್ಯವೆಂದೇ ಎಂ.ಫಿಲ್ ಪ್ರಬಂಧವನ್ನು ಯಾರಾದರೂ ಸಿದ್ಧಪಡಿಸಬಹುದು. ಎಂ.ವಿ.ಸೀ ಅವರು ತಾವು ಓದಲು ಸಿಗದ ಗ್ರಂಥಗಳ ಬಗ್ಗೆ ಪತ್ರಿಕೆಗಳ ವಿಮರ್ಶೆಯನ್ನು ಅವಲಂಬಿಸಿದ್ದಾರೆ. ಅಂತಹವುಗಳ ಬಗ್ಗೆ ಆಕರಗಳನ್ನು ಸೂಚಿಸಿ ಪ್ರಾಮಾಣಿಕತೆಯನ್ನು ಮೆರೆದಿದ್ದಾರೆ. ಒಂದು ಉದಾಹರಣೆ :

ಆಲ್ಬರ್ಟ್ ಐನ್‌ಸ್ಟೈನ್‌ರನ್ನು ಕುರಿತ ಶ್ರೀ ರಂಗರಾಜು ಅವರ ಗ್ರಂಥ ಸ್ವತಃ ಓದಿ ಆ ಬಗ್ಗೆ ಬರೆದ ಮೇಲೆ ತಮಗೆ ಸಿಗದ ಐನ್‌ಸ್ಟೈನ್‌ರ ಕುರಿತು. ಸಂ.ವಾ. ಕೃಷ್ಣಮೂರ್ತಿ. ಅವರ ೨೫೦ ಪುಟಗಳ ಗ್ರಂಥವನ್ನು ಕುರಿತು ಹೀಗೆ ಹೇಳಿದ್ದಾರೆ :

"ಈ ಗ್ರಂಥ ಈಚೆಗೆ ಬಂದಿದೆ. ಶ್ರೀಮತಿ ಆಂಟೋನಿನ ವಾರೆಂಟಿ ಅವರು ಫ್ರೆಂಚಿನಲ್ಲಿ ಬರೆದ ದಿ. ಟ್ರಾಮ ಆಫ್ ಆಲ್ಬರ್ಟ್ ಐನ್‌ಸ್ಟೈನ್ ಗ್ರಂಥ ೧೯೫೪ರಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಯಿತು. ಅದರ ಕನ್ನಡ ಭಾಷಾಂತರ ಈ ಪುಸ್ತಕ. ಮೂಲಗ್ರಂಥದ ಹೆಸರು ಗ್ರಂಥನಾಯಕನ ಬಗೆಗೆ ಕುತೂಹಲ ಕೆರಳಿಸುವಂತಿದೆ. (ಪ್ರತಿ ದೊರಕದ ಕಾರಣ ಗ್ರಂಥಗಳನ್ನು ಪರಿಶೀಲಿಸುವುದು ಸಾಧ್ಯವಾಗಿಲ್ಲ) ಒಟ್ಟಿನಲ್ಲಿ ಅನುವಾದ ಓದಿಸಿಕೊಂಡು ಹೋಗುತ್ತದೆ. ವಿದ್ಯಾರ್ಥಿಗಳಿಗೂ ಐನ್‌ಸ್ಟೈನ್‌ರ ವಿಚಾರದಲ್ಲಿ ಆಸಕ್ತಿಯುಳ್ಳವರಿಗೂ ಖಂಡಿತವಾಗಿ ಉಪಯುಕ್ತವಾದ ಗ್ರಂಥ ಇದು" ಎಂದು ವಿಮರ್ಶಕರೊಬ್ಬರ (ಕಟಕಿ) ಮಾತನ್ನು ಎತ್ತಿ ಹೇಳಿ ತೃಪ್ತಿಪಡೆಯಬೇಕಾಗಿದೆ. ಭಾಷಾಂತರ ಕನ್ನಡ ವಿಮರ್ಶಕರಿಗೆ ಒಪ್ಪಿತವಾಗಿಲ್ಲ. (ಆಧಾರ : ಕನ್ನಡ ಪ್ರಭ ೧೦-೭-೧೯೭೨). ವಿಷಯದ ಸಮಗ್ರತೆಗಾಗಿ ಪರೋಕ್ಷ ಆಧಾರಗಳನ್ನು ಅವಲಂಭಿಸಿದಾಗ ಅವುಗಳ ಆಕರಗಳನ್ನು ಪೂರ್ಣ ವಿವರಗಳನ್ನು ನೀಡಿರುವುದನ್ನು ಮೇಲಿನ ಉಲ್ಲೇಖಗಳಲ್ಲಿ ಕಾಣಬಹುದು. ಎಂ.ವಿ.ಸೀ ಅವರ ಬರಹದ ಪ್ರಾಮಾಣಿಕತೆಗೆ ನಿದರ್ಶನವಾಗಿದೆ.

ಹೀಗೆ ಸಾಧಾರವಾಗಿ ಬರೆದ ಪಾಂಡಿತ್ಯಪೂರ್ಣ ಸಾಹಿತ್ಯ ಚರಿತ್ರೆ ಗ್ರಂಥವೆನಿಸಿದ 'ಕನ್ನಡ ಜೀವನ ಚರಿತ್ರೆ' ಶಾಸ್ತ್ರ ಗ್ರಂಥಗಳು ಗ್ರಂಥದಂತೆ. ಎಂ.ವಿ.ಸೀ. ಅವರ ಬಹುಶ್ರುತ ಪಾಂಡಿತ್ಯಕ್ಕೆ ಆಳವಾದ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಕನ್ನಡ ಜೀವನ ಚರಿತ್ರೆಗಳನ್ನು ಕುರಿತ ಪ್ರಮಾಣ ಗ್ರಂಥವಾಗಿದೆ.

ಹೀಗೆ ಎಂ.ವಿ.ಸೀ. ಅವರು ಕನ್ನಡ ಜೀವನ ಚರಿತ್ರೆಯ ವಿಮರ್ಶಕರಲ್ಲಿ

ಪ್ರಮುಖರಾಗಿ ಬರಹಗಾರರಲ್ಲಿ ಒಬ್ಬರಾಗಿ ಕನ್ನಡಕ್ಕೆ ಶ್ರೇಷ್ಠ ಕೊಡುಗೆ ಕೊಟ್ಟ ಜೀವನ ಚರಿತ್ರಕಾರರಲ್ಲಿ ಒಬ್ಬರಾಗಿದ್ದಾರೆ.

ವ್ಯಕ್ತಿ ಚಿತ್ರದ ಇನ್ನೊಂದು ರೂಪ ವ್ಯಕ್ತಿ ಕಥೆಗಳು – ಜೀವನ ನಾಟಕ ಕೃತಿ

ಎಂ.ವಿ.ಸೀ. ಅವರು ೧೯೬೧ ರಲ್ಲಿ ಜೀವನ ನಾಟಕವೆಂಬ ವ್ಯಕ್ತಿ ಕಥಾ ಸಂಕಲನ ಹೊರತಂದಿದ್ದಾರೆ. ಇದು ಕಥಾರೂಪ ಹೊಂದಿದ ವ್ಯಕ್ತಿ ಚಿತ್ರಗಳಾಗಿವೆ. ಸಣ್ಣ ಕಥೆಗಳ ಅಥವಾ ಪ್ರಬಂಧದ ಲಕ್ಷಣ ಕಂಡು ಬಂದರೂ ಆ ಗುಂಪಿಗೆ ಸೇರುವುದಿಲ್ಲ. ಏಕೆಂದರೆ ಇಲ್ಲಿಯ ಕೇಂದ್ರಬಿಂದು ಎಂ.ವಿ.ಸೀ. ಅವರ ಬಾಳಿನಲ್ಲಿ ಕಂಡ ವ್ಯಕ್ತಿಗಳ ಚಿತ್ರಣವಿಲ್ಲಿದೆ. "ಕೆಲವು ವ್ಯಕ್ತಿಗಳ ಕಥೆಗಳನ್ನು ಹೇಳುವುದರ ಜೊತೆಗೆ ಅಥವಾ ಅದಕ್ಕಿಂತ ಹೆಚ್ಚಾಗಿ ಈಗ್ಗೆ ಕಾಲುಶತಮಾನಕ್ಕೂ ಹಿಂದಿನ (ಸ್ವಾತಂತ್ರ್ಯಪೂರ್ವದ) ಕಣ್ಮರೆಯಾಗುತ್ತಿರುವ ತಲೆಮಾರಿನ ಜೀವನಚಿತ್ರವನ್ನು ನಾನು ಬಲ್ಲಮಟ್ಟಿಗೆ ರೇಖಿಸಬೇಕೆಂಬುದು ಈ ವ್ಯಕ್ತಿ ಕಥಾ ಮಾಲಿಕಾಬಂಧದ ಮುಖ್ಯ ಉದ್ದೇಶ" ಎಂದಿದ್ದಾರೆ. ಪ್ರತಿ ಕಥೆಗೂ ನಾನು ಬಲ್ಲ ಜೀವಂತರಾಗಿದ್ದ ಒಬ್ಬರು ಸ್ಫೂರ್ತಿ ನೀಡಿದ್ದರೂ ಆ ಮೂಲವ್ಯಕ್ತಿಗೂ ಕಥೆಯ ವ್ಯಕ್ತಿಗೂ ಅಜಗಜಾಂತರ ಎಂದಿದ್ದಾರೆ. ನಿಜವಾದ ವ್ಯಕ್ತಿಗಳು ಮರುಹುಟ್ಟು ಪಡೆದಿದ್ದಾರೆ. ಇದರರ್ಥ ವೈಯಕ್ತಿಕ ವಿವರಗಳೂ ನೇರವಾಗಿ ವ್ಯಕ್ತಿಚಿತ್ರ–ಜೀವನಚರಿತ್ರೆಗಳಲ್ಲಿ ಬರುವ ಹಾಗೆ ವಾಚ್ಯವಾಗಿ ಬಂದಿಲ್ಲ ಅಷ್ಟೆ. ಪರಿಚಯವಿದ್ದವರು ಈ ಬರಹಗಳನ್ನು ಓದಿದರೆ ಖಂಡಿತ ಆ ವ್ಯಕ್ತಿಗಳನ್ನು ಇಲ್ಲಿನ ವಿವರಣೆಗಳಿಂದ ಗುರುತಿಸಬಹುದು. ಆದಕಾರಣವೇ ಇದನ್ನು ಲೇಖಕರೇ ವ್ಯಕ್ತಿ ಕಥೆಗಳು ಎಂದು ಕರೆದಿದ್ದಾರೆ. ಇದಕ್ಕೆ ಸಮರ್ಥನೆ ಎಂಬಂತೆ ಎ.ಆರ್.ಕೃ. ಅವರು ಹರಕೆಯ ಈ ಮಾತು ಹೇಳಿದ್ದಾರೆ : "ನಾನೂ ಹಳೆಯ ಅಗ್ರಹಾರದಲ್ಲಿ ಅವರ ಪರಿಚಯ ಚನ್ನಾಗಿರುವುದರಿಂದ ನೀನು ಚಿತ್ರಿಸಿರುವ ಚಿತ್ರಗಳೆಲ್ಲಾ ಮನಸ್ಸಿಗೆ ಖಚಿತವಾಗಿದೆ. ಬೆನ್ನುಡಿ ಬರೆದ ಸಿ.ಕೆ. ವೆಂಕಟರಾಮಯ್ಯನವರು ಹೇಳಿರುವ ಮಾತು ಗಮನಾರ್ಹವಾಗಿದೆ. "ಹಿಂದಿನ ಮೈಸೂರಿನ ಹಳೆಯ ಅಗ್ರಹಾರದ ಜನಜೀವನ ಚಿತ್ರ ಯಥಾವತ್ತಾಗಿ ನಮ್ಮ ಮನೋನೇತ್ರದ ಮುಂದೆ ನಿಲ್ಲುವಂತೆ ಮಾಡುತ್ತದೆ. ಇದರರ್ಥ ಒಳರೂಪ ಒಳಸತ್ವ ವ್ಯಕ್ತಿಚಿತ್ರ ಹೊರರೂಪದಲ್ಲಿ ವ್ಯವಸ್ಥೆ ಆಗಿದೆ.

ಗುಮಾಸ್ತೆ ಗುಂಡಪ್ಪ, ನಾಟಕದ ಸುಬ್ಬಣ್ಣ, ಅರಮನೆ ರಾಮರಾಯರು, ಆನೆಕಾಲು ರಾಮರಾಯರು, ಒಂಟೆ ಸಂಜೀವ, ಜಗಲಿ ಜೋಯಿಸರು ಪುರುಷ ಚಿತ್ರಣಗಳಾದರೆ ಭಿಕ್ಷಾನ್ನದ ಭಾಗೀರಥಮ್ಮ, ಹಾಲಿನ ಹನುಮಕ್ಕ, ಕೊಟ್ಟಣದ ನೀಲಮ್ಮ, ಕಡಲೆಪುರಿಯ ಕೆಂಪಮ್ಮ, ವೀಳ್ಯದೆಲೆಯ ಮಂಚಮ್ಮ ಸ್ತ್ರೀ ಚಿತ್ರಣಗಳಾಗಿವೆ. ಇವರನ್ನು ಲೇಖಕರು "ನನ್ನ ಬಾಲ್ಯ ಯೌವನಗಳನ್ನು ರಸಮಯಗೊಳಿಸಿದ ನಮ್ಮ ಬೀದಿಯ ನೆರೆಹೊರೆಯವರು" ಎಂದು ಹೇಳಿ ಅವರಿಗೆ ಈ ಕೃತಿಯನ್ನು ಅರ್ಪಿಸಿದ್ದಾರೆ. ಈ ಕತೆಗಳಲ್ಲಿ ಬರುವ ಮಾನವೀಯ ಚಿತ್ರಣ, ಹೃದಯಂಗಮ ವರ್ಣನೆ ಓದುಗರ ಮನಸ್ಸನ್ನು ಸೆರೆಹಿಡಿದು ನಿಲ್ಲಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಗುಂಡಪ್ಪನ ಕಥೆಯನ್ನೇ ನೋಡಬಹುದು. ಗುಂಡಪ್ಪನ ವೇಷಭೂಷಣ ವರ್ಣನೆ

ತುಣುಕು ಇದು (ಪು ೧೪) "ಗುಂಡಪ್ಪನ ರುಮಾಲು ಅನೇಕ ಕೆಲಸಗಳಿಗೆ ಬರುತ್ತಿದ್ದವು. ಬೆಳಿಗ್ಗೆ ಹೊದೆಯುವ ಉತ್ತರೀಯ ಹಾಗೇ ಪೇಟೆಗೆ ಹೋದರೆ ತರಕಾರಿ ಮುಂತಾದ ಸಣ್ಣ ಪುಟ್ಟ ಸಾಮಾನು ತರುವುದಕ್ಕೆ ಚೌಕ, ಕಚೇರಿಗೆ ರುಮಾಲು, ನಮ್ಮ ಮನೆಯ ಹಸು ಎಲ್ಲಾದರೂ ತೊಂಡುಬಿದ್ದು ಹೊರಟುಹೋಗಿದ್ದರೆ ಅದನ್ನು ಕರೆತರುವುದಕ್ಕೆ ಹಗ್ಗ. ರಾತ್ರಿ ಮಲಗುವಾಗ ಹೊದೆಯುವ ಹಚ್ಚಡ; ಇಷ್ಟೆಲ್ಲಾ ಕೆಲಸಕ್ಕೆ ಬಂದರೂ ನಮ್ಮ ತಂದೆ ಇನ್ನೊಂದು ಹಳೆ ರುಮಾಲನ್ನು ದಾನಮಾಡುವವರೆಗೆ ಗಟ್ಟಿಯಾಗಿಯೇ ಇರುತ್ತಿತ್ತು."

ಸಾವಿತ್ರಮ್ಮ ಯಜಮಾನರಿಗೆ "ನಿಮಗಾದರೆ ಪಂಚೆ ಒಗೆದುಕೊಡುತ್ತಾನೆ. ನನಗೂ ಸೀರೆ ಒಗೆದುಕೊಡುವುದಕ್ಕೆ ಯಾರಾದರೂ ಇದ್ದರೆ ಹೊತ್ತಿಗೆ ಸರಿಯಾಗಿ ಅಡಿಗೆ ಮಾಡಬಹುದಾಗಿತ್ತು" ಎಂದು ಒಮ್ಮೆ ರೇಗಿದಾಗ ಮಾರನೇ ದಿನ ಗುಂಡಪ್ಪ ಅವರ ಸೀರೆಯನ್ನೂ ಒಗೆದು ಕಲ್ಲಮೇಲೆ ಸಿಂಬೆ ಸುತ್ತಿ ಇಟ್ಟಿದ್ದ. ಅದನ್ನು ಕಂಡು ತಾಯಿ ಸಾವಿತ್ರಮ್ಮ ಬೆರಗಾದರು, ಮರುಗಿದರು, ಕೊರಗಿದರು. "ಇದೇನು ಗುಂಡಪ್ಪ ನಾನು ಕೋಪದಲ್ಲಿ ನಿನ್ನೆ ಏನೋ ಎರಡು ಮಾತಾಡಿದರೆ ಹೀಗೆ ಮಾಡುವುದೇ?" ಎಂದು ಕಂಬನಿಯಿಟ್ಟರು. ಆಗ ಗುಂಡಪ್ಪ ಹೇಳಿದರು. "ನಿಮ್ಮ ವೆಂಕಟರಮಣಯ್ಯ ನನಗಿಂತ ಮೂರು ತಿಂಗಳು ದೊಡ್ಡವನು. ನೀನು ನನ್ನ ಅತ್ತಿಗೆ ಸಮಾನ ಅತ್ತಿಗೆ ಆದವಳು ತಾಯಿಯ ಸಮಾನ. ತಾಯಿಯ ಸೀರೆ ಒಗೆದರೆ ಮಗನಿಗೆ ಪುಣ್ಯವೇ ಹೊರತು, ಪಾಪವಿಲ್ಲ. ಅವಮಾನವಂತೂ ಮೊದಲೇ ಇಲ್ಲ" ಎಂದರು ಗುಂಡಪ್ಪ. ಹೀಗೆ ಮಾನವೀಯ ಚಿತ್ರಣಗಳಿಂದ ತುಂಬಿದ ವ್ಯಕ್ತಿಕಥೆಗಳ ಸಂಪುಟ ಜೀವನ ನಾಟಕ ಕೃತಿ.

ನನ್ನ ಸಾಹಿತ್ಯ ಜೀವನಸ್ಮೃತಿಗಳು

ಕಂಡವರ ಕಥೆ ಬರೆದರೆ ಜೀವನ ಚರಿತ್ರೆ, ತಮ್ಮ ಕಥೆಯನ್ನು ತಾವೇ ಬರೆದಕೊಂಡರೆ ಆತ್ಮಕಥೆ. ಕಂಡವರ ಜೀವನದ ಒಂದು ಮುಖವನ್ನು ಸಾಂಕೇತಿಕವಾಗಿ ಅರ್ಥಗರ್ಭಿತವಾಗಿ ಚಿತ್ರಿಸಿದರೆ ಸಣ್ಣಕಥೆ. ವಾಚ್ಯವಾಗಿ ಚಿತ್ರಿಸಿದರೆ ವ್ಯಕ್ತಿಚಿತ್ರ, ವ್ಯಕ್ತಿಯ ಗುಣ ಪ್ರಸಂಗವನ್ನು ಮನಸ್ಸಿನಲ್ಲಿಟ್ಟುಕೊಂಡು ಬೇರೆ ರೂಪದ ಗದ್ಯಲ್ಲಿ ಬರೆದರೆ ಪ್ರಬಂಧ. ಸಂಭಾಷಣೆ ರೂಪದಲ್ಲಿ ಬರೆದರೆ ನಾಟಕ. ಇಡೀ ಜೀವನವನ್ನೇ ಕಥಾ ರೂಪದಲ್ಲಿ ಬರೆದರೆ ಕಾದಂಬರಿ. ಒಟ್ಟಿನಲ್ಲಿ ಮನುಷ್ಯನ ಬಾಳಿನ ವಿವಿಧ ಮುಖಗಳ ಚಿತ್ರಣ ಸಾಹಿತ್ಯ ಎಂಬ ಮಾತು ಅರ್ಥವತ್ತಾದುದು. ನಾಟಕ, ಕಾವ್ಯ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ ಬರೆಯಲು ವಿಶಿಷ್ಟ ಬರಹ ಸಿದ್ಧಿಸಬೇಕು. ಆತ್ಮಕಥೆ ಬರೆಯಲು ಪ್ರಾಮಾಣಿಕತೆ ಇರಬೇಕು. ಲೋಕಕ್ಕೆ ನೀತಿಹೇಳಿ ಮಾದರಿ ಆಗುವ ನಡೆ ನುಡಿ ಒಂದಾದ ಜೀವನ ಇರಬೇಕು. ಕನ್ನಡಿಯಲ್ಲಿ ನಮ್ಮನ್ನು ನಾವೇ ನೋಡಿಕೊಂಡಂತೆ ಬರೆದರೆ ಆತ್ಮಕಥೆ. ಕ್ಯಾಮರಾದಲ್ಲಿ ಫೋಟೋ ತೆಗೆದಂತೆ ಚಿತ್ರಕಲಾವಿದ ಚಿತ್ರ ಬರೆದಂತೆ ವರ್ಣರಂಜಿತವಾಗಿ ಚಿತ್ರಿಸಿದರೆ 'ಜೀವನಚರಿತ್ರೆ, ಜೀವನ ಚರಿತ್ರೆಯನ್ನು ಕಂಡವರದನ್ನೆ ಅನೇಕರು ಬರೆದಿದ್ದಾರೆ. ಆತ್ಮಕಥೆಯನ್ನು ಕೆಲವರೇ ಬರೆದಿದ್ದಾರೆ. ಆ ಪೈಕಿ ಮಾಸ್ತಿ 'ಭಾವ', 'ಭೈರಪ್ಪನವರ' 'ಭಿತ್ತಿ', ನವರತ್ನರಾಯರ

'ಕೆಲವು ನೆನಪುಗಳು', 'ಶಿವರಾಮ ಕಾರಂತರ ಹುಚ್ಚು ಮನಸ್ಸಿನ ಹತ್ತು ಮುಖಗಳು', 'ಸ್ಮೃತಿಪಟಲದಿಂದ', ಜಿ.ಪಿ. ರಾಜರತ್ನಂ ಅವರ 'ಹತ್ತುವರುಷ' ಹೀಗೇ ಆಲೂರು ಶ್ರೀರಂಗ ಮೊದಲಾದವರ ಆತ್ಮಕಥೆಗಳು ಕನ್ನಡದಲ್ಲಿ ಪ್ರಸಿದ್ಧವಾಗಿವೆ. ಗಾತ್ರದಲ್ಲಿ ಗುಣದಲ್ಲಿ ಎಂ.ವಿ.ಸೀ ಅವರ ಆತ್ಮಕಥೆ ಆ ಮಟ್ಟಕ್ಕೆ ಬಾರದಿದ್ದರೂ ಕೆಲವು ಗಮನಾರ್ಹ ಅಂಶಗಳು ಅದರಲ್ಲಿವೆ.

'ನನ್ನ ಸಾಹಿತ್ಯ ಜೀವನಸ್ಮೃತಿಗಳು' ಎಂಬ ದೀರ್ಘ ಲೇಖನ ಎಂ.ವಿ.ಸೀ. ಅವರ ಸಾಹಿತ್ಯ ಕೃತಿಗಳ ರಚನೆಯ ಹಿನ್ನೆಲೆಯನ್ನು ತಿಳಿಸುತ್ತದೆ. ಪ್ರಾಸಂಗಿಕವಾಗಿ ಅವರ ಆತ್ಮಕಥೆ ಸುಳಿಯುತ್ತದೆ. ಮಾಸ್ತಿ ಅವರ ಸಾಹಿತ್ಯ ಪ್ರೇರಣೆಯಿಂದ ಗ್ರಂಥ ಇದು. ಜೀವನಕ್ಕೆ ಪ್ರಾಶಸ್ತ ಕೊಟ್ಟಿದ್ದೀರಿ. ಹುಚ್ಚು ಮನಸ್ಸಿನ ಹತ್ತು ಮುಖಗಳು ಬರೆದ ಕಾರಂತರು ಕೃತಿ ಸಾಧನೆಗಳಿಗೇ ಪ್ರಾಶಸ್ತ್ಯ ನೀಡಿ ಸ್ಮೃತಿಪಟಲದಿಂದ (೩ ಭಾಗಗಳನ್ನು) ಬರೆದರು. ಈ ರೀತಿ ಆತ್ಮಕಥೆಯನ್ನು ಎರಡೂ ಬಗೆಗಳಲ್ಲಿ ಬರೆದವರಿದ್ದಾರೆ. ಎಂ.ವಿ.ಸೀ ಅವರು ಒಂದು ಬಗೆಯ ಆತ್ಮಕಥೆ ಬರೆದ ವರ್ಗಕ್ಕೆ ಸೇರಿದವರು. ಜೀವನಕ್ಕಿಂತ ಸಾಹಿತ್ಯ ಮುಖ್ಯವೆಂದು ತಿಳಿದು ಅದನ್ನು ಪ್ರಸ್ಥಾಪಿಸಿದರು.

ಉದಯಭಾನು ಕಲಾ ಸಂಘದವರು ೧೯೪೩ರಲ್ಲಿ ಪ್ರಕಟಿಸಿದ 'ಆಸ್ವಾದ' ಎಂಬ ಎಂ.ವಿ.ಸೀ. ಅವರ ಅಭಿನಂದನ ಗ್ರಂಥದಲ್ಲಿ ದೀರ್ಘ ಲೇಖನವಾಗಿ (೨೭ ಪುಟಗಳು) ಪ್ರಕಟವಾಗಿದೆ. ಬಾಲ್ಯದಲ್ಲಿ ಶಾಲಾ ವಿದ್ಯಾರ್ಥಿ ಆಗಿದ್ದಾಗ ಮೈಸೂರಿನಲ್ಲಿ ಅವರ ಮೇಲೆ ಸಾಹಿತ್ಯಿಕವಾಗಿ ಪ್ರಭಾವ ಬೀರಿದ ಅಂಶಗಳು, ಚಿತ್ರಕತೆಯಲ್ಲಿ ಆಸಕ್ತಿ ಮೂಡಿದ ಬಗ್ಗೆ, ಕಾದಂಬರಿ ರಚನೆಗೆ ದೊರೆತ ಪ್ರೇರಣೆ, ಕಾವ್ಯಾಸಕ್ತಿ ಮೂಡಿಬಂದ ಬಗೆ. ೧೬ನೇ ವಯಸ್ಸಿಗೆ ಬರಹಗಾರನಾದದ್ದು ತೀ.ನಂ.ಶ್ರೀ ಅವರ ಮಾರ್ಗದರ್ಶನ ಮಹಾರಾಜ ಕಾಲೇಜಿನಲ್ಲಿದ್ದಾಗ ದೊರೆತ ಪ್ರೋತ್ಸಾಹ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಡಿವಿಜಿ ಜತೆ ಸಹ ಕಾರ್ಯದರ್ಶಿ ಆಗಿ ಕೆಲಸ ಮಾಡಿದ ಅನುಭವ, ನಿಘಂಟು ಕಚೇರಿ ಕೆಲಸದ ಪ್ರಭಾವ, ಶಾಸ್ತ್ರ ಸಾಹಿತ್ಯ ಸಂಪುಟ ರಚನೆ ವಿಚಾರ, ಮಾದನಮಗಳು ಕಾದಂಬರಿ ರಚನೆ ವಿಚಾರ, ಇಲ್ಲಿಗೆ ಆತ್ಮಕಥೆ ನಿಂತಿದೆ. ಎಂ.ವಿ.ಸೀ. ಅವರ ಸಾಹಿತ್ಯದ ಪ್ರೇರಣೆಗಳು, ಕೃತಿಗಳ ರಚನೆಗಳ ಹಿನ್ನೆಲೆ ತಿಳಿಯುತ್ತದೆ. ಅಷ್ಟೆ. ಅವರ ಆತ್ಮಕಥೆಯ ಒಂದು ಅಧ್ಯಾಯದಂತಿದೆ. ಅವರ ಸಾಧನೆಗಳ ಜೀವನ ವೃತ್ತಾಂತದ ವಿವರಗಳು ಬೇರೆಡೆ ಲೇಖನ ಗ್ರಂಥಗಳಲ್ಲಿ ಚೆದರಿವೆ. ಎಲ್ಲವನ್ನೂ ಕೂಡಿಸಿ ಸಮಗ್ರ ಜೀವನ ಕೃತಿಯನ್ನು ಯಾರಾದರೂ ಬರೆಯಬೇಕಾಗಿದೆ. ಅವರು ಕಾಲವಾಗಿರುವುದರಿಂದ ಅವರ ಆತ್ಮಕಥೆ ಕನ್ನಡಕ್ಕೆ ಪೂರ್ಣವಾಗಿ ಸಿಗುವಂತಿಲ್ಲ. ಸಿಕ್ಕಿದ್ದಷ್ಟಕ್ಕೆ ತೃಪ್ತಿಪಡಬೇಕಾಗಿದೆ.

ಆತ್ಮಕಥೆ

ಆತ್ಮಕಥೆಯೂ ಜೀವನ ಚರಿತ್ರೆಯೇ

ಜೀವನಚರಿತ್ರೆಯ ಲೇಖಕ ವೀಕ್ಷಕಸಂಸ್ಥಾನದಲ್ಲಿ ನಿಂತು ನಿರ್ಲಿಪ್ತವಾಗಿ ತನ್ನ ನಾಯಕನ ವಾಸ್ತವಚಿತ್ರವನ್ನು ಮಾಡಿಬಿಡಲು ಸಾಧ್ಯ. ದಿನಚರಿ, ಪತ್ರವ್ಯವಹಾರ ಆಪ್ತೇಷ್ವರ ಬರಹಗಳು ಮತ್ತು ಹೇಳಿಕೆಗಳು ಜೀವನಚರಿತ್ರೆಕಾರನ ಲೇಖನ ಕಾರ್ಯದಲ್ಲಿ

ನೆರವಿಗೆ ನಿಲ್ಲುತ್ತದೆ. ಆತ್ಮಚರಿತ್ರೆಯ ನಾಯಕ ಸ್ವಯಂ ಲೇಖಕನಾದ್ದರಿಂದ ಅವನಿಗೆ ಅಂಥ ದಾಖಲೆಗಳ ನೆರವಿನ ಅಗತ್ಯವಿಲ್ಲ. ಅವನು ತನ್ನ ಕಥೆಯನ್ನು, ನೆನಪಿನಿಂದಲೇ ಬರೆಯುತ್ತಾನೆ. ದಿನಚರಿ ಇಟ್ಟಿದ್ದರೆ ನೆನಪನ್ನು ಖಚಿತ ಪಡಿಸಿಕೊಳ್ಳಲು ಅಥವಾ ಅದನ್ನು ಉಪಯೋಗಿಸಿಕೊಳ್ಳಲು ಬಳಸಿಕೊಳ್ಳಬಹುದು. ಆತ್ಮಚರಿತ್ರೆ ಪ್ರಾಮಾಣಿಕ ಹೌದು ಅಲ್ಲ ಎನ್ನಲು ನಮಗೆ ಯಾವ ಆಧಾರವೂ ಇಲ್ಲ. ಆತ್ಮಚರಿತ್ರಕಾರ ಬದುಕಿನಲ್ಲಿಯೂ ಪ್ರಾಮಾಣಿಕ ವ್ಯಕ್ತಿ ಆಗಿದ್ದರೆ ಆತ್ಮಚರಿತ್ರೆಯೂ ಪ್ರಾಮಾಣಿಕವಾಗಿರುತ್ತದೆ. ಆತ್ಮನಿರೀಕ್ಷೆ ಆತ್ಮ ವಿಮರ್ಶೆ ಕಷ್ಟದ ಕೆಲಸ. ಆತ್ಮಸ್ತುತಿ ಪರನಿಂದೆ ಮನುಷ್ಯ ಸ್ವಭಾವಕ್ಕೆ ಅಂಟಿಬಂದಜಾಡ್ಯ. ಆತ್ಮಕಥೆ ಬರೆಯುವವನು ಮುಪ್ಪಿನಿಂದ ಮಾಗಿ ಆತ್ಮಸಂಸ್ಕಾರವುಳ್ಳವನಾಗಿದ್ದರೆ, ಸಂಯಮ ಶೀಲನಾಗಿದ್ದರೆ, ತನ್ನ ಜೀವನದ ಒಳಿತನ್ನು ಕೆಟ್ಟದ್ದನ್ನು ತಪ್ಪುನೆಪ್ಪುಗಳನ್ನೂ ತಿದ್ದಿ ಅವುಗಳಿಗೆ ಉಚಿತ ಸ್ಥಾನವನ್ನು ಕಲ್ಪಿಸಿ. ನಿರ್ವಿಕಾರ ಮನಸ್ಸಿನಿಂದ ಹೇಳಲು ಸಮರ್ಥನಾಗುತ್ತಾನೆ ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ ಎಂಬ ಗುರಿಯನ್ನು ಮುಟ್ಟಿದ ಪ್ರಾಮಾಣಿಕ. ಆತ್ಮಕಥೆ ಜೀವನ ಚರಿತ್ರೆಗಿಂತ ಸ್ವಾರಸ್ಯವುಳ್ಳದ್ದು ಅಷ್ಟೇ ಪರಿಣಾಮ ಪ್ರಯೋಜನವುಳ್ಳದ್ದು. "ಎಂವಿಸೀ ಅವರು ಜೀವನ ಚರಿತ್ರೆ" ಎಂಬ ಪ್ರಬಂಧದಲ್ಲಿ ಹೇಳಿರುವ ಈ ಮಾತುಗಳನ್ನು ಅವರ ಅಪೂರ್ಣ ಆತ್ಮಚರಿತ್ರೆಗೆ ಹೋಲಿಸಿ ನೋಡಬಹುದು.

ಆತ್ಮಕಥೆಗಳು ಯಾವ ಭಾಷೆಯಲ್ಲಾದರೂ ವಿರಳವೇ. ಕನ್ನಡದಲ್ಲಿ ಜೀವನಚರಿತ್ರೆಗಳು ೫೦೦ ಕ್ಕಿಂತ ಜಾಸ್ತಿ ಇದ್ದರೆ ಆತ್ಮಕಥೆಗಳು ೧೦೦ ಕ್ಕಿಂತ ಜಾಸ್ತಿ ಇಲ್ಲ ಎನ್ನಬಹುದು. ಅದರಲ್ಲೂ ಜೀವನದ ಅರ್ಧಶತಮಾನಗಳು ಕಳೆದ ಮೇಲೆ ಬರೆದ ಆತ್ಮಕಥೆಗಳೇ ಹೆಚ್ಚು. ಕನ್ನಡ ಸಾಹಿತ್ಯದ ದೃಷ್ಟಿಯಿಂದ ಚರಿತ್ರೆ ದೃಷ್ಟಿಯಿಂದ ಮಹತ್ವ ಪಡೆದ ಆತ್ಮಕಥೆಗಳು ವಿರಳವಾಗಿವೆ. ಜಿ.ಪಿ. ರಾಜರತ್ನಂ ಅವರ ಹತ್ತು ವರ್ಷ' 'ಕಾರಂತರ ಹುಟ್ಟು ಮನಸ್ಸಿನ ಹತ್ತು ಮುಖಗಳು', ಸ್ಮೃತಿಪಟಲದಿಂದ (೩ ಭಾಗಗಳು) ಬುರ್ಲಿಬಿಂದು ಮಾಧವರು ಮಿಂಚಿನ ಬಳ್ಳಿಯಿಂದ ಪ್ರಕಟಿತ ಕನ್ನಡ ಸಾಹಿತ್ಯಜ್ಞರ ಆತ್ಮಕಥೆಗಳು, ನವರತ್ನ ರಾಮರಾಯರ ಕೆಲವು ನೆನಪುಗಳೂ, ಮಾಸ್ತಿ ಅವರ 'ಭಾವ', ಕುವೆಂಪು ಅವರ 'ನೆನಪಿನ ದೋಣಿ', ಡಿವಿಜಿ ಅವರ 'ಜ್ಞಾಪಕ ಚಿತ್ರ' ಶಾಲೆ ದೇಜಗೌ ಅವರ 'ಹೋರಾಟದ ಬದುಕು' ಇನ್ನೂ ಅನೇಕ ಆತ್ಮಕಥೆಗಳು ಗಮನಾರ್ಹ ಕೃತಿಗಳಾಗಿವೆ. ಕರ್ನಾಟಕ ಲೇಖಕಿಯರ ಸಂಪುಟ ಪ್ರಕಟನೆಗಳಿಂದ ಲೇಖಕಿಯರೇ ಹೇಳಿಕೊಂಡ ಆತ್ಮಕಥೆಗಳು ಒಂದು ಮೈಲಿಗಲ್ಲು ಏಕೆಂದರೆ ಗಂಡಿನಹಾಗೆ ತನ್ನ ಬದುಕಿನ ಕಥೆಯನ್ನು ಹೆಣ್ಣು ಖಾಸಗಿಯಾಗಿ ಹೇಳಿಕೊಂಡರೂ ಸಾರ್ವಜನಿಕವಾಗಿ ಮಾಡುವುದಿಲ್ಲ. ಆದರೆ ೨೦ನೇ ಶತಮಾನ ದಿಟ್ಟ ಮಹಿಳೆಯರು ಬೆಳಕಿಗೆ ಬಂದ ಕಾಲ. ಆ ಕಾರಣದಿಂದ ಲೇಖಕಿಯ ಆತ್ಮಕಥೆಗಳು ಪ್ರಕಟವಾಗಲು ಸಾಧ್ಯವಾಯಿತು.

ವಿದ್ಯಾರ್ಥಿಯಾಗಿ ನಾನು ಕಂಡಂತೆ (ಲೇಖನ)

'ಆಸ್ವಾದ' ಅಭಿನಂದನ ಗ್ರಂಥದಲ್ಲಿ ಎಂ.ವಿ.ಸೀ. ಅವರು ತಮ್ಮ ಆತ್ಮಕಥೆಯ ಅಂಗವಾಗಿ ತಾವು ರಚಿಸಿದ ಕೃತಿಗಳ ಹಿನ್ನೆಲೆಯನ್ನು ವಿವರಿಸುತ್ತಾ ಹೋಗುತ್ತಾರೆ.

ಮಾಸ್ತಿ ಅವರ ಸಾಹಿತ್ಯ ಪ್ರೇರಣೆಯ ಗ್ರಂಥ ಈ ರೀತಿ ರಚಿತವಾಗಿದೆ. ಉಳಿದ ಸಾಹಿತಿಗಳ ಆತ್ಮಕಥೆಗಳಲ್ಲಿ ಬದುಕು ಬರಹಗಳು ಒಂದರಲ್ಲೊಂದು ಸೇರಿಕೊಂಡು ಹೋಗುವ ಎಂ.ವಿಸೀ ಅವರು ಆತ್ಮಕಥೆಯನ್ನು ಪೂರ್ಣವಾಗಿ ಬರೆದಿದ್ದಾರೆ. ಕನ್ನಡ ಓದುಗರಿಗೆ ಸಾಹಿತ್ಯ ಜಗತ್ತಿನ ಕಲಾಜಗತ್ತಿನ ಅನೇಕ ಸಂಗತಿಗಳು ತಿಳಿಯುತ್ತಿದ್ದವು. ಏಕೆಂದರೆ ಅನೇಕ ವಿದ್ವಾಂಸರ ಕಲಾವಿದರ ಬದುಕಿನ ಪರಿಚಯವೆಲ್ಲ ಅವರಿಗಿತ್ತು. ನವೋದಯ ಕಾಲದ ಪ್ರಸಿದ್ಧ ಸಾಹಿತಿಗಳ ಇತರ ಮುಖಗಳು ತಿಳಿಯುತ್ತಿತ್ತು. ಜೀವನ ನಾಟಕ ಪ್ರಬಂಧಗಳನ್ನು ಒಂದು ರೀತಿಯಲ್ಲಿ ಇವರು ಜೀವನದಲ್ಲಿ ಕಂಡ ವ್ಯಕ್ತಿಗಳನ್ನು ಸಾಹಿತ್ಯಿಕವಾಗಿ ಚಿತ್ರಿಸಿದ್ದಾರೆ ಎನ್ನಬಹುದು. ಒಂದು ರೀತಿಯಲ್ಲಿ ಇವರ ಆತ್ಮಕಥೆಗೆ ಸಂಬಂಧಿಸಿದ ಕೃತಿ ಜೀವನನಾಟಕ ವ್ಯಕ್ತಿ ಕಥೆಗಳ ಕೃತಿ ಎನ್ನಬಹುದು. ಈ ಗುಂಪಿಗೆ ಸೇರುವ ಲೇಖನ, 'ವಿದ್ಯಾರ್ಥಿಯಾಗಿ ನಾನು ಕಂಡಂತೆ' ಲೇಖನ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾದದ್ದು.

ಎಂವಿಸೀ ಅವರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಓದುತ್ತಿದ್ದಾಗ ಅವರ ಮೇಲೆ ಪ್ರಭಾವಬೀರಿದ ಅಧ್ಯಾಪಕರ ಪಾಠದ ವೈಖರಿ ವ್ಯಕ್ತಿತ್ವ ಪಾಂಡಿತ್ಯಗಳ ಚಿತ್ರಣ ಈ ಲೇಖನದಲ್ಲಿದೆ. ಎಂ.ವಿ.ಸೀ. ಅವರ ಗುರುವರ್ಯರಲ್ಲಿ ಕಾನಕಾನಹಳ್ಳಿ ವರದಾಚಾರ್ಯರೊಬ್ಬರು. ವರದಾಚಾರ್ಯರ ಭವ್ಯ ಚಿತ್ರವನ್ನು ಅವರ ವೇಷಭೂಷಣಗಳನ್ನು ವರ್ಣಿಸುವುದರಲ್ಲೇ ನಮ್ಮ ಕಣ್ಮುಂದೆ ಪ್ರತಿಮೆಯಂತೆ ನಿಲ್ಲಿಸುತ್ತಾರೆ.

".... ಮೇಲುಕೋಟೆ ಅಂಚಿನ 'ಪತ್ತಾರು', ತಲೆಗೆ ಯಥಾಪ್ರಕಾರ ಜಿರಲೆತಿಂದ, ಜರಿಕಿತ್ತುಬಂದ, ಅಚ್ಚಗೆಂಪಿನ ಶಾಲೇ ಮುಂಡಾಸು. ತಿಂಗಳ ಮೇಲೆ ಬೆಳೆದು ಕಟಾವಾಗದೇ ನಿಂತ ಉಪ್ಪು ಮೆಣಸು ಬೆರತ ಬಣ್ಣದ, ಕೆಳಮೊಗದ ಕೂದಲಬೆಳೆ ಹಣೆತುಂಬ ನೋಡುವವರ ಕಣ್ಣಿಗೆ ತಾಡಿಸುವ ಊರ್ಧ್ವಪುಂಡ್ರ".

ಹೀಗೆ ಸಾಂಪ್ರದಾಯಿಕ ಉಡುಪಿನಲ್ಲಿದ್ದ ವರದಾಚಾರ್ಯರ ಬಾಯಿಂದ ಅಣ್ಣಯ್ಯ ಎಂಬ ಮಾತು ಹೊರಬೀಳುವುದೇ ತಡ, ತುಂಟ ಪ್ರಶ್ನೆ ಕೇಳಲು ಎದ್ದು ನಿಂತ ತುಂಟ ಪೋರ ಯಾವನೇ ಆದರೂ ಬಾಲ ಮುದುಡಿ ಕುಳಿತುಬಿಡುತ್ತಿದ್ದ,

ಇನ್ನು ಅವರು ಇತರ ಅಧ್ಯಾಪಕರುಗಳಂತೆ ನಿಂತು ಕೊಂಡಾಗಲಿ ಕುರ್ಚಿಯ ಮೇಲೆ ಕುಳಿತಾಗಲಿ ಪಾಠ ಮಾಡುತ್ತಿರಲಿಲ್ಲ. ಮೇಜಿನ ಮೇಲೆ ಕುಳಿತು ಪಾಠ ಮಾಡುತ್ತಿದ್ದರು. ಇನ್ನು ಅವರ ಪಾಠದ ವೈಖರಿ ಅದ್ಭುತ, ಅಮೋಘ. ಬಿಎಂ.ಶ್ರೀ ಗೆ ಗುರುಗಳಾದವರು ವರದಾಚಾರ್ಯರು. ಒಮ್ಮೆ ತನಿಖಾಧಿಕಾರಿಯಾಗಿ ಬಂದ ಬಿ.ಎಂ.ಶ್ರೀ ಅವರು ತರಗತಿಯೊಳಕ್ಕೆ ಗಂಭೀರವಾಗಿ ಬಂದಾಗ ವರದಾಚಾರ್ಯರು ಅವರಿಗಾಗಿ ಹಾಕಿಸಿದ ಕುರ್ಚಿಯಲ್ಲಿ ಕೂಡಿಸಿದರು ಮೇಜಿನ ಮೇಲಿಂದ ಅವಸರದಲ್ಲಿ ಇಳಿದು ಬರುವ ರಭಸಕ್ಕೆ ತಲೆಗೆ ಸುತ್ತಿದ್ದ ಶಾಲು ಬಿಚ್ಚಿ ಕೊಂಡಿತ್ತು. ಆಗ ಬಿಎಂಶ್ರೀ ಅವರು ಹೇಳಿದ ಮಾತಿದು "ನಮಗೂ ಹೀಗೇ ಅಲ್ಲವೇ ಪಾಠ ಹೇಳುತ್ತಿದ್ದುದು. ತಾವು ದಯವಿಟ್ಟು ಮೊದಲಿನ ಹಾಗೆಯೇ ಪಾಠ ಮುಂದುವರೆಸಬೇಕು. ನಾನು ತಮ್ಮ ಪಾಠವನ್ನು ಕೇಳುವುದಕ್ಕೆ ಬಂದಿದ್ದೇನೆಯೇ ಹೊರತು. ಪರೀಕ್ಷೆ ಮಾಡುವುದಕ್ಕಲ್ಲ" ಎಂದರು. ಪಾಠ ಮುಂದುವರಿಯಿತು... ಬಿ.ಎಂ.ಶ್ರೀ ಪಿರಿಯಡ್ ಮುಗಿಯುವವರೆಗೆ

ಕುಳಿತಿದ್ದರು. ಎದ್ದು ಹೋಗುವಾಗ "ನಿಮ್ಮ ಪಾಠ ಕೇಳಿದ ಯಾವ ಶಿಷ್ಯರಿಗೆ ತಾನೆ ಕನ್ನಡ ಕಾವ್ಯದಲ್ಲಿ ಪ್ರೀತಿ ಹುಟ್ಟುವುದಿಲ್ಲ?" ಎಂದು ಹೇಳಿ ನಮಸ್ಕರಿಸಿ ಗುರುಗಳನ್ನು ಬೀಳ್ಕೊಂಡರು. ಅಂದು ವರದಾಚಾರ್ಯರು ಪಾಠ ಮಾಡುತ್ತಿದ್ದ ಪಾಠ ಜೈಮಿನಿಭಾರತ ಕಾನಕಾನಹಳ್ಳಿ, ವರದಾಚಾರ್ಯರ ಬಾಹ್ಯ ವ್ಯಕ್ತಿತ್ವವನ್ನು ಪಾಂಡಿತ್ಯವನ್ನು ಪಾಠ ವೈಖರಿಯನ್ನು ಕೇವಲ ೨ ಪುಟಗಳಲ್ಲಿ ವಿವರಿಸಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಬಿಎಂಶ್ರೀ ಅವರು ಎಂವಿಸೀ ಅವರ ಆರಾಧ್ಯದೈವ. ಅವರ ಹೆಸರಿನಲ್ಲಿ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನವನ್ನೇ ಸ್ಥಾಪಿಸಿದರು. ಅವರನ್ನು ಕುರಿತು ಹತ್ತಾರು ಕಡೆ ಉಪನ್ಯಾಸಗಳನ್ನು ಮಾಡಿದ್ದಾರೆ, ಗ್ರಂಥವನ್ನೇ ರಚಿಸಿದ್ದಾರೆ. ಲೇಖನಗಳನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಬಿಎಂಶ್ರೀ ಅವರು ಯಶೋಧರ ಚರಿತ್ರೆಯನ್ನು ಪಾಠ ವೈಖರಿಯನ್ನು ಬಣ್ಣಿಸಿದ್ದಾರೆ. ಯಶೋಧರೆ ಚರಿತ್ರೆ ಬಿಎಂಶ್ರೀ ಅವರ ಅಚ್ಚುಮೆಚ್ಚಿನ ಕೃತಿ. ಅದನ್ನು ಕುರಿತು ನಾಡಿನ ಹತ್ತಾರು ಕಡೆ ಮಾತನಾಡಿ ತಮ್ಮ ಅದ್ಭುತ ವಾಗ್ವೈಖರಿ ಪಾಂಡಿತ್ಯವನ್ನು ಹಾಗೂ ಜನ್ನನ ಕಾವ್ಯಸಂಗ್ರಹವನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಪಂಪ, ಕುಮಾರವ್ಯಾಸರ ಕೃತಿಗಳನ್ನು ಕುರಿತು ಮಾತನಾಡುವಾಗಂತೂ ಪರವಶರಾಗುತ್ತಿದ್ದರು. ಕನ್ನಡ ಸಾಹಿತ್ಯ ಚರಿತ್ರೆಯನ್ನು ೧೧ ಜನ ವಿದ್ಯಾರ್ಥಿಗಳಿಗೆ ಪಾಠ ಮಾಡುವಾಗ ಪ್ರವಚನ ಸಪ್ತಾಹವನ್ನೇ ಮಾಡುತ್ತಿದ್ದರು.

ಬಿ.ಎಂ.ಶ್ರೀ ಅವರ ವಾಕ್‌ಪ್ರೌಢಿಮೆ ಮತ್ತು ಪಾಠ ಪ್ರವಚನ ವೈಖರಿಗೆ ಸಾಕ್ಷಿ ಎಂವಿಸೀ ಅವರು ಹೇಳುವ ಪಾಠ ಪ್ರವಚನ ಸಪ್ತಾಹ ಎಂಬ ಮಾತು.

ಈ ಮಾತನ್ನು ಎಂವಿಸೀ ಅವರೇ ವಿವರಿಸುವುದು ಹೀಗೆ "೧೯೩೮ರ ಮಾರ್ಚಿ ತಿಂಗಳ ಸುಮಾರಿನಲ್ಲಿ ಒಂದು ದಿನ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿಯೂ ಇದ್ದುದರಿಂದ ಇಲ್ಲಿ ಪಾಠ ಮುಗಿಸಿ, ಮಹಾರಾಜ ಕಾಲೇಜಿನಲ್ಲಿ ಸಾಹಿತ್ಯ ಚರಿತ್ರೆ ಬೋಧಿಸುವವರು ಆಗಿದ್ದರಿಂದ ಅವರು ಕಾಲೇಜಿಗೆ ಬಂದರು. ೧೧ ಗಂಟೆಯಿಂದ ೫ ಘಂಟೆಯವರೆಗೆ ಅವಿಶ್ರಾಂತ ಉಪನ್ಯಾಸ ಮಾಡಿದರು. ಅವರಿಗಾಗಿ ವಿಶ್ರಾಂತಿ ಇಲ್ಲ ವಿದ್ಯಾರ್ಥಿಗಳಿಗೂ ವಿಶ್ರಾಂತಿ ಇಲ್ಲ. ಮಧ್ಯೆ ವಿರಾಮವೂ ಇಲ್ಲ ಕಥೆಯೂ ಇಲ್ಲ. ನಡುನಡುವೆ ಬೋರ್ಡಿನ ಮೇಲೆ ಆಗೊಮ್ಮೆ ಈಗೊಮ್ಮೆ ಕವಿ ಕೃತಿಗಳ ಕಾಲ ಮುಂತಾದ ನೆನಪಿಸ ಬೇಕಾದ ಸಂಗತಿಗಳನ್ನು ಗುರುತಿಸುತ್ತಿದ್ದರು. ಕಾವೇರಿಯು ಪ್ರವಾಹ, ರಸಸಮಾರಾಧನ ಸಪ್ತಾಹ.... ಈ ರೀತಿ ಏಳು ದಿನಗಳು ಅಖಂಡ ಪಾಠ ಪ್ರವಚನ ಮಾಡಿದವರು ಬಿಎಂಶ್ರೀ ಅವರು 'ಗಿನ್ನೀಸ್ ಬುಕ್‌ನಲ್ಲಿ ದಾಖಲೆಯಾಗಲು ಯೋಗ್ಯವಾದ ಪರಮ ದಾಖಲೆ' ಎಂದಿದ್ದಾರೆ ಎಂವಿಸೀ. ಬಿಎಂಶ್ರೀ ಅವರು ಅಧ್ಯಾಪಕತನವನ್ನು ಹಳಗನ್ನಡ ಪಾಂಡಿತ್ಯವನ್ನು ಕಂಡಾಗ ಅವರು ಹಳಗನ್ನಡದ ನಾಡೋಜ ಪಂಪನಂತೆ ಹೊಸಗನ್ನಡದ ನಾಡೋಜ ಬಿಎಂಶ್ರೀ ಎಂಬ ಮಾತನ್ನು ಒಪ್ಪಬೇಕಾಗುತ್ತದೆ.

ಬಿಎಂಶ್ರೀ ಅವರ ಭವ್ಯವ್ಯಕ್ತಿತ್ವ ಪಾಂಡಿತ್ಯವನ್ನು ಈ ಲೇಖನದಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಕಾಲೇಜು ವಿದ್ಯಾರ್ಥಿಗಳಾಗಿದ್ದಾಗ, ಕನ್ನಡ

ನಾಡಿನ ವಿದ್ಯಾರ್ಥಿಗಳಿಬ್ಬರ ಗುರುಶಿಷ್ಯರ ಪಾತ್ರ ವೈಖರಿ ವ್ಯಕ್ತಿತ್ವ ತಿಳಿಸುವ ಈ ಲೇಖನ ಅವರ ಆತ್ಮಕಥೆಯ ಅಧ್ಯಾಯವಾಗಿದೆ ಎಂದರೆ ತಪ್ಪಲ್ಲ.

ಎ.ಆರ್. ರಾಜರಾಜವರ್ಮ (ಜೀವನಚರಿತ್ರೆ)

ಮಲಯಾಳ ಸಾಹಿತ್ಯದಲ್ಲಿ ೧೮೫೦ರ ಅನಂತರದಲ್ಲಿ ಒಂದು ಶತಮಾನದ ಕಾಲವನ್ನೂ 'ಸ್ವರ್ಣಯುಗ' ವೆಂದು ಸಾಹಿತ್ಯ ಚರಿತ್ರಕಾರರು ಕರೆದಿದ್ದಾರೆ ಏಕೆಂದರೆ ಮಲಯಾಳಿ ಸಾಹಿತ್ಯೋದ್ಯಾನದಲ್ಲಿ ನೂರಾರು ಕಾವ್ಯ ಸಾಹಿತ್ಯಗಳು ಅರಳಿದ ವಸಂತ ಋತು ಆ ಅವಧಿ. ಆ ಕಾಲದಲ್ಲಿ ಕಾಣಿಸಿಕೊಂಡ ಅಷ್ಟ ದಿಗ್ಗಜರಲ್ಲಿ ಎ.ಆರ್. ರಾಜರಾಜವರ್ಮರು ಒಬ್ಬರು. ಕೇರಳ ಸಾಹಿತ್ಯ ಚರಿತ್ರಂ ಬರೆದ ಉಳ್ಳೂರ್ ಎಸ್. ಪರಮೇಶ್ವರ ಅಯ್ಯರ್ ಅವರು ಎ.ಆರ್. ರಾಜರಾಜವರ್ಮರನ್ನು ಕುರಿತು ಹೇಳಿರುವ ಮಾತುಗಳಿವು. "ಮಲಯಾಳ ಸಾಹಿತ್ಯದ ತಳಪಾಯ ಹಾಗೂ ಗೋಪುರಗಳನ್ನೂ ನಿರ್ಮಿಸಿ ಭವ್ಯ ಸಾಹಿತ್ಯ ಸೌಧ ನಿರ್ಮಾಪಕರೆನಿಸಿದರು. ಎ.ಆರ್. ರಾಜರಾಜವರ್ಮ" ಎಂದಿದ್ದಾರೆ.

ಇಂಥ ಸಾಹಿತ್ಯ ಪುರುಷನನ್ನು ಕುರಿತು ಬರೆದ ಗ್ರಂಥವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಎಂವಿಸೀ ಅವರು ಸರಳವಾಗಿ ತಂದಿದ್ದಾರೆ.

ಎ.ಆರ್. ರಾಜರಾಜವರ್ಮ ಕೋಯಿ ತರಪುರಾನ್ ೧೮೬೩ರಲ್ಲಿ ಲಕ್ಷ್ಮೀಪುರ ಅರಮನೆಯಲ್ಲಿ ಜನಿಸಿದರು. ಬಾಲ್ಯದಲ್ಲಿ ಸೋದರಮಾವ ಕೇರಳವರ್ಮ ನಿಂದ ಕೊಟ್ಟಪ್ಪನ್ ಕಾವ್ಯಭ್ಯಾಸ ಮಾಡಿ ಕಾವ್ಯರಚನೆ ಮಾಡತೊಡಗಿದರು. ಕೊಚ್ಚಪ್ಪನ್ ಎಂಬುದು ಬಾಲ್ಯದಲ್ಲಿ ರಾಜರಾಜವರ್ಮರನ್ನು ಕರೆಯುತ್ತಿದ್ದ ಹೆಸರಾಗಿತ್ತು.

ರಾಜರಾಜವರ್ಮರು ಕಾಲೇಜು ಪದವಿ ಶಿಕ್ಷಣ ಮುಗಿಸಿದಾಗ ಮಲಯಾಳದ ಕ್ಷತ್ರಿಯ ಜನಾಂಗದ ಪ್ರಥಮ ಪದವೀಧರರು ಎನಿಸಿಕೊಂಡರು ಅದಕ್ಕಾಗಿ ಶ್ರೀ ಮೂಲಂ ತಿರುವಾಳ್ ಮಹಾರಾಜರೂ ರತ್ನಖಚಿತ ಚಿನ್ನದ ಕಂಕಣ ನೀಡಿದರು. ಆವೇಳೆಗೆ ಸಂಸ್ಕೃತ ಮಲಯಾಳ ಇಂಗ್ಲೀಷ್ ಭಾಷೆಗಳಲ್ಲಿ ಕಾವ್ಯ ರಚನೆ ಮಾಡಬಲ್ಲ ತ್ರಿಭಾಷಾ ಕವಿಗಳಾಗಿದ್ದರು. ಹಲವಾರು ಕೃತಿಗಳನ್ನು ರಚಿಸಿದ್ದರು.

೧೮೯೬-೯೮ರಲ್ಲಿ ಮಹಾರಾಜರ ಸಂಸ್ಕೃತ ಕಾಲೇಜಿನಲ್ಲಿ ದೇಶಭಾಷಾ ವ್ಯಾಸಂಗದ ಮೇಲ್ವಿಚಾರಣಾಧಿಕಾರಿಗಳಾದರು. ಶಿಕ್ಷಣ ರಂಗದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಅವುಗಳಲ್ಲಿ ಮುಖ್ಯವಾದದು ದೇಶೀಯ ಭಾಷೆಗಳಿಗೆ ಪ್ರೋತ್ಸಾಹಕೊಡಲು ಹೋರಾಟ ನಡೆಸಿದ್ದು, ಶಿಕ್ಷಕ, ಸಂಶೋಧಕ ಸುಧಾರಕರೆನಿಸಿದ ರಾಜರಾಜವರ್ಮರು ಇಂಗ್ಲಿಷ್ ಸಾಹಿತ್ಯ ರಾಶಿಯನ್ನು ಶಾಲೆಯೊಳಕ್ಕೆ ತಂದರು. ಇವರ ಹೋರಾಟದ ಫಲವಾಗಿ ಇವರ ನಿಧಾನಾನಂತರ ೧೯೩೭ರಲ್ಲಿ ಕೇರಳ ವಿಶ್ವವಿದ್ಯಾನಿಲಯ ಸ್ಥಾಪನೆ ಆಗಲು ಅವಕಾಶ ಆಯಿತು. ಸುಮಾರು ೮ ವರ್ಷಗಳ ಕಾಲ ಸಂಸ್ಕೃತ ಪ್ರಾಧ್ಯಾಪಕತ್ವ, ದ್ರಾವಿಡಭಾಷಾ ವಿಭಾಗಗಳ ಮೇಲ್ವಿಚಾರ ವಿದ್ವತ್ ಗ್ರಂಥ ರಚನೆ. ಶಾಲಾ ಪಠ್ಯರಚನೆ ಮೊದಲಾದ ಕಾರ್ಯಗಳಲ್ಲಿ ಎಡಬಿಡದೆ ತೊಡಗಿಕೊಂಡಿದ್ದ ರಾಜರಾಜವರ್ಮರು ೧೯೧೮ರಲ್ಲಿ ಜ್ವರದಿಂದ ನರಳಿ ನಿಧನರಾದರು. ಮರಣಾವಸ್ಥೆಯಲ್ಲೂ ಮಗಳಿಗೆ ಹೊಸನಾಟಕವೊಂದರ ಸಂವಿಧಾನ ಬರೆದುಕೊಳ್ಳಲು

ಹೇಳಿದರು. ವೈದ್ಯರಿಗೆ ಅವರು ಹೇಳಿದ ಮಾತು 'ಡಾಕ್ಟರ್. ಈ ಜ್ವರದಿಂದ ನರಳಿ ನರಳಿ ಸಾಕಾಗಿ ಹೋಗ್ಗಿದೆ ನಿಮ್ಮ ಪೇಷಂಟ್ (ರೋಗಿ) ಇಂಪೇಷೆಂಟ್ (ತಾಳ್ಮೆಗೆಟ್ಟಿದ್ದಾನೆ) ಆಗಿದ್ದಾನೆ' ಎಂದರಂತೆ ವಿದ್ಯಾಸರಸ್ವತಿಯ ಆರಾಧನೆಯಲ್ಲೇ ಬಾಳನ್ನು ಸವೆಯಿಸಿ ಕೇರಳ ಸಾಹಿತ್ಯ ಜಗತ್ತಿನ ಧ್ರುವ ತಾರೆಯಾಗಿ ಮೆರೆದವರು ರಾಜರಾಜವರ್ಮರು.

ರಾಜರಾಜವರ್ಮರ ಕೇರಳ ಸಾಹಿತ್ಯ ಚರಿತ್ರೆಯಲ್ಲಿ ಅದ್ವಿತೀಯ ಪುರುಷರಾಗಿ ಬೆಳಗಿರುವುದು ಅವರು ರಚಿಸಿದ ಕೇರಳ ಪಾಣಿನೀಯಂ ವ್ಯಾಕರಣ ಗ್ರಂಥದಿಂದ ಎಂದರೆ ತಪ್ಪಾಗಲಾರದು. ಕೇರಳ ಪಾಣಿನೀಯಂ ಸಂಪ್ರದಾಯದಲ್ಲಿ ಬರೆದ ಕೃತಿ ಈ ವಿದ್ವತ್ ಪೂರ್ಣ ಕೃತಿ. ಕಾಲ್ಡ್‌ವಿಲ್ ತೌಲನಿಕ ವ್ಯಾಕರಣ ಗುಂಡರ್ಟನ ತೌಲನಿಕ ವ್ಯಾಕರಣಗಳನ್ನು ಮೀರಿಸಿದ ವ್ಯಾಕರಣ ಎನ್ನಬಹುದು. ಇದಲ್ಲದೆ ಪ್ರಥಮ ವ್ಯಾಕರಣ, ಮಧ್ಯಮವ್ಯಾಕರಣ ಶಬ್ದಶೋಧಿನಿ ಎಂಬ ೩ ವ್ಯಾಕರಣಗಳನ್ನು ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆವರೆಗಿನ ವಿದ್ಯಾರ್ಥಿಗಳಿಗಾಗಿ ರಚಿಸಿದ್ದು ಒಂದು ಸಾಧನೆಯೇ ಆಗಿದೆ.

ಕೇರಳದ ವ್ಯಾಕರಣ ಲೋಕದ ಆಚಾರ್ಯ ಲಘುಪಾಣಿನಿಲಯಂ ಅವರ ಇನ್ನೊಂದು ಮೇರು ವ್ಯಾಕರಣ ಕೃತಿ. ಕಾವ್ಯಮೀಮಾಂಸೆಯ ಭಾಷಾಭೂಷಣಂ ಛಂಧಶ್ಯಾಸ್ತ್ರದ ವೃತ್ತಮಂಜರಿ, ಗದ್ಯಲೇಖನಕಲೆಯ ಸಾಹಿತ್ಯ ಕೃತಿರಚನೆಗಳಿಂದ ಮಲೆಯಾಳಂ ಭಾಷೆಯ ಅಲಂಕಾರ ಛಂದಸ್ಸು, ವ್ಯಾಕರಣಶಾಸ್ತ್ರಗಳಿಗೆ ಬುನಾದಿ ನಿರ್ಮಿಸಿದರು. ಈ ಮೂಲಕ ಪ್ರಾದೇಶಿಕ ಭಾಷೆಗೆ ಸ್ವತಂತ್ರ ನೆಲೆಗಳನ್ನು ರೂಪಿಸಿದರು.

ಕಾಳಿದಾಸ, ಭಾಸರ ನಾಟಕಗಳನ್ನು ಅದ್ಭುತವಾಗಿ ಮಲೆಯಾಳಕ್ಕೆ ತಂದ ರಾಜರಾಜವರ್ಮರು, ಸ್ವತಂತ್ರ ಸಂಸ್ಕೃತ ಕಾವ್ಯಗಳನ್ನು ರಚಿಸಿದ್ದಾರೆ. ಸಾಹಿತ್ಯ (ಕವನ ಸಂಕಲನ) ಗೈರ್ವಾಣೀ ವಿಜಯಂ (ವಿದ್ಯಾನಾಟಕ) ಆಂಗ್ಲ ಸಾಮ್ರಾಜ್ಯಂ ಆಧುನಿಕ ಇತಿಹಾಸ ಕಾವ್ಯ ಮುಂತಾದ ಕೃತಿಗಳನ್ನು ರಚಿಸಿ ಅನೇಕ ಗದ್ಯಕೃತಿಗಳನ್ನು ವಿಮರ್ಶಾಕೃತಿಗಳನ್ನು ರಚಿಸಿ, ಮುನ್ನುಡಿಗಳನ್ನು ಬರೆದು ಮಲೆಯಾಳಂ ಸಾಹಿತ್ಯದ ಸುವರ್ಣಯುಗದ ಸಾಮ್ರಾಟ್ ಎನಿಸಿಕೊಂಡರು. ಮಲೆಯಾಳಂ ಸಾಹಿತ್ಯದಲ್ಲಿ ನವೋದಯ ಚಳುವಳಿಯ ಮುಂಚೂಣಿಯಲ್ಲಿ ಅಗ್ರನಾಯಕರಾಗಿ ಮೆರೆದ ರಾಜರಾಜವರ್ಮರು ಕೇರಳದ ಭಾಷೆಗೆ ಸಾಹಿತ್ಯಕ್ಕೆ ಶಿಕ್ಷಣಕ್ಕೆ ನೀಡಿದ ಅಪೂರ್ವ ಕೊಡುಗೆಗಳನ್ನು ಸರಳವಾಗಿ ಸಂಕ್ಷಿಪ್ತವಾಗಿ ಈ ಜೀವನ ಚರಿತ್ರೆಯ ಕೃತಿ ತಿಳಿಸುತ್ತದೆ. ೧೯ನೇ ಶತಮಾನದಲ್ಲಿ ಭಾರತೀಯ ಸಾಹಿತ್ಯದಲ್ಲಿ ಹೊಸಬೆಳಕನ್ನು ತಂದ ರಾಜರಾಜವರ್ಮರ ಈ ಕೃತಿಯನ್ನು ಎಂವಿಸೀ ಸರಳವಾಗಿ ಅನುವಾದಿಸಿದ್ದಾರೆ. ಅನುವಾದದಕೃತಿ ಎನಿಸದ ಹಾಗೆ ಬರೆದಿದ್ದಾರೆ. ಕೇರಳದ ಸಾಹಿತ್ಯ ಚರಿತ್ರೆಯ ಯುಗಪುರುಷನ ಸಾಹಿತ್ಯ ಸಾಧನೆ ತಿಳಿಸುವಲ್ಲಿ ಉಪಯುಕ್ತ ಗ್ರಂಥವಾಗಿದೆ.

೩. ಕಥೆಗಳು

ಯೌವನಸುಧೆ (೧)

ಎಂ.ವಿ.ಸೀ ಅವರು ಕನ್ನಡ ಅಧ್ಯಾಪಕರಾಗಿ ಕನ್ನಡದಲ್ಲಿ ಅಧಿಕ ಗ್ರಂಥ ಲೇಖನಗಳನ್ನು ಮಾಡಿದ್ದರೂ, ಕೇವಲ ಕನ್ನಡ ವಿದ್ವಾಂಸ ಸಾಹಿತಿ ಆಗಿರಲಿಲ್ಲ.

ಇಂಗ್ಲಿಷ್ ಹಾಗೂ ಸಂಸ್ಕೃತದಲ್ಲೂ ಪರಿಣಿತಿ ಹೊಂದಿದ್ದರು. ಅವರ ಸಂಸ್ಕೃತ ಪರಿಣತಿಗೆ ಅವರು ಸಂಪಾದಿಸಿದ ಅಲಂಕಾರ ಗ್ರಂಥಗಳೂ ಕಾವ್ಯ ಮೀಮಾಂಸೆಯ ಬರಹಗಳು ಸಾಕ್ಷಿಯಾಗಿವೆ. ಇಂಗ್ಲಿಷಿನಲ್ಲಿ ಅವರು ಬರೆದ ಗ್ರಂಥಗಳೂ ಇಂಗ್ಲಿಷ್ ಲೇಖನಗಳೂ ಇಂಗ್ಲಿಷ್ ಪರಿಣತಿಗೆ ಸಾಕ್ಷಿಯಾಗಿವೆ. ಎಂವಿಸೀ ಅವರು ಕನ್ನಡ ಲೇಖಕರ ಬಗ್ಗೆ ಕನ್ನಡ ಸಾಹಿತ್ಯದ ಬಗ್ಗೆ ಇಂಗ್ಲಿಷಿನಲ್ಲಿ ಬರೆದ ಲೇಖನಗಳು ಮಹತ್ವಪೂರ್ಣವಾದವು. ಕನ್ನಡದ ಶ್ರೇಷ್ಠಗ್ರಂಥಗಳು, ಲೇಖಕರ ಸಾಧನೆ ಸಿದ್ಧಿಗಳು ಅನ್ಯಭಾಷೆಯವರಿಗೆ ತಿಳಿಯದೆ ಕನ್ನಡ ನಿಜಕ್ಕೂ ಒಂದು ವಿಶ್ವಭಾಷೆ ಆಗಿದ್ದರೂ ವ್ಯಾಪ್ತಿಯಲ್ಲಿ ಪ್ರಾಂತ್ಯ ಭಾಷೆಯಾಗಿ ಉಳಿದಿದೆ. ಈ ದೃಷ್ಟಿಯಿಂದ ಇಂಗ್ಲಿಷಿನಲ್ಲಿ ಎಂವಿಸೀ ಅವರು ಬರೆದ ಸಾಹಿತ್ಯ ಅಮೂಲ್ಯವಾದುದು.

ಎಂವಿಸೀ ಅವರು ಕನ್ನಡ ಸಾಹಿತ್ಯ ಆಧಾರಿತ ಇಂಗ್ಲಿಷಿನಲ್ಲಿ ಬರೆದ ಗ್ರಂಥ ಲೇಖನಗಳು ಹೀಗಿವೆ.

I ಕನ್ನಡ ಕವಿಗಳನ್ನು ಕುರಿತು ಬರೆದ ಇಂಗ್ಲಿಷ್ ಲೇಖನಗಳು

1. Brahmashiva 2. Chamaraja 3. Durgasimha 4. Chikadevraja 5. Mummadi Krishna Raja 6. Halukatti P.G. 7. Sarvagna 8. Ranna 9. Basavappa Shastri 10. Sri purandaradasa 11. Chavundaraya and Attimabbe ಇತ್ಯಾದಿ.

II. ಕನ್ನಡ ಗ್ರಂಥಗಳನ್ನು ಕುರಿತ ಬರೆದ ಇಂಗ್ಲಿಷ್ ಬರಹಗಳು

1. Kavirajamargam, 2. Sri Rama Pattabishekam, 3. Bunkinachandra, 4. Neminathapurana Karnaparya. ಇತ್ಯಾದಿ.

III. ಕನ್ನಡ ಭಾಷೆ-ಸಾಹಿತ್ಯದ ಬಗ್ಗೆ ಇಂಗ್ಲಿಷಿನಲ್ಲಿ ಬರೆದ ಲೇಖನಗಳು

1. Biograpical Writings in Kannada 1979
2. The Case System in Kannada 1966
3. Kannada Literary Journals 1963
4. Goravas of Karnataka 1923
5. Taddhita Suffxes in Kannada (un published)
6. Antiquity of Kannada 1974
7. The place of Kanakadasa in Haridasa Literature.
8. Anthology of Poety and prose in Kannada.
9. Ashtaka in Kannada Poetry
10. Harikathe in Kannada
11. Grammar in Kannada
12. Poeties in Kannada
13. Research in Kannda Literature

14. Keertana Poems in Kannada
15. Anthologies of poetry & Prose in Kannada ಇತ್ಯಾದಿ.

IV ಇಂಗ್ಲಿಷ್‌ನಲ್ಲಿ ಕನ್ನಡ ಲೇಖಕರನ್ನು ಕುರಿತು ರಚಿಸಿದ ಗ್ರಂಥಗಳು

Muddana - Published by Kendra Sahitya Academy

T.S. Venkatnnaiah - Published by Kendra Sahitya Academy.

ಮೇಲ್ಕಂಡ ಲೇಖನಗಳ ಶೀರ್ಷಿಕೆಗಳ ಲೇಖನಗಳನ್ನೋದಿದರೆ ಸಾಕು ಕನ್ನಡಸಾಹಿತ್ಯ, ಇತಿಹಾಸ ಕಲೆಗಳ ಕೃತಿಗಳನ್ನು ಕುರಿತು ಪುಸ್ತಕದ ಲೇಖನದ ಅನುವಾದವಾಗಿರದೆ ಸ್ವಾತಂತ್ರ ವಿವೇಚನೆಯಿಂದ ಬರೆದಿರುವುದು ಕಂಡುಬರುತ್ತದೆ. ಇಂಥವರ ಸಂಖ್ಯೆ ಕನ್ನಡ ಸಾಹಿತ್ಯದಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅವರ ಪೈಕಿ ಎಂವಿಸೀ ಅವರು ಅಗ್ರಗಣ್ಯರಲ್ಲಿ ಒಬ್ಬರಾಗಿದ್ದಾರೆ. ಈ ಬರಹಗಳ ವಿಮರ್ಶಾತ್ಮಕ ವಿಮರ್ಶೆಗಳನ್ನು ಎಂವಿಸೀ ಅವರ ಇಂಗ್ಲಿಷ್ ಕೃತಿ ಬರಹಗಳ ಸಂದರ್ಭದಲ್ಲಿ ಕಾಣಬಹುದು ಆದ್ದರಿಂದ ಇಲ್ಲಿ ಪ್ರಸ್ತಾಪ ಮಾತ್ರ ಮಾಡಲಾಗಿದೆ.

V ಎಂವಿಸೀ ಅವರು ಕನ್ನಡಕ್ಕೆ ಅನುವಾದಿಸಿದ ಗ್ರಂಥಗಳು

ಇಂಗ್ಲಿಷಿನಲ್ಲಿ ಸ್ವತಂತ್ರವಾಗಿ ಕನ್ನಡ ಭಾಷೆ ಸಾಹಿತ್ಯವನ್ನು ಕುರಿತು ಬರೆಯುವ ಕಲೆ ಬೇರೆ. ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡುವ ಅನುವಾದ ಕಲೆ ಬೇರೆ.

ಸ್ವತಂತ್ರವಾಗಿ ಬರೆಯುವಾಗ ಕನ್ನಡದ ಭಾಷೆ ಸಾಹಿತ್ಯದ ವಿಷಯಗಳನ್ನು ತಿಳಿದಿದ್ದರೆ ಸಾಕು. ಆದರೆ ಅನುವಾದ ಮಾಡುವುದು ಪರಕಾಯ ಪ್ರವೇಶ ಮಾಡುವ ಕೆಲಸ. ಅನುವಾದ ಮಾಡುವಾಗ ಭಾಷೆಯ ಮೇಲೆ ಹಿಡಿತ ಮುಖ್ಯ. ಎರಡು ಭಾಷೆಗಳ ವ್ಯಾಕರಣ ಪ್ರಕ್ರಿಯೆಗಳನ್ನು ತಿಳಿದಿರುವುದರ ಜತೆಗೆ ಶಬ್ದ ಸಂಪತ್ತಿನ ಸಮಾನಾರ್ಥಕ ಶಬ್ದಗಳನ್ನು ತಿಳಿಯುವುದು ರೂಪಿಸುವುದು ಸಾಮಾನ್ಯ ಸಂಗತಿಯಲ್ಲ. ಮತ್ತು ಪಾರಿಭಾಷಿಕ ಪದಗಳನ್ನು ಅನುವಾದಿಸುವಾಗ ವಿಷಯ ಪರಿಜ್ಞಾನ ಚೆನ್ನಾಗಿರಬೇಕು. ಈ ವಿಷಯದಲ್ಲಿ ತಿ.ತಾ.ಶರ್ಮರ ಭಾಷಾ ಪರಿಣಿತಿ ನೆನಪಾಗುತ್ತದೆ. ಅವರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸುವಾಗ ನಿರ್ಮಿಸಿದ ಕನ್ನಡ ಪದಗಳು ಇಂದೂ ಚಲಾವಣೆ ನಾಣ್ಯಗಳಾಗಿ ಜನಪ್ರಿಯವಾಗಿವೆ. ಎಂ.ವಿ.ಸೀ ಅವರು ತಿ.ತಾ.ಶರ್ಮರ ವರ್ಗಕ್ಕೆ ಸೇರಿದ ಭಾಷಾಂತರಕಾರರಾಗಿದ್ದಾರೆ. ಎಂ.ವಿ.ಸೀ. ಅವರು ಇಂಗ್ಲಿಷ್ ಕನ್ನಡ ಕೋಶದ ಸಂಸಾದಕರಾಗಿ (೧೯೩೯-೧೯೪೬) ಕಾರ್ಯ ನಿರ್ವಹಿಸಿದ ಅವಧಿ ಅವರಿಗೆ ಒಳ್ಳೆಯ ಹಿನ್ನೆಲೆಯನ್ನು ಒದಗಿಸಿದೆ ಮತ್ತು ಅವರು ಕನ್ನಡ ಸಾಹಿತ್ಯದ ಆಸಕ್ತಿಯಷ್ಟೇ ಇಂಗ್ಲಿಷ್ ಸಾಹಿತ್ಯದ ಅಭ್ಯಾಸ ಮಾಡಿದ್ದಾರೆ. ಅದಕ್ಕೆ ಇಂಗ್ಲಿಷ್ ಕಾದಂಬರಿಗಳು ಕಥೆಗಾರರ ಕವಿಗಳ ಕೃತಿಗಳ ಅನುವಾದಗಳೇ ಸಾಕ್ಷಿ ಆಗಿವೆ.

ರಾಬಿನ್ ಸನ್ ಕ್ರೂಸೋವಿನ ನೀಳ್ಗಥೆಯನ್ನು, ಅದೇ ಹೆಸರಲ್ಲಿ ಹಾಥಾರ್ನಿನ ಎರಡು ಕಾದಂಬರಿಗಳನ್ನು ಜೂಡಿಲಕ್ಷ್ಮಿ, ಏಳು ಉಪ್ಪರಿನ ಮನೆ, ಎ.ಆರ್. ರಾಜರಾಜವರ್ಮರ ಜೀವನಚರಿತ್ರೆಯನ್ನು ಆಕಾಶಯಾನವೆಂಬ ವಿಜ್ಞಾನಗ್ರಂಥವನ್ನು

ಹಾಥಾರ್ನನ ೭ ಕಥೆಗಳನ್ನು ಶಿಲಾಮುಖ, ಯೌವನಸುಧೆ ಪುಷ್ಕಿನ್ನನ ೭ ಕಥೆಗಳನ್ನು 'ಗುಂಡಿನೇಟು ಮತ್ತು ಇತರ ಕಥೆಗಳು' ಎಂಬ ಹೆಸರಿನಲ್ಲೂ ಕಥಾಸಂಗ್ರಹಗಳಲ್ಲೂ ಅನುವಾದಿಸಿದ್ದಾರೆ. ಅನುವಾದಕರಾಗಿ ತೆಲಗು ಸಂಸ್ಕೃತ ಭಾಷೆಬಲ್ಲ ಅವರು ತೆಲುಗಿನಿಂದ ವಿವೇಕಾನಂದ, ಸಂಸ್ಕೃತದಿಂದ ಸೌಂದರ್ಯಲಹರಿಯನ್ನು ಅನುವಾದಿಸಿ ತ್ರಿಭಾಷಾ ಅನುವಾದಕರಾಗಿದ್ದಾರೆ.

ಅನುವಾದಿತ ಕಥೆಗಳು ಸೃಜನಶೀಲ ಲೇಖಕನೊಬ್ಬನ ಅನುಸೃಷ್ಟಿ ಆಗಬಹುದೇ ಹೊರತು ಸ್ವತಂತ್ರರಚನೆಗಳಾಗಲಾರವು. ಪರಭಾಷಾ ಕೃತಿಯಾದರೂ ಮರುಸೃಷ್ಟಿಯಲ್ಲ. ಅನುವಾದಕ ತನ್ನ ಭಾಷೆಯ ಜಾಯಮಾನಕ್ಕೆ ಒಗ್ಗಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿದ್ದರೂ ಸ್ವಂತತ್ರದ್ದಾಗುವುದಿಲ್ಲ : ಮೂಲದಲ್ಲಿ ಅದು ಅನ್ಯಭಾಷೆಯದೇ ಆಗಿರುತ್ತದೆ. ಅನುವಾದಕನ ಸೃಜನಶೀಲ ಪ್ರತಿಭೆಯನ್ನು ಮಾತ್ರ ದುಡಿಸಿಕೊಂಡಿರುತ್ತದೆ. ಇದೊಂದು ರೀತಿಯ ಬದಲಿ ತಾಯಿಯ (Surrogate Mother) ಕೆಲಸವಿದ್ದಂತೆ, ಹಡೆದರೂ ಮಗು ತನ್ನದಲ್ಲ. ಈ ಕಾರಣದಿಂದಾಗಿಯೇ ಅನುವಾದಿತ ಕಥೆಗಳನ್ನು ಈ ಸಂಪುಟದಲ್ಲಿ ಸೇರಿಸಲಾಗಿದೆ.

ಎಂ.ವಿ.ಸೀ. ಅವರು ಬರೆದ ಕಥೆಗಳು ಎಷ್ಟು? ಅದರಲ್ಲಿ ಅನುವಾದಿತ ಕಥೆಗಳು ಎಷ್ಟು? ಎಂಬುದು ಖಚಿತವಾಗಿ ತಿಳಿದುಬಂದಿಲ್ಲ. ಏಕೆಂದರೆ ಪತ್ರಿಕೆಗಳಲ್ಲಿ ಬರೆದ ಕಥೆಗಳೆಲ್ಲವೂ ದೊರಕಿಲ್ಲ. ಅಚ್ಚಾದ ಕಥಾ ಸಂಗ್ರಹಗಳಲ್ಲಿ ಶಿಲಾಮುಖ ಕಥಾಸಂಗ್ರಹ ಪ್ರತಿದೊರತಿಲ್ಲ. ಹಸ್ತಪ್ರತಿಯ ವಿರಹಗಳ ಶೃಂಗಾರ ಪ್ರಣಯ ಪ್ರಸಂಗಗಳ ಕೃತಿ ದೊರೆತಿಲ್ಲ ಎಂದು ಎಂವಿಸೀ ಅವರ ಸಮಗ್ರ ಕಥೆಗಳ ಸಂಗ್ರಹಸಂಪುಟದ ಸಂಪಾದಕರು ತಿಳಿಸಿದ್ದಾರೆ. ದೊರೆತಿರುವ ಕಥೆಗಳಲ್ಲಿ ೭೫ ಸ್ವತಂತ್ರಕಥೆಗಳನ್ನು ಜಿಎನ್ ರಂಗನಾಥರು ಪ್ರಕಟಿಸಿದ್ದಾರೆ. ಅವುಗಳಲ್ಲಿ ಅನಾವಾದಿತ ಕಥೆಗಳು ಸೇರಿಲ್ಲ. ಎಂವಿಸೀ ಅವರ ಲಭ್ಯ ಅನುವಾದಿತ ಕಥೆಗಳು ಹೀಗಿವೆ.

೧.ಶಿಲಾಮುಖ (ಹಾಥಾರ್ನಿನ ೩ ಕಥೆಗಳ ರೂಪಾಂತರ)
೨.ಯೌವನಸುಧೆ (ಹಾಥಾರ್ನಿನ ೪ ಕಥೆಗಳ ರೂಪಾಂತರ)
೩.ಗುಂಡಿನೇಟು ಮತ್ತು ಇತರ ಕಥೆಗಳು (ಪುಷ್ಕಿನ್ನಿನ ೫ ಕಥೆಗಳು)
೪.ಸ್ವತಂತ್ರ ಕಥೆ (ಸಂಗ್ರಹಗಳಲ್ಲಿ ಪ್ರಕಟವಾದ ೨ ಕಥೆಗಳು)
ಒಟ್ಟು ಅನುವಾದಿತ ೧೪ ಕಥೆಗಳು ಪ್ರಕಟವಾಗಿವೆ.

ಎಂವಿಸೀ ಅವರ ಅನುವಾದಿತ ಕಥೆಗಳು

ಪ್ರೊ. ಎಂ.ವಿ.ಸೀ. ಅವರ ಸಣ್ಣಕತೆಗಳನ್ನು ಕುರಿತು "ಸಮಗ್ರ ಸಣ್ಣಕತೆಗಳು – ಸಂಪುಟ ೨" ರ ಸಂಪಾದಕರಾದ ಜಿ.ಎನ್. ರಂಗನಾಥರಾವ್ ಅವರು ತಮ್ಮ 'ಸಂಪಾದಕನ ಮಾತು'ಗಳಲ್ಲಿ ಅನುವಾದಿತ ಕಥೆಗಳ ಬಗ್ಗೆ ಹೀಗೆ ಹೇಳಿದ್ದಾರೆ.

"ಪ್ರೊ ಎಂ.ವಿಸೀ ಅವರು ಅಜಮಾಸು ನೂರು ಸಣ್ಣಕಥೆಗಳನ್ನು ಬರೆದಿದ್ದಾರೆ. ಈ ಎಲ್ಲ ಕಥೆಗಳೂ ಎಂಟು ಸಂಕಲನಗಳಲ್ಲಿ ಪ್ರಕಟವಾಗಿವೆ. ಈ ಎಂಟರಲ್ಲಿ ಎರಡು ಅನುವಾದಿತ ಕಥೆಗಳ ಸಂಕಲನಗಳು. ಇವು ರಷ್ಯದ ಹೆಸರಾಂತ ಕವಿ

ಅಲೆಕ್ಸಾಂಡರ್ ಪುಷ್ಕಿನ್ ಮತ್ತು ಅಮೆರಿಕಾದ ಖ್ಯಾತ ಕಥೆಗಾರ ನ್ಯಾಥೇನಿಯಲ್ ಹಾಥಾರ್ನ್ ಅವರ ಅನುವಾದಿತ ಕಥೆಗಳನ್ನೊಳಗೊಂಡಿದೆ. ಇದಲ್ಲದೆ ಎಂವಿಸೀ ಅವರು ಗಾರ್ಕಿ ಹಾಗೂ ಇಟಲಿಯ ಕೊಸಿಮೊ ಗ್ರೆಗೆಯ ಕ್ರಾಂತಿಯ ಕಥೆಗಳನ್ನು ಅನುವಾದಿಸಿದ್ದಾರೆ ಅನುವಾದಿತ ಕಥೆಗಳು ಸುಮಾರು ಹನ್ನೆರಡು"

ಅನುವಾದಿತಕಥೆಗಳನ್ನು ಸಮಗ್ರ ಕಥೆಗಳ ಸಂಪುಟದಲ್ಲಿ ಸೇರಿಸಿಲ್ಲ. ಇದಕ್ಕೆ ಜಿಎನ್. ರಂಗನಾಥರಾವ್ ನೀಡುವ ಕಾರಣ ಇದು. "ಅನುವಾದಿತ ಕೃತಿಗಳು ಸೃಜನಶೀಲ ಲೇಖಕನೊಬ್ಬನ ಅನುಸೃಷ್ಟಿಯಾಗಬಹುದೇ ಹೊರತು ಸ್ವಂತರಚನೆಗಳಾಗಲಾರವು. ಪರಭಾಷಾ ಕೃತಿಯೊಂದರ ಮರುಸೃಷ್ಟಿಯಲ್ಲೂ ಅನುವಾದಕ ತನ್ನ ಭಾಷೆಯ ಜಾಯಮಾನಕ್ಕೆ ಒಗ್ಗಿಸಿಕೊಳ್ಳುವ ಸ್ವಾತಂತ್ರ್ಯವಿದೆ".

ಅನುವಾದಿತ ಕಥೆಗಳು

ಜಿ. ರಂಗನಾಥರಾವ್ ಅವರು ಸುಮಾರು ೧೨ ಎಂದಿದ್ದಾರೆ. ಅಂದಾಜಿನಂತೆ ನೂರಕ್ಕೂ ಹೆಚ್ಚಾಗಿ ಕಥೆಗಳನ್ನು ಬರೆದಿರುವ ಎಂವಿಸೀ ಅವರು ೨೦ ಅನುವಾದಿತ ಕಥೆಗಳನ್ನು ಬರೆದಿದ್ದಾರೆ. ಎಂದು ಊಹಿಸಬಹುದು.

ಕಥೆಗಳ ಸಂಖ್ಯೆ ಎಷ್ಟೇ ಇರಲಿ ಕನ್ನಡದ ಅನುವಾದ ಸಾಹಿತ್ಯದ ರಾಗದಲ್ಲಿ ಉಲ್ಲೇಖನೀಯ ವ್ಯಕ್ತಿ ಆಗಿದ್ದಾರೆ ಎನ್ನಬಹುದು. ಎಂವಿಸೀ ಅವರು ಅನುವಾದಿತ ಕಥೆಗಳು, ರಷ್ಯನ್, ಅಮೆರಿಕನ್ ಇಟಲಿ ದೇಶದ ಕಥೆಗಳಾಗಿವೆ. ವಿದೇಶೀ ಕಥಾ ಸಾಹಿತ್ಯ ಓದುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ ಇತ್ತು ಎಂಬುದಕ್ಕೆ ಈ ಕಥೆಗಳು ಸಾಕ್ಷಿ ಆಗಿದೆ.

ಕನ್ನಡದ ಕಥಾ ಪ್ರಪಂಚದಲ್ಲಿ ಹಲವು ಬಗೆ ಕಥಾ ಸಂಗ್ರಹಗಳಿವೆ. ಸಂಸ್ಕೃತ ಕಥಾ ಸಾಹಿತ್ಯದಿಂದ, ಪಂಚತಂತ್ರ, ಕಥಾಸಾಗರ, ರಾಮಾಯಣ, ಭಾರತ ಸಂಸ್ಕೃತನಾಟಕಗಳ ಕಥೆಗಳು ಕನ್ನಡಕ್ಕೆ ಸಂಗ್ರಹರೂಪದಲ್ಲಿ ಪೂರ್ಣರೂಪದಲ್ಲಿ ಅನುವಾದಿತವಾಗಿವೆ. ಸಾಕಷ್ಟು ಪ್ರಮಾಣದಲ್ಲಿ ತೆಲುಗು, ತಮಿಳು, ಮಲೆಯಾಳಂ, ಬಂಗಾಳಿ, ಹಿಂದಿ ಇಂಗ್ಲೀಷ್ ಮೊದಲಾದ ಭಾಷೆಗಳಿಂದ ಕನ್ನಡಕ್ಕೆ ಕಥೆಗಳು ಬಂದಿವೆ. ಇವುಗಳಲ್ಲಿ ಬಹುಶಃ ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ಕಥೆಗಳ ಪ್ರಮಾಣ ಹೆಚ್ಚಾಗಿದೆ. ಇತರ ಭಾಷೆಗಳ ಕಥೆಗಳು ಕನ್ನಡಕ್ಕೆ ಎಷ್ಟು ಯಾವ ರೀತಿ ಬಂದಿದೆ. ಎಂಬುದು ಸಂಶೋಧನ ಪ್ರಬಂಧದ ವಿಷಯವಾಗಿದೆ.

ಅನುವಾದಿತ ಕಥೆಗಳ ವಿಮರ್ಶೆ ಅಲ್ಲಲ್ಲಿ ಬಂದಿದೆ. ಅನುವಾದಿತ ಕಥೆ ಕಾದಂಬರಿಗಳ ಮೇಲೆ ಬಂದಷ್ಟು ವಿಮರ್ಶೆ ಇತರ ಸಾಹಿತ್ಯ ಪ್ರಸಾರಗಳ ಮೇಲೆ ಬಂದಂತಿಲ್ಲ.

ಅನುವಾದಿತ ಸಣ್ಣಕಥೆಗಳು

ನ್ಯಾಥಾನಿಯಲ್ ಹಾಥಾರ್ನ್ (೧೮೦೪-೧೮೬೪) ಅಮೆರಿಕಾ ದೇಶದ ಶ್ರೇಷ್ಠ ಕಥೆಗಾರ ಮತ್ತು ಕಾದಂಬರಿಕಾರ.

ಹಾಥಾರ್ನ್ ನಾಲ್ಕು ಕಾದಂಬರಿಗಳನ್ನು ಮೂರು ಕಥಾಸಂಗ್ರಹಗಳನ್ನು ಬರೆದಿದ್ದಾನೆ. ನಾಲ್ಕು ಕಾದಂಬರಿಗಳ ಪೈಕಿ 'ದಿ ಸ್ಕಾರ್‌ಲೆಟ್ ಲೆಟರ್' (ರಕ್ತಾಕ್ಷರ) ೧೮೫೦ 'ದಿ ಹೌಸ್ ಆರ್ಫ ದಿ ಸೆವನ್ ಗೇಬಲ್ಸ್' (ಏಳು ಇಪ್ಪಾರಿನಮನೆ ೧೮೫೧) ಬಹಳ ಪ್ರಸಿದ್ಧ ಕಾದಂಬರಿಗಳು. ಅವನ ಕಥಾ ಸಂಕಲನಗಳನ್ನು ಮೆಚ್ಚಿದ ಎಂವಿಸೀ ಅವರು ೭ ಕಥೆಗಳನ್ನು ಒಂದು ಕಾದಂಬರಿಯನ್ನು ಅನುವಾದಿಸಿದ್ದಾರೆ. ಶಿಲಾಮುಖ ಕಥಾಸಂಗ್ರಹದಲ್ಲಿ (೧೯೩೬) ಭಾರತೀ ಸಾಹಿತ್ಯ ಮಂದಿರ ಬೆಂಗಳೂರು ಈ ಸಂಕಲನದಲ್ಲಿ ಮೂರು ಹಾಥಾರ್ನಿನ ಕಥೆಗಳನ್ನು ಅನುವಾದಿಸಿದ್ದಾರೆ. ಯೌವನಸುಧೆ ಕಥಾಸಂಕಲನದಲ್ಲಿ ಹಾಥಾರ್ನಿನ ೪ ಕಥೆಗಳನ್ನು ರೂಪಾಂತರ ಮಾಡಿದ್ದಾರೆ. (೧೯೪೬ ರಾಘನಪ್ರಕಾಶನ) ಗುಂಡಿನೇಟು ಮತ್ತು ಇತರ ಕಥೆಗಳು ಸಂಕಲನದಲ್ಲಿ (೧೯೬೬ ಕರ್ನಾಟಕ ಸಂಘ, ಬೆಂಗಳೂರು) ೫ ಪುಷ್ಕಿನ್ನಿನ ಕಥೆಗಳನ್ನು ಅನುವಾದಿಸಿದ್ದಾರೆ ರಾಬಿನ್ ಸನ್ ಕ್ರೂಸೋ ಮಕ್ಕಳಿಗಾಗಿ ಅನುವಾದಿಸಿದ ಕಥೆ.

ಹಾಥಾರ್ನಿನ ಕಥೆಗಳ ಬಗ್ಗೆ ಎಂವಿಸೀ ಹೇಳಿದ ಮಾತುಗಳು ಗಮನಾರ್ಹವಾಗಿದೆ. ಹಾಥಾರ್ನ್ ತನ್ನ ಕಥೆ ಕಾದಂಬರಿಗಳಲ್ಲಿ ಸಮಕಾಲೀನ ಸಣ್ಣಕಥೆಯ ಲಕ್ಷಣಗಳನ್ನಾಗಲಿ ಕಾದಂಬರಿಯ ಲಕ್ಷಣಗಳನ್ನಾಗಲಿ ಕಟ್ಟುನಿಟ್ಟಾಗಿ ಪಾಲಿಸ ಹೊರಟಿಲ್ಲ. ವಾಸ್ತವವಾಗಿ ಅವನು ತನ್ನ ಕಥೆಗಳನ್ನು ಟೇಲ್ಸ್ (Tales) ಎಂದು ಕರೆದಿದ್ದಾನೆ, ಸಣ್ಣ ಕತೆ (Short Story) ಎಂದು ಕರೆದಿಲ್ಲ.

ವಾಸ್ತವವಾಗಿ ತನ್ನ ಕಥೆಗಳನ್ನು ಮಾನವ ಹೃದಯವನ್ನು ಪ್ರತಿಬಿಂಬಿಸುವ ರೂಪಕ ಕಥೆಗಳು (Allegories of the heart) ಎಂದೇ ಕರೆದಿದ್ದಾನೆ. ಹೀಗೆ ತನ್ನ ನಂಬಿಕೆಗಳಿಗೂ ಭಾವನೆಗಳಿಗೂ ರೂಪು ಕೊಡಲು ವರ್ತಮಾನಕಾಲದ ಸೂಕ್ಷ್ಮ ವಾಸ್ತವಜಗತ್ತಿಗಿಂತಲೂ ಗತಕಾಲದ ಅಸ್ಪಷ್ಟ ಜಗತ್ತನ್ನು ಅವಲಂಬಿಸುವುದು. ಅನುಕೂಲವಾಗಿ ಪರಿಣಾಮಕಾರಿಯಾಗಿ ಅವನಿಗೆ ಕಂಡಿತು. ಹಾಥಾರ್ನ್‌ನಿಗೆ ಕಥೆ ಹೇಳುವುದಕ್ಕಿಂತ ತನ್ನ ಪೂರ್ವಜರ ಕಾಲದ ನ್ಯೂ ಇಂಗ್ಲೆಂಡಿನ ಜನಜೀವನ ಮಾಟವಿದ್ಯೆ, ವಶೀಕರಣ ವಿದ್ಯೆ ಮುಂತಾದ ಅದ್ಭುತ ಅಲೌಕಿಕ ಸಂಗತಿಗಳ ಬಗೆಗೆ ಆಕಾಲದಲ್ಲಿ ಪ್ರಚಾರವಾಗಿದ್ದ ಮೂಢನಂಬಿಕೆಗಳೂ ಆಗಿನ ಜನರ ಮತ ಶ್ರದ್ಧೆಗಳು ಇವುಗಳ ಚಿತ್ರಣವೆ ಅವನ ಕಥೆ ಕಾದಂಬರಿಗಳ ಹಂದರವಾಗಿತ್ತು. ಇದರ ಮೇಲೆ ಹಬ್ಬುತ್ತಿತ್ತು ಅವನ ಭಾವನೆಗಳ ಬಳ್ಳಿ, ನೀತಿ ಬೋಧೆಯ ಹೂಗಳು." ಹಾಥಾರ್ನಿನ ಕಥೆಗಳನ್ನು ಅನುವಾದಿಸಿರುವ ಕಥಾಸಂಕಲನಗಳಾಗಲಿ ಪುಷ್ಕಿನ್ನನ ಕಥೆಗಳಾಗಲಿ, ಸಂಪಾದಕರಿಗೆ ಲಭ್ಯವಾಗದಿರುವುದರಿಂದ (ಸಮಗ್ರ ಸಣ್ಣ ಕಥೆಗಳ ಸಂಪುಟದಲ್ಲೂ ಇದು ಸೇರಿಲ್ಲ) ಆ ಕಥೆಗಳ ಬಗ್ಗೆ ಹೆಚ್ಚಿನ ವಿವರ ಹೇಳಲಾಗುತ್ತಿಲ್ಲ.

ಎಂವಿಸೀ ಅವರಿಗೆ ಚಿಕ್ಕಂದಿನಿಂದ ಹಾಥಾರ್ನಿನ ಕೃತಿಗಳ ಕಡೆಗೆ ಒಲವು ಮೂಡಿತ್ತು. ಆಕಾರಣದಿಂದ ಅವನ ಕೆಲವು ಕಥೆಗಳನ್ನು ರೂಪಾಂತರ ಮಾಡಿ ಪ್ರಶಂಸಿದ್ದೇನೆ ಎನ್ನುತ್ತಾರೆ. ರೂಪಾಂತರದಲ್ಲಿ ವಸ್ತು ಮೂಲಕೃತಿಯದೇ ಆದರೂ ಅದರ ನಿರೂಪಣಾ ವೈಖರಿ ಭಾಷೆ ಕನ್ನಡದಲ್ಲಿ ಅನುವಾದಕನ ಸ್ವಂತದ್ದಾಗಿರುತ್ತದೆ.

ಈ ದೃಷ್ಟಿಯಿಂದ ಎಂವಿಸೀ ಅವರ ಅನುವಾದಿತ ಕಥೆಗಳನ್ನು ಪರಿಶೀಲಿಸುವ ಅಗತ್ಯವಿದೆ. ನವೋದಯಕಾಲದಲ್ಲಿ ಸ್ವತಂತ್ರ ಕಥೆಗಳನ್ನು ರಚಿಸಿದವರಲ್ಲಿ ಬಹುಮಂದಿ ಅನುವಾದಗಳನ್ನು ಮಾಡಿದ್ದಾರೆ. ಈ ಪೈಕಿ ಎಂವಿಸೀ ಸಹ ಒಬ್ಬರು. ಇದಕ್ಕೆ ಹಲವಾರು ಕಾರಣಗಳಿವೆ. ಒಂದು ಕಾರಣವೆಂದರೆ ಆ ಕಾಲದ ಅನೇಕ ನವೋದಯ ಸಾಹಿತಿಗಳು ಕಾಲೇಜು ವಿದ್ಯಾಭ್ಯಾಸ ಮಾಡಿದವರು ಸಾಕಷ್ಟು ಇಂಗ್ಲಿಷ್ ಸಾಹಿತ್ಯ ಅಧ್ಯಯನ ಮಾಡುತ್ತಿದ್ದರು. ಹೀಗಾಗಿ ಇಂಗ್ಲಿಷ್ ಸಾಹಿತ್ಯ ಅಧ್ಯಯನ ಮಾಡುತ್ತಿದ್ದರು. ಇಂಗ್ಲಿಷ್ ಸಾಹಿತ್ಯವನ್ನು ಮೆಚ್ಚಿ ಅದನ್ನು ಕನ್ನಡಿಗರಿಗೆ ನೀಡಬೇಕೆಂದು ಬಯಸುತ್ತಿದ್ದರು. ಆಕಾರಣದಿಂದ ಆ ಕಾಲದಲ್ಲಿ ಇಂಗ್ಲಿಷ್ ಕೃತಿಗಳು ನೇರ ಅನುವಾದದ ಮೂಲಕ ಮತ್ತು ರೂಪಾಂತರಗಳ ಮೂಲಕ ಕಥೆ, ಕಾದಂಬರಿ ನಾಟಕ ಕಾವ್ಯ ಕವಿತೆ ಕನ್ನಡಕ್ಕೆ ಬಂದಿತು. ಈ ಪೈಕಿ ಕಥೆ ಕವಿತೆ ಕಾದಂಬರಿಗಳನ್ನು ಕನ್ನಡಕ್ಕೆ ತಂದ ಪ್ರಮುಖರಲ್ಲಿ ಎಂವಿಸೀ ಒಬ್ಬರು.

ಯೌವನ ಸುಧೆ

ನ್ಯಾಥಾನಿಯಲ್ ಹಾಥಾರ್ನ್ (೧೮೦೪-೧೮೬೪) ಹತ್ತೊಂಬತ್ತನೇ ಶತಮಾನದ ಅಮೆರಿಕಾದ ಸುಪ್ರಸಿದ್ಧ ಕತೆಗಾರ. ಅವನ ಕೃತಿಗಳನ್ನು ಓದಿ ಮೆಚ್ಚಿಕೊಂಡ ಎಂವಿಸೀ ಅವರು ಯೌವನಸುಧೆ ಕಥಾ ಸಂಕಲನದಲ್ಲಿ ೪ ಕಥೆಗಳನ್ನು ಅನುವಾದಿಸಿದ್ದಾರೆ. ಅವುಗಳ ವಿವರ ಹೀಗಿದೆ.

೧. ಯೌವನ ಸುಧೆ (Dr. Heidegger's Expirement)
೨. ಮುದ್ದುಮಲ್ಲ (David Swan)
೩. ಹೆಬ್ಬಯಕೆಯ ದಾರಿಹೋಕ (The Ambitions guest)
೪. ಭಾಗ್ಯತ್ರಯ (The Threefold destiney)

ಫ್ರೆಡರಿಕ್ ವಾರ್ನ್ ಅಂಡ್ ಕಂಪನಿ ಲಂಡನ್ ೧೮೫೧ರಲ್ಲಿ ಪ್ರಕಟಿಸಿದ ಟ್ವೈಸ್‌ಟೋಲ್ಡ್‌ಟೇಲ್ಸ್ (ಫಸ್ಟ್ ಸೀರೀಸ್) ಕಥಾಸಂಕಲನದಿಂದ ಮೇಲ್ಕಂಡ ೪ ಕಥೆಗಳನ್ನು ತಾವು ಮೆಚ್ಚಿದ ಆಯ್ಕೆ ಮಾಡಿಕೊಂಡು. ಕನ್ನಡಕ್ಕೆ ಅನುವಾದಿಸಿದಂತೆ ೧೫೦ ವರ್ಷಗಳ ಹಿಂದಿನ ಈ ಗ್ರಂಥವನ್ನು ಅವರು ಹಳೆಯ ಪುಸ್ತಕದ ಅಂಗಡಿಯಲ್ಲಿ ಕೊಂಡು ಓದಿ ಮೆಚ್ಚಿ ಅನುವಾದಿಸಿದ್ದಾರೆ. (ಇನ್ನು ಮೂರು ಕಥೆಗಳನ್ನು ಶಿಲಾಮುಖ ಎಂಬ ಹೆಸರಿನ ಕಥಾಸಂಕಲನದಲಿ ಅನುವಾದಿಸಿ ಪ್ರಕಟಿಸಿದ್ದು. ಆ ಗ್ರಂಥವನ್ನು ಎಷ್ಟೇ ಹುಡುಕಿದರೂ ಸಿಗದಿದ್ದರಿಂದ ಈ ಸಂಪುಟದಲ್ಲಿ ಸೇರಿಸಲಾಗಲಿಲ್ಲ ಮತ್ತು ಆ ಬಗ್ಗೆ ಬರೆಯಲಾಗಿಲ್ಲ)

'ಯೌವನಸುಧೆ' (ಮತ್ತು ಇತರ ಕಥೆಗಳನ್ನು) ಸ್ವತಂತ್ರ ಅನುವಾದಿತ ಕಥೆಗಳೆನ್ನಬಹುದು. ಮೂಲದ ವಾಕ್ಯಸರಣಿ ಮತ್ತು ಪದಸರಣಿಗಳನ್ನು ಅನುಸರಿಸಿದ್ದರೂ. ಹೆಸರುಗಳನ್ನೂ ಕನ್ನಡೀಕರಣ ಮಾಡಿದ್ದಾರೆ. ಪದಶಃ ಅನುವಾದ ಮಾಡದೆ ವಾಕ್ಯ ವಾಕ್ಯಗಳ ಭಾವಾನುವಾದ ಮಾಡಿದ್ದಾರೆ. ಮಾದರಿಗೆ ಒಂದು ಸಾಲನ್ನು ಹೋಲಿಸಬಹುದು.

ಮೃತ್ಯುಂಜಯ ಪಂಡಿತನು ಒಬ್ಬ ವಿಚಿತ್ರ ವ್ಯಕ್ತಿ. ಅವನು ಒಮ್ಮೆ ತನ್ನ ನಾಲ್ಕುಜನ ಮಿತ್ರರನ್ನು ಮನೆಗೆ ಬರಹೇಳಿದ್ದನು. (That very singular man old Dr. Herdegger, once invited four Venerable friends to meet him in his study.

There were those white bearded gentlmen, Mr. Medbourme, Colonel Killigrew, and Mr Gaseoigne, and a whithered gentle woman, whose name was the widow wycherly.

ಅವರಲ್ಲಿ ವಸುಪಾಲ, ಸಮರಸಿಂಹ, ವಿಜಯವರ್ಮ ಈ ಮೂವರು ವೃದ್ಧರಲ್ಲದಿದ್ದರೂ ವೃದ್ಧಾಪ್ಯದ ಹೊಸಿಲು ಹತ್ತಿದ್ದರು. ತಲೆಗೂದಲು ಆಗಲೇ ಬೆಳ್ಳಗಾಗಿತ್ತು. ನಾಲ್ಕನೆಯ ವ್ಯಕ್ತಿ ಇಂದಿರೆ ತೀರ ಅಷ್ಟು ಮದುಕಿ ಅಲ್ಲದಿದ್ದರೂ ಅವಳ ಮುಖ ಸುಕ್ಕುಗಟ್ಟಿತ್ತು...

ಯೌವನಸುಧೆ ಈ ಕಥಾ ಸಂಕಲನದ ಮೊದಲ ಕಥೆಯ ಹೆಸರು. ಕಥಾಸಂಕಲನದ ಹೆಸರೂ ಅದೇ. ಭಾವನಾ ಲೋಕದ ರಮ್ಯ ಕಥೆ. ಅರ್ಥಪೂರ್ಣ ಕಥೆ ಇದು. ಮೃತ್ಯುಂಜಯ ಪಂಡಿತನ ಜತೆ ವಸುಪಾಲ, ಸಮರಸಿಂಹ ವಿಜಯವರ್ಮ ಇಂದಿರೆ ಎಂಬ ನಾಲ್ವರು ಮಿತ್ರರು ವೃದ್ಧಾಪ್ಯದ ಹೊಸ್ತಿಲಲ್ಲಿ ಕಾಲಿಡುತ್ತಿದ್ದವರು ಅವರಾಗಿದ್ದರು. ಅನೇಕ ಪ್ರಯೋಗಗಳಲ್ಲಿ ನಿರತನಾಗಿದ್ದ ಮೃತ್ಯುಂಜಯನು ಅಂದು ಗೆಳೆಯರಿಗೆ ಹೇಳಿದನು. "ಇಂದು ನಾನೊಂದು ಹೊಸ ಪ್ರಯೋಗ ಮಾಡುತ್ತಿರುವೆ ನೀವೆಲ್ಲಾ ಅದಕ್ಕೆ ನೆರವು ನೀಡಬೇಕು. ಅದೇನೆಂದರೆ "ನನ್ನ ಪರಿಚಿತ ಪಂಡಿತನೊಬ್ಬನು ಈ ಸ್ಫಟಿಕಪಾತ್ರೆಯಲ್ಲಿ ಯೌವನಸುಧೆ ಕಳಿಸಿದ್ದಾನೆ. ಇದನ್ನು ಕುಡಿದರೆ ಯೌವನ ಮರುಕಳಿಸುತ್ತದೆ ನನಗೆ ಚಿಕ್ಕವನಾಗಲು ಇಷ್ಟವಿಲ್ಲ. ನೀವೆಲ್ಲ ಕುಡಿದು ಇದರ ಸತ್ಯಾಸತ್ಯತೆಗೆ ಸಾಕ್ಷಿಯಾಗಬೇಕು" ಎಂದು ಹೇಳಿದಾಗ ಆ ನಾಲ್ವರು ಮಿತ್ರರು ಕುಡಿದರು. ಕುಡಿಯುವ ಮುಂಚೆ ಪಂಡಿತ ಹೇಳಿದ "ನೀವು ಕುಡಿದ ಮೇಲೆ ಈಗಿನ ಕಾಲದ ತರುಣ ತರುಣಿಯರಿಗೆ ಆದರ್ಶವಂತರಾಗಿ ನಡೆದುಕೊಳ್ಳ ಬೇಕಾಗುತ್ತದೆ. ಇಲ್ಲದಿದ್ದರೆ. ಪಾಪಕಾರ್ಯ ಮಾಡಿದಂತಾಗುತ್ತದೆ." ಎಂದು ಎಚ್ಚರಿಸಿದನು. ಒಮ್ಮೆ ಹಿಂದೆ ಯೌವನದಲ್ಲಿ ಮಾಡಿದ ತಪ್ಪುಗಳನ್ನು ನಾವೇಕೆ ಮಾಡುತ್ತೇವೆ ಮತ್ತೆ ಇವನಿಗೆ ಇಷ್ಟು ತಿಳಿಯದಲ್ಲಾ ಎಂದು ನಕ್ಕರು. 'ಒಪ್ಪಿದೆವು ನಿನ್ನ ಮಾತನ್ನು' ಎಂದರು. ಯೌವನಸುಧೆಯನ್ನು ಕುಡಿದರು. ಮತ್ತೆ ಮತ್ತೆ ಕುಡಿದರು. ಯೌವ್ವನೋದಯವಾಗ ತೊಡಗಿತು. ಅವರಲ್ಲಿ ಮುಪ್ಪು ಹಿಂದಕ್ಕೆ ಸರಿಯಲಾರಂಭಿಸಿತು. ಇಂದಿರೆ ಕನ್ನಡಿ ನೋಡಿಕೊಂಡಳು ಯುವತಿ ಆಗಿದ್ದಳು. ಉಳಿದವರು ಯುವಕರಾಗಿದ್ದರು. ಇಂದಿರೆ, ಮುದ್ದು ಮುದುಕರೆ ಏಳಿ ಎದ್ದೇಳಿ ನನ್ನೊಡನೆ ನಲಿದಾಡಿ ಬನ್ನಿ ಕುಣಿದಾಡಿ ಬನ್ನಿ ಎಂದು ಕರೆದಳು. ಪಂಡಿತ ಹೊಸ ಪ್ರಾಯದ ಮೂವರಿದ್ದಾರೆ ನಾನೇಕೆ ಎಂದು ಶಾಂತಚಿತ್ತದಿಂದ ಹೇಳಿದಾಗ ಉಳಿದ ಮೂವರು ಅವಳೊಡನೆ ಒಬ್ಬರೊಡನೆ ಇನ್ನೊಬ್ಬರು ಸ್ಪರ್ಧಿಸಿ ಮೇಲೆ ಬಿದ್ದು ವರ್ತಿಸತೊಡಗಿದರು. ಆಕೆ ಮೋಹಿನಿ ರಾಕ್ಷಸರಿಗೆ ಚಳ್ಳೆಹಣ್ಣು ತಿನ್ನಿಸುವಂತೆ ಆಟವಾಡಿಸತೊಡಗಿದಳು. ಆ ಗೊಂದಲದಲ್ಲಿ ಸ್ಫಟಿಕಪಾತ್ರೆ ಉರುಳಿ ಯೌವನಸುಧೆ

ನೆಲದ ಮೇಲೆ ಚೆಲ್ಲಾಡಿತು. ಪಂಡಿತನ ಕೈಲಿದ್ದ ಅವನ ಪ್ರಿಯೆಯಿತ್ತ ೫೦ ವರ್ಷ ನಸುನಗುತ್ತಿದ್ದ ಗುಲಾಬಿ ಬಾಡತೊಡಗಿತ್ತು. ಆಗ ನೆಲದ ಮೇಲೆ ಚೆಲ್ಲಿದ ಯೌವನಸುಧೆ ಸೋಂಕಿದ ಚಿಹ್ನೆಯೆಂದು ಪಂಡಿತನ ತಲೆ ಮೇಲೆ ಕುಳಿತದ್ದು ಹಾರಿ ನೆಲದ ಮೇಲೆ ಬಿತ್ತು. ಯೌವನೋನ್ಮತ್ತರಾದವರು ಮದವಿಳಿಯುತ್ತಾ ಮತ್ತೆ ಮುದುಕರಾದರು. ಆಗ ಪಂಡಿತ ಹೇಳಿದನು. ಯೌವನ ಸುಧೆ ನೆಲದಪಾಲಾಗಿದೆ. ನಾನದಕ್ಕೆ ಕೊರಗುವುದಿಲ್ಲ ನನ್ನ ಮನೆಯ ಮುಂದೆಯೇ ಅದರ ಬಗ್ಗೆ ಉಕ್ಕಿ ಹರಿದರೂ ನನ್ನ ತುಟಿಗಳನ್ನು ಕೂಡ ಅದಕ್ಕೆ ಸೋಂಕಿಸುವುದಿಲ್ಲ. ಅದು ನಿರ್ಮಿಸಿಕೊಡುವ ಯೌವನಭ್ರಮೆ ವರ್ಷಗಟ್ಟಲೆ ನಿಂತಿರುವುದಾದರೂ ನಾನು ಅದನ್ನೊಲ್ಲೆ. ನೀವು ನನಗೆ ಇಂದು ಕಲಿಸಿಕೊಟ್ಟ ಪಾಠ ಹಾಗಿದೆ” ಎಂದನು.

ಆದರೆ ಆ ಪಾಠ ಅವರಿಗೆ ಬೇಕಿರಲಿಲ್ಲ. ಅವರು ನಾಲ್ವರು ಯೌವನಸುಧೆಯನ್ನು ದಿನಾ ಹೀರಲು ಅದಕ್ಕಾಗಿ ಹಿಮವತ್ ಪರ್ವತಕ್ಕೆ ಹೋಗಲು ನಿರ್ಧರಿಸಿದರು.

ನ್ಯಾಥಾನಿಯಲ್ ಹಾಥಾರ್ನ್ ಭಾರತೀಯ ವೇದಾಂತದಲ್ಲಿ ಹೇಳುವುದನ್ನೇ ಹೇಳಿದಂತಿದೆ. ಯೌವನ ಆಕರ್ಷಣೆ ಒಂದು ಭ್ರಮೆ, ಕ್ಷಣಿಕ ಸುಖ ಮತ್ತು ಮನುಷ್ಯನನ್ನು ಅಡ್ಡದಾರಿಗೆ ಎಳೆಯುತ್ತದೆ ಆದರೂ ಅದರ ಆಕರ್ಷಣೆ ಅದಮ್ಯ. ಪಂಡಿತನ ಹಾಗೆ ಯೌವನದ ಬಗ್ಗೆ ಎಚ್ಚರಿಕೆ ತಳೆದು ಅದರಿಂದ ದೂರವಿರಬೇಕು. ಆದರೆ ಜನ ಅದಕ್ಕೆ ಸಿದ್ದರಿಲ್ಲ. ಆ ಭ್ರಮೆಯಲ್ಲೇ ಇರಲು ಬಯಸುತ್ತಾರೆ ವಸುವಾಲ ‘ಸಮರ ಸಿಂಹ’ ವಿಜಯವರ್ಮ ಇಂದಿರೆ ನಾಲ್ವರೂ ಯೌವನದ ಅನಾಹುತಗಳಿಗೆ ಜೀವನದಲ್ಲಿ ಒಳಗಾಗಿದ್ದರೂ ಪಾಠ ಕಲಿಯಲಿಲ್ಲ. ಇಳಿವಯಸ್ಸಿನಲ್ಲೂ ಅನುಭವ ಮರುಕಳಿಸಿದಾಗಲೂ ಅದೇ ರೀತಿ ವರ್ತಿಸಿದರು. ಈಗ ಯೌವನಸುಧೆ ಕುಡಿದು ಅದರ ನಶ್ವರಾನುಭವ ಪಡೆದರೂ ಮತ್ತೆ ಮಾದಕ ದ್ರವ್ಯವ್ಯಸನಿ ಅದನ್ನೇ ಬಯಸುವಂತೆ ಬಯಸಿ ಹಿಮಾಲಯದಲ್ಲಿ ಆ ಯೌವನಸುಧೆಯ ಬಗ್ಗೆ ಹುಡುಕಲು ಹೊರಟರು ಅರ್ಥಪೂರ್ಣ ಹಾಗೂ ಧ್ವನಿಪೂರ್ಣ ಕಥೆ. ಇದನ್ನು ಫ್ಯಾಂಟಿಸಿ ಎಂದು ಲೇಖಕ ಕರೆದಿದ್ದರೂ ವಾಸ್ತವ ಸತ್ಯವನ್ನು ಪ್ರತಿನಿಧಿಸುತ್ತದೆ.

ಮುದ್ದು ಮಲ್ಲ

ಮುದ್ದುಮಲ್ಲ ಡೇವಿಡ್‌ಸ್ವಾನ್ ಎಂಬ ಹೆಸರಿನ ಕಥೆಯ ಅನುವಾದ.

ನಮ್ಮ ಜೀವನದಲ್ಲಿ ಎಷ್ಟೋ ಘಟನೆಗಳು ನಡೆಯುತ್ತಿವೆ. ಅವುಗಳ ಅರಿವು ನಮಗಿರುವುದಿಲ್ಲ. ಮುಂದೆ ಏನೇನು ಘಟನೆಗಳು ನಡೆಯುತ್ತದೆ ಎಂದು ಅರಿವಾದರೆ ಅತ್ಯಾಶೆಯ ಶೀಖರವನ್ನೇರಿ ನಿರಾಶೆಯ ಪ್ರಪಾತಕ್ಕೇ ಬೀಳುವೆವು. ನಮ್ಮ ಜೀವನಪಥದಲ್ಲಿ ಅಗೋಚರವಾಗಿ ಹಾದು ಹೋಗುವ ಘಟನೆಗಳು ಒಂದು ನಿಯಮಕ್ಕೆ ಒಳಪಟ್ಟಿರುತ್ತವೆ. ಅದರಿಂದ ಪ್ರಪಂಚದಲ್ಲಿ ಸುವ್ಯವಸ್ಥೆ ನೆಲಸಿರುತ್ತದೆ. ಎಂಬ ಸಂಗತಿಯನ್ನು ಈ ಕಥೆ ಮಾರ್ಮಿಕವಾಗಿ ನಿರೂಪಿಸಿದೆ.

ಮುದ್ದುಮಲ್ಲನೆಂಬ ಯುವಕನನ್ನು ಅವನ ಜವಳಿವರ್ತಕ ಚಿಕ್ಕಪ್ಪ ತನ್ನ ಅಂಗಡಿಯಲ್ಲಿಟ್ಟುಕೊಂಡು ಅಭಿವೃದ್ಧಿಗೆ ತರಬೇಕೆಂದು ಊರಿಗೆ ಬರಲು ಹೇಳಿದ್ದನು. ಹಳ್ಳಿಯಿಂದ ೮-೧೦ ಮೈಲಿ ನಡೆದು ಚಿಕ್ಕಪ್ಪನ ಊರಿಗೆ ಬಸ್ಸು ಹಿಡಿಯಲು

ಕಾಯುತ್ತಾ ಮಲಗಿ ನಿದ್ರೆ ಹೋದನು. ಆದಾರಿಯಲ್ಲಿ ಕುದುರೆಗಾಡಿಗಳು ಪಾದಚಾರಿಗಳು ಸಾಗುತ್ತಿದ್ದರು. ಕೆಲವರು ಅವನಂತೆಯೇ ಬಸ್ಸಿಗೆ ಕಾಯುತ್ತಿದ್ದರು. ಮುದ್ದುಮಲ್ಲ ಮೈಮರೆತು ಗಾಢನಿದ್ರೆಯಲ್ಲಿದ್ದನು.

ಆಗ ಸುಂದರ ಯುವಕ ಮುದ್ದುಮಲ್ಲ ನಿದ್ರಿಸುತ್ತಿದ್ದಾಗ ಅವನನ್ನೂ ಕಂಡವರ ಪ್ರತಿಕ್ರಿಯೆಗಳೇ ಈ ಕಥೆಯವಸ್ತು. ದಾರಿ ಪಕ್ಕದ ಹೊಂಗೆಮರದ ನೆರಳಿನಲ್ಲಿ ಲೋಕದ ಪರಿವೆಯಿಲ್ಲದೆ ಪ್ರಶಾಂತನಾಗಿ ಪರವಶನಾಗಿ ನಿದ್ರಿಸುತ್ತಿದ್ದ ಮುದ್ದು ಯುವಕ ಮುದ್ದುಮಲ್ಲನನ್ನು ನೋಡಿದ ಮಧ್ಯಪಾನ ನಿರೋಧ ಚಳುವಳಿ ನಾಯಕನೊಬ್ಬ ಕುಡಿದುಬಿದ್ದ ಕುಡುಕ ಎಂದುಕೊಂಡರೆ, ಇವನ ನಿದ್ರಾಸುಖ ಭಾಗ್ಯ ತಮಗಿಲ್ಲವೇ ಎಂದುಕೊಂಡರು ಮತ್ತೆ ಕೆಲವರು. ಅಷ್ಟು ಹೊತ್ತಿಗೆ ಎತ್ತಿನಗಾಡಿ ಚಕ್ರದ ಕಡಾಣಿ ಕಳಚಿಬಿದ್ದು ಅದನ್ನು ಜೋಡಿಸುತ್ತಿದ್ದಾಗ ವರ್ತಕನ ಹೆಂಡತಿ ಎಷ್ಟು ಮುದ್ದು ಮುಖ, ಸುಂದರ ಯೌವನ ಎಂದುಕೊಂಡು ಅವನ ಮೇಲೆ ಬೀಳುತ್ತಿದ್ದ ಬಿಸಿಲನ್ನು ಮರದ ಕೊಂಬೆಯನ್ನು ಜರುಗಿಸಿ ನೆರಳು ಮಾಡಿದಳು ಅವಳು ನುಡಿದದ್ದು ಗಾಢನಿದ್ರೆಯ ಮುದ್ದು ಮಲ್ಲನಿಗೆ ಅರಿವೇ ಇಲ್ಲ. ವರ್ತಕನಿಗೆ ಅಪಾರ ಆಸ್ತಿ ಇತ್ತು. ಇದ್ದ ಮಗ ಬಾಲ್ಯದಲ್ಲಿ ತೀರಿಹೋಗಿದ್ದನು. ಇವನನ್ನು ದತ್ತು ತೆಗೆದುಕೊಳ್ಳಬಹುದಲ್ಲ ಎನ್ನಿಸಿತು. ಗಾಡಿ ಸರಿಮಾಡಿದ ಮೇಲೆ ಅವರು ಮುಂದೆ ಸಾಗಿದರು.

ಸ್ವಲ್ಪ ಹೊತ್ತಿನನಂತರ ಬಣ್ಣದ ಚಿಟ್ಟೆಯ ಬೆನ್ನಟ್ಟುತ್ತಾ ಒಬ್ಬ ಚೆಲುವೆ ಯುವತಿ ಅಲ್ಲಿಗೆ ಬಂದು ಮುದ್ದುಮಲ್ಲನನ್ನು ಕಂಡಳು. ಅವನನ್ನು ಕಂಡು ಮಾರುಹೋದಳು. ಮುದ್ದುಮಲ್ಲನಿಗೆ ಸ್ವಪ್ನದಲ್ಲೂ ಸಿಗದಿದ್ದ ಅಪೂರ್ವ ಚೆಲುವೆ ಅವನ ಬಳಿ ಇದ್ದು ಅವನನ್ನು ಮೋಹಿಸಿದಳು ಅವನಿಗೆ ಅದರ ಪರಿವೆ ಇಲ್ಲ. ಗಾಢನಿದ್ರಾ ಪರವಶನಾಗಿದ್ದಾನೆ. ಅವನು ಬಯಸಿದ್ದರೆ ಗಂಡುಮಕ್ಕಳಿಲ್ಲದ ಅವಳ ತಂದೆ ಈ ಸಂಬಂಧವನ್ನು ಬಿಡದೆ ಮಗಳಿಗೆ ಕೊಟ್ಟು ಮದುವೆ ಮಾಡುತ್ತಿದ್ದ.

ಆವೇಳೆಗೆ ಇಬ್ಬರು ಕಟ್ಟಾಳು ದರೋಡೆಕೋರರು ಬಂದರು. ಇವನು ಬುತ್ತಿಗಂಟನ್ನು ತಲೆದಿಂಬಾಗಿ ಇಟ್ಟುಕೊಂಡು ನಿದ್ರಿಸುತ್ತಿದ್ದದನ್ನು ನೋಡಿ. ಅದರಲ್ಲಿ ಹಣವಿರಬೇಕೆಂದು ಜತೆಗೆ ಆಹಾರವೂ ಇರಬೇಕು. ಅವರ ತಲೆಬಳಿಯ ಬುತ್ತಿ ಚೀಲವನ್ನು ಒಬ್ಬನು ಎಳದು ನೋಡತೊಡಗಿದ ಇನ್ನೊಬ್ಬನು ಅವನೆದ್ದರೆ ಎದೆ ಸೀಳಲು ಚೂರಿಯನ್ನು ಅವನ ಎದೆಗೆ ಒಡ್ಡಿದ್ದನು. ಆ ವೇಳೆಗೆ ನಾಯಿಯೊಂದು ಆಹಾರ ಹುಡುಕುತ್ತ ವಾಸನೆ ಹಿಡಿದು ಇವರ ಬಳಿ ಇದ್ದ ಬುತ್ತಿ ಬಳಿ ಬಂದು ನಿಂತಾಗ ನಾಯಿ ಯಜಮಾನ ಇಲ್ಲೆ ಇದ್ದಾನೆ ನಾಯಿಗಾಗಿ ಇಲ್ಲೇ ಬರ್ತಾನೆ ಎಂದವರು ಅಲ್ಲಿಂದ ಪಲಾಯನ ಮಾಡಿದರು. ಇಷ್ಟೆಲ್ಲಾ ಆದರೂ ಯಾವುದರ ಅರಿವು ಪರಿವೆ ಮುದ್ದುಮಲ್ಲನಿಗಿರಲಿಲ್ಲ.

ಇಷ್ಟು ಹೊತ್ತಿಗೆ ಸಾಕಷ್ಟು ನಿದ್ದೆ ಆಗಿತ್ತು ಮುದ್ದುಮಲ್ಲನಿಗೆ ಭರ್ರನೆ ಚೀರುತ್ತ ಊರು ಬಸ್ಸು ಬಂತು. ಆ ಶಬ್ದ ಕೇಳಿ ಎಚ್ಚೆತ್ತು. ಬಸ್ಸಿಬತ್ತ ಕಣ್ಣುಜ್ಜಿಕೊಂಡು ಮುದ್ದುಮಲ್ಲ ಓಡಿದ.

ಎಷ್ಟೋ ಘಟನೆಗಳು ಅನಿರೀಕ್ಷಿತವಾಗಿ ನಮ್ಮ ಜೀವನದಲ್ಲಿ ಅಗೋಚರವಾಗಿ ಬಂದು ಹಾದು ಹೋಗುವುವು. ಹಾಗೆ ಅವೆಲ್ಲ ಒಂದು ನಿಯಮಕ್ಕೆ ಒಳಪಟ್ಟು ಜರುಗುವುವು. ಇಲ್ಲದಿದ್ದರೆ ಪ್ರಪಂಚದ ಬಾಳೂ ಘೋರವಾಗುತ್ತಿತ್ತು. ಅಸಹನೀಯವಾಗುತ್ತಿತ್ತು ಚೆಲುವೆಯನ್ನು ಕಂಡು ಮೋಹಪರವಶನಾಗಿದ್ದಾನೆ. ನಿರಾಶೆ ಬರಬಹುದಿತ್ತು. ದಾರಿ ಹೋಕರು ಚೂರಿನೆಟ್ಟದ್ದನ್ನು ನೋಡಿದರೆ ಅಂಜಿ ಹೆದರಬೇಕಿತ್ತು. ದತ್ತು ಪುತ್ರನಾಗಿ ಆಸ್ತಿಗೆ ಹೊಣೆಗಾರನಾದರೆ ಬಂಧುಗಳ ದ್ವೇಷಕ್ಕೆ ಗುರಿಯಾಗಬಹುದಿತ್ತು. ಆದರೆ ಭಾವಾವೇಶ, ಮೋಹಾವೇಶಗಳಾವುವು ಮುದ್ದುಮಲ್ಲನಿಗೆ ಮುಳುವಾಗಲಿಲ್ಲ. ನಿದ್ರೆ ಅವನನ್ನು ನಿಶ್ಚಿಂತನಾಗಿಸಿತ್ತು. ಹಾಗಾಗಿ ಲೋಕದ ವಿದ್ಯಮಾನಗಳು ಅವನೆದುರಿಗೆ ನಡೆದರೂ ಅವನಿಗೆ ಅಗೋಚರವಾಗಿ ನೆಮ್ಮದಿ ತಂದಿತ್ತು. ಕತೆಗಾರ ಜಗತ್ತು ತನ್ನದೇ ಆದ ನಿಯಮದಿಂದ ಸಾಗುತ್ತದೆ ಎಂಬ ಸತ್ಯವೊಂದನ್ನು ಮಾರ್ಮಿಕವಾಗಿ ಈ ಕಥೆಯಲ್ಲಿ ಹೇಳಿದ್ದಾನೆ. ಕಣ್ಣೆದುರೇ ನಮಗೆ ಬೇಕೆಂಬ ಘಟನೆಗಳೇ ನಡೆದರೂ ಅವು ಅಗೋಚರವಾಗಿರುವುದೇ ಸುಖ ಎಂಬುದನ್ನು ಸಾರಿದ್ದಾನೆ. ಅಜ್ಞಾನವೇ ಪರಮಸುಖ ಎಂಬ ಮಾತಿಗೆ ಕನ್ನಡಿ ಹಿಡಿದಂತೆ ಇದೆ ಈ ಕಥೆ.

ಹೆಬ್ಬಯಕೆಯ ದಾರಿಹೋಕ–೧

'ದಿ ಆ್ಯಂಬಿಷಿಯಸ್ ಗೆಸ್ಟ್' ಎಂಬ ಕಥೆಯ ಕನ್ನಡರೂಪ ಈ ಕಥೆ ನ್ಯಾಥೇನಿಯಲ್ ಹಾಥಾರ್ನ್‌ಗೆ ಅದೃಶ್ಯಶಕ್ತಿಯಲ್ಲಿ, ಅಮೂರ್ತಜಗತ್ತಿನಲ್ಲಿ ಪ್ರಕೃತಿಯ ವ್ಯಾಪಾರದ ನಿಗೂಢತೆಯಲ್ಲಿ ಆಸಕ್ತಿ ಹೆಚ್ಚು. ಈ ಕಥೆಯೂ ಅದಕ್ಕೊಂದು ಸಾಕ್ಷಿ

ಚಳಿಗಾಲದಲ್ಲಿ ಬೆಟ್ಟದ ಬುಡದಲ್ಲಿ ಗುಡಿಸಲು. ದಾರಿಹೋಕರಿಗೆ ಮಾರ್ಗಮಧ್ಯ ನಿರ್ಜನ ಪ್ರದೇಶದಲ್ಲಿ ಆ ಗುಡಿಸಲು ಒಂದು ತಂಗುದಾಣ, ಅಜ್ಜಿಮನೆ, ವಿಶ್ರಾಂತಿಗೆ ಆಹಾರಕ್ಕೆ ಆಗಿತ್ತು. ಮನೆಯಲ್ಲಿ ಒಡೆಯ ಒಡತಿ ಮಕ್ಕಳು ಆ ಮಕ್ಕಳಲ್ಲಿ ಒಬ್ಬಳು ಹದಿನಾರರ ಚೆಲುವೆ ಯುವತಿ. ಬಂದವರು ಆತಿಥ್ಯ ಪಡೆದು ಸಲ್ಲಿಸುತ್ತಿದ್ದ ಕಾಣಿಕೆ ಅವರ ಆದಾಯ.

ಒಮ್ಮೆ ಅವರ ಗುಡಿಸಿಲಿಗೆ ಒಬ್ಬ ಆಗುಂತಕ ಬಂದ. ಕಾಲು ತೊಳೆದುಕೊಳ್ಳಲು ನೀರು ಕೊಟ್ಟು, ಚಾಪೆಹಾಸಿ ಸ್ವಾಗತಿಸಿದರು. ಚಳಿಗೆ ಬೆಂಕಿ ಕಾಯಿಸುತ್ತಿದ್ದ ಕಡೆ ಬಂದು ಕುಳಿತನು.

ಆಗ ಮಾತಿಗೆ ಮಾತು ಬಂದೂ ಆಗಂತುಕ 'ಸತ್ತ ಮೇಲೆ ಹಿಮವತ್ ಪರ್ವತಾಗ್ರದ ಮೇಲೆ ಮಂಜುಗಲ್ಲಿನ ಮೇಲೆ ಶೀತಲ ಶ್ವೇತ ಶಿಲಾಮೂರ್ತಿಯಾಗುವಂತೆ ಬರಿಬರಿಬತ್ತಲೆಯಾಗಿ ನಿಲ್ಲಬೇಕೆಂಬುದು ನನ್ನ ಮಹದಾಕಾಂಕ್ಷೆ' ಎಂದು ಹೇಳಿದ.

ಆಗ ಮನೆಯೊಡೆಯ 'ಹಳ್ಳಿಗಳಿಗೆ ಒಡೆಯನಾಗಿ ಗೌಡನೆನಿಸಿ ಮುದುಕನಾಗಿ ಮಕ್ಕಳು ಮೊಮ್ಮಕ್ಕಳನ್ನು ಕಂಡು ಆನಂದಿಸಿ. ಗುಡಿ ಗೋಪುರಗಳನ್ನು ಕಟ್ಟಿಸಿ ಅದಕ್ಕೆ ಕಾಣಿಕೆ ಸಲ್ಲಿಸಿ ಸಾಯಬೇಕು ಇದು ನನ್ನಾಸೆ. ಆ ಗುಡಿ ಗೋಪುರ ನೋಡಿ ನನ್ನ ನೆರೆಯುವವರು ನನ್ನ ಹೆಸರು ಅವರ ಬಾಯಲ್ಲಿ ಉಳಿಯುವುದು' ಎಂದನು.

ಸತ್ತ ಮೇಲೆ ಸ್ಮಾರಕ ನೆಡಿಸುವ ಇಚ್ಛೆ ಮಾನವ ಸಹಜವಾದುದು ಆ ಸ್ಮಾರಕ ಬೋಳುಗಲ್ಲಾಗಲಿ ಅಮೃತ ಶಿಲೆಯ ಬೃಂದಾವನವಾಗಲಿ ಜನರ ನೆನಪಿನಲ್ಲಿ ಉಳಿಯಲಿ ಉಳಿಯದಿರಲಿ ಸ್ಮಾರಕ ಶಾಶ್ವತವಾಗಿರಬೇಕೆಂದು ಎಲ್ಲರ ಬಯಕೆ ಎಂದನು 'ಆಗಂತುಕ' ಆಗ ಅವರ ಮಕ್ಕಳಲ್ಲಿ ಕೊನೆಯವನು 'ಬೆಟ್ಟದ ಬುಡದ ಜಲಪಾತದ ಕೆಳಗೆ ಕುಳಿತು ಸ್ನಾನಮಾಡಿ ನೀರುಕುಡಿದುಬರೋಣ ಬಾಮ್ಮ ಬಹುದಿನದಿಂದ ಹೇಳುತ್ತಿದ್ದೀಯ ಆದರೆ ಕರೆದುಕೊಂಡೇ ಹೋಗಿಲ್ಲ' ಎಂದನು. ಆಗುಂತುಕ, ಹಿರಿ ಹುಡುಗಿ ಮೆಲ್ಲಮೆಲ್ಲನೆ ಯೌವನ ಸಹಜ ಮಾತುಗಳನ್ನು ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದಾಗ ಶೀತಲಗಾಳಿ ಜೋರಾಗಿ ಬೀಸಿತು. ಉರಿಜಾಸ್ತಿ ಮಾಡಿದರು. ಆಗ ಅಜ್ಜಿ ಹೇಳಿತು. ಚಿಕ್ಕಮಕ್ಕಳಿಗೆ ಇದ್ದಂತೆ ಮುದುಕರಿಗೂ ಹೆಬ್ಬಯಕೆಗಳಿರುತ್ತವೆ. ಏನದು ಅಜ್ಜೀ ಎಂದು ಕೇಳಿದಾಗ ಅಜ್ಜಿ ಹೇಳಿದಳು ತಾನು ಸತ್ತರೆ ತನ್ನನ್ನು ಸಿಂಗರಿಸಿ ಗಂಡನ ಸಮಾಧಿಯ ಬಳಿಯಲ್ಲಿಯೇ ಹೂಳಬೇಕು, ಅಲ್ಲಿ ತನ್ನ ಗಂಡ ತನಗಾಗಿ ಕಾದಿರುತ್ತಾನೆ. ಪಟ್ಟೆಸೀರೆ ಉಟ್ಟು ಅಲಂಕಾರ ಮಾಡಿಕೊಂಡು ಬರಬೇಕು ಅಂತ ಕನಸಿನಲ್ಲಿ ನನ್ನ ಗಂಡ ಹೇಳಿದ್ದಾನೆ ಎಂದಳು ಅಜ್ಜಿ.

ಹೀಗೆ ಎಲ್ಲರೂ ಸಾವಿನ ಮುಂದಿನ ಬದುಕನ್ನು ಗೋರಿಕಲ್ಲುಗಳನ್ನು ನೆನಯುತ್ತಾ ಸಾವಿನ ಕನಸನ್ನು ಕಾಣುತ್ತಿದ್ದರು. ಆಗ ಬೆಟ್ಟದಿಂದ ಭಾರಿ ಗುಡುಗಿನ ಹಾಗೆ ಶಬ್ದವಾಗಿ ಕಲ್ಮಳೆ ಸುರಿಯಿತು. ಅದು ಬೆಟ್ಟದ ಬುಡವನ್ನೆಲ್ಲಾ ಆವರಿಸಿ ಗುಡಿಸಲೂ ಅದರಲ್ಲಿದ್ದವರೆಲ್ಲಾ ಮೃತ್ಯುವಶರಾಗಿ ಗೋರಿ ನಿರ್ಮಾಣವಾಗಿತ್ತು. ಗುಡಿಸಲ ಬೆಂಕಿ ಇನ್ನೂ ಉರಿಯುತ್ತಿತ್ತು. ಎಲ್ಲರು ಶವವಾಗಿ ಸ್ಮಾರಕವಾಗಿ ಮಲಗಿದ್ದರು. ಮಾರನೇ ದಿನ ದಾರಿಹೋಕರು ಬಂದಾಗ ಆಗಂತುಕ ಮನೆಯವರ ದುರ್ಗತಿ ನೋಡಿ ನೊಂದರು ಆಗಂತುಕನ ಹೆಬ್ಬಯಕೆಯ ಮೊಗ್ಗು ಅರಳುವ ಮುನ್ನ ವಿಧಿಯೆಂಬ ಮದ ಗಜ ಅದನ್ನು ತುಳಿದು ಹೊಸೆದು ಹಾಕಿತ್ತು. ಹೆಬ್ಬಯಕೆಯ ದಾರಿಹೋಕ ದಾರಿ ಕಡಿದು, ಗುರಿದೂರ, ಹಿಂದೆ ವಿದಾಯದ ಸಂಚು ಮುಂದೆ ಸಾವಿನ ಹೊಂಚು ಎಂದು ಕತೆಗಾರ ಕತೆಗೆ ಮುಕ್ತಾಯ ಹಾಡಿದ್ದಾನೆ. ಮಗುವಿನಿಂದ ಹಿಡಿದು. ಮುದುಕನವರೆಗೆ ಮನೆಯ ಚೆಲುವೆ, ಆಗಂತುಕ ಯುವಕ ಎಲ್ಲರಿಗೂ ಸಾವಿನನಂತರ ಕೀರ್ತಿಪತಾಕೆ ಸ್ಮಾರಕ ಉಳಿಸುವ ಹೆಬ್ಬಯಕೆ ಇರುತ್ತೆ. ಆ ವಿಧಿ ಅದನ್ನು ಯಾವಾಗ ನುಚ್ಚು ನೂರು ಮಾಡುತ್ತದೋ ತಿಳಿಯದು.

ಹೆಬ್ಬಯಕೆಯ ದಾರಿಹೋಕ ಕಥೆಯಲ್ಲೂ ನ್ಯಾಥಾನಿಯಲ್ ಅವ್ಯಕ್ತಶಕ್ತಿ ವಿಧಿಯ ಕ್ರೂರವರ್ತನೆ ಹೇಗಿರುತ್ತೆ ಮಾನವನ ಕನಸುಗಳು ಹೇಗೆ ನುಚ್ಚು ನೂರಾಗುತ್ತವೆ. ಪ್ರತಿಯೊಬ್ಬರೂ ಬಾಳಿನನಂತರ ಸಾವಾದ ಮೇಲೆ ಏನು ಮಾಡಬೇಕು ಎಂದು ಚಿಂತಿಸುವುದು ವ್ಯರ್ಥ. ಏಕೆಂದರೆ ವಿಧಿಯ ಕೈವಾಡ ಯಾರೂ ಅರಿಯರು ಎಂಬುದನ್ನು ಈ ಕಥೆಯಲ್ಲಿ ಅವ್ಯಕ್ತವಾಗಿ ವ್ಯಕ್ತಪಡಿಸಿದ್ದಾನೆ.

ಭಾಗ್ಯತ್ರಯ

ಈ ಕಥೆಯಲ್ಲಿ ವಿಶ್ವನಾಥನೆಂಬ ಯುವಕ ದೇಶವಿದೇಶ ಸುತ್ತಿ ತನ್ನ ಹುಟ್ಟು ಹಳ್ಳಿಗೆ ಮರಳಿ ಬಂದಾಗ ಬಹಳ ವರುಷದ ನಂತರ ಬಂದಿದ್ದರಿಂದ ಅನೇಕರಿಗೆ ಗುರುತು ಸಿಗುವುದಿಲ್ಲ. ಹಳ್ಳಿಯ ತರುಣಿಯೊಬ್ಬಳು ಗುರುತಿಸಿ ವಿಶ್ವನಾಥ ಎನ್ನುತ್ತಾಳೆ. ತನ್ನ ಜೀವನದಲ್ಲಿ ಮೂರು ಅದ್ಭುತ ಘಟನೆಗಳು ನಡೆಯುತ್ತವೆ ಅವು ೩ ಚಿಹ್ನೆಗಳಿಂದ ದೃಢವಾಗುತ್ತದೆ ಎಂದು ಆತನು ನಂಬಿದ್ದನು.

ಜಗತ್ತಿನಲ್ಲಿರುವ ತರುಣಿಯರಲ್ಲಿ ಒಬ್ಬಳು ಒಲುಮೆಯಿಂದ ತನಗೆ ಒಲಿಯುತ್ತಾಳೆ ಅವಳು ವಕ್ಷಸ್ಥಲದ ಮೇಲೆ ಹೃದಯಾಕಾರದ ಪದಕ ಧರಿಸಿರುತ್ತಾಳೆ. ಅವಳನ್ನು ಮಾತಾಡಿಸಿ ಪ್ರೇಮಿಸಿದಾಗ ಒಲಿಯುತ್ತಾಳೆ.

ಎರಡನೆಯ ನಂಬಿಕೆ ಅವನಲ್ಲಿ ಹೀಗಿತ್ತು. ಜಗತ್ತಿನ ಯಾವುದೋ ಮೂಲೆಯಲ್ಲಿ ನಿಧಿಯೊಂದು ಅಡಗಿರುತ್ತದೆ ಅದನ್ನು ತನಗೆ ಒಂದು ತೋರುಗೈ ತೋರಿಸುತ್ತದೆ. ಆ ಕೈ ಮೇಲೆ ಇಲ್ಲಿ ಅಗಿ ಖನ್ ಎಂದು ಸಂಸ್ಕೃತದಲ್ಲಿ ಬರೆದಿರುತ್ತದೆ. ಅಲ್ಲಿ ಆ ಅಪಾರನಿಧಿಸಿಗುತ್ತದೆ. ಮೂರನೆಯ ನಂಬಿಕೆ ಮೂವರು ವ್ಯಕ್ತಿಗಳು ಒಮ್ಮೆ ಕಾಣಿಸಿಕೊಳ್ಳುತ್ತಾರೆ. ಅವರಲ್ಲಿ ಒಬ್ಬದಂಡ ಹಿಡಿದ ಮುನಿ ದಂಡದಿಂದ ಆಕೃತಿ ಬರೆದು ಸಂದೇಶ ನೀಡುತ್ತಾನೆ ಆ ಸಂದೇಶದಂತೆ ನಡೆದರೆ ಅಮೋಘ ಫಲಪ್ರಾಪ್ತಿ ಆಗುತ್ತದೆ. ಹೀಗೆ ಕನ್ಯೆ, ನಿಧಿ, ಮುನಿ ಇವರ ಅನ್ವೇಷನಕ್ಕೆ ವಿಶ್ವನಾಥ ಯಾತ್ರೆ ಮಾಡುತ್ತಿದ್ದನು.

ವಿಶ್ವನಾಥನು ಹಳ್ಳಿಯಲ್ಲಿ ತಾಯಿಯ ಮನೆಗೆ ಬಂದಾಗ ಮನೆಯ ಎದುರಿಗಿದ್ದ ಆಲದಮರದ ಬುಡದಲ್ಲಿ ತಾನು ಬಾಲ್ಯದ ಚಿನ್ನಾಟಗಳಾಡಿದ್ದು ನೆನಪಾಯಿತು. ಅಲ್ಲಿಯೇ ಬಿಳಲೊಂದು ಕೈಯಂತೆ ಕಾಣಿಸಿ ಅದರ ಮೇಲೆ ಬಾಲ್ಯದಲ್ಲಿ ಕೆತ್ತಿದ್ದು ಕಾಣಿಸಿತು. ರಾತ್ರಿ ನಿದ್ದೆಯಲ್ಲಿ ಚೆಲುವೆ ಮುನಿ ಕಾಣಿಸಿಕೊಂಡರು. ಮಾರನೆಯ ದಿನ ಮಧ್ಯಾಹ್ನ ೩ ಜನರು ಮನೆಗೆ ಬಂದರು ಊರ ಪಂಚಾಯಿತಿದಾರರು ಅವರು. ಅವರಲ್ಲಿ ಪ್ರಮುಖನಾದವನು ಹೊನ್ನೇಗೌಡ ಮುಖ್ಯ ಸಂಚಾಲಕ, ಊರ ಗಣ್ಯ ಊರಿನ ಶಾಲೆಯ ಕಾಶೀನಾಥ ಪಂಡಿತರು ನಿಧನರಾಗಿ ಶಾಲೆ ಅನಾಥವಾಗಿ ವಿದ್ಯಾರ್ಥಿಗಳು ಕುರುಬನಿಲ್ಲದ ಕುರಿಗಳಾಗಿದ್ದಾರೆ. ಆ ಸ್ಥಾನಕ್ಕೆ ಅವರ ಶಿಷ್ಯನಾದ ನೀನೇ ತಕ್ಕವನು ಎಂದಾಗ ಆ ಗೌಡ ಅವನ ಕೈದಂಡ ಎಲ್ಲ ನಿಧಿಯಿಲ್ಲಿದ ಎಂದು ತೋರಿಸುವ ಮುನಿಯಂತೆ ಅನ್ನಿಸಿತು. ಮೂರುದಿನಗಳನಂತರ ಉತ್ತರಿಸುತ್ತೇನೆ ನಿಮಗೆ ಎಂದನು.

ಹಳ್ಳಿಯಲ್ಲಿ ಮುಂದೆ ನಡೆಯುತ್ತಿದ್ದಂತೆ. ಮನೆಯೊಂದರ ಬಳಿ ಬಾಲ್ಯದಲ್ಲಿ ಚಿನ್ನಾಟವಾಡಿದ ತನ್ನ ಜತೆಗಾತಿ ಗೌರಿ ಕಂಡಳು ಅವಳು ಹೃದಯಕಾರದ ಬೆಣಚುಕಲ್ಲಿನ ಪದಕ ಧರಿಸಿದ್ದಳು. ಪ್ರಪಂಚ ಸುತ್ತಾಡಿ ಏನು ತಂದೆ ಎಂದು ಕೇಳಿದಾಗ 'ನನ್ನ ಭಾರವಾದ ಹೃದಯವನ್ನೇ ನಿನಗಾಗಿ ತಂದಿದ್ದೇನೆ' ಎಂದನು. ಅದನ್ನು ನಿನ್ನ ಹೃದಯದ ಮೇಲೆ ಒರಗಿಸಬಹುದೇ ಎಂದನು. ಇಬ್ಬರೂ ಒಂದಾದರು. ಆಗ ವಾಸ್ತವಲೋಕಕ್ಕೆ ಬಂದನು. ತನ್ನ ಸುತ್ತ ಮುತ್ತ ಜಮೀನನ್ನು ಸಾಗುವಳಿ

ಮಾಡಿ ಫಸಲನ್ನು ಬೆಳೆದರೆ ಅದೇ ತೋರುಗೈ ತೋರುವ ನಿಧಿ. ಅವ್ಯೋಘ ಫಲಪ್ರಾಪ್ತಿಯಾದರೆ ಹಳ್ಳಿಯ ಮಕ್ಕಳನ್ನು ಬೆಳಸುವುದೇ ಭಾಗ್ಯ. ಗೌರಿಯೇ ಅವಳ ಕನಸಿನ ಕನ್ಯೆ ಹೀಗೆ ತಾನಿದ್ದ ನೆಲೆಯಲ್ಲೇ ಭಾಗ್ಯತ್ರಯ ಇರುವುದನ್ನು ಅರ್ಥಮಾಡಿಕೊಂಡನು. ಇದನ್ನು ಹೇಳಿದ ಕಥೆಗಾರ ನುಡಿರುವ ಭರತವಾಕ್ಯ ಇದು. ವಿಶ್ವನಾಥನು ಬಯಸಿದಂತೆ ಹುಚ್ಚು ಬಯಕೆಯ ಜನ ಇದ್ದಾರೆ. ಅದಕ್ಕಾಗಿ ಜಗತ್ತೆಲ್ಲ ಅಲೆದಾಡುತ್ತಾರೆ. ಆದರೆ ಆ ಭಾಗ್ಯ ಸುತ್ತಮುತ್ತಿನ ಎಡೆಯಲ್ಲೇ ಇರುತ್ತದೆ. ಅರ್ಥಾತ್ ನಮ್ಮ ಬಳಿಯಲ್ಲೇ. ನಮ್ಮ ಕರ್ತವ್ಯದಲ್ಲೇ ಸುಖಸಂತೋಷ ಭಾಗ್ಯ ಅಡಗಿದೆ. ಅದನ್ನು ತಿಳಿಯಬೇಕು ಅಂಥವರೇ ಧನ್ಯರು.

ಗುಂಡಿನೇಟು ಮತ್ತು ಇತರ ಕಥೆಗಳು

ರಷ್ಯಾದೇಶದ ಪ್ರಸಿದ್ಧ ಕತೆಗಾರರು ವಿಶ್ವಕಥಾಲೋಕಕ್ಕೆ ಶ್ರೇಷ್ಠಕತೆಗಳನ್ನು ನೀಡಿದ್ದಾರೆ. ಟಾಲ್‌ಸ್ಟಾಯ್, ಮ್ಯಾಕ್ಸಿಂ ಗಾರ್ಕಿ ಮೊದಲಾದವರು ಪ್ರಸಿದ್ಧರಾಗಿದ್ದಾರೆ. ಆ ಸಾಲಿಗೆ ಸೇರಿದವನು ಅಲೆಗ್ಸಾಂಡರ್ ಸಿರ್ಗೆಯವಿಚ್ ಪುಷ್ಕಿನ್ (೧೮೯೯–೧೮೩೭) ಪುಷ್ಕಿನ್ ಕೇವಲ ಕತೆಗಾರನಷ್ಟೇ ಅಲ್ಲ ಪ್ರಖ್ಯಾತ ಕವಿ ಸಹ ಆಗಿದ್ದಾನೆ. ರಷ್ಯಾದ ರಾಜಕೀಯ ಇತಿಹಾಸದಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ್ದಾನೆ. ರಷ್ಯದ ಚಕ್ರವರ್ತಿ ಪೀಟರ್‌ನ ಆಳ್ವಿಕೆಯಲ್ಲಿ ದಂಡನಾಯಕನಾಗಿದ್ದು ಚಕ್ರವರ್ತಿಯ ಸನ್ಮಾನಕ್ಕೆ ಪಾತ್ರನಾದವನು.

೧೮೩೦ರಲ್ಲಿ ಐವಾನ್ ಬೆಲ್ಕಿನ್ ಎಂಬ ಕಾವ್ಯನಾಮದಲ್ಲಿ ಸಣ್ಣ ಕಥಾ ಸಂಕಲನವನ್ನು ಪ್ರಕಟಿಸಿದನು. ಅವನ ಇಸ್ಪೀಟುರಾಣಿ ಎಂಬ ಸಣ್ಣಕತೆ ಜಗತ್ಪ್ರಸಿದ್ಧವಾಗಿದೆ. ಇನ್ನು ಇವನ ಬೆಲ್ಕಿನ್ನಿನ ಕಥೆಗಳು ರಷ್ಯಕಥಾ ಇತಿಹಾಸದಲ್ಲಿ ಹೊಸ ವಿಕ್ರಮವನ್ನೇ ಸ್ಥಾಪಿಸಿದೆ "ಮೊತ್ತ ಮೊದಲಿಗೆ ಕೃತಕಾಡಂಬರದ ವರ್ಣನೆ, ಅರ್ಥ ಅನ್ವಯಗಳಿಲ್ಲದ ಉಪಮಾನಗಳು, ರಷ್ಯನ್ನರ ನಿತ್ಯಬಳಕೆಯ ಮಾತಿನಲ್ಲಿ ರೂಢವಾಗಿಲ್ಲದ ಘನವಾದ ರೂಪಕಗಳು ಇವುಗಳ ಸ್ಥಾನದಲ್ಲಿ ಸರಳವಾದ ತಿಳಿಯಾದ ಕಥನಶೈಲಿಯೆಂದು ಪ್ರಚಾರವಾಯಿತು". ರಷ್ಯನ್ ಸಾಹಿತ್ಯದಲ್ಲಿ ಗದ್ಯದ ಹೊಸಮಾದರಿ ನಿರ್ಮಿಸಿದವನು ಪುಷ್ಕಿನ್. ರಷ್ಯದ ಇತಿಹಾಸದ ಪ್ರೋಜ್ವಲ ಪ್ರಕರಣಗಳು ಅವನ ಕೃತಿಗಳು.

ದಿ ಟೇಲ್ಸ್ ಆಫ್ ಇವಾನ್ ಬೆಲ್ಕಿನ್ ಕಥಾಸಂಗ್ರಹದಿಂದ ಗುಂಡಿನೇಟು (The Shot) ಹಿಮಮಾರುತ (Blizzard) ಶವಸಂಸ್ಕಾರ ನಿರ್ವಾಹಕ (The Undertaker) ; ಅಂಚೆ ಯಜಮಾನ (The Postmaster) ; ಪರಿವರ್ತನೆ (Lady into Lassie) ಎಂಬ ೫ ಕಥೆಗಳನ್ನು ಎಂ.ವಿ.ಸೀ ಅವರು ಕನ್ನಡಕ್ಕೆ ತಂದಿದ್ದಾರೆ. ಈ ಪುಸ್ತಕ ೧೯೬೬–೬೭ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯುದಲ್ಲಿ ಬಿ.ಕಾಂ.ತರಗತಿಗಳಿಗೆ ಪಠ್ಯವಾಗಿಡುತ್ತಿದ್ದದ್ದು ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಎಂ.ವಿ.ಸೀ. ಅವರು ಈ ಕಥಾಸಂಕಲನದಲ್ಲಿ ಕಥೆಗಳನ್ನು ನೇರವಾಗಿ ಅನುವಾದಿಸಿದ್ದಾರೆ. ವಿದೇಶೀ ಹೆಸರುಗಳನ್ನು ನ್ಯಾಥಾನಿಯಲ್ ಹಾಥಾರ್ನ್‌ನ

ಕಥೆಗಳಲ್ಲಿ ಪರಿವರ್ತಿಸಿದ ಹಾಗೆ ಕನ್ನಡೀಕರಣ ಮಾಡಿಲ್ಲ ಮತ್ತು ಅನುವಾದದಲ್ಲಿ ಅಗತ್ಯವೆನಿಸಿದ ಕಡೆ ಅಡಿ ಟಿಪ್ಪಣಿಗಳನ್ನು ಕೊಟ್ಟಿದ್ದಾನೆ. ಉದಾಹರಣೆಗೆ ಕೊಪೆಕ್ = ಒಂದು ರಷ್ಯದ ನಾಣ್ಯ, ಬೋಸ್ಟನ್ = ಒಂದು ಬಗೆಯ ಇಸ್ಪೀಟಾಟ, ಇಷ್ಮಿಲಾರಟಿ = ಒಬ್ಬ ರಷ್ಯನ್ ನಾಯಕ ೧೮೨೦ರಲ್ಲಿ ತುರ್ಕಿದೇಶದವರು ಗ್ರೀಸ್‌ದೇಶದವನ್ನು ಆಕ್ರಮಣ ಮಾಡಿದಾಗ ಅದರ ವಿಮೋಚನೆಗಾಗಿ ಹೋರಾಡಿದವನು. ಫೈರ್ ಈಟರ್ = ಜಗಳಕ್ಕೆ ಕಾಲುಕೆರೆದು ಕೋಗುವ ಶೀಘ್ರಕೋಪಿ ಇಂಥ ವಿವರಣೆಗಳು ಓದುಗರಿಗೆ ನೆರವಿನ ಮಾಹಿತಿ ಆಗಿದೆ. ಮ್ಯಾಕ್ಸಿಂಗಾರ್ಕಿ, ಟಾಲ್‌ಸ್ಟಾಯ್ ಮೊದಲಾದ ಜಗದ್ವಿಖ್ಯಾತ ರಷ್ಯನ್ ಸಾಹಿತಿಗಳು ಪುಷ್ಕನ್ನಿನ ಬರಹಗಳನ್ನು ಕೊಂಡಾಡಿದ್ದಾರೆ.

ಎಂ.ವಿ.ಸೀ. ಅವರು ಅಮೆರಿಕನ್, ರಷ್ಯನ್, ಇಂಗ್ಲಿಷ್ ಸಾಹಿತ್ಯವನ್ನು ವಿಶೇಷಾಸಕ್ತಿಯಿಂದ ಓದಿ ಕೊಂಡಿದ್ದರು. ತಾವು ಮೆಚ್ಚಿಕೊಂಡ ಕವನಗಳನ್ನು ಕನ್ನಡಕ್ಕೆ ತಂದರು. ಆಪ್ಯೆಕಿ ಪುಷ್ಕಿನ್ನಿನ ಪ್ರಸಿದ್ಧ ಕಥಾ ಸಂಗ್ರಹ.

ಸಿಲ್ವಿಯೋ ಎಂಬ ಸೈನ್ಯಾಧಿಕಾರಿಯ ಕಥೆ ಇದು. ಸೈನ್ಯದ ಹುದ್ದೆಗೆ ರಾಜಿನಾಮೆ ನೀಡಿ ಹಾಳುಬಿದ್ದ ಸಣ್ಣ ಪಟ್ಟಣದಲ್ಲಿ ವಾಸಿಸುತ್ತಿದ್ದನು. ಅವನಲ್ಲಿ ಪಿಸ್ತೂಲುಗಳ ಅಮೂಲ್ಯ ಸಂಗ್ರಹವಿತ್ತು. ದ್ವಂದ್ವ ಯುದ್ಧದಲ್ಲಿ ಭಾಗವಹಿಸಿದ ಅವನು ಆಬಗ್ಗೆ ಹೆಚ್ಚಿಗೆ ಹೇಳುತ್ತಿರಲಿಲ್ಲ. ಒಮ್ಮೆ ಒಬ್ಬ ಆತ್ಮೀಯನೊಡನೆ ತನ್ನ ಕಥೆಯನ್ನು ಹೇಳಿಕೊಂಡ. ಅವನು ರಾಹುತದಳದಲ್ಲಿ ಸೈನಿಕನಾಗಿದ್ದಾಗ ದಳದ ಅಧಿಕಾರ ದೃಷ್ಟಿಯಲ್ಲಿ ದ್ವಂದ್ವ ಯುದ್ಧಗಳನ್ನು ಇತರರೊಡನೆ ಮಾಡುತ್ತ ಅಧಿಕಾರಿಗಳಿಗೆ ಅನಿವಾರ್ಯ ಪೀಡೆಯಾಗಿದ್ದ. ಒಂದು ಸಲ ಪೋಲೀಸ್ ಅಧಿಕಾರಿಯೊಬ್ಬನ ಮನೆಯೊಡತಿಯ ವಿಚಾರದಲ್ಲಿ ಘರ್ಷಣೆ ಉಂಟಾಗಿ ಆ ಪೋಲೀಸ್ ಅಧಿಕಾರಿಗೂ ಇವನಿಗೂ ದ್ವಂದ್ವಯುದ್ಧ ಸ್ಪರ್ಧೆ ಏರ್ಪಟ್ಟಿತ್ತು. ಬಂದೂಕಿನ ಕಾಳಗ ಅದು ಪರಸ್ಪರ ಗುಂಡು ಹಾರಿಸುವುದು. ಅಂದು ಅವನಾಡಿದ ಮಾತಿಗೆ ನೊಂದು ಗುಂಡು ಹಾರಿಸಿ ಕೊಲ್ಲದೆ ಅವನ ಮೇಲೆ ಮತ್ತೊಮ್ಮೆ ಸೇಡುತೀರಿಸಿಕೊಳ್ಳಲು ನಿರ್ಧರಿಸಿ ಯುದ್ಧ ನಿಲ್ಲಿಸಿದನು. ಆ ವ್ಯಕ್ತಿ ಇಂದು ಸುಂದರ ತರುಣಿಯನ್ನು ಮದುವೆ ಆಗಲಿದ್ದಾನೆ. ಇಂದೂ ಅಂದಿನ ಹಾಗೆ ಉದಾಸೀನನಾಗಿ ವರ್ತಿಸುತ್ತಾನೋ ನೋಡಬೇಕು ಎಂದನು. ಅದಕ್ಕಾಗಿ ಹೊರಡುತ್ತಿದ್ದೇನೆ ಎಂದು ಆ ಊರನ್ನು ಬಿಟ್ಟು ಹೊರಟನು. ಆ ಊರಿಗೆ ಹೊರಟು ಶ್ರೀಮಂತನ ಮನೆಯೊಬ್ಬನ ಪರಿಚಯ ಹೊಂದಿ ಅವನೊಡನೆ ಮಾತಾಡುತ್ತ ಅವನ ಬಳಿ ಇದ್ದ ಚಿತ್ರಪಟಗಳನ್ನು ನೋಡುತ್ತಿದ್ದಾಗ ಎರಡು ಗುಂಡಿನೇಟಿನ ರಂಧ್ರಗಳಿದ್ದ ಚಿತ್ರವೊಂದು ಕಣ್ಣಿಗೆ ಬಿತ್ತು. ಆ ಬಗ್ಗೆ ಮಾತಾಡುತ್ತಿದ್ದಾಗ ಸಿಲ್ವಿಯೇ ತಾನು ಹಿಂದೆ ಗುಂಡಿನೇಟಿನ ದ್ವಂದ್ವಯುದ್ಧದಲ್ಲಿ ಚರ‍್ರಿಹಣ್ಣು ಆರಿಸಿಕೊಂಡು ತಿನ್ನುತ್ತಾ ಗುಂಡಿನೇಡನ್ನು ಹೊಡೆಯಿರಿ ಎಂದು ದ್ವಂದ್ವಯುದ್ಧದಲ್ಲಿ ನಿರಾಸಕ್ತಿ ತೋರಿ ಹಾರಿಸಿದ ವ್ಯಕ್ತಿ ನೆನಪಾಯಿತು ಆ ವ್ಯಕ್ತಿಯೇ ಈ ಶ್ರೀಮಂತ ಎಂದು ತಿಳಿಯಿತು. ಆ ದ್ವಂದ್ವ ಯುದ್ಧದಲ್ಲಿ ಸಿಲ್ವಿಯೇ ಚೆರಿಹಣ್ಣು ತಿನ್ನುತ್ತಿದ್ದವನ ಮೇಲೆ ಗುರಿಯಿಡುವುದಿಲ್ಲ. 'ಅದೇಕೆ ಹೀಗೆ' ಎಂದಾಗ ನಿಶ್ಯಸ್ತ್ರನ ಮೇಲೆ ಗುರಿಯಿಡುವುದಿಲ್ಲ ಎನ್ನುತ್ತಾನೆ. ಮತ್ತೆ ಚೀಟಿ ಎತ್ತಿ ಮತ್ತೆ ದ್ವಂದ್ವ ಯುದ್ಧ ನಡೆಯಿತು ಆಗ ಆ

ಸೇನಾಧಿಕಾರಿ ಅಲ್ಲಿದ್ದ ಚಿತ್ರಪಟಕ್ಕೆ ಹೊಡೆದ. ಆ ಗುರುತುಗಳೇ ಈ ಚಿತ್ರಪಟದಲ್ಲಿರುವ ರಂಧ್ರಗಳು ಎಂದನು. ಆಗ ನೀವೇನೋ ದ್ವಂದ್ವ ಯುದ್ಧ ಮಾಡಿದಿರೋ ವಿನೋದವಾಡಿದಿರೋ ಎಂದಾಗ ಅವನು ಮಾಡಿದ್ದು ವಿನೋದವೇ. ನಾನು ವಿನೋದ ಮಾಡುತ್ತೇನೆ ಎಂದು ಸಿಲ್ವಿಯೋ ಬಂದೂಕು ತೆಗೆದು ಗುರಿಯಿಟ್ಟನು. ಆಗ ಶ್ರೀಮಂತನ ಹೆಂಡತಿ ಮಾಶಾ ಕಾಲಿಗೆಬಿದ್ದಳು "ಸಿಲ್ವಿಯೇ ನನಗೆ ಗುಂಡು ಹಾರಿಸಲು ಇಷ್ಟವಿಲ್ಲ ದ್ವಂದ್ವಯುದ್ದಲ್ಲಿ ಕಾದು ಗೆದ್ದಂತೆ ಸಮಾಧಾನವಾಯಿತು." ಎಂದು ಹೇಳಿದನು. ಆಗ ಸಿಲ್ವಿಯೇ ಆ ಚಿತ್ರಪಟಕ್ಕೆ ಗುಂಡು ಹಾರಿಸಿ ಕಣ್ಮರೆಯಾದನು.

ಕಥೆ ಸ್ವಲ್ಪ ಸಂಕೀರ್ಣ ಸ್ವರೂಪದ್ದಾಗಿದ್ದು ಸಿಲ್ವಿಯೋ ಆ ಸೇನಾಧಿಕಾರಿಯ ಉದಾಸೀನನಾಗಿ ಚೆರ್ರಿಹಣ್ಣು ತಿನ್ನುತ್ತಿದ್ದುದು, ಚಿತ್ರಪಟಕ್ಕೆ ಗುಂಡು ಹಾರಿಸಿದ ಪ್ರಸಕ್ತಿಯಲ್ಲಿ ತೋರಿದ ಅನಾಸಕ್ತಿ, ಅವನ ಪ್ರಿಯೆ ಮಾಶಾಳ ಪ್ರೀತಿ ಎಲ್ಲ ಕಂಡು ಮಾನವೀಯ ಭಾವಗಳು ಅವನಲ್ಲಿ ಮೂಡಿ ದ್ವಂದ್ವಯುದ್ಧದಲ್ಲಿ ಸೇಡು ತೀರಿಸುವ ಮನೋಭಾವವನ್ನು ಕೈಬಿಟ್ಟ ಸಂಗತಿಯನ್ನು ಅವ್ಯಕ್ತವಾಗಿ ಮೂಡಿಸಿದೆ. ದ್ವೇಷ, ಅಹಂಕಾರ, ವಿನೋದ, ವ್ಯಂಗ್ಯಗಳು ಪ್ರೀತಿ ಪ್ರಣಯಗಳ ಮುಂದೆ ಸೋಲಿಸುತ್ತವೆ ಎಂಬುದು ಈ ಕಥೆಯಲ್ಲಿ ವ್ಯಕ್ತವಾಗಿದೆ.

ಹಿಮಮಾರುತ

೧೮೧೧ನೇ ಇಸವಿ ಸುಮಾರಿನಲ್ಲಿ ನಡೆದ ಘಟನೆ ಇದು. ಗಾವ್ರಿಲ ಗ್ರಾವ್ರಿಲೋವಿಚ್ ಆಲ್ ಎಂಬ ಶ್ರೀಮಂತ ನೆನರಾಡೋವ್ ಗ್ರಾಮದಲ್ಲಿ ನೆಲೆಸಿ ಆತಿಥ್ಯ ಔದಾರ್ಯಗಳಿಗೆ ಹೆಸರಾಗಿದ್ದನು. ಅವಳ ಮಗಳು ಮಾರ್ಯ ಗ್ರಾವಿಲೋವ್‌ಳನ್ನು ಬಾವುಟ ಸಿಪಾಯಿಯೊಬ್ಬ ಪ್ರೇಮಿಸಿದ್ದನು. ಅವರಿಬ್ಬರ ನಡುವೆ ಪ್ರಣಯ ಉಂಟಾಗಿ ಪತ್ರವ್ಯವಹಾರ ನಡೆಯುತ್ತಿತ್ತು. ಒಂದು ದಿನ ನೆನರಾಡೋವ್ ಗ್ರಾಮದಿಂದ ಅವಳು ಜಾರುಬಂಡಿಯಲ್ಲಿ ಷಾಡ್ರಿನೋ ಗ್ರಾಮಕ್ಕೆ ಹೋಗಿ ಚರ್ಚಿನಲ್ಲಿ ವ್ಲಾಡಿಮಿರ್ ಪ್ರಿಯತಮನನ್ನು ಮದುವೆಯಾಗಲು ತೀರ್ಮಾನಿಸಿದಳು ತನ್ನ ಗೆಳತಿಗೆ ಕಾಗದ ಬರೆದಿದ್ದು ಹಿಮಗಾಲದ ಆ ರಾತ್ರಿಯಲ್ಲಿ ಷಾಡ್ರಿನೋ ಚರ್ಚಿನತ್ತ ಹೊರಟಳು.

ಇತ್ತ ವ್ಲಾದಿಮೀರ್ ಚರ್ಚಿನತ್ತ ಕುದುರೆಗಾಡಿಯಲ್ಲಿ ಹೊರಟವನು ಹಿಮಪಾತದಿಂದ ಗಾಳಿಬೀಸಿ ಮಬ್ಬು ಕವಿದು ದಾರಿತಪ್ಪಿದನು. ಕುದುರೆಗಳೂ ಗಾಡಿಯನ್ನು ಗೊತ್ತಿಲ್ಲದ ಸ್ಥಳಕ್ಕೆ ಎಳೆದೊಯ್ದಿತ್ತು. ಅಪರಿಚಿತ ಕಾಡಿನಲ್ಲಿ ಸಿಕ್ಕಿಕೊಂಡನು. ಕೊನೆಗೆ ಹಳ್ಳಿಯೊಂದರ ಬಳಿ ಬಂದು ಷಾಡ್ರಿನೋಗೆ ದಾರಿಕೇಳಿದನು. ಆಗ ದಾರಿತಪ್ಪಿದ ಮಾರ್ಯನಿಗೆ ದಾರಿ ತೋರಿಸಲು ತನ್ನ ಮಗನನ್ನು ಕಳಿಸಿಕೊಟ್ಟನು. ಬೆಳಗಾಗುವ ವೇಳೆಗೆ ಚರ್ಚಿನಬಳಿ ಬಂದನು. ಚರ್ಚ್‌ಬಾಗಿಲು ಹಾಕಿತ್ತು. ವಿಷಯ ಏನೆಂದು ಆಮೇಲೆ ತಿಳಿಯಿತು. ಮಾರ್ಯ ಆದಿನ ಅಸ್ವಸ್ಥಳಾಗಿ ಅಲ್ಲಿಗೆ ಬರಲಾಗಲಿಲ್ಲ. ವ್ಲಾಡಿಮರ್ ನಿರಾಶನಾಗಿ ಹಿಂದಿರುಗಿದವನು ಸೈನ್ಯಕ್ಕೆ ಹೋಗಿ ಮತ್ತೆ ಸೇರಿಕೊಂಡ. ಅವನ ನೆನಪಿನಲ್ಲೇ ತಂದೆ ಸತ್ತ ಮೇಲೆ ತಾಯಿಯೊಡನೆ ಮಾರ್ಯ ಕಾಳಕಳೆಯುತ್ತಿದ್ದಳು. ಈ ಮಧ್ಯೆ ಅನೇಕರು ಮಾರ್ಯಳನ್ನು ಬಯಸುತ್ತಿದ್ದರು. ಆದರೆ ಅವಳು ವ್ಲಾಡಿಮರ್

ಧ್ಯಾನದಲ್ಲೇ ನಿರತಳಾಗಿದ್ದಳು. ಅವನ ನೆನಪಿನ ಸರ್ವಸ್ವವಾದ ಅವನು ಓದಿದ ಪುಸ್ತಕಗಳೂ, ಅವನು ಬರೆದ ರೇಖಾಚಿತ್ರಗಳೂ, ಅವನು ಪ್ರತಿಮಾಡಿದ್ದ ಸಂಗೀತ ಕೃತಿಗಳನ್ನು ಕಂಡು ಕಾಲಕಳೆಯುತ್ತಿದ್ದಳು. ಈ ನಡುವೆ ಯುದ್ಧದಲ್ಲಿ ಸೇನೆಗೆದ್ದು ವಿಜಯೋತ್ಸವ ಆಚರಿಸಿತು. ಆ ಸಂದರ್ಭದಲ್ಲಿ ಜರ್ಮಿನ್ ಎಂಬ ಕರ್ನಲ್ ದಳಪತಿ, ಮಾರ್‍ಯಳ ಜಮೀನಿನ ಬಳಿ ನೆಲಸಿದನು. ಅವನ ವರ್ತನೆಗಳಿಂದ ಇವಳು ಅವನಲ್ಲಿ ಮೋಹಗೊಂಡಾಗ ಅವಳ ತಾಯಿಗೆ ತಕ್ಕವರ ಸಿಕ್ಕಿದ ಎಂದು ಭಾವಿಸಿದಳು.

ಒಂದು ದಿನ ಮಾರ್‍ಯಳ ತಾಯಿಯ ಬಳಿ ಹೋಗಿ ಮಾರ್‍ಯಗಾವ್ರಿಲೋಹ್ನ ಎಲ್ಲಿದ್ದಾಳೆ? ಎಂದು ಕೇಳಿ ಉದ್ಯಾನದ ಕೊಳದಬಳಿ ಇದ್ದವಳನ್ನು ಕಂಡು ತನ್ನ ಕಥೆಯನ್ನು ಹೇಳಿಕೊಂಡನು. ನಾನು ನನ್ನ ಹೃದಯದ ಭಾವವನ್ನು ನಿನ್ನ ಮುಂದೆ ತೆರೆದಿಡಲು ಅವಕಾಶಕೊಡು ಎಂದು ಹೇಳಿ ತನ್ನ ಕಥೆ ಹೇಳಲು ತೊಡಗಿದನು. ನನಗೆ ಮದುವೆಯಾಗಿದೆ. ಆದರೆ ಅವಳು ಯಾರು ಎಲ್ಲಿದ್ದಾಳೆ ತಿಳಿಯದು ಎಂದು ಪ್ರಾರಂಭಿಸಿ ಅಂಚೆಯ ನಿಲ್ದಾಣದಿಂದ ಹೊರಟು ಚರ್ಚಿಗೆ ನನ್ನ ಪ್ರೇಯಸಿಯನ್ನು ವರಿಸಲು ಹೊರಟಾಗ ಹಿಮ ಮಾರುತದ ವರ್ಷಕ್ಕೆ ಒಳಗಾಗಿ ದಾರಿ ತಪ್ಪಿ ಚರ್ಚಿಗೆ ಹೋಗಲಾರದೆ ಅಪರಿಚಿತ ಸ್ಥಳಕ್ಕೆ ಹೋದೆವು ಅಲ್ಲಿ ಆ ಊರಿನ ಚರ್ಚಿನಲ್ಲಿ ವಧು ಪ್ರಜ್ಞೆ ತಪ್ಪಿ ಬಿದ್ದಿದ್ದಳು ಚರ್ಚಿನಲ್ಲಿ ಒಬ್ಬ ಚಿಕ್ಕ ಹುಡುಗಿ ಇದ್ದಳು. ಇನ್ನೊಬ್ಬಳು ವಧುವಿನ ಹಣೆತಿಕ್ಕುತ್ತಿದ್ದಳು ನನ್ನ ಕಂಡ ಕೂಡಲೇ 'ಸಕಾಲಕ್ಕೆ ಬಂದಿರಿ. ನಮ್ಮ ಒಡತಿಯನ್ನು ಕೊಂದೇ ಬಿಡುತ್ತಿದ್ದೀರಿ ನೀವು ಬರದಿದ್ದರೆ' ಎಂದು ಹೇಳಿ ಮೂವರು ಗಂಡಸು ಒಬ್ಬ ಸೇವಕಿಯರ ಕಡೆಗೂ ಲಕ್ಷ್ಯ ಕೊಡದೆ ನನ್ನನ್ನು ವಧುವಿನಬಳಿ ನಿಲ್ಲಿಸಿ ನಮ್ಮಿಬ್ಬರನ್ನು ಗಂಡ ಹೆಂಡಿರನ್ನಾಗಿ ಮಾಡಿದರು. ನಾನು ಇನ್ನೇನು ಅವಳನ್ನು ಮುತ್ತಿಡುವ ವೇಳೆಗೆ ಅವಳು ಎಚ್ಚೆತ್ತು. 'ಓ ಇವರಲ್ಲ ಇವರಲ್ಲ' ಎಂದು ಚೀರಿ ಪ್ರಜ್ಞೆ ತಪ್ಪಿ ಬಿದ್ದಳು. ನಾನು ಚರ್ಚನ್ನು ಬಿಟ್ಟು ಹೊರಟುಬಿಟ್ಟೆ. ಆಗ ಮಾರ್‍ಯ "ಅಯ್ಯೋ ದೇವರೆ ನಿಮ್ಮ ನಿರ್ಭಾಗ್ಯ ಪತ್ನಿಯ ಗತಿ ಏನಾಯಿತೆಂದು ನಿಮಗೆ ತಿಳಿಯದೆ" ಎಂದಳು. "ಇಲ್ಲ ಆ ಮದುವೆ ಆದ ಹಳ್ಳಿಯಾಗಲಿ, ನಾನು ಯಾವ ಅಂಚೆ ನಿಲ್ದಾಣದಿಂದ ಬಂದೆನೋ ತಿಳಿಯಲಿಲ್ಲ ನಾನು ಎಚ್ಚರವಿರಲಿಲ್ಲ. ನನ್ನ ಜತೆಯಿದ್ದ ಆ ಸೇವಕ ಸೈನ್ಯ ಕಾರ್ಯಾಚರಣೆಯಲ್ಲಿ ಸತ್ತ" ಎಂದಾಗ. "ಅಯ್ಯೋದೇವರೇ ಹಾಗಾದರೆ ನೀವೇ ಅವರು ನನ್ನ ಗುರುತು ನಿಮಗೆ ಸಿಗಲಿಲ್ಲವೇ?" ಎಂದನು ಬರ್ಮಿನ್ ಅವಳ ಪಾದಗಳೆಡೆ ಮಂಡಿಯೂರಿ ನಿಂತನು. ವಿಧಿಯ ಕೈವಾಡದ ಕಥೆ ಇದಾಗಿದೆ.

ಶವಸಂಸ್ಕಾರ ನಿರ್ವಾಹಕ

ಈ ಕಥೆಯು Undertaken ಎಂಬ ಕಥೆಯ ಅನುವಾದ ಶವಸಂಸ್ಕಾರ ನಿರ್ವಾಹಕನೆಂದರೆ ಪಾಶ್ಚಾತ್ಯ ದೇಶಗಳಲ್ಲಿ Undertaken ಎಂದು ಕರೆಯುತ್ತಾರೆ. ಶವ ಸಂಸ್ಕಾರ ಕಾರ್ಯಕ್ಕೆ ಬೇಕಾದ ಶವಪೆಟ್ಟಿಗೆ, ಶವವಸ್ತ್ರ ಮೊದಲಾದ ಸಾಮಗ್ರಿಗಳನ್ನು ಒದಗಿಸಿಕೊಡುವವರು ಏಡ್ರಿಯನ್ ಪ್ರೊಖೊರಾಫ್ ಎಂಬ ಶವಸಂಸ್ಕಾರ ನಿರ್ವಾಹಕ

ತನ್ನ ಹಳೆಯ ಮನೆಯನ್ನು ಬದಲಾಯಿಸಿ ಹೊಸಮನೆಗೆ ಹೋದಾಗ ಎದುರುಮನೆಯ ಮೋಚಿ ಷುಲ್‌ಟೆಸ್ ತಮ್ಮ ಮನೆಗೆ ಬಂದು ಪರಿಚಯ ಮಾಡಿಕೊಂಡು ಭೋಜನಕ್ಕೆ ತನ್ನ ಮನೆಗೆ ಆಹ್ವಾನಿಸಿದನು. ಮಾರನೇದಿನ ಮಧ್ಯಾಹ್ನಕ್ಕೆ ಶವಸಂಸ್ಕಾರ ನಿರ್ವಾಹಕನೂ ಅವನ ಹೆಣ್ಣುಮಕ್ಕಳೂ ಹೊರಟರು. ಅಲ್ಲಿ ಅತಿಥಿಗಳು ತುಂಬಿ ಹೋಗಿದ್ದರು. ಆ ಔತಣಕೂಟದಲ್ಲಿ ರಷ್ಯನ್ ಅಧಿಕಾರಿಯಾದ ಪೊಲೀಸ್ ಕಾನ್‌ಸ್ಟೆಬಲ್ ಯೂರ್ಕೋಎಂಬಾತ ಶವಸಂಸ್ಕಾರ ಕರ್ತನಕಡೆ ತಿರುಗಿ "ಮಿತ್ರವರ್ಯ ಬಾರಯ್ಯ ನಿನ್ನ ಸತ್ತ ಸ್ನೇಹಿತರ ಆರೋಗ್ಯವನ್ನು ಕೋರಿ ಪಾನ ಮಾಡಯ್ಯಾ ಎಂದು ಗಟ್ಟಿಯಾಗಿ ಹೇಳಿದಾಗ ಎಲ್ಲರೂನಕ್ಕರು. ಇದರಿಂದ ಅವಮಾನಿತನಾದ ಶವಸಂಸ್ಕಾರ ಕರ್ತ" "ಗೃಹಪ್ರವೇಶೋತ್ಸವಕ್ಕೆ ನನ್ನ ಕ್ರೈಸ್ತ ಶವಗಳನ್ನೇ ಕರೆಸುತ್ತೇನೆ" ನಾಳೆ ನನ್ನ ಮನೆಯ ಔತಣಕ್ಕೆ ದಯಮಾಡಿಸಿ, ಎನ್ನುತ್ತ ಏಡ್ರಿಯಲ್ ಮಲಗಿ ನಿದ್ರೆ ಹೋದನು ಎಚ್ಚರಗೊಂಡಾಗ ವರ್ತಕನ ಹೆಂಡತಿ ಟ್ರೈಕಿನಾ ಸತ್ತ ಸುದ್ಧಿ ಕೇಳಿ ಅವಳ ಮನೆಗೆ ಬಂದಾಗ ಮೃತಳ ಮನೆಯಮುಂದೆ ಪೊಲೀಸ್ ಪಹರೆ ಇತ್ತು. ಶವಸಂಸ್ಕಾರ ಸಿದ್ಧತೆಗಳನ್ನು ಮಾಡಿ ಮನೆಗೆ ಬಂದಾಗ ಮನೆಯೊಳಕ್ಕೆ ತಾನು ಶವಸಂಸ್ಕಾರ ಗಾಡಿಯಲ್ಲಿ ಬಂದಿದ್ದವರಲ್ಲಿ ಮಾತಾಡತೊಡಗಿ ಒಂದು ಅಸ್ಥಿಪಂಜರ ಆಲಿಂಗನಕ್ಕಾಗಿ ತೋಳು ಚಾಚಿದಾಗ ಅದನ್ನು ತಳ್ಳಲು ಹೋಗಿ ಮೂಳೆಗಳ ಮೇಲೆ ಪ್ರಜ್ಞಾಶೂನ್ಯನಾಗಿ ಬಿದ್ದಿದ್ದನು. ಈ ರೀತಿ ಕನಸು ಕಂಡ ಅವನು ಬೆಳಗ್ಗೆ ಎದ್ದಾಗ ಕೆಲಸದವಳಿಗೆ ರಾತ್ರಿಯ ಪ್ರೇತಗಳ ದರ್ಶನ ವಿಚಾರ ಹೇಳಬೇಕು ಎಂದಿದ್ದಾಗ ಆಕ್ಸಿನ್ಯ ಕೆಲಸದಾಕೆ ಹೇಳಿದಳು "ರಾತ್ರಿ ತಡವಾಗಿ ಮಲಗಿದಿರಿ ಆಚೆಮನೆಯ ದರ್ಜಿ ನಿಮ್ಮನ್ನು ನೋಡಲು ಬಂದಿದ್ದರು. ಇವೊತ್ತು ಪೋಲೀಸ್ ಇನ್ಸ್‌ಪೆಕ್ಟರ ನಾಮಕರಣ ಎಂದು ತಿಳಿಸಲು ಕಾನ್‌ಸ್ಟೇಬಲ್ ಬಂದಿದ್ದ. ನೀವು ನಿದ್ದೆ ಹೋಗುತ್ತಿದ್ದಿರಿ ನಾನು ಎಚ್ಚರಗೊಳಿಸಲಿಲ್ಲ". ಎಂದು ಕೆಲಸದಾಳು ಹೇಳಿದಾಗ ಟ್ರಾಕಿನಾ ಕಡೆ ಯಾರಾದರೂ ಬಂದಿದ್ದೀರೇ? ಎಂದು ಹೇಳಲು "ಯಾಕೆ ಅವಳು ಸತ್ತಳೇ" ಎಂದು ಕೆಲಸಗಾಳು ಕೇಳಿದಾಗ "ಇದೇನಿದು ನೀನೆ ಅವಳ ಶವಸಂಸ್ಕಾರಕ್ಕೆ ಸಹಾಯ ಮಾಡಿದೆಯಲ್ಲಾ" ಎಂದಾಗ

"ನಿಮಗೆ ಹುಚ್ಚು ಹಿಡಿಯಿತೇ ನಿನ್ನೆಯ ಕುಡಿತದ ಕಾವು ಇನ್ನು ಇದೆಯೆ. ನಿನ್ನೆ ಯಾವ ಶವ ಸಂಸ್ಕಾರವೂ ಇರಲಿಲ್ಲ. ಜರ್ಮನ್ನ ಮನೇಲಿ ಕಂಠಪೂರ್ತಿ ಕುಡಿದು ಮನೆಗೆ ಬಂದು ಹಾಸಿಗೆ ಮೇಲೆ ಬಿದ್ದು ಕೊಂಡಿರಿ. ಈಗ ಎದ್ದಿದ್ದೀರಿ" ಎಂದಾಗ, "ಇದುವರೆಗೆ ನಿದ್ರೆ ಮಾಡುತ್ತಿದ್ದನೇ?" ಎಂದುಕೊಂಡು ಚಾ ತರಲು ಹೇಳಿದ.

ಕನಸಿನ ನೆನಪಿನಲ್ಲಿ ಶವಸಂಸ್ಕಾರ ಕತೆಯ ಕನಸು ಕಂಡ ಮೂಲಕ ತಾನು ಸಂಸ್ಕಾರ ಮಾಡಿದ ಶವಗಳನ್ನು ದರ್ಶಿಸುವ ಕನಸನ್ನು ಬಣ್ಣಿಸುವುದರ ಮೂಲಕ, ನಮ್ಮ ಮನೋವ್ಯಾಪಾರಗಳು ಹೇಗೆ ಮೂಡಿಬರುತ್ತವೆ. ಎಂಬುದನ್ನು ತಿಳಿಸಿದ್ದಾನೆ. ನಮ್ಮ ಮನಸ್ಸಿನ ಭಾವನೆಗಳು ಹೇಗೆ ಕನಸಿನ ಲೋಕದಲ್ಲಿ ಅಭಿವ್ಯಕ್ತಿ ಗೊಳ್ಳುತ್ತದೆ ಎಂಬುದರು ಚಿತ್ರಣ ಇಲ್ಲಿ ಚೆನ್ನಾಗಿ ಮೂಡಿದೆ.

ಅಂಚೆಯಜಮಾನ

The postmaster ಕಥೆಯ ಅನುವಾದವೇ **ಅಂಚೆಯಜಮಾನ** ಪೋಸ್ಟ್ ಮಾಸ್ಟರ್ ಎಂದರೆ ಪಾಶ್ಚಾತ್ಯ ದೇಶಗಳಲ್ಲಿ ಹಿಂದೆ ಪ್ರಯಾಣಮಾರ್ಗಗಳಲ್ಲಿ ಅಲ್ಲಲ್ಲಿಗೆ ಮಜಲುಗಳೂ ಅಥವಾ ಟಪ್ಪಾಲುಗಳೂ ಇರುತ್ತಿದ್ದವು. ಪ್ರತಿಮಜಲಿನಲ್ಲಿಯೂ ಒಬ್ಬ ಅಧಿಕಾರಿಯ ವಶದಲ್ಲಿ ಕುದುರೆಗಳೂ ಕುದುರೆಬಂಡಿಯೂ ಇರುತ್ತಿದ್ದವು. ಆಗ ಅಂಚೆ ಕಾಗದಗಳನ್ನು ಕುದುರೆ ಸವಾರರು ಒಯ್ಯುತ್ತಿದ್ದರು. ಈ ಅಂಚೆನಿಲ್ದಾಣದ ಯಜಮಾನ ಅಂಚೆ ಕುದುರೆಸವಾರರು, ಇತರ ಕುದುರೆ ಸವಾರರಿಗೂ ಅವರ ಅಪೇಕ್ಷಿಸಿದಾಗ ಕುದುರೆ ಬದಲಾಯಿಸಲು ವ್ಯವಸ್ಥೆ ಮಾಡಬೇಕಿತ್ತು. ಇಂಥ ಒಬ್ಬ ಅಂಚೆಯಜಮಾನನ ಕಥೆ ಇಲ್ಲಿಯವಸ್ತು.

ಒಂದು ದಿನ ಚಿಕ್ಕ ಅಧಿಕಾರಿಯೊಬ್ಬ ಅಂಚೆ ಯಜಮಾನನ ಬಳಿಬಂದು ಅವನ ಉಪಯೋಗಕ್ಕೆ ಮೀಸಲಾದ ಕುದುರೆಯನ್ನು ಯಾರೋ ಉನ್ನತಾಧಿಕಾರಿ ಬಂದು ತೆಗೆದುಕೊಂಡು ಹೋಗಿದ್ದು, ಚಿಕ್ಕ ಅಧಿಕಾರಿ ಅಂಚೆಯಜಮಾನನ ಮೇಲೆ ಅದಕ್ಕಾಗಿ ರೇಗಿದ್ದನು. ಇನ್ನೊಂದು ದಿನ ಮಳೆಯಲ್ಲಿ ತೊಯ್ದು ಬಂದಾಗ, ಅಂಚೆಯಜಮಾನನ ಮಗಳು ದುನ್ಯಾಳು ಚಹಾ ಮಾಡಿಕೊಟ್ಟಾಗ ಕೈಸಾಲೆಯಲ್ಲಿ ಹಲವಾರುಬಾರಿ ಅವಳನ್ನು ಮುದ್ದಿಸಿದ್ದ. ಅವಳು ಚಾ ತವರುವರೆಗೆ ಪಡಸಾಲೆಯಲ್ಲಿದ್ದ ಮಗನ ಬಾಳಿನ ಪುಟಗಳ ಚಿತ್ರಪಟಗಳನ್ನು ವೀಕ್ಷಿಸಿದ್ದನು. ಹಲವು ವರ್ಷಗಳಾದ ಮೇಲೆ ಈ ಅಧಿಕಾರಿ ಮತ್ತೆ ಆ ಅಂಚೆ ಜಯಮಾನನಬಳಿ ಬಂದಾಗ ದುನ್ಯಾ ಎಲ್ಲಿ ಕಾಣುತ್ತಿಲ್ಲ ಎಂದಾಗ ಆತ ಹೇಳತೊಡಗಿದ. ಒಮ್ಮೆ ಬಂದ ಪ್ರಯಾಣಿಕನೊಬ್ಬನು ಕುದುರೆಗಳಿಲ್ಲದ ಕಾರಣ ಬದಲಿಸಿಕೊಳ್ಳಲು ಕುದುರೆಗಳು ಬರುವವರೆಗೆ ಕಾದಿರುವಾಗ ದುನ್ಯಾ ಅಂಚೆಯಜಮಾನನ ಮಗಳು ಚಹಾಕೊಟ್ಟಳು. ಕುದುರೆಗಳು ಹಿಂತಿರುಗಿ ಬರುವ ವೇಳೆಗೆ ಯುವಕ ಎಚ್ಚರ ತಪ್ಪಿ ಬಿದ್ದಿದ್ದ. ಅವನಿಗೆ ಅಂಚೆಯಜಮಾನ ಮಗಳು ದುನ್ಯಾ ಶುಶ್ರೂಷೆ ಮಾಡಿದಳು. ಡಾಕ್ಟರನ್ನು ಕರೆಸಿದಳು. ಕೆಲವು ದಿನಗಳ ನಂತರ ಆ ಪ್ರಯಾಣಿಕ ರಾಹುತ ಸಿಪಾಯಿ ಗುಣಮುಖನಾದನು. ಅವರಿಗೆ ನೆರವಾಗಿ ಅವರ ಪ್ರೀತಿಪುತ್ರನಾಗಿ, ಕೆಲವು ದಿನಗಳ ನಂತರ ಜಾರುಬಂಡಿಯನ್ನು ತೆಗೆದುಕೊಂಡು ಹೋಗುವಾಗ, ಚರ್ಚಿನ ಬಳಿಗೆ ಅವಳನ್ನು ಬಿಟ್ಟು ಹೋಗಬೇಕೆಂದು ಕರೆದುಕೊಂಡು ಹೋಗಿ, ಹಾಗೆಯೇ ಅಪಹರಿಸಿಕೊಂಡು ಹೋದನು. ನಂಬಿಕೆಯಿಟ್ಟಿದ್ದ ಅಂಚೆಯಜಮಾನ, ರಾಹುತಸಿಪಾಯಿ ಮೋಸ ಮಾಡಿದನೆಂದು ತಿಳಿದನು. ಅನಂತರ ಹಲವು ಬಾರಿ ಅವನನ್ನು ಹುಡುಕಲು ತೊಡಗಿ ಕೊನೆಗೆ ಮಿನ್ಸ್ಕ್ಊರಿನಲ್ಲಿ ಪತ್ತೆ ಹಾಕಿದನು. ಅವಳನ್ನು ನೋಡಲು ಬಿಡಲಾರದೆ ಆ ಸಿಪಾಯಿ ಅಂಚೆ ಯಜಮಾನನ್ನು ಬೀದಿಗೆ ತಳ್ಳಿದನು. ಕೆಲವು ದಿನಗಳ ನಂತರ ಮತ್ತೊಮ್ಮೆ ಭೇಟಿ ಆದಾಗ ಮಗಳು ತಂದೆಯನ್ನು ನೋಡಿ ದುಃಖತಪ್ತಳಾಗಿ ಕೆಳಗೆ ಬಿದ್ದಾಗ ರಾಹುತ ಸಿಪಾಯಿ ಅಂಚೆ ಯಜಮಾನನನ್ನು ಮತ್ತೆ ಹೊರಗೆ ತಳ್ಳಿದನು. ಮಗಳ ಆಸೆಬಿಟ್ಟು ತನ್ನ ಊರಿಗೆ ತಾನು ಹಿಂದಿರುಗಿದೆ ಎಂದು ಹೇಳಿದನು.

ಮತ್ತೆ ಸ್ವಲ್ಪಕಾಲ ಕಳೆದ ಮೇಲೆ ಈ ದುನ್ಯಾಳನ್ನು ಮುದ್ದಿಸಿದ ಅಧಿಕಾರಿ

ಅಂಚೆಯಜಮಾನನ್ನು ನೋಡಲು ಬಂದಾಗ ನಿಧನನಾಗಿದ್ದನು. ಅವನು ಮನೆಯನ್ನು ಮಾರಿ ಕುಡಿತದಲ್ಲೇ ಗತಿಸಿದ್ದನು. ಅವನ ಸಮಾಧಿಯನ್ನು ರಾಹುತಸವಾರ ಹುಡುಗನೊಬ್ಬನ ಸಹಾಯದಿಂದ ನೋಡಿದಾಗ, ಆ ಹುಡುಗ ಹೇಳಿದ ಸಂಗತಿಯಿಂದ ದುನ್ಯಾ ಅಲ್ಲಿ ಬಂದು. ತಂದೆಯ ಗೋರಿಯಬಳಿ ರೋಧಿಸಿದಳು ಎಂದು ತಿಳಿಯಿತು. ಅವಳು ಬಂದಾಗ ಈ ಹುಡುಗನಿಗೆ ಸಮಾಧಿ ತೋರಿಸಲು ೫ ಕೊಪೆಕ್ ನಾಣ್ಯಗಳನ್ನು ಕೊಟ್ಟಿದ್ದಳು. ಅವಳು ಎಂಥ ಒಳ್ಳೆಯ ಹೆಂಗಸು ಎಂದಾಗ ಇವನೂ ೫ ಕೊಪೆಕ್ ನಾಣ್ಯ ಕೊಟ್ಟನು "ಪ್ರಯಾಣ ಮಾಡಿ ಬಂದಿದ್ದಕ್ಕಾಗಲಿ ಅದಕ್ಕಾಗಿ ಏಳು ರೂಬೆಲ್ ವೆಚ್ಚ ಮಾಡಿದ್ದಕ್ಕಾಗಲಿ ಈಗ ನನಗೆ ವ್ಯಸನವಾಗಲಿಲ್ಲ" ಎಂದನು. ಎಂದು ಕಥೆ ಮುಗಿಯುತ್ತದೆ.

ಒಬ್ಬ ಅಂಚೆಯಜಮಾನನ ಮಗಳಬದುಕು "ಅವಳ ರೂಪ ಚಟುವಟಿಕೆ ಆಕರ್ಷಣೆ ಅವಳಿಗೆ ಮುಳುವಾಗಿದ್ದು" ಸದ್ವಸ್ಥ ತಂದೆ ನಂಬಿ ಮೋಸ ಹೋದ ಸಂಗತಿ. ಆ ಮಗಳ ಮೇಲೆ ಮೋಹಗೊಂಡವನು ಅವಳನ್ನು ಹುಡುಕಿಕೊಂಡು ಬಂದಿದ್ದು. ಮತ್ತೊಬ್ಬ ಯುವಕ ತಾನು ಅವಳನ್ನು ಕರೆದೊಯ್ದು ಇಟ್ಟುಕೊಂಡು ತಂದೆಯನ್ನೇ ದೂರಮಾಡಿದಾಗ ಆ ಕೊರಗಿನಲ್ಲಿ ಸತ್ತಿದ್ದು. ಮಗಳು ಪರಿತಪಿಸಿ ತಂದೆಯನ್ನು ಹುಡುಕಿಕೊಂಡು ಬಂದದ್ದು. ಈ ಎಲ್ಲ ಘಟನೆಗಳು ಯುವಕರ ಮೋಹಾಕರ್ಷಣೆ ಹೇಗಿರುತ್ತದೆ. ಎಂಥ ಅನಾಹುತ ತಂದೊಡ್ಡುತ್ತದೆ. ತಂದೆಯ ವಾತ್ಸಲ್ಯ ಏನುಮಾಡಿಸುತ್ತದೆ. ಮಗಳಿಗೆ ತಂದೆಯ ಮೇಲೆ ಪ್ರೀತಿ ಇದ್ದರೂ ಪ್ರೀತಿಗೆ ಒಳಗಾಗಿ ಎಂಥ ಸಂದಿಗ್ಧತೆ ಬಾಳಲ್ಲಿ ಸಿಕ್ಕಿಕೊಳ್ಳುತ್ತಾಳೆ ಎಂಬ ಸಂಗತಿಗಳು ಇಲ್ಲಿ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಮಾಕ್ಸಿಂಗಾರ್ಕಿ ಹೇಳುವಂತೆ. "ಒಂದು ನಿರ್ದಿಷ್ಟ ಯುಗದ ನಡೆವಳಿಕೆಗಳು ರೀತಿ ನೀತಿಗಳು, ಭಾವ ಭಾವನೆಗಳು ಇವುಗಳ ಬಗೆಗೆ ಮೇಧಾವಿ ಅನುಭವಶಾಲಿಯೂ ಪ್ರಯಾಣಿಕನೂ ಆದವನೊಬ್ಬನ ಅಮೂಲ್ಯ ಸಾಕ್ಷಿಯಂತಿವೆ" ಪುಷ್ಕನ್ನನ ಕಥೆಗಳು "ಎಂಬ ಮಾತಿಗೆ ಈ ಕಥೆ ಒಂದು ಸಾಕ್ಷಿಯಾಗಿದೆ. ಎಲ್.ಎಸ್. ಶೇಷಗಿರಿರಾವ್ ಹೇಳುವಂತೆ "ಅತಿದಬ್ಬಾಳಿಕೆ ಯುಗದಲ್ಲೂ ಸಾಹಿತಿಯು ಸ್ವಾತಂತ್ರ್ಯವನ್ನು ಉಳಿಸಿಕೊಂಡು ಪುಷ್ಕನ್ ಜನಸಾಮಾನ್ಯರ ಮನೋಧರ್ಮವನ್ನು ಕಥೆಗಳಲ್ಲಿ ಹತ್ತಿರಕ್ಕೆ ತಂದು ಮಾನವೀಯತೆಯನ್ನು ಎತ್ತಿಹಿಡಿದಿದ್ದಾನೆ.

ಪರಿವರ್ತನೆ

lady into lassie ಎಂಬ ಕಥೆಯ ಕನ್ನಡರೂಪ ಪರಿವರ್ತನೆ. ೩೫ ಪುಟಗಳ ವಿವರಣಾತ್ಮಕ ನಿರೂಪಣೆಯ ಕಥೆ. ಒಟ್ಟು ಕತೆಯನ್ನು ನಾಲ್ಕೇ ಮಾತಿನಲ್ಲಿ ಹೇಳಿ ಬಿಡಬಹುದು. ಇವಾನ್ ಪೆಟ್ರೋವಿಚ್ ಬೆರಿಸ್ಟಾಫ್. ಇರಾನೋವಿಚ್ ಮ್ಯುರೊಮ್ಸ್ಕಿ ಇಬ್ಬರೂ ಒಂದೇ ಹಳ್ಳಿಯಲ್ಲಿ ವಾಸಿಸುತ್ತಿದ್ದ ವಿರುದ್ಧ ಸ್ವಭಾವದವರು. ಬೆರಿಸ್ಟಾಪನ ಮಗ ಅಲೆಕ್ಸಿ ಇರಾನೋವಿಟ್‌ನ ಮಗಳು ಲೀಸ ಇಬ್ಬರೂ ಒಬ್ಬರನ್ನೊಬ್ಬರು ವಿಶಿಷ್ಟ ರೀತಿಯಲ್ಲಿ ಭೇಟಿ ಆಗುತ್ತಾರೆ. ಇಬ್ಬರ ತಂದೆಯರು ವಿರೋಧಭಾವ

ಹೊಂದಿದ್ದರಿಂದ ಲೀಸಾ ಹಳ್ಳಿಹುಡುಗಿಯಂತೆ ವೇಷಧರಿಸಿ ಅಕ್ಕುಲೀನ ಎಂಬ ಹೆಸರಿನಲ್ಲಿ ಅಲೆಕ್ಸಿಗೆ ಪರಿಚಯವಾಗುತ್ತಾಳೆ. ಒಂದುದಿನ ಬೆರಿಸ್ಟಾಫ್ ಇರಾನೋವಿಚ್ ಬೇಟೆಗೆ ಹೊರಟು ಎದುರು ಬದುರು ಸಂಧಿಸಿ, ಇರಾನೋವಿಚ್‌ನ ಕುದುರೆ ಬೆದರಿ ಆತ ಕೆಳಗೆ ಬಿದ್ದು ಅವನನ್ನು ಬೆರಿಸ್ಟ್ಯಾಫ್ ಉಪಚರಿಸಿದ್ದರಿಂದ ದ್ವೇಷ ಪ್ರೀತಿಗೆ ತಿರುಗಿ ಇವಾನೊವಿಚ್ ತನ್ನ ಮನೆಗೆ ಬೆರಿಸ್ಯಾಫ್‌ನನ್ನು ಅವನ ಮಗ ಅಲೆಕ್ಸಿಯನ್ನು ಆಹ್ವಾನಿಸುತ್ತಾನೆ. ಆಗ ಮಾರುವೇಷದಲ್ಲಿ ಲೀಸ ಕಾಣಿಸಿಕೊಳ್ಳುತ್ತಾಳೆ ಅಲೆಕ್ಸಿಗೆ ಉದ್ಯಾನವನದಲ್ಲಿ ಕಾಣಿಸಿಕೊಂಡಂತೆ ಭಿನ್ನವೇಷದಲ್ಲಿ. ಅನಂತರ ಇಬ್ಬರೂ ಹಿರಿಯರು ತಂತಮ್ಮ ದೃಷ್ಟಿಯಲ್ಲಿ ಯೋಚಿಸಿ ಇವರಿಬ್ಬರ ಮದುವೆಗೆ ಒಪ್ಪಿಗೆ ಸೂಚಿಸುವ ಹಂತಕ್ಕೆ ಬಂದಿರುತ್ತಾರೆ. ಒಂದುದಿನ ಅಲೆಕ್ಸಿ ಲೀಸಾ ಮನೆಗೆ ಬಂದು ಅಕ್ಕುಲಿನ ವೇಷದಲ್ಲಿದ್ದ ಲೀನಾಳನ್ನು ಭೇಟಿ ಆದಾಗ ಅಲ್ಲಿಗೆ ಇವಾನೋವಿಚ್, ಮಿಸ್‌ಜಾಕ್ಸನ್ ಬಂದಾಗ ಎಲ್ಲರಿಗೂ ಗುಟ್ಟು ರಟ್ಟಾಗುತ್ತದೆ

"ಕಥೆಯ ಅಂತ್ಯವನ್ನು ವರ್ಣಿಸುವ ಅನಾವಶ್ಯಕ ಕಾರ್ಯವನ್ನು ಓದುಗರು ನನಗೆ ಬಿಡಲಾರರು" ಎಂದು ಪುಷ್ಕಿನ್ ಕಥೆ ಮುಗಿಸುತ್ತಾನೆ.

ನಾಟಕೀಯ ಸನ್ನಿವೇಶಗಳಿಂದ ಕೂಡಿದ ಈ ಕಥೆಯಲ್ಲಿ ಪುಷ್ಕಿನ್, ಪ್ರಣಯಿಗಳ ಪ್ರೇಮ ಶುದ್ಧವಾಗಿದ್ದು ಅದಕ್ಕೆ ದೈವಾನುಕೂಲ ಎಂಬಂತೆ ಇಬ್ಬರ ತಂದೆಯರ ದ್ವೇಷವನ್ನು ಹೋಗಲಾಡಿಸುವ ಸನ್ನಿವೇಶ ಒದಗಿಬಂದು ಇಬ್ಬರು ಪ್ರೇಮಿಗಳು ಒಂದಾಗುತ್ತಾರೆ. ಇಬ್ಬರ ತಂದೆಯರು ತಂತಮ್ಮ ದೃಷ್ಟಿಯಲ್ಲಿ ಇವರಿಬ್ಬರ ವಿವಾಹಕ್ಕೆ ಚಿಂತಿಸುತ್ತಾರೆ. ಅಲೆಕ್ಸಿಗೆ ಮಾರುವೇಷದ ಹುಡುಗಿ ಲೀಸಾ ಅಂತ ತಿಳಿಯದೆ ವಿಧಿಯಿಲ್ಲದೆ ತಂದೆಯ ಮಿತ್ರನ ಹುಡುಗಿಯನ್ನು ಮದುವೆಯಾಗಲು ಸಿದ್ಧನಾಗಿ ಆ ಬಗ್ಗೆ ಪ್ರೀತಿಸಿದ ಹುಡುಗಿ ಅಕ್ಲುಲಿನ ಮಾರುವೇಷದ ಲೀಸಾಗೆ ಪತ್ರ ಬರೆದು ಹಾಕಿದಾಗ, ಆ ಪತ್ರ ಓದುತ್ತಿದ್ದ ಲೀಸಾಳನ್ನು ಅಕ್ಕುಲಿನವೇಶದಲ್ಲಿ ಭೇಟಿಆಗುವ ನಾಟಕೀಯ ಸನ್ನಿವೇಶದಲ್ಲಿ ಕಥೆ ಮುಗಿಯುತ್ತದೆ. ಅನೇಕರ ಬದುಕಿನಲ್ಲಿ ತಾವಾಗಿ ಮಾಡಿದ ಹುಡುಗಾಟಿಕೆ ಪ್ರಯತ್ನಗಳು ಅನುಕೂಲ ಸಿದ್ಧಿಯ ಕಾರ್ಯಗಳಾಗಿ ವಿಧಿಯ ಬಲದಿಂದ ಒದಗಿಬರುವ ಚಿತ್ರಣ ಇಲ್ಲಿದೆ.

ಪುಷ್ಕಿನ್ನನು ಕಥೆಗಳನ್ನು ಕುತೂಹಲಕಾರಿಯಾಗಿ ಬರೆಯಬಲ್ಲ, ಅವ್ಯಕ್ತಶಕ್ತಿಯ ಕೈವಾಡಗಳನ್ನು ಚಿತ್ರಿಸಬಲ್ಲ, ವಾಸ್ತವವಾಗಿ ಬದುಕಿನಲ್ಲಿ ಘಟನೆಗಳು ನಡೆದಂತೆ ಚಿತ್ರಿಸಬಲ್ಲ, ಮಾನವೀಯತೆ ಮತ್ತು ಮಾನವನ ಸಹಜ ಸ್ವಭಾವಗಳನ್ನು ಸರಳವಾಗಿ ಚಿತ್ರಿಸಬಲ್ಲ ಎನ್ನಲು ಈ ಕಥಾ ಸಂಗ್ರಹದ ಕತೆಗಳು ಸಾಕ್ಷಿಯಾಗಿವೆ.

ರಷ್ಯಾದ ಪ್ರಸಿದ್ಧ ಸಾಹಿತಿಗಳಲ್ಲಿ ಮ್ಯಾಕ್ಸಿಂ ಗಾರ್ಕಿ ಒಬ್ಬನು ವಿಶ್ವಸಾಹಿತಿಗಳ ಸಾಲಿಗೆ ಸೇರಿದವನು. ತಾಯಿ ಕಾದಂಬರಿಯಿಂದ ಪ್ರಖ್ಯಾತನಾದ ಮ್ಯಾಕ್ಸಿಂ ಗಾರ್ಕಿ ಶ್ರೇಷ್ಠ ಕತೆಗಾರನೂ ಹೌದು. ಎಂ.ವಿ.ಸೀ ಅವರು ಇಂಗ್ಲಿಷ್ ಸಾಹಿತ್ಯದಲ್ಲಷ್ಟೆ ಅಲ್ಲದೆ ರಷ್ಯನ್ ಅಮೆರಿಕನ್ ಸಾಹಿತ್ಯದಲ್ಲಿ ಆಸಕ್ತಿ ತಳೆದು ಅಭ್ಯಾಸ ಮಾಡಿದ್ದರು. ಒಂದು ಕಾಲದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪರಿಣಾಮವಾಗಿ ಕಮ್ಯೂನಿಸಂ ಸಾಹಿತ್ಯಕ್ಕೆ ವಿಶೇಷವಾಗಿ ಮಾರ್ಕ್ಸ್‌ಸಿದ್ಧಾಂತಕ್ಕೆ ಮಾರು ಹೋದವರು. ಕನ್ನಡಕ್ಕೆ

ಅನೇಕ ರಷ್ಯನ್ ಸಾಹಿತಿಗಳ ಕೃತಿಗಳನ್ನು ತಂದರು. ಟಾಲ್‌ಸ್ಟಾಯಿ, ಚೆಕಾಫ್ ದೊಸ್ತೊವಸ್ಕಿ, ಪುಷ್ಕಿನ್, ಮೊದಲಾದವರ ಕೃತಿಗಳು ಕನ್ನಡಕ್ಕೆ ಬಂದವು. ಆ ಪೈಕಿ ಮ್ಯಾಕ್ಸಿಂ ಗಾರ್ಕಿ ಕೃತಿಗಳೂ ಬಂದವು. ಎಲ್. ಗುಂಡಪ್ಪ, ದೇಜಗೌ, ನಿರಂಜನ, ಮೊದಲಾದ ಅನೇಕ ಸಾಹಿತಿಗಳು ಕನ್ನಡಕ್ಕೆ ರಷ್ಯನ್ ಸಾಹಿತ್ಯವನ್ನು ಅನುವಾದಿಸಿದ್ದಾರೆ. ಈ ದಿಸೆಯಲ್ಲಿ ಅಳಿಲುಸೇವೆ ಎಂ.ವಿ.ಸೀ. ಅವರದೂ ಇದೆ. ಪುಷ್ಕಿನ್ ಕಥೆಗಳನ್ನು ಗಾರ್ಕಿಕಥೆಗಳನ್ನು ಕನ್ನಡಕ್ಕೆ ಎಂವಿಸೀ ನೀಡಿದ್ದಾರೆ.

ರತಿದೇವಿ ಮತ್ತು ಇತರ ಕಥೆಗಳು ಕಥಾಸಂಗ್ರಹದಲ್ಲಿ (೧೯೪೫) ಬೊಲೆಸ್ಲೊ ಕಥೆ ಪ್ರಕಟವಾಗಿದೆ. ಟೆರಿಸ ಎಂಬ ಯುವತಿಯ ಪ್ರೇಮಲೋಕದ ಕಾಲ್ಪನಿಕ ವ್ಯಕ್ತಿ ಬೊಲೆಸ್ಲೊ. ಯೌವನದಲ್ಲಿ ಕಲ್ಪನಾಲೋಕದ ಯುವತಿಯರು ಹೇಗೆ ವರ್ತಿಸಬಲ್ಲರು ಎಂಬುದರ ಚಿತ್ರಣ ಇಲ್ಲಿದೆ. ಒಂದು ರೀತಿ ಮನೋವ್ಯಾಪಾರದ ಚಿತ್ರಣದ ಕಥೆ ಇದು.

ಮಾಸ್ಕೋದಲ್ಲಿ ಒಬ್ಬಯುವಕ ವ್ಯಾಸಂಗ ಮಾಡುತ್ತಿದ್ದಾಗ ಅವನು ವಾಸಿಸುತ್ತಿದ್ದ ಸಣ್ಣಮನೆಯ ನೆರೆಮನೆಯಲ್ಲಿ ಪೊಲಿಷ್ ಹೆಣ್ಣು ಮಗಳು ಅನಕ್ಷರಸ್ಥೆ ಇದ್ದಳು. ಆಗಾಗ ಸಂಧಿಸುತ್ತಿದ್ದಳು. "ಓಹೋ ವಿದ್ಯಾರ್ಥಿಗಳೇ" ಎಂದು ಸಂಬೋಧಿಸಿ ಮಾತನಾಡಿಸುತ್ತಿದ್ದಳು.

ಒಂದು ದಿನ ಟೆರಿಸ ಇವಳ ಬಳಿಗೆ ಬಂದು ಒಂದು ಪತ್ರ ಬರೆದುಕೊಡಬೇಕು ಎಂದು ಕೇಳಿದಾಗ ಕತೆಗಾರ ಆಗಲಿ ಎನ್ನುತ್ತಾನೆ, ಆಗ ಅವಳು ಬರೆಸಿದ್ದು ಬೊಲೆಸ್ಲೊ ಎಂಬಾತನಿಗೆ. "ನನ್ನ ಪ್ರಿಯ ವೊಲೆಸ್ ನನ್ನ ಪ್ರಿಯತಮಾ ನನ್ನ ಪ್ರೇಮವೇ ನನ್ನ ಪ್ರಾಣಪದರವೇ ನನ್ನ ಪ್ರಿಯನೇ, ಇಷ್ಟು ದೀರ್ಘಕಾಲವಾದರೂ ನಿನ್ನ ಮುದ್ದು ಪಾರಿವಾಳಕ್ಕೆ, ಇಷ್ಟೊಂದು ವ್ಯಸನ ಪಡುತ್ತಿರುವ ನಿನ್ನ ಟೆರಿಸಗೆ, ಏಕೆ ಇನ್ನೂ ಕಾಗದ ಬರೆದಿಲ್ಲ ? ......" ಬೊಲೆಸ್ಲೊ ಯಾರು ಎಂದು ಕೇಳಿದಾಗ "ನನ್ನನ್ನು ಮದುವೆ ಆಗಲು ಮಾತುಕೊಟ್ಟಿರುವ ನನ್ನ ಪ್ರಿಯ" ಎಂದಳು. ಬರೆದುಕೊಟ್ಟಿದ್ದಕ್ಕೆ ಪ್ರತಿಫಲವಾಗಿ "ನಿಮ್ಮ ಷರಟು ಬಟ್ಟೆಬರೆ ಹರಿದಿದ್ದರೆ ಹೊಲಿದು ಕೊಡಬಲ್ಲೆ" ಎಂದಾಗ ಏನೂ ಬೇಡವೆಂದ.

ಎರಡು ವಾರದ ಮೇಲೆ ಬಂದು ಮತ್ತೊಂದು ಕಾಗದ ಬರೆದು ಕೊಡುವಿರಾ ಎಂದಳು. ಟೆಲಿಸಾ ಬೊಲೆಸ್ಲೋಗೆ ಬರೆದ ಪತ್ರ ಬರೆದುಕೊಡಲು ಕೇಳಿದಳು. ಆಮೇಲೆ ತಿಳಿಯಿತು. ವಿಚಾರಿಸಿದಾಗ, ಬೊಲೆಸ್ಲೊ ಆಗಲಿ ಟೆರಿಸಾ ಆಗಲಿ ಯಾರೂ ಇರಲಿಲ್ಲ. "ಅವಳಿಗೆ ಪ್ರೀತಿಯ ಲವಲೇಶವನ್ನು ತೋರುವವರು. ಯಾರೊಬ್ಬರೂ ಇರಲಿಲ್ಲ ಈ ಬಡಪ್ರಾಣಿ ತನಗಾಗಿ ಒಬ್ಬ ಇನಿಯನನ್ನು, ಮದುಮಗನನ್ನು ಮಾನಸಿಕವಾಗಿ ಸೃಷ್ಟಿಸಿಕೊಂಡಿದ್ದು. ಅವನಿದ್ದಾನೆ ಎಂದು ಭಾವಿಸಿ ಪತ್ರಗಳ ಮೂಲಕ ಇಬ್ಬರ ಮಾನಸಿಕ ವ್ಯಾಪಾರ ನಡೆದಿತ್ತು.

ಯುವಕ ಅವಳಿಗೆ ವಾರಕ್ಕೆರಡು ಪತ್ರಗಳನ್ನು ಬರೆದು ಕೊಡುತ್ತಿದ್ದನು. ಒಂದು ಪತ್ರ ಟೆರಿಸಾ ಇಂದ ಬೊಲೆಸ್ಲೋರೆ ಇನ್ನೊಂದು ಬೊಲೆಸ್ಲೋ ಇಂದ ಟೆರಿಸಾಗೆ. ಆ ಭಾವಾವೇಶದ ಪತ್ರಗಳನ್ನು ಓದಿಸಿಕೇಳುತ್ತಿದ್ದಳು. ಕೇಳಿ ಅಳುತ್ತಿದ್ದಳು

ನಗುತ್ತಿದ್ದಳು, ಸುಖಪಡುತ್ತಿದ್ದಳು. ಕತೆಗಾರನಿಗೆ ಪ್ರತಿಫಲವಾಗಿ ಬಟ್ಟೆಬರೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದಳು.

ಮೂರು ತಿಂಗಳುಗಳ ತರುವಾಯ ಉನ್ಮಾಥಿ ಪ್ರಣಯಿ ಟೆರಿಸಾಳನ್ನು ಯಾವುದೋ ಗುಮಾನಿಯ ಮೇಲೆ ದಸ್ತಗಿರಿ ಮಾಡಿ ಜೈಲಿಗೆ ಹಾಕಿದರು. ಆಮೇಲೆ ಅವಳ ವಿಷಯ ತಿಳಿಯಲಿಲ್ಲ. ಬಹುಶ ಸತ್ತು ಹೋಗಿರಬಹುದು ಅಲ್ಲೇ ಎಂದುಕೊಂಡ ಯುವಕ.

ಬೊಲೆಸ್ಲೊ ಯುವಕ ಯುವತಿಯರ ಪ್ರಣಯ ಭಾವನೆಗಳ ವ್ಯಕ್ತಿ ಸ್ವರೂಪ, ವಯಸ್ಸಿಗೆ ಬಂದಾಗ ದೇಹಕ್ಕೆ ಆಹಾರ ಬೇಕಾದಂತೆ ಮನೋಕಾಮನೆಗಳಿಗೆ ಸಹಜ ಪ್ರೇಮವ್ಯಾಪಾರಕ್ಕೆ ಅವಕಾಶವಾಗದಿದ್ದರೆ. ಆ ಉನ್ಮಾದ ಪತ್ರರೂಪದಲ್ಲಿ ಟೆರಿಸಾ ಬದುಕಿನಲ್ಲಿ ಕಾಣಿಸಿಕೊಂಡ ಬಗೆ ಈ ಕಥೆಯಲ್ಲಿ ಚಿತ್ರಿತವಾಗಿದೆ. ಇದು ಸಾರ್ವಕಾಲಿಕಸತ್ಯ. ಕಲ್ಪನಾಲೋಕದಲ್ಲಿ ಯೌವನಕಾಲದಲ್ಲಿ ವಿಹರಿಸುವವರು ಯಾವುದಾದರೂ ವ್ಯಕ್ತಿ-ಮಾಧ್ಯಮ ಬೇಕು, ಪ್ರಯಾಣಿಕನೊಬ್ಬ ಬೇಕು ಎಂದು ಬಯಸುತ್ತಾರೆ. ಸಿಗದಿದ್ದಾಗ ತಮ್ಮದೇ ಆದ ದಾರಿ ಹುಡುಕಿಕೊಳ್ಳುತ್ತಾರೆ ಎಂಬ ಸತ್ಯ ಈ ಕಥೆಯಲ್ಲಿ ಅಡಗಿದೆ.

ಗಂಡಿನ ಹೃದಯ

ಬಿಸಿಲು ಬೆಳುದಿಂಗಳು ಕಥಾ ಸಂಗ್ರಹ ಎಂ ವಿ ಸೀ ಅವರು ೧೯೫೩ರಲ್ಲಿ ಪ್ರಕಟಿಸಿದ ಕಥಾ ಸಂಗ್ರಹ. ಅವರ ಇತರ ಕಥಾಸಂಗ್ರಹಗಳಲ್ಲಿ ಇರುವಂತೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳ ಜತೆಗೆ, ಅಪ್ರಕಟಿತ ಕಥೆಗಳು ಈ ಸಂಗ್ರಹಗಳಲ್ಲಿ ಇವೆ. ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳ ಜತೆಗೆ ಅಪ್ರಕಟಿತ ಕಥೆಗಳೂ ಈ ಸಂಗ್ರಹದಲ್ಲಿವೆ. ಅವರ ಸ್ವತಂತ್ರ ಕಥಾಸಂಗ್ರಹಗಳಲ್ಲಿ ಸಾಮಾನ್ಯವಾಗಿ ಒಂದೆರಡು ಅನುವಾದಿತ ಕಥೆಗಳೂ ಸೇರಿರುತ್ತವೆ. ಈ ಸಂಗ್ರಹದಲ್ಲಿ 'ಪ್ರಭಾತ' ವಾರ್ಷಿಕ ಸಂಚಿಕೆ (೧೯೪೩ ಆಗಸ್ಟ್)ಯಲ್ಲಿ ಪ್ರಕಟವಾದ ಅನುವಾದಿತ ಕಥೆ ಸೇರಿದೆ. ಈ ಕಥೆಯ ಕಾಸಿಮೊ ಗಿಯೊಗೀರಿ ಕಾಂಟ್ರ ಎಂಬ ಇಟಾಲಿಯನ್ ಕಥೆಗಾರ ಬರೆದ ಕಥೆಯ ಅನುವಾದವಾಗಿದೆ.

ಗೂಗ್ಮಿಲೊ ೩೦ ವರುಷದ ಯುವಕ. ಅವನು ಸೋದರತ್ತೆಯ ಮಗಳಾದ ಅನಾ. ಜತೆ ಚಿಕ್ಕಂದಿನಿಂದ ಒಡನಾಡಿದ್ದನು. ಅನಾ ಎತ್ತರವಾದ ಚೆಂದಾದ ಹುಡುಗಿ, ಅಲಂಕಾರ ಮಾಡಿಕೊಂಡು ಸೊಗಸಾಗಿ ಕಾಣಿಸುವಳು. ಆದರೆ ಗೂಗ್ಮಿಲೊ ತಾಯಿಗೆ ಅವಳೊಬ್ಬ ಭ್ರಾಂತಿ ಅನಿಸಿದ್ದಳು. ಆದರೆ ಮಗನಿಗೆ ಅವಳಲ್ಲಿ ಪ್ರೀತಿ. ತಾಯಿ ಅವಳನ್ನು ವರಿಸಲು ಅವಕಾಶ ಕೊಡದೆ ಪರೀನ ಎಂಬ ಅಷ್ಟೇನೂ ಅಂದವಿಲ್ಲದ, ಗಂಭೀರ ಸ್ವಭಾವದ ಹೆಣ್ಣನ್ನು ಬಲವಂತದ ಉಪದೇಶ ಮಾಡಿ ಮದುವೆ ಮಾಡಿದ್ದಳು. ಐದುವರ್ಷಕಾಲ ಆದರೂ ಸಂಸಾರ ಅವನ ಪಾಲಿಗೆ ಸುಖವೂ ಅಲ್ಲ ; ದುಃಖವೂ ಅಲ್ಲ ಎಂಬಂತಾಗಿತ್ತು. ಅನಾಳು ಮದುವೆಯಾಗದೆ ಪ್ರಯಾಣದಲ್ಲಿ ಆಸಕ್ತಿ ಹೊಂದಿ ಯಾವುದಾದರೂ ಕೆಲಸದಲ್ಲಿ ನಿರತಳಾಗಿರುತ್ತ

ಕಾಲ ಕಳೆಯುತ್ತಿದ್ದಳು. ಒಮ್ಮೆ ಅವಳು ಭೇಟಿಯಾದಾಗ ಅವಳ ಮದುವೆ ವಿಷಯ ಬಂದು ಇಬ್ಬರೂ ಕೆಂಪೇರಿದ್ದರು. ಅವನ ಮನಸ್ಸು ಕಲಕಿತು ಇವಳೇ ಐರೀನ ಆಗಿ ಮಗಳನ್ನು ಹೆತ್ತರೆ ಹೇಗೆ ಎನ್ನಿಸಿತು. ಆವೇಳೆಗೆ ಗೂಗ್ಮಿಲೋ ಹೆಂಡತಿ ಹೆರಿಗೆನೋವನ್ನು ಅನುಭವಿಸುತ್ತಿದ್ದಳು.

ಅನಾಳ ಬಗ್ಗೆ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿರುವಾಗ ಆವೇಳೆಗೆ ಡಾಕ್ಟರು ಬಂದು ತಾಯಿ ಮಗು ಇಬ್ಬರಲ್ಲಿ ಒಬ್ಬರನ್ನು ಉಳಿಸಲು ಸಾಧ್ಯ ಯಾರನ್ನು ಉಳಿಸಬೇಕು. ಎಂದು ಕೇಳಿದರು. ತಾಯಿಯನ್ನೇ ? ಮಗನನ್ನೇ? ಒಂದು ಕಡೆ ತಾನು ಪ್ರೀತಿಸಿದ್ದ ಅನಾ. ಅವಳೊಂದಿಗೆ ಸುಖಜೀವನ ಇನ್ನೊಂದೆಡೆ ವಿಧಿಯೇ ಕೈಯೆತ್ತಿ ಕೊಡಲಿರುವ ಹೊಸಜೀವ, ಹೊಸಸೆಳೆತ ಒಂದು ವೇಳೆ ಪ್ರರೀನ್ ಸತ್ತರೆ ಅನಾಳನ್ನು ಮದುವೆ ಆಗಬಹುದಲ್ಲಾ ಎಂಬ ಆಸೆ. ಒಲವಿಲ್ಲದ ಹೆಂಡತಿ ಸತ್ತರೆ ಏನು ನಷ್ಟ ? ಒಂದು ವೇಳೆ ಅನಾಳಿಗೆ ಮಕ್ಕಳಾಗದಿದ್ದಾಗ ಅವಳು ಹೋದರೆ ? ಹೀಗೆ ಮನಸ್ಸಿನಲ್ಲಿ ಕರ್ತವ್ಯ ಮತ್ತು ಪ್ರೇಮಕ್ಕೆ ದ್ವಂದ್ವಯುದ್ಧವೇ ನಡೆಯಿತು. ಕೊನೆಗೆ ಗೆದ್ದಿದ್ದು ಗಂಡಿನ ಹೃದಯ. ಗೊಗ್ಮಿಲ್ಲೋ ಡಾಕ್ಟರಿಗೆ ತಾಯಿಯನ್ನು ಉಳಿಸಿಕೊಡಿ ಎಂದಿದ್ದನು. ನಿರ್ವಿಣ್ಣನಾಗಿ.

ಈ ಕಥೆಯನ್ನು ವಿಮರ್ಶಿಸುತ್ತಾ ಜಿ.ವೆಂ. ಹೇಳುವ ಮಾತುಗಳಿವು "ಈ ಚಿಕ್ಕ ಕತೆಯಲ್ಲಿ ಗಂಡಿನ ಹೃದಯವನ್ನು ಚಿತ್ರಿಸುವುದಕ್ಕಿಂತ ಹೆಚ್ಚಾಗಿ ಗಂಡಿನ ಕರ್ತವ್ಯ ಬುದ್ಧಿಯೇ ಚಿತ್ರಿತವಾಗಿದೆ. ಅಲ್ಲದೆ ಅನಾ, ಗೂಗ್ಮಿಲೋವಿನ ತಾಯಿ ಇವರಿಬ್ಬರ ಹೆಣ್ಣು ಹೃದಯಗಳೂ ಚಿತ್ರಿತವಾಗಿವೆ. ಜೀವನವು ನಿರ್ಮಾಣಮಾಡುವ ಸಹಸ್ರ ಗೋಜುಗಳಲ್ಲಿ ಒಂದು ವಿಚಿತ್ರವಾದ ಧರ್ಮಸಂಕಟ ಇಲ್ಲಿ ವ್ಯಕ್ತಗೊಂಡಿದೆ. ಇದರಲ್ಲಿ ಗಂಡು ಗೆದ್ದು ಬರುತ್ತಾನೆ. ಮನಸ್ಸಿನ ಕಲ್ಪನೆಗೂ ಲೋಕದ ವಾಸ್ತವಿಕತೆಗೂ ಇರುವ ಅಂತರವನ್ನೂ ಸಂಸ್ಕೃತಿವಂತನ ನಡವಳಿಕೆ ಹಿಡಿಯುವ ಮಾರ್ಗವನ್ನು ಬಹುಮಾರ್ಮಿಕವಾಗಿ ಈ ಕಥೆ ತಿಳಿಸುತ್ತದೆ".

ಸರ್ಪಾಕರ್ಶ

ಎಂ.ವಿ.ಸೀ ಅವರು ಕಾದಂಬರಿಕಾರರಿಗಿಂತ ಹೆಚ್ಚಾಗಿ ಕಥೆಗಾರರು ಎಂದರೆ ತಪ್ಪಲ್ಲ. ನಿರಂತರವಾಗಿ ನಾಡಿನ ಎಲ್ಲಾ ಪತ್ರಿಕೆಗಳಿಗೆ ಕಥೆಗಳನ್ನು ಬರೆಯುತ್ತಲೇ ಇದ್ದರು. ಅನುವಾದಿತ ಕಥೆಗಳನ್ನು ಕೊಡುತ್ತಿದ್ದರು. ಸ್ವತಂತ್ರಕಥೆಗಳ ರಚನೆಯಲ್ಲಿ ಇದ್ದಷ್ಟೆ ಆಸಕ್ತಿ, ಕಥೆಗಳನ್ನು ಅನುವಾದಿಸುವುದರಲ್ಲಿಯೂ ಇತ್ತು. ಇನ್ನೊಂದು ಕಾರಣವೆಂದರೆ ಅವರು ಇಟಾಲಿಯನ್ ರಷ್ಯನ್, ಅಮೆರಿಕನ್ ಫ್ರೆಂಚ್ ಸಾಹಿತ್ಯವನ್ನು ಓದುತ್ತಿದ್ದರು. ಚೆನ್ನಾದ ಕಥೆ, ಕವಿತೆ, ಕಾದಂಬರಿ ಓದಿ ಆನಂದಿಸಿದಾಗ ನಮ್ಮ ಜನಕ್ಕೆ ಕೊಡಬೇಕು ಅನ್ನಿಸಿ ಅನುವಾದಿಸುತ್ತಿದ್ದರು ಅನುವಾದ ಪ್ರಪಂಚಕ್ಕೆ ಸಾಕಷ್ಟು ಕೊಡುಗೆಯನ್ನು ಸಂಸ್ಕೃತ ಇಂಗ್ಲಿಷಿನಿಂದ ಕನ್ನಡಕ್ಕೆ ನೀಡಿದ್ದಾರೆ. ಅಂತೆಯೇ ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸಿದ್ದಾರೆ.

ಜನಜೀವನದಿಂದ ಹಳೆಯ ತಲೆಮಾರಿನ, ಹಳೆಗಾಲದ ಕಥೆಗಳನ್ನು ಹೇಳುವುದು

ಎಂ ವಿ ಸೀ ಅವರ ಹವ್ಯಾಸಗಳಲ್ಲಿ ಒಂದು. 'ನಿಲ್ದಾಣಗಳ ನಡುವೆ' ಕಥಾಸಂಕಲನವು ಆ ಬಗೆಯದು "ಕಥೆಗಳ ಮೂಲ ಸಾಮಗ್ರಿ ಹೇಗಾದರೂ ಒದಗಿಬರಲಿ ಅವುಗಳಲ್ಲಿ ಬರುವ ಪಾತ್ರಗಳು ಜೀವನದಿಂದ ಮೂಡಿ ಬಂದವು. ಜೀವನದಿಂದ ಮೂಡಿ ಬಂದಿದ್ದರೂ ಜೀವಂತ ವ್ಯಕ್ತಿಗಳ ನೇರಚಿತ್ರಣ ಇವರ ಕಥೆಗಳಲ್ಲಿ ಇಲ್ಲ. ಇಂಥ ಸ್ವತಂತ್ರ ಕಥಾ ಸಂಕಲನ 'ನಿಲ್ದಾಣಗಳ ನಡುವೆ' ಈ ಸಂಗ್ರಹದಲ್ಲಿ ಪ್ರಕಟವಾಗಿರುವ ಅನುವಾದಿತ ಕತೆಗಳು ಎರಡು 'ಒಂದು' 'ಸರ್ಪಾಕರ್ಷ' 'ಇನ್ನೊಂದು' 'ನಿರಾಶ್ರಿತೆ' ಮತ್ತು 'ಅಭಿಸಾರಿಕೆ' ಕಥೆಗಳು. 'ಸರ್ಪಾಕರ್ಷ' ಕಥೆ ಆಂಬ್ರೋಸ್ ಬಿಯರ್ಸ್ ಎಂಬ ಆಂಗ್ಲಕತೆಗಾರನ 'ದಿ ಸ್ನೇಕ್' ಕಥೆಯ ರೂಪಾಂತರವಾಗಿದೆ.

ಈ ಕತೆಯಲ್ಲಿ ಶ್ರೀಧರಶರ್ಮ ಎಂಬ ವಿಚಾರಶೀಲ ಗ್ರಂಥಾಭ್ಯಾಸಿ ಮಂಚದ ಮೇಲೆ ಮಲಗಿ ಓದುತ್ತಿದ್ದಾಗ ಪುಸ್ತಕ ಕೈಯಿಂದ ಕಳಚಿ ಕೆಳಗೆ ಬೀಳುತ್ತದೆ. ಅದನ್ನು ತೆಗೆದುಕೊಳ್ಳಲು ಬಗ್ಗಿದಾಗ ಫಳಫಳ ಹೊಳೆವ ೨ ಚುಕ್ಕಿಗಳು (ಹಾವಿನ ಕಣ್ಣು) ಕಾಣಿಸುತ್ತವೆ. ಬ್ರಹ್ಮಚಾರಿ, ವ್ಯಾಯಾಮದಿಂದ ದೃಢಕಾಯ ಶ್ರೀಧರ ಬೊಂಬಾಯಿಯಲ್ಲಿ ಡಾ. ಮೆಹ್ತಾ ಅವರ ಮನೆಯಲ್ಲಿದ್ದನು. ಡಾ. ಮೆಹ್ತಾ ಅವರು ಪ್ರಾಣಿ ವಿಜ್ಞಾನಿಗಳಾಗಿದ್ದು ಅವರ ಮನೆ ಪ್ರಯೋಗಶಾಲೆ, ಮೃಗಶಾಲೆ, ಅಪೂರ್ವವಸ್ತು ಸಂಗ್ರಹಶಾಲೆಯೂ ಆಗಿತ್ತು. ಆ ಹಾವಿನ ಕಣ್ಣುಗಳನ್ನು ನೋಡುತ್ತಿದ್ದಂತೆ ನಾನಾ ಕಲ್ಪನೆಗಳು ಭಾವನೆಗಳು ಬಂದು ಅದರ ಬಗ್ಗೆ ಯೋಜಿಸುತ್ತಲೇ ನಾನಾ ಕಲ್ಪನಾಲಹರಿಗಳಲ್ಲಿ ಭಾವಾವೇಶಕ್ಕೆ ಒಳಗಾಗಿ ಮೂರ್ಛೆ ಬಂದು ಶ್ರೀಧರ ಸತ್ತಿದ್ದನು. ಓಡಿಬಂದ ಅವನು ಚೀರಿದ್ದನ್ನು ಕೇಳಿ ಶ್ರೀಧರ ಅಂಗಾತ್ತನಾಗಿ ಬಿದ್ದು ಸಾವನ್ನಪ್ಪಿದ್ದನ್ನು ಕಂಡರು. ಮಂಚದ ಕೆಳಗೆ ಇದ್ದ ಸರ್ಪವನ್ನು ಹೊರಕ್ಕೆಳೆದು ಕೋಣೆಯ ಮಧ್ಯಕ್ಕೆ ಬಿಸಾಡಿದರು. ಅದು ಸತ್ತ ಸರ್ಪ – ಒಳಗೆಲ್ಲಾ ಹೊಟ್ಟನ್ನು ಗಿಡಿದು ತುಂಬಿದ್ದು. ಅದರ ಕೋರೈಸುವ ಕಣ್ಣುಗಳು ಕೇವಲ ಕರಿಮಣಿಗಳೆಂದು ಈ ಕಥೆಯಲ್ಲಿ ಅನಿರೀಕ್ಷಿತ ಕುತೂಹಲಕಾರಿ ಮುಕ್ತಾಯ ಕೊನೆಯ ವಾಕ್ಯದಲ್ಲಿದೆ "ಇಡೀ ಕಥೆಗೆ ಆ ವಾಕ್ಯ. ಸತ್ತಸರ್ಪ, ಹೊಟ್ಟೆ ತುರುಕಿ ಮಣಿ ಕಣ್ಣನ್ನಿಟ್ಟ ಹಾವು" ಎಂಬ ಮಾತಿನಿಂದ ಕಥೆಗೆ ಅನಿರೀಕ್ಷಿತ ಅಂತ್ಯ ದೊರೆತಿದೆ. ಶ್ರೀಧರನ ವಿಚಾರಲಹರಿಗಳ ದಾಟಿ ಓದಿದಾಗ ಓದುಗನಿಗೆ ನಿಜವಾದ ಸರ್ಪ ಕಂಡು ಆ ಬಗ್ಗೆ ಚಿಂತಿಸುತ್ತಿದ್ದಾನೆ ಎನ್ನಿಸುತ್ತದೆ. ನಿರೂಪಣೆ ಅಷ್ಟು ಸಹಜವಾಗಿದೆ. ಇಡೀ ಕಥೆಯ ಸ್ವಾರಸ್ಯ ಕೊನೆಯ ವಾಕ್ಯದಲ್ಲಿದೆ. ಒಳ್ಳೆಯ ಕಥಾ ಪಾತ್ರ ಇಲ್ಲಿದೆ.

ಎಷ್ಟೋಸಲ ಭಾವನಾ ಪ್ರಪಂಚದಲ್ಲಿ ತಲೆತಿರುಗಿ ವಾಸ್ತವದತ್ತ ಕಣ್ಣೆತ್ತಿ ನೋಡುವುದಿಲ್ಲ ಅದರಿಂದ ಅನಾಹುತ ಕಟ್ಟಿಟ್ಟಬುತ್ತಿ ಎಂಬುದು ಈ ಕಥೆಯಲ್ಲಿ ಚೆನ್ನಾಗಿ ಅಭಿವ್ಯಕ್ತವಾಗಿದೆ.

ನಿರಾಶ್ರಿತೆ ಮತ್ತು ಅಭಿಸಾರಿಕೆ – ೧

ಇ.ವಿ. ಲೂಕಾಸ್ ಅವರ "ಟ್ರೂತ್ ಅಂಡ್ ಅನದರ್" ಎಂಬ ಬರಹದಿಂದ ಪ್ರೇರಿತವಾದ ೨ ಪುಟಗಳ ಪುಟ್ಟಕತೆ ಇದು. ಇದೊಂದು ರೂಪಕ ಕಥೆ.

ಸತ್ಯದೇವಿ - ಮಿಥ್ಯಾ ಮೋಹಿನಿ ರೂಪದಲ್ಲಿ ಕಾಣಿಸಿಕೊಂಡ ಸತ್ಯವನ್ನು ಮಿಥ್ಯೆಯನ್ನು ಕಂಡ ಲೇಖಕ ಮಿಥ್ಯಾ ಮೋಹಿನಿಯನ್ನು ತಿರಸ್ಕರಿಸುತ್ತಾನೆ. "ಅಸಂಖ್ಯಾಂತರ ಆಶ್ರಯ ನನಗುಂಟು. ನಿನ್ನನ್ನು ಒಲಿದಿದ್ದೇನೆ. ಇಂದೇ ನನ್ನನ್ನು ವರಿಸಿದರೆ ಇಂದ್ರಲೋಕದ ಸೌಭಾಗ್ಯಳನ್ನೇ ನಾನು ನಿನಗೆ ಬಳುವಳಿಯಾಗಿ ಕೊಡುವೆ", ಎಂದಾಗ, 'ನಿನ್ನ ಸಹವಾಸವೇ ಬೇಡ ಮಹರಾಯಿತಿ' ಎನ್ನುತ್ತಾನೆ. ಆದರೂ ಅವಳು ಅವನಿಗೆ ಕೊರಳಿಗೆ ಹೂಮಾಲೆ ಹಾಕಿ ಹಾರಿ ಹೋಗುತ್ತಾಳೆ.

ಶುಭ್ರವಸ್ತ್ರಧಾರಿಣಿ ! ನಾಗಾಭರಣಸುಂದರಿ, ದಿವ್ಯತೇಜಃ ಪುಂಜ ಪ್ರಭಾವಾಂಚಿತ ಸತ್ಯದೇವಿ ಬಂದು" ನಾನು ನಿರಾಶ್ರಿತೆ ನಾನು ಆಶ್ರಯಿಸಿದ ಪುರುಷ ಸಿಂಹರೆಲ್ಲ ನನಗಾಗಿ ಪ್ರಾಣಾರ್ಪಣೆ ಮಾಡಬೇಕಾಗಿ ಬಂದಿದೆ, ಇಲ್ಲವೇ ಕೊನೆ ಮೊದಲಿಲ್ಲದ ಕಷ್ಟ ಪರಂಪರೆಗೆ ಗುರಿಯಾಗಿದ್ದಾರೆ. ನೀನು ನನಗೆ ಆಶ್ರಯ ಕೊಡಲು ಸಾಧ್ಯವೇ? ಧೈರ್ಯವಿದೆಯೆ ? ಎಂದಾಗ "ಯೋಚನೆ ಮಾಡಿ ಹೇಳುತ್ತೇವೆ" ಎನ್ನುತ್ತಾನೆ ಲೇಖಕ

ಸತ್ಯವನ್ನು ಸ್ವೀಕರಿಸಲು ಯಾರು ಸಿದ್ಧವಿಲ್ಲ. ಸತ್ಯವನ್ನು ಆಶ್ರಯಿಸಿದರೆ ತ್ಯಾಗಮಾಡಬೇಕಾಗುತ್ತದೆ. ಬಲಿದಾನ ಆಗಬೇಕಾಗುತ್ತದೆ. ಎಂಬ ಸತ್ಯವನ್ನು ಈ ಮಾತುಗಳು ಸಾರುತ್ತವೆ. ಸತ್ಯ ಸರಳಾಕರ್ಷಣೆ ಆದರೆ ಮಿಥ್ಯೆ ಅತಿ ಆಕರ್ಷಣೆ ಉಳ್ಳದ್ದು. ಆಕೆ ಸರ್ವಾಲಂಕಾರ ಭೂಷಿತೆ, ಸುಪ್ರಸನ್ನ ಹಾವಭಾವ ಮಿಲನಗಳ ರಮ್ಯೆ. ಮಿಥ್ಯೆಯನ್ನು ದೂರಮಾಡಿ ಲೇಖಕ ದೇವರದಯದಿಂದ ಇದು ಕನಸು ಎಂದು ಕೊಳ್ಳುತ್ತಿರುವಾಗ ಮಿಥ್ಯಾದೇವಿ ಆ ಕನಸು ನಾನೇ ಎನ್ನುತ್ತಾಳೆ. ಕನಸುಗಳು ಮೋಹಕವಾಗಿದ್ದರೂ ಮಿಥ್ಯೆ ಎಂಬ ಸತ್ಯವನ್ನು ಈ ಮಾತು ಹೇಳುತ್ತದೆ.

ಅಮೂರ್ತರೂಪವಾದ ಸತ್ಯ ಮಿಥ್ಯೆಗಳನ್ನು ಮೂರ್ತಿರೂಪದಿಂದ ಅರ್ಥಪೂರ್ಣವಾಗಿ ಈ ರೂಪಕ ಕಥೆ ಹೇಳುತ್ತದೆ. ಖಲೀಲ್ ಜೀಬ್ರಾನಿನ ಕಥೆಯನ್ನು ಇದು ನೆನಪಿಗೆ ತರುತ್ತದೆ. ಅವನೊಂದು ಕಡೆ ಹೇಳಿರುವ ಸತ್ಯದೇವಿ-ಮಿಥ್ಯಾದೇವಿ ಒಮ್ಮೆ ಬಟ್ಟೆ ಕಳಚಿಟ್ಟು ಸಮುದ್ರ ಸ್ನಾನಕ್ಕಿಳಿದರು. ಮಿಥ್ಯಾದೇವಿ ಬೇಗನೆ ಮಿಂದು ಮೇಲಕ್ಕೆ ಬಂದು ಸತ್ಯದೇವಿಯ ಉಡುಪನ್ನು ಧರಿಸಿದಳು. ಉಡುಪನ್ನು ದೇಶ ಸಂಚಾರಕ್ಕೆ ಹೊರಟಳು. ಸತ್ಯದೇವಿ ಮಿಥ್ಯಾದೇವಿಯ ಧರಿಸಲಾಗದೆ ಸಮುದ್ರದಲ್ಲೇ ಅಡಗಿದ್ದಾಳೆ ಇಂದು ನಾವು ಕಾಣುತ್ತಿರುವ ಸತ್ಯವೆಲ್ಲ ಮಿಥ್ಯೆಯೇ ಆಗಿದೆ ನಿಜವಾದ ಸತ್ಯ ಎಲ್ಲೋ ಅಡಗಿದೆ ಎಂಬುದನ್ನು ಈ ರೂಪಕ ಕಥೆ ಮಾರ್ಮಿಕವಾಗಿ ಹೇಳುತ್ತದೆ. ಲೂಕಾಸನ ಕಥೆಯೂ ಈ ಮಾದರಿಯ ರೂಪಕ ಕಥೆ ಆಗಿದೆ.

ಕಥೆಯ ಶೀರ್ಷಿಕೆಯಲ್ಲಿ ಸತ್ಯವನ್ನು ನಿರಾಶ್ರಿತೆ ಎಂದು, ಮಿಥ್ಯೆಯನ್ನು ಅಭಿಸಾರಿಕೆ ಎಂದು ಕರೆದಿರುವುದು ಅರ್ಥ ಪೂರ್ಣವಾಗಿದೆ.

ಠಾಕೂರರು ಮತ್ತು ಪಾಶ್ಚಾತ್ಯ ಸಂಗೀತ (ಪ್ರಬಂಧ)

ಎಂ.ವಿ.ಸೀತಾರಾಮಯ್ಯನವರು ಸಾಹಿತಿಗಳೂ ವಿದ್ವಾಂಸರೂ ಆದಂತೆ ಸಂಗೀತ ತಜ್ಞರೂ ಚಿತ್ರಕಲಾವಿದರೂ ಆಗಿದ್ದರು. ತೀ.ನಂ.ಶ್ರೀ, ಟಿ.ಎಸ್.ವೆಂ ಅವರು ಪ್ರೋತ್ಸಾಹದಿಂದ ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ತಳೆದರು. ಬಾಲ್ಯದಲ್ಲೇ ಮನೆಯ

ಬಳಿಯಿದ್ದ ಅರಮನೆಯ ಆನೇಕರೋಟಿದಲ್ಲಿದ್ದ ಆನೆಚಿತ್ರಗಳನ್ನು, ಆಂಜನೇಯ ದೇವಾಲಯದ ಆಂಜನೇಯನ ಚಿತ್ರಗಳನ್ನು ಬಿಡಿಸಿದ್ದರು. ಪ್ರಸಿದ್ಧ ಚಿತ್ರಕಲಾವಿದ ವೆಂಕಟಪ್ಪನವರ ಬಳಿ ಚಿತ್ರಕಲೆ, ಕಲಿತಿದ್ದರು. ಜಿ.ಪಿ.ರಾಜರತ್ನಂ ಮೊದಲಾದವರ ಕೃತಿಗಳಿಗೆ ಚಿತ್ರ ರಚಿಸಿದ್ದರು. ಚಿತ್ರಕಲಾಸಕ್ತಿಯಂತೆಯೇ ಅವರಿಗಿದ್ದ ಇನ್ನೊಂದು ಆಸಕ್ತಿ ಸಂಗೀತಾಸಕ್ತಿ. ಮನೆಯಲ್ಲಿ ಇದ್ದ ಭಜನೆ ಸಂಗೀತ ವಾತಾವರಣ ಹಾಗೂ ಆದಿನಗಳಲ್ಲಿ ಮೈಸೂರಿನಲ್ಲಿ ಇದ್ದ ಅತೀವ ಪ್ರೋತ್ಸಾಹದ ಫಲವಾಗಿ ನಡೆಯುತ್ತಿದ್ದ ಪ್ರಸಿದ್ಧ ವಿದ್ವಾಂಸರ ಸಂಗೀತ ಕಚೇರಿಗಳಿಂದ ಪ್ರಭಾವಿತರಾದರು. ಎಂವಿಸೀ ಮೃದಂಗವಾದ್ಯಕಲಿತು ಪರಿಣತರಾದರು ಅವರು ವೀಣೆ ಶೇಷಣ್ಣನವರ ಕಚೇರಿಗೆ ಪಕ್ಕವಾದ್ಯಕಾರರಾಗಿ ಮೃದಂಗ ನುಡಿಸಿದ್ದರು. ಅರ್ಚನಾ ಮೊದಲಾದ ಹರಿದಾಸ ಕೃತಿಯಲ್ಲಿ ಸಂಗೀತದ ಬಗ್ಗೆ ಮಾಡಿರುವ ಚರ್ಚೆಗಳಲ್ಲಿ ಕವಿರಾಜಮಾರ್ಗದಲ್ಲಿ ಧ್ವನಿ ವಿಚಾರದ ಚರ್ಚೆಯಲ್ಲಿ ಅವರ ಸಂಗೀತ ಶಾಸ್ತ್ರದ ಪರಿಣಿತಿಯನ್ನು ಗಮನಿಸಬಹುದು. ಹೀಗೆ ಸಂಗೀತ ಶಾಸ್ತ್ರ ಪರಿಚಯವಿದ್ದುದರಿಂದ ಠಾಕೂರರು ಮತ್ತು ಪಾಶ್ಚಾತ್ಯ ಸಂಗೀತ ಲೇಖನವನ್ನು ಸಮರ್ಥವಾಗಿ ಅನುವಾದಿಸಿದ್ದಾರೆ.

ವಾಗ್ಗೇಯಕಾರರಾದ ರವೀಂದ್ರನಾಥ ಠಾಕೂರರ ಮೇಲೆ ಪಾಶ್ಚಾತ್ಯ ಸಂಗೀತ ಬೀರಿದ ಪ್ರಭಾವವನ್ನು ಆ್ಯರ್ನಾಲ್ಡ್ ಬೇಕ್ ಎಂಬುವರು ವಿವರವಾಗಿ ಪ್ರಸ್ತಾಪಿಸಿದ್ದಾರೆ. ಪಾರಿಭಾಷಿಕವಾದ ಆ ಲೇಖನವನ್ನು ಎಂವಿಸೀ ಅವರು ಅನುವಾದಿಸಿದ್ದಾರೆ. ಸಂಗೀತ ಸಾಹಿತ್ಯಗಳೆರಡರಲ್ಲೂ ಪರಿಣಿತಿ ಪಡೆದು ವಾಗ್ಗೇಯಕಾರರಾಗುತ್ತಾರೆ. ಕೇವಲ ಸಂಗೀತಗಾರರಗಿಂತ. ರಚನಾಕಾರರೂ ಸಂಗೀತಗಾರರೂ ಆದ ವಾಗ್ಗೇಯಕಾರರು ಶ್ರೇಷ್ಠರು. ರವೀಂದ್ರರು ಆ ವರ್ಗಕ್ಕೆ ಸೇರಿದವರು. ಆದ್ದರಿಂದ ಅವರ ರಚನೆಗಳಲ್ಲಿ ಮಾತುಗಳ ಸಮರ್ಥ ಸಮನ್ವಯ ಕಾಣುತ್ತೇವೆ. ಬಾಲ್ಯದಲ್ಲಿ ಕೇಳಿದ ಪಾಶ್ಚಾತ್ಯ ಸಂಗೀತ ಇಂಗ್ಲೆಂಡಿಗೆ ಹೋದಾಗ ಭಾಗವಹಿಸಿದ ಸಂಗೀತ ಕಚೇರಿಗಳ ಫಲವಾಗಿ ಐರೋಪ್ಯ ಸಂಗೀತದ ನಾದ-ಲಯಗಳನ್ನು ಭಾರತೀಯ ಸಂಗೀತದ ಹಿನ್ನೆಲೆಯಲ್ಲಿ ತಮ್ಮ ರಚನೆಯಲ್ಲಿ ಹೇಗೆ ಅಳವಡಿಸಿ ಕೊಂಡರು ಎಂಬುದನ್ನು ಈ ಲೇಖನ ತಿಳಿಸುತ್ತದೆ. ಪಾರಿಭಾಷಿಕಾರ್ಥಗಳಿಂದ ಕೂಡಿದ ಈ ಲೇಖನವನ್ನು ಎಂ ವೀ ಸೀ ಅವರು ಶ್ರಮಪೂರ್ಣವಾಗಿ ಸಾಕಷ್ಟು ಸಮರ್ಥವಾಗಿ ಅನುವಾದಿಸಿದ್ದಾರೆ. ಮೂಲದ ಪಾರಿಭಾಷಿಕ ಪದಗಳನ್ನು ಪದರಚನೆ ಮಾಡಿದ್ದಾರೆ. ತಾಂತ್ರಿಕಭಾಷೆಯಲ್ಲಿ ಅವರು ಅನುವಾದಿಸಿದ ರೀತಿಗೆ ಈ ಕೆಳಗಿನ ವಾಕ್ಯವೃಂದವನ್ನು ಗಮನಿಸಬಹುದು.

"ಪಾಶ್ಚಾತ್ಯಧ್ವನಿ ಸಾಂಗತ್ಯ ರಚನೆಗಳ (Hermovie Compositions) ಉತ್ಕಟ ಊರ್ಧ್ವ ಸಂಚಾರ (Over Powering Vertical structure) ಸಂಗೀತಜ್ಞರಾದ ಅವರಿಗೆ ಪರಕೀಯವಾಗಿಯೇ ಉಳಿದಿದಲ್ಲದೆ ಕೆಲಮಟ್ಟಿಗೆ ವಿಕರ್ಷಕವಾಗಿಯೂ ಇದ್ದಿತು. ಜೊತೆಗೆ ಪರಿಕರ ಯಾವುದೇ ಇಲ್ಲದ ಒಂದು ರಾಗಧಾಟಿಯು (uncomposed melodical line) ನಾಜೂಕಾದ ಅಚ್ಚನ್ನು (Delicate moulding) ರಚಿಸುವುದು ಅವರ ಮಾರ್ಗ. ಅದರಲ್ಲಿ ಕವನದ ರಸಭಾವಾತ್ಮಕ ಧ್ವನಿಗಳೆಲ್ಲವೂ

(Emotional overtones) ಪ್ರಕಟಗೊಳ್ಳುತ್ತಿದ್ದವು....... ಆ ಖಚಿತ ಸ್ಪರ್ಶಕೇಂದ್ರಕ್ಕೆ (Tonal centre) ಹೊಂದಿಕೊಂಡಂತೆ ಪ್ರತಿ ಸ್ವರಾಂಶದ ಆಂತರಿಕ ಸಂದರ್ಭದ ವಿಷಯದಲ್ಲಿ ಒಂದು ರಾಗ ಪರಿಸ್ಥಿತಿಯು (Mode) ಇನ್ನೊಂದರಿಂದ ಭಿನ್ನವಾಗಿರುತ್ತದೆ. ಅದು ಯಾವುದೇ ಸ್ಥಾಯಿ (Pitch) ಯಲ್ಲಿ ಇರಬಹುದು ಇದಕ್ಕೆ ವ್ಯತಿರಿಕ್ತವಾಗಿ ಪಾಶ್ಚಾತ್ಯ ಸಂಗೀತದ ಎಲ್ಲ ಆಧಾರಸ್ವರ ಪದ್ಧತಿಗಳೂ (Western Keys) ಅವು ವರಿಷ್ಠವಾಗಲಿ ಅವರಿಷ್ಠವಾಗಲಿ (Major or Minor) ತಮ್ಮ ಸ್ವರಭಾವಕ್ಕೆ (Tonal base) ಸಂಬಂಧಪಟ್ಟಂತೆ ಒಂದು ವ್ಯತ್ಯಾಸವಾಗದ ಸ್ಥಿರ ಆಂತರಿಕ ಸಂಬಂಧ ಹೊಂದಿರುತ್ತದೆ.... ಆಧಾರ (ಅಥವಾ ಮೂಲಸ್ವರವು Tonic) ಯಾವ ಸ್ಥಾಯಿಗೆ (Pitch) ಅಳವಡಿಸಲ್ಪಟ್ಟಿದೆಯೋ, ಆ ಸ್ಥಾಯಿಗೆ ಎದುರಾಗಿ ಅವುಗಳ ಮೊತ್ತದ ಸ್ಥಾನ (e) (ಸ) ವರಿಷ್ಠದ (e major) ಸ್ವರವಿದ್ಧಾತಿಯ ಆಂತರಿಕ ಸಂಬಂಧವು ತದ್ವತ್ತಾಗಿ ಇತರ ಯಾವುದೇ ವರಿಷ್ಠ ಸ್ವರಪದ್ಧತಿಯ (major key) ಆಂತರಿಕ ಸಂಬಂಧದ ಹಾಗೆಯೇ ಇರುತ್ತದೆ..... (ಪುಟ ೮೯೫)

ಹೀಗೆ ಸಂಗೀತದ ಪರಿಭಾಷೆಯಿಂದ ಕೂಡಿದ ಸಂಗೀತ ಬರಹವನ್ನು ಸಾಕಷ್ಟು ಶ್ರಮಪೂರ್ಣವಾಗಿ ಅನುವಾದಿಸಿದ್ದಾರೆ. ಈ ಸಂದರ್ಭದಲ್ಲಿ ಇಂಗ್ಲೆಂಡಿನಲ್ಲಿ ರವೀಂದ್ರರಿದ್ದಾಗ Drunk to me only with thine eyes ಎಂಬ ಇಂಗ್ಲೀಷ್ ಗೀತವನ್ನು ಅದರ ಮಟ್ಟನ್ನು ಅಳವಡಿಸಿಕೊಂಡು ಬಂಗಾಳಿ ರಚನೆಯೊಂದನ್ನು ರವೀಂದ್ರರು ಮಾಡಿದ್ದಾರೆ. ಅವೆರಡನ್ನು ಹೋಲಿಸಿದಾಗ ರವೀಂದ್ರರ ಮೇಲೆ ಪಾಶ್ಚಾತ್ಯ ಸಂಗೀತ ಪ್ರಭಾವವನ್ನು ಗುರುತಿಸಬಹುದಾಗಿದೆ. ಮೂಲಲೇಖಕರು ಆ ಇಂಗ್ಲಿಷ್ ಗೀತವನ್ನು ರವೀಂದ್ರರು ರಚಿಸಿದ ಬಂಗಾಳಿ ಗೀತೆಯನ್ನು ಕೊಟ್ಟಿದ್ದಾರೆ. ಅದನ್ನು ಎಂವಿಸೀ ಅವರು ಇಂಗ್ಲಿಷ್ ಬಲ್ಲವಾದ್ದರಿಂದ ಕನ್ನಡದಲ್ಲಿ ಪದ್ಯರೂಪದಲ್ಲೇ ಅನುವಾದಿಸಿದ್ದಾರೆ. ಬಂಗಾಳಿ ತಿಳಿದಿದ್ದರಿಂದ ಅದರ ಆಂಗ್ಲಾನುವಾದದ ಸಹಾಯದಿಂದ ಗದ್ಯಾನುವಾದ ನೀಡಿದ್ದಾರೆ. ಆ ಬಗ್ಗೆ ವಿವೇಚಿಸಿದಾಗ ಅಡಿಟಿಪ್ಪಣಿಯಲ್ಲಿ ದರಾಪದ್ = ಧ್ರುವಪದ ಒಂದು ಬಗೆಯ ಸಂಗೀತ ಕೃತಿ ಹಾಗೂ ಅದನ್ನು ಹಾಡುವ ಶೈಲಿ. ಸ್ಥಾಯಿ=ಇದನ್ನು ಅಸ್ತಾಯಿ ಎಂದೂ ನಿರ್ದೇಶಿಸಲಾಗಿದೆ ಕರ್ನಾಟಕ ಪದ್ಧತಿಯಲ್ಲಿ ಪಲ್ಲವಿಗೆ ಸಮಾನ, ಅಂತರ=ಕರ್ಣಾಟಕದ ಸ್ಥಿತಿಯಲ್ಲಿ 'ಅನುಪಲ್ಲವಿ', ಆಭೋಗ್ = ಹಿಂದೂಸ್ಥಾನಿ ಪದ್ಧತಿಯಲ್ಲಿ ಹಾಡಿನ ಸಮಾಪ್ತಿಭಾಗ

ಸಂಚಾರಿ = ಕರ್ನಾಟಕ ಪದ್ಧತಿಯಲ್ಲಿ ಚರಣ (ಪದ್ಯ ನುಡಿ) ಎಂದು ಪಾರಿಭಾಷಿಕ ಪದ ವಿವರಣೆಗಳನ್ನು ನೀಡಿದ್ದಾರೆ. ಮೇಲೆ ಉಲ್ಲೇಖಿಸಿದ ಗದ್ಯಭಾಗ, ಟಿಪ್ಪಣಿಗಳನ್ನು ಕಂಡಾಗ, ಎಂವಿಸೀ ಅವರಿಗಿದ್ದ ಸಂಗೀತ ಜ್ಞಾನದ ಪರಿಣಿತಿಯನ್ನು ಗಮನಿಸಬಹುದು ಅಷ್ಟೇಅಲ್ಲ ಶಾಸ್ತ್ರಿಯ ಸಂಗೀತದ ಬರಹದ ಅನುವಾದದ ಕಷ್ಟವೇನು ಎರಡೂ ತಿಳಿಯುವುದಾಗಿದೆ.

ಎಷ್ಟೇ ಸಮರ್ಥವಾಗಿ ಅನುವಾದಿಸಿದರೂ ಶಾಸ್ತ್ರೀಯ ಪರಿಭಾಷೆಯ ಅರ್ಥವನ್ನು ಇನ್ನೊಂದು ಭಾಷೆಯಲ್ಲಿ ತರುವುದು ಕಷ್ಟವೆಂದು ಅರಿತಿದ್ದ ಎಂವಿಸೀ ಅವರು ಹೆಜ್ಜೆ ಹೆಜ್ಜೆಗೂ ಕನ್ನಡ ಪದಾನುವಾದಗಳಿಗೆ ಆವರಣದಲ್ಲಿ ಇಂಗ್ಲೀಷ್

ಪದಗಳನ್ನು ಕೊಟ್ಟಿದ್ದಾರೆ. ಇದು ಅನುವಾದದ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಸಂಗೀತ-ಕಾವ್ಯ ಅವಿಭಾಜ್ಯ ಅಂಗಗಳು. ಕವಿ ಗಾಯಕರನ್ನು ಬೇರ್ಪಡಿಸುವುದು ಕಷ್ಟ. ಆದಕಾರಣ ಸಂಗೀತ ಲೇಖನದ ಅನುವಾದಿತ ಸಂಗೀತಜ್ಞ ಕವಿ ಆಗಿದ್ದಾರೆ. ಸಮರ್ಥವಾಗಿ ಅನುವಾದಿಸಬಲ್ಲರು ಎಂಬುದಕ್ಕೆ ಈ ಲೇಖನ ಸಾಕ್ಷಿಯಾಗಿದೆ ಮತ್ತು ಅನುವಾದವನ್ನು ಯಾಂತ್ರಿಕವಾಗಿ ಇದ್ದುದ್ದನ್ನು ಇದ್ದ ಹಾಗೆ ಮಾಡದೆ ಅದರ ಜತೆಗೆ ಸ್ವತಂತ್ರವಾಗಿ ಅಭಿಪ್ರಾಯಗಳನ್ನು ಅಡಿಟಿಪ್ಪಣಿಯಲ್ಲಿ ನೀಡಿರುವುದು ಎಂವಿಸೀ ಅವರ ವೈಶಿಷ್ಟ್ಯ.

ಶಾಂತಿನಿಕೇತನದ ಶಾಲಾಗೀತದಲ್ಲಿ, ಅಚಲಾಯತ್ಯದಲ್ಲಿ ಕಂಡುಬರುವ ಆಲೋ ಅಮಾರ್ ಅಲೋ (ಬೆಳಕೇ ನನ್ನ ಬೆಳಕೇ) ಮುಂತಾದ ಪ್ರಬೋಧಕ ಗೀತಗಳಲ್ಲಿ ಆ ಪ್ರಭಾವ (ಪಾಶ್ಚಾತ್ಯ ಸಂಗೀತ ಪ್ರಭಾವ) ಕಂಡುಬರುತ್ತದೆ. ಪಾಶ್ಚಾತ್ಯ ಸಂಗೀತ ರಚನಾ ವೈಖರಿ ಹೇಗೆ ಕಂಡುಬರುತ್ತದೆ. ಎಂಬುದನ್ನು ಎಂವಿಸೀ ಮೂಲದಲ್ಲಿ ಇಲ್ಲದ್ದನ್ನು ಅಡಿಟಿಪ್ಪಣಿಯಲ್ಲಿ ವಿವರಿಸಿದ್ದಾರೆ. ೩ ಮತ್ತು ೪ನೆಯ ಆವರ್ತಖಂಡಗಳಲ್ಲಿ ೧ನೆಯ ಮತ್ತು ೨ನೆಯ ಆವರ್ತಖಂಡಗಳ ರಾಗಧಾಟಿಯ ಅನುಕರಣೆ ಇದ್ದು ಶುದ್ಧ ಭಾರತೀಯ ಸಂಪ್ರದಾಯಗಳ ಪ್ರಕಾರ ಶುದ್ಧ ಸ್ವರವಾಗಿ ಉಳಿಯಬೇಕಾದದ್ದು 'ತೀವ್ರ'ವಾಗಿ ಪರಿಣಿಮಿಸಿದೆ (cloromatic passage). ವಿಜ್ಞಾನದ ಲೇಖನಗಳನ್ನು ಸಮರ್ಥವಾಗಿ ಅನುವಾದಿಸುವಷ್ಟೇ ಕಲೆಗೆ ಸಂಬಂಧಿಸದ ಶಾಸ್ತ್ರಿಯ ಪರಿಭಾಷಾ ಲೇಖನಗಳನ್ನು ಅನುವಾದಿಸಬಲ್ಲರು. ಎಂಬುದಕ್ಕೆ ಈ ಲೇಖನ ಒಂದು ನಿದರ್ಶನವಾಗಿದೆ. ಲೇಖನದಲ್ಲಿ ವಿಷಯ ಕ್ಲಿಷ್ಟತೆ ಇರುವುದರಿಂದ ಲೇಖನ ಸಂಕೀರ್ಣವಾಗಿ ಅನುವಾದಿತವಾಗಿದೆ ಇದಕ್ಕೆ ಕಾರಣ ಮೂಲ ಲೇಖಕರ ಲೇಖನ ಇರುವುದೇ ಹಾಗಿದೆ. ಅದಕ್ಕೆ ಸ್ಪಷ್ಟೀಕರಣಕ್ಕೆ ತಮ್ಮದೇ ಆದ ಟಿಪ್ಪಣಿಗಳನ್ನು ಸ್ವಂತವಾಗಿ ಎಂವಿಸೀ ಅವರು ಕೊಟ್ಟಿದ್ದಾರೆ. ಪದ್ಯಗಳನ್ನು ಪದ್ಯವಾಗಿ ಅನುವಾದಿಸಿದ್ದಾರೆ. ಮಳೆಬಿಲ್ಲು ಪದ್ಯ ಈ ಲೇಖನಕ್ಕೆ ಪೂರಕವಾಗಿ ಪ್ರಕಟವಾಗಿದೆ. ಅವರು ಅನೇಕ ಇಂಗ್ಲಿಷ್ ಕವಿತೆಗಳನ್ನು ಅನುವಾದಿಸಿರುವುದು ಕಾವ್ಯ ಸಂಪುಟಕ್ಕೆ ಸೇರುವುದರಿಂದ ಇಲ್ಲಿ ಆ ಬಗ್ಗೆ ಚರ್ಚಿಸಿಲ್ಲ.

ಆಕಾಶಯಾನ (ವಿಜ್ಞಾನಗ್ರಂಥ)

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಚಾರೋಪನ್ಯಾಸಗಳು ಪ್ರಾರಂಭವಾದವು. ಗ್ರಾಮೀಣ ಜನರಿಗೆ ಜ್ಞಾನ ಪ್ರಸಾರ ಮಾಡುವ ಅಂಗವಾಗಿ ವಿಶ್ವವಿದ್ಯಾನಿಲಯದ ಅಧ್ಯಾಪಕರು ಸಾಹಿತಿಗಳು, ವಿದ್ವಾಂಸರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಜೀವನೋಪಯುಕ್ತ ವಿಚಾರಗಳ ಬಗ್ಗೆ, ಆಧುನಿಕ ವಿಜ್ಞಾನದ ಬೆಳವಣಿಗೆ ಬಗ್ಗೆ ಕೃಷಿ ಕೈಗಾರಿಕೆ ಸಾಹಿತ್ಯ, ಕಲೆ ಮುಂತಾದ ಸಾಹಿತ್ಯ ಸಂಸ್ಕೃತಿ ಕಲೆಗಳಿಗೆ ಸಂಬಂಧಿಸಿದ ಉಪನ್ಯಾಸಗಳನ್ನು ನೀಡುವ ವ್ಯವಸ್ಥೆ ಮಾಡಲಾಯಿತು. ಈ ಉಪನ್ಯಾಸ ಮಾಲೆಗಳು ಬಹು ಜನಪ್ರಿಯವಾದವು. ಆನಂತರ ಈ ಉಪನ್ಯಾಸಗಳು ಅಂಗೈಯಗಲದ ಪುಸ್ತಕಗಳಾಗಿ ಪ್ರಕಟವಾದವು ನಾಡಿನಾದ್ಯಂತ

ಜನಪ್ರಿಯ ಕೃತಿಗಳಾಗಿ ಜನಸಾಮಾನ್ಯರನ್ನು ಮುಟ್ಟಿದವು. ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭಿಸಿದ ಈ ಯೋಜನೆಯನ್ನು ಅನಂತರ ಕರ್ನಾಟಕದಲ್ಲಿ ಪ್ರಾರಂಭವಾದ ವಿಶ್ವವಿದ್ಯಾನಿಲಯಗಳಲ್ಲಿ ಅನುಕರಿಸಿದವು. ನಾಡಿನಾದ್ಯಂತ ಜನಪ್ರಿಯಕೃತಿಗಳಾಗಿ ಜನಸಾಮಾನ್ಯರುಗಳನ್ನು ಮುಟ್ಟಿದವು. ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭಿಸಿದ ಈ ಯೋಜನೆಯನ್ನು ಅನಂತರ ಕರ್ನಾಟಕದಲ್ಲಿ ಪ್ರಾರಂಭವಾದ ವಿಶ್ವವಿದ್ಯಾನಿಲಯಗಳೆಲ್ಲ ಅನುಕರಿಸಿದವು. ಈ ಪ್ರಚಾರಪುಸ್ತಕ ಮಾಲೆಯ ಅಂಗವಾಗಿ ಕನ್ನಡದ ಉಪನ್ಯಾಸಗಳ ಕನ್ನಡ ಪುಸ್ತಕಗಳ ಜತೆಗೆ ಇಂಗ್ಲಿಷ್‌ನಲ್ಲಿ ಮಾಡಿದ ಉಪನ್ಯಾಸಗಳ ಕನ್ನಡ ಭಾಷಾಂತರ ಕೃತಿಗಳು ಪ್ರಕಟವಾದವು.

ಪ್ರಚಾರ ಪುಸ್ತಕ ಮಾಲೆಯ ಅಂಗವಾಗಿ ೧೯೬೦ರ ಸುಮಾರಿನಲ್ಲಿ ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟರು ವಿಶ್ವವಿದ್ಯಾನಿಲಯಕ್ಕೆ ದತ್ತಿಯೊಂದನ್ನು ಕೊಟ್ಟರು. ಆಗ ಸರ್.ಕೆ.ಪಿ. ಪುಟ್ಟಣಚೆಟ್ಟರ ಪುದುವಟ್ಟಿನ ಗ್ರಂಥಮಾಲೆ ಪ್ರಾರಂಭವಾಯಿತು. ಈ ಮಾಲೆಯ ಪ್ರಕಟಣೆಗಳ ಉದ್ದೇಶ ಸ್ವರೂಪಗಳನ್ನು ಕುರಿತು ಕುವೆಂಪು ಅವರು ಹೀಗೆ ಹೇಳಿದ್ದಾರೆ. "ವೈಜ್ಞಾನಿಕ ಮತ್ತು ವ್ಯಾವಹಾರಿಕ ವಿಷಯಗಳ ತಿಳಿವು ಸಾಮಾನ್ಯ ಜನರಲ್ಲಿ ಹರಡಲು ಅನುಕೂಲವಾಗುವಂತೆ ಸರಳವೂ ಸುಲಭಗ್ರಾಹ್ಯವೂ ಆದ ಭಾಷೆಯಲ್ಲಿ ಪುಸ್ತಿಕೆಗಳನ್ನು ಬರೆಯಿಸುವುದು. ಈ ಮಾಲೆಯ ಉದ್ದೇಶ". ಪ್ರತಿಯೊಬ್ಬ ಸಾಮಾನ್ಯರೂ ಮಿದ್ಯುಚ್ಛಕ್ತಿ, ವಿಮಾನ, ಬಾಂಬು, ರೇಡಿಯೋ ಮೊದಲಾದ ಶಕ್ತಿ ವಿಶೇಷಗಳನ್ನು ವಸ್ತು ವಿಶೇಷಗಳನ್ನೂ ಪ್ರತಿನಿತ್ಯವೂ ನೋಡುತ್ತಿರುತ್ತಾನೆ. ಅವನ ಸುತ್ತಮುತ್ತ ಅನೇಕ ವಿಚಿತ್ರ ಪ್ರಾಕೃತಿಕ ಘಟನೆಗಳು ನಡೆಯುತ್ತಿರುತ್ತದೆ. ವೈಜ್ಞಾನಿಕ ಪ್ರಯೋಗ ಮತ್ತು ಸಂಶೋಧನೆಗಳ ಪರಿಣಾಮವಾಗಿ ಅವನ ಜೀವನ ದಿನೇ ದಿನೇ ಹೊಸತಾಗುತ್ತಿದೆ. ನಾಗರಿಕವಾಗುತ್ತಿದೆ. ಈ ಶಕ್ತಿವಿಶೇಷಗಳ, ವಸ್ತುವಿಶೇಷಗಳ, ವಿಚಿತ್ರ ಘಟನೆಗಳ, ವೈಜ್ಞಾನಿಕ ಪ್ರಯೋಗಗಳ ನಾಗರಿಕ ಜೀವನದ ಕಡೆಗೆ ಅವನ ಕುತೂಹಲ ದೃಷ್ಟಿ ಸಹಜವಾಗಿ ಅರಳುತ್ತದೆ. ಅವು ಅವನಿಗೆ ಕೇವಲ ರಹಸ್ಯದ ಗಂಟಾಗಿ ಉಳಿಯದೆ ಅವನ ತಿಳಿವಿಗೆ ನಿಲುಕುವಂತೆ ಬೋಧಿಸುವುದು ತಿಳಿದವರ ಕರ್ತವ್ಯ"

ಈ ಉದ್ದೇಶದಿಂದ ವಿಜ್ಞಾನದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಹತ್ತಾರು ಪುಸ್ತಕಗಳು ಈ ಮಾಲೆಯಲ್ಲಿ ಪ್ರಕಟವಾದವು ಆಪೈಕಿ ಆಕಾಶಯಾನ (Aviation) ಸಹ ಒಂದು ಪುಟ್ಟ ಗ್ರಂಥವಾಗಿದೆ. ಪುಣೆಯ ಚೀಫ್ ಪೈಲಟ್, ತಾತಾ ಏರ್ ಲೈನ್ಸ್‌ನ ಬಿ.ಕೆ.ಎನ್.ರಾವ್ ಅವರು ಇಂಗ್ಲಿಷಿನಲ್ಲಿ ಬರೆದ ಗ್ರಂಥವನ್ನು (೧೯೪೨) ಎಂವಿಸೀ ಅವರು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಗ್ರಂಥದಲ್ಲಿ ವಿಮಾನಯಾನದ ಬಗ್ಗೆ ಸಮಗ್ರ ನೋಟ ನೀಡಲಾಗಿದೆ. ಆಕಾಶಯಾನ, ಅಥವಾ ವಿಮಾನ ಸಂಚಾರ ಶಾಸ್ತ್ರದ ಪರಿಚಯದ ಕೈಪಿಡಿ ಎಂದರೆ ತಪ್ಪಿಲ್ಲ. ೮ ಅಧ್ಯಾಯಗಳಲ್ಲಿ (ಪ್ರಕರಣಗಳಲ್ಲಿ) ಹಂತಹಂತವಾಗಿ ವಿಷಯ ನಿರೂಪಣೆ ಮಾಡಲಾಗಿದೆ. ಮೊದಲನೇ ಪ್ರಕರಣದಲ್ಲಿ ಹಕ್ಕಿಯಂತೆ ಆಕಾಶದಲ್ಲಿ ಹಾರಾಡುವ ಬಯಕೆಯಿಂದ ಮೊದಲಗೊಂಡು, ಆಕಾಶಯಾನದ ಚರಿತ್ರೆ,

ಬೆಳವಣಿಗೆಯನ್ನು ತಿಳಿಸಲಾಗಿದೆ. ಆಕಾಶಬುಟ್ಟಿ ಮತ್ತು ವಾಯು ಹಡಗು () ಹೇಗೆ ರೂಪಗೊಂಡವು ಎಂದು ತಿಳಿಸಿದೆ. ಎರಡನೇ ಪ್ರಕರಣದಲ್ಲಿ ಜಾರುವಿಮಾನಗಳು ವಿಕಾಸಗೊಂಡ ಬಗೆಯನ್ನು, ಮೂರನೇ ಪ್ರಕರಣದಲ್ಲಿ ವಾಯು ಯಾನಗಳ ಮಾದರಿಗಳು, ವಿವಿಧ ವಿಮಾನಾಂಗಣಗಳ ರಚನೆಗಳು, ಇಳಿಕೊಡೆಗಳು (ಪ್ಯಾರಾಟುಟ್ಸ್) ಇತ್ಯಾದಿ, ಪ್ರಕರಣ ೪ ರಲ್ಲಿ, ವಿಮಾನ ಹಾರಿಕೆಯು ಸಹಾಯಸಾಧನಗಳು ಯಾವುವು. ನಿಸ್ತಂತು ವಿಜ್ಞಾನ ಮತ್ತು ಪವನಶಾಸ್ತ್ರದ ಮಹತ್ವ ಹಾಗೂ ಉಪಯೋಗಗಳನ್ನು ವಿವರಿಸಲಾಗಿದೆ. ವಿಮಾನಗಳಲ್ಲಿ ಬಳಸುವ ವಿವಿಧ ಯಂತ್ರೋಪಕರಣಗಳ ವಿವರ ಈ ಪ್ರಕರಣದಲ್ಲಿದೆ. ಎಣ್ಣೆಯ ಒತ್ತಡ ಮಾಪಕ, ಶಾಖ ಮಾಪಕ, ಪೆಟ್ರೋಲ್ ಮಾಪಕ, ಪೂರ್ಣಮಟ್ಟ ಸೂಚಕ ಮಾಪಕ, ನಿಯಂತ್ರಕಗಳು ವಾಯುವೇಗಸೂಚಕಗಳು ಮುಂತಾದವುಗಳ ಪರಿಚಯ ನೀಡಲಾಗಿದೆ. ಪವನಶಾಸ್ತ್ರ ಪೈನ್‌ಲೆಸ್ ವ್ಯವಸ್ಥೆಯ ಉಪಯೋಗಗಳನ್ನು ತಿಳಿಸಲಾಗಿದೆ. ಪ್ರಕರಣ ೫ರಲ್ಲಿ ಆಕಾಶಟಪಾಲು (ಬಾನಂಚೆ) ವ್ಯವಸ್ಥೆ ಬಂದಬಗೆ, ಇಂಡಿಯಾದಲ್ಲಿ ಆಕಾಶ ಸಂಚಾರ ಪ್ರಾರಂಭವಾದ ಬಗೆ, ಬ್ರಿಟಿಷ್ ಓವರ್‌ಸೀಸ್ ಏರ್‌ವೇಸ್ 'ತಾತಾ ಏರ್‌ವೇಸ್' ದಿ ಇಂಡಿಯನ್ ನ್ಯಾಷನಲ್ ಏರ್ ವೇಸ್ ಮೊದಲಾದ ಮುಖ್ಯ ಆಕಾಶಮಾರ್ಗಗಳ ವ್ಯವಸ್ಥೆಗಳ ವಿವರ, ದಾಖಲೆಮಾಡಿದ ಅಗ್ರಗಾಮಿ ಹಾರಿಕೆಗಳ ವಿಚಾರ ನಿರೂಪಿತವಾಗಿದೆ.

ಭಾರತದ ವಿಮಾನ ಹಾರಾಟಗಳ ಜತೆಗೆ ಜಗತ್ತಿನ ವಿಮಾನಗಳ ಹಾರಾಟದ ಇತಿಹಾಸವೂ ಇಲ್ಲಿ ವರ್ಣಿತವಾಗಿದೆ. ಮೊದಲಬಾರಿಗೆ ವಿಮಾನಯಾನದಲ್ಲಿ ಪೆಸಿಫಿಕ್ ಸಾಗರ ದಾಟಿದ್ದು ಇಂಗ್ಲೆಂಡಿನಿಂದ ಇಂಡಿಯಾಕ್ಕೆ, ಆಫ್ರಿಕಾಕ್ಕೆ, ಆಸ್ಟ್ರೇಲಿಯಕ್ಕೆ ವಿಮಾನ ಸಂಚಾರ ಮಾಡಿದ ಮೊದಲಾದ ಸಂಗತಿಗಳು ಈ ಪ್ರಕಾರದಲ್ಲಿದೆ. ಪ್ರಕರಣ ೬ರಲ್ಲಿ ವಿಮಾನಗಳು ಸರಕು ಸಾಗಾಣಿಕೆಯಲ್ಲಿ ಎಷ್ಟು ಪ್ರಮುಖ ಪಾತ್ರವಹಿಸಿವೆ ಎಂಬುದನ್ನು ಹಂತಹಂತವಾಗಿ ತಿಳಿಸಿದೆ. ವಿಮಾನಗಳಿಂದ ಛಾಯಾ ಚಿತ್ರಗ್ರಹಣ ಮಾಡುವುದರ ಅನುಕೂಲಗಳು ಪ್ರಾಚೀನ ವಸ್ತು ಶಾಸ್ತ್ರಕ್ಕೆ ಆದ ಉಪಯೋಗಗಳೂ, ಜನಸಂಚಾರಕ್ಕೆ ಉಪಯೋಗವಾದ ರೀತಿ, ಯುದ್ಧಗಳಲ್ಲಿ ವಿಮಾನಪಾತ್ರ ಈ ವಿವರಗಳು ಪ್ರಕರಣ ೬ರಲ್ಲಿ ನಮೂದಿತವಾಗಿದೆ. ಪ್ರಮಾಣ ೭ರಲ್ಲಿ ವಿಮಾನ ಸಂಚಾರದಲ್ಲಿ ಪ್ರಗತಿಯ ಹಂತವಾಗಿ ಮೇಲಾಕಾಶಯಾನ (ಸ್ಪೇಸ್‌ಷಿಪ್) ವಿಕಾಸಗೊಂಡ ಬಗೆ, ಗ್ರಹಾಂತರ ಪ್ರಯಾಣಗಳ ಸಾಹಸ ರಾಕೆಟ್ ಹಾರಿಕೆ, ಮುಂತಾದ ವಿಮಾನಯಾನದ ಮುನ್ನಡೆಗಳನ್ನು ಬಣ್ಣಿಸಲಾಗಿದೆ. ಕೊನೆಯ ಅಧ್ಯಾಯವಾದ ೮ನೇ ಪ್ರಕರಣದಲ್ಲಿ ವಿಮಾನ ನಡೆಸುವೆ ಕಸುಬಿನ ಅವಕಾಶಗಳು ಅಸೈನಿಕ (ಸಿವಿಲ್) ಸೈನಿಕ (ಮಿಲಿಟರಿ) ಬಗೆಯ ಉದ್ಯೋಗಗಳು, ವಿಮಾನಚಾಲಕರ ಚಟುವಟಿಕೆಗಳ, ವಾಣಿಜ್ಯ ವಹಿವಾಟುಗಳಿಗೆ ಮತ್ತು ಬಾಡಿಗೆಗೆ ವಿಮಾನಗಳನ್ನು ನೀಡುವಿಕೆ ಪರೀಕ್ಷಾರ್ಥ ವಿಮಾನ ಹಾರಿಕೆ, ಸಂತೋಷ ಸವಾರಿ ಹಾರಾಟ, ವಿಮಾನಸಾರಥ್ಯ ವಿಜ್ಞಾನ, ವಿಮಾನ ರಚನಾ ಸ್ವರೂಪ, ವಿಮಾನ ಕಾರ್ಯಾಡಳಿತ ಮೊದಲಾದ ಸಂಗತಿಗಳು ಇಲ್ಲಿ ವರ್ಣಿತವಾಗಿದೆ.

ಹೀಗೆ ವಿಮಾನಸಂಚಾರ, ವಿಮಾನ ನಿರ್ಮಾಣ, ವಿಮಾನಸಿಬ್ಬಂದಿ ವ್ಯವಸ್ಥೆ ವಿಮಾನದ ಸಾಧನ ಸಲಕರಣೆಗಳ ಪರಿಚಯ, ವಿಮಾನ ಸಂಚಾರ ವೈವಿಧ್ಯ ಅವುಗಳ ಉಪಯೋಗಗಳು ಇತ್ಯಾದಿ ವಿವರಗಳೂ ವಿಮಾನದ ಬಗ್ಗೆ ಜನಸಾಮಾನ್ಯನಿಗೆ ತಿಳಿಸಬೇಕಾದ ಎಲ್ಲ ವಿವರಗಳ ಪುಟ್ಟ ಕೈಪಿಡಿಗ್ರಂಥ ಇದಾಗಿದೆ.

ಕನ್ನಡದಲ್ಲಿ ವಿಜ್ಞಾನ ಬೋಧನೆಯನ್ನು ಶಾಲೆಗಳಲ್ಲಿ ಬೋಧಿಸಲು ಪ್ರಾರಂಭಿಸಿದಾಗ ಅದಕ್ಕಾಗಿ ಶಾಲಾ ಪಠ್ಯಗಳ ನಿರ್ಮಾಣ ಮಾಡಬೇಕಾಯಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಬೋಧನೆಗೆ ಪಠ್ಯ ಗ್ರಂಥಗಳನ್ನು ಪಠ್ಯೇತರ ಗ್ರಂಥಗಳನ್ನು ಹೇಳಿ ಬರೆಸಲಾಯಿತು ಅನೇಕಜನ ವಿಜ್ಞಾನದ ಬರಹಗಾರರು ಬೆಳಕಿಗೆ ಬಂದರು. ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ವಿಜ್ಞಾನವನ್ನು ಬೋಧನೆ ಮಾಡಿದರೆ ಅವರು ಚೆನ್ನಾಗಿ ಗ್ರಹಿಸಬಲ್ಲರು ಆಸಕ್ತಿಯಿಂದ ತಿಳಿಯಬಲ್ಲರು ಎಂದು ಮನದಟ್ಟಾಯಿತು. ಆಗ ವಿಜ್ಞಾನದ ಗ್ರಂಥಗಳು ಎರಡು ಬಗೆಗಳಲ್ಲಿ ರಚಿತವಾದವು ಒಂದು ಇಂಗ್ಲಿಷ್ ಗ್ರಂಥಗಳ ಅನುವಾದ ಇನ್ನೊಂದು ಕನ್ನಡದಲ್ಲಿ ವಿಜ್ಞಾನವನ್ನು ವಿಶೇಷವಾಗಿ ಅಭ್ಯಾಸ ಮಾಡಿದವರಿಂದ ಸ್ವತಂತ್ರ ಗ್ರಂಥರಚನೆ. ಈ ಎರಡೂ ಬಗೆಯ ಗ್ರಂಥರಚನೆಗಳಲ್ಲಿ ಎದುರಾದ ಪ್ರಮುಖ ಸಮಸ್ಯೆ ಎಂದರೆ ಪಾರಿಭಾಷಿಕ ವಿಧಗಳ ಆಯಾ ವಿಜ್ಞಾನಕ್ಕೆ ಸಂಬಂಧಿಸಿದ ವಿಶೇಷಪದಗಳ ನಿರ್ಮಾಣ ಹಾಗೂ ಇಂಗ್ಲಿಷ್ ಪದಗಳಿಗೆ ಸಮಾನಪದ ನಿರ್ಮಾಣ. ಇದಕ್ಕಾಗಿ ಬೆಳ್ಳಾವೆ ವೆಂಕಟನಾರಾಣಪ್ಪನವರು 'ವಿಜ್ಞಾನ' ಎಂಬ ಮಾಸಪತ್ರಿಕೆಯನ್ನೇ ಮೊದಲಬಾರಿಗೆ ಸಂಪಾದಿಸಿದರು. ವೆಂಕಟೇಶ್ ಅಯ್ಯಂಗಾರ್, ಆರ್ ಎಲ್ ನರಸಿಂಹಯ್ಯ, ಜಿ.ಟಿ. ನಾರಾಯಣರವರು, ಸುಬ್ಬರಾವ್, ನಾರಾಯಣರಾವ್ ಇನ್ನೂ ಅನೇಕರು ಸ್ವತಂತ್ರವಾಗಿ ಉನ್ನತವಿಜ್ಞಾನದ ಬಗ್ಗೆ ಲೇಖನ ಬರೆದರು, ಉಪನ್ಯಾಸಮಾಡಿದರು ಗ್ರಂಥಗಳನ್ನು ರಚಿಸಿದರು. ಅದಕ್ಕಾಗಿ ಪಾರಿಭಾಷಿಕ ಪದಗಳನ್ನು ನಿರ್ಮಾಣ ಮಾಡಿದರು ಈ ದಿಸೆಯಲ್ಲಿ ಅನುವಾದಕರಾಗಿ ಎಂವಿಸೀ ಅವರು ಆಕಾಶಯಾನದ ಗ್ರಂಥದಲ್ಲಿ ನಿರ್ಮಿಸಿದ ಪಾರಿಭಾಷಿಕ ಪದಗಳು ಕುತೂಹಲ ಕಾರಿಯಾಗಿವೆ.ಆಕಾಶಯಾನ ಅಥವಾ ವಿಮಾನಶಾಸ್ತ್ರ (ಏವಿಯೇಶನ್) ಆಧುನಿಕ ವಿಜ್ಞಾನ ಶಾಸ್ತ್ರಗಳಲ್ಲಿ ಒಂದು ಶಾಖೆ. ಇತ್ತೀಚೆಯ ವಿಶೇಷವಾಗಿ ಅಂತರಿಕ್ಷ ವಿಜ್ಞಾನವಾಗಿ ಬೆಳೆದಿದೆ. ಗ್ರಹಾಂತರ ಸಂಚಾರ ವಿಜ್ಞಾನವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಕಟವಾಗಿ ಅನುವಾದವಾದ ಆಕಾಶಯಾನ ಗ್ರಂಥದಲ್ಲಿ ಎಂ ವಿ ಸೀತಾರಾಮಯ್ಯನವರು ಇಂಗ್ಲಿಷ್ ಪಾರಿಭಾಷಿಕ ಪದಗಳಿಗೆ ಸ್ವತಂತ್ರ ಪಾರಿಭಾಷಿಕ ಕನ್ನಡ ಸಂಸ್ಕೃತ ಪದಗಳನ್ನು ವಿಶೇಷವಾಗಿ ನಿರ್ಮಿಸಿದ್ದಾರೆ, ಇಂ.ಕನ್ನಡ ಶಬ್ದಕೋಶ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡಿದ್ದ ಅವರು ವಿಜ್ಞಾನ ಗ್ರಂಥಗಳ ಬಗ್ಗೆ ತಳೆದ ಆಸಕ್ತಿ ಅಚ್ಚರಿಗೊಳಿಸುತ್ತದೆ. ಏಕೆಂದರೆ ಎಂವಿಸೀ ಮೂಲತಃ ಸಾಹಿತ, ಕಲಾವಿದ ಮತ್ತು ಶಾಸ್ತ್ರಜ್ಞರು. ಆದರೂ ಅನುವಾದವೆಂದು ತಿಳಿಯದ ಹಾಗೆ ವಿಷಯವನ್ನು ವಾದ ಮಾಡಿ ಪಾರಿಭಾಷಿಕ ಪದಗಳನ್ನು (ಟೆಕ್ನಿಕಲ್ ಟೂಲ್ಸ್) ಇಂಗ್ಲಿಷಿನಲ್ಲಿ ಕೊಟ್ಟು, ಜತೆಗೆ ಕನ್ನಡದ ಸಮಾನಾರ್ಥಕ ಪದಗಳನ್ನು ರಚಿಸಿ

ಕೊಟ್ಟಿದ್ದಾರೆ. ಇದರಿಂದ ಮೂಲಪದ ಅನುವಾದದಿಂದ ಹೋಲಿಸಿ ನೋಡಲು ಅನುರೂಪವಾಗಿದೆ. ಎಂವಿಸೀ ಅವರ ಪದನಿರ್ಮಾಣ ಸಾಮರ್ಥ್ಯ ಅರಿಯುವಂತಾಗಿದೆ.

ವಿಮಾನ ಶಾಸ್ತ್ರ ವಿಚಾರವಾಗಿ ಕನ್ನಡದಲ್ಲಿ ಗ್ರಂಥ ಬರೆಯುವವರಿಗೆ ಮಾದರಿಯಾದ ಈ ಕೆಳಕಂಡ ಪದಗಳನ್ನು ಗಮನಿಸಬಹುದಾಗಿದೆ.

ಆಕಾಶಯಾನ (Aviation)
ವಾಯುಹಡಗು (Airship)
ಚಾಲಕ (Propeller)
ಅನಿಲಕೋಶ (Gas Comborier)
ಚುಕ್ಕಾಣಿ (Rudder)
ಚಲನಾತ್ಮಕಶಕ್ತಿ (Kinetic Energy)
ಫಲಕವಿಮಾನ (Aeroplane)
ಆಪಾತಕೋನ (Angle of ineidence)
ಜಾರುವಿಮಾನ (Glider)
ವಿಮಾನಾಂಗಣ (Aerodrome)
ಓಡುದಾರಿ (Runways)
ಎತ್ತಿಗೆ (left)
ವಾಯುಹಡಗಿನ ಸಾರಥಿ (Airshop Pilot)
ವಾಯುನಾವಿಕ (Navigator)
ಭೂಯಂತ್ರ ಶಿಲ್ಪಿ (Ground Engineer)
ವಿಮಾನ ವಾಹಕವವನು (Air craft carrier)
ಪ್ರವೀಣ ವಿಮಾನ ಸಾರಥಿ (Master Pilot)
ನಿಮಿಷ ಪರಿವರ್ತನ ಸೂಚಕ (R.P.M. = Revoluton Per minute Indicator)
ತಿರುಗುವ ಅಚ್ಚು (Crank Shaft)
ಎಣ್ಣೆಯ ಒತ್ತಡ ಮಾಪಕ (Oil Presure gauge)
ವಾಯುವೇಗ ಸೂಚಕ (Air Speed Indicator)
ಉನ್ನತಿ ಮಾಪಕ (Altimeter)
ಏರು (ಆರೋಹ) ಸೂಚಕ (Air Indicator)
ವಿದ್ಯುತ್ ಕಾಂತ ತರಂಗ (Electric magntetic wave)
ಆಕಾಶ ಸಾಗಣೆ (Air Transport)
ನೆಲನಿಲ್ದಾಣ (Ground station)
ವಾಯುಭಾರಮಾಪಕ ಯಂತ್ರದ ಒತ್ತಡ (Barometric Pressure)
ಸಮೀಕ್ಷಾಮಂದಿರ (Observatory)
ಪರಮಾವಧಿ ಹಾರಿಕೆ (Reord Plights)

ಸಾಗಣೆಯ ವಾಯಕ (Medum)
ಓರೆ ಛಾಯಾಚಿತ್ರಗ್ರಹಣ (Oblique Photography)
ಇಳಿಕೊಡೆ (Parachute)
ವಾಯುಚಲನವಿಜ್ಞಾನ (Aerodynamics)
ದುಮುಕುಬಾಂಬು (Dive bomb)
ಉರಿಬಾಂಬು (Incendiary Bomb)
ವಿಶೇಷರೀತಿ ವಿಷಗಳು ಮತ್ತು ವಿಷಹಾರಿಗಳು (Taxims and Anti toxims)
ಒಳ ಉರಿತದ ಎಂಜಿನ್ (Internal Combustion Enigne)
ಮೇಲಾಕಾಶ ಹಾರಿಕೆ (Stratosphere)
ಎಳೆಯುವ ಕಾರ್ಯಸಿದ್ಧಿ (tractive effect)
ಅಸೈನಿಕ (civil) ಸೈನಿಕ (Military)
ನಿಸ್ತಂತು (Wireless)
ಬಾಡಿಗೆ ವಿಮಾನ ಹಾರಿಕೆ (Taxi Flying)
ವಿಮಾನಸಾಮು (Ariobatices)
ಸಲಹೆಗಾರ ವಿಮಾನಸಾರಥಿ (Pilot consultant)
ಸಂತೋಷ ಸವಾರಿ (Joy Riding)

ಪದವಿವರಣೆಗಳನ್ನು ನೀಡಿರುವುದು ಈ ಗ್ರಂಥದಲ್ಲಿ ಗಮನಿಸಬೇಕಾದ ಅಂಶ. ಸಾಮಾನ್ಯ ಓದುಗರಿಗೆ ಅತ್ಯುಪಯುಕ್ತ ಅಂಶವಿದು.

ಉದಾಹರಣಗೆ "ಭೂಮಿಯ ಮೇಲ್ಮೆಯಿಂದ ೧೦ಮೈಲಿ ಮಟ್ಟದ ಮೇಲಣ ವಾಯು ಮಂಡಲದ ಪ್ರದೇಶಕ್ಕೆ ಮೇಲಾಕಾಶ (ಅಥವಾ ಮೇಲ್ವಾಯುಮಂಡಲ) ಎರಡು ಹೆಸರು.

ಮೇಲಾಕಾಶದಲ್ಲಿ ಹಾರುವ ವಿಜ್ಞಾನವೇ ಮೇಲಾಕಾಶಯಾನ ರಾಕೆಟ್ (ಆಕಾಶಬಾನಾದಂಥ ಮೇಲಕ್ಕೆ ಚಿಮ್ಮಿ ಹಾರುವ ಸಾಧನಾ ವಿಶೇಷ) ಈಗ ಇದಕ್ಕೆ ಕ್ಷಿಪಣಿ ಎನ್ನುತ್ತಾರೆ.

ಇಲ್ಲಿಯ ಪಾರಿಭಾಷಿಕ ಪದಗಳಿಗೆ ಇಂದು ಬೇರೆ ಪರಿಷ್ಕೃತ ಪದಗಳನ್ನು ಬಳಸುತ್ತಿರಬಹುದು. ಆದರೆ ಎಷ್ಟೋಪದಗಳು ಸ್ವೀಕಾರಾರ್ಹವಾಗಿವೆ. ಅಲ್ಲದೆ ಕನ್ನಡ ಜಾಯಮಾನದಲ್ಲಿ ಮೊದಲಬಾರಿಗೆ ಇಲ್ಲಿ ಪದಗಳನ್ನು ನಿರ್ಮಿಸಿದ್ದಾರೆ ಎಂಬುದನ್ನು ಗಮನಿಸಬೇಕು.

ಕನ್ನಡದಲ್ಲಿ ವಿಮಾನಶಾಸ್ತ್ರದ ಬಗ್ಗೆ ಬಂದಿರುವ ಗ್ರಂಥಗಳೇ ಅತ್ಯಲ್ಪ ಅದರಲ್ಲೂ ಮೊದಲಬಾರಿಗೆ ಜಟಿಲ ಪಾರಿಭಾಷಿಕ ಪದಗಳನ್ನು ಸರಳಾನುವಾದಗಳಿಂದ ವಿಷಯ ನಿರೂಪಣೆ ಮಾಡಿದ ಈ ಗ್ರಂಥ ಎಂವಿಸೀ ಅವರ ಅನುವಾದ ಪ್ರತಿಭೆಗೆ ಸಾಕ್ಷಿಯಾಗಿದೆ.

ಸೌಂದರ್ಯಲಹರೀ ಸ್ತೋತ್ರಾನುವಾದ

ಆದಿಶಂಕರಾಚಾರ್ಯರಿಂದ ರಚಿತವಾದ ಸೌಂದರ್ಯಲಹರಿ ಎಂಬ ದೇವೀಸ್ತೋತ್ರವು ದಿವ್ಯತತ್ವರತ್ನಗಳ ಗಂಭೀರ ಗಣಿಯಾಗಿದೆ. ಕಾವ್ಯ ಸೌಂದರ್ಯ – ಗಹನವೇದಾಂತಗಳ ಸುಂದರ ಸಮನ್ವಯವಾದ ಈ ಸ್ತೋತ್ರವು ಎರಡು ಭಾಗಗಳಿಂದ ಕೂಡಿದೆ. ಮೊದಲಿನ ೧–೪೧ ಪದ್ಯಗಳ ಭಾಗಕ್ಕೆ ಆನಂದ ಲಹರೀ ಎಂದೂ ಉಳಿದ ೪೨ ರಿಂದ ೧೦೦ ವರೆಗಿನ ೫೯ ಪದ್ಯಗಳ ಭಾಗಕ್ಕೆ ಸೌಂದರ್ಯಲಹರೀ ಎಂದು ಹೆಸರಾಗಿದ್ದರೂ ಇಡೀ ಸ್ತೋತ್ರವನ್ನು ಸೌಂದರ್ಯಲಹರೀ ಎಂದು ಕರೆಯುವುದೇ ರೂಢಿಯಾಗಿದೆ.

"ಸೌಂದರ್ಯ ಲಹರಿಯು ಭಗವತೀ ಶ್ರೀ ಮಹಾತ್ರಿಪುರ ಸುಂದರೀ ದೇವಿಯ ಸಗುಣರೂಪ, ನಿಷ್ಕಲರೂಪ, ಯೋಗಿಮಾತ್ರ ಧ್ಯೇಯವಾದ ಚಿದ್ರೂಪ, ಶ್ರೀನಗರದ ಶ್ರೀಚಕ್ರದ ಅಧಿಷ್ಠಾತ್ರಿಯಾದ ಶ್ರೀ ಮಹಾರಾಜ್ಞೀ ರೂಪ, ಕುಂಡಲಿನೀ ಶಕ್ತಿರೂಪ, ಪರಾವಾಗ್ರೂಪ, ಶಿವಶಕ್ತಿ ಸಾಮರಸ್ಯ ಸ್ವರೂಪ, ಮಂತ್ರರೂಪ, ಯಂತ್ರರೂಪ ಅಂತರ್ಮುಖ ಮತ್ತು ಬಹಿರ್ಮುಖಗಳಿಂದ ಆರಾಧಿಸಲ್ಪಡುವ ರೂಪ, ಪರಬ್ರಹ್ಮರೂಪ – ಹೀಗೆ ಎಲ್ಲವನ್ನೂ ಮನನ ಮನೋಹರವಾಗಿ, ಗೇಯ ಮಧುರವಾಗಿ, ಆನಂದಾನುಭವ ರೂಪವಾಗಿ ವರ್ಣಿಸುತ್ತದೆ. ಮಂತ್ರಶಾಸ್ತ್ರ, ತಂತ್ರಶಾಸ್ತ್ರ, ಯಂತ್ರಶಾಸ್ತ್ರಗಳಿಗೆ ಸಂಬಂಧಿಸಿದಂತೆ ದೇವಿಯ ಉಪಾಸನಾ ಪದ್ಧತಿಯಲ್ಲಿ ಈಸ್ತೋತ್ರವು ಶ್ರೀಶಂಕರ ಭಗವತ್ಪಾದರ ಅಪೂರ್ವ ಕೃತಿಯಾಗಿದೆ. (ಶೇಷಾಚಲ ಶರ್ಮ ಸೌಂದರ್ಯಲಹರಿ ಭೂಮಿಕಾ)

ಸೌಂದರ್ಯಲಹರಿಯು ಮತ್ತೊಂದು ವೈಶಿಷ್ಯವೆಂದರೆ, "ಸಂಸ್ಕೃತ ಸ್ತೋತ್ರಸಾಹಿತ್ಯದಲ್ಲಿ ಸೌಂದರ್ಯ ಲಹರೀ ಸ್ತೋತ್ರಕ್ಕೆ ೩೬ಕ್ಕೂ ಹೆಚ್ಚು ವ್ಯಾಖ್ಯಾನಗಳಿವೆ. ಇಷ್ಟೊಂದು ವ್ಯಾಖ್ಯಾನಗಳು ಸಂಸ್ಕೃತದ ಇನ್ನಾವ ಸ್ತೋತ್ರಕ್ಕೂ ಇಲ್ಲ. ಈ ವ್ಯಾಖ್ಯಾನಗಳಲ್ಲಿ ಅತ್ಯಂತ ಪ್ರಸಿದ್ಧ ವ್ಯಾಖ್ಯಾನ ಲಕ್ಷ್ಮೀಧರ ವ್ಯಾಖ್ಯಾನ, ಶ್ರೀ ವಿದ್ಯೋಪಾಸನೆಯು ಸೌಂದರ್ಯ ಲಹರಿಯು ಮೊದಲಭಾಗವಾದ ಅನಂದಲಹರಿಯುಲ್ಲೂ ಉತ್ತರಭಾಗದಲ್ಲಿ ದೇವಿಯು ದಿವ್ಯ ಸೌಂದರ್ಯದ ಅದ್ಭುತವರ್ಣನೆಯೂ ಕಂಡುಬರುತ್ತದೆ. ಈ ಸ್ತೋತ್ರವನ್ನು ಹಲವರು ಪದ್ಯಾನುವಾದ ಮಾಡಿದ್ದಾರೆ. ಅವರಲ್ಲಿ ಎಂವಿಸೀ ಒಬ್ಬರು".

ಕನ್ನಡದಲ್ಲಿ ಸೌಂದರ್ಯಲಹರಿ ಅನುವಾದಗಳು

೦) ಕನ್ನಡದಲ್ಲಿ ಸೌಂದರ್ಯಲಹರಿಯ ಹಲವಾರು ಪದ್ಯಾನುವಾದಗಳಿವೆ

೧) ಕೇವಲ ಮೂಲವನ್ನು ಕನ್ನಡ ಲಿಪಿಯಲ್ಲಿ ಕೊಟ್ಟಿರುವ ಗ್ರಂಥಗಳು

೨) ಮೂಲದ ಜತೆಗೆ ತಾತ್ಪರ್ಯವನ್ನು ಕೊಟ್ಟಿರುವ ಗ್ರಂಥಗಳು

೩) ಮೂಲ ಅನ್ವಯಾರ್ಥ ತಾತ್ಪರ್ಯ ಕೊಟ್ಟಿರುವುವು.

೪) ಮೂಲ, ಅನ್ವಯ, ಪದಚ್ಛೇದ, ಪ್ರತಿಪದಾರ್ಥವಿವರಣೆ ನೀಡಿದ ಗ್ರಂಥ, ಶ್ರೀನಿವಾಸಯ್ಯನವರ ಗ್ರಂಥ.

೫) ಮೂಲ ಅನ್ವಯ ತಾತ್ಪರ್ಯದ ಜತೆಗೆ ಲಕ್ಷ್ಮೀಧರನ ವ್ಯಾಖ್ಯಾನವನ್ನು ಕನ್ನಡಿಸಿರುವುದು. (ಶೇಷಾಚಲರ ಅನುವಾದ)

ಕನ್ನಡ ಪದ್ಯಾನುವಾದಗಳಲ್ಲಿ ಸಿಪಿಕೆ, ಬಿ ಪುಟ್ಟಸ್ವಾಮ್ಯಯ್ಯ ಎಂ.ವಿ. ಸೀತಾರಾಮಯ್ಯನವರ ಅನುವಾದಗಳು ಪ್ರಸಿದ್ಧವಾಗಿವೆ.

೬) ಮೂಲ-ಅನ್ವಯಕ್ಕೆ ಕನ್ನಡ ಟೀಕೆ ಬರೆದ ಪ್ರಾಚೀನ ಗ್ರಂಥ. ಜಕ್ಕಣಾಮಾತ್ಯನ ಗ್ರಂಥ ಸೌಂದರ್ಯಲಹರಿ (ಕಾಲ ಸು ೧೭೦೦) ಜಕ್ಕಣಾಮಾತ್ಯನ ದೀಪಿಕೆ ಎಂಬ ಕನ್ನಡ ಟೀಕೆ ಹಳಗನ್ನಡದಲ್ಲಿದೆ ಮತ್ತು ಸೌಂದರ್ಯಲಹರಿ ಮೇಲೆ ಮೊತ್ತ ಮೊದಲಿನ ಕನ್ನಡ ಟೀಕಾಗ್ರಂಥವಾಗಿದೆ.

ಎಂವಿಸೀ ಅವರು ತಮ್ಮ ಅನುವಾದಕ್ಕೆ ಆಧಾರವಾಗಿಟ್ಟು ಕೊಂಡಿರುವ ಗ್ರಂಥ ಇದೇ ಆಗಿದೆ. ೧೯೫೫ರಲ್ಲಿ ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ ಎಂಬ ಮೊದಲಬಾರಿಗೆ ವಿದ್ವಾನ್ ಸು. ನಾರಾಯಣಸ್ವಾಮಿ ಶಾಸ್ತ್ರೀ ಅವರಿಂದ ಸಂಪಾದಿತವಾಗಿ ಪ್ರಕಟವಾಯಿತು. ಮುದ್ರಿತ ಪ್ರತಿಯಲ್ಲಿ ಅನುವಾದವಾಗಿ ಯಂತ್ರ ಬೀಜಾಕ್ಷರ ಪೂಜಾಕ್ರಮಗಳನ್ನು ಸಂಪಾದಕರು ಇತರ ಮೂಲಗಳಿಂದ ಸಂಪಾದಿಸಿ ಇದರಲ್ಲಿ ಪ್ರಕಟಿಸಿದ್ದಾರೆ.

ಸೌಂದರ್ಯ ಲಹರಿಯ ಅನುವಾದದ ಹಿನ್ನೆಲೆಯನ್ನು ಎಂ.ವಿ. ಸೀತಾರಾಮಯ್ಯನವರು ಬಿ. ಪುಟ್ಟಸ್ವಾಮಯ್ಯ ಅವರ ಕನ್ನಡ ಸೌಂದರ್ಯಲಹರಿಯನ್ನು ಕುರಿತು ಬರೆದಾಗ ಹೀಗೆ ಹೇಳಿದ್ದಾರೆ. "ಕೆಲವು ವರ್ಷಗಳ ಹಿಂದೆ ನನ್ನ ಲೇಖನ ಒಂದರಲ್ಲಿ ಉದಾಹರಣಾರ್ಥ ಸೌಂದರ್ಯಲಹರಿಯಲ್ಲಿ ನವರಸ ಪುಸ್ತಕದಲ್ಲಿ ಎರಡು ಶ್ಲೋಕಗಳನ್ನು ವಾರ್ಧಕ ಷಟ್ಪದಿಯಲ್ಲಿ ಅನುವಾದ ಮಾಡಿದ್ದೆ. ಅವುಗಳನ್ನು ಗಮನಿಸಿದ ನನ್ನ ಮಿತ್ರರೊಬ್ಬರು ಪೂರ್ತಿಯಾಗಿ ಅನುವಾದ ಮಾಡಬೇಕೆಂದು ಪ್ರೋತ್ಸಾಹಿಸಿದರು ೧೯೮೦ರ ಮಾರ್ಚಿ ತಿಂಗಳಿನಲ್ಲಿ ನನ್ನ ಅನುವಾದ ಕಾರ್ಯ ಮುಗಿಯಿತು. ಅಲ್ಲಿಯವರೆಗೂ ಇತರರು ಈ ಉದ್ಧಕೃತಿಯನ್ನು ಅನುವಾದ ಮಾಡಿರುವರೆಂಬ ಕಡೆಗೆ ನನ್ನ ಲಕ್ಷ್ಯ ಹೋಗಿರಲಿಲ್ಲ. ಸೌಂದರ್ಯ ಲಹರಿಗೆ ಜಕ್ಕಣಾಮಾತ್ಯನು ಸಂಸ್ಕೃತ ವ್ಯಾಖ್ಯಾನಗಳನ್ನು ಆಧರಿಸಿ ಕನ್ನಡದಲ್ಲಿ ಒಂದು ಟೀಕನ್ನು ಬರೆದಿದ್ದಾನೆ. ಈ ಟೀಕನ್ನುಳ್ಳ ಸೌಂದರ್ಯಲಹರಿ ಮೈಸೂರು ಪ್ರಾಚ್ಯ ಸಂಶೋಧನಾಲಯದಿಂದ ಪ್ರಕಟವಾಗಿದೆ. ಅನುವಾದ ಕಾರ್ಯದಲ್ಲಿ ಈ ಟೀಕಿನಿಂದ ನಾನು ನೆರವನ್ನು ಪಡೆದಿದ್ದಾನೆ" ಎಂವಿಸೀ ಅವರ ಮಾತಿನಿಂದ ತಿಳಿಯುವ ಮೂರು ಅಂಶಗಳು ಮಹತ್ವವಾದವು. ಅನುವಾದದ ಕಾರ್ಯದಲ್ಲಿ ಜಕ್ಕಣಾಮಾತ್ಯನ ಕೃತಿಯನ್ನು ಮಾತ್ರ ಗಮನಿಸಿದ್ದಾರೆ. ಇತರರು ಅನುವಾದಿಸದ್ದನ್ನು ಗಮನಿಸದೆ ಸ್ವತಂತ್ರವಾಗಿ ಮೂಲವನ್ನು ಹಿಡಿದು ವಾರ್ಧಕ ಷಟ್ಪದಿಯಲ್ಲಿ ಅನುವಾದಿಸಿದ್ದಾರೆ. ೧೯೮೦ರ ಮಾರ್ಚಿಯಲ್ಲಿ ಕೃತಿಯನ್ನು ರಚಿಸಿದ್ದಾರೆ. ಮೂಲ ಹಸ್ತ ಪ್ರತಿಯಲ್ಲಿ ರಚನಾಕಾಲ ನಮೂದಿಸಿಲ್ಲ. ಅಷ್ಟೇ ಅಲ್ಲ ಈ ಅನುವಾದ ಮೊದಲಬಾರಿಗೆ ಈ ಸಂಪುಟದಲ್ಲಿ ಪ್ರಕಟವಾಗುತ್ತಿದೆ.

ಬಿ. ಪುಟ್ಟಸ್ವಾಮಯ್ಯನವರ ಸೌಂದರ್ಯಲಹರಿಯ ಕನ್ನಡ ಪದ್ಯಾನುವಾದ ಕೃತಿಯನ್ನು ಕುರಿತು ಬರೆಯುತ್ತಾ ಹೇಳಿದ ಮಾತುಗಳನ್ನು ಗಮನಿಸಿದರೆ ಎಂ ವಿ ಸೀ ಅವರು ಸೌಂದರ್ಯ ಲಹರಿಯನ್ನು ಆಳವಾಗಿ ಅಭ್ಯಸಿಸಿದ್ದಾರೆ ಎಂದು ತಿಳಿಯುತ್ತದೆ. ಸೌಂದರ್ಯಲಹರಿಯ ಭಾಷಾಂತರ ಸುಲಭಕಾರ್ಯವಲ್ಲ ಎಂದು ಎಂ ವಿ ಸೀ ತಿಳಿದಿದ್ದಾರೆ.

ಅವರು ಹೇಳುವ ಮಾತಿದು "ಸೌಂದರ್ಯ ಲಹರಿಯಂತಹ ಅರ್ಥನಿಬಿಡ, ನಿಗೂಢ ಸಂಕೇತಪರ, ತಂತ್ರಶಾಸ್ತ್ರ ಪರಿಭಾಷಾಯುಕ್ತ, ಅಧ್ಯಾತ್ಮಪ್ರವಣ – ಆದರೂ ಕಾವ್ಯ ಶೋಭೆಯಿಂದ ಕಾವ್ಯ ರಸಿಕರ ಮನಸ್ಸನ್ನು ಸೆಳೆಯುವ ಕೃತಿಯನ್ನು ಭಾಷಾಂತರ ಮಾಡುವವನು ವ್ಯುತ್ಪನ್ನ ಮತಿಯಾಗಿರಬೇಕು" (ಬಿ. ಪುಟ್ಟಸ್ವಾಮಿ ಸೌಂದರ್ಯ ಲಹರಿ ಪುಟ ೩೧)

ಇಂತಹ ಕಠಿಣಕಾರ್ಯವಾದ ಸೌಂದರ್ಯಲಹರಿಯ ಅನುವಾದದ ಸಾಹಸದಲ್ಲಿ ಎಂ.ವಿ.ಸೀ ಸಾಕಷ್ಟು ಯಶಗಳಿಸಿದ್ದಾರೆ. ಅನುವಾದದಲ್ಲಿ ಮೂಲದ ವಿಷಯ ಸರಳವಾಗಿ ಬರಬೇಕು ಎಂಬುದು ಅವರ ಧ್ಯೇಯವಾಗಿದೆ. ವಾರ್ಧಕ ಷಟ್ಪದಿ ಬಳಸಿದ್ದಾರೆ. ಮೂಲಕ್ಕೆ ನೇರ ಅನುವಾದ ಎಂಬಂತೆ ಮಾಡಿದ್ದಾರೆ.

ಉದಾಹರಣೆಗೆ ಈ ಪದ್ಯವನ್ನು ಗಮನಿಸಬಹುದು ಆದಿಶಂಕರರ ಮೂಲಪದ್ಯ

ಶರಜ್ಜ್ಯೋತ್ಸ್ನಾ ಶುದ್ಧಾಂ ಶಶಿಯುತಜಟಾಜೂಟ ಮುಕುಟಾಂ
ವರತ್ರಾಸತ್ರಾಣ ಸ್ಫಟಿಕ ಘಟಿಕಾ ಪುಸ್ತಕ ಕರಾಮ್
ಸಕೃನ್ನತ್ವಾ ನ ತ್ವಾಂ ಕಥಮಿವ ಸತಾ ಸಂವಿದಧತೇ
ಮಧುಕ್ಷೀರ ದ್ರಾಕ್ಷಾ ಮಧುರಿ ಮಧುರೀಣಾ ಭಣಿತಯಃ

(೧೫ ಸೌಂದರ್ಯಲಹರಿ)

ಇನ್ನು ಸ್ತೋತ್ರದಲ್ಲಿರುವ "ಶಶಿಯುತ ಜಟಾಜೂಟ ಮುಕುಟಾಲ

ವರತ್ರಾಸತ್ರಾಣ ಸ್ಫಟಿಕಘಟಿಕಾ ಪುಸ್ತಕಕರಾಂ "ಎಂಬ ಮಾತುಗಳನ್ನು ಚಂದ್ರನನ್ನು ಮುಡಿದ ಜಡೆಮುಡಿಯ ಮುಡಿಯವಳು, ವರವೀವ ಅಭಯದೋರುವ ಪಳಕುಗಳ ಹೊತ್ತಿಗೆಗಳನ್ನು ಪಿಡಿದ ನಾಲ್ಕೈಗಳವಳು" ಎಂಬುದಾಗಿ ಸೊಗಸಾಗಿ. ಅನುವಾದಿಸಿದ್ದಾರೆ. ಹೀಗೆ ಆದಿಶಂಕರರ ಸ್ತೋತ್ರರತ್ನಗಳಲ್ಲಿ ಒಂದಾದ ಸೌಂದರ್ಯಲಹರಿಯನ್ನು ಕವಿ ಪ್ರತಿಭೆಯಿಂದ ಸರಳವಾಗಿ ಪದ್ಯರೂಪದಲ್ಲಿ ಅನುವಾದಿಸಿದ್ದಾರೆ. ಎಂವಿಸೀ ಅವರ ಅನುವಾದದ ವೈಖರಿಯನ್ನುಕಾಣಲು ಅವರಂತೆಯೇ ವಾರ್ಧಕ ಷಟ್ಪದಿಯಲ್ಲಿ ಈ ಸ್ತೋತ್ರವನ್ನೇ ಗಮಕ ಶಂಕರ ನಾರಾಯಣ ಅವರು ಅನುವಾದಿಸಿರುವುದನ್ನು ಗಮನಿಸಬಹುದು.

ಶರದಿಂದು ಕರದಂತೆ ಶುಭ್ರಳುಂ ಶಶಿಯುಕ್ತ
ವರಜಟಾಜೂಟಮೇ ಮಕುಟಮಾಗೆಸೆದಿರ್ದು
ಕರದೊಳ್ ವರಾಭಯ ಪ್ರದ ಮುದ್ರೆಯಂ ಪಳಿಕು ಬಟ್ಟಲು ಪುಸ್ತಕಗಳ
ಧರಿಸಿಕೊಂಡಿರ್ಪ ನಿನ್ನನ್ನೊರ್ಮೆಯುಂ ನಮ
ಸ್ಕರಿಸದಿರ್ದೊಡೆ ಮಧುದ್ರಾಕ್ಷೆ ದುಗ್ಧಗಳ ಸುಮ
ಧುರತೆಯಾ ವಾಗ್ಝರಿಗಳೆಂತು ತಾಮಾದಪವು ಪೇಳ್ತಾಯೆ ಹೇ

ಭಗವತಿ (ಪದ್ಯ ೧೫)

ಆದಿಪ್ರಾಸ ಸಹಿತ ಇಡೀ ಸ್ತೋತ್ರವನ್ನು ಶಂಕರನಾರಾಯಣರು ಮಾಡಿರುವುದು ಗಮನಾರ್ಹವಾಗಿದೆ. ಕನ್ನಡದ ಕಾವ್ಯಗಳಲ್ಲಿ ಆದಿಪ್ರಾಸ ಕಡ್ಡಾಯವೆಂಬಂತೆ ಬರುವುದನ್ನು ಗಮನಿಸಬೇಕು.

ಎಂ.ವಿ.ಸೀ ಅವರ ಅನುವಾದ :

ಶಾರದದ ಬೆಳ್ದಿಂಗಳಂತೆ ಶುಭ್ರಳು, ಚಂದ್ರ
ನನು ಮುಡಿದ ಜಡೆಮುಡಿಯ ಮುಡಿಯವಳು, ವರವೀವ
ಅಭಯದೋರುವ ಪಳಕುಗಳಸ ಹೊತ್ತಗೆಗಳನು ಪಿಡಿದ ನಾಲ್ಕೈಗಳವಳು
ಇಂಥಳಹ ನಿನಗೊಮ್ಮೆಯಾದರೂ ನಮಿಸಿದರೆ
ಎಂತೊದಗುವುದು, ತಾಯೆ, ಹಾಲುಜೇನು ದ್ರಾಕ್ಷೆ
ಗಳ ಮಧುರಗುಣವುಳ್ಳ ಕವಿತೆಯದು ಕಾವ್ಯಕರ್ಮಾಸಕ್ತ ಸಜ್ಜನರಿಗೆ

(ಪುಟ ೧೫)

(ತಾತ್ಪರ್ಯ : ಹೇ ಭಗವತಿಯೇ, ಶರತ್ಕಾಲದ ಬೆಳದಿಂಗಳಿನ ಹಾಗೆ ಶುಭ್ರವಾದ ಚಂದ್ರಕಲಾಯುಕ್ತವಾದ ಜಟಾಮುಕುಟವನ್ನೇ ಕಿರೀಟವಾಗುಳ್ಳ ವರದಾನ ಮುದ್ರೆಯ ಅಭಯದಾನ ಮುದ್ರೆಯ ಅಕ್ಷಮಾಲೆ, ಪುಸ್ತಕಗಳನ್ನು ಕೈಗಳಲ್ಲಿ ಹಿಡಿದಿರುವ ನಿನ್ನನ್ನು ಒಂದು ಬಾರಿಯಾದರೂ ನಮಿಸದಿದ್ದಾರೆ ಕವಿಗಳಿಗೆ ಹಾಲು ಜೇನುತುಪ್ಪ ದ್ರಾಕ್ಷಿ ಇವುಗಳ ಮಾಧುರ್ಯದಂತೆ ಇರುವ ವಾಗ್ವೈಖರಿ ಲಭಿಸುವುದು ಹೇಗೆ ಸಾಧ್ಯ?)

ಈ ವಾರ್ಧಕಷಟ್ಪದಿಯಲ್ಲಿ ಆದಿಪ್ರಾಸವಿಲ್ಲದಿರುವುದು ಒಂದು ಕೊರತೆ. ಇಡೀ ಸ್ತೋತ್ರವನ್ನು ಆದಿಪ್ರಾಸರಹಿತವಾಗಿ ರಚನೆ ಮಾಡಿದ್ದೇಕೋ ತಿಳಿಯದು ನೂರಾರು ಕವಿತೆಗಳನ್ನು ರಚಿಸಿರುವ ಎಂವಿಸೀ ಅವರ ಪಾಂಡಿತ್ಯ ಪ್ರಾಸಸಹಿತ ಪದ್ಯರಚನೆ ಮಾಡಬಲ್ಲಂಥ ಪ್ರತಿಭೆ ಅವರದು. ಆದರೂ ಇಲ್ಲಿ ಆದಿದ್ರಾಸ ಕಾಣದಿರಲು ದೇವಿಸ್ತುತಿಯಲ್ಲಿ ಮೂಲವೃತ್ತಗಳಲ್ಲಿ ಪ್ರಾಸವಿಲ್ಲದಿರುವುದರಿಂದ ಅನುವಾದದಲ್ಲೂ ತರಬೇಕಿಲ್ಲವೆಂದು ಭಾವಿಸಿರಬೇಕು. ಏನೇ ಆದರೂ ಶಬ್ದಾಲಂಕಾರ ಅರ್ಥಾಲಂಕಾರಗಳಿಂದ ಶೋಭಿಸುವ ಶಂಕರಸ್ತೋತ್ರಗಳಲ್ಲಿ ಪ್ರಸಿದ್ಧವಾದ ಸೌಂದರ್ಯ ಲಹರಿಯನ್ನು ಕನ್ನಡದಲ್ಲಿ ವಾರ್ಧಕಷಟ್ಪದಿಯ ವೃಂದದಲ್ಲಿ ತರುವಾಗ ಆದಿ ಪ್ರಾಸರಹಿತವಾಗಿ ರಚಿಸಿರುವುದು ಮೆಚ್ಚುವ ಸಂಗತಿ ಅಲ್ಲ. ೨೦ನೇ ಶತಮಾನದವರೆಗೆ ಬಹುಶಃ ಯಾರೂ ವಾರ್ಧಿಕ ಷಟ್ಪದಿಯಲ್ಲಿ ಸ್ತೋತ್ರಸಾಹಿತ್ಯವನ್ನು ಅನುವಾದಿಸಿದವರು ಪ್ರಾಸರಹಿತರಚನೆ ಮಾಡಿಲ್ಲ ಎಂದು ನನ್ನ ತಿಳಿವಳಿಕೆ.

ಎಂ.ವಿ.ಸೀ ಅವರು ಸೌಂದರ್ಯಲಹರಿಯ ಮೂಲವನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಆದಕಾರಣವೇ ಪದಪದವನ್ನು ಗಮನಿಸಿ ತಮ್ಮ ಅನುವಾದದಲ್ಲಿ ತರಲು ಯತ್ನಿಸಿದ್ದಾರೆ. ಮೂಲದ ಆಳ ಆಧ್ಯಯನಕ್ಕೆ ಒಂದು ನಿದರ್ಶನವನ್ನು ನೀಡಬಹುದು. ಕನ್ನಡದಲ್ಲಿ ಪ್ರಸಿದ್ಧ ಭಕ್ತಿ ಕವಿಗಳೂ ಕಾದಂಬರಿಗಾರರೂ ನಾಟಕಕಾರರೂ, ಪತ್ರಿಕಾ ಸಂಪಾದಕರೂ ಆದ ಬಿ. ಪುಟ್ಟಸ್ವಾಮಯ್ಯ ಅವರು ಸೌಂದರ್ಯ ಲಹರಿಯನ್ನು ಗುಣ ದೋಷ ದೃಷ್ಟಿಯಿಂದ ವಿಮರ್ಶಿಸುವಾಗ, ಬಿ. ಪುಟ್ಟಸ್ವಾಮಯ್ಯನವರು ಅನುವಾದದಲ್ಲಿ ತಂದಿರುವ ಗೇಯಗುಣವನ್ನು ಹಾಡುಗಬ್ಬಕ್ಕೆ ಹೊಂದಿಕೊಳ್ಳುವ ಸಾಂಗತ್ಯ ಬಂಧುರಛಂದೋಬಂಧವನ್ನು ಮೆಚ್ಚಿಕೊಂಡಿದ್ದಾರೆ. ಅಂತೆಯೇ ಅಲ್ಲಲ್ಲಿ ಮೂಲದ ಭಾವ-ಅರ್ಥಗಳು ಅನುವಾದದಲ್ಲಿ ಮೂಡದಿರುವುದನ್ನು ಗುರುತಿಸಿದ್ದಾರೆ. "ಪದ್ಯದಲ್ಲಿ (ತಟಿಲ್ಲೇಖಾತನ್ವಿ (ಸಂಸ್ಕೃತಿ)–

ಸೆಳೆಮಿಂಚಿನಂತೆ ತೆಳ್ಳಗೆ (ಕನ್ನಡ) ಮೃದಿತ ಮಲಮಾಯೇನ ಮನಸಾ ಮಹಾಂತಃ" ಎಂಬ ಮೂಲದನುಡಿಯಲ್ಲಿ "ಮೂಲರೂಪದ ಮಾಯೆಯನ್ನು ಅಂದರೆ ಅವಿದ್ಯೆಯನ್ನು ಅಜ್ಞಾನವನ್ನು ನಿಗ್ರಹಿಸಿದ" ಎಂಬ ಮಹಾಂತರ ಮಹತ್ವವನ್ನು ವರ್ಣಿಸುವ ವಿಶೇಷಣ ಬಿಟ್ಟು ಹೋಗಿದೆ ಎಂದು ಎಂವಿಸೀ ತಿಳಿಸಿದ್ದಾರೆ. ಹಾಗೆಯೇ ಶ್ಲೋಕ ೬ರ ಅನುವಾದದಲ್ಲಿ ಮೂಲಾರ್ಥವನ್ನು ಅನುವಾದಕರು ವ್ಯತ್ಯಾಸಗೊಳಿಸಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ಇವುಗಳನ್ನು ಸೂಚಿಸುವಾಗ ಇವುಗಳಲ್ಲಿ ತೀರಗೌಣವಾದ ಸಂದರ್ಭಗಳು "ಎಂದು ವಿನಯವನ್ನು ಎಂ.ವಿ.ಸೀ ವ್ಯಕ್ತಗೊಳಿಸಿ ಬಿ.ಪುಟ್ಟಸ್ವಾಮಯ್ಯನವರ ಸ್ತೋತ್ರಾನುವಾದವನ್ನು 'ಕನ್ನಡ ಸೌಂದರ್ಯಲಹರಿ ಸ್ವತಂತ್ರಕೃತಿ ಎನ್ನುವಮಟ್ಟಿಗೆ ಸಮರ್ಥವಾದ ಸುಂದರವಾದ ಅನುವಾದವಾಗಿದೆ" ಎಂದಿದ್ದಾರೆ. ಎಂ.ವಿ.ಸೀ ಅವರು ವಿಮರ್ಶೆ ಮಾಡುವಾಗ ದೋಷಗಳನ್ನು ಎತ್ತಿಹೇಳಿದರೂ ಗುಣಗ್ರಾಹಿಗಳಾಗಿರುತ್ತಾರೆ ಎಂಬುದನ್ನು ಈ ವಿಮರ್ಶೆ ತೋರಿಸುತ್ತದೆ.

ತಮ್ಮ ಅನುವಾದದಲ್ಲಿ "ಮೃದಿತಮಲ ಮಾಯೇನ ಮನಸಾ ಮಹಾನ್ತಃ" ಎಂಬ ಮೂಲದ ಮಾತನ್ನು "ತನ್ನೊಳಗಿನ ಜ್ಞಾನ ಕಾಮ ಮದ ಮಾತ್ಸರ್ಯ ಮೊದಲಪ್ಪ ಕೊಳೆಯೆಲ್ಲವನು ನೀಗಿಕೊಂಡ ಮನದಿಂದ ಕಾಣುವ ಮಹಾನ್ತನು....." ಎಂದು ಸರಿಯಾಗಿ ಅನುವಾದಿಸಿದ್ದಾರೆ.

ಜಕ್ಕಣಾಮಾತ್ಯನ ಪ್ರಭಾವ ಈ ಎಲ್ಲ ಸಂದರ್ಭಗಳಲ್ಲೂ ಮೂಲದಭಾವ ಸರಳವಾಗಿ ನೇರವಾಗಿ ಅನುವಾದದಲ್ಲಿ ಮೂಡಿಬಂದಿದೆ. ಅನುವಾದದ ಸಂದರ್ಭ ಜಕ್ಕಣಾಮಾತ್ಯ ವಿರಚಿತ ಟೀಕೆಯನ್ನು ಕಣ್ಣ ಮುಂದೆ ಇಟ್ಟುಕೊಂಡು ಅನುವಾದ ಮಾಡಿರುವುದರಿಂದ, ಮೂಲದಲ್ಲಿಲ್ಲದ ಜಕ್ಕಣಾಮಾತ್ಯ ಟೀಕೆಯಲ್ಲಿ ಕಂಡುಬರುವ ಮಾತುಗಳು ಅನುವಾದದಲ್ಲೂ ಸೇರಿವೆ. ಮುನ್ನೂರ ಅರವತ್ತು ಕಿರಣಗಳ ಮೇಲೆ ಸಹಸ್ರ ಕಮಲಮಧ್ಯ ಚಂದ್ರಬಿಂಬ ಸ್ವರೂಪದ ಬಿಂದು ಸ್ಥಾನವೆಂಬ ಹೆಸರುಂಟಾದ ಅಮೃತ ಸಮುದ್ರ ಮಧ್ಯದಲ್ಲಿ ನಿನ್ನ ಪಾದ ಪದ್ಮಗಳು ಇದ್ದಾವೆ. ಎಂಬಲ್ಲಿ ಮುನ್ನೂರ ಅರವತ್ತು ಕಿರಣಗಳು ಎಂಬ ಮಾತು ಮೂಲ ಶ್ಲೋಕದಲ್ಲಿಲ್ಲ. ಜಕ್ಕಣಾಮಾತ್ಯ ಹೇಳಿದ ಅದನ್ನು ಎಂವಿಸೀ ಅವರು ತಮ್ಮ ಅನುವಾದದಲ್ಲಿ ಸೇರಿಸಿಕೊಂಡಿದ್ದಾರೆ.

ಮೂಲಪದ್ಯ :

ಕ್ಷಿತಾ ಷಟ್ಪಂಚಾಶದ್ ದ್ವಿಸಮಧಿಕ ಪಂಚಾಶದುದಕೇ
ಹುತಾಶೇದ್ವಾಷ್ಟಿಶ್ಚತುರಧಿಕ ಪಂಚಾಶದನಿಲೇ
ದಿವಿದ್ವಿಃಷಟ್ ತ್ರಿಂಶನ್ಮನಸಿ ಚ ಚತುಃಷಷ್ಟಿರಿತಿ ಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜ ಯುಗಮ್

(ಶ್ಲೋಕ ೧೪)

ಐವತ್ತು ಮೇಲಾರು ಭೂನಿಷ್ಠ ಚಕ್ರದಲಿ
ಐವತ್ತು ಮೇಲೆರಡು ಜಲಯುಕ್ತ ಚಕ್ರದಲಿ
ಅಗ್ನಿಚಕ್ರದಲಾರು ಹತ್ತುಮೇಲೆರಡನಿಲದಲ್ಲಿ ಐವತ್ತನಾಲ್ಕು

ಆಕಾಶ ಚಕ್ರದಲ್ಲೆಪ್ಪತ್ತು ಮೇಲೆರಡು
ಮಾನಸಚಕ್ರದಲ್ಲರುವತ್ತು ನಾಲ್ಕಿಂತು
ಮುನ್ನೂರರುವತ್ತು ಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ

ಇಲ್ಲಿ ಮೂಲಾಧಾರ ಚಕ್ರದಲ್ಲಿ ೫೬ 'ಮಣಿಪೂರಕದಲ್ಲಿ ೫೨' ಸ್ವಾಧಿಷ್ಠಾನದಲ್ಲಿ ೬೨ 'ಅನಾಹತ ಚಕ್ರದಲ್ಲಿ ೫೪' 'ವಿಶುದ್ಧಿ ಚಕ್ರದಲ್ಲಿ ೭೨' ಆಜ್ಞಾಚಕ್ರದಲ್ಲಿ ೬೪ ಹೀಗೆ ಷಟ್ಚಕ್ರಗಳಲ್ಲಿ ಇರುವಂಥಾ ಕಿರಣಗಳ ಮೊತ್ತವನ್ನು ೩೬೦ ಎಂದು ಜಕ್ಕಾಣಾಮಾತ್ಯ ಕೂಡಿದ್ದಾನೆ. ಮೂಲಶ್ಲೋಕದಲ್ಲಿ ಕೂಡಿಲ್ಲ. ೩೬೦ ಎಂಬ ಮೊತ್ತದ ಪದವನ್ನು ಎಂವಿಸೀ ಅವರು ತಮ್ಮ ಅನುವಾದದಲ್ಲಿ

"ಇಂತು ಮೂನ್ನೂರರವತ್ತುಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ" ಎಂದಿದ್ದಾರೆ. ಇದು ಜಕ್ಕಣಾಮಾತ್ಯನ ಪ್ರಭಾವವಾಗಿದೆ.

ಅದೆತಾನೆ ಬುಡದಲ್ಲಿ ಬೆವರಿಟ್ಟು ಬಿಗಿಕಟ್ಟು
ವಡೆದ ಕುಪ್ಪುಸಪೊಟ್ಟನೊಡೆದು ಹರಿವಂತಿರಲು
ತೋಳತಳಕುಜ್ಜತಿಹ ಚಿನ್ನಕಳಶದ ತೆರನ ಚೆನ್ನ ಮೊಲೆ ಜೋಡಿಯನ್ನ
ನಿನ್ನ ನಡು ಮುರಿದು ಬೀಳದೆ ಧರಿಸಲಾರ್ಪಂತೆ
ಮನ್ಮಥನು ಯೇಲಕಿಯ ಬಳ್ಳಿಯಿಂದದನು ಮೂ-
ವಳಸಾಗಿ ಬಳಸಿ ಬಲುಬಿಗಿಯಾಗಿ ಬಂಧಿಸಿಹ
ನೆನುವಂತೆ, ಎಲೆದೇವಿ, ನಿನ್ನ ನಡುವಿನ ಬಳಿಯ ಶೋಭಿಸಿಹುದು

ಈ ಪದ್ಯವನ್ನು ೭ ಸಾಲುಗಳಲ್ಲಿ ಬರೆದಿರಲು ಕಾರಣವನ್ನು ಎಂವಿಸೀ ಅವರು ಹೀಗೆ ತಿಳಿಸಿದ್ದಾರೆ "ಮೂಲದ ಭಾವವೆಲ್ಲವೂ ಆರುಸಾಲುಗಳಲ್ಲಿ ಮೂಡಲು ಅಶ್ಯಕವೆನಿಸಿ ಷಟ್ಪದಿ ಆಗಿರಬೇಕಾದದ್ದು ಸಪ್ತಪದಿಯಾಗಿ ಪರಿಣಮಿಸಿದೆ"

ಇದೇ ರೀತಿಯಾಗಿ ಪದ್ಯ ೩೧ ಮತ್ತು ಪದ್ಯ ೯೨ ಗಳನ್ನು ಚೌಪದಿಗಳನ್ನಾಗಿ ಅನುವಾದಿಸಿದ್ದಾರೆ. ಈ ಬಗ್ಗೆ ಎಂವಿಸೀ ಅವರು ಟಿಪ್ಪಣಿ ಬರೆದಿಲ್ಲ ಕಾರಣ ತಿಳಿಸಿಲ್ಲ.

ಇವುಗಳನ್ನು ಕಂಡಾಗ, ಮೂಲದ ಭಾವ ತರಲು ಒಂದೇ ರೀತಿಯ ಛಂದಸ್ಸನ್ನು (ವಾರ್ಧಿಕಷಟ್ಪದಿ) ಬಳಸಬೇಕೆಂಬ ನಿಯಮವನ್ನು ಪಾಲಿಸಿಲ್ಲವೆಂದು ತಿಳಿಯುತ್ತದೆ. ಆದರೆ ಸಾಮಾನ್ಯವಾಗಿ ವಾರ್ಧಕಷಟ್ಪದಿ ಕಾವ್ಯ ಬರೆದವರು, ಅನುವಾದ ಮಾಡಿದವರು ಯಾರೂ ಹೀಗೆ ೭ ಸಾಲಿನ ಸಪ್ತಪದಿ ಪದ್ಯ ೪ ಸಾಲುಗಳ ಚೌಪದಿಗಳನ್ನು ಕಾವ್ಯದ ನಡುವೆ ಬಳಸಿಲ್ಲ ಎಂಬಂಶ ಗಮನಿಸಬೇಕು.

ಎಂವಿಸೀ ಅವರು ಹಳಗನ್ನಡ ವಿದ್ವಾಂಸರು. ಆಕಾರಣಕ್ಕೆ ಈ ಕಾವ್ಯಾನುವಾದದಲ್ಲಿ ಶಿಥಿಲದ್ವಿತ್ವಗಳನ್ನು ಬಳಸುತ್ತಾರೆ (ಪದ್ಯ ೩ ನೋಡಿ)

ಮತ್ತೊಂದು ಸಂಗತಿ ಎಂದರೆ ನಮ್ಮಲ್ಲಿ ಹಿರಿಯ ಕವಿಗಳ ಒಂದು ಪ್ರವೃತ್ತಿ ಇದೆ, ಅದೆಂದರೆ ಕವಿಯ ಪಾಠಾಂತರಗಳ ಬಳಕೆ. ಕವಿಯೇ ತಾನು ಬರೆದ ಕಾವ್ಯವನ್ನು ರಚಿಸುವಾಗ ಪರಿಶೀಲಿಸುವಾಗ, ಮರುಮುದ್ರಣದ ಕಾಲದಲ್ಲಿ ಪಾಠಾಂತರಗಳನ್ನು ಸೂಚಿಸುವ ಪರಿಪಾಟವನ್ನು ೨೦ನೇ ಶತಮಾನದ ಹಿರಿಯ

ಕವಿಗಳಲ್ಲಿ ಡಿವಿಜಿ, ಪುತಿನ, ವಿಸೀ, ಕುವೆಂಪು ಮೊದಲಾದವರಲ್ಲಿ ಕಾಣುತ್ತೇವೆ. ಎಂವಿಸೀ ಅವರು ಅವರ ಗುಂಪಿಗೇ ಸೇರಿದವರು. ಸೌಂದರ್ಯಲಹರಿಯಲ್ಲಿ ಪದ್ಯ ೬೮ಕ್ಕೆ ಹಸ್ತಪ್ರತಿಯಲ್ಲಿ ತಾವೇ ಪಾಠಾಂತರ ಸೂಚಿಸಿದ್ದಾರೆ.

"ಗತಿ ಗಮಕ ಯುಕ್ತ ಸಂಗೀತ ನಿಪುಣೇ, ಶಿವೇ
ವೈವಾಹ ಸಮಯದಲಿ ನಿನ್ನ ಕೊರಳಿಗೆ ಶಿವನು
ತಾನೆ ಕಟ್ಟಿಹ ಮೂರು ಎಳೆಯ ಮಂಗಳಸೂತ್ರವೋ
ವಿವಿಧ ರೀತಿಯೊಳಿಹ.....

ಇಲ್ಲಿ "ತಾನೆ ಕಟ್ಟಿರುವ ಮೂರೆಳೆಯ" ಎಂಬ ಪಾಠವನ್ನು ಎಂವಿಸೀ ಸೂಚಿಸಿದ್ದಾರೆ ಪದ್ಯದ ಅಂಚಿನಲ್ಲಿ

ಹೀಗೆ ಹಲವಾರು ಅಂಶಗಳು ಪದ್ಯರಚನೆಯಲ್ಲಿ ಗಮನಿಸುವಂಥ ಸಂಗತಿಗಳಾಗಿವೆ.

ಆದಿಶಂಕರರು ಹೇಳಿದ ಮಾತು (ಶ್ಲೋಕ ೧೦೦) ಎಂವಿಸೀ ಅವರ ನಿವೇದನೆಯೂ ಆಗಿದೆ.

ಹೇ ಜನನಿ । ಆವನ ಪ್ರದೀಪ ಕಿರಣಗಳಿಂದ
ದಿನಕರಗೆ ನೀರಾಜನವದೆಂತೊ, ಅಮೃತಕರ
ನಿಗೆ ಚಂದ್ರಕಾಂತ ಶಿಲೆಯಿಂದಾಗುವ ನೀರ್ಪಸಿನರ್ಘ್ಯವನು
ಕೊಡುವುದೆಂತೊ
ಜಲನಿಧಿಯ ಜಲದಿಂದ ಬೊಗಸೆ ನೀರನು ಕೊಂಡು
ಅದಕದನೆ ಸಲಿಸುತ್ತ ತೃಪ್ತಿ ಪಡಿಸುವುದೆಂತೊ
ಅಂತಲ್ತೆ ನಿನ್ನ ವಾಗ್ವರದಿಂದ ಮಾಡಿದೀ ವಚನ ರಚನಾ ಸ್ತೋತ್ರವು

(ಈ ಸ್ತೋತ್ರಾನಾವಾದದ ಹಸ್ತಪ್ರತಿಯನ್ನು ದೊರಕಿಸಿದ ಎಂವಿಸೀ ಮಕ್ಕಳಿಗೂ ಮತ್ತು ನಾ ಗೀತಾಚಾರ್ಯರಿಗೆ ಕೃತಜ್ಞನಾಗಿದ್ದೇನೆ)

ಸಂಸ್ಕೃತ ಸ್ತೋತ್ರ ಸಾಹಿತ್ಯವನ್ನು ದೇಶೀಭಾಷೆಯಲ್ಲಿ ಅನುವಾದಿಸುವಾಗ ಬರುವ ಭಾಷೆ – ಪದ ಪುಂಜಗಳ ವಿಚಾರವಾಗಿ ಎಂವಿಸೀ ಹೇಳಿರುವ ಮಾತುಗಳು ಅವರ ಅನುವಾದಕ್ಕೆ ಹೆಚ್ಚಾಗಿ ಅನ್ವಯಿಸುತ್ತೆ. "ಯಾವುದೇ ಮೂಲಕೃತಿಯ ಭಾಷೆಯ, ಶೈಲಿಯ ಅಂದಚೆಂದಗಳನ್ನು ಪದಗಳ ಪೊಂಭಾವಣಿ ಪಲುಕುಗಳನ್ನು ಬೇರೊಂದು ಭಾಷೆಯಲ್ಲಿ, ಅದರ ನುಡಿಗಟ್ಟಿನಲ್ಲಿ ಪಡಿಮೂಡಿಸುವುದು ಬಹಳ ಕಷ್ಟಸಾಧ್ಯ. ಈ ಕಾರ್ಯದಲ್ಲಿ ಸಂಸ್ಕೃತ ಕನ್ನಡಕ್ಕೆ ಒದಗಿಬರುವಹಾಗೆ ಇತರ ಭಾಷೆಗಳು ಅಷ್ಟಾಗಿ ಒದಗಿಬರಲಾರವು, ತಮಿಳು, ತೆಲಗು ಭಾಷೆಗಳ ಪದಪುಂಜಗಳನ್ನು ಕೂಡ ಹಾಗೆಯೇ ಅನಾಮತ್ತಾಗಿ ಎತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ ಮೂಲಕ ಕೆಲವು ಭಾಗಗಳನ್ನು ತರ್ಜುಮೆ ಮಾಡಿಕೊಳ್ಳುವುದಕ್ಕಿಂತ ಅವುಗಳನ್ನು ಸ್ಪಷ್ಟರೂಪದಲ್ಲಿಯೇ ಉಳಿಸಿಕೊಳ್ಳುವುದು ವಾಸಿ" ಎಂವಿಸೀ ಅವರು ತಮ್ಮ ಅನುವಾದದಲ್ಲಿ ಅನೇಕ ಸಂಸ್ಕೃತಪದ ಪುಂಜವನ್ನು ಉಳಿಸಿಕೊಂಡಿದ್ದಾರೆ ಹಲವಾರನ್ನು ಸೃಷ್ಟಿಸಿದ್ದಾರೆ ಆದರೆ ಬಹುತೇಕವಾಗಿ ಕನ್ನಡ ಪದಗಳನ್ನು ಬಳಸಿ ಅನುವಾದಮಾಡಿದ್ದಾರೆ.

ಪರಿವಿಡಿ

ಪ್ರೊ. ಎಂ.ವಿ. ಸೀತಾರಾಮಯ್ಯ ಸಮಗ್ರ ಸಾಹಿತ್ಯ

ಸಂಪುಟ – ೮ (ಭಾಗ – ೨)

ಜೀವನಚರಿತ್ರೆ–ಅನುವಾದ ಸಂಪುಟ

ಗುಂಪು ೧ – ಆತ್ಮಕಥೆ

೧. ನನ್ನ ಸಾಹಿತ್ಯ ಜೀವನ ಸ್ಮೃತಿಗಳು
೨. ವಿದ್ಯಾರ್ಥಿಯಾಗಿ ನಾನು ಕಂಡಂತೆ

ನನ್ನ ಸಾಹಿತ್ಯ ಜೀವನ ಸ್ಮೃತಿಗಳು

ಪ್ರಾರಂಭ ವರ್ಷದ ಪ್ರೇರಣೆಗಳು

ಬರಹಗಾರನ ಬದುಕಿಗೂ ಅವನ ಬರಹಕ್ಕೂ ಯಾವ ಸಂಬಂಧವೂ ಇಲ್ಲ, ಕೃತಿ ವಿಮರ್ಶೆ ಕೃತಿಕಾರನ ಬದುಕನ್ನು ಅಗತ್ಯವಾಗಿ ಗಮನಿಸಬೇಕಾಗಿಲ್ಲ, ಎನ್ನುವ ಒಂದು ಪಂಥವಿದೆ, ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ. ನಾನು ಈ ಪಂಥಕ್ಕೆ ಸೇರಿದವನಲ್ಲ. ಪರಿಸರದ ಪ್ರಭಾವದಿಂದ ವ್ಯತ್ಯಾಸಹೊಂದುತ್ತ ಬೆಳೆಯುತ್ತ ಹೋಗುವ ಅವನ ವ್ಯಕ್ತಿತ್ವ, ಅವನ ನಿತ್ಯದ ಬದುಕು, ಇವು ಅವನ ಸಾಹಿತ್ಯ ಜೀವನದ ಮೇಲೆ ಮುದ್ರೆಯೊತ್ತುತ್ತೆ. ನಿತ್ಯದ ಬದುಕು–ಬರಹದ ಬದುಕು, ಇವುಗಳ ಅಂಟು–ನಂಟು ನನ್ನ ಅನುಭವಕ್ಕೂ ಬಂದಿದೆ. ನನ್ನ ಕೈವಾಡವಿಲ್ಲದೆ ಸಂಭವಿಸಿದ ಬದುಕಿನ ಸಂಗತಿಗಳು ನನ್ನ ಸಾಹಿತ್ಯಜೀವನವನ್ನು ರೂಪಿಸಿವೆ. ಮೇಲುನೋಟಕ್ಕೆ ಕಾರಣವಿಲ್ಲದ ಕಾರ್ಯವಾಗಿ, ಅನಿರೀಕ್ಷಿತ ಸೋಜಿಗದ ಸಂಗತಿಯಾಗಿ ಕಂಡರೂ ನನ್ನ ಸಾಹಿತ್ಯಕಾರ್ಯದ ಬೀಜ ನನ್ನ ಬದುಕಿನಲ್ಲಿ, ಹುಟ್ಟಿನಲ್ಲಿ ಹುದುಗಿದೆ. ನನ್ನ ಸಾಹಿತ್ಯ ನಿರ್ಮಾಣ ಶಕ್ತಿ, ಭಾಷಾ ಸಾಮರ್ಥ್ಯ, ಆಸ್ತಿಕ್ಯ, ಆಧ್ಯಾತ್ಮಿಕ ದೃಷ್ಟಿ, ಪಾಂಡಿತ್ಯ ಮುಂತಾಗಿ – ನನ್ನ ಈವರೆಗಿನ ಬರವಣಿಗೆಯ ರಾಶಿಯಲ್ಲಿ ಯಾವ ಯಾವ ವಿಶೇಷ ಲಕ್ಷಣಗಳು ಕಾಣಿಸಿಕೊಂಡಿವೆಯೋ ಅವೆಲ್ಲ, ವಾಗ್ಗೇಯಕಾರ ಭಕ್ತಕವಿ– ನನ್ನ ಮುತ್ತಜ್ಜ– ತಿಮ್ಮಪ್ಪದಾಸರಿಂದ ನನಗೆ ಆನುವಂಶಿಕವಾಗಿ ದೊರೆತ ಪಿತ್ರಾರ್ಜಿತ ಎಂದು ಈಚೆಗೆ ನನ್ನ ತಿಳಿವಳಿಕೆಗೆ ಬಂದಿದೆ. ಇದರ ಜೊತೆಗೆ, ಬಹುಶಃ ಜನ್ಮಾಂತರಗಳ ಸಂಸ್ಕಾರ–ವಿಶೇಷ, ಹಾಗೂ ಈ ಜನ್ಮದ ನನ್ನ ಪ್ರಯತ್ನಗಳನ್ನು, ಇವು ಸ್ವಯಾರ್ಜಿತ. ಈ ಕಾರ್ಯ–ಕಾರಣ ಸರಣಿಯನ್ನು adinfinitum ಆಗಿ, ಸ್ವಯಾರ್ಜಿತ, ಈ ಕಾರ್ಯ–ಕಾರಣ ಸರಣಿಯನ್ನು ಕಾರಣಾನಾಂ" ಆದ ಆದಿಮೂಲವನ್ನು ತಲುಪುತ್ತದೆ. ಈ ಬರೆಯುವ ಶಕ್ತಿ, ಪ್ರತಿಭೆ, ದೈವದತ್ತ–ವಾಗ್ದೇವಿಯ ವರಪ್ರಸಾದ– ಎಂದರೂ ಇದೇ ಅರ್ಥ– ಎಂದು ನನಗೆ ತೋರುತ್ತದೆ.

ಪ್ರಕಟಣೆ: ಆಕಾಶವಾಣಿಯ ಕೃಪೆ

ನಾನು, 'ಸಾಹಿತಿ ಆದೇನು' ಎಂದು ಕನಸು–ಮನಸಿನಲ್ಲಿಯೂ ಎಣಿಸಿರಲಿಲ್ಲ. ನನ್ನ ಒಬ್ಬ ದೊಡ್ಡಪ್ಪನ ಮಗ ನಮ್ಮ ಮನೆಯಲ್ಲೇ ಓದಿಕೊಂಡಿದ್ದ ಹೈಸ್ಕೂಲು ವಿದ್ಯಾರ್ಥಿ, ಬುದ್ಧಿವಂತ. 'ವಿಕಟ–ವಿನೋದಿನಿ', ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ', ಮುಂತಾದ ಆಗಿನ ಕಾಲದ ಜನಪ್ರಿಯ ಕೃತಿಗಳನ್ನು ನನ್ನ ತಾಯಿಯ ಮುಂದೆ, ಒಮ್ಮೊಮ್ಮೆ ನಾಟಕೀಯವಾಗಿ ಓದಿ ತೋರಿಸುತ್ತಿದ್ದ. ಎಂಟು–ಹತ್ತು ವರ್ಷದ ಹುಡುಗ ನಾನು, ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದೆ. ಅದೇ ಕಾಲದಲ್ಲಿ, ಶ್ರೀವೈಷ್ಣವ ವಿದ್ವಾಂಸರೊಬ್ಬರಿಂದ, ನನ್ನ ತಂದೆ, ವಾಲ್ಮೀಕಿ ರಾಮಾಯಣವನ್ನು ಪಾರಾಯಣ ಮಾಡಿಸಿದರು. ರಾಮ ಪಟ್ಟಾಭಿಷೇಕ ನೆರವೇರಿಸಿದರು. ಅವರು ತರಿಸಿಕೊಂಡಿದ್ದ ದೇವಶಿಖಾಮಣಿ ಅಳಸಿಂಗರಾಚಾರ್ಯರ ಕನ್ನಡ ರಾಮಾಯಣದ ಸಂಪುಟಗಳು ಈಗಲೂ ನನ್ನ ಬಳಿ ಇವೆ. ಆಗ ಅವುಗಳನ್ನು ನಾನು ಓದಿರದಿದ್ದರೂ, ಅವುಗಳಲ್ಲಿನ ಚಿತ್ರಗಳನ್ನು ನೋಡಿ, ರಾಮಾಯಣ ಪಾರಾಯಣದ ಭಾಗಗಳ ಕನ್ನಡ ಅನುವಾದವನ್ನು ಕೇಳಿ, ರಾಮಾಯಣದಿಂದ ಪ್ರಭಾವಿತನಾಗಿದ್ದೇನೆ. ಹನುಮಂತನ ಪಾತ್ರ, ನನ್ನ ಮನಸ್ಸನ್ನು ಸೆಳೆದಿತ್ತು. ನಮ್ಮ ಮನೆಯ ಪಕ್ಕದಲ್ಲೇ ಅರಮನೆಯ "ಆನೆಕರೋಟಿ"– ಎಂದರೆ "ಗಜಶಾಲೆ". ಹನುಮಂತನ ಚಿತ್ರ, ಆನೆಯ ಚಿತ್ರಗಳನ್ನು ಬರೆಯುವುದರಿಂದ ನನ್ನ ಚಿತ್ರ–ಲೇಖನ ಮೊದಲಾಯಿತು. ಪದ್ಯ ಬರೆಯುವ ಗೀಳು ಹಿಡಿದದ್ದು ಆಮೇಲೆ. ನನ್ನ ಸೋದರತ್ತೆ ತಾವು ಹೋಗುತ್ತಿದ್ದ ಹರಿಕಥೆಗಳಿಗೂ, ದೊಂಬಿದಾಸರ ಕುಣಿತ, ಬಯಲಾಟಗಳಿಗೂ ತಪ್ಪದೆ ನನ್ನನ್ನು ಕರೆದೊಯ್ಯುತ್ತಿದ್ದರು. ನನ್ನ ತಂದೆಯೇ ಒಮ್ಮೆ ಬೀದಿಯ ಉದ್ದಕ್ಕೂ ಚಪ್ಪರ ಹಾಕಿಸಿ, ಹರಿಕಥಾ ಸಪ್ತಾಹ ಏರ್ಪಡಿಸಿದ್ದರು. ಹರಿದಾಸರುಗಳ ಕೀರ್ತನೆಗಳು ಕಿವಿಗೆ ಬೀಳದ ದಿನವೇ ಇರಲಿಲ್ಲ. ನಮ್ಮ ಮನೆಯಲ್ಲೇ ನನ್ನ ತಂದೆ, ದೊಡ್ಡಪ್ಪ, ಪ್ರತಿ ಶನಿವಾರ ಭಜನೆ ಮಾಡುತ್ತಿದ್ದರು. 'ಪೂರ್ವಿಕರು ಮಾಡಿದ ಕೀರ್ತನೆಗಳು' ಎಂದು 'ಪೂಜಾವಿಧಾನದ ಕೀರ್ತನೆಗಳನ್ನು ಹಾಡುತ್ತಿದ್ದರು. ಈ ಕೀರ್ತನೆಗಳೇ ನಾನು ಈಚೆಗೆ ಸಂಪಾದನೆ ಮಾಡಿ, ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ "ಅರ್ಚನ". ನಾಯಕ ವೆಂಕಟರಾಯರೆಂಬವರು ನಮ್ಮ ಶನಿವಾರದ ಭಜನೆಗಳಿಗೆ ಬಂದು, ದಾಸರ ಪದಗಳನ್ನು ಬಲು ಚೆನ್ನಾಗಿ ಹಾಡುತ್ತಿದ್ದರು. ಪುಸ್ತಕದ ರಾಘವೇಂದ್ರರಾಯರೆಂಬುವರು, ಮೃದಂಗ ನುಡಿಸುತ್ತಿದ್ದರು. ಇವರ ಬಳಿ ನಾನು ಮೃದಂಗ ವಾದನ ಕಲಿಯಲು ನಮ್ಮ ತಂದೆ ಏರ್ಪಾಡು ಮಾಡಿದರು. ಈ ಹಿನ್ನೆಲೆಯಲ್ಲಿ, ನನ್ನಲ್ಲಿ ಹುದುಗಿದ್ದ ಸಾಹಿತ್ಯ, ಸಂಗೀತ ಕಲೆಗಳ ಸಂಸ್ಕಾರಕ್ಕೆ ಉದ್ದೀಪನ ದೊರಕಿತು.

ನಾನು ಮಾಧ್ಯಮಿಕ ಶಾಲೆಯನ್ನು ಸೇರುವ ವೇಳೆಗೆ ಚಿತ್ರ ಬರೆಯುವ ಗೀಳು, ಪದ್ಯ ಬರೆಯುವುದಕ್ಕಿಂತ ಮೊದಲೇ ಹೇಗೆ ಹಿಡಿದಿತ್ತು ಎನ್ನುವುದನ್ನು ಈಗಾಗಲೇ ಸೂಚಿಸಿದ್ದೇನೆ. ಆ ವಿಚಾರವನ್ನು ಇಲ್ಲಿ ಬೆಳೆಸುವುದಿಲ್ಲ. ಚಿತ್ರಕಲೆಯಲ್ಲಿ ಸಿದ್ಧಿಪ್ರಸಿದ್ಧಿಗಳನ್ನು ಪಡೆಯದಿದ್ದರೂ, ದಿವಂಗತ ಕೆ. ವೆಂಕಟಪ್ಪ, ಗುರುಗಳಾದ ಟಿ.ಎಸ್. ವೆಂಕಣ್ಣಯ್ಯ ಮುಂತಾದವರ ಮೆಚ್ಚುಗೆ ಗಳಿಸುವ ಮಟ್ಟಿಗೆ, ಅದರಲ್ಲಿ ತಕ್ಕಮಟ್ಟಿನ ಪರಿಣತಿ ಪಡೆದಿದ್ದೆ. ನನ್ನ ಕೆಲವು ಸಾಹಿತ್ಯ ಕೃತಿಗಳಿಗೆ ಚಿತ್ರಕಲೆಯ ವಿಚಾರ ವಸ್ತುವಾಗಿದೆ; ಒಟ್ಟಿನಲ್ಲಿ ಅದರ ಪ್ರಭಾವ ನನ್ನ ಸಾಹಿತ್ಯ ರಚನೆಯ ಮೇಲೆ ಗಮನಾರ್ಹವಾಗಿದೆ. ಕ್ರಮ-ಕ್ರಮವಾಗಿ, ನನ್ನ ಸಾಹಿತ್ಯದ ಉಪಾಸನೆ ಚಿತ್ರಕಲೆಯ ಸಾಧನೆಯನ್ನು ಹಿಂದಿಕ್ಕಿತು.

ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ನನ್ನ ದೊಡ್ಡಮ್ಮನ (ತಾಯಿಯ ಅಕ್ಕ) ಒಬ್ಬ ಮಗ ಟೀಚರ್ಸ್ ಟ್ರೇನಿಂಗ್ ಪರೀಕ್ಷೆಗಾಗಿ ನಮ್ಮ ಮನೆಯಲ್ಲಿ ಓದಿಕೊಂಡಿದ್ದ. ಆತ ವೆಂಕಟಾಚಾರ್ಯರ, ಗಳಗನಾಥರ ಕಾದಂಬರಿಗಳನ್ನು ತಂದು ಒಮ್ಮೊಮ್ಮೆ ಗಟ್ಟಿಯಾಗಿಯೇ ಓದುತ್ತಿದ್ದ. ಈ ಓದು, ನನ್ನಲ್ಲಿ ಆಸಕ್ತಿ ಹುಟ್ಟಿಸಿ, ನಾನೂ ಅವುಗಳನ್ನು ಕೈಗೆತ್ತಿಕೊಂಡು ಓದುವಂತೆ ಮಾಡಿತು. ವೆಂಕಟಾಚಾರ್ಯರ 'ಅಡವಿಯ ಹುಡುಗಿ', 'ಆನಂದ ಮಠ', 'ದೇವೀ ಚೌದುರಾಣಿ', 'ದುರ್ಗೇಶ ನಂದಿನಿ', ಇವು ನನಗೆ ತುಂಬ ಮೆಚ್ಚಿಗೆಯಾದವು. ನನ್ನ ಒಬ್ಬ ಸಹಪಾಠಿಯೊಂದಿಗೆ,– ಈತನ ಹೆಸರು ವೆಂಕಟರಾಯ ಎಂದು ನೆನಪು– joint authorshipನಲ್ಲಿ ವೆಂಕಟಾಚಾರ್ಯರ ಶೈಲಿಯನ್ನು ಅನುಕರಿಸಿ, ಒಂದು ಸಾಹಸಮಯ, ಪ್ರೇಮಮಯ, ಅದ್ಭುತ ರಮ್ಯ ಕಾದಂಬರಿಯನ್ನು ರಚಿಸತೊಡಗಿದ್ದೆ! ಈ ಸಾಹಿತ್ಯ ಸಾಹಸ ಮೊದಲ ಅಧ್ಯಾಯಕ್ಕೇ ಮುಕ್ತಾಯವಾಯಿತು. ಕಾದಂಬರಿಯ ಕಥಾವಸ್ತುವಿನ ಕಲ್ಪನೆಯೂ ಇರಲಿಲ್ಲ. ಕಥಾನಾಯಕ, ಕಥಾನಾಯಕಿ, ದರೋಡೆಕಾರರು, ಖಳನಾಯಕ ಮುಂತಾದ ಪಾತ್ರಗಳೇನೋ ಮನಸ್ಸಿನಲ್ಲಿ ಸುಳಿದಾಡಿ ನಿದ್ರಾಭಂಗ ಮಾಡುತ್ತಿದ್ದವು. ಗೊಂಡಾರಣ್ಯ, ಗಾಢಾಂಧಕಾರ, ಕಳ್ಳರಗುರು, ಭವಾನೀ ಠಾಕೂರ, ಸಿಡಿಲು ಮಿಂಚು ಗುಡುಗು ಮಳೆ, ಕಾಡು ಪ್ರಾಣಿಗಳ ಗರ್ಜನೆ, ಮಳೆಯಲ್ಲಿ ಸಿಕ್ಕಿಕೊಂಡ ಅನಾಥ ಬಾಲಿಕೆಯ ಅರಣ್ಯರೋದನ, ಇಂಥ ಮಾತುಗಳ ಪ್ರಯೋಗ ಮಾತ್ರ ನೆನಪಿನಲ್ಲಿದೆ.

ನಾನು ಮೈಸೂರಿನ ಬನುಮಯ್ಯನವರ ಕೊಲಿಜಿಯೇಟ್ ಹೈಸ್ಕೂಲಿನ ವಿದ್ಯಾರ್ಥಿ. ನನ್ನ ಶಾಲಾವ್ಯಾಸಂಗದ ದಿನಗಳಲ್ಲಿ ಕನ್ನಡ ಪಠ್ಯಪುಸ್ತಕಗಳ ಪದ್ಯಗಳನ್ನು ಬಾಯಿಪಾಠ ಮಾಡುವ ರೂಢಿಯಿತ್ತು. ಹೈಸ್ಕೂಲ್ ತರಗತಿಗಳಲ್ಲಿ ನಮ್ಮ ಕನ್ನಡ

ಪಂಡಿತರು ಶ್ರೀ ರಾಮಯ್ಯ ಎಂಬುವರು ಪದ್ಯಗಳನ್ನು ಚೆನ್ನಾಗಿ ಓದುತ್ತಿರಲಿಲ್ಲ. ಬೇರೆ ತರಗತಿಗಳಲ್ಲಿ ಪಾಠ ಮಾಡುತ್ತಿದ್ದ ಶ್ರೀ ಅಳಗಿರೀಶಾಚಾರ್ಯರೆಂಬವರು, ರಾಗಯುಕ್ತವಾಗಿ, ಬಲು ಚೆನ್ನಾಗಿ ಪದ್ಯವಾಚನ ಮಾಡುತ್ತಿದ್ದರು. ಅದೇ ತಾನೇ ಮಹಾರಾಜ ಕಾಲೇಜಿನ ಪಂಡಿತ ಪದವಿಯಿಂದ ವಿಶ್ರಾಂತರಾಗಿದ್ದ ಕಾನಕಾನ ಹಳ್ಳಿ ವರದಾಚಾರ್ಯರು ನಮ್ಮ ಶಾಲೆಗೆ ನೇಮಕಗೊಂಡು ಬಂದಿದ್ದರು– ನಾನು ಜೂನಿಯರ್ ಇಂಟರ್ ಮೀಡಿಯಟ್ ತರಗತಿಯಲ್ಲಿ ಓದುತ್ತಿದ್ದಾಗ; ಇವರ ಓದಾಣಿಕೆಯೂ ವಿಶಿಷ್ಟವಾಗಿ ಮನೋಜ್ಞವಾಗಿತ್ತು. ಕಳಲೆ ಕೃಷ್ಣರಾಯರು ನಮ್ಮ ಪಕ್ಕದ ಮನೆಗೆ ಬಂದು ಭಾರತವಾಚನ ಮಾಡುತ್ತಿದ್ದರು. ಪದ್ಯಗಳ ಬಾಯಿಪಾಠದ ಅಭ್ಯಾಸ, ಸುಶ್ರಾವ್ಯ ಪದ್ಯವಾಚನದ ಕೇಳ್ಮೆ– ಇವುಗಳ ಪರಿಣಾಮವಾಗಿ ಭಾಮಿನಿ, ವಾರ್ಧಕ ಮುಂತಾದ ಮಾತ್ರಾ ಛಂದಸ್ಸುಗಳ ಧಾಟಿಗಳೂ ಮನಸ್ಸಿನಲ್ಲಿ ಊರಿದ್ದವು. ಅರ್ಥಭಾವಗಳ ಕಡೆಗೆ ಗಮನವಿಲ್ಲದಿದ್ದರೂ, ಚೌಪದಿ, ಷಟ್ಪದಿ ಪದ್ಯಗಳ ರಚನೆಯಲ್ಲಿ ಕೈಯಾಡಿಸುತ್ತಿದ್ದೆ. ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದೆ.

ಇದೇ ಕಾಲದಲ್ಲಿ, ಇಂಗ್ಲಿಷ್ ಭಾಷೆಯ ಹಲವು ಕಾದಂಬರಿಗಳನ್ನು ಓದಿ ಮುಗಿಸಿದ್ದೆ. ಕ್ಯಾಪ್ಟನ್ ಮ್ಯಾರಿಯಟ್, ಚಾರಲ್ಸ್ ಕಿಂಗ್‌ಸ್ಲಿ, ಡ್ಯಾನಿಯಲ್ ಡೀಫೋ, ಸರ್ ವಾಲ್ಟರ್ ಸ್ಕಾಟ್, ಥಾಮಸ್ ಹಾರ್ಡಿ, ಚಾರ್ಲ್ಸ್ ಡಿಕನ್ಸ್, ಮುಂತಾದ ಮಹಾ ಕಾದಂಬರಿಕಾರರ ಅನೇಕ ಕಾದಂಬರಿಗಳನ್ನು ಓದಿ ಮುಗಿಸಿದ್ದೆ. ಡಿಕೆನ್ಸ್ ಮತ್ತು ಹಾರ್ಡಿಯವರ ಜೀವನ ದರ್ಶನ ನನ್ನ ಮೇಲೆ ತಕ್ಕ ಮಟ್ಟಿನ ಪ್ರಭಾವ ಬೀರಿವೆ. ೧೬–೧೭ರ ಪ್ರಾಯದ ಓದು ಇದೆಲ್ಲ.

ನನ್ನ ದುರ್ಬಲವಾಗಿದ್ದ ಬರವಣಿಗೆಯ ಆಸಕ್ತಿಯನ್ನು ಬದುಕಿನ ಬಲವನ್ನಾಗಿ ಮಾರ್ಪಡಿಸಿದ ಒಂದೆರಡು ಸಂದರ್ಭಗಳು ಗಮನಾರ್ಹ. ನಾನು ಸೀನಿಯರ್ ಇಂಟರ್ ಮೀಡಿಯಟ್ ತರಗತಿಯಲ್ಲಿದ್ದಾಗ, ತೀ.ನಂ.ಶ್ರೀಕಂಠಯ್ಯನವರು ಕನ್ನಡ ಅಧ್ಯಾಪಕರಾಗಿ ನೇಮಕಗೊಂಡು ನನ್ನ ಗುರುಗಳಾದರು. ಅದಕ್ಕೂ ಮೊದಲೇ ನನ್ನ ಅವರ ಪರಸ್ಪರ ಪರಿಚಯ ಆಗಿ, ಸ್ನೇಹದ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದೆವು. ಅವರ ಪರಿಚಯ ಲಾಭವಾದದ್ದು, ನಮ್ಮ ಮನೆಯಲ್ಲಿ ವಿದ್ಯಾವ್ಯಾಸಂಗಕ್ಕೆಂದು ಬಂದಿದ್ದ ನನ್ನ ಚಿಕ್ಕಮ್ಮನ (ತಾಯಿಯ ತಂಗಿ) ಮಗ ಬಿ.ನಂಜುಂಡಯ್ಯನ ಮೂಲಕ. ನಂಜುಂಡಯ್ಯನೂ ತೀ.ನಂ.ಶ್ರೀಯವರೂ ಸಹಪಾಠಿಗಳು. 'ಗಳಸ್ಯ–ಕಂಠಸ್ಯ' ಎನ್ನುವಂಥ ಸ್ನೇಹ ಅವರದ್ದು. ಸ್ನೇಹಿತನನ್ನು ನೋಡುವುದಕ್ಕೆಂದು ತೀ.ನಂ.ಶ್ರೀ. ನಮ್ಮ ಮನೆಗೆ ಬರುತ್ತಿದ್ದರು. ನನ್ನ ಚಿತ್ರಕಲೆಯ ಮಾದರಿಗಳು

ತೀ.ನಂ.ಶ್ರೀಯವರ ಗಮನ ಸೆಳೆದು, ಮೆಚ್ಚುಗೆಗೆ ಪಾತ್ರವಾದವು. "ಕುರುಡ-ಭಿಕ್ಷುಕ", "ಬೋಧಿ ದರ್ಶನ", ಎಂಬ ನನ್ನ ಎರಡು ಚಿತ್ರಗಳ ಪ್ರತಿಕೃತಿಗಳನ್ನು ಪರಿಚಯ ಲೇಖನಗಳೊಂದಿಗೆ ಪ್ರಬುದ್ಧ ಕರ್ಣಾಟಕದಲ್ಲಿ ಕೆಲವು ವರ್ಷಗಳ ತರುವಾಯ ಪ್ರಕಟಿಸಿದವರು- ಅವರು. ನನ್ನ ಪದ್ಯ ರಚನೆಯ ಅಸಕ್ತಿಯೂ ಅವರ ಗಮನ ಸೆಳೆಯಿತು. ನಾನು ಎಸ್.ಎಸ್.ಎಲ್.ಸಿ. ತರಗತಿಯಲ್ಲಿದ್ದಾಗಲೇ-೧೯೨೬ರಲ್ಲಿ ಅವರೊಮ್ಮೆ ನಮ್ಮ ಮನೆಗೆ ಎಂದಿನಂತೆ ಬಂದಿದ್ದಾಗ, ಮಾರನೆಯ ದಿನ ನನ್ನ ಹುಟ್ಟುಹಬ್ಬವೆಂಬ ಸಂಗತಿ ಅವರಿಗೆ ತಿಳಿಯಿತು. ನನ್ನನ್ನು ತಮ್ಮ ಮನೆಗೆ ಬರಮಾಡಿಕೊಂಡು, ಅದೇ ತಾನೇ ಪ್ರಕಟವಾಗಿದ್ದ 'ಶ್ರೀ'ಯವರ 'ಇಂಗ್ಲಿಷ್ ಗೀತೆ'ಗಳ ಒಂದು ಪ್ರತಿಯನ್ನು ಉಡುಗೊರೆಯಾಗಿ ಕೊಟ್ಟರು. ಅದರಲ್ಲಿನ ಪದ್ಯಗಳನ್ನು ಓದಿ, ಅರ್ಥಮಾಡಿಕೊಂಡು, ಮೆಚ್ಚಿಕೊಂಡ ಮೇಲೆ- ಈ ಪುಸ್ತಕವನ್ನೇ ಏಕೆ ಉಡುಗೊರೆಯಾಗಿ ಕೊಟ್ಟರು ಎನ್ನುವುದು ಮನವರಿಕೆಯಾಯಿತು. ಪದ್ಯರಚನೆಯಲ್ಲಿ, ಭಾವಾಭಿವ್ಯಕ್ತಿಯಲ್ಲಿ, ಹೊಸಮಾರ್ಗದ ದಿಕ್ಕೂ ಕಾಣಿಸಿತು ನನಗೆ. ಹೀಗೆ, "ಶ್ರೀ" ದ್ವಯರು ಕಾವ್ಯರಚನೆಯ ದೀಕ್ಷಾ ಗುರುಗಳಾದರು. ನನ್ನ ಬಳಿಯಿದ್ದ ಇಂಗ್ಲಿಷ್ ಕವನ ಸಂಕಲನಗಳಲ್ಲಿನ ಹಲ ಕೆಲವು ಪದ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದೆ; ಸ್ವತಂತ್ರವಾಗಿಯೂ ಕೆಲವು ಪದ್ಯಗಳನ್ನು ಬರೆದು ತೀ.ನಂ.ಶ್ರೀಯವರಿಗೆ ತೋರಿಸಿದೆ. ಮುಂದಿನ ಕೆಲವು ವರ್ಷಗಳಲ್ಲಿ, ೧೯೩೪ರಲ್ಲಿ, ನಾನು ಬೆಂಗಳೂರಿಗೆ ಬರುವವರೆಗೆ, ನಾನು ಬರೆದದ್ದನ್ನೆಲ್ಲ ಅವರಿಗೆ ತೋರಿಸುತ್ತಿದ್ದೆ. ಅವರ ರಚನಾತ್ಮಕ ವಿಮರ್ಶೆಯಿಂದ ಪ್ರಯೋಜನ ಪಡೆಯುತ್ತಿದ್ದೆ. ಬರಹಗಾರನಾಗಿ ನನ್ನ ಜನ್ಮ ವರ್ಷ ೧೯೨೬ (ನಿಜವಾದ ಜನ್ಮವರ್ಷ ೧೯೧೦).

ನನ್ನ ಬರೆವಣಿಗೆ, ತೀ.ನಂ.ಶ್ರೀಯವರ ತಿದ್ದಾಣಿಕೆ- ಇದಕ್ಕೊಂದು ಚಿಕ್ಕ ಉದಾಹರಣೆ ಕೊಡುತ್ತೇನೆ: ಪ್ರಸಿದ್ಧ ಜರ್ಮನ್ ಕವಿ ಗಯಟೆಯ ಕೆಲವು ಕಿರು ಕವನಗಳನ್ನು ಅನುವಾದ ಮಾಡಿದ್ದೆ. ಎರಡೇ ಸಾಲಿನ ಒಂದು ಮುಕ್ತಕದ ಅನುವಾದ ಹೀಗೆ ಇತ್ತು:

ಮಾಲೆಯನು ಕಟ್ಟುವುದು ಬಲು ಸುಲಭವಹುದು:
ಬಲು ಕಷ್ಟ ಸರಿಯಾದ ಮುಡಿವವರನರಸುವುದು.

ಎರಡನೆಯ ಸಾಲನ್ನು ತೀ.ನಂ.ಶ್ರೀ. "ಬಲುಕಷ್ಟ ಮಡಿವುದಕೆ ತಕ್ಕವರ ನರಸುವುದು" ಎಂದು ತಿದ್ದಿದ ಮೇಲೆ, ರಚನೆ ಹೇಗೆ ಉತ್ತಮಗೊಂಡಿತು ಎನ್ನುವದನ್ನು ಬಿಡಿಸಿಹೇಳಬೇಕಾಗಿಲ್ಲ. ಮಹಾರಾಜ ಕಾಲೇಜಿನ ಕರ್ಣಾಟಕ

ಸಂಘ ಪ್ರಕಟಿಸಿದ "ತಳಿರು" ಕವನ ಸಂಕಲನದಲ್ಲಿ (೧೯೩೦ರಲ್ಲಿ) ನನ್ನ ಎರಡು ಪ್ರಾರಂಭದ ಕವನಗಳು ಸೇರುವುದಕ್ಕೂ ತೀ.ನಂ.ಶ್ರೀ. ಮುಖ್ಯ ಕಾರಣರು. ವೆಂಕಣ್ಣಯ್ಯನವರ ಉತ್ತೇಜನವೂ ಕಡಮೆಯದಲ್ಲ. ಇಂಥ ಮಾರ್ಗದರ್ಶನದಿಂದ ಕವಿಗೆ, ಸ್ವವಿಮರ್ಶೆಯ ಶಕ್ತಿ ಲಭಿಸುತ್ತದೆ. ನಾನು, ಅನುಭವದಿಂದ ಹೇಳುವ ಮಾತು ಇದು. ಬಿ.ಎಂ.ಶ್ರೀ.ಯವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ 'ರಜತ ಮಹೋತ್ಸವ ಸ್ವರ್ಣ ಪದಕ ಕವಿತಾ ಸ್ಪರ್ಧೆ'ಯನ್ನು ಏರ್ಪಡಿಸಿದ್ದರು. ಮೊದಲ ಸಲ ಕೆ.ವಿ.ಪುಟ್ಟಪ್ಪನವರು ಈ ಪದಕವನ್ನು ಪಡೆದರು. ರಾಜರತ್ನಂ, ಎಲ್.ಗುಂಡಪ್ಪ ಪಡೆದುಕೊಂಡಿದ್ದರು. ನಾನು ಜೂನಿಯರ್ ಎಂ.ಎ. ತರಗತಿಗೆ ಬಂದಾಗ, ನನಗೂ ಸ್ಪರ್ಧಿಸುವ ಆಸೆಯಾಯಿತು. ಭಗ್ನ ಪ್ರಣಯಿಯಾದ ಚಿತ್ರಗಾರನೊಬ್ಬನ ವಿರಹ ಉನ್ಮಾದಕ್ಕೆ ತಿರುಗಿದ ಸ್ವಕಪೋಲ ಕಲ್ಪಿತ ವಸ್ತುವನ್ನು ಆಧರಿಸಿ, ಸರಳ ರಗಳೆಯಲ್ಲಿ ನೀಳ್ಗವನವೊಂದನ್ನು ರಚಿಸಿದೆ. ಸುಮಾರು ೧೫೦ ಪಂಕ್ತಿಗಳು. ತೀ.ನಂ.ಶ್ರೀಯವರಿಗೆ ತೋರಿಸಿದೆ. ಓದಿ, ಏನೂ ಹೇಳದೆ ಹಿಂದಿರುಗಿಸಿದರು. ಅವರ ಮೌನವೇ ವಿಮರ್ಶೆಯಾಗಿತ್ತು. ನಾನೂ ನಿರಾಶೆಗೊಂಡರೂ, ಪ್ರಯತ್ನನ್ನು ಬಿಡಲಿಲ್ಲ. ನನ್ನ ರಚನೆಯನ್ನು ಮತ್ತೆ ಮತ್ತೆ ಓದಿದೆ. ಸಪ್ಪೆಯಾಗಿ, ಗದ್ಯರಚನೆಯಂತೆ ಕಂಡಿತು. ರಚನೆ ೩೦೦ ಪಂಕ್ತಿಗಳಿಗೆ ಕಡಿಮೆಯಿಲ್ಲದೆ ಇರತಕ್ಕದ್ದು ಎಂಬ ನಿಯಮವನ್ನೂ ತೀ.ನಂ.ಶ್ರೀ. ನನ್ನ ಗಮನಕ್ಕೆ ತಂದಿದ್ದರು. ಕೆಲವು ದಿನ ಬಿಟ್ಟು, ಪದ್ಯವನ್ನು ಮತ್ತೆ ಓದಿದೆ. ಏನೋ ಹೊಳೆಯಿತು. ಪದ್ಯದ ಪ್ರತಿಸಾಲನ್ನು ಎರಡಾಗಿ ಒಡೆದು, ಕೆಲವು ಮಾತುಗಳನ್ನು ತೆಗೆದು ಮತ್ತೆ ಕೆಲವನ್ನು ಹೊಸದಾಗಿ ಸೇರಿಸಿ, ಅಂತ್ಯಪ್ರಾಸ ಯೋಜನೆ ಮಾಡಿ, ಪ್ರತಿಮಾಡಿ, ಮತ್ತೆ ತೀ.ನಂ.ಶ್ರೀ.ಯವರಿಗೆ ತೋರಿಸಿದೆ. "ಚೆನ್ನಾಗಿದೆ ಈ ಹೊಸಪದ್ಯ, ಸ್ಪರ್ಧೆಗೆ ಕಳಿಸು" ಎಂದು ಉತ್ತೇಜನ ಕೊಟ್ಟರು. "ಹೊಸಪದ್ಯವಲ್ಲ, ಅದೇಯೆ" ಎಂದು ತಿಳಿಸಿದೆ. ಅವರು ಆಶ್ಚರ್ಯಪಟ್ಟರು. ಪದ್ಯವನ್ನು ಮಾರ್ಪಡಿಸಿದ ವಿಧಾನವನ್ನು ತಿಳಿಸಿದಾಗ ನಕ್ಕುಬಿಟ್ಟರು ಆ ಚಿತ್ರಗಳು' ಎಂಬ ಪದ್ಯವನ್ನು ಸ್ಪರ್ಧೆಗೆ ಕಳಿಸಿದೆ. ಸ್ವರ್ಣಪದಕವೂ ಲಭಿಸಿತು. ಈ ಪದ್ಯ "ಆ ಚಿತ್ರಗಳು ಮತ್ತು ಇತರ ಕಥನ ಕವನಗಳು" ಎಂಬ ಸಂಕಲನದಲ್ಲಿ ಸೇರಿದೆ.

ಹೀಗೆ, ತೀ.ನಂ.ಶ್ರೀ. ಅವರ ಉತ್ತೇಜನದಿಂದ ೧೯೨೮ರಿಂದ ಪ್ರಾರಂಭವಾದ ಕಾವ್ಯರಚನೆಯ ಪ್ರಯತ್ನಗಳ ಜೊತೆ-ಜೊತೆಯಲ್ಲೇ, ಲಲಿತಪ್ರಬಂಧ, ಸಣ್ಣಕಥೆ, ನಾಟಕ, ಈ ಸಾಹಿತ್ಯ ಪ್ರಾಕಾರಗಳಲ್ಲಿಯೂ ನನ್ನ ಪ್ರಾರಂಭದ ಕೃತಿರಚನೆ ಸಾಗಿತು. ಸಣ್ಣಕಥೆಗಳ ರಚನೆಗೆ ಪ್ರೇರಣೆ ನೀಡಿದ್ದು, ಎಸ್.ಎಸ್.ಎಲ್.ಸಿ. ತರಗತಿಯಲ್ಲಿ

ಪಠ್ಯಪುಸ್ತಕವಾಗಿ ನಾನು ಓದಿದ 'ಶ್ರೀನಿವಾಸ'ರ ಮೊದಲ ಕಥಾ ಸಂಕಲನ "ಕೆಲವು ಸಣ್ಣ ಕಥೆಗಳು". ವಾಸ್ತವವಾಗಿ ನಮ್ಮ ಕನ್ನಡ ಪಂಡಿತರು ರಾಮಯ್ಯನವರು, "ಪಾಠ ಮಾಡುವುದು ಇದರಲ್ಲಿ ಏನಿದೆ? ನೀವೇ ಓದಿಕೊಳ್ಳಿ" ಎಂದು ಈ ಪುಸ್ತಕವನ್ನು ಪಾಠ ಮಾಡಲೇ ಇಲ್ಲ! ಮುಂದೆ, ಆಂಗ್ಲ ಕಥೆಗಾರ ಕಥಾತಂತ್ರಗಳಿಂದ ಪ್ರಭಾವಿತನಾದೆ. ಅಮೆರಿಕದ ಕಥೆಗಾರ ನಥೆನಿಯಲ್ ಹಾತಾರ್ನನ Rappaccinic's Daughter, The Great Stone Face, Prophetic Pictures ಎಂಬೀ ಮೂರು ಕಥೆಗಳನ್ನು ಪ್ರಾರಂಭದಲ್ಲಿ ರೂಪಾಂತರ ಮಾಡಿದೆ. ಇವೂ, ಅನುವಾದಗೊಂಡ ಇನ್ನು ನಾಲ್ಕೂ ಕಥೆಗಳೂ ಕೂಡಿ ೧೯೩೬ರಲ್ಲಿ "ಶಿಲಾಮುಖ" ಎಂಬ ಹೆಸರಿನ ಸಂಕಲನದಲ್ಲಿ ಪ್ರಕಟವಾದವು. ಶಿಕ್ಷಕ-ಶಿಕ್ಷಣ ಶಾಲಾ ತರಗತಿಗಳಿಗೆ ಪಠ್ಯವೂ ಆಯಿತು. ಈ ಅನುವಾದಗಳಿಂದಾಗಿ, ಕತೆ ಬರೆಯುವ ಕಲೆಯಲ್ಲಿ ಕೈ ಕುದುರಿತು. ಜೊತೆ-ಜೊತೆಗೇ ಸ್ವತಂತ್ರ ಕತೆಗಳನ್ನೂ ಬರೆಯತೊಡಗಿದೆ. ಮೊತ್ತ ಮೊದಲಕತೆ 'ದೋಸೆಯ ಆಸೆಯೋ?' (೧೯೨೬) ಕಾಲೇಜಿನ ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದ ಹಾಗೆ ನೆನಪು. ಪತ್ರಿಕೆಯ ಸಂಚಿಕೆಯಾಗಲೀ, ಕತೆಯ ಹಸ್ತಪ್ರತಿಯಾಗಲೀ ಈಗ ಸಿಕ್ಕುವಂತಿಲ್ಲ. ಸ್ವತಂತ್ರ ಕತೆಗಳ ಸಂಕಲನ 'ಮಾರ್ಗದರ್ಶಕ' ೧೯೪೦ರಲ್ಲಿ ಪ್ರಕಟವಾಯಿತು. ನಾನು ಬಿ.ಎ. ತರಗತಿಯಲ್ಲಿದ್ದಾಗಲೇ ಬರೆದ "ಹೆಸರುಗಳು" ಮತ್ತು "ಮುಗಿಲುಗಳು" ಎಂಬೆರಡು ಲಲಿತ ಪ್ರಬಂಧಗಳು ಕಾಲೇಜು ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದವು. ಅಂದು ಬರೆದ 'ಮುಗಿಲುಗಳು' ಇಂದಿಗೂ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿ, ಅನೇಕ ಸಂಕಲನಗಳಲ್ಲಿ ಸೇರ್ಪಡೆಯಾಗಿದೆ. ವಜ್ರಮಹೋತ್ಸವದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪ್ರಬಂಧಗಳ ಇಂಗ್ಲಿಷ್ ಅನುವಾದದ ಸಂಕಲನದಲ್ಲಿ ಈಚೆಗೆ ಸೇರ್ಪಡೆಯಾಗಿದೆ. "ಕೃತಿಯ ಗುಣಮುಖ್ಯವೇ ಹೊರತು, ಅದನ್ನು ಕೃತಿಕಾರ ಯಾವ ವಯಸ್ಸಿನಲ್ಲಿ ಬರೆದ ಎನ್ನುವುದು ಅಷ್ಟು ಮುಖ್ಯವಲ್ಲ"- ಎನ್ನುವುದು ಈ ಪ್ರಬಂಧದಿಂದ ಗೊತ್ತಾಗುತ್ತದೆ. "ಗುಣೇಷು ಪೂಜಾಸ್ಥಾನಂ, ನಚ ವಯಃ, ನಚ ಲಿಂಗಂ" ಎಂಬ ಮಾತು ಸಾಹಿತ್ಯ ಸೃಷ್ಟಿಗೂ ಅನ್ವಯಿಸುತ್ತದೆ. ವಿದ್ಯಾರ್ಥಿಯಾಗಿದ್ದಾಗಲೇ ಬರೆದ ನಾಟಕ "ಹೂವಿನ ಆಸೆ"- ಬಾಲ ವಿಧವೆಯ ಪುನರ್ವಿವಾಹದ ವಿಷಯವನ್ನು ಕುರಿತ ನಾಟಕ- ೧೯೩೬ರಲ್ಲಿ ಪ್ರಕಟವಾಯಿತು. ಪ್ರಕಟವಾದ ಮೇಲೆ, ಹಳೆಯ ಮೈಸೂರು ರಾಜ್ಯದಲ್ಲಿ ನನಗೆ ತಿಳಿದ ಹಾಗೆ ಒಟ್ಟು ೨೦-೩೦ ಸಲ ಪ್ರದರ್ಶಿತವಾಗಿದೆ. ಶ್ರೀರಂಗರು ನನ್ನ ಒಪ್ಪಿಗೆ ಪಡೆದು, ಮೈಸೂರು ಕಡೆಯ ಭಾಷೆಯನ್ನು, ಧಾರವಾಡದ ಆಡುಮಾತಿಗೆ ತಿರುಗಿಸಿ,

"ಹೂವಿನ ಆಸೆ"ಯನ್ನು ಪ್ರದರ್ಶಿಸಿದರು. ವಿಸ್ಮೃತಿ ಲೋಕದ ವಸ್ತುವಾದ ಈ ಕೃತಿ ಅಂದು ಒಂದು ಬಹು ಯಶಸ್ವೀ ನಾಟಕ. ಆಂಗ್ಲ ನಾಟಕಗಳ ಓದು, ಹಾಗೂ ಶಾಲೆಕಾಲೇಜಿನ ನಾಟಕ ಪ್ರದರ್ಶನಗಳಲ್ಲಿ ಅಭಿನಯಿಸಿದ ಅನುಭವ– ಇವೇ ನಾಟಕ ರಚನೆಗೆ ಪ್ರೇರಣೆ. ಎಂ.ಎ. ತರಗತಿಯಲ್ಲಿದ್ದಾಗ, ರಾಜರತ್ನಂ ಅವರ ಶಿಶುಗೀತೆಗಳಿಗೆ ಚಿತ್ರ ಬರೆದುಕೊಟ್ಟ ಮೇಲೆ, ಮಕ್ಕಳ ಪದ್ಯಗಳ ರಚನೆಗೆ ಪ್ರೇರಣೆ ಉಂಟಾಯಿತು. ಮದರಾಸು ವಿಶ್ವವಿದ್ಯಾನಿಲಯ ಹೊರತಂದಿದ್ದ 'ಕವಿರಾಜ ಮಾರ್ಗ'ವನ್ನು ಪತ್ರಿಕೆಯೊಂದಕ್ಕೆ ವಿಮರ್ಶೆ ಮಾಡಲು ಗುರು ವೆಂಕಣ್ಣಯ್ಯ ಪ್ರೋತ್ಸಾಹ ಕೊಟ್ಟರು. ಈಚೆಗೆ ಈ ಆದಿಗ್ರಂಥವನ್ನು ಸಂಪಾದನೆ ಮಾಡುವುದಕ್ಕೆ ಪ್ರೇರಣೆ, ಅಂದು ನಾನು ಅದರಲ್ಲಿ ಬೆಳೆಸಿಕೊಂಡಿದ್ದ ಆಸಕ್ತಿ; ಗುರುಗಳ ಬೋಧನೆಯ ಫಲ. ಒಟ್ಟಿನ ಮೇಲೆ, ವಿದ್ಯಾರ್ಥಿ ದೆಶೆಯಲ್ಲಿ ನಾನು ಬರೆದ ಕೃತಿಗಳಲ್ಲಿ ಬಾಲಿಶ ಎನ್ನಬಹುದಾದ ಕೆಲವು ಪದ್ಯಗಳನ್ನೂ, ಒಂದೆರಡು ಕಥೆಗಳನ್ನೂ, ಬಿಟ್ಟರೆ, ಉಳಿದವು ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೃತಿಕಾರನಿಗೆ ಅಗ್ರಗಣ್ಯಸ್ಥಾನವನ್ನಲ್ಲದಿದ್ದರೂ, ಒಂದು ಗಣ್ಯ ಸ್ಥಾನವನ್ನು ದೊರಕಿಸಿಕೊಟ್ಟವು. ರಾಜರತ್ನಂ ಅವರು ತಮ್ಮ ಶಿಶುಗೀತೆಗಳಿಗೆ, ನನ್ನಿಂದ ಚಿತ್ರಗಳನ್ನು ಬರೆಯಿಸಿ ಕೊಳ್ಳದಿದ್ದರೆ, ನಾನು ಬಹುಶಃ 'ಹೂವಾಡಗಿತ್ತಿ'ಯ 'ರಾಘವ'ನಾಗುತ್ತಿರಲಿಲ್ಲ! "ಕವಿರಾಜಮಾರ್ಗ"ವನ್ನು ಪಾಠ ಹೇಳಿದ ಪ್ರೊ. ವೆಂಕಣ್ಣಯ್ಯನವರು, 'ಪ್ರಜಾಮತ'ದ ಕಡೆಯಿಂದ ನನಗೆ ೧೯೩೧ರಲ್ಲಿ ವಿಮರ್ಶೆಗೆ ಬಂದಿದ್ದ 'ಕವಿರಾಜ ಮಾರ್ಗ'ವನ್ನು ವಿಮರ್ಶೆ ಮಾಡಲು ಮಾರ್ಗದರ್ಶನ ಮಾಡಿರದಿದ್ದರೆ ಬಹುಶಃ "ಕವಿರಾಜ ಮಾರ್ಗ"ವನ್ನು ಪರಿಷ್ಕರಿಸಿ ಸಂಪಾದನೆ ಮಾಡಲು ನನಗೆ ಪ್ರೇರಣೆಯುಂಟಾಗುತ್ತಿರಲಿಲ್ಲ. ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಕೊಟ್ಟ ಶಕ್ತಿಗಳಲ್ಲಿ ಗ್ರಂಥಗಳ ಪ್ರಭಾವದ ಜೊತೆಗೆ ಗುರುವರ್ಗದ ಉತ್ತೇಜನವೂ ಸೇರಿದೆ. ಈ ಗುರು–ಶಕ್ತಿಗಳಿಗೆ ನಮಸ್ಕಾರ.

ಹರೆಯದ ದೃಷ್ಟಿ–ಧೋರಣೆ

ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ನಾನು ಬರೆಯುವಂತೆ ಪ್ರೇರಣೆ ನೀಡಿದ ಶಕ್ತಿಗಳ ವಿಚಾರ ಹೇಳಿದೆನಷ್ಟೆ. ಒಳ್ಳೆಯ ಪುಸ್ತಕ ಓದಿ, ಎಲ್ಲರೂ ಪ್ರಭಾವಿತರಾಗ ಬಹುದು. ಆದರೆ ಎಲ್ಲರೂ ಬರಹಗಾರರಾಗುವುದಿಲ್ಲ. "ಪ್ರತಿಭಾನಂ, ಕಾವ್ಯ ವಿದ್ಯಾಪ್ರಚಯ ಪರಿಚಯಂ, ವೃದ್ಧಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ" ಇವು, "ನಿಯತಂ ಕವಿತೆಗೆ ಕಾರಣಂ". ಪ್ರತಿಭೆ ವ್ಯಕ್ತಪಡುವುದು ಅಸಾಧಾರಣವಾದ

ಬರಹದ ಶಕ್ತಿಯಲ್ಲಿ. ಪ್ರತಿಭೆ ಎನ್ನುವುದು ಸಹಜವಾದ ಸೃಷ್ಟಿಕಾರ್ಯ ಸಾಮರ್ಥ್ಯ. ಕೆಲವರಲ್ಲಿ ಇದು ತೀವ್ರ; ಕೆಲವರಲ್ಲಿ ಇದು ಮಂದ. ಅಂತೂ, ಈಗ ಹೇಳಿದ ಎಲ್ಲ ಕಾರಣಗಳೂ ತನ್ನ ಸಾಹಿತ್ಯ ಸೃಷ್ಟಿಗೆ ನೆರವಾಗಿವೆ. 'ನವೋದಯ' ಎನ್ನುವುದು, ಈಚೆಗೆ ಬಳಕೆಗೆ ಬಂದ ಮಾತು; ಆಗ 'ಆಧುನಿಕ ಸಾಹಿತ್ಯ' ಎನ್ನುವ ಮಾತು ಬಳಕೆಯಲ್ಲಿತ್ತು. ಸಾಹಿತ್ಯ ವಿಮರ್ಶೆಯಲ್ಲಿ ನಿರ್ದೇಶನ ಸೌಕರ್ಯಕ್ಕಾಗಿ ಬಳಸುವ ಮಾತುಗಳು ಇವು. ಈ ನವೋದಯ ಯುಗದಲ್ಲಿ ಬೆಳಕಿಗೆ ಬಂದ ತರುಣರ ಪೀಳಿಗೆಗೆ ಸೇರಿವನು ನಾನು. ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘ ಪ್ರಕಟಿಸಿದ 'ಕಿರಿಯ ಕಾಣಿಕೆ' ಮತ್ತು 'ತಳಿರು' ಕವನ ಸಂಕಲನಗಳಲ್ಲಿ ಕಾಣಿಸಿಕೊಂಡ ಕುವೆಂಪು, ಪು.ತಿ.ನರಸಿಂಹಾಚಾರ್, ತೀ.ನಂ.ಶ್ರೀ., ಎಲ್.ಗುಂಡಪ್ಪ, ರಾಜರತ್ನಂ, ದಿನಕರ ದೇಸಾಯಿ– ಈ ಕವಿಗಳ ಬಳಗದಲ್ಲಿ ನನಗೂ ಎಡೆ ಕೊಟ್ಟಿತು ಸಂಘ. ಈ ಸಂಘಕ್ಕೆ ನಾನು ಕೃತಜ್ಞ, ಆ ಬಳಗಕ್ಕೆ ಸೇರಿದವನು ಎಂಬ ಕ್ಷಮ್ಯವಾದ ಹೆಮ್ಮೆ ನನಗೆ. ಆ ಕಾಲದ ಕವಿಗಳಲ್ಲಿ ಕಂಡುಬಂದ ಯುಗ ಲಕ್ಷಣಗಳೆಲ್ಲ– ಹೆಚ್ಚಾಗಿಯೋ, ಕಡಮೆಯಾಗಿಯೋ– ನನ್ನ ಕೃತಿಗಳಲ್ಲೂ ಕಂಡುಬಂದಿವೆ. ಇವುಗಳಲ್ಲಿ ಪ್ರಕೃತಿ ಪ್ರೇಮ, ಪ್ರಕೃತಿಯ ಆರಾಧನೆ, ಒಂದು ಮುಖ್ಯ ಲಕ್ಷಣ. ಪ್ರಾಚೀನ ಸಂಸ್ಕೃತ–ಕನ್ನಡ ಕಾವ್ಯಗಳಲ್ಲಿ ನಮ್ಮ ಕವಿಗಳು ಪ್ರಕೃತಿಯನ್ನು ಕಂಡು ವರ್ಣಿಸುತ್ತಿದ್ದ ವಸ್ತುನಿಷ್ಠ ರೀತಿಗೂ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳು ವರ್ಣಿಸುತ್ತಿದ್ದ ವ್ಯಕ್ತಿನಿಷ್ಠ–ಸ್ವಾನುಭವ ಪ್ರಧಾನವಾದ ರೀತಿಗೂ ಇದ್ದ ವ್ಯತ್ಯಾಸ, ಭಾಷೆ ಮತ್ತು ನಿರೂಪಣೆಗಳಲ್ಲಿ ಇದ್ದ ವ್ಯತ್ಯಾಸ. "ಶ್ರೀ" ಇಂಗ್ಲಿಷ್ ಗೀತಗಳನ್ನು ಓದಿದ ಮೇಲೆ ಮನವರಿಕೆಯಾಯಿತು. ಪ್ರಕೃತಿ ಮಾತ್ರವಲ್ಲದೆ, ಗಂಡು–ಹೆಣ್ಣಿನ ಪ್ರಣಯ, ಸಾಮಾನ್ಯ ಜನಜೀವನದಿಂದ ಕಾವ್ಯವಸ್ತುವನ್ನು ಆಯ್ದುಕೊಳ್ಳುವುದು, ಈ ವಿಷಯದಲ್ಲಿಯೂ ಆಂಗ್ಲ ಕವಿಗಳೇ ನನ್ನ ಆದರ್ಶ. ನನಗೆ ಇಷ್ಟವಾದ, ಕೆಲವು ಇಂಗ್ಲಿಷ್ ಕವನಗಳನ್ನು ಅಂದು–ಇಂದೂ ಅನುವಾದ ಮಾಡಿದ್ದೇನೆ. ಇಂಗ್ಲಿಷ್ ಕವಿಗಳಲ್ಲಿ ವರ್ಡ್ಸ್‌ವರ್ತ್ ನನಗೆ ಹೆಚ್ಚು ಪ್ರಿಯ. ನಾನು, ಮಲೆನಾಡಿನ ಮಗುವಲ್ಲ; ಮೈಸೂರಿನಲ್ಲಿ ಹುಟ್ಟಿ ಬೆಳೆದವನು. ಅಲ್ಲಿನ ಸುಂದರ ಕೃತಕೋದ್ಯಾನಗಳಲ್ಲಿ ವಿಹರಿಸಿದವನಾದರೂ, ನನ್ನ ಕಣ್ಣಿಗೆ ನಿತ್ಯವೂ ಬೀಳುತ್ತಿದ್ದ, ನಿಸರ್ಗದ ನೋಟವೆಂದರೆ– ವಿಶಾಲವಾದ ನೀಲಾಕಾಶ; ನಮ್ಮ ಮನೆಯ ಬಿಸಿಲುಮುಚ್ಚಿನ ಮೇಲೆ ನಿಂತು ನೋಡಿದರೆ ಕಾಣುತ್ತಿದ್ದ, ಚಾಮುಂಡಿಬೆಟ್ಟದ ಮೇಲ್ಭಾಗ; ಅದರ ಮೇಲೆ ಹಾದುಹೋಗುತ್ತಿದ್ದ ಮೋಡದ ದಿಬ್ಬಣ; ಕಾಲೇಜು ಮೈದಾನದ ಪಡುಗಡೆಯ ಅಂಚಿನಲ್ಲಿ ರಂಜಿಸುತ್ತಿದ್ದ ಸಂಜೆಗೆಂಪಿನ ಸಿರಿವಂತಿಕೆ;

ಹಿತ್ತಲ ಮೂಲೆಯ ದಾಳಿಂಬೆ ಮರದ ಸಿಂಧೂರ ವರ್ಣದ ದಾಳಿಂಬೆ ಹೂ; ಆ ಮರದ ಕೊಂಬೆ–ಕಡ್ಡಿಗಳ ಮೇಲೆ ಕುಳಿತು, ಬಗೆ–ಬಗೆಯ ದನಿ–ಹೂಗಳನ್ನ ರಳಿಸುತ್ತಿದ್ದ, ಹೆಸರರಿಯದ ಹಾಡು–ಹಕ್ಕಿಗಳು– ಇಷ್ಟೆ–, ನನ್ನ ಸಂಕುಚಿತ ನಿಸರ್ಗ ಪ್ರಪಂಚ. ಮೋಡಗಳು ನನ್ನ 'ಮುಗಿಲುಗಳು' ಎಂಬ ಪ್ರಬಂಧ ಅಲ್ಲದೆ, ಅನೇಕ ರಚನೆಗಳಿಗೆ ವಸ್ತು. ನನ್ನ ಒಂದು ಕಥೆಯ ಹೆಸರು 'ಮೋಡದ ದಿಬ್ಬಣ'. ನನ್ನ ಬಗೆ ಬಾನಿನಲ್ಲಿ ರೂಪಗೊಂಡಿತು. "ಮೇಘಲಿಂಗ;" ಬಿಡು ಬೀಸಿನ ಪಾಠ ಕಲಿಸಿತು. "ತೆವಳು ಮೋಡ". ನಾನು, ಈಗಲೂ ಮೇಘಲೋಕ ನಿರತ. "ಮೇಘಾಲೋಕೇ ಭವತಿ ಸುಖಿನೋಪ್ಯನ್ಯಥಾ ವೃತ್ತಿ ಚೇತಃ" ಎಂದಿರುವನಲ್ಲವೆ ಕಾಳಿದಾಸ? ನನ್ನ "ಅನ್ಯಥಾ ವೃತ್ತಿ" ಸಾಹಿತ್ಯದ ಮೂಲಕ ಸತ್ಯಾನ್ವೇಷಣೆ; ಸೌಂದರ್ಯ ದರ್ಶನ.

ನಾನು ವಿದ್ಯಾರ್ಥಿಯಾಗಿದ್ದಾಗ, ರಾಜರ ಆಳ್ವಿಕೆಯಲ್ಲಿದ್ದ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಗಾಳಿ ಅಷ್ಟೇನೂ ಬಲವಾಗಿ ಬೀಸುತ್ತಿರಲಿಲ್ಲ. ಗಾಂಧೀಜಿ ಮೈಸೂರಿಗೆ ಬಂದಿದ್ದಾಗ ಅವರ ದರ್ಶನ ಮಾಡಿದ ಮೇಲೆ, ಇತರ ಕೆಲವು ವಿದ್ಯಾಥಿಗಳಂತೆ ಖಾದಿ ಧರಿಸತೊಡಗಿದೆ. ಮಹಾತ್ಮಗಾಂಧೀಜಿಯರೇ ಮೈಸೂರು ರಾಜ್ಯವನ್ನು "ರಾಮರಾಜ್ಯ" ಎಂದು ಕರೆದು, ರಾಜ್ಯವನ್ನೂ–ರಾಜವನ್ನೂ ಮೆಚ್ಚಿಕೊಂಡಿದ್ದರು. ಬಿ.ಎಂ.ಶ್ರೀ. ಮುಂತಾದವರು ಅಪ್ಪಟ ರಾಜ ಭಕ್ತರಾಗಿದ್ದರು. ಕೃಷ್ಣರಾಜ ಒಡೆಯರ ಆಳ್ವಿಕೆಯ ರಜತ ಮಹೋತ್ಸವದ ಪ್ರಗಾಥವನ್ನೂ ರಚಿಸಿದ್ದರು. ಕೆ.ವಿ. ಪುಟ್ಟಪ್ಪನವರು ಕೂಡ "ಬೆಳ್ಳಿಯ ಹಬ್ಬದ ಕಬ್ಬದ ಬಳ್ಳಿ"ಯನ್ನು ಹಬ್ಬಿಸಿದ್ದರು. ನನ್ನ ತಾತ–ಮುತ್ತಾತಂದಿರ ಕಾಲದಿಂದ ನಮ್ಮ ಮನೆತನ ಅರಮನೆಯ ಆಶ್ರಯದಲ್ಲಿ ಬೆಳೆದದ್ದು. ನನ್ನ ತಂದೆಯ ಕಾಲದಲ್ಲಿ ಆ ಉದಾರ ಆಶ್ರಯ ನಿಂತುಹೋಯಿತು. ಅವರು, ಅರಮನೆಯ ಕಚೇರಿಯ ಸಿಬ್ಬಂದಿ ವರ್ಗದಲ್ಲಿ ಹತ್ತಿಪ್ಪತ್ತು ರೂಪಾಯಿ ಸಂಬಳದ ಗುಮಾಸ್ತರು. ದೊಡ್ಡ ಸಂಸಾರದ ಹೊಣೆ; ಸಾಲದ ಹೊರೆ, ಕುಟುಂಬ ದಟ್ಟದಾರಿದ್ರ್ಯಕ್ಕೆ ಸಿಲುಕಿರದಿದ್ದರೂ, ಬಡ ಕುಟುಂಬ ಎಂದೇ ಹೇಳಬೇಕು. ನಾನು ಹುಟ್ಟಿ ಬೆಳೆದ ಮೈಸೂರಿನ ಹಳೆಯ ಅಗ್ರಹಾರದ ಹಾರುವರ ಕೇರಿಯ ನಿವಾಸಿಗಳೆಲ್ಲ ಕಡು ಬಡವರೇ. ನಮ್ಮ ಬೀದಿಯಲ್ಲಿ ಓಡಾಡುತ್ತಿದ್ದರೆಲ್ಲ ಇನ್ನೂ ಬಡವರು. ಇವರ ಪ್ರತಿನಿಧಿಗಳೇ ನನ್ನ "ಜೀವನ ನಾಟಕ" ಕೃತಿಯ ಪಾತ್ರವರ್ಗ. ಪ್ರತಿನಿತ್ಯವೂ ಬಡತನದ ಕಣ್ಣುಕುಕ್ಕುವ ನೋಟಗಳನ್ನು ಕಾಣುತ್ತಿದ್ದ ಅಂದಿನ ಬಡವಿದ್ಯಾರ್ಥಿಗೆ– ರಾಮಕೃಷ್ಣ ಪರಮಹಂಸ, ಮಹಾತ್ಮಾಗಾಂಧಿ, ಇವರ ಉಪದೇಶಗಳ ಪ್ರಭಾವಕ್ಕೆ ಒಳಗಾಗಿ, ವಿಶಾಲ ಮನೋಧರ್ಮದ ಮಾನವೀಯತೆಯ ಭೂಮಿಕೆಯಲ್ಲಿ

ನಿಂತು, ಸರ್ವ ಸಮಾನತೆಯ ಕನಸು ಕಾಣುತ್ತಿದ್ದ, ಆದರ್ಶವಾದಿ ತರುಣ ಕವಿಗೆ– ಫ್ರಾನ್ಸಿನ ಮಹಾಕ್ರಾಂತಿಯ ವಿಚಾರವೂ, ರಷ್ಯದ ೧೯೧೭ರ ಅಕ್ಟೋಬರ್ ಕ್ರಾಂತಿಯೂ– ಅಂದಿನ ಪೀಳಿಗೆಯ ಅನೇಕ ವಿದ್ಯಾವಂತ ತರುಣರಿಗೆ ಕಾಣಿಸಿಕೊಟ್ಟಂತೆ, ನನಗೂ ಒಂದು ನೂತನ ಸಮಾಜ ನಿರ್ಮಾಣದ ಕನಸನ್ನು ಕಾಣಿಸಿಕೊಟ್ಟಿತು. ಈ ಕಾಲದಲ್ಲಿ, ನನ್ನ ಮನೆತನಕ್ಕೆ ಬಂದ ರಾಜನಿಷ್ಠೆ ಮರೆಯಾಯಿತು; ಆಸ್ತಿಕ್ಯ ಸಡಿಲಗೊಂಡಿತು; ನನ್ನ ಕುಲಧರ್ಮಕ್ಕೆ ಹೇಳಿದ ಸಾಂಪ್ರದಾಯಿಕ ಆಚಾರ–ವಿಚಾರಗಳಲ್ಲಿ ನಂಬಿಕೆ ಉಡುಗಿ, ಹಿರಿಯರ ಮನಸ್ಸು ನೋಯಿಸಲಾರದೆ ಕಾಟಾಚಾರಕ್ಕೆ ಅವುಗಳನ್ನು ಅನುಸರಿಸುತ್ತಿದ್ದೆ. ನನ್ನಲ್ಲಿ ಸಹಜವಾಗಿಯೇ ಇದ್ದ ಮತಾತೀತವಾದ ವಿಶಾಲ ಮನೋಭಾವ, ಮಾನವೀಯ ದೃಷ್ಟಿ, ದೃಢಗೊಂಡುವು. ದೀನದಲಿತರಲ್ಲಿ, ಪತಿತರಲ್ಲಿ, ನನ್ನ ಅನುಕಂಪೆ ಬಲವಾಯಿತು. "ಬೀದಿಯೊಳಗಲೆಯುತಿಹಳಾರಿವಳು ಚೆಲುವೆ" ಎಂಬ ನನ್ನ ಪ್ರಾರಂಭ ಕಾಲದ ಪದ್ಯವೊಂದರಲ್ಲಿ ಈ ಅನುಕಂಪೆ ಪ್ರಕಟವಾಯಿತು. ಇದು "ತಳಿರು" ಸಂಕಲನದಲ್ಲಿ ಪ್ರಕಟವಾಗಿದೆ. ನಮ್ಮ ಬೀದಿಯ ಜನ ಮುಸ್ಲಿಮ್ ತಿರುಪೆಯ ಹುಡುಗಿ ಒಬ್ಬಳಿಗೆ– "ಬೇರೆ ಮತದವಳೆಂದು ಭಿಕ್ಷೆಯನು ಕೊಡರು, ದೂರನಡೆ, ತೊಲಗೆಂದು ಗದರಿಸುವರು"–, "ತಮ್ಮಂತೆ ಜೀವಿಯೆಂದೆಣಿಸದಿಹರು", ಎಂಬ ಸನ್ನಿವೇಶವನ್ನು ಕಂಡು ಕೊರಗಿದೆ. ಸನ್ನಿವೇಶ ಬೇರೆಯೇ ಆದರೂ ಈ ಹುಡುಗಿಯ ಚೆಲುವಿನ ವರ್ಣನೆಯ ಸಾಲುಗಳಲ್ಲಿ "King Copheuta and The Beggar Maid" ಎಂಬ ಕವಿತೆಯ ಪ್ರಭಾವವನ್ನು ಯಾರೂ ಗುರುತಿಸಬಹುದು.

ಬಿಳಿತೊನ್ನಿನ ಬಾಲಕನೊಬ್ಬನನ್ನು ಇತರ ಬಾಲಕರು ದೂರವಿಡುತ್ತಿದುದು ನನಗೆ ತುಂಬಾ ವ್ಯಥೆಯುಂಟುಮಾಡಿತು. ಆ ಸಂದರ್ಭದಲ್ಲಿ ರಚಿತವಾದದ್ದು ನನ್ನ "ಬಗೆದಂತೆ ಬಾಳು" ಎಂಬ ಸಣ್ಣ ಕಥೆ. ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಮುದ್ದಣ ಸ್ವರ್ಣಪದಕ ಕಥಾಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಪಡೆಯಿತು. ಇಂಥ ಸನ್ನಿವೇಶಗಳಲ್ಲಿ ಕೃತಿ ರಚನೆಯ ಮೂಲಕ ಅನುಕಂಪವನ್ನು ವ್ಯಕ್ತಪಡಿಸುವುದು ಸುಲಭ. ಎಷ್ಟೋ ಇನ್ನಿತರ ಸಂದರ್ಭಗಳಲ್ಲಿ, ನನ್ನ ನಂಬಿಕೆ–ನಿಷ್ಠೆಗಳನ್ನು ಕಾರ್ಯತಃ ಆಚರಣೆಗೆ ತರುವಲ್ಲಿ ಮಾತ್ರ, ನಾನು ಸೋತಿದ್ದೆ– ಎಂದು ಕಾಣುತ್ತದೆ. ಅಂದಿನ ವಾತಾರಣ ಅಂಥದು. ಸಮಾಜದ ಕಟ್ಟು ಕಟ್ಟಲೆಗಳನ್ನು ಎದುರಿಸಿ ತನ್ನ ಮನಸ್ಸಾಕ್ಷಿಯಂತೆ ನಡೆದುಕೊಳ್ಳಲು, ಇಂದಿನ ತರುಣ ಪೀಳಿಗೆಗೆ ಸುಲಭವಾಗಿರುವಷ್ಟು, ಅಂದಿನ ಪೀಳಿಗೆಗೆ ಸುಲಭವಾಗಿರಲಿಲ್ಲ.

ಧರ್ಮಸಂಕಟದ ಇಕ್ಕಳಕ್ಕೆ ಸಿಲುಕಿ ಒದ್ದಾಡುತ್ತಿದ್ದೆವು. ಇಂಥ ಸನ್ನಿವೇಶದಲ್ಲಿ ಮೂಡಿ ಬಂದದ್ದು ಈ ಕವನ:

ಜಾತಿಮತಗಳ ಹೊದಿಕೆಯನು ತೆಗೆದು ಹರಿದು
ಕುಲಗೋತ್ರವೆಂಬ ಹುಸಿ ಹೆಸರ ಕಿತ್ತೊಗೆದು
ಪ್ರೀತಿಗೆಲ್ಲರು ಒಂದೆ ಎಂಬುದನು ಅರಿದು
ಬಳಗ ಬಂಧುಗಳೆಂಬ ಭಾವನೆಯ ತೆಗೆದು
ಮಾತೆಯೊಬ್ಬಳ ಮುಂದೆ ಭೇದವನು ಮರೆದು
ಬಾಳು 'ಧರ್ಮ' ದಲೆಂಬ ದನಿಯ ಕೇಳಿದೆನು:
ಹೃದಯದೊಳದನಿಯು ಅದು, ದಿವ್ಯದನಿಯು.
ಕೇಳಿದಂತೆಯೇ ನಡೆಯೆ, ಎಲ್ಲವನು ತೊರೆದು,
ಎದೆಯಿಲ್ಲ, ಎದೆಯಿಲ್ಲ, ಸುಮ್ಮನಿಹೆನು.
ಹಾಳಾದ ಈ ಹುಟ್ಟು,– ಕಬ್ಬಿಣದ ಕಟ್ಟು:
ಅದ ಮುರಿದು ಬಿಸುಡುವೆನು, ಎಲ್ಲವನು ಸುಟ್ಟು;
ನಡೆಯಿಸೆನ್ನನು ದೇವ ಶಕ್ತಿಯನು ಕೊಟ್ಟು.

ಇದು ನನ್ನೊಬ್ಬನ ಎದೆಗುದಿಯಾಗಿರಲಿಲ್ಲ. ಬಹುಶಃ ಮೇಲುಜಾತಿಯವರು ಎನಿಸಿಕೊಂಡಿದ್ದ ಎಲ್ಲ ತರುಣರನ್ನೂ ಬಾಧಿಸುತ್ತಿದ್ದ ಧರ್ಮಸಂಕಟ. 'ಧರ್ಮ' ಬೇರೆ, 'ಜಾತಿ' ಬೇರೆ– ಎಂಬ ವಿವೇಕ ಜಾಗೃತವಾದದ್ದರಿಂದಲೇ ಆ ತೊಳಲಿಕೆ. ಈ ಜಾತಿ ಸಮಸ್ಯೆ ಈಗಲೂ ನನ್ನನ್ನು ಕಾಡುತ್ತಿದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಕಾದಂಬರಿ ಕಲ್ಪನೆಯಲ್ಲಿ ರೂಪಗೊಂಡು ಸಿದ್ಧವಾಗಿದೆ. ಬರೆಯುವುದಕ್ಕೆ ವ್ಯವಧಾನವಾಗಿಲ್ಲ. ಈ ಪದ್ಯದ ಸಂದರ್ಭದಲ್ಲಿ ನಡೆದ ಒಂದು ಸ್ವಾರಸ್ಯದ ಸಂಗತಿ ಎಂದರೆ, ಇದು ನಮ್ಮ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರವಾದಾಗಲೆಲ್ಲ, 'ಕುವೆಂಪು ರಚಿಸಿದ್ದು' ಎಂದು ಹೇಳಲಾಗುತ್ತಿದೆ. ಕುವೆಂಪು ಅವರನ್ನು ಈ ಧರ್ಮಸಂಕಟಕ್ಕೆ ಸಿಲುಕಿಸುವುದು ಸರಿಯಲ್ಲ.

ಸೌದೆ ಒಡೆಯುವುದು, ಬಾವಿಯಿಂದ ನೀರು ಸೇದುವುದು, ಗಂಟು–ಮೂಟೆ ಹೊರುವುದು, ಬಟ್ಟೆ ಒಗೆದುಕೊಳ್ಳುವುದು, ದೂರ ನಡೆಯುವುದು, ಮುಂತಾದ ಕಾಯಕಷ್ಟದ ಕೆಲಸಗಳನ್ನು ಚಿಕ್ಕಂದಿನಲ್ಲಿ ಸಮಯ ಬಿದ್ದಾಗ ಮಾಡಿದ್ದೇನೆ. ಆದ್ದರಿಂದ, ದೇಹಶ್ರಮದ ಕೆಲಸ ಮಾಡುವವರ ಬಗೆಗೆ ಎಂದಿನಿಂದಲೂ ನನಗೆ ಮೆಚ್ಚುಗೆ, ಗೌರವ, ಕನಿಕರ. ಅಂದಿನ ದಿನಗಳಲ್ಲಿ ಇಂದಿನಷ್ಟು ಕೂಲಿ ಸಿಕ್ಕುತ್ತಿರಲಿಲ್ಲ

ದುಡಿಯುವ ಜನಕ್ಕೆ. ಕೈಲಾಗದಿದ್ದರೂ ಹೊಟ್ಟೆಯ ಪಾಡಿಗಾಗಿ ಕಟ್ಟಿಗೆ ಸೀಳುತ್ತಿದ್ದ ಒಬ್ಬ ಮುದುಕನನ್ನು ಕಂಡಾಗ, ಬಡವರ ಬಗೆಗೆ ಮರುಕ, ಸಿರಿವಂತರ ಮೇಲೆ ಆಕ್ರೋಶ– ಒಂದು ಕವನದಲ್ಲಿ ಉಕ್ಕಿಬಂದುವು. ಈ ಕವನ ರಚನೆಯ ಸಂದರ್ಭದಲ್ಲಿ ನಾನು ಓದಿದ್ದ Burns ಕವಿಯ Song of the Shirt ಎಂಬ ಪದ್ಯ ಪ್ರೇರಕ ಶಕ್ತಿಯಾಗಿತ್ತು. ನನ್ನ ಕವನದ ಕೆಲವು ಪಂಕ್ತಿ ಹೀಗಿವೆ:

ಕಡಿದೂ ಕಡಿದೂ ಸೌದೆಯ ಕಡಿದು
ದುಡಿದೂ ದುಡಿದೂ ದಿನವೂ ದುಡಿದು
ಇಂದಿನವರೆಗೂ ಹೊಟ್ಟೆಯ ಹೊರೆದು
ಹೆಂಡತಿ ಮಕ್ಕಳನೆಲ್ಲರ ಪೊರೆದು
ಬಾಳುತಿಹನೀ ನರಕದ ಬದುಕ–
ನೋಡದೊ ಸೌದೆಯ ಕಡಿಯುವ ಮುದುಕ.

* * *

ಮನೆಮನೆಗಲೆಯುತ ನಿತ್ಯವು ದುಡಿದರೆ
ತನ್ನಯ ಬಾಳನು ಬಲಿಗೊಟ್ಟು
ಸಿರಿವಂತರ ಸಿರಿಗಡಲಿಂದವನಿಗೆ
ಸಿಕ್ಕುವುದೊಂದೇ ಒಂದು ತೊಟ್ಟು!
ಜಿಗಣೆಯ ತೆರದಿ ಕುಬೇರನ ಕುವರರು
ಬಡಬಗ್ಗರ ಎದೆರಕ್ತವ ಹೀರಿ
ಆಳ ಆಳದಲಿ ಬೇರೂರಿ
ಯುಗ ಯುಗವಾಯ್ತು, ಬೆಳೆಯುತಲಿಹರು
ದೊಡ್ಡ ಕಾಡಾಗಿ
ಅಧರ್ಮದ ಬೀಡಾಗಿ.
ಸುಮ್ಮನೆ ಬಿಡುವುದೆ ಈ ಕಾಡನ್ನು
ಬಡವನ ಬಡ ಕೊಡಲಿಯ ಪೆಟ್ಟು?
ಮಲಗಿಹ ಅವನೆದೆ ಕೋಪದ ಕಿಚ್ಚು
ನೆಲಸಮ ಮಾಡದೆ ಕೊನೆಗದ ಸುಟ್ಟು?

"ಕವಳ ತಾಯಿ" ಎಂಬ ನನ್ನ ಇನ್ನೊಂದು ಕವನದಲ್ಲೂ, ಬಡತನದ ಬವಣೆಯ ಚಿತ್ರವಿದೆ. ಸಿರಿವಂತನಿಗೆ ಎಚ್ಚರಿಕೆ ಇದೆ. ಈ ಎರಡು ಕವಿತೆಗಳೂ

ಸೇರಿದಂತೆ, ೧೯೨೬ರಿಂದ ೧೯೪೩ರವರೆಗೆ ರಚಿತವಾದ ಬಹು ಸಂಖ್ಯೆಯ ಕವನಗಳು– "ರಾಘವ" ಎಂಬ ಕಾವ್ಯನಾಮದೊಂದಿಗೆ– ೧೯೪೪ರಲ್ಲಿ "ಹಕ್ಕಿಹಾಡು" ಸಂಕಲನವಾಗಿ ಪ್ರಕಟವಾದವು. ನನ್ನ ಕಾವ್ಯ ಜೀವನದಲ್ಲಿ ಈ ವರ್ಷ ಮುಖ್ಯವಾದ ಒಂದು ಘಟ್ಟ. "ಕಾವ್ಯಾಲಾಪ", ೪೦–೫೦ ಪದ್ಯಗಳ ಒಂದು ತೀರ ಚಿಕ್ಕ ಪುಸ್ತಕ. ಪುಸ್ತಕ ಚಿಕ್ಕದಾದರೂ, ಅದರ ಪರಿಣಾಮ, ಅಂದಿನ ಸಾಹಿತ್ಯ ಪ್ರಪಂಚದಲ್ಲಿ ತಕ್ಕಮಟ್ಟಿಗೆ ಆಯಿತು. ಬಡತನದ ಬಗೆಗೆ ನನ್ನ ಅನುಕಂಪದ ವಿಚಾರವನ್ನು ಈಗ ತಾನೇ ಪ್ರಸ್ತಾಪಿಸಿದ್ದೇನೆ. ಅದರ ಹಿನ್ನೆಲೆಯನ್ನೂ ಕುರಿತು ಹೇಳಿದ್ದೇನೆ. ರಷ್ಯದ ಅಕ್ಟೋಬರ್ ಕ್ರಾಂತಿಯ ಪ್ರಭಾವ ನನ್ನ ಮೇಲಾಗಿದ್ದರೂ, ನಾನು ಕಮ್ಯುನಿಸಮ್ಮಿನ ಸಿದ್ಧಾಂತವನ್ನು ಪೂರ್ತಿ ಒಪ್ಪಿರಲಿಲ್ಲ. ಮಹಾತ್ಮರು ಬೋಧಿಸಿದ ಅಹಿಂಸಾಯುತ ಕ್ರಾಂತಿಯಲ್ಲಿ ನನ್ನ ನಿಷ್ಠೆ ದೃಢವಾಗಿ ನೆಲೆಸಿತ್ತು. ೧೯೪೨–೪೩ರ ಸುಮಾರಿನಲ್ಲಿ, ಭಾರತದ ಎಲ್ಲಾ ಪ್ರಾಂತಗಳ ಸಾಹಿತ್ಯದಲ್ಲೂ, ಪ್ರಗತಿಶೀಲ ಸಾಹಿತ್ಯದ ಚಳವಳಿ ಜೋರಾಗಿ ಪ್ರಾರಂಭವಾಗಿತ್ತು. ಸಾಹಿತ್ಯ ಬಡವರ ಬವಣೆಯನ್ನು ಚಿತ್ರಿಸಬೇಕು, ಆ ಮೂಲಕ ಸರ್ವ ಸಮಾನತಾ ತತ್ವವನ್ನು ಪ್ರತಿಪಾದಿಸಬೇಕು– ಎಂಬ ನಿಲುವಿನಲ್ಲಿ ತಪ್ಪೇನೂ ಇಲ್ಲ. ಪ್ರಗತಿಶೀಲ ಪಂಥದ ಬರಹಗಾರರು ಇಷ್ಟಕ್ಕೆ ನಿಲ್ಲದೆ, ಸಮಕಾಲೀನ ಕವಿಗಳು ನಿಸರ್ಗದ ವರ್ಣನೆ ಮಾಡುತ್ತಿದ್ದುದನ್ನೂ ಪ್ರಾಚೀನ ಸಾಂಸ್ಕೃತಿಕ ಪರಂಪರೆಯಲ್ಲಿ ನಿಷ್ಠೆಯುಳ್ಳವರಾಗಿದ್ದುದನ್ನೂ ಕಟುವಾಗಿ ಟೀಕಿಸಿದರು; ಈ ಕವಿಗಳು ದಂತದ ಗೋಪುರದಲ್ಲಿ ಕುಳಿತು ಬರೆಯುವವರು– ಎಂದು ಹಾಸ್ಯ ಮಾಡಿದರು; ಇವರು ಪ್ರಗತಿಶೀಲರ ದೃಷ್ಟಿಯಲ್ಲಿ ಪ್ರತಿಗಾಮಿಗಳಾದರು. ಹರೆಯದ ಬಿಸಿರಕ್ತದ 'ರಾಘವ'ನಿಗೆ ಇದು ಸಹಿಸಲಿಲ್ಲ. ಪ್ರಗತಿಶೀಲ ಸಾಹಿತ್ಯದ ನಿಲುವನ್ನು ಪದ್ಯರೂಪದಲ್ಲಿ ಪ್ರತಿಭಟಿಸುತ್ತಾ, ಆ ಗುಂಪಿನೊಂದಿಗೆ ಬಹುಮಟ್ಟಿಗೆ ಏಕಾಂಗಿಯಾಗಿಯೇ ಹೋರಾಡಿದನು. 'ಕಾವ್ಯಾಲಾಪ' ಪ್ರಕಟವಾದ ಕೂಡಲೆ ಅದಕ್ಕೆ ಪ್ರತಿಕ್ರಿಯೆಯಾಗಿ "ವ್ಯರ್ಥಾಲಾಪ"ವೂ, ಪ್ರಗತಿಶೀಲ ಸಾಹಿತ್ಯಕ್ಕೆ ನಿಷ್ಠನಾಗಿದ್ದ ಕವಿಯಿಂದ ಹೊರಬಂದಿತು. ಕಾವ್ಯಾಲಾಪದ ಪದ್ಯಗುಚ್ಛ, ಪ್ರಗತಿಶೀಲ ಚಳವಳಿಯ ಮುಖ್ಯ ಆಪಾದನೆಗಳನ್ನು ನಿಮಿತ್ತ ಮಾಡಿಕೊಂಡು ರಚಿತವಾಗಿದ್ದರೂ, ಕಾವ್ಯದ ಸ್ವರೂಪ, ಕಾವ್ಯದ ವಸ್ತು, ಕಾವ್ಯದ ಕಾರ್ಯ, ಕಾವ್ಯದಲ್ಲಿ ಹೊಸತು–ಹಳತರ ಪ್ರಶ್ನೆ, ಕಾವ್ಯದ ಮಹಿಮೆ, ಮುಂತಾಗಿ ಪ್ರಾಚೀನ ಕವಿಗಳು ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಏನೆಲ್ಲ ನಿರ್ವಚಿಸುತ್ತಿದ್ದರೋ ಅದೇ ಮಾದರಿಯಲ್ಲಿ ಸ್ವತಂತ್ರವಾಗಿ, ಸಮಕಾಲೀನ ಸಂದರ್ಭಕ್ಕೆ ಅನುಗುಣವಾಗಿ, ರಚಿತವಾದದ್ದು. ಒಟ್ಟಿನಲ್ಲಿ, ಈಗ ನವೋದಯ

ಕಾವ್ಯ ಎನ್ನುವ ಕಾಲದ ಕವಿಗಳ ಕಾವ್ಯದ ಸಮರ್ಥನೆ ಕಾವ್ಯಾಲಾಪದಲ್ಲಿದೆ. ಕಾವ್ಯತತ್ವದ ಜಿಜ್ಞಾಸೆಯ ಕೆಲವು ಮುಖ್ಯ ವಿಚಾರಗಳು ಕಾವ್ಯಾಲಾಪದಲ್ಲಿ ಹಾಸುಹೊಕ್ಕಾಗಿ ಬಂದಿವೆ. ಪ್ರಗತಿಶೀಲ ಸಾಹಿತ್ಯದ ಚಳವಳಿ "ಕಾವ್ಯಾಲಾಪ"ದಿಂದ ತಣ್ಣಗಾಯಿತು ಎಂದು ತಿಳಿಯಬಾರದು. ಅದರ ಸಿದ್ಧಾಂತದ ತಳಹದಿಯೇ ಕಾವ್ಯತತ್ವಕ್ಕೆ ವಿರುದ್ಧವಾದದ್ದರಿಂದ ಬೇಗನೆ ನಿಂತುಹೋಯಿತು. ರಾಜಕೀಯ ಉಪಾಧಿಗೆ ಬದ್ಧವಾದದ್ದರಿಂದ, ಕಾವ್ಯವಸ್ತುವಿನ ಆಯ್ಕೆಗೆ ಸ್ವಯಂಕಲ್ಪಿತವಾದ ನಿರ್ಬಂಧ ಏರ್ಪಟ್ಟು, ಬಡತನದ ಚಿತ್ರಣದ ಸಾಧ್ಯತೆಗಳೂ ಮುಗಿದು ಹೋಗಿ, ಅಶ್ಲೀಲ ವಸ್ತುವಿನ ವಿನ್ಯಾಸವೂ, ಪ್ರಗತಿಯ ಚಿಹ್ನೆ ಎನ್ನುವ ಕಡೆಗೂ ಚಳವಳಿ ವಾಲಿತು. ಹೊಸಗನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಇದೊಂದು ಪ್ರಮುಖ ಘಟ್ಟ. ಇದರಲ್ಲಿ ನನ್ನ ಪಾತ್ರವೂ ಪ್ರಮುಖವಾಗಿತ್ತು ಎಂಬ ಸಂಗತಿಯನ್ನು ಆಗಿನವರೇ– "ಕಾವ್ಯಕಲಾಪ" ಮತ್ತು "ಹಕ್ಕಿಹಾಡ"ನ್ನ ಸಹೃದಯತೆಯಿಂದ ವಿಮರ್ಶಿಸಿದ ಮಾಸ್ತಿ ಮುಂತಾಗಿ ಕೆಲವರ ಹೊರತು ಉಳಿದ ಅನೇಕ ಸಾಹಿತಿಗಳೇ ಗಮನಿಸಲಿಲ್ಲ– ಎಂದು ನಾನು ತಿಳಿದಿದ್ದೇನೆ. ನನ್ನ ತಿಳಿವಳಿಕೆ ತಪ್ಪಾಗಿರುವುದೂ ಸಾಧ್ಯ. ಅದು ಹೇಗಾದರೂ ಇರಲಿ, ಈವರೆಗಿನ ನನ್ನ ಸಾಹಿತ್ಯ ಸೃಷ್ಟಿಯಲ್ಲಿ ರಾಷ್ಟ್ರೀಯ ಪ್ರಜ್ಞೆ ಅಷ್ಟು ಪ್ರಮುಖವಾಗಿರಲಿಲ್ಲ; ಪದ್ಯಕ್ಕೆ ಹೋಲಿಸಿದರೆ, ಗದ್ಯ ಸಾಹಿತ್ಯದ ಸೃಷ್ಟಿಯೂ ಕಡಮೆಯೇ. ವಾಸ್ತವವಾಗಿ, ಇದು ಕನ್ನಡದ ಹೊಸ ಸಾಹಿತ್ಯ ಸೃಷ್ಟಿಯ ಪ್ರಾರಂಭದ ಲಕ್ಷಣವೇ ಆಗಿತ್ತು ಎನ್ನಬಹುದು. ಮುಂದಿನ ವರ್ಷಗಳಲ್ಲಿ ನಾನು ಪದ್ಯರಚನೆಯನ್ನು ಮುಂದುವರೆಸಿಕೊಂಡು ಹೋದರೂ, ಗದ್ಯ ಗ್ರಂಥಗಳ ರಚನೆಗೆ ವಿಶೇಷವಾಗಿ ಗಮನ ಹರಿಸಿದೆ. ಅದಕ್ಕೆ ಕಾರಣವೂ ಇತ್ತು. ಆವರೆಗೆ ಕಾವ್ಯರಚನೆಯಲ್ಲಿ ನಾನು ಹೊಂದಿದ್ದ ಗುರಿ ಏನು ಎನ್ನುವುದು 'ಬೇಡಿಕೆ' ಎಂಬ ಪದ್ಯದಲ್ಲಿ ಹೀಗೆ ವ್ಯಕ್ತವಾಗಿದೆ:

ಒಂದು ವರವ ನಿನ್ನೊಳಿಂದು
ದೇವ, ಬೇಡುವೆ–
ಬೇಡಿ ಬೇಡಿ ಮೊರೆಯನಿಡುವೆ
ಕೊನೆಗೆ ಕಾಡುವೆ.
ಹೊನ್ನ ರಾಶಿ ಸುರಿಯಲೆಂಬ
ಕೀಳು ಬಯಕೆಯಲ್ಲವು;
ಆಯುರಾರೋಗ್ಯ ಹೆಚ್ಚಲೆಂಬ
ಆಸೆಯಲ್ಲವು;
ಜಸದ ಬಯಕೆ ಬೇಡವೆನಗೆ,

ಜಸವು ಗರ್ವದಾಗರ;
ಮೋಕ್ಷವಲ್ಲ, ಮೋಕ್ಷವಿಲ್ಲ,
ಮೋಕ್ಷ ಶೂನ್ಯಸಾಗರ.
ಒಂದೆ ವರವ ನಿನ್ನೊಳಿಂದು
ದೇವ ಬೇಡುವೆ–
ನನ್ನನೊಂದು ಹಕ್ಕಿಮಾಡು,
ಹಾಡಿ ಹಾಡಿ ಹಾಡುವೆ.

* * *

ನನ್ನ ಹಾಡಿನಲ್ಲಿ ಮತ್ತೆ
ವರವ ಬೇಡೆನು;
ಅವರು ಇವರು ಮೆಚ್ಚಲೆಂದು
ಹಾಡ ಹಾಡೆನು;
ನನ್ನ ಹಾಡಿನಲ್ಲಿ ಅಂದು
ಗೋಳ ಕರೆಯೆನು;
ಆದರಂದು, ಎಂದೆಂದು
ನಿನ್ನ ಮರೆಯೆನು.
ಎಲ್ಲಿ ಕುಳಿತರಲ್ಲಿ ನಾನು
ಹಾಡುತಿರುವೆನು;
ಹಾಡಿಗಾಗಿ ಹಾಡನೊಂದ
ಹಾಡುತಿರುವೆನು;
ಹಾಡುತಿರುವ ಜಗದ ಜೊತೆಗೆ
ಹಾಡುತಿರುವೆನು.
ಹಕ್ಕಿಯಾಗಿ ಹಾಡಿ ನಿನ್ನ
ವೀಣೆಯಾಗುವೆ;
ಹಾಡಿ ದುಡಿದು, ಕೊನೆಗೆ ನಿನ್ನ
ವಾಣಿಯಾಗುವೆ!

ಕೀರ್ತಿ, ಹಣ ಸಂಪಾದನೆ, ಪ್ರಶಂಸೆ– ಇದು ಯಾವುದನ್ನೂ ಬಯಸದೆ, ಕೇವಲ ಆತ್ಮಸಂತೋಷಕ್ಕಾಗಿ ಕೃತಿರಚನೆ ಮಾಡಿದೆ. ಪ್ರಾರಂಭದ ವರ್ಷಗಳಲ್ಲಿ

ಈ ನನ್ನ ಧ್ಯೇಯವನ್ನು ತಿಳಿಸುವ– The Poet is a nightingale which Sings to cheer its own solitude– ಎಂಬ ಷೆಲ್ಲಿ ಕವಿಯ ವಾಕ್ಯವನ್ನು ನನ್ನ ಪ್ರಥಮ ಕವನ ಸಂಕಲನ "ಹಕ್ಕಿ ಹಾಡು"ವಿನಲ್ಲಿ, ನನ್ನ ಧ್ಯೇಯ ವಾಕ್ಯವಾಗಿ ಮುದ್ರಿಸಿದ್ದೇನೆ. ಬದುಕಿನುದ್ದಕ್ಕೂ ಧ್ಯೇಯವನ್ನು ಪೂರ್ತಿಯಾಗಿ ಉಳಿಸಿಕೊಳ್ಳುವುದು ಸಾಧ್ಯವಾಗಲಿಲ್ಲವೆಂಬುದು ಇಂದಿಗೂ ನನ್ನ ವಿಷಾದ.

ಹರೆಯದ ಕಾಲದ ಕೃತಿಗಳು

೧೯೩೩ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದು, ೧೯೪೪ರ ಫೆಬ್ರುವರಿ ತಿಂಗಳಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಬಳ ಪಡೆಯುವ ಕಾರ್ಯದರ್ಶಿಯಾಗಿ ನೇಮಕಗೊಂಡೆ. ಕನ್ನಡ ಸಾಹಿತ್ಯ ಪರಿಷತ್ತಿನ ಚರಿತ್ರೆಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾದ ವರ್ಷ ಅದು. ಆ ವರ್ಷ ಡಿ.ವಿ.ಗುಂಡಪ್ಪನವರು ಪರಿಷತ್ತಿನ ಉಪಾಧ್ಯಕ್ಷರಾಗಿ ಕಾರ್ಯಾರಂಭ ಮಾಡಿದ್ದರು. ಪರಿಷತ್ತಿನ ಕಚೇರಿಯ ಕೆಲಸಗಳನ್ನು ಒಪ್ಪೊತ್ತಿನ ಗುಮಾಸ್ತೆ ಒಬ್ಬರು ನೋಡಿಕೊಳ್ಳುತ್ತಿದ್ದರು. ಪರಿಷತ್ತಿನ ಆಯ-ವ್ಯಯಗಳ ಲೆಕ್ಕವಿಡುವುದು, ಕನ್ನಡ ಮತ್ತು ಇಂಗ್ಲೀಷು ಪತ್ರವ್ಯವಹಾರಗಳನ್ನು ಸ್ವತಂತ್ರವಾಗಿ ಮಾಡುವುದು, ಪರಿಷತ್ಪತ್ರಿಕೆ ಮತ್ತು ಇತರ ಪ್ರಕಟನೆಗಳ ಸಂಪಾದಕೀಯ ಕಾರ್ಯದಲ್ಲಿ ಸಹಾಯ ಮಾಡುವುದು, ಪರಿಷತ್ತಿಗೆ ಆಗಮಿಸುವ ಅತಿಥಿಗಳು, ಸದಸ್ಯರು ಇವರನ್ನು ಸ್ವಾಗತಿಸುವುದು, ಪುಸ್ತಕ ಭಂಡಾರದ ಮೇಲ್ವಿಚಾರಣೆ– ಹೀಗೆ, ಬಹುಮುಖವಾದ, ಕಾರ್ಯಕಲಾಪಗಳನ್ನು ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿಗಳು, ಗೌರವ ಕೋಶಾಧಿಕಾರಿಗಳು, ಉಪಸಮಿತಿಗಳ ವ್ಯವಸ್ಥಾಪಕರುಗಳು ಮುಂತಾಗಿ ಹಲವು ಅಧಿಕಾರಿಗಳ ಮರ್ಜಿಯನ್ನ ಅನುಸರಿಸಿ ನಡೆಸಿಕೊಂಡು ಹೋಗುವ ಹೊಣೆಗಾರಿಕೆ ನನ್ನದಾಗಿತ್ತು. ಪರಿಷತ್ತಿನ ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಶಾಂತಿನಿಕೇತನದಲ್ಲೋ, ಕಲ್ಕತ್ತೆಯಲ್ಲೋ ಚಿತ್ರಕಲೆಯ ಅಭ್ಯಾಸವನ್ನು ಮುಂದುವರಿಸಬೇಕೆಂಬ ಉದ್ದೇಶದಿಂದ ಮೈಸೂರನ್ನು ಬಿಟ್ಟು, ಕಲ್ಕತ್ತೆಯ ಪ್ರಯಾಣವನ್ನು ಕೈಗೊಂಡಿದ್ದೆ. ಈ ನನ್ನ ಉದ್ದೇಶಕ್ಕೆ ಬಿ.ಎಂ.ಶ್ರೀ ವೆಂಕಣ್ಣಯ್ಯನವರು, ಮಾಸ್ತಿ, ತೀ.ನಂ.ಶ್ರೀ, ಇವರೆಲ್ಲ ತುಂಬ ಒತ್ತಾಸೆ ನೀಡಿದ್ದರು. ಶಾಂತಿನಿಕೇತನದಲ್ಲಿ ಪ್ರವೇಶ ದೊರೆಯುವುದು ಕಷ್ಟವೆಂದು ಅಲ್ಲಿದ್ದ ನಾರಾಯಣ ಸಂಗಮರಿಂದ ಉತ್ತರ ಬಂತು. ಕಲ್ಕತ್ತೆಯಲ್ಲಿ ಊಟವಸತಿಗಳಿಗೆ ಅನುಕೂಲ ದೊರೆಯಲಿಲ್ಲ. ಮದರಾಸಿನವರೆಗೆ ಪ್ರಯಾಣ ಮಾಡಿದ್ದವನು, ಮೈಸೂರಿಗೆ ಹಿಂದಿರುಗಿದೆ. ಜೀವನದ ಒಂದು ಧ್ಯೇಯ ನೆರವೇರದೆ, ನಿರಾಶನಾಗಿ,

ನಿರುದ್ಯೋಗಿಯಾಗಿದ್ದ ನನ್ನನ್ನು ಕನ್ನಡ ತಾಯ ಗುಡಿಯ ಸೇವಕನಾಗಿ ನಿಲ್ಲಿಸಿದವರು ಗುರುವರ್ಯ ವೆಂಕಣ್ಣಯ್ಯನವರು. ಗುಂಡಪ್ಪನವರ ಕೈಕೆಳಗೆ ಕೆಲಸ ಮಾಡಿದರೆ ಮುಂದೆ ಯಾವ ಕೆಲಸವನ್ನು ಬೇಕಾದರೂ ನಿಭಾಯಿಸುವ ಸಾಮರ್ಥ್ಯ ಬರುತ್ತದೆ ಎಂದು ವೆಂಕಣ್ಣಯ್ಯನವರು ಭರವಸೆಕೊಟ್ಟಿದ್ದರು. ಅವರ ಮಾತು ಹುಸಿಯಾಗಲಿಲ್ಲ.

ಗುಂಡಪ್ಪನವರ ನೇತೃತ್ವದಲ್ಲಿ, ಕಚೇರಿಯ ಕೆಲಸದ ಅನುಭವ, ವ್ಯವಹಾರ ಚಾತುರ್ಯ ದೊರೆಯಿತು. ಸಾಹಿತ್ಯದೃಷ್ಟಿಯಿಂದ ಹೆಚ್ಚಿನ ಪ್ರಯೋಜನವಾದದ್ದು ಎ.ಆರ್.ಕೃಷ್ಣಶಾಸ್ತ್ರಿಗಳಿಗೆ ಪರಿಷತ್ಪತ್ರಿಕೆಯ ಸಂಪಾದನಾ ಕಾರ್ಯದಲ್ಲಿ ಸಹಾಯಕನಾಗಿದ್ದ ಕಾರಣದಿಂದ. ಪರಿಷತ್ ಪತ್ರಿಕೆಯಲ್ಲಿ, "ಪ್ರಾಚ್ಯ-ಲೇಖನಾವಳಿ" ಎಂಬ ಹೊಸ ವಿಭಾಗವೊಂದನ್ನು ಅವರು ಪ್ರಾರಂಭ ಮಾಡಿದರು. ಪರಿಷತ್ಪತ್ರಿಕೆಗೆ ವಿನಿಮಯವಾಗಿ ಬರುತ್ತಿದ್ದ, ಚಂದಾಕೊಟ್ಟು ತರಿಸುತ್ತಿದ್ದ ಅನೇಕ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳೆಲ್ಲವನ್ನೂ ಓದಿ, ಮಹತ್ವಪೂರ್ಣ ಲೇಖನಗಳ ಸಾರಾಂಶವನ್ನು ಬರೆದು ಸಿದ್ಧಪಡಿಸುವ ಕಾರ್ಯವನ್ನು, ಕರಡಚ್ಚು ತಿದ್ದುವುದು ಮುಂತಾದ ಇತರ ಕಾರ್ಯಗಳೊಂದಿಗೆ, ಕೃಷ್ಣಶಾಸ್ತ್ರಿಗಳು ನನಗೆ ವಹಿಸಿದ್ದರು. ನಾನು ಪರಿಷತ್ತಿನಲ್ಲಿದ್ದಷ್ಟು ಕಾಲ ಈ ಕೆಲಸಗಳಿಂದ ದೊರೆತ ಸಂಪಾದಕೀಯ ಅನುಭವ ಅತ್ಯಮೂಲ್ಯವಾದುದು. ಈ ಕಾಲದಲ್ಲಿ ಪರಿಷತ್ಪತ್ರಿಕೆಗಾಗಲಿ, ಬೇರೆ ಯಾವುದೇ ಪತ್ರಿಕೆಗಾಗಲೀ, ನಾನು ವಿಮರ್ಶಾತ್ಮಕ, ಸಂಶೋಧನಾತ್ಮಕ ಲೇಖನಗಳನ್ನು ಬರೆಯದೆ ಹೋದರೂ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ, ಸಂಶೋಧನೆ ಹೇಗೆ ನಡೆಯುತ್ತಿದೆ ಎನ್ನುವುದರ ನಿಕಟವಾದ, ನಿರಂತರವಾದ, ಪರಿಚಯ ನನಗಾಯಿತು; ವಿಮರ್ಶನ ದೃಷ್ಟಿ, ಸಂಶೋಧನ ದೃಷ್ಟಿ ಬೆಳೆದುವು. ವಿದ್ವತ್ಪೂರ್ಣವಾದ ಲೇಖನಗಳ ಕರಡಚ್ಚು ತಿದ್ದುವುದೇ ಒಂದು ಸ್ವಾರಸ್ಯವಾದ ಅನುಭವವಾಗಿತ್ತು. ಗೋವಿಂದ ಪೈ ಅವರು ರೂಢಿಯಲ್ಲಿದ್ದ ಶಬ್ದರೂಪಗಳನ್ನು, ತಮ್ಮದೇ ಆದ ರೀತಿಯಲ್ಲಿ ಬಳಸುತ್ತಿದ್ದರು. ಉದಾಹರಣೆಗೆ, ಎಲ್ಲರೂ ಸಾಧಾರಣವಾಗಿ ಬಳಸುವ "ಖಂಡಿತ" ಎಂಬ ಶಬ್ದವನ್ನು "ಕಂಡಿತ" ಎಂದು ಪ್ರಯೋಗಿಸಿದ್ದರು. ಅದನ್ನು ನಾನು "ಖಂಡಿತ" ಎಂದು ತಿದ್ದಿದಾಗ ಅವರ ಬರವಣಿಗೆಯ ಒಂದು ಅಕ್ಷರವನ್ನೂ ತಿದ್ದಕೂಡದೆಂದು ಕೃಷ್ಣಶಾಸ್ತ್ರಿಗಳು ತಿಳಿಸಿದರು. ಪರಿಷತ್ತಿನ ಸಭೆ ಸಮಾರಂಭಗಳ ವರದಿಗಳು ವಾರ್ಷಿಕ ವರದಿ, ಸಾಹಿತ್ಯ ಸಮ್ಮೇಳನ, ಸಕಲ ಸದಸ್ಯರ ಸಭೆ, ಕಾರ್ಯಸಮಿತಿ-ಉಪಸಮಿತಿಗಳ ಗೊತ್ತುವಳಿಗಳು- ಮುಂತಾದವುಗಳನ್ನು ಕೂಡ ನಿರ್ದುಷ್ಟವಾದ, ಆಕರ್ಷಕವಾದ,

ಸಾಹಿತ್ಯದ ಮಟ್ಟದಲ್ಲಿ ಬರೆಯುವುದು ಹೇಗೆ ಎನ್ನುವುದರಲ್ಲಿ ಗುಂಡಪ್ಪನವರಿಂದ ನಾನು ಕಲಿತದ್ದು ಬಹಳ. ಪರಿಷತ್ತಿಗೆ ಬರುತ್ತಿದ್ದ ಸಾಹಿತಿಗಳ ಸ್ನೇಹ, ಪರಿಚಯ ಬೇಗನೆಯೆ ದೊರೆತವು. ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನ, ಅದರ ಸಂದರ್ಭದಲ್ಲೇ ನಡೆಯುತ್ತಿದ್ದ ಸಕಲ ಸದಸ್ಯರ ವಾರ್ಷಿಕಾಧಿವೇಶನಗಳು, ಇವುಗಳಿಗೆ ನಾನು ಪರಿಷತ್ತಿನ ಕಚೇರಿಯ ಪರವಾಗಿ ಹೋಗಲೇಬೇಕಾಗಿತ್ತು. ಅಖಿಲ ಕರ್ನಾಟಕದ ಕವಿಗಳ, ಸಾಹಿತಿಗಳ, ವಿದ್ವಾಂಸರ ಪರಿಚಯ, ಸ್ನೇಹ ಈ ಅಧಿವೇಶನಗಳಲ್ಲಿ ಆಗಿ, ಕಾಲಕ್ರಮದಲ್ಲಿ ಬೆಳೆಸುತ್ತ ಬಂದವು. ಈ ಎಲ್ಲ ಸಾಹಿತಿಗಳ ಸಂಗಕ್ಕೆ ಬೆಲೆ ಕಟ್ಟುವುದಾದರೂ ಹೇಗೆ? ಇವರಲ್ಲಿ ಅನೇಕರು ವಯಸ್ಸಿನಲ್ಲಿ, ಸಾಧನೆಯಲ್ಲಿ, ಸಿದ್ಧಿಯಲ್ಲಿ, ನನಗಿಂತ ಹಿರಿಯರು. ನನ್ನ ಸಾಹಿತ್ಯ ಸೃಷ್ಟಿ ಕಾರ್ಯಕ್ಕೆ ಕೆಲವರಿಂದ, ದೊರೆತ ಉತ್ತೇಜನ ಸಂಜೀವಿನಿಯಾಗಿತ್ತು. ಇಂಥವರಲ್ಲಿ ಗೋವಿಂದ ಪೈ ಅವರನ್ನು ಮುಖ್ಯವಾಗಿ ನೆನೆಯಬೇಕು. 'ಹಕ್ಕಿಹಾಡು' ಪ್ರಕಟವಾದಂದಿನಿಂದ, ಪ್ರತಿಯೊಂದು ಪುಸ್ತಕವನ್ನು ಅವರಿಗೆ ಕಳಿಸಿಕೊಟ್ಟಿದ್ದೇನೆ. ಅದು ಕೈಸೇರಿದ ಕೂಡಲೇ ಅವರು ಅದನ್ನು ಪೂರ್ತಿಯಾಗಿ ಓದಿ, ಕಾರ್ಡು ತುಂಬ ಅವರ Trade Mark ಎನ್ನಬಹುದಾದ Violet (ಪಾಟಲ ವರ್ಣದ) ಶಾಯಿಯಲ್ಲಿ ಎದೆತುಂಬ ಮೆಚ್ಚುಗೆಯ ಮಾತುಗಳನ್ನು ಬರೆಯುತ್ತಿದ್ದರು. ನನಗೆ ಮಾತ್ರವಲ್ಲ, ಪುಸ್ತಕ ಕಳಿಸಿದ ಪ್ರತಿ ಗ್ರಂಥಕರ್ತನಿಗೂ ಈ ರೀತಿ ಅಭಿಪ್ರಾಯ ತಿಳಿಸುವ ರೂಢಿಯಿಟ್ಟು ಕೊಂಡಿದ್ದರು. ಮಾತ್ರವಲ್ಲ, ಅದನ್ನು ಒಂದು ವ್ರತವಾಗಿ ನಡೆಸಿಕೊಂಡು ಬಂದಿದ್ದರು. ಎಷ್ಟು ಜನ ಹೀಗೆ ಮಾಡಿದ್ದಾರೆ? ಮಾಡುತ್ತಿದ್ದಾರೆ? ಪುಸ್ತಕದ ಬಗೆಗೆ ಮಾತ್ರವಲ್ಲ, ಭಾಷೆ, ಸಾಹಿತ್ಯ, ಸಂಶೋಧನೆಗಳಿಗೆ ಸಂಬಂಧಪಟ್ಟಂತೆ ಯಾವ ಸಂದೇಹದ ಪ್ರಶ್ನೆಯನ್ನು ಮುಂದಿಟ್ಟರೂ ಕೂಡಲೇ ಉತ್ತರ ಬರೆಯುತ್ತಿದ್ದರು. ಇವರಿಂದ ಕಲಿತ ಪಾಠವನ್ನು ಕೈಲಾದ ಮಟ್ಟಿಗೂ, ಅನುಷ್ಠಾನದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಇಂಥ ಶ್ರೇಷ್ಠ ವ್ಯಕ್ತಿಗಳ ಪರಿಚಯ, ಪರಿಷತ್ತಿನಲ್ಲಿ ಇರದಿದ್ದರೆ, ನನಗೆ ಆಗುತ್ತಿರಲಿಲ್ಲ.

ನಾನು ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ, ಕನ್ನಡ–ಹಿಂದೀ ವಾದ; "ಕರ್ಣಾಟಕವೊ–ಕರ್ನಾಟಕವೋ" ಎಂಬ ವಾಗ್ಯುದ್ಧ ನಡೆದುವು. ಪರಿಷತ್ತಿನ ಅಧಿಕಾರಿಗಳಿಗೂ, ಸಂಸ್ಥೆಯ ಬಗೆಗೆ ಟೀಕೆ ಮಾಡುವವರಿಗೂ ವಾದ ವಿವಾದಗಳು ನಡೆಯುತ್ತಲೇ ಇದ್ದವು. ಪ್ರಾಯದ ಬಿಸಿ ನೆತ್ತರು ಹರಿಯುತ್ತಿದ್ದ ನನಗೆ ಈ ವಾದಗಳಲ್ಲಿ ಭಾಗವಹಿಸಬೇಕೆಂದು ಉತ್ಸುಕತೆ. ಪರಿಷತ್ತಿಗೆ ನೇಮಕಗೊಂಡ ಹೊಸದರಲ್ಲಿ ಕನ್ನಡದ ಬಗೆಗೆ ಇದ್ದ ನಿರಭಿಮಾನವನ್ನು ಕುರಿತು 'ತಾಯಿನಾಡು'

ಪತ್ರಿಕೆಗೆ ಒಂದು ಲೇಖನ ಬರೆದೆ. ಉಪಾಧ್ಯಕ್ಷ ಗುಂಡಪ್ಪನವರು ಪರಿಷತ್ತಿನ ಸೇವಕನಾದ ನಾನು ವಾದ ವಿವಾದದಲ್ಲಿ ತೊಡಗಕೂಡದೆಂದು ಆದೇಶ ನೀಡಿದರು. ಈ ಆದೇಶವನ್ನು ನಾನು ಪಾಲಿಸಿದೆ. 'ಕರ್ನಾಟಕ–ಕರ್ಣಾಟಕ' ವಿವಾದ ನಡೆದದ್ದು ಬಿ.ಎಂ.ಶ್ರೀ ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ. ಇದರದ್ದೇ ಒಂದು ಚರಿತ್ರೆ, ಆದ್ದರಿಂದ, ಆ ಬಗ್ಗೆ ಇಲ್ಲಿ ಬೆಳಸುವುದಿಲ್ಲ. ಈ ವಿವಾದಕ್ಕೆ ಪರೋಕ್ಷವಾಗಿ ನಾನೇ ಮೂಲ ಕಾರಣ; ಬೀಜ ಬಿತ್ತಿದವನು. ಗುರುಗಳಾದ ಬಿ.ಎಂ.ಶ್ರೀ. ಶಿಷ್ಯನ ಅಪರಾಧವನ್ನು ಬಿಟ್ಟುಕೊಡದೆ, ಅಕ್ಷರ ವ್ಯತ್ಯಾಸವನ್ನು ವಿರೋಧಿಸಿ ಪ್ರಚಂಡ ಯುದ್ಧವನ್ನೇ ಹೂಡಿದ ತಮ್ಮ ಗುರುಗಳಾದ ಬೆಳ್ಳಾವೆ ವೆಂಕಟನಾರಣಪ್ಪನವರ ಎದುರು ನಿಂತು ಹೋರಾಡಿದರು. ನನ್ನ ಜೊತೆಯವರೆಲ್ಲ– ಎಲ್.ಗುಂಡಪ್ಪ, ಕ.ವೆಂ.ರಾಘವಾಚಾರ್, ರಾಜರತ್ನಂ, ತೀ.ನಂ.ಶ್ರೀ. ಮುಂತಾದವರು ಬಿ.ಎಂ.ಶ್ರೀ.ಯವರ ಪಕ್ಷ ವಾದಿಸಿದರು. ನಾನು ನಿಷ್ಪಕ್ಷಿ ಎಂಬಂತೆ ತೆಪ್ಪನಿದ್ದೆ. ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಹೆಸರಿನ ಸಂಬಂಧವಾಗಿ ಹುಟ್ಟಿದ ವಾದಕ್ಕೆ ಕಾರಣವಾದ "ನ–ಣ" ಕಾರಗಳ ಗೊಡವೆಯೇ ಬೇಡ ಎಂದು, "ಕರ್ಣಾ(ರ್ನಾ)ಟಕ" ಸಾಹಿತ್ಯ ಪರಿಷತ್ತು ಇದ್ದುದು "ಕನ್ನಡ ಸಾಹಿತ್ಯ ಪರಿಷತ್ತು" ಆಯಿತು.

ಈ ಎಲ್ಲ ವಾದಗಳೂ ನನ್ನ ಸ್ವಭಾವದಲ್ಲಿದ್ದ ಹೋರಾಟದ ಓಲವನ್ನು ಕೆಣಕುತ್ತಲೇ ಇದ್ದವು. ಆದರೆ ಪರಿಷತ್ತಿನ ಸಂಬಳಗಾರನಾಗಿದ್ದುಕೊಂಡು, ಉದ್ರೇಕವನ್ನು ಅಡಗಿಸಿಕೊಳ್ಳಬೇಕಾಗಿತ್ತು. ಪ್ರಗತಿಶೀಲ ಸಾಹಿತ್ಯದ ವಾದ ಎದ್ದಾಗ, ನಾನು ಪರಿಷತ್ತಿನ ಹುದ್ದೆಯನ್ನು ಬಿಟ್ಟು, ಮೈಸೂರು ವಿಶ್ವವಿದ್ಯಾಲಯ ಕೈಗೊಂಡಿದ್ದ ಇಂಗ್ಲೀಷು–ಕನ್ನಡ ನಿಘಂಟು ನಿರ್ಮಾಣಕ್ಕೆಂದು ಏರ್ಪಾಟಾಗಿದ್ದ ಕಚೇರಿಯಲ್ಲಿ ಸಂಪಾದಕ ಸಹಾಯಕರಲ್ಲಿ ಒಬ್ಬನಾಗಿ ಕೆಲಸ ಮಾಡುತ್ತಿದ್ದೆ. ನಿಘಂಟುವಿನ ಪ್ರಧಾನ ಸಂಪಾದಕರು ಬೆಳ್ಳಾವೆ ವೆಂಕಟನಾರಣಪ್ಪನವರು. ಮೈಸೂರು ವಿಶ್ವ ವಿದ್ಯಾನಿಲಯ ಆಗ ಇನ್ನೂ ಪೂರ್ತಿಯಾಗಿ ಸರ್ಕಾರದ ಅಧೀನದಲ್ಲಿಯೇ ಇತ್ತು. ನಾನು ಸರ್ಕಾರಿ ನೌಕರ. ಪ್ರಗತಿಶೀಲ ಸಾಹಿತ್ಯದ ಸಿದ್ಧಾಂತಗಳನ್ನು ಪ್ರತಿಭಟಿಸಿ ಬರೆಯಬೇಕೆಂಬ ಪ್ರಚೋದನೆ ತೀವ್ರವಾಗಿತ್ತು. ನನ್ನ ಅಭಿಪ್ರಾಯಗಳನ್ನು ಪದ್ಯ ರೂಪದಲ್ಲಿ ಬರೆಯುತ್ತ ಹೋದೆ. ಬರವಣಿಗೆ ಪ್ರಾರಂಭವಾದದ್ದು ೧೯೪೮ರ ಜನವರಿ. ಬರೆ–ಬರೆದಂತೆ ನನ್ನ ಆಪ್ತಮಿತ್ರರಾಗಿದ್ದ ಮೋಟಗಾನ ಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ಪದ್ಯಗಳನ್ನು ತೋರಿಸುತ್ತಿದ್ದೆ. ಆಗ ಅವರು ಪರಿಷತ್ತಿನ ಕನ್ನಡ ನುಡಿಯ ಸಂಪಾದಕರು. ನನ್ನ ಪದ್ಯಗಳನ್ನು ಅವರು ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟಿಸುತ್ತಾ ಬಂದರು. "ಕವಿಮಿತ್ರ" ಎಂಬ ಅರ್ಥಪೂರ್ಣ ಕಾವ್ಯನಾಮ ಸಹಿತ,

'ಕಾವ್ಯಾಲಾಪ' ಎಂಬ ಹೆಸರಿನಡಿಯಲ್ಲಿ, ಪದ್ಯಗಳು ಪ್ರಕಟವಾದವು. ನನ್ನ ಹರೆಯದ ಹೋರಾಟದ ಮನೋಧರ್ಮದ ಸ್ಥಿತಿಯಲ್ಲಿ ಮೂಡಿಬಂದದ್ದು "ಕಾವ್ಯಾಲಾಪ". ಇದರ ಬಗ್ಗೆ ಈ ಹಿಂದೆಯೂ ಕೆಲವು ಮಾತುಗಳನ್ನು ಆಡಿರುವೆನಾದ್ದರಿಂದ, ಹೆಚ್ಚು ಹೇಳಬೇಕಾದ ಕಾರಣವಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನಿಘಂಟು ಕಚೇರಿಗಳಲ್ಲಿ ಕೆಲಸ ಮಾಡಿದ ೧೦-೧೨ ವರ್ಷಗಳ ಅವಧಿಯಲ್ಲಿ "ಶಿಲಾಮುಖ", "ಮಾರ್ಗದರ್ಶಕ", "ರತಿದೇವಿ" ಎಂಬ ಮೂರು ಕಥಾಸಂಕಲನಗಳು; "ಹಕ್ಕಿಹಾಡು", "ಆ ಚಿತ್ರಗಳು", "ಕಾವ್ಯಾಲಾಪ", "ಹೂವಾಡಗಿತ್ತಿ", "ರಾಗ", ಎಂಬ ಐದು ಪದ್ಯದ ಪುಸ್ತಕಗಳು; "ಹೂವಿನ ಆಸೆ", "ತೆರೆಮರೆಯ ಚಿತ್ರಗಳು" ಎಂಬ ಎರಡು ನಾಟಕಗಳು; "ಹಿಡಿ ಹೂವು" ಎಂಬ ವಿವಿಧ ಬರೆಹಗಳ ಸಂಕಲನ; "ಭಾಗ್ಯಲಕ್ಷ್ಮಿ" ಎಂಬ ಒಂದು ಕಾದಂಬರಿ ಪ್ರಕಟವಾಗಿ, ಸಾಹಿತ್ಯ ಸೃಷ್ಟಿಯ ದೃಷ್ಟಿಯಿಂದ ವ್ಯರ್ಥವೆನಿಸಲಿಲ್ಲ. ಇಂದಿನ ಪೀಳಿಗೆಗೆ ಇವು Out of date, Out of fashion ಆಗಿ ಕಾಣಬಹುದು. ಪ್ರತಿಯೊಂದು ಸಾಹಿತ್ಯಕೃತಿಯೂ ತನ್ನ ಕಾಲದಲ್ಲಿ ಜನಪ್ರಿಯವಾಗಿದ್ದಷ್ಟು ಮುಂದೆ ಇರದು. ಇದು ಸಹಜ. ಪ್ರತಿಯೊಂದು ಕಾಲದಲ್ಲಿಯೂ ಆ ಕಾಲದ ಬರಹಗಾರರ ಕೃತಿಗಳು ಮುಂದೆ ಬರದೆ ಹೋದರೆ, ಅವುಗಳನ್ನು ಕೇಳುವರಾರು? ಆದರೂ, ಒಳ್ಳೆಯ ಕೃತಿಗಳು ಎಲ್ಲ ಕಾಲದವರಿಗೂ ಬೇಕಾಗುತ್ತವೆ. ಆದ್ದರಿಂದ ಅವು ಆಗಿಂದಾಗ್ಗೆ ಪುನರ್ಮುದ್ರಣ ಆಗುವ ವ್ಯವಸ್ಥೆ ಆಗಬೇಕು. ಮಾರ್ಗದರ್ಶಕ, ಹೂವಾಡಗಿತ್ತಿ, ಭಾಗ್ಯಲಕ್ಷ್ಮಿ, ಹೂವಿನ ಆಸೆ ಇವು ಎರಡು ಮೂರು ಸಲ ಮುದ್ರಣವಾಗಿವೆ.

ಈಗ ಹೆಸರಿಸಿದ ಕೃತಿಗಳಲ್ಲಿ ಎರಡು ಮೂರರ ಸಂಬಂಧದಲ್ಲಿ ಗಮನಾರ್ಹವಾದ ಸಂಗತಿಗಳುಂಟು. ಆದ್ದರಿಂದ ತಿಳಿಸಬಯಸುತ್ತೇನೆ. ಪ್ರಕಾಶಕರು ತಾವಾಗಿ ಮುಂದೆ ಬಂದು ಒಬ್ಬ ಗ್ರಂಥಕರ್ತನನ್ನು ಬೇಡಿ, ಹಸ್ತಪ್ರತಿ ಪಡೆಯಬೇಕಾದರೆ ಆತ "ಕರೆಯುವ ಹಸು" ಆಗಿರಬೇಕು; "ಗೊಡ್ಡಿ"ಯಾದರೂ ಪ್ರಯೋಜನವಿಲ್ಲ, ಎಳಗರುವಾದರೂ ಪ್ರಯೋಜನವಿಲ್ಲ. ಆ ಕಾಲದಲ್ಲಿ ನಾನು ತಕ್ಕಮಟ್ಟಿಗೆ ಹೆಸರಾದ ತರುಣ ಬರಹಗಾರನಾಗಿದ್ದರೂ ಪ್ರಕಾಶಕರಿಗೆ ಲಾಭ ತರುವಷ್ಟು 'ಜನಪ್ರಿಯ' ಇಲ್ಲವೆ 'ಪ್ರಸಿದ್ಧ' ಬರಹಗಾರನಾಗಿರಲಿಲ್ಲ. ಹೀಗೆಂದು ನನ್ನ ತಿಳಿವಳಿಕೆ ೧೯೪೦-೪೧ರ ಸುಮಾರಿನಲ್ಲಿ, ನನ್ನ ಮಾತಾ-ಪಿತೃಗಳು ತೀರಿಹೋಗಿದ್ದರು. ತಕ್ಕಮಟ್ಟಿನ ಪಿತೃಋಣ ಇತ್ತು. ನನ್ನ ಪಾಲಿನದಷ್ಟನ್ನಾದರೂ ತೀರಿಸಬೇಕೆಂಬ ಸಹಜವಾದ ತವಕ. ಹತಾರ್ನಿನ ಕತೆಗಳನ್ನು ಪತ್ಯ ಪುಸ್ತಕ ಮಾಡಿಸಬಹುದು ಎಂದು ಆಪ್ತಮಿತ್ರರು ಸಲಹೆ ಮಾಡಿದರು. ಅವನ ನಾಲ್ಕು

ಕತೆಗಳನ್ನು ಹೊಸದಾಗಿ ಅನುವಾದ ಮಾಡಿದ್ದೆ. ಪ್ರಕಾಶಕರನ್ನು ಕೇಳಿ, "ಇಲ್ಲ' ಎನ್ನಿಸಿಕೊಳ್ಳುವುದು ಎಂದೂ ನನಗೆ ಬೇಸರದ ವಿಷಯ. ಬಿ.ಎಂ.ಶ್ರೀ ಸ್ವರ್ಣ ಪದಕವನ್ನು ಮಾರಿ "ಯೌವ್ವನ ಸುಧೆ" ಎಂಬ ಕಥಾಪುಸ್ತಕವನ್ನು ಸ್ವಂತವಾಗಿ ಅಚ್ಚುಹಾಕಿಸಿದೆ. ಪುಸ್ತಕ ಪ್ರಕಟವಾದದ್ದಷ್ಟೆ ಲಾಭ.

"ಭಾಗ್ಯಲಕ್ಷ್ಮಿ" ಎಂಬ ಕಾದಂಬರಿ ೧೯೪೪ಳರಲ್ಲಿ ಪಠ್ಯಪುಸ್ತಕ ಆಗಿ, ಪಿತೃ ಋಣದಲ್ಲಿ ಅರ್ಧದಷ್ಟನ್ನು ತೀರಿಸಲು ನೆರವಾಯಿತು. ಇದಕ್ಕಿಂತ ಹೆಚ್ಚಾಗಿ, ನನಗೆ ಸಂತೋಷ ಕೊಟ್ಟ ವಿಚಾರ, ಇಂದಿನ ಬರಹಗಾರರಲ್ಲಿ ಹಲಕೆಲವರು ಅದನ್ನು ಪಠ್ಯ–ಪುಸ್ತಕವಾಗಿ ಓದಿ, ಮೆಚ್ಚಿಕೊಂಡಿದ್ದಾರೆ; ಸಾಹಿತ್ಯದಲ್ಲಿ ಆಸಕ್ತಿ ತಳೆದಿದ್ದಾರೆ ಎನ್ನಬಹುದು. ಬರಹಗಾರರಲ್ಲದ ಒಬ್ಬಿಬ್ಬರು, ಬೇರೆಯ ರೀತಿಯಲ್ಲಿ ಪ್ರಭಾವಿತರಾಗಿದ್ದಾರೆ. ಕಪ್ಪು ಹೆಂಡತಿಯನ್ನು ಮದುವೆಯಾಗಿ, ಅವಳನ್ನು ತಾತ್ಸಾರದಿಂದ ಕಾಣುತ್ತಿದ್ದು, ಅಕಸ್ಮಾತ್ತಾಗಿ ಈ ಕಾದಂಬರಿಯನ್ನು ಓದಿ, ತಮ್ಮ ನಡತೆಯನ್ನು ತಿದ್ದಿಕೊಂಡವರ ನಿದರ್ಶನಗಳನ್ನು ಸಂಗತಿ ಬಲ್ಲವರು ನನಗೆ ತಿಳಿಸಿದ್ದಾರೆ. ಸಾಹಿತ್ಯ, "ಕಾಂತಾ ಸಂಮಿತ ತಯೋಪದೇಶಯುಜೇ" ಎನ್ನುವುದಕ್ಕೆ ಈ ಕೃತಿ ಒಂದು ನಿದರ್ಶನವಾಗಿ ಪರಿಣಮಿಸಿದೆ. ಎಂದರೆ, ಇದರಲ್ಲಿ ಉಪದೇಶ ಇದೆ ಎಂದಲ್ಲ, ನನಗೆ ಪ್ರಿಯವಾದ ಹಾತಾರ್ನಿನ ಕಥೆಗಳ ವಿಷಯದಲ್ಲಿ The Story is the Moral ಎಂದು ವಿಮರ್ಶಕರ ಅಭಿಪ್ರಾಯ, ನನ್ನ ಕತೆಗೂ ಇದು ಅನ್ವಯಿಸುತ್ತದೆ. ಈ ಗ್ರಂಥದ ಬಗ್ಗೆ ಇನ್ನೊಂದು ಸ್ವಾರಸ್ಯದ ಸಂಗತಿ ಉಂಟು. ಪಠ್ಯಪುಸ್ತಕ ಸಮಿತಿಯಲ್ಲಿ ಇದಕ್ಕೆ ಬಹುಮತ ಬಂದಾಗ; "ಇದು ಪಠ್ಯಪುಸ್ತಕ ಆಗಲು ಯೋಗ್ಯವಾಗಿಲ್ಲ, ಪುಸ್ತಕದಲ್ಲಿ ಅನೇಕ ಕಡೆ 'ಪ್ರಸ್ತ' ಎಂಬ ಮಾತು ಬರುತ್ತದೆ" ಎಂದು ಒಬ್ಬರು ವಿದ್ವಾಂಸರು ಆಕ್ಷೇಪವೆತ್ತಿದರು. ಆ ಆಕ್ಷೇಪ ಎತ್ತುವುದರಲ್ಲಿ ಅವರ ಉದ್ದೇಶ ಬೇರೆಯಾಗಿತ್ತು. ಅದರ ಪ್ರಸಕ್ತಿ ಇಲ್ಲಿ ಅಪ್ರಕೃತ. 'ಪ್ರಸ್ತ' ಎನ್ನುವುದನ್ನು ಮಾರ್ಪಡಿಸುವಂತೆ ನನಗೆ ಸಮಿತಿಯ ಸೂಚನೆ ಬಂತು. ಮಾರ್ಪಾಟಿನೊಡನೆ ಪಠ್ಯಪುಸ್ತಕದ ಪರಿಷ್ಕೃತ ಮುದ್ರಣ ಸಿದ್ಧವಾಯಿತು. ಇಲ್ಲಿ ಪ್ರಸಕ್ತವಾದದ್ದು ಅಶ್ಲೀಲದ ಪ್ರಶ್ನೆ. ಮಾಸ್ತಿಯವರ 'ಸುಬ್ಬಣ್ಣ' ಕಾದಂಬರಿಯಲ್ಲಿ ಕೇವಲ ಒಂದು ಮಾತು ಅಶ್ಲೀಲ ಎಂಬ ಕಾರಣದಿಂದ ಎ.ಆರ್. ಕೃಷ್ಣಶಾಸ್ತ್ರಿಗಳು ಅದನ್ನು 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟಿಸಲು ಒಪ್ಪದೆ, ಆ ಮಾತು ಸ್ವಲ್ಪ ಮಾರ್ಪಟ್ಟ ಮೇಲೆ ಪ್ರಕಟಿಸಿದ್ದು ಪ್ರಸಿದ್ಧವಾದ ಸಂಗತಿ. ನನ್ನ "ತೆರೆಮರೆಯ ಚಿತ್ರಗಳು" ನಾಟಕವನ್ನೂ ಅನೀತಿಯುತ ಎಂದು, ನನ್ನ ವಿಷಯದಲ್ಲಿ ತುಂಬ ಪ್ರೀತಿಯಿಟ್ಟಿದ್ದ ಶಾಸ್ತ್ರಿಗಳು ಪ್ರಕಟಿಸಲು ನಿರಾಕರಿಸಿದರು. ಅದು ಆಮೇಲೆ ಬೇರೆಯಾಗಿ

ಪ್ರಕಟವಾಯಿತು. ಶ್ಲೀಲ-ಅಶ್ಲೀಲದ ಪ್ರಶ್ನೆ ಎಲ್ಲ ಕಾಲದಲ್ಲೂ ಇದ್ದದ್ದೆ. ಅದರ ಇತಿ-ಮಿತಿ ಮಾತ್ರ ಕಾಲಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಏರು-ಪೇರಾಗುತ್ತ ಇರುತ್ತದೆ.

"ಭಾಗ್ಯಲಕ್ಷ್ಮಿ" ಪ್ರಕಟವಾದಾಗ, ೧೯೪೨ರಲ್ಲಿ, ನನ್ನ ವಯಸ್ಸು ೩೨. ಇದನ್ನು ಓದಿ ಮೆಚ್ಚಿಕೊಂಡ ಎಂ.ಆರ್. ಶ್ರೀನಿವಾಸಮೂರ್ತಿಯವರು, ೪೦ ವರ್ಷವಾದ ಮೇಲೆ ಕಾದಂಬರಿ ಬರೆಯಬೇಕು. ಆ ವೇಳೆಗೆ ಲೋಕಾನುಭವ ಸಮೃದ್ಧ ವಾಗಿರುತ್ತದೆ, ಎಂದು ಸಲಹೆ ಮಾಡಿದರು. "ಮಾದನ ಮಗಳು" ಕಾದಂಬರಿಯನ್ನು ಬರೆಯತೊಡಗಿದ್ದವನು, ನಿಲ್ಲಿಸಿಬಿಟ್ಟೆ; ನಿಲ್ಲಿಸಲು ಬೇರೆಯ ಕಾರಣವೂ ಇತ್ತು. ಹಾಗೆ ಮಾಡಿದ್ದು ಒಳ್ಳೆಯದೂ ಆಯಿತು. ಮೂರ್ತಿಯವರ ಸಲಹೆಯಲ್ಲಿ ನಿಜಾಂಶ ಇದೆಯೆಂದು ನನಗೆ ತೋರಿದೆ.

ಪರಿಷತ್ತು ಮತ್ತು ನಿಘಂಟು ಕಚೇರಿಗಳಲ್ಲಿ ಕೆಲಸ ಮಾಡುತ್ತ, ಲೇಖನ ಕಾರ್ಯಕ್ಕೆ ಬಿಡುವು ಸಿಕ್ಕುತ್ತಿರಲಿಲ್ಲ. ಇದರಿಂದಾಗಿ, ನಿದ್ದೆಗೆಟ್ಟು ಬರವಣಿಗೆಯ ಕೆಲಸ ಮಾಡುತ್ತಿದ್ದೆ. ಕಷ್ಟ, ಕಾರ್ಪಣ್ಯ, ಸಾವು, ನೋವು, ಮೈಮೇಲೆ, ಮನಸ್ಸಿನ ಮೇಲೆ ಅಗುತುಕೊಂಡವು. ೧೯೪೬ರ ವೇಳೆಗೆ ನಿಘಂಟುವಿನ ಕಚೇರಿಯ ಕೆಲಸ ಮುಗಿದು, ಕಾಲೇಜಿನ ಅಧ್ಯಾಪಕನಾಗಿ ವರ್ಗ ಪಡೆದಿದ್ದೆ.೧೯೪೭ರಲ್ಲಿ ಸ್ವಾತಂತ್ರ್ಯ ಬಂತು. ೧೯೪೮ರಲ್ಲಿ ಮಹಾತ್ಮರ ಕೊಲೆಯಾಯಿತು; ಇದು ಕೂಡ ಮಾನಸಿಕವಾಗಿ ಯಾತನೆ ತಂದಿತು. ಇಲ್ಲಿಂದ ಮುಂದೆ, ನನ್ನ ಬರಹಗಳಲ್ಲಿ, ರಾಷ್ಟ್ರೀಯ ಭಾವನೆ ಪ್ರಭಾವ ಬೀರತೊಡಗಿತು. "ಅಶೋಕ ಚಕ್ರ" ಪ್ರಕಟವಾದದ್ದು ಆಗ. ನನ್ನ ಆರೋಗ್ಯ ಕುಸಿದದ್ದು ಆಗಲೇ. ಈಚೆಗೆ, ನನ್ನ ಮಿತ್ರರೊಬ್ಬರು ನನಗೆ "The Sick Man of Karnataka" ಎಂಬ ಪ್ರಶಸ್ತಿಯನ್ನು ನೀಡಿದ್ದಾರೆ; ಹಾಸ್ಯಕ್ಕಾಗಿ ಅಲ್ಲ; ತುಂಬ ಅಭಿಮಾನದಿಂದ. ನನ್ನ ಹರೆಯದ ಪರ್ವ ಮುಗಿಯಿತು. ಅಕಾಲಿಕ ಮುಪ್ಪು ದೇಹವನ್ನು ಅಡರಿತು. ಆದರೆ, ಮನಸ್ಸಿಗೆ, ಚೈತನ್ಯಕ್ಕೆ, ಮುಪ್ಪು ಬರಲಿಲ್ಲ. ಇದು ದೇವರ ಕೃಪೆ.

ಪೂರ್ಣ ತೃಪ್ತಿಯನ್ನು ಕೊಟ್ಟ ನನ್ನ ಕೃತಿ

ಯಾರಾದರೂ "ನಿಮಗೆ ಪೂರ್ಣ ತೃಪ್ತಿ ಕೊಟ್ಟ ಕೃತಿ ಯಾವುದು?" ಎಂದು ಕೇಳಿದರೆ, ಉತ್ತರ ಹೇಳುವುದು ಕಷ್ಟವಾಗುತ್ತದೆ. ಮೊದಲನೆಯದಾಗಿ, "ಪೂರ್ಣ ತೃಪ್ತಿ" ಎನ್ನುವ ಸಮಸ್ತ ಪದ ವಿಚಾರಣೀಯವಾಗಿ ಕಾಣುತ್ತದೆ. "ತೃಪ್ತಿ" ಎನ್ನುವ ಮಾತಿನಲ್ಲಿಯೇ ಪೂರ್ಣತೆಯ ಭಾವ ಅಡಗಿದೆ ಎಂದಮೇಲೆ,

ಪೂರ್ಣತೃಪ್ತಿ– ಎಂದರೇನು? ತೃಪ್ತಿಯಾಗಿ ಊಟ ಮಾಡಿದೆ ಎಂದರೆ, ಮಾಡಿದ ಊಟ ರುಚಿಸಿದ್ದು ಮಾತ್ರವಲ್ಲ, ಹೊಟ್ಟೆ ತುಂಬಿತು ಎಂದೂ ಅರ್ಥ. ಇದು ಊಟ ಮಾಡುವವನ ದೃಷ್ಟಿಯಿಂದ ಹೇಳಿದ ಮಾತು. ಅಡಿಗೆ ಮಾಡಿದವನ ದೃಷ್ಟಿಯಿಂದ, ಮಾಡಿದ ಅಡಿಗೆ ಕೆಲವರಿಗೆ ರುಚಿಸಿ, ಇನ್ನು ಕೆಲವರಿಗೆ ರುಚಿಸದೆ ಹೋಗಬಹುದು. ಅಡಿಗೆ ಮಾಡುವವನು ಪಾಕಪಂಡಿತನಾದ್ದರಿಂದ, ರುಚಿ ಬಲ್ಲವನಾದ್ದರಿಂದ, ತನ್ನ ರುಚಿ ಭೋಜಕರ ರುಚಿ ಎರಡನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಅಡಿಗೆಯನ್ನು ಸಿದ್ಧ ಮಾಡುತ್ತಾನೆ. ತಾನು ಊಟ ಮಾಡಿದಾಗ ತನಗೇ ರುಚಿಸದ ಭೋಜನವನ್ನು ಇತರರು ಹೊಗಳಿದರೆ, ಅವರ ರುಚಿ ಕೆಟ್ಟಿರಬೇಕು, ಇಲ್ಲವೆ ತಮಗೆ ತೃಪ್ತಿಯಾಗದಿದ್ದರೂ ಉಪಚಾರಕ್ಕೆ ಮುಖಸ್ತುತಿ ಮಾಡಿರಬೇಕು. ಸಾಹಿತ್ಯದ ಕೃತಿಯ ವಿಷಯದಲ್ಲಿಯೂ ಈ ಎಲ್ಲ ಸಾಧ್ಯತೆಗಳೂ ಉಂಟು. "ಲೋಕೋ ಭಿನ್ನ ರುಚಿಃ" ಎಂಬ ಮಾತು ಇದೆಯಷ್ಟೆ. ಹಲವು ರುಚಿಗಳಿಗೆ ಪ್ರಿಯವಾಗುವಂತೆ ಅಡಿಗೆ ಮಾಡುವುದು ಎಷ್ಟು ಕಷ್ಟವೋ ಸಾಹಿತ್ಯ ಕೃತಿ ರಚಿಸುವುದೂ ಅಷ್ಟೇ ಕಷ್ಟ; ಹಾಗೆ ಮಾಡಬೇಕಾದದ್ದೂ ಇಲ್ಲ. "ನಮ್ಮಮ್ಮನ ಹಾಗೆ, ನಿನಗೆ ಅಡಿಗೆ ಮಾಡುವುದಕ್ಕೆ ಬರುವುದಿಲ್ಲ" ಎಂದು ಹೊಸದಾಗಿ ಮನೆಗೆ ಬಂದ ಹೆಂಡತಿಗೆ ಗಂಡ ಹೇಳುವುದು ಸಾಮಾನ್ಯ. ಅತ್ತೆಯ ಕೈಕೆಳಗೆ ನುರುಗಿದ ಮೇಲೆ ಸೊಸೆ, ಅಮ್ಮನ ಹಾಗೆ ಏಕೆ, ಅಮ್ಮನ ಅಮ್ಮನ ಹಾಗೂ ಮಾಡಬಲ್ಲಳು. ಆಗ ಗಂಡ, "ಅಮ್ಮನ ಕೈಲಾಗುವುದಿಲ್ಲ, ಇನ್ನು ಮೇಲೆ ನೀನೆ ಅಡಿಗೆ ಮಾಡು" ಎಂದು ಸೂಚ್ಯವಾಗಿ, ಹೆಂಡತಿಯ ಅಡಿಗೆಯ ಕಡೆಗೆ ಒಲಿಯುತ್ತಾನೆ. ಮೊದಲು, ಕೆಲವು ಕಾಲ ಬರಹಗಾರನ ಕೃತಿಗಳು ಬಾಲಿಶ, ಅಪಕ್ವ ಆಗಿರಬಹುದು. ಕೈಕುದುರಿದ ಮೇಲೆ, ನಿಜವಾದ ಬರಹಗಾರ ತನ್ನ ರುಚಿ ಸಿದ್ಧಿಯಲ್ಲಿ ನಂಬಿಕೆ ಉಳ್ಳವನಾಗುತ್ತಾನೆ. ಆತ್ಮವಿಶ್ವಾಸದಿಂದ ಬರೆಯುತ್ತಾನೆ. ತನಗೇ ತೃಪ್ತಿ ಕೊಡದ ಕೃತಿಯನ್ನು ಅವನು ಎಂದಿಗೂ ಪ್ರಕಟಿಸುವುದಿಲ್ಲ. ಇಂಥ ಬರಹಗಾರನ ಬರಹ ಬರೆವಾಗಲೂ, ಬರೆದ ಮೇಲೂ ಅವನಿಗೆ ತೃಪ್ತಿ ಕೊಡುತ್ತದೆ. ಈ ದೃಷ್ಟಿಯಿಂದ, ನಾನು ಬರೆದ ಪದ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಇವುಗಳಲ್ಲಿ ಬಹುಪಾಲಿನವು ನನಗೆ ತೃಪ್ತಿ ಕೊಟ್ಟಿವೆ. ಒಂದು ನಿರ್ದಿಷ್ಟ ಶ್ರೋತೃ ವರ್ಗವನ್ನು ಗಮನದಲ್ಲಿರಿಸಿಕೊಂಡೋ, ಇಲ್ಲವೆ, ಒಂದು ಶ್ರೋತೃವರ್ಗವನ್ನು ಕಲ್ಪಿಸಿಕೊಂಡೋ ನಾನು ಎಂದೂ ಬರೆದಿಲ್ಲ. ಎಲ್ಲರಿಗೂ ಅರ್ಥವಾಗಬೇಕು ಎಂದು ಉದ್ದೇಶಪೂರ್ವಕವಾಗಿ ಸರಳವಾದ ಭಾಷೆಯನ್ನು ಬಳಸಹೋಗಿಲ್ಲ; ಹಾಗೆಯೇ ಪಾಂಡಿತ್ಯ ಪ್ರದರ್ಶನಕ್ಕಾಗಿ ಪ್ರೌಢವಾಗಿಯೂ ಬರೆಯಹೋಗಿಲ್ಲ. ಅಪವಾದಗಳು ಇಲ್ಲವೆಂದಲ್ಲ. ಒಂದುಕಡೆ,

ಕಸರತ್ತು ಮಾಡುವುದಕ್ಕಾಗಿ, ಬಿ.ಎಂ.ಶ್ರೀಯವರಂತೆ ಪುಟತುಂಬ ಒಂದೇ ವಾಕ್ಯ ಬರೆದಿದ್ದೇನೆ; ನಾನೂ, ಸ್ವಲ್ಪ ಸಂಸ್ಕೃತ ಬಲ್ಲೆ ಎಂದು ತೋರಿಸಿಕೊಳ್ಳಲು ಒಂದೆರಡು ಪದ್ಯಗಳನ್ನು ಸಂಸ್ಕೃತ ಭೂಯಿಷ್ಠವಾಗಿ ಬರೆದಿದ್ದೇನೆ. ಕಥೆ ಕಾದಂಬರಿಗಳಲ್ಲಂತೂ, "ತಲೆಗೆಲ್ಲಾ ಒಂದೇ ಮಂತ್ರ" ಎನ್ನುವಂತೆ, ಏಕಶ್ರುತಿಯ, ಒಂದೇ ಬಗೆಯ ಶೈಲಿಯಲ್ಲಿ ಬರೆಯುವ ರೀತಿ, ನನಗೆ ಒಪ್ಪಿತವಿಲ್ಲ. ಶೈಲಿಯ ವಿಚಾರದಲ್ಲಿ ನಾನು ಯಾವ ಪೂರ್ವಗ್ರಹಿಕೆಯಿಂದಲೂ ಬರೆಯಹೊರಡುವುದಿಲ್ಲ. ನನ್ನ ಕೃತಿಯ ವಸ್ತು ಅಥವಾ ವಿಷಯ ತನ್ನ ಶೈಲಿಯನ್ನು ತಾನೇ ಗೊತ್ತು ಮಾಡಿಕೊಳ್ಳುತ್ತದೆ. ಸೃಜನಶೀಲ ಕೃತಿಗಳ ಬಗೆಗೆ ಮಾತ್ರ ಈ ಮಾತು. ಹತ್ತು ಸಂಪುಟಗಳ "ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ"ಗೆಂದು ನಾನು ಬರೆದ "ಶಾಸ್ತ್ರಸಾಹಿತ್ಯ" ಸಂಪುಟವನ್ನು ಉದ್ದೇಶಪೂರ್ವಕವಾಗಿ ಕೂಡಿದ ಮಟ್ಟಿಗೂ, ಸರಳವಾದ ಭಾಷೆಯಲ್ಲಿ ಬರೆದಿದ್ದೇನೆ. ಈ ಜಾತಿಯ ಗ್ರಂಥರಚನೆಯಲ್ಲಿ ಈ ದೃಷ್ಟಿ ಇರಬೇಕು; ಈ ಗ್ರಂಥ ನನಗೆ "ಪೂರ್ಣ ತೃಪ್ತಿ"ಯನ್ನು ಕೊಟ್ಟಿದೆ ಎಂದು ಮೊದಲಿಗೇ ಹೇಳಿಬಿಡುತ್ತೇನೆ.

ತೃಪ್ತಿಯ ವಿಚಾರ ಹೇಳಿದೆ. ಈಗ ಪೂರ್ಣತೃಪ್ತಿಯ ವಿಚಾರಕ್ಕೆ ಬರುತ್ತೇನೆ. ನಾನು ಈ ಮೊದಲೇ ಹೇಳಿದಂತೆ ನಿಜವಾದ ಬರಹಗಾರನ ಕೃತಿ ಅವನಿಗೆ ತೃಪ್ತಿ ಕೊಟ್ಟೇ ಕೊಡುತ್ತದೆ. ಏಕೆಂದರೆ ಅವನು ಬರೆಯುವುದೇ ಆತ್ಮಸಂತೋಷಕ್ಕಾಗಿ, ಆತ್ಮತೃಪ್ತಿಗಾಗಿ. ಈ ತೃಪ್ತಿಯೇ ಲಾಕ್ಷಣಿಕರು ಹೇಳುವ "ಸದ್ಯಃ ಪರನಿರ್ವೃತ್ತಿ", ಅಥವಾ "ತತ್ಕಾಲದ ಪರಮಾನಂದ", divine bliss here and now. ಕೃತಿ ರಚನೆ ಮಾಡುವಾಗ, ಮಾಡಿದ ಕೂಡಲೆ, ದೊರಕುವ ಸಂತೃಪ್ತಿ ಇದೆಯಲ್ಲ, ಇದನ್ನು "ಪೂರ್ಣತೃಪ್ತಿ" ಎಂದು ಕರೆಯಬಹುದು. ನಾನು ರಚಿಸಿರುವ ಎಲ್ಲ ಕೃತಿಗಳೂ ಅಲ್ಲದಿದ್ದರೂ, ಹಲವು ಈ ತೃಪ್ತಿಯನ್ನು ಕೊಟ್ಟಿರುವುದರಿಂದ, ಯಾವ ಒಂದು ಕೃತಿಯನ್ನು ಮಾತ್ರ ಪೂರ್ಣತೃಪ್ತಿಯನ್ನು ಕೊಟ್ಟದ್ದು ಎಂದು ಹೇಳುವುದು ಕಷ್ಟವಾಗುತ್ತದೆ.

ಪೂರ್ಣತೃಪ್ತಿಗೆ ಮುಖ್ಯವಾದ ಇನ್ನೊಂದು ಮುಖವುಂಟು. ಅಡಿಗೆಯ ದುಷ್ಟಾಂತವನ್ನು ಮತ್ತೆ ಪ್ರಸ್ತಾಪಿಸಬಹುದಾದರೆ, ಮನೆಯಾಕೆ ಮಾಡಿದ ಅಡಿಗೆ ಸಾರ್ಥಕವಾಗುವುದು, ಮನೆಯವರೆಲ್ಲ ಉಂಡು "ಚೆನ್ನಾಗಿದೆ" ಎಂದು ಬಾಯಿ ಚಪ್ಪರಿಸಿದಾಗ. ಆಗ ಮನೆಯಾಕೆಯ ಮುಖ ಹಪ್ಪಳ ಅರಳಿದ ಹಾಗೆ ಅರಳುತ್ತದೆ. Proof of the Pudding is in the eating. ಕಡಬು ಚೆನ್ನಾಗಿದೆ ಎಂದು ಮಾಡಿದವರೇ ಹೇಳಿದರೆ ಏನು ಸಾರ್ಥಕ್ಯ? ತಿಂದವರು ಹಾಗೆ ಹೇಳಬೇಕು. ಕವಿ ತಾನು ಬರೆದ ತೃಪ್ತಿ ಪಡೆದಮೇಲೆ ಸಹೃದಯರು ಓದಿ ತೃಪ್ತಿ ಪಡಲಿ–

ಎಂದು ಬಯಸುತ್ತಾನೆ. "ಕಟ್ಟಿಯುಮೇನೊ ಮಾಲೆಗಾರನ ಪೊಸ ಬಾಸಿಗಂ, ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ?" ಎಂಬ ಜನ್ನನ ಮಾತು ಈ ಅಭಿಪ್ರಾಯವನ್ನು ಬಹು ಮನೋಜ್ಞವಾಗಿ ತಿಳಿಸಿದೆ. ಕಾವ್ಯದ ಹುಟ್ಟು ಕವಿಯ ಪ್ರತಿಭೆಯಲ್ಲಿ; ಅದರ ನೆಲಸು ಸಹೃದಯನ ಹೃದಯದಲ್ಲಿ. "ಸರಸ್ವತ್ಯಾಸ್ತತ್ವಂ ಕವಿ ಸಹೃದಯಾಖ್ಯಂ ವಿಜಯತೇ", ಸರಸ್ವತೀತತ್ವವು ಕವಿ–ಸಹೃದಯರಿಬ್ಬರನ್ನು ಅವಲಂಬಿಸಿರತಕ್ಕದ್ದು; ಅವರ ಅನ್ಯೋನ್ಯಾಶ್ರಯದಲ್ಲೆ ಕಾವ್ಯದ ಗೆಲುವಿನ ಗುಟ್ಟು. ಈ ವಿಜಯಸಿದ್ಧಿಯೇ ನಿಜವಾದ ಯಶಸ್ಸು. ಕವಿ ಯಶಃ ಪ್ರಾರ್ಥೀ; ಯಶಸ್ಸನ್ನು ಬಯಸತಕ್ಕವನು. ತನ್ನ ಕೃತಿಯಿಂದ ಯಶಸ್ಸು ದೊರಕಿದಾಗಲೇ, ಎಂದರೆ, ತಾನು ಬದುಕಿರುವಾಗ, ತಡವಾಗಿಯಾದರೂ, ಸಹೃದಯರು– ಇವರ ಸಂಖ್ಯೆ ಅಪಾರವಾಗಿರಬೇಕಿಲ್ಲ– ಪರಿಮಿತ ಸಂಖ್ಯೆಯ ಸಹೃದಯರು ಅಯಾಚಿತವಾಗಿ ತಮ್ಮ ಮೆಚ್ಚುಗೆಯನ್ನು ತಿಳಿಸಿದಾಗಲೇ ಕವಿಗೆ ಪೂರ್ಣ ತೃಪ್ತಿ. ಹೆಚ್ಚು ಕಡಿಮೆ ಜನ್ನನ ಮಾತನ್ನು ಹೋಲುವ ಗಯಟೆ ಕವಿಯ ಮಾತನ್ನು ಇಲ್ಲಿ ಸ್ಮರಿಸುವುದು ಸೂಕ್ತ: ಮಾಲೆಯನು ಕಷ್ಟಪಟ್ಟ ಗ್ರಂಥರಚನೆ ಮಾಡಬಹುದು ; ಕಷ್ಟ ಏಕೆಂದರೆ ಗ್ರಂಥರಚನೆ ಮಾಲೆಕಟ್ಟುವಷ್ಟು ಸುಲಭವಲ್ಲ ಬಲು ಸುಲಭವಹುದು; ಬಲು ಕಷ್ಟ ಮುಡಿವುದಕೆ ತಕ್ಕವರನರಸುವುದು! ಇಂಗ್ಲಿಷಿನಲ್ಲಿ ವಾಡಿಕೆಯಾಗಿ ಹೇಳುವಂತೆ, ಗ್ರಂಥರಚನೆಯಲ್ಲಿ Inspiration ಸ್ಫೂರ್ತಿ ಒಂದು ಪಾಲಾದರೆ, perspiration ಬೆವರು ಸುರಿಸುವುದು, ಕೆಲವು ವೇಳೆ ರಕ್ತ ಬಸಿಯುವುದೂ ಆಗಬಹುದು– ಇದು ಹತ್ತು ಪಾಲು. ನಮ್ಮ ಲಾಕ್ಷಣಿಕರು ಗ್ರಂಥರಚನೆಯ ಸಂಕಷ್ಟವನ್ನು ಪ್ರಸವವೇದನೆಗೆ ಹೋಲಿಸಿದ್ದಾರೆ. ಗ್ರಂಥ ರಚನೆಯಾದ ಮೇಲೆ ಆತ್ಮತೃಪ್ತಿಯಾದರೂ, ಸಹೃದಯರ ಮೆಚ್ಚುಗೆಯ ಪೂರ್ಣತೃಪ್ತಿ ದೊರಕಲು ಬಹು ಕಾಲ ಕಾಯಬೇಕು. ಇದು ಅಚ್ಚಿನ ಯುಗ. ಬರೆದ ಗ್ರಂಥ ಅಚ್ಚಿನಮನೆ ಕಾಣಬೇಕಾದರೆ ಅಶ್ವಮೇಧಯಾಗ ಮಾಡಿದ ಹಾಗೆ. ಅಚ್ಚಾಗದೆ ಜನ ಓದುವಂತಿಲ್ಲ; ಓದುಗರು ದೊರೆಯದೆ, ಸಹೃದಯರು ದೊರೆಯುವಂತಿಲ್ಲ. ಒಂದು ಗ್ರಂಥ ರಚಿತವಾಗುವ ಕಾಲಕ್ಕೂ, ಅಚ್ಚಾಗುವ ಕಾಲಕ್ಕೂ, ಅಚ್ಚಾಗಿ ಅದರ ವಿಮರ್ಶೆಗಳು ಹೊರಬರುವ ಕಾಲಕ್ಕೂ ನಡುನಡುವೆ ವರ್ಷಗಳ ಅಂತರ ಕಾಣಿಸಿಕೊಂಡು, ಸಹೃದಯರ ಮೆಚ್ಚುಗೆಯನ್ನು ತಿಳಿಯಲು ಗ್ರಂಥಕರ್ತ ವರ್ಷಗಟ್ಟಲೆ ಕಾಯ ಬೇಕಾಗುತ್ತದೆ. ಗ್ರಂಥ ಅಚ್ಚಾಗಿ ಬಂದ ಕೂಡಲೇ, ನೂರು ಪ್ರತಿಗಳನ್ನು ಗೌರವಾರ್ಥ ಗುರುಹಿರಿಯ ಮಿತ್ರವರ್ಗಕ್ಕೆ ಕಳಿಸಿಕೊಟ್ಟರೆ, ಮೂರು ಮೆಚ್ಚುಗೆಯ ಪತ್ರ ಬಂದರೆ ಹೆಚ್ಚು. ಆದರೂ ಈ ಮೂರು ಮೆಚ್ಚುಗೆಯ ಪತ್ರ ಸ್ವತಃ ಬರಹಗಾರೂ, ಸಹೃದಯರೂ ಆದವರಿಂದ

ಬಂದಾಗ, ಅವು ನೂರು ಪತ್ರಕ್ಕೆ ಸಮನಾಗುತ್ತವೆ. ಸಹೃದಯರಾದ ವಿಮರ್ಶಕರ ಮೆಚ್ಚುಗೆಯ ಮಾತೂ ಒಡಗೂಡಿದಾಗ ಕೃತಿಕಾರನಿಗೆ ಪೂರ್ಣತೃಪ್ತಿ ಲಭಿಸುತ್ತದೆ. ಈ ಬಗೆಯ ಪೂರ್ಣತೃಪ್ತಿ ನನ್ನ "ಮುಗಿಯದ ಮಾಯೆ" ಎಂಬ ಕವನ ಸಂಕಲನ, "ಮುಗಿಲುಗಳು" ಎಂಬ ಪ್ರಬಂಧ ಸಂಕಲನ, "ಜೀವನ ನಾಟಕ" ಎಂಬ ವ್ಯಕ್ತಿ ಚಿತ್ರಗಳ ಸಂಕಲನಗಳ ಬಗೆಗೆ ಉಂಟಾಗಿದೆ. ನಾನು ಸಂಪಾದನೆ ಮಾಡಿರುವ "ಕವಿರಾಜ ಮಾರ್ಗ", "ಉದಯಾದಿತ್ಯಾಲಂಕಾರ" ಮತ್ತು "ಅರ್ಚನ" ಎಂಬ ಗ್ರಂಥಗಳ ಬಗೆಗೂ ಪೂರ್ಣತೃಪ್ತಿ ದೊರಕಿದೆ. ಈಗ ಹೆಸರಿಸಿದ ಗ್ರಂಥಗಳ ವಿಷಯವಾಗಿ ಸಹೃದಯರಾದ ಹಿರಿಯ ಮಿತ್ರರೂ, ಗುರು ವರ್ಗದವರೂ, ಗುರು ಸ್ಥಾನೀಯರೂ, ಇತರ ಸನ್ಮಿತ್ರರೂ ಬರೆದ ಪತ್ರಗಳಿಂದ ಕೆಲವು ಮೆಚ್ಚುಗೆಯ ಮಾತುಗಳನ್ನು ಇಲ್ಲಿ ಎತ್ತಿ ಹೇಳಬಹುದು. ಆದರೆ ಇತರರು ಹೇಳಿರುವ ಮಾತುಗಳೇ ಆದರೂ, ನನ್ನ ಬಾಯಿಂದ ಬಂದರೆ ಸ್ವಪ್ರಶಂಸೆಯಾಗಬಹುದು- ಎಂಬ ಭಯದಿಂದ ಸುಮ್ಮನಿರಬೇಕಾಗಿದೆ.

ಪ್ರಕಟವಾದ ನನ್ನ ಎಲ್ಲ ಗ್ರಂಥಗಳ ಬಗೆಗೂ ಪತ್ರಿಕೆಗಳಲ್ಲಿ ವಿಮರ್ಶೆಗಳು ಪ್ರಕಟವಾಗಿವೆ. ಅವುಗಳನ್ನು ವಿಮರ್ಶೆ ಎನ್ನುವುದಕ್ಕಿಂತಲೂ ಅಭಿಪ್ರಾಯಗಳು ಎಂದರೆ ಸರಿಯಾದೀತೇನೋ. ಪತ್ರಿಕೆಗಳಲ್ಲಿ ಒಂದೇ ಬಗೆಯ ಸದಭಿಪ್ರಾಯಗಳನ್ನು ಒಂದು ಕೃತಿಯ ಬಗೆಗೆ ಓದಿದಾಗ ಕೃತಿಕಾರನಿಗೆ ಸಂತೋಷವಾಗುತ್ತದೆ. ನನ್ನ 'ಭಾಗ್ಯಲಕ್ಷ್ಮಿ', "ಸೌಭಾಗ್ಯವತಿ", "ಮುಗಿಯದ ಮಾಯೆ", "ಮಾರ್ಗದರ್ಶಕ" ಮತ್ತು "ಬಿಸಿಲು-ಬೆಳುದಿಂಗಳು"- ಕಥಾಸಂಕಲನಗಳು, "ಜೀವನ ನಾಟಕ"- ಈ ಗ್ರಂಥಗಳ ಬಗೆಗೆ ವಿರುದ್ಧವಾದ ಅಭಿಪ್ರಾಯ ಪ್ರಕಟವಾದಂತೆ ತೋರುವುದಿಲ್ಲ. ಹೀಗಿರುವುದರಿಂದ ಈ ಅಭಿಪ್ರಾಯಗಳನ್ನು ಓದಿಕೊಂಡ ಗಳಿಗೆಯಲ್ಲಿ ಗ್ರಂಥ ಬರೆದದ್ದು ಸಾರ್ಥಕವಾಯಿತು ಎನ್ನಿಸಿದೆ.

ಎಲ್ಲ ಗ್ರಂಥಗಳ ವಿಚಾರವಾಗಿಯೂ ಈ ಮಾತು ಹೇಳಲು ಸಾಧ್ಯವಿಲ್ಲ. ಕೆಲವು ಕೃತಿಗಳ ವಿಷಯದಲ್ಲಿ ಹೊಗಳಿಕೆ-ತೆಗಳಿಕೆ ಎರಡೂ ಪ್ರಕಟವಾಗಿವೆ. ಸ್ವ ಪ್ರಚಾರ, ಸ್ವಪ್ರಶಂಸೆ, ಆಗಬಹುದೆಂಬ ಭೀತಿಯಿದ್ದರೂ, ನಾನು ಕುರಿತಿರುವ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಡುವುದು ಅನಿವಾರ್ಯವಾಗುತ್ತದೆ. ೧೯೫೦ರಲ್ಲಿ ಪ್ರಕಟವಾದ "ಮಾದನ ಮಗಳು" ಕಾದಂಬರಿಯನ್ನು ಕುರಿತು, ಒಬ್ಬ ಕಾದಂಬರಿಕಾರ-ವಿಮರ್ಶಕರು "ಪ್ರಚಾರದ ಕಾದಂಬರಿ" ಎಂದು ವಿಶ್ಲೇಷಿಸಿ ಹೇಳಿದರೆ, ಇನ್ನೊಬ್ಬರು- "ಇದು ಹರಿಜನ ಸಮಸ್ಯೆಯ ಕಾದಂಬರಿ ಎಂದು ಇದು ಪ್ರಚಾರಾತ್ಮಕ ಸಾಹಿತ್ಯ ಎಂದು ತಟ್ಟನೆ

ಕೆಲವರು ತೀರ್ಮಾನ ಮಾಡಿಬಿಡುವುದುಂಟು. ಆದರೆ, ಪ್ರಚಾರಕ್ಕಿಂತಲೂ ಕಲೆಗೇ ಇದರಲ್ಲಿ ಪ್ರಥಮ ಸ್ಥಾನವಿದೆ. ''Uncle Tom's Cabin'ದಲ್ಲಿ ಅಮೇರಿಕಾದಲ್ಲಿಯ ನೀಗ್ರೋ ಸಮಸ್ಯೆ ಇರುವಂತೆ, ಇಲ್ಲಿ ಹರಿಜನ ಸಮಸ್ಯೆ ಇದೆ. ಕಾದಂಬರಿಯ ಕಥಾವಸ್ತುವನ್ನು ನಿರೂಪಿಸಿರುವ ಕಾದಂಬರಿಕಾರರ ಕಲಾಪ್ರೌಢಿಮೆಯಿಂದಲೇ, ಕೆಲವು ಕಡೆ ನೀರಸವಾಗಿ ಬಿಡಬಹುದಾಗಿದ್ದ ಸನ್ನಿವೇಶಗಳು ಸಹ, ರಸ ಭರಿತವಾಗಿಯೇ ಉಳಿದಿವೆ. ವಸ್ತು ನಿರೂಪಣೆಗಿಂತಲೂ ನಮ್ಮ ಮನಸ್ಸನ್ನು ಸೆಳೆಯುವುದು, ಪಾತ್ರ ಪರಿಪುಷ್ಟಿ" ಎಂದು ಅಭಿಪ್ರಾಯಪಟ್ಟರು. ಮತ್ತೊಬ್ಬ ವಿಮರ್ಶಕರಿಗೆ, "ಸಮಸ್ಯೆಯನ್ನು ಅದರ ಅನೇಕ ಮುಖಗಳಲ್ಲಿ ಮಂಡಿಸುತ್ತಾರೇನೋ ಸರಿ. ಆದರೆ ಪುಸ್ತಕ ಮಾತ್ರ ಬೇಸರ ಬರಿಸುವಂತಿದೆ. ಇಡೀ ಕಾದಂಬರಿಯಲ್ಲಿ ಯಾವ ಪಾತ್ರವೂ ನಮ್ಮ ಮನಸ್ಸಿನಮೇಲೆ ವಿಶೇಷ ಪರಿಣಾಮ ಮಾಡುವುದಿಲ್ಲ'' ಎಂಬಂತೆ ಕಂಡಿತು. ವಾಸ್ತವವಾಗಿ, ಅನಾರೋಗ್ಯದಲ್ಲೂ ಸುಮಾರು ಒಂದು ತಿಂಗಳ ಅವಧಿಯಲ್ಲಿ ೪೦೦ ಪುಟಗಳ ಈ ಕಾದಂಬರಿಯನ್ನು ಮುಗಿಸಿದಾಗಲೇ ನನಗೆ ಪೂರ್ಣತೃಪ್ತಿಯಾಗಿತ್ತು. ಮಿಶ್ರಾಭಿಪ್ರಾಯಗಳನ್ನು ನೋಡಿದ ಮೇಲೆ ಪೂರ್ಣತೃಪ್ತಿಗೆ ಸ್ವಲ್ಪ ಕೊರತೆಯುಂಟಾಯಿತು. One man's meat is another man's poison. ಒಬ್ಬನಿಗೆ ಮಾವು; ಇನ್ನೊಬ್ಬನಿಗೆ ಬೇವು.

ಈ ತೃಪ್ತಿಯ ವಿಚಾರವನ್ನು ಇನ್ನೂ ಒಂದು ದೃಷ್ಟಿಯಿಂದ ಪರಿಶೀಲಿಸಬೇಕು. ಕಾಲ ಕಳೆದಂತೆ ಒಮ್ಮೆ ತೃಪ್ತಿಯನ್ನು ಕೊಟ್ಟ ಕೃತಿಯೇ, ಏನೋ ಕೊರತೆಯಿಂದ ಕೂಡಿರುವಂತೆ ಕಂಡುಬರುತ್ತದೆ. ಒಟ್ಟು ಸಾಧನೆಯಲ್ಲಿಯೇ ಏನೋ ಒಂದು ಅತೃಪ್ತಿ ಉಂಟಾಗುತ್ತದೆ. ಇನ್ನೂ ಉತ್ತಮವಾದದ್ದನ್ನು ಸೃಷ್ಟಿಸಬೇಕೆಂಬ ಮಹತ್ವಾಕಾಂಕ್ಷೆ ಬಾಧಿಸುತ್ತದೆ. ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕು. ನನಗಿಂತ ಚೆನ್ನಾಗಿ ಬರೆಯುವವರು ಹುಟ್ಟಿಕೊಂಡಿದ್ದಾರೆ. ಒಂದು ಕೋಗಿಲೆಯಿಂದ ವಸಂತವಾಗದು, "ಅಹಂ ಕರೋಮಿ ಇತಿ ವೃಥಾಭಿಮಾನಃ'' ಎಂಬ ವಿವೇಕೋದಯವಾಗಿ, ಮನಸ್ಸಿಗೆ ನೆಮ್ಮದಿಯಾಗುತ್ತದೆ.

ಇಷ್ಟು ಹೇಳಿ, ಪೂರ್ಣತೃಪ್ತಿಯನ್ನು ಕೊಟ್ಟ ಒಂದು ಕೃತಿಯನ್ನು ನಾನು ಹೆಸರಿಸಿಲ್ಲ. ನಾಲ್ಕು ಮಕ್ಕಳ ತಾಯಿಯನ್ನು, "ಯಾರಲ್ಲಿ ನಿನಗೆ ಹೆಚ್ಚು ಪ್ರೇಮ?, ಯಾರು ಪೂರ್ಣತೃಪ್ತಿಯನ್ನು ಕೊಟ್ಟಿದ್ದಾರೆ", ಎಂದು ಕೇಳಿದರೆ, ಏನು ತಾನೆ ಹೇಳಿಯಾಳು?

ಅನೇಕ ಎಡರು–ತೊಡರುಗಳನ್ನು ಎದುರಿಸಿ, ಸಾಹಿತ್ಯ ಕ್ಷೇತ್ರದಲ್ಲಿ, ನನ್ನ

ಕೈಲಾದದ್ದನ್ನು ಮಾಡಿದ್ದೇನೆ, ಮಾಡುತ್ತಿದ್ದೇನೆ. ಬರಹ ಹೇಗಾದರೂ ಇರಲಿ, ಎಲ್ಲ ಬಗೆಯ ಬರಹವನ್ನು ಬರೆಯುತ್ತಿರುವುದರಲ್ಲೇನೆ ನನಗೆ ಪೂರ್ಣತೃಪ್ತಿ. ಇಹ ಸಂಸಾರದ ತಾಪತ್ರಯವನ್ನು ನೀಗಿ ಆತ್ಮಸಂಸ್ಕಾರಕ್ಕೆ ಸಾಧಕವಾಗುವ ಸಂಜೀವಿನಿ ಸಾಹಿತ್ಯ ಓದುಗ, ಕೃತಿಕಾರ, ಇಬ್ಬರಿಗೂ ಅನ್ವಯಿಸುವ ಮಾತು ಇದು. ಅರ್ಧ ಶತಮಾನ ಕಾಲ ಈ ಸಂಜೀವಿನಿಯನ್ನು ಸೇವಿಸಿರುವ ನಾನು "ಧನ್ಯೋಽಸ್ಮಿ" ಎಂದು ನಮ್ರತೆಯಿಂದ ಹೇಳುತ್ತೇನೆ.

* * * *

ವಿದ್ಯಾರ್ಥಿಯಾಗಿ ನಾನು ಕಂಡಂತೆ

ಭೈರವನ ಜವನ ಮಾರಿಯ
ಮೂರಿಯವೊಲ್‌ನಿಂದ ಮಾರಿದತ್ತಂ ಲಲಿತಾ
ಕಾರರ ಧೀರರ ಬಂದ ಕು
ಮಾರರ ರೂಪಿಂಗೆ ಠಕ್ಕುಗೊಂಡಂತಿರ್ದಂ

ಮೈಸೂರು ಮಹಾರಾಜರವರ ಕಾಲೇಜಿನ ಜೂನಿಯರ್ ಬಿ.ಎ. ತರಗತಿಯ ಗ್ಯಾಲರಿ ಸಭಾಂಗಣದಲ್ಲಿ ಕರ್ಣಾಟಕ ಸಂಘದ ಆಶ್ರಯದಲ್ಲಿ ಒಂದು ಅಪೂರ್ವವಾದ ಸಭೆ. ವಿದ್ಯಾರ್ಥಿಗಳು ಕಿಕ್ಕಿರಿದು ನೆರೆದಿದ್ದಾರೆ. ಕನ್ನಡದ ವಿದ್ಯಾರ್ಥಿಗಳಲ್ಲದೆ ಇತರ ಭಾಷೆ, ವಿಷಯಗಳ ವಿದ್ಯಾರ್ಥಿಗಳ ಸಹ ಕರ್ಣಾಟಕ ಸಂಘದ ವಿದ್ಯಾರ್ಥಿ ಸದಸ್ಯರಂತೂ ಇದ್ದೇ ಇದ್ದರು. ಮುಂಮುಂದಿನ ಕುರ್ಚಿ ಸಾಲಿನಲ್ಲಿ ಪ್ರೊ. ವೆಂಕಣ್ಣಯ್ಯ, ತೀ.ನಂ.ಶ್ರೀ, ಡಿ.ಎಲ್.ಎನ್. ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಇನ್ನೂ ಕೆಲವರು ಅಧ್ಯಾಪಕರು ಯಾರು ಯಾರು, ಸರಿಯಾಗಿ ನೆನಪಿಲ್ಲ. ಅಂದಿನ ಕಾರ್ಯಕ್ರಮದ ವಿಶೇಷ ಆಕರ್ಷಣೆಗೆ ಪ್ರೇರಕಶಕ್ತಿ ಬಿ.ಎಂ.ಶ್ರೀ ಎಂದು ಬೇರೆ ಹೇಳುವ ಕಾರಣವೇ ಇಲ್ಲ; ಹಾಗೂ ಅವರು ವಾಚನ ಮಾಡುವರು ಎಂದು ಪ್ರಕಟವಾಗಿದ್ದ ಕೃತಿಯ ಅಪೂರ್ವತೆ. ಆ ಕೃತಿ, ಜನ್ನನ 'ಯಶೋಧರ ಚರಿತೆ' ಈ ಅಪೂರ್ವ ಕೃತಿ ಎಂ.ಎ. ರಾಮಾನುಜ ಅಯ್ಯಂಗಾರರ ಕರ್ಣಾಟಕ ಕಾವ್ಯ ಕಲಾನಿಧಿ ಗ್ರಂಥಮಾಲೆಯಲ್ಲಿ ಪ್ರಕಟವಾಗಿದ್ದರೂ ಸಾಹಿತ್ಯ ಚರಿತ್ರೆಯ ಮಾತು ಹಾಗಿರಲಿ, ಆರ್. ನರಸಿಂಹಾಚಾರ್ಯರ ಕವಿಚರಿತ್ರೆಯ ಹಾಳೆಗಳನ್ನೂ ತಿರುವಿಹಾಕಿರಲಿಲ್ಲ. ಪಂಪ ರನ್ನ ಕುಮಾರವ್ಯಾಸ ಲಕ್ಷ್ಮೀಶರಂತಹ ಪ್ರಸಿದ್ಧ ಕವಿಗಳ ಹೆಸರುಗಳನ್ನು ಕೇಳಿದ್ದೆವೇ ಹೊರತು ಯಶೋಧರ ಚರಿತೆಯ ಕರ್ತೃ ಜನ್ನನ ಹೆಸರನ್ನು ಕೇಳಿಕೂಡ ಅರಿಯೆವು. ಅಷ್ಟು ಪರಿಚಿತವಲ್ಲದ ಕೃತಿಯನ್ನು ವಾಚನಕ್ಕಾಗಿ ಬಿ.ಎಂ.ಶ್ರೀ ಆರಿಸಿಕೊಳ್ಳಬೇಕಿದ್ದರೆ ಅದರಲ್ಲಿ ವಿಶೇಷ ಮಹತ್ವ ಇರಲೇಬೇಕು ಎಂದು ನಮ್ಮ ಸಕಾರಣವಾದ ಕಲ್ಪನೆ.

ಈಚಿನ ದಿನಗಳಲ್ಲಿ ಜನ್ನನ ಯಶೋಧರ ಚರಿತೆಯ ಸಂಗ್ರಹ ಕಾವ್ಯಪ್ರೇಮಿಗಳಿಗೆ ಅತ್ಯಂತ ಪ್ರಿಯವಾದ ಕಾವ್ಯವಾಗಿ ಪರಿಣಮಿಸಿದೆ. ಇದರ

ಶ್ರೇಯಸ್ಸು ಶ್ರೀ ಅವರಿಗೆ ಸಲ್ಲಬೇಕು. ಶ್ರೀಯವರು ಕೃತಿಯ ಕಾವ್ಯಗುಣವನ್ನೂ, ನಾಟಕೀಯತೆಯನ್ನೂ ಗುರುತಿಸಿ, ತಾವು ಸವಿದ ಕಾವ್ಯರಸವನ್ನು ಇತರರೊಂದಿಗೆ ಹಂಚಿಕೊಂಡಲ್ಲದೆ ಅವರಿಗೆ ಸಮಾಧಾನವಾಗುತ್ತಿರಲಿಲ್ಲ ಎಂದು ಕಾಣುತ್ತದೆ. ಹಳಗನ್ನಡ ಕಾವ್ಯಗಳ ರಸವತ್ತಾದ ಭಾಗಗಳನ್ನು ಸಹೃದಯರೊಂದಿಗೆ ಹಂಚಿಕೊಳ್ಳುವ ಉದ್ದೇಶದಿಂದ ಕಾವ್ಯವಾಚನ ಮಾಡುವುದನ್ನು ತಮ್ಮ ಬದುಕಿನ ಒಂದು ನೋಂಪಿಯಾಗಿ ಸ್ವೀಕರಿಸಿದ್ದರು. ನಾನು ಬಲ್ಲ ಮಟ್ಟಿಗೆ, ನಾನು ಮೇಲೆ ಪ್ರಸ್ತಾಪಿಸಿದ ಕಾರ್ಯಕ್ರಮವೇ ಅವರ ಸಾರ್ವಜನಿಕ ಕಾವ್ಯವಾಚನ ಕಾರ್ಯಗಳಲ್ಲಿ ಮೊತ್ತಮೊದಲನೆಯದು. ವೇದಿಕೆಯ ಮೇಲೆ ಮುಖಾ ಮುಖಿಯಾಗಿ ಶ್ರೀಯವರನ್ನು ನಾನು ಕಂಡದ್ದು ಅದೇ ಮೊದಲ ಸಲ. ಅದಕ್ಕೂ ಮೊದಲು ನಾನು ಮೈಸೂರಿನ ಡಿ. ಬನುಮಯ್ಯನವರ ಕೊಲಿಜಿಯೆಟ್ ಹೈಸ್ಕೂಲಿನಲ್ಲಿ ಜೂನಿಯರ್ ಇಂಟರ್‌ಮಿಡಿಯೆಟ್ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ (೧೯೨೮) ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿದ್ದ ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಪಾಠ ಪ್ರವಚನದ ಪರೀಕ್ಷಕರಾಗಿ ಬಂದಿದ್ದರು. ಆಗ ನಮಗೆ ಪಾಠ ಮಾಡುತ್ತಿದ್ದವರು ಕಾನಕಾನಹಳ್ಳಿ ವರದಾಚಾರ್‍ಯರು. ಅವರು 'ಶ್ರೀ'ಯವರ ಗುರುವೂ ಆಗಿದ್ದರು ಎನ್ನುವುದು ಆ ಸಂದರ್ಭದಲ್ಲಿಯೇ ನನಗೆ ಮನವರಿಕೆಯಾದದ್ದು. ಆ ಸಂದರ್ಭದಲ್ಲಿ ಶ್ರೀಯವರು ನಡೆದುಕೊಂಡ ರೀತಿ ಅವರ ಗುರುಭಕ್ತಿಯನ್ನು ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಿತು. ಆ ಸನ್ನಿವೇಶದ ನೆನಪು ಅರ್ಧಶತಮಾನವಾದ ಮೇಲೂ ನಿನ್ನೆ ನಡೆದ ಸಂಗತಿ ಎನ್ನುವ ಹಾಗೆ ಹಚ್ಚಹಸುರಾಗಿ ಉಳಿದು ಬಂದಿದೆ. ಅದನ್ನು ತಿಳಿಸದೆ ಮುಂದುವರಿದರೆ ಈ ಸ್ಮೃತಿಚಿತ್ರ ಪರಿಪೂರ್ಣ ಎನಿಸದು.

ಪ್ರಾತಃಸ್ಮರಣೀಯರಾದ ಗುರುವರ್ಯ ಕಾನಕಾನಹಳ್ಳಿ ವರದಾಚಾರ್ಯರು ಜೈಮಿನಿ ಭಾರತದ 'ಚಂದ್ರಹಾಸನ' ಬಾಲ್ಯವನ್ನು ವರ್ಣಿಸುವ ಕಾವ್ಯ ಭಾಗವನ್ನು ಪಾಠ ಮಾಡುವುದಕ್ಕೆ ತೊಡಗಿದ್ದಾರೆ. ವರದಾಚಾರ್ಯರು ಇತರ ಅಧ್ಯಾಪಕರುಗಳಂತೆ ನಿಂತುಕೊಂಡಾಗಲಿ ಕುರ್ಚಿಯ ಮೇಲೆ ಕುಳಿತಾಗಲಿ ಪಾಠಮಾಡುವುದು ಅವರ ರೂಢಿಯಲ್ಲ. ಆಗಿನ ಕಾಲದ ಪಂಡಿತರ ವೇಷ ಎಂದರೆ, ಪಂಚೆ ಉಟ್ಟು ಶಾಲು ಹೊದೆದು, ತಲೆಗೂ ಒಂದೂ ಶಾಲನ್ನೇ ಬಿಗಿದುಕೊಳ್ಳುವುದು. ತಲೆಯ ಶಾಲು ರುಮಾಲು ಬಿಚ್ಚಿಹೋಗುವ ಪ್ರಸಂಗಗಳೂ ಇಲ್ಲದಿರುತ್ತಿರಲಿಲ್ಲ. ನಮ್ಮ ವರದಾಚಾರ್ಯರ ವೇಷ ಭೂಷಣ ಪುರಾತನ ನೂತನಗಳ ಸಂಗಮ; ಶಾಲನ್ನು ಹೊದೆಯುವ ಬದಲು ಯಾರದ್ದೋ ಯಾವುದೋ ಹಳೆಯ 'ಓಪನ್ ಕಾಲರ್'

ಅಂಗಿಯನ್ನೇ ಕಾಲರಿಗೆ ಸೇಫ್ಟಿಪಿನ್ನು ಚುಚ್ಚಿಕೊಂಡು ಮುಚ್ಚುಕಾಲರಿನ (Close-Collar) ಅಂಗಿ ಮಾಡಿಕೊಂಡು ಅದನ್ನು ನಮ್ಮ ಗುರುಗಳು ತಗುಲಿಹಾಕಿಕೊಂಡಿರುವರು. ಉಡಿಗೆ ಉತ್ತರೀಯಗಳಿಗೆ ಮೇಲು ಕೋಟೆ ಅಂಚಿನ 'ಪತ್ತಾರು'. ತಲೆಗೆ, ಯಥಾಪ್ರಕಾರ, ಜಿರಲೆತಿಂದ, ಜರಿ ಕಿತ್ತುಬಂದ, ಅಚ್ಚಗೆಂಪಿನ ಶಾಲೇ ಮುಂಡಾಸು. ತಿಂಗಳ ಮೇಲೆ ಬೆಳೆದು ಕಟಾವಾಗದೆ ನಿಂತ, ಉಪ್ಪು ಮೆಣಸು ಬೆರೆತ ಬಣ್ಣದ, ಕೆಳಮೊಗದ ಕೂದಲ ಬೆಳೆ–ಹಣೆತುಂಬ ನೋಡುವವರ ಕಣ್ಣಿಗೆ ತಾಡಿಸುವ ಊರ್ಧ್ವಪುಂಡ್ರ, ತುಂಟ ವಿದ್ಯಾರ್ಥಿಗಳ ಲೇವಡಿ ಕುಚೋದ್ಯಗಳಿಗೆ ಪಕ್ಕಾಗದ ಕನ್ನಡ ಮುನಿಷಿಗಳೇ ಆಗಿನ ದಿನಗಳಲ್ಲಿ ವಿರಳ. ಹೀಗಿರುವಲ್ಲಿ, 'ಅಣ್ಣಯ್ಯ' ಎಂಬ ಮಾತು ವರದಾಚಾರ್ಯರ ಬಾಯಿಂದ ಹೊರಬೀಳುವುದೇ ತಡ, ತುಂಟ ಪ್ರಶ್ನೆ ಕೇಳಲು ಎದ್ದು ನಿಂತ ತುಂಟ ಪೋರ ಯಾವನೇ ಆದರೂ ಬಾಲ ಮುದುಡಿ ಕುಳಿತುಬಿಡುತ್ತಿದ್ದ !

ಅನನ್ಯಸಾಧಾರಣ ವ್ಯಕ್ತಿತ್ವದ ಪೂಜ್ಯ ಗುರುಗಳ ಪಾಠ ಪ್ರವಚನವನ್ನು ಪರೀಕ್ಷೆಮಾಡಲು ಶಿಷ್ಯ ಬಿ.ಎಂ.ಶ್ರೀ, ಮೊದಲೇ ತಿಳಿವಳಿಕೆ ಕೊಟ್ಟಿದ್ದ ಪ್ರಕಾರ, ಶಾಲೆಯ ಮಹಡಿಯ ಮೇಲೆ ನಡೆಯುತ್ತಿದ್ದ ನಮ್ಮ ತರಗತಿಗೆ ಬಂದರು. ವರದಾಚಾರ್ಯರು ಎಂದಿನಂತೆ ವೇದಿಕೆಯ ಮೇಲಿದ್ದ ಮೇಜಿನ ಮೇಲೆ ಕುಳಿತು ಜೈಮಿನಿ ಭಾರತದ ಪದ್ಯವನ್ನು ತಮ್ಮದೇ ಆದ ಧಾಟಿಯಲ್ಲಿ ರಾಗವಾಗಿ ವಾಚನ ಮಾಡುತ್ತಿದ್ದಾರೆ. ಬಿ.ಎಂ.ಶ್ರೀ ಅಂದು ಬರುವುದು ಆಚಾರ್ಯರಿಗೆ ಗೊತ್ತಿದ್ದದ್ದೆ. ಯಾವ ವೇಳೆಗೆ ಎನ್ನುವುದು ಗೊತ್ತಿರಲಿಲ್ಲವೇನೋ. ಪಾಠ ಪ್ರಾರಂಭವಾಗಿ ನಿಮಿಷ ಆಗಿರಬಹುದು. ಬಿ.ಎಂ. ಶ್ರೀಯವರು ತರಗತಿಯೊಳಕ್ಕೆ ಗಂಭೀರವಾಗಿ ನಡೆದು ಬಂದರು. ಅವರು ಬಂದದ್ದನ್ನು ಗಮನಿಸಿ, ಆಚಾರ್ಯರು ತಟ್ಟನೆ ಮೇಜಿನಿಂದ ಕೆಳಕ್ಕಿಳಿದು, ಬಿ.ಎಂ.ಶ್ರೀಯವರನ್ನು ಸ್ವಾಗತಿಸಿ ಅವರಿಗಾಗಿಯೇ ಹಾಕಿಸಿದ್ದ ಇನ್ನೊಂದು ಕುರ್ಚಿಯಲ್ಲಿ ಕುಳಿತುಕೊಂಡರು. ಆಗ ಅವರ ಮುಖದ ಮೇಲೆ ಮುಗುಳುನಗೆ ಹಾದು ಹೋಗಿತ್ತು. ಕಾರಣ ಆಚಾರ್ಯರು ಮೇಜಿನ ಮೇಲಿಂದ ಇಳಿಯುವ ರಭಸದಲ್ಲಿ ತಲೆಗೆ ಸುತ್ತಿದ್ದ ಶಾಲು ರುಮಾಲು ನಸು ಬಿಚ್ಚಿ ಹೋಗಿತ್ತು. ನಾವು ವಿದ್ಯಾರ್ಥಿಗಳು ಒಳಗೊಳಗೇ ನಗುತ್ತಿದ್ದೆವು. ಬಹುಶಃ ಬಿ.ಎಂ.ಶ್ರೀಗೂ ಅದೇ ಕಾರಣಕ್ಕಾಗಿ ನಗೆ ಮೂಡಿರಬೇಕು. ವರದಾಚಾರ್ಯರು ರುಮಾಲನ್ನು ಸರಿಪಡಿಸಿಕೊಂಡ ಮೇಲೆ, ಬಿ.ಎಂ.ಶ್ರೀಯವರು "ನಮಗೂ ತಾವು ಹೀಗೆಯೇ ಅಲ್ಲವೇ ಪಾಠ ಹೇಳುತ್ತಿದ್ದದ್ದು, ತಾವು ದಯವಿಟ್ಟು ಮೊದಲಿನ ಹಾಗೆಯೇ ಪಾಠ ಮುಂದುವರಿಸಬೇಕು. ನಾನು ತಮ್ಮ ಪಾಠವನ್ನು ಕೇಳುವುದಕ್ಕೆ

ಬಂದಿದ್ದೇನೆಯೇ ಹೊರತು ಪರೀಕ್ಷೆ ಮಾಡುವುದಕ್ಕಲ್ಲ" ಎಂದರು. ಪಾಠ ಮುಂದುವರಿಯಿತು. ಬಿ.ಎಂ.ಶ್ರೀ. ಪಕ್ಕದಲ್ಲಿ ಕುಳಿತಿರುವುದರ ಅರಿವೇ ಇಲ್ಲವೋ ಏನೋ ಎಂಬಂತೆ ಗುರುಗಳು ಪಾಠ ಮಾಡಿದರು. ಬಿ.ಎಂ.ಶ್ರೀ. ಪೀರೀಯಡ್ ಮುಗಿಯುವವರೆಗೂ ಕುಳಿತಿದ್ದರು. ಎದ್ದು ಹೋಗುವಾಗ–"ನಿಮ್ಮ ಪಾಠ ಕೇಳಿದ ಯಾವ ಶಿಷ್ಯರಿಗೆ ತಾನೆ ಕನ್ನಡ ಕಾವ್ಯದಲ್ಲಿ ಪ್ರೀತಿ ಹುಟ್ಟುವುದಿಲ್ಲ?" ಎಂದೂ ನಮಸ್ಕರಿಸಿ, ಗುರುಗಳನ್ನು ಬೀಳ್ಕೊಂಡರು. ಬಿ.ಎಂ.ಶ್ರೀ. ಅವರಿಗೆ ವರದಾಚಾರ್ಯರು ಕನ್ನಡ ಪಾಠ ಹೇಳಿ, ಅವರಿಗೆ ಹಳಗನ್ನಡ ಕಾವ್ಯದಲ್ಲಿ ಅಕ್ಕರೆ ಹುಟ್ಟಿಸಿದರು ಎಂದು ಈ ಪ್ರಸಂಗದಿಂದ ನನಗೆ ಮನವರಿಕೆಯಾಯಿತು. ಅಂದು, ಗುರುಗಳ ಪಾಠವನ್ನು ಎಂದಿನಂತೆಯೇ ನಾನು ಗಮನವಿಟ್ಟು ಕೇಳುತ್ತಿದ್ದೆನಾದರೂ ನಾನು ಆಗಾಗ್ಗೆ ಬಿ.ಎಂ.ಶ್ರೀಯವರ ಮುಖದ ಕಡೆಗೆ ದೃಷ್ಟಿ ಹಾಯಿಸುತ್ತಿದ್ದೆ. ೧೯೨೭ರಲ್ಲಿ ನಾನು ಎಸ್.ಎಸ್.ಎಲ್.ಸಿ. ತರಗತಿಯ ವಿದ್ಯಾರ್ಥಿಯಾಗಿದ್ದಾಗ ತೀ.ನಂ.ಶ್ರೀ ಅವರಿಂದ ನನ್ನ ಹುಟ್ಟು ಹಬ್ಬದ ಉಡುಗೊರೆಯಾಗಿ ಕೈಗೆ ಬಂದಿದ್ದ "ಇಂಗ್ಲಿಂಷ್‌ಗೀತೆ"ಗಳನ್ನು ಓದಿ ಪ್ರಭಾವಿತನಾಗಿದ್ದ ನನಗೆ* ಅದರ ಕರ್ತೃವನ್ನು ನೋಡುವ ಹೆಬ್ಬಯಕೆ. ಅದು ತೀರಿತು ಅಂದು. ಕವಿ ಚೆಲುವನಾಗಿರಲೇ ಬೇಕು, ಅವನ ಮುಖದಲ್ಲಿ ದಿವ್ಯವಾದ ಕಳೆ ತುಂಬಿರಬೇಕು ಎನ್ನುವ ನನ್ನ ತಾರುಣ್ಯದ ಕಲ್ಪನೆ ಹುಸಿಯಾಗಲಿಲ್ಲ. ಅವರ ಮುಖದ ಸೊಬಗಿನ ವಿವರಗಳನ್ನು ವರ್ಣಿಸಬಹುದು. ಈ ಮಾತಿನ ಚಿತ್ತಾರ ಬಿಡಿಸುವ ಕುಸುರಿ ಕೆಲಸವನ್ನು 'ಶ್ರೀ'ಯವರ ಪರಮ ಶಿಷ್ಯರಲ್ಲಿ ಒಬ್ಬರಾದ, ನನ್ನ ಗುರು ಸ್ಥಾನೀಯರಾದ ಡಾ. ಎಸ್.ವಿ. ರಂಗಣ್ಣನವರು ಈಗಾಗಲೇ ಅನನುಕರಣೀಯವಾಗಿ ಮಾಡಿಬಿಟ್ಟಿರುವುದರಿಂದ ನಾನು ಅದಕ್ಕೆ ಕೈಹಾಕಿ ಸೋಲುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಅವರ ಎದೆ ತುಂಬಿ ಬಂದ ಮಾತುಗಳನ್ನೆ ಉದ್ಧರಿಸಿ, ಅವರ ಮಾತಿನಲ್ಲಿ ಅತ್ಯುಕ್ತಿ ಇಲ್ಲ, ಅದು ಸ್ವಭಾವೋಕ್ತಿ, ಎಂದು ಹೇಳಿ ಅದನ್ನು ಸಮರ್ಥಿಸಿ ಸಂತೋಷಪಡುತ್ತೇನೆ.

"ದುಂಡುದುಂಡಾದ, ಮಧ್ಯ ಎತ್ತರದ, ಭವ್ಯ ದೇಹಾಕೃತಿ ; ಅಗಲವಾದ, ನಸುಗೆಂಪಿನ, ಗಂಭೀರ ಹಣೆ; ಉಬ್ಬಿದ ತಿಳಿಗೆಂಪಿನ ಲವಲವಿಕೆಯ ಕೆನ್ನೆಗಳು;

---

* ಇಂಗ್ಲಿಷ್ ಗೀತಗಳ ಪ್ರಭಾವಕ್ಕೆ ಒಳಗಾಗಿ ನಾನು ೧೯೨೮, ೧೯೨೯ರಲ್ಲಿ ಬರೆದ ಅನುವಾದಿತ ಹಾಗೂ ಸ್ವತಂತ್ರ ಕವನಗಳು ಹಲವನ್ನು 'ಮೊದಲ ಹೆಜ್ಜೆ' (೧೯೮೨) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದೇನೆ.

ತೀಕ್ಷ್ಣವೂ ಆಲೋಚನಾಪೂರಿತವೂ ಅತ್ಯುತ್ಸಾಹ ಸೂಚಕವೂ ನಗುವನ್ನು ಸೂಸುವುದೂ ಆದ ಉಜ್ವಲ ಕಾಂತಿಯ ಕಣ್ಣುಗಳು ; ಸ್ವಲ್ಪ ಸಣ್ಣದಾದರೂ ಮುಖಕ್ಕೆ ಮುದ್ದಾಗಿ ಹೊಂದಿಕೊಂಡ ನಾಸಿಕ ; ಮಂದಸ್ಮಿತದಿಂದ ಕೂಡಿದ್ದರೂ ದೃಢತೆ ಕಾಠಿಣ್ಯಗಳನ್ನು ವ್ಯಕ್ತಪಡಿಸುವ ಸ್ಪಷ್ಟ ತುಟಿಗಳು ; ಕೆಳಗಲ್ಲದ ಹಿಂಬದಿಯಿಂದ ಮೇಲಕ್ಕೆದ್ದು, ಕೆಳಗುಳಿಯೊಂದರಿಂದ ಕೊಂಚ ಇಬ್ಬಗೆಯಾದ ನುಣ್ಣನೆಯ ರಂಜಕ ಗಲ್ಲ; ಎಲ್ಲಕ್ಕಿಂತ ಮಿಗಿಲಾಗಿ, ಲೋಚನಾಗ್ರದಿಂದ ಅವುಡಿನವರೆಗೆ ಇಳಿದು ಬಂದು, ಕವುಳುಗಳನ್ನು ಮೂಗು ಬಾಯಿಗಳಿಂದ ಪ್ರತ್ಯೇಕಿಸುತ್ತ, ಗೆಲವಿನಿಂದ ಕೂಡಿದ ಎರಡು ಗೀರುಗಳು ; ಒಟ್ಟಿನಲ್ಲಿ ಒಂದು ಸಾರಿ ನೋಡಿದರೆ ಸಾಕು, ಪ್ರೇಕ್ಷಕನ ಚಿತ್ರಭಿತ್ತಿಯಲ್ಲಿ ಕೊರೆದು ನಿಲ್ಲುವ, ಅಂಬಾರಿ ಆನೆಯಂದದ ಠೀವಿಯ ಮುಖಮುದ್ರೆ; ಏರಲೂ ಬಲ್ಲ ಇಳಿಯಲೂ ಬಲ್ಲ, ಇಂಪಾದ ಕುಗ್ಗದ ದನಿ ; ಆಗಾಗ ಮೇಲಕ್ಕೆದ್ದು, ಪ್ರತಿಪಾದಿಸುವ ಅಂಶವನ್ನು ಒತ್ತಿ ಹೇಳುವ ಭಂಗಿಯನ್ನು ತಾಳುವ, ಉಚಿತಾಕಾರದ ದುಂಡಾದ ಕೈಗಳು ; ತಾವರೆಯಂತೆ ಕೆಂಪಾಗಿ ಕೋಮಲವಾದ ಅಂಗೈ ; ಹಾಗೆಯೇ ರಕ್ತ ಸೋರುತ್ತದೆಯೋ ಎನ್ನುವಂತೆ ಕಾಣುತ್ತಿದ್ದ ಶುಭ್ರಸುಂದರವಾದ ಹೆಜ್ಜೆಗಳು;....ಆ ಅಂಗೈ ಆ ಅಂಗಾಲನ್ನು ಹತ್ತಿರ ಕುಳಿತು ದರ್ಶಿಸಿದವನು ಧನ್ಯ; ಏತಕ್ಕೆಂದರೆ ಅವುಗಳ ಮೇಲೆ ನಿಷ್ಕಳಂಕಿಯ ಸಂಯಮ ಶಾಲಿಯ ತಪಸ್ವಿಯ, ಗುರುತು ಸ್ವಚ್ಛವಾಗಿ ಒತ್ತಿದಂತಿದ್ದಿತು."*

ರಂಗಣ್ಣನವರ ವರ್ಣನೆ 'ಶ್ರೀ'ಯವರು ತೀರಿಕೊಂಡ ಮೇಲೆ ೧೯೫೪ರಲ್ಲಿ ಬರೆದದ್ದು. ನೆನಪಿನಿಂದ ಬರೆದದ್ದು. ಆದರೆ, ಮಾಸದ ನೆನಪು. ಯಾರೇ ಆಗಲಿ, ಒಂದು ಸಲ ನೋಡಿದರೆ ಸಾಕು, 'ಶ್ರೀ'ಯವರ ಮುಖಮುದ್ರೆ ನೋಡಿದವರ ಮನಃಪಟಲದ ಮೇಲೆ ಅಚ್ಚೊತ್ತಿ ನೆನಪಿನಲ್ಲಿ ನಿಲ್ಲುವಂಥದು. ಅವರ ನೆಚ್ಚಿನ ಶಿಷ್ಯರು ಅವರನ್ನು ನೂರಾರು ಸಲ ನೋಡಿರತಕ್ಕವರು. ಕನ್ನಡ ತಾಯ ಕೃಪೆಯಿಂದ ನನಗೂ ಈ ಭಾಗ್ಯ ಲಭಿಸಿದೆ. "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ, ಗುರುವರ್ಯ ನಾಸ್ಯಮಂ". ಈ ಆಸ್ಯವನ್ನು, ಕೆಂದಾವರೆಮೊಗಮಂ, ನೋಡಿದಾಗ, "ತಾವರೆಯ ಹೊಸ ಕೆಂಪು, ತಾವರೆಯ ಹೊಸ ಅರಳ ಹೊಳೆವ ಕೆಂಪು" ಎಂಬ ಶ್ರೀಯವರ ಗೀತವೊಂದರ ಸಾಲು ನೆನಪಿಗೆ ಬರುತ್ತದೆ. ಮುಖದ ಕೆಂಪು ಸರಿಯೆ. ಅವರ ಅಂಗೈ ಅಂಗಾಲುಗಳ ರಕ್ತ ಚಿಮ್ಮುವ ಕೆಂಪನ್ನು

* 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' (ಭಾಗ–೧), ಮೈಸೂರು; ೧೯೫೮; ಪೀಠಿಕೆ, ಪು. ೧೫.

ಕಾಣಬೇಕಾದರೆ ಅವರು ಸಾಧಾರಣ ಮನೆಯುಡುಪಿನಲ್ಲಿ ಕುಳಿತಿದ್ದಾಗಲೋ ಶತಪಥ ತಿರುಗುತ್ತಿದ್ದಾಗಲೋ ನೋಡಬೇಕಿತ್ತು. ಮನೆಯಲ್ಲಿ ಅವರ ಉಡುಪು ಎಂದರೆ, ಅಚ್ಚ ಟ್ವಿಲ್ ಬಟ್ಟೆಯ ಷರಟು ; ಮೇಲುಕೋಟೆ ಗುಂಡಂಚಿನ ತಡಮುಸುತ್ತಿದ್ದ ಪಂಚೆ. ಅವರು ಪರಿಷತ್ತಿನ ಉಪಾಧ್ಯಾಕ್ಷರಾಗಿದ್ದಾಗ ನಾನು ಅಲ್ಲಿ ಸಹಾಯಕ ಕಾರ್ಯದರ್ಶಿ. ಕಚೇರಿಯ ಕೆಲಸಕ್ಕಾಗಿ ಅವರ ಮನೆಗೆ ಹೋದಾಗಲೆಲ್ಲ ಅವರನ್ನು ನಾನು ಕಾಣುತ್ತಿದ್ದದ್ದು ಇದೇ ಉಡುಪಿನಲ್ಲಿ. ಇಂಥ ಸನ್ನಿವೇಶದಲ್ಲಿ ಅವರ ನಡೆ ನುಡಿ ಎಲ್ಲ ತೀರ ಸರಳ ; ಸಲಿಗೆಯ ಮಾತು, ಎಷ್ಟು ಬೇಕೋ ಅಷ್ಟು ; "ಇನ್ನೇನೂ ಇಲ್ಲವಲ್ಲ", ಎಂದಾಗ, ಅವರ ಇಂಗಿತ ವರಿತ ನಾನು, 'ಬರ್ತೀನಿ' ಎಂದು ಹೇಳಿ, ಹೊರಟುಬಿಡುತ್ತಿದ್ದೆ.

ವೇದಿಕೆಯ ಮೇಲೆ ನಿಂತು ತರಗತಿಯ ಪಾಠವೇ ಆಗಲಿ, ಸಾರ್ವಜನಿಕ ಭಾಷಣವೇ ಆಗಲಿ, ಜರಿಯ ಪೇಟ ಧರಿಸಿ ಸೂಟು-ಧಾರಿಯಾದ ಅವರ ಜರ್ಬೇ ಜರ್ಬು. ಜಂಬವಿಲ್ಲದ ಜರ್ಬು. ರಾಜಗಾಂಭೀರ್ಯ. ವಾಗ್ವಿಲಾಸವನ್ನು ಮೆರೆಯಲು ಧರೆಗಿಳಿದ ವಾಚಸ್ಪತಿ.

ಬಿ.ಎಂ.ಶ್ರೀ ಅವರು ಯಶೋಧರ ಚರಿತ್ರೆಯನ್ನು ವಾಚನ ಮಾಡಿದ ಸಂಗತಿಯನ್ನು ಈ ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಆಗಲೇ ನಾನು ಅವರನ್ನು ವೇದಿಕೆಯ ಮೇಲೆ ಮೊದಲಸಲ ಕಂಡದ್ದು. "ಮಾರಿದತ್ತಂ ಲಲಿತಾಕಾರದ ಬಂದ ಕುಮಾರರ ರೂಪಿಂಗೆ ಠಕ್ಕುಗೊಂಡಂತಿರ್ದಂ" ಎಂಬ ಮಾತನ್ನು ಅವರು ವಾಚಿಕಾಭಿನಯವಾಗಿ ಉಚ್ಚರಿಸಿದ ಬಗೆ ಇಂದಿಗೂ ನನ್ನ ಕಿವಿಯಲ್ಲಿ ಮೊರೆಯುತ್ತಿದೆ. 'ಠಕ್ಕು' ಎಂಬ ಪದದ ಉಚ್ಚಾರಣೆಯ ಕಾಕುವಿನಲ್ಲಿ ಕುಮಾರರ ರೂಪನ್ನು ಕಂಡು ಬೆರಗಾಗಿ ಮೂಗುವಟ್ಟು ಕರವಾಳದಿಂದ ಪೊಯ್ಯದೆ ನಿಂತ ಮಾರಿದತ್ತನ ಚಿತ್ರ ನನ್ನ ಬಗೆಗಣ್ಣ ಮುಂದೆ ನಿಚ್ಚಳವಾಗಿ ಸುಳಿಯಿತು. ಯಶೋಧರ ಚರಿತೆಯ ಈ ಪದ್ಯವನ್ನು ಓದಿದಾಗಲೆಲ್ಲ ಮಾರಿದತ್ತನ ಭಂಗಿಯೊಂದಿಗೆ 'ಶ್ರೀ'ಯವರ ಕಂಠಶ್ರೀಯ ಪಲುಕುಗಳೂ ಮನಸ್ಸಿನಲ್ಲಿ ಮರುಕೊಳಿಸುತ್ತವೆ. ಅಂತೆಯೇ, ಮೃತ್ಯಸಂಮುಖದಲ್ಲಿ ನಿಯತಿಯ ಅನಿವಾರ್ಯತೆಯ ಬಗೆಗೆ ಅಭಯರುಚಿ ಅಭಯಮತಿಗೆ-"ನಿಯತಿಯನಾರ್ ಮೀರಿದಪರ್, ಭಯವೇವುದೊ, ಮುಟ್ಟಿದೆಡೆಗೆ ಸೈರಿಸುವುದೆ"-ಎಂದು. ಹೇಳಿದ ಸಮಾಧಾನದ ಮಾತನ್ನಾಗಲಿ, 'ಅಣ್ಣನ ಮಾತಂ ಮನದೊಳ್ ತಿಣ್ಣನೆ ತಲೆದು', "ಭವಪ್ರಕೃತಿ ವಿಕೃತಿ'ಯನ್ನು ಅರಿತ ತಂಗಿ ಅಣ್ಣನಿಗೆ-

ಎನಿತೊಳವಪಾಯ ಕೋಟಿಗ
ಳನಿತರ್ಕಂ ಗೇಹಮಲ್ತೆ ದೇಹಮಿದಂ ನೆ

ಟ್ಟನೆ ಪೊತ್ತು ಸುಖಮನಱಿಸು
ಮನಜಂ ಮೊರಡಿಯೊಳೆ ಮಾದುಪಟಿಮನಱಿಸದಿರಂ

ಬೇಡಿದ ಕಾಡೊಳ್ ಮಱೆಯಾ
ಯ್ತಿಡಾಡುವಮಿದಱ ಪೊಱೆಯನೆನಗಂ ನಿನಗಂ
ಮೂಡುವ ಮುೞುಗುವ ದಂದುಗ
ಮಾಡಿದ ಪೊಲನುಂಡ ಮರ್ದು ಕಂಡ ವಿಚಾರಂ

ಎಂದು ಅಣ್ಣನಿಗೆ ಹೇಳಿದ ವೈರಾಗ್ಯದ ಮಾತನ್ನಾಗಲಿ, "ಪುಳಿಂದನ
"ಕಣೆಗಟ್ಟನಿಂದ ವನಹರಿಣಿ" ಅಮೃತಮತಿ–

ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸುರಚಾಪಮನಿಳಿಕ್ಕೈವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

ಒಲವಾದೊಡೆ ರೂಪಿನ ಕೋ
ಟಲೆಯೇವುದೊ ಕಾರ್ಯಮಾಗೆ ಕಾರಣದಿಂದಂ
ಫಲಮೇನ್ ಇಂದೆನಗಾತನೆ
ಕುಲದೈವಂ ಕಾಮದೇವನಿಂದ್ರಂ ಚಂದ್ರಂ

ಎಂದು, ಗೆಳತಿ, ಅಷ್ಟವಂಕನ ಕುರೂಪನ್ನು ವರ್ಣನೆ ಮಾಡಿದಾಗ ಒಲವಿಗೆ ತೆತ್ತ ಮನಸ್ಸನ್ನು ಗಟ್ಟಿಮಾಡಿ ತನ್ನ ನಿಲುವನ್ನು ಸಮರ್ಥಿಸಿ ಆಡಿದ ತರ್ಕಬದ್ಧವಾದ ಮಾತನ್ನು ತಾವೂ ಒಪ್ಪುವಂತೆ ಒತ್ತುಕೊಟ್ಟು ಓದಿದಾಗ ಆಗಲಿ; ಪ್ರಿಯಪತ್ನಿಯ ಅಪಾತ್ರಪ್ರಣಯದ ದುರ್ವ್ಯವಹಾರವನ್ನು ಕಣ್ಣಾರೆ ಕಂಡು, ಮನಸ್ಸು ರೋಸಿ, ಅವಳನ್ನೂ ಅವಳ ಮಿಂಡನನ್ನೂ ತನ್ನ ಖಡ್ಗದಿಂದ ಎರಡು ತುಂಡು ಮಾಡಬೇಕೆಂದು ಮನದಂದ "ಆಗಳ್ ಬಾಳ್ ನಿಮಿರ್ದುದು ತೋಳ್ ತೂಗಿದುದು," ಆದರೂ ಧೃತಿ ಬಂದು, ಆ ಹುಳುಕರನ್ನು ಇರಿಯಲೊಲ್ಲದೆ ಹೇಸಿ ಹಿಂದಿರುಗಿದ ಸನ್ನಿವೇಶವನ್ನು ಸಾಭಿನಯವಾಗಿ ಓದಿದಾಗ ಆಗಲಿ; ಇಂಥ ಯಾವ ಯಾವ ರಸವತ್ಸನ್ನಿವೇಶಗಳು ಕಾವ್ಯದಲ್ಲಿ ಉಂಟೋ ಅವನ್ನು ಮಾತ್ರ ಆಯ್ದುಕೊಂಡು, ನಡುನಡುವೆ ಕಥೆಯ ಸರಣಿಯ ಕುಣಿಕೆಗಳನ್ನು ಪರಿಚಯ

ಮಾಡಿಕೊಡುತ್ತ, ರಸ ಭಾವಾನುಗುಣವಾಗಿ ದನಿಯನ್ನು ಏರಿಸುತ್ತಾ ತಗ್ಗಿಸುತ್ತಾ, ತಾವೇ ಸ್ವತಃ ರಸಾನಂದವನ್ನು ಅನುಭವಿಸಿದಾಗ ಕ್ಷಣಕಾಲ ಕಣ್ಣನ್ನು ಮುಚ್ಚುತ್ತ, ಇಡಿಯ ಕಾವ್ಯವನ್ನು ಓದಿದ ರೀತಿ, ಸಾಹಿತ್ಯ ವಿದ್ಯಾರ್ಥಿಯಾದ ನನ್ನ ಬದುಕಿನಲ್ಲಿ ನಾನು ಪಡೆದ, ಮರೆಯಲಾಗದ, ಸಂಗತಿ.

ಕೆಲವು ವರ್ಷಗಳಾದರೂ ಅವರು ಜನ್ನನ ಯಶೋಧರ ಚರಿತೆಯನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಮಾತ್ರವಲ್ಲದೆ ಸಾಮಾನ್ಯ ಜನಕ್ಕೂ ಓದಿ ತಿಳಿಯ ಹೇಳುವ ಕರ್ತವ್ಯವನ್ನು ಹೊತ್ತಂತೆ ಕಾಣುತ್ತದೆ. ಅವರು ರಿಜಿಸ್ಟ್ರಾರ್ ಮತ್ತು ಗೌರವ ಕನ್ನಡ ಪ್ರಾಧ್ಯಾಪಕರಾಗಿದ್ದ ಕಾಲದಲ್ಲಿಯೇ UTA 'ಊಟ' (ಊಟ: ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್) ಪ್ರಾರಂಭವಾದದ್ದು. 'ಊಟ' ಹೆಸರು ಎರಡು ಅರ್ಥಗಳಲ್ಲಿ ಸಾರ್ಥಕವಾಯಿತು. ಕನ್ನಡ ಕಾವ್ಯ ಪ್ರಸಾರ, ಜ್ಞಾನ ಪ್ರಸಾರ, ಇವೆರಡೂ ಅದರ ಕಾರ್ಯಗಳು. ಬಹಳ ಕಾಲ ದಿವಂಗತ ಜಿ. ಹನುಮಂತರಾಯರು 'ಊಟ'ದ ನೇತಾರರಾಗಿದ್ದುಕೊಂಡು ಭರ್ಜರಿಯಾದ ಊಟದ ವ್ಯವಸ್ಥೆ ಮಾಡುತ್ತಿದ್ದರು ; ಉಪನ್ಯಾಸಗಳು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿದ್ದುವು. ಊಟದ ವ್ಯವಸ್ಥೆ ಬಲವಾದ ಆಕರ್ಷಣೆ; ಪೂರ್ವ ವಯಸ್ಸಿನ ಅಧ್ಯಾಪಕರು ಪ್ರವಾಸಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಬಿ.ಎಂ.ಶ್ರೀಯವರು ಕಾರ್ಯ ಗೌರವದಿಂದ ಹೆಚ್ಚಾಗಿ ಈ ಕಾರ್ಯಗಳಲ್ಲಿ ಭಾಗವಹಿಸುತ್ತಿರಲಿಲ್ಲವೆಂದು ಕಾಣುತ್ತದೆ. ಈಚೆಗೆ ನಾನು ದೊಡ್ಡಬಳ್ಳಾಪುರಕ್ಕೆ ಒಂದು ಶಾಲೆಯ ವಾರ್ಷಿಕೋತ್ಸವದಲ್ಲಿ ಉಪನ್ಯಾಸ ಮಾಡಲು ಹೋಗಿದ್ದಾಗ ಅಲ್ಲಿನ ಪ್ರಮುಖರೊಬ್ಬರೂ, ಬಹಳ ವರ್ಷಗಳ ಹಿಂದೆ ಬಿ.ಎಂ.ಶ್ರೀ ಅವರು ದೊಡ್ಡಬಳ್ಳಾಪುರಕ್ಕೆ ಬಂದಿದ್ದು 'ಯಶೋಧರ ಚರಿತೆ'ಯನ್ನು ಕುರಿತು ಭಾಷಣ ಮಾಡಿದರೆಂದೂ ದೊಡ್ಡ ಸಭೆ ನೆರೆದಿತ್ತೆಂದೂ ತಿಳಿಸಿದರು. ಈ ಕೃತಿ ಕುರಿತು ಬಿ.ಎಂ.ಶ್ರೀ ಇನ್ನೂ ಎಷ್ಟೋಕಡೆ ಭಾಷಣ ಮಾಡಿರಬೇಕು ಎಂದು ಕೊಂಡೆ. ಅದು ಹೇಗಿದ್ದರೂ, ಯಶೋಧರ ಚರಿತೆ ಅವರ ಅಚ್ಚುಮೆಚ್ಚಿನ ಕಾವ್ಯಗಳಲ್ಲಿ ಒಂದು. ನಮಗೆ ಸಾಹಿತ್ಯ ಚರಿತ್ರೆಯನ್ನು ಕುರಿತು ಪಾಠ ಮಾಡುವಾಗಲೂ ಯಶೋಧರ ಚರಿತೆಯನ್ನು ಕಂಡರೆ ಅವರಿಗೆ ಒಂದು ಬಗೆಯ ಪಕ್ಷಪಾತ ಇತ್ತು ಎಂದು ವ್ಯಕ್ತ ಪಟ್ಟಿತ್ತು. ಕಾವ್ಯದ ಬೆಲೆ ಕಟ್ಟುವ ಮಾತು ಬಂದಾಗ ಅವರ ಅಗ್ರವೀಳ್ಯ ಪಂಪನಿಗೆ. ರನ್ನನ ಗದಾಯುದ್ಧದ ಪ್ರಸ್ತಾಪ ಬಂದಾಗ, ಅಜಿತಪುರಾಣ ಪಂಪನ ಆದಿಪುರಾಣಕ್ಕೆ ಸರಿದೊರೆ ಎನ್ನಿಸದು, ಆದರೆ ಗದಾಯುದ್ಧದ ವಿಷಯ ಬೇರೆ, ಎಂದು ಪಂಪನನ್ನೂ ಮರೆಯುವಂತೆ ಮಾಡಿ

ದುರ್ಯೋಧನ ಪಾತ್ರ ಸೃಷ್ಟಿಗಾಗಿ ರನ್ನನಿಗೆ ಮುಕ್ತಕಂಠದ ಮಣಿಹಾರ. ಕುಮಾರವ್ಯಾಸನ ಬಗೆಗೆ ಹೇಳುವಾಗ ಅವರಿಗೆ ಒಂದು ಬಗೆಯ ಆವೇಶ, ಭಾವುಕ ಪ್ರಶಂಸೆ. ನಾನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಕುಮಾರವ್ಯಾಸ ಜಯಂತಿಯ ವ್ಯವಸ್ಥೆ, ಪ್ರಸಿದ್ಧ ಗಮಕಿಗಳಿಂದ ಕುಮಾರವ್ಯಾಸ ಭಾರತ ಪ್ರಕರಣಗಳ ವಾಚನ ಸಪ್ತಾಹ, ಉಪನ್ಯಾಸಗಳು– ಇವೆಲ್ಲವುಗಳ ಯಶಸ್ವೀ ನಿರ್ವಹಣೆಗೆ ವೆಂಕಣ್ಣಯ್ಯನವರು ಸೂತ್ರಧಾರರು; ಪ್ರೇರಣೆ, ಸ್ಫೂರ್ತಿ, ಬಿ.ಎಂ.ಶ್ರೀ ಅದೇ ವರ್ಷ (೧೯೩೦) ಕುಮಾರವ್ಯಾಸ ಭಾರತದ ಸಂಗ್ರಹವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಿದ್ಧಪಡಿಸಿಕೊಡಬೇಕೆಂದು ವೆಂಕಣ್ಣಯ್ಯನವರು ಮತ್ತು ಪಂಜೆ ಮಂಗೇಶರಾಯರಿಗೆ ಶ್ರೀಯವರ ಕೋರಿಕೆ. ಈ ಸಂಗ್ರಹಕಾರ್ಯದ ಹಿಂದೆ ಒಂದು ಸಣ್ಣ ಚರಿತ್ರೆ ಅಡಗಿದೆ. ಅದು ಈಚೆಗೆ ತಿಳಿದುಬಂದ ಸಂಗತಿ ; ಇಲ್ಲಿಗೆ ಅಪ್ರಸ್ತುತ. ಸಿದ್ಧವಾದ ಸಂಗ್ರಹದ ಹಸ್ತಪ್ರತಿಯಲ್ಲಿ ಪಾಠಾಂತರ ಸಂಕಲವನ್ನು ಪರಿಶೀಲಿಸಿ, ಉಚಿತ ಪಾಠವನ್ನು ಆಯ್ಕೆ ಮಾಡಿದವರು ಬಿ.ಎಂ.ಶ್ರೀ. ಪಂಪಭಾರತದ ಸಂಪಾದನ ಕಾರ್ಯದಲ್ಲಿಯೂ ಬಿ.ಎಂ.ಶ್ರೀ ಅವರದ್ದು ಕೊನೆಯ ಮಾತು. ಒಂದು ಮಾತಿನಲ್ಲಿ, ಪಂಪ ಹೆಚ್ಚೋ ಕುಮಾರವ್ಯಾಸ ಹೆಚ್ಚೋ, ಕನ್ನಡ ಕವಿ ಕುಲದಲ್ಲಿ ? ಒಮ್ಮೆ ಅವನ ಕಡೆಗೆ, ಒಮ್ಮೆ ಇವನ ಕಡೆಗೆ, ಶ್ರೀಯವರ ಮೆಚ್ಚುಗೆ–ವಿಮರ್ಶನಪ್ರಜ್ಞೆಯ ಫಲಿತವಾದ ಮೆಚ್ಚುಗೆ–ಒಲಿದಾಡುತಿತ್ತು. ಈ ಇಬ್ಬರು, ಕನ್ನಡ ಶಾರದೆಯ ಎರಡನೆಯ ಕಣ್ಣು. ಅವರ ನಿಲುವು ಇದು. ದುರಂತ ರಾವಣನ ಚಿತ್ರಣಕ್ಕಾಗಿ ನಾಗಚಂದ್ರ ಅವರಿಗೆ ಪ್ರಿಯ. ಬಸವಣ್ಣ, ಪುರಂದರರಿಗೆ, ಸಮಾನೋನ್ನತಿಯ ಪೀಠಗಳು, ಕವಿಗಳಲ್ಲದಿದ್ದರೂ ಸಾಹಿತ್ಯಕ್ಕೆ, ಕನ್ನಡಿಗರ ಬದುಕಿಗೆ, ಇವರ ಕೊಡುಗೆ ವಿಶಿಷ್ಟ–ಆದರೂ ಬಸವಣ್ಣನವರ ಕಡೆಗೆ ಒಂದು ಗುಲಗಂಜಿ ತೂಕದಷ್ಟು ಹೆಚ್ಚಿನ ಒಲವು. ಹರಿಹರ, ರಾಘವಾಂಕ, ಚಾಮರಸ, ಲಕ್ಷ್ಮೀಶ, ರತ್ನಾಕರ–ಇವರ ಕಾವ್ಯಗಳ ಬಗೆಗೆ ಹೇಳುವ ಹೊತ್ತಿಗೆ, ಶ್ರೀಯವರ ಆವೇಶದ ಕಾವು ಇಳಿಮುಖ. ಮಹಾದೇವಿಯಕ್ಕ, ಹೊನ್ನಮ್ಮ– ಇವರ ವಿಷಯದಲ್ಲಿ ರಿಯಾಯಿತಿ ತೋರಿಯೂ ಪ್ರಾಮಾಣಿಕವಾದ ಮೆಚ್ಚುಗೆ. ಇತರ ಕವಿಗಳ, ಕೃತಿಗಳ, ಕಾಲಗಳ, ಉಲ್ಲೇಖಯೋಗ್ಯ–ಬೋರ್ಡಿನ ಮೇಲೆ ಸೀಮೆಯ ಸುಣ್ಣದ ಬರಹ ಮಾತ್ರ ಇವರಿಗೆ ಅವರ ಕೈಯಿಂದ ಸಂದ ಮನ್ನಣೆ.

ಮೇಲಿನ ಕೊನೆಯ ವಾಕ್ಯದಿಂದಲೇ ಊಹಿಸಿಕೊಳ್ಳಬಹುದು ಓದುಗರು– 'ಶ್ರೀ'ಯವರು ಎಂ.ಎ. ತರಗತಿಯ ನಾವು ಮೂವರು ವಿದ್ಯಾರ್ಥಿಗಳು ಆಗತಾನೆ, ಪ್ರಾರಂಭವಾಗಿದ್ದ ಕನ್ನಡ ಆನರ್ಸ್ ಪರೀಕ್ಷೆಯ ಏಳೆಂಟು ವಿದ್ಯಾರ್ಥಿಗಳು–ಇವರನ್ನು

ಒಟ್ಟು ಗೂಡಿಸಿ ಹೇಳಿದ ಸಾಹಿತ್ಯ ಚರಿತ್ರೆ ಪಾಠಕ್ಕೆ ಸಂಬಂಧಪಟ್ಟ ವಿಷಯ ಅದು ಎಂದು. ಹೌದು, ನಮಗೆ ಮಾತ್ರವಲ್ಲ, ಬಹುಶಃ ಎಲ್ಲ ಎಂ.ಎ. ತರಗತಿಯ ವಿದ್ಯಾರ್ಥಿಗಳಿಗೆ ಮಾಡಿರಬಹುದಾದ ಸಾಹಿತ್ಯ ಚರಿತ್ರೆಯ ಪಾಠದ ಒಂದು ದಿಗ್ದರ್ಶನ ಅದು. ಕಿಟೆಲ್ ಅವರು ಸಂಪಾದಿಸಿರುವ ಛಂದೋಂಬುಧಿಯ ಮುದ್ರಣಕ್ಕೆ ಇಂಗ್ಲಿಷಿನಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಬರೆದ ಮುನ್ನುಡಿ, ಇ.ಪಿ. ರೈಸ್ ಅವರ Heritage of India ಪುಸ್ತಕ ಮಾಲೆಯ 'ಕನ್ನಡ ಸಾಹಿತ್ಯ', ಆರ್. ನರಸಿಂಹಾಚಾರ್ಯರ 'ಕವಿ ಚರಿತೆ' ಸಂಪುಟಗಳು–ಇವು ಹೊರತಾಗಿ, ಕವಿಕೃತಿಗಳ ಬಗೆಗೆ ವಿಮರ್ಶಾತ್ಮಕ ಮೌಲ್ಯಮಾಪನ ಮಾಡುವ ಒಂದು ಸಾಹಸದ ಪ್ರಥಮ ಪ್ರಯತ್ನ, ತಕ್ಕಮಟ್ಟಿಗೆ ವಿಸ್ತಾರವಾದದ್ದು, ಅವುಗಳಲ್ಲಿ ಇಲ್ಲ. 'ಶ್ರೀ' ಅವರ ಸೂಚನೆಯ ಮೇರೆಗೆ ಇವುಗಳನ್ನು ನಾನಂತೂ ನೋಡಿದ್ದೆ. ಕವಿಗಳ ಸ್ಥಳ, ಕಾಲ, ಮತ ವಿಷಯಗಳ ಕುರಿತಾದ ಚರ್ಚೆಗೆ ಆಗಿನ ದಿನಗಳಲ್ಲಿ ಪ್ರಾಮುಖ್ಯ. ಆದ್ದರಿಂದ, ನರಸಿಂಹಾಚಾರ್ಯರ ಕವಿಚರಿತೆಯನ್ನೂ, ಪ್ರಬುದ್ಧ ಕರ್ಣಾಟಕದಲ್ಲೂ ಪರಿಷತ್ಪತ್ರಿಕೆಗಳಲ್ಲೂ ಪ್ರಕಟವಾಗಿದ್ದ ಲೇಖನಗಳನ್ನೂ ಓದಿಕೊಂಡಿದ್ದೆ. ಆದರೆ, ಬಿ.ಎಂ.ಶ್ರೀ ತಮ್ಮ ಪಾಠಪ್ರವಚನದಲ್ಲಿ ಕವಿಕೃತಿಗಳಲ್ಲಿ ಹಿಂಡಿ ತೆಗೆದು ಎರೆಯುತ್ತಿದ್ದ ಕಾವ್ಯಸುಧಾಸಾರ ತೆರೆದು ತೋರಿಸುತ್ತಿದ್ದ ಕಾವ್ಯ ಮೌಲ್ಯಗಳು ; ಮಿಂಚಿಸುತ್ತಿದ್ದ, ಕಟುವಾದರೂ ಸತ್ಯವಾದ ಎದೆಗಾರಿಕೆಯ ನಿಷ್ಪಕ್ಷಪಾತ ವಿಮರ್ಶೆಯ ಮಾತುಗಳು; ಕವಿಹೃದಯವನ್ನು ಒಳಹೊಕ್ಕು ನೋಡಬಲ್ಲ ಚುರುಕಾದ ಒಳನೋಟ ; ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಒಮ್ಮೊಮ್ಮೆ ಮೇಲುಗೈಯಾಗಿ ವಿಜೃಂಭಿಸಿಸುತ್ತಿದ್ದ ವಿಭಿನ್ನಮತಧರ್ಮಗಳ ಬಗ್ಗೆ ಸಮಾನ ಗೌರವ ; ಕಾವ್ಯದಲ್ಲಿ ಗ್ರಹಿಸಬೇಕಾದ ಜೀವನದರ್ಶನ, ಸಾರ್ವತ್ರಿಕ ಮೌಲ್ಯಗಳು–ಇವನ್ನೆಲ್ಲಾ, ಇವಲ್ಲದೆ ಇನ್ನೂ ಅನೇಕ ಆನುಷಂಗಿಕ ವಿಚಾರಗಳನ್ನು,–ಪ್ರತಿ ಕವಿಯ ಭಾಷಾ ಶೈಲಿ, ಛಂದಸ್ಸಿನ ಪ್ರಯೋಗ ಕೌಶಲ, ಅಲಂಕಾರ ಪ್ರಿಯತೆ, ಕೆಲವು ಕವಿಗಳ ಸಂಸ್ಕೃತ ವ್ಯಾಮೋಹ, ಅಷ್ಟಾದಶ ವರ್ಣನೆ ಮತ್ತು ಕವಿಸಮಯಗಳ ಅನಗತ್ಯ ಭಾರ,–ಮುಂತಾದುವನ್ನೆಲ್ಲಾ ನಾಗಾಲೋಟದ ಅಶ್ವಧಾಟಿಯಲ್ಲಿ ಪಾಠಪ್ರವಚನಸಪ್ತಾಹದಲ್ಲಿ ಮುಗಿಸಿ, ಒಂದು ಹೊಸ ಸಾಹಿತ್ಯಪ್ರಪಂಚವನ್ನೇ ಸೃಷ್ಟಿಮಾಡಿ ಬಿಟ್ಟರು. ಆ ದಿನಗಳಲ್ಲಿ ಅವರು ಹೇಳಿದ ಪಾಠವೇ ಮುಂದೆ 'ಕನ್ನಡ ಕೈಪಿಡಿ'ಯ ಎರಡನೆಯ ಸಂಪುಟವಾಗಿ ೧೯೪೭ರಲ್ಲಿ, ಅವರು ತೀರಿಕೊಂಡ ಮೇಲೆ, ಪ್ರಕಟವಾಯಿತು. ಈ ಪುಸ್ತಕ ಅವರು ಬರೆಯಬೇಕೆಂದಿದ್ದ ಸಮಗ್ರ ಸಾಹಿತ್ಯ ಚರಿತ್ರೆಯ ಒಂದು ಭಾಗ, ಅಷ್ಟೆ; ನಾಗಚಂದ್ರನವರೆಗೆ ಮಾತ್ರ ಸಾಗಿದೆ. ಪೂರ್ಣ ಗ್ರಂಥ ನಮಗೆ ಲಭಿಸಲಿಲ್ಲ.

ಎಂಥ ದುರ್ದೈವ ನಮ್ಮದು !

ಮೇಲೆ, ಪಾಠಪ್ರವಚನ ಸಪ್ತಾಹ ಎಂದು ಹೇಳಿದ್ದೇನೆ. ಈ ಕುರಿತು ವಿವರಣ ರೂಪದಲ್ಲಿ ನಾಲ್ಕು ಮಾತು ಹೇಳಬೇಕು. ನಮಗೆ ಬಿ.ಎಂ.ಶ್ರೀ ಸಾಹಿತ್ಯ ಚರಿತ್ರೆಯ ಪಾಠ ಮಾಡಿದ್ದೂ ೧೯೩೭ರ ಮಾರ್ಚಿ ತಿಂಗಳಿನಲ್ಲಿ ಎಂದು ನೆನಪು. ಆಗ ಅವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು. ಅಲ್ಲಿ ತಮ್ಮ ಪಾಠಪ್ರವಚನ ಕರ್ತವ್ಯವನ್ನು ನೆರವೇರಿಸಿ, ಮೊದಲೇ ಗೊತ್ತಾಗಿದ್ದಂತೆ, ನಮಗೆ ಸಾಹಿತ್ಯ ಚರಿತ್ರೆಯನ್ನು ಬೋಧಿಸಲು ಮೈಸೂರಿಗೆ ಬಂದರು. ಕಾಲೇಜಿನ ಮಹಡಿಯ ಮೇಲಿನ ಉತ್ತರ ದಿಕ್ಕಿನ ಕಡೆಯ ಮೂಲೆ ಕೋಣೆಯಲ್ಲಿ ಪಾಠ. ಪ್ರತಿದಿನವೂ ಬೆಳಗ್ಗೆ ೧೧ ಗಂಟೆಯಿಂದ ಸಂಜೆ ೫ರ ವರೆಗೂ ಅವಿಶ್ರಾಂತ ಉಪನ್ಯಾಸ. ಅವರಿಗೂ ವಿಶ್ರಾಂತಿಯಿಲ್ಲ, ವಿದ್ಯಾರ್ಥಿಗಳಿಗೂ ವಿಶ್ರಾಂತಿ ಇಲ್ಲ. ಮಧ್ಯೆ ವಿರಾಮವೂ ಇಲ್ಲ, ಕಾಫಿಯೂ ಇಲ್ಲ. ನಡು ನಡುವೆ ಬೋರ್ಡಿನ ಮೇಲೆ ಆಗೊಮ್ಮೆ ಈಗೊಮ್ಮೆ ಕವಿ–ಕೃತಿಗಳ ಕಾಲ ಮುಂತಾದ ನೆನಪಿಡಬೇಕಾದ ಸಂಗತಿಗಳನ್ನು ಗುರುತಿಸುತ್ತಿದ್ದರು–ಬಡ ವಿದ್ಯಾರ್ಥಿಗಳ ಬಳಿ ಕವಿಚರಿತೆಯ ಸಂಪುಟಗಳು ಇರಲಾರವು–ಕಾವೇರಿಯ ಪ್ರವಾಹ. ರಸಸಮಾರಾಧನ ಸಪ್ತಾಹ. ಅದೆಂತಹ ದೈತ್ಯ ಶಕ್ತಿ ! ಅದೆಂತಹ ವೇಗದ ಮಾತುಗಾರಿಕೆ ! ಟಿಪ್ಪಣಿ ತೆಗೆದುಕೊಳ್ಳುವುದಕ್ಕಂತೂ ಸಾಧ್ಯವೇ ಇರಲಿಲ್ಲ. ಪರೀಕ್ಷಾನಿಷ್ಠ ವಿದ್ಯಾರ್ಥಿಗಳು ಟಿಪ್ಪಣಿ ತೆಗೆದುಕೊಳ್ಳುವ ಸಾಹಸವನ್ನೇನೋ ಮಾಡಿದರು. ಜಗತ್ತಿನಲ್ಲಿ ಎಲ್ಲಿಯೇ ಆಗಲಿ ಈ ರೀತಿ ಏಳು ದಿನ ಅಖಂಡ ಪಾಠಪ್ರವಚನವನ್ನು ಮಾಡಿದ ದಾಖಲೆ ಇದೆಯೋ ಇಲ್ಲವೋ ನಾನು ಕಾಣೆ. ಗಿನ್ನೆಸ್ ಬುಕ್‌ನಲ್ಲಿ ದಾಖಲೆಯಾಗಲು ಯೋಗ್ಯವಾದ ಪರಮ ದಾಖಲೆ.

ಬಿ.ಎಂ.ಶ್ರೀ ನಮಗೆ ಮಾತ್ರ ಉಪಾಧ್ಯಾಯರಾಗಿರಲಿಲ್ಲ, ಕನ್ನಡ ನಾಡಿಗೇ ಉಪಾಧ್ಯಾಯರು ; ನಾಡೋಜರು. ಕನ್ನಡ ತಲೆ ಎತ್ತಿ 'ಅಕ್ಕತಂಗಿಯರೊಡನೆ ನಾನು ಸಮ ನಿಮಗೆಂದು' ನಿಲ್ಲುವುದಕ್ಕಾಗಿ, ಕನ್ನಡ ಜನ ಒಂದು ಕುಲವಾಗಿ ಒಂದುಗೂಡಿ ಬದುಕುವುದಕ್ಕಾಗಿ, ಕನ್ನಡದ ಎಲ್ಲ ಮಕ್ಕಳು ಹಳಗನ್ನಡ ಸಾಹಿತ್ಯವನ್ನು ಓದಿಕೊಂಡು ಮೆಚ್ಚಿಕೊಂಡು ಹೆಮ್ಮೆಪಡುವುದಕ್ಕಾಗಿ, ಹೊಸ ಸಾಹಿತ್ಯವನ್ನು ಸೃಷ್ಟಿಸಲು ಸ್ಫೂರ್ತಿ ಪಡೆಯುವುದಕ್ಕಾಗಿ, "ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ" ಎಂದು ಕನ್ನಡ ಕುಲಕೋಟಿಯನ್ನು ಎಚ್ಚರಿಸುವುದಕ್ಕಾಗಿ, ಕನ್ನಡ ನಾಡನ್ನೆಲ್ಲಾ ಸುತ್ತಿ ಹಾಸುಹೊಕ್ಕು ಹರಿದು, ಕನ್ನಡ ಕಾವ್ಯ ಸಂಪತ್ತನ್ನು ಕುರಿತು, ಕನ್ನಡ ಸಮಸ್ಯೆಗಳನ್ನು ಕುರಿತು, ನಾಡಹಬ್ಬಗಳಲ್ಲಿ ಸಂಘ ಸಂಸ್ಥೆಗಳ ವಾರ್ಷಿಕ ಸಭೆ

ಸಮಾರಂಭಗಳಲ್ಲಿ, ಗಂಟೆ ಗಟ್ಟಲೆ ಉಪನ್ಯಾಸ ಮಾಡಿದರು ; ಕನ್ನಡ ಬಳಗಗಳನ್ನು ಕಟ್ಟಿದರು, ಸಂಘಗಳನ್ನು ಹುಟ್ಟಹಾಕಿದರು. ಮುಗುಳರಳುತ್ತಿದ್ದ ಕವಿಗಳ ಬೆನ್ನು ತಟ್ಟಿದರು, ನಲಿವನ್ನು ಊಡಿದರು, ತಿಳಿವನ್ನು ನೀಡಿದರು, ಕನ್ನಡ ತಾಯ ಹಿರಿಮೆಯನ್ನು ಕೊಂಡಾಡಿದರು. ಧನ್ಯೋಽಸ್ಮಿ' ಎಂದು ನಲಿದಾಡಿದರು.

ಹಳಗನ್ನಡದ ನಾಡೋಜ, ಪಂಪ
ಹೊಸಗನ್ನಡದ ನಾಡೋಜ, ಬಿ.ಎಂ.ಶ್ರೀ

* * * *

[illegible]

[illegible]

ಗುಂಪು ೨ – ಜೀವನಚರಿತ್ರೆ

ಎ.ಆರ್. ರಾಜರಾಜವರ್ಮ

ಅಧ್ಯಾಯ ಒಂದು

ಹಿನ್ನೆಲೆ

ಶತಶತಮಾನಗಳ ಉದ್ದಕ್ಕೂ ಬೆಳೆದು ಬಂದಿರುವ ಯಾವುದೇ ಸಾಹಿತ್ಯದ ಚರಿತ್ರೆಯನ್ನು ನಾವು ಪರಿಶೀಲಿಸಿ ನೋಡಿದರೆ, ಅತ್ಯಂತ ಫಲಪ್ರದವಾದ ಮತ್ತು ಸತ್ತ್ವಯುತವಾದ ಕಾಲಗಳಿಗೂ ಬರಡು ಬಿದ್ದು ನಿಸ್ಸತ್ತ್ವವಾದ ಯುಗಗಳಿಗೂ ನಡುವೆ ಏರಿಳಿತಗಳು ಇದ್ದುದನ್ನು ನಾವು ಗಮನಿಸುತ್ತೇವೆ. ಅವನತಿಯ ಕಾಲಗಳೂ ವಿಕಾಸಗೊಂಡು ಉನ್ನತಿ ಪಡೆದ ಕಾಲಗಳೂ ಒಂದಾದಮೇಲೆ ಇನ್ನೊಂದರಂತೆ ಕಾಣಿಸಿಕೊಳ್ಳುತ್ತವೆ; ಆದ್ದರಿಂದ, ಪ್ರಗತಿ ಎಡೆಬಿಡದಂತೆ ಒಂದೇ ಸಮನಾಗಿರುವುದಿಲ್ಲ. ಮಲಯಾಳ ಸಾಹಿತ್ಯದ ಮಹತ್ವದ ಪರಿವರ್ತನೆಯ ಘಟ್ಟಗಳು ಚೆರುಶ್ಶೇರಿ (೧೫ನೆಯ ಶತಕ), ತುಂಜತ್ ಎಷುತ್ತಚ್ಛನ್ (೧೬ನೆಯ ಶತಕ), ಕುಂಚನ್ ನಂಬಿಯಾರ್ (೧೮ನೆಯ ಶತಕ) ಮತ್ತು ಉಣ್ಣಾಯಿ ವಾರಿಯರ್, ಇಂತಹ ಘಟಾನುಘಟಿಗಳನ್ನು ಅವಲಂಬಿಸಿಕೊಂಡಿವೆ. ಈ ಮಹಾಕವಿಗಳ ಕೃತಿಗಳು ತಮ್ಮ ರೂಪರಚನೆ, ವಸ್ತು ಮತ್ತು ಭಾವನೆ– ಈ ಎಲ್ಲ ಅಂಶಗಳಲ್ಲಿಯೂ ಪ್ರಮುಖವಾಗಿವೆ. ಅವರಾದ ಮೇಲೆ ಬಂದವರು ಅವರಿಗಿಂತ ಕಡಮೆ ಕವಿತಾಶಕ್ತಿಯುಳ್ಳ ಬರಹಗಾರರು; ಇವರಲ್ಲಿ ಬಹಳ ಮಂದಿ ಆ ಪ್ರಖ್ಯಾತಪುರುಷರ ಆಚಾರ್ಯಕೃತಿಗಳನ್ನು ಅನುಕರಿಸಲು ಪ್ರಯತ್ನಪಟ್ಟರು.

ಮಲಯಾಳ ಸಾಹಿತ್ಯದಲ್ಲಿ ಅತ್ಯಂತ ಮುಂಚಿನ ಕಾಲ ೧೫ನೆಯ ಶತಮಾನಕ್ಕೆ ಹಿಂದಿನದು ಎಂಬ ಬಗೆಗೆ ಸಾಮಾನ್ಯವಾಗಿ ಬಹುಮತವಿದೆ; ಆ ಕಾಲದಲ್ಲಿ ಚೆರುಶ್ಶೇರಿ ನಂಬೂದರಿಯವರ ಶ್ರೇಷ್ಠ ಕೃತಿರತ್ನ 'ಕೃಷ್ಣಗಾಥಾ' ರಚಿತವಾಯಿತು. ಅದೇ ಕಾಲದಲ್ಲಿ ಮಲಯಾಳ ಭಾಷೆ ಸಾಹಿತ್ಯದ ಭಾಷೆಯಾಗಿ ರೂಪಗೊಳ್ಳುತ್ತಿದ್ದುದನ್ನು ಕಾಣುತ್ತೇವೆ; ಆಗ ಸಂಸ್ಕೃತ ಮತ್ತು ತಮಿಳಿನಂತಹ ಬೆಳೆದುನಿಂತ ಸಾಹಿತ್ಯಗಳು ಅದರ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿದುವು. ಇದೇ ಸಮಯದಲ್ಲಿ ಸಾಹಿತ್ಯಯುಗವು ಜನಪದಗೀತಗಳ ಪುಷ್ಕಳವಾದ ಸಂಪತ್ತನ್ನು ನಮಗೆ ಬಿಟ್ಟುಹೋಗಿದೆ; ಅದು ಬಹುಮಟ್ಟಿಗೆ ಆಡುನುಡಿಯಲ್ಲಿದೆ. ವಾಸ್ತವವಾಗಿ ಕೇರಳದ ಪ್ರೌಢಕಾವ್ಯದ ವಾಙ್ಮಯ ವಾಹಿನಿ ರೂಪಗೊಳ್ಳುವುದರಲ್ಲಿ ಮೂರು

ವಿಶಿಷ್ಟ ಸಾಹಿತ್ಯ ಸಂಪ್ರದಾಯಗಳು ಹರಿದು ಬಂದು ಅದಕ್ಕೆ ಕೂಡಿಕೊಂಡು ನೆರವಾಗಿವೆ: ೧) ದೇಸಿ ಪ್ರವಾಹ, ೨) ತಮಿಳು ಪ್ರವಾಹ, ಮತ್ತು ೩) ಸಂಸ್ಕೃತದ ಪ್ರವಾಹ. 'ಪಾಟ್ಟು' ಪ್ರಕಾರದ ರಚನೆಯಲ್ಲಿ ಪ್ರಾಚೀನ ತಮಿಳಿನ ಪ್ರಭಾವವನ್ನು ಕಾಣಬಹುದು; 'ರಾಮ ಚರಿತ್ರಂ' ಇದಕ್ಕೆ ನಿದರ್ಶನ. 'ಮಣಿಪ್ರವಾಳ' ಶೈಲಿಯ ರಚನೆಗಳು ಸಂಸ್ಕೃತ ಪ್ರಭಾವಕ್ಕೆ ಒಳಗಾದಂಥವು.

ಜೊತೆಗೂಡಿ ಹರಿದು ಬಂದ ಈ ಮೂರು ಶೈಲಿ ಅಥವಾ ಪ್ರಭಾವಗಳು ಗುಣದಲ್ಲಿಯೂ ಗಾಢತೆಯಲ್ಲಿಯೂ ವ್ಯತ್ಯಾಸ ಹೊಂದಿದ್ದುವು; ಒಂದು ಇನ್ನೊಂದರ ಮೇಲೆ ಪ್ರಭಾವ ಬೀರಿತು. ಮೊದಲನೆಯ ದೇಸಿ ಶೈಲಿಯ ಪ್ರವಾಹ ಹೆಚ್ಚು ಆಳ ಇಲ್ಲದ್ದು, ಹಾಗೂ ವರ್ಣರಹಿತ; ಆದರೆ ತಿಳಿಯಾದದ್ದು, ಓಟ ಉಳ್ಳದ್ದು. ಎರಡನೆಯದು ವರ್ಣಮಯವಾದ, ಆಟಾಟೋಪದ ಶೈಲಿ; ಮೂರನೆಯದು ಗಾಢವಾದದ್ದು, ಆದರೆ ಸುತ್ತುಬಳಸಿ ಹುಚ್ಚುಹುಚ್ಚಾಗಿ ಹರಿಯುವಂಥದು, ವಿದ್ವಾಂಸರಾದ ಕೆಲ ಮಂದಿಗೆ ಮಾತ್ರ ಹಿಡಿಸುವಂಥದು. ಈ ಮೂರುಬಗೆಯ ಪರಸ್ಪರ ಪ್ರಭಾವವು ೧೪ನೆಯ ಶತಕದ 'ಉಣ್ಣುನೀಲಿ ಸಂದೇಶಂ' ಮತ್ತು 'ಕಣ್ಣಾಶನ್ ಪಾಟ್ಟುಕಳ್' ಎಂಬುವುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಿದ್ದರೂ, ವಿವಿಧ ಶೈಲಿಗಳ ಹಿತಕರವಾದ ಸಂಮಿಶ್ರಣವನ್ನೂ ಆಡುನುಡಿಯ ಪ್ರಕಾರದ ನಿರ್ಮಾಣವನ್ನೂ ಸೂಚಿಸುವ ಹೊಸ ಶೈಲಿಯ ವಿಕಾಸವು ಒಂದು ಶ್ರೇಷ್ಠ ಕೃತಿಯಾದ 'ಕೃಷ್ಣಗಾಥ'ದಲ್ಲಿ ಗೋಚರಿಸುತ್ತದೆ.

ಇತರ ಸಂಪ್ರದಾಯಗಳಲ್ಲಿ, ವಿಶೇಷವಾಗಿ ಸಂಸ್ಕೃತ 'ಮಾರ್ಗ' ಸಂಪ್ರದಾಯದಲ್ಲಿ, ಉತ್ತಮವಾದದ್ದು ಯಾವುದುಂಟೋ ಅದನ್ನು ಸ್ವೀಕರಿಸಿ ಅಳವಡಿಸಿಕೊಳ್ಳುವ ಪ್ರವೃತ್ತಿಯು ತುಞ್ಚತ್ ಎಪುತಚ್ಛನ್ ಅವನ ಕೈಲಿ ಪರಾಕಾಷ್ಠೆಯನ್ನು ಮುಟ್ಟಿತು; ಆತ ಸಾಂಪ್ರದಾಯಿಕ ಮಲಯಾಳ ಭಾಷೆಯನ್ನು ಒಮ್ಮಿಂದೊಮ್ಮಿಗೆ ಜನಪ್ರಿಯವಾಗಿ ಮಾಡಿ ಪ್ರೌಢಗೊಳಿಸಿದನು. ಮಲಯಾಳ ಭಾಷೆಯ ಓದುಗರು ಆತನ 'ರಾಮಾಯಣ' ಮತ್ತು 'ಮಹಾಭಾರತ'ಗಳಿಗೆ ಚಿರಋಣಿಗಳು; ಚಿರಋಣಿಗಳಾಗಿರಲು ಕಾರಣ, ಅವುಗಳಲ್ಲಿಯ ಕಾವ್ಯಗುಣದ ಭವ್ಯತೆ ಹಾಗೂ ಆಧ್ಯಾತ್ಮಿಕ ದೃಷ್ಟಿ.

ಸಾಹಿತ್ಯ ಪರ್ವತ ಶ್ರೇಣಿಯ ಎರಡನೆಯ ಉಚ್ಚಶಿಖರದ ನೋಟವನ್ನು ನಾವು ಕಾಣುವಷ್ಟರಲ್ಲಿ ಒಂದು ಶತಮಾನಕ್ಕೂ ಹೆಚ್ಚಿನ ಕಾಲ ಕಳೆದುಹೋಗಿರುತ್ತದೆ. ವಾಸ್ತವವಾಗಿ, ಜೋಡಿ ಶಿಖರಗಳನ್ನು ನಾವು ಕಾಣುತ್ತೇವೆ. ಮೊದಲನೆಯ ಶಿಖರಪ್ರಾಯನೆಂದರೆ, ಕಥಕ್ಕಳಿ ಸಾಹಿತ್ಯದ ಅಗ್ರಗಣ್ಯನಾದ ಉಣ್ಣಾಯಿವಾರಿಯರ್:

ಆತನ 'ನಳಚರಿತ್ರಂ ಆಟ್ಟಕ್ಕಥ' ತನ್ನ ನಾಟಕೀಯ ಗುಣಗಳಿಗಾಗಿಯೂ ಸ್ವೋಪಜ್ಞತೆಗಾಗಿಯೂ ಪ್ರಸಿದ್ಧವಾಗಿದೆ; ನಾಲ್ಕು ದಿನ ಪ್ರದರ್ಶಿತವಾಗಬೇಕೆಂದು ರಚಿತವಾದದ್ದು ಅದು. ಕಥಕ್ಕಳಿ ಒಂದು ಮಹೋನ್ನತ ಕಲಾಪ್ರಕಾರ; ಅದರಿಂದ ಪೂರ್ಣ ಆನಂದಾನುಭವನ್ನು ಪಡೆಯಲು ರಸಿಕಪ್ರೇಕ್ಷಕವೃಂದ ಇರಬೇಕು. ಉತ್ಸಾಹಿಯೂ ಬುದ್ಧಿಚಮತ್ಕಾರವುಳ್ಳವನೂ ಆಗಿದ್ದ ಕುಞ್ಚನ್ ನಂಬಿಯಾರ್ ಜನಸಾಮಾನ್ಯದ ಅಗತ್ಯವನ್ನು ಅರಿತುಕೊಂಡು ತುಳ್ಳಲ್ ಎಂಬ ಕಲಾಪ್ರಕಾರವನ್ನು ರೂಪಿಸಿ, ಗಣ್ಯವಾದ ಸಾಹಿತ್ಯರಾಶಿಯನ್ನು ನಿರ್ಮಾಣ ಮಾಡಿದನು; ಪಂಡಿತ ಪಾಮರರಿಬ್ಬರಿಗೂ ರುಚಿಸುವಂಥದು ಅದು. ನಂಬಿಯಾರ್ ಪೌರಾಣಿಕ ಕಥಾ ವಸ್ತುಗಳನ್ನೇ ಉಪಯೋಗಿಸಿಕೊಂಡರೂ ಕೂಡ, ಆತನ ಪ್ರತಿಭೆ ಎಂಥದೆಂದರೆ, ಪ್ರತಿಯೊಂದು ಕಥೆಯೂ ಪ್ರತಿಯೊಂದು ಸನ್ನಿವೇಶಸರಣಿಯೂ ಸಮಕಾಲೀನವಾಗಿ ಕಾಣುತ್ತ, ಓದುಗರನ್ನು ಸಂತೋಷದಲ್ಲಿ ಮುಳುಗಿಸಿಬಿಡುವುವು. ಈತ ೧೮ನೆಯ ಶತಮಾನಕ್ಕೆ ಸೇರಿದವನು.

ಈ ಮಹಾವ್ಯಕ್ತಿಗಳ ಸ್ವೋಪಜ್ಞತೆ ಎಷ್ಟರಮಟ್ಟಿಗಿತ್ತೆಂದರೆ, ಸೂತ್ರಬದ್ಧ ಸಾಹಿತ್ಯ ರೂಪಗಳನ್ನು ಅತಿಕ್ರಮಿಸಿ ಅವರು ತಮ್ಮದೇ ಆದ ಏನಾದರೊಂದು ಕೊಡುಗೆಯನ್ನು ನೀಡಲು ಸಮರ್ಥರಾಗಿದ್ದರು. ಮಲಯಾಳ ಸಾಹಿತ್ಯದಲ್ಲಿ ಕುಞ್ಚನ್ ನಂಬಿಯಾರ್‌ನ ಮತ್ತು ೧೯ನೆಯ ಶತಕದ ನಡುವಣ ಕಾಲ ಬಲುಮಟ್ಟಿಗೆ ಬರಡಾದ ಯುಗವಾಗಿದೆ. ಆ ಬಳಿಕ ಬಹುಮಂದಿ ಲೇಖಕರು ಏಳಿಗೆಗೆ ಬರುವುದನ್ನು ಕಾಣುತ್ತೇವೆ; ಅವರಲ್ಲಿ ಹಲವರು ಸಂಸ್ಕೃತ ಸಂಪ್ರದಾಯದ ತುಳಿದು ಸವೆದ ಜಾಡನ್ನೇ ಹಿಡಿದವರು. ಮಹಾಕಾವ್ಯ, ಚಂಪೂಕಾವ್ಯ ಮತ್ತು ಸಂದೇಶ ಕಾವ್ಯ– ಈ ಪುರಾತನ ಕಾವ್ಯ ಪ್ರಕಾರಗಳಲ್ಲಿ ಅವರು ಪ್ರಯೋಗ ನಡಸಿದರು. ಇದರೊಂದಿಗೆಯೇ ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವನ್ನೂ ನಾವು ಕಾಣುತ್ತೇವೆ. ಇವರಲ್ಲಿ ಕೆಲವರು ಸಂಸ್ಕೃತ ಶಬ್ದಗಳನ್ನೂ ರೂಪಗಳನ್ನೂ ಅಳವಡಿಸಿಕೊಂಡು ಒಂದು ಅಲಂಕಾರಮಯ ಶೈಲಿಯನ್ನು ಬಳಕೆಗೆ ತಂದರು. ಇತರರಾದರೋ ಬಳಕೆ ಮಾತಿನ ಚುರುಕಾದ ಸತ್ತ್ವಶಾಲಿಯಾದ ಪ್ರಯೋಗಗಳನ್ನುಳ್ಳ ಶುದ್ಧ ದೇಸಿ ಶೈಲಿಯನ್ನು ಪುರಸ್ಕರಿಸಿದರು.

ಸಾಹಿತ್ಯದ ಸುವರ್ಣಯುಗ

೧೮೫೦ರ ತರುವಾಯದ ಆರು ದಶಕಗಳಲ್ಲಿ ಅನೇಕ ಪ್ರಮುಖ ಗದ್ಯಪದ್ಯ ಲೇಖಕರು ನಮಗೆ ಕಂಡುಬರುತ್ತಾರೆ. ಅವರಲ್ಲಿ ಹೆಚ್ಚು ಪ್ರಖ್ಯಾತರಾದವರೆಂದರೆ:–

ಕೇರಳವರ್ಮ (೧೮೪೫–೧೯೧೫)– ಕವಿ ಮತ್ತು ವಿದ್ವಾಂಸ

ಎ.ಆರ್. ರಾಜರಾಜವರ್ಮ (೧೮೬೩–೧೯೧೮)– ವಿದ್ವಾಂಸ ಮತ್ತು ವಿಮರ್ಶಕ

ಕೊಟ್ಟುಂಜಲ್ಲೂರ್ ಕುಂಞ್ ಕುಟ್ಟನ್

ತಂಪುರಾನ್ (೧೮೬೫–೧೯೧೩– ಕವಿ ಮತ್ತು ಭಾಷಾಂತರಕಾರ

ಚಂತು ಮೆನೋನ್ (೧೮೪೭–೧೯೦೦)– ಕಾದಂಬರಿಕಾರರು

ಸಿ.ವಿ. ರಾಮನ್ ಪಿಳ್ಳೆ (೧೮೫೮–೧೯೨೨)– ಕಾದಂಬರಿಕಾರರು

ಕರನ್ ಆಶಾನ್ (೧೮೭೩–೧೯೨೪)– ಆಧುನಿಕ ಕಾಲದ ಕವಿ

ಉಳ್ಳೂರ್ (೧೮೭೭–೧೯೪೯)– ಆಧುನಿಕ ಕಾಲದ ಕವಿ

ವಳ್ಳತ್ತೋಳ್ (೧೮೭೮–೧೯೫೮)– ಆಧುನಿಕ ಕಾಲದ ಕವಿ

–ಇವರೆಲ್ಲರೂ ೧೯ನೆಯ ಶತಮಾನದಲ್ಲಿ (ಬಹುತೇಕ ಅದರ ಉತ್ತರಾರ್ಧದಲ್ಲಿ) ಜನಿಸಿದವರೆಂಬುದನ್ನು ನಾವು ಗಮನಿಸಬಹುದು; ಅವರ ಅತ್ಯುತ್ತಮ ಕೃತಿಗಳು ೧೮೮೦ರಿಂದ ೧೯೩೦ರ ನಡುವೆ ನಿರ್ಮಾಣಗೊಂಡುವು. ಇದನ್ನು ಮಲಯಾಳಂ ಸಾಹಿತ್ಯದ ಪುನರುಜ್ಜೀವನದ ಕಾಲವೆಂದು ಭಾವಿಸ ಬಹುದು. ಸ್ಥೂಲವಾಗಿ ಹೇಳುವುದಾದರೆ, ಮಲಯಾಳ ಸಾಹಿತ್ಯದ ಸುವರ್ಣ ಯುಗವು ೧೮೫೦ರ ಬಳಿಕ ಒಂದು ಶತಮಾನ ಕಾಲ ಎನ್ನಬಹುದು.

ನಾವು ಎಂಟು ಹೆಸರುಗಳನ್ನು ಮಾತ್ರ ಉಲ್ಲೇಖಿಸಿದ್ದರೂ, ಸಾಹಿತ್ಯಕ್ಕೆ ಘನವಾದ ಕೊಡುಗೆಯನ್ನು ನೀಡಿರುವ ಇನ್ನೂ ಕೆಲರು ಉಂಟು. ಮಲಯಾಳಿ ಸಾಹಿತ್ಯೋದ್ಯಾನದಲ್ಲಿ ನೂರಾರು ಹೂಗಳು ಅರಳಿ ಆ ಕಾಲವನ್ನು ನಿಜವಾಗಿ ವಸಂತ ಋತು ಎನ್ನಿಸಿಬಿಟ್ಟವು. ಹೊಸ ಸಾಹಿತ್ಯರೂಪಗಳನ್ನೂ ಕಥಾವಸ್ತುಗಳನ್ನೂ, ಹೊಸ ಮಾರ್ಗಗಳನ್ನೂ ಒಳನೋಟಗಳನ್ನೂ ಮೊದಲ ಬಾರಿಗೆ ಪರಿಚಯ ಮಾಡಿಕೊಡುವ ಮೂಲಕ ಹಲವರು ಸಾಹಿತ್ಯದ ಬಗೆಗೆ ಎಲ್ಲ ಕಡೆ ಎಚ್ಚರವನ್ನು ಉಂಟುಮಾಡಿದರಾದರೂ ನಿಜವಾದ ಮುಂದಾಳುಗಳಾಗಿದ್ದವರು ಕೆಲವರು ಮಾತ್ರ. ಅಂಥವರಲ್ಲಿ ಕೇರಳವರ್ಮ ವಲಿಯ ಕೋಯಿಲ್ ತಂಪುರಾನ್ ಮತ್ತು ಆತನ ಸೋದರ ಅಳಿಯ (ಸಹೋದರಿಯ ಮಗ) ಎ.ಆರ್. ರಾಜರಾಜವರ್ಮ ತಂಪುರಾನ್ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಸಾಹಿತ್ಯದ ಈ ಹೊಸ ಯುಗದ ಮಹೋನ್ನತ ವ್ಯಕ್ತಿಗಳು ಎಂದು ಅವರು ಸರ್ವಮಾನ್ಯರಾಗಿದ್ದರು.

ಕೇರಳವರ್ಮನು **ಸಾಹಿತ್ಯ ಸಮ್ರಾಟ್** ಎಂದು ಪರಿಗಣಿಸಲ್ಪಟ್ಟಿದ್ದನು. ಸಂಸ್ಕೃತ

ಮತ್ತು ಮಲಯಾಳ ಭಾಷೆಗಳಲ್ಲಿ ಆತನಿಗಿದ್ದ ಆಳವಾದ ಪಾಂಡಿತ್ಯ, ಸಾಹಿತ್ಯ ಮತ್ತು ವಿದ್ಯಾಕ್ಷೇತ್ರಗಳ ಅಭಿವೃದ್ಧಿಗೆ ಸೇವೆ ಸಲ್ಲಿಸುವುದರಲ್ಲಿ ಆತನಿಗಿದ್ದ ಕಳಕಳಿ, ಇಷ್ಟರ ಜೊತೆಗೆ ರಾಜವಂಶದ ಸಮೀಪ ಬಂಧುವೆನಿಸಿಕೊಂಡು ಆತ ಪಡೆದಿದ್ದ ದೊಡ್ಡ ಪ್ರತಿಷ್ಠೆ,– ಇವೆಲ್ಲವೂ ಆತನಿಗೊಂದು ಉನ್ನತ ಸ್ಥಾನವನ್ನು ದೊರಕಿಸಿಕೊಟ್ಟಿದ್ದುವು; ಅದನ್ನು ಆ ಮುನ್ನ ಅಥವಾ ಆಮೇಲೆ ಯಾರೂ ಅನುಭೋಗಿಸಿರಲಿಲ್ಲ. ಒಬ್ಬ ಕವಿಯಾಗಿ ಆತ ಸಂಸ್ಕೃತ ಸಂಪ್ರದಾಯದ ಸೊಬಗನ್ನೂ ಅಗಾಧತೆಯನ್ನೂ ಮನಗಂಡಿದ್ದನು. ಆದರೆ ಆತನು ಇಂಗ್ಲಿಷ್ ಮಾದರಿಯ ವಿದ್ಯಾಭ್ಯಾಸದ ಪ್ರಭಾವಕ್ಕೂ ಒಳಗಾಗಿದ್ದನು; ಪಠ್ಯಪುಸ್ತಕ ಸಮಿತಿಯ ಒಬ್ಬ ಸದಸ್ಯನಾಗಿರುತ್ತ, ವಿದ್ಯಾರ್ಥಿಗಳು ತಮ್ಮ ಗದ್ಯ ಪ್ರಬಂಧಗಳನ್ನು ಸರಳವಾದ, ನೇರವಾದ ಶೈಲಿಯಲ್ಲಿ ಬರೆಯುವುದಕ್ಕೆ ಉತ್ತೇಜನ ಕೊಟ್ಟನು. ಆದರೆ ಬುದ್ಧಿವಂತ ವರ್ಗಕ್ಕೆಂದು ತಾನೇ ಬರೆಯುವಾಗ, ಕೃತಕವಾದ ಅಲಂಕೃತಶೈಲಿಯಲ್ಲಿ ಬರೆಯುವುದು ಸರಿ ಎಂದು ಆತ ಭಾವಿಸಿದ್ದನು; ಆತನ 'ಅಕ್ಬರ್' ಎಂಬ ಕಾದಂಬರಿ ಈ ಬಗೆಯ ಶೈಲಿಗೆ ಉದಾಹರಣೆ. ಎ.ಆರ್. ರಾಜರಾಜವರ್ಮನು ವ್ಯಾಕರಣಕಾರ, ಕವಿ ಹಾಗೂ ವಿಮರ್ಶಕ; ತನ್ನ ಸೋದರಮಾವನಲ್ಲಿ ಆತನಿಗೆ ಅಪಾರ ಗೌರವ; ಆದರೆ ಸಾಹಿತ್ಯ ಕೃತಿ ರಚನೆ ಮತ್ತು ಕೃತಿಮೌಲ್ಯಮಾಪನಗಳಿಗೆ ಸಂಬಂಧಪಟ್ಟ ಅನೇಕ ವಿಚಾರಗಳಲ್ಲಿ ಅವರಿಬ್ಬರಲ್ಲಿ ಮೂಲಭೂತವಾಗಿ ಅಭಿಪ್ರಾಯ ಭೇದಗಳಿದ್ದುವು. ವಾಗಾಡಂಬರ, ಕಲ್ಪನಾಶಕ್ತಿ, ಮತ್ತು ಸಂಸ್ಕೃತ ಕಾವ್ಯದ ಮಾದರಿಯ ನಿಯಮ ಪಾಲನೆಯ ಔಚಿತ್ಯ– ಇವುಗಳಿಗೆ ಸಂಬಂಧಪಟ್ಟಂತೆ ಇವರಿಬ್ಬರೂ ತಳೆದಿದ್ದ ನಿಲುವನ್ನು ಪರಿಶೀಲಿಸುವ ಸಂದರ್ಭ ಈ ಮುಂದಿನ ಪುಟಗಳಲ್ಲಿ ನಮಗೆ ಒದಗಿಬರುತ್ತದೆ.

ತಮ್ಮ ಮಲಯಾಳ ಸಾಹಿತ್ಯದ ಸಮಗ್ರಚರಿತ್ರೆಯಲ್ಲಿ*, ಮಹಾಕವಿ ಉಳ್ಳೂರ್ ಎಸ್. ಪರಮೇಶ್ವರ ಅಯ್ಯರ್ ಅವರು ಎ.ಆರ್. ರಾಜರಾಜವರ್ಮನ ಜೀವನ ಮತ್ತು ಸಾಧನೆಗಳನ್ನು ಈ ಮುಂದಿನ ಮಾತುಗಳಲ್ಲಿ ಸಂಕ್ಷೇಪವಾಗಿ ತಿಳಿಯ ಹೇಳಿದ್ದಾರೆ: "ಮಲಯಾಳ ಸಾಹಿತ್ಯ ಸೌಧದ ಗೋಡೆಗಳನ್ನು ಇತರ ಬರಹಗಾರರು ವರ್ಣಚಿತ್ರಗಳಿಂದಲೂ ರೇಖಾಚಿತ್ರಗಳಿಂದಲೂ ಅಲಂಕರಿಸಿದ್ದರು; ರಾಜರಾಜ ವರ್ಮನಾದರೋ ಆ ಸೌಧದ ತಳಪಾಯ ಹಾಗೂ ಗೋಪುರಗಳ ಮೇಲೆ ಕೆಲಸ ಮಾಡಿ ಕೇರಳದ ಜನತೆಯ

---

* 'ಕೇರಳ ಸಾಹಿತ್ಯ ಚರಿತ್ರಂ'– ಸಂಪುಟ ೫.

ಪ್ರಯೋಜನಾರ್ಥವಾಗಿ ಅದನ್ನು ಚಿರಸ್ಥಾಯಿಯಾದ, ಭವ್ಯವಾದ ಕಟ್ಟಡವಾಗಿ ಮಾಡಿದನು. ವಾಸ್ತುಶಿಲ್ಪ ಸದೃಶವಾದ ಈ ಸಾಧನೆಯನ್ನು ಅವಲಂಬಿಸಿದೆ ಆತನ ಕೀರ್ತಿ; ಅದು ಎಂದೆಂದಿಗೂ ಉಳಿದಿರತಕ್ಕದ್ದು. ಆತನಲ್ಲಿ ವಿಕಾಸಗೊಂಡಿದ್ದಂಥ ಸೂಕ್ಷ್ಮ ನಿರೀಕ್ಷಣ ಸಾಮರ್ಥ್ಯ, ಸ್ವೋಪಜ್ಞತೆ ಮತ್ತು ಔಚಿತ್ಯಪ್ರಜ್ಞೆಗಳನ್ನು ಉಳ್ಳ ಬೇರೆ ಯಾರೂ ಈ ಆಧುನಿಕ ಯುಗದಲ್ಲಿ ಕೇರಳದಲ್ಲಿಲ್ಲ. ಯಾವ ಕಾಲದಲ್ಲಿಯೇ ಆಗಲಿ ಯಾವ ಸ್ಥಳದಲ್ಲಿಯೇ ಆಗಲಿ, ಅಂಥ ಅತಿ ಮಾನವ ವ್ಯಕ್ತಿಗಳು ಕಂಡುಬರುವುದು ಅಪೂರ್ವ.

* * * *

ಅಧ್ಯಾಯ ಎರಡು

ಬೆಳವಣಿಗೆಯ ವರ್ಷಗಳು

ನಮ್ಮ ಕಥಾನಾಯಕನ ಪೂರ್ತಿ ಹೆಸರು ಎ.ಆರ್. ರಾಜರಾಜವರ್ಮ ಕೋಯಿ ತಂಪುರಾನ್. ರಾಜ, ವರ್ಮ, ತಂಪುರಾನ್, ಕೋಯಿತಂಪುರಾನ್ (ಕೋಯಿಲ್+ತಂಪುರಾನ್)[೧] ಎಂಬೀ ಮಾತುಗಳು ರಾಜವಂಶದೊಂದಿಗೆ ಸಂಬಂಧ ಹೊಂದಿದ ವ್ಯಕ್ತಿಗಳನ್ನು ಸೂಚಿಸುತ್ತವೆ, ಮತ್ತು ಆಳುವ ವರ್ಗ ಎಂದರೆ ಕ್ಷತ್ರಿಯರೊಂದಿಗೆ ಸಮೀಪ ಸಂಬಂಧವನ್ನು ನಿರ್ದೇಶಿಸುತ್ತವೆ. ಮಲಯಾಳ ಸಾಹಿತ್ಯದಲ್ಲಿ ಈ ಶಬ್ದಗಳು ಪ್ರಮುಖವಾಗಿ ಕಂಡುಬರುತ್ತವೆ; ಇದರಿಂದ ಈ ಸಣ್ಣ ಪಂಗಡದ ಜನ ಕೇರಳದ ಸಾಂಸ್ಕೃತಿಕ ಜೀವನಕ್ಕೆ ನೀಡಿರುವ ಕೊಡುಗೆ ಎಷ್ಟು ಸತ್ವಪೂರ್ಣವಾದದ್ದು ಎಂಬುದು ವ್ಯಕ್ತಪಡುತ್ತದೆ.

ರಾಜರಾಜವರ್ಮ ಹುಟ್ಟಿದ್ದು ೧೮೬೩ರಲ್ಲಿ, ಚಣ್ಣನಾಶ್ಶೇರಿ ಎಂಬಲ್ಲಿಯ ಲಕ್ಷ್ಮೀಪುರಂ ಅರಮನೆಯಲ್ಲಿ. ಚಣ್ಣನಾಶ್ಶೇರಿ ತಿರುವನಂತಪುರಕ್ಕೆ ಉತ್ತರದಲ್ಲಿ ೧೪೦ ಕಿಲೋಮೀಟರ್ ದೂರದಲ್ಲಿರುವ ಜನಬಾಹುಳ್ಯವುಳ್ಳ ಪಟ್ಟಣ. ಮಲಬಾರಿನಲ್ಲಿ ಪ್ರಚುರವಾಗಿರುವ ಶಕೆಗೆ ಅನುಗುಣವಾಗಿ ಆತನ ಸರಿಯಾದ ಜನ್ಮದಿನ ೧೦೩೮ರ ಕುಂಭಮಾಸದ ನವಮಿ. ರಾಜವಂಶಕ್ಕೆ ಸೇರಿದ ವ್ಯಕ್ತಿಗಳಿಗೆ ಅವರ ಜನ್ಮನಕ್ಷತ್ರದ ಪ್ರಕಾರ ಹೆಸರಿಡುವುದು ಪದ್ಧತಿ. ಅದರಂತೆ ಆತನ ಹೆಸರು ಪೂರುಟ್ಟಾತಿ (ಎಂದರೆ, ೨೫ನೆಯ ನಕ್ಷತ್ರ, ಪೂರ್ವಾಭಾದ್ರ) ಎಂದಾಯಿತು.

ಚಣ್ಣನಾಶ್ಶೇರಿಯ ತಂಪುರಾನರ ವಂಶಕ್ಕೂ ದಕ್ಷಿಣ ಮಲಬಾರಿನಲ್ಲಿಯ ಪರಪ್ಪೂರು ಸ್ವರೂಪಮ್‌ಗೂ ಸಂಬಂಧ ಬೆಳೆದು ಬಂದಿತ್ತು; ಈ ವಂಶ ಪರಂಪರಾಗತವಾಗಿ ಬಂದ ಸಂಸ್ಕೃತಿಗೂ ಘನತೆಗೂ ಪ್ರಖ್ಯಾತವಾಗಿತ್ತು. ಹೈದರ್ ಆಲಿಯ ದಾಳಿಯ ಹೊಡೆತದಿಂದ ಪಾರಾಗಲು ಮಲಬಾರ್ ಪ್ರಾಂತದಿಂದ

---

೧. ತಂಪುರಾನ್=ಒಡೆಯ, ಸ್ವಾಮಿ; ಗೌರವವನ್ನು ಸೂಚಿಸುವ ಶಬ್ದ. ಕೋಯಿಲ್=ರಾಜತ್ವ ಇಲ್ಲವೆ ದೇವಾಲಯಗಳ ಸಂಬಂಧದಲ್ಲಿ ಪ್ರಯೋಗವಾಗುವ ಶಬ್ದ. ಕೋಯಿತಂಪುರಾನ್=ರಾಜ ಕುಮಾರಿಯ ಪತಿಯನ್ನು ಕುರಿತು ಪ್ರಯೋಗವಾಗುವ ಪದ.

ತಿರುವಾಂಕೂರಿಗೆ ೧೭೬೬ರಲ್ಲಿ ಈ ವಂಶದ ಅನೇಕ ಕುಟುಂಬಗಳು ವಲಸೆಬಂದವು; ಈ ಮಹತ್ವದ ಘಟನೆಯ ಬಗೆಗೆ ಚರಿತ್ರೆಯಲ್ಲಿ ಉಲ್ಲೇಖವಿದೆ. ಪರಪ್ಪೂರು ಸವರೂಪದ ಕೆಲವು ಶಾಖೆಗಳೂ ಅದೇ ಕಾಲದಲ್ಲಿ ಹಿಂದಿನ ತಿರುವಾಂಕೂರು ಸಂಸ್ಥಾನಕ್ಕೆ ಧಾವಿಸಿ ಅಲ್ಲಿ ಆಶ್ರಯ ಪಡೆದುವು. ಉದಾರಶೀಲನಾದ ತಿರುವಾಂಕೂರಿನ ಮಹಾರಾಜನು ಅವರುಗಳನ್ನು ಎಷ್ಟು ಚೆನ್ನಾಗಿ ನೋಡಿಕೊಂಡನೆಂದರೆ, ಮತ್ತೆ ಶಾಂತಿ ನೆಲಸಿದಾಗ ಅವರುಗಳು ಹಿಂದಿರುಗಲು ಇಷ್ಟಪಡಲಿಲ್ಲ. ಇಷ್ಟು ಮಾತ್ರವಲ್ಲ; ಅವನು ತೋರಿದ ಔದಾರ್ಯ ನೀಡಿದ ಆಶ್ರಯ ಎಷ್ಟರಮಟ್ಟಿಗೆ ಇದ್ದುವು ಎಂದರೆ, ರಾಜವಂಶದ ಕೆಲವು ನಿರ್ದಿಷ್ಟ ಶಾಖೆಗಳೊಂದಿಗೆ ವಿವಾಹಸಂಬಂಧ ಬೆಳಸಲು ಅವರಲ್ಲಿ ಕೆಲವರಿಗೆ ಆಹ್ವಾನ ನೀಡಲಾಯಿತು. ಅಂಥವರಲ್ಲಿ ರಾಜರಾಜವರ್ಮನ ಪೂವಿಕರ ಕುಟುಂಬವೂ ಒಂದಾಗಿತ್ತು.

ರಾಜರಾಜವರ್ಮನಿಗೆ ಜನ್ಮವಿತ್ತ ತಾಯ್ತಂದೆಗಳು ಮೇಲ್ಮಟ್ಟದ ಸುಸಂಸ್ಕೃತರು. ಆತನ ತಾಯಿ ಕುಂಞಿಕ್ಕಾವು ತಂಪುರಾಟ್ಟಿ ಸಾಹಿತ್ಯಸಾಮ್ರಾಟ್ ಕೇರಳವರ್ಮನ ದೊಡ್ಡಮ್ಮನ (ತಾಯಿಯ ಅಕ್ಕನ) ಮಗಳು; ಚೊಕ್ಕ ಬಂಗಾರದಂಥ ಒಳ್ಳೆಯ ನಡತೆಯ ಹೆಣ್ಣುಮಗಳು. ಪಾಟ್ಟಿಯಲ್ ಇಲ್ಲಮ್‌ನ ವಾಸುದೇವನ್ ನಂಬೂದರಿ ದೊಡ್ಡ ವೇದವಿದ್ವಾಂಸ; ತುಂಬ ಹಾಸ್ಯಸ್ವಭಾವದ ಮನುಷ್ಯ. ಆಗಿನ ಕಾಲದಲ್ಲಿ ಕ್ಷತ್ರಿಯ ಮತ್ತು ನಾಯರ್ ಜನಾಂಗದ ಪ್ರತಿಷ್ಠಿತ ಕುಟುಂಬಗಳೊಂದಿಗೆ ನಂಬೂದರಿ ಬ್ರಾಹ್ಮಣರು ವಿವಾಹ ಸಂಬಂಧವನ್ನು ಬೆಳೆಸಿದ್ದರು.

ಎಳೆಯ ಮಗ ರಾಜರಾಜವರ್ಮನನ್ನು ಕೊಚ್ಚಪ್ಪನ್ ಎಂದು ಕರೆಯುತ್ತಿದ್ದರು; ಅವನಿಗೆ ಸುಮಾರು ಎರಡು ವರ್ಷ ಮಾತ್ರ ವಯಸ್ಸಾಗಿದ್ದಾಗ, ಲಕ್ಷ್ಮೀಪುರಂ ಅರಮನೆಯಲ್ಲಿ ತೀವ್ರವಾದ ಅಭಿಪ್ರಾಯಭೇದ ಮತ್ತು ವಿವಾದಗಳು ತಲೆದೋರಿದುವು; ಆ ಕಾರಣ ಅಲ್ಲಿನ ಕೆಲವು ಮಂದಿ ಚಣ್ಣನಾಶ್ಶೇರಿಗೆ ಸುಮಾರು ೨೦ ಮೈಲಿ ದೂರದಲ್ಲಿದ್ದ ಕಾರ್ತಿಕಪ್ಪಳ್ಳಿಗೆ ಹೊರಟುಹೊದರು. ಇಲ್ಲಿ ಕೇರಳವರ್ಮ ಮತ್ತು ಅವನ ಅಣ್ಣ ರಾಜರಾಜವರ್ಮ ಬಗೆ ಬಗೆಯ ಕಷ್ಟಗಳನ್ನು ಎದುರಿಸಿದರು. ಕೆಲಕಾಲದ ತರುವಾಯ ಅವರು ಆಳುವ ಮಹಾರಾಜನ ಸಹಾಯ ಪಡೆದು ಹರಿಪಾಟ್ ಎಂಬಲ್ಲಿ ಒಂದು ಹೊಸ ಭವನಕ್ಕೆ ತೆರಳಿದರು. ಈ ಹೊಸ ಭವನವನ್ನು 'ಅನಂತಪುರಂ ಅರಮನೆ' ಎಂದು ಕರೆಯಲಾಯಿತು. ನಮ್ಮ ಪುಟ್ಟ ಕಥಾನಾಯಕ ತನ್ನ ಶೈಶವದ ಕಾಲವನ್ನು ಕಳೆದದ್ದು ಇಲ್ಲಿಯೆ.

ಸೋದರ ಬಾಂಧವ್ಯದ ವಿದ್ವಾಂಸರಾದ ಹಿರಿಯರು, ದಯಾಮಯಿಯಾದ ತಾಯಿ, ಇವರುಗಳ ಒಲವಿನ ಆರೈಕೆಯಲ್ಲಿ ಕಳೆದ ಕಾಲ ಒಟ್ಟಿನ ಮೇಲೆ

ಕೊಚ್ಚಪ್ಪನ ಪಾಲಿಗೆ ಸುಖಮಯವಾಗಿದ್ದರೂ ಕೂಡ, ಬಲುಮಟ್ಟಿಗೆ ಅವನ ಪ್ರಾಣಕ್ಕೇ ಸಂಚಕಾರ ತಂದ ಎರಡು ಆಕಸ್ಮಿಕ ವಿಪತ್ತುಗಳು ಸಂಭವಿಸಿದುವು. ಮೊದಲ ಸಲ ಅವನು ನೀರಿನಲ್ಲಿ ಮುಳುಗಿಹೋಗುವುದರಲ್ಲಿದ್ದನು. ಆಗ ಮಳೆಗಾಲ. ಮನೆಯ ಬಳಿ ಒಂದು ಆಳವಾದ ದೊಡ್ಡ ಕೊಳ. ಎಳೆ ಹರೆಯದ ಸೋದರಬಂಧುಗಳೊಂದಿಗೆ ದೋಣಿಯಲ್ಲಿ ತೇಲಾಡಬೇಕು ಎಂದು ಆಸೆಯಾಯಿತು ಪೋರನಿಗೆ. ದೋಣಿಯಲ್ಲಿ ಹುಡುಗರಿಗೆ ನೆರವಾಗಲು ಒಬ್ಬಳು ಸೇವಕಿಯೇನೋ ಇದ್ದಳು. ಸಣ್ಣ ದೋಣಿ ಮಗುಚಿಕೊಂಡಿತು; ದೋಣಿಯಲ್ಲಿದ್ದ ಮೂವರೂ ದೋಣಿಯಾಚೆ ಬಿದ್ದು ನೀರು ಪಾಲಾದರು. ಈ ಎಳೆಯರನ್ನು ನೀರಿನಿಂದ ಪಾರು ಮಾಡುವ ವೇಳೆಗೆ ಅವರು ಸಾಯುವ ಸ್ಥಿತಿಯಲ್ಲಿದ್ದರು. ಆದರೆ ಸುದೈವದಿಂದ ಅವರಿಗೆ ಸರಿಯಾದ ಪ್ರಥಮ ಚಿಕಿತ್ಸೆ ಮಾಡಿದ್ದರಿಂದ ಅವರನ್ನು ಬದುಕಿಸಿಕೊಳ್ಳಲಾಯಿತು. ಆಗ್ಗೆ ಇನ್ನು ಏಳು ತುಂಬಿರದಿದ್ದ ಕೊಚ್ಚಪ್ಪನ್ ದೊಡ್ಡವನಾದ ಮೇಲೆ ಆ ದುರ್ಘಟನೆಯನ್ನೂ ಹುಡುಗರನ್ನು ಕೊಳಕ್ಕೆ ಕರೆದುಕೊಂಡು ಹೋದಾಗ ತಮ್ಮ ಅಲಕ್ಷ್ಯಕ್ಕಾಗಿ ಹೆಂಗಸರು ತಿಂದ ಬೈಗುಳನ್ನೂ ಜ್ಞಾಪಿಸಿಕೊಳ್ಳುತ್ತಿದ್ದನು.

ಎರಡನೆಯ ಘಟನೆ ನಡೆದದ್ದು, ಹಾವಿನ ಕಾಟ ಇದ್ದ ಒಂದು ತೋಪಿನಲ್ಲಿ ಈ ಬಾಲಕ ಕ್ರೀಡಾಸಕ್ತನಾಗಿದ್ದಾಗ. ತನ್ನ ಬಲ ಅಡಿಗಾಲು ಯಾವುದೋ ಚೂಪಾದ ಪದಾರ್ಥಕ್ಕೆ ತಾಕಿದಂತೆ ಅವನಿಗೆ ಭಾಸವಾಯಿತು. ಹಾಗೆ ಅನ್ನಿಸಿದ್ದೇ ತಡ, ಕಾಲು ಭಾರವಾದಂತೆ ಅನುಭವವಾಯಿತು; ಹಾಗಿದ್ದರೂ ಕೂಡ ಅವನು ಮನೆಯ ಕಡೆಗೆ ಓಡಿದನು. ಬಲವಾದ ಗಾಯ ಯಾವುದೂ ಕಂಡುಬರಲಿಲ್ಲ; ಆದರೆ ಅಡಿಯಲ್ಲಿ ಎಡೆಬಿಡದ ನೋವು, ಸೆಡೆತ ಇತ್ತು. ಅದು ಹಾವಿನ ಕಡಿತ ಎಂಬುದು ಖಂಡಿತ. ಅದು ಹೇಗೋ ಏನೋ, ಪವಾಡ ಎನ್ನುವಂತೆ ಹುಡುಗ ಅಪಾಯದಿಂದ ಪಾರಾದನು.

ಪ್ರಾರಂಭದ ವಿದ್ಯಾಭ್ಯಾಸ

ಪ್ರಖ್ಯಾತರಾದ ಗುರುಗಳ ಸನ್ನಿಧಿಯಲ್ಲಿ ರಾಜರಾಜವರ್ಮನ ಪ್ರಾರಂಭದ ವಿದ್ಯಾಭ್ಯಾಸ ಸಾಂಪ್ರದಾಯಿಕವಾದ ರೀತಿಯಲ್ಲಿ ಸಾಗಿತು. ಚುನಕ್ಕರ್ ವಾರಿಯರ್ ಮತ್ತು ಶಂಕರ ವಾರಿಯರ್ ಅವನ ಮೊದಲ ಗುರುಗಳು. ಇವರುಗಳು ಅವನಿಗೆ ಓದು, ಬರಹ ಮತ್ತು ಗಣಿತಗಳನ್ನು ಕಲಿಸಿದರು. ಮುಂದಿನ ಹಂತದಲ್ಲಿ ಸಂಸ್ಕೃತ ಕಾವ್ಯಗಳ ವ್ಯಾಸಂಗ ಸಾಗಿತು. ಹುಡುಗ ತುಂಟನಾಗಿದ್ದು, ಚೇಷ್ಟೆ ಮಾಡುತ್ತಿದ್ದ.

ವ್ಯಾಸಂಗಕ್ಕಿಂತ ಆಟಗಳಲ್ಲಿ ಅವನಿಗೆ ಹೆಚ್ಚು ಆಸಕ್ತಿ. ಆಗಿನ ಕಾಲದಲ್ಲಿ ಜನಪ್ರಿಯವಾಗಿದ್ದ ನಮ್ಮ ದೇಶದ ಆಟಗಳಲ್ಲಿ ಅವನು ಮೇಲಾದ ಪಟುತ್ವವನ್ನು ಹೊಂದಿದ್ದರಿಂದ ಬಾಲಕರೆಲ್ಲವೂ ಅವನನ್ನು ತಮ್ಮ ನಾಯಕನೆಂದು ಒಪ್ಪಿಕೊಂಡಿದ್ದರು; ಆರೋಗ್ಯಶಾಲಿಯಾದ ಅವನು ತನ್ನ ಜೊತೆಯವರನ್ನೆಲ್ಲ ಸುಲಭವಾಗಿ ಮೀರಿಸಿಬಿಟ್ಟಿದ್ದನು. ಅವನು ತನ್ನ ವ್ಯಾಸಂಗಕ್ಕೆ ಅಷ್ಟೇನೂ ಗಮನ ಕೊಡುತ್ತಿರಲಿಲ್ಲ; ಆದರೂ ಕೂಡ ಚುರುಕಾದ ಬುದ್ಧಿಶಕ್ತಿ ಗ್ರಹಣಶಕ್ತಿಗಳನ್ನು ಉಳ್ಳವನಾದ್ದರಿಂದ ಅವನು ಉಪಾಧ್ಯಾಯನು ಕಲಿಸಿದ್ದನ್ನು ಬಲುಬೇಗನೆ ಗ್ರಹಿಸಿಕೊಂಡುಬಿಡುತ್ತಿದ್ದನು. ಆದ್ದರಿಂದ ಅವನನ್ನು ಗುರುಗಳು ಕೂಡ ಮೆಚ್ಚಿಕೊಂಡಿದ್ದರು.

ಈ ವೇಳೆಗೆ, ರಾಜರಾಜವರ್ಮನಿಗಿಂತ ೧೮ ವರ್ಷ ದೊಡ್ಡವನಾಗಿದ್ದ ಅವನ ಸೋದರಮಾವ (ಎಂದರೆ, ಸೋದರಮಾವನ ವಾವೆಯವನು) ಪ್ರತಿಭೆಯುಳ್ಳ ಲೇಖಕ ಎಂದು ಹೆಸರುವಾಸಿಯಾಗಿದ್ದನು. ಹಾಗಿದ್ದರೂ, ಆತನ ಮತ್ತು ಆಳರಸನ ನಡುವೆ ಏನೋ ಮನಸ್ತಾಪ ಉಂಟಾಗಿ, ಆತ ಗೃಹಬಂಧನಕ್ಕೆ ಒಳಗಾಗಿದ್ದನು. ಹೀಗಾಗಿ ಅವನನ್ನು ಅಲಪ್ಪಿಯಿಂದ ಹರಿಪಾಟ್‌ಗೆ ಕಳಿಸಲಾಯಿತು. ಈ ದುರದೃಷ್ಟದ ಪ್ರಕರಣದಿಂದ ಮಲಯಾಳ ಸಾಹಿತ್ಯಕ್ಕೆ ಉಪಕಾರವೇ ಆಯಿತು. ರಾಜರಾಜ ವರ್ಮನು ತನ್ನ ಸೋದರಮಾವನಿಂದ ಖುದ್ದಾಗಿ ಸಂಸ್ಕೃತದಲ್ಲೂ ಪದ್ಯರಚನೆಯಲ್ಲೂ ಪಾಠ ಹೇಳಿಸಿಕೊಳ್ಳಲು ಅವಕಾಶವಾಯಿತು. ಇದರಿಂದಾಗಿ ಸೋದರಲ್ಲಿ ಅವನ ವ್ಯಕ್ತಿತ್ವ ಸರಿಯಾದ ರೀತಿಯಲ್ಲಿ ರೂಪಗೊಳ್ಳುವುದಕ್ಕೂ ಅವನ ಮನಸ್ಸು ಪಾಂಡಿತ್ಯ ಸಂಪಾದನೆಯ ಕಡೆಗೆ ಒಲೆಯುವುದಕ್ಕೂ ಸಹಾಯವಾಯಿತು. ಇದಕ್ಕಿಂತ ಮಿಗಿಲಾಗಿ, ಕೇರಳವರ್ಮನು ಪಡೆದ ಕಹಿ ಅನುಭವವು 'ಮಯೂರ ಸಂದೇಶಂ' ಎಂಬ ಕೃತಿಯ ಸೃಷ್ಟಿಗೆ ಪ್ರೇರಕವಾಯಿತು; ರಾಜನ ಅಸಮಾಧಾನ ದಿಂದಾಗಿ ತನ್ನ ಪತ್ನಿಯಿಂದ ಅಗಲಬೇಕಾಗಿ ಬಂದು, ಆಕೆಯನ್ನು ಸಂಬೋಧಿಸಿ ಬರೆದ ಪ್ರಖ್ಯಾತವಾದ ಸಂದೇಶ ಕಾವ್ಯ ಅದು.

ಪೂರ್ತಿ ಆರು ವರ್ಷಗಳ ಕಾಲ (೧೮೭೫–೧೮೮೧) ತನ್ನ ಸೋದರಮಾವನ ಸಹಾಯ ಮತ್ತು ಮಾರ್ಗದರ್ಶನಗಳಿಂದ ರಾಜರಾಜವರ್ಮನು ಕಾವ್ಯಗಳನ್ನು ಅಭ್ಯಾಸ ಮಾಡಿ, ಕವನಗಳನ್ನು ರಚಿಸುವುದನ್ನು ಕಲಿತನು. ಪಾಠ ಪ್ರವಚನಗಳು ನಡೆದ ರೀತಿ, ರಾಜರಾಜವರ್ಮನ ಪ್ರತಿಭೆ ವಿಕಾಸಗೊಂಡ ಬಗೆ, ಒಂದು ವಿಶೇಷ ಘಟನೆಯಿಂದ ಸ್ಪಷ್ಟಪಡುತ್ತವೆ; ಇಲ್ಲಿ ನಿರೂಪಿಸಲು ಅದು ಯೋಗ್ಯವಾಗಿದೆ. ಒಂದು ದಿನ, ಗಣಪತಿಯ ಮೇಲೆ ಒಂದು ಅಷ್ಟಕವನ್ನು

ರಚಿಸಿ ಮಾರನೆಯ ದಿನ ಮಧ್ಯಾಹ್ನದ ಮೇಲೆ ಮೂರು ಗಂಟೆಯ ಹೊತ್ತಿಗೆ ತಮಗೆ ತಂದುಕೊಡಬೇಕೆಂದು ಗುರು ತಮ್ಮ ಮೂವರು ಶಿಷ್ಯರಿಗೆ ಆದೇಶವಿತ್ತರು. ಉಳಿದಿಬ್ಬರು ಶಿಷ್ಯರು ನೆಟ್ಟನೆ ರಚನಾಕಾರ್ಯವನ್ನು ಪ್ರಾರಂಭಿಸಿಯೇಬಿಟ್ಟರು; ಪದ್ಯಗಳನ್ನು ಹೊಸೆಯಲು ತಲೆ ಕೆರೆದುಕೊಳ್ಳುತ್ತ, ಬಹಳ ಪ್ರಯಾಸಪಟ್ಟು ಪ್ರಯತ್ನಿಸುತ್ತಿದ್ದರು. ಹುಡುಗಾಟಿಕೆ ಸ್ವಭಾವದ ಕೊಚ್ಚಪ್ಪನು ಕೊನೆಯ ಗಳಿಗೆಯವರೆಗೂ ಆ ಬಗೆಗೆ ತಲೆಕೆಡಿಸಿಕೊಳ್ಳಲಿಲ್ಲ. ಸುಮಾರು ಎರಡು ಗಂಟೆಯಾದಾಗ ನೆನಪಾಯಿತು ಗುರು ವಹಿಸಿದ್ದ ಕಾರ್ಯ; ಏನೋ ಗೀಚತೊಡಗಿದ ಆಗ. ಗೊತ್ತಾಗಿದ್ದ ಸಮಯಕ್ಕೆ ಸರಿಯಾಗಿ ಗುರುಗಳು ಬಂದರು; ರಾಜರಾಜವರ್ಮನು ತನ್ನ ಸಹಪಾಠಿಗಳ ಹಿಂದೆ ಹೋದನು. ಪದ್ಯ ರಚನೆಯಲ್ಲಿ ಮುಗ್ಗರಿಸಿದ್ದ ಮೊದಲ ಶಿಷ್ಯನನ್ನು ಕ್ಷಮಿಸಲಾಯಿತು; ತೃಪ್ತಿಕರವಾಗಿ ರಚನೆ ಮಾಡಿದ್ದ ಎರಡನೆಯವನಿಗೆ ಶಹಭಾಸುಗಿರಿ ಸಿಕ್ಕಿತು. ಆ ಬಳಿಕ ತಾನು ಮಾಡಿದ್ದರಲ್ಲಿ ತನಗೇ ನಂಬಿಕೆ ಇಲ್ಲದೆ ಅಂಜುತ್ತ ಅಂಜುತ್ತ ರಾಜವರ್ಮನು ಮುಂದೆ ಬಂದನು. ಅಷ್ಟಕವನ್ನು ಗಟ್ಟಿಯಾಗಿ ಓದು ಎಂದು ಗುರು ಕೇಳಿದರು; ಅವನು ತುಸು ಮನಸ್ಸಿಲ್ಲದ ಮನಸ್ಸಿನಿಂದಲೇ ಓದಿದನು. ಮತ್ತೆ ಓದು ಎಂದರು ಗುರು. ಅನಂತರ ಗುರು ತಾನೇ ರಚಿಸಿಕೊಂಡಿದ್ದ ಅಷ್ಟಕವನ್ನು ಶಿಷ್ಯನಿಗೆ ತರಹೇಳಿದರು. ಅದನ್ನು ಗಟ್ಟಿಯಾಗಿ ಓದಿದರು. ಆಮೇಲೆ ಗುರು ಶಿಷ್ಯರಿಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ಮುಗುಳುನಕ್ಕರು; ಕಾರಣ, ಗುರುಶಿಷ್ಯರ ಕೃತಿಗಳ ರೂಪ ಮತ್ತು ವಸ್ತುಗಳಲ್ಲಿ ಸಾಮ್ಯವಿದ್ದಿತು. ತಮ್ಮ ಸೋದರಳಿಯನ ಸಾಧನೆಯನ್ನು ಕಂಡು ಸೋದರಮಾವನಿಗೆ ಹಿಡಿಸಲಾಗದಷ್ಟು ಸಂತೋಷ, ಹಿಗ್ಗೋ ಹಿಗ್ಗು; ಶಿಷ್ಯನೂ ಹಿಗ್ಗಿಹೋದ. ಗುರು ಇನ್ನೊಂದು ತಂತ್ರ ಹೂಡಿದರು: ಎರಡು ರಚನೆಗಳನ್ನೂ ಪ್ರತಿಮಾಡಿ, ಕೃತಿಕಾರ ಯಾರು ಎಂಬುದನ್ನು ತಿಳಿಸದೆ ಅವುಗಳನ್ನು ತಮ್ಮ ಅಣ್ಣನಿಗೆ ಕಳಿಸಿಕೊಟ್ಟರು. ವಿದ್ವಾಂಸರಾಗಿದ್ದ ಅಣ್ಣ ಕಾವ್ಯ ರಚನೆಯಲ್ಲಿ ಕೈಪಳಗಿದ್ದ ತಮ್ಮನ ರಚನೆಯನ್ನು ಸುಲಭವಾಗಿ ಗುರುತಿಸಿದರು; ಜೊತೆಗೆ, ಹೆಸರುಗೊತ್ತಿರದ ಕವಿಯನ್ನು ಮೆಚ್ಚಿಕೊಂಡು, ಆತನ ಅಷ್ಟಕವೂ ಅಷ್ಟೇ ಚೆನ್ನಾಗಿದೆ ಎಂದು ಸಾರಿ ಹೇಳಿದರು. ಬಳಿಕ ಕವಿ ಯಾರೆಂಬುದು ಹೊರಪಟ್ಟ ಮೇಲೆ, ಪ್ರತಿಯೊಬ್ಬರೂ ಈ ವಿನೋದದ ಪ್ರಸಂಗದಲ್ಲಿ ನಲಿದರು. ರಾಜರಾಜವರ್ಮನಿಗೆ ಸೊಗಸಾದ ಬಹುಮಾನಗಳೂ ದೊರೆತವು. ಇದೆಲ್ಲವೂ ನಡೆದದ್ದು ಅವನಿಗೆ ಕೇವಲ ೧೫ ವರ್ಷ ವಯಸ್ಸಾಗಿದ್ದಾಗ.

ಇನ್ನೊಂದು ಅತಿಶಯವಾದ ಸಂಗತಿ ನಡೆಯಿತು. ಅದು ಎಲತ್ತೂರ್ ರಾಮಸ್ವಾಮಿ ಶಾಸ್ತ್ರಿಗಳೆಂಬುವರು ಅರಮನೆಗೆ ಭೇಟಿ ಕೊಟ್ಟ ಸಂದರ್ಭಕ್ಕೆ ಸಂಬಂಧಪಟ್ಟದ್ದು. ಶಾಸ್ತ್ರಿಗಳು ಕೇರಳವರ್ಮನ ಗುರು. ಅವರು ತಮ್ಮ ಶಿಷ್ಯನ ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನೂ ಸಾಮರ್ಥ್ಯವನ್ನೂ ಪರೀಕ್ಷಿಸಿ ನೋಡ ಬಯಸಿದರು; “ಅದ್ಯಪಿತಿಷ್ಠತಿ...” ಎಂದು ಆರಂಭವಾಗುವ “ಕುವಲಯಾನಂದ’ದ ಶ್ಲೋಕವನ್ನು ಓದಿ ಹೇಳಿ, ಅದರ ಅರ್ಥವನ್ನು ವಿವರಿಸುವಂತೆ ವಿದ್ಯಾರ್ಥಿಗಳನ್ನು ಕೇಳಿದರು. ತರುಣ ರಾಜರಾಜವರ್ಮನು ಕೆಲವು ಪಂಕ್ತಿಗಳನ್ನು ವ್ಯಾಖ್ಯಾನಿಸಿ ಅವುಗಳ ಅಂತರಾರ್ಥದ ಸ್ವಾರಸ್ಯವನ್ನು ವಿವರಿಸಿದ್ದನ್ನು ಕಂಡು ವೃದ್ಧ ವಿದ್ವಾಂಸನಿಗೆ ಸಂತೋಷವೂ ಆಶ್ಚರ್ಯವೂ ಆದುವು. ಹುಡುಗನು ತೋರಿಸಿದ ಸಾಮರ್ಥ್ಯಕ್ಕಾಗಿ ಆತನನ್ನು ಪ್ರಶಂಸಿಸಿದರು. ಹೀಗೆ ದೊರೆತ ಉತ್ತೇಜನವು ಸಹಜವಾಗಿಯೆ ತರುಣ ‘ಸಹೃದಯ’ನು ಬೆಳೆಯುವುದಕ್ಕೆ ಸಹಾಯವಾಯಿತು.

ಹೀಗೆ ರಾಜರಾಜವರ್ಮನು ತನ್ನ ತಾರುಣ್ಯದಲ್ಲಿಯೆ ಸಂಸ್ಕೃತ ಭಾಷೆಯಲ್ಲಿ ಒಬ್ಬ ಕವಿ ಎನ್ನಿಸಿಕೊಂಡು, ಪದ್ಯರಚನಾಕುಶಲತೆಯಲ್ಲಿ ಅಪಾರ ಸಾಮರ್ಥ್ಯವನ್ನು ಮೆರೆದನು. ೧೮೮೦ರಲ್ಲಿ ವಿಶಾಖಂ ತಿರುನಾಳ್ ತಿರುವಾಂಕೂರು ಸಂಸ್ಥಾನದ ದೊರೆಯಾದಾಗ ಭಾಗ್ಯಚಕ್ರವು ಕೇರಳವರ್ಮನಿಗೆ ಅನುಕೂಲವಾಗುವಂತೆ ಹೊರಳಿತು. ಈ ರೀತಿ ಅನಂತಪುರಂ ಅರಮನೆಯ ನಿವಾಸಿಗಳ ಅರ್ಹತೆಗೆ ತಕ್ಕ ಪ್ರೋತ್ಸಾಹವು ಅವರಿಗೆ ದೊರೆಯಿತು. ಬಲುಬೇಗನೆ ಕೇರಳವರ್ಮನು ತನ್ನ ವಾಸಸ್ಥಳವನ್ನು ತಿರುವನಂತಪುರಕ್ಕೆ ಸ್ಥಳಾಂತರಿಸಿಕೊಂಡು, ಸ್ವತಃ ವಿದ್ವಾಂಸನೂ ಲೇಖಕನೂ ಆಗಿದ್ದ ವಿಶಾಖಂ ತಿರುನಾಳನೊಂದಿಗೆ ತನ್ನ ಸಲಿಗೆಯನ್ನು ಬೆಳಸಿಕೊಂಡನು. ಸ್ವಲ್ಪ ಕಾಲ ಕಳೆಯುವಷ್ಟರಲ್ಲಿ ತರುಣ ಕವಿಯಾದ ಎ.ಆರ್. ಕೂಡ ತಿರುವನಂತಪುರಕ್ಕೆ ಹೋಗಿ, ಅಲ್ಲಿ ತನ್ನ ವ್ಯಾಸಂಗವನ್ನು ಮುಂದುವರಿಸ ತಕ್ಕದ್ದು ಎಂಬ ಸೂಚನೆ ಬಂದಿತು. ಅದರಂತೆ ರಾಜರಾಜವರ್ಮನು ಇನ್ನಿಬ್ಬರು ವಿದ್ಯಾರ್ಥಿಗಳೊಂದಿಗೆ ತಿರುವನಂತಪುರಕ್ಕೆ ತೆರಳಿ ಅಲ್ಲಿಯ ಚಣ್ಣನಾಶ್ಶೇರಿ ಮೂಟತ್ತು ಮಠದಲ್ಲಿ ಉಳಿದುಕೊಂಡು, ಒಂದು ಪ್ರೌಢಶಾಲೆಗೆ ಸೇರಿ ಕ್ರಮವಾದ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಈ ವ್ಯವಸ್ಥೆಯನ್ನು ಮಾಡಿದಾತ ಕೇರಳವರ್ಮ ಎಂದು ಹೇಳಬೇಕಾದದ್ದು ಅನಗತ್ಯವಷ್ಟೆ; ಆತ ಕುಗ್ಗದ ಉತ್ಸಾಹದಿಂದ ಸೋದರಳಿಯನಿಗೆ ಮಾರ್ಗದರ್ಶನ ಮಾಡುವುದನ್ನು ಮುಂದುವರಿಸಿದನು.

ಪ್ರೌಢಶಾಲಾ ವಿದ್ಯಾಭ್ಯಾಸವು ೧೮೮೧ರಿಂದ ತೊಡಗಿ ಮುಂದುವರಿಯಿತು. ಒಟ್ಟಿನಮೇಲೆ ರಾಜರಾಜವರ್ಮನು ಬಹಳ ಚೆನ್ನಾಗಿ ವ್ಯಾಸಂಗ ಮಾಡುತ್ತಿದ್ದ

ನಾದರೂ, ಅವನಲ್ಲಿ ಕೆಲವು ಕುಂದುಕೊರತೆಗಳೂ ಇದ್ದವು. ಗಣಿತವೆಂದರೆ ಅವನ ಪಾಲಿಗೆ ಭಯಂಕರ ದುಃಸ್ವಪ್ನ. ಗಣಿತದಲ್ಲಿ ಒಂದಂಕಿಯ ಅಂಕಗಳನ್ನು ಪಡೆದಾಗಲೂ ಅವನು ಸಾಮಾನ್ಯವಾಗಿ ಪಡೆಯುತ್ತಿದ್ದ ಸರಾಸರಿ ಅಂಕಗಳು ಶೇಕಡಾ ೭೦ರಷ್ಟು ಇರುತ್ತಿತ್ತು. ಹೀಗಿರುತ್ತ ಯೂರೋಪಿಯನ್ ಪ್ರಿನ್ಸಿಪಾಲರ ಶಿಫಾರಸ್ಸಿನ ಮೇಲೆ ಮುಂದಿನ ಮೇಲ್ತರಗತಿಗೆ ಅವನು ತೇರ್ಗಡೆ ಪಡೆದನು. ಅವನು ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ಆಯ್ದುಕೊಂಡಿದ್ದನು; ಆದರೆ ಮಲಯಾಳ ಭಾಷೆಯನ್ನೂ ಕಲಿಯಬೇಕಾಗಿತ್ತು. ಸಂಸ್ಕೃತದಲ್ಲಿ ಅವನ ಬಲ್ಮೆ ಎಷ್ಟಿತ್ತು ಎಂದರೆ ಸಂಸ್ಕೃತ ಮುನ್ಷಿಗಳು ಅವನನ್ನು ತಮ್ಮ ಸರಿಸಮಾನ ಎಂದು ಭಾವಿಸಿದರು. ಸಮಸ್ಯೆಗಳು ತಲೆದೋರಿದಾಗ ಅವರು ಪರಸ್ಪರ ಒಬ್ಬರು ಇನ್ನೊಬ್ಬರ ಸಲಹೆ ಕೇಳುತ್ತಿದ್ದರು. ಆಗಿನ ದಿನಗಳಲ್ಲಿ ಮಲಯಾಳ ಭಾಷೆಗೆ ಕೆಳಗಿನ ಸ್ಥಾನ ಪ್ರಾಪ್ತವಾಗಿತ್ತು; ಸಂಸ್ಕೃತ ಪ್ರೇಮಿಯಾಗಿದ್ದ ರಾಜರಾಜವರ್ಮನು ಅದು ಸರಿ ಎಂದು ಭಾವಿಸಿದನು. ಆಗ ಮಲಯಾಳ ಭಾಷೆಯ ಪಠ್ಯಪುಸ್ತಕಗಳು ಬಹಳ ಸಪ್ಪೆಯಾಗಿರುತ್ತಿದ್ದುವು; ಆದ್ದರಿಂದ ತಾಯ್ನುಡಿಯ ಬಗೆಗೆ ಈ ಭಾವನೆ ಇದ್ದುದು ಸ್ವಲ್ಪಮಟ್ಟಿಗೆ ಸಮರ್ಥನೀಯವಾಗಿ ಕಾಣುತ್ತದೆ.

ತಿಳಿವಳಿಕೆಯುಳ್ಳ ಮಹಾರಾಜನು ಪ್ರಭಾವಶಾಲಿಗಳಾದ ಹೊಸಬರಿಗೆ ಉತ್ತೇಜನ ಕೊಡಬೇಕೆಂದು ಅಪೇಕ್ಷೆಪಟ್ಟನು. ನಿದರ್ಶನಾರ್ಥವಾಗಿ, ಮಹಾರಾಜನಾದ ತಾನೇ ಗೊತ್ತುಮಾಡಿದ ವಿಷಯದ ಮೇಲೆ ಬರೆದ ಉತ್ತಮ ಪ್ರಬಂಧಕ್ಕೆ ಒಂದು ಆಕರ್ಷಕವಾದ ಬಹುಮಾನವನ್ನು ಇಟ್ಟನು; ವಿದ್ಯಾರ್ಥಿಗಳು ಎಂಟುಪುಟಗಳ ಪ್ರಬಂಧವನ್ನು ಬರೆಯಬೇಕಾಗಿದ್ದಿತು. ಪ್ರಬಂಧಗಳನ್ನು ಮೊದಲಸಲ ಮಹಾರಾಜನೇ ಸ್ವತಃ ಪರಿಶೀಲಿಸಿ, ಅನಂತರ ಅವುಗಳನ್ನು ಕೇರಳವರ್ಮನಿಗೆ ಕಳಿಸಿಕೊಟ್ಟನು. ನಮ್ಮ ತರುಣ ಕವಿಯೂ ಒಬ್ಬ ಸ್ಪರ್ಧಿಯಾಗಿದ್ದನು. ಮಹಾರಾಜ ಮತ್ತು ಕೇರಳವರ್ಮರಿಬ್ಬರೂ ರಾಜರಾಜವರ್ಮನು ಬರೆದ ಪ್ರಬಂಧ ಸರ್ವೋತ್ತಮವಾದುದೆಂಬ ತೀರ್ಮಾನಕ್ಕೆ ಬಂದರು. ಈ ತರುಣ ಲೇಖಕನ ಬಗೆಗೆ ಗಣ್ಯರಾದ ಮಹನೀಯರು ಹೆಚ್ಚುಹೆಚ್ಚಾಗಿ ಆಸಕ್ತಿಯನ್ನು ವಹಿಸುತ್ತಿದ್ದರು ಎನ್ನುವುದಕ್ಕೆ ಈ ಪ್ರಕರಣ ಇನ್ನೊಂದು ನಿದರ್ಶನ. ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರಿಯುತ್ತಿದ್ದ ವೇಳೆಯಲ್ಲೇ, ಕೇರಳವರ್ಮನು ಬಿಡುವು ಮಾಡಿಕೊಂಡು ತನ್ನ ಸೋದರಳಿಯನಿಗೆ ಪ್ರೌಢಮಟ್ಟದ ಸಂಸ್ಕೃತದಲ್ಲಿ ಪಾಠ ಹೇಳುತ್ತಿದ್ದನು.

ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ

ವಿನೋದಪ್ರಿಯನಾದ ರಾಜರಾಜವರ್ಮನು ತಿರುವನಂತಪುರದಲ್ಲಿ ತನ್ನ ಗೆಳೆಯರೊಂದಿಗೆ ಜೀವನದ ಸುಖಸಂತೋಷಗಳನ್ನು ಅನುಭವಿಸುತ್ತಿದ್ದನು. ಹೀಗಿದ್ದರೂ ಕೂಡ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಯಾವ ಕಷ್ಟವೂ ಇಲ್ಲದೆ ತೇರ್ಗಡೆ ಹೊಂದಿದನು. ಆದರೆ ತನ್ನ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸವನ್ನು ಅವನು ಮುಂದುವರಿಸುವಷ್ಟರಲ್ಲಿ, ಒಂದು ದೊಡ್ಡ ವಿಪತ್ತು ಅದಕ್ಕೆ ತಡೆಹಾಕಿತು. ಅವನ ತಾಯಿ ತೀರಿಕೊಂಡಳು (೧೮೮೪); ಇದರಿಂದ ಅನೇಕ ವಿಧಗಳಲ್ಲಿ ಅವನಿಗೆ ಆತಂಕವಾಯಿತು. ಪ್ರೀತಿಪಾತ್ರಳಾದ ತನ್ನ ತಾಯಿಯ ಅಕಾಲಿಕ ಮರಣದಿಂದ ದುಃಖವುಂಟಾದದ್ದು ಸ್ಪಷ್ಟವಾಗಿಯೇ ಇದೆ; ಅದು ಹಾಗಿರಲಿ. ಪದ್ಧತಿಯ ಪ್ರಕಾರ ಅವನು ಒಂದು ವರ್ಷಕಾಲ ಹೊರಗಡೆ ಕಾಣಿಸಿಕೊಳ್ಳಲು ಕೆಲವು ವಿಧಿನಿಷೇಧಗಳು ನಿರ್ಬಂಧಹಾಕಿದ್ದರಿಂದ ತನ್ನ ಕ್ರಮವಾದ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾದದ್ದು ಅನಿವಾರ್ಯವಾಯಿತು. ಪೂರ್ತಿ ವರ್ಷಕಾಲ ಅವನು ಕ್ಷೌರ ಮಾಡಿಸಿಕೊಳ್ಳುವ ಹಾಗಿರಲಿಲ್ಲ; ಮನೆಯಲ್ಲಿ ಕೆಲವು ಕರ್ಮಗಳನ್ನು ಆಚರಿಸಬೇಕಾಗಿತ್ತು. ಒಂದು ವರ್ಷಪೂರ್ತಿ ವ್ಯಾಸಂಗ ಇಲ್ಲದೆ ಕಾಲವನ್ನು ವ್ಯರ್ಥ ಮಾಡುವುದು ಅವನಿಗೆ ಇಷ್ಟವಾಗಲಿಲ್ಲ; ತನ್ನ ಈ ಪರಿಸ್ಥಿತಿಯನ್ನು ಕೇರಳವರ್ಮನಿಗೂ ಇತರರಿಗೂ ನಿವೇದಿಸಿಕೊಂಡನು. ರೂಢಮೂಲವಾದ ಸಂಪ್ರದಾಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವಂತೆ ಅವನಿಗೆ ಸಲಹೆ ಮಾಡಲು ಯಾರಿಗೂ ಧೈರ್ಯಬರಲಿಲ್ಲ. ಕೊನೆಗೆ ಈ ತೊಡರು ಸ್ವಯಂ ಮಹಾರಾಜನ ಗಮನಕ್ಕೇ ಹೋಯಿತು; ಆತನು ಸೂಚಿಸಿದ ಪರಿಹಾರವನ್ನು ಎಲ್ಲರೂ ಕೃತಜ್ಞತಾಭಾವದಿಂದ ಸ್ವಾಗತಿಸಿದರು, ನೆಮ್ಮದಿಯನ್ನು ಪಡೆದರು. ಮಹಾರಾಜನ ಪುತ್ರ ಶ್ರೀ ನಾರಾಯಣನ್ ತಂಪಿಯೇ ಮದರಾಸು ವಿಶ್ವವಿದ್ಯಾನಿಲಯದ ಎಫ್.ಎ. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿತ್ತು; ಅವನಿಗಾಗಿ ಅರಮನೆಯಲ್ಲಿ ಖಾಸಗಿ ಶಿಕ್ಷಣ ಕೊಡಿಸುವ ಏರ್ಪಾಡಾಯಿತು. ತಂಪಿಗೆ ಕೊಡುವ ಶಿಕ್ಷಣವನ್ನೆ ಕೊಚ್ಚಪ್ಪನಿಗೂ ಕೊಡತಕ್ಕದ್ದೆಂದು ರಾಜಾಜ್ಞೆಯಾಯಿತು. ಇದು ನಿಜವಾಗಿ ಸ್ವಾಗತಾರ್ಹವಾದ ಪರಿಹಾರವಾಗಿತ್ತು; ದೇಶದಲ್ಲಿ ಲಭ್ಯವಾದ ಉತ್ತಮ ಮಟ್ಟದ ಶಿಕ್ಷಣವು ಉಚಿತವಾಗಿ ದೊರಕುವಂತಾದದ್ದು ಕೊಚ್ಚಪ್ಪನ ಪಾಲಿಗೆ ವರವಾಯಿತು. ಪರೀಕ್ಷೆಗೆ ಕುಳಿತುಕೊಳ್ಳಲು ಮದರಾಸು ವಿಶ್ವವಿದ್ಯಾನಿಲಯದಿಂದ ವಿಶೇಷ ಅನುಮತಿಯ ಅಗತ್ಯವಿದ್ದಿತು; ಈ ವಿಷಯದಲ್ಲಿ ಸಮಸ್ಥಾನದ ದೊರೆಯೇ ಆಸಕ್ತಿ ವಹಿಸಿದ್ದರಿಂದ ಅದೊಂದು ಸಮಸ್ಯೆಯಾಗಿರಲಿಲ್ಲ. ಆದರೆ ದುರ್ದೈವದಿಂದ ವಿಶಾಖಂ ತಿರುನಾಳ್ ಬಹಳ

ಬೇಗನೆ ತೀರಿಕೊಂಡುಬಿಟ್ಟನು; ಆದ್ದರಿಂದ ಕೆಲಕಾಲದ ಮೇಲೆ ರಾಜರಾಜವರ್ಮನು ಮಹಾರಾಜರ ಕಾಲೇಜಿಗೆ ಸೇರಬೇಕಾಯಿತು. ಅಂತೂ ಅವನು ೧೮೮೬ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆ ಆದನು.

ಆ ಬಳಿಕ ಅವನು ಬಿ.ಎ. ತರಗತಿಗೆ ಸೇರಿದನು. ಎಂದಿನಂತೆ, ಆಟಪಾಟಗಳಲ್ಲಿ ಅವನಿಗೆ ಆಸಕ್ತಿ. ತಿರುವನಂತಪುರದಲ್ಲಿ ಆಗತಾನೆ ಜನಪ್ರಿಯವಾಗುತ್ತಿದ್ದ ಟೆನಿಸ್ ಆಟದಲ್ಲಿ ಅವನಿಗೆ ವಿಶೇಷವಾದ ಆಸಕ್ತಿ. ಈಜುವುದರಲ್ಲಿಯೂ ಅವನಿಗೆ ಬಲು ಸಂತೋಷ. ಪಠ್ಯಪುಸ್ತಕಗಳನ್ನು ಓದುವುದರಲ್ಲಿ ಕಾಲ ಕಳೆಯುವುದಕ್ಕಿಂತಲೂ ಸ್ವಾರಸ್ಯವಾದ ಸಾಹಿತ್ಯಕೃತಿಗಳನ್ನು ಓದುವುದು, ಮತ್ತು 'ಅಕ್ಷರಶ್ಲೋಕ' ಸ್ಪರ್ಧೆಗಳಲ್ಲಿ ಭಾಗವಹಿಸುವುದು, ಅವನಿಗೆ ಹೆಚ್ಚು ಪ್ರಿಯವಾಗಿದ್ದುವು; ಪದ್ಯಗಳನ್ನು ರಚಿಸುವುದರಲ್ಲಿ ನಲಿವು. ಬಿ.ಎ. ಪದವಿ ಪರೀಕ್ಷೆಯಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾ ವಿಷಯಗಳಲ್ಲಿ ಗಣ್ಯರೀತಿಯಲ್ಲಿ ಉತ್ತೀರ್ಣನಾದನು; ಆದರೆ ಐಚ್ಛಿಕ ವಿಷಯವಾಗಿ ಆಯ್ಕೆಮಾಡಿಕೊಂಡಿದ್ದ ರಸಾಯನಶಾಸ್ತ್ರದಲ್ಲಿ ಉತ್ತೀರ್ಣನಾಗಲಿಲ್ಲ. ಅನುತ್ತೀರ್ಣನಾದದ್ದು ಪ್ರಯೋಗಭಾಗದ ಪರೀಕ್ಷೆಯಲ್ಲಿ. ಆದರೆ ಖಾಸಗಿ ಅಭ್ಯರ್ಥಿಯಾಗಿ ರಸಾಯನಶಾಸ್ತ್ರದ ಮಟ್ಟಿಗೆ ಮರುಪರೀಕ್ಷೆಗೆ ಕುಳಿತು, ಆ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಕಾಲೇಜಿನ ಅಧ್ಯಯನ ವಿಷಯಗಳಿಗೆ ಅವನು ಕೊಡುತ್ತಿದ್ದ ಗಮನದ ಬಗೆಗೆ ಅವನಿಗೇ ತೃಪ್ತಿಸಮಾಧಾನಗಳಿರಲಿಲ್ಲ ಎಂಬುದು ಆ ದಿನಗಳಲ್ಲಿ ರಾಜರಾಜವರ್ಮನು ಬರೆದಿಟ್ಟ ದಿನಚರಿಗಳಿಂದಲೇ ವ್ಯಕ್ತಪಡುತ್ತದೆ. ಆದರೆ, ಒಂದು ವಿಷಯದಲ್ಲಿ ಅವನು ಮನಸ್ಸನ್ನು ನೆಟ್ಟದ್ದೇ ಆದರೆ, ಅದನ್ನು ಅವನು ಸುಲಭವಾಗಿ ಸ್ವಾಧೀನಪಡಿಸಿಕೊಂಡುಬಿಡುತ್ತಿದ್ದನು. ಹಾಗಿದ್ದುದರಿಂದಲೇ ಜೂನಿಯರ್ ಬಿ.ಎ. ತರಗತಿಯ ವರ್ಷಾಂತ್ಯ ಪರೀಕ್ಷೆಯಲ್ಲಿ ಅವನು ಪ್ರಥಮ ಸ್ಥಾನವನ್ನು ಪಡೆದದ್ದಲ್ಲದೆ, ಬಹುಮಾನವನ್ನೂ ಗೆದ್ದುಕೊಂಡನು. ಅಲ್ಲದೆ, ಸಂಸ್ಕೃತ ಪ್ರಶ್ನೆಪತ್ರಿಕೆಗಳಿಗೆ ಪದ್ಯರೂಪದಲ್ಲಿ ಉತ್ತರ ಬರೆದು ಪರೀಕ್ಷಕರಿಗೆ ಬೆರಗು ಹಿಡಿಸುವುದರಲ್ಲಿ ಅವನು ಖುಷಿ ಪಡುತ್ತಿದ್ದನು. ಇದೆಲ್ಲದ್ದರಿಂದ ಅವನೊಬ್ಬ ಅಸಾಧಾರಣ ವಿದ್ಯಾರ್ಥಿಯಾಗಿದ್ದನೆಂಬುದು ತೋರಿಬರುತ್ತದೆ.

ಬಿ.ಎ. ಪದವೀ ಪರೀಕ್ಷೆಯಲ್ಲಿ ಉತ್ತೀರ್ಣನಾಗದೆ ಹೋದದ್ದು ರಾಜರಾಜ ವರ್ಮನ ಮನಸ್ಸಿಗೆ ಬಲವಾದ ಆಘಾತವುಂಟುಮಾಡಿತು. ತನ್ನ ಭಾವನೆಗಳನ್ನು ವ್ಯಕ್ತಪಡಿಸಿ ಸಂಸ್ಕೃತದಲ್ಲಿ ೨೮ ಶ್ಲೋಕಗಳನ್ನು ರಚಿಸಿ ಆ ಮೂಲಕ ಸ್ವಲ್ಪ ಮನಸ್ಸಮಾಧಾನವನ್ನು ಕಂಡುಕೊಂಡನು. ಈ ಚಿಕ್ಕ ದುಃಖಗೀತದ ಹೆಸರು 'ಭಂಗ ವಿಲಾಪಂ'. ಅವನ ಸ್ವಂತ ದಿನಚರಿಯಲ್ಲಿ ಬರೆದಿಟ್ಟ ಟಿಪ್ಪಣಿಗಳು[೨] ಅವನು

ತನ್ನ ವಿದ್ಯಾವ್ಯಾಸಂಗವನ್ನು ಏಕಾಗ್ರಚಿತ್ತದಿಂದ ನಡಸಲು ಹೇಗೆ ಅಸಮರ್ಥನಾಗಿದ್ದನು, ಅದರಿಂದಾಗಿ ಹೇಗೆ ನಿರಾಶೆಗೊಂಡಿದ್ದನು ಎಂಬುದನ್ನು ತೋರಿಸುತ್ತವೆ. ರಸಾಯನ ಶಾಸ್ತ್ರದ ಪ್ರಯೋಗಭಾಗದ ಪರೀಕ್ಷೆಗೆ ಕುಳಿತುಕೊಳ್ಳಲು ಅವನು ಮದರಾಸಿಗೆ ಮೊತ್ತಮೊದಲ ಸಲ ಪ್ರಯಾಣ ಮಾಡಿದನಷ್ಟೆ. ಆ ಸಂಬಂಧದ ಕ್ಲೇಶಕರ ಪ್ರಯಾಣವನ್ನು ವರ್ಣಿಸುವ ಸ್ವಾರಸ್ಯವಾದ ಉಲ್ಲೇಖಗಳು ಅವನ ದಿನಚರಿಯಲ್ಲಿವೆ. ತಿರುವಾಂಕೂರಿನ ಮಧ್ಯಭಾಗದಿಂದ ಮದರಾಸನ್ನು ತಲುಪಲು ವಿದ್ಯಾರ್ಥಿಗಳ ಸಣ್ಣ ತಂಡಕ್ಕೆ ಪೂರ್ತಿಯಾಗಿ ಒಂದು ವಾರವೇ ಹಿಡಿಯಿತು. ಅಂದಿನ ದಿನಗಳಲ್ಲಿ ಅವರಿಗೆ ಶೋರನೂರಿನಿಂದ ಮಾತ್ರ ರೈಲಿನ ಸೌಕರ್ಯ ಲಭ್ಯವಾಗಿತ್ತು. ಈ ಸ್ಥಲಕ್ಕೆ ಹೋಗಬೇಕಾದಲ್ಲಿ ಪ್ರಯಾಣದ ಅರ್ಧಭಾಗವನ್ನು ನಾಡದೋಣಿಯ ಮೂಲಕವೂ ಉಳಿರ್ಧವನ್ನು ಎತ್ತಿನಗಾಡಿಯಲ್ಲೂ ಮಾಡಬೇಕಾಗಿದ್ದಿತು. ಹೀಗಿರುತ್ತ, ಆಗಿನ ದಿನಗಳಲ್ಲಿ ಸರ್ಕಾರದ ಮನ್ನಣೆ ಪಡೆದ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮಾಡಬೇಕಾಗಿದ್ದರೆ ಯಾವ ಯಾವುದೋ ದೂರಸ್ಥಳಗಳಲ್ಲಿದ್ದ ವಿದ್ಯಾರ್ಥಿಗಳು ಎಷ್ಟು ಶ್ರಮಪಡಬೇಕಾಗಿತ್ತು ಎಂಬುದನ್ನು ನಾವು ಸುಲಭವಾಗಿ ಕಲ್ಪಿಸಿಕೊಳ್ಳಬಹುದು.

ಮದುವೆ

ರಾಜರಾಜವರ್ಮ ಒಳ್ಳೆಯ ಯೋಗ್ಯನಾಗಿದ್ದ ಬ್ರಹ್ಮಚಾರಿ. ಎಂದಮೇಲೆ ಕೇಳಬೇಕೆ, ಆಳುವ ದೊರೆಯಾಗಿದ್ದ ವಿಶಾಖಂ ತಿರುನಾಳ್ ಕೂಡ ತನ್ನ ಮಗಳಿಗೋಸುಗ ಅವನ ಮೇಲೆ ಕಣ್ಣಿಟ್ಟಿದ್ದನು. ಆದರೆ ದೊರೆಯ ಅಕಾಲಮರಣ ಹಾಗೂ ಇತರ ಕೆಲವು ಸಂದರ್ಭಗಳ ಪರಿಣಾಮವಾಗಿ ಅವನ ಅದೃಷ್ಟದ ಸ್ವರೂಪ ಬೇರೆಯ ತೆರನಾಯಿತು. ಒಳ್ಳೆಯ ಸರಿಯಾದ ಗಳಿಗೆಯಲ್ಲಿ ಹಿರಿಯ ಕೋಯಿತಂಪುರಾನ್ ಈ ವಿಚಾರಕ್ಕೆ ತಾನೇ ಮೊದಲು ಗಮನಕೊಟ್ಟು, ಸರಿಯಾದ ವ್ಯವಸ್ಥೆ ಮಾಡಿದನು; ಅದರ ಫಲವಾಗಿ, ಅವನ ಮೂರನೆಯ ಮಗಳು 'ಸ್ವಾತಿ ತಿರುನಾಳ್ ಮಹಾಪ್ರಭಾ ತಂಪುರಾಟ್ಟಿ'ಯನ್ನು ರಾಜರಾಜವರ್ಮನಿಗೆ ಕೊಟ್ಟು ೧೮೮೦ರಲ್ಲಿ ಸಂಪ್ರದಾಯಾನುಸಾರವಾಗಿ ಮದುವೆ ನಡೆಯಿತು. ಮದುವೆ ಬಹಳ ಸುಖಕರವಾಗಿ ಪರಿಣಮಿಸಿತು; ತಂಪುರಾಟ್ಟಿ ತನ್ನ ಪತಿಯಲ್ಲಿ ಗಾಢವಾದ ಪ್ರೀತಿ, ಗೌರವಗಳನ್ನು ಇಟ್ಟಿದ್ದಳು.

---

೨. ಉಪಯೋಗವಾದದ್ದು ಏನನ್ನೂ ಈ ದಿನ ನಾನು ಮಾಡಲಾಗಲಿಲ್ಲ. ನನ್ನ ಸೋಮಾರಿತನದ ಬಗ್ಗೆ ನನಗೇ ನಾಚಿಕೆಯಾಯಿತು. ಸೋಮಾರಿಗಳು ಎಂದಿಗೂ ಜ್ಞಾನಾರ್ಜನೆ ಮಾಡುವುದಿಲ್ಲ.

ರಾಜರಾಜವರ್ಮನ ವಯಸ್ಸು ಆಗ ೨೬; ಶಾರೀರಿಕವಾಗಿ, ಮಾನಸಿಕವಾಗಿ ಒಳ್ಳೆಯ ಪ್ರೌಢಾವಸ್ಥೆಯಲ್ಲಿದ್ದ ಅವನು ವಿದ್ವಾಂಸನಾಗಿದ್ದನು, ಉದಯೋನ್ಮುಖ ಕವಿಯಾಗಿದ್ದನು. ಅವನು ಇನ್ನೂ ರಸಾಯನಶಾಸ್ತ್ರದ ವಿಷಯದಲ್ಲಿ ತೇರ್ಗಡೆ ಯಾಗಬೇಕಾಗಿತ್ತು; ಮರುಪ್ರಯತ್ನದಲ್ಲಿ ಹೆಚ್ಚು ಕಷ್ಟವಿಲ್ಲದೆ ತೇರ್ಗಡೆಯೂ ಆದನು. ಹೀಗೆ, ನಮ್ಮ ತರುಣ ಚರಿತ್ರನಾಯಕನು, ಮಲಯಾಳೀ ಕ್ಷತ್ರಿಯ ಜನಾಂಗದ ಪ್ರಥಮ ಪದವೀಧರನಾದನು: ಈ ಜನಾಂಗಕ್ಕೆ ತನ್ನ ವಿದ್ವಾಂಸರು ಪಾರಂಗತರು ಎಂದರೆ ಹೆಮ್ಮೆಯೆ, ಅದರಲ್ಲಿ ಸಂದೇಹವಿರಲಿಲ್ಲ; ಆದರೆ ಈ ಜನಕ್ಕೆ ವ್ಯವಸ್ಥಿತ ವಿದ್ಯಾಸಂಸ್ಥೆಗಳಲ್ಲಿ ಕಲಿಯುವುದೆಂದರೆ ಆಗದು; ಸಾಧಾರಣವಾಗಿ ಮನೆಯಲ್ಲೇ ಖಾಸಗಿ ಶಿಕ್ಷಣಕ್ಕೆ ಏರ್ಪಾಡು ಮಾಡುತ್ತಿದ್ದರು. ಹೀಗಿರುತ್ತ ಈ ವ್ಯವಸ್ಥೆಯಲ್ಲಿಯ ವಿದ್ಯಾಭ್ಯಾಸದ ಮಟ್ಟಗಳೇ ಬೇರೆಯಾಗಿರುತ್ತಿದ್ದುವು. ಆದ್ದರಿಂದ ರಾಜರಾಜವರ್ಮನು ಮದರಾಸು ವಿಶ್ವವಿದ್ಯಾನಿಲಯದ ಪದವೀಧರನಾದಾಗ[೩] ಆ ಜನಾಂಗದವರು ಮನಃಪೂರ್ವಕವಾಗಿ ಹರ್ಷಗೊಂಡರು, ಆ ಸಂದರ್ಭದಲ್ಲಿ ಅವನಿಗೆ ಅನೇಕ ಪ್ರಶಸ್ತಿಗಳೂ ಬಹುಮಾನಗಳೂ ದೊರೆತವು; ಆದರೆ ಅವುಗಳಲ್ಲಿ ಅತ್ಯಮೂಲ್ಯ ವಾದದ್ದೆಂದರೆ ಶ್ರೀಮೂಲಂ ತಿರುನಾಳ್ ಮಹಾರಾಜರು ನೀಡಿದ ರತ್ನಖಚಿತವಾದ ಚಿನ್ನದ ಕಂಕಣ.

ಪ್ರಾರಂಭವಾದ ರಚನೆಗಳು

ಸಂಸ್ಕೃತದಲ್ಲಿ ಪದ್ಯರಚನೆ ಮಾಡಲು ಗ್ರಂಥಕರ್ತನು ಪಟ್ಟ ಮೊದಮೊದಲಿನ ಕೆಲವು ಪ್ರಯತ್ನಗಳ ಬಗೆಗೆ ಈಗಾಗಲೇ ನಾವು ಉಲ್ಲೇಖಿಸಿದ್ದೇವೆ. ಮದರಾಸಿನಲ್ಲಿ ಎಂ.ಎ. ಪರೀಕ್ಷೆಗೆ ಕುಳಿತು ಅಲ್ಲಿಂದ ಹಿಂದಿರುಗಿದ ಕೂಡಲೆ ಅವನು 'ವಿಮಾನಾಷ್ಟಕ'ವನ್ನು ರಚಿಸಿದನು. ಮದರಾಸಿನಲ್ಲಿ ಒಬ್ಬ ಯೂರೋಪಿಯನ್ನನು ಅನಿಲ ತುಂಬಿದ ವಿಮಾನದಲ್ಲಿ ಆಕಾಶಕ್ಕೆ ಹಾರಲು ಮಾಡಿದ ಪ್ರಯೋಗವನ್ನು ಕುರಿತದ್ದು ಈ ಅಷ್ಟಕ. ಪ್ರೇಕ್ಷಕರ ಉತ್ಕಂಠತೆಯನ್ನು ಇದರಲ್ಲಿ ಚೆನ್ನಾಗಿ ವರ್ಣಿಸಲಾಗಿದೆ. 'ಪಿತೃಪ್ರಲಾಪಂ' ಎಂಬುದು, ಅದರ ಹೆಸರೇ ಸೂಚಿಸುವಂತೆ, ಒಬ್ಬ ತಂದೆಯ ವಿಲಾಪವನ್ನು ಕುರಿತದ್ದಾಗಿದೆ. ರಾಜರಾಜವರ್ಮನ ಎರಡನೆಯ ಮಗಳು ತೀರಿಕೊಂಡಾಗ ರಚಿತವಾದ ಇದು ಸಂಸ್ಕೃತದ ಒಂದು ಕರುಣಾಜನಕವಾದ ಚರಮಗೀತೆ. ಇದೇ ಕಾಲದಲ್ಲಿ ರಚಿತವಾದ ಇನ್ನೂ ಕೆಲವು ಸಣ್ಣ ಸಣ್ಣ ಕವಿತೆಗಳಿವೆ;

---

೩. ಆಗಿನ ಕಾಲದಲ್ಲಿ ದಕ್ಷಿಣ ಭಾರತಕ್ಕೆಲ್ಲ ಒಂದೇ ವಿಶ್ವವಿದ್ಯಾನಿಲಯ.

ಕೆಲವು ವೇಳೆ ಸ್ನೇಹಿತರ ಸೂಚನೆಗಳಿಗೆ ಅನುಗುಣವಾಗಿ ಇನ್ನು ಕೆಲವು ವೇಳೆ ಕೆಲವು ನಿಯತಕಾಲಿಕ ಪತ್ರಿಕೆಗಳಿಗಾಗಿ ಬರೆದವು ಅವು. 'ದೇವೀಮಂಗಳಂ', 'ಸರಸ್ವತೀಸ್ತವಂ', 'ರಾಗಮುದ್ರಾಸಪ್ತಕಂ', 'ಶ್ರೀ ಪದ್ಮನಾಭ ಪಂಚಕಂ' ಮತ್ತು 'ದೇವೀದಂಡಕಂ', ಇವು ಅಂಥವಲ್ಲಿ ಕೆಲವು. 'ಗೈರ್ವಾಣೀವಿಜಯಂ' ಎಂಬ ಏಕಾಂಕ ನಾಟಕ ಇನ್ನೊಂದು; ಇದರಲ್ಲಿ ಇಂಗ್ಲಿಷ್ ಭಾಷೆಗೂ ಸಂಸ್ಕೃತಕ್ಕೂ ಇರುವ ತಾರತಮ್ಯವನ್ನು ಹೇಳಿ, ಸಂಸ್ಕೃತದ ಮಹಿಮೆಯನ್ನು ಎತ್ತಿಹೇಳಿದೆ. ಷೇಕ್ಸ್‌ಪಿಯರ್ ಕವಿಯ 'ಒಥೆಲೊ' ನಾಟಕದ ಗದ್ಯ ರೂಪಾಂತರದ ಹೆಸರು 'ಉದ್ದಾಲಚರಿತಂ ಗದ್ಯಂ.'[೪] ವಿಶೇಷವಾಗಿ ಗಮನಿಸಬೇಕಾದ ಸಂಗತಿ ಎಂದರೆ ಈ ಎಲ್ಲ ಕೃತಿಗಳೂ ಸಂಸ್ಕೃತದಲ್ಲಿರುವುದು. ಈ ಮಹಾ ಸಾಹಿತಿ ತನ್ನ ಲಕ್ಷ್ಯವನ್ನು ತನ್ನ ಸ್ವಂತ ತಾಯ್ನುಡಿಯ ಕಡೆಗೆ ಹರಿಸಲು ಇನ್ನು ಕೆಲವು ಕಾಲ ಕಳೆಯ ಬೇಕಾಯಿತು. ಅವನ ಜೀವನದ ಗುರಿ ತನ್ನ ತಾಯ್ನುಡಿಯಾದ ಮಲಯಾಳಂ ಭಾಷೆಯ ಅಭಿವೃದ್ಧಿಯೆ ಆಗಿತ್ತು ಎಂಬುದು ೧೮೯೪ರ ಅವನ ದಿನಚರಿ ಪುಸ್ತಕದಿಂದ ಗೊತ್ತಾಗುತ್ತದೆ.

ಕೇರಳವರ್ಮನ ಸಲಹೆಯಂತೆ, 'ಮಲಯಾಳ ಮನೋರಮಾ', 'ಬ್ರಹ್ಮವಿದ್ಯಾ', 'ವಿಜ್ಞಾನ ಚಿಂತಾಮಣಿ', 'ವಿದ್ಯಾವಿನೋದಿನಿ' ಮುಂತಾದ ಕೆಲವು ನಿಯತಕಾಲಿಕಗಳಿಗೆ ಅವನು ಲೇಖನಗಳನ್ನು ಬರೆದು ಕಳಿಸತೊಡಗಿದನು. ಅವನು ಸಂಸ್ಕೃತದ ಮತ್ತು ಮಲಯಾಳಗಳಲ್ಲಿ ಅಲ್ಲದೆ ಆಗಾಗ್ಗೆ ಇಂಗ್ಲಿಷಿನಲ್ಲೂ ಬರೆಯುತ್ತಿದ್ದನು.

* * * *

೪. ಇದರ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ನಾಲ್ಕನೆಯ ಅಧ್ಯಾಯವನ್ನು ನೋಡಿ.

ಅಧ್ಯಾಯ ಮೂರು

ಶಿಕ್ಷಕ ಹಾಗೂ ಸಂಶೋಧಕ

ರಾಜರಾಜವರ್ಮನು ಹೊಂದಿದ್ದ ಮೇಲುದರ್ಜೆಯ ಸಂಬಂಧಗಳು ಅವನನ್ನು ಶ್ರೀಮಂತನಾಗುವಂತಹ ಸ್ಥಿತಿಯಲ್ಲಿ ಇರಿಸಲಿಲ್ಲ. ತನ್ನ ವಿದ್ಯಾರ್ಥಿ ದಿನಗಳಲ್ಲಿ ತನ್ನ ಕುಟುಂಬದಿಂದ ಪಡೆಯುತ್ತಿದ್ದ ಸಹಾಯಧನವು ಅವನ ನ್ಯಾಯವಾದ ಖರ್ಚುವೆಚ್ಚಗಳಿಗೇ ಸಾಲುತ್ತಿರಲಿಲ್ಲ. ಸೋದರಮಾವ ಕೇರಳ ವರ್ಮನೇನೋ ವಿಶ್ವಾಸದಿಂದ ಅವನಿಗೆ ಆಗಾಗ್ಗೆ ಸಹಾಯ ಮಾಡುತ್ತಿದ್ದನು. ಮಹಾರಾಜನು ಕೂಡ ಅವನಿಗೆ ಉದಾರವಾದ ಸಹಾಯವನ್ನು ನೀಡಿದ್ದನು. ಆದರೆ ರಾಜರಾಜವರ್ಮನು ಸ್ವತಂತ್ರವಾಗಿ ಇರಬಯಸಿದನು. ಆದ್ದರಿಂದ ಪದವೀ ಪರೀಕ್ಷೆಯನ್ನು ಮುಗಿಸಿದ ಮೇಲೆ ಅವನು ಸರ್ಕಾರದ ಸೇವಾವೃತ್ತಿಗೆ ಸೇರಬಯಸಿದನು. ಆ ದಿನಗಳಲ್ಲಿ ಕ್ಷತ್ರಿಯ ಕುಲದವರು ಸರ್ಕಾರದ ನೌಕರಿಗೆ ಸೇರುವುದು ಸಂಪ್ರದಾಯಕ್ಕೆ ವಿರುದ್ಧವೆನಿಸಿತ್ತು. ಹೀಗಿರುತ್ತ ರಾಜರಾಜವರ್ಮನು ಸರ್ಕಾರಿ ನೌಕರಿಯನ್ನು ಹುಡುಕುತ್ತಿದ್ದ ವಿಚಾರ ತಿಳಿದುಬಂದಾಗ ಸಂಪ್ರದಾಯ ಶರಣರು ಹುಬ್ಬೇರಿಸಿದರು. ಆದರೆ ಈ ಅರ್ಥಹೀನ ಪೂರ್ವಗ್ರಹಿಕೆಯ ವಿರೋಧಕ್ಕೆ ರಾಜರಾಜವರ್ಮನು ತಲೆಕೆಡಿಸಿಕೊಳ್ಳಲಿಲ್ಲ.

ಅದೇ ಸಮಯದಲ್ಲಿ ಸಂಸ್ಥಾನದ ಸರ್ಕಾರವು ತಿರುವನಂತಪುರದಲ್ಲಿ ಒಂದು ಸಂಸ್ಕೃತಪಾಠಶಾಲೆಯನ್ನು ಪ್ರಾರಂಭಿಸಲು ನಿರ್ಧರಿಸಿತು. ಈ ಸಂಸ್ಥೆಯ ಉತ್ತಮ ಭವಿಷ್ಯಕ್ಕೆ ಯೋಗ್ಯವಾದ ಮಾರ್ಗದರ್ಶನ ನೀಡಲು ರಾಜರಾವರ್ಮನನ್ನು ಆಯ್ಕೆ ಮಾಡಬೇಕಾದದ್ದು ಸುಸ್ಪಷ್ಟವಾಗಿದ್ದರೂ ಅವನ ಕಿರಿಯ ವಯಸ್ಸು ಒಂದು ಕೊರತೆ ಎಂಬುದನ್ನು ಎತ್ತಿ ತೋರಿಸಲಾಯಿತು. ಆದರೆ ಕಡೆಗೆ ಆತನನ್ನೇ ಪಾಠಶಾಲೆಯ ಮುಖ್ಯಸ್ಥನನ್ನಾಗಿ ನೇಮಿಸಲಾಯಿತು (೧೮೯೬), ಒಂದು ಗೊತ್ತಾದ ವಿಷಯ ಸೂಚಿಕೆಯಾಗಲಿ ವೇಳಾಪಟ್ಟಿಯಾಗಲಿ ವಿದ್ಯಾವಿಭಾಗಗಳ ರೂಪರೇಖೆಯಾಗಲಿ ಯಾವುದೂ ಇರಲಿಲ್ಲ. ರಾಜರಾಜವರ್ಮನು ಇವೆಲ್ಲವನ್ನೂ ಯೋಚಿಸಿ, ಸಂಸ್ಕೃತ ಪಾಠಶಾಲೆಯ ಸ್ಥಾನಮಾನವನ್ನು ಮೇಲಕ್ಕೇರಿಸಿದನು. ಬ್ರಾಹ್ಮಣೇತರರಿಗೆ ಸಂಸ್ಕೃತವನ್ನು ಕಲಿಸುವ ವಿಷಯದಲ್ಲಿ ವಿಶೇಷವಾಗಿ

ಈ ಪಾಠಶಾಲೆ ಕಾರಣಭೂತವಾಗಿದ್ದಿತು.

ಈ ಹೊಸ ಉದ್ಯೋಗದಿಂದಾಗಿ ತಿರುವನಂತಪುರದಲ್ಲಿಯೆ ಖಾಯಮ್ಮಾಗಿ ವಾಸಮಾಡಬೇಕಾದುದು ಎ.ಆರ್.ಗೆ ಅಗತ್ಯವಾಯಿತು. ನಾರಾಯಣ ಶಾಸ್ತ್ರಿಗಳು ಮತ್ತು ಗಣಪತಿ ಶಾಸ್ತ್ರಿಗಳು ಎಂಬ ಇಬ್ಬರು ಪ್ರಸಿದ್ಧ ವಿದ್ವಾಂಸರ ಸಹಾಯವನ್ನು ಆತ ಶಾಲೆಗೆ ಪಡೆದುಕೊಂಡನು. ಕೇರಳವರ್ಮನ ಸಲಹೆಯಂತೆ ಸಂಸ್ಕೃತ ಎಂ.ಎ. ಪದವಿ ಪರೀಕ್ಷೆಗೆ ಕುಳಿತುಕೊಳ್ಳಲು ರಾಜರಾಜವರ್ಮನು ಒಬ್ಬ ಖಾಸಗಿ ಅಭ್ಯರ್ಥಿಯಾಗಿ ತನ್ನ ಹೆಸರನ್ನು ಆಗಲೇ ದಾಖಲುಮಾಡಿಸಿಕೊಂಡಿದ್ದನು. ಆದರೆ ಈ ಮೊದಲೆ ಕೈಕೊಂಡ ಕಾರ್ಯಗಳಿಂದಾಗಿ ಖಾಸಗಿ ವ್ಯಾಸಂಗವು ತೃಪ್ತಿಕರವಾಗಿ ಮುಂದುವರಿಯಲಿಲ್ಲ. ಅಲ್ಲದೆ, 'ನಲಿವಿನತ್ತ ನೂಕಿ ದಿನದಿನವೂ ದುಡಿದು ಬದುಕಲು' (Shun delight and live laborious days) ಅವನಿಗೆ ಇಷ್ಟವಿರಲಿಲ್ಲ. ಚದುರಂಗ, ಇಸ್ಪೀಟು, ಕುದುರೆಸವಾರಿ, ಇನ್ನೂ ಇತರ ಹವ್ಯಾಸಗಳು, ಇವೆಲ್ಲಾ ಅವನಿಗೆ ಇದ್ದೇ ತೀರಬೇಕು. ಎಂ.ಎ. ವ್ಯಾಸಂಗ ವಿಷಯದ ಒಂದು ಭಾಗವಾಗಿ ಆತ ಒಂದು ವಿಶೇಷ ಪ್ರಬಂಧವನ್ನು ಸಿದ್ಧಪಡಿಸಬೇಕಾಗಿದ್ದಿತು; ಪ್ರಬಂಧ ವಿಷಯ, 'ನಾರಾಯಣಭಟ್ಟ ಮತ್ತು ಆತನ ಕೃತಿಗಳು'. ಆತನ ಇಬ್ಬರು ಗಣ್ಯ ಸಹೋದ್ಯೋಗಿಗಳು ಈ ಕೆಲಸದಲ್ಲಿ ಸ್ವಲ್ಪಮಟ್ಟಿಗೆ ನೆರವು ನೀಡಿದರು. ಸಾಂಪ್ರದಾಯಿಕ ಮಾದರಿಯ ವಿದ್ವತ್ತಿನಲ್ಲಿ ಅವರಿಬ್ಬರೂ ಒಳ್ಳೆಯ ವಿದ್ವಾಂಸರಾಗಿದ್ದರೂ ಸಂಶೋಧನೆ ನಡಸಲು ಅವರಿಗೆ ಅಗತ್ಯವಾದ ಶಿಕ್ಷಣವಾಗಲಿ, ಸಾಮರ್ಥ್ಯವಾಗಲಿ ಇರಲಿಲ್ಲ. ವಿಮರ್ಶನ ಸೂಕ್ಷ್ಮಮತಿಯ ಕೊರತೆಯೂ ಅವರಲ್ಲಿತ್ತು. ಆದ್ದರಿಂದ ರಾಜರಾಜವರ್ಮನು ಬಲುಮಟ್ಟಿಗೆ ಎಲ್ಲವನ್ನೂ ತಾನೇ ಮಾಡಬೇಕಾಗಿದ್ದಿತು. 'ಇಂಡಿಯನ್ ಆ್ಯಂಟಿಕ್ವೆರಿ'(Indian Antiquary)ಯಂತಹ ನಿಯತಕಾಲಿಕಗಳ ಸಂಪುಟಗಳಲ್ಲಿ ಲಭ್ಯವಾಗಿದ್ದ ಉಪಯುಕ್ತ ಸಾಮಗ್ರಿಯನ್ನು ಆತ ಕೂಲಂಕಷವಾಗಿ ಶೋಧಿಸಿ ನೋಡಿದನು. ಕಡೆಗೂ ಸಕಾಲದಲ್ಲಿ ಒಂದು ಪ್ರಥಮಶ್ರೇಣಿಯ ಪ್ರೌಢಪ್ರಬಂಧವನ್ನು ಸಿದ್ಧಪಡಿಸಲು ಸಮರ್ಥನಾದನು. ೧೮೯೧ರಲ್ಲಿ ಆತ ಪರೀಕ್ಷೆಗೆ ಕುಳಿತು ವಿಶ್ವವಿದ್ಯಾನಿಲಯಕ್ಕೇ ಮೊದಲನೆಯ ಸ್ಥಾನ ಪಡೆದು ತೇರ್ಗಡೆಯಾದನು; ಆದರೂ ತೇರ್ಗಡೆ ಆದದ್ದು ಎರಡನೆಯ ದರ್ಜೆಯಲ್ಲಿ. ಆಗಿನ ದಿನಗಳಲ್ಲಿ ಅಂತಹ ಬುದ್ಧಿಶಾಲಿ ವಿದ್ಯಾರ್ಥಿಗಳಿಗೆ ಕೂಡ ಪ್ರಥಮ ದರ್ಜೆಯನ್ನು ಪಡೆಯುವುದು ಅತ್ಯಂತ ಕಷ್ಟಕರವಾಗಿತ್ತು. ಹೀಗಿದ್ದರೂ ಕೂಡ, ಮುಖ್ಯ ಪರೀಕ್ಷಕರಾಗಿದ್ದ ಶೇಷಗಿರಿಶಾಸ್ತ್ರಿಗಳು ಆತನ ಉತ್ತರಗಳ ಗುಣಮಟ್ಟಕ್ಕೆ ಮಾರುಹೋಗಿ ಅವನ ಉತ್ತರಪತ್ರಿಕೆಗಳನ್ನು ಕಾಪಾಡಿ

ಇಟ್ಟುಕೊಳ್ಳುವಂತೆ ವಿಶ್ವವಿದ್ಯಾನಿಲಯಕ್ಕೆ ಸಲಹೆ ಮಾಡಿದರು. ಗ್ರೀಕ್ ಭಾಷೆಯಿಂದ ಸಂಸ್ಕೃತ ತೆಗೆದುಕೊಂಡಿರುವ ೧೨ ಶಬ್ದಗಳನ್ನು ತಿಳಿಸಬೇಕೆಂಬುದು, ಕೇಳಿದ ಒಂದು ಪ್ರಶ್ನೆ. ೧೨ಕ್ಕೆ ಬದಲಾಗಿ ೩೦ ಶಬ್ದಗಳನ್ನು ವಿದ್ಯಾರ್ಥಿ ತಿಳಿಸಿದ್ದನು; ಇದನ್ನು ನೋಡಿ ಪರೀಕ್ಷಕರು ಬೆರಗಾಗಿ ಹೋಗಿದ್ದರು. ಮಿಲ್ಟನ್ ಕವಿಯ ಕೆಲವು ಕವಿತಾಭಾಗಗಳ ಭಾಷಾಂತರದ ವಿಷಯದಲ್ಲಿ, ಅಭ್ಯರ್ಥಿ ಭಾಷಾಂತರವನ್ನು ಉತ್ಕೃಷ್ಟವಾದ ಪದ್ಯರೂಪದಲ್ಲಿ ಒದಗಿಸಿದ್ದನು. ಸಂಸ್ಕೃತ ಭಾಷೆಯಲ್ಲಿ ಪರಿಣತಿಗಾಗಿ 'ರಾಸ್' (Ross) ಚಿನ್ನದ ಪದಕವನ್ನೂ 'ಮುನಿಸ್ವಾಮಿ ಚೆಟ್ಟಿ ಪದಕ'ವನ್ನು ಗೆದ್ದುಕೊಂಡನು.

ಸಂಸ್ಕೃತ ಮಹಾಪಾಠಶಾಲೆ (ಕಾಲೇಜು)

೧೮೮೪ರಲ್ಲಿ ರಾಜವರ್ಮನನ್ನು ಸಂಸ್ಕೃತ ಮಹಾಪಾಠಶಾಲೆಯ (The Sanskrit College) ಮುಖ್ಯಸ್ಥನನ್ನಾಗಿ ನೇಮಿಸಲಾಯಿತು. ಅಲ್ಲಿದ್ದಾಗ ಕಾಲೇಜಿನ ಅಭಿವೃದ್ಧಿಗೂ ಪಠ್ಯವಿಷಯಗಳನ್ನು ಉತ್ತಮಪಡಿಸುವುದಕ್ಕೂ ಆತ ತನ್ನ ಗಮನವನ್ನು ಹರಿಸಿದನು. ಈ ಸಂಬಂಧದಲ್ಲಿ ಆತನು ಸರ್ಕಾರಕ್ಕೆ ಅನೇಕ ಸಲಹೆ ಸೂಚನೆಗಳನ್ನು ಶಿಫಾರಸು ಮಾಢಿದನು; ಅವುಗಳಲ್ಲಿ ಕೆಲವಕ್ಕೆ ಬಹಳ ಕಾಲವಾದ ಮೇಲೆ ಸರ್ಕಾರ ಅನುಮೋದನೆಯನ್ನು ನೀಡಿತು. ಪಾಠಕ್ರಮದಲ್ಲಿ ಸಾಹಿತ್ಯ, ಆಯುರ್ವೇದ, ಜ್ಯೋತಿಷ್ಯಶಾಸ್ತ್ರಗಳನ್ನು ಅಳವಡಿಸಲು ಆತ ಅಪೇಕ್ಷಿಪಟ್ಟನು; ಆತನ ಅಭಿಪ್ರಾಯದ ಪ್ರಕಾರ, ರಾಷ್ಟ್ರದ ಕಲೆ, ಸಾಹಿತ್ಯ ಮತ್ತು ವಿಜ್ಞಾನ ವಿಷಯಗಳೆಲ್ಲಕ್ಕೂ ಪ್ರಾಮುಖ್ಯ ಸಲ್ಲಬೇಕು. ವಿಷಯ ಸೂಚಿಯಲ್ಲಿ ಭೂಗೋಳ, ಇತಿಹಾಸ, ಬೀಜಗಣಿತ ಮತ್ತು ತ್ರಿಕೋನಮಿತಿಗಳನ್ನು ಆತ ಅಳವಡಿಸಿದನು. ಆತನು ಬೀಜಗಣಿತ ಮತ್ತು ತ್ರಿಕೋನ ಮಿತಿಗಳ ಪಾಠಗಳನ್ನು ತಾನೇ ಮಾಡುತ್ತಿದ್ದನಲ್ಲದೆ ಪಠ್ಯಪುಸ್ತಕಗಳನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡಿದನು. ಅಂದಿನ ದಿನಗಳಲ್ಲಿ ಯೂರೋಪಿಯನ್ ಪ್ರಾಧ್ಯಾಪಕರ ಮತ್ತು ಅವರು ಹಾಕಿದ್ದ ಗೆರೆಯ ಮೇಲೆಯೇ ನಡೆಯುತ್ತಿದ್ದಂಥ ಇತರ ಜನರ ಅಭಿಪ್ರಾಯಗಳ ಮೇರೆಗೆ ಮಹತ್ವದ ನಿರ್ಣಯಗಳನ್ನು ಕೈಗೊಳ್ಳುವ ಸಂಸ್ಥೆಗಳಲ್ಲಿ ಅವರು ಪ್ರಾಬಲ್ಯ ಹೊಂದಿದ್ದರು. ಸುಮಾರು ೨೫ ವರ್ಷಗಳಷ್ಟು ಕಾಲವೇ ಹಿಡಿದರೂ ಕೂಡ ಈ ಮಹಾವಿದ್ವಾಂಸನ ಸಲಹೆ ಸೂಚನೆಗಳ ಶಿಫಾರಸ್ಸನ್ನು ಕ್ರಮಕ್ರಮವಾಗಿ ಸ್ವೀಕರಿಸಲಾಯಿತು ಎಂಬುದನ್ನು ಇತಿಹಾಸವು ತೆರೆದು ತೋರಿಸಿದೆ.

ಒಂದು ಕಡೆ 'ಗೈರ್ವಾಣೀವಿಜಯ', ಇನ್ನೊಂದು ಕಡೆ 'ಉದ್ದಾಲಚರಿತಂ'

ಇವು ಜಗತ್ತಿನ ಎರಡು ಮಹತ್ವದ ಭಾಷೆಗಳಾದ ಸಂಸ್ಕೃತ ಮತ್ತು ಇಂಗ್ಲಿಷುಗಳ ಬಗೆಗೆ ಅವನ ಮನಸ್ಸು ಹೇಗೆ ಕೆಲಸ ಮಾಡುತ್ತಿತ್ತು ಎಂಬುದನ್ನು ತೋರಿಸಿ ಕೊಟ್ಟಿವೆ. ಇನ್ನೂ ಅಷ್ಟಾಗಿ ಅಭಿವೃದ್ಧಿಗೊಳ್ಳದಿದ್ದ ಅವನ ತಾಯ್ನುಡಿಯಾದ ಮಲಯಾಳವು ವಿಕಾಸಗೊಳ್ಳುವುದಕ್ಕೆ ಪ್ರದಾನ ಮಾಡಲು ಅಗತ್ಯವಾದ ಅನೇಕ ವಿಷಯಗಳು ಈ ಎರಡೂ ಭಾಷೆಗಳಲ್ಲಿ ಇದ್ದುವು. ಅವನು ಇಬ್ಬರು ಶಾಸ್ತ್ರಿಗಳಿಗೂ ಇಂಗ್ಲಿಷ್ ಭಾಷೆಯನ್ನು ಬೋಧಿಸಿದನು. ಆ ಇಬ್ಬರಲ್ಲಿ ಒಬ್ಬರಾದ ಗಣಪತಿ ಶಾಸ್ತ್ರಿಗಳು ಶ್ರೇಷ್ಠ (ಸಂಸ್ಕೃತಂ ಕೃತಿಗಳ ಸಂಪಾದಕರೆಂದು ಪ್ರಸಿದ್ಧರಾದರು.* ವಿದ್ವತ್ತಿನ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಳ್ಳಲು ರಾಜರಾಜವರ್ಮನು ಕಾತರನಾಗಿದ್ದನು; ಆದರೆ ಅಧಿಕಾರಿಗಳು ಅವನಿಗೆ ಕುಕ್ಕುಮುಳ್ಳಾಗಿದ್ದರು. ಈ ವಿಷಯ ಆತನ ದಿನಚರಿಯ ಟಿಪ್ಪಣಿಗಳಿಂದಲೂ ಪತ್ರಗಳಿಂದಲೂ ಹೊರಪಡುತ್ತದೆ. ಮದರಾಸು ಪ್ರಾಂತದಲ್ಲಿ ಯೋಗ್ಯವಾದ ಅಧಿಕಾರ ಸ್ಥಾನಗಳನ್ನು ಪಡೆಯುವುದಕ್ಕು ಸಹ ಆತನು ಪ್ರಯತ್ನಿಸಿದನು. ಆಗಿನ ದಿನಗಳಲ್ಲಿ ಪ್ರಾದೇಶಿಕ ಭಾಷೆಗಳು ಬಲುಮಟ್ಟಿಗೆ ಕೆಳಗಿನ ಸ್ಥಾನಗಳಲ್ಲಿದ್ದುವು. 'ಮಲಯಾಳಿ ಭಾಷೆಯಲ್ಲಿ ಕಲಿಯುವುದೇನಿದೆ?' ಎನ್ನುವುದು ಇಂಗ್ಲಿಷಿನಲ್ಲಿ ವಿದ್ಯಾವಂತರಾದ ಗರ್ವಿಷ್ಠರು ಆಗಾಗ್ಗೆ ಪ್ರಶ್ನಿಸುತ್ತಿದ್ದುದು ಸಾಮಾನ್ಯವಾಗಿತ್ತು. ಸಂಸ್ಕೃತದಲ್ಲಿ ವಿಶೇಷ ಪರಿಣತನಾದ ಎ.ಆರ್.ಗೆ ಮಲಯಾಳ ಭಾಷೆಯ ಉತ್ತಮ ಭವಿಷ್ಯವನ್ನು ಕಂಡುಕೊಳ್ಳಬಲ್ಲ ದೂರದೃಷ್ಟಿಯಿದ್ದಿತು. ಈ ವಿಚಾರದಲ್ಲಿ ಸೋದರಮಾವ ಕೇರಳವರ್ಮನು ಸಹಾಯಕನಾಗಿದ್ದನು. ಬದುಕಿನಲ್ಲಿ ಮನರಂಜನೆಯನ್ನು ಒದಗಿಸುವುದಕ್ಕಿಂತ ಹೆಚ್ಚು ಮುಖ್ಯವಾದ ಹೆಚ್ಚಿನ ಪಾತ್ರಗಳನ್ನು ವಹಿಸಬೇಕಾಗಿದೆ ಎಂಬುದನ್ನು ಅರಿತುಕೊಳ್ಳಲು ರಾಜರಾಜವರ್ಮನ ವೃತ್ತಿಜೀವನದ ಮುಂದಿನ ಘಟ್ಟದಲ್ಲಿ ಒಂದು ದೊಡ್ಡ ಅವಕಾಶ ದೊರಕಿತು.

ದೇಶಭಾಷಾವ್ಯಾಸಂಗದ ಮೇಲ್ವಿಚಾರಣಾಧಿಕಾರಿ

೧೮೯೬–೧೮೯೮ರ ಅವಧಿಯಲ್ಲಿ, ಪ್ರಿನ್ಸಿಪಾಲರ ಕರ್ತವ್ಯಗಳನ್ನು ಆಯುರ್ವೇದ ಸಂಸ್ಥೆಯ ಮುಖ್ಯಸ್ಥರ ಕರ್ತವ್ಯಗಳೊಂದಿಗೆ ಸಮನ್ವಯ ಮಾಡಬಹುದೆಂಬ ಸಲಹೆಯನ್ನು ಸರ್ಕಾರ ತಿರಸ್ಕರಿಸಿತು. ಮುಂದೆ, ಕೆಲಕಾಲಾ

---

* ತಿರುವನಂತಪುರದ ಸರಸ್ವತೀಮಹಲಿನ ಹಸ್ತಪ್ರತಿ ಭಂಡಾರದಲ್ಲಿ ಅಡಗಿದ್ದ ಭಾಸನ ನಾಟಕಗಳನ್ನು ಗುರುತಿಸಿ, ಆ ಬಗ್ಗೆ ಜಗತ್ತಿಗೆ ಪ್ರಚುರಪಡಿಸಿದವರು ಈ ವಿದ್ವಾಂಸರು –ಅನುವಾದಕ.

ನಂತರ ಪ್ರಾಚ್ಯವಸ್ತು ವಿಜ್ಞಾನ ಇಲಾಖೆಯ ನಿರ್ದೇಶಕರ ಸ್ಥಾನ ತೆರವಾದಾಗ ಆ ಇಲಾಖೆಯೊಂದಿಗೆ ಸಂಸ್ಕೃತ ಕಾಲೇಜನ್ನೂ ಜೊತೆಗೂಡಿಸಬಹುದೆಂಬ ಸಲಹೆಗೂ ಅದೇ ಗತಿಯಾಯಿತು. ಆ ವೇಳೆಗೆ ರಾಜರಾಜವರ್ಮನ ವಿದ್ವತ್ತೂ ಸಾಮರ್ಥ್ಯವೂ ದಕ್ಷಿಣ ಭಾರತದಲ್ಲೆಲ್ಲ ಕಡೆಯೂ ತುಂಬ ಮಾನ್ಯತೆ ಪಡೆದಿದ್ದುವು. ಆದರೆ ಮುಖ್ಯ ಸಂಗತಿ ಏನೆಂದರೆ, ಯಾವ ವಿಷಯವೇ ಆಗಲಿ, ಅದು ಅಧಿಕಾರದಲ್ಲಿದ್ದ ದಿವಾನರ ಕೃಪೆಗೆ ಪಾತ್ರವಾಗಬೇಕಾಗಿದ್ದಿತು. ಕೃಷ್ಣಸ್ವಾಮಿರಾಯರು ತಿರುವಾಂಕೂರು ಸಂಸ್ಥಾನದ ದಿವಾನರಾದಾಗ ರಾಜರಾಜವರ್ಮನ ಹಕ್ಕಿಗೆ ಪುರಸ್ಕಾರ ದೊರೆಯಿತು. ರಾಜರಾಜವರ್ಮನನ್ನು ಮಹಾರಾಜರವರ ಕಾಲೇಜಿನಲ್ಲಿ ದೇಶಭಾಷಾವ್ಯಾಸಂಗದ ಮೇಲ್ವಿಚಾರಣಾಧಿಕಾರಿ ಎಂದು ನೇಮಕ ಮಾಡಲಾಯಿತು. ೧೮೯೯ರಲ್ಲಿ ರಾಜರಾಜವರ್ಮನು ಸಂಸ್ಕೃತ ಕಾಲೇಜಿನ ವಹಿವಾಟನ್ನು ಗಣಪತಿ ಶಾಸ್ತ್ರಿಗಳಿಗೆ ವಹಿಸಿಕೊಟ್ಟು, ಹೊಸಹುದ್ದೆಯನ್ನು ಒಪ್ಪಿಕೊಂಡನು.

ಈ ಹೊಸ ಹುದ್ದೆಯಲ್ಲಿ ನಮ್ಮ ಮಹಾವಿದ್ವಾಂಸನಿಗೆ ಹೊಸ ಕಾರ್ಯ ಸಾಧ್ಯತೆಗಳು ಗೋಚರವಾದುವು. ಉನ್ನತ ಮಟ್ಟದ ವಿದ್ಯಾಭ್ಯಾಸ ವ್ಯವಸ್ಥೆಯಲ್ಲಿ ಭಾರತೀಯ ಭಾಷೆಗಳ ಸ್ಥಾನಮಾನವು ಸಮರ್ಪಕವಾಗಿರಲಿಲ್ಲೆಂಬುದನ್ನು ಅವನು ಮನಗಂಡನು. ವಿಷಯ ಸೂಚಿಕೆ ಒಂದು ಸರಿಯಾದ ಯೋಜನೆಗೆ ಒಳಪಟ್ಟಿರಲಿಲ್ಲ; ಪಠ್ಯ ಪುಸ್ತಕಗಳು ಅಸಮರ್ಪಕವಾಗಿದ್ದುವು; ಭಾಷಾಬೋಧನೆಯ ತರಗತಿಗಳಿಗೆ ಬಂದಾಗ ವಿದ್ಯಾರ್ಥಿಗಳು ಪಾಠದಲ್ಲಿ ಶ್ರದ್ಧೆ ವಹಿಸುತ್ತಿರಲಿಲ್ಲ. ಈ ಭಾಗದಲ್ಲಿಯೇ ರಾಜರಾಜವರ್ಮನ ಸಾಧನೆ ನಿಜವಾಗಿ ಮಹತ್ವಪೂರ್ಣದ್ದಾಗಿ, ನೆನೆಯತಕ್ಕದ್ದಾಗಿ ಪರಿಣಮಿಸಿದ್ದು. ಲಭ್ಯವಿದ್ದ ಗ್ರಂಥರಾಶಿಯಿಂದ ಇದ್ದುದರಲ್ಲಿ ಮೇಲಾದ ಪುಸ್ತಕಗಳನ್ನು ಪಾಠ ಪ್ರವಚನಕ್ಕೆ ಗೊತ್ತು ಮಾಡಲಾಯಿತು; ಹೊಸ ಪುಸ್ತಕಗಳನ್ನು ಬರೆಯಿಸಲಾಯಿತು; ಪಠ್ಯ ವಿಷಯ ಸೂಚಿಕೆಯನ್ನು ಸುಧಾರಿಸಲಾಯಿತು. ಎಫ್.ಎ. (ಕಲಾ ವಿಷಯಗಳಲ್ಲಿ ಮೊದಲ ಪರೀಕ್ಷೆ) ಮತ್ತು ಬಿ.ಎ. ಪರೀಕ್ಷೆಗಳ ತರಗತಿಗಳಲ್ಲಿ ತಾನೇ ಪಾಠ ಹೇಳತೊಡಗಿದನು. ಅಗತ್ಯಕ್ಕೆ ತಕ್ಕಂತೆ ವ್ಯಾಕರಣ, ಛಂದಸ್ಸು ಮತ್ತು ಕಾವ್ಯಮೀಮಾಂಸೆಗಳಿಗೆ ಸಂಬಂಧಪಟ್ಟ ಗ್ರಂಥಗಳನ್ನು ತಾನೇ ರಚಿಸಿದನು. ವಿದ್ಯಾರ್ಥಿಗಳಿಗೆ ಹೇಗೆ ಪಾಠ ಹೇಳಬೇಕೆಂಬ ವಿಷಯದಲ್ಲಿ ತನ್ನ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡಿದನು; ಅವರ ಪೈಕಿ ಸಾಹಿತ್ಯ ಪಂಚಾನನ ಪಿ.ಕೆ. ನಾರಾಯಣಪಿಳ್ಳೆಯಂಥ ಕೆಲವರು ಆತನ ಪ್ರಿಯ ವಿದ್ಯಾರ್ಥಿಗಳೇ ಆಗಿದ್ದರು. ರಾಜರಾಜವರ್ಮನು ಬರೆದ ಪ್ರಮುಖ ಗ್ರಂಥಗಳ ವಿಚಾರವಾಗಿ ಮುಂದೆ ವಿವೇಚಿಸಲಾಗುವುದು.

ಭಾರತೀಯ ಭಾಷೆಗಳ ಹೋರಾಟಗಾರ

ಅಂದಿನ ಕಾಲದಲ್ಲಿ ದ್ವಿತೀಯಭಾಷೆ ಎನ್ನಿಸಿಕೊಂಡಿದ್ದ ಮಾತೃಭಾಷೆಯ ವ್ಯಾಸಂಗವನ್ನು ಸಾಮಾನ್ಯವಾಗಿ ಹಿಂಬದಿಗೆ ಹಾಕಲಾಗಿತ್ತು. ಇಂಗ್ಲಿಷಿಗೆ ಪ್ರಥಮ ಭಾಷೆಯ ಸ್ಥಾನ; ಅದೇ ಅತ್ಯಂತ ಮುಖ್ಯವಾಗಿದ್ದ ವ್ಯಾಸಂಗ ವಿಷಯ. ಈ ಭಾಷೆಯ ಅಧ್ಯಯನಕ್ಕೆ ವಿಶೇಷ ಗಮನ ಕೊಡುತ್ತಿದ್ದರು ವಿದ್ಯಾರ್ಥಿಗಳು. ತಮ್ಮ ಸ್ವಂತ ಭಾಷೆಯ ವಿಚಾರದಲ್ಲಿ ವಿದ್ಯಾರ್ಥಿಗಳ ಪ್ರತಿಕ್ರಿಯೆ ಸಾಮಾನ್ಯವಾಗಿ ಔದಾಸೀನ್ಯದಿಂದ ಕೂಡಿರುತ್ತಿತ್ತು. ಯಾರೇ ಆಗಲಿ ವಿದ್ಯಾರ್ಥಿಗಳ ಮೇಲೆಯೇ ಪೂರ್ತಿಯಾಗಿ ತಪ್ಪನ್ನು ಹೊರಿಸಲಾಗದು. ಈ ಪರಿಸ್ಥಿತಿ ವಿವಿಧ ವಿದ್ಯಮಾನಗಳ ಒಟ್ಟಿನ ಪರಿಣಾಮವಾಗಿತ್ತು; ಅವುಗಳಲ್ಲಿ ಕೆಲವನ್ನು ಈಗಾಗಲೇ ಸೂಚಿಸಿದ್ದಾಗಿದೆ. ವಿಶ್ವವಿದ್ಯಾನಿಲಯದ ವ್ಯಾಪ್ತಿಯಿಂದ ದ್ವಿತೀಯ ಭಾಷೆಯ ವ್ಯಾಸಂಗವನ್ನು ಹೊರಗಿಡುವ ಒಂದು ಚಳವಳಿ ಕೂಡ ನಡೆದು, ಅದು ಸ್ವಲ್ಪ ಕಾಲ ಯಶಸ್ವಿಯೂ ಆಗಿತ್ತು. ಆದರೆ ಪರಿಸ್ಥಿತಿ ಬೇಗನೆ ಬದಲಾಯಿಸಿತು. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಮಲಯಾಳ ಭಾಷೆ ಅಧ್ಯಯನಕ್ಕೆ ಅರ್ಹವಾದದ್ದು ಎಂದು ಎಣಿಕೆಗೊಂಡದ್ದು ರಾಜರಾಜವರ್ಮನ ಕಾಲದಲ್ಲಿಯೆ. ಈ ಮಹಾವಿದ್ವಾಂಸನ ಅಪಾರ ವಿದ್ವತ್ತು, ಮೆಚ್ಚಬೇಕಾದಂತಹ ದೂರದೃಷ್ಟಿ, ಬಿಡುವಿಲ್ಲದ ದುಡಿಮೆ, ಇವು ಈ ವಿಚಾರದಲ್ಲಿ ಒಂದು ಹೊಸ ದಾರಿಗೆ ತಿರುಗಲು ಕಾರಣಭೂತವಾದುವು. ಭಾರತೀಯ ಭಾಷೆಗಳ ಮಾನ್ಯತೆಗಾಗಿ ಆತ ವೃತ್ತಪತ್ರಿಕೆಗಳಲ್ಲಿಯೂ ಭಾಷಣಗಳ ಮೂಲಕವೂ ಹಾಗೂ ಬೋಧನ ವಿಷಯ ನಿಯಾಮಕ ಸಮಿತಿಗಳಲ್ಲಿಯೂ ಹೋರಾಡಿದನು. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಭಾಷೆಗಳ ಬೇರೆಯದಾದ ಪರಿಸರದಲ್ಲಿರುವುದರಿಂದ ಆಗಿನ ದಿನಗಳಲ್ಲಿ ಇದ್ದ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಸ್ವಲ್ಪ ಊಹಾಶಕ್ತಿ ಅಗತ್ಯ. ರಾಜರಾಜವರ್ಮನು ಒಬ್ಬ ದೊಡ್ಡ ಯೋಜನಾಕಾರ ಹಾಗೂ ಕನಸುಗಾರ ಎಂದು ಮಾತ್ರವಲ್ಲದೆ, ಒಬ್ಬ ಶಿಕ್ಷಕನಾಗಿ ಕೂಡ ಅಸಾಧಾರಣನಾಗಿದ್ದನು. ಪಿ. ಅನಂತನ್ ಪಿಳ್ಳೆ ಹಾಗೂ ಪಿ.ಕೆ. ನಾರಾಯಣ ಪಿಳ್ಳೆ ಇವರಂತಹ ಆತನ ಅನೇಕ ವಿದ್ಯಾರ್ಥಿಗಳು ಆತನಲ್ಲಿ ಸಹಜವಾಗಿದ್ದ ಬೋಧನಾಶಕ್ತಿಯ ವಿಚಾರವಾಗಿ ತಮ್ಮ ಅಪಾರ ಮೆಚ್ಚುಗೆಯನ್ನು ಬರೆದಿಟ್ಟಿದ್ದಾರೆ. ಬುದ್ಧಿವಂತರಾದ ವಿದ್ಯಾರ್ಥಿಗಳು ಆತನ ತರಗತಿಯಲ್ಲಿ ಮಂತ್ರಮುಗ್ಧರಾಗಿ ಕುಳಿತುಬಿಡುತ್ತಿದ್ದರು. ಅಷ್ಟು ಬುದ್ಧಿವಂತರಲ್ಲದ ವಿದ್ಯಾರ್ಥಿಗಳು ಕೂಡ ಆತನ ಪಾಠಪ್ರವಚನಗಳು ಸಾಕಷ್ಟು ಸ್ವಾರಸ್ಯವಾಗಿರುತ್ತಿದ್ದುವು ಎಂಬುದನ್ನು ಬಲ್ಲವರಾಗಿದ್ದರು. ಆಗಿನ ಕಾಲದಲ್ಲಿ ಕೂಡ ಭಾಷಾ ವಿಷಯದ ತರಗತಿಗಳಲ್ಲಿ ವಿದ್ಯಾರ್ಥಿಗಳು ನಿದ್ರೆ ಮಾಡುವುದಾಗಲಿ

ಗೊತ್ತು ಗುರಿ ಇಲ್ಲದೆ ಕಾಲಹರಣ ಮಾಡುವುದಾಗಲಿ ಅಪರೂಪವೇನಾಗಿರಲಿಲ್ಲ. ತಂಪುರಾನ್‌ನ ತರಗತಿಯಲ್ಲಿಯ ತನ್ನ ಅನುಭವವನ್ನು ಒಬ್ಬ ಗಣ್ಯನಾದ ಹಳೆಯ ವಿದ್ಯಾರ್ಥಿ ಹೇಗೆ ಬರೆದಿಟ್ಟಿದ್ದಾನೆ:

"ಬಿ.ಎ. ತರಗತಿಗೆ ಸೇರುವುದಕ್ಕೆಂದು ನಾನು ತಿರುವನಂತಪುರಕ್ಕೆ ಹೋದೆನು. ಯಥಾಪ್ರಕಾರ ಮಲಯಾಳಂ ತರಗತಿಯಲ್ಲಿ ನಾನು ನಿದ್ರೆ ಮಾಡಬಹುದು ಇಲ್ಲವೆ ಸ್ವಂತದ ಕಾಗದಗಳನ್ನು ಬರೆಯಬಹುದು ಎಂದುಕೊಂಡಿದ್ದೆ. ಆದರೆ ಆಗ ನಾನು ಕಂಡದ್ದೇನು, ವೇದಿಕೆಯ ಮೇಲೆ ಒಬ್ಬ ಮಹಾವ್ಯಕ್ತಿ; ನಾನು ಸಂತೋಷದಿಂದ ದಂಗುಬಡಿದುಹೋದೆ. ಆತನ ಮಾತು ಎಷ್ಟು ಅರ್ಥಪೂರ್ಣವಾಗಿದ್ದು, ಮೋಹಕವಾಗಿದ್ದುವು ಎಂದರೆ, ನಾನು ಆತನ ಮೋಡಿಗೆ ಒಳಗಾಗಿಬಿಟ್ಟೆ. ಆಮೇಲೆ ನನಗೆ ಗೊತ್ತಾಯಿತು, ಉಪಾಧ್ಯಾಯರು 'ಕೇರಳದ ಪಾಣಿನಿ' ಎಂದು ಪ್ರಸಿದ್ಧರಾಗಿದ್ದ ಪ್ರೊಫೆಸರ್ ತಂಪುರಾನ್ ಎಂದು. ಆತನ ತರಗತಿಯಲ್ಲಿ ನನಗೆ ಅನುಭವಕ್ಕೆ ಬಂದದ್ದು ಒಂದು ಅಪೂರ್ವವಾದ ರೋಮಾಂಚ."

ತಂಪುರಾನನ ಕರ್ತವ್ಯನಿಷ್ಠೆ ಪ್ರಸಿದ್ಧವಾದದ್ದು. ಬೋಧನೆ ಮಾಡುವುದು, ಬೋಧನಕಾರ್ಯದ ಮೇಲ್ವಿಚಾರಣೆ ನೋಡಿಕೊಳ್ಳುವುದು, ಇದಕ್ಕೆ ಆದ್ಯತೆಕೊಟ್ಟು ಕಟ್ಟುಬಿದ್ದಿದ್ದನು. ಮಲಯಾಳ ಸಮಾಜಂನಲ್ಲಿ ಇದ್ದ ರೀತಿಯಲ್ಲಿ ಪಠ್ಯೇತರ ಚಟುವಟಿಕೆಗಳನ್ನು ವ್ಯವಸ್ಥೆ ಮಾಡಲು ಆತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡುತ್ತಿದ್ದನು. ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಗಣ್ಯರಾದ ವಿದ್ವಾಂಸರು ಉಪನ್ಯಾಸಗಳನ್ನು ನೀಡಿ, ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಆಗಿನ ದಿನಗಳಲ್ಲಿ ವಿಚಾರಗೋಷ್ಠಿ (Seminar) ಮತ್ತು ಭಾಷಣಮಾಲಿಕೆ (Symposium) ಎಂಬ ಮಾತುಗಳು ಬಳಕೆಯಲ್ಲಿ ಇಲ್ಲದಿದ್ದರೂ, ಅವುಗಳ ಕಲ್ಪನೆ ಅಸ್ತಿತ್ವದಲ್ಲಿದ್ದಿತು. ತಂಪುರಾನ್ ಈ ಕೂಟಗಳಿಗೆ ತಪ್ಪದೆ ಹೋಗುತ್ತಿದ್ದನು; ಅವು ಮುಕ್ತಾಯ ವಾಗುವವರೆಗೂ ಕುಳಿತಿರುತ್ತಿದ್ದನು. ಆತನ ಈ ನಡೆವಳಿಕೆ ವಿದ್ಯಾರ್ಥಿಗಳಿಗೆ ಬಹಳ ಪ್ರೋತ್ಸಾಹಕರವಾಗಿತ್ತು; ಆ ವಿದ್ಯಾರ್ಥಿಗಳ ಪೈಕಿ ಉದಯೋನ್ಮುಖ ಗ್ರಂಥಕರ್ತರೂ ಇದ್ದರು.

ಒಳ್ಳೆಯ ಬೋಧನೆ ಒಳ್ಳೆಯ ಕಲಿಕೆಯೊಂದಿಗೆ ಜೊತೆ ಜೊತೆಯಾಗಿ ಸಾಗುವುದು ಕೇವಲ ಸಹಜ. ಎಂದೇ ಆಗಲಿ ಮಲಯಾಳವು ಪಡೆದು ಕೊಂಡಿದ್ದಂತಹ ಉತ್ತಮೋತ್ತಮ ಬೋಧಕರಲ್ಲಿ ರಾಜರಾಜವರ್ಮನು ಒಬ್ಬನಾಗಿದ್ದಂತೆಯೆ ಶತಮಾನಗಳ ಕಾಲದಲ್ಲಿ ಆ ಭಾಷೆ ಕೂಡಿದ್ದಂತಹ

ಉತ್ತಮೋತ್ತಮ ವಿದ್ಯಾರ್ಥಿಗಳಲ್ಲಿಯೂ ಒಬ್ಬನಾಗಿದ್ದನು. ಜೀವನಪರ್ಯಂತವೂ ವಿದ್ಯಾರ್ಜನೆ ಮಾಡಬೇಕು ಎನ್ನುವುದರಲ್ಲಿ ಆತನ ವಿಶ್ವಾಸ. ಮೊದಲಿಗೆ ಆತನು ಸಂಸ್ಕೃತಕ್ಕೆ ಒಲಿದು ಕಟ್ಟುಬಿದ್ದು ಮಲಯಾಳವನ್ನು ಕಡೆಗಂಡಿದ್ದರೂ, ಸಂದರ್ಭ ವಶದಿಂದ ತನ್ನ ಬದುಕಿನ ಕಡೆಯ ೨೫ ವರ್ಷಗಳಲ್ಲಿ ಮಲಯಾಳದಲ್ಲಿಯೆ ಹೆಚ್ಚಾಗಿ ಬರೆದನು. ಆದರೆ ಸಂಸ್ಕೃತ ಮತ್ತು ಇಂಗ್ಲಿಷುಗಳು ಆತನ ಜ್ಞಾನ–ಸ್ಫೂರ್ತಿಗಳ ಆಕರಗಳಾಗಿ ಮುಂದುವರಿದುವು. ಆತನು ಪ್ರತಿನಿತ್ಯವೂ ಓದುತ್ತಿದ್ದ ಗ್ರಂಥಗಳಲ್ಲಿ ಮಹಾಭಾರತ ಮತ್ತು ಭಗವದ್ಗೀತೆಗಳು ಸೇರಿದ್ದುವು. ಜ್ಯೋತಿಷ್ಯ ಶಾಸ್ತ್ರದಲ್ಲಿ ತನ್ನ ಸಂಶೋಧನೆಯನ್ನು ಆತ ಮುಂದುವರಿಸಿದನು. ಕಾವ್ಯಮೀಮಾಂಸೆ ಮತ್ತು ಸಾಹಿತ್ಯಶಾಸ್ತ್ರದ ಇತರ ಅಂಗಗಳನ್ನು ಕುರಿತು ಹೇಳುವುದಾದರೆ, ಸಂಸ್ಕೃತ ಮತ್ತು ಇಂಗ್ಲಿಷ್ ಗ್ರಂಥಗಳನ್ನು ಆತ ಪದೇಪದೇ ಉಪಯೋಗಿಸಿಕೊಳ್ಳುತ್ತಿದ್ದನು. ಆಧುನಿಕ ಮಲಯಾಳ ಸಾಹಿತ್ಯದ ಸಂಪತ್ತನ್ನು ಹೆಚ್ಚಿಸಲು ಬಯಸುವ ಯಾರಿಗೇ ಆದರೂ ಅಪಾರವಾದ ಇಂಗ್ಲಿಷ್ ಸಾಹಿತ್ಯರಾಶಿಯ ಪರಿಚಯದಿಂದ ಬಹಳ ಪ್ರಯೋಜನವಾಗುವುದು. ಷೇಕ್ಸ್‌ಪಿಯರನ ನಾಟಕಗಳು, ಫ್ರೂಡನ (Froude) ಪ್ರಬಂಧಗಳು, ಮಕಾಲೆಯ (Macaulay) ಇಂಗ್ಲೆಂಡಿನ ಚರಿತ್ರೆ, ಸ್ಕಾಟ್ (Scott) ಮತ್ತು ಥ್ಯಾಕರೆ (Thackeray) ಇವರ ಕಾದಂಬರಿಗಳು, ಷೋಪನ್‌ಹೌರನ (Wisdom of Life) 'ಜೀವನ ವಿವೇಕ' (Schopenhaur), ಈ ಕೃತಿಗಳ ಬಗೆಗೆ ಆತನ ದಿನಚರಿಗಳಲ್ಲಿ ಮೆಚ್ಚುಗೆಯ ಮಾತುಗಳು ಕಂಡುಬರುತ್ತವೆ.

ಇಷ್ಟೇ ಅಲ್ಲದೆ, ಅವಕಾಶ ದೊರೆತಾಗಲೆಲ್ಲ ಅವನು ಇತರ ವಿದ್ವಾಂಸರೊಡನೆ ಭಾಷೆ ಮತ್ತು ಸಾಹಿತ್ಯ ವಿಚಾರಗಳಿಗೆ ಸಂಬಂಧಪಟ್ಟ ಸ್ವಾರಸ್ಯವಾದ ಸಮಸ್ಯೆಗಳನ್ನು ಚರ್ಚಿಸುತ್ತಿದನು. 'ಕೇರಳ ಪಾಣಿನೀಯಂ' ಎಂಬ ಅಮೋಘವಾದ ಮಲಯಾಳಿ ವ್ಯಾಕರಣದ ರಚನೆಯಲ್ಲಿ ತೊಡಗಿದ್ದಾಗ ಆತನು ಮಹಾಕವಿ ಕುಞಿಕುಟ್ಟನ್ ತಂಪುರಾನ್‌ಗೆ ಧಾತುಪಾಟದ ಪಟ್ಟಿಯನ್ನು ತೋರಿಸಿ, ಅದರ ಬಗ್ಗೆ ಮಹಾಕವಿಯ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡನು. ಆತನ ಪದ್ಯರಚನೆಗಳನ್ನು ಸಾಧಾರಣವಾಗಿ ತುರವೂರ್ ನಾರಾಯಣಶಾಸ್ತ್ರಿಗಳು ಪರಿಶೀಲಿಸುತ್ತಿದ್ದರು. ಇದರಿಂದ ತೋರಿಬರುವುದೇನೆಂದರೆ, ತನ್ನ ಭಾಷೆಗಾಗಿ ಅತ್ಯುತ್ತಮವಾದುದನ್ನು ನಿರ್ಮಾಣ ಮಾಡಬೇಕೆಂಬ ಆತನ ಅಪೇಕ್ಷೆ ಹಾಗೂ ನಮ್ರತೆ. ಆತನ ಎಲ್ಲ ಬರವಣಿಗೆಯನ್ನೂ ಪರಿಶೀಲಿಸಿ ನೋಡಿದಾಗ ಆತ ಶುಷ್ಕ ವಿದ್ವಾಂಸನಾಗಿರಲಿಲ್ಲ ಎಂಬುದು ಗೊತ್ತಾಗುತ್ತದೆ. ನಾಟಕಗಳನ್ನು ರಚಿಸಿ ಅವುಗಳಲ್ಲಿ

ಅಭಿನಯಿಸುವುದೆಂದರೆ ಆತನಿಗೆ ಸಂತೋಷ. ಆತ ಅನೇಕ ಸಂಸ್ಕೃತ ನಾಟಕಗಳನ್ನು ಮಲಯಾಳಕ್ಕೆ ಭಾಷಾಂತರ ಮಾಡಿದನು. ಭಾಷಾಂತರ ಮಾಡುವುದರಲ್ಲಿ ಆತನ ಉದ್ದೇಶ, ಮೊದಲನೆಯದಾಗಿ ಶ್ರಮಸಾಧ್ಯವಾದ ಸಂಶೋಧನ ಕಾರ್ಯದ ನಡುವೆ ವಿಶ್ರಾಂತಿ ಪಡೆಯುವುದು, ಎರಡನೆಯದಾಗಿ ತನ್ನ ಸಹೋದ್ಯೋಗಿಗಳಿಗೂ ಆಪ್ತಮಿತ್ರರಿಗೂ ಮನೋಲ್ಲಾಸವನ್ನು ನೀಡುವುದು.

* * * *

ಅಧ್ಯಾಯ ನಾಲ್ಕು

ವೃತ್ತಿಜೀವನದ ಪರಾಕಾಷ್ಠೆ

೨೫ ವರ್ಷಗಳ ಕಾಲ ಸಾಗಿದ ರಾಜರಾಜವರ್ಮನ ಅಧ್ಯಾಪಕ ವೃತ್ತಿ ಉದ್ಯೋಗ ನಿಚ್ಚಣಿಗೆಯ ಅತ್ಯಂತ ಕೆಳಗಿನ ಮೆಟ್ಟಿಲಿನಿಂದ ತೊಡಗಿ ಸುಮಾರು ೨೦ ವರ್ಷಗಳಲ್ಲಿ ಅತ್ಯಂತ ಮೇಲಿನ ತುದಿಯನ್ನು ಮುಟ್ಟಿತು. ಬಲುಮಟ್ಟಿಗೆ ಯೂರೋಪಿಯನ್ನರಿಗೆ ಮಾತ್ರ ಮೀಸಲಾಗಿದ್ದ ಪ್ರಥಮದರ್ಜೆಯ ಕಾಲೇಜಿನಲ್ಲಿ ಆಗಿನ ದಿನಗಳಲ್ಲಿ ಪ್ರಾಧ್ಯಾಪಕನಾಗುವುದು, ಅದರಲ್ಲಿಯೂ ಉಪೇಕ್ಷೆಗೆ ಪಾತ್ರವಾಗಿದ್ದ ಭಾರತೀಯ ಭಾಷೆಗಳ ಅದ್ಯಯನ ಕ್ಷೇತ್ರದಲ್ಲಿ ಪ್ರಾಧ್ಯಾಪಕನಾಗುವುದು, ನಿಜವಾಗಿಯೂ ಒಂದು ಅಪೂರ್ವ ಸಾಧನೆಯಾಗಿತ್ತು. ಈ ಅಸಾಧಾರಣ ಗೌರವವು ಒಂದು ಸಹಜ ರೀತಿಯಲ್ಲಿ ರಾಜರಾಜವರ್ಮನಿಗೆ ಪ್ರಾಪ್ತವಾಯಿತು. ೧೯೧೦ರಲ್ಲಿ ಆತ ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳ ಪ್ರಥಮ ಪ್ರಾಧ್ಯಾಪಕನಾಗಿ ನೇಮಕಗೊಂಡನು. ಈ ಸಮಾಚಾರವನ್ನು ಕೇಳಿ ಕೇರಳವರ್ಮನಿಗೆ ಎಷ್ಟು ಸಂತೋಷವಾಯಿತೆಂದರೆ, ಅವನು ತನ್ನ ಸೋದರಳಿಯನಿಗೆ ಅಭಿನಂದನೆಯ ಸಂದೇಶವೊಂದನ್ನು ತಂತಿಯ ಮೂಲಕ ಕಳಿಸಿದನು; ಅದನ್ನು ಸ್ವೀಕರಿಸಿದ ರಾಜರಾಜವರ್ಮನು ಅದನ್ನು ಅಮೂಲ್ಯವೆಂದು ಭಾವಿಸಿದನು.

ಅವನು ಪ್ರಾಧ್ಯಾಪಕನಾಗಿದ್ದ ಐದು ವರ್ಷಗಳ ಕಾಲದಲ್ಲಿ (೧೯೧೦–೧೯೧೫) ಸಂದರ್ಭ ಸನ್ನಿವೇಶಗಳು ಅಷ್ಟೇನೂ ಸುಗಮವಾಗಿರಲಿಲ್ಲ. ಕಾಲೇಜು ಸಲಹಾ ಮಂಡಲಿ(College Council)ಯಲ್ಲಿ ಯೂರೋಪಿಯನ್ ಪ್ರಾಧ್ಯಾಪಕರುಗಳು ಅನೇಕ ವಿಷಯಗಳಲ್ಲಿ ತಂಪುರಾನದೊಂದಿಗೆ ಏಕದೃಷ್ಟಿ ಯುಳ್ಳವರಾಗಿರಲಿಲ್ಲ. ಪ್ರಾರಂಭದಲ್ಲಿ ಸಂಸ್ಕೃತಕ್ಕೆ ಒಂದು, ಮಲಯಾಳಕ್ಕೆ ಒಂದು, ಹೀಗೆ ಎರಡು 'ಅಯೂಟರ್' (ಸಹಾಧ್ಯಾಪಕ) ಹುದ್ದೆಗಳನ್ನು ನಿರ್ಮಿಸಬೇಕೆಂದು ಆತ ಅಪೇಕ್ಷೆ ಪಟ್ಟನು. ಈ ಏರ್ಪಾಡನ್ನು ವಿರೋಧಿಸಲಾಯಿತು; ಆದರೆ ಕಡೆಯಲ್ಲಿ ಆತನೆ ಗೆದ್ದನು. ಪ್ರಸಿದ್ಧ ವಿದ್ವಾಂಸರಾದ ನಂತ್ಯಾರ್ ವೀಟ್ಟಿಲ್ ಪರಮೇಶ್ವರನ್ ಪಿಳ್ಳೆ ಹಾಗೂ ಆಟ್ಟೂರ್ ಕೃಷ್ಣ ಪಿಷಾರೊಟಿ ಇವರುಗಳು ತಿರುವನಂತಪುರದ ಮಹಾರಾಜರ ಕಾಲೇಜಿನಲ್ಲಿ ನೇಮಕಗೊಂಡದ್ದು ಈ ರೀತಿಯಲ್ಲಿ. ವಿದ್ವಾಂಸರೂ

ಶ್ರದ್ಧಾನ್ವಿತ ಬೋಧಕರೂ ಆಗಿದ್ದ ಇಂಥವರು, ಮಲಯಾಳ ಭಾಷೆಯಲ್ಲಿ ಪರಿಣತಿಯನ್ನು ಪಡೆಯಬೇಕೆಂದಿದ್ದ ವಿದ್ಯಾರ್ಥಿಗಳನ್ನು ಆಕರ್ಷಿಸಿದರು. ಇದರಿಂದಾಗಿ ಮಲಯಾಳ ವಿಭಾಗದ ಸಾಮಾನ್ಯಮಟ್ಟವು ಉತ್ತಮಗೊಳಿಸಲು ದಾರಿಯಾಯಿತು.

ಯೂರೋಪಿಯನ್ ಪ್ರಾಧ್ಯಾಪಕರುಗಳಿಗೂ ಭಾರತೀಯ ಪ್ರಾಧ್ಯಾಪಕರುಗಳಿಗೂ ಕೊಡುತ್ತಿದ್ದ ವೇತನ ಶ್ರೇಣಿಯಲ್ಲಿ ಅವರಿಬ್ಬರ ನಡುವೆ ಭೇದ ಕಲ್ಪಿಸಲಾಗಿತ್ತು. ಯೂರೋಪಿಯನ್ ಪ್ರಾಧ್ಯಾಪಕರಿಗೆ ತಿಂಗಳಿಗೆ ೭೫೦ ರೂ. ಸಲ್ಲುತ್ತಿದ್ದ ಕಡೆ ಭಾರತೀಯ ಪ್ರಾಧ್ಯಾಪಕರಿಗೆ ೪೫೦ ರೂ. ಮಾತ್ರ ಸಲ್ಲುತ್ತಿತ್ತು. ಈ ವ್ಯತ್ಯಾಸವನ್ನು ತೊಡೆದುಹಾಕಲು ೩ ವರ್ಷಗಳ ಕಾಲ ಮನವಿಗಳನ್ನು ಮಾಡಿಕೊಳ್ಳಬೇಕಾಯಿತು, ವಾದ ಮಾಡಬೇಕಾಯಿತು. ಆ ಕಾಲದಲ್ಲಿ ಯೂರೋಪಿಯನ್ನರನ್ನು ಮಾತ್ರ ಪ್ರಿನ್ಸಿಪಾಲರುಗಳಾಗಿ ನೇಮಕ ಮಾಡಲಾಗುತ್ತಿತ್ತು. ೧೯೧೩ರಲ್ಲಿ ಎಂಟು ದಿನಗಳ ಅವಧಿಗಾಗಿ ರಾಜರಾಜವರ್ಮನನ್ನು ಪ್ರಿನ್ಸಿಪಾಲರ ಸ್ಥಾನದಲ್ಲಿ ಕೆಲಸ ಮಾಡಲು ಅವನನ್ನು ನೇಮಿಸಿದಾಗ ಅದೊಂದು ಮಹತ್ವ ಸೂಚನೆಯ ಘಟನೆ ಎಂದು ಎಣಿಸಲಾಯಿತು. ೧೯೧೬ರಲ್ಲಿ ೭ ತಿಂಗಳುಗಳ ಕಾಲ ಮತ್ತು ೧೯೧೮ರಲ್ಲಿ ೩ ತಿಂಗಳ ಕಾಲ, ಹೀಗೆ ಆ್ಯಕ್ಟಿಂಗ್ ಪ್ರಿನ್ಸಿಪಾಲ್ ಆಗಿ ಕಾರ್ಯ ನಿರ್ವಹಿಸಲು ರಾಜರಾಜವರ್ಮನಿಗೆ ಇನ್ನು ಎರಡು ಅವಕಾಶಗಳು ದೊರೆತವು.

ಸುಧಾರಣೆಯಲ್ಲಿ ಉತ್ಸುಕತೆ

ಮದರಾಸು ವಿಶ್ವವಿದ್ಯಾನಿಲಯವು ಭಾರತೀಯ ಭಾಷೆಗಳ ವಿಚಾರದಲ್ಲಿ ವರ್ತಿಸುತ್ತಿದ್ದ ರೀತಿಯ ಬಗೆಗೆ ರಾಜರಾಜವರ್ಮನಿಗೆ ಸ್ವಲ್ಪವೂ ಸಮಾಧಾನವಿರಲಿಲ್ಲ. ಈ ಪ್ರವೃತ್ತಿಯನ್ನು ಸ್ಪಷ್ಟವಾದ ಮಾತುಗಳಲ್ಲಿ ಖಂಡಿಸಲು ದೊರೆತ ಯಾವ ಅವಕಾಶವನ್ನು ಅವನು ಕಳೆದುಕೊಳ್ಳಲಿಲ್ಲ. ೧೯೧೪ರಲ್ಲಿ ಕಾಲೇಜು ದಿನಾಚರಣೆಯ ಸಮಾರಂಭದ ಅಧ್ಯಕ್ಷತೆಯನ್ನು ರಾಜರಾಜವರ್ಮನು ವಹಿಸಿದನು. ಆತನು ಬಹಳ ಎಚ್ಚರಿಕೆಯಿಂದ ಸಿದ್ಧಪಡಿಸಿದ್ದ ಅಧ್ಯಕ್ಷ ಭಾಷಣವನ್ನು ಅಚ್ಚು ಮಾಡಿಸಿ, ಅದರ ಪ್ರತಿಗಳನ್ನು ವಿಶ್ವವಿದ್ಯಾನಿಲಯದ ಸೆನೆಟ್ ಸಭೆ ಸಿಂಡಿಕೇಟ್ ಮತ್ತು ಇತರ ವಿದ್ಯಾವಿಷಯ ಮಂಡಲಿಗಳ ಎಲ್ಲ ಸದಸ್ಯರಿಗೂ ಹಂಚಲಾಯಿತು. ಮದರಾಸು ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ಭಾಷೆಯೊಂದನ್ನು ಕಡ್ಡಾಯವಾಗಿ ವ್ಯಾಸಂಗ ಮಾಡುವ ಅವಕಾಶವನ್ನು ತೆಗೆದು ಹಾಕಬೇಕೆಂಬ ಪ್ರಯತ್ನದ ವಿಚಾರಕ್ಕೆ ಸಂಬಂಧಿಸಿದ ಭಾಷಣದ ಕೆಲವು ಪ್ರಸಕ್ತ ವಾಕ್ಯಗಳನ್ನು ಈ ಕೆಳಗೆ ಎತ್ತಿಕೊಟ್ಟಿದೆ:

"....ದಕ್ಷಿಣ ಭಾರತದ ಕೆಲವು ದೇಶ ಭಾಷೆಗಳಲ್ಲಿ ಪರೀಕ್ಷೆಗಳ ಉನ್ನತಮಟ್ಟಕ್ಕೆ ಯೋಗ್ಯವೆನಿಸುವ ಪಾಠ ಪುಸ್ತಕಗಳು ಕಡೆಯಪಕ್ಷ ಗದ್ಯದಲ್ಲಿಯಾದರೂ ಆಗ ಇರಲಿಲ್ಲ; ಹಾಗೂ ಅಂತ ಪುಸ್ತಕಗಳು ಲಭ್ಯವಿದ್ದ ಸಂದರ್ಭಗಳಲ್ಲಿ ಕೂಡ ಇಂಗ್ಲಿಷ್ ಸಾಹಿತ್ಯದಲ್ಲಿರುವಂಥ ಉತ್ತಮೋತ್ತಮ ಕೃತಿಗಳಿಗೆ ಸರಿದೊರೆಯಾಗುವ ಮಟ್ಟಿನ ಗುಣವನ್ನು ಉಳ್ಳವಾಗಿರಲಿಲ್ಲ ಅವು. ಇಷ್ಟರ ಜೊತೆಗೆ, ಬೇರೆಬೇರೆ ಪರೀಕ್ಷೆಗಳಿಗೆ ಇದ್ದುದರಲ್ಲಿ ಉತ್ತಮವಾದ ಪುಸ್ತಕಗಳನ್ನು ಪಠ್ಯವಾಗಿ ನಿಯಾಮಕ ಮಾಡಿ ಏನೂ ಇಲ್ಲದುದಕ್ಕಿಂತ ಮೇಲು ಎನ್ನುವ ಮಟ್ಟಿಗೆ ಪಾಠ ನಿಯಾಮಕ ಮಂಡಲಿಗಳ ಎಚ್ಚರಿಕೆ ವಹಿಸಿ ಕೆಲಸ ಮಾಡುತ್ತಿರಲಿಲ್ಲ; ಇದರಿಂದಾಗಿ ಮೊದಲೇ ಹದಗೆಟ್ಟ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿತ್ತು. ಅಲ್ಲದೆ, ಗೊತ್ತು ಮಾಡಿದ ಪುಸ್ತಕಗಳನ್ನು ಬೋಧಿಸುವ ಹೊಣೆ ಹೊತ್ತ ಪಂಡಿತರುಗಳು ಆಧುನಿಕ ವಿಮರ್ಶಪದ್ಧತಿಯಲ್ಲಿ ಅವುಗಳನ್ನು ಪಾಠ ಮಾಡಲು ಅಸಮರ್ಥರಾಗಿದ್ದರು; ಈ ಪರಿಸ್ಥಿತಿಯಿಂದಾಗಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆ ವಿಷಯವನ್ನು ಕಂಡರೇ ಆಗದಷ್ಟು ಸ್ವಾಭಾವಿಕವಾಗಿಯೇ ಜುಗುಪ್ಸೆ ಹುಟ್ಟುವಂತಾಯಿತು. ಇನ್ನು ವಿಶ್ವವಿದ್ಯಾನಿಲಯದ ಪರೀಕ್ಷಕರ ಸರತಿ; ಅವರುಗಳು ಪದೇಪದೇ ಕಿರಿಕಿರಿ ಹುಟ್ಟಿಸುವ ಅವಿವೇಕದ ಪ್ರಶ್ನೆ ಪತ್ರಿಕೆಗಳನ್ನು ರಚಿಸಿ, ಭಾಷಾ ವಿಷಯದ ಬಗ್ಗೆ ಇದ್ದ ತಿರಸ್ಕಾರ ಭಾವನೆಯನ್ನು ಹೆಚ್ಚು ಮಾಡುತ್ತಿದ್ದರು."

ಆಗಿನ ಕಾಲದಲ್ಲಿ ಇದ್ದಂತಹ ಪರಿಸ್ಥಿತಿಯ ಸರಿಯಾದ ಹಾಗೂ ನ್ಯಾಯವಾದ ವಿಶ್ಲೇಷಣೆ ಇದು; ಇದರಿಂದ ವಿಫಲತೆಯನ್ನು ಒಪ್ಪಿಕೊಂಡಂತೆಯೆ ಆಗಿದೆ. ಇಡಿಯ ಪ್ರಶ್ನೆಯನ್ನು ಪುನರಾಲೋಚನೆ ಮಾಡುತ್ತಿದ್ದವರು ಗಲಭೆ ಮಾಡತೊಡಗಿದರು. ಈ ವಿಚಾರವಾಗಿ ರಾಜರಾಜವರ್ಮ ಹೀಗೆ ಮುಂದುವರಿಸಿದನು:

"ದ್ವಿತೀಯ ಭಾಷೆ ವ್ಯಾಸಂಗವನ್ನು ಸುಧಾರಿಸಬೇಕು, ನಿಲ್ಲಿಸಕೂಡದು ಎಂದು ಅವರು ಒತ್ತಾಯ ಮಾಡಿದರು. ವಿಫಲತೆ ಉಂಟಾಗಿದ್ದರೆ ಅದರಲ್ಲಿ ಭಾಷೆಗಳ ತಪ್ಪೇನೂ ಇಲ್ಲ; ಅದಕ್ಕೆ ಕಾರಣ ಇಷ್ಟೆ, ಸರಿಯಾದ ರೀತಿಯಲ್ಲಿ ಅವುಗಳ ಯೋಗ್ಯತೆಯನ್ನು ಪರೀಕ್ಷಿಸಿ ನೋಡುವ ಅವಕಾಶವನ್ನೇ ಅವಕ್ಕೆ ಕೊಡಲಿಲ್ಲ. ಅನೇಕ ಕಾಲೇಜುಗಳಲ್ಲಿ ದ್ವಿತೀಯ ಭಾಷೆಗಳನ್ನು ಸಮರ್ಥವಾಗಿ ಬೋಧಿಸುವುದಕ್ಕೆ ಅವಕಾಶವನ್ನೇ ಕಲ್ಪಿಸಿರಲಿಲ್ಲ. ಹೆಸರಿಗೆ ಅಷ್ಟೋ ಇಷ್ಟೋ ಸಂಬಳ ತೆಗೆದುಕೊಂಡು ಕೆಲಸ ಮಾಡಲೊಪ್ಪಿಕೊಂಡು ಬಂದಿದ್ದ, ಒಂದು ಹೊತ್ತಿನ ಊಟಕ್ಕಿಲ್ಲದ ಹಳೆಯ ಮಾದರಿಯ ಪಂಡಿತರಿಗೆ ಆ ವಿಷಯವನ್ನು ಸಾಧಾರಣವಾಗಿ ಒಪ್ಪಿಸಲಾಗುತ್ತಿತ್ತು.

ಇದರ ಪರಿಣಾಮವಾಗಿ, ವಿದ್ಯಾರ್ಥಿಗಳ ದೃಷ್ಟಿಯಲ್ಲಿ ದ್ವಿತೀಯ ಭಾಷಾವಿಷಯವು ಅನೇಕ ವಿಧಗಳಲ್ಲಿ ತನ್ನ ಘನತೆಗೌರವಗಳನ್ನು ಕಳೆದುಕೊಂಡಿತು... ವಿಪತ್ತು ಸಂಭವಿಸಿದ್ದು ಹೀಗೆ. ಹೀಗಿರುವುದರಿಂದ ನಿಜವಾದ ಪರಿಹಾರೋಪಾಯ ಇರುವುದು ಕುಂದುಕೊರತೆಗಳನ್ನು ಹೋಗಲಾಡಿಸುವುದರಲ್ಲಿ ಇದೆಯೇ ಹೊರತು ವಿಷಯವನ್ನೇ ಪೂರ್ತಿಯಾಗಿ ತೆಗೆದುಹಾಕಿ ಬಿಡುವುದರಲ್ಲಿ ಅಲ್ಲ."

ಅನಂತರ, ತನ್ನ ಸ್ವಂತ ತಾಯ್ನುಡಿಯ ವಿಷಯದಲ್ಲಿ ಆಗಿರುವ ಪ್ರಗತಿಯ ಸಮೀಕ್ಷೆಯನ್ನು ಮುಂದಿಡುವುದಕ್ಕಾಗಿ ಹೀಗೆ ಮುಮದುವರಿಸುತ್ತಾನೆ:

"ಇತರ ದೇಶಭಾಷೆಗಳಲ್ಲಿ ಹೇಗೊ ಹಾಗೆ ಮಲಯಾಳದಲ್ಲಿಯೂ ಅತ್ಯಂತ ಈಚೆಗೆ, ತಕ್ಕಮಟ್ಟಿನ ಪ್ರಮಾಣದಲ್ಲಿ ಹುಟ್ಟಿರುವ ಗದ್ಯ ಸಾಹಿತ್ಯವನ್ನು ಗಮನವಿಟ್ಟು ನೋಡಿ; ಅದೆಲ್ಲವೂ ನಿಸ್ಸಂದೇಹವಾಗಿ ಪ್ರತ್ಯಕ್ಷವಾಗಿಯೊ ಇಲ್ಲವೆ ಪರೋಕ್ಷವಾಗಿಯೊ ವಿಶ್ವವಿದ್ಯಾನಿಲಯದ ಮೂಲಕ ಆಗಿರುವ ಕೆಲಸ. ಸಾಹಿತ್ಯ ವಿಮರ್ಶೆ, ಜನಪ್ರಿಯ ವಿಜ್ಞಾನ, ಮತ್ತು ಅಂಥ ಇತರ ಆಧುನಿಕ ದೃಷ್ಟಿಯ ಇತರ ವಿಷಯಗಳ ಬಗೆಗೆ ದೇಶ ಭಾಷೆಗಳಲ್ಲಿ ಹುಟ್ಟಿರುವ ಕೃತಿಗಳನ್ನೂ ಗಮನಿಸಿ; ಇಂಗ್ಲಿಷಿನಲ್ಲಿಯೂ ತಮ್ಮ ಸ್ವಂತ ದೇಶಭಾಷೆಗಳಲ್ಲಿಯೂ ಸ್ವಲ್ಪಮಟ್ಟಿಗೆ ಹೊಂದಿಕೆಯಾದ ತರಬೇತಿ ಮತ್ತು ಶಿಕ್ಷಣವನ್ನು ಪಡೆದಿರುವ ಪದವೀಧರರು ರಚಿಸದೆ ಹೋಗದಿದ್ದರೆ ಅವುಗಳ ಸೊಲ್ಲೂ ನಮಗೆ ಕೇಳಿಬರುತ್ತಿರಲಿಲ್ಲ... ಈ 'ಅಂಕಿತ'ಗಳ ('Titles') (Oriental Tital Examinations) ವ್ಯವಸ್ಥೆ ಏರ್ಪಟ್ಟಿರುವುದು ಪಂಡಿತವರ್ಗವನ್ನು ಈಗಿನ ಕಾಲಕ್ಕೆ ತಕ್ಕಂತೆ ತಿದ್ದಿ, ಅವರ ಅಂಥ ಸಂಪ್ರದಾಯನಿಷ್ಠೆಯನ್ನು ಮುರಿದು, ಅವರಿಂದ ಯಾವ ಕೇಡೂ ಉಂಟಾಗದಂತೆ ಅವರನ್ನು ಶಕ್ತಿಗುಂದಿಸುವುದೇ ಅದರ ಉದ್ದೇಶ ಎಂಬುದು ವ್ಯಕ್ತಪಡುತ್ತದೆ."

"ವಿಶ್ವವಿದ್ಯಾನಿಲಯದ ಹೊಸ ಪಾಠ ಪಟ್ಟಿಕೆಯಲ್ಲಿ ಇಂಗ್ಲಿಷಿನಿಂದ ದೇಶ ಭಾಷೆಗೂ ದೇಶಭಾಷೆಯಿಂದ ಇಂಗ್ಲಿಷಿಗೂ 'ಭಾಷಾಂತರ' ಎಂಬ ವಿಷಯವನ್ನು ಎಲ್ಲ ವಿಭಾಗಗಳಲ್ಲಿಯೂ ಏಕೆ ಕಡ್ಡಾಯದ ವಿಷಯವಾಗಿ ಮಾಡಿಲ್ಲವೆಂಬುದು ನನಗೆ ಆಶ್ಚರ್ಯವನ್ನುಂಟುಮಾಡಿದೆ."

ಅನಂತರ, ಇಂಗ್ಲಿಷ್ ಹಾಗೂ ಸರ್ವಸಾಮಾನ್ಯ ವಿಚಾರ ಜ್ಞಾನಗಳ ಪರಿಚಯ ಇಲ್ಲದ ಬಹುಸಂಖ್ಯಾತ ಜನವರ್ಗ ಒಂದು ಕಡೆ, ತಾನು ಬಲ್ಲ ಪಾಶ್ಚಾತ್ಯ ವಿದ್ಯೆಗಾಗಿ ಹೆಮ್ಮೆಪಡುತ್ತಾ ಯುಗ ಯುಗಾಂತರಗಲ ನೆಲೆಗಟ್ಟಿನಿಂದ ದೂರ ಸರಿಯುತ್ತ ತಮ್ಮ ರಾಷ್ಟ್ರೀಯ ಲಕ್ಷಣವನ್ನೇ ಕಳೆದುಕೊಳ್ಳುತ್ತಿರುವ ಅಲ್ಪ ಸಂಖ್ಯಾತ ವರ್ಗ,- ಹೀಗೆ ಪರಸ್ಪರ ಹೊಂದಿಕೊಳ್ಳದೆ ಬೇರೆ ಬೇರೆಯಾಗಿ ನಿಂತಿರುವ

ಎರಡು ಭಿನ್ನವರ್ಗಗಳನ್ನು ಪೋಷಿಸಿಕೊಂಡು ಬರುತ್ತಿರುವ ವಿದ್ಯಮಾನದಲ್ಲಿ ಅಡಗಿರುವ ಅಪಾಯಗಳನ್ನೂ ಆತ ಎತ್ತಿತೋರಿದನು.

ಕಡೆಯದಾಗಿ ಆತನು ಹೀಗೆ ಹೇಳುತ್ತಾನೆ:

"ದೇಶಭಾಷೆ ಯಾವಾಗಲೂ ಜನಸಾಮಾನ್ಯರ ಭಾಷೆಯಾಗಿಯೇ ಉಳಿಯಬೇಕು; ಹೀಗಿರುವುದರಿಂದ ಇಂಗ್ಲಿಷ್ ವಿದ್ಯಾಭ್ಯಾಸವು ಭಾರತದಲ್ಲಿ ನಾಗರಿಕತೆಯನ್ನು ಬೆಳಸುತ್ತಿರುವ ಕಾರ್ಯಕ್ರಮದ ಜೊತೆಗೆ ದೇಶ ಭಾಷೆಗಳಲ್ಲಿಯೂ ಅಂತಹ ಕಾರ್ಯವನ್ನು ಮಾಡುವುದು ಅಪೇಕ್ಷಣೀಯ. ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದ ಫಲವಾಗಿ ಒಂದು ಸರಾಸರಿ ಮಟ್ಟದ ತಿಳಿವಳಿಕೆಯ ಪ್ರಯೋಜನಗಳನ್ನು ಪಡೆದ ಭಾರತೀಯನು ಪಾಶ್ಚಾತ್ಯ ಜ್ಞಾನ ಸಂಸ್ಕೃತಿಗಳನ್ನೂ ಪಡೆದಿರಬೇಕೆಂದು ನಾವು ನಿರೀಕ್ಷಿಸುವೆವು; ಕನಿಷ್ಠಪಕ್ಷ ಅವುಗಳ ಕೆಲವು ಪಾಲನ್ನಾದರೂ ಒಳಗೊಂಡು ಧರಿಸಬಲ್ಲ ಮಟ್ಟಿಗೆ ದೇಶಭಾಷೆಗಳನ್ನು ಉತ್ತಮಪಡಿಸಿ ಹದಗೊಳಿಸಬೇಕಾದದ್ದು ಅಗತ್ಯ. ಕೈಬಿಡಲಾಗದ ಈ ಅತ್ಯಗತ್ಯ ಕಾರ್ಯವನ್ನು ನಮ್ಮ ವಿಶ್ವವಿದ್ಯಾನಿಲಯಗಳ ಪದವೀಧರರಿಗಿಂತ ಮೇಲಾಗಿ ಮಾಡಬಲ್ಲವರು ಯಾರು? ವಿಷಯ ಜ್ಞಾನದಲ್ಲಿಯೂ ಭಾಷಾ ಸಾಮರ್ಥ್ಯದಲ್ಲಿಯೂ ಅವರಿಗೆ ಸರಿಯಾದ ಶಿಕ್ಷಣವನ್ನು ಕೊಡದಿದ್ದರೆ ಅದನ್ನು ಅವರು ಮಾಡಬಲ್ಲರಾದರೂ ಹೇಗೆ?"

ಸಂಪದ್ಯುಕ್ತವೂ ಪುರಾತನವೂ ಆದ ಭಾರತೀಯ ಸಂಸ್ಕೃತಿಯನ್ನು ರೂಪಿಸುವ ಕಾರ್ಯದಲ್ಲಿ ಸಂಸ್ಕೃತ ಭಾಷೆ ವಹಿಸಿರುವ ದೊಡ್ಡ ಪಾತ್ರ, ವಿದ್ಯಾಭ್ಯಾಸ ವಿಷಯದ ಇನ್ನಿತರ ಹಲವು ಮುಖಗಳು, ಇವುಗಳ ವಿಚಾರವನ್ನೂ ಅಧ್ಯಕ್ಷ ಭಾಷಣ ಪ್ರಸ್ತಾವಿಸಿದೆ. ಈ ಭಾಷಣದ ಸತ್ವ, ಸ್ಪಷ್ಟತೆ, ಅದರ ದೂರವ್ಯಾಪ್ತಿಯ ದೃಷ್ಟಿ, ಹಾಗೂ ಅದರ ಮೂಲಕ ಭಾರತೀಯ ಭಾಷೆಗಳ ಪಕ್ಷವನ್ನು ವಹಿಸಿ ಅವುಗಳನ್ನು ಎತ್ತಿಹಿಡಿದ ಉತ್ಕೃಷ್ಟ ವಿಧಾನ,– ಇವುಗಳನ್ನು ಮೆಚ್ಚಿಕೊಂಡು ಸಮಸ್ತ ದಕ್ಷಿಣ ಭಾರತದ ಅನೇಕ ಶಿಕ್ಷಣವೇತ್ತರು ರಾಜರಾಜವರ್ಮನನ್ನು ಪ್ರಶಂಸೆ ಮಾಡಿದರು. ಭಾರತೀಯ ಭಾಷೆಗಳಲ್ಲಿ ಬಿ.ಎ. ಆನರ್ಸ್ ಪದವಿ ಪರೀಕ್ಷೆಯ ತರಗತಿಗಳನ್ನು ಪ್ರಾರಂಭ ಮಾಡಬೇಕು ಎಂದು ಆತ ವಾದಿಸಿದನು. ಮದರಾಸು ವಿಶ್ವವಿದ್ಯಾನಿಲಯದಲ್ಲಿ ಇದ್ದಂತ ಅಗೋಚರ ಅಪಾಯಗಳಿಂದ ತಪ್ಪಿಸಿಕೊಳ್ಳು ವುದಕ್ಕಾಗಿಯೂ ಸಂಸ್ಥಾನದ ವಿಶಿಷ್ಟ ಅಗತ್ಯಗಳನ್ನು ತುಂಬಿಕೊಂಡು ಅದರ ಆದರ್ಶಗಳನ್ನು ಸಾಧಿಸುವ ಸಲುವಾಗಿಯೂ ತಿರುವಾಂಕೂರಿಗೆ ಪ್ರತ್ಯೇಕವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಆತ ಬೇರೊಂದು ಸಂದರ್ಭದಲ್ಲಿ ಸಲಹೆ ಮಾಡಿದನು. ಅರುವತ್ತು ವರ್ಷಗಳ ಹಿಂದೆ ಅದೊಂದು ಹುಚ್ಚು ಕನಸಾಗಿ

ಕಂಡಿರಬಹುದು; ಆದರೆ ಆಮೇಲಿನ ಘಟನೆಗಳು ಆತ ಹೇಳಿದ್ದು ಎಷ್ಟು ಸರಿಯಾಗಿತ್ತು ಎನ್ನುವುದನ್ನು ತೋರಿಸಿಕೊಟ್ಟುವು. ತಿರುವನಂತಪುರದ ಮಹಾರಾಜರವರ ಕಾಲೇಜಿನಲ್ಲಿ ಮಲಯಾಳ ಬಿ.ಎ. (ಆನರ್ಸ್) ಪದವಿ ವ್ಯಾಸಂಗವನ್ನು ೧೯೩೩ನೆಯ ಇಸವಿಯಲ್ಲಿ ಪ್ರಾರಂಭಿಸಲಾಯಿತು. ೧೯೩೭ರಲ್ಲಿ ತಿರುವಾಂಕೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾಯಿತು; ಆಮೇಲೆ ಇದೇ ಕೇರಳದ ವಿಶ್ವವಿದ್ಯಾನಿಲಯವಾಯಿತು.

ಶೈಕ್ಷಣಿಕ ಕಾರ್ಯನಿರ್ವಾಹ

ಸಂಸ್ಕೃತ ಪ್ರಾಧ್ಯಾಪಕತ್ವ ಮತ್ತು ಸಂಸ್ಕೃತ ಹಾಗೂ ದ್ರಾವಿಡ ಭಾಷೆಗಳ ವಿಭಾಗದ ತನ್ನ ದಿನನಿತ್ಯದ ಕರ್ತವ್ಯಗಳ ಜೊತೆಗೆ ರಾಜರಾಜವರ್ಮನು ಭಾಷಾ ಅಧ್ಯಯನ ವಿಚಾರ ಮತ್ತು ಸಾಮಾನ್ಯ ಶಿಕ್ಷಣ ಇವುಗಳಿಗೆ ಸಂಬಂಧಪಟ್ಟ ಬೇರೆ ಬೇರೆ ಇತರ ಹೊಣೆಗಳನ್ನೂ ಒಪ್ಪಿಕೊಳ್ಳಬೇಕಾಯಿತು. ವಿಶ್ವವಿದ್ಯಾನಿಲಯದ ಪಾಠ ವಿಷಯ ನಿಯಾಮಕ ಮಂಡಲಿ (Board of Studies) ಮತ್ತು ತಿರುವಾಂಕೂರು ಸಂಸ್ಥಾನದ ಪಠ್ಯ ಪುಸ್ತಕ ಸಮಿತಿಗಳಲ್ಲಿ ಚಟುವಟಿಕೆಯಿಂದ ಕೆಲಸ ಮಾಡುವ, ಉಪಯೋಗಕಾರಿಯಾದ ಸದಸ್ಯನಾಗಿದ್ದುದರಿಂದ ಆತ ಗಣ್ಯ ಪ್ರಮಾಣದಲ್ಲಿ ಕಾರ್ಯನಿರ್ವಹಣೆ ಮಾಡಬೇಕಾಗಿದ್ದಿತು. ಅಧಿಕಾರಿಗಳು ಮತ್ತು ಅಧಿಕಾರಿಗಳಲ್ಲದವರು ಇದ್ದ ಭಾಷಾ ಪರಿಷ್ಕರಣ ಸಮಿತಿಯ ಸದಸ್ಯನಾಗಿಯೂ ಇದ್ದನು. ಇಷ್ಟರ ಜೊತೆಗೆ, ಗಣ್ಯರಾದ ವಿದ್ವಾಂಸರಿಂದ ಉಪನ್ಯಾಗಳನ್ನು ಏರ್ಪಡಿಸುವುದಕ್ಕಾಗಿ ನಿಯೋಜಿತವಾಗಿದ್ದ ಸಾರ್ವಜನಿಕ ಉಪನ್ಯಾಸ ಸಮಿತಿಯ ಕಾರ್ಯದರ್ಶಿಯಾಗಿಯೂ ಆತ ಕೆಲಸ ಮಾಡ ಬೇಕಾಗಿದ್ದಿತು. ಬೇರೆ ಇನ್ನು ಕೆಲವು ಸಮಿತಿಗಳಲ್ಲಿಯೂ ಅವುಗಳ ಅಧ್ಯಕ್ಷನಾಗಿದ್ದು ಕೊಂಡು, ಅವುಗಳ ಕಾರ್ಯಕಲಾಪಗಳಲ್ಲಿ ಮಾರ್ಗದರ್ಶನ ಮಾಡಬೇಕಾಗಿದ್ದಿತು.

ಈ ಎಲ್ಲ ಕರ್ತವ್ಯಗಳ ನಿರ್ವಾಹವು ಹೆಗಲೇರಿದ್ದರೂ ಸಹ ಪುಸ್ತಕಗಳನ್ನು ಬರೆಯಲು ಅದು ಹೇಗೋ ಕಾಲವನ್ನು ದೊರಕಿಸಿಕೊಳ್ಳುತ್ತಿದ್ದನು. ಉದ್ಯೋಗ ಸಂಬಂಧದ ಕಾರ್ಯದಲ್ಲಿ ತೊಡಗಿದ್ದ ಕಡೆಯ ಎಂಟು ವರ್ಷಗಳಲ್ಲಿ ಕೆಲಸದ ಒತ್ತಡ ಆತನ ಮೇಲೆ ಅಗುತುಕೊಂಡಿದ್ದಾಗಲೂ 'ಸಾಹಿತ್ಯ ಸಾಹ್ಯಂ', 'ಮಲಯಾಳ ಶಾಕುಂತಳಂ' (ಸರಳವಾದ ಮಲಯಾಳದಲ್ಲಿ ಸಂಸ್ಕೃತ 'ಶಾಕುಂತಲ ನಾಟಕ'ದ ಅನುವಾದ), 'ಲಘುಪಾಣಿನೀಯಂ'-ಭಾಗ ೨, 'ಮಾಳವಿಕಾಗ್ನಿಮಿತ್ರಂ', 'ಚಾರುದತ್ತನ್' ಮತ್ತು 'ಸ್ವಪ್ನವಾಸವದತ್ತಂ' ನಾಟಕಗಳ

ಭಾಷಾಂತರ ರೂಪಗಳನ್ನು ರಚಿಸಿದನು. ಇವುಗಳಲ್ಲದೆ ಶಾಲಾ ವಾಚನ ಪುಸ್ತಕಗಳನ್ನೂ ಸಿದ್ಧಪಡಿಸಿದನು.

ಎಂಟು ವರ್ಷಗಳ ಪರಿಮಿತ ಅವಧಿಯಲ್ಲಿ ಇಷ್ಟೆಲ್ಲವನ್ನೂ ಮಾಡಲು ಆತ ಹೇಗೆ ಸಮರ್ಥನಾದನು? ಅದೊಂದು ಅಚ್ಚರಿಯಾಗಿಯೆ ಉಳಿದುಕೊಂಡಿದೆ. ಆತನ ದಿನನಿತ್ಯದ ಕಾರ್ಯಕ್ರಮ ಹೇಗೆ ಇದ್ದಿತು?

ಆತ ಬೆಳಗ್ಗೆ ಏಳುವುದು ೬, ೬–೩೦ ಗಂಟೆಯ ಹೊತ್ತಿಗೆ. ೮ ಗಂಟೆಗೆ ಒಂದು ಬಟ್ಟಲು ಕೋಕೋ ಕುಡಿಯುವುದು. ೧೦ ಗಂಟೆಯ ಹೊತ್ತಿಗೆ ಸ್ನಾನ. ಸ್ನಾನವಾದ ಮೇಲೆ ಪೂಜೆ ಪ್ರಾರ್ಥನೆಗಳನ್ನು ಸಲ್ಲಿಸಲೇಬೇಕು. ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ದೇವಸ್ಥಾನಗಳಿಗೆ ಹೋಗುವನು. ದಿನದ ಮುಖ್ಯ ಭೋಜನ ೧೧ ಗಂಟೆಗೆ. ಅನಂತರ ನೆಲದ ಮೇಲೆ ಚಾಪೆ ಹಾಸಿಕೊಂಡು ಮಲಗುವನು; ಸ್ವಲ್ಪ ಹೊತ್ತು ಮಕ್ಕಳೊಂದಿಗೆ ವಿನೋದವಾಗಿ ಕಾಲಕಳೆಯುವನು. ನಿದ್ರೆ ಬರುವ ಹಾಗಾದರೆ ಒಳಗಡೆಗೆ ಹೋಗಿ ಒಂದು ಗಂಟೆ ಅಥವಾ ಒಂದೂವರೆಯ ಗಂಟೆಯಷ್ಟು ಕಾಲ ವಿಶ್ರಾಂತಿ ಪಡೆಯುವನು. ಆಮೇಲೆ ಏನನ್ನಾದರೂ, ಸ್ವಲ್ಪ ಹಣ್ಣು ಹಂಪಲ ಇಲ್ಲವೆ ವಿಶೇಷವಾಗಿ ಮಾಡಿದ ತಿಂಡಿ, ಇವುಗಳನ್ನು ತಿನ್ನಬೇಕು. ಅನಂತರ ವಾಟ ಮೇಜದ ಮುಂದೆ ಕುಳಿತು ಓದುವುದು ಇಲ್ಲ ಬರೆಯುವುದು. ೩–೩೦ರ ವೇಳೆಗೆ ಕಾಫಿ. ಅದಾದ ಬಳಿಕ ಸ್ವಲ್ಪ ಹೊತ್ತು ಪತ್ರವ್ಯವಹಾರಕ್ಕೆ ವಿನಿಯೋಗಿಸುವನು. ೫ ಗಂಟೆಯ ಸುಮಾರಿಗೆ ಅಂಗಳದಲ್ಲಿ ನಡೆದಾಡತೊಡಗುವನು, ಇಲ್ಲವೋ ಒಂದು ಆಟ ಟೆನಿಸ್ ಆಡಲು ಕ್ಲಬ್ಬಿಗೆ ಹೋಗುವನು. ಸಂಜೆಯಾದ ಮೇಲೆ ಹಿಂದಿರುಗಿ, ಸ್ನಾನ ಮಾಡುವನು. ಬಳಿಕ ನಿಯತಕಾಲಿಕ ಪತ್ರಿಕೆಗಳ, ಪುಸ್ತಕಗಳ ಓದು ಮೊದಲಾಗುವುದು. ರಾತ್ರಿ ೮, ೮–೩೦ರ ಹೊತ್ತಿಗೆ ಭೋಜನ. ಆ ಬಳಿಕ ಅವನ ಕುಟುಂಬದ ಜನ ಸುತ್ತಲೂ ಸೇರಿದಾಗ, ಸ್ವಲ್ಪಹೊತ್ತು ಆರಾಮವಾಗಿ ಕಾಲ ಕಳೆಯುವನು. ರಾತ್ರಿ ೧೦ ಗಂಟೆಯ ಮೇಲೆಯೇ ಮಲಗಿ ನಿದ್ರೆ ಹೋಗುವುದು.

ರಜಾ ದಿನಗಳ ಕಾರ್ಯಕ್ರಮ ಇದು. ಕೆಲಸ ಇರುವ ದಿನಗಳಲ್ಲಿ ಸ್ನಾನ ಊಟಗಳು ಬೆಳಗ್ಗೆ ೯ ಗಂಟೆಯ ಹೊತ್ತಿಗೆ ಮುಗಿದುಹೋಗುವುದು. ಮಧ್ಯಾಹ್ನದ ಲಘು ಆಹಾರ ಕಾಲೇಜಿನಲ್ಲಿಯೆ ನಡೆದುಹೋಗುವುದು. ಸಂಜೆ ೪ ಗಂಟೆಯಾದ ಮೇಲೆ ನೇರವಾಗಿ ಯೂನಿಯನ್ ಕ್ಲಬ್ಬಿಗೆ ಹೋಗುವನು; ಸಂಜೆಯ ವೇಳೆಗೆ ಒಂದು ಆಟ ಟೆನಿಸ್, ಇಸ್ಪೀಟ್ ಆಟ ಆಡಿದ ಮೇಲೆಯೇ ಅವನು ಮನೆಗೆ ಹಿಂದಿರುಗುವನು.

ಮನೆಬಾಳ್ವೆಯ ನೋಟ

ತಂಪುರಾನನದು ಒಂದು ಆದರ್ಶವಾದ ಕೌಟುಂಬಿಕ ಜೀವನ. ಹೆಂಡತಿ ಮಕ್ಕಳನ್ನು ಬಹಳ ಎಚ್ಚರಿಕೆಯಿಂದ, ದಯಾದಾಕ್ಷಿಣ್ಯದಿಂದ ನೋಡಿಕೊಳ್ಳುತ್ತಿದ್ದನು. ಅವರ ಬದುಕು ಕಷ್ಟಕಾರ್ಪಣ್ಯ ಇಲ್ಲದೆ ನೆಮ್ಮದಿಯಿಂದ ಇರಬೇಕೆಂಬುದು ಆತನ ಬಲವಾದ ಆಸೆ. ಆತನಿಗೆ ಏಳು ಮಂದಿ ಹೆಣ್ಣುಮಕ್ಕಳು, ಆರು ಮಂದಿ ಗಂಡು ಮಕ್ಕಳು; ಇವರ ಪೈಕಿ ನಾಲ್ವರು ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳು ಈಗ ಜೀವಂತವಾಗಿದ್ದಾರೆ. ಜೀವಂತರಾಗಿರುವ ಹೆಣ್ಣುಮಕ್ಕಳಲ್ಲಿ ಒಬ್ಬಾಕೆ ಕೇಂದ್ರ ಸರ್ಕಾರದ ಸಚಿವರಾಗಿದ್ದ ಶ್ರೀ ರವೀಂದ್ರವರ್ಮರ ತಾಯಿ. ಆತನ ದಿನಚರಿಯ ಒಂದು ದಾಖಲೆ (೧೯೧೮) ಹೀಗಿದೆ; ಇದರಿಂದ ಈ ಮಹಾವಿದ್ವಾಂಸನ ಮಾನವೀಯ ದೃಷ್ಟಿ ತೋರಿಬರುತ್ತದೆ: "ಸಂಜೆ ಹೆಂಡತಿಯನ್ನೂ ಹೆಣ್ಣು ಮಕ್ಕಳನ್ನೂ ನಕ್ಷತ್ರವೀಕ್ಷಣ ಶಾಲೆಗೆ ಕರೆದುಕೊಂಡು ಹೋಗಿದ್ದೆ; ಮಾಳಿಗೆಯ ಮೇಲಿನಿಂದ ಪಶ್ಚಿಮ ಸಮುದ್ರದ ಹಾಗೂ ಪೂರ್ವದ ಬೆಟ್ಟಗುಡ್ಡಗಳ ನೋಟ ಅತ್ಯಂತ ಅಮೋಘವಾಗಿತ್ತು. ಬಾಲಚಂದ್ರ, ಮುಳುಗುವ ಸೂರ್ಯ, ತಮ್ಮ ಉಪಗ್ರಹಗಳೊಡನೆ ತೊಳಗುತ್ತಿದ್ದ ಬೃಹಸ್ಪತಿ ಗ್ರಹ ಮತ್ತು ಶನಿಗ್ರಹ ಹಾಗೂ ಕೆಲವು ಯಮಳ ನಕ್ಷತ್ರಗಳು, ಇವನ್ನೆಲ್ಲಾ ನೋಡಿದೆವು. ಇವನ್ನು ನೋಡಿ ಮಕ್ಕಳು ಬೆರಗಾಗಿ ಹೋದರು."

ತನ್ನ ಅಣ್ಣ ವ್ಯಾಸಂಗ ಮಾಡುತ್ತಿದ್ದ ಕಾಲೇಜನ್ನು ಕೊನೆಯ ಮಗಳು ಒಮ್ಮೆ ನೋಡಬಯಸಿದಳು. ಅದಕ್ಕಾಗಿ ಒಂದು ದಿನ ನಮ್ಮ ಪ್ರಾಧ್ಯಾಪಕ ಅವಳನ್ನು ತನ್ನ ಸಂಗಡ ಕಾಲೇಜಿಗೆ ಕರೆದೊಯ್ದು, ಪಾಠ ಹೇಳುತ್ತಿದ್ದ ಒಂದು ಗಂಟೆಯ ಕಾಲವೂ ತನ್ನ ತರಗತಿಯಲ್ಲಿ ಕೂರಿಸಿಕೊಂಡಿದ್ದನು. ಈ ಸಂದರ್ಭ ಪ್ರಾಧ್ಯಾಪಕ ಕವಿಯ ಶೀಲಸ್ವಭಾವದ ಒಂದು ಮಾರ್ದವ ಗುಣವನ್ನು ತೋರಿಸುವುದಾಗಿದೆ. ೧೯೧೪ರಲ್ಲಿ ಆತನ ಗುರುವಾಗಿದ್ದ, ಪೂಜ್ಯ ಸೋದರಮಾವ ತೀರಿಕೊಂಡನು. ಈ ಘಟನೆ ಅವನಿಗೆ ದೊಡ್ಡ ಆಘಾತವಾಯಿತು.

ಆದರೆ ಜೀವನ ನಿಷ್ಠುರವಾಗಿ ಮುಂದೆ ಸಾಗಿತು. ಬಹಳ ಕೆಲಸ ಇದ್ದಾಗಲೂ ಸಾಂಸಾರಿಕ ಕರ್ತವ್ಯಗಳಲ್ಲಿ ಅವನು ಯಾವುದನ್ನೂ ಉಪೇಕ್ಷೆ ಮಾಡುತ್ತಿರಲಿಲ್ಲ. ೧೯೧೮ರಲ್ಲಿ ತನ್ನ ಮಗ ರಾಘವವರ್ಮನ ಮದುವೆಯನ್ನು ನೆರವೇರಿಸಿದನು.

ಸ್ವಲ್ಪವೂ ಸುಳಿವು ಕೊಡದೆ ಈ ಮಹಾವಿದ್ವಾಂಸನನ್ನು ಮೃತ್ಯು ಆಹುತಿ ತೆಗೆದುಕೊಂಡಿತು. ಒಂದು ಕೆಟ್ಟ ಶೀತ ಆತನ ಅವಸಾನಕ್ಕೆ ಕಾರಣವಾಯಿತು. ಶೀತದೊಂದಿಗೆ ಅತಿಸಾರವೂ ಸೇರಿಕೊಂಡು ದೇಹಸ್ಥಿತಿಯನ್ನು ಇನ್ನಷ್ಟು

ಹದಗೆಡಿಸಿತು. ಮೂರು ದಿನ ಕಳೆಯುವಷ್ಟರಲ್ಲಿ ತಂಪುರಾನ್ ಶಕ್ತಿಗುಂದಿದನು. ಜ್ವರ ೧೦೩ ಡಿಗ್ರಿಗೆ ಏರಿ, ಸನ್ನಿ ಹಿಡಿಯಿತು. ಒಮ್ಮೆ ವೈದ್ಯರು ನೋಡಲು ಬಂದಾಗ, ಆತ ಹೇಳಿದ– "ಡಾಕ್ಟರ್, ನನಗೆ ಬೇಜಾರಾಗಿ ಹೋಗಿದೆ. ಜ್ವರ ಇನ್ನೂ ಕಾಯುತ್ತಲೇ ಇದೆ. ನಿಮ್ಮ 'ಪೇಷೆಂಟು' (ರೋಗಿ_ 'ಇಂಪೇಷೆಂಟ್' ಆಗಿದಾನೆ (ತಾಳ್ಮೆಗೆಟ್ಟಿದ್ದಾನೆ)." ಹಾಸ್ಯಮನೋವೃತ್ತಿ ಆತನಿಗೆ ಹುಟ್ಟುಗುಣದಂತೆ ಸ್ವಾಭಾವಿಕವಾಗಿತ್ತು. ವೈದ್ಯರು ಹೊರಟು ಹೋದಮೇಲೆ, ರೋಗಿ ತನ್ನ ಮಗಳನ್ನು 'ಗೀತಗೋವಿಂದ'ವನ್ನು ಹಾಡು ಎಂದು ಅಪೇಕ್ಷೆಪಟ್ಟನು. ತರುವಾಯ ತಾನು ಬರೆಯಬೇಕೆಂದು ಮಾಡಿಕೊಂಡಿದ್ದ ಒಂದು ಹೊಸ ನಾಟಕದ ಸಂವಿಧಾನವನ್ನು ಬರೆದುಕೊಳ್ಳುವಂತೆ ಮಗಳಿಗೆ ತಿಳಿಸಿದನು; ಆದರೆ ಕೊನೆಗೆ ವಿಶ್ರಾಂತಿ ತೆಗೆದುಕೊಳ್ಳಿ ಎಂದು ಮಗಳು ಒಂದೇ ಸಮನೆ ಬಲಾತ್ಕಾರ ಮಾಡಿದಳು. ಜ್ವರ ಏರುವುದು, ಇಳಿಯುವುದು, ಹೀಗೆ ಸಾಗಿತು; ಆಮೇಲೆ ವಿಷಮ ಶೀತಜ್ವರದ ಲಕ್ಷಣಗಳು ಕಾಣಿಸಿಕೊಂಡುವು. ವೈದ್ಯರ ಪ್ರಯತ್ನಗಳೆಲ್ಲವೂ ವ್ಯರ್ಥವಾಗಿ ಪರಿಣಮಿಸಿದುವು. ಹಾಸಿಗೆ ಹಿಡಿದು ಎರಡು ವಾರ ಕಳೆದ ಮೇಲೆ, ತನ್ನ ಸ್ವಂತ ಕುಟುಂಬದವರನ್ನು ಮಾತ್ರವಲ್ಲದೆ, ಸಮಸ್ತ ಕೇರಳವನ್ನು ತಡೆಯಲಾಗದ ದುಃಖದಲ್ಲಿ ಮುಳುಗಿಸಿ ಆತ ಹೊರಟುಹೋದನು.

* * * *

ಅಧ್ಯಾಯ ಐದು

ಭಾಷೆ ಸಾಹಿತ್ಯಗಳನ್ನು ಕುರಿತ ಪ್ರಕರಣ ಗ್ರಂಥಗಳು

ರಾಜರಾಜವರ್ಮನ ಬಹುಮುಖವಾದ ಪ್ರತಿಭೆಯ ಹಾಗೂ ಆತ ಬರೆದಿರುವ ಕೆಲವು ಪುಸ್ತಕಗಳ ವಿಚಾರವಾಗಿ ನಾವು ಈಗಾಗಲೇ ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದೇವೆ. ಈಗ ಆತನು ರಚಿಸಿರುವ ನಲವತ್ತಕ್ಕೂ ಮಿಕ್ಕರುವ ಸಾಹಿತ್ಯ ಕೃತಿಗಳನ್ನು ಕುರಿತು ಹೆಚ್ಚು ಸಮಗ್ರವೂ ವಸ್ತುನಿಷ್ಠವೂ ಆದ ಮೌಲ್ಯ ಮಾಪನವನ್ನು ಮಾಡಬೇಕಾಗಿದೆ. ಕೃತಿಗಳನ್ನು ಸ್ಥೂಲವಾಗಿ ಮೂರು ಗುಂಪುಗಳಾಗಿ ವಿಂಗಡಿಸಿ ಕೊಂಡು ಈ ಕೆಲಸ ಮಾಡುವುದು ಮೇಲು. ಮೊದಲ ಗುಂಪು, ಎಂದರೆ 'ಭಾಷಾ ಸಾಹಿತ್ಯ ವಿಷಯಕ ಪ್ರಕರಣ ಗ್ರಂಥಗಳು' ಎಂಬುದಿದು ಈ ಅಧ್ಯಾಯದ ವಿಷಯ.

ಸಾಹಿತ್ಯದ ಭಾಷೆಯಾಗಿ ಮಲಯಾಳಂ ಭಾಷೆಗೆ ಎಂಟು ಶತಮಾನಕ್ಕೂ ಮೇಲ್ಪಟ್ಟ ಇತಿಹಾಸವಿದೆ; ಆಡುನುಡಿಯಾಗಿ ಅದು ಇನ್ನೂ ಅನೇಕ ಶತಮಾನಗಳ ಕಾಲದಿಂದ ಅಸ್ತಿತ್ವದಲ್ಲಿ ಇದ್ದಿರಬೇಕು. ಹಾಗಿದ್ದರೂ, ವ್ಯವಸ್ಥಾಬದ್ಧವಾದ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡುವ ವ್ಯಾಕರಣ ಗ್ರಂಥಗಳು ಮತ್ತು ಶಬ್ದಕೋಶಗಳಂತಹ ಸಾಧನ ಸಲಕರಣೆಗಳು ಹದಿನೆಂಟನೆಯ ಶತಮಾನದವರೆಗೂ ಅದರಲ್ಲಿ ಬಲುಮಟ್ಟಿಗೆ ಇರಲೇ ಇಲ್ಲ. ಹದಿನೆಂಟನೆಯ ಶತಮಾನದಲ್ಲಿ ಕೂಡ ಈ ಕ್ಷೇತ್ರದಲ್ಲಿ ನಡೆದ ಕಾರ್ಯಪ್ರಯತ್ನಗಳು ಬಹಳ ಅಲ್ಪ; ಇದ್ದುದರಲ್ಲಿ ಸ್ವಲ್ಪ ಗಣ್ಯವಾದ ಕಾರ್ಯವನ್ನು ಕಾಣಬೇಕೆಂದರೆ ನಾವು ಹತ್ತೊಂಬತ್ತನೆಯ ಶತಮಾನಕ್ಕೆ ಬರಬೇಕು. ೧೪ನೆಯ ಶತಮಾನದ 'ಲೀಲಾತಿಲಕ'ವನ್ನು ಅಲಕ್ಷ್ಯ ಮಾಡದೆ ಈ ಮಾತನ್ನು ಹೇಳಿದೆ. 'ಮಣಿಪ್ರವಾಳ'ದ ಮೇಲೆ ಸಂಸ್ಕೃತದಲ್ಲಿ ಬರೆದ ಒಂದು ಪ್ರಕರಣ ಗ್ರಂಥ 'ಲೀಲಾ ತಿಲಕ'. ಇದರಲ್ಲಿ ಮಲಯಾಳಂ ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರದ ಬಗೆಗೆ ಬೆಲೆಯುಳ್ಳ ಉಲ್ಲೇಖಗಳಿವೆ.

ಹೀಗೆ ನೈಘಂಟುಕ ಶಾಸ್ತ್ರ ಮತ್ತು ವ್ಯಾಕರಣ ಶಾಸ್ತ್ರ ಗ್ರಂಥಗಳಿಗೆ ಸುಮಾರು ೨೫೦ ವರ್ಷಗಳಿಗಿಂತ ಕಡಮೆಯ ಅವಧಿಯ ಇತಿಹಾಸವಿದೆ. ಮಲಯಾಳ ಭಾಷೆಯನ್ನು ಕುರಿತು ನಿಜವಾದ ವೈಜ್ಞಾನಿಕ ವ್ಯಾಸಂಗ ಯೂರೋಪಿಯನ್ ವಿದ್ವಾಂಸರು ಆಗಮಿಸಿದಂದಿನಿಂದ ಮೊದಲಾಯಿತು. ಯೂರೋಪಿಯನ್ನರು

ಆಗಮಿಸಿ ಅದನ್ನು ವ್ಯಾಂಗಮಾಡುವರೆಗೆ ಮಲಯಾಳದಂತಹ ಬೆಳೆದು ಬಂದ ಭಾಷೆಗೆ ಈ ಆಧಾರ ಸಾಮಗ್ರಿ ಸಲಕರಣೆಗಳು ಇರಲಿಲ್ಲ ಎಂದು ಅನೇಕರಿಗೆ ಆಶ್ಚರ್ಯವಾಗಬಹುದು.

ಆದರೆ ಈ ಪ್ರಶ್ನೆಯನ್ನು ಗಂಭೀರವಾಗಿ ಆಲೋಚನೆ ಮಾಡಿನೋಡಿದರೆ ಅದರಲ್ಲಿ ಆಶ್ಚರ್ಯಕರವಾದದ್ದು ಯಾವುದೂ ಕಾಣುವುದಿಲ್ಲ. ಒಂದು ಭಾಷೆಯನ್ನು ತಾಯ್ನುಡಿ ಎಂದು ಇಲ್ಲವೆ ಪ್ರಥಮ ಭಾಷೆಯಾಗಿ ಕಲಿಯುವುದಕ್ಕೂ ದ್ವಿತೀಯ ಭಾಷೆಯಾಗಿ ಅದನ್ನು ಕಲಿಯುವುದಕ್ಕೂ ವ್ಯತ್ಯಾಸವಿದೆ. ಯಾವ ಸ್ಪಷ್ಟ ಪ್ರಯತ್ನವೂ ಇಲ್ಲದೆ, ಸುಮ್ಮನೆ ಆಲಿಸುವುದರಿಂದ ಹಾಗೂ ಅನುಕರಣ ಮಾಡುವುದರಿಂದ ಮಗು ಪ್ರಥಮ ಭಾಷೆಯನ್ನು ಕಲಿಯುತ್ತದೆ. ವರ್ಣಗುಚ್ಛಗಳನ್ನೂ, ಸರ್ವಸಾಮಾನ್ಯ ಶಬ್ದಕೋಶವನ್ನೂ ವಾಕ್ಯದ ಮಾದರಿಗಳನ್ನೂ ಸ್ವಾಭಾವಿಕವಾಗಿ, ಯಾವ ಪ್ರಶ್ನೆಯನ್ನೂ ಹಾಕದೆ, ಮಗು ಸ್ವಾಧೀನಪಡಿಸಿಕೊಳ್ಳುತ್ತದೆ. ವಯಸ್ಸಾದವನು ಭಾಷೆಯನ್ನು ಪ್ರಯತ್ನಪೂರ್ವಕವಾಗಿ ಕಲಿಯುತ್ತಾನೆ; ಮತ್ತು ಭಾಷೆಯನ್ನು ಮೈಗೂಡಿಸಿಕೊಳ್ಳುವಲ್ಲಿ ಹೆಚ್ಚು ತರ್ಕಬದ್ಧವಾಗಿ, ವಿಮರ್ಶಾತ್ಮಕವಾಗಿ, ಬೇಕಾದದ್ದನ್ನು ಮಾತ್ರ ಆಯ್ಕೆಮಾಡಿಕೊಳ್ಳುತ್ತ ಕಲಿಯುವ ಪ್ರವೃತ್ತಿ ಉಳ್ಳವನಾಗಿರುತ್ತಾನೆ. ಈ ಕಾರಣದಿಂದಲೇ ವ್ಯಾಕರಣವನ್ನು ಆಧಾರವಾಗಿಟ್ಟುಕೊಂಡು ವ್ಯಾಸಂಗ ಮಾಡುವುದನ್ನು ಆತ ಸ್ವಾಗತಿಸುತ್ತಾನೆ; ಹೀಗೆ ಮಾಡುವುದರಿಂದ ಭಾಷೆಯ ಸ್ವರೂಪ ರಚನೆಯನ್ನು ಹೆಚ್ಚು ಶೀಘ್ರವಾಗಿ ಅರಿತುಕೊಳ್ಳಲು ಅವನಿಗೆ ಸಹಾಯ ವಾಗುತ್ತದೆ. ವ್ಯಾಪಾರಕ್ಕೆಂದೋ ಮತಪ್ರಚಾರದ ಕೆಲಸಕ್ಕಾಗಿಯೋ ಯೂರೋಪಿಯನ್ನರು ಕೇರಳಕ್ಕೆ ಬಂದಾಗ ಜನದೊಡನೆ ಸಂಪರ್ಕ ಇಟ್ಟು ಕೊಳ್ಳುವ ಸಮಸ್ಯೆಯನ್ನು ಅವರು ಎದುರಿಸಬೇಕಾಯಿತು; ಎಂದರೆ, ಅವರು ಹೊಸದೊಂದು ಭಾಷೆಯನ್ನೆ ಕಲಿಯಬೇಕಾಯಿತು. ಆದರಿಂದ, ತಮ್ಮ ಸ್ವಂತದ ಉಪಯೋಗಕ್ಕಾಗಿಯೂ ಮುಂದೆ ಬರುವವರ ಉಪಯೋಗಕ್ಕಾಗಿಯೂ, (ಇಂಗ್ಲಿಷ್, ಲ್ಯಾಟಿನ್ ಅಥವಾ ಪೋರ್ಚುಗೀಸ್ ಭಾಷೆಗಳ ಪರ್ಯಾಯ ಪದಗಳೊಂದಿಗೆ) ಮೂಲ ಮಲಯಾಳಂ ಶಬ್ದಗಳ ಪಟ್ಟಿಯನ್ನು ತಯಾರಿಸುವ ಹಾಗೂ ಮಲಯಾಳ ವ್ಯಾಕರಣದ ಮುಖ್ಯಾಂಶಗಳನ್ನು ಬರೆದಿಡುವ ಕಾರ್ಯವನ್ನು ಅವರು ಸಹಜವಾಗಿಯೆ ಕೈಗೊಳ್ಳಬೇಕಾಯಿತು. ಈ ಮೊದಲಿನ ಕಾರ್ಯ ಪ್ರಯತ್ನ ಗಳನ್ನು ಆಮೇಲೆ ಬಂದ ಭಾಷಾ ವಿದ್ಯಾರ್ಥಿಗಳು ಉತ್ತಮಪಡಿಸಿದರು; ಅವರಲ್ಲಿ ಕೆಲವರಿಗೆ ಹೊಸ ಭಾಷೆಗಳನ್ನು ಕಲಿಯುವುದಕ್ಕೂ ವ್ಯಾಕರಣ ಸ್ವರೂಪವನ್ನು

ಗ್ರಹಿಸುವುದಕ್ಕೂ ಅಗತ್ಯವಾದ ಸಹಜಶಕ್ತಿ ಅಥವಾ ಹುಟ್ಟುಗುಣ ಇದ್ದಿತು.

ಈವರೆಗೆ ಮಲಯಾಳ ಭಾಷೆ ಪಡೆದುಕೊಂಡಿರುವ ವೈಯಾಕರಣದಲ್ಲಿ ರಾಜರಾಜವರ್ಮನು ಅತ್ಯಂತ ಪ್ರಮುಖ ಎಂದು ಗಣ್ಯನಾಗಿದ್ದಾನೆ; ಆತನ ಕೃತಿ 'ಕೇರಳ ಪಾಣಿನೀಯ'ವು ಘನವಾದ ಸ್ಮಾರಕ ಗ್ರಂಥ ಎಂದು ಸಾರ್ವತ್ರಿಕವಾಗಿ ಮನ್ನಣೆ ಪಡೆದಿದೆ. ಈ ನಿರ್ದಿಷ್ಟ ಕ್ಷೇತ್ರದಲ್ಲಿ ಆತನ ಕಾಣಿಕೆಗೆ ಸರಿಯಾದ ಬೆಲೆ ಕಟ್ಟಬೇಕಾದರೆ 'ಕೇರಳ ಪಾಣಿನೀಯ'ವು ಪ್ರಕಟವಾಗುವುದಕ್ಕೆ ಮುಂಚಿನ ವ್ಯಾಕರಣ ಕೃತಿಗಳ ಬಗೆಗೆ ಒಂದು ಸ್ಥೂಲವಾದ ಕಲ್ಪನೆಯನ್ನು ನಾವು ಹೊಂದಿರಬೆಕು.

ಯೂರೋಪಿಯನ್ ವಿದ್ವಾಂಸರ ಕೃತಿಗಳು

೧. ರಾಬರ್ಟ್‌ಡ್ರಮಂಡ್ (Robert Drummond)	ಮಲಬಾರ್ ಭಾಷೆಯ ವ್ಯಾಕರಣ (Grammar of Malbar Language) (1799)
೨. ಎಫ್ ಸ್ಪ್ರಿಂಗ್ (F. Spring)	ಮಲಯಾಳಂ ಭಾಷಾ ವ್ಯಾಕರಣದ ರೂಪರೇಖೆ (Outlines of a Grammar of the Malayalam Language) (1839)
೩. ಜೋಸೆಫ್ ಪೀಟ್ (Joseph peet)	ಮಲಯಾಳಂ ಭಾಷಾ ವ್ಯಾಕರಣ (A grammar of the Malayalam language) (1854)
೪. ಗುಂಡರ್ಟ್ (ಮತ್ತು ಗರ್ತ್‌ವೆಯ್) (Gundert and Garthwaite)	ಮಲಯಾಳಂ ವ್ಯಾಕರಣ ಪ್ರಶ್ನೋತ್ತರ ಮಾಲೆ (latechism of Malayalam Grammar((1860)
೫. ಗುಂಡರ್ಟ್ (Gundert)	ಮಲಯಾಳ ಭಾಷಾಂತರ ವ್ಯಾಕರಣಂ (Malayala Bhasha Vyakaranam) 1868)
೬ ಎಲ್.ಜೆ. ಫ್ರಾನ್ಸ್‌ಮೆಯರ್ (L. J. Frohnmeyer)	ಯೂರೋಪಿಯನ್ನರಿಗಾಗಿ ಮಲಯಾಳ ಭಾಷೆಯ ಪ್ರಾಗತಿಕ ವ್ಯಾಕರಣ (A Progressive Grammar of Malayalam for Europeans) (1859)

ಕೇರಳ ವಿದ್ವಾಂಸರ ಕೃತಿಗಳು

೧. ಅಜ್ಞಾತ	ಲೀಲಾತಿಲಕಂ (೧೪ನೆಯ ಶತಕ)
೨. ರೆ॥ ಜಾರ್ಜ್ ಮೂತ್ತಾತು	ಮಲಯಾಟ್ ಮಯುಟೆ (೧೮೬೩)
೩. ಪಾಚ್ಚು ಮೂತ್ತಾತು	ಕೇರಳ ಭಾಷಾ ವ್ಯಾಕರಣಂ (೧೮೭೬)
೪. ಕೋವುಣ್ಣಿ ನೆಟುಣ್ಣಾಃ	ಕೇರಳ ಕೌಮುದಿ (೧೮೭೮)

ಮೇಲೆ ನಮೂದಿಸಿದ ಹತ್ತು ಕೃತಿಗಳ ಪೈಕಿ ಅತ್ಯಂತ ವಿದ್ವತ್‌ಪೂರ್ಣವಾದವು ಎರಡು; ಅವು ಯಾವುವೆಂದರೆ ಡಾ॥ ಗುಂಡರ್ಟನ 'ಮಲಯಾಳ ಭಾಷಾ ವ್ಯಾಕರಣಂ' (೧೮೬೮) ಮತ್ತು ರೆ॥ ಜಾರ್ಜ್ ಮ್ಯಾಥನ್ನನ 'ಮಲಯಾಟ್ ಮಯುಟೆ (೧೮೬೩). ಡಾ॥ ಗುಂಡರ್ಟನ ಕೃತಿಯನ್ನು ಬಿಟ್ಟುಬಿಟ್ಟರೆ ಮೊದಲ ಗುಂಪಿನ ಎಲ್ಲ ಕೃತಿಗಳೂ ಯೂರೋಪಿಯನ್ನರಿಗಾಗಿ ಬರೆದವು. ಭಾಷೆಯ ಸೂಕ್ಷ್ಮ ವಿಚಾರಗಳನ್ನು ಪರದೇಶದವರಿಗೆ ತಿಳಿಸಿಕೊಡುವುದಕ್ಕಾಗಿ ಉದ್ದಿಷ್ಟವಾದ ಪ್ರಾಥಮಿಕ ಪ್ರಕರಣ ಗ್ರಂಥಗಳು ಅವು. ಭಾಷೆಗಳ ಸ್ವರೂಪ ರಚನೆಯನ್ನು ಅರಿತುಕೊಳ್ಳಲು ಅನುಸರಿಸಬೇಕಾದ ಯೂರೋಪಿಯನ್ ಶಾಸ್ತ್ರ ಪದ್ಧತಿಯ ಪರಿಚಯವನ್ನು ಆ ಯೂರೋಪಿಯನ್ ವಿದ್ವದ್ವರೇಣ್ಯರು ಹೊಂದಿದ್ದರು; ಈ ಸಂದರ್ಭದಿಂದಾಗಿ ಪೂರ್ತಿಯಾಗಿ ಬೇರೆಯಾದ ಭಾಷಾ ಕುಟುಂಬಕ್ಕೆ ಸೇರಿದ ಭಾಷೆ ಒಂದನ್ನು ಅಭ್ಯಾಸಕ್ಕೆ ಎತ್ತಿಕೊಂಡಾಗ ತಾವು ಬಲ್ಲ ಶಾಸ್ತ್ರ ವಿಧಾನದ ಪ್ರಭಾವಕ್ಕೆ ಅವರು ಒಳಗಾದರು. ಅದೇ ರೀತಿಯಲ್ಲಿ ದೇಶೀಯ ವಿದ್ವಾಂಸರು ಸಂಸ್ಕೃತ ಭಾಷೆಯ ಮುಖ್ಯ ವ್ಯಾಕರಣ ಗ್ರಂಥಗಳ ಪರಿಚಯವನ್ನು ಹೊಂದಿದ್ದರು. ಹೀಗಿರುತ್ತ, ಈ ವ್ಯಾಕರಣ ರಚನೆಯ ಕಾರ್ಯವನ್ನು ಅವರು ಕೈಗೊಂಡಾಗ ಸಂಸ್ಕೃತ ವೈಯಾಕರಣರ ಶಾಸ್ತ್ರಮರ್ಯಾದೆ ಹಾಗೂ ಪರಿಭಾಷೆ ಅವರ ಮೇಲೂ ಸಹ ತಕ್ಕಮಟ್ಟಿನ ಪ್ರಮಾಣದಲ್ಲಿ ಪ್ರಭಾವಬೀರಿದುವು. ಈ ಸಂದರ್ಭದಲ್ಲಿ, ಬಿಷಪ್ ರಾಬರ್ಟ್ ಕಾಲ್ಡ್‌ವೆಲ್ (Bishop Robert Caldwell) ಮಹಾಶಯನ 'ದ್ರಾವಿಡ ಅಥವಾ ದಕ್ಷಿಣ ಭಾರತದ ಭಾಷಾ ಕುಟುಂಬದ ಭಾಷೆಗಳ ತೌಲನಿಕ ವ್ಯಾಕರಣ' (A Comparative Grammar of Dravidian or South Indian Family of Languages) (೧೮೫೬) ಗ್ರಂಥವನ್ನು ಹೆಸರಿಸುವುದನ್ನು ಯಾರೂ ಮರೆಯಕೂಡದು. ಸಂಸ್ಕೃತ ಭಾಷೆಯೊಂದಿಗೆ ಇಲ್ಲವೇ ಇಂಡೋಆರ್ಯನ್ ಭಾಷಾ ವರ್ಗಕ್ಕೆ ಸೇರಿದ ಯಾವುದೇ ಭಾಷೆಯೊಂದಿಗೆ ವಂಶಗತ ಸಂಬಂಧವನ್ನು ಹೊಂದಿರದ ಒಂದು ಪ್ರತ್ಯೇಕವಾದ ಭಾಷಾವರ್ಗಕ್ಕೆ ದಕ್ಷಿಣ ಭಾರತದ ಭಾಷೆಗಳು

ಸೇರಿವೆ ಎಂಬ ಸಂಗತಿಯನ್ನು ಸಂದೇಹ ಪಡಲು ಸಾಧ್ಯವೇ ಇಲ್ಲದಂತೆ ಸ್ಥಾಪಿಸಿದವನು ಕಾಲ್ಡ್‌ವೆಲ್. ಆದ್ದರಿಂದ, ಯೂರೋಪಿನಲ್ಲಿ ಅಭಿವೃದ್ಧಿಗೆ ತಂದ ಶಾಸ್ತ್ರ ಪದ್ಧತಿಯನ್ನು ಆತ ಬಳಸಿಕೊಂಡರೂ ಕೂಡ ಇಂಡೋ-ಯೂರೋಪಿಯನ್ ರೂಪ ರಚನಾ ವಿಧಾನಕ್ಕೆ ಕಟ್ಟು ಬೀಳದೆ ರೂಪ ರಚನಾ ವಿಷಯಕ್ಕೆ ಪ್ರವೇಶಿಸಿದನು.

ಕೇರಳ ಪಾಣಿನೀಯ

ಕಾಲ್ಡ್‌ವೆಲ್ಲನ ಈ ಮಹಾಕೃತಿಯ ಆಂತರಿಕ ಮೌಲ್ಯವನ್ನು ಮೆಚ್ಚಿಕೊಳ್ಳಲು ದೇಶೀಯ ವಿದ್ವಾಂಸರಿಗೆ ಸ್ವಲ್ಪಕಾಲ ಹಿಡಿಯಿತಾದರೂ ಆ ಶ್ರೇಷ್ಠ ಕೃತಿ ಪ್ರಕಟವಾದ ಮೇಲೆ ತಮಿಳು-ತೆಲುಗು, ಕನ್ನಡ ಮತ್ತು ಮಲಯಾಳ ವ್ಯಾಕರಣವನ್ನು ಕುರಿತು ರಚಿತವಾದ ಗ್ರಂಥಗಳಿಗೆ ಒಂದು ಸ್ಪಷ್ಟವಾದ ಅನುಕೂಲವಿತ್ತು. ಮಲಯಾಳಂ ವ್ಯಾಕರಣದ ವಿಷಯಕ್ಕೆ ಬಂದರೆ, ಡಾ॥ ಗುಂಡರ್ಟ್ ಮತ್ತು ಡಾ॥ ಕಾಲ್ಡ್‌ವೆಲ್ಲರು ಕೆಲವು ಭಾಷಾ ಸಮಸ್ಯೆಗಳ ವಿಚಾರದಲ್ಲಿ ಏಕಾಭಿಪ್ರಾಯವನ್ನು ಹೊಂದಿರದಿದ್ದರೂ ಇಬ್ಬರೂ ಸಮೀಪವರ್ತಿಗಳಾಗಿ ಜೊತೆಗೂಡಿ ಕೆಲಸ ಮಾಡಿದರು. ರಾಜರಾಜ ವರ್ಮನು ಈ ಇಬ್ಬರು ವಿದ್ವಾಂಸರ ಹಾಗೂ ರೆ॥ ಜಾರ್ಜ್ ಮ್ಯಾಥನ್ಮಹಾಶಯನ ಅಭಿಪ್ರಾಯಗಳನ್ನು ಬಹಳ ಜಾಗರೂಕತೆಯಿಂದ ಅಧ್ಯಯನ ಮಾಡಿದನು. ಆದರೆ ಸಂಸ್ಕೃತ ಸಂಪ್ರದಾಯದಲ್ಲಿ ಶಿಕ್ಷಣ ಪಡೆದ ಆತನು ಸಂಸ್ಕೃತ ವ್ಯಾಕರಣ ಪದ್ಧತಿಯಲ್ಲಿ ಮಲಯಾಳಂ ವ್ಯಾಕರಣವನ್ನು ರಚಿಸಲು ಮೊದಲು ಪ್ರಯತ್ನಪಟ್ಟನು. ಈ ರಚನೆಯ ಕೆಲಸವನ್ನು ಆತ ತನ್ನ ಅಧ್ಯಾಪಕ ವೃತ್ತಿಯಲ್ಲಿ ಬಹಳ ಮುಂಚೆಯೆ ಮಾಡಿ, ತನ್ನ ಗ್ರಂಥಕ್ಕೆ 'ಕೇರಳ ಪಾಣಿನೀಯಂ' ಎಂದು ಹೆಸರಿಟ್ಟನು (೧೮೯೬). ಅದಕ್ಕೆ 'ಕೇರಳ ಪಾಣಿನೀಯಂ' ಎಂದು ಏಕೆ ಹೆಸರಿಟ್ಟನು? ಎಲ್ಲೆಲ್ಲೂ ಪ್ರಸಿದ್ಧ ವಾಗಿರುವಂತೆ, ಸಂಸ್ಕೃತದಲ್ಲಿ ಪಾಣಿನಿ ಅತ್ಯಂತ ಪ್ರಖ್ಯಾತನಾದ ವೈಯಾಕರಣ; ಅವನು ಎಷ್ಟು ಪ್ರಖ್ಯಾತನಾಗಿರುವನು ಎಂದರೆ, 'ಪಾಣಿನಿ' ಅಥವಾ 'ಪಾಣಿನೀಯಂ' ಎಂಬ ಶಬ್ದ ಭಾರತೀಯ ಪರಂಪರೆಯಲ್ಲಿ 'ವ್ಯಾಕರಣ' ಎಂಬ ಅರ್ಥವನ್ನು ಕೊಡುವಂತಾಗಿದೆ. ಅದರಿಂದ 'ಕೇರಳ ಪಾಣಿನೀಯಂ' ಎಂದರೆ ಪಾಣಿನೀಯ ಸಂಪ್ರದಾಯದಲ್ಲಿ ಬರೆದ ಕೇರಳದ ಭಾಷೆಯ ವ್ಯಾಕರಣ ಎಂದು ಅರ್ಥವಾಗಬೇಕು. ಪಾಣಿನೀಯ ಸಂಪ್ರದಾಯದ ಒಂದು ಮುಖ್ಯ ಲಕ್ಷಣ ಅದರ 'ಸೂತ್ರ-ವೃತ್ತಿ' ಶೈಲಿ. ಬಹಳ ಸಂಕ್ಷೇಪವಾಗಿದ್ದು, ನೆನಪಿನಲ್ಲಿ ಇಟ್ಟುಕೊಳ್ಳಲು ಅನುಕೂಲ ವಾಗುವಂತಹ ನಿಯಮ; ಆದರೆ ಪ್ರತಿಯೊಂದು ಸೂತ್ರಕ್ಕು ಒಂದು 'ವೃತ್ತಿ'

ಇಲ್ಲವೆ ವ್ಯಾಖ್ಯಾನ ಇಲ್ಲದಿದ್ದರೆ ಅದು ಪೂರ್ತಿ ಅರ್ಥವಾಗುವುದಿಲ್ಲ. ಈ ವ್ಯಾಕರಣವು ಸುಮಾರು ಎರಡು ದಶಕಗಳ ಕಾಲ ಬಳಕೆಯಲ್ಲಿತ್ತು; ಆದರೆ, ಮಲಯಾಳ ಭಾಷೆಯಲ್ಲಿ ವಿಶೇಷ ಜ್ಞಾನವನ್ನು ಪಡೆಯಬಯಸುವ ಈಗಿನ ಕಾಲದ ವಿದ್ಯಾರ್ಥಿಗಳಿಗೆ ಬೇರೆಯದೇ ಆದ ವ್ಯಾಕರಣ ಅಗತ್ಯವೆಂಬುದನ್ನು ಗ್ರಂಥಕರ್ತನು ಮನಗಂಡನು. ಬಿ.ಎ. ಪದವಿ ತರಗತಿಗಳಿಗೆ ಐಚ್ಛಿಕ ವಿಷಯವಾದ ಮಲಯಾಳ ಭಾಷೆಯನ್ನು ಬೋಧಿಸುತ್ತಿದ್ದಾಗ ಈ ದೃಢವಾದ ನಂಬಿಕೆ ಆತನಲ್ಲಿ ಉಂಟಾಯಿತು. ಮಲಯಾಳಂ ವ್ಯಾಕರಣದ ಮೇಲೆ ಆಗ ಸಿದ್ಧಪಡಿಸಿದ್ದ ಉಪನ್ಯಾಸದ ಟಿಪ್ಪಣಿಗಳು ಒಂದು ಪರಿಷ್ಕೃತ ವ್ಯಾಕರಣದ ರೂಪವನ್ನು ತಳೆಯಿತು; ಅದು ೧೯೧೭ರಲ್ಲಿ ಪ್ರಕಟವಾಯಿತು. 'ಕೇರಳ ಪಾಣಿನೀಯ'ವು ಬಲುಮಟ್ಟಿಗೆ ಒಂದು ಮರುಹುಟ್ಟನ್ನೇ ಪಡೆದಿದ್ದುದರಿಂದ ಅದರ ಆ ಹಳೆಯ ಗ್ರಂಥನಾಮವನ್ನು ಉಳಿಸಿಕೊಳ್ಳಲು ಇಷ್ಟಪಡಲಿಲ್ಲ; ಆದರೆ, ಆ ಹೆಸರು ಒಳ್ಳೆಯ ಜನಮನ್ನಣೆಯನ್ನು ಪಡೆದಿದ್ದುದರಿಂದ ಅದು ನಷ್ಟವಾಗಬಾರದೆಂದು ಆತನ ಮಿತ್ರರು ಭಾವಿಸಿದರು; ಹೀಗೆ ಹೊಸ ಮುದ್ರಣವು ಆ ಹೆಸರನ್ನೆ ಉಳಿಸಿಕೊಳ್ಳುವಂತೆ ಆಯಿತು. ಕಳೆದ ೬೦ ವರ್ಷಗಳಿಂದಲೂ ಈ ಕೃತಿ ಪ್ರಮಾಣಭೂತವಾದುದೆಂದು ಗಣ್ಯತೆ ಪಡೆದಿದೆ; ಮುಂದಾಗುವುದನ್ನು ಊಹಿಸಬಲ್ಲಮಟ್ಟಿಗೆ ಹೇಳುವುದಾದರೆ, ಅದರ ಸ್ಥಾನದಲ್ಲಿ ಬೇರೊಂದು ಕೃತಿ ಬರುವ ಸಂಭವ ಕಡಮೆ. ಈ ಕೃತಿಗೆ ದೊರೆತ ಜನಮನ್ನಣೆ ಎಷ್ಟು ದೊಡ್ಡದಾಗಿತ್ತೆಂದರೆ ಗ್ರಂಥಕರ್ತನನ್ನು ಕೇರಳ ಪಾಣಿನಿ ಎಂದು ಕರೆಯುವುದು ರೂಢಿಯಾಯಿತು. ಆತನ ಶಿಷ್ಯರಲ್ಲಿ ಒಬ್ಬನಾದ ಪಿ. ಅನಂತನ್ ಪಿಳ್ಳೆ ಬರೆದಿರುವ ಸಂಕ್ಷೇಪವಾದ ಜೀವನ ಚರಿತ್ರೆ ಕೂಡ ಇದೇ ಹೆಸರನ್ನು ಹೊಂದಿದೆ.[೧]

ರಾಜರಾಜವರ್ಮನಿಗೆ ಸಂಸ್ಕೃತದಲ್ಲಿ ಆಳವಾದ ಪಾಂಡಿತ್ಯ ಇದ್ದಿತು; ತಮಿಳಿನಲ್ಲಿ ಒಳ್ಳೆಯ ಜ್ಞಾನವಿತ್ತು; ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಕಾರ್ಯನಿರ್ವಾಹ ಮಾಡುವ ಮಟ್ಟಿನ ಜ್ಞಾನವಿತ್ತು. ಈ ಭಾಷೆಗಳಲ್ಲಿರುವ ಪ್ರಮಾಣಭೂತ ವ್ಯಾಕರಣಗಳ ನೆರವನ್ನು ಆತ ಪಡೆಯುತ್ತಿದ್ದನು; ಕಾಲ್ಡ್‌ವೆಲ್ ಮತ್ತು ಗುಂಡರ್ಟ್ ಅವರ ಗ್ರಂಥಗಳನ್ನಂತೂ ಪದೇ ಪದೇ ನೋಡುವುದು

---

೧. ರಾಜರಾಜವರ್ಮನ ಸಾಹಿತ್ಯ ಸೇವೆಯ ಸ್ಮಾರಕವಾಗಿ ತಿರುವನಂತಪುರದಲ್ಲಿರುವ ದ್ರಾವಿಡ ಭಾಷಾ ವಿಜ್ಞಾನ ಮಹಾ ಸಂಘವು (The Dravidian Linguistic Association) ತನ್ನ ಕಚೇರಿಯ ಕಟ್ಟಡಕ್ಕೆ ಕೇರಳಪಾಣಿನಿ ಭವನ ಎಂದು ಹೆಸರಿಟ್ಟಿದೆ.

ಇದ್ದೇ ಇದ್ದಿತು. ವಿದ್ವಾಂಸರುಗಳ ಪೈಕಿ ಕಾಲ್ಡ್‌ವೆಲ್ ಎಂದರೆ ಆತನಿಗೆ ಅಪಾರ ಗೌರವ. ಕಾಲ್ಡ್‌ವೆಲ್ಲನ ಅಭಿಪ್ರಾಯಗಳನ್ನು ಆತನು ಒಪ್ಪದಿದ್ದ ಸಂದರ್ಭಗಳಲ್ಲಿ ಎಷ್ಟು ಮುಜುಗರಪಡುತ್ತಿದ್ದನೆಂಬುದು ಗ್ರಂಥದ ಅನೇಕ ಭಾಗಗಳಲ್ಲಿ ಸ್ಪಷ್ಟ ಪಡುತ್ತದೆ; ಆದರೆ ಕಾಲ್ಡ್‌ವೆಲ್ ಹೇಳಿರುವುದು ತಪ್ಪು ಎಂದು ಆತನಿಗೆ ನಿಜವಾಗಿ ಮನವರಿಕೆಯಾದಾಗ ಆ ಯೂರೋಪಿಯನ್ ವಿದ್ವಾಂಸನನ್ನು ಆತ ವಿರೋಧಿಸುತ್ತಾನೆ. ರಾಜರಾಜವರ್ಮನ ಮುಂಚಿನ ಗ್ರಂಥಕ್ಕೆ **'ಕೇರಳ ಪಾಣಿನೀಯಂ'** ಎಂದು ಹೆಸರು ಉಚಿತವಾಗಿರುವ ಪಕ್ಷದಲ್ಲಿ, ಹೊಸ ಪರಿಷ್ಕರಣವನ್ನು **ಕೇರಳ ಕಾಲ್ಡ್‌ವೆಲ್ಲಿಯಂ** ಎಂದು ಹೆಸರಿಸಬೇಕಾಗಿದ್ದಿತು; ಕಾರಣ, ಗ್ರಂಥದ ಅನೇಕ ಭಾಗಗಳಲ್ಲಿ ಆತ ಕಾಲ್ಡ್‌ವೆಲ್ಲನನ್ನು ಬಹಳವಾಗಿ ಅವಲಂಬಿಸಿಕೊಂಡಿದ್ದಾನೆ. ಆದರೆ ವಸ್ತುನಿಷ್ಠವಾಗಿ ಹೇಳುವುದಾದರೆ, ಈ ಎರಡು ಹೆಸರುಗಳೂ ಅನುಚಿತವಾದವು; ಏಕೆಂದರೆ, ಆತ ಪಾಣಿನಿಯನ್ನಾಗಲಿ, ಕಾಲ್ಡ್‌ವೆಲ್ಲನನ್ನಾಗಲಿ ಅಂಧಾನುಕರಣೆ ಮಾಡುತ್ತಿಲ್ಲ. ಆತ ಸಾಂಪ್ರದಾಯಿಕ ಪದ್ಧತಿಯನ್ನೂ ಆಧುನಿಕ ವಿಧಾನಗಳನ್ನೂ ಎಷ್ಟು ಉತ್ಕೃಷ್ಟ ರೀತಿಯಲ್ಲಿ ಅಳವಡಿಸಿಕೊಂಡಿರುವನೆಂದರೆ, ಕೇರಳದ ವ್ಯಾಕರಣ ವಾಙ್ಮಯ ಪ್ರಪಂಚದಲ್ಲಿ ಅದು ಯುಗಪ್ರವರ್ತಕ ಗ್ರಂಥವಾಗಿ ಪರಿಣಮಿಸಿದೆ.

ಹೊಸ ಮುದ್ರಣದಲ್ಲಿ ರಾಜರಾಜವರ್ಮನು ಮುಂಚಿನ ಮುದ್ರಣದ ಸೂತ್ರಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿಬಿಟ್ಟು ಅವುಗಳ ಸ್ಥಾನದಲ್ಲಿ ದೀರ್ಘ ಅರ್ಥ ವಿವರಣೆಗಳು ಬೇಕಿಲ್ಲದ ಅನುಕೂಲಕರವಾದ ಕಾರಿಕೆಗಳನ್ನು (ಪದ್ಯಗಳನ್ನು) ಹಾಕಿದ್ದಾನೆ; ವಿವರಣೆ ಅಗತ್ಯ ಎನ್ನಿಸಿದ ಸಂದರ್ಭದಲ್ಲಿ ಅದನ್ನು ತಾನೇ ಒದಗಿಸಿದ್ದಾನೆ. ತಕ್ಕವಾದುದೆಂದು ಕಂಡುಬಂದ ವಿಪುಲ ಸಂಖ್ಯೆಯ ಸಂಸ್ಕೃತ ಶಾಸ್ತ್ರೀಯ ಶಬ್ದಗಳನ್ನು ಆತ ಬಳಸಿಕೊಂಡಿದ್ದಾನೆ; ಆದರೆ ಸಂಸ್ಕೃತ ಶಬ್ದಗಳನ್ನು ಬರಮಾಡಿಕೊಂಡಿರುವನೇ ಹೊರತು ನೆಟುಣ್ಣಾಟಿ ಮಾಡಿರುವ ಹಾಗೆ ಸಂಸ್ಕೃತ ವ್ಯಾಕರಣವನ್ನೇ ಆಮದುಮಾಡಿಕೊಂಡಿಲ್ಲ. ಸ್ವೀಕಾರಾರ್ಹ ಎಂದು ಕಂಡುಬಂದಾಗ ತಮಿಳು ವ್ಯಾಕರಣದಿಂದಲೂ ಕೆಲವು ಪದಗಳನ್ನು ಸ್ವೀಕಾರ ಮಾಡಿದ್ದಾನೆ. ಹೀಗಿದ್ದರೂ ಕೂಡ, ಒಟ್ಟಿನ ವಿವೇಚನೆ, ದೇಶೀಯ ಸಾಧನ ಸಲಕರಣೆಗಳನ್ನು ಉಪಯೋಗಿಸಿಕೊಳ್ಳುವ ವಿಧಾನ, ಇವೆಲ್ಲ ಗಮನಾರ್ಹವಾಗಿ ಪಾಶ್ಚಾತ್ಯವಾಗಿ ಕಾಣಿಸುತ್ತವೆ. ಆದರೆ ಆತನು ಮಲಯಾಳಂ ವ್ಯಾಕರಣಕ್ಕೆ ಗುಂಡರ್ಟ್ ಮತ್ತು ಜಾರ್ಜ್ ಮ್ಯಾಥನ್‌ರವರು ಮಾಡಿರುವಂತೆ ಪಾಶ್ಚಾತ್ಯ ಛಾಯೆಯನ್ನು ಆರೋಪಿಸಿಲ್ಲ.

ಈ ಕೃತಿಯಲ್ಲಿ ಅವಗುಣಗಳೂ ಇವೆ. ಕೆಲವು ಪೂರ್ವಾಪರವಿರುದ್ಧ ಸಂಗತಿಗಳೂ ತಪ್ಪುಗಳೂ ಇವೆ. ಈ ಪರಿಷ್ಕೃತ ಮುದ್ರಣ ಪ್ರಕಟವಾದ ಮೇಲೆ ಒಂದು ವರ್ಷಪೂರ್ತಿ ಕೂಡ ಆತ ಜೀವಿಸಿರಲಿಲ್ಲ. ಆತ ಇನ್ನು ಸ್ವಲ್ಪ ಕಾಲ ಬದುಕಿದ್ದರೆ ತನ್ನ ಕೃತಿಯನ್ನು ಇನ್ನೂ ಬಹುಪಾಲು ಉತ್ತಮಪಡಿಸುತ್ತಿದ್ದನು. 'ಕೇರಳ ಪಾಣಿನೀಯ'ವು ವಿಶ್ಲೇಷಣ ವಿಧಾನವನ್ನು ಅನುಸರಿಸುವುದಿಲ್ಲ; ಅದರಲ್ಲಿ ಉದ್ಧರಿಸಿರುವ ಪ್ರಾಚೀನ ಕಾವ್ಯ ಪ್ರಯೋಗಗಳು ಗುಂಡರ್ಟ್ ಅವರ ಗ್ರಂಥದಲ್ಲಿ ಇರುವಷ್ಟು ವಿಪುಲವಾಗಿಲ್ಲ. ರೆ॥ ಮ್ಯಾಥನ್ ರೂಢಿಯಲ್ಲಿರುವ ಶಬ್ದರೂಪಗಳಿಗೆ ಎಷ್ಟು ಗಮನವನ್ನು ಕೊಟ್ಟಿರುವರೋ ಅಷ್ಟನ್ನು ನಮ್ಮ ಗ್ರಂಥಕರ್ತನು ವಿನಿಯೋಗಿಸಿಲ್ಲ. ಮುಖ್ಯವಾಗಿ ತಮಿಳು ಮತ್ತು ಮಲಯಾಳಗಳ ಭಾಷಾ ವೈಲಕ್ಷಣ್ಯಗಳನ್ನು ತುಲನಾತ್ಮಕವಾಗಿ ವಿವೇಚನೆ ಮಾಡಿರುವ ಸುದೀರ್ಘವಾದ ಪೀಠಿಕಾ ಪ್ರಕರಣವು ಗ್ರಂಥಕ್ಕೆ ಸೇರ್ಪಡೆಯಾಗಿರುವ ಗಣ್ಯವಾದ ಹೆಚ್ಚಿನ ಭಾಗ. ಇದರಲ್ಲಿ ಮಲಯಾಳಂ ಭಾಷೆ ಒಂದು ಸ್ವತಂತ್ರ ಭಾಷೆಯಾಗಿ ವಿಕಾಸಗೊಂಡು ಬೆಳೆದು ಬಂದಿರುವುದನ್ನೂ ತಮಿಳಿನೊಂದಿಗೆ ಅದು ಹೊಂದಿರುವ ಸಂಬಂಧವನ್ನೂ ಚರ್ಚಿಸಿದೆ.

ಒಂದು ಕಾಲದಲ್ಲಿ ರಾಜರಾಜವರ್ಮನ ವಿದ್ಯಾರ್ಥಿಯೂ ಸಹೋದ್ಯೋಗಿಯಾಗಿಯೂ ಆಗಿದ್ದ ಪಿ.ಕೆ. ನಾರಾಯಣ ಪಿಳ್ಳೆ (ಈತ ಅನಂತರ ತಿರುವಾಂಕೂರು ಸಂಸ್ಥಾನದಲ್ಲಿ ಉಚ್ಚನ್ಯಾಯಾಲಯದ ನ್ಯಾಯಾಧೀಶನಾದನು) ಹೊಸ ಪರಿಷ್ಕೃತ ಮುದ್ರಣಕ್ಕೆ ಬರೆದಿರುವ ಘನವಾದ ಮುನ್ನುಡಿಯಲ್ಲಿ ಈ ಮಹಾಕೃತಿಯನ್ನು ಉತ್ಕೃಷ್ಟ ರೀತಿಯಲ್ಲಿ ಮೌಲ್ಯಮಾಪನ ಮಾಡಿರುವುದನ್ನು ಕಾಣುತ್ತೇವೆ: "ವರ್ಣಮಾಲೆಯಿಂದ ಹಿಡಿದು ರೂಪನಿಷ್ಪತ್ತಿಯವರೆಗೆ ಸರ್ವಸಾಮಾನ್ಯ ಲಕ್ಷಣವಾಗಿ ವಿವರಿಸುವ ಆತನ ಅಸಾಧಾರಣ ಸಾಮರ್ಥ್ಯ ಹಾಗೂ ಸೂಕ್ಷ್ಮಪರೀಕ್ಷಣ ಶಕ್ತಿ, ಇವುಗಳಿಗೆ ಒಳಗಾಗದ ಯಾವ ಒಂದು ವ್ಯಾಕರಣ ವಿಚಾರವೂ ಇಲ್ಲ. ಆತನು ಅನೇಕ ಹೊಸ ವಿಚಾರಗಳನ್ನು ತಿಳಿಸಿದ್ದಾನೆ; ಹಾಗೂ ಅನೇಕ ವಿಚಾರಗಳನ್ನು ಹೊಸ ರೀತಿಯಲ್ಲಿ ಹೇಳಿದ್ದಾನೆ. ಹಿಂದಿನ ವ್ಯಾಕರಣಕಾರರು ಸಂಸ್ಕೃತದ ಮಾರ್ಗವನ್ನು ಅನುಸರಿಸಿ ಶಬ್ದರಾಶಿಯನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದರು; ಈ ಕ್ರಮವನ್ನು ಬಿಟ್ಟು ಐದು ವರ್ಗಗಳಾಗಿ ವಿಂಗಡಿಸಿರುವುದು ಇನ್ನೊಂದು ಸ್ವೋಪಜ್ಞ ವಿಚಾರ... ಪಾಣಿನಿಯ ನಿರೂಪಣಾಕ್ರಮ ಚಾರಿತ್ರಿಕವಾಗಿರುವುದಕ್ಕಿಂತ ಹೆಚ್ಚಾಗಿ ತರ್ಕಬದ್ಧವಾಗಿದೆ. ಅವನು ಒಂದು ಮೃತ ಭಾಷೆಯ ವಿಚಾರವನ್ನು ನಿರ್ವಹಿಸುತ್ತಿದ್ದುದರಿಂದ ಬಹುಶಃ ಅದು ಹೇಗಿದ್ದರೂ ಬಾಧಕವಿಲ್ಲ.

ಆದರೆ, ಪೂರ್ವದಲ್ಲಿ ಅನೇಕ ಏಳುಬೀಳುಗಳಿಗೆ ಒಳಗಾಗಿ, ದಿನದಿನಕ್ಕೆ ವಿಸ್ತಾರಗೊಂಡು ಬೆಳೆಯುತ್ತಿರುವ ಮಲಯಾಳದಂತಹ ಭಾಷೆಗೆ ಅಂಥ ನೆಲೆಗಟ್ಟು ಅಷ್ಟೇ ಸರಿಸಮನಾಗಿ ಕೂಡಿಬರುವುದೆ? ಆದ್ದರಿಂದ, ಆ ಬಗೆಯ ನೆಲೆಗಟ್ಟನ್ನು ಪೂರ್ತಿಯಾಗಿ ಪುನರ್ವಿರಚಿಸಿರುವುದನ್ನು, ತರ್ಕಪದ್ಧತಿಯನ್ನೇ ಕೈಬಿಡದಿದ್ದರೂ ತರ್ಕಬದ್ಧತೆಗೆ ಕಟ್ಟುಬೀಳದೆ ಅದಕ್ಕೆ ಮೇಲುಗೈ ಆಗಿ ಚಾರಿತ್ರಿಕ ದೃಷ್ಟಿಯನ್ನು ಇಟ್ಟುಕೊಂಡಿರುವುದನ್ನು ನಾವು ಈ ಪರಿಷ್ಕೃತ ಮುದ್ರಣದಲ್ಲಿ ಕಾಣುತ್ತೇವೆ... ನಮ್ಮ ಭಾಷೆಯ ವ್ಯಾಸಂಗಕ್ಕೆ ಲಭ್ಯವಾಗಿರುವ ಈ ಅಮೂಲ್ಯ ಕೊಡುಗೆಯ ಬಗೆಗೆ ನಾವು ಹೆಮ್ಮೆ ಪಡಬಹುದು; ಮತ್ತು ಈ ಅತ್ಯುತ್ಕೃಷ್ಟವಾದ ಪ್ರಕಟನೆಯ ಮೂಲಕ ಮಲಯಾಳವನ್ನು ಆಡುವ ಜನದ ಮೇಲೆ ಗುರುತರವಾದ ಋಣ ಭಾರವನ್ನು ಹೊರಿಸಿರುವುದಕ್ಕಾಗಿ ನಾವು ಗ್ರಂಥಕರ್ತನನ್ನು ಅಭಿನಂದಿಸಬಹುದು."

ಮುಂಚಿನ ಮುದ್ರಣಕ್ಕೆ ಗ್ರಂಥಕರ್ತನ ಸೋದರಮಾವ ಕೇರಳವರ್ಮನು ಮುನ್ನುಡಿಯನ್ನು ಬರೆದಿದ್ದನು. ಈ ಎರಡು ವ್ಯಾಕರಣ ರೂಪಗಳನ್ನೂ ಆ ಮಹನೀಯನಿಗೆ ಅರ್ಪಣೆ ಮಾಡಿದೆ. ಕೆಲವು ದೋಷಗಳೂ ಕುಂದುಕೊರತೆಗಳೂ ಇದ್ದರೂ ಕೂಡ ಮಲಯಾಳಂ ವ್ಯಾಕರಣದ ಮೇಲೆ ರಚಿತವಾದ ಇತರ ಎಲ್ಲ ಕೃತಿಗಳನ್ನೂ 'ಕೇರಳ ಪಾಣಿನೀಯ'ವು ಹಿಂದಕ್ಕೆ ಹಾಕಿಬಿಟ್ಟಿದೆ; ಆರು ದಶಕಗಳು ಕಳೆದ ಮೇಲೂ ವ್ಯಾಕರಣ ಪ್ರಪಂಚದಲ್ಲಿ ಗ್ರಂಥರಾಜನಾಗಿ ಮೆರೆಯುತ್ತಿದೆ.

ಇತರ ವ್ಯಾಕರಣ ಕೃತಿಗಳು

'ಕೇರಳ ಪಾಣಿನೀಯ'ದ ಎರಡು ಮುದ್ರಣಗಳ ನಡುವೆ ೨೧ ವರ್ಷಗಳ ನಂತರವಿದ್ದಿತು ಎಂಬುದನ್ನು ನಾವು ಈ ಕಾಲಾವಧಿಯ ಉದ್ದಕ್ಕೂ ರಾಜರಾಜವರ್ಮನ ಮನಸ್ಸನ್ನು ಮಲಯಾಳಂ ವ್ಯಾಕರಣದ ವಿಷಯ ಆಕ್ರಮಿಸಿ ಕೊಂಡಿತ್ತು. 'ಕೇರಳ ಪಾಣಿನೀಯ'ವು ವಿದ್ವತ್‌ಪೂರ್ಣವಾದ ಕೃತಿ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಶಾಲಾ ವಿದ್ಯಾಥಿಗಳ ದೃಷ್ಟಿಯಿಂದ ಇನ್ನೂ ಸುಲಭವಾದ ವ್ಯಾಕರಣ ಗ್ರಂಥಗಳು ಅಗತ್ಯವಾಗಿದ್ದುವು. ಆದ್ದರಿಂದ ತಂಪುರಾನನು ಆ ತೆರಪನ್ನು ತುಂಬಲು ನಿಶ್ಚಯಿಸಿದನು.

ಶಬ್ದ ಶೋಧಿನಿ

'ಶಬ್ದ ಶೋಧಿನಿ' ೧೯೦೨ರಲ್ಲಿ ಪ್ರಕಟವಾಯಿತು; ಮೂರು ತಿಂಗಳ ಕಾಲ ಪಟ್ಟುಹಿಡಿದು ದುಡಿದದ್ದರ ಫಲ ಈ ಕೃತಿ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಕೇರಳ

ಪಾಣಿನೀಯ'ವು ಕಬ್ಬಿಣದ ಕಡಲೆ ಎನಿಸಿತ್ತು. ಆದ್ದರಿಂದ ಅವರಿಗಾಗಿ ಒಂದು ಹೆಚ್ಚು ಸರಳವಾದ ವ್ಯಾಕರಣವನ್ನು ರಚಿಸುವುದು ಗ್ರಂಥಕರ್ತನ ಉದ್ದೇಶವಾಗಿತ್ತು. ಬಹು ತಿಳಿಯಾದ ನಿರೂಪಣೆ ಮತ್ತು ಸಾಮಾನ್ಯತರ ಉದಾಹರಣೆಗಳು, ಇವುಗಳಿಂದಾಗಿ ಕೃತಿ ಜನಪ್ರಿಯವಾಯಿತು. ಧ್ವನಿಶಾಸ್ತ್ರ (phonology), ಶಬ್ದರೂಪ ರಚನಾಶಾಸ್ತ್ರ (morphology), ವಾಕ್ಯರಚನಾ ವಿಧಾನ (syntax), ಮತ್ತು ಶಬ್ದ ನಿಷ್ಪತ್ತಿ ಶಾಸ್ತ್ರ (etymology) ಎಂಬ ನಾಲ್ಕು ಭಾಗಗಳನ್ನುಳ್ಳ ೧೭೫ ಪ್ರಕರಣಗಳಿವೆ ಗ್ರಂಥದಲ್ಲಿ. ಕೆಲವು ಭಾಗಗಳನ್ನು ಪುನರಾವಲೋಕನ ಮಾಡಿ, ಉಪಯುಕ್ತವಾದ ಮಾರ್ಪಾಡುಗಳನ್ನು ಮಾಡಿ, 'ಕೇರಳ ಪಾಣಿನೀಯ'ವನ್ನೇ ಸಾರಾಂಶ ರೂಪದಲ್ಲಿ ಬರೆದದ್ದು ಇದು ಎಂದು ಗ್ರಂಥಕರ್ತನೇ ಹೇಳಿಕೊಂಡಿದ್ದಾನೆ.

ಪ್ರಥಮ ವ್ಯಾಕರಣ

'ಶಬ್ದ ಶೋಧಿನಿ'ಯನ್ನು ಪ್ರಕಟಿಸಿದ ಮೇಲೆ ಕೂಡ, ಇನ್ನೂ ಕೆಳಗಿನ ತರಗತಿಗಳಿಗಾಗಿ ವ್ಯಾಕರಣ ಗ್ರಂಥಗಳು ಆವಶ್ಯಕ ಎಂದು ರಾಜರಾಜವರ್ಮನಿಗೆ ತೋರಿತು. ಸಾರ್ವಜನಿಕ ಶಿಕ್ಷಣದ ನಿರ್ದೇಶಕರು ಕೂಡ ಅಂಥದೇ ಸಲಹೆಯನ್ನು ನೀಡಿದರು. ಹೀಗೆ ಆತ ಇನ್ನೆರಡು ವ್ಯಾಕರಣ ಗ್ರಂಥಗಳನ್ನು ಸಿದ್ಧಪಡಿಸಿದನು; ಇವುಗಳಲ್ಲಿ ಮೊದಲನೆಯದು ಪ್ರಥಮ ವ್ಯಾಕರಣ (೧೯೦೬). ಗ್ರಂಥನಾಮವೇ ಸೂಚಿಸುವಂತೆ, ವಿದ್ಯಾಭ್ಯಾಸದ ಪ್ರಾಥಮಿಕ ಹಂತಕ್ಕೆಂದು ಬರೆದದ್ದು ಈ ವ್ಯಾಕರಣ.

ಮಧ್ಯಮ ವ್ಯಾಕರಣ

ಅದೇ ಮಾದರಿಯಲ್ಲಿ, ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ 'ಮಧ್ಯಮ ವ್ಯಾಕರಣ' ಎಂಬ ಹೆಸರಿನ ಇನ್ನೊಂದು ಗ್ರಂಥವನ್ನು ೧೯೦೭ರಲ್ಲಿ ಸಿದ್ಧಪಡಿಸಲಾಯಿತು. ಈ ಎರಡು ಕೃತಿಗಳಲ್ಲೂ ಮಲಯಾಳಂ ವ್ಯಾಕರಣದ ಮೂಲ ತತ್ವಗಳನ್ನು ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ. ಕಲಿಸುವ ಬೋಧಕರು ಹಾಗೂ ಕಲಿಯುವ ವಿದ್ಯಾರ್ಥಿಗಳು, ಇಬ್ಬರೂ ಈ ವ್ಯಾಕರಣಗಳು ಹೆಚ್ಚು ಉಪಯುಕ್ತ, ಓದಿ ಗ್ರಹಿಸಿಕೊಳ್ಳುವುದಕ್ಕೆ ಸುಲಭ ಎಂಬುದನ್ನು ಕಂಡುಕೊಂಡರು. ಒಂದು ತಿಂಗಳೊಳಗಾಗಿ ಇನ್ನೊಂದು ಮುದ್ರಣವನ್ನು ಪ್ರಕಟಿಸ ಬೇಕಾಯಿತೆಂಬುದನ್ನೂ, ಮಾರನೆಯ ವರ್ಷವೇ ಮೂರನೆಯ ಮುದ್ರಣವನ್ನು ಹೊರತರಬೇಕಾಯಿತು ಎಂಬುದನ್ನೂ ಗಮನಿಸಿದರೆ ಪುಸ್ತಕ ಎಷ್ಟು ಜನಪ್ರಿಯವಾಯಿತು ಎನ್ನುವುದು ವ್ಯಕ್ತವಾಗುತ್ತದೆ.

ಡಾ॥ ಗುಂಡರ್ಟನ ವ್ಯಾಕರಣವು ವಿದ್ವತ್‌ಪೂರ್ಣವಾಗಿದ್ದರೂ ಕೆಲವು ಕುಂದು ಕೊರತೆಗಳಿದ್ದುವು ಅದರಲ್ಲಿ; ಅವು ಏನೆಂದರೆ, ವಸ್ತುವಿಷಯವನ್ನು ಒಂದು ಸರಿಯಾದ ಕ್ರಮದಲ್ಲಿ ಅಳವಡಿಸಿಲ್ಲದಿರುವುದು, ಮತ್ತು ಉಪಯೋಗಿಸಲಾಗಿದ್ದ ಶಾಸ್ತ್ರೀಯ ಪದಗಳು ಸುಲಭವಾಗಿಲ್ಲದಿರುವುದು. 'ಕೇರಳ ಪಾಣಿನೀಯ'ದ ಮುಂಚಿನ ರೂಪದಲ್ಲಿಯೂ ಹಳತಾದ ಪದ್ಧತಿಯ ಕುಂದು ಕೊರತೆಗಳಿದ್ದುವು. 'ಶಬ್ದಶೋಧಿನಿ' ತಕ್ಕಮಟ್ಟಿನ ಪ್ರಮಾಣದಲ್ಲಿ ಇಂಗ್ಲೀಷು ವ್ಯಾಕರಣ ವಿಧಾನವನ್ನು ಅಳವಡಿಸಿಕೊಂಡಿದೆ. 'ಮಧ್ಯಮ ವ್ಯಾಕರಣ'ವನ್ನು ವಿಶ್ಲೇಷಣ ವಿಧಾನದಲ್ಲಿ ಬರೆಯಲಾಗಿದ್ದು, 'ಪ್ರಥಮ ವ್ಯಾಕರಣ'ವನ್ನು ಸಂಶ್ಲೇಷಣ ವಿಧಾನದಲ್ಲಿ ಬರೆದಿದೆ. ಒಟ್ಟಿನಲ್ಲಿ, ಕೇರಳದ ಪಾಣಿನಿ ಮಲಯಾಳಿಗಳಿಗಾಗಿ ಮಲಯಾಳಂ ವ್ಯಾಕರಣವನ್ನು ಹೆಚ್ಚು ಸುಲಭಗ್ರಾಹ್ಯವಾಗಿ, ತಿಳಿಯಾದ ರೀತಿಯಲ್ಲಿ, ಬರೆದಿಡಲು ಸಮರ್ಥನಾದನು.

ಮಣಿದೀಪಿಕ

ಮಲಯಾಳಂ ಸಾಹಿತ್ಯದ ಕೆಲವು ನಿರ್ದಿಷ್ಟ ಪ್ರಕಾರಗಳಾದ ಚಂಪೂ, ಅಟ್ಟಕ್ಕಥಾ ಮುಂತಾದವುಗಳಲ್ಲಿಯ ಸಾಹಿತ್ಯ ಕೃತಿಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮೆಚ್ಚಿಕೊಳ್ಳಬೇಕಾದರೆ ಸಂಸ್ಕೃತ ಭಾಷೆಯಲ್ಲಿ ಒಳ್ಳೆಯ ಪರಿಜ್ಞಾನ ಇರಬೇಕಾದದ್ದು ಅತ್ಯಗತ್ಯ, ಆದ್ದರಿಂದ ಮಲಯಾಳ ಭಾಷೆಯ ವಿದ್ವಾಂಸನಿಗೆ ಸಂಸ್ಕೃತ ವ್ಯಾಕರಣದ ತಕ್ಕಮಟ್ಟಿನ ಜ್ಞಾನ ಇರಬೇಕಾಗುತ್ತದೆ; ಆದರೆ ಪಾಣಿನಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಎಲ್ಲ ವಿದ್ವಾಂಸರಿಗೂ ಕಷ್ಟ ಸಾಧ್ಯವೆನಿಸಿತ್ತು. ಹೀಗಿರುತ್ತ, ಮಲಯಾಳ ಭಾಷೆಯಲ್ಲಿ ಬರೆದ ಸಂಸ್ಕೃತದ ಸರಳ ವ್ಯಾಕರಣವು ಬಹಳ ಕಾಲದ ಅಗತ್ಯವನ್ನು ಪೂರೈಸುವುದಾಗಿತ್ತು. ರಾಜರಾಜವರ್ಮನು ಈ ಅಗತ್ಯವನ್ನು ಬೇಗನೆ ಮನಗಂಡನು, ಮತ್ತು ಅಂಥ ಪುಸ್ತಕವೊಂದನ್ನು ರಚಿಸಲು ಸಂಕಲ್ಪ ಮಾಡಿದನು. ಏನೇ ಆದರೂ, ೧೯೦೮ರಲ್ಲಿ ಮಾತ್ರ ಇದನ್ನು ನೆರವೇರಿಸಲು ಸಾಧ್ಯವಾಯಿತು. ಮೂರು ತಿಂಗಳ ಕಾಲ ಎಡೆಬಿಡದೆ ದುಡಿದು, 'ಮಣಿದೀಪಕ'ವನ್ನು ಹೊರತಂದನು. 'ಮಣಿಪ್ರವಾಳ' ಎಂಬ ಮಾತಿನಲ್ಲಿ ಇರುವಂತೆ 'ಮಣಿ' ಎಂದರೆ ಸಂಸ್ಕೃತ. ವೈಯಾಕರಣ ತುರವೂರು ನಾರಾಯಣ ಶಾಸ್ತ್ರಿಗಳು ಹಸ್ತಪ್ರತಿಯನ್ನು ಪರಿಶೀಲಿಸಿದರು; ಕೇರಳವರ್ಮ ಅದನ್ನು ಅನುಮೋದಿಸಿದರು; ಪುಸ್ತಕವನ್ನು ಕೇರಳ ವರ್ಮನಿಗೇ ಅರ್ಪಣೆ ಮಾಡಲಾಯಿತು. ಅಂದಿನಿಂದೀಚೆಗೆ ಮಲಯಾಳಂ ಭಾಷಾ ವಿದ್ಯಾರ್ಥಿಗಳಿಗೆ ಈ ಗ್ರಂಥದ ಮೂಲಕ ಸಂಸ್ಕೃತ ವ್ಯಾಕರಣದ ಸೂಕ್ಷ್ಮ ವಿಚಾರಗಳಿಗೆ ಪ್ರವೇಶ ದೊರೆಯುವಂತಾಗಿದೆ.

ಲಘುಪಾಣಿನೀಯಂ

'ಮಣಿದೀಪಕವನ್ನು' ಪೂರ್ಣಮಾಡಿದ ನಾಲ್ಕು, ಅಥವಾ ಐದು ತಿಂಗಳು ಕಳೆದ ಮೇಲೆ, ಪಾಣಿನಿ ಇಟ್ಟ ಹೆಜ್ಜೆಯಲ್ಲಿ ಸಾಗಿ ಒಂದು ಸರಳ ಸಂಸ್ಕೃತ ವ್ಯಾಕರಣವನ್ನು ಬರೆಯುವ ಯೋಜನೆಯೊಂದನ್ನು ಎ.ಆರ್. ಪ್ರಾರಂಭಿಸಿದನು. ಈ ಮುಖ್ಯವಾದ ಕಾರ್ಯವನ್ನು ಕೈಗೊಂಡದ್ದರ ವಿಷಯದಲ್ಲಿ ಕೇರಳವರ್ಮನಿಂದ ಗ್ರಂಥಕರ್ತನು ನಿರಂತರವಾಗಿ ಪಡೆದ ಪ್ರೋತ್ಸಾಹ ಹಾಗೂ ಸಲಹೆಗಳ ಬಗೆಗೆ ದಿನಚರಿಯ ಪುಟಗಳಲ್ಲಿ ಉಲ್ಲೇಖಗಳಿವೆ. ಐದು ತಿಂಗಳ ಕಾಲದಲ್ಲಿ ಕೆಲಸ ಮುಗಿಯಿತು (೧೯೧೦). ಸಂಸ್ಕೃತದಲ್ಲಿರುವ ಪ್ರಸ್ತಾವನೆ, ಇಂಗ್ಲಿಷಿನಲ್ಲಿರುವ ಮುನ್ನುಡಿ, ಇವು ಗ್ರಂಥಕರ್ತನ ಉದ್ದೇಶವನ್ನು ವ್ಯಕ್ತಪಡಿಸುತ್ತವೆ. ಮುನ್ನುಡಿಯಿಂದ ಒಂದು ಭಾಗವನ್ನು ಈ ಕೆಳಗೆ ಉದ್ಧರಿಸಿಕೊಟ್ಟಿದೆ:

"ಪಾಣಿನಿ ಪ್ರಾಚೀನ ಕಾಲದಲ್ಲಿ ಹೇಗೊ ಇಂದಿಗೂ ಹಾಗೆಯೆ ತನ್ನ ಸೂತ್ರಗಳ ಪರಿಪೂರ್ಣತೆ ಮತ್ತು ಸಮಗ್ರತೆಯ ಗುಣಗಳಿಂದಾಗಿಯೇ ಸರಿದೊರೆಯಿಲ್ಲದ ವೈಯಾಕರಣನಾಗಿ ಉಳಿದು ಬಂದಿದ್ದಾನೆ; ಆದರೆ, 'ಅಷ್ಟಾಧ್ಯಾಯಿ'ಯನ್ನು ಶ್ರಮಪಟ್ಟು ವ್ಯಾಸಂಗ ಮಾಡಬೇಕೆಂದು ಹೊರಟು ಅದನ್ನು ಮುಂದುವರಿಸಲು ಅಗತ್ಯವಾದ ಬಿಡುವು ಮತ್ತು ತಪಸ್ವಿಯ ನಿಶ್ಚಲ ಬುದ್ಧಿಗಳನ್ನು ಹೊಂದಿರುವ ಭಾಗ್ಯವಿಲ್ಲದ ಯಾರೇ ಆಗಲಿ ಆ ಸೂತ್ರಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಬಯಸಿದರೆ ಅವನ ಮುಂದೆ ಅನೇಕ ಕ್ಲೇಶಗಳನ್ನು ಅವು ತಂದೊಡ್ಡುತ್ತವೆ; ಅಲ್ಲದೆ, ಮಹಾ ವ್ಯಾಖ್ಯಾನಕಾರರಾದ ಪತಂಜಲಿ, ವಾರ್ತಿಕಾಕಾರ ಮತ್ತು ಕಾರಿಕೆಗ ಕರ್ತೃ, ಇವರುಗಳೆಲ್ಲರೂ ಪಾಣಿನಿಯ ಆಶಯವನ್ನು ಶಬ್ದಜಾಲದಲ್ಲಿ ಮರೆಮಾಡಿಬಿಟ್ಟು 'ಅಷ್ಟಾಧ್ಯಾಯಿ'ಯ ವ್ಯಾಸಂಗಕ್ಕೆ ಇನ್ನಷ್ಟು ಕ್ಲೇಶಗಳನ್ನು ಸೇರಿಸಿದ್ದಾರೆ. ಹಾಗಿದ್ದರೂ ಕೂಡ, ಪಾಣಿನಿಯ ವ್ಯಾಕರಣ ತತ್ತ್ವಗಳನ್ನು ಸರಳಗೊಳಿಸಿ, ಅವನ ವ್ಯಾಕರಣಕ್ಕೂ ಸರ್ವಸಾಮಾನ್ಯವಾಗಿ ಸಾಧಾರಣಮಟ್ಟದ ಪ್ರಾಚೀನ ಸಾಹಿತ್ಯಕ್ಕೂ ಒಂದು ಪ್ರವೇಶಿಕೆಯಾಗುವ ರೀತಿಯಲ್ಲಿ ಅವನ ಅನುಪಮವಾದ ಸೂತ್ರಗಳ ಆಧಾರದ ಮೇಲೆ ಸಂಸ್ಕೃತದಲ್ಲಿಯೇ ಒಂದು ಪ್ರಾಥಮಿಕ ವ್ಯಾಕರಣವನ್ನು ಸಿದ್ಧಪಡಿಸುವುದು ಸಾಧ್ಯವಾದಲ್ಲಿ ಅಂಥ ಒಂದು ಪ್ರಯತ್ನವನ್ನು ಮಾಡುವುದು ಪ್ರಯೋಜನವಾಗುವುದು ಎಂದು ನನಗೆ ಯಾವಾಗಲೂ ತೋರಿದೆ."

ಇಂಥ ಪ್ರಯತ್ನ ಮಾಡುವುದು ಯೋಗ್ಯವಾದದ್ದು ಎನ್ನುವುದು ಅನುಭವ ಸಿದ್ಧವಾಗಿದೆ. ಭಾರತವೆಲ್ಲದರಲ್ಲಿ ಮಾತ್ರವಲ್ಲ, ಪರದೇಶಗಳಲ್ಲಿ ಕೂಡ ಇದು ವ್ಯಾಕರಣ ವಿದ್ಯಾರ್ಥಿಗಳ ಹಾಗೂ ವ್ಯಾಕರಣ ವಿದ್ವಾಂಸರ ಅಭಿಪ್ರಾಯವಾಗಿದೆ.

ಜರ್ಮನಿಯಲ್ಲಿಯ ಬಾನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಯಾಕೋಬಿ (Jacobi) ಮಹಾಶಯನು ಗ್ರಂಥಕರ್ತನಿಗೆ ಹೀಗೆ ಬರೆದನು:

"ನನ್ನ ವಿದ್ಯಾರ್ಥಿಗಳೊಂದಿಗೆ ಪಾಣಿನಿಯ ವ್ಯಾಕರಣವನ್ನು ಅಧ್ಯಯನ ಮಾಡಬೇಕಾದಾಗ– ಮುಂದಿನ ಬೇಸಗೆಯಲ್ಲಿ ಹಾಗೆ ಮಾಡುವೆನು, 'ಸಿದ್ಧಾಂತ ಕೌಮುದಿ'ಯ ಬದಲು ನಿಮ್ಮ ಕೃತಿಯನ್ನೇ ಉಪಯೋಗಿಸುತ್ತೇನೆ; ಅದರ ಉತ್ಕೃಷ್ಟತೆಯ ಬಗೆಗೆ ನನ್ನ ನಂಬಿಕೆ ದೃಢವಾಗಿದೆ."

ಮುಂಬಯಿಯ ವಿಲ್ಸನ್ ಕಾಲೇಜಿನ ಪ್ರೊ॥ ಎಂ.ಎಂ. ಭದ್ಕಮರ್ ಹೀಗೆ ಬರೆದನು:

"ಗ್ರಂಥದ ಯೋಜನೆ ಉತ್ಕೃಷ್ಟವಾಗಿದೆ; ಸಂಸ್ಕೃತ ವ್ಯಾಕರಣ ಜ್ಞಾನವನ್ನು ಅದು ಬಹಳ ಸುಲಭವಾಗಿ ದೊರಕಿಸಿಕೊಡುವುದಲ್ಲದೆ, ವ್ಯಾಕರಣವಿದ್ಯಾರ್ಥಿಗೆ ಭಾಷೆಯ ಪರಿಚಯ ಮಾಡಿಕೊಟ್ಟು ಅವನನ್ನು ಪಾಣಿನಿಯ ಮನೋ ಮಂದಿರದೊಳಕ್ಕೆ ಕರೆದೊಯ್ಯುವ ಗುರಿ ಇಟ್ಟುಕೊಂಡಿದೆ."

ಪುಣೆಯ ಡೆಕ್ಕನ್ ಕಾಲೇಜಿನ ಪ್ರೊ॥ ಆರ್.ಸಿ. ರಾನಡೆ ಈ ಪ್ರಶಸ್ತಿಯನ್ನು ನೀಡಿದರು;

"ಪುಸ್ತಕವನ್ನು ಓದುತ್ತ ಹೋದಂತೆ, ಪಾಣಿನಿಯ ಸೂತ್ರಗಳನ್ನು ಮತ್ತೊಮ್ಮೆ ಒಂದು ಹೊಸ ಅಚ್ಚಿನಲ್ಲಿ ಅಳವಡಿಸಿ ಹೊಸದಾಗಿ ರೂಪಿಸಿರುವುದನ್ನು ಕಂಡು ನಾನು ಬೆರಗಾಗಿಹೋಗಿದ್ದೇನೆ... ಪುಸ್ತಕಕ್ಕೆ ನೀವು ಸೇರಿಸಿರುವ ಅನುಬಂಧ ಸೊಗಸಾಗಿದೆ; ನಿಮ್ಮಂತಹ ವಿದ್ವಾಂಸರ ಕೈಯಲ್ಲಿ ಸಂಸ್ಕೃತ 'ಮೃತ' ಭಾಷೆ ಎಂಬ ಕಲಂಕವನ್ನು ಇನ್ನು ಮುಂದೆ ಹೊರಬೇಕಾಗಿಲ್ಲ ಎನ್ನುವುದನ್ನು ಅದು ತೋರಿಸಿಕೊಡುತ್ತದೆ. ಅದಕ್ಕೆ ಜೀವಂತಿಕೆಯ ತುಂಬು ಹೊಸತನ ಮತ್ತೊಮ್ಮೆ ಪ್ರಾಪ್ತವಾಗಿದೆ ಎಂದು ಯಾರಿಗಾದರೂ ನಿಜವಾಗಿ ಅನ್ನಿಸುತ್ತದೆ."

'ಅಷ್ಟಾಧ್ಯಾಯಿ'ಯ ೩೯೭೮ ಸೂತ್ರಗಳನ್ನು ೧೯೫೪ಕ್ಕೆ ಇಳಿಸಲಾಯಿತು. ಗ್ರಂಥಕರ್ತೃ 'ಲಘು ಪಾಣಿನಿಯ'ದ ಎರಡನೆಯ ಭಾಗವನ್ನೂ ಪ್ರಕಟಿಸಿದನು (೧೯೧೨); ಇದರಲ್ಲಿ 'ವೈದಿಕ ಕಾಂಡ', 'ಸ್ವರಕಾಂಡ' ಹಾಗೂ ಭಾಷೆಯನ್ನು ಕುರಿತು ಪೌರ್ವಾತ್ಯ ಪಾಶ್ಚಾತ್ಯ ಪಾಂಡಿತ್ಯಾಧಿಕಾರಿಗಳ ಚರ್ಚೆ– ಇವು ಅಡಕವಾಗಿವೆ.

ಸಾಹಿತ್ಯ ಶಾಸ್ತ್ರ

ಭಾಷಾ ವ್ಯಾಸಂಗಕ್ಕೆ ಅತ್ಯಂತ ಮುಖ್ಯವಾದ ಸಾಧನ ಸಲಕರಣೆಗಳೆಂದರೆ, ವ್ಯಾಕರಣಗಳು ಮತ್ತು ನಿಘಂಟುಗಳು. ಈವರೆಗೆ, ವ್ಯಾಕರಣ ಕ್ಷೇತ್ರಕ್ಕೆ ರಾಜರಾಜ

ವರ್ಮನು ನೀಡಿರುವ ಕೊಡುಗೆಗಳನ್ನು ಕುರಿತು ವಿವೇಚಿಸಿದ್ದೇವೆ. ಬೇಯ್ಲಿ ಮತ್ತು ಗುಂಡರ್ಟ್ ಅವರ ಕೃತಿಗಳಿಗಿಂತಲೂ ಮೇಲಾದ ಒಂದು ನಿಘಂಟನ್ನು ರಚಿಸಬೇಕೆಂಬ ತೀವ್ರಾಪೇಕ್ಷೆ ಆತನಿಗಿದ್ದಿತು. ಆದರೆ ಇತರ ಕಾರ್ಯಗಳಲ್ಲಿ ಎಷ್ಟರಮಟ್ಟಿಗೆ ನಿರತನಾಗಿದ್ದನೆಂದರೆ ಈ ಕೆಲಸಕ್ಕೆ ಅಗತ್ಯವಾಗಿದ್ದ ಕಾಲಾವಕಾಶವನ್ನು ದೊರಕಿಸಿಕೊಳ್ಳಲು ಆತನಿಗೆ ಆಗಲಿಲ್ಲ. ಸಾಹಿತ್ಯವನ್ನು ನಿಷ್ಠೆಯಿಂದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ ಲೇಖನಕಲೆಯನ್ನು ಅಭ್ಯಾಸ ಮಾಡುವವರಿಗೂ ನೆರವಾಗುವಂತಹ ಕೆಲವು ಆಧಾರಗ್ರಂಥಗಳನ್ನು ಬರೆಯಬೇಕಾದದ್ದು ಹೆಚ್ಚು ಮುಖ್ಯ ಎಂದು ಆತನು ಆಲೋಚಿಸಿದನು. ಕಾವ್ಯಮೀಮಾಂಸೆ ಮತ್ತು ಛಂದಶಾಸ್ತ್ರಗಳು ಪದ್ಯರಚನೆಗೆ ಸಂಬಂಧಪಟ್ಟ ವಿಷಯಗಳನ್ನು ವಿವೇಚಿಸುವ ಕಾವ್ಯಾಂಗಗಳು– ಈ ಕ್ಷೇತ್ರಕ್ಕೆ ಪೂರ್ವ ಪಶ್ಚಿಮ ದೇಶಗಳೆರಡೂ ಸಮೃದ್ಧವಾದ ಕಾಣಿಕೆಯನ್ನು ನೀಡಿವೆ. ರಾಜರಾಜವರ್ಮನಿಗೆ ಎರಡರಲ್ಲಿಯೂ ಒಳ್ಳೆಯ ಅಭಿನಿವೇಶವಿದ್ದು, ಎರಡರ ಉತ್ತಮಾಂಶಗಳನ್ನು ಹೀರಿಕೊಳ್ಳಬೇಕೆಂಬುದು ಆತನ ನಿಲುವು. ಮಲಯಾಳಂ ಭಾಷೆಯ ಗದ್ಯ ಪದ್ಯ ರಚನೆಗಳು ಪರಿಕರ ಮತ್ತು ರೂಪಗಳ ವಿಷಯದಲ್ಲಿ ಏಕಪ್ರಕಾರದ ಮಾರ್ಗಾನುಸರಣೆಯನ್ನು ಹೊಂದಿರ ಬೇಕಾದ ಅವಶ್ಯಕತೆಯೇನೂ ಇಲ್ಲ, ಎನ್ನುವುದೂ ಆತನ ಭಾವನೆಯಾಗಿತ್ತು. ಮಲಯಾಳ ವಾಙ್ಮಯದಲ್ಲಿ ಗದ್ಯಕ್ಕಿಂತ ಪದ್ಯಕ್ಕೆ ದೀರ್ಘವಾದ ಪರಂಪರೆ ಇದ್ದಿತು; ಆದ್ದರಿಂದ ಪದ್ಯ ರಚನೆಗೆ ಸಂಬಂಧಪಟ್ಟಂತೆ ಸಂಸ್ಕೃತ ಕಾವ್ಯಮೀಮಾಂಸೆ ಮತ್ತು ಛಂದಸ್ಸುಗಳ ಕಡೆಗೆ ಅದರ ಒಲೆತ ಇದ್ದರೆ, ಅದು ಸಮರ್ಥನೀಯವೇ ಆಗಿದ್ದಿತು. ಇದರಿಂದಾಗಿ ಕೃತಿಯ ವಸ್ತುವಿಗೆ ಮಾತ್ರ ಬಾಧಕ ಬರಕೂಡದು, ಯಾವುದೇ ಬಗೆಯ ನಿರ್ಬಂಧವೂ ಇರಕೂಡದು, ಅಷ್ಟೆ. ಇದು ಹೇಗಿದ್ದರೂ, ರೂಪ ಮತ್ತು ವಸ್ತು ಇವೆರಡರ ದೃಷ್ಟಿಯಿಂದಲೂ ಮಲಯಾಳಿ ಗದ್ಯವು ಇಂಗ್ಲಿಷಿನತ್ತ ವಾಲುವುದರಿಂದ ಅದಕ್ಕೆ ತಕ್ಕಮಟ್ಟಿನ ಪ್ರಯೋಜನವೇ ಆಗುವುದು. ಈ ಮನಃಪ್ರವೃತ್ತಿ ಎ.ಆರ್. ಬರೆದ 'ಭಾಷಾ ಭೂಷಣಂ', 'ವೃತ್ತಮಂಜರಿ' ಮತ್ತು 'ಸಾಹಿತ್ಯ ಸಾಹ್ಯಮ್' ಎಂಬೀ ಮೂರು ಗ್ರಂಥಗಳಲ್ಲಿ ಸ್ಪಷ್ಟಗೋಚರವಾಗಿದೆ.

ಭಾಷಾ ಭೂಷಣಂ

೧೯೦೨ರಲ್ಲಿ ಪ್ರಕಟವಾದ 'ಭಾಷಾ ಭೂಷಣ'ವು ಕಾವ್ಯದ ಅಭ್ಯಾಸ ಮತ್ತು ಸ್ವರೂಪವನ್ನು ಕುರಿತ ಕೈಪಿಡಿ. 'ಭೂಷಣ' ಎಂದರೆ 'ಅಲಂಕಾರ' ಅಥವಾ ಒಡವೆ, ತೊಡಿಗೆ. ಕಾವ್ಯಮೀಮಾಂಸೆ (poetics) ಎನ್ನುವುದಕ್ಕೆ ಸಂಸ್ಕೃತದ

ಪರ್ಯಾಯಪದ 'ಅಲಂಕಾರಶಾಸ್ತ್ರ'. 'ಭಾಷಾ ಭೂಷಣ'ದ ಪೀಠಿಕೆಯಲ್ಲಿ ಕೃತಿ ಹುಟ್ಟಿದ ಸಂದರ್ಭವನ್ನು ಕುರಿತು ಗ್ರಂಥಕರ್ತನು ವಿವರಗಳನ್ನು ನೀಡಿದ್ದಾನೆ. ಪೀಠಿಕೆಯಿಂದ ಆಯ್ದ ಪ್ರಸಕ್ತ ಭಾಗಗಳನ್ನು ಇಲ್ಲಿ ಎತ್ತಿಕೊಟ್ಟಿದೆ:

"ತಿರುವನಂತಪುರದ ಕಾಲೇಜಿನಲ್ಲಿ ಭಾರತೀಯ ಭಾಷೆಗಳನ್ನು ಬೋಧಿಸುವ ಹೊಣೆಗಾರಿಕೆಯನ್ನು ನನಗೆ ವಹಿಸಿದಾಗ, 'ಅಲಂಕಾರ ಶಾಸ್ತ್ರ'ವನ್ನು ಕುರಿತ ಗ್ರಂಥ ದಾರಿದ್ರ್ಯವನ್ನು ನಾನು ಅರಿತುಕೊಂಡೆನು. ಮದರಾಸು ವಿಶ್ವವಿದ್ಯಾನಿಲಯದ ಪ್ರಶ್ನೆಪತ್ರಿಕೆಗಳು ಪರೀಕ್ಷಾರ್ಥಿಗಳಿಂದ ಉಚ್ಚಮಟ್ಟದ ಉತ್ತರಗಳನ್ನು ನಿರೀಕ್ಷಿಸುತ್ತಿದ್ದುವು... ಆದ್ದರಿಂದ ಬಿ.ಎ. ತರಗತಿಗಳ ವಿದ್ಯಾರ್ಥಿಗಳು ಕಾವ್ಯಮೀಮಾಂಸೆಯಲ್ಲಿ ಸ್ಥೂಲವಾದ ಜ್ಞಾನವನ್ನು ಪಡೆದಿರತಕ್ಕದ್ದು ಅಗತ್ಯವೆಂದು ಭಾವಿಸಲಾಯಿತು. ಮಲಯಾಳದಲ್ಲಿ ಬೋಧನೆಗೆ ಯೋಗ್ಯವಾದ ಸಹಾಯಕ ಸಾಹಿತ್ಯ ಇಲ್ಲದಿದ್ದುದರಿಂದ ನಾನು ಸಂಸ್ಕೃತ ಪುಸ್ತಕಗಳ ಸಹಾಯದಿಂದ ವಿಷಯವನ್ನು ಬೋಧಿಸಲು ತೊಡಗಿದೆ. ಆದರೆ ಇದಿಷ್ಟು ಸಾಲದೇನೋ ಎಂದು ನನಗೆ ಬೇಗನೆಯೇ ಕಂಡುಬಂದಿತು... ಆದ್ದರಿಂದ ಎರಡು ವರ್ಷಗಳ ಕಾಲ (೧೯೦೦, ೧೯೦೧) ಬಿ.ಎ. ತರಗತಿಗಳಿಗೆಂದು ನಾನು ಕ್ರಮವಾಗಿ ಸಂಸ್ಕೃತ ಪ್ರಮಾಣ ಗ್ರಂಥಗಳಿಂದ ಆಯ್ದ ಭಾಗಗಳನ್ನು ಭಾಷಾಂತರಗಳನ್ನೂ ವಿಪುಲವಾದ ಟಿಪ್ಪಣಿಗಳನ್ನೂ ಸಿದ್ಧಪಡಿಸಿದೆನು. ಆಮೇಲೆ ಸಾಹಿತ್ಯಪ್ರೇಮಿಗಳಾಗಿದ್ದ ನನ್ನ ಮಿತ್ರರೂ ವಿದ್ಯಾರ್ಥಿಗಳೂ ಒತ್ತಾಯ ಮಾಡಿ ಕೇಳಿಕೊಂಡ ಮೇರೆಗೆ ಈ ಟಿಪ್ಪಣಿಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆನು.

ಕಾವ್ಯಮೀಮಾಂಸೆಯ ಮೇಲೆ ಸಂಸ್ಕೃತದಲ್ಲಿ ಉಪಲಬ್ಧವಿದ್ದ ಎಲ್ಲ ಮುಖ್ಯ ಗ್ರಂಥಗಳನ್ನೂ ತಾನು ನೋಡಿ ಉಪಯೋಗಿಸಿಕೊಂಡಿರುವುದಾಗಿಯೂ ನಿರ್ದಿಷ್ಟವಾಗಿ ಯಾವುದೇ ಒಂದು ಗ್ರಂಥವನ್ನು ಅನುಸರಿಸಿಲ್ಲವೆಂದೂ ಸಹ ಗ್ರಂಥಕರ್ತನು ಹೇಳಿಕೊಂಡಿದ್ದಾನೆ. ಲಕ್ಷ್ಯಗಳನ್ನು ಕೊಡುವ ವಿಷಯದಲ್ಲಿ, ಪ್ರಸಿದ್ಧವಾದ ಪ್ರಾಚೀನ ಶ್ರೇಷ್ಠ ಗ್ರಂಥಗಳಲ್ಲಿರುವದನ್ನು ಮೇಲೆಂದು ಭಾವಿಸಿ ಸ್ವೀಕರಿಸಿದ್ದಾನೆ. ಈ ಪ್ರಯತ್ನ ಅಷ್ಟೇನೂ ಯಶಸ್ವಿಯಾಗದೆ ಹೋದದ್ದರಿಂದ, ಆಧುನಿಕ ರಚನೆಗಳನ್ನೂ ಆತ ತೆಗೆದುಕೊಳ್ಳಬೇಕಾಯಿತು. ಅನೇಕವೇಳೆ ತಾನೇ ಸ್ವಂತವಾಗಿ ಪದ್ಯಗಳನ್ನು ರಚಿಸಬೇಕಾಯಿತು; ಅಂಥವನ್ನು ಸ್ಪಷ್ಟವಾಗಿ ನಿರ್ದೇಶಿಸಲಾಗಿದೆ.

ಕೃತಿಯನ್ನು ಸರ್ವಸಮಗ್ರವಾಗಿ ಮಾಡಲಾಗಲಿಲ್ಲ ಎಂಬುದನ್ನು ಎ.ಆರ್. ಒಪ್ಪಿಕೊಳ್ಳುತ್ತಾನೆ. ಗ್ರಂಥದಲ್ಲಿ ಮುಂದೆ ಹೇಳಿರುವ ಆರು ಪ್ರಕರಣಗಳಿವೆ:

ಅಲಂಕಾರ
ದೋಷ
ಗುಣ
ಶಬ್ದಾರ್ಥ
ಧ್ವನಿ
ಗುಣೀಭೂತವ್ಯಂಗ್ಯ

ಅಲಂಕಾರಗಳನ್ನು, ಅತಿಶಯ, ಸಾಮ್ಯ, ಶ್ಲೇಷ, ವಾಸ್ತವ ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸುವಲ್ಲಿ ಆತ ರುದ್ರಟನ ವ್ಯವಸ್ಥೆಯನ್ನು ಅನುಸರಿಸಿದ್ದಾನೆ.

ಗ್ರಂಥವನ್ನು ಮರುಮುದ್ರಣದಲ್ಲಿ ಇನ್ನೂ ಹೆಚ್ಚು ಸಮಗ್ರವಾಗಿ ಮಾಡಬೇಕೆಂದು ಗ್ರಂಥಕರ್ತನು ಆಶೆಯಿಟ್ಟುಕೊಂಡಿದ್ದನು; ಎರಡನೆಯ ಮುದ್ರಣವು ೧೯೧೦ರಲ್ಲಿ ಪ್ರಕಟವೂ ಆಯಿತು; ಆದರೂ ಕೂಡ ಕಾರ್ಯಬಾಹುಳ್ಯದ ಒತ್ತಡದಿಂದಾಗಿ ಅವಕಾಶವೇ ಆಗದಿದ್ದುದರಿಂದ ಅವನು ಅದನ್ನು ಮಾಡಲಾಗಲಿಲ್ಲ. ಆಮೇಲೆ ಬಂದ ವಿದ್ವಾಂಸರು 'ಭಾಷಾಭೂಷಣ'ವನ್ನು ಟೀಕೆ ಮಾಡಿದ್ದಾರೆ. ವಿಮರ್ಶೆ ಮಾಡಿದ್ದಾರೆ; ಇದೇ ಕ್ಷೇತ್ರದ ವಿಷಯವನ್ನು ಕುರಿತ 'ಸಾಹಿತ್ಯ ಭೂಷಣ'ದ ಕರ್ತೃ ಕುಟ್ಟಿ ಕೃಷ್ಣ ಮಾರರ್ ಎಂಬುವರ ವಿಮರ್ಶೆ ಮುಖ್ಯವಾದದ್ದು. ಆದರೆ ೧೯೬೮ರಲ್ಲಿ NBS (ನ್ಯಾಷನಲ್ ಬುಕ್‌ಸ್ಟಾಲ್) ಅವರು ಹೊರತಂದ ಮುದ್ರಣಕ್ಕೆ ಮುನ್ನುಡಿ ಬರೆಯುವಾಗ ಸ್ವತಃ ಮಾರರ್ ಅವರೇ ತಂಪುರಾನನ ಗ್ರಂಥ ಒಂದು ಮಹಾಸಾಧನೆ ಎಂಬುದನ್ನು ಒಪ್ಪಿಕೊಂಡಿದ್ದಾರೆ.

ವೃತ್ತಮಂಜರಿ

'ವೃತ್ತಮಂಜರಿ'ಯ (೧೯೦೫) ಹೆಸರೇ ಸೂಚಿಸುವಂತೆ ಅದು ಛಂದಸ್ಸನ್ನು ಕುರಿತ ಒಂದು ಪ್ರಕರಣ ಗ್ರಂಥ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಅಗತ್ಯವನ್ನು ಪೂರೈಸುವುದಕ್ಕಾಗಿಯೂ ಕಾವ್ಯ ನಿರ್ಮಾಣದ ಕಲೆ ಮತ್ತು ತಂತ್ರ ವಿಧಾನಗಳಲ್ಲಿ ವಿಶೇಷ ಪರಿಣತಿಯನ್ನು ಪಡೆಯಬಯಸುವ ಇತರರಿಗಾಗಿಯೂ ಕೂಡ ಈ ಗ್ರಂಥವನ್ನು ರಚಿಸಲಾಯಿತು. ಮಲಯಾಳಿ ಕವಿಗಳು ಸಂಸ್ಕೃತ ಛಂದಃ ಪ್ರಕಾರಗಳನ್ನೂ ದೇಸಿ ಛಂದಸ್ಸುಗಳನ್ನೂ ಧಾರಾಳವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂಬುದು ಪ್ರಸಿದ್ಧ ಸಂಗತಿ. ಸಂಸ್ಕೃತ ಛಂದಸ್ಸಿನ ಮಟ್ಟಿಗೆ, ಬೇರೆ ಬೇರೆ ಮಾದರಿಯ ಲಕ್ಷ್ಯಲಕ್ಷಣ ನಿರೂಪಣೆಗಳಿಗೆ ಕೊರತೆ ಇರಲಿಲ್ಲ. ಅಕ್ಷರ (ವರ್ಣ) ವೃತ್ತ ಮತ್ತು ಮಾತ್ರಾ ವೃತ್ತ– ಈ ಎರಡು ಪ್ರಕಾರಗಳಿಗಾಗಿ 'ವೃತ್ತರತ್ನಾಕರ' ಹಾಗೂ 'ವೃತ್ತ

ರತ್ನಾವಳಿ' ಎಂಬೀ ಎರಡು ಛಂದೋಗ್ರಂಥಗಳನ್ನೂ ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ಗ್ರಂಥಕರ್ತನು ಲಕ್ಷ್ಯಲಕ್ಷಣಗಳನ್ನು ನಿರೂಪಿಸಿರುವುದು ಉತ್ಕೃಷ್ಟವಾಗಿದೆ. ಅನೇಕ ಸಂದರ್ಭಗಳಲ್ಲಿ ಪ್ರಸಿದ್ಧ ಮಲಯಾಳಿ ರಚನೆಗಳಿಂದ ಆಯ್ದ ಲಕ್ಷ್ಯಗಳನ್ನು ಆತ ಕೊಟ್ಟಿದ್ದಾನೆ.

ದೇಸಿ ಛಂದಸ್ಸಿನ ವಿಚಾರ ಹೇಳುವುದಾದರೆ, ಮಲಯಾಳ ಭಾಷೆಯಲ್ಲಿ ಲಕ್ಷಣಗಳೇ ಇರಲಿಲ್ಲ. ಆದ್ದರಿಂದ, ಗೇಯಪ್ರವಣವಾಗಿದ್ದ ಜನಪ್ರಿಯ ಮಲಯಾಳಂ ಛಂದಸ್ಸಿಗಾಗಿ ಮಾಪನದಂಡಗಳನ್ನು ಕಂಡುಹಿಡಿಯಲು ರಾಜರಾಜವರ್ಮನು ಗಣ್ಯ ಪ್ರಮಾಣದಲ್ಲಿ ಸ್ವತಂತ್ರ ಸಂಶೋಧನೆಯನ್ನು ನಡೆಸಬೇಕಾಯಿತು. ಈ ಕಾರ್ಯಕ್ಷೇತ್ರ ಬಹಳ ಕಷ್ಟಸಾಧ್ಯವಾದದ್ದೂ ಸಮಸ್ಯೆಗಳಿಂದ ಕೂಡಿದ್ದೂ ಆಗಿತ್ತೆಂಬುದರಲ್ಲಿ ಸಂದೇಹವಿಲ್ಲ; ಮುಂದಾಳಾಗಿದ್ದ ಈತನು ಕ್ಷೇತ್ರವನ್ನು ಹಸನುಗೊಳಿಸಿ, ತಕ್ಕಮಟ್ಟಿನ ಪ್ರಗತಿಯನ್ನು ಸಾಧಿಸಿದನು. ಆದರೆ ಶ್ರಮಸಾಧ್ಯವೂ ಅವ್ಯವಸ್ಥಿತವೂ ಆದ ಈ ಅಧ್ಯಯನ ಪ್ರಾಂತದಲ್ಲಿ ಇನ್ನೂ ಹೇರಳವಾದ ಕೆಲಸ ನಡೆಯಬೇಕಾಗಿದೆ ಎನ್ನುವದನ್ನು ಯಾರಾದರೂ ಒಪ್ಪಲೇಬೇಕು. ಆಮೇಲೆ ಬಂದ ವಿದ್ವಾಂಸರಾದ ಅಪ್ಪನ್ ತಂಪುರಾನ್, ಕುಟ್ಟಿಕೃಷ್ಣಮಾರರ್ ಮತ್ತು ಕೆ.ಕೆ. ವಾಧ್ಯಾರ್ ಅವರಂಥವರು ಈ ದಿಸೆಯಲ್ಲಿ ಹಲಕೆಲವು ಪ್ರಯತ್ನಗಳನ್ನೇನೋ ಮಾಡಿದ್ದಾರೆ; ಆದರೆ ಅವರುಗಳಿಗೆ ಭಾಗಶಃ ಯಶಸ್ಸು ಮಾತ್ರ ಲಭಿಸಿದೆ. ಮಲಯಾಳಂ ಭಾಷೆಯ ಛಂದಸ್ಸಿನ ಕ್ಷೇತ್ರದಲ್ಲಿ 'ವೃತ್ತಮಂಜರಿ' ಈಗಲೂ ಒಂದು ಮೈಲಿಗಲ್ಲಾಗಿ ಉಳಿದು ಬಂದಿದೆ.

ಸಾಹಿತ್ಯಸಹಾಯ

'ಸಾಹಿತ್ಯ ಸಾಹ್ಯಂ' ಮೊತ್ತಮೊದಲಿಗೆ ೧೯೧೧ರಲ್ಲಿ ಪ್ರಕಟವಾಯಿತು; ಇದೊಂದು ಗದ್ಯ ಲೇಖನ ಕಲೆಯ ಕೈಪಿಡಿ. ಈಗಾಗಲೇ ಸೂಚಿಸಿರುವಂತೆ ಮಲಯಾಳಂ ಗದ್ಯವು ಕಾಲಮಾನದೃಷ್ಟಿಯಿಂದ ಪದ್ಯ ಕಾವ್ಯಕ್ಕಿಂತ ಆಮೇಲೆ ಸಾಹಿತ್ಯವಾಗಿ ವಿಕಾಸಗೊಂಡಿತು; ಹೀಗಾದದ್ದು ವಿಶೇಷವಾಗಿ ಪಾಶ್ಚಾತ್ಯ ಸಾಹಿತ್ಯದೊಡನೆ ಅದು ಸಂಪರ್ಕವನ್ನು ಬೆಳೆಸಿಕೊಂಡ ತರುವಾಯ. ಗದ್ಯ ವಿಚಾರದಲ್ಲಿ ಕೂಡ ಮಲಯಾಳವು ಅಲಂಕಾರಯುಕ್ತವಾಗಿ ವೈಭವದಿಂದ ಮೆರೆಯಲು ಸಂಸ್ಕೃತವನ್ನು ಅವಲಂಬಿಸಬೇಕು ಎಂದು ಭಾವಿಸುತ್ತಿದ್ದ ವಿದ್ವಾಂಸರು ಕೆಲವರು ಇದ್ದರು; ಆದರೆ ರಾಜರಾಜವರ್ಮನ ದೃಷ್ಟಿಯೇ ಬೇರೆಯಾಗಿತ್ತು. ಸಾಹಿತ್ಯ ರೂಪ ಮತ್ತು ವಸ್ತು, ಈ ಎರಡೂ ವಿಷಯಗಳಲ್ಲಿಯೂ ಸಂಸ್ಕೃತದ

ಪ್ರಭುತ್ವದಿಂದ ಮುಕ್ತವಾಗುವುದು ಭಾಷೆಗೆ ಒಳಿತೆಂದು ಆತ ಭಾವಿಸಿದನು; ಹೀಗಾದಲ್ಲಿ ಮಲಯಾಳವು ಇಂಗ್ಲಿಷಿನಿಂದಲೂ ಇತರ ಭಾಷೆಗಳಿಂದಲೂ ಅನೇಕ ವಿಚಾರಗಳನ್ನು ಕಲಿತು ಲಾಭ ಪಡೆಯಬಹುದು ಎಂದು ಆತನ ಆಲೋಚನೆ. ಹಾಗಿದ್ದರೂ ಕೂಡ ಭಾಷೆಯ ನುಡಿಗಟ್ಟು ತನ್ನ ಪರಿಶುದ್ಧತೆಯನ್ನು ಪಾಲಿಸಿಕೊಂಡು ಬರಬೇಕು, ಮತ್ತು ಹೊರಗಿನ ಯಾವುದೇ ಭಾಷಾ ಸಂಪರ್ಕ ಸಾಧನಗಳಿಂದ ಪ್ರಭಾವಿತವಾಗಕೂಡದು ಎಂಬ ವಿಷಯದಲ್ಲಿ ತೀವ್ರವಾದ ಕಳಕಳಿ ಹೊಂದಿದ್ದನು ಆತ. ಈ ಉದ್ದೇಶದಿಂದ ಬಹಳ ಉತ್ಸಾಹದಿಂದಲೇ 'ಸಾಹಿತ್ಯ ಸಾಹ್ಯಂ' ಗ್ರಂಥವನ್ನು ಸಿದ್ಧಪಡಿಸಿದನು. ಕೇವಲ ಬರೆಯುವ ಕೆಲಸ ಮತ್ತು ಸಂಗ್ರಹ ಕಾರ್ಯಗಳಿಗೆ ಸುಮಾರು ಐದು ತಿಂಗಳ ಕಾಲ ಮಾತ್ರ ಹಿಡಿಯಿತು. ಆದರೆ ಕರಡು ಪ್ರತಿಗಳನ್ನು ತಯಾರಿಸುವಂದು ತನ್ನ ಸಹೋದ್ಯೋಗಿಗಳ ಹಾಗೂ ತನ್ನ ಹಿರಿಯ ಸಲಹೆಗಾರ ಕೇರಳವರ್ಮನ ಸಲಹೆ ಪಡೆದನು. ಹಸ್ತಪ್ರತಿಯನ್ನು ಕೊಚ್ಚಿಯ ಮಹಾವಿದ್ವಾಂಸನಾದ ಅಪ್ಪನ್ ತಂಪುರಾನನಿಗೆ ಒಪ್ಪಿಸಲಾಯಿತು; ಆತ ಬೆಲೆ ಬಾಳುವ ಮುನ್ನುಡಿಯನ್ನು ಬರೆದುಕೊಟ್ಟನು.

ಪ್ರತಿಯೊಬ್ಬನಿಗೂ ತಿಳಿದಿರುವಂತೆ, ಸಂಸ್ಕೃತದಲ್ಲಿ ಪದ್ಯಕಾವ್ಯದ್ದೇ ಪ್ರಭುತ್ವ; ಗದ್ಯಕ್ಕೆ ಎರಡನೆಯ ಸ್ಥಾನ. ೧೯ನೆಯ ಶತಮಾನದ ಮಧ್ಯ ಭಾಗದವರೆಗೂ ಭಾರತೀಯ ಭಾಷೆಗಳಲ್ಲಿಯೂ ಅದೇ ವಿದ್ಯಮಾನ ಇದ್ದಿತು; ಅದೇ ಕಾಲದಲ್ಲಿ, ಗಾಳಿ ಬೀಸುವ ದಿಕ್ಕಿನಲ್ಲಿ ಒಂದು ಬದಲಾವಣೆ ಆಯಿತು. ರಾಜರಾಜವರ್ಮನಂತಹ ದ್ರಷ್ಟಾರರು ಪ್ರಾದೇಶಿಕ ಭಾಷೆಗಳಲ್ಲಿ ಸ್ಪಷ್ಟಾತ್ಮಕ ಹಾಗೂ ತಿಳಿವಳಿಕೆ ನೀಡುವ ಗದ್ಯಕ್ಕೆ ಒಳ್ಳೆಯ ಭವಿಷ್ಯ ಇದೆ ಎಂಬುದನ್ನು ಕಂಡುಕೊಂಡರು. ಆದರೆ ಆತನ ಕಾಲದಲ್ಲಿ ಗದ್ಯ ರಚನೆಗಳು ಸರಿಯಾದ ದಿಕ್ಕುದೆಸೆ ಕಾಣದೆ ದಿನ ದಿನಕ್ಕೆ ಹೆಚ್ಚುತ್ತಿದ್ದುವು. ಗದ್ಯ ರಚನೆಯೆಲ್ಲವೂ ಕೃತಕವಾಗಿ, ಆಡಂಬರವಾಗಿ, ಶಿಥಿಲವಾಗಿ, ಅಡ್ಡಾದಿಡ್ಡಿಯಾಗಿ ಅವ್ಯವಸ್ಥೆಯ ದಾರಿ ಹಿಡಿದಿದ್ದುವು. ಈ ಸಂಧಿಕಾಲದಲ್ಲಿ, ಭರವಸೆ ಹುಟ್ಟಿಸುತ್ತಿದ್ದ ಲೇಖಕರಿಗೆ ಯಾವುದಾದರೂ ರೀತಿಯಲ್ಲಿ ಮಾರ್ಗದರ್ಶನ ನೀಡಬೇಕೆಂದು ಆತ ಆಲೋಚಿಸಿದನು. ಒಳ್ಳೆಯ ಗದ್ಯದ ಗುಣಗಳು ಯಾವುವು? ಗದ್ಯ ರಚನೆಗಳಲ್ಲಿ ಯಾರಿಗೇ ಆಗಲಿ ಗೋಚರಿಸುವ ಅಪಾಯಗಳು ಯಾವುವು? ಸ್ಪಷ್ಟಾತ್ಮಕ ಹಾಗೂ ವಿಮರ್ಶಾತ್ಮಕ ಗದ್ಯ ಪ್ರಕಾರಗಳು ಯಾವುವು? 'ಸಾಹಿತ್ಯ ಸಾಹ್ಯಂ' ಗ್ರಂಥದಲ್ಲಿ ಈ ಪ್ರಶ್ನೆಗಳಿಗೆ ಕ್ರಮಬದ್ಧ ರೀತಿಯಲ್ಲಿ ನೀಡಿದ ಉತ್ತರಗಳನ್ನು ಕಾಣಬಹುದು.

'ಸಾಹಿತ್ಯ ಸ್ಸಾಹ್ಯಂ' ಗ್ರಂಥದ ನ್ಯಾಷನಲ್ ಬುಕ್‌ಸ್ಟಾಲಿನ (೧೯೬೯ರ) ಮುದ್ರಣಕ್ಕೆ ಸುಪ್ರಸಿದ್ಧ ವಿಮರ್ಶಕರಾದ ಕುಟ್ಟಿಪುಷ ಕೃಷ್ಣಪಿಳ್ಳೆ ಅವರು ಆಧುನಿಕ ರೀತಿಯ ಮುನ್ನುಡಿ ಬರೆದಿದ್ದಾರೆ; ಪರಿಣಾಮಕಾರಿಯಾಗಿ, ಮೆಚ್ಚಾಗುವಂತೆ, ಬರೆಯಲಿಚ್ಛಿಸುವ ಮಲಯಾಳ ಭಾಷೆಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಗದ್ಯ ಲೇಖಕರಿಗೂ, ನುರಿತ ಲೇಖಕರಿಗೂ ಕೂಡ, ಚಿರಕಾಲಿಕ ಮೌಲ್ಯ ಉಳ್ಳದ್ದಾಗಿದೆ ಈ ಗ್ರಂಥ ಎಂದು ಆತ ಹೇಳುತ್ತಾರೆ. ಒಳ್ಳೆಯ ಗದ್ಯ ನೇರವಾಗಿ, ಸಂಕ್ಷೇಪವಾಗಿ, ಅಂದವಾಗಿ, ಮನಸ್ಸಿಗೆ ನಾಟುವಂತೆ ಇರಬೇಕಾಗುತ್ತದೆ. ಛಂದಸ್ಸಿನ ನಿರ್ಬಂಧ ಇಲ್ಲೆಂದು ಮಾತುಗಳನ್ನು ಸುಮ್ಮನೆ ಒಟ್ಟುಗೂಡಿಸಿಬಿಟ್ಟರೆ ಸಾಹಿತ್ಯಮಟ್ಟದ ಗದ್ಯ ಆಗುವ ಮಾತು ಇರಲಿ, ಒಳ್ಳೆಯ ಗದ್ಯವೂ ಆಗದು.

ಕೃತಿಯ ಮೊದಲ ಭಾಗದಲ್ಲಿ ಎ.ಆರ್. ಗದ್ಯವನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಿದ್ದಾನೆ: **ಆಖ್ಯಾನಂ** (ನಿರೂಪಣಾತ್ಮಕ), **ವರ್ಣನಂ** (ವರ್ಣನಾತ್ಮಕ), **ವಿವರಣಂ** (ವಿವರಣಾತ್ಮಕ), **ಉಪಪಾದನಂ** (ಪ್ರತಿಪಾದನಾತ್ಮಕ, ವಾದಾತ್ಮಕ). ಪ್ರತಿಯೊಂದು ವರ್ಗದ ವಿಶೇಷ ಲಕ್ಷಣವನ್ನೂ ತಕ್ಕ ಉದಾಹರಣೆಗಳನ್ನು ಕೊಟ್ಟು ವಿವರಿಸಲಾಗಿದೆ. ಭಾಷಾಭಿವ್ಯಕ್ತಿಯ ಪರಿಶುದ್ಧತೆ, ಭಾಷೆಯ ನುಡಿಗಟ್ಟುಗಳು, ರೂಢಿಯ ಪ್ರಯೋಗದ ಔಚಿತ್ಯ ಮತ್ತು ವಿರಾಮ ವ್ಯವಸ್ಥೆ, ಇವುಗಳನ್ನು ವಿವರಿಸುವ ಎರಡನೆಯ ಭಾಗ ಕೂಡ ಉಪಯುಕ್ತವಾಗಿದೆ, ಸ್ವಾರಸ್ಯವಾಗಿದೆ. ಕಡೆಯಲ್ಲಿ ಕೊಟ್ಟಿರುವ ಶಬ್ದಕೋಶ ಗ್ರಂಥದ ಬೆಲೆಯನ್ನು ಹೆಚ್ಚಿಸಿದೆ. ಇಂಗ್ಲಿಷ್ ಭಾಷೆಗೆ ಫೌಲರ್ (Fowler) ಮಹಾಶಯನಿಂದ ಯಾವ ಉಪಕಾರ ಆಗಿದೆಯೋ, ಅಂಥದೇ ಉಪಕಾರ ಈ ಉತ್ಕೃಷ್ಟವಾದ ಕೈಪಿಡಿಯಲ್ಲಿ ಮಲಯಾಳ ಭಾಷೆಗೆ ಎ.ಆರ್. ಮಹನೀಯನಿಂದ ಆಗಿದೆ.

* * * *

ಅಧ್ಯಾಯ ಆರು

ಭಾಷಾಂತರಗಳು

ರಾಜರಾಜವರ್ಮನು ೫೬ ವರ್ಷ ಮಾತ್ರ ಬದುಕಿದ್ದನು; ಈ ಕಾಲವನ್ನು ಸಮನಾಗಿ ಎರಡು ಭಾಗ ಮಾಡಬಹುದು: ಮೊದಲಿನ ಅರ್ಧ ಸಿದ್ಧತೆಯ ಕಾಲ; ಎರಡನೆಯ ಅರ್ಧವು ಶ್ರಮಪೂರ್ಣವಾದ ಅಧಿಕಾರನಿಮಿತ್ತದ ಕೆಲಸ, ಸಾಹಿತ್ಯ ಸಂಬಂಧವಾದ ಪ್ರವಾಸಗಳು, ಕುಟುಂಬ ವರ್ಗಕ್ಕೂ ಒಟ್ಟಿನ ಜನ ಸಮುದಾಯಕ್ಕೂ ಸಲ್ಲಬೇಕಾಗಿದ್ದ ಕರ್ತವ್ಯನಿರ್ವಾಹ, ಇವುಗಳಿಂದ ಇಡಿಕಿರಿದು ತುಂಬಿತ್ತು. ಆದ್ದರಿಂದ ಅಷ್ಟು ಅಲ್ಪ ಕಾಲಾವಧಿಯಲ್ಲಿ ಇಷ್ಟೊಂದು ಕಾರ್ಯವನ್ನು ನೆರವೇರಿಸಲು ಆತ ಹೇಗೆ ಸಮರ್ಥನಾದನು ಎನ್ನುವುದು ಒಂದು ಅಚ್ಚರಿಯಾಗಿಯೇ ಉಳಿಯುತ್ತದೆ. ಆತನಿಗೆ ಅಧಿಕಾರ ಸಂಬಂಧವಾದ ಹಾಗೂ ಕೌಟುಂಬಿಕವಾದ ಸ್ವಂತ ಸಮಸ್ಯೆಗಳು ಇದ್ದೇ ಇದ್ದುವು. ಸಮಸ್ಯೆಗಳು ಸವಾಲು ಒಡ್ಡುವಂತಿದ್ದು, ಮನಸ್ಸಿನ ನೆಮ್ಮದಿಗೆ ಭಂಗವುಂಟುಮಾಡುವಂತಿದ್ದ ಸಮಯದಲ್ಲಿ ಆತ ಸೃಷ್ಟ್ಯಾತ್ಮಕ ಲೇಖನ ಕಾರ್ಯದಿಂದ ಮನಸ್ಸನ್ನು ಬೇರೆಯ ಕಡೆಗೆ ತಿರುಗಿಸುತ್ತಿದ್ದನು. ಇಂಥ ಸಂದರ್ಭಗಳಲ್ಲಿ ಇತರರು ತಾವು ಯಾವ ಪ್ರಯೋಜನಕರವಾದ ಕಾರ್ಯವನ್ನೂ ಮಾಡಲಾರೆವು ಎಂದುಕೊಳ್ಳಬಹುದು. ವಿಚಾರಪೂರ್ಣ ವಿಷಯಗಳ ಮೇಲೆ ಪ್ರಕರಣ ಗ್ರಂಥಗಳನ್ನೂ ಪ್ರೌಢ ಪ್ರಬಂಧಗಳನ್ನೂ ಬರೆಯುವುದಕ್ಕೆ ತಕ್ಕಮಟ್ಟಿನ ಸಂಶೋಧನೆ ನಡಸಬೇಕು, ಆಲೋಚನೆ ಮಾಡಬೇಕು, ಗ್ರಂಥಗಳನ್ನು ಓದಬೇಕು; ಇವೆಲ್ಲ ಮನಸ್ಸಿಗೆ ಕಿರಿಕಿರಿ ಉಂಟುಮಾಡುವ ಉದ್ಯೋಗ. ರಾಜರಾಜವರ್ಮನು ನಿರ್ಮಾಣ ಮಾಡಿದ ಕೃತಿಗಳ ವೈವಿಧ್ಯ, ಸಂಖ್ಯೆ ಮತ್ತು ಗುಣ ಹೇಗಿದ್ದುವು ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಅಂತಹ ಶ್ರಮ ಸಾಧ್ಯವಾದ ಕೆಲಸದ ನಡುವೆ ಆತನಿಗೆ ಒಂದು ಬಗೆಯ ವಿಶ್ರಾಂತಿ ಬೇಕಾಗಿದ್ದಿತು; ಆತ ಪಡೆಯಲಿಚ್ಛಿಸಿ ಆಯ್ದುಕೊಂಡ ವಿಶ್ರಾಂತಿಯ ಸ್ವರೂಪ ಸೋಮಾರಿಯಾಗಿ ಕಾಲ ಕಳೆಯುವುದಾಗಿರಲಿಲ್ಲ, ಕೂಡಿದ ಮಟ್ಟಿಗೂ ಹಗುರವಾದ ಸಾಹಿತ್ಯದ ಚಟುವಟಿಕೆಯಲ್ಲಿ, ಎಂದರೆ ಭಾಷಾಂತರ ಕಾರ್ಯದಲ್ಲಿ, ನಿರತನಾಗಿರುವುದಾಗಿತ್ತು.

ಆತ ಸಂಸ್ಕೃತದಿಂದ ಆರು ಶ್ರೇಷ್ಠ ಕೃತಿಗಳನ್ನೂ ಇಂಗ್ಲಿಷಿನಿಂದ ಒಂದನ್ನೂ ಭಾಷಾಂತರ ಮಾಡಿದನು. ಸೃಜನಶೀಲ ಪ್ರತಿಭೆಯುಳ್ಳ ಈ ಸಂಶೋಧಕ-ವಿದ್ವಾಂಸನಿಗೆ ಭಾಷಾಂತರ ಕಾರ್ಯ ಒಂದು ಉಲ್ಲಾಸಕರವಾದ ಸಾಹಿತ್ಯವಿಹಾರವಾಗಿತ್ತು.

ಮೇಘದೂತ

ತನ್ನ ಉದ್ಯೋಗಜೀವನದ ಮುಂಚಿನ ದಿನಗಳಲ್ಲಿಯೆ ಆತ ಕಾಲಿದಾಸನ 'ಮೇಘದೂತ'ವನ್ನು ಮಲಯಾಳಿ ಪದ್ಯಕ್ಕೆ ಭಾಷಾಂತರ ಮಾಡುವ ಕಾರ್ಯವನ್ನು ಕೈಗೊಂಡನು. ಯಾವ ಸಂದರ್ಭದಲ್ಲಿ ಭಾಷಾಂತರ ಕಾರ್ಯವನ್ನು ಕೈಗೊಳ್ಳಲು ನಿಶ್ಚಯಿಸಿದನು ಎಂಬುದನ್ನು ಪೀಠಿಕಾಭಾಗದಲ್ಲಿ ಸೂಚಿಸಿದೆ. 'ಕೇರಳ ಪಾಣಿನೀಯ'ವನ್ನು ರಚಿಸುವ ಕಾರ್ಯದಲ್ಲಿ ಆತನು ಮುಳುಗಿಹೋಗಿದ್ದನು; ಒಂದು ಹಂತದಲ್ಲಿ, 'ಮೇಘದೂತ'ದಂತಹ ಮಹಾಕೃತಿಯನ್ನು ಮಲಯಾಳಕ್ಕೆ ಅನುವಾದ ಮಾಡಿದರೆ, ಮಲಯಾಳ ಭಾಷೆಯ ವಾಕ್ಯರಚನಾಕ್ರಮಕ್ಕೂ ಸಂಸ್ಕೃತ ಭಾಷೆಯ ವಾಕ್ಯರಚನಾಕ್ರಮಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಂಡಂತೆ ಆಗಿ ಅದು ಒಂದು ಒಳ್ಳೆಯ ಮತ್ತು ಬೋಧಪ್ರದವಾದ ಅಭ್ಯಾಸವಾಗುವುದು ಎಂದು ಆತ ಯೋಚಿಸಿದನು.

ಅವನು ಪ್ರತಿದಿನವೂ ಕೆಲವು ಶ್ಲೋಕಗಳನ್ನು ಅನುವಾದ ಮಾಡುತ್ತಿದ್ದನು ಎಂದು ಅವನ ದಿನಚರಿಯ ಟಿಪ್ಪಣಿಗಳಿಂದ ಹೊರಪಡುತ್ತದೆ. ಗ್ರಂಥಕರ್ತನು ಒಮ್ಮೆ ಹರಿಪಾದಕ್ಕೆ ಪಾದಯಾತ್ರೆ ಹೊರಟಿದ್ದಾಗ ಕೂಡ ಕೆಲವು ಶ್ಲೋಕಗಳನ್ನು ಭಾಷಾಂತರ ಮಾಡುವುದು ಒಂದು ಸ್ವಾರಸ್ಯವಾದ ಹವ್ಯಾಸವೆಂದು ಕಂಡುಬಂದಿತು. ಸಂಸ್ಕೃತ ಭಾಷೆಯ ಪಾಂಡಿತ್ಯ ಇಲ್ಲದ ಓದುಗರು ಕೂಡ ಕಾವ್ಯವನ್ನು ಓದಿ ಸಂತೋಷಪಡಲು ಸಾಧ್ಯವಾಗುವಂತೆ ಪದ್ಯಗಳನ್ನು ಸರಳವಾದ ಮಲಯಾಳ ಭಾಷೆಗೆ ಭಾಷಾಂತರಿಸಬೇಕೆಂದು ರಾಜರಾಜವರ್ಮನು ತೀವ್ರವಾದ ಅಭಿಲಾಷೆ ಹೊಂದಿದ್ದನು. ಅನುವಾದವು ಮೂಲಕೃತಿಗೆ ಯಥಾವತ್ತಾಗಿರಬೇಕೆಂಬ ವಿಷಯದಲ್ಲಿಯೂ ಅಷ್ಟೇ ತೀವ್ರಾಭಿಲಾಷೆ ಆತನದು. ಹಾಗಿದ್ದರೂ ಪದ್ಯಗಳನ್ನು ಅವುಗಳ ಛಂದಸ್ಸಿನಲ್ಲಿಯೇ ಭಾಷಾಂತರಿಸಬೇಕಾದದ್ದು ಅಗತ್ಯ ಎಂದು ಆತ ಭಾವಿಸಲಿಲ್ಲ. ಮೂಲವು ಮಂದಾಕ್ರಾಂತವೃತ್ತದಲ್ಲಿದೆ; ಆದರೆ ಅನುವಾದವು ಶಾರ್ದೂಲ ವೃತ್ತದಲ್ಲಿದೆ. ಅಲ್ಲದೆ, ಆತ ಉದ್ದಕ್ಕೂ ಏಕಪ್ರಕಾರವಾಗಿ ಮಲಯಾಳ ಭಾಷೆಯಲ್ಲಿ ಜನಪ್ರಿಯವಾಗಿ ಬಳಕೆಯಲ್ಲಿದ್ದ ದ್ವಿತೀಯಾಕ್ಷರ ಪ್ರಾಸವನ್ನು

ಪಾಲಿಸಿಕೊಂಡು ಬರಲಿಲ್ಲ. ವಿಶೇಷವಾಗಿ ಭಾಷಾಂತರಗಳಲ್ಲಿ ಈ ನಿರ್ಬಂಧಗಳ ಪಾಲನೆ ಅನಗತ್ಯ ಎಂಬುದು ಆತನ ಭಾವನೆ. ಸಂಸ್ಕೃತ ಕಾವ್ಯವನ್ನು ಮಲಯಾಳಂ ಪದ್ಯಕ್ಕೆ ಭಾಷಾಂತರಿಸುವುದರಲ್ಲಿ ಇದು ಆತನ ಮೊದಲ ಪ್ರಯತ್ನವಾದರೂ ಕೂಡ ಅದರ ಯಶಸ್ಸು ಪ್ರಶಂಸನೀಯ.

ಕುಮಾರಸಂಭವ

ರಾಜರಾಜವರ್ಮನು ತನ್ನ 'ಮೇಘದೂತ'ದ ಅನುವಾದಕ್ಕೆ ಪಡೆದ ಪುರಸ್ಕಾರ ಎಷ್ಟು ಪ್ರೋತ್ಸಾಹಕರವಾಗಿತ್ತೆಂದರೆ, ಅತ್ಯಲ್ಪಕಾಲದಲ್ಲಿಯೇ ಅಂಥದೇ ಇನ್ನೊಂದು ಕೃತಿರಚನೆಗೆ ತೊಡಗಿದನು. ೧೮೯೪ರಲ್ಲಿ ಆತನು ಒಬ್ಬ ವಿದ್ಯಾರ್ಥಿಗೆ 'ಕುಮಾರಸಂಭವ'ವನ್ನು ಪಾಠ ಹೇಳಬೇಕಾಗಿದ್ದಿತು; ಅದಕ್ಕೆಂದು ಕೆಲವು ಟಿಪ್ಪಣಿಗಳನ್ನು ಸಿದ್ಧಪಡಿಸಿದ್ದನು. ಏಕಕಾಲದಲ್ಲಿ ಕಾವ್ಯದ ಭಾಷಾಂತರ ಕಾರ್ಯದಲ್ಲಿ ನಿರತನಾದನು. ಬೋಧನ ಕಾರ್ಯ ಮಧ್ಯೆ ನಿಂತುಹೋದರೂ, ಭಾಷಾಂತರ ಕಾರ್ಯ ಮುಂದುವರಿಯಿತು, ಕೆಲಸ ೧೮೯೫ರಲ್ಲಿ ಮುಗಿದು, ೧೮೯೭ರಲ್ಲಿ ಅದನ್ನು ಪ್ರಕಟಿಸಲಾಯಿತು.

ಮೊದಲ ಎಂಟು ಸರ್ಗಗಳಲ್ಲಿ ಆರನ್ನು ಮಾತ್ರ ಆತನು ಭಾಷಾಂತರಿಸಿದನು; ಈ ಆರು ಸರ್ಗಗಳು ಕಾಲಿದಾಸ ವಿರಚಿತ ಎಂದು ಎಲ್ಲ ವಿಮರ್ಶಕರೂ ಒಪ್ಪುತ್ತಾರೆ. 'ರತಿ ಪ್ರಲಾಪ'ವನ್ನು ಕುರಿತ ನಾಲ್ಕನೆಯ ಸರ್ಗವನ್ನು ಸಂಕ್ಷೇಪಿಸಲಾಗಿದೆ; ಎಂಟನೆಯದು ಅಶ್ಲೀಲ ಶೃಂಗಾರದಿಂದ ಕೂಡಿರುವುದರಿಂದ ಅದನ್ನು ಬಿಟ್ಟು ಬಿಡಲಾಯಿತು. 'ಮೇಘದೂತ'ಕ್ಕಿಂತ ಈ ಭಾಷಾಂತರವು ಹೆಚ್ಚು ಆಕರ್ಷಕವಾಗಿದೆ. ಅದನ್ನು ಬೇರೆ ಬೇರೆ ತರಗತಿಗಳಿಗೆ ಪಠ್ಯಪುಸ್ತಕವಾಗಿ ಅಂಗೀಕರಿಸಿರುವುದರಿಂದ, ಅದರ ಅನೇಕಾನೇಕ ಮುದ್ರಣಗಳು ಈಗಾಗಲೇ ಕಾಣಿಸಿಕೊಂಡಿವೆ. ಕೆಲವರು ಸಂಪ್ರದಾಯನಿಷ್ಠ ವಿಮರ್ಶಕರ ಅಭಿಪ್ರಾಯದಂತೆ, ಈ ಎರಡು ಭಾಷಾಂತರಗಳಲ್ಲಿಯೂ ಆಡು ಭಾಷೆಯ ಶಬ್ದರೂಪಗಳು ಅಧಿಕ ಪ್ರಮಾಣದಲ್ಲಿವೆ; ಆದರೆ ಗ್ರಂಥಕರ್ತನು ಅವುಗಳನ್ನು ಬೇಕೆಂದೇ ಉಪಯೋಗಿಸಿದ್ದನು.

ಶಾಕುಂತಲಂ

ಕಾಲಿದಾಸನ 'ಶಾಕುಂತಲ'ವನ್ನು ಕೆಲವು ವಿಶೇಷ ಸಂದರ್ಭಗಳ ಕಾರಣದಿಂದ ಕೈಕೊಳ್ಳಲಾಯಿತು. ಈ ಮಹಾ ಶ್ರೇಷ್ಠ ಕೃತಿ ಯುಗ ಯುಗಗಳಿಂದಲೂ ಮಲಯಾಳಿ ಕವಿಗಳನ್ನೂ, ವಿದ್ವಾಂಸರನ್ನೂ ಮೋಹಗೊಳಿಸಿದೆ, ಅವರೆದುರು ಸಡ್ಡು ಹೊಡೆದು

ನಿಂತಿದೆ. ಕಳೆದ ಒಂದು ನೂರು ವರ್ಷಗಳ ಕಾಲದಲ್ಲಿ ಕೇರಳದ ಹನ್ನೆರಡು ಜನಕ್ಕಿಂತ ಹೆಚು ಜನ ಕವಿಗಳು ತಮ್ಮ ಭಾಷೆಯಲ್ಲಿ ಅದಕ್ಕೆ ಸಂವಾದಿಯಾದ ಉತ್ಕೃಷ್ಟತೆ ಅಂಥದು. ಭಾಷಾಂತರದ ಮೊತ್ತಮೊದಲು ಪ್ರಯತ್ನವನ್ನು ಯಾರಿಗೂ ಕಡಮೆಯಲ್ಲದ ಕೇರಳವರ್ಮನು ಕೈಗೊಂಡನು. ೧೮೮೨ರಲ್ಲಿ ಪ್ರಕಟವಾದ ಈ ಭಾಷಾಂತರ ಒಂದು ಭಾರಿ ಯಶಸ್ವಿಯಾದ ಕಾರ್ಯ ಎಂದು ಕೊಂಡಾಡಲಾಯಿತು. ಆದರೆ ಅದರ ಅಲಂಕೃತ ಕಾವ್ಯ ಶೈಲಿ, ಸಂಸ್ಕೃತ ಶಬ್ದಗಳ ಮತ್ತು ಸಮಾಸಗಳ ಪ್ರಾಚುರ್ಯ, ಇವುಗಳಿಂದಾಗಿ ಅದು ಕೇವಲ ಪಂಡಿತವರ್ಗದಲ್ಲಿ ಮಾತ್ರ ಪ್ರಿಯವಾಗಿತ್ತು. ಈ ಸಾಧನೆ ಗುಣದಿಂದ ಕೂಡಿದೆ ಎಂಬುದನ್ನು ಒಪ್ಪಿಕೊಂಡ ರಾಜರಾಜವರ್ಮನು ಮಲಯಾಳಂ ಭಾಷೆಯ ಜಾಯಮಾನಕ್ಕೆ ಅನೇಕ ಕಡೆಗಳಲ್ಲಿ ಧಕ್ಕೆಯುಂಟಾಗಿದೆ ಎಂದು ಭಾವಿಸಿದನು. ಆದ್ದರಿಂದ ಒಂದು ಪರಿಷ್ಕೃತ ರೂಪವನ್ನು ಸಿದ್ಧಪಡಿಸುವಂತೆ ತನ್ನ ಸೋದರಮಾವನನ್ನು ಆತ ಕೇಳಿದನು. ಎ.ಆರ್. ತನ್ನವೇ ಆದ ಕೆಲವು ಸಲಹೆ ಸೂಚನೆಗಳನ್ನು ಮಾಡಿದನು; ಅದರೆ ಅವುಗಳಲ್ಲಿ ಹಲವನ್ನು ಗ್ರಂಥಕರ್ತನು ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ಈ ರೀತಿ ೧೯೧೨ರಲ್ಲಿ **'ಮಣಿಪ್ರವಾಳ ಶಾಕುಂತಲಂ'** ಎಂಬ ಶೀರ್ಷಿಕೆಯಲ್ಲಿ ಕೇರಳವರ್ಮನು ಅನುಮೋದಿಸಿದ ಪರಿಷ್ಕೃತ ರೂಪವೊಂದು ಪ್ರಕಟವಾಯಿತು. ಆದರೆ ಪಾಂಡಿತ್ಯ ಸಾಲದ ಓದುಗರ ಪ್ರಯೋಜನಕ್ಕಾಗಿ ಆ ಶ್ರೇಷ್ಠ ಕೃತಿಯ ಇನ್ನೂ ಸರಳವಾದ ರೂಪವೊಂದನ್ನು ನಿರ್ಮಾಣ ಮಾಡಬೇಕೆಂದು ರಾಜರಾಜವರ್ಮನು ಆಲೋಚಿಸಿದನು. ಹಾಗೆ ಆಲೋಚಿಸಿದ ಕೂಡಲೆ ಆ ಕೃತಿಯ ಭಾಷಾಂತರಕ್ಕೆ ತೊಡಗಿದನು; **'ಮಲಯಾಳ ಶಾಕುಂತಲ'** ಎಂಬ ಹೆಸರಿನಲ್ಲಿ ಆ ಕೃತಿ ಪ್ರಕಟವಾಯಿತು (೧೯೧೨).

ಈ ಎರಡು ಭಾಷಾಂತರಗಳನ್ನು ಪರಸ್ಪರ ಹೋಲಿಸಿ ನೋಡಿ ಇವುಗಳ ಬೆಲೆ ಕಟ್ಟುವುದು ಕಷ್ಟ ಪ್ರತಿಯೊಂದೂ ತನ್ನ ತನ್ನ ಗುಣಗಳನ್ನೂ ಅವಗುಣಗಳನ್ನೂ ಹೊಂದಿದ್ದು, ಎರಡೂ ಜೊತೆಗೂಡಿ ಆ ಮಹಾ ನಾಟಕವನ್ನು ಅರ್ಥ ಮಾಡಿಕೊಳ್ಳುವುದಕ್ಕೂ ಓದಿ ಸಂತೋಷಪಡುವುದಕ್ಕೂ ನೆರವಾಗಿವೆ. ಮೂಲಕೃತಿಗೆ ಯಥಾವತ್ತಾಗಿರಬೇಕು ಎಂಬ ರಾಜರಾಜವರ್ಮನ ಆದರ್ಶವು ಕೇರಳ ವರ್ಮನಂತಹ ಇತರರ ಆದರ್ಶಕ್ಕೆ ಬೇರೆಯದಾಗಿತ್ತು; ಇವರುಗಳು ಛಂದಸ್ಸು, ನುಡಿಗಟ್ಟು, ಇಂಥ ಕಾವ್ಯಶರೀರದ ಹೊರಗಣ ವಿಷಯಗಳಲ್ಲಿ ಯಥಾವತ್ತಾಗಿರ ಬೇಕೆಂದು ಉದ್ದೇಶ ಇಟ್ಟುಕೊಂಡಿದ್ದವರು. ಎ.ಆರ್. ಕೃತಿಯ ಭಾವಕ್ಕೂ, ಅದನ್ನು ಮಲಯಾಳದಂತಹ ಪುಷ್ಟಿ ಸಾಲದ ಭಾಷೆಯಲ್ಲಿ ಹೆಚ್ಚು

ಪ್ರಮಾಣದಲ್ಲಿ ಸೆರೆ ಹಿಡಿದಿಡುವುದಕ್ಕೂ ಹೆಚ್ಚು ಲಕ್ಷ್ಯ ಕೊಟ್ಟನು; ಆದ್ದರಿಂದ ಛಂದಸ್ಸು; ಪ್ರಾಸ, ಮುಂತಾದ ಕೃತಿರೂಪದ ವಿಚಾರದಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ವಹಿಸುವುದು ಉಚಿತ ಎಂದು ಆತ ಎಣಿಸಿದನು. 'ಶಾಕುಂತಲ'ದಂತಹ ಕೃತಿ ಸಂಸ್ಕೃತದಂತಹ ಭಾಷೆಯ ವಿಶಾಲ ವ್ಯಾಪ್ತಿಯನ್ನೂ, ಸಿರಿವಂತಿಕೆಯನ್ನೂ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಪಡಿಸಿಕೊಳ್ಳುತ್ತದೆ; ಆದ್ದರಿಂದಲೇ ಆಧುನಿಕ ಭಾರತೀಯ ಭಾಷೆಗಳ ರಸಿಕರು ತಮ್ಮ ತಮ್ಮ ಭಾಷಾ ಮಾಧ್ಯಮಗಳಲ್ಲಿ ಅದರ ಭಾವವನ್ನು ಗ್ರಹಿಸಲು ಹೆಣಗುತ್ತಿರುವುದು ನಮಗೆ ಕಂಡುಬರುತ್ತದೆ.

ಮಾಳವಿಕಾಗ್ನಿಮಿತ್ರಂ

'ಶಾಕುಂತಲ'ವು ಶ್ರೇಷ್ಠ ಕಾವ್ಯವಾಗಿರುವುದಲ್ಲದೆ, ಶ್ರೇಷ್ಠ ನಾಟಕವೂ ಆಗಿದೆ. ಮೊತ್ತಮೊದಲಿಗೆ ೧೮೮೨ರಲ್ಲಿ ಪ್ರಕಟವಾದ ಕೇರಳವರ್ಮನ **'ಅಭಿಜ್ಞಾನ ಶಾಕುಂತಲಂ'** ಸಂಸ್ಕೃತ ಭೂಯಿಷ್ಠವಾದ ಮಣಿಪ್ರವಾಳ ಶೈಲಿಯಲ್ಲಿ ರಚಿತವಾಗಿದ್ದರೂ ರಂಗಸ್ಥಲದ ಮೇಲೆ ಸಹ ಅಪಾರ ರಂಜನೆಯನ್ನು ನೀಡಿತು; ಇತರ ಸಂಸ್ಕೃತ ನಾಟಕಗಳು ಮಲಯಾಳಂ ಭಾಷೆಗೆ ಅನುವಾದಗೊಳ್ಳಲು ನಾಂದಿಯಾಯಿತು; ನಾಟಕ ಬೇಗನೆ ಒಂದು ಸಾಹಿತ್ಯ ಮಾಧ್ಯಮವಾಗಿ ಮನ್ನಣೆಪಡೆಯಿತು. ರಾಜರಾಜವರ್ಮನ 'ಶಾಕುಂತಲ'ದ ಅನುವಾದ ಕೂಡ ರಂಗಸ್ಥಲದ ಮೇಲೂ ಹೊರಗೂ ಜನರಿಂದ ಸ್ವೀಕೃತವಾಯಿತು. ಅದರಿಂದಾಗಿ ಹೆಚ್ಚುಹೆಚ್ಚಾಗಿ ಸಂಸ್ಕೃತ ನಾಟಕಗಳನ್ನು ಭಾಷಾಂತರಿಸಲು ಆತನಿಗೆ ಉತ್ತೇಜನ ದೊರೆಯಿತು; ಆತನು ಭಾಷಾಂತರಕ್ಕೆ ಆಯ್ದುಕೊಂಡ ಮುಂದಿನ ಕೃತಿ ಕಾಲಿದಾಸನ **'ಮಾಲವಿಕಾಗ್ನಿಮಿತ್ರಂ'**. ವಾಸ್ತವವಾಗಿ ಆತನ 'ಶಾಕುಂತಲ'ವು ಮಾವೇಲಿಕ್ಕರದಲ್ಲಿ ೧೯೧೫ರಲ್ಲಿ ರಂಗಭೂಮಿಯ ಮೇಲೆ ಪ್ರದರ್ಶಿತವಾದಾಗ, ಅದು ಎಷ್ಟು ಯಶಸ್ವಿಯಾಯಿತೆಂದರೆ ಪ್ರತಿವರ್ಷವೂ ಒಂದು ಹೊಸ ನಾಟಕವನ್ನು ಬರೆದು ಕೊಡುವುದಾಗಿ ಎ.ಆರ್. ಮಾತು ಕೊಟ್ಟನು.

'ಮಾಳವಿಕಾಗ್ನಿಮಿತ್ರ' ನಾಟಕಕ್ಕೆ ಬರೆದ ಮುನ್ನುಡಿಯಲ್ಲಿ ಆತ ಹೀಗೆ ಹೇಳಿದ್ದಾನೆ: "ದುರ್ಗಮವೂ ಮಾರ್ಗರಹಿತವೂ ಆದ ವ್ಯಾಕರಣದ ಅರಣ್ಯದಲ್ಲಿ ಅಲೆದಾಡಬೇಕಾಗಿದ್ದ ನನ್ನ ಮನಸ್ಸಿಗೆ ಸುಂದರವಾದ ನಾಟಕೋದ್ಯಾನದಲ್ಲಿ ಕೆಲಕಾಲ ವಿಶ್ರಾಂತಿ ಪಡೆಯುವುದು ಎಂಥ ನೆಮ್ಮದಿ! ಆ ಸಂತೋಷವನ್ನು ಪಡೆಯಬೇಕೆಂಬ ಹುಚ್ಚನ್ನು ತಡೆದುಕೊಳ್ಳಲು ಸಾಧ್ಯವಿಲ್ಲ; ಯಶಸ್ವಿಯಾಗಿಯೋ

ಅಯಶಸ್ವಿಯಾಗಿಯೋ, ಅಂತೂ 'ಮಾಳವಿಕಾಗ್ನಿಮಿತ್ರ'ವನ್ನು ನಾನು ಭಾಷಾಂತರಿಸಿರುವುದಕ್ಕೆ ಈ ಹುಚ್ಚೇ ಕಾರಣ."*

ಮಾವೇಲಿಕ್ಕರದಲ್ಲಿ ಇದ್ದಾಗಲೇ ಪ್ರಾರಂಭವಾದ ಭಾಷಾಂತರ ಕಾರ್ಯ ತಿರುವನಂತಪುರದಲ್ಲಿಯೂ ಉತ್ಸಾಹದಿಂದ ಮುಂದುವರಿಯಿತು. ಮುಖ್ಯ ಶ್ಲೋಕಗಳ ಭಾಷಾಂತರವನ್ನು ಕೇಳಿದ ವಿದ್ವಾಂಸ ಮಿತ್ರರು ಅವುಗಳಲ್ಲಿ ಕೆಲವು ಮೂಲವನ್ನೂ ಮೀರಿಸಿವೆ ಎನ್ನುವವರೆಗೂ ಹೋದರು. ಅದು ಅತ್ಯುಕ್ತಿ ಎನ್ನುವುದರಲ್ಲಿ ಸಂದೇಹವಿಲ್ಲ. ೧೯೧೬ರಲ್ಲಿ ಬೇಸಗೆಯಲ್ಲಿ ಕಲಾವಿಲಾಸಂ ನಾಟಕ ಸಂಘದವರು 'ಮಾಳವಿಕಾಗ್ನಿಮಿತ್ರ'ನನ್ನು ಪ್ರದರ್ಶಿಸಿದರು; ಈ ಪ್ರದರ್ಶನವೂ ಸಹ ಅತ್ಯಂತ ಯಶಸ್ವಿಯಾಯಿತು.

ಚಾರುದತ್ತಂ

೧೯೧೭ರ ಬೇಸಗೆಯಲ್ಲಿ ತಿರುವನಂತಪುರದ ಅದೇ ಕಲಾವಿಲಾಸ ನಾಟಕ ಸಂಘದವರು ತಂಪುರಾನನಿಂದ ಒಂದು ಹೊಸ ನಾಟಕವನ್ನು ಬಯಸಿದರು. ಈ ಸಲ ಹೆಚ್ಚು ಕ್ರಿಯೆ ಉಳ್ಳ, ಸಾಕಷ್ಟು ವೈವಿಧ್ಯಮಯವಾದ ಪಾತ್ರ ವರ್ಗವುಳ್ಳ ಒಂದು ನಾಟಕವನ್ನು ನೀಡಬೇಕೆಂದು ಆತ ಬಯಸಿದನು. ಈ ಉದ್ದೇಶಕ್ಕಾಗಿ ಶೂದ್ರಕನ 'ಮೃಚ್ಛಕಟಿಕಂ' ಪ್ರಕರಣವನ್ನು ಮೊದಲಿಗೆ ಆಲೋಚಿಸಲಾಯಿತು. ಆದರೆ ಅದರ ಕೆಲವು ದೃಶ್ಯಗಳು ಅತಿ ದೀರ್ಘ ಎಂದು ಕಂಡು ಬಂದುವು. ನಮ್ಮ ಗ್ರಂಥಕರ್ತನ ಅಭಿಪ್ರಾಯದಂತೆ ಶೂದ್ರಕನ ನಾಟಕಕ್ಕೆ ಸ್ಫೂರ್ತಿಯನ್ನು ನೀಡಿದ್ದ ಭಾಸಕೃತ 'ಚಾರುದತ್ತ'ವನ್ನೂ ಕುರಿತು ಆತ ಆಲೋಚಿಸಿದನು. ಕೊನೆಗೆ 'ಚಾರುದತ್ತ'ದ ಮೊದಲ ನಾಲ್ಕು ಅಂಕಗಳನ್ನು ಭಾಷಾಂತರ ಮಾಡಿ 'ಮೃಚ್ಛಕಟಿಕ'ದ ಉತ್ತರ ಭಾಗದ ಸಂಕ್ಷೇಪ ರೂಪವನ್ನು ಉಪಸಂಹಾರ ರೂಪದಲ್ಲಿ ಅದಕ್ಕೆ ಸೇರಿಸತಕ್ಕದ್ದೆಂದು ಆತ ನಿಶ್ಚಯಿಸಿದನು. ಎಂದಿನಂತೆ ಆತ ಪದ್ಯ ಭಾಗಗಳನ್ನು ಮೊದಲು ಭಾಷಾಂತರಿಸಿ ಆ ಬಳಿಕ ಗದ್ಯ ಭಾಗಗಳನ್ನು ಭಾಷಾಂತರಿಸಿದನು. ಪ್ರಾರಂಭದಲ್ಲಿ ತಾತ್ಪೂರ್ತಿಕ ಪ್ರಿನ್ಸಿಪಾಲ್ ಆಗಿ ಆತ ನಿರ್ವಹಿಸಬೇಕಾಗಿದ್ದ ಉದ್ಯೋಗ ಸಂಬಂಧದ ಕಾರ್ಯ ಕಲಾಪಗಳು ಕೆಲಸ ಸ್ವಲ್ಪ ತಡವಾಗುವುದಕ್ಕೆ ಕಾರಣವಾದುವು, ಆದರೆ ಬೇಗನೆಯೇ ಅದು ಪೂರ್ಣವೇಗದಲ್ಲಿ ನಡೆಯತೊಡಗಿತು. ಅವನ

* ಈ ಪುಸ್ತಕದ ಲೇಖಕರು ಮಾಡಿರುವ ಮೂಲದ ಆಂಗ್ಲ ಅನುವಾದದ ಕನ್ನಡರೂಪ ಈ ವಾಕ್ಯಗಳು.

ತೀವ್ರವಾದ ಅಪೇಕ್ಷೆ ಮತ್ತು ಉತ್ಸಾಹ ಎಷ್ಟರ ಮಟ್ಟಿಗಿದ್ದುವು ಎನ್ನುವುದನ್ನು ಆತನ ದಿನಚರಿಯಿಂದ ಅರ್ಥ ಮಾಡಿಕೊಳ್ಳಬಹುದು:

"ಹೊತ್ತಿಗೆ ಮುಂಚೆ ಎದ್ದು, ಸ್ನಾನಕಾಲಕ್ಕೆ ಮುಂಚೆ ಹನ್ನೆರಡು ಪದ್ಯಗಳನ್ನು ಭಾಷಾಂತರ ಮಾಡಿದೆ. ಕಾವ್ಯದೇವಿಯನ್ನು ಒಲಿಸಿಕೊಂಡು ಸುಪ್ರಸನ್ನಳಾಗಿ ಇರಿಸಬೇಕೆಂಬುದನ್ನು ಚೆನ್ನಾಗಿ ಅರಿತುಕೊಂಡು, ಕಾಲೇಜಿನ ತರಗತಿಗಳಲ್ಲಿ ಪಾಠ ಹೇಳುವ ಕೆಲಸ ಒಂದನ್ನು ಬಿಟ್ಟು ಉಳಿದೆಲ್ಲ ವ್ಯವಹಾರಗಳನ್ನೂ ಉಪೇಕ್ಷೆ ಮಾಡಿದೆ. ಟೆನಿಸ್ ಕ್ರೀಡಾರಂಗದಲ್ಲಿ ಕೂಡ ನನ್ನ ಮನಸ್ಸು ಕಾವ್ಯಪ್ರಪಂಚದಲ್ಲಿಯೇ ಅಲೆದಾಡುತ್ತಿತ್ತು. ರಾತ್ರಿಯೆಲ್ಲ ಗಾಢನಿದ್ರೆ ಇರಲಿಲ್ಲ. ಆದರೂ ಕಷ್ಟಕರವಾದ ಅನೇಕ ಪದ್ಯಗಳನ್ನು ಸುಲಭವಾಗಿ ಭಾಷಾಂತರ ಮಾಡಲಾಯಿತು."

"ಬೆಳಗ್ಗೆಯಿಂದ ಕಾವ್ಯದ ಕಲ್ಪನಾಲೋಕದಲ್ಲಿ ವಾಸ. ಶೂದ್ರಕನ ಪದ್ಯಗಳು ಭಾಸನಲ್ಲಿ ಕಂಡುಬರುವ ಸಹಜ ಸೌಂದರ್ಯವನ್ನಾಗಲಿ ಆಮೇಲಿನ ಕವಿಗಳಲ್ಲಿಯ ಪರಿಪೂರ್ಣತೆಯ ಲಕ್ಷಣವನ್ನಾಗಲಿ ಹೊಂದಿರಲಿಲ್ಲ. ಹೀಗಿದ್ದುದರಿಂದ ಮಲಯಾಳಂ ಭಾಷೆಗೆ ಪರಿವರ್ತಿಸುವ ಮುನ್ನ ಆ ಪದ್ಯಗಳಲ್ಲಿ ಮೇಲ್ಪಾಟು ಮಾಡುವುದಕ್ಕೆ ಪೂರ್ತಿ ಅವಕಾಶವಿತ್ತು ನನಗೆ."

ವಾಸ್ತವವಾಗಿ ಭಾಷಾಂತರ ಕಾರ್ಯವು ಗಡಿಯಾರದ ಚಲನೆಯಂತೆ ಕರಾರುವಾಕ್ಕಾಗಿ ಮುಂದೆ ಸಾಗಿತು; ಭಾಷಾಂತರ, ಮಾಡಿದ್ದನ್ನು ಸರಿ ನೋಡುವುದು, ಮತ್ತು ಅಚ್ಚಿನ ಕರಡು ಪ್ರತಿಯನ್ನು ತಿದ್ದುವುದು– ಇವು ಜೊತೆಜೊತೆಯಲ್ಲಿ ನಡೆದುವು; ಪುಸ್ತಕ ಅತ್ಯಂತ ಶೀಘ್ರವಾಗಿ ಪ್ರಕಟವಾಯಿತು. ಈ ಭಾಷಾಂತರದಲ್ಲಿ ಇತರ ಭಾಷಾಂತರಗಳಲ್ಲಿ ಕಂಡು ಬಂದಿರುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಭಾಷಾಂತರಕಾರ ವಹಿಸಿದ್ದಾನೆ.

ಸ್ವಪ್ನವಾಸವದತ್ತಂ

ಹೊಸದೊಂದು ನಾಟಕವನ್ನು ಭಾಷಾಂತರ ಮಾಡಿ ಪ್ರದರ್ಶಿಸುವುದು ಒಂದು ವಾರ್ಷಿಕ ಸಮಾರಂಭವಾಗಿ ಪರಿಣಮಿಸಿತು; ೧೯೧೮ನೆಯ ವರ್ಷಕ್ಕೆ ಆಯ್ದುಕೊಂಡ ನಾಟಕ ಭಾಸನ '**ಸ್ವಪ್ನವಾಸವದತ್ತ**'. ನಾಟಕವೇನೋ ಯಶಸ್ವಿಯಾಯಿತು; ಆದರೆ ಇತರ ನಾಟಕಗಳಲ್ಲಿ ಇದ್ದುದಕ್ಕಿಂತ ಹಾಸ್ಯ ವಿನೋದ ಇದರಲ್ಲಿ ಕಡಮೆ. ವಿದೂಷಕನು ನಾಲ್ಕನೆಯ ಅಂಕದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾನೆ. ಒಟ್ಟಿನ ಮೇಲೆ ನಾಟಕದಲ್ಲಿಯ ವಾತಾವರಣದಲ್ಲಿ ಉಲ್ಲಾಸ ಕಡಮೆಯೆ.

ಭಾಷಾಂತರವನ್ನು ಸುಲಭವಾಗಿ, ಸಂತೋಷದಿಂದ, ಮಾಡಲಾಯಿತು. ಭಾಸನ ಮನೋಧರ್ಮ ಮತ್ತು ಹದ ಹವಣುಗಳೊಂದಿಗೆ ಎಷ್ಟು ಚೆನ್ನಾಗಿ ತಾದಾತ್ಮ್ಯವನ್ನು ಹೊಂದಲು ಎ.ಆರ್.ಗೆ ಸಾಧ್ಯವಾಯಿತೆಂದರೆ, ಭಾಷಾಂತರವು ಪ್ರತಿಸೃಷ್ಟಿ ಎನ್ನುವ ಮಟ್ಟಕ್ಕೆ ಏರಿತು. ಈ ಕೃತಿ ಉತ್ಕೃಷ್ಟವಾಗಿರುವುದು ಏಕೆ ಎನ್ನುವುದು ಇದರಿಂದ ವಿಶದವಾಗುತ್ತದೆ; ಹೀಗೆ, ನಮ್ಮ ಈ ಮಹಾಗ್ರಂಥಕರ್ತನ ಕಡೆಯ ಭಾಷಾಂತರವಾಗಿ ಉಳಿಯಿತು ಇದು. ಆಮೇಲೆ ಮೂರು ತಿಂಗಳ ಕಾಲ ಮಾತ್ರ ಆತ ಬದುಕಿದ್ದನು.

ಸಂಸ್ಕೃತದಿಂದ ಆದ ಈ ಎಲ್ಲ ಭಾಷಾಂತರಗಳೂ ಹಲವು ಮರು ಮುದ್ರಣಗಳನ್ನು ಕಂಡವು. ಅನೇಕ ಸಲ ಅವುಗಳನ್ನು ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕಗಳೆಂದು ಗೊತ್ತುಮಾಡಲಾಯಿತು. ಒಬ್ಬ ಶ್ರೇಷ್ಠ ಕಲಾಕಾರನ ಕೃತಿಗಳೆಂದು ಇವು ಉನ್ನತ ಗೌರವಕ್ಕೆ ಪಾತ್ರವಾಗಿವೆ.

ಉದ್ದಾಲ ಚರಿತಂ

ಸಂಪೂರ್ಣವಾಗಿ ಬೇರೆಯ ತೆರನಾದ ಭಾಷಾಂತರವನ್ನು ಕುರಿತು ಈಗ ನಾವು ವಿಚಾರ ಮಾಡಬಹುದು; ಇದು ಬೇರೆಯ ಮೂಲದಿಂದ ಸಂಸ್ಕೃತ ಗದ್ಯಕ್ಕೆ ತಿರುಗಿಸಿದ ಕೃತಿ. ಮೂಲಕೃತಿ ಷೇಕ್ಸ್‌ಪಿಯರನ 'ಒಥೆಲೊ'. ಇದು ರಾಜರಾಜವರ್ಮನ ಮುಮ್ಮಂಚಿನ ಕೃತಿಗಳಲ್ಲಿ ಒಂದು (೧೮೯೮). ನಿಷ್ಕೃಷ್ಟವಾಗಿ ಹೇಳುವುದಾದರೆ ಇದು ಭಾಷಾಂತರವೇ ಅಲ್ಲ; ರೂಪಾಂತರ. ಷೇಕ್ಸ್‌ಪಿಯರನ ಪರಿಚಯವಿಲ್ಲದ ಸಂಸ್ಕೃತ ವಾಚಕರಿಗೆ ಆ ಮಹಾ ಕವಿಯ ಸೃಜನಶೀಲ ಪ್ರತಿಭೆಯ ಸ್ವರೂಪವನ್ನು ತೋರಿಸಿಕೊಡುವುದೇ ಈ ಪ್ರಯತ್ನದ ಉದ್ದೇಶ. ಪಾತ್ರಗಳ ಹೆಸರುಗಳನ್ನು ಮಾರ್ಪಡಿಸಿದೆ. (ಒಥೆಲೊ–ಉದ್ದಾಲ, ಡೆಸ್ಡಿಮೋನ–ದೋಷದಮನಾ, ಇತ್ಯಾದಿ); ಇದರಿಂದಾಗಿ ಯೂರೋಪು ಸಂಸ್ಕೃತಿಯ ಪ್ರವೇಶವಿಲ್ಲದ ಓದುಗರು ಜುಗುಪ್ಸೆ ಪಡುವುದಿಲ್ಲ. ಇಡಿಯ ನಾಟಕವನ್ನು ಸಂಕ್ಷೇಪಗೊಳಿಸಿ, ಸರಳವಾದ ಸಂಸ್ಕೃತ ಗದ್ಯದಲ್ಲಿ ಅನುವಾದ ಮಾಡಿದೆ; ಇದು ಲ್ಯಾಮ್‌ನ (Charles Lamb) 'ಷೇಕ್ಸ್ ಪಿಯರ್‌ನ ನಾಟಕ ಕಥೆಗಳು' (Tales from Shakespeare) ಎಂಬ ಕೃತಿಯನ್ನು ಹೋಲುತ್ತದೆ.

* * * *

ಅಧ್ಯಾಯ ಏಳು

ಸೃಷ್ಟ್ಯಾತ್ಮಕ ಮತ್ತು ವಿಮರ್ಶಾತ್ಮಕ ಲೇಖನ ಕಾರ್ಯ

ಹಿಂದಿನ ಅಧ್ಯಾಯದಲ್ಲಿ ರಾಜರಾಜವರ್ಮನು ಮಾಡಿದ ಭಾಷಾಂತರಗಳನ್ನು ಕುರಿತು ವಿವೇಚನೆ ಮಾಡಿದ್ದೇವೆ. ಸಾಧಾರಣ ಅರ್ಥದಲ್ಲಿ ಭಾಷಾಂತರ ಎಂದರೆ ಬೇರೊಂದು ಭಾಷೆಯ ಯಾವುದಾದರೊಂದು ಕೃತಿಯನ್ನು ಯಥಾವತ್ತಾಗಿ ತನ್ನ ಭಾಷೆಯಲ್ಲಿ ನಿರೂಪಿಸುವುದು. ಮೂಲ ಕೃತಿ ಸೃಷ್ಟ್ಯಾತ್ಮಕವಿರಬಹುದು. ಇಲ್ಲವೆ ಬರಿಯ ತಿಳಿವಳಿಕೆ ನೀಡುವುದಾಗಿರಬಹುದು. ಒಳ್ಳೆಯ ಭಾಷಾಂತರವು ಸೃಷ್ಟ್ಯಾತ್ಮಕವಾಗಿದ್ದಾಗ ಅದು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಒಂದು ಬಗೆಯ 'ಸೃಷ್ಟ್ಯಂತರ' ಇಲ್ಲವೆ 'ಪ್ರತಿಸೃಷ್ಟಿ' ಆಗಿರುತ್ತದೆ. ಸಂಸ್ಕೃತದ ಉದ್ದಾಮ ಕೃತಿಗಳ ವಿಷಯದಲ್ಲಿ ಎ.ಆರ್. ಮಾಡಿರುವುದು ಅದನ್ನೇ; ಹೀಗಿರುವುದರಿಂದಲೇ ಸೃಜನಶೀಲ (ಕಾರಯಿತ್ರೀ) ಪ್ರತಿಭೆಯುಳ್ಳವರು ಮಾತ್ರ ಕವಿತೆಯ ಭಾಷಾಂತರವನ್ನು ಚೆನ್ನಾಗಿ ಮಾಡಬಲ್ಲರು. ಹಾಗಿದ್ದರೂ ಕೂಡ, 'ಪ್ರತಿಸೃಷ್ಟಿ'ಯನ್ನು ಸ್ವತಂತ್ರ ಕೃತಿಗಳ ಸೃಷ್ಟಿಗೆ ಸಮ ಎನ್ನಲಾಗದು; ಏಕೆಂದರೆ, ಪ್ರತಿಸೃಷ್ಟಿಯ ಕಾರ್ಯದಲ್ಲಿ ಅಗತ್ಯ ಸ್ಫೂರ್ತಿಯನ್ನು ಪ್ರಚೋದಿಸುವ ಆಕರವಾಗಿ ಮೂಲಕೃತಿ ಕೆಲಸ ಮಾಡುತ್ತದೆ. ಸ್ವತಂತ್ರವಾದ ಸೃಷ್ಟ್ಯಾತ್ಮಕ ಕೃತಿಗಳಲ್ಲಿ ಸೃಷ್ಟಿಶಕ್ತಿ ಸ್ವತಂತ್ರವಾಗಿರಬೇಕು, ಸ್ವಯಂಪ್ರಕಟಿತವಾಗಿರಬೇಕು, ಮತ್ತು ಸಾಮಾನ್ಯವಾಗಿ ಅತ್ಯುಚ್ಚ ಮಟ್ಟದಲ್ಲಲ್ಲಿರಬೇಕು. ಇನ್ನು ಸ್ವತಂತ್ರ ಕವಿಯಾಗಿ ರಾಜರಾಜವರ್ಮನ ಕೊಡುಗೆಗಳು ಏನು ಎಂಬುದನ್ನು ಪರೀಕ್ಷಿಸೋಣ.

ಸಂಸ್ಕೃತ ಕೃತಿಗಳು

ರಾಜರಾಜವರ್ಮನು ಒಬ್ಬ ಸಂಸ್ಕೃತ ಕವಿಯಾಗಿ ತನ್ನ ಲೇಖನೋದ್ಯೋಗವನ್ನು ಪ್ರಾರಂಭಿಸಿದನೆನ್ನುವುದನ್ನೂ, ಆತ ಮೂವತ್ತೊಂದು ವರ್ಷದವನಾಗಿದ್ದಾಗ ಮಲಯಾಳ ಭಾಷೆಯಲ್ಲಿ ಬರೆಯುವುದಕ್ಕೆ ಕೈಹಾಕಿದನೆಂಬುದನ್ನೂ ನಾವು ಈಗಾಗಲೇ ನೋಡಿದ್ದೇವೆ. ಸಂಸ್ಕೃತದಲ್ಲಿ ಆತ ೨೨ ಕೃತಿಗಳನ್ನು ರಚಿಸಿದನು; ಅವುಗಳಲ್ಲಿ ಬಹುಸಂಖ್ಯೆಯವು ತಾರತಮ್ಯ ದೃಷ್ಟಿಯಿಂದ ಸಣ್ಣವು. 'ಗೈರ್ವಾಣೀ

ವಿಜಯಂ' ನಾಟಕದ ಬಗೆಗೂ, 'ಒಥೆಲೊ' ನಾಟಕದ ರೂಪಾಂತರದ ಬಗೆಗೂ ನಾವು ಈಗಾಗಲೇ ಉಲ್ಲೇಖಿಸಿದ್ದೇವೆ. **'ಆಂಗ್ಲ ಸಾಮ್ರಾಜ್ಯಂ'** ಎಂಬ ಪ್ರೌಢ ಕೃತಿಯನ್ನು ಕುರಿತು ಸ್ವಲ್ಪ ವಿವರಪೂರ್ಣವಾಗಿ ವಿವೇಚಿಸಬೇಕಾಗಿದೆ. 'ಪಿತೃಪ್ರಲಾಪಂ' ಮತ್ತು 'ಭಂಗವಿಲಾಪಂ' ಎಂಬ ಚರಮಗೀತ ಮಾದರಿಯ ಎರಡು ಸಣ್ಣ ಕೃತಿಗಳನ್ನು ಸಹ ನೋಡಿದ್ದಾಗಿದೆ. ಆ ಬಳಿಕ 'ಸ್ತೋತ್ರ' ಇಲ್ಲವೆ (ರಾಜ ಮಹಾರಾಜರನ್ನು ಶ್ರೀಮಂತರನ್ನು ಹೊಗಳುವ) 'ಪ್ರಶಸ್ತಿ' ಸ್ವರೂಪದ ಕೆಲವು ಕವನಗಳು ಉಂಟು. ಈ ರಚನೆಗಳಲ್ಲಿ ಬಹುಪಾಲಿನವನ್ನು ಉತ್ಸಾಹಶಾಲಿ ಕವಿಯ ಮೊದಲಿನ ಅಭ್ಯಾಸ ಪ್ರಯತ್ನಗಳೆಂದು ಪರಿಗಣಿಸಬೇಕಾಗುತ್ತದೆ. ಅವುಗಳು ವಿದ್ವತ್ತನ್ನೂ ಕವಿತಾಶಕ್ತಿಯನ್ನೂ ತೋರುವುವಾದರೂ ಅವುಗಳನ್ನು ಪಳಗುತ್ತಿರುವ ಕವಿಯ ಕೃತಿಗಳೆಂದು ಭಾವಿಸಬೇಕು. ಸಂಪೂರ್ಣವಾಗಿ ಸಾಂಪ್ರದಾಯಿಕ ಮಾರ್ಗಕಾವ್ಯದ ಕವಿಯೊಬ್ಬ ಕ್ರಾಂತಿಕಾರಿ ಸ್ವತಂತ್ರ ಮಾರ್ಗದ ಕವಿಯಾಗಿ ಮಾರ್ಪಟ್ಟನು ಎಂಬುದನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಕೆಲವು ಸಂಸ್ಕೃತ ರಚನೆಗಳನ್ನು ಮಾತ್ರ ಎತ್ತಿಕೊಳ್ಳೋಣ.

ಸಾಹಿತ್ಯ ಕುತೂಹಲಂ

ಇದು ಎ.ಆರ್. ಪ್ರಕಟಿಸಿದ ಕೆಲವು ಮೊದಲಿನ ಕವನಗಳ ಸಂಕಲನ; ವಿದ್ವಾಂಸರಾದ ತುರುವೂರ್ ನಾರಾಯಣ ಶಾಸ್ತ್ರಿಗಳು ಉಚಿತ ಟಿಪ್ಪಣಿಯನ್ನು ಒದಗಿಸಿದ್ದಾರೆ. ಇದರಲ್ಲಿ 'ಸರಸ್ವತೀಸ್ತವಂ' (೧೮೯೦), 'ವೀಣಾಷ್ಟಕಂ' (೧೮೮೭), 'ರಾಗಮುದ್ರಾಸಪ್ತಕಂ' (೧೮೮೯), 'ವಿಮಾನಾಷ್ಟಕಂ' (೧೮೯೧), 'ಹಿಂದೂಪದ ವ್ಯುತ್ಪತ್ತಿ' (೧೮೯೦), 'ಪಿತೃಪ್ರಲಾಪಂ (೧೮೯೨) ಮತ್ತು 'ದೇವೀದಂಡಕಂ' (೧೮೮೮), ಎಂಬೀ ರಚನೆಗಳು ಇವೆ. ನಮ್ಮ ಗ್ರಂಥಕರ್ತನು ಎಂಥ ಸಮರ್ಥ ಕಲಾಕಾರನಾಗಿದ್ದನೆಂಬುದನ್ನು ಈ ಎಲ್ಲ ಕವನಗಳೂ ತೋರಿಸುತ್ತವೆ; ಆದರೆ 'ಪಿತೃಪ್ರಲಾಪಂ' ಎಂಬ ಕವನ ಕವಿ ಉಳ್ಳೂರರ ಅಭಿಪ್ರಾಯದಂತೆ ಎಲ್ಲ ದೃಷ್ಟಿಯಿಂದಲೂ ಒಂದು ಸೊಗಸಾದ ಕವಿತಾರಚನೆ.

ಗೈರ್ವಾಣೀ ವಿಜಯಂ

ಈಗಾಗಲೇ ಸೂಚಿಸಿರುವಂತೆ, ಇದು ಏಕಾಂಕ ಪದ್ಯನಾಟಕ; ಗೈರ್ವಾಣಿ (ಸಂಸ್ಕೃತ) ಮತ್ತು ಹೌಣಿ* (ಇಂಗ್ಲಿಷ್) ನಾಟಕದ ಮುಖ್ಯ ಪಾತ್ರಗಳು. ಸಂಸ್ಕೃತ

* 'ಹೂಣ' ಭಾಷೆಗೆ ಸಂಬಂಧಪಟ್ಟದ್ದು 'ಹೌಣಿ'– ಅನುವಾದಕ.

ಮಹಾವಿದ್ವಾಂಸ ಪುನ್ನಶ್ಶೇರಿ ನಂಪಿ ತಾನು ಸಂಪಾದಿಸಿ ನಡಸುತ್ತಿದ್ದ 'ವಿಜ್ಞಾನ ಚಿಂತಾಮಣಿ' ಎಂಬ ನಿಯತಕಾಲಿಕ ಪತ್ರಿಕೆಗೆ ಬೇಕೆಂದು ಕೋರಿದ ಮೇರೆಗೆ ಈ ನಾಟಕವನ್ನು ರಚಿಸಲಾಯಿತು. ಕೋರಿಕೆಯ ಒತ್ತಾಯ ಬಲವಾಗಿದ್ದುದರಿಂದ ಕೃತಿಯನ್ನು ಆರು ದಿನಗಳಲ್ಲಿ ಮುಗಿಸಬೇಕಾಯಿತು. ತಿರುವನಂತಪುರದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿದಾಗ ೧೮೮೯ರಲ್ಲಿ ರಚಿತವಾದ ಈ ನಾಟಕ ಆಗ ಇದ್ದ ಸನ್ನಿವೇಶವನ್ನು ಸಹ ಪ್ರತಿಬಿಂಬಿಸುತ್ತದೆ.

ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ಆದರ್ಶ ತತ್ತ್ವಗಳ ನಡುವಣ ವ್ಯತ್ಯಾಸ, ಸಂಸ್ಕೃತವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕೆಂಬ ಇಂಗ್ಲಿಷಿನ ಬಯಕೆ,– ಇವೇ ನಾಟಕದ ವಸ್ತು. ಸಂಸ್ಕೃತದ ಮಾತೆ ಭಾರತೀದೇವಿ ತನ್ನ ದುಃಖಪೂರ್ಣ ದುಃಸ್ಥಿತಿಗಾಗಿ ರೋದಿಸುತ್ತಾಳೆ. ಈ ಸನ್ನಿವೇಶದ ಅವಕಾಶವನ್ನು ಉಪಯೋಗಿಸಿ ಕೊಂಡು ಗ್ರಂಥಕರ್ತನು ಇಂಗ್ಲಿಷಿನ ಗುಣಾವಗುಣಗಳನ್ನು ಸವಿವರವಾಗಿ ನಿರೂಪಿಸುತ್ತಾನೆ. ಒಂದು ಸೊಗಸಾದ ಶ್ಲೋಕದಲ್ಲಿ, ಇಂಗ್ಲಿಷ್ ಭಾಷೆಯ ವರ್ಣಮಾಲೆಯಲ್ಲಿ ಅಕ್ಷರಗಳು ಕೊರತೆ ಬಿದ್ದಿವೆ ಎಂದು ಗೈರ್ವಾಣಿ ಇಂಗ್ಲಿಷನ್ನು ಗೇಲಿ ಮಾಡುತ್ತಾಳೆ. ಈಗಿನ ಕಾಲದ ವಾಚಕನಿಗೆ ಇಂಥ ವಾದಗಳೂ ಸಂವಾದಗಳೂ ಅತಿ ಸಾಮಾನ್ಯವಾಗಿ ಕಂಡರೂ ಅಂದಿನ ದಿನಗಳಲ್ಲಿ ಶಿಕ್ಷಣ ಇಲಾಖೆಯಲ್ಲಿ ಇದ್ದ ಉದ್ವೇಗದ ವಾತಾವರಣವನ್ನು ತೆರೆದು ತೋರಿಸುತ್ತವೆ.

ವಿಟ ವಿಭಾವರಿ

ರಾಜರಾಜವರ್ಮನ ಸಂಸ್ಕೃತ ಪದ್ಯಗಳಲ್ಲಿ ಅತ್ಯಂತ ಸ್ವಾರಸ್ಯವಾದದ್ದು ಇದು. ರಾಧಾಮಾಧವರ ಸಮಾಗಮವನ್ನು ಬಿಟ್ಟು ಬೇರಿನ್ನೇನೂ ಇಲ್ಲ ಇದರಲ್ಲಿ; ರಾತ್ರಿಯ ನಾಲ್ಕು ಯಾಮಗಳನ್ನು ಸೂಚಿಸುವ ನಾಲ್ಕು ಸರ್ಗಗಳಲ್ಲಿ ಆ ಸಮಾಗಮವನ್ನು ವರ್ಣಿಸಿದೆ. ಕಾವ್ಯಶೈಲಿ, ಪದಗಳ ಆಯ್ಕೆ ಮತ್ತು ಅಭಿವ್ಯಕ್ತಿಗಳಲ್ಲಿ ಎ.ಆರ್. ಪರಿಣತ ಕೌಶಲ್ಯವನ್ನೂ ಕಲಾತ್ಮಕತೆಯನ್ನೂ ಮೆರೆದಿದ್ದಾನೆ. ಇಂಗ್ಲಿಷ್ ಭಾಷಾಂತರದಲ್ಲಿ ಮೂಲಕೃತಿಯ ಸೌಂದರ್ಯವನ್ನು ಎಷ್ಟು ಮಾತ್ರಕ್ಕೂ ಹಿಡಿದಿರಲು ಆಗಲಾರದು; ಆದ್ದರಿಂದ ಅಂಥ ಪ್ರಯತ್ನವನ್ನೇನೂ ಇಲ್ಲಿ ಮಾಡಿಲ್ಲ.

ಆಂಗ್ಲ ಸಾಮ್ರಾಜ್ಯಂ

ಮಹಾಕಾವ್ಯದ ಶೈಲಿಯಲ್ಲಿ ಬರೆದಿರುವ ಈ ನೀಳ್ಗವಿತೆ ರಾಜರಾಜವರ್ಮನ ಕಾವ್ಯಗಳಲ್ಲಿ ಮಾತ್ರವಲ್ಲದೆ ಆಧುನಿಕ ಕವಿಗಳು ಬರೆದಿರುವ ಸಂಸ್ಕೃತ ಕಾವ್ಯಗಳಲ್ಲಿ

ಕೂಡ ಒಂದು ಉನ್ನತವಾದ ಸ್ಥಾನವನ್ನು ಹೊಂದಿದೆ. ಆಂಗ್ಲ ಸಾಮ್ರಾಜ್ಯ ಎಂದರೆ ಬ್ರಿಟಿಷ್ ಸಾಮ್ರಾಜ್ಯ; ವಿಕ್ಟೋರಿಯಾ ಮಹಾರಾಣಿಯ ಆಳ್ವಿಕೆಯ ವಜ್ರ ಮಹೋತ್ಸವದವರೆಗೆ ಸಾಮ್ರಾಜ್ಯದ ಕಥೆಯನ್ನು ಈ ಕಾವ್ಯ ನಿರೂಪಿಸುತ್ತದೆ. ಭಾರತ ದೇಶದಲ್ಲಿ ಈ ಉತ್ಸವವನ್ನು ೧೮೯೭ರಲ್ಲಿ ಸಮಸ್ತ ವೈಭವಗಳಿಂದ ನೆರವೇರಿಸಲಾಯಿತು. ವೈಭವೋಪೇತ ಉತ್ಸವ ಸಮಾರಂಭದ ಸಂದರ್ಭದಲ್ಲಿ, ಪ್ರಸಿದ್ಧವಾದ ರಘುವಂಶ ಮಹಾಕಾವ್ಯದ ಮಾದರಿಯಲ್ಲಿ ಒಂದು ದೀರ್ಘವಾದ ಕಾವ್ಯವನ್ನು ಬರೆದರೆ ಸೊಗಸಾಗಿರುವುದೆಂದು ರಾಜರಾಜವರ್ಮನು ಯೋಚಿಸಿದನು. ಉತ್ಸವವೇ ಸದ್ಯದಃ ಪ್ರೇರಣೆಯಾದರೂ, ಸಂಸ್ಕೃತ ಪಾಠಶಾಲೆಗಳ ವಿದ್ಯಾರ್ಥಿಗಳು ಚರಿತ್ರೆ ಮತ್ತು ಭೂಗೋಳಗಳಂತಹ ವಿಷಯಗಳನ್ನು ಕಲಿಯಬೇಕು; ಕಾವ್ಯಭಾಷೆಯಲ್ಲಿ ಆಚ್ಛಾದಿತವಾಗಿದ್ದರೂ ಯಥಾರ್ಥವಾದ ಇತಿಹಾಸದ ಆಧಾರದ ಮೇಲೆ ರಚಿಸಿದ ಅಂಥ ಒಂದು ಗ್ರಂಥವನ್ನು ಯೋಗ್ಯವಾದ ಸಂಸ್ಕೃತ ಪಠ್ಯ ಪುಸ್ತಕಗಳ ಕೊರತೆಯನ್ನು ಕೆಲಮಟ್ಟಿಗೆ ನೀಗಬಹುದು, ಎಂದು ಆತ ಆಲೋಚಿಸಿದನು. ಆತ ತನ್ನ ಹಿರಿಯ ಸಲಹೆಗಾರ ಕೇರಳವರ್ಮನ ಸಲಹೆ ಕೇಳಲಾಗಿ, ಆತ ಒಪ್ಪಿಗೆ ಕೊಟ್ಟನು; ಹೀಗೆ ವಜ್ರಮಹೋತ್ಸವಕ್ಕೆ ಎರಡು ವಾರ ಮುಂಚೆ ಗ್ರಂಥರಚನೆಗೆ ತೊಡಗಿದನು. ೨೩ ಸರ್ಗಗಳ ಈ ಕೃತಿ ಹೆಚ್ಚುಕಡಮೆ ಎರಡು ವರ್ಷಗಳಲ್ಲಿ ಮುಗಿಯಿತು, ೧೯೦೦ರಲ್ಲಿ ಪ್ರಕಟವಾಯಿತು.

ಲಂಡನ್ ನಗರದ ವಿವರಪೂರ್ಣವಾದ ವರ್ಣನೆಯೊಡನೆ ಕೃತಿ ಮೊದಲಾಗುತ್ತದೆ. ಕೃತಿಕರ್ತನು ನಗರವನ್ನು ನೋಡದೆ ಇದ್ದರೂ, ಕೇಳಿ ಓದಿ ತಿಳಿದ ಸಂಗತಿಗಳ ಆಧಾರದ ಮೇಲೆ ಆತನ ಕಲ್ಪನಾಶಕ್ತಿ ಕಾರ್ಯ ಮಾಡಿತು; ಕೃತಿ ವಿಶ್ವಾಸಾರ್ಹವಾದ, ಸುಂದರವಾದ ವರ್ಣನೆಯಾಗಿ ಪರಿಣಮಿಸಿತು. ಅನಂತರ ಈಸ್ಟ್ ಇಂಡಿಯಾ ಕಂಪೆನಿಯ ಸಾಹಸ ಕಾರ್ಯಗಳನ್ನು ವರ್ಣಿಸಿ, ಎಲ್ಲ ಮುಖ್ಯ ಐತಿಹಾಸಿಕ ಘಟನೆಗಳನ್ನೂ ಹಂತಹಂತವಾಗಿ ನಿರೂಪಿಸಲಾಗಿದೆ; ನಿರೂಪಣೆಯಲ್ಲಿ ಬ್ರಿಟಿಷ್ ಹಾಗೂ ಭಾರತೀಯ ಪ್ರಮುಖ ವ್ಯಕ್ತಿಗಳು ಹಾದುಹೋಗುತ್ತಾರೆ; ಘರ್ಷಣೆಗಳು, ಸಾಹಸ ಕಾರ್ಯಗಳು, ಕಾದಾಟಗಳು, ಶರಣಾಗತಿ ಮತ್ತು ಕೊನೆಯಲ್ಲಿ, ಬಹುಮಟ್ಟಿಗೆ ಶಾಂತಿಯಿಂದ ಕೂಡಿದ ಆಳ್ವಿಕೆ, ಈ ಆಳ್ವಿಕೆಯಲ್ಲಿ ಒಂದು ಜನಾಂಗವಾಗಿ ಇಂಡಿಯಾ ದೇಶವು ಸಾಧಿಸಿದ ಅಭಿವೃದ್ಧಿ ಕಾರ್ಯಗಳು ಮತ್ತು ಅದು ಅಭಿವೃದ್ಧಿ ಹೊಂದಿದ ಬಗೆ– ಇವೆಲ್ಲವೂ ನಿರೂಪಣೆಯಲ್ಲಿ ಕಾಣಬರುತ್ತವೆ. ಹನ್ನೊಂದನೆಯ ಸರ್ಗದಲ್ಲಿ ಟಿಪ್ಪು ಸುಲ್ತಾನನು ಕೇರಳದ ಮೇಲೆ ದಾಳಿ ನಡೆಸಿದ್ದನ್ನು ಪ್ರಮುಖವಾಗಿ ವರ್ಣಿಸಿದೆ.

ರಾಜರಾಜವರ್ಮನು ತಾನು ನಿರೂಪಿಸಿದ ಸಂಗತಿಗಳಿಗೆ ಈ ಮುಂದೆ ತಿಳಿಸುವ ಗ್ರಂಥಗಳನ್ನು ಆಧಾರವಾಗಿ ಇಟ್ಟುಕೊಂಡಿದ್ದನು ಎಂಬುದು ಆತನ ದಿನಚರಿ ಪುಸ್ತಕದಿಂದ ವ್ಯಕ್ತಪಡುತ್ತದೆ. ಹಂಟರ್ ಮಹಾಶಯನ 'ಇಂಡಿಯಾ ದೇಶದ ಚರಿತ್ರೆ' [History of India], 'ಭಾರತೀಯ ರಾಜ್ಯಾಡಳಿತ ವ್ಯವಸ್ಥೆಯ ಹಿನ್ನೋಟ ಮತ್ತು ಮುನ್ನೋಟ' [The Retrospects and Prospects of Indian polity], 'ಕ್ಲೈವ್ ಮತ್ತು ವಾರೆನ್ ಹೇಸ್ಟಿಮಗ್ಸ್ ಇವರ ಮೇಲೆ ಬರೆದ ಪ್ರಬಂಧಗಳು' (Essays on Clive and Warren Hastings), 'ಚಿತ್ರಮಯ ಭಾರತ' (Picturesque India), ಮ್ಯಾಕೆನ್ಸಿ ಅವರ 'ಹತ್ತೊಂಬತ್ತನೆಯ ಶತಮಾನದ ಇತಿಹಾಸ' (The History of the Nineteenth Century), ಇದಿಷ್ಟು ಇತಿಹಾಸಕ್ಕೆ ಸಂಬಂಧಪಟ್ಟಂತೆ. ವರ್ಣನೆ ಗೆಲುವಾಗಿರಬೇಕು, ಸ್ವಾರಸ್ಯವಾಗಿರಬೇಕು, ಇದು ಅವನ ತೀವ್ರವಾದ ಅಭಿಲಾಷೆ. ಅವನು ಉಪಯೋಗಿಸಿರುವ ಕೆಲವು ಉಪಮೆಗಳು ಕಾಲಿದಾಸನ ನೆನಪನ್ನು ತರುತ್ತವೆ; ಕೆಲವು ಸ್ವತಂತ್ರವಾದವು, ಇನ್ನು ಕೆಲವು ಸಂಸ್ಕೃತ ಮಹಾಕಾವ್ಯಗಳ ಪ್ರಭಾವವನ್ನು ಸೂಚಿಸುತ್ತವೆ.

ಸಾಮಾನ್ಯವಾಗಿ ಹೇಳುವುದಾದರೆ 'ಆಂಗ್ಲ ಸಾಮ್ರಾಜ್ಯಂ' ಸಂಸ್ಕೃತದಲ್ಲಿ ಒಂದು ಘನವಾದ ಕಾವ್ಯ. ಎ.ಆರ್.ನ ಸಮಕಾಲೀನನೂ ಮಿತ್ರನೂ ಆದ ಮಹಾ ಕವಿ ಕೆ.ಸಿ. ಕೇಶವಪಿಳ್ಳೆ ಅದನ್ನು ಮಲಯಾಳಕ್ಕೆ ಭಾಷಾಂತರಿಸಿದ್ದಾನೆ. ಸಂಸ್ಕೃತ ಭಾಷೆ ಭಾರತೀಯ ಭಾಷೆಗಳು ಮತ್ತು ಭಾರತೀಯ ಸಂಸ್ಕೃತಿ, ಇವುಗಳ ವೈಭವವನ್ನು ಹಾಡಿಹೊಗಳಿದ ಒಬ್ಬ ರಾಷ್ಟ್ರೀಯ ಕವಿ, ಭಾರತಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸಿದ್ದ ಒಂದು ಸಾಮ್ರಾಜ್ಯದ ಗುಣಗಳನ್ನು ಕೊಂಡುಕೊನೆಯುವ ಯೋಜನೆಯನ್ನು ಏಕೆ ಕೈಗೊಂಡನೋ ಎಂದು ಆಧುನಿಕ ವಾಚಕನು ಆಶ್ಚರ್ಯ ಪಡಬಹುದು. ಈ ಸನ್ನಿವೇಶವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ ಆ ಆಲೋಚನೆಯನ್ನು ಮಂಡಿಸಿದ್ದು ಯಾವ ಕಾಲದಲ್ಲಿ ಎಂಬುದನ್ನೂ ನೂರು ವರ್ಷಗಳ ಹಿಂದೆ ವಿದ್ಯಾವಂತರಾದ ಭಾರತೀಯರು ಯಾವ ಬಗೆಗೆ ಭಾವನೆಗಳನ್ನು ಹೊಂದಿದ್ದರು ಎಂಬುದನ್ನೂ ಆತ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಈಗ ನಾವು ಅರಿತುಕೊಂಡಿರುವಂತಹ ಭಾರತ ರಾಷ್ಟ್ರೀಯ ಮನೋಭಾವ ಆಗ ಇನ್ನೂ ಮೊಳೆತಿರಲಿಲ್ಲ. ಏನೇ ಆಗಲಿ, ಒಂದು ಸಾಮ್ರಾಜ್ಯದ ಇತಿಹಾಸದ ಮೇಲೆ ಒಬ್ಬ ಕವಿ ಕಾವ್ಯರಚನೆ ಮಾಡಿದ ಮಾತ್ರಕ್ಕೆ ಆ ಕವಿ ಒಂದು ಪ್ರಬಲವಾದ ಸಾಮ್ರಾಜ್ಯದ ಕೈಗೊಂಬೆ ಎಂದು ಅವನಿಗೆ ಕಳಂಕ ಹಚ್ಚಲು ಸಾರ್ಥಕವಾದ ಅವಕಾಶವನ್ನು ಒದಗಿಸುವುದಿಲ್ಲ.

ಮಲಯಾಳಂ ಕವಿತೆಗಳು

ಗ್ರಂಥಕರ್ತನು ಮಲಯಾಳಂ ಭಾಷೆಯಲ್ಲಿ ರಚಿಸಿರುವ ಕಾವ್ಯ ನಿರ್ಮಿತಿ ಅಂಥದೇನೂ ವಿಪುಲವಾಗಿಲ್ಲ. ಉಲ್ಲೇಖಿಸಲರ್ಹವಾದ ಕವಿತೆ ಎರಡು ಮಾತ್ರ; ಇವೆರಡೂ ದೊಡ್ಡ ಪ್ರಮಾಣದವಲ್ಲವಾದರೂ ಗಮನಾರ್ಹವಾದವು. ಪೂರ್ತಿಯಾಗಿ ಪರಸ್ಪರ ಭಿನ್ನವಾದ ಕವಿಯ ವ್ಯಕ್ತಿತ್ವದ ಎರಡು ಮುಖಗಳನ್ನು ಅವು ವ್ಯಕ್ತಪಡಿಸುತ್ತವೆ.

ಮಲಯ ವಿಲಾಸಂ

೧೮೯೫ರಲ್ಲಿ ರಚಿತವಾದ 'ಮಲಯ ವಿಲಾಸಂ' ಪಶ್ಚಿಮ ಘಟ್ಟಗಳ ಮೇಲೆ ರಚಿತವಾದ ಒಂದು ಭಾವಗೀತೆ. ೧೮೯೫ರಲ್ಲಿ ಕವಿ ಅರ್ಧ ರೈಲು ಮಾರ್ಗವಾಗಿ, ಉಳಿದರ್ಧ ರಸ್ತೆಯಲ್ಲಿ ಪ್ರಯಾಣ ಮಾಡಿ ಹಿಂದಿರುಗುತ್ತಿದ್ದಾಗ ಪಶ್ಚಿಮ ಘಟ್ಟಗಳ ಚೆಲುವನ್ನು ನೋಡಿ ಆತ ಬೆರಗಾಗಿ ಹೋದನು. ವಲ್ಲಿಯೂರಿನಿಂದ ಆರುವ ಮೊಟಿಗೆ ಅಂಚೆಯ ಮೇಲ್ ಬಂಡಿಯಲ್ಲಿ ಪ್ರಯಾಣ ಮಾಡುವ ಯಾವ ಪ್ರಯಾಣಿಕನನ್ನಾದರೂ ಉದ್ದಕ್ಕೂ ಕಾಣುವ ಪಶ್ಚಿಮ ಘಟ್ಟಗಳ ನಿರಂತರ ದೃಶ್ಯಮಾಲೆ ಆಕರ್ಷಿಸುವುದು; ಈ ದೃಶ್ಯಮಾಲೆ ಕವಿಯ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಿತೆಂದರೆ ಅದನ್ನು ಕಲ್ಪನಾತ್ಮಕ ಪದ್ಯರೂಪದಲ್ಲಿ ವರ್ಣಿಸಬೇಕೆಂಬ ಮನಸ್ಸಿನ ಸೆಳೆತವನ್ನು ಅವನು ತಡೆಯಲಾರದೆ ಹೋದನು. ೨೪ ಪದ್ಯಗಳುಳ್ಳ ಈ ಕವಿತೆಯನ್ನು ರಸಿಕರು ಮೆಚ್ಚಿಕೊಂಡರು. ಭಾವಪ್ರಧಾನವಾದ ಕವಿತೆ ಅಂದಿನ ಮಲಯಾಳ ಭಾಷೆಗೆ ಅಪರಿಚಿತವಾಗಿತ್ತು. ಆದ್ದರಿಂದ 'ಮಲಯವಿಲಾಸಂ' ನೀಡಿದ ಹೊಸ ಸವಿಯನ್ನು ಎಲ್ಲರೂ ಸ್ವಾಗತಿಸಿದರು. ಈ ಸಣ್ಣ ಕವಿತೆ ಮಲಯಾಳಂ ಭಾಷೆಯಲ್ಲಿ ಒಂದು ಹೊಸ ಕಾವ್ಯ ಪ್ರಕಾರದ ಸಾಧ್ಯತೆಗಳನ್ನು ತೆರೆದು ತೋರಿಸಿಕೊಟ್ಟಿತು; ಇದೇ ಅದರ ವಿಶೇಷ ಗುಣಲಕ್ಷಣ.

ಪ್ರಸಾದಮಾಲಾ

'ಮಲಯವಿಲಾಸಂ' ಕೃತಿ ರಚನೆಯಾದ ಮೇಲೆ ಪದ್ಯ ರಚನೆ ಮುಂದುವರಿದರೂ ಅದು ಭಾಷಾಂತರ ಕಾರ್ಯಕ್ಕೆ ಮುಖ್ಯವಾಗಿ ಸೀಮಿತವಾಗಿತ್ತು. ಗ್ರಂಥಕರ್ತನು ನಿಧನವಾಗುವುದಕ್ಕೆ ಕೇವಲ ಕೆಲವು ತಿಂಗಳು ಮುಂಚೆ, ೧೯೧೮ರಲ್ಲಿ, ಮಲಯಾಳಿಯಲ್ಲಿ ಮುಂದಿನ ಸ್ವತಂತ್ರ ಕೃತಿ ರಚಿತವಾಯಿತು. ಆಳುವ ದೊರೆ ಶ್ರೀ ಮೂಲಂ ತಿರುನಾಳ್‌ನ ಷಷ್ಟಿಪೂರ್ತಿ ೧೯೧೮ರಲ್ಲಿ ನೆರವೇರಿತು; ಎ.ಆರ್. ತನ್ನ ಮಹಾಪೋಷಕನಿಗೆ ಪದ್ಯದ ಮೂಲಕ ತನ್ನ ಕಾಣಿಕೆಯನ್ನು ಸಮರ್ಪಿಸಲು

ಈ ಸಂದರ್ಭವನ್ನು ಉಪಯೋಗಿಸಿಕೊಂಡನು. ಆದರೆ ತಕ್ಕಮಟ್ಟಿಗೆ ದೀರ್ಘವಾದ ಈ ಕವಿತೆ ಸಾಧಾರಣ ಅರ್ಥದಲ್ಲಿ ಕೇವಲ ಪ್ರಶಸ್ತಿರೂಪದ ಕಾವ್ಯವಾಗಿರಲಿಲ್ಲ. ಒಟ್ಟುಗೂಡಿಸಿ ಹೋದ ಹಲವಾರು ದೇವತಾಸ್ತೋತ್ರಗಳ ಮಾಲಿಕೆಯನ್ನು ಒಳಗೊಂಡ ಬಹಳ ಪಾಂಡಿತ್ಯಪೂರ್ಣ ಕಾವ್ಯವಾಗಿತ್ತು ಅದು. ಋಗ್ವೇದವನ್ನು ಆಳವಾಗಿ ಅಭ್ಯಾಸಮಾಡಿದ ಮೇಲೆ ಕವನಗಳು ರಚಿತವಾಗಿವೆ; ಇದು ಎಂಟು 'ಮಂತ್ರ'ಗಳಿಂದ ವೇದ್ಯವಾಗುತ್ತದೆ. ಹಿಂದೂ ದೇವತಾ ಸಮುದಾಯವನ್ನು ಸ್ತುತಿ ಮಾಡಿದ ಮೇಲೆ ಬುದ್ಧ, ಜಿನ, ಕ್ರಿಸ್ತ ಮತ್ತು ಮಹಮ್ಮದ್ ಇವರುಗಳನ್ನು ಕವಿ ಪ್ರಾರ್ಥಿಸುತ್ತಾನೆ. ಈ ಸಂಗತಿ ಕವಿಯ ವಿಶಾಲ ಮನೋಧರ್ಮವನ್ನೂ, ಆತನ ಆಧ್ಯಾತ್ಮಿಕ ಹಾಗೂ ತಾತ್ವಿಕ ಒಲವು ನಿಲವುಗಳನ್ನು ಸೂಚಿಸುತ್ತದೆ.

ಗದ್ಯ ಕೃತಿಗಳು

ರಾಜರಾಜವರ್ಮನು ನಿಸ್ಸಂದೇಹವಾಗಿ ಕವಿತಾಶಕ್ತಿಯನ್ನು ಹೊಂದಿದ್ದನು ಎಂಬುದನ್ನು ನೋಡಿದ್ದೇವೆ; ಆದರೆ ಆತನ ಪ್ರತಿಭೆ ಪೂರ್ತಿಯಾಗಿ ಅರಳಿರುವುದನ್ನು ಆತನ ಗದ್ಯ ರಚನೆಗಳಲ್ಲಿ ಕಾಣಬೇಕು. ಆತ ಒಬ್ಬ ಶ್ರೇಷ್ಠ ಗದ್ಯ ಲೇಖಕ; ಆತ ರೂಪಿಸಿದ ಮಾದರಿಯಾದ ಆಧುನಿಕ ಗದ್ಯ ಇತರರಿಂದ ಅನುಕರಣ ಯೋಗ್ಯವಾದದ್ದು. ಆತ ಬರೆದ ಗದ್ಯ ಬಗೆಬಗೆಯಾದದ್ದು– ವಿಚಾರಾತ್ಮಕ, ವಿವರಣಾತ್ಮಕ, ವಿಮರ್ಶಾತ್ಮಕ ಮತ್ತು ಸೃಷ್ಟ್ಯಾತ್ಮಕ. ಆತನ ಗದ್ಯದ ಬರವಣಿಗೆಯ ಬಹುಪಾಲು ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಕರಣ ಗ್ರಂಥಗಳನ್ನು ಒಳಗೊಂಡಿವೆ; ಇಂಥಲ್ಲಿ ವಿಷಯವೆಷ್ಟೋ ಅಷ್ಟಕ್ಕೆ ಕಟ್ಟುಬಿದ್ದು ಶುಷ್ಕವಾಗಿರುವ ಪ್ರವೃತ್ತಿ ಸಹಜವಾದದ್ದು. ಅಲ್ಲಿ ಕೂಡ ರಾಜರಾಜವರ್ಮನ ಪರಿಯೆ ಬೇರೆ ಎನ್ನುವುದನ್ನು ಕಾಣುತ್ತೇವೆ. ಕಷ್ಟಕರವಾದ ಭಾಷಾವಿಷಯಕ ಮತ್ತು ತಾತ್ತ್ವಿಕ ಪ್ರಶ್ನೆಗಳನ್ನು ವಿವರಿಸಲು ಆತ ಮನಸ್ಸಿಗೆ ನಾಟುವಂಥ ಉಪಮಾನಗಳನ್ನೂ ದೃಷ್ಟಾಂತಗಳನ್ನೂ ನಡುನಡುವೆ ಬಳಸುತ್ತಾನೆ. ಆತ ಬರೆಯುವ ಗದ್ಯದಲ್ಲಿ ತನ್ನದೇ ಆದ ಒಂದು ಹೊಳಪಿದೆ; ಅಂಥ ಶಾಸ್ತ್ರ ವಿಷಯಗಳನ್ನು ಕುರಿತು ಬರೆಯುವಾಗ ಅವನನ್ನು ಮೀರಿಸುವುದು ಇತರರಿಗೆ ಕಷ್ಟವೆಂದು ಕಂಡುಬಂದಿದೆ. 'ಕೇರಳ ಪಾಣಿನೀಯಂ' ಗ್ರಂಥಕ್ಕೆ (ಅದರ ಪರಿಷ್ಕೃತ ಮುದ್ರಣಕ್ಕೆ) ಬರೆದಿರುವ ದೀರ್ಘವಾದ ಪೀಠಿಕೆ ಈ ಪ್ರತಿಭಾ ವಿಶೇಷಕ್ಕೆ ಒಂದು ಶ್ರೇಷ್ಠ ನಿದರ್ಶನ.

ಈ ವಿಭಾಗದಲ್ಲಿ ಆತನ ಪ್ರಬಂಧಗಳು ಹಾಗೂ ಸಾಹಿತ್ಯ ವಿಮರ್ಶೆಯ ತಿಗಳ ಮೇಲೆ ನಮ್ಮ ಗಮನವೆಲ್ಲವನ್ನೂ ಹರಿಸಬಹುದು; ಅವುಗಳ ಪ್ರಮಾಣ ಷ್ಟೇನೂ ಹೆಚ್ಚಲ್ಲ, ಆದರೆ ಗುಣದ ದೃಷ್ಟಿಯಿಂದ ಮೇಲುಮಟ್ಟದವು. ಅಚ್ಚುಕಟ್ಟು, ಷ್ಟತೆ, ವಿಚಾರಗಳ ಕರ್ತಬದ್ಧ ಜೋಡಣೆ, ಸ್ಪಷ್ಟತೆ ಹಾಗೂ ನಿರೂಪಣೆಯ ಗಸು, ಈ ಎಲ್ಲ ಗುಣಗಳಿಗಾಗಿ ಆತನ ಗದ್ಯ ಲೇಖನಗಳು ಗ ನಾರ್ಹವಾಗಿವೆ.

ಸಾ ವಿಮರ್ಶೆ

ರಾಜರಾಜವರ್ಮನ ಕಾಲದ ಮಲಯಾಳ ಭಾಷೆಯಲ್ಲಿ ಸಾಹಿತ್ಯ ವಿಮರ್ಶೆ ಎ ಪುದಾದದ್ದು ಇನ್ನೂ ಶೈಶವಾವಸ್ಥೆಯಲ್ಲಿತ್ತು. ವಿದ್ವಾಂಸರಿಗೆ ಪರಿಚಿತವಾಗಿದ್ದುವು ಇ ಮಾತ್ರ; ಪದ್ಯ ಕೃತಿಗಳ ಬಾಹ್ಯ ಪರಿಕರಗಳನ್ನು ಸಾಂಪ್ರದಾಯಿಕ ವಿಧಾನದಲ್ಲಿ ಸುವುದು ಮತ್ತು ಅವುಗಳ ಗುಣದೋಷಗಳನ್ನು ತಿಳಿಸುವುದು; ಮತ್ತು ್ಯನಗಳನ್ನು, ವಿವರಣಾತ್ಮಕ ಟಿಪ್ಪಣಿಗಳನ್ನು ಬರೆಯುವುದು. ಸಾಹಿತ್ಯ ಕೃತಿಗಳ ಳು ತಿರುಳುಗಳ ಬೆಲೆ ಕಟ್ಟಿ ಅವುಗಳ ಮೇಲೆ ಬೆಳಕು ಚೆಲ್ಲುವ ವಿಚಾರವು ್ಚತ್ಯ ಸಾಹಿತ್ಯದ ಸಂಘಾತದ ಪರಿಣಾಮವಾಗಿ ಹುಟ್ಟಿಕೊಂಡಿತು.

ಕರಿತ್ರಂ– ಹೊಸ ಮುದ್ರಣ

ಉಣ್ಣಾಯಿವಾರಿಯರ್ ರಚಿಸಿದ 'ನಳಚರಿತ್ರಂ' ಎಂಬ ಪ್ರಖ್ಯಾತವಾದ ಷ್ಠ ಕಥಕ್ಕಳಿಯನ್ನು (೧೯೦೫) ಕುರಿತು ರಾಜರಾಜವರ್ಮನು ಮೆಚ್ಚುಗೆಯ ಖನವನ್ನು ಬರೆದಾಗ ಅದು ಸಾಹಿತ್ಯ ರಸಿಕರ ಕಣ್ಣು ತೆರೆಯಿಸಿತು. ಪ್ರಾಚೀನ ಷ್ಠ ಕೃತಿಯೊಂದನ್ನು ಹೇಗೆ ಆಧುನಿಕ ವಿಮರ್ಶೆಯ ತುಲನೆಗೆ ಒಳಪಡಿಸಬಹುದು ನ್ನುವುದನ್ನು ಆತ ತೋರಿಸಿದನು. 'ನಳಚರಿತ್ರಂ ಅಟ್ಟಕ್ಕಥಾ' ಒಂದು ಕ್ಲಿಷ್ಟ ಕೃತಿ; ಲಕ್ಷ್ಯದಿಂದ ಮಾಡಿದ್ದ ಮುದ್ರಣ ಅದನ್ನು ಇನ್ನಷ್ಟು ಕ್ಲಿಷ್ಟವಾಗಿ ಮಾಡಿತ್ತು. ಆದ್ದರಿಂದ, ಎದ್ದುಕಾಣುವ ಅಚ್ಚಿನ ತಪ್ಪುಗಳನ್ನು ತಿದ್ದಿ, ಕಷ್ಟಕರವಾದ ಭಾಗಗಳಿಗೆ ವ್ಯಾಖ್ಯಾನವನ್ನೂ, ಟಿಪ್ಪಣಿಗಳನ್ನೂ ಸಿದ್ಧಪಡಿಸಬೇಕೆಂದು ರಾಜರಾಜವರ್ಮನು ನಿಶ್ಚಯಿಸಿದನು. ಈ ರೀತಿ ಸಿದ್ಧವಾದ ಮುದ್ರಣ ವಿದ್ವತ್ಪೂರ್ಣವೂ ವಿಷಯದ ಮೇಲೆ ಬೆಳಕು ಚೆಲ್ಲುವಂಥದೂ ಆದ ಆತನ ಪೀಠಿಕೆಯನ್ನು ಒಳಗೊಂಡಿದೆ; ಆ ಪೀಠಿಕೆಯನ್ನು 'ಕಾಂತಾರತಾರಕಂ' (ದಟ್ಟವಾದ ಕಾಡಿನಲ್ಲಿ ಒಂದು ನಕ್ಷತ್ರ) ಎಂದು ಕರೆಯಲಾಗಿದೆ. ಭವ್ಯಕೃತಿಯೊಂದರ ಸಹಜ ಸೌಂದರ್ಯವನ್ನು ವಿಶ್ಲೇಷಿಸಿ ವಿವರಿಸುವ

ಒಬ್ಬ ಸ್ವತಂತ್ರ ದೃಷ್ಟಿಯ ವಿಮರ್ಶಕ ಹಾಗೂ ಸುಸಂಸ್ಕೃತ ಸಹೃದಯನನ್ನು ಅದರಲ್ಲಿ ನಾವು ಕಾಣುತ್ತೇವೆ.

ಇತರ ಮಹಾಕೃತಿಗಳಿಗೆ ಬರೆದ ಮುನ್ನುಡಿಗಳು

ನಾವು ಈಗಾಗಲೇ ನೋಡಿರುವಂತೆ, ಕೇರಳವರ್ಮನು ಭಾಷಾಂತರಿಸಿದ 'ಶಾಕುಂತಲ'ವು ೧೯೧೧ರಲ್ಲಿ ಪ್ರಕಟವಾಯಿತು. ಇದಕ್ಕೊಂದು ಮುನ್ನುಡಿ ಇದೆ; ರಾಜರಾಜವರ್ಮನು ಬರೆದ ಈ ಮುನ್ನುಡಿ ರಸಗಳನ್ನು ಕುರಿತ ಒಂದು ಪ್ರೌಢ ವಿವೇಚನೆಯನ್ನು ಒಳಗೊಂಡಿದೆ. ಕೇರಳ ವರ್ಮನ 'ಮಯೂರ ಸಂದೇಶ'ವು ಸಂದೇಶ ಕಾವ್ಯ ಜಾತಿಯಲ್ಲಿ ಒಂದು ಅಸಾಧಾರಣ ಕೃತಿ ಎಂದು ಅಂಗೀಕೃತವಾಗಿದೆ; ರಾಜರಾಜವರ್ಮನು ಈ ಕೃತಿಗೂ ಒಂದು ಉಜ್ಜ್ವಲವಾದ ಪೀಠಿಕೆಯನ್ನು ಅರ್ಪಿಸಿದ್ದಾನೆ. ಒಬ್ಬ ಆಸ್ತಬಂಧುವಿನ ವಿಷಯದಲ್ಲಿ ಸ್ವಲ್ಪ ಪಕ್ಷಪಾತ ಇದೆ ಎಂಬುದನ್ನು ಒಪ್ಪಿಕೊಂಡರೂ ಈ ಪೀಠಿಕೆ ತುಂಬ ಬೆಲೆಯುಳ್ಳ ವಿಮರ್ಶಾತ್ಮಕ ವಿವೇಚನೆ ಎಂಬುದರಲ್ಲಿ ಸಂದೇಹವಿಲ್ಲ.

'ನಳಿನಿ'ಯನ್ನು ಬೆಳಕಿಗೆ ತಂದದ್ದು

ಆದರೆ, ಕುಮಾರನ್ ಆಶನ್‌ನ 'ನಳಿನಿ'ಗೆ ಎ.ಆರ್. ಬರೆದಿರುವ ಮುನ್ನುಡಿಯ ವಿಚಾರಕ್ಕೆ ಬಂದಾಗ, ಮಲಯಾಳಂ ಕಾವ್ಯದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಅದು ತೆರೆಯುವುದನ್ನು ಕಾಣುತ್ತೇವೆ. ಕುಮಾರನ್ ಆಶನ್ ಆಧುನಿಕ ಕಾಲದ ಒಬ್ಬ ಪ್ರಮುಖ ಕವಿ ಎಂದು ಈಗ ಮಾನ್ಯನಾಗಿದ್ದಾನೆ. ಆದರೆ ಆತನ 'ನಳಿನಿ' ಎಂಬ ಪ್ರಣಯ ಕಾವ್ಯವನ್ನು ರಾಜರಾಜವರ್ಮನು ಪರಿಚಯ ಮಾಡಿಕೊಟ್ಟಾಗ ಆತ (ಕುಮಾರನ್ ಆಶನ್) ಯಾರಿಗೂ ಅಷ್ಟಾಗಿ ತಿಳಿದಿರಲಿಲ್ಲ. 'ಒರುವೀನ ಪೂವು' (ಒಂದು ಬಿದ್ದ ಹೂವು, ೧೯೦೭) ಪ್ರಕಟವಾದಾಗ ಅದು ಆತನನ್ನು ಗಮನಾರ್ಹವಾಗಿ ಮೂಡಿತ್ತು ಎಂಬುದೇನೋ ದಿಟ. ಆದರೆ, ಆತ ಹಿಂದುಳಿದ ಇಷವರ ಪಂಗಡಕ್ಕೆ ಸೇರಿದವನು ಹಾಗೂ ಮೇಲು ಜಾತಿಗಳಿಗೆ ಸೇರಿದ ಕವಿಗಳೂ ವಿದ್ವಾಂಸರೂ ಅಂತಹ ಬರಹಗಾರರನ್ನು ಹೊಗಳಲು ಹಿಂಜರಿಯುತ್ತಿದ್ದರು ಎಂಬ ಪರಿಸ್ಥಿತಿಯಲ್ಲಿ, ಆತ ಗಮನಾರ್ಹನಾಗಿದ್ದ ಎಂಬುದಷ್ಟು ಸಾಲದಾಗಿತ್ತು.

ರಾಜರಾಜವರ್ಮನು 'ನಳಿನಿ'ಯಲ್ಲಿ ಒಂದು ಹೊಸ ಮಿಂಚಿನ ಗೆರೆಯನ್ನು ಕಂಡುಕೊಂಡನು; ಅಲ್ಲದೆ, ಈ ಕಾವ್ಯ ಒಂದು ಹೊಸ ಜಾಡನ್ನು ಬೆಳಗುತ್ತದೆ

ಎಂಬುದನ್ನು ಸ್ಪಷ್ಟವಾದ ಮಾತುಗಳಲ್ಲಿ ಆತನು ಬಹಿರಂಗವಾಗಿ ಸಾರಲು ಇಷ್ಟವುಳ್ಳವನಾಗಿದ್ದನು ಎಂಬುದೀಗ ಆತನ ಹೆಚ್ಚುಗಾರಿಕೆ. 'ನಳಿನಿ' ಒಂದು ವಿಶಿಷ್ಟವಾದ ಪ್ರಣಯಕಾವ್ಯ. ಏಕಪ್ರಕಾರದ ನಿರೂಪಣಾ ವಿಧಾನವನ್ನು ಬಿಟ್ಟು ಬೇರೆಯ ತೆರನಾಗಿರುವ ಅದರ ವಿಶಿಷ್ಟತೆಯನ್ನು ಎ.ಆರ್. ಎತ್ತಿತೋರಿಸಿದ್ದಾನೆ. ಕುಮಾರನ್ ಆಶನ್ ದೊಡ್ಡ ಭರವಸೆ ಹುಟ್ಟಿಸುವ ಕವಿ ಎಂಬುದನ್ನು ಎ.ಆರ್. ಕಂಡುಕೊಂಡನು; 'ನಳಿನಿ' ಒಂದು ಪ್ರಮುಖವಾದ ಪ್ರಣಯಕಾವ್ಯ, ಇಂಥ ಒಂದು ಕೃತಿಗಾಗಿ ಮಲಯಾಳ ಭಾಷೆ ಬಹಳ ಕಾಲ ಕಾದಿತ್ತು ಎಂದು ಸಾರಿ ಹೇಳಿದನು. ಕುಮಾರನ್ ಆಶನ್‌ಗೆ ಇದರಿಂದ ಎಂಥ ಪ್ರೋತ್ಸಾಹ! ರಾಜರಾಜವರ್ಮನ ಮಾತು ಎಷ್ಟು ನಿಜವಾಗಿತ್ತು ಎಂಬುದನ್ನು ಮುಂದಿನ ಇತಿಹಾಸ ಸಂದೇಹಕ್ಕೆ ಎಡೆಯಿಲ್ಲದಂತೆ ನಿಶ್ಚಯ ಮಾಡಿ ತೋರಿಸಿತು. ಒಳಹೊಕ್ಕು ನೋಡಬಲ್ಲ ಆತನ ಅಗಾಧವಾದ ಸಾಮರ್ಥ್ಯ, ಆಧುನಿಕ ದೃಷ್ಟಿ, ಮತ್ತು ಭವಿಷ್ಯದ ಕಾಣ್ಕೆ, ಇವನ್ನು ಈಗ ಪ್ರತಿಯೊಬ್ಬರೂ ಮೆಚ್ಚಿಕೊಳ್ಳುತ್ತಾರೆ. ಆದರೆ ಅಂದಿನ ದಿನಗಳಲ್ಲಿ ಎ.ಆರ್. ಒಬ್ಬ ಅವಿವೇಕಿ ಎಂದು ನೆಲೆ ನಿಂತ ಕವಿಗಳೂ ವಿದ್ವಾಂಸರೂ ಬಗೆದಿದ್ದರು.

ಇತರ ಮುನ್ನುಡಿಗಳು

ಸುಪ್ರಸಿದ್ಧ ಕವಿಯೂ ನಾಟಕಕಾರನೂ ಆದ ವಿ.ಕೃಷ್ಣನ್ ತಂಪಿ ರಾಜರಾಜ ವರ್ಮನ ಗಣ್ಯ ಶಿಷ್ಯ. ಆತನ 'ಕಪಾಲಕುಂಡಲ' ಎಂಬ ಕಾದಂಬರಿ (೧೯೧೪) ಒಟ್ಟಿನ ಮೇಲೆ ಒಂದು ಸ್ವತಂತ್ರ ಕೃತಿಯಾದರೂ ಬಂಕಿಮಚಂದ್ರರ ಅದೇ ಹೆಸರಿನ ಕಾದಂಬರಿಯಿಂದ ಸ್ಫೂರ್ತಿ ಪಡೆದಿದೆ. ಈ ಕಾದಂಬರಿಗೆ ರಾಜರಾಜವರ್ಮನು ಒಂದು ಉದ್ಬೋಧಕವಾದ ಮುನ್ನುಡಿಯನ್ನು ಬರೆದುಕೊಟ್ಟಿದ್ದಾನೆ.

ಆತನು ಬರೆದಿರುವ ಇನ್ನೊಂದು ಮುನ್ನುಡಿ ಎಂದರೆ, ಕೆ.ರಾಮಕುರುಪ್‌ನ 'ಸೌದಾಮಿನಿ' (೧೯೧೪) ಎಂಬ ಕಾದಂಬರಿಗೆ ಬರೆದುಕೊಟ್ಟಿರುವದು. ಇದು ಕೂಡ ಸ್ವಾರಸ್ಯವಾಗಿದೆ, ಬೋಧಪ್ರದವಾಗಿದೆ. ಓದುಗರಲ್ಲಿ ನೈತಿಕ ಪ್ರಜ್ಞೆ ಉಂಟುಮಾಡುವುದಕ್ಕಾಗಿ ಇಂಥ ಕಥೆಗಳ ಮೂಲಕ ಪರೋಕ್ಷವಾಗಿ ನೈತಿಕ ಮೌಲ್ಯಗಳನ್ನು ಎತ್ತಿ ತೋರಿಸುವುದರ ಪ್ರಾಮುಖ್ಯವನ್ನು ನಿರ್ದೇಶಿಸಿದೆ ಈ ಮುನ್ನುಡಿ.

ಪ್ರಬಂಧಗಳು

ಜ್ಯೋತಿಷ್ಯಶಾಸ್ತ್ರವೆಂದರೆ ರಾಜರಾಜವರ್ಮನಿಗೆ ಒಂದು ಬಗೆಯ ಹುಚ್ಚು; ಅದರಲ್ಲಿ ಆತ ವ್ಯಾಪಕವಾದ, ಆಳವಾದ ಸಂಶೋಧನೆ ನಡಸಿದ್ದನು. 'ಕೇರಳದ ಜ್ಯೋತಿಷ್ಯಶಾಸ್ತ್ರ' ಮತ್ತು 'ಪಂಚಾಂಗ ಶುದ್ಧಿ ಪದ್ಧತಿ' ಎಂಬ ವಿಷಯಗಳನ್ನು ಕುರಿತು ಆತ ಒಂದು ವಿದ್ವತ್ಪೂರ್ಣ ಪ್ರೌಢ ಪ್ರಬಂಧವನ್ನು ಬರೆದನು. ಕುಂಞ್ಞೆ ಕುಟ್ಟನ್ ತಂಪುರಾನ್ ಮಾಡಿದ 'ಮಹಾಭಾರತ'ದ ಭಾಷಾಂತರವನ್ನು ಮೆಚ್ಚಿಕೊಂಡು ಒಂದು ಪ್ರಬಂಧವನ್ನು ಬರೆದುಕೊಟ್ಟನು. ಅಲ್ಲದೆ, ಶಾಲಾ ವಾಚನ ಪುಸ್ತಕಗಳಲ್ಲಿಯೂ ಕಾಲೇಜಿನ ಪಠ್ಯಪುಸ್ತಕಗಳಲ್ಲಿಯೂ ಸೇರಿಸಿಕೊಳ್ಳುವುದಕ್ಕಾಗಿ ಹಲಕೆಲವು ಪ್ರಬಂಧಗಳನ್ನು ಎ.ಆರ್. ಬರೆದನು. ಮಲಯಾಳಂ ಭಾಷೆಯಲ್ಲಿ ಗದ್ಯ ಪ್ರಬಂಧಗಳ ಮಾದರಿಯನ್ನು ಮುಂದಿಡಲು ಈ ಪ್ರಬಂಧಗಳು ಸಹಾಯಕವಾಗಿವೆ.

* * * *

ಅಧ್ಯಾಯ ಎಂಟು

ಸಾಹಿತ್ಯ ಪುನರುಜ್ಜೀವನದ ಹರಿಕಾರ

ಸಾಹಿತ್ಯ ಕ್ಷೇತ್ರದಲ್ಲಿ ರಾಜರಾಜವರ್ಮನ ಸಾಧನೆಯ ಬಗೆಗೆ ಸ್ವಲ್ಪಮಟ್ಟಿಗೆ ಹರುಕುಮುರುಕಾದ ಒಂದು ಚಿತ್ರ ನಮಗೆ ದೊರಕಿದಂತಾಗಿದೆ. ಈ ಅಧ್ಯಾಯದಲ್ಲಿ ಕೆಲವು ಎಳೆಗಳನ್ನು ಒಟ್ಟುಗೂಡಿಸಿಕೊಂಡು, ಒಂದು ಸಮಗ್ರವಾದ, ಸಂಪೂರ್ಣ ಚಿತ್ರವನ್ನು ಮುಂದಿಡಲು ಪ್ರಯತ್ನಿಸುತ್ತೇನೆ. ರಾಜರಾಜವರ್ಮನು ತನ್ನ ಜೀವನದ ಉತ್ತರಭಾಗದಲ್ಲಿ ಸಂಶೋಧಕನಾಗಿ, ಯೋಜನೆಗಳ ನಿರ್ವಾಹಕನಾಗಿ, ಕವಿಯಾಗಿ, ವೈಯಾಕರಣನಾಗಿ ಹಾಗೂ ವಿಮರ್ಶಕನಾಗಿ ತಾನೇ ಆಯ್ದುಕೊಂಡ ಉದ್ಯೋಗಗಳಲ್ಲಿ ತೊಡಗಿರುವುದರ ಜೊತೆಗೆ ಸಂಸ್ಕೃತ ಮತ್ತು ಭಾರತೀಯ ಭಾಷೆಗಳಲ್ಲಿ ಉನ್ನತ ಮಟ್ಟದ ಪಾಠಕ್ರಮಗಳನ್ನು ವ್ಯವಸ್ಥೆಗೊಳಿಸಿ, ಬೋಧನ ಕಾರ್ಯದಲ್ಲಿಯೂ ನಿರತನಾಗಿದ್ದಾಗ ಕಾರ್ಯನಿಬಿಡವಾದ ಬದುಕು ಆತನದಾಗಿತ್ತು ಎಂಬುದನ್ನು ನಾವು ಕಂಡಿದ್ದೇವೆ. ಜ್ಞಾನಾರ್ಜನೆ ಆತನ ಸಹಜ ಸ್ವಭಾವದ ಒಂದು ಭಾಗವಾಗಿ ಹೋಗಿತ್ತು. ಸಾಮಾನ್ಯವಾಗಿ ಜೊತೆಗೂಡಿರದ ಪ್ರವೃತ್ತಿಗಳು ಆತನಲ್ಲಿ ಅಸಾಧಾರಣ ರೀತಿಯಲ್ಲಿ ಜೊತೆಗೂಡಿದ್ದುವು. ಸಾಹಿತ್ಯವನ್ನು ಸೃಷ್ಟಿ ಮಾಡಬಲ್ಲ ಪ್ರತಿಭೆಯ ಲವಲೇಶವೂ ಇಲ್ಲದ ಮಹಾವಿದ್ವಾಂಸರನ್ನೂ ಸಂಶೋಧಕರನ್ನೂ ನಾವು ಬಲ್ಲೆವು. ಅದೇ ರೀತಿ, ವಿದ್ವತ್ತನ್ನು ಸಂಪಾದಿಸಲು ಪಡಬೇಕಾದ ಶ್ರಮ–ಪರಿಶ್ರಮಸಾಧ್ಯವಾದ ಸಾಧನೆ ಎಂದರೆ ದೂರ ಸರಿಯುವ ಸೃಜನಶೀಲ ಪ್ರತಿಭಾಶಾಲಿಗಳನ್ನೂ ನಾವು ಬಲ್ಲೆವು. ತಮಗೆ ಇಷ್ಟವಾದ ವಿಷಯಗಳನ್ನು ಕುರಿತು ಹೊತ್ತುಗೊತ್ತಿಲ್ಲದೆ ಕೆಲಸ ಮಾಡುತ್ತ, ವಿಶ್ರಾಂತಿ ಮತ್ತು ಲಘುವಾದ ವಿನೋದಗಳೆಂದರೆ ಅವುಗಳನ್ನು ಉದಾಸೀನ ಮಾಡುವ ಇಲ್ಲವೆ ಅವುಗಳನ್ನು ಅನುಭವಿಸಲು ಅಸಮರ್ಥರಾದ ಜನವನ್ನೂ ನಾವು ಕಂಡಿದ್ದೇವೆ. ಆದರೆ ಇಲ್ಲೊಬ್ಬನಿದ್ದಾನೆ ನೋಡಿ; ಆತ ನಿಜವಾದ ಸಂಶೋಧಕ, ಕವಿ ಮತ್ತು ರಸಿಕ, ಕಷ್ಟಪಟ್ಟು ಕೆಲಸ ಮಾಡಿದ ಮನುಷ್ಯ ಮತ್ತು ಸುಖಭೋಗಗಳ ಬದುಕನ್ನು ಬಾಳಿದವನು.

ಆತನ ಸಾಹಿತ್ಯರಾಶಿಯನ್ನು ಗಮನಿಸಿದಾಗ ವ್ಯಕ್ತಪಡುವುದೇನೆಂದರೆ, ಆತನ

ವ್ಯಕ್ತಿತ್ವ ಇಬ್ಭಾಗವಾಗಿರುವಂತೆ ಕಂಡುಬರುತ್ತದೆ. ಪ್ರತಿಭಾವಂತ ವಿದ್ವಾಂಸ ಹಾಗೂ ಕವಿ ಆಗಿದ್ದ ಕೇರಳವರ್ಮನ ನೇರವಾದ ಮೇಲ್ವಿಚಾರಣೆಯಲ್ಲಿ ಸಾಂಪ್ರದಾಯಿಕ ಮಾರ್ಗದಲ್ಲಿ ಶಿಕ್ಷಣ ಪಡೆದಂಥವನು ರಾಜರಾಜವರ್ಮ. ಆತನ ಮೊದಮೊದಲಿನ ರಚನೆಗಳೆಲ್ಲವೂ ಸಂಸ್ಕೃತದಲ್ಲಿದ್ದುವು; ಅಂದಿನ ದಿನಗಳಲ್ಲಿ ಅಷ್ಟಾಗಿ ಅಭಿವೃದ್ಧಿ ಹೊಂದಿರದಿದ್ದ, ತನ್ನ ತಾಯ್ನುಡಿಯಾದ ಮಲಯಾಳ ಭಾಷೆಯಲ್ಲಿ ಪದ್ಯರಚನೆ ಮಾಡುವುದು ಸ್ಥಾನಮಾನಕ್ಕೆ ಕಡಮೆ ಎಂದು ಆತ ಭಾವಿಸಿದ್ದಿರಬೇಕು. ಸಂಸ್ಕೃತ ಸಾಹಿತ್ಯದ ಉದ್ದಾಮ ಕವಿಗಳನ್ನು ಅನುಕರಿಸಲು ಪ್ರಯತ್ನ ಮಾಡುತ್ತ ಸಂಸ್ಕೃತ ಭಾಷೆಯಲ್ಲಿ ಕೃತಿರಚನೆ ಮಾಡುವುದರಲ್ಲಿಯೇ ನಲಿದನು. ಕೆಲವು ವರ್ಷಗಳಾದ ಮೇಲೆ, ಅದೇ ರಾಜರಾಜವರ್ಮನು ಸಂಸ್ಕೃತ ಸಮಾಸ ಪದಗಳನ್ನೂ ನಿರೂಪಣಾಕ್ರಮವನ್ನೂ ವರ್ಜಿಸಿದ ಸರಳವಾದ ಮಲಯಾಳ ಭಾಷೆಯ ಪರವಾಗಿ ವಾದ ಮಾಡುವುದನ್ನು ಕಾಣುತ್ತೇವೆ. ಅಲ್ಲದೆ, ಅತ್ಯಂತ ಅಲಂಕೃತವಾದ ಭಾಷೆಯಲ್ಲಿ ಕೇರಳವರ್ಮನು ಭಾಷಾಂತರ ಮಾಡಿದ್ದ 'ಶಾಕುಂತಲ'ವನ್ನು ಪರಿಷ್ಕಾರ ಮಾಡಬೇಕೆಂದು ಆತನನ್ನು ಒಪ್ಪಿಸುವುದರಲ್ಲಿ ರಾಜರಾಜವರ್ಮನು ಜಯಶಾಲಿಯಾದದ್ದನ್ನೂ ನೋಡುತ್ತೇವೆ. ರಾಜರಾಜವರ್ಮನು ಸರಳವಾದ ಮಲಯಾಳಿಯಲ್ಲಿ ಕವಿತಾರಚನೆ ಮಾಡುವುದಕ್ಕೂ ಕವಿತೆಯನ್ನು ಭಾಷಾಂತರ ಮಾಡುವುದಕ್ಕೂ ತೊಡಗಿದ್ದು ಮಾತ್ರವಲ್ಲದೆ, ಆಗಿನ ದಿನಗಳಲ್ಲಿ ಸಾಧಾರಣಮಟ್ಟದ ಸೃಜನ ಸಾಮರ್ಥ್ಯವುಳ್ಳ ಬರಹಗಾರರ ಕ್ಷೇತ್ರವಾಗಿದ್ದ ಮಲಯಾಳಂ ಭಾಷೆಯ ಗದ್ಯಕ್ಷೇತ್ರಕ್ಕೆ ಪ್ರವೇಶಿಸಿದನು. ಕೇರಳವರ್ಮನು ಆಗೊಮ್ಮೆ ಈಗೊಮ್ಮೆ ಗದ್ಯವನ್ನು ಬರೆಯುತ್ತಿದ್ದುದು ಉಂಟು; ಆದರೆ ಅದು ಆಡಂಬರದ ಅಲಂಕೃತ ಶೈಲಿ; 'ಅಕ್ಬರ್' ಎಂಬ ಆತನ ಕಾದಂಬರಿಯಲ್ಲಿ ಆ ಬಗೆಯ ಗದ್ಯವನ್ನು ನಾವು ಕಾಣುತ್ತೇವೆ. ಆತ ಶಾಲಾ ವಿದ್ಯಾರ್ಥಿಗಳಿಗೆಂದು ಬರೆದಾಗ ಹೆಚ್ಚು ಸರಳವಾದ ಗದ್ಯದಲ್ಲಿ ಬರೆಯುತ್ತಿದ್ದನು ಎನ್ನುವುದರಲ್ಲಿ ಸಂದೇಹವಿಲ್ಲ; ಆದರೆ ಹಾಗೆ ಮಾಡುವುದು ತನ್ನ ಉನ್ನತ ಮಟ್ಟದಿಂದ ಕೆಳಕ್ಕೆ ಇಳಿದಂತೆ ಎಂದು ಆತನ ಭಾವನೆ.

ರಾಜರಾಜವರ್ಮನ ವಿಷಯದಲ್ಲಿ ಹಾಗಲ್ಲ. ಸರಳವಾದ, ನೇರವಾದ ಗದ್ಯರಚನೆ ಆತನಿಗೆ ಇಷ್ಟವಾಗಿತ್ತು; ಅತ್ಯಗತ್ಯವಾದಾಗ ಮಾತ್ರ ಸಂಸ್ಕೃತ ಶಬ್ದಗಳ, ಬರಹದ ಬಗೆಯ ಉಪಯೋಗ ಪಡೆದುಕೊಳ್ಳುತ್ತಿದ್ದನು. ಗದ್ಯ ಕೃತಿಗಳ ರಚನೆಯಲ್ಲಿ ಆತ ಬಿಡದೆ ತೊಡಗಿರುತ್ತಿದ್ದುದರಿಂದ, ಕವಿತೆ ಬರೆಯುವುದನ್ನು ಒಂದು ಹವ್ಯಾಸವಾಗಿ, ವಿಹಾರ ವಿನೋದವಾಗಿ, ಆತ ಪರಿಗಣಿಸಿದ್ದನು. ಆತನ ವೈಜ್ಞಾನಿಕ ಹಾಗೂ ವಿಮರ್ಶನ ಸಾಮರ್ಥ್ಯಗಳು ಕವಿತಾಸಾಮರ್ಥ್ಯವನ್ನು ಮೂಲೆಗೆ

ತಳ್ಳಿಬಿಟ್ಟಿದ್ದುವು. ಒಂದೇ ಅಚ್ಚಿಗೆ ಬಿದ್ದ ಅಲಂಕಾರದ ಶೈಲಿಯ ಮೊದಮೊದಲಿನ ಸಂಸ್ಕೃತ ರಚನೆಗಳನ್ನು ಬಿಟ್ಟು 'ಕುಮಾರ ಸಂಭವ' ಮತ್ತು 'ಶಾಕುಂತಲ'ಗಳ ಭಾಷಾಂತರಗಳನ್ನು ಎತ್ತಿಕೊಂಡರೆ ಅಭಿರುಚಿಯಲ್ಲೇ ಒಂದು ದೊಡ್ಡ ಮಾರ್ಪಾಡು ಆಗಿರುವುದನ್ನು ಕಾಣುತ್ತೇವೆ. 'ನಳಚರಿತ್ರಂ' ಕೃತಿಯ ಪರಿಷ್ಕೃತ ಮುದ್ರಣ ಮತ್ತು 'ಸಾಹಿತ್ಯ ಸಾಹ್ಯಂ', ಇವುಗಳಂತಹ ಆತನ ಗದ್ಯ ಕೃತಿಗಳು ಆತನ ವ್ಯಕ್ತಿತ್ವದಲ್ಲಿಯೂ ಸಾಹಿತ್ಯ ವಿಷಯುಕವಾದ ಆತನ ಧೋರಣೆಯಲ್ಲಿಯೂ ಆಗಿರುವ ಪರಿವರ್ತನೆಯನ್ನು ತೋರಗೊಡುತ್ತವೆ. ಇಬ್ಬರು ರಾಜರಾಜವರ್ಮರು ಇದ್ದರು ಎಂದು ಹೇಳಬಹುದು; ಮುಂಚಿನವನು ಸಂಪ್ರದಾಯನಿಷ್ಠ, ಆಮೇಲಿನವನು ಆಧುನಿಕ. ಹೇಗೆ ಮತ್ತು ಯಾವಾಗ ಈ ಪುನರ್ಜನ್ಮ ಸಂಭವಿಸಿತು? ಇದಕ್ಕೆ ಉತ್ತರ ಕೊಡುವುದು ಕಷ್ಟ. ಅದು ಒಮ್ಮಿಂದೊಮ್ಮಿಗೆ ವಿಕಸನ ಕ್ರಿಯೆಯೂ ಆಗಿದ್ದು, ಕ್ರಾಂತಿಯೂ ಆಗಿದೆ. ಸಾಮಾನ್ಯವಾಗಿ ಹೇಳುವುದದರೆ ಮೊದಲಿನ ರಾಜರಾಜವರ್ಮನಿಗೂ ಆಮೇಲಿನ ರಾಜರಾಜವರ್ಮನಿಗೂ ಇರುವ ವ್ಯತ್ಯಾಸ ಎಂದರೆ ೧೯ನೆಯ ಶತಮಾನಕ್ಕೂ ೨೦ನೆಯ ಶತಮಾನಕ್ಕೂ ಇರುವ ವ್ಯತ್ಯಾಸ. ಸಾಹಿತ್ಯ ಕೃತಿಗಳನ್ನು ಪರಿಗಣಿಸಿ ಹೇಳುವುದಾದರೆ, ೧೯೦೦ರ ಸರಿಸುಮಾರಿನಲ್ಲಿ ಆತನ ಸಾಹಿತ್ಯ ದೃಷ್ಟಿಯಲ್ಲಿ ಒಂದು ಖಚಿತವಾದ ಪರಿವರ್ತನೆಯನ್ನು ಗುರುತಿಸಬಹುದು ಎಂದು ಹೇಳಿದರೆ ತಪ್ಪಾಗಲಾರದು.

ಸಾಹಿತ್ಯದ ಪುನರುಜ್ಜೀವನ

ರಾಜಕೀಯ, ಸಾಮಾಜಿಕ ಪರಿವರ್ತನೆಗಳ ಸಂದರ್ಭದಲ್ಲಿ ರಾಜರಾಜವರ್ಮನಲ್ಲಿ ಆದ ಪರಿವರ್ತನೆಯನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಬಹುದು. ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಾದ, ಎತ್ತರಕ್ಕೆ ಏರಿದ ವ್ಯಕ್ತಿಯಾಗಿರಲಿ, ತನ್ನ ಸುತ್ತಮುತ್ತಲಿನ ಸಮಾಜದ ಪ್ರಭಾವಕ್ಕೆ ಗಣ್ಯವಾದ ಪ್ರಮಾಣದಲ್ಲಿ ಒಳಪಟ್ಟು ರೂಪಗೊಳ್ಳುತ್ತಾನೆ. ಇದು ದಿಟದ ಸಂಗತಿ; ಆದರೆ ಕೆಲವು ವ್ಯಕ್ತಿಗಳು ತಾವು ಯಾವ ಸಮಾಜಕ್ಕೆ ಸೇರಿದವರೋ ಆ ಸಮಾಜಕ್ಕೆ ಒಂದು ಹೊಸ ದಿಗ್ದರ್ಶವನ್ನೂ ನೀಡುತ್ತಾರೆ. ಕೇರಳವರ್ಮ, ರಾಜರಾಜವರ್ಮ, ಚಂದುಮೆನನ್, ಸಿ.ವಿ. ರಾಮನ್‌ಪಿಳ್ಳೆ ಇವರಂಥ ವಿಚಾರಪ್ರಪಂಚದ ನಾಯಕರನ್ನು ಅರ್ಥಮಾಡಿಕೊಳ್ಳಬೇಕಾದರೆ, ಮಲಯಾಳಂ ಸಾಹಿತ್ಯವು ಭಾರತೀಯ ಸಾಹಿತ್ಯದ ಒಂದು ಭಾಗ ಎಂಬುದನ್ನೂ, ಭಾರತೀಯ ಸಾಹಿತ್ಯ ಕೂಡ ಭಾರತದ ರಾಜಕೀಯ, ಸಾಮಾಜಿಕ ಜೀವನವನ್ನು ಆಧರಿಸಿ ಬೆಳೆದಿದೆ ಎಂಬುದನ್ನೂ ನಾವು

ಅರಿತುಕೊಳ್ಳಬೇಕು. ಸಾಹಿತ್ಯ ಬದುಕಿನಷ್ಟೇ ವಿಶಾಲ; ಹೀಗಿರುತ್ತ, ಸಾಹಿತ್ಯ ಸಾಂಪ್ರದಾಯಿಕ ಜೀವನದ ಮುಖವನ್ನು ಚಿತ್ರಿಸುವುದರ ಜೊತೆಗೆ ಅದರ ಕ್ರಾಂತಿಕಾರಿ ಸ್ವರೂಪವನ್ನು ಕ್ರಿಯಾಶೀಲವಾಗಿ ಮಾಡಬೇಕು.

ಪಾಶ್ಚಾತ್ಯ ಸಂಸ್ಕೃತಿಯ ವ್ಯಾಮೋಹದೊಂದಿಗೆ ಬ್ರಿಟಿಷ್ ಪ್ರಭಾವದ ಒತ್ತಡ ಮೊದಲಿಟ್ಟಿತು; ಆದರೆ, ಬಲುಬೇಗ ಅನಿವಾರ್ಯವಾದ ಒಂದು ಪ್ರತಿಕ್ರಿಯೆಯೂ ಉಂಟಾಯಿತು. ನಮ್ಮದೇ ಆದ ಒಂದು ಪರಂಪರೆಯಲ್ಲಿ ಹೆಮ್ಮೆಯೂ ಜಾಗೃತವಾಯಿತು. ಇದರ ಪರಿಣಾಮವಾಗಿ ಒಂದು ಸರ್ವಸಾಮಾನ್ಯ ಪುನರ್ಜನ್ಮ ಅಥವಾ ನವೋದಯ ಪ್ರಾಪ್ತವಾಯಿತು. ಇಂಗ್ಲಿಷ್ ವಿದ್ಯಾಭ್ಯಾಸದ ಪರಿಣಾಮ ಫಲವಾಗಿ ಮೂಲತಃ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಪುನರ್ಜನ್ಮವಾಗಿ ಅದು ಪ್ರಾರಂಭವಾಯಿತು; ಈ ಪುನರ್ಜನ್ಮದ ಅವಧಿಯನ್ನು ೧೮೫೭–೧೯೦೫ ಎಂದು ಇಟ್ಟುಕೊಳ್ಳಬಹುದು. ಎರಡನೆಯ ಹಂತವು ರಾಷ್ಟ್ರೀಯ ಭಾವನೆಯ ಉತ್ಕರ್ಷದ ಹಾಗೂ 'ಹೋಮ್‌ರೂಲ್' ಚಳವಳಿಯ ಕಾಲಕ್ಕೂ ಸರಿಹೊಂದುತ್ತದೆ: ಇದು ೧೯೦೫ರಿಂದ ೧೯೨೦. ಮೂರನೆಯ ಹಂತ ಗಾಂಧಿಯ ಕ್ರಾಂತಿಯುಗ ಎಂಬುದು ಸುಸ್ಪಷ್ಟ: ಇದು ೧೯೨೦–೧೯೪೭.

ಈ ಹಂತಗಳು ಸಾಹಿತ್ಯದ ಮೇಲೆ ತಮ್ಮ ಒತ್ತಡವನ್ನು ಹಾಕಿದ್ದುವು. ಕೆಲವು ಸಲ ಸ್ವಲ್ಪ ತಡವಾಗಿ, ಕೆಲವು ಸಲ ಮುಂದಾಗಿ. ಎಲ್ಲ ಭಾರತೀಯ ಸಾಹಿತ್ಯಗಳಲ್ಲಿಯೂ ನಾವು ಕಾಣುವುದು ಇದನ್ನೇ. ಪ್ರಸ್ತುತ ಶತಮಾನ ಮೊದಲಾಗುವುದಕ್ಕೆ ೧೫ ವರ್ಷ ಮುಂಚೆ, ಮೊದಲಾದ ಮೇಲೆ ೧೫ ವರ್ಷ (೧೮೮೫–೧೯೧೫), ಈ ನಡುವಣ ಅವಧಿ ಆಧುನಿಕ ಜಾಗೃತಿಯಲ್ಲಿ ಅತ್ಯಂತ ನಿರ್ಣಾಯಕವಾದ ಕಾಲ ಎಂಬುದನ್ನು ಕೇರಳದ ಚರಿತ್ರೆ ವ್ಯಕ್ತಪಡಿಸಿದೆ. ಹಿಂದೂ ಮತಧರ್ಮದಲ್ಲಿದ್ದ ಅರ್ಥಹೀನ ಪದ್ಧತಿಗಳನ್ನು, ಮೂಢನಂಬಿಕೆಗಳನ್ನು, ಹೊರಹಾಕುವುದಕ್ಕೂ ಸ್ತ್ರೀಯರ ಸ್ಥಾನವನ್ನು ಮೇಲಕ್ಕೆತ್ತುವುದಕ್ಕೂ, ಜಾತಿ ಪದ್ಧತಿ ಮತ್ತು ಬಹುಪತ್ನಿತ್ವವನ್ನು ಅವಹೇಳನ ಮಾಡುವುದಕ್ಕೂ ಪಾಶ್ಚಾತ್ಯೀಕರಣ ಉಪಯುಕ್ತವಾಯಿತು. ಉದ್ಯೋಗಗಳಲ್ಲಿ ಬ್ರಾಹ್ಮಣ ಜನಾಂಗ ಪಡೆದಿದ್ದ ಏಕಸ್ವಾಮ್ಯದ ವಿರುದ್ಧವಾಗಿ ತಿರುವಾಂಕೂರು ಮಹಾರಾಜನಿಗೆ ಒಪ್ಪಿಸಿದ ಮಲಯಾಳಿ ಮನವಿ ಪತ್ರದಲ್ಲಿಯೂ (೧೮೯೧), ಈಷವ (Ezhava) ಜನಾಂಗದ ಕುಂದುಕೊರತೆಗಳನ್ನು ಎತ್ತಿಹಿಡಿದ ಈಷವರ ಮನವಿ ಪತ್ರದಲ್ಲಿಯೂ ಕೇರಳದ ಸಾಮಾಜಿಕ–ಧಾರ್ಮಿಕ ಜಾಗೃತಿಯ ವ್ಯಕ್ತವಾಗಿದೆ. ಶ್ರೀ ನಾರಾಯಣ ಗುರು ಅವರ ಪ್ರೇರಣೆಯಿಂದ ಈಷವರಿಗಾಗಿ ಎಸ್.ಎನ್.ಡಿ.ಪಿ. ಯೋಗಂ (೧೯೦೩)

ಮತ್ತು ಮನ್ನಾತ್ ಪದ್ಮನಾಭನ್ ನಾಯರ್ ಜನಾಂಗಕ್ಕಾಗಿ ಸ್ಥಾಪಿಸಿದ ನಾಯರ್ ಸೇವಾ ಸಂಘ (೧೯೧೪), ಇಂಥ ಸಂಸ್ಥೆಗಳು ರೂಪಗೊಳ್ಳಲು ಈ ನವಜಾಗೃತಿ ಅನತಿಕಾಲದಲ್ಲಿ ದಾರಿ ಮಾಡಿಕೊಟ್ಟಿತು. ಉಚ್ಚವರ್ಗದವರಾದ ನಂಬೂದರಿಗಳು ಕೂಡ ತಮ್ಮನ್ನು ತಾವು ಸಂಘಟಿಸಿಕೊಂಡು ತಮ್ಮವೇ ಆದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ 'ಯೋಗಕ್ಷೇಮ ಸಭಾ' (೧೯೦೮) ಎಂಬುದನ್ನು ಸ್ಥಾಪಿಸಿಕೊಂಡರು. ಇವುಗಳಿಂದ ಅಂದಿನ ಸಾಮಾಜಿಕ ವಾತಾವರಣವನ್ನು ಗೊತ್ತುಮಾಡಿಕೊಳ್ಳಬಹುದು. ಚಿಂತನಪರರೂ ಲೇಖಕರೂ ಸಾಮಾಜಿಕ ಪರಿಸ್ಥಿತಿಯನ್ನೂ, ಜೀವನದಲ್ಲಿ ಹಾಗೂ ಸಾಹಿತ್ಯದಲ್ಲಿ ಆಗಬೇಕಾಗಿದ್ದ ತೀವ್ರವಾದ ಬದಲಾವಣೆಯ ಅಗತ್ಯವನ್ನು ಚೆನ್ನಾಗಿ ಮನಗಂಡಿದ್ದರು. ಪರಿವರ್ತನೆಯ ವಾತಾವರಣಕ್ಕೆ ಕೆಲವರು ಉಳಿದವರಿಗಿಂತ ಹೆಚ್ಚು ಸಂವೇದನಗೊಳ್ಳುತ್ತಿದರು. ಇಲ್ಲಿ ನಾವು ಕಾಣುತ್ತೇವೆ, ಒಂದು ಸರ್ವಸಾಮಾನ್ಯ ಪುನರ್ಜನ್ಮದ ಆದಿಮೂಲವನ್ನು.

ಕೇರಳವರ್ಮ ಮತ್ತು ರಾಜರಾಜವರ್ಮ

ಕೇರಳವರ್ಮನು ತನ್ನದೇ ಆದ ರೀತಿಯಲ್ಲಿ ಸಾಹಿತ್ಯದ ಪುನರುಜ್ಜೀವನದ ಕೆಲವು ಪ್ರಕಾರಗಳನ್ನು ಪ್ರಾರಂಭಗೊಳಿಸಿದನು; ಆದರೂ ಕೆಲವು ಮಟ್ಟಿಗೆ ಆತನು ಸಂಪ್ರದಾಯದ ಒತ್ತಡಕ್ಕೆ ಸಿಲುಕಿದ್ದನು. ಆದರೆ ರಾಜರಾಜವರ್ಮನು ಸಂಪೂರ್ಣ ಕ್ರಾಂತಿಯ ಅಗತ್ಯವನ್ನು ಮನಗಂಡದ್ದಲ್ಲದೆ, ತನ್ನ ಪೀಳಿಗೆಯ ಬರಹಗಾರರಿಗೆ ನಿರ್ದಿಷ್ಟವಾದ ನಾಯಕತ್ವವನ್ನು ದಾರಿದಿಕ್ಕಿನ ಅರಿವನ್ನೂ ಒದಗಿಸಿದನು. ಈ ಸಂದರ್ಭವನ್ನು ಅರ್ಥಮಾಡಿಕೊಳ್ಳಬಹುದು; ಕೇರಳವರ್ಮನು ಒಂದು ಹಿಂದಿನ ತಲೆಮಾರಿಗೆ ಸೇರಿದವನಾಗಿದ್ದು, ರಾಜರಾಜವರ್ಮನಿಗಿಂತ ೧೮ ವರ್ಷ ಹಿರಿಯನಾಗಿದ್ದನು. ಬೇರೆಯ ರೀತಿಯಲ್ಲಿ ಕೂಡ, ಕೇರಳವರ್ಮನು ರಾಜವಂಶಕ್ಕೆ ಸಂಬಂಧಪಟ್ಟವನಾಗಿದ್ದುದೂ ಅವನು ಪಡೆದುಕೊಂಡಿದ್ದ ಸ್ಥಾನಗೌರವವೂ ಆತನಿಗೆ ಒಂದು ಉನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದವು. ಆತ ಉತ್ತಮ ಜನದೊಂದಿಗೆ ಓಡಾಡುತ್ತಿದ್ದನು; ಆದರೆ ರಾಜರಾಜವರ್ಮನಾದರೋ, ವಿದ್ಯಾಸಂಸ್ಥೆಗಳಲ್ಲಿ ಒಬ್ಬ ಉಪಾಧ್ಯಾಯನಾಗಿರುತ್ತ ಎಲ್ಲ ಬಗೆಯ ಜನದೊಂದಿಗೂ ಆತ ವ್ಯವಹರಿಸ ಬೇಕಾಗಿದ್ದಿತು; ಅವರ ಜಾತಿ, ಸ್ಥಾನಮಾನ ಯಾವುದೇ ಆಗಿದ್ದರೂ ಪ್ರತಿಯೊಬ್ಬರೊಂದಿಗೂ ಬೆರೆಯುವುದರಲ್ಲಿ ಆತನಿಗೆ ಸಂತೋಷ. ಇವರಿಬ್ಬರ ನಡುವೆ ಉಭಯ ಸಮಾನಾಂಶ ಬೇಕಾದಷ್ಟಿದ್ದರೂ ಅವರ ಅಭಿರುಚಿಗಳಲ್ಲಿ, ಸಿದ್ಧಿ ಸಾಧನೆಗಳಲ್ಲಿ ಏಕಮುಖತೆ ಇರಲಿಲ್ಲ.

ಅವರ ಪರಸ್ಪರ ಸಂಬಂಧ ವಿಶೇಷ ಬಗೆಯದಾಗಿದ್ದಿತು; ಅದರ ತೆರನಾದದ್ದನ್ನು ಮಲಯಾಳಂ ಸಾಹಿತ್ಯ ಚರಿತ್ರೆಯಲ್ಲಿ ಬೇರೆಲ್ಲಿಯೂ ಕಾಣಲಾಗದು. ಸೋದರಮಾವ, ಸೋದರ ಅಳಿಯಂದಿರು ನಿಜವಾದ ಅರ್ಥದಲ್ಲಿ ಗುರು–ಶಿಷ್ಯರಾಗಿದ್ದರು. ಸೋದರಮಾವನಿಗೆ ಸೋದರಳಿಯ ಎಂದರೆ ತುಂಬು ಪ್ರೀತಿ; ಅಳಿಯನಿಗೆ ಮಾವನಲ್ಲಿ ಅತಿಶಯ ಗೌರವ. ಸಲಹೆ ಹೇಳುವವನು, ಪೋಷಕ, ಆಧಾರ– ಎಲ್ಲವೂ ಆಗಿದ್ದನು ಸೋದರಮಾವ. ಅವರಿಬ್ಬರೂ ಹೆಚ್ಚು ಕಡಮೆ ಒಂದೇ ವಾತಾವರಣದಲ್ಲಿ ಬೆಳೆದು ಬಂದರು. ಆದರೆ ಇಬ್ಬರೂ ಒಬ್ಬರಿಂದ ಒಬ್ಬರು ಬೇರೆ, ಎದ್ದುಕಾಣುವಷ್ಟು ಬೇರೆ ಬೇರೆ. ಸೋದರಳಿಯ ಬಿರ್‍ರನೆ ಬೆಳೆದುಬಿಟ್ಟ, ತನ್ನದೇ ಆದ ವ್ಯಕ್ತಿತ್ವವನ್ನು ಬೆಳಸಿಕೊಂಡ, ಶಕ್ತಿಯನ್ನು ರೂಢಿಸಿಕೊಂಡ. ಸೋದರಮಾವ ಬಲುಬೇಗನೆ ಆತನ ಸಿದ್ಧಿ ಸಾಧನೆಗಳನ್ನು ಎಷ್ಟು ಚೆನ್ನಾಗಿ ಗುರುತಿಸಿಕೊಂಡ ಎಂದರೆ, ಸಾಹಿತ್ಯಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಆತನ ಸಲಹೆ ಕೇಳಿ ಪಡೆಯತೊಡಗಿದ. ಅವರು ಪರಸ್ಪರ ಬೆಳಸಿಕೊಂಡ ಸಂಬಂಧ ಎಷ್ಟು ಹೆಚ್ಚಿನದು, ಎಷ್ಟು ಆತ್ಮೀಯ, ಎಂದರೆ ಅದು ಮಲಯಾಳಂ ಸಾಹಿತ್ಯದ ದಾಖಲೆಗಳಲ್ಲಿ ಇತಿಹಾಸದ ಪರ್ವವನ್ನೇ ಸೃಷ್ಟಿಸಿಬಿಟ್ಟಿದೆ. ಅವರ ನಿಡುಗಾಲದ ಈ ಬಾಂಧವ್ಯದಲ್ಲಿ ಕುಕ್ಕುಮುಳ್ಳು, ಮುಸುಕಿನೊಳಗಿನ ಸೆಣಸು, ಪರಸ್ಪರ ಅರಿವಿನ ಅರೆಕೊರೆ, ಇವೆಲ್ಲವೂ ಇದ್ದುವು; ಆದರೆ ಇವು ಹೊಮ್ಮಿ ಹಬ್ಬಿದ್ದು ತಾತ್ವಿಕ ನೆಲೆಗಟ್ಟಿನಲ್ಲಿ; ವೈಯಕ್ತಿಕ ಅಸೂಯೆ ಇಲ್ಲವೆ ಮನಸ್ತಾಪದಿಂದ ಅಲ್ಲ.

ಕೇರಳವರ್ಮನು ಕೇರಳದ ಕಾಳಿದಾಸ ಎಂದು ಖ್ಯಾತನಾಮನಾಗಿದ್ದ; ಇದಕ್ಕೆ ಕಾರಣ, ಆತ ಬಲು ಹಿಂದೆಯೇ 'ಶಾಕುಂತಲ'ವನ್ನು ಅನುವಾದ ಮಾಡಿದ್ದು, ಕಾಳಿದಾಸನು ಬಳಸುತ್ತಿದ್ದಂಥ ಕಾವ್ಯಪ್ರತಿಮೆಗಳನ್ನು ಸೃಷ್ಟಿಸುವ ಅವನ ಸಾಮರ್ಥ್ಯ. ಆದರೆ ಕಾವ್ಯಶೈಲಿಯ ಬಗೆಗೆ ಮಾತ್ರ ಆತನ ಆದರ್ಶಪುರುಷ ಶ್ರೀಹರ್ಷ. ರಾಜರಾಜವರ್ಮನಿಗಾದರೊ, ಕಾವ್ಯ ವಿಷಯ ಮತ್ತು ಶೈಲಿ ಎರಡರಲ್ಲಿಯೂ ಕಾಳಿದಾಸ ಆದರ್ಶ. ಈಗಾಗಲೇ ತಿಳಿಸಿದಂತೆ, ತನ್ನ 'ಮಣಿಪ್ರವಾಳ ಶೈಲಿ'ಯ ಕವಿತೆಗಳಲ್ಲಿ ಕೇರಳವರ್ಮನು ಸಂಸ್ಕೃತ ಪದಗಳನ್ನೂ ನುಡಿರಚನೆಯನ್ನೂ ಧಾರಾಳವಾಗಿ ಅಳವಡಿಸಿಕೊಳ್ಳುತ್ತಿದ್ದನು. ಅಲಂಕಾರ ಪ್ರಯೋಗ, ಪ್ರಾಸಯೋಜನೆ, ಇವುಗಳ ವಿಷಯದಲ್ಲಿ ಆತ ನಿಯಮಪ್ರಜ್ಞೆಯುಳ್ಳವನು; ಕಾವ್ಯದ ಬಾಹ್ಯರೂಪ ಮತ್ತು ಆಡಂಬರದ ನುಡಿರಚನೆ ಇವುಗಳ ಬಗ್ಗೆ ಆತನದು ಮಿತಿಮೀರಿದ ಎಚ್ಚರ. ಆಗೊಮ್ಮೆ ಈಗೊಮ್ಮೆ ಆತ ಅಲಂಕಾರಿಕ ಭಾಷೆಯ ಆಕರ್ಷಣೆಗೆ ಮನಸೋಲುತ್ತಿದ್ದನು ಎಂದು ಕೂಡ ಹೇಳಿಬಿಡಬಹುದು. ಹೀಗಿದ್ದರೂ ಕೂಡ

ಆತನೊಬ್ಬ ಪ್ರತಿಭೆಯುಳ್ಳ ಕವಿ, ವಿದ್ವತ್-ಕವಿ. ಕಾವ್ಯ ಪ್ರತಿಭೆಯ ವಿಷಯದಲ್ಲಿ ರಾಜರಾಜವರ್ಮನು ತನ್ನ ಸೋದರಮಾವನನ್ನು ಸರಿಗಟ್ಟಲಾರದವನಾಗಿದ್ದನು. ಕಲಾಭಿರುಚಿಯನ್ನು ಬೆಳಸಿಕೊಂಡಿದ್ದ ವಿದ್ವಾಂಸ-ವಿಮರ್ಶಕನಾಗಿದ್ದ ಈತ. ಈತನ ಭಾಷಣಶೈಲಿ ಸರಳ. ಕಲ್ಪನಾವಿಲಾಸ, ಕಾವ್ಯದ ಸತ್ತ್ವ, ಇವು ಈತನಿಗೆ ಆಲಂಕಾರಿಕತೆಗಿಂತ ಹೆಚ್ಚು ಮುಖ್ಯವಾಗಿದ್ದುವು. ಅವನ ಕಾಲದ ಕವಿಗಳಿಗೆ ಅಗ್ಗದ ಮಾತಿನ ದೊಂಬರಾಟ ಬಹು ಪ್ರಿಯವಾಗಿದ್ದುವು; ಅವನು ಇದನ್ನು ಗೇಲಿ ಮಾಡಿದನು. ವಸ್ತು ವಿಷಯಗಳ ವೈವಿಧ್ಯ, ಕಲ್ಪನೆಯ ನಾವೀನ್ಯ, ನಿರೂಪಣಾಕ್ರಮದಲ್ಲಿ ವೈವಿಧ್ಯ, ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಭಾವಸ್ವಾತಂತ್ರ್ಯ- ಇವು ಅವನ ಮಾರ್ಗದರ್ಶಕ ಕಾವ್ಯಾಂಶಗಳು. ಇದು ನವೋದಯ ಕಾವ್ಯಯುಗದ ಧರ್ಮವಾಗಿತ್ತು; ಅವನು ಇದನ್ನು ಪ್ರವರ್ತನಗೊಳಿಸಿ, ಬಲವಾಗಿ ಎತ್ತಿಹಿಡಿದನು. ಈ ಹೊಸ ನಿಷ್ಠೆ ಅವನ ವಿಮರ್ಶಾತ್ಮಕ ಬರವಣಿಗೆಗಳಲ್ಲಿಯೂ ಸ್ಪಷ್ಟವಾಗಿದೆ. ವಿಭಿನ್ನ ತಾತ್ತ್ವಿಕ ನಿಷ್ಠೆಗಳ ನಡುವಣ ವಿರೋಧದ ಪರಿಣಾಮವಾಗಿ ಸಾಹಿತ್ಯಕ ವಾದವಿವಾದವೊಂದು ಹೊತ್ತಿಕೊಂಡು, ಬಹಳಕಾಲ ಸಾಹಿತ್ಯ ರಸಿಕರ ಕುಟೀರಗಳಲ್ಲಿ ಹೊಗೆಯಾಡುತ್ತಲೇ ಇತ್ತು. ನಮ್ಮ ವಿಷಯಕ್ಕೆ ಅದು ಪ್ರಸಕ್ತವಾಗಿರುವುದರಿಂದ ಆ ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸುವೆವು.

ಪ್ರಾಸ ವಿಷಯಕ ವಾದವಿವಾದ

ಮಲಯಾಳಂ ಭಾಷೆಯಲ್ಲಿಯೂ ಇತರ ಭಾರತೀಯ ಭಾಷೆಗಳಲ್ಲಿರುವಂತೆ ಬಗೆ ಬಗೆಯ ಪ್ರಾಸಗಳನ್ನು ಕವಿಗಳು ಬಳಸುವುದಿದೆ. ಆದರೆ ಒಂದು ವಿಶೇಷ ಜಾತಿಯ ಪ್ರಾಸವಿದೆ,- ಅದು ದ್ವಿತೀಯಾಕ್ಷರ ಪ್ರಾಸ; ಮಲಯಾಳಂ ಭಾಷೆಯ ಬಹು ಮಂದಿ ಕವಿಗಳಿಗೆ ಇದು ಪ್ರಿಯವೆನಿಸಿತ್ತು. ಈ ಪ್ರಾಸಕ್ಕೆ ಮಾತ್ರ ವಿಶಿಷ್ಟ ಮನ್ನಣೆ ಸಂದುದೇಕೆ, ಇದು ಮಾತ್ರ ಪ್ರಿಯವಾದುದೇಕೆ, ಎಂಬ ವಿಚಾರ ಸಂಶೋಧನೆಯಾಗತಕ್ಕುದ್ದು. ಆದರೆ ಹಾಗೆ ನೆಲೆಗೊಂಡ ಪದ್ಧತಿ ನಿಲುಗಡೆಯಿಲ್ಲದೆ ಹಲವು ಪೀಳಿಗೆಗಳ ಕಾಲ ಸಾಗಿಬಂದಿತು. ಈ ಪ್ರಾಸ ಕಿವಿಗೆ ಹಿತ ಎಂಬಲ್ಲಿ ಸಂದೇಹವಿಲ್ಲ; ಆದರೆ ಇದು ಇದ್ದೇ ತೀರಬೇಕೆಂಬ ನಿರ್ಬಂಧ ಕಾವ್ಯರಚನೆಯಲ್ಲಿ ಹೆಚ್ಚು ಪ್ರಾಮುಖ್ಯ ಪಡೆದ ಇತರ ಕಾವ್ಯಾಂಶಗಳಿಗೆ ಹಾನಿ ತಟ್ಟಲು ಕಾರಣವಾಯಿತು. ೧೮೯೦ರಷ್ಟು ಹಿಂದೆಯೇ ಒಂದು ಸಾಹಿತ್ಯ ಪತ್ರಿಕೆಯಲ್ಲಿ ಪ್ರತಿ ಪಂಕ್ತಿಯಲ್ಲಿಯೂ ಈ ದ್ವಿತೀಯಾಕ್ಷರ ಪ್ರಾಸಕ್ಕೆ ಅಂಟಿಕೊಳ್ಳುವುದರ ಸಾಧಕ ಬಾಧಕಗಳನ್ನು ಕುರಿತು ಚರ್ಚೆ ನಡೆಯಿತು. ಈ ಪ್ರಶ್ನೆಯ ಬಗೆಗೆ ಪ್ರಮುಖ ಕವಿಗಳು ಮತಭೇದ

ಹೊಂದಿದ್ದರು; ಆದರೆ ಇದು ಕೆಲವು ವರ್ಷಗಳವರೆಗೆ ಒಂದು ವಾದವಿವಾದದ ಮಟ್ಟಕ್ಕೆ ಹೋಗಲಿಲ್ಲ. ಕೇರಳವರ್ಮನೇನೋ ದ್ವಿತೀಯಾಕ್ಷರಪ್ರಾಸವನ್ನು ಇಟ್ಟುಕೊಳ್ಳುವುದರ ಪರವಾಗಿದ್ದನು, ಅದರಲ್ಲಿ ಸಂದೇಹವಿರಲಿಲ್ಲ; ಆದರೆ ರಾಜರಾಜವರ್ಮನು ಆ ಬಗೆಯ ನಿರ್ಬಂಧಕ್ಕೆ ವಿರೋಧವಾಗಿದ್ದನು. ಈತನು ಅಭಿಪ್ರಾಯದಲ್ಲಿ, ಅಂತ ನಿರ್ಬಂಧವು ಅಪಕ್ವ ಸಾಹಿತ್ಯದ ಲಾಂಛನ.

ಈ ವಿಚಾರದಲ್ಲಿ ಭಿನ್ನಾಭಿಪ್ರಾಯವು ವಾದವಿವಾದದ ಬಿರುಗಾಳಿಯಾಗಿ ಪರಿಣಮಿಸಿದ್ದು ೧೯೦೮ರಲ್ಲಿ. ಅದು ತೊಡಗಿದ್ದು ಹೇಗೆ, ಅದನ್ನು ಹೊತ್ತಿಸಿದ ಸಂದರ್ಭ ಸನ್ನಿವೇಶಗಳೇನು, ಎಂಬುದನ್ನಿಲ್ಲಿ ಸಂಕ್ಷೇಪವಾಗಿ ತಿಳಿಸಬಹುದು. ಕೇರಳವರ್ಮನ ಸಮುಖದಲ್ಲಿ ವಿಶೇಷಪ್ರಾಸವನ್ನು ಇಟ್ಟುಕೊಳ್ಳುವುದರ ವಿರುದ್ಧವಾಗಿ ವಾದಗಳನ್ನು ಮಂಡಿಸಿ, ಆತನ ತತ್‌ಕ್ಷಣದ ಪ್ರತಿಕ್ರಿಯೆಯನ್ನು ತಿಳಿದರೆ, ಅದು ಒಳ್ಳೆಯ ಆಲೋಚನೆ ಎಂದು ರಾಜರಾಜವರ್ಮನು ಭಾವಿಸಿದನು. ೧೯೦೮ರಲ್ಲಿ ಮಲಯಾಳಂ ಸಮಾಜದ ವಾರ್ಷಿಕ ದಿನವನ್ನು ಆಚರಿಸತಕ್ಕದ್ದೆಂದು ತಿರುವನಂತಪುರದ ಮಹಾರಾಜರವರ ಕಾಲೇಜು ವ್ಯವಸ್ಥೆ ಮಾಡಿದಾಗ ಒಂದು ಅವಕಾಶ ದೊರಕಿತು. ಅಂದಿನ ಕಾರ್ಯ ಕವಿ ಕೆ.ಸಿ. ಕೇಶವ ಪಿಳ್ಳೆಯನ್ನೂ ಆಹ್ವಾನಿಸಬೇಕೆಂದು ಸಮಾಜದ ಕಾರ್ಯದರ್ಶಿ ಪಿ. ಅನಂತ ಪಿಳ್ಳೆಗೆ ರಾಜರಾಜವರ್ಮನು ನಿರ್ದೇಶ ಮಾಡಿದನು. ಅನೇಕ ತಾತ್ವಿಕ ವಾದ ವಿವಾದಗಳಲ್ಲಿ ರಾಜರಾಜವರ್ಮನ ನಿಲುವನ್ನು ಉತ್ಸಾಹದಲ್ಲಿ ಸಮರ್ಥನೆ ಮಾಡುತ್ತಿದ್ದ ಕೆ.ಸಿ. ಕೇಶವ ಪಿಳ್ಳೆ ಆತನೊಂದಿಗೆ ಸಂಚುಹೂಡಿ 'ಭಾಷಾಕವಿತೆ' (ಮಲಯಾಳಂ ಕಾವ್ಯ) ಎಂಬ ಪ್ರಬಂಧವನ್ನು ಸಿದ್ಧಪಡಿಸಿ, ಅದನ್ನು ಅಂದಿನ ಸಭೆಯಲ್ಲಿ ಮಂಡಿಸಿದನು. ಒಟ್ಟಿನಮೇಲೆ ಮಲಯಾಳಂ ಕವಿತೆಯನ್ನು ಕುರಿತದ್ದಾದರೂ, ಪ್ರಬಂಧದ ತಿವಿತವೆಲ್ಲವೂ ಪ್ರಾಸನಿರ್ಬಂಧದ ವಿರುದ್ಧವಾಗಿತ್ತು. ಪ್ರಬಂಧದಲ್ಲಿ ವಾದವನ್ನು ಬಹಳ ಚೆನ್ನಾಗಿ ಮಂಡಿಸಲಾಗಿತ್ತು. ಈ ಪ್ರಬಂಧವಾಚನ ಕಾರ್ಯಕ್ರಮದ ಹಿಂದಿನ ಆಟಹೂಟಗಳನ್ನು ಸಭಾಧ್ಯಕ್ಷ ಅರ್ಥಮಾಡಿಕೊಂಡನು. ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಸಿದ್ಧಪಡಿಸಿದ್ದ ಭಾಷಣಕ್ಕೇ ಬದ್ಧನಾಗಿದ್ದನು; ಅಲ್ಲದೆ, ಪ್ರಬಂಧದಲ್ಲಿ ಪ್ರತಿಪಾದಿಸಿದ್ದ ವಾದವನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಎದುರಿಸಿದನು. ತನ್ನ ಪ್ರತಿಪಕ್ಷದವರು ಒಳ್ಳೆಯ ಕವಿತೆಯನ್ನು ರಚಿಸಲು ಅಸಮರ್ಥರು ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಇಷ್ಟೇ ಅಲ್ಲ, ಅತ್ಯಂತ ಮನೋಜ್ಞವಾದ ಪದ್ಯದಲ್ಲಿ ದ್ವಿತೀಯಾಕ್ಷರ ಪ್ರಾಸದ ಸ್ವರವ್ಯಂಜನಗಳೆರಡೂ ಏಕರೂಪದವು ಆಗಿರುತ್ತವೆ ಎಂದೂ ವಾದಿಸಿದನು.

ತದನಂತರ ಕೇಶವಪಿಳ್ಳೆಯ ಪ್ರಬಂಧವು 'ಭಾಷ ಪೋಷಿಣಿ'ಯಲ್ಲಿ ಪ್ರಕಟವಾಯಿತು. ಆದರೆ ಮುಂದಿನ ಸಂಚಿಕೆಯಲ್ಲೇ ಕೇರಳವರ್ಮನ ಅಧ್ಯಕ್ಷ ಭಾಷಣ ಮಾತ್ರವಲ್ಲದೆ, ಕೆ.ಸಿ. ಕೇಶವ ಪಿಳ್ಳೆಯ ವಾದವನ್ನು ಕಟುವಾಗಿ ಟೀಕಿಸಿ ಬರೆದಿದ್ದ ಕವಿ ಉಳ್ಳೂರು ಎಸ್.ಪರಮೇಶ್ವರ ಐಯರ್‌ನ ಲೇಖನವನ್ನೂ ಪ್ರಕಟಿಸಲಾಯಿತು. ಇದರಿಂದಾಗಿ ಪತ್ರಿಕೆಗಳಲ್ಲೂ ವೇದಿಕೆಗಳ ಮೇಲೂ ಒಂದು ಕಹಿಯಾದ ವಾಗ್ವಾದ ಪ್ರಾರಂಭವಾಯಿತು; ಮುಂದಿನ ಮೂರು ವರ್ಷಕಾಲ ಅನೇಕ ವಿದ್ವಾಂಸರೂ ಕವಿಗಳೂ ಅದರಲ್ಲಿ ಪಾಲ್ಗೊಂಡರು. ತಂತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಹೆಸರಾಂತ ಕವಿಗಳು ದ್ವಿತೀಯಾಕ್ಷರ ಪ್ರಾಸ ಸಹಿತವಾದ, ಆ ಪ್ರಾಸವನ್ನು ತ್ಯಜಿಸಿದ 'ಸಮಸ್ಯೆ'ಗಳನ್ನೂ ಕವನಗಳನ್ನೂ ರಚಿಸಿದರು. ತನ್ನ ಸೋದರಳಿಯನ ಪ್ರಭಾವಕ್ಕೆ ಒಳಗಾಗಿ, ಉದಾರ ಹೃದಯದ ಕೇರಳವರ್ಮನು ಈ ವಿಶಿಷ್ಟ ಪ್ರಾಸಕ್ಕೆ ಅಂಟಿಕೊಳ್ಳದೆ 'ದೈವಯೋಗಂ' ಎಂಬ ಕವಿತೆಯನ್ನು ರಚಿಸಿದನು. ಆದರೆ, ವಾಗ್ಯುದ್ಧ ಇನ್ನೂ ಮುಂದುವರಿಯಿತು; ಎರಡನೆಯ ದರ್ಜೆಯ ಕವಿಗಳೂ ಕಲಹಕ್ಕೆ ಪ್ರವೇಶಿಸಿದರು. ಈ ವಿಷಯದಲ್ಲಿ ಉಭಯ ಪಕ್ಷಗಳಿಗೂ ರಾಜಿಯುಂಟುಮಾಡುವ ರೀತಿಯಲ್ಲಿ ರಾಜರಾಜವರ್ಮನು ಒಂದು ಲೇಖನ ಬರೆಯತಕ್ಕದ್ದೆಂದು ಎರಡು ಪಕ್ಷಗಳವರೂ ಕಡೆಗೊಮ್ಮೆ ಒಪ್ಪಿಕೊಂಡರು.

ಸಂಪ್ರದಾಯ ಮತ್ತು ಆಧುನಿಕತೆ

ವಾಸ್ತವವಾಗಿ ಪ್ರಾಸವಿಚಾರವು ವಾಗ್ವಾದಕ್ಕೆ ಕಾರಣವಾದ ಹಲವು ಅಂಶಗಳಲ್ಲಿ ಒಂದಾಗಿತ್ತು; ವಾಗ್ವಾದ ಆಸ್ಫೋಟಿಸುವುದಕ್ಕೆ ಅದೇ ಮುಖ್ಯ ಕಾರಣವಾಗಿತ್ತು, ಅದರಲ್ಲಿ ಸಂದೇಹವಿಲ್ಲ. ಕವಿತಾರಚನೆಯ ವಿಷಯದಲ್ಲಿ ಸಾಂಪ್ರದಾಯಿಕ ದೃಷ್ಟಿಗೂ ಆಧುನಿಕ ದೃಷ್ಟಿಗೂ ನಡುವೆ ಬಲಪರೀಕ್ಷೆಗಾಗಿ ನಡೆದ ಹೋರಾಟವಾಗಿತ್ತು ಅದು. ಪುನರುಜ್ಜೀವನದ ನಿಜವಾದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಂಪ್ರದಾಯವಾದಿಗಳು ಎತ್ತಿಹಿಡಿದು ಮಲಯಾಳಂ ಕವಿತೆಯ ಲಕ್ಷಣಗಳೇನು ಎಂಬುದನ್ನು ನಾವು ಗೊತ್ತುಪಡಿಸಿಕೊಳ್ಳಬೇಕು. ಅವು ಯಾವುವು ಎಂಬುದನ್ನು ಕೆಳಗೆ ಸಂಕ್ಷೇಪವಾಗಿ ಸೂಚಿಸಲಾಗಿದೆ:[೧]

---

೧. ಕೆ.ಎಂ. ಜಾರ್ಜ್ ಅವರ 'ಮಲಯಾಳಂ ಭಾಷೆ ಮತ್ತು ಸಾಹಿತ್ಯಗಳ ಮೇಲೆ 'ಪಾಶ್ಚಾತ್ಯ ಪ್ರಭಾವ' (Western Influence on Malayalam Language and Literature) ಎಂಬ ಹತ್ತನೆಯ ಅಧ್ಯಾಯವನ್ನು ನೋಡಿ.

(೧) ಅದು ಪೌರಾಣಿಕವಾಗಿರಲಿ ಐತಿಹಾಸಿಕವಾಗಿರಲಿ, ಒಂದು ಪ್ರಸಿದ್ಧ ಕಥೆಯನ್ನು ಅವಲಂಬಿಸಿ ಕಾವ್ಯವನ್ನು ರಚಿಸಬೇಕು.

(೨) ಅದರಲ್ಲಿ ವಿಸ್ತಾರವಾದ ವರ್ಣನೆಗಳು ಅಡಕವಾಗಿರಬೇಕು: ಅವುಗಳಲ್ಲಿ ವರ್ಣನಾ ವಿಷಯಗಳೆಂದು ಕಾವ್ಯ ಪ್ರಪಂಚದಲ್ಲಿ ರೂಢಿಯಾದ ವರ್ಣನೆಗಳು. ಪರ್ವತ, ಸಮುದ್ರ, ಋತುಗಳು ಮುಂತಾದವು, ಇದ್ದೇ ತೀರಬೇಕು.

(೩) ಅಲಂಕಾರಗಳು ವಿಪುಲ ಸಂಖ್ಯೆಯಲ್ಲಿ ಇರಬೇಕು; ಅವು ಎಷ್ಟು ಕಾಲ್ಪನಿಕವಾಗಿದ್ದರೆ ಅಷ್ಟು ಮೇಲು.

(೪) ಅನುಪ್ರಾಸ, ಪ್ರಾಸ, ಇವು ಒಳ್ಳೆಯ ಕಾವ್ಯದ ಮುಖ್ಯ ಲಕ್ಷಣಗಳು. ಪ್ರತಿಪಾದದಲ್ಲೂ ದ್ವಿತೀಯಾಕ್ಷರಪ್ರಾಸ (ಆದಿಪ್ರಾಸ) ಇರಬೇಕಾದ್ದು ಅತ್ಯಗತ್ಯ.

(೫) ಬಳಸಲಾಗುವ ಛಂದೋವೃತ್ತಗಳನ್ನು ಸಂಸ್ಕೃತ ಛಂದಸ್ಸಿನಿಂದ ಆಯ್ದುಕೊಳ್ಳಲಾಗಿದೆ.

(೬) ಕಾವ್ಯ ಓದುಗನಲ್ಲಿ ಬೆರಗಿನ ಭಾವನೆಯನ್ನು ಹುಟ್ಟಿಸಬೇಕು; ಪ್ರತಿಯೊಂದು ವೃತ್ತವೂ ಕವಿಯ ಕಾವ್ಯಕಲಾ ಪ್ರೌಢಿಮೆ ಹಾಗೂ ಪಾಂಡಿತ್ಯಗಳ ಬಗೆಗೆ ವಿಶ್ವಾಸ ದೃಢವಾಗುವಂತೆ ಮಾಡಬೇಕು.

ಬೇರೆಯ ಮಾತಿನಲ್ಲಿ ಹೇಳುವುದಾದರೆ, ಪ್ರತಿಭೆಗಿಂತ ಅಲಂಕಾರವೇ ಮೇಲುಗೈ ಎಂದಾಯಿತು. ಮೇಲೆ ವಿವರಿಸಿದ ಲಕ್ಷಣಗಳಲ್ಲಿ ಸಂಸ್ಕೃತ ಕಾವ್ಯ ಮೀಮಾಂಸೆಯ, ಸಂಸ್ಕೃತ ಮಹಾಕಾವ್ಯದ ಪರಮ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

ಅಸಾಧಾರಣವಾದ ಮತ್ತು ಚಮತ್ಕಾರಯುತವಾದ ಏನನ್ನಾದರೂ ನಿರ್ಮಾಣ ಮಾಡಲು ಕವಿಗಳು ಪರಸ್ಪರ ಪೈಪೋಟಿ ನಡಸುತ್ತಿದ್ದರು. ಕಾವ್ಯದ ಬೆಳವಣಿಗೆ ಸಹಜವಾಗಿಯೆ ಕುಂಠಿತವಾಯಿತು. ಪುನರುಜ್ಜೀವನದ ಯುಗಧರ್ಮವನ್ನು ಮೈಗೂಡಿಸಿಕೊಂಡಿದ್ದ ರಾಜರಾಜವರ್ಮನೂ ಆತನ ಅಭಿಪ್ರಾಯವನ್ನೆ ಹೊಂದಿದ್ದ ಇನ್ನು ಕೆಲವರೂ ಈ ಪ್ರವೃತ್ತಿಗೆ ತಡೆಹಾಕಬಯಸಿದರು. ಇವರುಗಳ ವಕ್ತಾರನಾಗಿ ರಾಜರಾಜವರ್ಮನು ಹೊಸ ಮಾರ್ಗದಲ್ಲಿನ ಮೂಲಭೂತ ವ್ಯತ್ಯಾಸಗಳನ್ನು ಘೋಷಿಸಿದನು. ಅವುಗಳನ್ನು ಕೆಳಗೆ ಕೊಟ್ಟಿದೆ:

(೧) ಒಟ್ಟಿನ ಮೇಲೆ ಮಲಯಾಳಂ ಭಾಷೆಯಲ್ಲಿ "ವಸ್ತುಕ" (Objective) ಕಾವ್ಯ ಎನ್ನಬಹುದಾದ ಕಥನ (ಮಹಾಕಾವ್ಯ ಮತ್ತು ಹಾಡು ಕವಿತೆ) ಮತ್ತು ನಾಟಕ (ಆಟ್ಟ ಕಥಾ) ಪ್ರಕಾರಗಳು ಮಾತ್ರ ಇದ್ದುವು. ವಿಷಯದ ಆಯ್ಕೆಯಲ್ಲಿ ಮಿತಿಯನ್ನು ಕಲ್ಪಿಸುವ ಯಾವ ಕಟ್ಟುಪಾಡೂ ಇರಕೂಡದು. ಯಾವ ವಿಷಯವೂ

ಕಾವ್ಯದಲ್ಲಿ ನಿರೂಪಣ ಯೋಗ್ಯ; ಆದರೆ ಮಾತ್ರ ಅದು ಕವಿಯ ಕಲ್ಪನಾ ಶಕ್ತಿಯನ್ನು ಪ್ರಚೋದನಗೊಳಿಸಬೇಕಷ್ಟೆ. ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯವಾಗಿರುವ ವ್ಯಕ್ತಿನಿಷ್ಠ (Subjective) ಕಾವ್ಯವನ್ನು ಬರಮಾಡಿಕೊಳ್ಳಬೇಕು; ಇದೊಂದು ಸ್ವಾಗತಾರ್ಹವಾದ ಬದಲಾವಣೆ ಆದೀತು.

(೨) ವರ್ಣನೆಗಾಗಿ ವರ್ಣನೆ ಅಪೇಕ್ಷಣೀಯವಲ್ಲ. ಕಾವ್ಯದ ಒಟ್ಟಿನ ಭಾವ ಮತ್ತು ಉದ್ದೇಶಗಳಿಗೆ ಅವು ಪೋಷಕವಾಗಿದ್ದರೆ ಮಾತ್ರ ಉಚಿತವಾಗಿರುವುವು.

(೩) ಅಲಂಕಾರಬಾಹುಳ್ಯ ಕಾವ್ಯಕ್ಕೆ ಹೊರೆಯಾಗಿ ಅದನ್ನು ಕೃತಕವನ್ನಾಗಿಸುವುದು.

(೪) ಪದ್ಯಕಾವ್ಯದಲ್ಲಿ ಸಂದರ್ಭಕ್ಕೆ ತಕ್ಕ (ಸ್ವರ ವ್ಯಂಜನ) ಧ್ವನಿಗಳನ್ನುಳ್ಳ ಶಬ್ದಗಳನ್ನು ಆಯ್ಕೆ ಮಾಡಿ ಪ್ರಯೋಗಿಸುವುದು ಖಂಡಿತವಾಗಿಯೂ ಉಚಿತವಾದದ್ದೆ; ಆದರೆ, ಈ ಬಗೆಯ ಪ್ರಯೋಗ ಯಾಂತ್ರಿಕವಾಗಿ ಒಂದು ನಿರ್ದಿಷ್ಟ ಆವೃತ್ತಿ ಕ್ರಮಕ್ಕೆ ಬದ್ಧವಾಗಿರತಕ್ಕದ್ದು ಎಂದಾಗಲಿ ಪ್ರತಿ ಪಾದದಲ್ಲಿಯೂ ಅದು ದ್ವಿತೀಯ ಅಕ್ಷರ ಸ್ಥಾನದಲ್ಲಿ ಪುನರಾವೃತ್ತಿಯಾಗಬೇಕು ಎಂದಾಗಲಿ ಭಾವಿಸುವುದು ಅವಿವೇಕ. ಇಂಥ ಯಾವುದೇ ಕಟ್ಟುನಿಟ್ಟಾದ ವ್ಯಸ್ಥೆಗೆ ಒಳಪಡುವುದರಿಂದ ಸ್ವಾಭಾವಿಕವಾದ ವಾಕ್ಯ ಬಂಧವನ್ನೂ ಪದಯೋಜನೆಯನ್ನು ಅನಗತ್ಯವಾಗಿ ಹಿಗ್ಗಾಮುಗ್ಗಾ ಎಳೆದಾಡಿ, ತಿರಿಚುಮುರಿಚು ಮಾಡಬೇಕಾಗಬಹುದು. ಒಂದು ನಿರ್ದಿಷ್ಟ ಧ್ವನಿಗೆ ಅಗತ್ಯಕ್ಕಿಂತ ಹೆಚ್ಚಿನ ಪ್ರಾಮುಖ್ಯಕೊಟ್ಟದ್ದೇ ಆದರೆ ಧ್ವನಿಬಂಧುರತೆಗೆ ಮಾರುಹೋಗಿ ಅರ್ಥಸ್ವಾರಸ್ಯವನ್ನು ಕೈಬಿಡಬೇಕಾದ ಚಾಪಲ್ಯಕ್ಕೆ ಸೋಲಬೇಕಾಗುವುದು.

(೫) ತನಗೆ ಇಷ್ಟಬಂದ ಛಂದೋಬಂಧವನ್ನು ಆಯ್ದುಕೊಳ್ಳಲು ಕವಿ ಸ್ವತಂತ್ರನಾಗಿರಬೇಕು. ಕಟ್ಟುನಿಟ್ಟಾದ ಸಂಸ್ಕೃತ ಛಂದಸ್ಸಿಗೆ ಅಂಟಿಕೊಳ್ಳಬೇಕಾದ ಅಗತ್ಯವೇನಿಲ್ಲ. ಜನಪದ ಮಟ್ಟುಗಳಿಂದ ರೂಪಗೊಂಡ ದೇಸಿ ಮಲಯಾಳಿ ಛಂದಃಪ್ರಕಾರಗಳು ಹೇಗೆಂದರೆ ಹಾಗೆ ಬಳುಕುವಂತಿದ್ದು, ಹೆಚ್ಚು ಗೇಯಯೋಗ್ಯವಾಗಿರುವುದರಿಂದ ಭಾವಪ್ರಧಾನವಾದ ಗೀತರಚನೆಗಳಿಗೆ ಯೋಗ್ಯವಾಗಿವೆ.

(೬) ಪೂರ್ವ ಸಾಧನೆಗಳ ಆಧಾರದ ಮೇಲೆ ನಿರ್ಮಾಣ ಮಾಡುವುದು ಒಳ್ಳೆಯದಾದರೂ ಸೂತ್ರಬದ್ಧ ರೂಪ ರಚನೆಗಳನ್ನು ಲೇಖಕರು ಅನುಕರಣ ಮಾಡಕೂಡದು. ಕಾವ್ಯದಲ್ಲಿ 'ಭಾವ' (Imagination) ಮುಖ್ಯವೇ ಹೊರತು

'ಕಲ್ಪನೆ' (Fancy) ಅಲ್ಲ. ಕುಶಲ ಕರ್ಮಕ್ಕಿಂತ ಕಲೆಗೆ ಹೆಚ್ಚಿನ ಪ್ರಾಮುಖ್ಯ ಇರಬೇಕು.

ವಾದವಿವಾದಗಳಲ್ಲಿ ರಾಜರಾಜವರ್ಮನ ಪಾತ್ರ ಎಷ್ಟು ಮಹತ್ವಪೂರ್ಣವಾಗಿತ್ತು ಎಂದರೆ, ಆತ ಪ್ರತಿಪಾದಿಸಿದ ನೂತನ ತತ್ತ್ವಗಳು 'ರಾಜರಾಜವರ್ಮ ಪ್ರಸ್ಥಾನಂ' ಎಂದೇ ಹೆಸರುವಾಸಿಯಾಯಿತು.

ಸಾಹಿತ್ಯಕ ಲೇಖನಕ್ಕೆ ಹೊಸ ತಿರುವು

ಈ ತತ್ತ್ವಗಳು ವಿಶೇಷವಾಗಿ ಪದ್ಯಕಾವ್ಯ ರಚನೆಯನ್ನು ಕುರಿತುವಾದರೂ, ಒಟ್ಟಿನ ಆಶಯ ಗದ್ಯಕ್ಕೂ ಅನ್ವಯಿಸತಕ್ಕವಾಗಿದ್ದುವು. ನಾವೀನ್ಯ ಹಾಗೂ ಸ್ವಾತಂತ್ರ್ಯಗಳಿಗೆ ಕೊಟ್ಟಿದ್ದ ಹೊಸತಾದ ಪ್ರಾಧಾನ್ಯ ಯುವಪೀಳಿಗೆಗೆ, ಮುಖ್ಯವಾಗಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದಿದ್ದ ಲೇಖಕರಿಗೂ ಸಾಹಿತ್ಯ ರಸಿಕರಿಗೂ ಸ್ವಾಗತಾರ್ಹವೆನಿಸಿತು. ಪ್ರತಿಪಾದಿಸಿದ ತತ್ತ್ವಗಳನ್ನೂ ಅವಕ್ಕೆ ಅನುಗುಣವಾಗಿ ನಿರ್ಮಾಣ ಮಾಡಿದ, ಉತ್ತೇಜನ ಕೊಟ್ಟು ನಿರ್ಮಾಣ ಮಾಡಿಸಿದ ಸಾಹಿತ್ಯ ಕೃತಿಗಳನ್ನೂ ಎಚ್ಚರಿಕೆಯಿಂದ ಪರಿಶೀಲನೆ ಮಾಡಿದ್ದೇ ಆದರೆ, ಸಾಹಿತ್ಯ ರಚನೆಗೂ ಸಹೃದಯ ವಿಮರ್ಶೆಗೂ ರಾಜರಾಜವರ್ಮನು ಮಲಯಾಳಂ ಭಾಷೆಯಲ್ಲಿ ಕಲ್ಪಿಸಿದ ನೆಲೆಬೆಲೆಗಳನ್ನು ನಾವು ಅರಿತುಕೊಳ್ಳುವೆವು. ನಿಯಮಗಳು, ಸೂತ್ರಗಳು, ಪ್ರಾಚೀನ ಕಾವ್ಯಗಳನ್ನು ಮಾದರಿಗಳಾಗಿ ಇಟ್ಟುಕೊಳ್ಳಬೇಕೆಂಬ ರಸದೃಷ್ಟಿಯಿಲ್ಲದ ಒತ್ತಾಯ, ಇವುಗಳಿಂದ ಉಪಲಕ್ಷಿತವಾಗಿದ್ದ ಕಾವ್ಯವಿಷಯಕ ಸಂಕುಚಿತ ಭಾವನೆಗೆ ಆತ ಕ್ರಾಂತಿಕಾರಕವಾದ ಕೊಡಲಿಪೆಟ್ಟು ಕೊಟ್ಟನು. ಗದ್ಯವಾಗಲಿ ಪದ್ಯವಾಗಲಿ, ತಂತ್ರ ಸ್ಫೂರ್ತಿಗೆ ಅಧೀನವಾಗಿರಬೇಕು ಎಂದು ಆತ ಘೋಷಿಸಿದನು. ಇದು ಆಧುನಿಕ ಸಾಹಿತ್ಯಕ್ಕೆ ರಾಜರಾಜವರ್ಮನ ಮುಖ್ಯವಾದ ಕೊಡುಗೆ. ಇನ್ನು ಭಾಷೆಯ ವಿಚಾರಕ್ಕೆ ಬಂದರೆ, ಒಂದು ಉತ್ತಮೋತ್ತಮವಾದ, ಕಾಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ನಿಂತ, ವ್ಯಾಕರಣ ಗ್ರಂಥವನ್ನು ರಚಿಸುವುದರ ಮೂಲಕ ಭಾಷೆಯ ವೈಜ್ಞಾನಿಕ ಅಧ್ಯಯನಕ್ಕೆ ಆತ ಆಸ್ತಿಭಾರ ಹಾಕಿದನು ಎಂಬುದನ್ನು ಈಗಾಗಲೇ ನಾವು ನೋಡಿದ್ದೇವೆ. ಕವಿ ಉಳ್ಳೂರ್ ಹೇಳಿರುವಂತೆ, 'ಕೈರಳೀ' ಎಂದರೆ ಕೇರಳದ ಭಾಷೆ ಸಾಹಿತ್ಯಗಳ ಸೌಧದ ಅಡಿಪಾಯವನ್ನು ರಾಜರಾಜವರ್ಮನು ಬಲಪಡಿಸಿದ್ದಲ್ಲದೆ ಅದರ ಮೇಲುಕಟ್ಟಡವನ್ನು ಅಲಂಕರಿಸಿದನು. ಆತ ನಿಜವಾಗಿಯೂ ಅನೇಕ ಕ್ಷೇತ್ರಗಳಲ್ಲಿ ಮುಂದಾಳಾಗಿದ್ದವನು, ಪ್ರಮುಖ ಪ್ರತಿಭಾವಂತ ಹಾಗೂ ಮಾನಸಿಕ ಶಕ್ತಿ ಸಾಮರ್ಥ್ಯಗಳನ್ನು

ವಿಮೋಚನಗೊಳಿಸಿದವನು. ಕಳೆದ ಶತಮಾನಾರ್ಧದಲ್ಲಿ ಬೇರೆ ಇತರ ಯಾವ ಸಾಹಿತ್ಯ-ಸಾಧಕನಿಗಿಂತ ಹೆಚ್ಚಾಗಿ ಮಲಯಾಳಂ ಸಾಹಿತ್ಯದ ಅಪಾರ ಪುರೋಭಿವೃದ್ಧಿಗೆ ಮಾತ್ರ ಹಾಕಿದವನು ರಾಜರಾಜವರ್ಮ. ಬೇರೆಯ ರೀತಿಯಲ್ಲಿ ಹೇಳುವುದಾದರೆ, ಮಲಯಾಳಂ ಸಾಹಿತ್ಯದಲ್ಲಿ ನವೋದಯ ಚಳವಳಿಯ ಮುಂಚೂಣಿಯ ಅಗ್ರನಾಯಕ ನಾಗಿರುವುದು ಅವನ ಪಾಲಿಗೆ ಒದಗಿಬಂದಿತು.

ಆತ ದೊಡ್ಡವನಾಗಿದ್ದುದು ಮಾತ್ರವಲ್ಲ, ಇತರರಲ್ಲಿಯ ದೊಡ್ಡತನವನ್ನು ಕಂಡುಹಿಡಿದು ಅದನ್ನು ಮೆಚ್ಚಿಕೊಳ್ಳಬಲ್ಲವನಾಗಿದ್ದನು. ಯಾರಲ್ಲಿಯೇ ಆಗಲಿ ಸೃಜನಶೀಲ ಪ್ರತಿಭೆ ಪ್ರಕಾಶಕ್ಕೆ ಬಾರದೆ ಇದ್ದರೂ, ಇಲ್ಲವೆ ಅನನುಕೂಲ ಪರಿಸ್ಥಿತಿಯಲ್ಲಿ ಮುಚ್ಚಿಹೋಗಿದ್ದರೂ ಕೂಡ, ಅದನ್ನು ಕಂಡುಹಿಡಿಯಬಲ್ಲ ಒಂದು ವಿಚಿತ್ರ ಸಾಮರ್ಥ್ಯ ಆತನಿಗಿದ್ದಿತು. ಕುಮಾರನ್ ಆಶನ್ ಕವಿ ಮೊತ್ತಮೊದಲ ದೊಡ್ಡ ಕಾವ್ಯ 'ನಳಿನಿ'ಯಲ್ಲಿ ವ್ಯಕ್ತವಾಗಿದ್ದ ಹೊಸ ಸ್ವತಂತ್ರ ಪ್ರವೃತ್ತಿಯನ್ನು ರಾಜರಾಜವರ್ಮನು ಎಷ್ಟು ಬೇಗನೆ ಕಂಡುಕೊಂಡನು, ಅದರ ಹೊಸ ದೃಷ್ಟಿಯನ್ನು ಸ್ಪಷ್ಟವಾದ ಮಾತುಗಳಲ್ಲಿ ಲೋಕಕ್ಕೆ ಪ್ರಕಟಿಸಲು ಆತ ಹೇಗೆ ಇಚ್ಛೆಯುಳ್ಳವನಾಗಿದ್ದನು ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ತನ್ನ ಸಹೋದ್ಯೋಗಿಗಳು, ವಿದ್ಯಾರ್ಥಿಗಳು, ಸ್ನೇಹಿತರು ಮತ್ತು ಸಹಾಯವನ್ನು ಕೋರಿ ಬಂದವರು, ಮುಂತಾದವರೊಂದಿಗೆ ಆತ ನಡೆದುಕೊಳ್ಳುತ್ತಿದ್ದ ರೀತಿ ಆದರ್ಶಪ್ರಾಯವಾಗಿತ್ತು. ಬದುಕಿನಲ್ಲಿ ಅವರ ಸ್ಥಾನಮಾನ, ಅವರ ಜಾತಿ ಮತ ಇವುಗಳಿಗೆ ಎಂದೂ ಲಕ್ಷ್ಯಕೊಟ್ಟವನಲ್ಲ ಆತ. ಆ ಕಾರಣದಿಂದಲೇ, ತಿಳಿದೋ ತಿಳಿಯದೆಯೋ, ಜೋಸೆಫ್ ಮಂಡೇಶ್ಶೇರಿ ಹೇಳಿದರು: **"ತಂಪುರಾನ್"** ಎನ್ನಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಆತ ಒಬ್ಬ ಮಾನವನಾಗಿ ಇದ್ದುಕೊಂಡಿರಲು ಸಮರ್ಥನಾದನು. ಆತನು ಇದ್ದ ಸಾಮಾಜಿಕ, ಸಾಂಸ್ಕೃತಿಕ ಪರಿಸರದಲ್ಲಿ ತನ್ನ ಉತ್ತಮ ಜಾತಿ ಮತ್ತು ಮೇಲ್ಮಟ್ಟದ ವಿದ್ಯಾಸಂಪನ್ನತೆಯ ಬಗ್ಗೆ ತಾನೇ ಶ್ರೇಷ್ಠ ಎಂಬ ಸ್ವಕೀಯ ಪ್ರಜ್ಞೆಯನ್ನು ಹೊಂದಿಲ್ಲದಿದ್ದುದು ಅಂದಿನ ದಿನಗಳಲ್ಲಿ ಸಣ್ಣ ಸಂಗತಿಯಾಗಿರಲಿಲ್ಲ. ತನ್ನ ಬಳಿಗೆ ಬಂದ, ಅರ್ಹತೆ ಉಳ್ಳ ಹಾಗೂ ಮುಂದಕ್ಕೆ ಬರುವ ಭರವಸೆ ನೀಡುವಂತಿದ್ದ ಎಲ್ಲ ಬರಹಗಾರರಿಗೂ ಬೇಕೆಂದೇ ಬೆನ್ನು ತಟ್ಟಿದನು; ತನ್ನ ಸಹೋದ್ಯೋಗಿಗಳಿಗೂ ಸ್ನೇಹಿತರಿಗೂ ಸ್ಫೂರ್ತಿಯ ಸೆಲೆಯಾಗಿದ್ದನು.

ಕುಮಾರನ್ ಆಶನ್ ಬರೆದಿರುವ 'ಪ್ರರೋದನಂ' ಎಂಬ ಶೋಕಗೀತೆಯನ್ನು ಉಲ್ಲೇಖಿಸಿ ಈ ಸಂಸ್ಮರಣವನ್ನು ನಾವು ಸಮಾಪ್ತಿ ಮಾಡಬಹುದು; ಈ ಗೀತೆಯಲ್ಲಿ

ಆತನ ಕೃತಜ್ಞತಾಭಾವ, ಗೌರವ–ಪ್ರೀತಿಗಳು ತುಂಬಿ ತುಳುಕುತ್ತಿವೆ. 'ಪ್ರರೋದನ' ಎಂದರೆ ಬಹಳವಾಗಿ ದುಃಖಿಸುವುದು. ಮಹಾಕವಿ, ಮಹಾವಿದ್ವಾಂಸ, ಮಹೋಪಕಾರಿ ಎನ್ನಿಸಿಕೊಂಡಿದ್ದ ಒಬ್ಬಾತನನ್ನು ಕುರಿತು ಒಬ್ಬ ಮಹಾಕವಿ ಬರೆದ ಈ ಕವಿತೆ ಮಲಯಾಳ ಭಾಷೆಯ ಅರ್ಥವತ್ತಾದ ಶೋಕಗೀತೆಗಳಲ್ಲಿ ಒಂದಾಗಿದೆ. ರಾಜರಾಜವರ್ಮನ ಸಾವು ಕುಮಾರನ್ ಆಶನ್ನಿಗೆ ಅಸಹನೀಯವಾಗಿತ್ತು; ಏಕೆಂದರೆ, ಆತನ ಆಶೋತ್ತರಗಳನ್ನೂ ತಾತ್ತ್ವಿಕ ನಿಲುವನ್ನೂ ರಾಜರಾಜವರ್ಮನಷ್ಟು ಚೆನ್ನಾಗಿ ಬೇರೆ ಯಾರೂ ಅರ್ಥಮಾಡಿಕೊಂಡಿರಲಿಲ್ಲ. ಕುಮಾರನ್ ಆಶನ್ ತನ್ನ ಎದೆಯಳಲನ್ನು ತೋಡಿಕೊಳ್ಳಲು ಶೋಕಗೀತೆಯನ್ನು ರಚಿಸಿದನು.

ಆ ಮಹಾವಿದ್ವಾಂಸನಿಗೆ ಕವಿ ಸಲ್ಲಿಸಿದ ಗೌರವವು ಶೋಕಗೀತೆಯ ಮಾದರಿಯಾಗಿರುವ ಈ ಪದ್ಯಪಂಕ್ತಿಗಳಲ್ಲಿ ವ್ಯಕ್ತಪಟ್ಟಿದೆ:

ಕ್ಷೀಣಿಸದಿರುವ ಮನೀಷೆಯನು ಮಸಿಯೊಣಗದೆ
ಓಡುವ ಹೊನ್ನಿನ ಪೇನವನೂ
ವಾಣಿಗಾಗಿಯೆ ಮೀಸಲಿಟ್ಟು ವರವಾಗಿ
ಬೇಡದೆ ಗಳಿಸಿದೆಯಯ್ ಸಿದ್ಧಿಗಳನು;
ಕಾಣಿಸಿದಯ್ ವಿವಿಧಾದ್ಭುತಗಳ ತತ್ತ್ವ ಪ್ರ–
ಯೋಗಗಳಲ್ಲಿ, ವೈರಿಗಳೆಲ್ಲ
ನಾಣ್ಚಿದರು; ಸ್ವಯಮಂಬಾ ಕೈರಳಿ ಕಳೆಗೂಡಿ
ಬೇಗನೀಕ್ಷಿಸಿದಳು ಮೋಕ್ಷವನು.

ಮುಂಬರುವ ಮಲಯಾಳಂ ಲೇಖಕರ ಪರವಾಗಿ ಕುಮಾರನ್ ಆಶನ್ ಈ ಬೆಳಗುವ ನೆನಪಿನ ಕಾಣಿಕೆಯನ್ನು ನೀಡಿದ್ದಾನೆ:

ಎಲ್ಲವನು ಪೋಗೊಟ್ಟು ತಲೆಬಾಗಿ ವಿಧಿಗೆ
ಚಿತೆಗೆ ಜೀವಿತವನ್ನೊಪ್ಪಿಸುತ
ಇಲ್ಲವಾಗುವುದದು ದೈವೇಚ್ಛೆಯಹುದು;
ತ್ವನ್ನಾಮ ಪುಣ್ಯಾಕ್ಷರಗಳನು
ನಟ್ಟು ಬೆಳಸುವೆವು, ಸಸಿಗೆ
ಕಣ್ಣೀರನೆರೆಯುತ

ಬಿಟ್ಟು ಹೂಗಳ ಕಂಪು ಹರಡುವುದೆಲ್ಲೆಡೆ
ಕಾಲಾಗ್ನಿ ಕೂಡ ಮುಟ್ಟದದನು.*

* * * *

---

* ಮೇಲ್ಕಂಡ ಕವಿತೆಯ ಚರಣಗಳ ಮಲಯಾಳಂ ಮೂಲವನ್ನು ಡಾ॥ ಕೆ.ಎಂ. ಜಾರ್ಜ್ ಅವರು ನನ್ನ ಕೋರಿಕೆಯಂತೆ ರೋಮನ್ ಲಿಪಿಯಲ್ಲಿ ಬರೆದು ಕಳಿಸಿ ಉಪಕರಿಸಿದರು. ಅವರ ಆಂಗ್ಲ ಅನುವಾದವನ್ನೂ ಗಮನಿಸಿ, ಮೂಲಕ್ಕೆ ಹತ್ತಿರವಾಗಿರುವಂತೆ ಕನ್ನಡಕ್ಕೆ ಅನುವಾದ ಮಾಡಿದೆ. ಮಲಯಾಳಂ ಮೂಲ:

–ಅನುವಾದಕ.

೧

ಕ್ಷೀಣಿಕ್ಕಾತ್ತ ಮನೀಷಯುಂ ಮಷಿಯುಣ–
ಣ್ಣೀಟತ್ತ ಪೊನ್‌ಪೇನಯುಂ
ವಾಣಿಕ್ಕಾಯ್ ತನಿಯಾಯುಟೆಞ್ಞ್ಞು ವರಮಾಯ್
ನೇಟೀಭವಾನ್ ಸಿದ್ಧಿ ಕಳ್;
ಕಾಣಿಚ್ಚು ವಿವಿಧಾದ್ಭುತನ್ನಳ್ ವಿಧಿದೃ–
ಷ್ಟಾಂತನ್ನಳಾಯ್, ವೈರಿಮಾರ್
ನಾಣಿಚ್ಚು, ಸ್ವಯಮಂಬ ಕೈರಳಿ ತೆಳಿ–
ಞ್ಞ್ಞೇಕ್ಷಿಚ್ಚು ಮೋಕ್ಷತ್ತೆಯುಂ.

೨

ಎಲ್ಲಾ ಪೋಕ್ಕುಕ ಕೀಟಟನ್ನುಕ ವಿಧಿ–
ಕ್ಕಿನ್ನಿ ಚ್ಚಿತಯ್ಯಪ್ಪುರ–
ತ್ತಿಲ್ಲಾಟಾಕುಕ ಜೀವಿತಂ:– ಮತಿ ವಿಭೋ–
ತ್ವನ್ನಾಮ ಪುಣ್ಯಾಕ್ಷರಂ;
ಚೊಲ್ಲಾಮಾಯತು ನನ್ನಳ್ ನಟ್ಟುಮಿಟೆನೀರ್
ತೂವಿಪ್ಪುಲರತ್ತುಮ್ ಪಟರ್–
ನ್ನೆಲ್ಲಾವರ್‌ಕುಮಕಿಟುಂ ಮಲರ್‌ಮಣಂ
ಕಾಲಾಗ್ನಿ ಚೆಲ್ಲಿಲ್ಲಾಟಲ್.

ಎ.ಆರ್. ರಾಜರಾಜವರ್ಮ ಘಟನೆಗಳ ಕಾಲಾನುಕ್ರಮಣಿಕೆ

೧೮೬೩ ಚಣ್ಣನಾಶ್ಶೇರಿಯಲ್ಲಿ ಜನನ

೧೮೬೫ ಕಾರ್ತಿಕಪ್ಪಳ್ಳಿಗೆ ಕುಟುಂಬದ ಸ್ಥಳಾಂತರ

೧೮೭೭ ಕೇರಳವರ್ಮನಿಂದ ಬೋಧನೆಯ ಪ್ರಾರಂಭ

೧೮೮೧ ಮಹಾರಾಜರವರ ಪ್ರೌಢ ವಿದ್ಯಾಶಾಲೆಗೆ ಸೇರಿದ್ದು

೧೮೮೫ **ತುಲಾಭಾರ ಪ್ರಬಂಧಂ**

೧೮೮೮ **ದೇವೀದಂಡಕಂ, ಭಂಗವಿಲಾಸಂ**

೧೮೮೯ ಬಿ.ಎ. ಪದವಿ, (೧೮೮೦–ಮದುವೆ) **ವಿಟವಿಭಾವರಿ, ಮೇಘೋಪಲಂಭಂ**

೧೮೯೦ ಸಂಸ್ಕೃತ ಪಾಠಶಾಲೆಯಲ್ಲಿ ಉದ್ಯೋಗ ಹಿಡಿದದ್ದು

೧೮೯೧ ಸಂಸ್ಕೃತ ಎಂ.ಎ. ಪದವಿ

೧೮೯೨ **ಪಿತೃಪ್ರಲಾಪಂ**

೧೮೯೪ **ಮೇಘದೂತ** (ಭಾಷಾಂತರ), ಸಂಸ್ಕೃತ ಕಾಲೇಜಿನ ಪ್ರಿನ್ಸಿಪಲ್, **ಕುಮಾರ ಸಂಭವ** (ಭಾಷಾಂತರ)

೧೮೯೫ **ಮಲಯವಿಲಾಸಂ**

೧೮೯೬ **ಕೇರಳ ಪಾಣಿನೀಯಂ** (ಮೊದಲ ಆವೃತ್ತಿ)

೧೮೯೯ ತಿರುವನಂತಪುರದ ಮಹಾರಾಜರವರ ಕಾಲೇಜಿನಲ್ಲಿ ಪ್ರಾಚ್ಯ ಅಧ್ಯಯನ ಶಾಖೆಯ ಮೇಲ್ವಿಚಾರಕ

೧೯೦೦ **ಆಂಗ್ಲ ಸಾಮ್ರಾಜ್ಯಂ**

೧೯೦೨ **ಭಾಷಾಭೂಷಣಂ, ಶಬ್ದಶೋಧಿನಿ**

೧೯೦೫ **ನಳಚರಿತ್ರಂ** (ವ್ಯಾಖ್ಯಾನ), **ವೃತ್ತಮಂಜರಿ**

೧೯೦೬ **ಪ್ರಥಮ ವ್ಯಾಕರಣಂ**

೧೯೦೭ **ಮಧ್ಯಮ ವ್ಯಾಕರಣಂ**

೧೯೦೮ ಪ್ರಾಸ ವಿಷಯಕ ವಾದವಿವಾದ

೧೯೦೯ **ಮಣಿದೀಪಿಕಾ**

೧೯೧೦ **ಲಘುಪಾಣಿನೀಯಂ**; ಮಹಾರಾಜರವರ ಕಾಲೇಜಿನಲ್ಲಿ ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳ ಪ್ರಾಧ್ಯಾಪಕ

೧೯೧೧ **ಸಾಹಿತ್ಯ ಸಹಾಯಂ**

೧೯೧೨ **ಮಲಯಾಳ ಶಾಕುಂತಲಂ**

೧೯೧೪ ಮಹಾರಾಜರವರ ಕಾಲೇಜಿನ 'ಆ್ಯಕ್ಟಿಂಗ್ ಪ್ರಿನ್ಸಿಪಾಲ್'; ಭಾಷಾ ಪರಿಷ್ಕರಣ ಸಮಿತಿಯ ಸದಸ್ಯ

೧೯೧೫ ಕೇರಳವರ್ಮನ ನಿಧನ

೧೯೧೬ ಮಹಾರಾಜರವರ ಕಾಲೇಜಿನ 'ಆ್ಯಕ್ಟಿಂಗ್ ಪ್ರಿನ್ಸಿಪಾಲ್'

೧೯೧೭ **ಕೇರಳ ಪಾಣಿನೀಯಂ** (ಪರಿಷ್ಕೃತ ಆವೃತ್ತಿ); **ಚಾರುದತ್ತಂ**

೧೯೧೮ **ಸ್ವಪ್ನವಾಸವದತ್ತಂ** (ಭಾಷಾಂತರ); ನಿಧನ

ಗ್ರಂಥಸೂಚಿ

ಮಲಯಾಳಂ

ಅನಂತನ್‌ಪಿಳ್ಳೈ, ಪಿ. — ಕೇರಳಪಾಣಿನಿ (೧೯೩೪)

ಭಾಗೀರಥಿ ಅಮ್ಮ ತಂಪುರಾಂ, ಎಂ. ಮತ್ತು ರಾಘವವರ್ಮ ಎಂ. — ಎ.ಆರ್. ರಾಜರಾಜವರ್ಮ (ಮೂರು ಸಂಪುಟಗಳು; ೧೯೫೩, ೧೯೬೧, ೧೯೬೩)

ಹರಿಶರ್ಮ, ಎ.ಡಿ. — ರಂಟು ಸಾಹಿತ್ಯ ನಾಯಕನ್ಮರ್ (೧೯೩೭)

ಮುಂಡಶ್ಶೇರಿ, ಜೋಸೆಫ್ — ರಾಜರಾಜಂಟೆ ಮಾಟ್ಟೊಲಿ

ಪರಮೇಶ್ವರ ಅಯ್ಯರ್, ಉಳ್ಳೂರು, ಎಸ್ — ಕೇರಳ ಭಾಷಾ–ಸಾಹಿತ್ಯ ಚರಿತ್ರಂ (ಸಂಪುಟ ೫) (೧೯೫೭)

ಇಂಗ್ಲಿಷ್

K.M. George — A Survey of Malayalam Literature (1968)

K.M. George — Western Influence on Malayalam Language and Literature (1972)

ಗುಂಪು ೩ – ಕತೆಗಳು

೧. ಯೌವನ ಸುಧೆ

೧. ಯೌವನ ಸುಧೆ

ಯೌವನ ಸುಧೆ
ಬಿನ್ನಹ

ನಾಲ್ಕು ವರ್ಷಗಳ ಹಿಂದೆ, ಅಮೆರಿಕಾ ದೇಶದ ಸುಪ್ರಸಿದ್ಧ ಕಥೆಗಾರನಾದ ನ್ಯಥೆನಿಯಲ್ ಹಾಥಾರ್ನ್ (ಕ್ರಿ.ಶ. ೧೮೦೪–೧೮೬೪) ಎಂಬವನ ಮೂರು ಕಥೆಗಳನ್ನು ಅನುವಾದ ಮಾಡಿ 'ಶಿಲಾಮುಖ' ಎಂಬ ಗ್ರಂಥರೂಪದಲ್ಲಿ ಪ್ರಕಟಿಸಿದೆ. ಈ ಪುಸ್ತಕದಲ್ಲಿ ಕಥೆಗಳು (ಕ್ರಮವಾಗಿ) ಅದೇ ಲೇಖಕನ Dr. Heidegger's Experiment, David Swan, . Ambitious Guest, The Threefold Destiny ಎಂಬ ನಾಲ್ಕು ಕಥೆಗಳ ಅನುವಾದ (Adaptation).

ಹಾಥಾರ್ನಿನ ಸಂಕ್ಷಿಪ್ತ ಜೀವನ ಪರಿಚಯ, ಅವನ ಕಥೆಗಳ ವೈಶಿಷ್ಟ್ಯ ಮುಂತಾದ ಕೆಲವು ಅಂಶಗಳನ್ನು ಕುರಿತು 'ಶಿಲಾಮುಖ'ದ ಮುನ್ನುಡಿಯಲ್ಲಿ ಪ್ರಸ್ತಾವಿಸಿದ್ದೇನೆ. ಅದೆಲ್ಲವನ್ನೂ ಮತ್ತೆ ಇಲ್ಲಿ ಹೇಳಬೇಕಾದ ಅವಶ್ಯಕತೆ ನನಗೆ ಕಾಣಲಿಲ್ಲ. ಆದರೆ ಈ ಒಂದು ವಾಕ್ಯವನ್ನು ಮಾತ್ರ ಎತ್ತಿಕೊಡಬಯಸುತ್ತೇನೆ: ಕಥೆಗಳ ಗುಣವಿಶೇಷಗಳೆಲ್ಲ ಮೂಲ ಕಥೆಗಳಿಗೆ ಸೇರಿದವು; ದೋಷಗಳಿದ್ದರೆ ಅವು ಅನುವಾದಕನವು.

ಈ ಗ್ರಂಥವನ್ನು ಬಹು ಬೇಗನೆ ಅಂದವಾಗಿ ಅಚ್ಚುಮಾಡಿಕೊಟ್ಟಿರುವುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟಕ್ಕೆ ನನ್ನ ವಂದನೆ ಸಲ್ಲಬೇಕಾಗಿದೆ. ಈ ಭಾಗದಲ್ಲಿ ನನಗೆ ವಿಶೇಷ ಉಪಕಾರ ಮಾಡಿರುವ, ಅದರ ಸೂಪರಿಂಟೆಂಡೆಂಟರಾದ ಶ್ರೀಮಾನ್ ಬಿ. ಪುಟ್ಟಯ್ಯ, ಎಂ.ಎ. ಅವರಿಗೆ ನಾನು ವಿಶೇಷ ಕೃತಜ್ಞತೆಯುಳ್ಳವನಾಗಿದ್ದೇನೆ.

ಬೆಂಗಳೂರುನಗರ
ಜೂನ್ ೧೯೪೧

ಎಂ.ವಿ. ಸೀತಾರಾಮಯ್ಯ

ಕಥೆಗಳು

೧. ಯೌವನ ಸುಧೆ – (Dr. Heidegger's Experiment)

೨. ಮುದ್ದುಮಲ್ಲ – (David Swan)

೩. ಹೆಬ್ಬಯಕೆಯ ದಾರಿಹೋಕ – (The ambitions Guest)

೪. ಭಾಗ್ಯತ್ರಯ – (The Threefold Desting)

ಯೌವನ ಸುಧೆ

ಮೃತ್ಯುಂಜಯ ಪಂಡಿತನು ಒಬ್ಬ ವಿಚಿತ್ರ ವ್ಯಕ್ತಿ. ಅವನು ಒಮ್ಮೆ ತನ್ನ ನಾಲ್ಕು ಜನ ಮಿತ್ರರನ್ನು ಮನೆಗೆ ಬರಹೇಳಿದ್ದನು. ಅವರಲ್ಲಿ ವಸುಪಾಲ, ಸಮರಸಿಂಹ, ವಿಜಯವರ್ಮ–ಈ ಮೂವರು ವೃದ್ಧರಲ್ಲದೆ ಇದ್ದರೂ ವೃದ್ಧಾಪ್ಯದ ಹೊಸಿಲು ಹತ್ತಿದ್ದರು; ತಲೆಗೂದಲಾಗಲೇ ಬೆಳ್ಳಗಾಗಿತ್ತು. ನಾಲ್ಕನೆಯ ವ್ಯಕ್ತಿ ಇಂದಿರೆ; ತೀರ ಅಷ್ಟು ಮುದುಕಿಯಲ್ಲದಿದ್ದರೂ ಅವಳ ಮುಖ ಸುಕ್ಕುಗಟ್ಟಿತ್ತು, ಒಮ್ಮೆ ಸೊಂಪಾಗಿದ್ದ ಅವಯವಗಳು ನಶಿಸಿಹೋಗಿದ್ದುವು, ತಲೆಗೂದಲು ಉಪ್ಪು ಮೆಣಸು ಬೆರಸಿದಂತಿತ್ತು. ಅವರೆಲ್ಲರೂ ಹುಟ್ಟಿದಂದಿನಿಂದ ದುರದೃಷ್ಟಶಾಲಿಗಳು; ಕೊರಗಿನಲ್ಲಿಯೇ ಮುಪ್ಪಾಗಿಹೋಗಿದ್ದರು. ಮುಪ್ಪಾದೆವಲ್ಲಾ ಎಂಬುದೇ ಅವರ ದೊಡ್ಡ ಕೊರಗಾಗಿತ್ತು ಈಗ. ವಸುಪಾಲನು ಹಿಂದೊಮ್ಮೆ ನಗರದಲ್ಲೆಲ್ಲ ದೊಡ್ಡ ಶ್ರೇಷ್ಠಿ ಎನಿಸಿಕೊಂಡಿದ್ದು ಲಕ್ಷಾಧೀಶ್ವರನಾಗಿದ್ದನು; ಆ ಲಕ್ಷಾಧೀಶ್ವರನು ಈಗ ಭಿಕ್ಷೇಶ್ವರನಿಗಿಂತ ಸ್ವಲ್ಪ ಮೇಲಾಗಿದ್ದನು, ಅಷ್ಟೆ! ಸಮರಸಿಂಹನು ತಾರುಣ್ಯದಿಂದಲೂ ಪಾಪಕಾರ್ಯಗಳಲ್ಲಿಯೇ ಭೋಗಿಸುತ್ತ ತನ್ನ ಆಯಸ್ಸಿನ ಅಮೂಲ್ಯಭಾಗವನ್ನು ವ್ಯರ್ಥಮಾಡಿ, ಅರ್ಥವನ್ನೆಲ್ಲ ದುರ್ವ್ಯಯಮಾಡಿ, ಆರೋಗ್ಯಭಾಗ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡು ದೇಹದ ರೋಗಗಳಿಗೂ ಮನೋರೋಗಗಳಿಗೂ ತುತ್ತಾಗಿದ್ದನು. ವಿಜಯವರ್ಮನು ರಾಜನೀತಿಯಲ್ಲಿ ನಿಪುಣನಾಗಿದ್ದನು. ಅವನು ಅನೇಕ ರಾಜಾಸ್ಥಾನಗಳ ದರ್ಶನ ಮಾಡಿದ್ದನು; ಆದರೆ ಯಾವ ರಾಜಾಸ್ಥಾನದಲ್ಲಿಯೂ ಅವನಿಗೆ ಪುರಸ್ಕಾರವಿರಲಿಲ್ಲ. ಅವನ ಶೀಲ ಸ್ವಭಾವಗಳು ಯಾರಿಗೂ ಸರಿಬೀಳದೆಯೋ ಏನೋ, ಅಂತೂ ಅವನಲ್ಲಿ ಯಾರಿಗೂ ವಿಶ್ವಾಸವಿರಲಿಲ್ಲ; ಎಲ್ಲರೂ ಅವನನ್ನು ಶಪಿಸುವವರೇ ಆಗಿದ್ದರು. ಕೊನೆಕೊನೆಗೆ ಅವನು ರಾಜನೀತಿ ವಿಷಯಗಳ ಗೊಡವೆಗೇ ಹೋಗಲಿಲ್ಲ; ಇಷ್ಟಾದರೂ ಜನರು ಅವನನ್ನು ನಿಂದಿಸುವುದು ತಪ್ಪಲಿಲ್ಲ. ಬರುಬರುತ್ತ ಅವನನ್ನು ಕೇಳುವವರೇ ಇಲ್ಲದಂತಾಗಿ ಅವನು ಅಜ್ಞಾತನಾಗಿ ಹೋದನು ಮಾಡಿಕೊಳ್ಳುವುದರಲ್ಲಿದ್ದನು. ಮದುವೆಗೆ ಕೆಲವು ಕಾಲ ಮುಂಚೆ ಅವಳ ದೇಹಸ್ಥಿತಿ ಏನೋ ಕೊಂಚ ವ್ಯತ್ಯಾಸವಾಯಿತು; ತನ್ನ ಇನಿಯನಿತ್ತ ಔಷಧವನ್ನೇ ಸೇವಿಸುತ್ತ ಬಂದಳು. ಆದರೂ ಮದುವೆಯ ಹಿಂದಿನ ದಿನ ಅವಳು ಸತ್ತುಹೋದಳು.

ಪಂಡಿತನ ಪ್ರಯೋಗಶಾಲೆಯಲ್ಲಿ ಎಲ್ಲಕ್ಕಿಂತಲೂ ವಿಚಿತ್ರವಾದ ಒಂದು ವಸ್ತುವಿನ ವಿಷಯ ಹೇಳುವುದಿದೆ; ಅದು ಒಂದು ತಾಳಪತ್ರ ಗ್ರಂಥದ ವಿಷಯ. ಅಲ್ಲಿದ್ದ ಗ್ರಂಥಗಳಲ್ಲಿ ಅದೇ ಬಲುದೊಡ್ಡದು; ಅದರ ಪ್ರಮಾಣ ಉಳಿದ ನಾಲ್ಕೈದು ಗ್ರಂಥಗಳು ಒಟ್ಟಿಗೆ ಸೇರಿದಷ್ಟು ಆಗುತ್ತಿತ್ತು. ಚಿತ್ರಗಳಿಂದ ಕೊರೆದಿದ್ದ ಬೆಳ್ಳಿಯ ದಾರ! ಅದು ಸಮಗ್ರ ಆಯುರ್ವೇದ ಶಾಸ್ತ್ರ ಪ್ರಕ್ರಿಯೆಗಳನ್ನೊಳಗೊಂಡ ಗ್ರಂಥವಾಗಿರಬೇಕು; ಇಲ್ಲದೆ ಹೋದರೆ ರಾಮಾಯಣ ಮಹಾಭಾರತಗಳಂಥ ಮಹಾಕಾವ್ಯವೊಂದರ ಪ್ರತಿ ಆಗಿರಬೇಕು. ಆದರೆ, ಅದು ಇಂದ್ರಜಾಲ ವಿದ್ಯೆಯ ಗ್ರಂಥವೆಂದು ಜನ ಆಡಿಕೊಳ್ಳುತ್ತಿದ್ದರು. ಒಮ್ಮೆ ಅದರ ಮೇಲೆ ಬಹಳ ಧೂಳು ಕವಿದಿದ್ದುದರಿಂದ ಅದನ್ನು ಒರೆಸುವುದಕ್ಕೆಂದು ಒಬ್ಬ ಸೇವಕ ಅದನ್ನು ಒಂದು ಕೊನೆಯಿಂದ ಎತ್ತಿ ಹಿಡಿದುಕೊಂಡನು. ಅಷ್ಟರಲ್ಲಿ ಅದು ಕೆಳಕ್ಕೆ ಜಾರಿಬಿದ್ದು ಅವನ ಬೆರಳುಗಳು ಜಜ್ಜಿಹೋದವು; ಚಿತ್ರದ ತರುಣಿ ಸಜೀವಳಾಗಿ ಕೆಳಗಿಳಿದು ಬಂದು ಒಂದು ಹೆಜ್ಜೆಯನ್ನಿಟ್ಟಳು; ಅನೇಕ ಭೀಕರ ಮುಖಗಳು ಕನ್ನಡಿಯಿಂದ ಹೊರಹಾಯ್ದುವು; ನಿಶ್ಚಲವಾಗಿ ನೀರವವಾಗಿ ಕುಳಿತಿದ್ದ ಧನ್ವಂತರಿ ಮೂರ್ತಿ ಹುಬ್ಬುಗಂಟು ಹಾಕಿಕೊಂಡು, ಸಿಡುಕಿನಿಂದ 'ನಿಲ್ಲು! ತಡೆ!' ಎಂದು ಹೇಳಿತು!

ಇಂಥದು ಮೃತ್ಯುಂಜಯನ ಪ್ರಯೋಗಶಾಲೆ. ಈ ಕಥೆ ನಡೆದುದು ಬೇಸಗೆಯಲ್ಲಿ ಒಂದು ದಿವಸ ಮಧ್ಯಾಹ್ನ. ಆ ದಿವಸ ಮಾತ್ರ ಕೋಣೆಯ ಮಧ್ಯದಲ್ಲಿ ಒಂದು ವರ್ತುಳಾಕಾರದ ಕರಿಯ ಮರದ ಕಾಲುಮಣೆಯಿತ್ತು; ಅದರ ಮೇಲೆ ಒಂದು ಸುಂದರವಾದ ಸ್ಫಟಿಕಪಾತ್ರೆಯಿತ್ತು. ಆ ಸ್ಫಟಿಕ ಪಾತ್ರೆ ಅತ್ಯಂತ ಸೂಕ್ಷ್ಮವಾದ ಚಿತ್ರಗೆಲಸದಿಂದ ಕಂಗೊಳಿಸುತ್ತಿತ್ತು. ಬಿಸಿಲು ಗವಾಕ್ಷದ ಜಾಲಂದರದಿಂದ ನುಸುಳಿಕೊಂಡು ಬಂದು ಈ ಪಾತ್ರೆಯ ಮೇಲೆ ಸರಿಯಾಗಿ ಬೀಳುತ್ತಿತ್ತು; ಹೀಗೆ ಒಳಹೊಕ್ಕ ಬಿಸಿಲಿನಲ್ಲಿ ಬೆಳಗುತ್ತಿದ್ದ ಸ್ಫಟಿಕಪಾತ್ರೆಯ ಸುತ್ತಲೂ ಬಳಸಿ ಕುಳಿತಿದ್ದ ಐವರ ಮುದಿ ಮುಖಗಳ ಮೇಲೂ ಒಂದು ಅಪೂರ್ವವಾದ ಪ್ರಭೆಯನ್ನು ಚೆಲ್ಲಿತ್ತು. ಸ್ಫಟಿಕಪಾತ್ರೆಯಿದ್ದ ಕಾಲುಮಣೆಯ ಮೇಲೆ ನಾಲ್ಕು ರಜತಪಾತ್ರೆಗಳು ಇದ್ದುವು.

ಮೃತ್ಯುಂಜಯ ಪಂಡಿತನು ಮತ್ತೆ ಹೀಗೆ ಹೇಳಿದನು: "ಪ್ರಿಯ ಮಿತ್ರರೇ, ಈಗ ನಾನು ಮಾಡಬೇಕೆಂದಿರುವ ಒಂದು ವಿಚಿತ್ರ ಪ್ರಯೋಗದಲ್ಲಿ ನಿಮ್ಮೆಲ್ಲರ ಸಹಾಯವನ್ನೂ ನೆಚ್ಚಿಕೊಂಡಿರಬಹುದಷ್ಟೇ?"

ಪಂಡಿತನು ಒಂದು ಪ್ರಯೋಗವನ್ನು ನಡೆಸುವನೆಂದು ಕೇಳಿದ ಕೂಡಲೆ– ಅವನು ಒಂದು ಇಲಿಯನ್ನು ಸಾಯಿಸುವನೋ, ಇಲ್ಲದಿದ್ದರೆ ಜೇಡರ ಬಲೆಗಳನ್ನೆಲ್ಲ

ಶೇಖರಿಸಿ ಅವುಗಳನ್ನು ಯಾವುದೋ ತೈಲದಲ್ಲಿ ಕದಡಿ 'ಇದು ಸಂಜೀವನಿ' ಎಂದೆನ್ನುವನೋ, ಹೆಚ್ಚೆಂದರೆ ಒಂದು ಚಿಟ್ಟೆಯನ್ನು ಹಿಡಿದು ಅದರ ರೆಕ್ಕೆಗಳನ್ನು ಮುರಿದು ಅದನ್ನು ಹಾರಿಬಿಡುವನೋ ಎಂದು ಅವನ ಸ್ನೇಹಿತರು ನಿರೀಕ್ಷಿಸುತ್ತಿದ್ದರು. ಏತಕ್ಕೆಂದರೆ, ಮೇಲೆ ಹೇಳಿದಂಥ 'ಪ್ರಯೋಗ'ಗಳನ್ನು ತನ್ನ ಕೋಣೆಗೆ ಬಂದ ಗೆಳೆಯರಿಗೆಲ್ಲಾ ಮಾಡಿ ಮಾಡಿ ತೋರಿಸುವುದು ಮೃತ್ಯುಂಜಯನ ಪದ್ಧತಿಯಾಗಿತ್ತು. ಇಂದೂ ಹಾಗೆಯೇ ಮಾಡುವನೆಂದು ಆ ನಾಲ್ವರು ತಿಳಿದಿದ್ದರು. ಆದರೆ ಮೃತ್ಯುಂಜಯನು ಅವರ ಸಮ್ಮತಿ ಸೂಚನೆಗಾಗಿ ಕಾಯದೆ, ಕುಳಿತಿದ್ದವನೆದ್ದು ತತ್ತರಿಸುತ್ತಾ ಹೋಗಿ, ಮಂತ್ರವಿದ್ಯೆಯ ಗ್ರಂಥವೆಂದು ಜನರಾಡಿಕೊಳ್ಳುತ್ತಿದ್ದ ಆ ಮಹಾತಾಳಪತ್ರ ಗ್ರಂಥವನ್ನು ಎರಡು ಕೈಗಳಿಂದಲೂ ಎತ್ತಿ ತಬ್ಬಿಹಿಡಿದುಕೊಂಡು ಬಂದನು. ತೆಗೆದುಕೊಂಡು ಬಂದು, ಅದನ್ನು ಒಂದು ಮಣೆಯ ಮೇಲಿರಿಸಿ, ಬೆಳ್ಳಿಯ ದಾರದ ಕಟ್ಟುಗಳನ್ನು ಬಿಚ್ಚಿ, ಗ್ರಂಥವನ್ನು ತೆರೆದು, ಪತ್ರಗಳ ಮಧ್ಯದಿಂದ ಒಂದು ಗುಲಾಬಿಯ ಹೂವನ್ನು ಹೊರದೆಗೆದನು. ಅದು ಗುಲಾಬಿಯ ಹೂವಾದರೂ ಅದನ್ನು ಹಾಗೆಂದು ಕರೆಯುವಂತಿರಲಿಲ್ಲ; ಅದರ ಕೆಂಪು ದಳಗಳೂ ಅಡಿಯ ಹಸುರು ಎಲೆಗಳೂ ಎಲ್ಲವೂ ಬಾಡಿ, ಮಾಸಿಹೋಗಿ, ಅದು ಏನೋ ಒಂದು ಬಗೆಯ ಕಂದುಬಣ್ಣವನ್ನು ತಳೆದಿದ್ದಿತು. ಪಂಡಿತನ ಹಿಡಿಯಲ್ಲಿ ಇದ್ದಕ್ಕಿದ್ದಂತೆಯೇ ಹುಡಿಹುಡಿಯಾಗಿ ಹೋಗುವುದೋ ಎನ್ನುವಷ್ಟು ಸೂಕ್ಷ್ಮಾವಸ್ಥೆಯಲ್ಲಿದ್ದಿತು ಆ ಬಾಡಿದ ಗುಲಾಬಿ ಹೂ.

ಪಂಡಿತನು ಒಮ್ಮೆ ನಿಟ್ಟುಸಿರುಬಿಟ್ಟು ಹೇಳತೊಡಗಿದನು:

"ಬಾಡಿಹೋಗಿ ಹುಡಿಹುಡಿಯಾಗಿ ಹೋಗಲಿರುವ ಆ ಗುಲಾಬಿಯ ಹೂ ಐವತ್ತು ವರ್ಷಗಳ ಹಿಂದೆ ಅರಳಿದುದು. ಅದೋ ಅಲ್ಲಿ ನೋಡಿ, ಆ ತರುಣಿಯ ಚಿತ್ರ! ಅವಳು ಅಂದು ನನಗಿತ್ತ ಹೂವಿದು. ಮಡಿದು ಹೋದ ನನ್ನ ಇನಿಯಳು ಇನ್ನು ಎದ್ದುಬರುವಳೆ? ಅಂತೆಯೇ, ನೀವು ಹೇಳಿ, ಅರ್ಧ ಶತಮಾನದ ಹಿಂದೆ ಅರಳಿ ಬಾಡಿಹೋಗಿರುವ ಈ ಪುಷ್ಪ ಮತ್ತೆ ಅರಳಿ ಘಮಘಮಿಸುವ ಸಂಭವವುಂಟೆ?"

"ಬರಿಯ ಹುಚ್ಚು! ಸುಕ್ಕುಗಟ್ಟಿದ ಮುದುಕಿಯ ಮುಖದಲ್ಲಿ ಪ್ರಾಯ ಮತ್ತೆ ಉಕ್ಕಿ ಹರಿಯುವುದುಂಟೆ, ಅವಳ ಬಾಡಿದ ಮುಖ ಮತ್ತೆ ಅರಳುವುದುಂಟೆ?" ಎಂದು ಇಂದಿರೆ ತುಟಿಯುರುಗಿಸಿಕೊಂಡು ತಲೆ ಯಲ್ಲಾಡಿಸುತ್ತ ಕೇಳಿದಳು.

"ಹಾಗಾದರೆ ನೋಡಿ!" ಎಂದು ಪಂಡಿತನು ಉತ್ತರ ಕೊಟ್ಟನು.

ಹೀಗೆ ಉತ್ತರಕೊಟ್ಟು, ಪಂಡಿತನು ಸ್ಫಟಿಕಪಾತ್ರೆಯ ಮೇಲಿದ್ದ ಮುಚ್ಚಳವನ್ನು

ತೆರೆದು ಅದರಲ್ಲಿದ್ದ ನೀರಿನೊಳಕ್ಕೆ ಆ ಬಾಡಿದ ಗುಲಾಬಿಯ ಹೂವನ್ನೆಸೆದನು. ಮೊದಲು ಹೂ ನೀರಿನ ಮೇಲೆಯೆ ತೇಲದಂತೆ ತೇಲುತ್ತಿತ್ತು. ಸ್ವಲ್ಪವಾದರೂ ಅದರಲ್ಲಿ ನೆನೆದಂತೆ ಕಾಣಲಿಲ್ಲ. ಆದರೆ ಶೀಘ್ರದಲ್ಲಿಯೇ, ಒಂದು ಅಪೂರ್ವವಾದ ವ್ಯತ್ಯಾಸ ಗೋಚರವಾಯಿತು. ಮರಣಸಮನಾದ ದೀರ್ಘನಿದ್ರೆಯಿಂದ ಆಗತಾನೆ ಎದ್ದುವೋ ಎಂಬಂತೆ, ಬಾಡಿಹೋಗಿ ಮುದುಡಿಹೋದ ದಳಗಳು ಸ್ವಲ್ಪ ಸ್ವಲ್ಪ ಚಲಿಸಿದುವು; ಒಡನೆಯೆ ಹೆಚ್ಚುಹೆಚ್ಚು ಕೆಂಪು ಬಣ್ಣವನ್ನು ತಳೆಯುತ್ತ ಬಂದುವು; ಹೂವಿನ ತೊಟ್ಟು ಎಲೆಗಳು ಕೂಡ ಹಸುರಾದುವು; ಅರ್ಧ ಶತಮಾನದ ಹಿಂದೆ ಆ ತರುಣಿ ತನ್ನ ಇನಿಯನಿಗೆ ಇತ್ತಾಗ ಆ ಗುಲಾಬಿಯ ಹೂ ಎಷ್ಟು ಹೊಸದಾಗಿದ್ದಿತೋ ಈಗಲೂ ಅಷ್ಟೇ ಹೊಸದಾಗಿ ಕಾಣುತ್ತಿದ್ದಿತು. ಅದು ಪೂರ್ಣವಾಗಿ ಕೂಡ ಅರಳಿರಲಿಲ್ಲ; ಒಳಗೆ ಮೊಗ್ಗುಮೊಗ್ಗಾಗಿಯೇ ಇದ್ದಿತು; ಸುತ್ತ ಕೆಂಪು ದಳಗಳು ಸುರುಳಿಯಾಗಿ ಸುರುಟಿಕೊಂಡು ನಾಚಿಕೆಯಿಂದ ಅರಳದೆ ಹಿಂಜರಿದಿವೆಯೋ ಎಂಬಂತಿದ್ದುವು; ಹೂವಿನ ಎಸಳುಗಳ ನಡುವೆ ಒದ್ದೆಯಾಗಿದ್ದಿತು; ಅಲ್ಲಿ ಒಂದೆರಡು ಹಿಮಮಣಿಗಳು ಕೂಡ ಹೊಳೆಯುತ್ತಿದ್ದುವು.

ಎಷ್ಟೋ ಜನ ಮಾಂತ್ರಿಕರು ಇದಕ್ಕಿಂತ ಅದ್ಭುತವಾದ ಚಮತ್ಕಾರಗಳನ್ನು ಮಾಡುವುದನ್ನು ಮೃತ್ಯುಂಜಯನ ಗೆಳೆಯರು ನೋಡಿದ್ದರು; ಅವನ ಚಮತ್ಕಾರವನ್ನು ನೋಡಿ ಅವರು ಚಕಿತರಾಗುವುದಿರಲಿ, ಸ್ವಲ್ಪವೂ ಆಶ್ಚರ್ಯಪಡಲಿಲ್ಲ. ಅಸಡ್ಡೆಯನ್ನು ತೋರುತ್ತ–"ಚಮತ್ಕಾರ ನಿಶ್ಚಯವಾಗಿಯೂ ಬಹಳ ಚೆನ್ನಾಗಿದೆ, ನೋಡತಕ್ಕದ್ದೆ. ಅದಿರಲಿ, ಇದನ್ನು ಹೇಗೆ ಮಾಡಿದಿರಿ, ದಯವಿಟ್ಟು ತಿಳಿಸುವಿರಾ?" ಎಂದು ಗೆಳೆಯರು ಪಂಡಿತನನ್ನು ಕೇಳಿದರು.

ಇಂದಿರೆ ಕೇಳಿದಳು: "ಯವನವೀರನಿಗೆ ಅದ ಸಿಕ್ಕಿತೆ ಕೊನೆಗೆ?"

"ಇಲ್ಲ" ಎಂದು ಹೇಳಿ ಪಂಡಿತನು ಮಾತನಾಡತೊಡಗಿದನು: "ಅವನು ಅದನ್ನು ಎಲ್ಲಿ ಹುಡುಕಬೇಕೊ ಅಲ್ಲಿ ಹುಡುಕಲಿಲ್ಲ. ಪ್ರಸಿದ್ಧವಾದ 'ಯೌವನ ಸುಧೆ'ಯ ಬುಗ್ಗೆ, ನನಗೆ ತಿಳಿದಿರುವಮಟ್ಟಿಗೆ, ಹಿಮವತ್ಪರ್ವತ ಪ್ರಾಂತದಲ್ಲಿದೆ. ವೃಕ್ಷಲತಾರಾಜಿಗಳಿಂದ ಆಚ್ಛಾದಿತವಾಗಿ ಅದರ ನೆಲೆ ಕಣ್ಣಿಗೆ ಕಾಣದಂತಿದೆ; ಆ ಬುಗ್ಗೆಯ ಸುತ್ತ ಬೆಳೆದಿರುವ ವೃಕ್ಷಲತಾದಿಗಳ ಹೂಗಳು ಶತಮಾನಗಳಿಂದಲೂ ಬಾಡಿಯೇ ಇಲ್ಲ, ಎಲೆಗಳು ಹಣ್ಣಾಗಿ ಉದಿರಿಲ್ಲ. ಇದಿಷ್ಟೂ ಆ ಬುಗ್ಗೆಯ ವಿಚಿತ್ರ ಜಲದ ಮಹಿಮೆ. ಇಂಥ ವಿಷಯಗಳಲ್ಲಿ ನನಗಿರುವ ಕುತೂಹಲವನ್ನು ಅರಿತ ನನ್ನ ಪರಿಚಿತನೊಬ್ಬನು ಈ ಸ್ಫಟಿಕಪಾತ್ರೆಯಲ್ಲಿರುವ ಜಲವನ್ನು ನನಗಾಗಿ ಕಳುಹಿಕೊಟ್ಟಿದ್ದಾನೆ."

ಪಂಡಿತನು ಹೇಳಿದ ಕಥೆಯ ಒಂದು ಮಾತನ್ನಾದರೂ ನಂಬದೆ ಹೋದ ಸಮರಸಿಂಹನು, "ಓಹೊ! ಹಾಗಾದರೆ, ಮಾನವ ಶರೀರದ ಮೇಲೆ ಈ ಜಲದ ಪರಿಣಾಮವೇನು?" ಎಂದು ಕೇಳಿದನು. ಅದಕ್ಕೆ ಪಂಡಿತನು, "ಸಮರಸಿಂಹರೆ, ನೀವೇ ಅದನ್ನು ಸ್ವತಃ ನಿರ್ಣಯಿಸಿಕೊಳ್ಳುವಿರಿ" ಎಂದು ಉತ್ತರಕೊಟ್ಟು, ನಾಲ್ವರನ್ನೂ ಕುರಿತು ಇಂತೆಂದನು:

"ಮಿತ್ರರೇ, ನಿಮ್ಮಲ್ಲಿ ಮತ್ತೆ ಯೌವನ ಅರಳುವುದಕ್ಕೆ ಎಷ್ಟು ಬೇಕೋ ಅಷ್ಟು ಈ ಸ್ತೋತ್ರಾರ್ಹವಾದ ಜಲವನ್ನು ನೀವೆಲ್ಲರೂ ಸ್ವೀಕರಿಸಬಹುದು. ನಾನೇನೋ, ಈ ಮುಪ್ಪನ್ನು ಪಡೆಯುವುದಕ್ಕೆ ಬಹಳ ತೊಂದರೆ ಬಿದ್ದಿದ್ದೇನೆ; ಪುನಃ ಚಿಕ್ಕವನಾಗಲು ನನಗಷ್ಟು ಆತುರವಿಲ್ಲ. ಆದ್ದರಿಂದ, ನೀವೆಲ್ಲರೂ ನನ್ನ ಆಹ್ವಾನವನ್ನು ಮನ್ನಿಸಿ, ಪ್ರಯೋಗವನ್ನು ನಡೆಸುವುದಕ್ಕೆ ನನಗೆ ಅನುಮತಿಯನ್ನೀಯಬೇಕು. ಪ್ರಯೋಗ ಸಫಲವಾದರೆ ಅಷ್ಟರಿಂದಲೇ ನಾನು ತೃಪ್ತನಾಗುವೆನು; ನಿಮ್ಮೆಲ್ಲರ ಸಹಾಯವೂ ಸಾರ್ಥಕವಾಗುವುದು."

ಮಾತನಾಡುತ್ತಿದ್ದಂತೆಯೇ ಮೃತ್ಯುಂಜಯ ಪಂಡಿತನು ಅಲ್ಲಿದ್ದ ನಾಲ್ಕು ಬೆಳ್ಳಿಯ ಪಾತ್ರೆಗಳಿಗೂ 'ಯೌವನ ಸುಧೆ'ಯನ್ನು ತುಂಬಿದನು. ಅದು ಪಾತ್ರೆಗಳಿಗೆ ಬಿದ್ದೊಡನೆಯೇ ಅದರಲ್ಲಿ ಬಸುಬುಸು ಎಂದು ನೊರೆಯುಕ್ಕಿತು; ಕೋಣೆಯಲ್ಲೆಲ್ಲಾ ಒಂದು ವಿಧವಾದ ಸುವಾಸನೆ ಹರಡಿತು. 'ಯೌವನ ಸುಧೆ' ಕುಡಿಯುವುದಕ್ಕೆ ಬಹಳ ರುಚಿರುಚಿಯಾಗಿರಬೇಕೆಂದು ಅಲ್ಲಿದ್ದ ಮುದುಕರಿಗೆ ತೋರಿತು; ಅದು ತಮ್ಮನ್ನು ಮತ್ತೆ ತರುಣರನ್ನಾಗಿ ಮಾಡಬಲ್ಲದೆಂಬುದನ್ನು ನಂಬದಿದ್ದರೂ ಅದನ್ನು ತತ್‌ಕ್ಷಣವೇ ಹೀರುವುದಕ್ಕೇನೊ ಅವರು ಆಸೆಪಟ್ಟರು. ಆದರೆ, ಮೃತ್ಯುಂಜಯ ಪಂಡಿತನು ಒಂದು ಕ್ಷಣ ತಡೆಯುವಂತೆ ಅವರಿಗೆ ಹೇಳಿ, ಮಾತನ್ನು ಮುಂದುವರಿಸಿದನು:

"ಆದರೆ ಒಂದು ಮಾತು ಹೇಳುತ್ತೇನೆ. ನೀವು ವೃದ್ಧರು, ಬಾಳಿ ಬದುಕಿದವರು; ನಿಮಗೆ ಒಂದು ಜೀವಮಾನದ ಅನುಭವವಿದೆ. ಕಷ್ಟ ಪರಂಪರೆಗೊಳಗಾದ ಯೌವನದ ಹಾದಿಯನ್ನು ನೀವು ಮತ್ತೊಮ್ಮೆ ಈಗ ನಡೆಯಬೇಕಾಗಿದೆ. ನೀವಿದನ್ನು ಕುಡಿಯುವ ಮೊದಲು, ನಿಮ್ಮ ಹಿಂದಿನ ಅನುಭವದ ಸಹಾಯದಿಂದ ನಿಮಗೆ ದಾರಿತೋರುವ ಕೆಲವು ಸಾಮಾನ್ಯ ನಿಯಮಗಳನ್ನು ರಚಿಸಿಕೊಳ್ಳುವುದು ಒಳ್ಳೆಯದು. ನಿಮಗೆ ಇಷ್ಟೆಲ್ಲ ಸಹಾಯ ಸೌಕರ್ಯಗಳಿದ್ದೂ ನೀವು ಈಗಿನ ಕಾಲದ ತರುಣ ತರುಣಿಯರಿಗೆ ಗುಣದಲ್ಲಿ, ಬುದ್ಧಿಯಲ್ಲಿ, ಸ್ನೇಹಸೌಹಾರ್ದಗಳಲ್ಲಿ ಆದರ್ಶವಂತರಾಗದಿದ್ದರೆ ನೀವು ಎಂಥ ಪಾಪಕಾರ್ಯವನ್ನು ಮಾಡಿದಂತಾಗುತ್ತದೆ,

ಎಷ್ಟು ನಾಚಿಗೆಗೀಡಾಗಬೇಕಾಗುತ್ತದೆ!"

ಪಂಡಿತನ ಗೆಳೆಯರು ಅವನ ಈ ಮಾತಿಗೆ ಪ್ರತಿಯಾಗಿ ಯಾವ ಮಾತನ್ನೂ ಆಡಲಿಲ್ಲ, ಕಿರುನಗೆ ನಕ್ಕರು. ತಪ್ಪು ಮಾಡಿದಮೇಲೆ, ಪಾಪವನ್ನೆಸಗಿದಮೇಲೆ, ಪಶ್ಚಾತ್ತಾಪವುಂಟಾಗುತ್ತದೆ ಎಂಬುದನ್ನು ಅರಿತವರು ಮತ್ತೆ ತಪ್ಪನ್ನೆಸಗುವರೆ? ಪಂಡಿತನಿಗೆ ಇಷ್ಟು ಮಾತ್ರ ತಿಳಿಯದೆ ಹೋಯಿತೆ? ಎಂದು ಅವರು ನಕ್ಕರು. ಪಂಡಿತನ ಮಾತುಗಳು ಅವರಿಗೆ ಹಾಸ್ಯಾಸ್ಪದವಾಗಿ ಕಂಡುವು.

ಪಂಡಿತನೂ ಮುಗುಳುನಗೆಯನ್ನು ಬೀರಿ, "ಹಾಗಾದರೆ ಕುಡಿಯಿರಿ. ನನ್ನ ಪ್ರಯೋಗಕ್ಕೆ ಎಂಥ ಅಪೂರ್ವವಾದ ಸಾಮಗ್ರಿ ದೊರಕಿದೆಯೆಂದು ನನಗೆ ಬಹಳ ಸಂತೋಷ. ಅದಕ್ಕಾಗಿ ನಾನು ನಿಮಗೆಲ್ಲರಿಗೂ ಋಣಿ. ಇನ್ನು ನೀವು ಕುಡಿಯಬಹುದು" ಎಂದು ಹೇಳಿ ಸುಮ್ಮನಾದನು.

ಕಟ್ಟಿಗೆಗುಂತೆ ನಿಶ್ಚೇತನಗೊಂಡ ಕೈಗಳಿಂದ ಅವರು ಕುಡಿಯುವುದಕ್ಕೆಂದು ರಜತಪಾತ್ರೆಗಳನ್ನು ಮೇಲಕ್ಕೆತ್ತಿ ತುಟಿಗಳಿಗೆ ಸೋಕಿಸಿದರು. ಪಂಡಿತನು ಆರೋಪಿಸಿದಂಥ ವಿಶೇಷ ಗುಣಗಳು ಆ ಜಲಕ್ಕೆ ಇದ್ದ ಪಕ್ಷದಲ್ಲಿ, ಆ ಜಲದಾನಕ್ಕೆ ಇವರಿಗಿಂತ ಹೆಚ್ಚು ಅವಶ್ಯಕತೆಯುಳ್ಳ ಬೇರೆ ಸತ್ಪಾತ್ರರಿರಲಿಲ್ಲ. ಯೌವನವನ್ನಾಗಲಿ ಸುಖವನ್ನಾಗಲಿ ಎಂದಾದರೂ ಅವರು ಅನುಭವಿಸಿದ್ದರೆನ್ನುವುದಕ್ಕೆ ಅವರ ಮುಖದಲ್ಲಿ ಏನೊಂದು ಕುರುಹೂ ಇದ್ದಂತೆ ಕಾಣಲಿಲ್ಲ; ಮುಂದೆ ಯೌವನ ಬರುವುದೆಂಬ ದೂರದ ಆಸೆಯಿಂದಲಾದರೂ ಹುರಿದುಂಬಿ ಹೊರಹೊಮ್ಮುವಷ್ಟು ಚೈತನ್ಯ ಕೂಡ ಅವರ ಆತ್ಮದಲ್ಲಿಯಾಗಲಿ ಅವರ ದೇಹದಲ್ಲಿಯಾಗಲಿ ಇರಲಿಲ್ಲ; ಅಷ್ಟೊಂದು ಮುದಿಯಾಗಿ, ಜೀವರಸರಹಿತರಾಗಿ, ಕುಗ್ಗಿದವರಾಗಿ, ಪ್ರಕೃತಿಯ ವೃದ್ಧಾಪ್ಯದ ಕೂಸಿನಂತಿದ್ದರು ಈ ಬಡ ಪ್ರಾಣಿಗಳು! ಇವರಿಗಿಂತ ಸತ್ಪಾತ್ರರು ಬೇಕಾಗಿದ್ದಿತೆ!..... ಇವರು ನೀರನ್ನು ಒಂದೇ ಸಲಕ್ಕೆ ಹೀರಿಬಿಟ್ಟು, ಬರಿಯ ಪಾತ್ರೆಗಳನ್ನು ಕಾಲುಮಣೆಯ ಮೇಲೆ ಇರಿಸಿದರು.

ತತ್‌ಕ್ಷಣ ಆ ಮಿತ್ರವರ್ಗದ ಸ್ವರೂಪ ನಿಶ್ಚಯವಾಗಿಯೂ ಉತ್ತಮಗೊಂಡಿತು. ಹೊಂಬಿಸಿಲು ಅವರ ಮುಖವನ್ನು ಬೆಳಗುತ್ತಿದೆಯೋ ಎಂಬಂತೆ ಒಂದು ನವೋಲ್ಲಾಸಪ್ರಭೆ ಅವರ ಮುಖಮಂಡಲಗಳನ್ನು ಬೆಳಗತೊಡಗಿತು. ಇದುವರೆಗೂ ಸುಕ್ಕುಗಟ್ಟಿ ಬತ್ತಿದ್ದ ಅವರ ಕಪೋಲಗಳಲ್ಲಿ ಒಂದು ಹೊಸ ಜೀವಕಳೆ ತುಂಬಿ ಹರಿಯಿತು. ಅವರು ಒಬ್ಬರನ್ನೊಬ್ಬರು ನೋಡಿ, ಕಾಲಪುರುಷನು ತಮ್ಮ ಹಣೆಯ ಮೇಲೆ ಊರಿಕೆತ್ತುತ್ತಿದ್ದ ಭೀಕರ ಶಾಸನಗಳನ್ನು ಯಾವುದೋ ಒಂದು ಅದೃಶ್ಯ ಮಂತ್ರ ಶಕ್ತಿ ನಿಜವಾಗಿಯೂ ಅಳಿಸತೊಡಗಿದೆಯೆಂದು ಭಾವಿಸತೊಡಗಿದರು.

ಇಂದಿರೆ ಸೆರಗನ್ನು ಸರಿಮಾಡಿಕೊಂಡು ಮುಂದಲೆಗುರುಳನ್ನು ಕಿರುಬೆರಳಿನಿಂದ ತಿದ್ದಿಕೊಂಡಳು; ಅವಳಾಗಲೇ ತಾನೊಬ್ಬ ಗಟ್ಟಿಮುಟ್ಟಾದ ಹೆಂಗಸೆಂದು ಭಾವಿಸತೊಡಗಿದಳು.

"ಈ ಆಶ್ಚರ್ಯಕರವಾದ ನೀರನ್ನು ನಮಗೆ ಇನ್ನಷ್ಟು ಕೊಡಿ! ನಾವು ಎಷ್ಟೋ ಚಿಕ್ಕವರಾದೆವು–ಆದರೂ, ಇನ್ನೂ ಬಹಳ ವಯಸ್ಸಾದವರೆ! ಎಲ್ಲಿ, ಇನ್ನಷ್ಟು ಕೊಡಿ!" ಎಂದು ಅವರೆಲ್ಲರೂ ಹಾತೊರೆದು ಕೂಗಿದರು.

ತನ್ನ ಪ್ರಯೋಗದ ಫಲಿಸಿಕೆಯನ್ನು ಸಾವಧಾನಚಿತ್ತದಿಂದ ಪರಿಶೀಲಿಸುತ್ತ ಕುಳಿತಿದ್ದ ಮೃತ್ಯುಂಜಯ ಪಂಡಿತನು ಹೇಳಿದನು: "ತಾಳಿ! ತಾಳಿ! ಎಷ್ಟೊಂದು ಕಾಲ ಹಿಡಿಯಿತು ನೀವು ಇಷ್ಟೊಂದು ವಯಸ್ಸಾದವರಾಗಿ ಬೆಳೆಯಬೇಕಾದರೆ ! ಇನ್ನು ಅರ್ಧಘಂಟೆಯಲ್ಲಿ ನೀವು ಮತ್ತೆ ಚಿಕ್ಕವರಾಗಬಹುದು, ಅಂಥ ಶಕ್ತಿಯಿದೆ ಈ ಜಲಕ್ಕೆ. ಹೀಗಿರುವಾಗ, ಇಷ್ಟು ಆತುರವೇಕೆ? ಆದರಿದೊ, ನೀರು ಸಿದ್ಧವಾಗಿದೆ, ಧಾರಾಳವಾಗಿ ಉಪಯೋಗಿಸಬಹುದು."

ನಗರದ ಮುದುಕರನ್ನೆಲ್ಲ ಬೇಕಾದರೂ ಅವರವರ ಮೊಮ್ಮಕ್ಕಳಷ್ಟು ವಯಸ್ಸಿಗೆ ಇಳಿಸುವುದಕ್ಕೆ ಸಾಕಾಗುವಷ್ಟು 'ಯೌವನ ಸುಧೆ' ಸ್ಫಟಿಕಪಾತ್ರೆಯಲ್ಲಿ ಉಳಿದಿತ್ತು; ಪಂಡಿತನು ಬೆಳ್ಳಿಯ ಪಾತ್ರೆಗಳನ್ನು ಮತ್ತೆ ನೀರಿನಿಂದ ತುಂಬಿದನು. ಪಾತ್ರೆಗಳಲ್ಲಿ ನೊರೆ ಇನ್ನೂ ಬುಸುಬುಸು ಎನ್ನುತ್ತಿರುವಾಗಲೇ ಪಂಡಿತನ ಅತಿಥಿಗಳು ಅವುಗಳನ್ನು ಸರ್ರನೆ ತೆಗೆದುಕೊಂಡು ಒಂದೇ ಗುಟುಕಿಗೆ ನೀರನ್ನು ಹೀರಿಬಿಟ್ಟರು. ಅದೇನು ಮಾಯೆಯೊ! ನೀರಿನ್ನೂ ಗಂಟಲಿನಲ್ಲಿ ಪ್ರವಹಿಸುತ್ತಿರುವಾಗಲೇ ಅವರ ಶರೀರಾವಸ್ಥೆ ಬಹಳಮಟ್ಟಿಗೆ ಬದಲಾಯಿಸಿದಂತೆ ತೋರಿತು. ಅವರ ಕಣ್ಣುಗಳು ಪ್ರಕಾಶಗೊಂಡು ಥಳಥಳಿಸಿದುವು; ಬೆಳ್ಳಿಯಂತಿದ್ದ ಅವರ ಬಿಳಿಗೂದಲಲ್ಲಿ ಕಪ್ಪು ಛಾಯೆ ಬಲಿಯುತ್ತ ಬಂತು. ಈಗ ಅಲ್ಲಿ ಕಾಲುಮಣೆಯನ್ನು ಬಳಸಿ ಕುಳಿತಿದ್ದವರು ಮೂವರು ಮಧ್ಯವಯಸ್ಸಿನವರು–ಮುದುಕರಲ್ಲ, ತುಂಬು ಪ್ರಾಯ ಜಾರಿ ಬಹುದಿನಗಳಾಗಿಲ್ಲದೆ ತುಂಬುಮೈಯ ಹೆಂಗಸೊಬ್ಬಳು.

ಅರುಣೋದಯದ ಕೆಂಪಿನ ಮುಂದೆ ನಿಲ್ಲದೆ ಓಡುವ ಕತ್ತಲೆಯಂತೆ ಇಂದಿರೆಯ ಮುಖಮಂಡಲದಿಂದ ಮುಪ್ಪಿನ ನೆರಳು ಜಾರುತ್ತಿರುವುದನ್ನು ನೋಡಿ ಸಮರಸಿಂಹನ ಕಣ್ಣುಗಳು ಅವಳ ಮುಖದಲ್ಲಿ ಕೀಲಿಸಿಹೋದುವು. "ಇಂದಿರಾ, ನನ್ನ ಮುದ್ದು ಇಂದಿರಾ, ನೀನೆಷ್ಟು ಮನೋಹರವಾಗಿದ್ದೀ" ಎಂದು ಕೂಗಿದನವನು!

ಸಮರಸಿಂಹನು ತನ್ನನ್ನು ಯಾವಾಗ ಹೊಗಳಿದರೂ ಮನಃಪೂರ್ವಕವಾಗಿ ಹೊಗಳುತ್ತಿರಲಿಲ್ಲವೆಂದು ಇಂದಿರೆಗೆ ಮೊದಲಿನಿಂದಲೂ ಗೊತ್ತು; ಆದ್ದರಿಂದ,

ಅವನ ನುಡಿಗಳನ್ನು ಒರೆಹಚ್ಚಿ ನೋಡುವುದಕ್ಕಾಗಿಯೋ ಎಂಬಂತೆ ಎದ್ದು ಕನ್ನಡಿಯ ಕಡೆ ನೋಡಿದಳು; ಕನ್ನಡಿಯಲ್ಲಿ ನೋಡಿಕೊಂಡಾಗ ಒಬ್ಬ ಮುದುಕಿಯ ವಿಕಾರಸ್ವರೂಪ ತನ್ನ ಕಣ್ಣಿಗೆ ಬೀಳುವುದೆಂದು ಶಂಕಿಸುತ್ತಲೇ ಅದರ ಬಳಿಗೆ ಹೋದಳು. ಇತ್ತಕಡೆ, ಉಳಿದ ಮೂವರು ವರ್ತಿಸುತ್ತಿದ್ದ ರೀತಿಯನ್ನು ನೋಡಿದರೆ, ಅವರು ಆಗತಾನೆ ಕುಡಿದಿದ್ದ 'ಯೌವನ ಸುಧೆ' ಯಾವ ಮಧುವಿಗೂ ಕಡಮೆಯಿರಲಿಲ್ಲವೆನ್ನಿಸಿತ್ತು; ಇಲ್ಲದೆ ಹೋದರೆ ಅಪಾರ ವಯೋಭಾರವು ಅವರ ತಲೆಯ ಮೇಲಿಂದ ತತ್‌ಕ್ಷಣ ಕಳಚಿ ಬಿದ್ದು ಹೋದದ್ದರಿಂದ ಅವರ ದೇಹ ಅತ್ಯಂತ ಹಗುರವಾಗಿ ಅವರ ಚೇತನಸರ್ವಸ್ವವೂ ವಿಶೃಂಖಲವಾದಂತಾಗಿ ಹಾರಾಡಲು ಹವಣಿಸುತ್ತಿದ್ದಿತೆಂದುಕೊಳ್ಳಬೇಕು. ವಿಜಯಮರ್ವನ ಮನಸ್ಸು ಆಗಲೇ ರಾಜನೀತಿಗೆ ಸಂಬಂಧಿಸಿದ ವಿಷಯಗಳಲ್ಲಿ ಹರಿಯತೊಡಗಿತು. ದೇಶ ಸೇವೆ, ರಾಜಭಕ್ತಿ, ಸ್ವದೇಶಾಭಿಮಾನ ಮುಂತಾದವುಗಳ ವಿಷಯವಾಗಿ ತನಗೆ ತಾನೇ ಮೆಲ್ಲನೆ ಮಾತನಾಡಿಕೊಳ್ಳತೊಡಗಿದನು; ಒಡನೆಯೇ, ಯಾವನೋ ಮಹಾರಾಜನೆದುರು ನಿಂತು ಮಾತಾನಾಡುತ್ತಿರುವನೋ ಎಂಬಂತೆ ಕೈಕಟ್ಟಿಕೊಂಡು, ತಲೆಬಾಗಿ, ನಿಧಾನವಾಗಿ, ಗಂಭೀರವಾಗಿ ಉಸಿರತೊಡಗಿದನು. ಸಮರಸಿಂಹನು ಒಮ್ಮೆ ಇಂದಿರೆಯನ್ನು ನೋಡುತ್ತ, ಮತ್ತೊಮ್ಮೆ ತನ್ನ ಮೈಕೈಗಳನ್ನು ತಾನೇ ನೋಡಿಕೊಂಡು ಹಿಗ್ಗುತ್ತ, ಯಾವುದೋ ರಣಗೀತೆಯೊಂದನ್ನು ಹಾಡಿಕೊಂಡು ಕುಣಿದಾಡಲು ಮೊದಲುಮಾಡಿದನು. ಇತ್ತ ವಸುಪಾಲನು ಮಾತ್ರ ಮೌನವಾಗಿ ತಲೆ ಬಗ್ಗಿಸಿಕೊಂಡು ಕುಳಿತೆಡೆಯಲ್ಲಿ ಕುಳಿತಿದ್ದನು; ಯಾವ ಯಾವ ಸರಕುಗಳನ್ನು ಎಲ್ಲೆಲ್ಲಿಗೆ ಕಳುಹುವುದು, ವಿದೇಶಗಳೊಡನೆ ಮತ್ತೆ ವ್ಯಾಪಾರವನ್ನು ಕೈಗೊಳ್ಳುವುದೆ ಬಿಡುವುದೆ, ಅದಕ್ಕಾಗಿ ಎಷ್ಟು ಹಡಗುಗಳನ್ನು ಕಟ್ಟಿಸಬೇಕು–ಎಂದು 'ಗಾಳಿಗೋಪುರ'ಗಳನ್ನು ಕಟ್ಟತೊಡಗಿದನು; ಆದರೆ ಏನು ಮಾಡುವುದಕ್ಕೂ ಬರಿಗೈಯಾಗಿದ್ದುದರಿಂದ ತಲೆ ಕೆರೆಯುತ್ತ ನಿಟ್ಟುಸಿರು ಬಿಡುತ್ತಿದ್ದನು.

ಇಂದಿರೆ ಕನ್ನಡಿಯ ಮುಂದೆ ನಿಂತು, ಪ್ರಪಂಚದಲ್ಲಿ ಎಲ್ಲ ವಸ್ತುಗಳಿಗಿಂತಲೂ ತನಗೆ ಪ್ರಿಯತಮೆಯಾದ ತನ್ನ ಗೆಳತಿಯೊಬ್ಬಳನ್ನು ಮಾತನಾಡಿಸುತ್ತಿರುವಳೋ ಎಂಬಂತೆ ತನ್ನ ಪ್ರತಿಬಿಂಬದೊಡನೆ ತಾನೇ ಮಾತನಾಡಿದಳು, ಸರಸವಾಡಿದಳು; ಪ್ರತಿಬಿಂಬಕ್ಕೆ ಒಮ್ಮೆ ತಲೆಬಾಗಿ ವಂದಿಸಿದಳು, ಒಮ್ಮೆ ಅದನ್ನು ನಕ್ಕು ಅಣಕಿಸಿದಳು. ಹಳೆಯ ಮುಖದ ಸುಕ್ಕು ಯಾವುದಾದರೂ ಉಳಿದಿದೆಯೋ ಇಲ್ಲವೋ ಎಂದು ಪರೀಕ್ಷಿಸಿ ನೋಡಲು ಒಂದು ಸಲ ಕನ್ನಡಿಗೆ ಸೋಂಕುವಂತೆ ಮುಖ ಚಾಚಿದಳು. ತಲೆಗೂದಲ ಬಿಳುಪು ಮಾಯವಾಗಿದೆಯೋ ಇಲ್ಲವೋ ಎಂದು ತುರುಬು

ಬಿಚ್ಚಿಕೊಂಡು ಇಳಿಯಬಿದ್ದ ಕೂದಲನ್ನು ಕನ್ನಡಿಯಲ್ಲಿ ನೋಡಿಕೊಂಡಳು. ಹೀಗೆ ಸ್ವಲ್ಪ ಹೊತ್ತು ಕನ್ನಡಿಯ ಮುಂದೆ ನಿಂತು ನಲಿದಾಡಿ ತತ್‌ಕ್ಷಣ ಹಿಂದಿರುಗಿ, ಸೊಂಟದ ಮೇಲೆ ಕೈಯಿಟ್ಟುಕೊಂಡು, ಕೋಣೆಯ ಮಧ್ಯದಲ್ಲಿ ಕುಳಿತಿದ್ದ ಪಂಡಿತನ ಬಳಿಗೆ ಬಿಂಕದಿಂದ ನಡೆದುಬಂದಳು.

"ಪಂಡಿತರೆ, ದಯವಿಟ್ಟು ಇನ್ನೊಂದು ಬಟ್ಟಲು ನೀರು ಕೊಡುವಿರಾ!" ಎಂದು ಮಧುರಕಂಠದಿಂದ ಕೇಳಿದಳು ಇಂದಿರೆ.

"ಅದಕ್ಕೇನು, ಅಗತ್ಯವಾಗಿ ಆಗಬಹುದು. ನೋಡು! ನಾನಾಗಲೇ ಪಾತ್ರೆಗಳಲ್ಲಿ ನೀರು ತುಂಬಿದ್ದೇನೆ" ಎಂದು ಉದಾರಿಯಾದ ಪಂಡಿತನು ಉತ್ತರ ಕೊಟ್ಟನು.

ಅವನು ಹೇಳಿದಂತೆ ಆಗಲೇ ನಾಲ್ಕು ಪಾತ್ರೆಗಳ ತುಂಬ ಆ ವಿಚಿತ್ರ ಸಲಿಲ ಸಿದ್ಧವಾಗಿದ್ದಿತು; ಅದು ಆಗತಾನೆ ನೊರೆಯಾಡುತ್ತಿದ್ದು, ನೊರೆಯ ಗುಳ್ಳೆಗಳು ವಜ್ರದಂತೆ ಹೊಳೆಹೊಳೆಯುತ್ತಿದ್ದುವು. ಆಗ ಸಂಜೆ ಸಮೀಪಿಸುತ್ತಿತ್ತು. ಕೋಣೆ ಮೊದಲಿಗಿಂತ ಮಬ್ಬಾಗುತ್ತ ಬಂದಿತ್ತು; ಆದರೆ, ತಿಳಿಬೆಳದಿಂಗಳಿಗೆ ಸಮನಾದ ನಸುಬೆಳಕೊಂದು ಸ್ಫಟಕಪಾತ್ರೆಯಿಂದ ಹೊಳೆದು, ನಾಲ್ವರು ಮಿತ್ರರ ಮೇಲೂ ನೆಲಸಿ, ನಡುವೆ ಇದ್ದ ಪಂಡಿತನನ್ನು ಬೆಳಗುತ್ತಿತ್ತು. ಅಲ್ಲಿ ಅಂತು ನೆರೆದಿದ್ದ ಮಿತ್ರವರ್ಗವು ಕಾಲಪುರುಷನ ಶಕ್ತಿಯನ್ನು ಸ್ವಲ್ಪಮಟ್ಟಿಗೆ ಪ್ರತಿಭಟಿಸಿದ್ದಿತು; ಅಂಥ ಕಾಲಮಹಾರಾಯನಿಗೆ ಒಪ್ಪುವಂಥ ಗಂಭೀರಮುದ್ರೆಯನ್ನು ಧರಿಸಿ ಮೃತ್ಯುಂಜಯ ಪಂಡಿತನು ಕುಳಿತಿದ್ದನು. ಅವರು ಮೂರನೆಯ ಸಲ 'ಯೌವನ ಸುಧೆ'ಯನ್ನು ಕುಡಿಯುವಾಗಲೂ ಪಂಡಿತನ ನಿಗೂಢವಾದ ಮುಖಭಾವವನ್ನು ಕಂಡು ಚಕಿತರಾದರು.

ಆದರೆ, ಮರುಕ್ಷಣದಲ್ಲಿಯೇ ನವಯೌವನ ಪ್ರಾಪ್ತವಾದ ಹೊಸ ಹುಮ್ಮಸ್ಸು ಅವರ ನಾಳ ನಾಳದಲ್ಲಿಯೂ ಹರಿಯತೊಡಗಿತು. ದುಃಖ, ಚಿಂತೆ, ರೋಗ ಮುಂತಾದವುಗಳಿಂದ ದೂಷಿತವಾದ ಅನಿಷ್ಟವಾದ ವಯಸ್ಸು-ಅದರಲ್ಲಿಯೂ ಮುಪ್ಪು – ಅವರಿಗೆ ಕನಸಿನಂತೆ ತೋರಿತು; ಈಗವರು ಆ ಕನಸೊಡೆದು ಯೌವನದ ಅರುಣೋದಯವನ್ನು ಕಂಡಿದ್ದರು. ವಯಸ್ಸಾಗುತ್ತ ಆಗುತ್ತ ಆತ್ಮದ ಹೊಸ ಹೊಳಪು ಕಡಮೆಯಾಗುತ್ತ ಬರುತ್ತದೆ; ಆ ಹೊಳಪು ಕಡಮೆಯಾದಂತೆ ಅದರ ಕಣ್ಣಿಗೆ ಪ್ರಪಂಚವೆಲ್ಲವೂ ಮಾಸಿದ ಚಿತ್ರಮಾಲೆಯಂತೆ ಕಾಣುತ್ತದೆ; ಬಹಳ ಮುಂಚೆಯೇ ಮಾಯವಾಗಿದ್ದ ಆ ಹೊಳಪು ಅವರ ಆತ್ಮದಲ್ಲಿ ಮತ್ತೆ ಬಂದು ನೆಲಸಿ ಇಳೆಯೆಲ್ಲವೂ ನೂತನವಾಗಿ, ಒಂದು ಹೊಸ ಬೆಳಕಿನಲ್ಲಿ ಹೊಸ ಚಿತ್ರದಂತೆ ಅವರಿಗೆ ಕಂಡಿತು. ತಾವು ನೂತನ ಸೃಷ್ಟಿಯೊಂದರಲ್ಲಿ ಸುಳಿದಾಡುವ ನೂತನ

ಶಿಶುಗಳೆಂದು ಅವರು ಭಾವಿಸಿಕೊಂಡರು.

"ನಾವು ತರುಣರಾದೆವು! ನಾವು ತರುಣರು!" ಎಂದು ಉಲ್ಲಾಸದಿಂದ ಕೂಗಿದರವರು.

ಈಗ ಯೌವನ ಅವರನ್ನು ಆವರಿಸಿತ್ತು; ಒಡನೆಯೇ ರೂಪ, ನಡೆ, ನುಡಿ ಎಲ್ಲವುಗಳಲ್ಲಿಯೂ ವಯೋನುಗುಣವಾದ ಮಾರ್ಪಾಟು ಕಣ್ಣುಚ್ಚಿ ಬಿಡುವುದರಲ್ಲಿ ಕಾಣಿಸಿಕೊಂಡಿತು. ವೃದ್ಧಾಪ್ಯದಂತೆಯೇ ಯೌವನವೂ ಅವರ ಮಧ್ಯವಯಸ್ಸಿನ ಚಿರಚಿಹ್ನೆಗಳನ್ನು ಅಳಿಸಿಬಿಟ್ಟಿದ್ದಿತು. ಅವರೀಗ ಉಲ್ಲಾಸಪೂರ್ಣ ತರುಣರು, ಪ್ರಾಯೋನ್ಮತ್ತರು; ಹೊಸ ಪ್ರಾಯ ಉಕ್ಕಿ ಹರಿಯುತ್ತಿದೆ ಅವರಲ್ಲಿ, ಉತ್ಸಾಹ ಇಮ್ಮಡಿಯಾಗಿ ಏರುತ್ತಿದೆ. ತಾವು ಹಿಂದೆ ತಲೆಬಾಗಿ ಶರಣುಹೋಗಿದ್ದ ಆ ವೃದ್ಧ ವಯೋಧರ್ಮವನ್ನು ಅಣಕಿಸುವುದರಲ್ಲಿ ಅವರ ನವೋಲ್ಲಾಸ ಮೊತ್ತಮೊದಲು ವ್ಯಕ್ತವಾಯಿತು. ತಾವು ಧರಿಸಿದ್ದ ವೃದ್ಧೋಚಿತವಾದ ಉಡುಪನ್ನು ನೋಡಿಕೊಂಡು ಕಿಲಕಿಲನೆ ನಕ್ಕರು; ಇಂದಿರೆಯಂಥ ಎಳೆವರೆಯದ ಹುಡುಗಿ ಮುದುಕಿಯರು ಉಡುವಂಥ ಮಾಸಿದ ಸೀರೆಯನ್ನು ಉಟ್ಟಿರುವುದನ್ನು ಕಂಡು ಹಾಸ್ಯಮಾಡಿದರು. ಒಬ್ಬನು ಗೂರಲು ಹಿಡಿದಿರುವ ತಾತ ನಡೆಯುವಂತೆ 'ಉಹು ಉಹುಹು' ಎಂದು ಕೆಮ್ಮುತ್ತಾ ಸೊಂಟ ಬಾಗಿಸಿ ನಡೆದನು; ಇನ್ನೊಬ್ಬನು ಬಚ್ಚುಬಾಯಿ ಮಾಡಿಕೊಂಡು ಮುದುಕನಂತೆ ಮಾತನಾಡತೊಡಗಿದನು; ಮತ್ತೊಬ್ಬನು ಕಾಲು ಮುರಿದುಕೊಂಡು ಕೈಯೂರಿ ಕುಳಿತಿದ್ದ ಮೃತ್ಯುಂಜಯ ಪಂಡಿತನನ್ನು ಅನುಕರಿಸಿದನು. ಅನಂತರ ಎಲ್ಲರೂ ಒಟ್ಟಿಗೆ ಉಲ್ಲಾಸದಿಂದ ಕೂಗಿ, ಕೋಣೆಯಲ್ಲೆಲ್ಲ ಕುಣಿದಾಡತೊಡಗಿದರು. ಇಂದಿರೆ ಮತ್ತೆ ಪಂಡಿತನ ಬಳಿಗೆ ಬಳುಕುತ್ತ ಹೋದಳು; ಅವಳ ಮುದ್ದು ಮುಖದಲ್ಲಿ ಒಂದು ಬಗೆಯ ಹುಡುಗಾಟಿಕೆ ಇಣಿಕಿ ಕಾಣುತ್ತಿತ್ತು.

ಇಂದಿರೆ ಈಗ ಏನೂ ಅರಿಯದ ಹುಡುಗಿಯಂತಿದ್ದಳು; ಆದರೆ ವೇಶ್ಯಾವೃತ್ತಿಯ ವಾಸನೆ ಹಿಂಗಿರಲಿಲ್ಲ.

"ಪಂಡಿತರೆ, ಮುದ್ದುಮುದುಕರೆ! ಏಳಿ, ಎದ್ದೇಳಿ; ನನ್ನೊಡನೆ ನಲಿದಾಡಿ, ಬನ್ನಿ; ನನ್ನೊಡನೆ ಕುಣಿದಾಡಿ, ಬನ್ನಿ!" ಎಂದು ಪಂಡಿತನನ್ನು ಕರೆದಳು. ಇದನ್ನು ಕೇಳಿ, ಇಂದಿರೆಯ ಜೊತೆಯಲ್ಲಿ ಪಂಡಿತರು ಎಷ್ಟು ಹಾಸ್ಯಾಸ್ಪದರಾಗಿ ಕಾಣುವರೆಂದು ಮೂವರು ಮಿತ್ರರೂ ಹೊಟ್ಟೆ ಬಿರಿಯುವಂತೆ ನಕ್ಕರು.

"ನನ್ನಂತಹ ಮುದುಕನೊಡನೆ ನಲಿಯುವುದೆಂದರೇನು, ಕುಣಿಯುವುದೆಂದರೇನು! ನನಗೆ ಬಹಳ ವಯಸ್ಸಾಗಿದೆ; ಜೊತೆಗೆ ರೋಗಪೀಡಿತನಾಗಿದ್ದೇನೆ; ನನ್ನ ನಲಿದಾಟ ಕುಣಿದಾಟಗಳ ಕಾಲವೆಲ್ಲ ಬಹಳ

ಹಿಂದಕ್ಕೇ ಆಗಿಹೋಯಿತು. ಹೊಸ ಪ್ರಾಯದ ಈ ಹೊಸ ಯುವಕರು ಮೂವರಿರುವಾಗ ನಿನಗೇನು ಚಿಂತೆ? ಯಾರಾದರೂ ಒಬ್ಬನನ್ನು ಕರೆದರೆ ಹಿಗ್ಗುತ್ತ ಬಂದಾರು ನಿನ್ನೊಡನೆ ಕ್ರೀಡಿಸುವುದಕ್ಕೆ" ಎಂದು ಪಂಡಿತನು ಶಾಂತಚಿತ್ತದಿಂದ ಉತ್ತರ ಕೊಟ್ಟನು.

"ಬಾ ಇಂದಿರೆ, ಬಾ ನನ್ನ ಮುದ್ದುಗಿಣಿ! ನಾನಿರುವಾಗ ನಿನಗೆ ಚಿಂತೆಯೆ? ನನ್ನೊಡನೆ ಕುಣಿದಾಡು, ಬಾ! ಇಬ್ಬರೂ ಕೂಡಿ ಸುಖವಾಗಿ ಬಾಳೋಣ ಬಾ!" ಎಂದು ಕೂಗಿದನು ಸಮರಸಿಂಹ.

"ಆಗದು, ಆಗದು; ಅವಳಿಗೆ ತಕ್ಕವನು ನಾನೇ!" ಎಂದು ವಿಜಯವರ್ಮನು ಆರ್ಭಟಿಸಿದನು.

"ಐವತ್ತು ವರ್ಷಗಳ ಹಿಂದೆ ನನ್ನ ಕೈಹಿಡಿಯುವುದಾಗಿ ಮಾತು ಕೊಟ್ಟಿದ್ದಳಲ್ಲ ಇವಳು!" ಎಂದು ವಸುಪಾಲನು ಕಂಠವೆತ್ತಿದನು.

ಅವರೆಲ್ಲರೂ ಅವಳನ್ನು ಬಳಸಿ ನಿಂತರು. ಒಬ್ಬನು ಅವಳ ಎರಡು ಕೈಗಳನ್ನೂ ಬಲವಾಗಿ ಅದುಮಿ ಹಿಡಿದುಕೊಂಡನು, ಇನ್ನೊಬ್ಬನು ಅವಳ ಸೊಂಟ ಹಿಡಿದು ತಬ್ಬಿಕೊಂಡನು, ಮತ್ತೊಬ್ಬನು ಮತ್ತೊಂದು ಪಕ್ಕದಲ್ಲಿ ಅವಳ ಹೆಗಲ ಮೇಲೆ ಕೈಹಾಕಿಕೊಂಡು ನಿಂತನು. ಒಮ್ಮೆ ನಾಚಿಕೆಯನ್ನು ನಟಿಸುತ್ತ, ಒಮ್ಮೆ ದಿಕ್ಕುತೋಚದವಳಂತೆ ಬಾಯಿಬಿಡುತ್ತ, ಒಮ್ಮೆ ಇವರ ಬಂಧನದಿಂದ ಬಿಡಿಸಿಕೊಳ್ಳುವುದಕ್ಕೆಂದು ಮೈತಿರುವುತ್ತ, ಒಮ್ಮೆ ಹರಿಣಿಯಂತೆ ಬೆದರಿ ಕಣ್ಣರಳಿಸುತ್ತ, ಒಮ್ಮೆ ನಾಗರಹಾವಿನಂತೆ ಬುಸುಗುಟ್ಟುತ್ತ, ಒಮ್ಮೆ ಅವರ ಮೇಲೆ ಸಿಡಿದುಬೀಳುತ್ತ, ಒಮ್ಮೆ ಮೃದುಮಧುರವಾಗಿ ನಗುತ್ತ, ಮತ್ತೊಮ್ಮೆ ಗೊಳ್ಳೆಂದು ಗಹಗಹಿಸುತ್ತ; ಅವರನ್ನು ಬೆರಗುಮಾಡಿ, ರೇಗಿಸಿ,–ಅವರಿಗೆ ಭ್ರಮೆಹಿಡಿಸಿ, ಹುಚ್ಚು ಹಿಡಿಸಿ, ಬೆಪ್ಪು ಹಿಡಿಸಿ,–ಅವರು ತನ್ನನ್ನು ಕೈಗಳಿಂದ ಬಂಧಿಸಿದ್ದರೆ ತಾನವರನ್ನು ನೋಟಮಾತ್ರದಿಂದ ಬಂಧಿಸಿ; ಬಿಸಿಯುಸಿರು ಬಿಡುತ್ತ ಒಬ್ಬೊಬ್ಬರ ಕಾಮವನ್ನೂ ಕೆರಳಿಸಿ; ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೂ ಅವರ ಮುಪ್ಪರಿಗೊಂಡ ತೋಳ್ಸೆರೆಯಲ್ಲಿದ್ದಳು ನವವಿಲಾಸಿನಿಯಾದ ಆ ನವತರುಣಿ, ಇಂದಿರೆ. ಕಣ್ಮನಗಳನ್ನು ಸೂರೆಗೊಳ್ಳುವ ಸೌಂದರ್ಯಮೂರ್ತಿಯನ್ನು ಪಡೆಯುವುದಕ್ಕಾಗಿ ಯುವಕರು ಹೋರಾಡುವ ದೃಶ್ಯ ಇದಕ್ಕಿಂತ ಮನೋಹರವಾದುದು ಬೇರೆ ಇರಲಿಲ್ಲ. ಆದರೂ ಅದೇನು ವಿಚಿತ್ರ ಮಾಯೆಯೋ, ಸಂಜೆಯ ಮಬ್ಬು ಹೆಚ್ಚು ಹೆಚ್ಚಾಗಿ ಕವಿಯುತ್ತಿದ್ದುದರಿಂದಲೊ, ಇವರು ಧರಿಸಿದ್ದ ವೃದ್ಧಯೋಗ್ಯವಾದ ಉಡುಪಿನಿಂದಲೊ, ಅಲ್ಲಿದ್ದ ನಿಲುಗನ್ನಡಿಯಲ್ಲಿ ಪ್ರತಿಬಿಂಬಿತವಾದ ದೃಶ್ಯವೆ

ಬೇರೆಯಾಗಿತ್ತಂತೆ: ಸಾಯುವುದರಲ್ಲಿದ್ದ ಮೂವರು ಮುದುಕರು ತಮ್ಮ ಭಾಗಕ್ಕೆ ಸುಂದರಿಯೆಂದು ಕಂಡ ರಕ್ತಮಾಂಸರಹಿತವಾದ ಎಲುಬಿನ ಗೂಡಿಗಾಗಿ ಹೋರಾಡುತ್ತಿದ್ದರಂತೆ!

ಆದರವರು ಚಿಕ್ಕವರಾಗಿಯೇ ಇದ್ದರು; ಅವರ ರಾಗೋದ್ರೇಕ ಅದನ್ನು ವ್ಯಕ್ತಪಡಿಸುತ್ತಿತ್ತು. ವೇಶ್ಯಾಬಾಲೆಯ ಬಿಂಕ ಬಿನ್ನಾಣಗಳಿಂದ ಅವರಿಗೆ ಹುಚ್ಚುಹಿಡಿದಂತಾಗಿತ್ತು; ಅವಳಾದರೋ ಒಬ್ಬನನ್ನೂ ಸ್ವೀಕರಿಸಿರಲಿಲ್ಲ, ಯಾರನ್ನೂ ತ್ಯಜಿಸಿರಲಿಲ್ಲ. ಅವರ ಆಸೆ ಕೆರಳುತ್ತ ಬಂತು, ಅವರ ಹುಚ್ಚು ಏರುತ್ತ ಬಂತು; ಜರೆದು ಮೇಲೆ ಬೀಳುವಂತೆ ಮೂವರೂ ಒಬ್ಬರನ್ನೊಬ್ಬರು ದುರಗುಟ್ಟಿಕೊಂಡು ನೋಡಿದರು. ತಮ್ಮಲ್ಲಿ ಯಾರೊಬ್ಬರಿಗೂ ಸಂಪೂರ್ಣವಾಗಿ ಸ್ವಾಧೀನವಾಗದಿದ್ದ ಆ ರಮಣೀ ರತ್ನವನ್ನು ಬೇಗನೆ ಸ್ವಾಧೀನಪಡಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆ ಮೂವರಲ್ಲಿಯೂ ಸ್ಫುರಿಸಿತು; ಒಬ್ಬನಾದರೂ ಅವಳನ್ನು ತನ್ನ ಹಿಡಿತದಿಂದ ಬಿಡಲೊಲ್ಲನು. ಎಷ್ಟು ಹೊತ್ತು ಹೀಗೆ ಸುಮ್ಮನಿರುವುದು? ಒಬ್ಬನು ಮಾತ್ರ ಅವಳನ್ನು ಪಡೆಯಬಲ್ಲನು. ಸರಿ, ಒಬ್ಬನ ಕತ್ತನ್ನೊಬ್ಬ ಹಿಡಿದು, ನೂಕಿ, ತಿರುಹಿ, ಮೂವರೂ ತಮ್ಮತಮ್ಮಲ್ಲಿ ಉಗ್ರವಾಗಿ ಕಾದಾಡತೊಡಗಿದರು. ಅವರು ಹೀಗೆ ಮೈಮೇಲೆ ಪ್ರಜ್ಞೆಯಿಲ್ಲದೆ ಕಾದಾಡುವ ಭರದಲ್ಲಿ ಅಲ್ಲಿದ್ದ ಕಾಲುಮಣೆಗಳು ಮಗುಚಿಕೊಂಡುವು, ಸ್ಫಟಿಕಪಾತ್ರೆ ಕೆಳಗೆ ಬಿದ್ದು ನುಚ್ಚುನೂರಾಯಿತು. ಅಮೂಲ್ಯವಾದ ಆ 'ಯೌವನ ಸುಧೆ' ನೆಲದ ಮೇಲೆ ಮಿಂಚುತ್ತ ಪ್ರವಹಿಸಿತು; ಆ ವೇಳೆಗೆ, ಸಾಯುವುದರಲ್ಲಿದ್ದ ಒಂದು ಮುದಿ ಚಿಟ್ಟೆ ಹಾರಲಾರದೆ ನೆಲದ ಮೇಲೆ ಕುಳಿತಿತ್ತು; 'ಯೌವನ ಸುಧೆ' ಹರಿದುಬಂದು ಅದನ್ನು ಸೋಕಿತೋ ಇಲ್ಲವೋ ಅದು ಕೋಣೆಯಲ್ಲೆಲ್ಲಾ ಹಾರಾಡಿ, ಮೃತ್ಯುಂಜಯ ಪಂಡಿತನ ಬಿಳಿದಲೆಯ ಮೇಲೆ ನೆಲಸಿತು.

"ಮಿತ್ರರೆ, ಸಾಕು ಸಾಕು! ಇಂದಿರೆ, ಬಾ ಇಲ್ಲಿ, ಏನಿದು ಕಲಹ? ಈ ದುರ್ವರ್ತನೆ ಖಂಡಿತವಾಗಿಯೂ ಕೂಡದು. ನನ್ನ ಬಾಯಿಂದ ಸುಮ್ಮನೆ ಕಠಿನ ವಾಕ್ಕುಗಳನ್ನು ಹೊರಡಿಸಬೇಡ" ಎಂದು ಪಂಡಿತನು ಗಟ್ಟಿಯಾಗಿ ಹೇಳಿದನು.

ಅವರೆಲ್ಲರೂ ಇದ್ದಲ್ಲಿಯೇ ನಿಂತು ನಡುಗಿದರು; ಯೌವನ ಪ್ರಭಾವಿಹಾರಿಗಳಾದ ತಮ್ಮನ್ನು ಅಂಧಕಾರಮಯವಾದ ವಾರ್ಧಿಕ್ಯ ಕೂಪಕ್ಕೆ ಕೆಡವಲು ಕಾಲಪುರುಷನು ಮತ್ತೆ ಹಿಂದಕ್ಕೆ ಕರೆಯುತ್ತಿರುವನೋ ಎಂಬಂತೆ ಅವರಿಗೆ ತೋರಿತು. ಎತ್ತರವಾದ ಕಾಲುಮಣೆಯ ಮೇಲೆ ಕುಳಿತಿದ್ದ ಮೃತ್ಯುಂಜಯ ಪಂಡಿತನನ್ನು ಅವರೆಲ್ಲರೂ ತಿರುಗಿನೋಡಿದರು. ಸ್ಫಟಿಕಪಾತ್ರೆಯೊಡನೆಯೆ ಬಿದ್ದು,

ಅದರ ಚೂರುಗಳ ನಡುವೆ ಸಿಕ್ಕಿಹೋಗಿದ್ದ ಐವತ್ತು ವರ್ಷಗಳ ಹಿಂದಿನ ಆ ಗುಲಾಬಿಯ ಹೂವನ್ನು ಅಲ್ಲಿಂದ ಉದ್ಧರಿಸಿದನು; ಕಾದಾಡುತ್ತಿದ್ದ ನಾಲ್ವರೂ ಉರುಟಿಹೋಗಿದ್ದ ಕಾಲುಮಣೆಗಳನ್ನು ಸರಿಪಡಿಸಿಕೊಂಡು ಕುಳಿತರು; ಅವರಿಗೂ ಕೂರೋಣವೆನಿಸಿತ್ತು; ಯೌವನಸ್ಥರಾಗಿದ್ದರೂ, ಪಾಪ, ಕಾದಾಡಿ ಬಳಲಿದ್ದರು!

ಪಂಡಿತನು ಕೈಲಿ ಹಿಡಿದಿದ್ದ ಗುಲಾಬಿಯ ಹೂವನ್ನು ಇನ್ನೂ ನಸುಬೆಳಕುಗೂಡಿದ್ದ ಆಕಾಶದ ಕಡೆಗೆ ಹಿಡಿದು ನಿಟ್ಟುಸಿರು ಬಿಟ್ಟನು; ಒಡನೆಯೆ, "ಅಯ್ಯೋ ಹೋಯಿತು! ನನ್ನ ಪ್ರಿಯೆ ನನಗಿತ್ತ ಗುಲಾಬಿ ಮತ್ತೆ ಬಾಡಿಹೋಗುತ್ತಿರುವಂತೆ ಕಾಣುತ್ತದೆ!" ಎಂದು ಮರುಗಿದನು.

ಅದು ಹಾಗೆಯೇ ಆಗಿತ್ತು. ಅವರೆಲ್ಲ ಅದನ್ನು ನೋಡುತ್ತಿದ್ದ ಹಾಗೆಯೇ ಹೂ ಮುದುರಿಕೊಳ್ಳಲು ಮೊದಲಾಯಿತು. ಕೊನೆಗೆ, ಪಂಡಿತನು ಅದನ್ನು ಸ್ಫಟಿಕಪಾತ್ರೆಯ ನೀರಿಗೆ ಎಸೆಯುವ ಮೊದಲು ಹೇಗಿದ್ದಿತೋ ಹಾಗೆಯೇ ಒಣಗಿ ಅದೇ ಸೂಕ್ಷ್ಮತೆಯನ್ನೂ ಆಕಾರವನ್ನೂ ಹೊಂದಿತು. ಅದರ ಎಸಳುಗಳಿಗೆ ಹತ್ತಿಕೊಂಡಿದ್ದ ಒಂದೆರಡು ನೀರು ಹನಿಗಳನ್ನು ಪಂಡಿತನು ಒದರಿಬಿಟ್ಟನು.

ಅನಂತರ ಆ ಬಾಡಿದ ಹೂವನ್ನೆ ಮುತ್ತಿಡುವಂತೆ ತುಟಿಗಳಿಗೆ ಸೋಕಿಸಿಕೊಂಡು, "ಆಗತಾನೆ ಅರಳಿ ಹಿಮಮಣಿಗಳಿಂದ ಅಲಂಕೃತವಾಗಿದ್ದ ಇದನ್ನು ಹೇಗೆ ಪ್ರೀತಿಸುತ್ತಿದ್ದೆನೋ ಇಂದಾದರೂ ಹಾಗೆಯೆ ಪ್ರೀತಿಸುತ್ತೇನೆ" ಎಂದು ಹೇಳಿದನು. ಅವನು ಹೀಗೆ ಹೇಳುತ್ತಿರುವಾಗಲೇ ಅವನ ತಲೆಯ ಮೇಲೆ ಹಾರಿಬಂದು ಕುಳಿತಿದ್ದ ಚಿಟ್ಟೆ ಮತ್ತೆ ಕೆಳಕ್ಕೆ ಹಾರಿ, ನೆಲದ ಮೇಲೆ ಬಿದ್ದುಬಿಟ್ಟಿತು.

ಅವನ ಅತಿಥಿಗಳು ಮತ್ತೆ ನಡುಗಿದರು: ನಡುಮಾಗಿಯಲ್ಲಿ ಬೆಳಕು ಹರೆಯುವ ಮುನ್ನ ಬಟ್ಟೆಯಿಲ್ಲದೆ ಹೊರಗೆ ಹೋದರೆ ಹೇಗೆ ನಡುಗುವೆವೊ ಹಾಗೆ ನಡುಗಿದರು. ದೇಹಬಲವೂ ಆತ್ಮಬಲವೂ ತತ್‌ಕ್ಷಣ ಉಡುಗಿ ಹೋದದ್ದರಿಂದ ಅವರಿಗೆ ಒಂದು ವಿಚಿತ್ರಾನುಭವವಾಯಿತು. ಅವರು ನಡುಗುವುದರಲ್ಲಿ ಆ ಅನುಭವ ವ್ಯಕ್ತವಾಗಿರಬೇಕು. ನಡುಗುತ್ತಿದ್ದ ಹಾಗೆಯೇ ಒಬ್ಬರನ್ನೊಬ್ಬರು ದೃಷ್ಟಿಸಿ ನೋಡಿದರು; ಹಾರಿಹೋಗುತ್ತಿದ್ದ ಒಂದೊಂದು ಕ್ಷಣವೂ ಅವರ ಒಂದೊಂದು ಸೌಂದರ್ಯಕಣವನ್ನೂ ಕಸಿದುಕೊಂಡು, ಮೊದಲು ಇಲ್ಲದಿದ್ದ ಗೆರೆಬರೆಯ ಸುಕ್ಕುಗಳನ್ನೂ ಕುಳಿಗಳನ್ನೂ ಬಳುವಳಿಯಾಗಿ ಬಿಟ್ಟುಹೋಗುತ್ತಿವೆಯೆಂದು ಭಾವಿಸಿಕೊಂಡರು. ಅದೇನು ಮಾಯೆಯೋ? ಒಂದು ಜೀವಮಾನ ಕಾಲದಲ್ಲಿ ನಡೆಯಬೇಕಾದ ಅಷ್ಟೊಂದು ಬದಲಾವಣೆಗಳು ಅಷ್ಟು ಅತ್ಯಲ್ಪ ಕಾಲದಲ್ಲಿ ನಡೆದು

ಹೋದುವೆ? ಇದೇನು, ಒಂದು ಗಳಿಗೆಯ ಹಿಂದೆ ಯೌವನೋನ್ಮತ್ತರಾಗಿ ಕುಣಿದಾಡುತ್ತಿದ್ದವರು, ಈಗ ಮುಪ್ಪಿನಿಂದ ಕುಗ್ಗಿ ಹೋದವರಾಗಿ, ವೃದ್ಧ ಮಿತ್ರನಾದ ಮೃತ್ಯುಂಜಯ ಪಂಡಿತನೊಡನೆ ತಾವೂ ವೃದ್ಧರಾಗಿ ಕುಳಿತುಕೊಂಡಿದ್ದಾರೆ!

"ನಾವು ಮತ್ತೆ ಮುದುಕರಾಗಿಹೋದೆವೆ, ಅದೂ ಇಷ್ಟು ಬೇಗ?" ಎಂದು ಜೋಲುಮುಖ ಹಾಕಿಕೊಂಡು ಕುಗ್ಗಿದ ಕಂಠದಲ್ಲಿ ಅವರು ಪಂಡಿತನನ್ನು ಕೇಳಿದರು.

ನಿಜವಾಗಿಯೂ ಅವರು ಮುದುಕರಾಗಿದ್ದರು. 'ಯೌವನ ಸುಧೆ'ಗೆ ಇದ್ದ ಶಕ್ತಿಪ್ರಭಾವ ಎಷ್ಟು ಪರಿಣಾಮಕಾರಿಯಾಗಿ ಆಶ್ಚರ್ಯಕರವಾಗಿದ್ದಿತೋ ಅಷ್ಟೊ ಅಷ್ಟು ಕ್ಷಣಿಕವಾಗಿದ್ದಿತು; ಅದು ನಿರ್ಮಿಸಿದ್ದ ಸಂಮೋಹನ ಮಾಯವಾಗಿಹೋಗಿತ್ತು. ಹೌದು, ಅವರು ನಿಸ್ಸಂದೇಹವಾಗಿಯೂ ಮತ್ತೆ ಮುದುಕರಾಗಿದ್ದರು.

ಎಷ್ಟಾದರೂ ತಾನು ಹೆಂಗಸೆಂದು ಇಂದಿರೆಗೆ ಮಿಂಚಿನಂತೆ ಹೊಳೆಯಿತು. ಕೂಡಲೆ ಅವಳು ತನ್ನ ಎರಡು ಒಣಕಲು ಕೈಗಳಿಂದಲೂ ಬತ್ತಿದ ಕಪೋಲಗಳನ್ನು ಮುಟ್ಟಿಮುಟ್ಟಿ ನೋಡಿಕೊಂಡಳು. ಹೌದು, ತಾನು ಹೆಂಗಸು. ಆದರೆ ಆ ಮುದ್ದುಮೊಗವಿನ್ನೆಲ್ಲಿ? ತನ್ನ ದೇಹವಿನ್ನು ಮಣ್ಣು ಗೂಡುವುದು ಮೇಲೆಂದು ತೋರಿತವಳಿಗೆ.

"ಹೌದು, ಗೆಳೆಯರೆ, ನೀವು ಮತ್ತೆ ವಯೋವೃದ್ಧರಾಗಿದ್ದೀರಿ" ಎಂದು ಮೃತ್ಯುಂಜಯ ಪಂಡಿತನು ಹೇಳತೊಡಗಿದನು: "ಅದೋ ನೋಡಿ! 'ಯೌವನ ಸುಧೆ'ಯಷ್ಟೂ ಚೆಲ್ಲಿಹೋಗಿ ನೆಲದ ಪಾಲಾಗಿದೆ. ಹೋಗಲಿ, ನಾನದಕ್ಕಾಗಿ ಕೊರಗುವುದಿಲ್ಲ; ನನ್ನ ಮನೆಯ ಮುಂದೆಯೇ ಅದರ ಬುಗ್ಗೆ ಉಕ್ಕಿಹರಿದರೂ ನನ್ನ ತುಟಿಗಳನ್ನು ಕೂಡ ಅದಕ್ಕೆ ಸೋಕಿಸುವುದಿಲ್ಲ; ಅದು ನಿರ್ಮಿಸಿಕೊಡುವ ಯೌವನಭ್ರಮೆ ವರ್ಷಗಟ್ಟಲೆ ನಿಂತಿರುವುದಾದರೂ ನಾನು ಅದನ್ನೊಲ್ಲೆ. ನೀವು ನನಗೆ ಇಂದು ಕಲಿಸಿಕೊಟ್ಟ ಪಾಠ ಹಾಗಿದೆ!"

ಆದರೆ, ಪಂಡಿತನ ನಾಲ್ವರು ಗೆಳೆಯರು ಮಾತ್ರ ಅದೇ ಪಾಠವನ್ನು ತಾವು ಕಲಿತುಕೊಂಡಿರಲಿಲ್ಲ. ತಾವೆಲ್ಲರೂ ಕೂಡಲೆ ಹಿಮವತ್ಪರ್ವತ ಪ್ರಾಂತಕ್ಕೆ ಯಾತ್ರೆ ಬೆಳಸಬೇಕೆಂದೂ ಅಲ್ಲಿ 'ಯೌವನ ಸುಧೆ'ಯ ಬುಗ್ಗೆಯ ನೀರನ್ನು ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಎಡೆಬಿಡದೆ ಹೀರುತ್ತಿರಬೇಕೆಂದೂ ಅವರು ನಿರ್ಧರಿಸಿದರು.

೨. ಮುದ್ದುಮಲ್ಲ

ಎಷ್ಟೋ ಘಟನೆಗಳು ನಮ್ಮ ಜೀವನ ಪಥದಲ್ಲಿ ಬಹಳ ಮಟ್ಟಿಗೆ ಪ್ರಭಾವವನ್ನು ಬೀರಿ, ನಮ್ಮ ಜೀವನದಲ್ಲಿ ಅತ್ಯಂತ ಪರಿಣಾಮಕಾರಿಯಾಗಿರುತ್ತವೆ. ಅವುಗಳ ಪರಿಚಯವನ್ನು ಸ್ವಲ್ಪ ಮಾತ್ರ ನಾವು ತಂದುಕೊಳ್ಳಬಹುದು. ಪರಿಣಾಮಕಾರಿಯಾಗದ ಇನ್ನೂ ಎಷ್ಟೋ ಘಟನೆಗಳು ನಡೆಯುತ್ತವೆ. ಅವು ನಮ್ಮನ್ನು ಮುಟ್ಟಿಹೋದಂತೆ ಹೋಗುತ್ತವೆ; ನಮ್ಮ ಬಳಿ ಸುಳಿದು ಸುಳಿಯದಂತೆ ಮಾಯವಾಗುತ್ತವೆ. ಕನಸಿನ ಅರಿವಾದರೂ ಇರುತ್ತದೆ, ಅವುಗಳ ಅರಿವು ನಮಗಿರುವುದಿಲ್ಲ. ಹೀಗಲ್ಲದೆ, ನಮ್ಮ ಭವಿಷ್ಯ ನಮ್ಮ ಕರತಲಾಮಲಕವಾಗುವ ಪಕ್ಷದಲ್ಲಿ–ನಮ್ಮ ಜೀವನದಲ್ಲಿ ಮುಂದೆ ಏನೇನು ನಡೆಯುವುವು ಎಂಬ ಅಂಶಗಳ ಸಂಪೂರ್ಣವಾದ ಅರಿವು ನಮಗಾಗುವ ಪಕ್ಷದಲ್ಲಿ–ಬಾಳಿನಲ್ಲಿ ನಮ್ಮ ಮನಸ್ಸು ಒಂದು ಗಳಿಗೆ ಕಾಲವಾದರೂ ನೆಮ್ಮದಿಯಾಗಿರಬಹುದೆ? ಅತ್ಯಾಶೆಯ ಶಿಖರವನ್ನೇರಿ ನಿರಾಶೆಯ ಪ್ರಪಾತಕ್ಕೆ ಬೀಳುವೆವು; ಸುಖದ ಹೊಂಗನಸಿನಲ್ಲಿ ಮಿಂದು ದುಃಖದ ಅಂಧಕಾರಕೂಪದಲ್ಲಿ ಉರುಳುವೆವು; ಉತ್ಸಾಹದಿಂದ ಉದ್ಘೋಷಿಸಿ ಭಯದಿಂದ ಚೀರುವೆವು!

ಒಬ್ಬ ಯುವಕನ ಚರಿತೆಯ ಒಂದು ಭಾಗವನ್ನು ಉದ್ಧರಿಸಿ ಈ ಭಾವವನ್ನು ಉದಾಹರಿಸಬಹುದು.

ಯುವಕನ ಹೆಸರು ಮುದ್ದುಮಲ್ಲ. (ಅವನ ಕುಲ ಗೋತ್ರದಿಂದ ಕಥೆಗೆ ಪ್ರಯೋಜನ ಕಡಮೆ. ಅವನ ತಾಯಿ ತಂದೆಗಳ ವಿಷಯವೂ ಕಥೆಗೆ ಅವಶ್ಯಕವಲ್ಲ.) ಅವನು ಸದ್ವಂಶೀಕನೆಂದು ಹೇಳಿದರೆ ಸಾಕು. ಅವನ ಚಿಕ್ಕಪ್ಪ ಭವ್ಯನಗರವೊಂದರಲ್ಲಿ ಜವಳಿಯ ವರ್ತಕ. ಹುಡುಗನನ್ನ ತನ್ನ ಅಂಗಡಿಯಲ್ಲಿಯೆ ಇಟ್ಟುಕೊಂಡು ಅಭಿವೃದ್ಧಿಗೆ ತರಬೇಕೆಂದು ಚಿಕ್ಕಪ್ಪ ಮುದ್ದುಮಲ್ಲನನ್ನು ತನ್ನ ಬಳಿಗೆ ಬರಹೇಳಿದ್ದನು. ಚಿಕ್ಕಪ್ಪನ ಇಷ್ಟಾನುಸಾರವಾಗಿ ನಮ್ಮ ಕಥಾನಾಯಕ ತನ್ನ ಹಳ್ಳಿಯನ್ನು ಬಿಟ್ಟು ನಗರಕ್ಕೆ ಪ್ರಯಾಣಬೆಳಸಿದ್ದನು. ಹಳ್ಳಿಯ ಶಾಲೆಯಲ್ಲಿಯೆ ಅವನಿಗೆ ತಕ್ಕಮಟ್ಟಿಗೆ ವಿದ್ಯಾವ್ಯಾಸಂಗವಾಗಿತ್ತು.

ಮುದ್ದುಮಲ್ಲನ ಹಳ್ಳಿಗೂ ಮೋಟಾರು ಬಸ್ಸು ಬರುತ್ತಿದ್ದ ಮಾರ್ಗಕ್ಕೂ ಎಂಟು–ಹತ್ತು ಮೈಲಿಗಳಾಗುತ್ತಿತ್ತು; ಹಳ್ಳಿಯಿಂದ ಅಷ್ಟು ದೂರವನ್ನೂ

ಕಾಲುದಾರಿಯಲ್ಲಿ ನಡೆಯಬೇಕಾಗಿತ್ತು. ಮುದ್ದುಮಲ್ಲನು ಬೆಳಗಾಗ ಎದ್ದು ಕಾಲುನಡಿಗೆಯಿಂದಲೇ ಪ್ರಯಾಣ ಮಾಡಿ, ಮಧ್ಯಾಹ್ನದ ಹೊತ್ತಿಗೆ ಬಸ್ಸು ಬರುವ ಮಾರ್ಗವನ್ನು ತಲುಪಿದ್ದನು. ಆಗ ಬೇಸಗೆ ಮೊದಲಾಗಿತ್ತು. ಬಿಸಿಲಿನ ತಾಪವೊಂದು ಕಡೆ, ನಡೆದ ಆಯಾಸವೊಂದು ಕಡೆ. ಬಸ್ಸಿಗಾಗಿ ಇನ್ನೂ ಬಲುಹೊತ್ತು ಕಾಯಬೇಕಾಗಿದ್ದುದರಿಂದ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಅವಕಾಶವಿತ್ತು. ದಾರಿಯ ಪಕ್ಕದಲ್ಲಿ ಎಲ್ಲೋ ತುಸುದೂರದಲ್ಲಿ ಅವನಿಗೆ ಅನುಕೂಲವಾಗಿ ಕಂಡುಬಂದ ಮರದ ಕೆಳಗೆ ಹೋಗಿ ಅವನು ಕುಳಿತುಕೊಂಡನು. ಅವನು ವಿಶ್ರಾಂತಿಗಾಗಿ ಆರಿಸಿದ ಆ ಪ್ರದೇಶ ಅವನಿಗಾಗಿ ನಿರ್ಮಿಸಿದಂತಿತ್ತು. ತಣ್ಣೆಳಲನ್ನು ಚೆಲ್ಲುತ್ತಿದ್ದ ಹೊಂಗೆಯ ಮರದ ಸುಖಾಶ್ರಯ; ಇನ್ನು ಯಾವ ದಾರಿಹೋಕನ ಪಾಲಿಗೂ ಇಲ್ಲದೆ ಅವನಿಗಾಗಿ ಹರಿಯುತ್ತಿರುವುದೋ ಎಂಬಂತೆ ಕಲಕಲರವಮೊಡನೆ ಸಾಗುತ್ತಿದ್ದ ತಿಳಿನೀರಿನ ಸಣ್ಣ ತೊರೆ. ಅದರಲ್ಲಿ ಯಾರು ಕುಡಿದಿದ್ದರೇನು ಬಿಟ್ಟರೇನು, ಮುದ್ದುಮಲ್ಲನೇನೋ ತೊರೆಯ ತಿಳಿನೀರನ್ನು ಮನದಣಿಯ ಕುಡಿದು, ತೃಪ್ತಿಹೊಂದಿ, ಹಾಗೆಯೇ ದಡದ ಮೇಲೆ ಹೊಂಗೆಯ ಮರದಡಿಯಲ್ಲಿ ಉರುಳಿಕೊಂಡನು. ಅವನ ಬಟ್ಟೆಯ ಗಂಟು ತಲೆದಿಂಬಾಯಿತು. ಇನ್ನೇನು ಬೇಕಾಗಿತ್ತು? ಸೂರ್ಯಕಿರಣಗಳು ಅವನನ್ನು ತಾಗುತ್ತಿರಲಿಲ್ಲ. ಮೊನ್ನೆ ತಾನೆ ಮಳೆ ಮುಗಿದು ಸುತ್ತಮುತ್ತಣ ಪ್ರದೇಶವೆಲ್ಲ ನಿರ್ಮಲವಾಗಿದ್ದುದರಿಂದ ಹಾದಿಯ ಧೂಳು ಏಳುವಂತಿರಲಿಲ್ಲ; ಹಸುರು ಗರಿಕೆಯ ಹಾಸು ಯುವಕನಿಗೆ ಮೆತ್ತನೆಯ ಸುಪ್ಪತ್ತಿಗೆಗಿಂತಲೂ ಹೆಚ್ಚು ಸುಖಕರವಾಗಿತ್ತು; ಅವನಿಗದು ಪ್ರಿಯವಾಗಿಯೂ ಇದ್ದಿರಬೇಕು. ಕೆಲದಲ್ಲಿ ತೊರೆ ಹಾಡುತ್ತಾ ಮಂದವಾಗಿ ಸಾಗುತ್ತಿತ್ತು; ಮೇಲೆ ಪ್ರಶಾಂತವಾದ ನೀಲಿಯ ಆಕಾಶ; ಸ್ವಲ್ಪ ಮೇಲೆ, ನಿದ್ದೆಯ ಜೊಂಪಿನಿಂದಲೋ ಎಂಬಂತೆ ಮೆಲುಮೆಲನೆ ಒಲೆದಾಡುತ್ತಿದ್ದ ಹೊಂಗೆಯ ಮರದ ಸೆಳೆಗೊಂಬೆಗಳು. ಈ ಸನ್ನಿವೇಶದಲ್ಲಿ ಯಾರಿಗೆ ನಿದ್ದೆ ಹತ್ತುವುದಿಲ್ಲ? ಗಾಢನಿದ್ರೆ, ಬಹುಶಃ ಸಾವಿರಾರು ಕನಸಿನ ಮೊಟ್ಟೆಗಳನ್ನು ತನ್ನ ಬಸಿರಿನಲ್ಲಿ ಅಡಗಿಸಿಕೊಂಡಿದ್ದ ಗಾಢನಿದ್ರೆ, ಮುದ್ದುಮಲ್ಲನನ್ನು ಆವರಿಸಿತು. ಆದರೆ ಅವನು ಕನಸಿನಲ್ಲಿಯೂ ಕಾಣದ ಸಂಗತಿಗಳನ್ನು ಇಲ್ಲಿ ನಾವು ನಿರೂಪಿಸಬೇಕಾಗಿದೆ.

ಅವನು ಹೀಗೆ ನೆರಳಿನಲ್ಲಿ ಸುಖವಾಗಿ ನಿದ್ರಿಸುತ್ತಿದ್ದಾಗ ಇತರ ಜನರು ಎಚ್ಚರವಾಗಿದ್ದರು. ಪಾದಚಾರಿಗಳಾಗಿ ಕೆಲವರು, ಕುದುರೆಗಳ ಮೇಲೆ ಕೆಲವರು, ಗಾಡಿಯಲ್ಲಿ ಕೆಲವರು ದಾರಿಯ ಆ ಕಡೆಯಿಂದೀಕಡೆಗೆ ಈ ಕಡೆಯಿಂದಾಕಡೆಗೆ ಬಿಸಿಲಿನಲ್ಲಿ ಸಂಚರಿಸುತ್ತಿದ್ದರು. ಪ್ರಯಾಣಿರೆಲ್ಲರೂ ಇವನು ಮಲಗಿದ್ದ ಎಡೆಯ

ಪಕ್ಕದಲ್ಲಿಯೇ ಹೋಗುತ್ತಿದ್ದರು. ಕೆಲವರು ಅತ್ತಇತ್ತ ತಿರುಗಿ ನೋಡದೆ ನೇರವಾಗಿ ತಮ್ಮ ದಾರಿ ನಡೆಯುತ್ತಿದ್ದರು. ಯುವಕನು ದಾರಿಯ ಪಕ್ಕದಲ್ಲಿಯೇ ಮಲಗಿರುವುದನ್ನು ಅವರು ನೋಡಲಿಲ್ಲ. ಕೆಲವರು ಒಮ್ಮೆ ಮಾತ್ರ ತಮ್ಮ ದೃಷ್ಟಿಯನ್ನು ಆ ಕಡೆಗೆ ಹರಿಸಿದರೂ ತಮ್ಮ ಆಲೋಚನಾಪ್ರಪಂಚದ ಕಾರ್ಯಭರದಲ್ಲಿ ನಿದ್ರೆ ಹೋಗುವವನನ್ನು ಗಣಿಸಲಿಲ್ಲ; ಹಾಸಿಗೆಯಿಲ್ಲದೆ ಹೊದಿಕೆಯಿಲ್ಲದೆ ನೆಲದ ಮೇಲೆ ಬಿದ್ದುಕೊಂಡು ಎಷ್ಟು ಗಾಢವಾಗಿ ನಿದ್ರಿಸುತ್ತಿರುವನೆಂದು ಕೆಲವರು ನಕ್ಕುಹೋದರು. ಸರ್ವಾಂಗ ವಿಷಭರಿತರಾದ ಹೊಟ್ಟೆಯಕಿಚ್ಚಿನ ಮೊಟ್ಟೆಗಳನೇಕರು ಮುದ್ದುಮಲ್ಲನ ಸುಖನಿದ್ರೆಯನ್ನು ಸಹಿಸಲಾರದವರಾಗಿ ತಮ್ಮ ವಿಷಾಧಿಕ್ಯವನ್ನು ಅವನ ಮೇಲೆ ಕಾರಿಹೋದರು. ಮತ್ತೊಬ್ಬ ನಡುಹರೆಯದವಳು ಅದೇ ದಾರಿಯಲ್ಲಿ ಬರುತ್ತಾ ಮುದ್ದುಮಲ್ಲನನ್ನು ನೋಡಿ, ಯುವಕನು ನಿದ್ರೆಯಲ್ಲಿ ಎಷ್ಟು ಮಹೋಹರನಾಗಿ ಕಾಣುವನೆಂದು ಮನಸ್ಸಿನಲ್ಲಿ ಕೊಂಡಾಡಿಕೊಂಡುಹೋದಳು. ಮದ್ಯಪಾನ ನಿರೋಧಚಳವಳಿಗಾರರ ಪ್ರಮುಖನೊಬ್ಬನೂ ಅದೇ ಮಾರ್ಗವಾಗಿ ಬಂದನು. ನಿದ್ರೆಯಲ್ಲಿ ಮುಳುಗಿದ್ದ ಮುದ್ದುಮಲ್ಲನನ್ನು ನೋಡಿ, ಮೈಮೇಲೆ ಪ್ರಜ್ಞೆಯಿಲ್ಲದೆ ದಾರಿಯಪಕ್ಕದಲ್ಲಿ ಬಿದ್ದಿರುವ ಹೆಂಡಕುಡುಕನೆಂದು ಬಗೆದು, ತನ್ನ ಸಂಜೆಯ ಉಪನ್ಯಾಸಕ್ಕೆ ಇವನೊಬ್ಬ ಒಳ್ಳೆಯ ಉದಾಹರಣೆ ಎಂದುಕೊಂಡು ಮುಂದೆ ನಡೆದನು. ಈ ನಾನಾ ಜನರ ನಾನಾ ರೀತಿಯ ಹೊಗಳಿಕೆ, ತೆಗಳಿಕೆ, ಹಾಸ್ಯ, ಮೆಚ್ಚು, ಅಸಡ್ಡೆ ಎಲ್ಲವೂ ಮುದ್ದುಮಲ್ಲನ ಭಾಗಕ್ಕೆ ಒಂದೇ ಆಗಿದ್ದುವು; ನಿದ್ರಾಕವಚರಕ್ಷಿತನಾದ ಮುದ್ದುಮಲ್ಲನ ಮನಸ್ಸನ್ನು ಯಾವುದೂ ನಾಟುವಂತಿರಲಿಲ್ಲ.

ಮುದ್ದುಮಲ್ಲನು ಕೊಂಚಹೊತ್ತು ಮಾತ್ರ ನಿದ್ದೆ ಹೋಗಿದ್ದನು. ಆಗ ಮಾರ್ಗದಲ್ಲಿ ಒಂದು ಕುದುರೆಯ ಗಾಡಿ ನಿಧಾನವಾಗಿ ಬರುತ್ತಿತ್ತು. ಅವನು ಮಲಗಿದ್ದ ಪ್ರದೇಶದ ಬಳಿಗೆ ಬಂದಾಗ ಇದ್ದಕ್ಕಿದ್ದ ಹಾಗೆಯೇ ಗಾಡಿಯ ಒಂದು ಕಡೆಯ ಕಡಾಣಿ ಕಳಚಿಕೊಂಡು ಚಕ್ರ ಜಾರಿ ಉರುಳಿತು; ಒಡನೆಯೆ ಗಾಡಿ ಕುಕ್ಕರಿಸಿಕೊಂಡುಬಿಟ್ಟಿತು. ಗಾಡಿಯಲ್ಲಿ ಕುಳಿತಿದ್ದ ವರ್ತಕನೂ ಅವನ ಹೆಂಡತಿಯೂ ಗಾಬರಿಗೊಂಡು ಈಚೆಗೆ ಇಳಿದರು. ಗಾಡಿಗೇನೂ ತೊಂದರೆಯಾಗಲಿಲ್ಲ. ವರ್ತಕನ ಮನಸ್ಸಿಗೆ ಸಮಾಧಾನವಾಯಿತು. ಗಾಡಿ ಹೊಡೆಯುವವನೂ ಜವಾನನೂ ಚಕ್ರವನ್ನು ಗಾಡಿಗೆ ಜೋಡಿಸುವುದಕ್ಕೆ ತೊಡಗಿದರು. ಗಾಡಿ ಸಿದ್ಧವಾಗುವವರೆಗೂ ಹೊಂಗೆಯ ಮರದ ನೆರಳಿನಲ್ಲಿ ಕೆಲಕಾಲ ಕುಳಿತು ವಿಶ್ರಮಿಸಿಕೊಳ್ಳೋಣವೆಂದು ವರ್ತಕನು ತನ್ನ ಹೆಂಡತಿಯೊಡನೆ ಅಲ್ಲಿಗೆ ನಡೆದನು. ಅವರು ಹೊಂಗೆಯ ಮರದ ಬಳಿ ಸಾರಿದಾಗ, ಕಲಕಲರವ ಸಂಗೀತವನ್ನು ಹಾಡುತ್ತಿದ್ದ ತೊರೆಯನ್ನೂ ಮರದ

ಕೆಳಗೆ ಮಲಗಿದ್ದ ಮುದ್ದುಮಲ್ಲನನ್ನೂ ಕಂಡರು. ತಿರುಕನಾಗಲಿ, ಧನಿಕನಾಗಲಿ, ಮಗುವಾಗಲಿ, ಮುದುಕನಾಗಲಿ–ನಿದ್ರಾಪರವಶರಾಗಿರುವ ಯಾರನ್ನು ನೋಡಿದರೂ ನಮ್ಮ ಮನಸ್ಸಿನಲ್ಲಿ ಅನಿರ್ವಚನೀಯವಾದೊಂದು ಭಾವನೆ ಮೂಡುತ್ತದೆ; ಆಗ ನಿದ್ರಾಭಂಗಮಾಡುವುದಕ್ಕೆ ಯಾರಿಗೂ ಮನಸ್ಸು ಬರುವುದಿಲ್ಲ. ಯುವಕನಿಗೆ ಎಲ್ಲಿ ಎಚ್ಚರವಾಗುವುದೋ ಎಂದು ವರ್ತಕನು ಸಾಧ್ಯವಾದಷ್ಟು ಮೆಲ್ಲನೆ ಹೆಜ್ಜೆಹಾಕಿದನು; ಸೀರೆ ಗಾಳಿಗೆ ಪಟಪಟ ಎಂದು ಎಲ್ಲಿ ಶಬ್ದ ಮಾಡುವುದೋ ಎಂದು ವರ್ತಕನ ಹೆಂಡತಿ ಸೀರೆಯ ಸೆರಗನ್ನೂ ನೆರಿಯನ್ನೂ ಮುದುರಿಕೊಂಡು ನಡೆದಳು.

"ಎಷ್ಟು ಗಾಢವಾಗಿ ನಿದ್ದೆಹೋಗುತ್ತಿದಾನೆ! ಎಷ್ಟು ನೀಳವಾಗಿ ಉಸಿರೆಳೆಯುತ್ತಾನೆ. ಆಹಾ, ಇಂಥ ನಿದ್ರೆ ಬರುವುದಾದರೆ ನನ್ನ ಅರ್ಧ ಸಂಪತ್ತನ್ನು ಕೊಟ್ಟೇನು. ಸುಖನಿದ್ರೆ ಬರಬೇಕಾದರೆ ಮನಸ್ಸಿಗೆ ಶಾಂತಿ ಇರಬೇಕು, ದೇಹ ಆರೋಗ್ಯವಾಗಿರಬೇಕು. ಅಲ್ಲವೆ?" ಎಂದು ತನ್ನ ಹೆಂಡಿತಯೊಡನೆ ವರ್ತಕನು ಪಿಸುಗುಟ್ಟಿದನು.

"ಮನಸ್ಸಿಗೆ ಎಷ್ಟು ಶಾಂತಿಯಿದ್ದರೂ ದೇಹ ಎಷ್ಟು ಆರೋಗ್ಯವಾಗಿದ್ದರೂ ಇಂಥ ನಿದ್ರೆ ಬರುವುದೆ? ಜೊತೆಗೆ ಯೌವನವೂ ಇರಬೇಕು. ಅಲ್ಲವೆ?" ಎಂದು ಹೆಂಡತಿಯೂ ಮೆಲ್ಲನೆ ನುಡಿದಳು.

"ಹೌದು. ಯೌವನವೂ ಇದ್ದರೆ ಇಂಥ ನಿದ್ರೆಯನ್ನು ಪಡೆಯುವುದು ಸಾಧ್ಯ. ದೇವರ ದಯದಿಂದ ನಮಗೆ ಅಲ್ಪಸ್ವಲ್ಪ ನಿದ್ರೆ ಬಂದರೆ ಅದೇ ಗಾಢನಿದ್ರೆ ಬಂದಂತೆ, ಅಷ್ಟೆ" ಎಂದು ವರ್ತಕನು ಹೇಳಿದನು.

ಹೆಚ್ಚು ಹೊತ್ತು ನೋಡಿದಷ್ಟೂ ಆ ಗಂಡ ಹೆಂಡಿರಿಗೆ ಅಪರಿಚಿತನಾದ ಆ ಯುವಕನಲ್ಲಿ ಹೆಚ್ಚುಹೆಚ್ಚು ಆಸಕ್ತಿ ಹುಟ್ಟಿತು. ಮರದ ನೆರಳೂ ಹಸುರು ತೆರೆಯನ್ನು ಹಾಕಿದಂತಿದ್ದ ಹೊಂಗೆಯ ಮರದ ಜೋಲಾಡುವ ಕೊಂಬೆಗಳೂ ಅವನ ಶಯನಸ್ಥಳವನ್ನು ಏಕಾಂತಗೃಹವನ್ನಾಗಿ ಮಾಡಿದ್ದುವು. ಎಲ್ಲೊ ಒಂದು ಸೂರ್ಯಕಿರಣ ಮರದ ಸಂದಿಯಲ್ಲಿ ನುಸುಳಿಕೊಂಡು ಬಂದು ಅವನ ಮುಖವನ್ನು ಬೆಳಗುತ್ತಿದ್ದುದನ್ನು ವರ್ತಕನ ಹೆಂಡತಿ ನೋಡಿದಳು: ಆಗ, ಮನಸ್ಸಿಲ್ಲದ ಮನಸ್ಸಿನಿಂದ ಒಂದು ಕೊಂಬೆಯನ್ನು ಆ ಕಡೆಗೆ ಜರುಗಿಸಿ, ಕಿರಣ ಅವನ ಮುಖದಮೇಲೆ ಬೀಳದಂತೆ ಅದನ್ನು ತಡೆದಳು. ಅವನಿಗೆ ಇಷ್ಟು ಸಣ್ಣ ಉಪಕಾರ ಮಾಡಿ ತಾನು ಅವನ ತಾಯಿ ಎಂಬಂತೆ ಭಾವಿಸತೊಡಗಿದಳು.

ಕೂಡಲೆ ಅವಳು ತನ್ನ ಗಂಡನಿಗೆ ಪಿಸುಮಾತಿನಲ್ಲಿ ಹೇಳಿದಳು: "ನಿಮ್ಮ

ನಂಟನ ಮಗನನ್ನು ದತ್ತು ತೆಗೆದುಕೊಳ್ಳುವ ಆಸೆ ತಪ್ಪಿ ಹೋದದ್ದರಿಂದ ದೇವರೇ ನಮ್ಮನ್ನು ಇಲ್ಲಿಗೆ ಕರೆದುಕೊಂಡುಬಂದು ಈ ಹುಡುಗನನ್ನು ತೋರಿಸಿರಬೇಕು. ಸತ್ತುಹೋದ ನಮ್ಮ ಮಗು ಶಿವನ ಹಾಗೆಯೇ ಇವನು ಕಾಣುತ್ತಾನೆ ನನ್ನ ಕಣ್ಣಿಗೆ. ಇವನನ್ನು ಎಬ್ಬಿಸೋಣವೆ?"

"ಅದರಿಂದೇನು ಪ್ರಯೋಜನ? ನಿನಗೆಲ್ಲೋ ಹುಚ್ಚು. ಅವನ ಕುಲಗೋತ್ರ ಹಾಗಿರಲಿ, ಅವನ ಗುಣಲೇಶವಾದರೂ ನಮಗೆ ತಿಳಿಯದು" ಎಂದು ವರ್ತಕನು ತನ್ನ ಸಂದೇಹವನ್ನು ಸೂಚಿಸಿದನು.

ವರ್ತಕನ ಹೆಂಡತಿಗೆ ಆ ಹುಡುಗನಲ್ಲಿ ಆಸಕ್ತಿ ಮಾತ್ರ ತಪ್ಪಲಿಲ್ಲ. ಉಕ್ಕಿಬರುತ್ತಿದ್ದ ವಾತ್ಸಲ್ಯಭಾವವನ್ನು ಅದುಮಿ, ಪಿಸುಮಾತಿನಲ್ಲಿ ಅವಳು ಮತ್ತೆ ನುಡಿದಳು: "ಎಷ್ಟು ಸುಂದರವಾದ ಮುಖ! ಏನು ಮುಗ್ಧನಿದ್ರೆ!"

ನಿದ್ದೆ ಮಾಡುತ್ತಿದ್ದ ಮುದ್ದುಮಲ್ಲನಿಗೆ ಮಾತ್ರ ಈ ಪಿಸುಮಾತುಗಳಲ್ಲಿ ಕೊಂಚವಾದರೂ ಆಸಕ್ತಿಯುಂಟಾಗಲಿಲ್ಲ. ಅವುಗಳ ಅರಿವುಂಟಾಗಿದ್ದರೆ ತಾನೆ? ಅವನ ಹೃದಯಸ್ಪಂದನ ಇದ್ದಂತೆಯೇ ಇತ್ತು. ಉಸಿರೆಳೆಯುವುದು ಮೊದಲಿನಂತೆಯೇ ನೀಳವಾಗಿತ್ತು. ಮುಖದ ನೋಟದಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ; ಅವರ ಪಿಸುಮಾತುಗಳು ಕೇಳಿ ಅವುಗಳಲ್ಲಿ ಅವನಿಗೆ ಆಸಕ್ತಿಯುಂಟಾಯಿತೆಂಬುದಕ್ಕೆ ಯಾವ ಕುರುಹೂ ಕಾಣಲಿಲ್ಲ. ವಿಧಿಯಾದರೋ ಅವನ ಬಳಿ ಸಾರಿ, ಅವನ ಮೇಲೆ ಬಾಗಿ, ಸುವರ್ಣ ವೃಷ್ಟಿಯನ್ನು ಕರೆಯುವುದರಲ್ಲಿತ್ತು–ಮುದುಕನಾದ ವರ್ತಕನಿಗೆ ಒಬ್ಬನೇ ಮಗನಿದ್ದನು; ಅವನು ಬಾಲ್ಯದಲ್ಲಿಯೇ ತೀರಿಹೋದನು. ವರ್ತಕನ ಅತುಳೈಶ್ವರ್ಯಕ್ಕೆ ಒಬ್ಬನಾದರೂ ಉತ್ತರಾಧಿಕಾರಿಯಿರಲಿಲ್ಲ. ತನ್ನ ದೂರದ ಸಂಬಂಧಿಯೊಬ್ಬನ ಮಗನನ್ನು ದತ್ತು ತೆಗೆದುಕೊಳ್ಳಬೇಕೆಂದು ತನ್ನ ಮನೆಗೆ ಕರೆತಂದು ಸಾಕಿಕೊಂಡಿದ್ದನು. ಆದರೆ ಅವನ ನಡತೆ ಏಕೋ ವರ್ತಕನಿಗೆ ಸರಿಬೀಳದೆ ಇದ್ದುದರಿಂದ ತನ್ನ ಮನಸ್ಸು ಬದಲಾಯಿಸಿಬಿಟ್ಟಿದ್ದನು. ಆ ಹುಡುಗನೂ ಹೇಳದೆ ಕೇಳದೆ ಎಲ್ಲಿಗೋ ಓಡಿಬಿಟ್ಟಿದ್ದನು. ಇಂಥ ಸಂದರ್ಭದಲ್ಲಿ, ಮಲಗಿ ನಿದ್ದೆಹೋಗುತ್ತಿದ್ದ ಅಪರಿಚಿತನಾದ ಬಡ ಯುವಕನನ್ನೆಬ್ಬಿಸಿ ಅವನನ್ನು ಐಶ್ವರ್ಯವಂತನನ್ನಾಗಿ ಮಾಡುವುದೆಂದರೆ–ಯಾರೂ ನಂಬಲಾಗದ ಮಾತು; ಮಂತ್ರಗಾರನ ಮಾಟಕ್ಕಿಂತಲೂ ವಿಚಿತ್ರವಾದುದು.

"ಅವನನ್ನು ಎಬ್ಬಿಸಬೇಡವೆ?" ಎಂದು ಹೆಂಡತಿ ಮತ್ತೆ ಒತ್ತಿ ಕೇಳಿದಳು.

ಇಷ್ಟು ಹೊತ್ತಿಗೆ, "ಗಾಡಿ ಸಿದ್ಧವಾಗಿದೆ ಸ್ವಾಮಿ" ಎಂದು ಸೇವಕನು ಹಿಂದುಗಡೆಯಿಂದ ಅರಿಕೆಮಾಡಿಕೊಂಡನು. ಗಂಡ ಹೆಂಡಿರಿಬ್ಬರೂ

ಅವಸರವಸರವಾಗಿ ಗಾಡಿಯನ್ನು ಹತ್ತಿದರು. ಗಾಡಿ ಮುಂದಕ್ಕೆ ಹೋಯಿತು. ಇತ್ತ, ಮುದ್ದುಮಲ್ಲನು ಯಾವುದರ ಅರಿವೂ ಇಲ್ಲದೆ ಇನ್ನೂ ನಿದ್ರಾಪರವಶನಾಗಿದ್ದನು.

ಗಾಡಿ ಒಂದೆರಡು ಮೈಲಿಗಳು ಹೋಗಿದ್ದಿರಬಹುದು, ಅಷ್ಟೆ. ಅಷ್ಟು ಹೊತ್ತಿಗೆ ಚೆಲುವೆಯಾದ ಹುಡುಗಿಯೊಬ್ಬಳು ಕುಣಿದಾಡುತ್ತ ಆ ಮಾರ್ಗವಾಗಿ ಬಂದಳು. ಅವಳ ಕುಣಿತದ ಲಯ ಅವಳ ಎಳೆ ಹೃದಯದ ಕುಣಿತದ ಗತಿಯನ್ನು ತೋರಿಸುತ್ತಿದ್ದಿತೋ ಎಂಬಂತಿತ್ತು. ಅಷ್ಟರಲ್ಲಿ ಒಂದು ಬಣ್ಣದ ಚಿಟ್ಟೆ ಹಾರಾಡುತ್ತಾ ಬಂದು ಹುಡುಗಿಯ ಕಣ್ಣಮುಂದೆ ಸುಳಿದಾಡಿತು. ಅವಳದನ್ನು ಅಟ್ಟಿಸಿಕೊಂಡು ಓಡಾಡತೊಡಗಿದಳು. ಅದು ಎಲ್ಲಿ ಸುಳಿದರಲ್ಲಿ ಅದರ ಹಿಂದೆ ಅವಳೂ ಬಿಡದೆ ಹೋಗುತ್ತಿದ್ದಳು. ಚಿಟ್ಟೆ ಹಾರಾಡುತ್ತ ಹಾರಾಡುತ್ತ ಹೊಂಗೆಯ ಮರದಡಿಯನ್ನು ಸೇರಿತು. ಹುಡುಗಿ ಅಲ್ಲಿಗೂ ಅದನ್ನು ಹಿಂಬಾಲಿಸಿದಳು. ಕೊನೆಗೆ, ಚಿಟ್ಟೆ ಮೇಲು ಮೇಲಕ್ಕೆ ಹೋಗಿ ಎಲ್ಲಿಯೋ ಕಣ್ಮರೆಯಾಯಿತು. ಆಗ, ಹೊಂಗೆಯ ಹೂದೊಂಗಲನ್ನು ಮುಸುಕಿದ್ದ ಭೃಂಗಗಳ ಸಂಗೀತ ಕೇಳಿಬಂದು ಅದರಲ್ಲಿ ಅವಳ ಗಮನ ಕೆಲವುಕಾಲ ನಟ್ಟುಹೋಯಿತು. ಅವಳು ಹಾಗೆ ಗಾನವನ್ನಾಲಿಸುತ್ತಿದ್ದಾಗ, ಒಮ್ಮೆ ಗಾಳಿಗೆ ಮರದ ರೆಂಬೆಗಳಲುಗಿ, ದುಂಬಿಗಳೆಲ್ಲವೂ ಹೂದೊಂಗಲನ್ನುಳಿದು ಚೆದರಿ ಹಾರಾಡತೊಡಗಿದುವು. ಹುಡುಗಿ ಬೆದರಿ ಹಿಂದು ಹಿಂದಕ್ಕೆ ಸರಿದುಹೋದಳು. ಹಿಂಜರಿಯುತ್ತ ಹಿಂಜರಿಯುತ್ತ, ಇನ್ನೇನು ಕಾಣದೆ ಮುದ್ದುಮಲ್ಲನ ಮೇಲೆ ಬೀಳಬೇಕು, ಅಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ಹಿಂದಿರುಗಿದಳು; ತೊರೆಯ ಪಕ್ಕದಲ್ಲಿ ಮಲಗಿ ನಿದ್ದೆ ಹೋಗುತ್ತಿದ್ದ ಯುವಕನನ್ನು ಕಂಡು, ಕ್ಷಣಕಾಲ ಅಚಲಳಾಗಿ ನಿಂತಳು. ಕೂಡಲೆ ಲಜ್ಜೆ ಅವಳನ್ನಾವರಿಸಿತು; ಮುಖ ನಸುಗೆಂಪೇರಿತು; ಅವಳ ಎರಡು ಮೃದುಕಪೋಲಗಳಲ್ಲಿಯೂ ಎರಡು ಗುಲಾಬಿಗಳರಳಿದಂತಾದುವು. ಸದ್ದು ಮಾಡದೆ ಬಂದ ದಾರಿಯಲ್ಲಿ ಹಿಂದಿರುಗಬೇಕೆಂದು ಮಾಡಿಕೊಂಡಳು. ಆದರೆ ನಿದ್ರೆ ಹೋಗುತ್ತಿದ್ದ ಯುವಕನಿಗೆ ಒಂದು ಆಕಸ್ಮಿಕ ಅಪಾಯ ಒದಗುವ ಸಂಭವವಿದ್ದುದನ್ನು ನೋಡಿ ನಿಂತಳು. ದುಂಬಿಗಳಲ್ಲೊಂದು ದೊಡ್ಡ ದುಂಬಿ ಮರದೆಲೆಗಳ ನಡುವೆ ಅಲ್ಲಿ ಇಲ್ಲಿ ನುಸುಳಿ, ಹೊಂಬಿಸಿಲ ಹೊನಲಿಗೆ ಚಿಮ್ಮಿ, ಮತ್ತೆ ಬಂದು ನೆರಳಿನಲ್ಲಿ ಮಿಂದು, ಹೀಗೆಯೇ ನಲಿದಾಡುತ್ತಾ ಆಡುತ್ತ ಮುದ್ದುಮಲ್ಲನ ಮುಚ್ಚಿದೆವೆಯಮೇಲೆ ಕುಳಿತುಕೊಳ್ಳಲು ಹವಣಿಸುತ್ತಿತ್ತು. ದುಂಬಿ ಕಚ್ಚಿದರೆ ಕೆಲವು ವೇಳೆ ಬಹಳ ಅಪಾಯಕರವೆಂದು ಆ ಹುಡುಗಿಗೆ ಗೊತ್ತಿತ್ತು. ಅಲ್ಲದೆ, ಎಷ್ಟು ಮುಗ್ಧಳೋ ಅಷ್ಟೂ ಅಷ್ಟು ಸರಳ ಹೃದಯದವಳು ಆ ಹುಡುಗಿ. ಹೀಗಿರುವಾಗ, ಅವಳು ಬೇಗನೆ ಯುವಕನ

ಬಳಿ ಸಾರಿ, ಸೆರಗಿನ ಕೊನೆಯಿಂದ ಬೀಸಿ ದುಂಬಿಯನ್ನು ಓಡಿಸಿದುದರಲ್ಲಿ ಆಶ್ಚರ್ಯವೇನು? ಎಂಥ ಸುಂದರವಾದ ಸನ್ನಿವೇಶ, ಎಷ್ಟು ಮನೋಹರವಾದ ದೃಶ್ಯ! ಈ ಸತ್ಕಾರ್ಯವನ್ನೆಸಗಿ ಅವಳು ಅಲ್ಲಿ ಕ್ಷಣ ಹೊತ್ತು ನಿಂತಳು; ಅವಳ ಎದೆ ಡವಡವನೆ ಬೇಗ ಬೇಗ ಬಡಿಯತೊಡಗಿತು; ಮುಖದಲ್ಲಿ ಮತ್ತೆ ನಸುಗೆಂಪು ಮೂಡಿತು. ಯಾರು ಉಪಕಾರಕ್ಕಾಗಿ ಒಂದು ದುಂಬಿಯೊಡನೆ ಹೋರಾಡಿದಳೊ ಅವನ ಕಡೆಗೆ ಒಮ್ಮೆ ದೃಷ್ಟಿಯನ್ನು ಹರಿಸಿದಳು.

"ಆಹಾ, ಮುಖ ಎಷ್ಟು ಚೆನ್ನಾಗಿದೆ!" ಎಂದುಕೊಂಡಳು. ಅವಳ ಮುಖದ ನಸುಗೆಂಪು ಕಡುಗೆಂಪಾಯಿತು!

ಈ ಸಮಯದಲ್ಲಿ ಅವನಿಗೆ ಸುಖಸ್ವಪ್ನವಾಗಿರಬಾರದೆ? ಸ್ವಪ್ನದಲ್ಲಿ ಅವನು ಈ ಹುಡುಗಿಯನ್ನು ಕಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಕನಸೊಡೆದು ಎಚ್ಚರವಾಗಿದ್ದರೆ ತನ್ನ ಸ್ವಪ್ನಮೂರ್ತಿಯನ್ನು ಜೀವಂತ ಮೂರ್ತಿಯನ್ನಾಗಿ ಕಾಣುತ್ತಿದ್ದನು. ಆದರೆ ಅವನಿಗೆ ಸ್ವಪ್ನಕೂಡ ಆದಂತೆ ತೋರಲಿಲ್ಲ. ಒಂದು ಮೆಲುನಗೆಯಾದರೂ ಅವನ ಮುಖವನ್ನು ಬೆಳಗಲಿಲ್ಲ. ಅವನಿಗೆ ಅವಳ ಸ್ವಪ್ನವಾಗದಿದ್ದರೂ ಅವಳೇನೊ ಬಂದಿರುವಳು. ಈ ಯುವಕನ ಆತ್ಮದ ಕೂಗನ್ನು ಕೇಳಿ ಹುಡುಗಿಯ ಆತ್ಮ ಅವಳನ್ನು ಇಲ್ಲಿಗೆ ಕರೆತಂದಿದೆಯೋ ಎಂಬಂತೆ ಅವಳೀಗ ಬಂದಿರುವಳು. ಅವಳಿಗೆ ತಕ್ಕವನು ಇವನು; ಇವನಿಗೆ ತಕ್ಕವಳು ಆ ಹುಡುಗಿ....ಆದರೆ, ಓಹೊ! ತೊರೆಯ ತಿಳಿನೀರ್ಗನ್ನಡಿಯಲ್ಲಿ ಹೊಳೆಯುತ್ತಿದ್ದ ಅವಳ ಪ್ರತಿರೂಪ ತುಸ ತುಸ ಮರೆಯಾಗುತ್ತಿದೆ; ಅದು ಕಣ್ಮರೆಯಾಗಿಬಿಟ್ಟರೆ ಅದರ ಸುಖಮಯ ಪ್ರಭೆ ಅವನ ಬಾಳಿನಮೇಲೆ ಮತ್ತೆ ಬೆಳಕನ್ನು ಚೆಲ್ಲೀತೆ! ಅವನ ಜೀವವಾಹಿನಿ ಅವಳ ಪ್ರತಿಬಿಂಬದ ಸಂಮಿಳನವಿಲ್ಲದೆಯೇ ಹರಿಯುತ್ತಿರಬೇಕು!

"ಎಷ್ಟು ಗಾಢವಾಗಿ ನಿದ್ರಿಸುತ್ತಿದಾನೆ!" ಎಂದು ತನ್ನಲ್ಲಿ ತಾನು ಹೇಳಿಕೊಂಡಳು ಹುಡುಗಿ.

ಹಾಗೆ ಹೇಳಿದ ಮರುಕ್ಷಣವೇ ಹೊರಟುಹೋದಳು. ಮೊದಲು, ಯುವಕನನ್ನು ಕಾಣುವ ಮುನ್ನ, ಯಾವ ಉಲ್ಲಾಸಪೂರಿತ ಹೃದಯವುಳ್ಳವಳಾಗಿ ಹಕ್ಕಿಯಂತೆ ಹಾರುತ್ತ ಬಂದಳೋ ಆ ಉಲ್ಲಾಸರಹಿತಳಾಗಿ, ಭಾರಹೃದಯದೊಡನೆ ನಿಧಾನವಾಗಿ, ಮೌನವಾಗಿ, ಮನಸ್ಸಿಲ್ಲದ ಮನಸ್ಸಿನಿಂದ ನಡೆದುಹೋದಳು.

ಈ ಹುಡುಗಿ ನೆರೆಯೂರಿನ ಒಬ್ಬ ಗೌಡನ ಮಗಳು. ಗೌಡನಿಗೆ ತೋಟ, ಹೊಲ, ಗದ್ದೆ ಬೇಕಾದಷ್ಟಿದ್ದುವು. ಜೊತೆಗೆ ಸ್ವಲ್ಪ ವ್ಯಾಪಾರವನ್ನೂ ಇಟ್ಟುಕೊಂಡಿದ್ದನು; ಅದರಲ್ಲಿಯೂ ಅಭಿವೃದ್ಧಿ ಹೊಂದುತ್ತಿದ್ದನು. ಅವನು ತನ್ನ ಮಗಳಿಗಾಗಿ ಒಬ್ಬ

ವರನನ್ನು ಹುಡುಕುತಿದ್ದನು. ಮುದ್ದು ಮಲ್ಲನಂಥ ಯುವಕನು ದೊರಕಿದ್ದರೆ ಗೌಡನು ಎಷ್ಟೋ ಹಿಗ್ಗುತ್ತಿದ್ದನು. ಹೀಗಿರುವಾಗ, ಮುದ್ದುಮಲ್ಲನಿಗೆ ಹುಡುಗಿಯ ಪರಿಚಯವಾಗಿದ್ದರೆ ಆ ಪರಿಚಯ ಅನುರಾಗಕ್ಕೆ ತಿರುಗುತ್ತಿತ್ತು; ಆಗ ಅವನು ಗೌಡನ ಬಳಿಗೆ ಕನ್ಯಾರ್ಥಿಯಾಗಿ ಹೋಗಿದ್ದರೆ ಗೌಡನು ಇವನನ್ನು ತಿರಸ್ಕರಿಸುತ್ತಿದ್ದನೆ? ಗೌಡನಿಗೆ ಗಂಡುಮಕ್ಕಳು ಬೇರೆ ಇರಲಿಲ್ಲ. ಮುದ್ದುಮಲ್ಲನ ಪುಣ್ಯಕ್ಕೆ ಎಣೆಯಾವುದಿದ್ದಿತು? ಆದರೆ,–ವಿಧಿ! ಹುಡುಗಿಯನ್ನು ಇನ್ನು ಸ್ವಲ್ಪ ಹೆಚ್ಚಾಗಿ ಯುವಕನ ಬಳಿಗೆ ವಿಧಿ ಒಯ್ದಿದ್ದರೆ? ಆಗ ಅವಳ ನೆರಿ ಅವನ ಕರಸ್ಪರ್ಶನ ಮಾಡಿದ್ದರೆ? ಇಲ್ಲವೆ, ಸೀರೆಯ ಸೆರಗಿನಿಂದ ಅವಳು ದುಂಬಿಯನ್ನೋಡಿಸುವಾಗ ಅದು ಅವನ ಮುಖಕ್ಕೆ ಬಡಿದಿದ್ದರೆ? ಆದರೆ ಅವನಿಗೆ ಏತರ ಅರಿವೂ ಇರಲಿಲ್ಲ.

ಹುಡುಗಿಯಿನ್ನೂ ಕಣ್ಮರೆಯಾಗುವುದಕ್ಕಿಲ್ಲ, ಹೊಂಗೆಯ ಮರದ ಬಳಿಯಿದ್ದ ಪೊದೆಗಳ ಸಂದಿಯಿಂದ ಯಾರೋ ಇಬ್ಬರು ಹಾದು ಬಂದು ಯುವಕನನ್ನು ಕಂಡರು. ಇಬ್ಬರೂ ಕಟ್ಟಾಳುಗಳು; ಅವರ ಮುಖದ ಬಣ್ಣ ಮಸಿಯ ಬಣ್ಣ; ಕಣ್ಣುಗಳು ಕೆಂಪಗೆ ಥಳಥಳಿಸುತ್ತಿದ್ದುವು. ಅವರ ಉಡುಪು ಕೊಳಕೊಳಕಾಗಿದ್ದರೂ ಬೆಲೆ ಬಾಳುವುದೆಂದೇ ಹೇಳಬೇಕು. ಅವರ ಉಡುಪನ್ನು ನೋಡಿ ಬೇರೆ ಅವರು ದರೋಡೆಕಾರರೆಂದು ಹೇಳುವಂತಿರಲಿಲ್ಲ. ಆದರೆ ದರೋಡೆ ಮಾಡುವುದೇ ಅವರ ನಿತ್ಯಜೀವನವಾಗಿದ್ದಿತು. ಅವರಿಬ್ಬರೂ ತಾವು ತಾವು ಸಂಪಾದಿಸಿದ ಒಡವೆ ಪದಾರ್ಥಗಳನ್ನು ಹೀಗೆ ಹಂಚಿಕೊಳ್ಳುತ್ತಿದ್ದರು–ದರೋಡೆಗೆ ಮುಂಚೆ ಇಬ್ಬರೂ ಜೂಜಾಡುವುದು; ಅನಂತರ ಇಬ್ಬರೂ ಸೇರಿ ದರೋಡೆಮಾಡುವುದು; ಸಿಕ್ಕಿದ ಒಡವೆಯನ್ನೆಲ್ಲ ಗೆದ್ದವನು ತೆಗೆದುಕೊಳ್ಳುವುದು. ಈಗಲಾದರೂ ಜೂಜಾಡುವುದಕ್ಕೆಂದೇ ಅವರು ಹೊಂಗೆಯ ಮರದ ಬಳಿಗೆ ಬಂದಿದ್ದರು. ಅಲ್ಲಿ ಒಬ್ಬ ಯುವಕನು ಮಲಗಿರುವನೆಂದು ಅವರಿಗೆ ತಿಳಿದಿರಲಿಲ್ಲ. ಸ್ವಲ್ಪ ಹೊತ್ತಿನಮೇಲೆ ಮುದ್ದುಮಲ್ಲನನ್ನು ಕಂಡರು. ಆದರೆ ಅವನು ನಿದ್ದೆ ಹೋಗುತ್ತಿರುವುದನ್ನು ಕಂಡು ಅವರಿಗೆ ಸಮಾಧಾನವಾಯಿತು. ಅವರಲ್ಲೊಬ್ಬನು ತನ್ನ ಜೊತೆಯವನಿಗೆ ಹೀಗೆ ಪಿಸುಗುಟ್ಟಿದನು:

"ಏ, ನೋಡಿದೆಯಾ, ಅವನ ತಲೆದಸಿಯಲ್ಲಿ ಗಂಟು?"

ಜೊತೆಯವನು ಹಲ್ಲುಕಿರಿದು, ಕಣ್ಣು ಮಿಟುಕಿಸಿ, ತಲೆಯನ್ನು ಅಲ್ಲಾಡಿಸಿದನು.

"ಗಂಟಿನಲ್ಲಿ ಏನಾದರೂ ಇರಲೇಬೇಕು,–ಸ್ವಲ್ಪ ಚಿಲ್ಲರೆ ನಾಣ್ಯ, ಒಂದಿಷ್ಟು ತಿಂಡಿ. ಸಾಲದೆ? ಹೇಗಿದ್ದರೂ ನಮಗೆ ಹೊಟ್ಟೆ ಹಸಿದಿದೆ. ಏನಾದರೂ ಇರಲಿ,

ಒಂದು ಕೈ ನೋಡಿಬಿಡೋಣ, ಏನು ಹೇಳುತ್ತಿ?" ಎಂದು ಜೊತೆಯವನ ಕಡೆಗೆ ತಿರುಗಿದನು ಮೊದಲನೆಯವನು.

"ಅವನು ಎದ್ದರೋ?" ಎಂದು ಜೊತೆಯವನು ಕೊಂಚ ಹಿಂಜರಿದನು. ಮೊದಲನೆಯವನು ಕೆಳದುಟಿಯನ್ನು ಕಚ್ಚಿ, ಸೊಂಟದಿಂದ ಒಂದು ಚೂರಿಯನ್ನು ಹಿಡಿದು ತೋರಿಸಿ, ತಲೆಯಲ್ಲಾಡಿಸಿದನು.

ಆಮೇಲೆ ಅವರಿಬ್ಬರೂ ನಿದ್ದೆ ಮಾಡುತ್ತಿದ್ದ ಮುದ್ದುಮಲ್ಲನ ಬಳಿ ಸಾರಿದರು. ಒಬ್ಬನು ಚೂರಿಯನ್ನು ಅವನೆದೆಗೆ ಗುರಿಯಿಟ್ಟು ಹಿಡಿದಿದ್ದನು; ಆಗ ಮತ್ತೊಬ್ಬನು ಅವನ ತಲೆಕೆಳಗಿನ ಗಂಟನ್ನು ಹುಡುಕ ತೊಡಗಿದನು. ಇಬ್ಬರೂ ಮಲಗಿದ್ದವನನ್ನು ದಿಟ್ಟಿಸಿ ನೋಡುತ್ತಿದ್ದರು. ಹಾಗೆ ನೋಡುತ್ತಿದ್ದಾಗ ಅವರ ಮುಖಗಳು ಶಂಕೆ ಭಯಗಳಿಂದ ವಿಕಾರವಾಗಿ ಸುಕ್ಕುಗಟ್ಟಿಹೋಗಿದ್ದವು. ಆಗ ಮುದ್ದುಮಲ್ಲನೇನಾದರೂ ಎಚ್ಚರವಾಗಿ ಅವರ ಮುಖಗಳನ್ನು ನೋಡಿದ್ದರೆ ಬೆಚ್ಚಿಬೀಳದೆ ಇರುತ್ತಿರಲಿಲ್ಲ. ಆ ಖೂಳರೇನಾದರೂ ಒಮ್ಮೆ ತೊರೆಯ ನೀರ್ಗನ್ನಡಿಯ ಕಡೆಗೆ ತಿರುಗಿ ನೋಡಿದ್ದರೆ, ಅಲ್ಲಿ ಪ್ರತಿಬಿಂಬಿಸಿದ ತಮ್ಮ ಮುಖಗಳನ್ನು ತಾವೇ ಗುರುತು ಹಿಡಿಯಲಾಗುತ್ತಿರಲಿಲ್ಲ; ಅಷ್ಟು ಭೀಕರವಾಗಿದ್ದುವು ಅವರ ಮುಖಗಳು. ಆದರೆ ಮುದ್ದುಮಲ್ಲನು ಮಾತ್ರ ಕದಲದೆ ಮಲಗಿದ್ದನು; ಹಿಂದೆ ಮಗುವಾಗಿದ್ದಾಗ, ಪ್ರಪಂಚದ ಅರಿವಿಲ್ಲದೆ ತನ್ನ ತಾಯಿಯ ತೊಡೆಯಮೇಲೆ ಮಲಗಿ ನಿದ್ರಿಸುತ್ತಿದ್ದಾಗಲೂ ಅವನ ಮುಖ ಇಂದಿನಷ್ಟು ಶಾಂತಭಾವವನ್ನು ತಳೆದಿರಲಿಲ್ಲ.

"ಈ ಗಂಟನ್ನು ಹಾರಿಸಬೇಕಲ್ಲ, ಏನು ಮಾಡವುದು?" ಎಂದು ಮುದ್ದುಮಲ್ಲನ ತಲೆಯ ಬಳಿ ಇದ್ದವನು ಕೇಳಿದನು.

"ಅವನು ಅಲುಗಾಡಿದರೆ, ಇದೋ ಇಲ್ಲಿ...." ಎಂದು ಜೊತೆಯವನು ಚೂರಿಯನ್ನು ತೋರಿಸಿ ಮಲಗಿದ್ದ ಯುವಕನಮೇಲೆ ಬಾಗಿ ನಿಂತನು.

ಆದರೆ, ಈ ಸಮಯಕ್ಕೆ ಸರಿಯಾಗಿ, ತೊರೆಯ ತೀರದ ಪೊದೆಗಳ ಹೊದರಿನಿಂದ, ನೆಲವನ್ನು ಮೂಸಿನೋಡುತ್ತ ಒಂದು ನಾಯಿ ಇವರಿದ್ದ ಸ್ಥಳಕ್ಕೆ ಬಂದು ನಿಂತಿತು. ಮೊದಲು ಇವರಿಬ್ಬರನ್ನೂ ದಿಟ್ಟಿಸಿ ನೋಡಿ, ಮಲಗಿದ್ದವನನ್ನೂ ಒಮ್ಮೆ ನೋಡಿತು; ಬಳಿಕ ತೊರೆಯ ಬಳಿಗೆ ಹೋಗಿ ನೀರು ಕುಡಿಯುತ್ತಾ ನಿಂತುಕೊಂಡಿತು.

ಒಬ್ಬನು ಹೇಳಿದನು: "ಏ, ಹುಷ್! ಈಗ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಾಯಿಯ ಯಜಮಾನನು ಅದರ ಹಿಂದುಗಡೆಯೆ ಎಲ್ಲೊ ಹತ್ತಿರದಲ್ಲೇ ಬರುತ್ತಿರಬೇಕು."

"ಹೌದು; ಸ್ವಲ್ಪ ನೀರು ಕುಡಿದು ಹೊರಟುಹೋಗೋಣ" ಎಂದು ಜೊತೆಯವನು ಒಪ್ಪಿ ನುಡಿದನು.

ಚೂರಿಯನ್ನು ಹಿಡಿದಿದ್ದವನು ಅದನ್ನು ಮತ್ತೆ ಸೊಂಟಕ್ಕೆ ಸೇರಿಸಿದನು. ಇಬ್ಬರೂ ಮಲಗಿದ್ದ ಯುವಕನ ಕಡೆ ಮುಷ್ಟಿಯನ್ನು ತಿರುವಿ, ಕಿಲಕಿಲನೆ ನಕ್ಕು, ದಾರಿಯುದ್ದಕ್ಕೂ ನಗುತ್ತಲೇ ಹೊರಟುಹೋದರು. ತಮ್ಮ ನೀಚಪ್ರಯತ್ನ ಕೈಗೂಡದಿದ್ದರೂ ಸರಿಯೆ, ತಾವು ಯಾರ ಕೈಗೂ ಸಿಕ್ಕಿಬೀಳಲಿಲ್ಲವೆಂಬ ಸಮಾಧಾನದಿಂದಲೊ ಏನೊ, ಅವರು ತೃಪ್ತರಾಗಿ ಹಿಂದಿರುಗಿರಬೇಕು. ಸ್ವಲ್ಪ ಹೊತ್ತಿನೊಳಗಾಗಿ ತಾವು ಕೈಗೊಂಡಿದ್ದ ಕ್ರೂರಕಾರ್ಯದ ವಿಷಯವನ್ನೇ ಅವರು ಮರೆತರು; ತಮ್ಮ ಕೊಲೆಯ ಪ್ರಯತ್ನವನ್ನು ಚಿತ್ರಗುಪ್ತರು ತಮ್ಮ ಪಟ್ಟಿಯಲ್ಲಿ ಬರೆದುಕೊಂಡಿರಬಹುದೆಂಬುದನ್ನು ಅವರು ಯೋಚಿಸಲೂ ಇಲ್ಲ. ಮುದ್ದುಮಲ್ಲನಾದರೊ ಇನ್ನೂ ಸುಖವಾಗಿ ನಿದ್ರಿಸುತ್ತಿದ್ದನು–ಸಾವಿನ ಕರಿನೆರಳು ತನ್ನ ಮೇಲೆ ಕವಿದಾಗ ಅವನಿಗೆ ಅದರ ಅರಿವಿರಲಿಲ್ಲ; ಅದು ಚೆದರಿಹೋಗಿ, ಬಾಳಿನ ಬೆಳಕು ಮತ್ತೆ ಹರಡಿದಾಗ ಅದರ ಅರಿವೂ ಇರಲಿಲ್ಲ.

ಅವನು ಮಲಗಿಯೇ ಇದ್ದನು, ಆದರೆ ಮೊದಲಿನಷ್ಟು ಶಾಂತನಾಗಿ ನಿದ್ರಿಸುತ್ತಿರಲಿಲ್ಲ. ಬಹಳ ಹೊತ್ತು ಬಲುದೂರ ನಡೆದು ಉಂಟಾಗಿದ್ದ ಶರೀರಾಯಾಸ ಒಂದು ಗಂಟೆಯ ಕಾಲದಲ್ಲಿ ಮಾಯವಾಯಿತು. ಈಗ ಅವನು ಸ್ವಲ್ಪ ಚಲಿಸಿದನು, ಎರಡು ಸಲ ಅತ್ತ ಇತ್ತ ಹೊರಳಿದನು–ಒಡನೆಯೇ ತುಟಿಗಳನ್ನು ಅಲುಗಿಸಿದನು, ಆದರೆ ಸದ್ದಿಲ್ಲ; ಬಳಿಕ ತನ್ನಲ್ಲಿ ತಾನು ಏನೋ ಗೊಣಗುಟ್ಟಿದನು, ಸ್ಪಷ್ಟವಾಗಿ ಒಂದೆರಡು ಮಾತನಾಡಿದನು. ಇಷ್ಟು ಹೊತ್ತಿನಮೇಲೆ ಹಗಲುಗನಸು ಕಂಡು ಅದು ಬಲಿಯುವಷ್ಟರಲ್ಲಿ ಒಡೆದಿರಬೇಕು!

ಅಷ್ಟು ಹೊತ್ತಿಗೆ ಬಸ್ಸು ಚೀರುತ್ತ ಬರ್ರನೆ ಬರುತ್ತಿದ್ದಿತು; ಬರುಬರುತ್ತ ಅದರ ಕೂಗಾಟ ಚೀರಾಟ ಹೆಚ್ಚಾಗಿ ಮುದ್ದುಮಲ್ಲನಿಗೆ ಎಚ್ಚರವಾಯಿತು. ಅವನು ಎದ್ದು ಕುಳಿತು ಗಂಟನ್ನು ತೆಗೆದಿಟ್ಟುಕೊಂಡು ಕಣ್ಣುಜ್ಜಿಕೊಳ್ಳುವುದಕ್ಕಿಲ್ಲ, ಆಗಲೇ ಬಸ್ಸು ಹತ್ತು ಮಾರು ದೂರದಲ್ಲಿ ಕಾಣಿಸಿಕೊಂಡಿತು. ಮುದ್ದುಮಲ್ಲನು ಸರ್ರನೆ ದಾರಿಯ ಪಕ್ಕಕ್ಕೆ ಹೋಗಿ ನಿಂತು, 'ಹೇ!' ಎಂದು ಕೂಗಿ ಕೈಯೆತ್ತಿದನು. ಬಸ್ಸು ನಿಂತಿತು. ಅವನ ಬಸ್ಸು ಹತ್ತಿದ ಕೂಡಲೆ ಅದು ಹೊರಟಿತು.

ಎಲ್ಲಿ ಅವನ ಜೀವನವು ಅನಿವಾರ್ಯವೆನ್ನಬಹುದಾದ ಅನೇಕ ಘಟನೆಗಳಿಗೆ ಸಿಲುಕಿಯೂ ಸಿಲುಕದಾಯಿತೋ ಆ ತೊರೆಯ ತೀರದ ಹೊಂಗೆಯ ಮರದಡಿಯನ್ನು ಯುವಕನು ಒಮ್ಮೆಯಾದರೂ ಹಿಂದಿರುಗಿ ನೋಡಲಿಲ್ಲ.

ತಾನಲ್ಲಿ ಮಲಗಿದ್ದ ಒಂದು ಗಂಟೆಯ ಅತ್ಯಲ್ಪ ಕಾಲದೊಳಗಾಗಿ-ಸಿರಿ ತನ್ನ ಸ್ವರ್ಣಪ್ರಭೆಯನ್ನು ತೊರೆಯ ನೀರಿನ ಮೇಲೆ ಚೆಲ್ಲಿತೆಂಬುದನ್ನಾಗಲಿ, ಅದರ ಕಲಕಲರವದೊಡನೆ ಪ್ರೇಮ ನಿಟ್ಟುಸಿರು ಬಿಟ್ಟು ಮರುಗಿತೆಂಬುದನ್ನಾಗಲಿ, ಸಾವು ರಕ್ತವನ್ನು ಚೆಲ್ಲಿ ಅದರ ನೀರನ್ನು ಕದಡುವುದರಲ್ಲಿತ್ತು ಎಂಬುದನ್ನಾಗಲಿ-ಯಾವುದನ್ನೂ ಮುದ್ದುಮಲ್ಲನು ತಿಳಿಯಲಿಲ್ಲ.

* * *

ವಿಚಿತ್ರ ಘಟನಾ ಪರಂಪರೆಗಳೆಷ್ಟೋ ಸಂಭವಿಸಿರುವುದು ಸತ್ಯ; ಆದರೆ ಅವುಗಳ ಅಸ್ಪಷ್ಟ ಪದಗತಿಯ ಸಪ್ಪುಳವೂ ಸಹ ನಮಗೆ ಕೇಳಬರುವುದಿಲ್ಲ.

ಘಟನೆಗಳು ಒಂದು ನಿರ್ದಿಷ್ಟವಾದ ರೀತಿಯಲ್ಲಿ, ಸ್ಪಷ್ಟಗತಿಯಲ್ಲಿ ಸಂಭವಿಸುತ್ತಿದ್ದರೆ ಅವುಗಳ ಅನುಭವದ ಆಧಾರದ ಮೇಲೆ ಮುಂದೆಯೂ ಘಟನೆಗಳು ಹೀಗೆ ಹೀಗೆಯೇ ಒದಗುವುವು ಎಂದು ನಾವು ಹೇಳಲು ಶಕ್ಯವಾಗುತ್ತಿತ್ತು. ಆದರೆ ಎಷ್ಟೋ ಘಟನೆಗಳು ಅನಿರೀಕ್ಷಿತವಾಗಿ ಬಂದು, ನಮ್ಮ ಜೀವನಪಥದಲ್ಲಿ ಅಗೋಚರವಾಗಿ ಹಾದುಹೋಗುವುವು. ಆದರೂ ಇವೆಲ್ಲವೂ ಒಂದು ನಿಯಮಕ್ಕೆ ಒಳಪಟ್ಟಿರುವುದರಿಂದಲೇ ಅಲ್ಲವೇ ಪ್ರಪಂಚದಲ್ಲಿ ಸುವ್ಯವಸ್ಥೆ ನೆಲಸಿರುವುದು? ಹಾಗೆ ನಿಯಮರಹಿತವಾಗಿದ್ದ ಪಕ್ಷದಲ್ಲಿ-ಪ್ರಪಂಚದಲ್ಲಿ ಅವ್ಯವಸ್ಥೆ ನೆಲಸಿ, ಪ್ರಪಂಚದ ಸ್ಥಿತಿ ಎಷ್ಟು ಘೋರವಾಗುತ್ತಿತ್ತು! ಬಾಳು ಎಷ್ಟು ಅಸಹನೀಯವಾಗುತ್ತಿತ್ತು!

೩. ಹೆಬ್ಬಯಕೆಯ ದಾರಿಹೋಕ

ಮಾರ್ಗಶಿರ ಮಾಸದ ಒಂದು ರಾತ್ರಿ ಮನೆಮಂದಿಯೆಲ್ಲ ದೊಡ್ಡ ಅಗ್ಗಿಷ್ಟಿಕೆಯ ಸುತ್ತ ಬೆಂಕಿ ಕಾಯಿಸುತ್ತ ಕುಳಿತಿದ್ದರು; ಶೈಲಶಿಖರದ ಮೇಲೆ ಬೆಳೆದಿದ್ದ ದೊಡ್ಡ ದೊಡ್ಡ ಮರಗಳಿಂದ ಹಿರಿಗಾಳಿಗೆ ಉದಿರಿದ ತರಗೆಲೆಗಳನ್ನೂ ಪುರಲೆಗಳನ್ನೂ ಅವರು ಅಗ್ಗಿಷ್ಟಿಕೆಗೆ ಒಟ್ಟಿದಹಾಗೆಲ್ಲ ಅಗ್ನಿ ಜ್ವಾಲೆ ಮೇಲಮೇಲಕ್ಕೆದ್ದು ಗುಡಿಸಿಲಿನ ಒಳಭಾಗವನ್ನೆಲ್ಲ ತೀವ್ರವಾಗಿ ಬೆಳಗುತ್ತಿತ್ತು. ಗುಡಿಸಿಲಿನ ಒಡೆಯ ಒಡತಿಯರ ಮುಖದಲ್ಲಿ ಪ್ರಶಾಂತವಾದ ಹರ್ಷ ನೆಲಸಿತ್ತು; ಅವರ ಮಕ್ಕಳು ನಗುತ್ತಿದ್ದರು; ಹದಿನೇಳು ವರ್ಷದ ಹಿರಿಮಗಳು ಹರ್ಷದ ಹೂವಿನಂತಿದ್ದಳು; ಮುತ್ತ ಅಜ್ಜಿ ಒಬ್ಬಳು ದೂರದಲ್ಲಿಯೆ ಹಚ್ಚಡವೊಂದಕ್ಕೆ ಕರೆಕಟ್ಟುತ್ತ ಕುಳಿತು, ಹರ್ಷ ಹಣ್ಣಾದಂತೆ ಕಾಣುತ್ತಿದ್ದಳು. ಜನಸಮುದಾಯದಿಂದ ದೂರವಾಗಿದ್ದುಕೊಂಡು ಈ ಕಣಿವೆಯಲ್ಲಿ ಇವರು ಹೃದಯಸಂತುಷ್ಟಿಯನ್ನು ಪಡೆದಿದ್ದರು.

ಮೇಲೆ ಹೇಳಿದ ಸಂಸಾರ ವಾಸಮಾಡುತ್ತಿದ್ದ ಕಣಿವೆಯನ್ನೊಳಗೊಂಡ ಬೆಟ್ಟಗಳ ಗುಂಪನ್ನು ಬೆಳ್ಳಿಬೆಟ್ಟ ಎಂದು ಸುತ್ತಮುತ್ತಿನ ಜನ ಕರೆಯುತ್ತಿದ್ದರು. ಅಲ್ಲಿ ವರ್ಷಗಾಲವೆಲ್ಲ ಗಾಳಿ ಬಿರುಸಾಗಿ ಬೀಸುತ್ತಿದ್ದು, ಚಳಿಗಾಲದಲ್ಲಿ ಮೈ ಕೊರೆಯುವಂತೆ ಬೀಸುತ್ತಿತ್ತು. ಬೆಟ್ಟವನ್ನು ಹಾಯ್ದು ಬಂದ ಗಾಳಿ ತನ್ನ ಕೊರೆಯುವ ಚಳಿಯನ್ನು ಕಣಿವೆಯ ಬಾಯಲ್ಲಿ, ಬೆಟ್ಟದ ತಪ್ಪಲಿನಲ್ಲಿಯೇ ಇದ್ದ ಗುಡಿಸಿಲ ಬಳಿ ಬಿಟ್ಟು ಬಳಿಕ ಕಣಿವೆಯೊಳಕ್ಕೆ ನುಗ್ಗುತ್ತಿತ್ತು. ಆ ಗುಡಿಸಿಲಿನಲ್ಲಿ ವಾಸಿಸುತ್ತಿದ್ದವರು ಚಳಿಗಾಳಿಗೆ ಒಳಗಾಗಿದ್ದುದಲ್ಲದೆ ಅಪಾಯಕರವಾದ ಪ್ರದೇಶದಲ್ಲಿ ನೆಲಸಿದ್ದರು; ಏಕೆಂದರೆ, ಆ ಗುಡಿಸಿಲಿನ ಸಮೀಪದಲ್ಲಿಯೇ ಪರ್ವತಭಾಗ ಕಡಿದಾಗಿ ಎದ್ದುನಿಂತಿತ್ತು; ಅದು ಎಷ್ಟು ಕಡಿದಾಗಿತ್ತೆಂದರೆ, ಅನೇಕವೇಳೆ ನಟ್ಟಿರುಳಿನಲ್ಲಿ ದೊಡ್ಡ ದೊಡ್ಡ ಬಂಡೆಗಳು ಪರ್ವತಾಗ್ರದಿಂದ ಉರುಳಿಬಂದು ಗುಡಿಸಿಲಿನವರನ್ನು ಬೆದರಿಸುತ್ತಿದ್ದುವು.

ಮನೆಯ ಹಿರಿಮಗಳು ಆಗತಾನೆ ಒಂದು ತಿಳಿಹಾಸ್ಯದ ಮಾತನ್ನಾಡಿ ಎಲ್ಲರನ್ನೂ ವಿನೋದದಲ್ಲಿ ಮುಳುಗಿಸಿದ್ದಳು; ಆಗ ಕಣಿವೆಯ ಮುಖದಿಂದ ನುಗ್ಗಿಬಂದ ಗಾಳಿ ಬಾಗಿಲನ್ನು ಕಟಕಟಿಸುತ್ತ ಗೋಳುಕರೆಯ ದನಿಯೊಡನೆ ಗುಡಿಸಿಲ ಬಳಿ ತಂಗಿದಂತೆ ತೋರಿತು. ಗಾಳಿಯ ಚೇಷ್ಟೆಯಲ್ಲಿಯೂ ಅದರ

ದನಿಯಲ್ಲಿಯೂ ಹೊಸಪರಿಯಿಲ್ಲದಿದ್ದರೂ ಅವರು ತುಸುಮಟ್ಟಿಗೆ ಮನಕುಗ್ಗಿದರು. ಆದರೆ ಬಾಗಿಲ ಹೊರಚಿಲಕ ಎಡೆಬಿಡದೆ ಅಲುಗಿದಾಗ ಮನೆಯ ಯಜಮಾನ ಎದ್ದುಹೋಗಿ ಬಾಗಿಲು ತೆಗೆದನು; ಪ್ರಯಾಣಿಕನೊಬ್ಬನು ಒಳಹೊಕ್ಕನು. ಗಾಳಿಯ ನಿಡುಮೊರೆತದಲ್ಲಿ ಪ್ರಯಾಣಿಕನ ಹೆಜ್ಜೆ ಸಪ್ಪುಳವಾಗಲಿ ಅವನು ಮೊದಮೊದಲು ಬಾಗಿಲನ್ನು ಮೆಲ್ಲನೆ ತಟ್ಟಿದ್ದಾಗಲಿ ಒಳಗಿದ್ದವರಿಗೆ ಕೇಳಿಸಲಿಲ್ಲ. ಪ್ರಯಾಣಿಕನ ಹಿಂದೆ ಬಂದ ಗಾಳಿ ಅವನು ಗುಡಿಸಿಲನ್ನು ಹೊಕ್ಕೊಡನೆಯೆ ಹಾಗೆಯೇ ಚೀರುತ್ತ ಮುಂದಕ್ಕೆ ಹೊರಟುಹೋಯಿತು.

ಗುಡಿಸಿಲಿನಲ್ಲಿದ್ದವರು ನಿರ್ಜನಪ್ರದೇಶದಲ್ಲಿಯೆ ವಾಸಿಸುತ್ತಿದ್ದರೂ, ಹೊರಗಿನ ಪ್ರಪಂಚದೊಡನೆ ನಿತ್ಯಸಂಬಂಧವನ್ನು ಇಟ್ಟುಕೊಂಡಿದ್ದರು. ಇವರಿದ್ದ ಕಣಿವೆಯ ಮೂಲಕವಾಗಿಯೇ ಅಕ್ಕಪಕ್ಕದ ಸೀಮೆಗಳ ವ್ಯಾಪಾರ ನಡೆಯುತ್ತಿತ್ತು. ತನ್ನ ಕೈದೊಣ್ಣೆಯಲ್ಲದೆ ಬೇರೆಯ ಜೊತೆಗಾರರಿಲ್ಲದ ಒಬ್ಬೊಂಟಿಗನಾದ ಪ್ರಯಾಣಿಕನು ದಾರಿನಡೆದು ಬೇಸತ್ತು ಬಳಲಿ, ಇನ್ನು ಮುಂದೆ ಹೋದರೆ ಒಂಟಿತನದ ಬೇಸರಿಕೆಯಿಂದ ಬಳಲಿಕೆ ಹೆಚ್ಚಿ ಕಣಿವೆಯ ಕಿಬ್ಬಾಯನ್ನು ದಾಟುವುದಕ್ಕೆ ಮೊದಲೇ ಎಲ್ಲಿ ಕಾಲು ಕುಸಿಯುವುದೋ ಎಂದು ಹೆದರಿ, ಒಂದು ಕ್ಷಣ ಕಾಲೂರಿ ಕುಳಿತು ಒಂದು ಸವಿಮಾತಾಡಿ ಮುಂದೆ ಹೋಗೋಣವೆಂದು ಗುಡಿಸಿಲ ಬಳಿ ನಿಲ್ಲುವನು. ಎತ್ತಿನ ಮೇಲೆ ಹೇರುಹಾಕಿಕೊಂಡು ಸಂತೆಗೆ ಹೋಗುವ ಬಣಜಿಗನು ರಾತ್ರಿ ಈ ಗುಡಿಸಿಲಿನಲ್ಲಿ ತಂಗಿ ಬೆಳಕುಹರೆಯಲು ಮುಂದುವರಿಯುವನು. ಒಂದೊಂದು ವೇಳೆ ಯುವಕರಾದವರೂ ಗುಡಿಸಿಲಿಗೆ ಬರುತ್ತಿದ್ದರು; ಅವರು ಗುಡಿಸಿಲು ಬಿಟ್ಟು ಹೊರಡುವ ಮುನ್ನ, ಮನೆಯ ಯಜಮಾನನ ಹಿರಿಮೆಗಳ ಚೆಲುವಿಗೆ ಮುಗ್ಧರಾಗಿ ನಿಟ್ಟುಸಿರುಬಿಟ್ಟು, ಮನಸ್ಸನ್ನು ಹಿಂದೆ ಬಿಟ್ಟು, ಮುಂದಕ್ಕೆ ಹೊರಡುತ್ತಿದ್ದರು. ಅಂತು ಕಣಿವೆಯ ಕಿಬ್ಬಾಯಲ್ಲಿ ನೆಲಸಿದ್ದ ಗುಡಿಸಿಲು ಒಂದು ಬಗೆಯ ಛತ್ರವಾಗಿ ಪರಿಣಮಿಸಿತ್ತು. ಗುಡಿಸಿಲಿನ ಯಜಮಾನನು ತನ್ನ ನಿವಾಸಕ್ಕೆ ಬಂದವರಿಗೆ, ಅವಶ್ಯಬಿದ್ದರೆ, ಆತಿಥ್ಯವನ್ನೂ ಮಾಡುತ್ತಿದ್ದನು. ಅವನು ಆತಿಥ್ಯ ಮಾಡಲಿ ಬಿಡಲಿ, ಬಂದವರು ತಾವು ತಂದಿದ್ದ ಏನಾದರೂ ಸರಕನ್ನು ಅವನಿಗೆ ಕೊಟ್ಟು ಹೋಗುತ್ತಿದ್ದರು. ಹೀಗೆ ಅವರು ಕೊಡುತ್ತಿದ್ದುದು ತಾವು ತಿಂದ ಒಂದು ತುತ್ತಿನ ಬೆಲೆಯನ್ನಲ್ಲ; ತಮಗೆ ಸಂದ ಆದರ ಸತ್ಕಾರಗಳಿಗೆ ಪ್ರತಿಯಾಗಿ ತಾವು ಅವರಿಗೆ ಸಲ್ಲಿಸಿದ ಕೃತಜ್ಞತೆಯ ಕಾಣಿಕೆ.

ಯಜಮಾನನು ಆಗಂತುಕನೊಬ್ಬನೊಡನೆ ಹಿಂದಿರುಗಿದಾಗ, ತಮ್ಮ ಅದೃಷ್ಟದಲ್ಲಿ ಭಾಗಿಯಾದ ತಮ್ಮ ಬಂಧುವೊಬ್ಬನನ್ನು ಆದರದಿಂದ

ಬರಮಾಡಿಕೊಳ್ಳುವಂತೆ ಮನೆಮಂದಿ ಮಕ್ಕಳೆಲ್ಲರೂ ಎದ್ದುನಿಂತು ಒಟ್ಟುಗೂಡಿದರು.

ಆಗಂತುಕನು ತರುಣ. ನಿರ್ಜನ ಪ್ರದೇಶದಲ್ಲಿ, ಚಳಿಯಲ್ಲಿ, ರಾತ್ರಿಯಲ್ಲಿ, ದೂರದ ದಾರಿಯನ್ನು ನಡೆದುಬಂದ ಬಹಳ ಬಳಲಿದವನಂತೆ ಅವನ ಮುಖ ಮೊದಲು ಒಂದು ವಿಧವಾದ ನಿರಾಶಯುತವಾದ ಖಿನ್ನತೆಯನ್ನು ತಳೆದಿದ್ದಿತು; ಆದರೆ ಮನೆಯವರು ತನ್ನನ್ನು ಆದರ ವಿಶ್ವಾಸಗಳಿಂದ ಬರಮಾಡಿಕೊಂಡುದನ್ನು ಕಂಡ ಕೂಡಲೆ ಅವನ ಮುಖ ಕಳೆಗೂಡಿತು. ಮನೆಯ ಮುದುಕಿ ಏಳಲಾರದೆ ಎದ್ದು ಸಣ್ಣ ಚಾಪೆಯೊಂದನ್ನು ತಂದು ಹಾಸಿದಳು. ಮನೆಯ ಯಜಮಾನ ಆಗಂತುಕ ತರುಣನನ್ನು ಕುಳಿತುಕೊಳ್ಳಿ ಎಂದು ಹೇಳುವಷ್ಟರಲ್ಲಿ ಮನೆಯಾಕೆ ಕಾಲು ತೊಳೆದುಕೊಳ್ಳುವುದಕ್ಕಾಗಿ ಒಂದು ಚೆಂಬು ನೀರನ್ನು ತಂದು ನೀಡಿದಳು; ಸಣ್ಣ ಮಗು ಕುಳಿತೆಡೆಯಲ್ಲಿಯೆ ಎತ್ತಿಕೋ ಎನ್ನುವಂತೆ ತನ್ನ ಪುಟ್ಟ ಕೈಗಳನ್ನು ಚಾಚಿತು; ಇದನ್ನೆಲ್ಲ ನೋಡಿ ತರುಣನ ಹೃದಯ ಚಿಮ್ಮಿತು, ಮನಸ್ಸು ಹಿಗ್ಗಿತು. ಮನೆಯ ಹಿರಿಮಗಳು ಒಮ್ಮೆ ನಾಚಿಕೆಯಿಂದ ತರುಣನ ಕಡೆನೋಡಿ ನಸುನಗೆಯನ್ನು ಬೀರಿದಳು; ತರುಣನಿಗೆ ಅವಳಲ್ಲಿ ಆಗಲೇ ಒಂದು ವಿಧವಾದ ಸರಳವಾದ ಸಲಿಗೆ ಮೊಳೆಯಿತು.

"ಆಹಾ! ಎಷ್ಟು ಬೆಚ್ಚಗಿದೆ ಇಲ್ಲಿ! ಕೆಂಡ ಹೇಗೆ ಕಳಕಳಿಸುತ್ತಿದೆ! ಸಂತೋಷವಾಗಿ ಮಾತನಾಡುವುದಕ್ಕೆ ನಾಲ್ಕು ಜನ ಇದ್ದರೆ ಇಂಥ ರಾತ್ರಿಯಲ್ಲಿ ಬೆಂಕಿ ಕಾಯುವುದು ಸೊಗಸು. ಹೂಹಳ್ಳಿಯಿಂದ ಬರುವಾಗಲೆಲ್ಲ ದಾರಿಯಲ್ಲಿ ಕಣಿವೆಯ ಈ ಕಿಬ್ಬಾಯಿಂದ ಗಾಳಿ ತೂರಿಕೊಂಡು ಬಂದು ಮುಖಕ್ಕೆ ಬಿರುಸಾಗಿ ಹೊಡೆಯುತ್ತಲೆ ಇತ್ತು" ಎಂದು ತರುಣನು ಮಾತಿಗೆ ಮೊದಲುಮಾಡಿದನು.

"ಹಾಗಾದರೆ ಶೈಲಗ್ರಾಮಕ್ಕೆ ಹೊರಟಿರುವಂತೆ ಕಾಣುತ್ತದೆ" ಎಂದು ಹೇಳುತ್ತ ಮನೆಯ ಯಜಮಾನನು, ತರುಣ ಇದುವರೆಗು ಹೆಗಲಮೇಲೆ ಹೊತ್ತಿದ್ದ ಗಂಟುಮೂಟೆಗಳನ್ನು ಕೆಳಗಿಳಿಸಿದನು.

"ಹೌದು; ಶೈಲಗ್ರಾಮಕ್ಕೆ ಹೋಗಬೇಕಾಗಿದೆ. ನಾಳೆ ಮುಂಜಾನೆಯ ಹೊತ್ತಿಗೇ ಅಲ್ಲಿಗೆ ಹೋಗಿ, ಬೆಳಗ್ಗೆ ನಮ್ಮ ಸೋದರಮಾವನನ್ನು ಕಂಡು, ಅಲ್ಲಿಂದ ಮುಂದಕ್ಕೆ ಪ್ರಯಾಣ ಮಾಡಬೇಕಾಗಿತ್ತು. ಆದರೆ ಪ್ರಯಾಣಿಕರ ನಡಿಗೆ ಇಂಥ ದಾರಿಯಲ್ಲಿ ಸ್ವಲ್ಪ ತಳುವುತ್ತದೆ. ಅಲ್ಲದೆ, ನಿಮ್ಮ ಮನೆಯೊಳಗಿನ ಅಗ್ಗಿಷ್ಟಿಕೆಯ ಬೆಳಕು ಕಂಡಿಗಳಲ್ಲಿ ಹೊರಕ್ಕೆ ಕಾಣುತ್ತಿತ್ತು; ಮನೆಯ ಬಾಗಿಲಿಗೆ ಬಂದು ನಿಂತಾಗ ನಿಮ್ಮ ಉಲ್ಲಾಸದ ನಗೆಮಾತುಗಳು ಕೇಳಬಂದುವು. ನನಗಾಗಿಯೇ ನೀವು ಅಗ್ಗಿಷ್ಟಿಕೆ ಹಚ್ಚಿ ಕಾದು ಕುಳಿತಿರುವಂತೆ ಭಾವಿಸಿ ಸಲಿಗೆಯಿಂದ ಬಾಗಿಲು ತಟ್ಟಿದೆ. ಇನ್ನು ಪರವಾಯಿಲ್ಲ.

ನಿಮ್ಮೊಡನೆ ನಾನೂ ಒಬ್ಬ” ಎಂದು ಉತ್ತರ ಕೊಟ್ಟನು.

ಸರಳ ಹೃದಯನಾದ ಆಗಂತುಕ ತರುಣನು ಹೀಗೆ ಹೇಳಿ ಅಗ್ಗಿಷ್ಟಿಕೆಯ ಬಳಿಸಾರಿ ಎಲ್ಲರೊಡನೆ ಕುಳಿತನೊ ಇಲ್ಲವೊ ಆ ಕೂಡಲೆ ಹೊರಗಡೆ ಸದ್ದು ಕೇಳಬಂದಿತು. ಗುಡಿಸಿಲಿನ ಹಿಂದುಗಡೆಯ ಕಡಿದಾದ ಪರ್ವತಾಗ್ರದಿಂದ ದಡದಡನೆ ಇಳಿದುಬರುತ್ತಿದ್ದ ವಿಲಕ್ಷಣ ಹೆಜ್ಜೆ ಸಪ್ಪುಳದಂತೆ ಕೇಳಬಂದು, ಅದು ಗುಡಿಸಿಲನ್ನು ಸಮೀಪಿಸಿದಾಗ ನೆಗೆದಂತೆ ತೋರಿ, ಮುಂದುಗಡೆಯ ಶಿಲಾಪ್ರದೇಶಕ್ಕೆ ಹೊಡೆದು ದ್ವಿಗುಣಿತವಾಗಿ, ನಿಂತಂತೆ ತೋರಿತು. ಮನೆಯವರು ಉಸಿರುಹಿಡಿದು ಮೌನವಾಗಿ ಕುಳಿತರು. ಅವರಿಗೆ ಆ ಸದ್ದು ಹೊಸದೇನೂ ಆಗಿರಲಿಲ್ಲ; ತರುಣನು ಕೂಡ ಸ್ತಬ್ಧನಾದನು.

ಸ್ವಲ್ಪ ಹೊತ್ತಾದ ಮೇಲೆ ಮನೆಯ ಯಜಮಾನ ಉಸಿರಿದನು:

“ಆ ಪುರಾತನ ಪರ್ವತ, ಅದನ್ನು ನಾವು ಮರೆಯದಿರಲಿ ಎಂದು ಎಚ್ಚರಿಕೆ ಕೊಡಲೋಸುಗ, ನಮ್ಮೆಡೆಗೆ ಒಂದು ಕಲ್ಲನ್ನು ಕಳಿಸಿದೆ. ಪರ್ವತ ಒಂದೊಂದು ವೇಳೆ ತಲೆದೂಗುತ್ತದೆ, ಕೆಲವು ವೇಳೆ ಮೈಯದಿರಿಸಿ ಎದ್ದುಬರುವಂತೆ ಬೆದರಿಸುತ್ತದೆ. ಆದರೆ ನಾವು ಹಿಂದಿನಿಂದಲೂ ನೆರೆಯವರಾಗಿದ್ದುಕೊಂಡು ಪರಿಚಯಸ್ಥರಾದ್ದರಿಂದ ಪರಸ್ಪರ ಸಹಾನುಭೂತಿಯಿಂದ ಒಳ್ಳೆಯ ಸಹವಾಸದಲ್ಲಿಯೇ ಇದ್ದೇವೆ. ಒಂದು ವೇಳೆ ಮಿತಿ ಮೀರಿ ನಮ್ಮ ನೆರೆ ಸರಿಬೀಳದೆ ಪರ್ವತಾಗ್ರ ಮುನಿದರೆ ನಮಗೆ ಇಲ್ಲಿಯೇ ಸಮೀಪದಲ್ಲಿ ಒಂದು ಸುರಕ್ಷಿತ ಸ್ಥಳವಿದೆ.”

ಹೀಗೆ ಹೇಳಿ, ಮನೆಯ ಯಜಮಾನ ತರುಣನಿಗೆ ಸ್ವಲ್ಪ ಉಪಾಹಾರನ್ನಿತ್ತನು. ದನಿಯಿಂದ ಮಾರ್ದನಿ ಹೊರಟಾಗ ಮಾರ್ದನಿ ದನಿಯಿಂದ ಬೇರೆಯಾಗಿರುವುದೆ? ಸೌಜನ್ಯ ಸೌಜನ್ಯವನ್ನು ತಾನೆ ಪ್ರಚೋದಿಸೀತು? ಮನೆಯವರೆಲ್ಲರ ಸರಳ ಸ್ವಭಾವವೂ ವಿಶ್ವಾಸದ ನಡೆ ನುಡಿಗಳೂ ತರುಣನ ಸಹಾನುಭೂತಿಯನ್ನು ಸೂರೆಗೊಂಡುವು; ಅವನ ಸ್ವಾಭಾವಿಕ ಸೌಜನ್ಯ ಉಕ್ಕಿ, ಅವನು ಅವರೊಡನೆ ಮನೆಯವನು ಹೇಗೋ ಹಾಗೆ ಸಲಿಗೆಯಿಂದ ವರ್ತಿಸತೊಡಗಿದನು.

ತರುಣ ಅಭಿಮಾನವುಳ್ಳವನು, ಆದರೂ ನಮ್ರ; ಸಿರಿವಂತರೊಡನೆಯೂ ‘ದೊಡ್ಡವರು’ ಎನ್ನಿಸಿಕೊಂಡವರೊಡನೆಯೂ ಬಹು ಬಿಗುಮಾನವುಳ್ಳವನು, ಮಿತವರ್ತನೆಯುಳ್ಳವನು; ಆದರೆ ಬಡವನ ಗುಡಿಸಿಲಿಗೆ ಹೋಗಿ ಅಲ್ಲಿ ಅವನ ಒಡಹುಟ್ಟಿದವನಂತೆ, ಮಗನಂತೆ ಇರುವುದೆಂದರೆ ಅವನಿಗೆ ಸಂತೋಷ.

ಕಣಿವೆಯ ಬಾಯಲ್ಲಿದ್ದ ಈ ಗುಡಿಸಿಲಿನ ಸಂಸಾರದಲ್ಲಿ ಇವನು ಒಂದು ಬಗೆಯ ಹಿತಕರವಾದ ಸರಳವಾದ ಭಾವವನ್ನು ಕಂಡನು; ಅಪಾಯಕರವಾದರೂ

ಮನೋಹರವಾಗಿದ್ದ ಅವರ ನಿವಾಸಸ್ಥಾನದ ವಾತಾವರಣ ಅವರ ಜೀವನದ ಮೇಲೆ ಒಂದು ಪ್ರಭಾವವನ್ನು ಬೀರಿದ್ದಿತು. ತರುಣ ಒಬ್ಬೊಂಟಿಗನಾಗಿ ದೂರದೇಶಗಳಲ್ಲಿ ಸಂಚಾರಮಾಡಿದ್ದನು; ವಾಸ್ತವವಾಗಿ, ಅವನ ಒಟ್ಟು ಜೀವನವೇ ಒಂದು ಒಂಟಿದಾರಿಯಾಗಿದ್ದಿತು. ತನ್ನ ಬಾಳದಾರಿಯಲ್ಲಿ ಅವನು ಏಕಾಂಗಿ. ತನ್ನ ಬುದ್ಧಿಯೇ ತನಗಿತ್ತ ಎಚ್ಚರಿಕೆಯು ಮೇರೆಗೆ ಅವನು ತನ್ನ ಸಂಗಡಿಗರಾಗಬಹುದಾಗಿದ್ದ ಕೆಲವರಿಂದ ದೂರವಾಗಿದ್ದನು. ಈ ಸಂಸಾರದವರು ಸಹ, ಅಷ್ಟೊಂದು ದಯಾಳುಗಳೂ ಉದಾರಿಗಳೂ ಆಗಿದ್ದರೂ, ತಾವು ಒಕ್ಕಟ್ಟಾಗಿ ಭಾವಿಸಿ ಒಟ್ಟು ಪ್ರಪಂಚದಿಂದ ತಾವು ಬೇರೆ ಎಂದು ತಿಳಿದಿದ್ದರು. ಪ್ರತಿಯೊಂದು ಸಂಸಾರದಲ್ಲಿಯೂ ಅದರದರ ವಿಶಿಷ್ಟತೆಗೆ ಒಂದು ಬೆಲೆಯಿದೆ; ಆ ವಿಶಿಷ್ಟ ಸ್ಥಳದಲ್ಲಿ ಹೊರಗಿನವನು ಹೊಕ್ಕು ನೆಲಸಲಾರನು. ಆದರೆ, ಈ ಸಂಜೆ, ವಿದ್ಯಾವಂತನೂ ವಿನಯಶೀಲನೂ ಆದ ತರುಣನ ಹೃದಯದಲ್ಲಿ ಭವಿಷ್ಯಸೂಚಕವಾದ ಸಹಾನುಭೂತಿಯೊಂದು ಜನಿಸಿ, ಅವನ ಹೃದಯದ ಭಾವವೆಲ್ಲವನ್ನೂ ಆ ಸರಳಜೀವಿಗಳ ಎದುರು ಹೊರಹರಿಯುವಂತೆ ಮಾಡಿತು; ಅವರುಗಳು ಅದೇ ಬಿಚ್ಚು ಮನದಿಂದ ಅವನಿಗೆ ಉತ್ತರ ಕೊಡಲು ತಡೆಗಟ್ಟಿತು. ಹೀಗೆ ಅವನಿಗೂ ಅವರಿಗೂ ಒಂದು ಸಂಬಂಧ ಕಲ್ಪಿತವಾಯಿತು. ಒಡಹುಟ್ಟಿಗಿಂತಲೂ ಸಮಾನವಾದ ಒಂದೇ ಅದೃಷ್ಟಕ್ಕೆ ಸಿಲುಕಿರುವುದು ಹೆಚ್ಚು ಆತ್ಮೀಯವಾದ ಬಂಧನವಲ್ಲವೆ?

ಈ ತರುಣನ ಜೀವಿತದ ರಹಸ್ಯಲಕ್ಷಣವೆಂದರೆ ಅವಲ್ಲಿ ನೆಲಸಿದ್ದ ಒಂದು ಬಗೆಯ ಉನ್ನತವಾದ ಮಹತ್ವಾಕಾಂಕ್ಷೆ: ಅದು ಭೋಗ್ಯವಸ್ತುಗಳ ಇಚ್ಛೆಯಲ್ಲ, ಐಶ್ವರ್ಯಸಂಪಾದನೆಯ ಅಭಿಲಾಷೆಯಲ್ಲ, ಸುಖ ಜೀವನದ ಬಯಕೆಯಲ್ಲ; ಅವನ ಹೃದಯದ ಆ ಹೆಬ್ಬಯಕೆಗೆ ಒಂದು ಸ್ಪಷ್ಟವಾದ ಗುರಿಯಿರಲಿಲ್ಲ; ಮಂತ್ರಿಪದವಿ ಹೊಂದಬೇಕೆಂದಾಗಲಿ, ಯೋಧವೀರನಾಗಬೇಕೆಂದಾಗಲಿ, ವರ್ತಕ ಶ್ರೇಷ್ಠನಾಗಬೇಕೆಂದಾಗಲಿ, ಕವಿವರ್ಯನಾಗಬೇಕೆಂದಾಗಲಿ, ಗಾನವಿಶಾರದನಾಗಬೇಕೆಂದಾಗಲಿ–ಯಾವ ಒಂದು ಉದ್ದೇಶವನ್ನು ಸಾಧಿಸಲೂ ಅವನು ಇನ್ನೂ ಮನೋ ನಿಶ್ಚಯಮಾಡಿಕೊಂಡಿರಲಿಲ್ಲ. ಅಷ್ಟೇಕೆ, ಎಲ್ಲರಂತೆ ಸಾಮಾನ್ಯ ಜೀವನವನ್ನು ಬದುಕಲು ಅವನು ಸಿದ್ಧನಾಗಿದ್ದನು. ತಾನೊಬ್ಬ ಆದರ್ಶಪುರುಷನಾಗಬೇಕೆಂಬ ಆಕಾಂಕ್ಷೆ ಅವನಿಗಿರಲಿಲ್ಲ; ಆದರೆ, ಸತ್ತಮೇಲೆ ಎಲ್ಲರಂತೆ ಅಪ್ರಸಿದ್ಧನಾಗಿ ಮಣ್ಣುಗೂಡಲು ಅವನು ಸಿದ್ದನಾಗಿರಲಿಲ್ಲ. ಅವನ ಬಗೆಬಾನಿನಲ್ಲಿ ಮೂಡಿದ ಆಶಾಬಿಂಬ ದಿನ ದಿನಕ್ಕೆ ಚಂದ್ರನಂತೆ ಬೆಳೆಯುತ್ತಿತ್ತು;

ನೆಚ್ಚುಗೆಯೆಂಬ ಕೈಗನ್ನಡಿ ಹಿಡಿದು, ಆ ಬಿಂಬ ಕೈಸೇರಿದಂತೆಯೇ ಅವನು ಭಾವಿಸಿದ್ದನು; ಆ ನೆಚ್ಚುಗೆಯ ನೆಲೆಯಲ್ಲಿ ಸ್ಥಿರವಾಗಿದ್ದ ಆ ಆಶಾಬಿಂಬ ಅವನ ಜೀವನಪಥವನ್ನು ಬೆಳಗುವುದಾಗಿತ್ತು. ಕೀರ್ತಿ ಕಿರಣಗಳು ಈಗ ಅವನನ್ನು ಬೆಳಗದಿರಬಹುದು. ಬದುಕಿದ್ದಾಗ ಅವನನ್ನು ಯಾರೂ ಗಣಿಸಿದ್ದಿರಲಾರರು; ಅವನು ಅಜ್ಞಾತನೆ; ಆದರೆ, ಕಾಲ ಕಳೆದಂತೆ, ಕೀಳುಬಯಕೆಯವರ ನೆನಪುಗಳನ್ನು ಅಳಿಸಿ, ಹೆಬ್ಬಯಕೆಯುವನಾದ ಇವನನ್ನು ಬೆಳಗಿ–"ಇದೋ ನೋಡಿ: ಮಹತ್ವಾಕಾಂಕ್ಷೆಯಿಂದ ಪ್ರಚೋದಿತನಾಗಿ ಅಲ್ಪಾಕಾಂಕ್ಷೆಗಳಿಗೆ ಒಳಗಾಗದಿದ್ದ ಮಹತ್ವಾಕಾಂಕ್ಷಿ ಇವನು; ಇವನ ಬಾಳಬಟ್ಟೆಯನ್ನು ನೋಡಿ,–ಅವನ ಜೀವಿತದಲ್ಲಿ ಕಿರಿದಾಗಿದ್ದು ಮಬ್ಬಿನಲ್ಲಿ ಮುಸುಕಿ ಅನಂತತೆಯಲ್ಲಿ ಅನಂತ ವಿಸ್ತಾರವನ್ನು ಹೊಂದಿ ಮಹತ್ವದ ಪದವಿಗೆ ಅವನನ್ನು ಒಯ್ದಿದೆ"–ಎಂದು ಕಾಲಪುರುಷನು ಸಾರನೆ?

ಮಹಾಕಾರ್ಯಗಳನ್ನು ಸಾಧಿಸಿದವರು ಮಹಾಪುರುಷರಾಗುವರು; ಯಶಸ್ಕಾಯರಾಗುವರು; ಅವರು ಸತ್ತರೂ ಅವರು ಮಾಡಿರುವ ಕಾರ್ಯಗಳು ಅವರ ಶಾಸನಗಳಾಗಿ ನಿಲ್ಲುವುವು, ಜನದ ಬಾಯಲ್ಲಿ ಅವರ ಹೆಸರು ನಿಲ್ಲುವುದು. ಆದರೆ, ಮಹಾಕಾರ್ಯವನ್ನೆಸಗಿ ತನ್ನ ಹೆಸರನ್ನು ಚಿರಸ್ಥಾಯಿಯನ್ನಾಗಿ ಮಾಡಬೇಕೆಂಬ ಮಹತ್ವಾಕಾಂಕ್ಷೆಯಿದ್ದು, ಅವನು ಪ್ರತಿಕೂಲವಿಧಿಯ ಬಲಿಯಾದರೆ ಆ ಮಹತ್ವಾಕಾಂಕ್ಷೆಯಿದ್ದು, ಅವನು ಪ್ರತಿಕೂಲವಿಧಿಯ ಬಲಿಯಾದರೆ ಆ ಮಹತ್ವಾಕಾಂಕ್ಷಿಯ ಹೆಸರು ಉಳಿಯುವುದೆ? ದಾನ ಮಾಡಬೇಕೆಂಬ ಆಂತರಿಕ ಪ್ರೇರಣೆಯಿಲ್ಲದೆ ಕೀರ್ತಿ ಕಾಮದಿಂದ ದ್ರವ್ಯದಾನಮಾಡಿದರೂ ದಾನಿಯೆನಿಸುವನು; ದಾನಮಾಡಬೇಕೆಂಬ ಸಹಜವಾದ ಉತ್ಕಟೇಚ್ಛೆಯಿದ್ದರೂ ದ್ರವ್ಯವಿಲ್ಲದ ಕಾರಣ ದಾನಮಾಡದವನು ದಾನಿಯೆನಿಸನು. ಕಾಲಪುರುಷನೂ ಪಕ್ಷಪಾತಿಯೆ?

ಉತ್ಸಾಹದ ಭರದಿಂದ ಆಗಂತುಕ ತರುಣನ ಕೆನ್ನೆ ಕೆಂಪೇರಿ ಉರಿಗೆಂಡದ ಕೆಂಬೆಳಕಿನಲ್ಲಿ ಇಮ್ಮಡಿಯಾಗಿ ಬೆಳಗುತ್ತಿತ್ತು, ಕಣ್ಣುಗಳು ಹೊಳೆಯುತ್ತಿದ್ದುವು. ಅವನು ಮಾತನಾಡಲುಪಕ್ರಮಿಸಿದನು: "ನಾನು ಇನ್ನೂ ಏನನ್ನೂ ಮಾಡಿಲ್ಲ. ನಾನು ನಾಳೆಯೇ ಮಡಿದರೆ ನನ್ನ ವಿಷಯದಲ್ಲಿ ನೀವು ತಿಳಿದಿರುವಷ್ಟು ಕೂಡ ಇತರರು ತಿಳಿಯರು. ಹೆಸರಿಲ್ಲದ ತರುಣನೊಬ್ಬನು ಇರುಳಿನಲ್ಲಿ ಕಣಿವೆಯ ಮಾರ್ಗವಾಗಿ ಇಲ್ಲಿಗೆ ಬಂದನು ಎಂದಾಗಲಿ, ಇಲ್ಲಿ ತಂಗಿ ನಿಮ್ಮ ಮುಂದೆ ಹೃದಯವನ್ನು ಬಿಚ್ಚಿ ತೋರಿದನೆಂದಾಗಲಿ, ಬೆಳಗಾಗ ಎದ್ದು ಹೊರಟುಹೋದನೆಂದಾಗಲಿ–ಇಷ್ಟು ಮಾತ್ರವಾದರೂ ನೀವು ಹೊರತು ಇನ್ನು ಯಾರೂ ಅರಿಯರು. ಆ ದಾರಿಹೋಕ ಯಾರು? ಅವನು ಎಲ್ಲಿಂದ ಬಂದನು?

ಬಂದ ದಾರಿ ಯಾವುದು? ಹೋದ ದಾರಿ ಯಾವುದು? ಎಲ್ಲಿಗೆ ಹೋದನು? ಎಂದು ಯಾರೂ ಕೇಳರು. ನನ್ನ ಉದ್ದೇಶವನ್ನು ಸಾಧಿಸಿದಲ್ಲದೆ ನಾನು ಸಾಯಲಾರೆ. ಆಮೇಲೆ ಬರಲಿ ಸಾವು! ನನ್ನ ಸ್ಮಾರಕವನ್ನು ನಾನು ನಿರ್ಮಿಸಿರುವೆನು!'

ತರುಣನ ಈ ಭಾವನೆಗಳು ಅವರಿಗೆ ತೀರ ಹೊಸವಾಗಿದ್ದುವು. ಆದರೆ ಅವನ ಮಾತುಗಳಲ್ಲಿ ಹೊರಹೊಮ್ಮಿದ ಸಹಜವಾದ ಉದ್ವೇಗವನ್ನೂ ತೀವ್ರಾಸಕ್ತಿಯನ್ನೂ ಕಂಡು ಆ ಭಾವನೆಗಳನ್ನು ಅವರು ಅರಿತುಕೊಳ್ಳಲು ಬಲ್ಲವರಾಗಿದ್ದರು. ತಾನು ಮೈ ಮರೆತು ಹಾಗೆ ಉತ್ಸಾಹದಿಂದ ಮಾತನಾಡಿದ್ದು ಹಾಸ್ಯಾಸ್ಪದವಾಗಿರಬಹುದೆಂದು ಊಹಿಸಿ, ತರುಣನು ಲಜ್ಜೆಗೊಂಡನು.

ಒಡನೆ ಹಿರಿಹುಡುಗಿಯೊಡನೆ ಹೀಗೆ ನುಡಿದನು:

"ನನ್ನನ್ನು ನೋಡಿ ನಗುತ್ತೀಯೆ ನೀನು. ಸುತ್ತಮುತ್ತಣ ಜನರು ದೂರ ನಿಂತು ನೋಡಿದರೆ ಮಾತ್ರ ಕಾಣುವಂತೆ, ಹಿಮವತ್ಪರ್ವತಾಗ್ರದ ಮಂಜುಗಲ್ಲಿನ ಮೇಲೆ ಶೀತಲ ಶ್ವೇತಶಿಲಾಮೂರ್ತಿಯಾಗುವಂತೆ ಬರಿ ಬತ್ತಲೆಯಾಗಿ ನಿಲ್ಲಹೋಗಬೇಕೆನ್ನುವುದು ನನ್ನ ಮಹತ್ವಾಕಾಂಕ್ಷೆ ಎಂದು ಯೋಚಿಸುವೆಯಲ್ಲವೆ ನೀನು? ಹಾಸ್ಯಾಸ್ಪದವಾದರೂ ಚಿಂತೆಯಿಲ್ಲ, ಆ ಕೆಲಸ ಮಾಡತಕ್ಕುದ್ದೇ ಸರಿ. ಹಿಮವತ್ಪರ್ವತಾಗ್ರ! ಶೀತಲ ಶ್ವೇತ ಶಿಲಾಮೂರ್ತಿಯಾಗಿ ಶಾಶ್ವತವಾಗಿ ನಿಲ್ಲಲು ಎಂತಹ ಪಾವನಪೀಠಾಗ್ರ!"

ಹುಡುಗಿಯೂ ಲಜ್ಜೆಗೊಂಡು ಮೆಲುಮಾತಿನಲ್ಲಿ ಇಂತುಸಿರಿದಳು: "ನಮ್ಮ ವಿಷಯವಾಗಿ ಯಾರೂ ಯೋಚಿಸಲೂ ಬೇಕಾಗಿಲ್ಲ; ತೃಪ್ತಿಯಿಂದ ಹಾಯಾಗಿ ಈ ಬೆಂಕಿಯ ಮುಂದೆ ಕುಳಿತಿರುವುದು ಲೇಸು.'

ಕ್ಷಣಹೊತ್ತು ಆಲೋಚನೆಯಲ್ಲಿ ಮುಳುಗಿ ಎದ್ದು, ಯಜಮಾನ–"ಈ ತರುಣ ಹೇಳುವುದು ಒಂದು ರೀತಿಯಲ್ಲಿ ಸಹಜವಾಗಿದೆ ಎಂದು ನನಗೆ ತೋರುತ್ತದೆ. ನಾನು ಆ ಕಡೆಗೆ ಮನಸ್ಸು ಕೊಟ್ಟಿದ್ದರೆ ನಾನೂ ಹಾಗೆಯೇ ಭಾವಿಸುತ್ತಿದ್ದೆ" ಎಂದು ನಿಲ್ಲಿಸಿ, ತನ್ನ ಹೆಂಡತಿಯನ್ನು ಕುರಿತು, ಮತ್ತೆ ನುಡಿದನು: "ಅಹಾ! ಎಷ್ಟು ವಿಚಿತ್ರವಾಗಿದೆ. ಇವನ ಮಾತುಗಳನ್ನು ಕೇಳಿ ನನ್ನ ತಲೆಯಲ್ಲಿ ಏನೇನೋ ಭಾವನೆಗಳು ಹುಟ್ಟುತ್ತಿವೆ. ಅವು ಎಂದಿಗೂ ಕಾರ್ಯರೂಪದಲ್ಲಿ ಪರಿಣಾಮಗೊಳ್ಳದಿರಬಹುದು. ಆದರೂ...."

ಅಷ್ಟರಲ್ಲಿ ಅವನ ಹೆಂಡತಿ–"ಅವು ನಡೆದರೂ ನಡೆಯಬಹುದು. ನಾನು ಸಾಯುವೆನೆಂದೂ ನಾನು ಸತ್ತಮೇಲೆ ಏನು ಮಾಡುವುದೆಂದೂ ಯೋಚಿಸುತ್ತಿರುವಿರೇನು?" ಎಂದು ವಿನೋದದಿಂದ ಕೇಳಿದಳು.

ವಿನೋದವೆಂದರಿತರೂ ಈ ನುಡಿಗಳು ಅವನ ಹೃದಯವನ್ನು ಕರಗಿಸಿದುವು. "ಇಲ್ಲ, ಇಲ್ಲ. ನೀನು ಇಂಥ ಅಶುಭವನ್ನಾಡಬಹುದೆ? ನಿನ್ನನ್ನು ಬಿಟ್ಟು ನಾನು ಇರಬಲ್ಲೆನೆ? ನಿನ್ನ ಸಾವನ್ನು ನಾನು ಬಗೆಯುವುದಾದರೆ ಜೊತೆಯಲ್ಲಿ ನನ್ನದನ್ನೂ ಕೋರುತ್ತೇನೆ. ಸಾವು ನಿನ್ನನ್ನು ಅಪ್ಪುವುದಾದರೆ ನನ್ನನ್ನೂ ಅಪ್ಪಲೇಬೇಕು. ನಾನು ಹಾಗೆ ಯೋಚಿಸುತ್ತಿರಲಿಲ್ಲ. ಈ ಬೆಟ್ಟಗಳ ತಪ್ಪಲಿನಲ್ಲಿಯೇ ಯಾವುದಾದರೂ ಹಳ್ಳಿಪಳ್ಳಿಗಳ ನಡುವೆ ನಮಗೆ ಒಂದು ಸೊಗಸಾದ ಹೊಲವಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಯೋಚಿಸುತ್ತಿದ್ದೆ. ಅಷ್ಟುಮಟ್ಟಿನ ಹೊಲವಿದ್ದು, ಎಲ್ಲರೂ ನನ್ನನ್ನು ಗೌಡರೇ ಗೌಡರೇ ಎಂದು ಕರೆಯುತ್ತಿದ್ದರೆ ನಾನೂ ಒಬ್ಬ ಗಣ್ಯಮನುಷ್ಯನಾಗಿರುತ್ತಿದ್ದೆ. ಹಳ್ಳಿಪಳ್ಳಿಯ ಜನರಿಗೆಲ್ಲ ನಾನೇ ಮುಂದಾಳು, ನಾನೇ ನ್ಯಾಯವಾದಿ, ನನ್ನ ಮಾತೇ ವೇದವಾಕ್ಯ. ಹೀಗೆ ಬಾಳಿ ಬದುಕಿ ಮುದುಕನಾಗಿ, ನೀನೂ ಮುತ್ತಜ್ಜಿಯಾಗಿ ಮಕ್ಕಳು ಮೊಮ್ಮಕ್ಕಳು ಬಿಟ್ಟು ಸಾಯುವುದನ್ನು ನೋಡಿ, ಸಂತೋಷದಿಂದ ಸಾಯುತ್ತಿದ್ದೆ. ನನ್ನ ಹೆಸರಾಗಿ ಒಂದೆರಡು ಗುಡಿಗೋಪುರಗಳನ್ನು ಕಟ್ಟಿಸಿ, ದೇವರಿಗೆ ನನ್ನ ಕಾಣಿಕೆ ಸಲ್ಲಿಸಿ ಸಾಯುತ್ತಿದ್ದೆ. ಅಂದು, ನಾಡಜನರೆಲ್ಲ ನನ್ನನ್ನು ಕುರಿತು –'ಎಂಥ ಮನುಷ್ಯ! ಎಂಥ ಸತ್ಯವಂತ, ಎಂಥ ದಯಾಳು, ನಮ್ಮ ತಂದೆಯ ಹಾಗೆ ಇದ್ದ! ಇದು ಅವನು ಕಟ್ಟಿಸಿದ ಗುಡಿ; ಗುಡಿಯ ಶಾಸನದಲ್ಲಿ ಇದೋ ಅವನ ಹೆಸರು'–ಎಂದು ನನ್ನನ್ನು ನೆನೆಯುವರು. ಜನರ ಬಾಯಲ್ಲಿ ನನ್ನ ಹೆಸರು ನಿಲ್ಲುವುದು. ನನಗೆ ಹೊಲ, ಗದ್ದೆ, ಹೆಸರು ಏನೂ ಇಲ್ಲದಿರುವುದರಿಂದ ನಾನು ಹೇಳಿದ್ದು ಜಂಬದ ಮಾತಾಗಲಾರದು; ಬರಿಬಯಕೆ, ಅಲ್ಲವೆ?" ಎಂದು ತರುಣನ ಕಡೆಗೆ ತಿರುಗಿ ನೋಡಿದನು.

ಆಗಂತುಕನು–"ನೋಡಿದಿರೊ! ಸ್ಮಾರಕವೊಂದನ್ನು ಬಯಸುವುದು ಮನುಷ್ಯನಿಗೆ ಸಹಜವಾದ ಇಚ್ಛೆ. ಆ ಸ್ಮಾರಕ ಒಂದು ಬೋಳುಗಲ್ಲಾದರೂ ಸರಿಯೆ, ಅಮೃತಶಿಲಾನಿರ್ಮಿತವಾದ ಬೃಂದಾವನವಾದರೂ ಸರಿಯೆ; ಅಥವಾ ಇವೆಲ್ಲಕ್ಕಿಂತ ಮೇಲಾಗಿ, ಜನಜನಾಂಗದ ನೆನಪಿನಲ್ಲಾದರೂ ಸರಿಯೆ–ಮನುಷ್ಯನು ತನ್ನ ಹೆಸರು ಶಾಶ್ವತವಾಗಿರಲಿ ಎಂದು ಕೋರುವುದು ಸಹಜ" ಎಂದು ಉತ್ಸಾಹದಿಂದ ಹೇಳಿದನು.

"ಈ ರಾತ್ರಿ ಏನೋ ವಿಚಿತ್ರವಾಗಿದ್ದೇವೆ. ನಾವು ಕನಸು ಕಾಣುತ್ತಿಲ್ಲ. ಆದರೂ ಕನಸುಕಾಣುತ್ತಿರುವಂತೆ ಮಾತಾಡುತ್ತಿದ್ದೇವೆ. ಮನೆಮಂದಿಯ ಮನಸ್ಸೆಲ್ಲ ಹೀಗೆ ಚೆದರುವುದು ಕಟ್ಟದೆಂದು ಹೇಳುತ್ತಾರೆ. ನೋಡಿ, ಆ ಮಕ್ಕಳ ಮಾತನ್ನ ಆಲಿಸಿ" ಎಂದಳು ಮನೆಯ ಯಜಮಾನಿತಿ. ಅವಳ ಕಣ್ಣುಗಳಲ್ಲಿ ಒಂದೆರಡು ಹನಿಗಳು ಊರಿದ್ದುವು.

ಎಲ್ಲರೂ ಕಿವಿಗೊಟ್ಟು ಆಲಿಸಿದರು. ಚಿಕ್ಕಮಕ್ಕಳನ್ನೆಲ್ಲಾ ಪಕ್ಕದ ಒಂದು ಕೋಣೆಯಲ್ಲಿ ಮಲಗಿಸಿತ್ತು; ಆ ಕೋಣೆಗೂ ಇವರೆಲ್ಲ ಕುಳಿತಿದ್ದ ಎಡೆಗೂ ನಡುವೆಯಿದ್ದ ಬಾಗಿಲ ಕಡೆ ತೆರೆದಿದ್ದುದರಿಂದ ಆ ಮಕ್ಕಳು ತಮ್ಮ ತಮ್ಮಲ್ಲಿ ಬಿಡದೆ ಮಾತನಾಡುವುದು ಇವರಿಗೆ ಕೇಳುವಂತಿತ್ತು. ಬೆಂಕಿ ಕಾಯುತ್ತ ಮಾತನಾಡುತ್ತಿದ್ದ ದೊಡ್ಡವರ ಸೋಂಕು ಈ ಎಳೆಯರಿಗೂ ಅಂಟಿದ್ದಂತೆ ತೋರಿತು. ತಾವು ಬೆಳೆದು ದೊಡ್ಡವರಾದಾಗ ತಾನು ಇದು ಮಾಡುತ್ತೇನೆ ತಾನು ಅದು ಮಾಡುತ್ತೇನೆ ಎಂದು ಹುಚ್ಚುಬಯಕೆಗಳನ್ನು ಬಯಸುವುದರಲ್ಲಿ ಪೈಪೋಟಿ ಮಾಡುತ್ತಿದ್ದರು. ಕೊನೆಗೆ, ಒಬ್ಬ ಚಿಕ್ಕ ಹುಡುಗ ತನ್ನ ಅಣ್ಣತಮ್ಮಂದಿರು ಅಕ್ಕತಂಗಿಯರೊಡನೆ ಹೇಳುವುದು ಬಿಟ್ಟು ಅಮ್ಮನನ್ನು ಕೂಗಿ ಹೇಳಿದನು:

"ಅಮ್ಮಾ, ನನಗೆ ಹೀಗೆ ಬಯಕೆಯಾಗುತ್ತಮ್ಮಾ: ನೀನು, ಅಪ್ಪ, ಅಜ್ಜಿ, ಅಕ್ಕ, ನಮ್ಮ ಮನೆಗೆ ಬಂದಿದ್ದಾರಲ್ಲ, ಇವರೂ ಕೂಡ–ಎಲ್ಲರೂ ಈಗಲೆ ಹೋಗಿ, ಅಲ್ಲಿ ಮೇಲಿನಿಂದ ನೀರು ಬೀಳುವುದಿಲ್ಲವೆ, ಅದರ ಕೆಳಗೆ ಕುಳಿತು ಸ್ನಾನಮಾಡಿ ನೀರು ಕುಡಿದುಕೊಂಡು ಬರೋಣ ಕಣಮ್ಮ. ಎಷ್ಟು ದಿವಸದಿಂದ ಹೇಳುತ ಇದ್ದೀಯಮ್ಮ, ನನ್ನ ಅಲ್ಲಿಗೆ ಕರೆದುಕೊಂಡು ಹೋಗುತೀನಿ ಅಂತ."

ಮಗುವಿನ ಈ ಹುಚ್ಚುಬಯಕೆಗೆ ಎಲ್ಲರೂ ನಕ್ಕರು. ಬೆಚ್ಚಗೆ ಮನೆಯೊಳಗೆ ಇರುವವರನ್ನು ಹೊರಗೆ ಚಳಿಗೆ ಎಳೆದುಕೊಂಡು ಹೋಗಿ, ಕಣಿವೆಯಲ್ಲಿದ್ದ ಒಂದು ಸಣ್ಣ ಜಲಪಾತದ ಕೆಳಗೆ ಕುಳಿತು ಆ ನಡುರಾತ್ರಿಯಲ್ಲಿ ಸ್ನಾನಮಾಡಿ ನೀರು ಕುಡಿಯುವುದೆಂದರೆ ಯಾರಿಗೆ ನಗು ಬರದು! ಹುಡುಗ ಹಾಗೆ ಹೇಳಿದ ಕ್ಷಣದಲ್ಲಿ, ಹೊರಗೆ ದಾರಿಯಲ್ಲಿ ಒಂದು ಗಾಡಿ ಹರಿದುಬಂದು ಬಾಗಿಲ ಮುಂದೆ ನಿಂತಂತಾಯಿತು. ಗಾಡಿಯಲ್ಲಿ ಎರಡು ಮೂರು ಮಂದಿ ಇದ್ದಂತೆ ತೋರಿತು; ಅವರು ದನಿಗೂಡಿಸಿ ಮನಬಂದಂತೆ ಹಾಡುತ್ತ ಉಲ್ಲಾಸಪಡುತ್ತಿದ್ದರು; ಅವರ ಹಾಡಿನ ನೀಳ್ದನಿ ಗುಹೆಗಹ್ವರಗಳಲ್ಲಿ ಹೋಗಿ ತಾಗಿ ಮರುದನಿಗೈದು ಗುಡಿಸಿಲಿನೊಳಗಿದ್ದವರಿಗೆ ನೂರ್ಮಡಿಯಾಗಿ ಕೇಳಿಸುತ್ತಿತ್ತು. ಅವರು ಒಮ್ಮೆ ನಡುವೆ ಹಾಡನ್ನು ನಿಲ್ಲಿಸಿದರು: ಪಯಣವನ್ನು ಮುಂದುವರಿಸುವುದೆ, ಇಲ್ಲದೆ ಹೋದರೆ ರಾತ್ರಿ ಗುಡಿಸಿಲಿನಲ್ಲಿ ತಂಗುವುದೆ ಎಂದು ಅವರು ಆಲೋಚಿಸುತ್ತಿದ್ದಂತೆ ತೋರಿತು.

"ಅಪ್ಪ, ಅವರು ನಿನ್ನ ಹೆಸರು ಹಿಡಿದು ಕೂಗುತ್ತಿದ್ದಾರೆ" ಎಂದಳು ಹುಡುಗಿ.

ಆದರೆ ಅವರು ತನ್ನ ಹೆಸರು ಹಿಡಿದು ಕೂಗಿದರೇ ಎಂದು ಯಜಮಾನನಿಗೆ ಸಂದೇಹವಾಯಿತು. ಯಾರೂ ಕೂಗಿದಂತೆ ಅವನಿಗೆ ಕೇಳಿಸಿರಲಿಲ್ಲ. ನಿಜವಾಗಿ ಅವರು ಕೂಗಿರುವುದಾದರೆ ಮತ್ತೊಮ್ಮೆ ಕೂಗುವರು, ಬಾಗಿಲು ತಟ್ಟುವರು–

ಎಂದುಕೊಂಡು ಯಜಮಾನ ಸುಮ್ಮನಾದನು. ಆದರೆ ಮತ್ತೆ ಯಾರೂ ಕೂಗಿದಂತಾಗಲಿಲ್ಲ. ಗಾಡಿ ಮುಂದಕ್ಕೆ ಉರುಳುತ್ತ ಹೊರಟ ಸದ್ದು ಕೇಳಿತು. ಗಾಡಿಯಲ್ಲಿದ್ದವರು ಇನ್ನೂ ಹಾಡುತ್ತ ಕೇಕೆ ಹಾಕುತ್ತಿದ್ದರು. ಬರುಬರುತ್ತ ಅವರ ಶಬ್ದ ಕಡಮೆಯಾಗುತ್ತ ಬಂದಿತು.

ಹುಡುಗ ಮತ್ತೆ ಹೇಳಿದನು: "ಅಮ್ಮಾ, ಆ ಗಾಡಿಯವರನ್ನು ಕೂಗಿ ನಿಲ್ಲಿಸಿದ್ದರೆ ಚೆನ್ನಾಗಿತ್ತು. ನಾನು ಹೇಳಿದೆನಲ್ಲ, ಅಲ್ಲಿಗೆ ಸ್ನಾನಕ್ಕೆ ಹೋಗುವುದಕ್ಕೆ ಅವರು ಗಾಡಿಯ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದರು, ಗಾಡಿ ಆ ಕಡೆಯೇ ಹೋಗುತ್ತಿದೆ ಅಲ್ಲವೆ ಅಮ್ಮ?"

''ಸುಮ್ಮನೆ ಮಲಗಿಕೊಳ್ಳಪ್ಪ'' ಎಂದಳು ತಾಯಿ. ರಾತ್ರಿ ಹೊರಹೊರಡಬೇಕೆಂದು ಹೇಳುತ್ತಿದ್ದ ಆ ಹುಡುಗನ ಹುಚ್ಚುಬಯಕೆಗೆ ಮತ್ತೊಮ್ಮೆ ಎಲ್ಲರೂ ನಕ್ಕರು.

ಆದರೆ ಮನೆಯ ಹಿರಿಹುಡುಗಿ ನಗಲಿಲ್ಲ, ಸುಮ್ಮನಿದ್ದಳು. ಅವಳ ಮುಖದ ಮೇಲೆ ಚಿಂತೆಯ ಮಬ್ಬು ಮುಸುಕಿದಂತಿತ್ತು. ಉರಿಯುತ್ತಿದ್ದ ಬೆಂಕಿಯನ್ನು ಏನೊ ಒಂದು ವಿಧವಾದ ಅರ್ಥವಿಲ್ಲದ ದೃಷ್ಟಿಯಿಂದ ನೋಡುತ್ತಿದ್ದಳು. ಇದ್ದಕ್ಕಿದ್ದಂತೆ ನಡುಗಿದಳು; ಒಮ್ಮೆ ನೀಳವಾಗಿ ಉಸಿರೆಳೆದುಕೊಂಡು ನೀಳವಾಗಿ ಉಸಿರುಬಿಟ್ಟಳು. ಒಡನೆಯೆ ಎಚ್ಚರಗೊಂಡಂತೆ ಸುತ್ತಲೂ ತಿರುಗಿ ನೋಡಿದಳು; ತನ್ನ ಹೃದಯದ ಭಾವನೆಯನ್ನು ಯಾರಾದರೂ ಗ್ರಹಿಸಿದರೋ ಏನೋ ಒಂದು ತಿಳಿಯಬೇಕೆಂಬಂತೆ ಎಲ್ಲರ ಕಡೆಗೂ ಒಮ್ಮೊಮ್ಮೆ ತಿರುಗಿ ನೋಡಿದಳು, ಲಜ್ಜೆಗೊಂಡಳು. ಆಗಂತುಕನ ಕಡೆ ತಿರುಗಿದಾಗ, "ಏನು ಯೋಚಿಸುತ್ತಿದ್ದೆ ನೀನು?" ಎಂದು ಅವನು ಕೇಳಿದನು.

"ಏನೂ ಇಲ್ಲ, ಏನೋ ಯೋಚಿಸುತ್ತ ಇದ್ದಕ್ಕಿದ್ದಂತೆ ನಾನು ಒಂಟಿಯಾಗಿದ್ದಂತೆ ತೋರಿತು. ಸುತ್ತಲೂ ತಿರುಗಿ ನೋಡಿದೆ. ಎಲ್ಲರ ನಡುವೆ ಕುಳಿತು ಒಂಟಿಯಾಗಿರುವಂತೆ ತೋರಿದ್ದಕ್ಕಾಗಿ ನನಗೆ ನಾಚಿಕೆಯಾಯಿತು" ಎಂದು ತಲೆ ತಗ್ಗಿಸಿಕೊಂಡು, ಲಜ್ಜೆಯಿಂದ ನಗುತ್ತ ಹೇಳಿದಳು.

"ಓಹೋ! ನೀನು ಒಂಟಿಯಾಗಿರುವಂತೆ ನಿನಗೆ ತೋರಿತೇನು? ಇನ್ನೊಬ್ಬರ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ತಿಳಿಯುವ ಶಕ್ತಿ ನನಗೆ ಎಂದಿನಿಂದಲೂ ಇದೆ. ನಿನ್ನ ಮನಸ್ಸಿನ ಗುಟ್ಟನ್ನು ಒಡೆದು ಹೇಳಲೆ? ಬೆಂಕಿಯ ಮುಂದೆ ಕುಳಿತಿರಲು ಎಲ್ಲಿಯ ಚಳಿ, ಎಲ್ಲಿಯ ನಡುಕ? ತಾಯಿತಂದೆಗಳ ಬಳಿ ಕುಳಿತು, ಒಂಟಿತನದ ಭಾವನೆಯೇಕೆ? ಈ ಭಾವನೆಯ ಅರ್ಥವನ್ನು ಬಿಡಿಸಿ ಹೇಳಲೆ?"

"ಹುಡುಗಿಯಾದವಳು ತನ್ನ ಮನಸ್ಸನ್ನು ಮಾತಿನಿಂದ ತಿಳಿಸುವಳೆ? ಮಾತುಗಳಲ್ಲಿ ತಿಳಿಸಿದ ಆ ಭಾವನೆ ಎಂದಿಗೂ ಹುಡುಗಿಯ ಭಾವನೆಯಾಗಿರಲಾರದು" ಎಂದು ಆ ಮಲೆನಾಡ ಕನ್ನೆ ನಗುತ್ತ ಹೇಳಿದಳು, ಅವನ ಕಡೆ ತಿರುಗದೆ.

ಇದಿಷ್ಟನ್ನೂ ಆಗಂತುಕನೂ ಆ ಹುಡುಗಿಯೂ ತಮ್ಮತಮ್ಮಲ್ಲಿ ಹೇಳಿಕೊಂಡರು. ಅವರಲ್ಲಿ ಪರಸ್ಪರ ಅನುರಾಗ ಮೊಳೆಯುತ್ತಿದ್ದಂತೆ ತೋರುತ್ತದೆ; ಜಡವಾದ ಈ ಭೂಮಿಯ ಮೇಲೆ ಅದು ಪುಷ್ಪಿತವಾಗಲಾರದು, ಸ್ವರ್ಗದಲ್ಲಿ ಮಾತ್ರ ಪುಷ್ಪಿತವಾಗಿ ಫಲ ಬಿಡತಕ್ಕದ್ದು ಎನ್ನುವಷ್ಟು ಶುದ್ಧವಾಗಿತ್ತು ಅವರ ಅನುರಾಗದ ಭಾವನೆ. ಆಗಂತುಕನಲ್ಲಿ ನೆಲಸಿದಂಥ ಸೌಮ್ಯ ಗಾಂಭೀರ್ಯ ಯಾವ ಹೆಣ್ಣಿಗಾದರೂ ಸೊಗಸೆ; ಸ್ವಾಭಿಮಾನವುಳ್ಳ ಭಾವುಕನೊಬ್ಬನ ಹೃದಯವನ್ನು ಇಂಥ ಸರಳ ಬಾಲೆಯೊಬ್ಬಳು ಮುಗ್ಧಗೊಳಿಸುವುದೂ ಸಹಜವೆ.

ಆದರೆ, ಅವರು ಹೀಗೆ ಮೆಲ್ಲನೆ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿರುವಾಗ, ಕನ್ನೆಯೊಬ್ಬಳ ಸಹಜ ಲಜ್ಜಾಮನೋವೃತ್ತಿಯನ್ನೂ ಅವಳ ಶಾಂತವದನದ ಮೇಲೆ ಆಡುತ್ತಿದ್ದ ಸುಖಸ್ಪರ್ಶಿತವಾದ ಚಿಂತಾತರಂಗಗಳನ್ನೂ ಅವನು ಈಕ್ಷಿಸುತ್ತಿದ್ದಾಗ,– ಇದ್ದಕ್ಕಿದ್ದಂತೆ ಗಾಳಿ ಕಣಿವೆಯ ಬಾಯಲ್ಲಿ ನುಗ್ಗಿ ಚೀರಿತು! ಅದರ ಚೀರಾಟ ಕರ್ಕಶವಾಗಿತ್ತು; ಗೋಳು ಕರೆಯ ದನಿ ಅಸಹ್ಯವಾಗಿತ್ತು. ಇಷ್ಟುಹೊತ್ತಿಗೆ ಅಗ್ಗಿಷ್ಟಿಕೆಯ ಕೆಂಡದ ರಾಶಿಯ ಮೇಲೆ ಬೂದಿ ಮುಚ್ಚುತ್ತ ಬಂದಿದ್ದು, ಗುಡಿಸಿಲಿನೊಳಗೆ ಬೆಳಕು ಕಡಮೆಯಾಗಿತ್ತು. ಗಾಳಿಯ ಈ ದನಿ ಕೇಳಬರಲು ಬೆಂಕಿಯಾರಿ ಕತ್ತಲೆ ತುಂಬಿದಂತೆ ಆಯಿತು. ಮನೆಯ ಯಜಮಾನ ಕೆಂಡವನ್ನು ಕೆದರಿ, ಬೂದಿಯನ್ನು ಉರುಬಿ, ಇನ್ನಷ್ಟು ಕಟ್ಟಿಗೆ ಹಾಕಿ ಉರಿ ಮಾಡಿದನು. ಬೆಂಕಿ ಮತ್ತೊಮ್ಮೆ ಕೆಂಬೆಳಕನ್ನು ಬೀರುತ್ತ ಕಳಕಳಿಸತೊಡಗಿತು. ಮನೆಮಂದಿಯ ಮನಸ್ಸೆಲ್ಲ ತಿಳಿದಂತೆ ಅವರ ಮುಖಗಳು ಸಮಾಧಾನದಿಂದ ಕೂಡಿ ಮತ್ತೆ ಗೆಲವಾದುವು. ಬೆಂಕಿಯ ಬೆಳಕು ಅವರ ಮುಖವನ್ನು ಬೆಳಗಿ, ಹಿತವಾದ ಶಾಖದಿಂದ ಎಲ್ಲರನ್ನೂ ಹುರಿದುಂಬಿಸುತ್ತಿತ್ತು. ಅಲ್ಲಿ ಹಾಸಿಗೆಯಲ್ಲಿ ಮಲಗಿದ್ದ ಮಕ್ಕಳ ಮುಖಗಳು ಕೆಂಬೆಳಕಿನಲ್ಲಿ ಮಾವಿನ ಚಿಗುರಿನಂತೆ ಹೊಳೆಯುತ್ತಿದ್ದುವು; ಇತ್ತ ಯಜಮಾನ ಮತ್ತು ಅವನ ಹೆಂಡತಿ–ಒಬ್ಬರಿಗೊಬ್ಬರು ಆಸರೆ ಎಂಬಂತೆ ಪಕ್ಕಪಕ್ಕದಲ್ಲಿ ಕುಳಿತಿದ್ದರು; ಇವರಿಬ್ಬರ ಪಕ್ಕದಲ್ಲಿ ಅವರ ಹಿರಿಮಗಳು; ಅವಳ ಕೆಲದಲ್ಲಿ ಹೆಬ್ಬಯಕೆಯ ದಾರಿಹೋಕ, ಮನೆಯ ಅಭ್ಯಾಗತ; ಒಕ್ಕಡೆ, ಹೆಚ್ಚು ಬೆಚ್ಚಗಿರುವ ಕಡೆ, ಹಚ್ಚಡಕ್ಕೆ ಇನ್ನೂ ಕರೆಕಟ್ಟುತ್ತ ಮೌನವಾಗಿ ಕುಳಿತಿದ್ದ ಅಜ್ಜಿ.

ಅಜ್ಜಿ ಮುಖವನ್ನೆತ್ತಿದಳು; ಆದರೂ ಅವಳ ಕೈಬೆರಳುಗಳು ತಮ್ಮ ಕೆಲಸವನ್ನು ತಾವು ಮಾಡುತ್ತಿದ್ದುವು. ಇವಳು ಏನು ಹೇಳಲಿರುವಳೋ ಎಂದು ಎಲ್ಲರೂ ಕುತೂಹಲಗೊಂಡರು. ಅಜ್ಜಿ ಮಾತನಾಡ ತೊಡಗಿದಳು:

"ಚಿಕ್ಕವರಂತೆ ಮುದುಕರಿಗೂ ಅವರವರ ಬಯಕೆಗಳಿರುತ್ತವೆ. ನೀವೆಲ್ಲ ಮನಸ್ಸಿಗೆ ಬಂದಂತೆ ಬಯಸುತ್ತ ಗಾಳಿಗೋಪುರ ಕಟ್ಟುತ್ತ ಇರುವುದನ್ನು ನೋಡಿ ನನ್ನ ಮನಸ್ಸೂ ಎತ್ತೆತ್ತಲೋ ಹರಿದುಹೋಗುತ್ತಿದೆ. ಇವತ್ತೋ ನಾಳೆಯೋ ಕಣ್ಣುಮುಚ್ಚಿಕೊಳ್ಳುವ ಮುದುಕಿಗೆ ಏನು ಬಯಕೆ ಎಂದು ಅನ್ನಿಸಬಹುದು. ಆದರೆ, ಮಕ್ಕಳಿರಾ, ನಿಮಗೆ ಹೇಳುವತನಕ ನನ್ನ ಮನಸ್ಸಿಗೆ ನೆಮ್ಮದಿಯಿರದು."

"ಅದೇನು ಅದು?" ಎಂದು ಅವಳ ಮಗನೂ ಸೊಸೆಯೂ ಒಟ್ಟಿಗೆ ಕೇಳಿದರು.

ಆ ಮುದುಕಿ ಅವರಿಗೆ ಒಂದು ಸಂಗತಿಯನ್ನು ಹೇಳತೊಡಗಿದಳು; ತಾನು ಹೇಳುವುದರಲ್ಲಿ ಏನೋ ಒಂದು ರಹಸ್ಯವಿದೆಯೆನ್ನುವಂತೆ ಅವಳು ಪಿಸುಮಾತುಗಳನ್ನಾಡತೊಡಗಲು, ಅವರು ಅವಳ ಹತ್ತಿರ ಹತ್ತಿರ ಸರಿದು ಕುಳಿತರು. ತಾನು ಸತ್ತರೆ ತನ್ನ ಮದುವೆಯಲ್ಲಿ ಉಟ್ಟಿದ್ದ ಪಟ್ಟೆಯ ಸೀರೆಯನ್ನೇ ತನಗೆ ಉಡಿಸಿ, ತನ್ನ ಮುಂದಲೆಕೂದಲನ್ನು ಸರಿಮಾಡಿ, ತನ್ನ ಗಂಡನನ್ನು ಹೂಳಿರುವಲ್ಲಿಯೇ ಹಳ್ಳತೆಗೆದು ತನ್ನನ್ನು ಹೂಳಬೇಕೆಂದೂ, ತನ್ನ ಗಂಡ ತನಗಾಗಿ ಅಲ್ಲಿ ಕಾದಿರುವನೆಂದೂ ಹೇಳಿದಳು. ಎಲ್ಲರಿಗೂ ಆಶ್ಚರ್ಯವಾಯಿತು ಈ ನುಡಿಗಳನ್ನು ಕೇಳಿ. ಮುದುಕಿ ಮುಂದುವರಿಸಿದಳು: "ಅಚ್ಚರಿಯೇಕೆ ಕಂದಗಳಿರಾ! ನನ್ನ ಯಜಮಾನರು ಕನಸಿನಲ್ಲಿ ಬಂದು ಹಾಗೆ ಹೇಳಿಹೋದರು ನಿನ್ನೆಯ ರಾತ್ರಿ. ನನಗೆ ನೀವು ಆ ಸೀರೆಯನ್ನು ಉಡಿಸದಿದ್ದರೆ ಅವರು ನನ್ನನ್ನು ಬಳಿಗೇ ಸೇರಿಸರು. ಆದ್ದರಿಂದ ನಾನು ಹೇಳಿದಹಾಗೆ ಕೇಳಿ. ನಾನು ಸತ್ತಾಗ ನನ್ನ ಪಟ್ಟೆಯ ಸೀರೆ ಉಡಿಸಿ, ಜರತಾರಿಯ ಕುಪ್ಪಸವನ್ನು ತೊಡಿಸಿ, ಅವನ್ನು ನನ್ನ ಆ ಪೆಟ್ಟಿಗೆಯಲ್ಲಿ ಇಟ್ಟಿದ್ದೇನೆ. ನನ್ನ ಮುಂದಲೆಕೂದಲನ್ನು ಬಾಚುವುದನ್ನು ಮಾತ್ರ ಖಂಡಿತ ಮರೆಯಬೇಡಿ."

"ಹಾಗೆಲ್ಲ ಅನ್ನಬೇಡ ಅಜ್ಜಿ!" ಎಂದು ಕುಗ್ಗಿದ ದನಿಯಲ್ಲಿ ಮೊಮ್ಮಗಳು ಹೇಳಿದಳು.

"ಯಾಕೆ ಕೊರಗುತ್ತೀಯಮ್ಮ?" ಎಂದು ಮುದುಕಿ ಸಂತೋಷಚಿತ್ತಳಾಗಿಯೇ ಮುಂದುವರಿಸಿದಳು: "ಯಾಕೆ ಕೊರಗುತೀಯಮ್ಮ? ನಾನು ಒಂದಲ್ಲ ಒಂದು ದಿನ ಸಾಯಬೇಕು. ನೀವು ಚಿರಕಾಲ ಬಾಳಿ. ನಾನು ಸತ್ತಾಗ ಮಾತ್ರ ನನ್ನನ್ನು

ಅವರು ನೋಡುವಂತಿರಬೇಕು. ನಾನು ನಗುನಗುತ್ತಲೇ ಸಾಯುತ್ತೇನೆ. ನನ್ನನ್ನು ಹೂಳಿದಮೇಲೆ ಒಮ್ಮೆ ಕನ್ನಡಿ ಹಿಡಿದು ನನ್ನ ಮುಖ ತೋರಿಸಿ ನನಗೆ, ಗೆಲುವಾಗಿದ್ದೇನೆಯೋ ನೋಡಿಕೊಳ್ಳುತ್ತೇನೆ. ನೀನೆ ತೋರಿಸುತ್ತೀಯ ಅಮ್ಮ ಕನ್ನಡಿಯನ್ನ? ನಿನಗೆ ಹೆದರಿಕೆಯಾದರೆ ಬೇಡ?" ಎಂದು ಮೊಮ್ಮಗಳ ಕಡೆಗೆ ತಿರುಗಿ ಕೇಳಿದಳು.

"ಹೆದರಿಕೆಯೇಕೆ ಅಜ್ಜಿ? ಒಂದಲ್ಲ ಒಂದು ದಿನ ನೀನು ಸಾಯುವಂತೆ ನಾವೆಲ್ಲ ಸಾಯಲೇಬೇಕು" ಎಂದಳು ಮುಗುದೆ ಕನ್ನೆ.

ಆಗಂತುಕನು–ಎಲ್ಲರಿಗೂ ಕೇಳುವಂತೆ, ಆದರೂ ತನಗೆ ತಾನೇ ಹೇಳಿಕೊಳ್ಳುವಂತೆ ಉಸಿರಿದನು:

"ಆಹಾ! ಮುದುಕರು ದೊಡ್ಡವರು ಹುಡುಗರೆನ್ನದೆ ಎಲ್ಲರೂ ಸಾವಿನ ಕನಸು ಕಾಣುತ್ತಿದ್ದೇವೆ; ಸಾವಿನ ಮುಂದಿನ ಬದುಕನ್ನು ಬಗೆಯುತ್ತಿದ್ದೇವೆ; ಗೋರಿಕಲ್ಲುಗಳನ್ನು ನೆನೆಯುತ್ತಿದ್ದೇವೆ. ಹಡಗು ಮುಳುಗುತ್ತಿರುವಾಗ, ಸಾವಿನ ಸುಳಿಯಲ್ಲಿ ಸಿಕ್ಕಿರುವ ನಾವಿಕರಿಗೆ ಹೇಗೆ ಅನ್ನಿಸುವುದೊ ನಾನು ಕಾಣೆ. ಯಾರಿಗೂ ಗೊತ್ತಿಲ್ಲದಂತೆ, ಹೆಸರು ಕುಲ ಇಲ್ಲದವರಂತೆ ನೀರಿನಾಳದಲ್ಲಿ ನಿರ್ನಾಮವಾಗುವ ಅವರಿಗೆ ವಿಶಾಲ ಜಲರಾಶಿಯೇ ಒಂದು ಗೋರಿ!"

ಮುದುಕಿಯ ವಿಚಿತ್ರ ಕಲ್ಪನೆಯನ್ನು ಕೇಳಿ ಒಂದು ಕ್ಷಣ ಎಲ್ಲರೂ ಅದರ ಪರಿಭಾವನೆಯಲ್ಲಿಯೇ ಮಗ್ನರಾಗಿ ಹೋಗಿದ್ದರು; ಆ ನಟ್ಟಿರುಳಿನಲ್ಲಿ, ಮುಂಗಾರಿನ ದಿಗಂತದ ಮುಗಿಲುಗಳಿಂದ ಉರುಳುರುಳಿ ಬಂದಂತೆ ಕೇಳ ಬರುವ ಗುಡುಗಿನಂತೆ ಒಂದು ಶಬ್ದ ಮೊಳಗಿತು; ಮನೆಯೊಳಗಿದ್ದವರಿಗೆ ಅದರ ಅರಿವುಂಟಾಗುವ ಮೊದಲೇ ಅದು ನೀಳವಾಗಿ ಆಳವಾಗಿ ಭೀಕರವಾಗಿ ಪರಿಣಮಿಸಿತು. ಕೊನೆಗೆ, ಸದ್ದಿನ ಗದ್ದಲಕ್ಕೆ ಮನೆ ನಡುಗಿತು, ಮನೆಯವರೂ ನಡುಗಿದರು. ಈ ಮಹಾಶಬ್ದವು ಪ್ರಳಯಾಂತ ಶಬ್ದವೋ ಎನ್ನುವಂತೆ, ನೆಲದ ತಳವೇ ನಡುಗುತ್ತಿರುವಂತೆ ತೋರಿತು. ಮಲಗಿದ್ದ ಹುಡುಗರು ಹಾಸಿಗೆಬಿಟ್ಟು ಎದ್ದು ಬಂದು ದೊಡ್ಡವರ ಬಳಿ ಮುದುರಿ ಕುಳಿತರು. ಚಿಕ್ಕವರೂ ದೊಡ್ಡವರೂ ಒಬ್ಬರ ಮುಖವನ್ನೊಬ್ಬರು ಬಿರುನೋಟದಿಂದ ಹುಚ್ಚುಹುಚ್ಚಾಗಿ ನೋಡತೊಡಗಿದರು. ಎಲ್ಲರ ಮುಖಗಳೂ ಭಯದಿಂದ ಬಿಳಚಿತು; ಮಾತನಾಡುವುದಕ್ಕಾಗಲಿ ಕದಲುವುದಕ್ಕಾಗಲಿ ಆಗದೆ ಎಲ್ಲರೂ ಒಟ್ಟಿಗೆ ಒಂದೇ ದನಿಯಲ್ಲಿ, ಒಂದೇ ಹೆದ್ದನಿಯಲ್ಲಿ, ಚೀರಿದರು: "ಕಲ್‌ಮಳೆ! ಕಲ್‌ಮಳೆ!"

ಆ ಘೋರ ಘಟನೆಯನ್ನು ಮಾತುಗಳಿಂದ ವರ್ಣಿಸಲು ಸಾಧ್ಯವಿಲ್ಲ; ಕೆಲವೇ ನುಡಿಗಳಿಂದ ಸೂಚಿಸಲು ಮಾತ್ರ ಸಾಧ್ಯ. ಗುಡಿಸಿಲಿನೊಳಗಿದ್ದವರು

ಹಾಗೆ ಚೀರಿ ಕೂಡಲೆ ಹೊರನುಗ್ಗಿ, ತಾವು ಸುರಕ್ಷಿತವಾದ ಸ್ಥಳವೆಂದು ಬಗೆದಿದ್ದ ಒಂದು ಸ್ಥಳಕ್ಕೆ ಹೋಗಿ ನಿಂತರು. ಇಂಥ ದುರ್ಘಟನೆಯೊದಗಬಹುದೆಂದು ಮುಂಬಗೆದಿದ್ದ ಅವರು ಅಲ್ಲಿ ಕಲ್ಲು ಗುಂಡುಗಳ ಒಂದು ತಡೆಗೋಡೆಯನ್ನು ನಿಲ್ಲಿಸಿದ್ದರು! ಆದರೆ–ಅಯ್ಯೋ, ಅವರು ಸರಕ್ಷಿತವಾದ ಸ್ಥಳವನ್ನು ಬಿಟ್ಟು ಮೃತ್ಯುವಿನ ದಾಳಿಗೆ ತಲೆಕೊಟ್ಟು ನಿಂತಂತಾಯಿತು. ಕ್ಷಣದಲ್ಲಿ, ಪರ್ವತಾಗ್ರದ ಒಂದು ಪಕ್ಕವೇ ಕಳಚಿಕೊಂಡು, ಶಿಲಾವರ್ಷ ಕೊಚ್ಚಿ ಬಂದಿತು. ಗುಡಿಸಿಲನ್ನು ಮುಟ್ಟುವ ಮುನ್ನ ಅದು ಎರಡು ಕವಲಾಗಿ, ಮನೆಯ ಅಂಚನ್ನು ಸಹ ಮುಟ್ಟದೆ ಸುತ್ತಮುತ್ತ ಎಲ್ಲ ಎಡೆಯನ್ನೂ ಮುಸುಕಿ, ದಾರಿಯನ್ನು ಮುಚ್ಚಿ, ತನ್ನ ರಭಸಕ್ಕೆ ಸಿಲುಕಿ ಗಿಡಮರ ಮುಂತಾದುವೆಲ್ಲವನ್ನೂ ನಾಶಮಾಡಿ ಬಿಟ್ಟಿತು. ಈ ಶಿಲಾವರ್ಷದ ಘೋಷ ಬೆಟ್ಟಗಳ ಕಣಿವೆ ಕಣಿವೆಗಳಲ್ಲಿ ಮರುದನಿಕೊಟ್ಟು, ಅದರ ಮೊಳುಗು ಅಡಗುವ ಮುನ್ನ ಅದಕ್ಕೆ ಆಹುತಿಯಾಗುತ್ತಿದ್ದವರ ಸಾವಿನ ಮುನ್ನೋವು ಅಡಗಿದ್ದಿತು. ಅವರು ಮೃತ್ಯು ಸಮಾಧಿಯಲ್ಲಿ ಮಲಗಿದ್ದರು. ಪ್ರಕೃತಿ ತನ್ನ ಭೀಕರವ್ಯಾಪಾರದಿಂದ ಗೋರಿಯೊಂದನ್ನು ಕಟ್ಟಿ ಅವರ ಶರೀರಗಳನ್ನು ಮರೆಮಾಡಿತ್ತು.

ಮರುದಿನ ಬೆಳಗ್ಗೆ ಗುಡಿಸಿಲು ಎಂದಿನಂತೆಯೇ ಇತ್ತು. ಅಗ್ಗಿಷ್ಟಿಕೆಯಲ್ಲಿ ಒಟ್ಟಿದ್ದ ಸೌದೆಯ ತುಂಡುಗಳು ಕೆಂಡವಾಗಿ, ಕೆಂಡ ಇನ್ನೂ ಕಳಕಳಿಸುತ್ತಿತ್ತು. ಮಕ್ಕಳ ಹಾಸಿಗೆಗಳು ಹಾಸಿದಂತೆಯೇ ಇದ್ದುವು. ಅಜ್ಜಿ ಕುಳಿತಿದ್ದ ಚಾಪೆಯೂ, ಮನೆಯ ಯಜಮಾನನೂ ಆಗಂತುಕನೂ ಕುಳಿತಿದ್ದ ಕಾಲುಮಣೆಗಳೂ ಬರಿದಾಗಿ, ಅದೇ ಸ್ಥಳಗಳಲ್ಲಿ ಇದ್ದುವು. ಈ ಸ್ಥಿತಿಯನ್ನು ನೋಡಿದರೆ, ಕಲ್ಲುಮಳೆಗರೆಯುತ್ತಿದ್ದುದನ್ನು ಕೇಳಿ ಮನೆಯವರೆಲ್ಲ ಅದರ ಬೆರಗುನೋಟವನ್ನು ನೋಡಲು ಹೋಗಿದ್ದು ಇನ್ನೇನು ಹಿಂದಿರುಗಿ ಬರುವರೋ ಎಂಬಂತೆ ಕಾಣುತ್ತಿತ್ತು. ಪ್ರತಿಯೊಬ್ಬರೂ ತಮ್ಮ ತಮ್ಮ ಗುರುತಾಗಿ ತಮ್ಮದಾದ ಕೆಲವು ವಸ್ತುಗಳನ್ನು ಹಿಂದೆ ಬಿಟ್ಟಿದ್ದರು; ಮನೆಯವರ ಪರಿಚಯವಿದ್ದವರೆಲ್ಲರೂ ಆ ವಸ್ತುಗಳನ್ನು ನೋಡಿದಾಗ ಅವರನ್ನು ನೆನೆದು ಕಣ್ಣೀರುಗರೆದಿರಬೇಕು.

ಈ ದುರ್ಘಟನೆ ನಡೆದ ರಾತ್ರಿ ಒಬ್ಬ ಆಗಂತುಕನು ಈ ಮನೆಗೆ ಬಂದಿದ್ದನೆಂದೂ, ಅವನೂ ಮನೆಯವರೊಡನೆ ಅವರ ದುರ್ಗತಿಯನ್ನೇ ಹೊಂದಿದ್ದನೆಂದೂ ಕೆಲವರು ಊಹಿಸಲು ಅವಕಾಶವಿತ್ತು. ಊಹಿಸಿಯೂ ಊಹಿಸಿದರು. ಆದರೆ, ಹಾಗೆ ಊಹಿಸಲು ಆಧಾರ ಸಾಲದೆಂದು ಕೆಲವರು ಶಂಕಿಸಿದರು. ಅಯ್ಯೋ! ಹೆಬ್ಬಯಕೆಯ ದಾರಿಹೋಕನೇ! ಭೂಮಿಯಲ್ಲಿಯೇ ಅಮರ್ತ್ಯನಾಗಬೇಕೆಂಬ ಅವನ ಕನಸೆಲ್ಲಿ! ಅವನು ಬಂದ ದಾರಿ ಯಾವುದು,

ಅವನು ಹೋದ ದಾರಿ ಯಾವುದು! ಅವನ ಹೆಸರು ಗುರುತುಗಳು ಗೊತ್ತಿಲ್ಲ; ಅವನ ಚರಿತ್ರೆ, ಅವನ ಜೀವನ, ಅವನ ನೆಲೆ–ಎಲ್ಲವೂ ಒಂದು ಊಹಾತ್ಮಕವಾದ ಸಮಸ್ಯೆ; ಎಲ್ಲಕ್ಕಿಂತ ಮೊದಲು, ಅವನು ಬದುಕಿದ್ದ ವ್ಯಕ್ತಿಯೇ, ಸತ್ತನೇ ಎಂಬುದು ಕೂಡ ಒಂದು ಸಂದೇಹದ ಪ್ರಶ್ನೆ! ಅವನ ಹೆಬ್ಬಯಕೆಯ ಮೊಗ್ಗು ಅರಳುವ ಮುನ್ನ ಅದನ್ನು ವಿಧಿಯೆಂಬ ಮತ್ತಗಜ ತುಳಿದು ಹೊಸಕಿಹಾಕಿರಲು, ಇನ್ನು ಅವನ ಹೆಬ್ಬಯಕೆ ಯಾರಿಗೆ ಗೊತ್ತಾಗಬೇಕು? ಮೃತ್ಯುಮುಖದಲ್ಲಿ ಅವನು ಪಟ್ಟ ವೇದನೆ ಯಾರಿಗೆ ಗೊತ್ತಾಗಬೇಕು? ಮೃತ್ಯುಮುಖದಲ್ಲಿ ಅವನು ಪಟ್ಟ ವೇದನೆ ಯಾರಿಗೆ ತಿಳಿಯುವುದು? ಹೆಬ್ಬಯಕೆಯ ದಾರಿಹೋಕರ ದಾರಿ ಕಡಿದು, ಗುರಿ ದೂರ; ಹಿಂದೆ ವಿಧಿಯ ಸಂಚು, ಮುಂದೆ ಸಾವಿನ ಹೊಂಚು.

೪. ಭಾಗ್ಯತ್ರಯ

ಒಂದು ಬೇಸಗೆಯ ಬೈಗಿನಲ್ಲಿ, ಒಂದು ಎತ್ತರವಾದ ಶ್ಯಾಮಲಾಕೃತಿ ಹಳ್ಳಿಯೊಂದನ್ನು ಪ್ರವೇಶಿಸುತ್ತಿತ್ತು. ಹೆಸರಿಸದ ಮಾತ್ರಕ್ಕೆ ಯಾವುದೋ ಕಾಲ್ಪನಿಕ ಪ್ರಪಂಚದ ಹಳ್ಳಿಯೆಂದು ಭಾವಿಸಲಾಗದು; ನಮಗೆ ಪರಿಚಯವಾದಂಥ, ಸ್ವಲ್ಪ ಹಿಂದಿನ ಕಾಲದ, ನಮ್ಮ ನಾಡಿನ ಒಂದು ಹಳ್ಳಿ ಎಂದು ತಿಳಿದುಕೊಂಡರೆ ಸಾಕು. ಬಹಳ ಕಾಲ ಬಹು ದೂರದೇಶಗಳಲ್ಲಿ ಮಾಡಿದ್ದ ಪ್ರಯಾಣದ ಪರಿಣಾಮವಾಗಿ ಆ ವ್ಯಕ್ತಿಯಲ್ಲಿ ಹೊರನಾಡ ತೋರಿಕೆ ಎದ್ದು ಕಾಣುತ್ತಿತ್ತು. ಈ ಪ್ರಯಾಣಿಕನು ಊರಿ ನಿಂತಿದ್ದ ದಂಡ ಅವನ ಹುಟ್ಟುಡೆಯಾದ ಮಲೆನಾಡ ಕಾಡ ನಡುವೆಯ ಹಳ್ಳಿಯಿಂದಲೂ ಅವನ ಒಡನಾಡಿಯಾಗಿತ್ತು; ಇವನು ಹೊದೆದಿದ್ದ ಸೊಗಸಾದ ಶಾಲು ಇವನಿಗೆ ಕಾಶ್ಮೀರ ದೇಶದಲ್ಲಿಯೇ ದೊರಕಿದ್ದೆಂಬುದರಲ್ಲಿ ಸಂದೇಹ ಇರಲಿಲ್ಲ; ಇವನ ಮೈ ದಕ್ಷಿಣದೇಶದ ಬಿಸಿಲಿನ ತಾಪದಿಂದ ಕಪ್ಪಾಗಿತ್ತು, ಅಂತೆಯೇ ಹಿಮವತ್ಪ್ರಾಂತದ ಉಗ್ರವಾದ ಚಳಿಗೆ ಒಡ್ಡಿ ಗಟ್ಟಿಯಾಗಿತ್ತು. ಕಾಡುಜನರ ನಡುವೆ ಬಹಳ ಕಾಲ ಓಡಾಡಿದ್ದ ಅವನು ತನ್ನ ಸೊಂಟದಲ್ಲಿ ಒಂದು ಬಾಕುವನ್ನು ಇನ್ನೂ ಧರಿಸಿದ್ದನು; ಅದರಿಂದ ಅವನು ಎಷ್ಟೋ ಬಾರಿ ತನ್ನ ಆತ್ಮಸಂರಕ್ಷಣೆ ಮಾಡಿಕೊಂಡಿದ್ದನು; ಒಮ್ಮೆ, ತನ್ನ ಜೀವವನ್ನು ತೆಗೆಯಲು ಬಂದಿದ್ದ ಒಬ್ಬ ದರೋಡೆಕೋರನ ಕೊರಳನ್ನು ಅದರಿಂದ ಇರಿದಿದ್ದನು. ಈ ಲೋಕಸಂಚಾರಿ ಭರತಖಂಡದ ನಾನಾ ಭಾಗಗಳಲ್ಲದೆ ಸಿಂಹಳದ್ವೀಪ, ಬ್ರಹ್ಮದೇಶ, ಅರಬ್ಬೀದೇಶ, ಪರ್ಶಿಯಾ ದೇಶ, ಕಾಬೂಲು, ಚೀನ, ಟಿಬೆಟ್ಟು ಮುಂತಾದ ಹಲವು ನೆರೆನಾಡು ಹೊರನಾಡುಗಳನ್ನು ಸುತ್ತಾಡಿ ಬಂದಿದ್ದನು. ಪ್ರತಿಯೊಂದು ಹೊರನಾಡಿನಲ್ಲೂ ಅವನು ತನ್ನ ಕನ್ನಡತನವನ್ನು ಸ್ವಲ್ಪ ಕಳೆದುಕೊಂಡು ಬಿಟ್ಟಿದ್ದನು; ಅಲ್ಲದೆ, ಪ್ರತಿಯೊಂದು ನಾಡಿನ ಜನದಿಂದಲೂ ಒಂದು ವೈಚಿತ್ರ್ಯವನ್ನು ಎರವಲು ತೆಗೆದುಕೊಂಡಿದ್ದನು. ಹೀಗಾಗಿ, ಈ ಲೋಕಸಂಚಾರಿ ತನ್ನ ಹುಟ್ಟುಹಳ್ಳಿಯ ಬೀದಿಯಲ್ಲಿ ಮರಳಿ ನಡೆದು ಹೋಗುತ್ತಿದ್ದಾಗ ಎಲ್ಲರ ಗಮನ ಕುತೂಹಲಗಳನ್ನು ಸೆಳೆಯುತ್ತಿದ್ದರೂ, ಯಾರೂ ಇವನ ಗುರುತ ಹಿಡಿಯದೆ ಹೋದದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೂ, ಹಳ್ಳಿಯ ಕೆಲದ ಹಳ್ಳದಿಂದ ನೀರು ಹೊತ್ತು ತರುತ್ತಿದ್ದ ತರುಣಿಯೊಬ್ಬಳನ್ನು ಇವನ ತೋಳು ಆಕಸ್ಮಿಕವಾಗಿ ಸೋಕಲು,

ಅವಳು ಬೆಕ್ಕಸ ಬೆರಗಾಗಿ ನಿಂತು, ಇವನನ್ನು ನಿಟ್ಟಿಸಿನೋಡಿದಳು.

ಕೂಡಲೆ ಅವಳ ಬಾಯಿಂದ ಈ ಹೆಸರು ಅರ್ಧ ಉಚ್ಚಾರವಾಗಿ ಹೊರಹೊರಟಿತು: "ವಿಶ್ವನಾಥ!"

ಪ್ರಯಾಣಿಕನು ಹಿಂದಿರುಗಿ ಅವಳ ಆಕೃತಿಯನ್ನು ನೋಡಿ, "ಇವಳು ನನ್ನ ಒಡನಾಡಿ ಗೌರಿ ಇರಬಹುದೆ" ಎಂದು ಯೋಚಿಸುತ್ತ ಅಲ್ಲಿ ನಿಲ್ಲದೆ ಮುಂದೆ ನಡೆದನು.

ವಿಶ್ವನಾಥನು ಪ್ರಾಂಯುಕ್ಕೆ ಬಂದಮೇಲೆ ತಾನು ಬಹಳ ಭಾಗ್ಯಶಾಲಿಯಾಗುವುದಾಗಿ ಭಾವಿಸಿದ್ದನು. ತನ್ನ ಜೀವನದಲ್ಲಿ ಸಂಭವಿಸಲಿರುವ ಮೂರು ಅದ್ಭುತ ಘಟನೆಗಳು ಮೂರು ಚಿಹ್ನೆಗಳಿಂದ ಸ್ಥಿರಪಡುವುವು ಎಂಬ ಭಾವನೆಯನ್ನು ತಂದುಕೊಂಡು, ಅದನ್ನು ತನ್ನ ನಂಬಿಕೆಯ ವಿಷಯಗಳಲ್ಲಿ ಅತ್ಯಂತ ದೃಢವಾದುದಾಗಿ ಎಣಿಸಿದ್ದನು. ಈ ಭಾವನೆ ಯಾವ ಮಂತ್ರವಿದ್ಯೆಯಿಂದ ಇವನಿಗೆ ವ್ಯಕ್ತಗೊಂಡಿತ್ತೊ, ಇಲ್ಲವೆ ಯಾವ ಭವಿಷ್ಯದ ಕನಸಿನಲ್ಲಿ ಅದು ಮೂಡಿತ್ತೋ, ಇಲ್ಲವೆ ಯಾವ ಆಕಾಶವಾಣಿ ಯಾವ ಕಾಲದಲ್ಲಿ ಅವನಿಗೆ ಹಾಗೆ ನುಡಿದಿತ್ತೊ, ಇಲ್ಲವೆ ಯಾರು ಹಾಗೆಂದು ಕಣಿ ಹೇಳಿದ್ದರೊ, ಇಲ್ಲವೆ ಅವನ ಕಲ್ಪನಾಲಹರಿಯ ತರಂಗಗಳಲ್ಲಿ ಇವು ಮೂರು ಮಹಾತರಂಗಗಳು ಎದ್ದು ಎಡೆಬಿಡದೆ ಹೊಯ್ದಾಡುತ್ತಿದ್ದುವೊ–ಯಾವುದೊ ನಾವು ಹೇಳಲಾರೆವು.

ವಿಧಿವಶವಾದ ಈ ಮೂರು ಘಟನೆಗಳಲ್ಲಿ ಮೊದಲನೆಯದೂ, ಬಹುಶಃ ಅವನ ತಾರುಣ್ಯದ ಕಲ್ಪನೆ ಅತ್ಯಂತ ನಲ್ಮೆಯಿಂದ ನೆಚ್ಚಿಕೊಂಡಿದ್ದುದೂ ಯಾವುದೆಂದರೆ, ಪ್ರಪಂಚದ ತರುಣಿಯರಲ್ಲೆಲ್ಲ ಯಾವ ಒಬ್ಬ ತರುಣಿ ಮಾತ್ರ ತನ್ನ ಒಲುಮೆಯಿಂದ ಅವನನ್ನು ಸುಖಿಯನ್ನಾಗಿ ಮಾಡಬಲ್ಲವಳಾಗಿರುವಳೊ ಅವಳನ್ನು ಕಾಣುವುದು. ತನ್ನ ವಕ್ಷಸ್ಥಲದ ಮೇಲೆ ಹೃದಾಯಾಕಾರದ ಪದಕವನ್ನು ಧರಿಸಿರುವ ಅತ್ಯಂತ ಚೆಲುವೆ ಒಬ್ಬಳನ್ನು ಅವನು ಸಂಧಿಸುವವರೆಗೆ ಅವನು ಪ್ರಪಂಚವನ್ನೆಲ್ಲ ಸುತ್ತತಕ್ಕದ್ದು; ಆ ಪದಕ ಮುತ್ತಿನದೊ, ಪಚ್ಚೆಯದೊ, ಪುಷ್ಯರಾಗದ್ದೊ, ಮಾಣಿಕ್ಯದ್ದೊ, ಬಹುಶಃ ಅತ್ಯಮೂಲ್ಯವಾದ ವಜ್ರದ್ದೊ, ಯಾವುದರದ್ದಾದರೂ ಸರಿಯೆ, ಇದು ಅಷ್ಟು ಮುಖ್ಯವಾಗಿರಲಿಲ್ಲ ವಿಶ್ವನಾಥನಿಗೆ; ಅದು ಹೃದಯದ ವಿಚಿತ್ರ ಆಕಾರವನ್ನು ತಳೆದಿದ್ದರೆ ಸಾಕು. ಈ ಚೆಲುವೆಯಾದ ಆಗಂತುಕ ತರುಣಿಯನ್ನು ಅವನು ಕಂಡಕೂಡಲೆ ಅವನು ಅವಳನ್ನು ಕುರಿತು ಹೀಗೆಯೇ ಮಾತನಾಡಿಸುವನು: "ಕನ್ನೆ, ನಾನು ಬಹು ಭಾರವಾದ ಹೃದಯವನ್ನು ನಿನ್ನ ಬಳಿಗೆ ತಂದಿರುವೆ. ಅದರ ಭಾರವನ್ನು ನಿನ್ನ ಹೃದಯದ ಮೇಲೆ

ಹೊರಿಸಬಹುದೆ?" ಅವಳೆ ಅವನ ಹಣೆಯಲ್ಲಿ ಬರೆದಿದ್ದ ವಧುವಾಗಿದ್ದರೆ–ಯಾವುವನ್ನು ಅನಂತಕಾಲವು ಹೆಚ್ಚು ಹೆಚ್ಚು ಹತ್ತಿರಕ್ಕೆ ತಂದು ಬಂಧಿಸದೆ ಇರುತ್ತಿರಲಿಲ್ಲವೊ ಅಂತಹ ಪರಸ್ಪರಾನುಬಂಧವುಳ್ಳ ಅವರ ಆತ್ಮಗಳು ಇಲ್ಲಿ, ಈ ಇಹಲೋಕದಲ್ಲಿ, ಒಂದಾಗಿ ಸೇರಬೇಕೆಂಬುದು ದೈವೇಚ್ಛೆಯಾಗಿದ್ದರೆ–ಅವಳು ತನ್ನ ವಕ್ಷಸ್ಥಲದ ಮೇಲಿನ ಪದಕದಮೇಲೆ ಬೆರಳಿಟ್ಟು, ಹೀಗೆ ಉತ್ತರ ಕೊಡುವಳು: "ನೀನು ಹಾಗೆ ಮಾಡಬಹುದು ಎಂಬುದಕ್ಕೆ ನಾನು ಬಹಳ ಕಾಲದಿಂದ ಧರಿಸಿರುವ ನೆನಪಿನ ಕುರುಹಾದ ಈ ಪದಕವೇ ಭರವಸೆ!"

ಎರಡನೆಯದಾಗಿ, ಪ್ರಪಂಚದಲ್ಲಿ ಎಲ್ಲೋ ಒಂದು ಕಡೆ ಭಾರಿಯಾದ ನಿಧಿಯೊಂದು ನಿಕ್ಷಿಪ್ತವಾಗಿದೆಯೆಂದೂ, ಅದರ ನಿಕ್ಷೇಪಸ್ಥಳ ತನಗಲ್ಲದೆ ಮತ್ತೆ ಯಾರಿಗೂ ಗೋಚರವಾಗದೆಂದೂ ವಿಶ್ವನಾಥನು ದೃಢವಾಗಿ ನಂಬಿದ್ದನು. ಆ ರಹಸ್ಯ ಸ್ಥಳವನ್ನು ಅವನ ಅಡಿಗಳು ಸೋಕಿದಂದು, ಕೆಳಮುಖವಾಗಿ ತೋರುತ್ತಿರುವ ಕೈಯೊಂದು ಅವನ ಮುಂದುಗಡೆ ಕಾಣಬರುವುವು–ಶರೀರದ ಇತರ ಭಾಗಗಳಿಂದ ಬೇರೆಯಾದ ಆ ಕೈ ಯಕ್ಷಿಣಿಯಿಂದ ಮೂಡಿದುದೊ, ಹಾಲುಗಲ್ಲಿನಲ್ಲಿ ಕಡೆದದ್ದೊ, ಪರ್ವತ ಪ್ರಪಾತ ಪಾರ್ಶ್ವದ ಹೆಬ್ಬಂಡೆಯೊಂದನ್ನು ಕೆತ್ತಿ ಮಾಡಿದುದೊ, ಇಲ್ಲವೆ ಬರಿಯ ಗಾಳಿಯಲ್ಲಿ ಇದ್ದಕ್ಕಿದ್ದ ಹಾಗೆ ಕಾಣಿಸುವ ಜ್ವಾಲಾಹಸ್ತವೊ, ಅವನು ಹೇಳಲಾರನಾಗಿದ್ದನು; ಆದರೆ, ಒಂದು ಕೈಯನ್ನಂತೂ ಅವನು ಕಾಣುವನು; ಅದರ ತೋರುಬೆರಳು ಕೆಳಕ್ಕೆ ತೋರುತ್ತಿರುವುದು; ಅದರ ಕೆಳಗೆ, 'ಖನ್' (ಎಂದರೆ ಅಗೆ) ಎಂಬ ಸಂಸ್ಕೃತ ಮಾತಿರುವುದು! ಅದು ಸಂಸ್ಕೃತದಲ್ಲೇ ಇರುವುದೆಂದು ಅವನು ಏಕೆ ತಿಳಿದಿದ್ದನೋ ಅವನಿಗೆ ಸರಿಯಾಗಿ ತಿಳಿಯದು. ಅವನಿಗೆ ತಕ್ಕಮಟ್ಟಿನ ಸಂಸ್ಕೃತ ಭಾಷಾಜ್ಞಾನ ಇತ್ತು. ಸಾಮಾನ್ಯವಾಗಿ ಮಂತ್ರಗಳೆಲ್ಲವೂ ಸಂಸ್ಕೃತದಲ್ಲೇ ಇರುವುದರಿಂದ, ನಿಧಿದರ್ಶಕವಾದ ಮಾತು ಯಾವ ಮಂತ್ರಕ್ಕೂ ಮಹತ್ವದಲ್ಲಿ ಕಡಮೆಯಲ್ಲವಾದ್ದರಿಂದ, ಅದು ಸಂಸ್ಕೃತದಲ್ಲೇ ಇರಬೇಕೆಂದು ಅವನಿಗೆ ತೋರಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಆ ಸ್ಥಳವನ್ನು ಅಗೆದರೆ, ಚಿನ್ನದ ನಾಣ್ಯಗಳು, ಚಿನ್ನದ ಗಟ್ಟಿಗಳು, ಪ್ರಶಸ್ತ ಶಿಲೆಗಳು, ಮತ್ತು ನಿಧಿಯಲ್ಲಿ ಸೇರಿರಬಹುದಾದ ವಸ್ತುಗಳು ಎಲ್ಲವೂ ದೊರೆತು, ಅವನ ಶ್ರಮ ಸಫಲಗೊಳ್ಳುವುದರಲ್ಲಿ ಸಂದೇಹವಿರಲಿಲ್ಲ. ಹೀಗೆ ಅವನು ನಂಬಿದ್ದನು.

ಈ ಮಹಾಭಾಗ್ಯಶಾಲಿಯ ಜೀವನದಲ್ಲಿನ ಮೂರು ಅದ್ಭುತ ಘಟನೆಗಳಲ್ಲಿ ಕಡೆಯದು ಇದು: ಅವನು ಇತರ ಮಾನವರ ಮೇಲೆ ವ್ಯಾಪಕವಾದ ಪ್ರಭಾವವನ್ನೂ ಅಧಿಕಾರವನ್ನೂ ಇಟ್ಟುಕೊಳ್ಳುವಂತಾಗುವುದು. ಅವನು ದೊರೆಯಾಗಿ

ರಾಜಮನೆತನವೊಂದರ ಮೊದಲಿಗನಾಗುವನೊ, ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಒಂದು ಜನಾಂಗದ ಜಯಶಾಲಿಯಾದ ನಾಯಕನಾಗುವನೊ, ಪಾವನಗೊಂಡು ಪುನರುಜ್ಜೀವಿತವಾದ ಧರ್ಮವೊಂದರ ಪ್ರವರ್ತಕನಾಗುವನೊ, ಯಾವುದೂ ಅವನ ಅರಿವಿಗೆ ಬಂದಿರಲಿಲ್ಲ; ಭವಿಷ್ಯತ್ತೇ ಅದನ್ನು ತೋರಬೇಕಾಗಿತ್ತು. ಆ ಘಟನೆ ನೆರವೇರುವುದರ ಮುನ್‌ಸೂಚನೆಯ ದೂತರಾಗಿ ಮೂವರು ಗಣ್ಯ ಮಹನೀಯರು ಅವನನ್ನು ಸಂದರ್ಶಿಸಲೋಸುಗ ಬರುವರು; ಆಗ ಅವನಿಗೆ ದೈವಾಜ್ಞೆಯ ಅರಿವಾಗುವುದು. ಅವರಲ್ಲಿ ಮುಖ್ಯಸ್ಥನಾದವನು ಗಂಭೀರ ವ್ಯಕ್ತಿ; ಪುರಾತನ ಋಷಿಯೋಗ್ಯವಾದ ಉಡುಪನ್ನು ಧರಿಸಿರುವನು ಎಂದು ಬೇಕಾದರೆ ಭಾವಿಸಬಹುದು; ಅವನು ಕೈಯಲ್ಲಿ ಒಂದು ದಂಡವನ್ನು ಹಿಡಿದಿರುವನು. ಆ ಮುನಿ ತನ್ನ ದಂಡದಿಂದ ವಾಯುಪಥದಲ್ಲಿ ಯಾವುದೋ ಒಂದು ಆಕೃತಿಯನ್ನು ಬರೆದಂತೆ ಸಂಜ್ಞೆ ಮಾಡಿ, ದೈವನಿರೂಪಿತ ಸಂದೇಶವನ್ನು ಸಾರತೊಡಗುವನು; ಆ ಸಂದೇಶದಂತೆ ನಡೆದರೆ, ಅಮೋಘವಾದ ಫಲಪ್ರಾಪ್ತಿಯಾಗುವುದು.

ಇಂತಹ ಘನವಾದ ಭವಿಷ್ಯತ್ತನ್ನು ತನ್ನ ಮುಂದೆ ಇಟ್ಟುಕೊಂಡು, ಆ ಕನ್ಯೆ, ನಿಧಿ, ಸಾಮ್ರಾಜ್ಯದಾನಿಯಾದ ಮುನಿ–ಇವರ ಅನ್ವೇಷಣಕ್ಕಾಗಿ ವಿಶ್ವನಾಥನು ಯಾತ್ರೆ ಬೆಳಸಿದ್ದನು. ಅವು ಅವನಿಗೆ ದೊರೆತಿದ್ದುವೆ? ಅಯ್ಯೊ! ಅವನು ತನ್ನ ತಾಯಿಯ ಗುಡಿಸಿಲನ್ನು ಕುರಿತು ಹಳ್ಳಿಯಲ್ಲಿ ಹಿಂದಿರುಗುತ್ತಿದ್ದಾಗ, ತನ್ನ ಜೊತೆಯವರು ಸಾಧಿಸುವುದಕ್ಕಿಂತ ಘನತರವಾದ ಉದ್ದೇಶವನ್ನು ಸಾಧಿಸಿದ್ದ ಜಯಶಾಲಿಯ ಗೆಲವುನೋಟ ಅವನ ಮುಖದಲ್ಲಿ ಇರಲಿಲ್ಲ; ಅದರ ಬದಲು, ವಿಚಿತ್ರವಾದ ಮತ್ತು ಸಂತತವಾದ ಕಷ್ಟ ಪರಂಪರೆಗೆ ಸಿಲುಕಿ ಹೋರಾಡುವವನ ಮುಖದ ಮೇಲೆ ಯಾವ ಮಂಕು ಕವಿದಿರುವುದೊ ಆ ಮಂಕು ವಿಶ್ವನಾಥನ ಮುಖವನ್ನು ಆವರಿಸಿತ್ತು. ಯಾತ್ರಿಕನ ಕೈಗೋಲನ್ನು ಕೆಳಗಿಟ್ಟು, ಎಲ್ಲಿ ಭಾಗ್ಯತ್ರಯದ ಕನಸು ತನಗಾಗಿತ್ತೋ ಆ ಸ್ಥಳದಲ್ಲಿ ತನ್ನ ದಣಿದ ಮಾನುಷತ್ವ ಸ್ವಲ್ಪಮಟ್ಟಿಗಾದರೂ ಹಿಂದಿನ ಯೌವನದ ಪುನಶ್ಚೈತನ್ಯವನ್ನು ಮರಳಿ ಪಡೆಯಬಹುದೆಂಬ ನೆಚ್ಚಿಕೆಯಿಂದ, ಸ್ವಲ್ಪ ಕಾಲ ಮಾತ್ರ ಇರಲು ಅವನು ಹಿಂದಿರುಗಿ ಬಂದಿದ್ದನು. ಹಳ್ಳಿಯಲ್ಲಿ ಅಂಥ ಬದಲಾವಣೆಗಳೇನೂ ಆಗಿರಲಿಲ್ಲ; ಎಲ್ಲಿ ಶತಮಾನದ ನಾಶ ಹಾವಳಿ ಮಾಡುವುದಕ್ಕಿಂತ ಹೆಚ್ಚಿನ ಪ್ರಮಾಣದ ಮಾರ್ಪಾಟನ್ನು ಒಂದು ವರ್ಷದ ಏಳಿಗೆ ಉಂಟುಮಾಡುತ್ತದೆಯೊ ಅಂತಹ ಬೆಳೆಯುವ ಸ್ಥಳವಾಗಿರಲಿಲ್ಲ ಆ ಹಳ್ಳಿ; ಅದು, ಯುವಕನ ತಲೆ ಮೇಲಿನ ನರೆಗೂದಲಿನಂತೆ, ಹಳೆಯ ಕಾಲದ ಸಣ್ಣ ಊರು; ಪುರಾತನವಾದ ಅಶ್ವತ್ಥವೃಕ್ಷಗಳಿಂದಲೂ ವಟವೃಕ್ಷಗಳಿಂದಲೂ ತುಂಬಿತ್ತು.

ವರ್ಷವರ್ಷಕ್ಕೂ ಹೆಚ್ಚು ಹೆಚ್ಚಾಗಿ ಬಿಳಲುಬಿಡುತ್ತಿದ್ದ ಆಲದ ಮರಗಳ ಹರಹಿನ ನೋಟ ನಿಜವಾಗಿಯೂ ಗಂಭೀರವಾಗಿತ್ತು. ಒಂದೆರಡು ಆಲದ ಮರಗಳಂತೂ ಕೆಲವು ತಲೆಮೊರೆಗಳನ್ನೇ ಕಂಡಿದ್ದುವು! ಮನೆಯ ಮಾಳಿಗೆಗಳ ಮೇಲೆ ಹುಲ್ಲು, ಬಳ್ಳಿ ಮೊದಲಾದ ಬಗೆ ಬಗೆಯ ಸಣ್ಣ ಸಸ್ಯಜಾತಿಗಳು ಬೆಳೆದು, ಗೋಡೆಯ ಮೇಲೂ ನೆಲದ ಮೇಲೂ ಸಂದಿಗೊಂದಿಗಳಲ್ಲೂ ಪಾಚಿ ಬೆಳೆದು, ಮನೆಗಳೂ ಸಹ ಪುರಾಣವೇಷವನ್ನೇ ಧರಿಸಿದ್ದುವು. ಒಟ್ಟಿನ ಮೇಲೆ ಹಳ್ಳಿಯ ಹಳಮೆಯ ಸ್ವರೂಪ ದಿನ ದಿನಕ್ಕೆ ಖಚಿತಗೊಳ್ಳುತ್ತಿತ್ತು. ಒಂದು ಮಹತ್ವದ ಸಂಗತಿಯೇನೆಂದರೆ, ಶ್ಮಶಾನದ ಗೋರಿಕಲ್ಲುಗಳ ಸಂಖ್ಯೆಯೇನೊ ತಕ್ಕಮಟ್ಟಿಗೆ ಏರಿತ್ತು ಎಂಬುದರಲ್ಲಿ ಸಂದೇಹವಿರಲಿಲ್ಲ. ಇಷ್ಟಾದರೂ, ಹತ್ತು ವರ್ಷ ಕಾಲದ ಅವಧಿಯಲ್ಲಿ ಕಾಲಪುರುಷ ಹಳ್ಳಿಯಲ್ಲಿ ಮಾಡಿದ್ದ ಹಾವಳಿಯನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಂಡರೂ, ವಿಶ್ವನಾಥನು ಅಂದಿನ ಬೆಳಗ್ಗೆಯೆ ಹೊರಹೊರಟು, ಬೈಗಾಗುವವರೆಗೆ ಒಂದು ಹಗಲುಗನಸು ಕಂಡು, ಬಳಿಕ ಹಿಂದಿರುಗಿದ್ದರೆ ಹೇಗಿರುತ್ತಿತ್ತೊ ಹಾಗೆಯೆ ಇತ್ತು ಹಳ್ಳಿ. ತಾನು ಬಿಟ್ಟಾಗ ಹೇಗಿತ್ತೊ ಹಾಗೆಯೇ ಇದ್ದ ಊರನ್ನು ಕಂಡು ಅವನಿಗೆ ಅಚ್ಚರಿಯಾಗದಿದ್ದರೂ ಹಿಗ್ಗಾದರೂ ಆಗಬೇಕು. ಆದರೆ ಅವನ ಹೃದಯವಿಷಾದಕ್ಕೆ ಎಡೆಗೊಟ್ಟಿತು; ಏಕೆಂದರೆ, ಅವನು ಹಳ್ಳಿಯನ್ನು ಹೇಗೆ ತನ್ನ ನೆನಪಿನಲ್ಲಿ ಇಟ್ಟುಕೊಂಡಿದ್ದನೊ ಹಳ್ಳಿ ಅವನನ್ನು ಹಾಗೆಯೇ ತನ್ನ ನೆನಪಿನಲ್ಲಿ ಇಟ್ಟುಕೊಂಡಿರಲಿಲ್ಲ.

"ಮಾರ್ಪಾಟು ಇಲ್ಲಿದೆ!" ಎಂದು ವಿಶ್ವನಾಥನು ತನ್ನ ಎದೆಯ ಮೇಲೆ ಕೈತಟ್ಟಿ ನಿಟ್ಟುಸಿರುಬಿಟ್ಟನು. "ಯೋಚನೆಯಿಂದಲೂ ಚಿಂತೆಯಿಂದಲೂ ಕುಗ್ಗಿದ, ಪ್ರಪಂಚದ ಸುತ್ತಾಟದಿಂದ ದಣಿದ, ಬಯಲಾದ ಬಯಕೆಗಳುಳ್ಳ ಈತ ಯಾರು? ಅಷ್ಟು ನಲಿವಿನಿಂದ ಹೊರಹೊರಟ ಯುವಕನು ಹಿಂದಿರುಗಿಬಾರನು!"

ವಿಶ್ವನಾಥನು ತನ್ನ ತಾಯ ಸಣ್ಣ ಮನೆಯನ್ನು ಬಳಸಿದ್ದ ಬೇಲಿಯಲ್ಲಿನ ಸಣ್ಣ ಹಾದಿಯ ಮೂಲಕ ಮನೆಯಂಗಳವನ್ನು ಸೇರಿದನು. ತನ್ನ ಮಗ ಮನೆಬಿಟ್ಟು ಹೊರಟುಹೋದಮೇಲೆ ಆ ಮುದುಕಿ ತನ್ನ ಗಂಡ ಬಿಟ್ಟುಹೋಗಿದ್ದ ಸಣ್ಣ ತೋಟ ಮತ್ತು ಹೊಲಗಳಿಂದ ದೊರಕುತ್ತಿದ್ದ ತಕ್ಕಮಟ್ಟಿನ ದವಸಧಾನ್ಯದಿಂದ ಕಾರ್ಪಣ್ಯವಿಲ್ಲದೆ ಜೀವನವನ್ನೇನೊ ನಡೆಸುತ್ತಿದ್ದಳು. ಆದರೆ, ಒಬ್ಬನೇ ಮಗ ಎಲ್ಲಿ ಹೋದನೋ, ಹಿಂದಿರುಗಿ ಬರುವನೋ ಬಾರನೋ–ಎಂಬುದೆ ಅವಳ ದೊಡ್ಡ ಕೊರಗಾಗಿತ್ತು. ಪ್ರಾಯಕ್ಕೆ ಬರುತ್ತಿದ್ದ ಮಗನನ್ನು ಕಂಡು ಹಿಗ್ಗುತ್ತ ಆಕೆ ತನ್ನ ಪತಿವಿಯೋಗವನ್ನು ಕೂಡ ಮರೆತಿದ್ದಳು. ಆದರೆ, ಮಗನ ವಿಯೋಗವನ್ನು

ಮರೆಯಲು ಅವಳಿಗೆ ಎಷ್ಟು ಮಾತ್ರವೂ ಸಾಧ್ಯವಾಗಿರಲಿಲ್ಲ. ತಾಯಿಯಾದವಳಿಗೆ ಮಗನೆಂದರೆ ಅಷ್ಟು ಮಮತೆ.

ವಿಶ್ವನಾಥನು ಮನೆಯಂಗಳವನ್ನು ಹೊಕ್ಕನಷ್ಟೆ. ಹೊಕ್ಕು, ಅಲ್ಲಿಯೆ ಇದ್ದ ದೊಡ್ಡ ಹಳೆಯ ಆಲದ ಮರವೊಂದನ್ನು ನೆಮ್ಮಿನಿಂತು, ವರ್ಷ ವರ್ಷಗಳ ನೆನಪುಗಳನ್ನು ಒಂದು ಕ್ಷಣದ ಅವಧಿಯಲ್ಲಿ ನೆನೆದು, ಒಡನೆಯೆ ಚಿಮ್ಮಿದ ಅಸಹನೆಯನ್ನು ಹತೋಟಿಗೆ ತಂದುಕೊಂಡು, ಸುತ್ತಮುತ್ತ ಕಣ್ಣುಹರಿಸಿ ಒಂದೊಂದಾಗಿ ಹಳೆಯ ಪಳಕೆಯ ವಸ್ತುಗಳನ್ನು ನೋಡುತ್ತ ಬಂದನು. ತಗ್ಗಾದ ಮನೆ, ಅದರ ದಪ್ಪ ಹಲಗೆಯ ತಿರುಗಣಿ ಬಾಗಿಲು, ಸುಣ್ಣ ಹಚ್ಚಿದ ಗೋಡೆಯಮೇಲೆ ತನ್ನ ತಾಯಿ ಎಂದಿನಂತೆಯೆ ತೆಗೆದಿದ್ದ ಕಾರಣೆ, ಮನೆಯ ಮುಂದೆ ಸಾರಿಸಿ ಚೊಕ್ಕಟವಾಗಿದ್ದ ನೆಲದ ಮೇಲೆ ಅಳಿಸದಿದ್ದ ರಂಗವಲ್ಲಿ, ಮನೆಯ ಮುಂದಿನ ತುಳಸಿಯ ಬೃಂದಾವನ–ಇವೆಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದನು. ತಾನು ಊರುಬಿಟ್ಟು ಹೋಗುವ ಮುನ್ನ ತಾನೂ ಗೌರಿಯೂ ಸೇರಿ ಅಂಗಳದಲ್ಲಿ ಹಾಕಿದ್ದ ಮಲ್ಲಿಗೆ ಜಾಜಿ ಅಂಟುಗಳು ಎಂದೋ ಚಿಗುರಿ ಹರವಾಗಿ ಹಬ್ಬಿ ಹೂ ಬಿಟ್ಟಿದ್ದುವು; ಅಂದು ನೆಟ್ಟಿದ್ದ ಪಾರಿಜಾತ ಸಂಪಗೆ ಸಸಿಗಳು ಈಗ ಮರವಾಗಿ ಹೂಕೊಡುತ್ತಿದ್ದುವು. ಅವುಗಳನ್ನು ನೋಡಿದಾಗ ಗೌರಿಯ ನೆನಪಾಯಿತು. ಹೀಗೆ, ಸುತ್ತ ಒಮ್ಮೆ ಪರಿಶೀಲಿಸಿದ ಮೇಲೆ, ತಾನು ನೆಮ್ಮಿ ನಿಂತಿದ್ದ ಆ ದೊಡ್ಡ ಆಲದ ಮರವನ್ನು ಸಾಕಿದ ಹಸುವನ್ನೋ ನಾಯಿಯನ್ನೋ ಮುಟ್ಟಿ ಮುಟ್ಟಿ ನೋಡುವಂತೆ ಮುಟ್ಟಿ ನೋಡಿದನು. ಹೌದು, ಅದೇ ಆಲದ ಮರ; ಚಿಕ್ಕಂದಿನಲ್ಲಿ ತನಗೂ ಗೌರಿಗೂ ಆಟಕ್ಕೆ ನೆಳಲುಕೊಡುತ್ತಿದ್ದ ಅದೇ ಆಲದ ಮರ; ಒಡನೆಯೆ, ತಾನೂ ಗೌರಿಯೂ ಅದರ ಬಿಳಲುಗಳಿಗೆ ಜೋತುಬಿದ್ದ ಆಡುತ್ತಿದ್ದುದು ನೆನಪಿಗೆ ಬಂದಿತು; ಅಂದು ಎಣಿಸುತ್ತಿದ್ದಂತೆ ಇಂದೂ ಒಮ್ಮೆ ಬಿಳಲುಗಳನ್ನು ಎಣಿಸಿನೋಡಬೇಕೆನ್ನಿಸಿತು; ಯಾಂತ್ರಿಕವಾಗಿಯೋ ಎಂಬಂತೆ ಎಣಿಸತೊಡಗಿದನು; ಅಂದು ನೆಲವನ್ನು ಮುತ್ತಿಡುವಂತಿದ್ದ ಹತ್ತುಹನ್ನೆರಡು ಬಿಳಲುಗಳು ಈಗ ನೆಲದಲ್ಲಿ ಬೇರುಬಿಟ್ಟು, ತಮ್ಮನ್ನು ಬೆಳಸಿಕೊಂಡುಬಂದ ಕೊಂಬೆಗಳಿಗೆ ಈಗ ಊರೆಯಾಗಿ ನಿಂತಿದ್ದುವು. ಅವುಗಳ ಜೊತೆಗೆ ಸುತ್ತಮುತ್ತ ಇಳಿಯಬಿದ್ದಿದ್ದ, ಇಳಿಯಬೀಳುತ್ತಿದ್ದ ಹಲವಾರು ಬಿಳಲುಗಳು ಇವನಿಗೆ ಹೊಸವಾಗಿ ಕಂಡುವು. ಹಾಗೆಯೇ ನೋಡುತ್ತ ನೋಡುತ್ತ ಅವನ ಕಣ್ಣು ಇದ್ದಕ್ಕಿದ್ದ ಹಾಗೆ ಮರದ ಬುಡದ ಕಡೆಗೆ ಹೋಯಿತು; ಅಲ್ಲಿ ಏನನ್ನೋ ಕಂಡು ಖಿನ್ನಭಾವದ ಹುಸಿನಗೆಯೊಂದು ಅವನ ಮುಖದಲ್ಲಿ ಮುದ್ರಿತವಾಯಿತು. ಅವನಿಗೆ ಕಂಡದ್ದು ಅರ್ಧ ಅಳಿಸಿಹೋಗಿದ್ದ 'ಖನ್' ಎಂಬ

ಸಂಸ್ಕೃತ ಮಾತು; ಅವನು ಮೊತ್ತಮೊದಲು ತನ್ನ ಅಮೋಘವಾದ ಭವಿಷ್ಯವನ್ನು ಕುರಿತು ಚಿಂತಿಸತೊಡಗಿದಾಗ ಒಂದು ದಿನವೆಲ್ಲ ಶ್ರಮಿಸಿ ಮರದ ತೊಗಟೆಯಲ್ಲಿ ಆ ಮಾತನ್ನು ಕೆತ್ತಿದ್ದುದು ನೆನಪಿಗೆ ಬಂದಿತು. ಕಾಕತಾಳ ನ್ಯಾಯವೆಂದರೂ ಸರಿಯೆ, ಹೆಚ್ಚಿನ ಆಶ್ಚರ್ಯಕರ ಸಂಗತಿಯೇನೆಂದರೆ–ಮರದ ಬುಡದ ಕೆಲದಲ್ಲಿಯೆ ಕೆಳಭಾಗದಲ್ಲಿ ಕೈಯ ಆಕಾರವುಳ್ಳ ದಪ್ಪ ಬಿಳಲು ಇತ್ತು; ಅವನು ಊರು ಬಿಡುವ ಮುನ್ನ ಈ ಬಿಳಲು ಇರಲಿಲ್ಲ; ಕೈಯಂತಿದ್ದ ಆ ಬಿಳಲಿಗೆ ತೋರುಬೆರಳಿನಂತಹ ಚಾಚುಭಾಗವೊಂದಿದ್ದು, ಅದು ಆ ಮಾತಿನ ಕಡೆಗೆ ತೋರುತ್ತಿದ್ದಿತು. ಜಾರುತ್ತಿದ್ದ ಸಂಜೆಯ ಮಬ್ಬಿನಲ್ಲೇನೊ ಅದು ಹಾಗೆಯೆ ಕಾಣುತ್ತಿತ್ತು.

"ನಂಬುವಂಥ ಮನುಷ್ಯನು, ನಾನು ಪ್ರಪಂಚದಲ್ಲೆಲ್ಲ ಹುಡುಕುತ್ತಿದ್ದ ನಿಧಿ ಕಡೆಗೆ ನನ್ನ ತಾಯ ಮನೆಬಾಗಿಲ ಮುಂದೆಯೇ ಹೂತಿದೆ ಎಂದು ಊಹಿಸಬಹುದು. ಹಾಗಿರುವ ಪಕ್ಷದಲ್ಲಿ, ನಿಜವಾಗಿಯೂ ಅದು ಎಂತಹ ವಿನೋದದ ವಿಷಯ!" ಎಂದು ವಿಶ್ವನಾಥನ ತನಗೆ ತಾನೆ ಹೇಳಿಕೊಂಡನು.

ಈ ವಿಷಯವಾಗಿ ಅವನು ಇನ್ನು ಹೆಚ್ಚು ಆಲೋಚಿಸಲಿಲ್ಲ; ಏಕೆಂದರೆ, ಆ ಸಮಯದಲ್ಲಿ ಮನೆಯ ಬಾಗಿಲು ತೆರೆಯಿತು; ವಯಸ್ಸಾದ ಒಬ್ಬಾಕೆ ಹೊಸಿಲಮೇಲೆ ನಿಂತು, ತನ್ನ ಮನೆಯಂಗಳಕ್ಕೆ ಹೇಳದೆ ಕೇಳದೆ ನುಗ್ಗಿ ತನ್ನ ಮರದ ನೆಳಲಿನಲ್ಲಿ ನಿಂತಿರುವಾತನು ಯಾರಿರಬಹುದೆಂದು ಮಬ್ಬಿನಾಚೆಗೆ ನೋಟವನ್ನು ಹರಿಸಲು ಪ್ರಯತ್ನಿಸುತ್ತಿದ್ದಳು. ಹಾಗೆ ನಿಂತಿದ್ದವಳು ವಿಶ್ವನಾಥನ ತಾಯಿಯೆಂದು ಬೇರೆ ಹೇಳಬೇಕಾಗಿಲ್ಲ. ತಾಯಿಯನ್ನು ಅವಳ ಸಂತಸಕ್ಕೆ ಬಿಟ್ಟು, ಮಗನನ್ನು ಅವನ ವಿಶ್ರಾಂತಿಗೆ, –ಆ ಶಾಂತವಾದ ವಿಶ್ರಾಂತಿ ಅವನಿಗೆ ದೊರೆಕಿದ್ದ ಭಾಗದಲ್ಲಿ ಆ ವಿಶ್ರಾಂತಿಗೆ ಬಿಟ್ಟು, ತಾಯಿ ಮಕ್ಕಳ ಸಮಾಗಮವಾಯಿತು ಎಂದು ಸೂಚಿಸಿ ಮುಂದುವರಿಯೋಣ.

ಬೆಳಗಾದಾಗ, ಚಿಂತಾಕುಲನಾಗಿಯೇ ಅವನು ಮೇಲಕ್ಕೆದ್ದನು; ಅವನ ಭಾಗಕ್ಕೆ ನಿದ್ರೆಯೂ ಎಚ್ಚರವೂ ಎರಡೂ ಸಮಾನವಾಗಿದ್ದುವು: ಏಕೆಂದರೆ, ಎರಡೂ ಸ್ವಪ್ನಪೂರ್ಣವಾಗಿದ್ದುವು. ತನ್ನ ಅದೃಷ್ಟದ ರಹಸ್ಯತ್ರಯವನ್ನು ಭೇದಿಸುವುದಕ್ಕೆ ಹಿಂದೆ ಅವನು ಎಷ್ಟು ಹುಮ್ಮಸ್ಸಿನಿಂದ ಪರಿತಪಿಸುತ್ತಿದ್ದನೊ ಅದೆಲ್ಲವೂ ಮತ್ತೆ ಅವನಲ್ಲಿ ಪ್ರಜ್ವಲಿತವಾಯಿತು. ಅವನ ಹಿಂದಿನ ದರ್ಶನಗಳ ತಿಂತಿಣಿಯೆಲ್ಲವೂ ತನ್ನ ತಾಯ ಮನೆಯಲ್ಲಿಯೇ ಅವನಿಗಾಗಿ ಕಾದಿದ್ದು ಅವನು ಹಿಂದಿರುಗಿದ್ದಕ್ಕಾಗಿ ಅವನಿಗೆ ಸ್ವಾಗತ ನೀಡಲು ಸುತ್ತಮುತ್ತ ಸುಳಿದಾಡುತ್ತಿದ್ದುವೊ ಎಂಬಂತೆ ತೋರಿತು ಅವನಿಗೆ. ಚೆನ್ನಾಗಿ ನೆನಪಿನಲ್ಲಿದ್ದ ತನ್ನ ಮಲಗುವ ಕೋಣೆಯಲ್ಲಿ–ತಾನು

ಎಳೆಯನಾಗಿದ್ದಾಗ ಮಲಗಿದ್ದ ದಿಂಬಿನ ಮೇಲೆಯೆ–ರಜಪುಟಾಣದ ಮರಳುಗಾಡಿನಲ್ಲಿ ಗೂಡಾರದ ಮರೆಯಲ್ಲಿ ಕಳೆದುದಕ್ಕಿಂತಾಗಲಿ ಅಥವಾ ನಿರ್ಜನವಾದ ವಿಂಧ್ಯಾರಣ್ಯದ ಭೀಕರ ತಮೋಮಧ್ಯದಲ್ಲಿ ಕಳೆದುದಕ್ಕಿಂತಾಗಲಿ ಹೆಚ್ಚು ಘೋರವಾದ ರಾತ್ರಿಯನ್ನು ಇಂದು ಅವನು ಕಳೆದಿದ್ದನು. ಛಾಯಾಕನ್ಯೆಯೊಬ್ಬಳು ಅವನ ಹಾಸಿಗೆಯ ಬಳಿ ಕದ್ದು ಸುಳಿದು, ಅವನ ಪ್ರತಿಸ್ಪಂದಿಸುತ್ತಿದ್ದ ಹೃದಯದ ಮೇಲೆ ತನ್ನ ಬೆರಳನ್ನು ಇಟ್ಟಿದ್ದಳು; ತಮೋಮಧ್ಯದಿಂದ ಜ್ವಾಲಾಹಸ್ತವೊಂದು ಕಾಣಿಸಿಕೊಂಡು, ಭೂಗರ್ಭನಿಕ್ಷಿಪ್ತರಹಸ್ಯವೊಂದರ ಕಡೆಗೆ ತೋರುತ್ತ ಕಂಗೊಳಿಸಿತ್ತು; ನರೆಗೂದಲಿನ ಮುನಿಯೊಬ್ಬನು ತನ್ನ ಭವಿಷ್ಯದ್ವಾದಿಯಾದ ಕರದಂಡವನ್ನು ಗಂಭೀರವಾಗಿ ತೂಗಾಡಿಸುತ್ತ, ಅದೇ ಛಾಯಾರೂಪಗಳು, ಹಗಲಾದ್ದರಿಂದ ಅಸ್ಫುಟವಾಗಿದ್ದರೂ ಕೂಡ ಇನ್ನೂ ಗುಡಿಸಿಲಿನ ಸುತ್ತ ಮುತ್ತ ಸುಳಿದಾಡುತ್ತ, ವಿಶ್ವನಾಥನು ಹಿಂದಿರುಗಿದ್ದ ಸಮಾಚಾರವನ್ನು ಕೇಳಿ ಅವನ ತಾಯಿಯ ಸಲುವಾಗಿಯಾದರೂ ಅವನಿಗೆ ಸ್ವಾಗತ ಬಯಸುವುದಕ್ಕಾಗಿ ಇತ್ತ ನೆರೆದಿದ್ದ ನೆರೆಹೊರೆಯ ಪರಿಚಯಸ್ಥ ಜನವೃಂದದೊಡನೆ ಸೇರಿಕೊಂಡಿದ್ದುವೊ ಎಂಬಂತಿತ್ತು. ಹಾಗೆ ನೆರೆದಿದ್ದ ಅವರ ಕಣ್ಣಿಗೆ ವಿಶ್ವನಾಥನು, ಒಬ್ಬ ಎತ್ತರವಾದ, ಶ್ಯಾಮಲವರ್ಣದ, ವಿನಯಭೂಷಿತ ವರ್ತನೆಯಿಂದಲೂ ಮೃದುಮಧುರ ಭಾಷಣದಿಂದಲೂ ಘನತೆಗೊಂಡಿದ್ದ, ಪರಕೀಯ ಸ್ವರೂಪವುಳ್ಳ, ಆಗಿಂದಾಗ್ಗೆ ಅದೃಶ್ಯವಾದುದರ ದರ್ಶನಪಡೆಯುತ್ತಿದ್ದಂತೆ ಕಾಣುತ್ತಿದ್ದ, ಅಂತರ್‌ದೃಷ್ಟಿಯುಳ್ಳ ಕಣ್ಣುಗಳಿಂದ ಆಕರ್ಷಣೀಯನಾಗಿದ್ದ ಒಬ್ಬ ಗಂಭೀರ ವ್ಯಕ್ತಿಯಾಗಿ ಕಂಡನು.

ವಿಶ್ವನಾಥನ ತಾಯಿಯ ಸಂತೋಷಕ್ಕೆ ಪಾರವೇ ಇರಲಿಲ್ಲ. ತಾನು ಎಂದಿನಂತೆ ಮತ್ತೆ ತನ್ನ ಪ್ರೇಮವನ್ನೆಲ್ಲ ಒಬ್ಬರ ಮೇಲೆ ಎರೆಯಬಹುದೆಂದೂ, ಮತ್ತೆ ಒಬ್ಬರ ಆರೈಕೆ ಮಾಡುವ ಹಿತವಾದ ಕರ್ತವ್ಯ ತನ್ನ ಪಾಲಿಗೆ ಹಿಂದಿರುಗಿತೆಂದೂ, ಮತ್ತೆ ಗೃಹಕೃತ್ಯ ನಡಸುವ ಸುಖಕರವಾದ ಹೊಣೆ ತನ್ನ ಭಾಗಕ್ಕೆ ಬಂದಿತೆಂದೂ ಆಕೆ ಹಿಗ್ಗುತ್ತ ಮನೆಯಲ್ಲೆಲ್ಲ ಒಂದೇ ಸಮನೆ ಓಡಾಡತೊಡಗಿದಳು.

ಆಗ ಮಧ್ಯಾಹ್ನವಾಗಿತ್ತು; ಅವಳು ಒಮ್ಮೆ ಅಕಸ್ಮಾತ್ತಾಗಿ ಬಾಗಿಲ ಹೊರಗಡೆಗೆ ನೋಡಿದಾಗ ದಾರಿಯಲ್ಲಿ, ಕಾಯುತ್ತಿದ್ದ ಬಿಸಿಲಿನಲ್ಲಿ, ಹೊಂಗೆಮರಗಳ ತಣ್ಣೆಳಲ ಅಡಿಯಲ್ಲಿ, ಮೂವರು ವ್ಯಕ್ತಿಗಳು ಬರುತ್ತಿದ್ದುದನ್ನು ಕಂಡಳು. ಕಡೆಗೆ, ಅವರು ತನ್ನ ಮನೆಯನ್ನೇ ಸಾರುತ್ತಿದ್ದುದು ಅವಳಿಗೆ ವ್ಯಕ್ತವಾಯಿತು.

"ನೋಡು, ವಿಶ್ವನಾಥ!" ಎಂದು ತಾಯಿಗೆ ಸಹಜವಾದ ಹೆಮ್ಮೆಯೊಡನೆ ಅವಳು ಮಗನನ್ನು ಕರೆದು ಹೇಳತೊಡಗಿದಳು: "ನೋಡಲ್ಲಿ, ಹೊನ್ನಯ್ಯಗೌಡರೂ ಇನ್ನಿಬ್ಬರು ಪಂಚಾಯತದಾರರೂ ನಿನ್ನನು ನೋಡುವುದಕ್ಕಾಗಿಯೇ ಇತ್ತ ಕಡೆ ಬರುತ್ತಿದ್ದಾರೆ. ನೀನು ಪರದೇಶದಲ್ಲಿ ನೋಡಿರುವುದೆಲ್ಲವನ್ನೂ ಅವರಿಗೆ ಮೊದಲಿಂದ ಕಡೆವರೆಗೆ ವಿವರಿಸಿ ಹೇಳು."

ವಿಶ್ವನಾಥನನ್ನು ಸಂದರ್ಶಿಸಲು ಬಂದ ಆ ಮೂವರಲ್ಲಿ ಪ್ರಮುಖನಾದ ಹೊನ್ನಯ್ಯಗೌಡನು ಬಹಳ ಆಡಂಬರದವನಾದರೂ ಒಳ್ಳೆಯ ಮುದುಕ; ಗ್ರಾಮದ ವ್ಯವಹಾರಗಳಿಗೆಲ್ಲ ಅವನೇ ಮುಖಂಡ, ಮತ್ತು ಮುಖ್ಯ ಸಂಚಾಲಕ; ಮತ್ತು ಅವನು ಅತ್ಯಂತ ಪ್ರಾಜ್ಞರಲ್ಲಿ ಒಬ್ಬನೆಂದು ಗಣ್ಯನಾಗಿದ್ದವನು. ಅವನು ತಲೆಗೆ ರೇಶ್ಮೆಯ ಪಾಗು ಧರಿಸಿದ್ದನು; ಸೊಗಸಾದ ಕಸೆಯ ಅಂಗಿಯನ್ನು ತೊಟ್ಟಿದ್ದನು; ಅದರ ಮೇಲೆ ಹಚ್ಚಡ ಒಂದನ್ನು ಹೊದೆದಿದ್ದನು; ಬೆಳ್ಳಿಯ ಕಟ್ಟಿನಿಂದ ಅಲಂಕೃತವಾಗಿದ್ದ ದಂಡವನ್ನು ಕೈಯಲ್ಲಿ ಹಿಡಿದಿದ್ದನು; ಅವನು ಅದನ್ನು ಊರಿಕೊಂಡು ನಡೆಯುವುದಕ್ಕಿಂತ ಹೆಚ್ಚಾಗಿ ಕೈಗೆ ಒಂದು ಭೂಷಣವಾಗಿ ಹಿಡಿದಿದ್ದಂತೆ ತೋರುತ್ತಿತ್ತು. ಅವನ ಜೊತೆಯವರಿಬ್ಬರೂ ಅವನಂತೆಯೆ ಗಣ್ಯಪುರುಷರಾಗಿ ಕಾಣುತ್ತಿದ್ದರು; ಆದರೆ, ಅವರು ಅವನಿಗಿಂತ ಕೆಳಗಿನ ವರ್ಗದವರೆಂಬುದು ಅವರ ಉಡುಪಿನಿಂದಲೆ ಚೆನ್ನಾಗಿ ವ್ಯಕ್ತವಾಗುತ್ತಿತ್ತು. ಅವರು ಅವನ ಹಿಂದುಗಡೆ ಬಹಳ ಭಯಭಕ್ತಿಯಿಂದ ನಡೆದು ಬರುತ್ತಿದ್ದುದರಿಂದ ಅವರು ಅವನ ಅನುಯಾಯಿಗಳಾಗಿದ್ದರೆಂದು ಎಣಿಸಲು ಅವಕಾಶವಿತ್ತು.

ಈ ಮೂವರೂ ದಾರಿಯಲ್ಲಿ ಬರುತ್ತಿದ್ದ ವೇಳೆಯಲ್ಲಿ, ವಿಶ್ವನಾಥನು ಬಾಗಿಲ ಎದುರಿನಲ್ಲಿ ಚಾಪೆಯ ಮೇಲೆ ಗೋಡೆಯೊರಗಿ ಕುಳಿತುಕೊಂಡು ಅವರನ್ನೆ ದಿಟ್ಟಿಸಿ ನೋಡುತ್ತಿದ್ದನು; ಅವನ ಕಣ್ಣುಗಳು ಹಾಗೆ ದಿಟ್ಟಿಸಿ ನೋಡುತ್ತಿದ್ದರೂ ಅವನ ಗಮನ ಮಾನಸಿಕ ಪ್ರಪಂಚದ ಮೋಹಕ ವಾತಾವರಣದಲ್ಲಿ ವಿಹರಿಸುತ್ತ, ಅವರ ಆಕೃತಿಗಳನ್ನೂ ಅಲ್ಲಿಯೇ ಪರಿಭಾವಿಸುತ್ತಿತ್ತು.

ಅವನ ಮನಸ್ಸಿನ ಪರಿಭಾವನೆ ಈ ರೀತಿಯಿತ್ತು: "ಇಂದು ಇಲ್ಲಿ ಮೂವರು ವಯೋವೃದ್ಧರಾದ ಮಹನೀಯರು ಬರುತ್ತಿದ್ದಾರೆ. ಇವರಲ್ಲಿ ಮುಖ್ಯಸ್ಥನಾದ ಮೊದನೆಯವನು ದಂಡಧಾರಿಯಾದ ಪೂಜ್ಯಜ್ಞಾನಿಯಾಗಿ ಕಾಣುತ್ತಾನೆ. ಇವರೇ ನನ್ನ ಭಾಗ್ಯದ ಸಂದೇಶವನ್ನು ತಂದಿರುವ ದೂತರಾಗಿದ್ದಾರೆ!"

ಹೊನ್ನಯ್ಯಗೌಡನೂ ಅವನ ಜೊತೆಯವರೂ ಮನೆಯನ್ನು ಹೊಕ್ಕ ಕೂಡಲೆ ವಿಶ್ವನಾಥನು ಉತ್ಸುಕತೆಯಿಂದ ಮೇಲೆದ್ದು ಅವರಿಗೆ ಸ್ವಾಗತ ನೀಡಲು ಕೆಲವು

ಹೆಜ್ಜೆ ಮುಂದಕ್ಕೆ ಹೋದನು; ಅವನು ಎಲ್ಲರಿಗೂ ತಲೆಬಾಗಿ ವಂದಿಸಿ ಅವರನ್ನು ಬರಮಾಡಿಕೊಂಡಾಗ, ಅವನ ಶ್ಯಾಮಲವಾದ ಉನ್ನತಾಕೃತಿಯಲ್ಲಿ ಅದೊಂದು ಬಗೆಯ ಗಾಂಭೀರ್ಯ ಮೂಡಿ ಕಾಣುತ್ತಿತ್ತು. ಹೊನ್ನಯ್ಯಗೌಡನು ಗ್ರಾಮದಲ್ಲೆಲ್ಲ ಹಿರಿಯನಾದ್ದರಿಂದ ತಲೆಬಾಗಿದವರಿಗೆಲ್ಲ ಪ್ರಾಯಶಃ 'ದೇವರು ಒಳ್ಳೆಯದು ಮಾಡಲಿ' ಎಂದು ಹರಸುವುದೇ ಅವನ ಅಭ್ಯಾಸಕ್ಕೆ ಬಂದ ಕರ್ತವ್ಯವಾದ ಕಾರಣ, ಇಂದೂ ಅವನು ವಿಶ್ವನಾಥನನ್ನು ಹರಸುವುದಕ್ಕೋ ಎಂಬಂತೆ ದಂಡ ಸಮೇತವಾಗಿ ಕೈಗಳೆರಡನ್ನೂ ಮೇಲಕ್ಕೆತ್ತಿ, ಆಶೀರ್ವಚನ ಬಾಯಿಂದ ಹೊರಬರುವಷ್ಟರಲ್ಲಿಯೆ ತಟಕ್ಕನೆ ಕೈಗಳನ್ನು ಕೆಳಕ್ಕೆ ತಂದು ಜೋಡಿಸಿಕೊಂಡು ತಲೆಬಾಗಿ ಅವನಿಗೆ ನಮಸ್ಕರಿಸಿದನು. ಜೊತೆಯವರಿಬ್ಬರೂ ಸೊಂಟದವರೆಗೂ ಬಾಗಿ ವಿಶ್ವನಾಥನಿಗೆ ಪ್ರಣಾಮ ಮಾಡಿದರು. ವಿಶ್ವನಾಥನು ಮೂವರವನ್ನೂ ಕುಳಿತುಕೊಳ್ಳುವಂತೆ ಪ್ರಾರ್ಥಿಸಿಕೊಂಡನು. ಹೊನ್ನಯ್ಯಗೌಡನು ನಿಂತುಕೊಂಡೇ ತಾನು ಬಂದ ಉದ್ದೇಶವನ್ನು ವಿಶ್ವನಾಥನಿಗೆ ತಿಳಿಸಲು ಉಪಕ್ರಮಿಸಿದನು:

"ನಾನೂ ನನ್ನ ಜೊತೆಯವರಾದ ಇವರಿಬ್ಬರೂ ಈ ಗ್ರಾಮದ ಪಂಚಾಯತದಾರರಾಗಿರುವುದರಿಂದ ನಮ್ಮ ಮೇಲೆ ಅನೇಕ ಕರ್ತವ್ಯಭಾರಗಳು ಬಿದ್ದಿವೆ. ಮೂರು ದಿನಗಳಿಂದಲೂ ನಮ್ಮ ಮನಸ್ಸು ಒಂದು ಅತ್ಯಂತ ಮುಖ್ಯವಾದ ಅಧಿಕಾರಸ್ಥಾನಕ್ಕೆ ಒಬ್ಬ ಯೋಗ್ಯ ಪರುಷನನ್ನು ಆರಿಸುವ ಮಹತ್ತರವಾದ ಕಾರ್ಯದಲ್ಲಿ ಉದ್ಯುಕ್ತವಾಗಿದೆ. ನಾವು ಆರಿಸುವ ಅಧಿಕಾರಿ ಒಂದು ದೊಡ್ಡ ಹೊಣೆ ವಹಿಸಿಕೊಂಡು ಒಂದು ಬಗೆಯ ಆಡಳಿತವನ್ನೇ ಮಾಡಬೇಕಾಗಿದೆ. ಅದು, ಸರಿಯಾಗಿ ಆಲೋಚಿಸಿ ನೋಡಿದರೆ, ರಾಜಾಧಿರಾಜರ ಕಾರ್ಯಭಾರಕ್ಕಿಂತ ಕಡಮೆಯಾದುದೇನೂ ಅಲ್ಲ. ನೀನಾದರೋ ನಮ್ಮ ಊರಿನವನೇ ಆಗಿದ್ದೀಯೆ. ನೀನು ಹುಟ್ಟಿದಂದಿನಿಂದಲೂ ಬಹಳ ಬುದ್ಧಿವಂತನೆಂಬುದು ನಮಗೆಲ್ಲ ತಿಳಿದ ವಿಷಯ. ನಿನಗೆ ಸಹಜವಾದ ಜ್ಞಾನಸಂಪತ್ತಿದೆ. ಪರದೇಶಗಳ ಸುತ್ತಾಟದಿಂದ ನೀನು ಸಂಸ್ಕೃತನಾಗಿರುತ್ತೀಯೆ. ನಿನ್ನ ಯೌವನದ ಕೊಂಕುಗಳೆಲ್ಲವೂ ತಿದ್ದಿಹೋಗಿ ಎಷ್ಟೋ ಕಾಲವಾಗಿದೆ; ನಿನ್ನ ಅಂದಿನ ಭ್ರಾಂತಿಯ ಕಲ್ಪನೆಗಳೆಲ್ಲವೂ ಮಾಯವಾಗಿದೆ. ಇದನ್ನೆಲ್ಲ ಪರ್ಯಾಲೋಚಿಸಿದ ಮೇಲೆ, ನಮ್ಮ ಉದ್ದೇಶವನ್ನು ನೆರವೇರಿಸಿ ಕೊಡುವುದಕ್ಕಾಗಿಯೇ ದಯಾಮಯನಾದ ಭಗವಂತನು ನಿನ್ನನ್ನು ಈ ಸಂಧಿಯಲ್ಲಿ ಇಲ್ಲಿಗೆ ಕಳಿಸಿರುತ್ತಾನೆ ಎಂಬುದಾಗಿ ನಾವು ಭಾವಿಸಿದ್ದೇವೆ."

ಈ ಸಾಡಂಬರ ಭಾಷಣವನ್ನು ಕೇಳುತ್ತಿರುವಾಗ, ವಿಶ್ವನಾಥನ ಕಣ್ಣುಗಳು ಮಾತನಾಡುತ್ತಿದ್ದ ವ್ಯಕ್ತಿಯ ಮೇಲೆ ಕೀಲಿಸಿ ಹೋಗಿದ್ದುವು. ಗೌಡನ

ಗಂಭೀರಾಕೃತಿಯಲ್ಲಿ ಏನೋ ರಹಸ್ಯವಾದುದನ್ನು, ಏನೋ ಅಲೌಕಿಕವಾದುದನ್ನು ಕಂಡಂತೆಯೂ, ಅವನ ಕಸೆಯ ಅಂಗಿಯನ್ನು ಮುಚ್ಚಿದ್ದ ಕಾವಿಗೆಂಪಿನ ಹೊದೆಹಚ್ಚಡ ಮುನಿಯೋಗ್ಯವಾದ ಕಾಷಾಯ ವಸ್ತ್ರದಂತೆಯೂ, ಅವನ ತಕ್ಕಮಟ್ಟಿಗೆ ಬೆಳೆದಿದ್ದ ನರೆತ ಗಡ್ಡ ತಪಸ್ವಿಯ ಗಡ್ಡದಂತೆಯೂ ವಿಶ್ವನಾಥನಿಗೆ ತೋರಿದುವೋ ಎಂಬಂತೆ ಅವನ ನೋಟ ಗೌಡನ ಸ್ವರೂಪಾವಲೋಕನದಲ್ಲಿ ನೆಟ್ಟು ಹೋಗಿತ್ತು. ವಿಶ್ವನಾಥನ ಆಶ್ಚರ್ಯಕ್ಕೂ ಸಾಕಷ್ಟು ಕಾರಣವಿಲ್ಲದೆ ಇರಲಿಲ್ಲ: ಏಕೆಂದರೆ, ವಿಶ್ವನಾಥನು ಯಾರನ್ನು ಪ್ರಪಂಚದಲ್ಲೆಲ್ಲ ಅನ್ವೇಷಣ ಮಾಡುತ್ತಿದ್ದನೊ ಆ ಮುನಿವರ್ಯನ ಮಹಾಸಂದೇಶವನ್ನು ಸಾರುವ ಕರಧೃತದಂಡಚಾಲನ ಸಂಕೇತವನ್ನೇ ಯಥಾವತ್ತಾಗಿ ಪಡಿಮೂಡಿಸಿತ್ತು ಗೌಡನ ಕರದಂಡದ ಚಂಚಚ್ಚಾಲನ!

ಉತ್ಸುಕತೆಯಿಂದ ಕಂಪಿಸುತ್ತಿದ್ದ ಧ್ವನಿಯಲ್ಲಿ ವಿಶ್ವನಾಥನು ಇಂತು ಕೇಳಿದನು: "ಗೌಡಮಹಾಶಯರೆ, ನನ್ನನ್ನು ರಾಜಾಧಿರಾಜರಿಗೆ ಸರಿಗಟ್ಟುವ ಆ ಮಹಾಪದವಿಯಾದರೂ ಯಾವುದಿರಬಹುದು?"

ಗೌಡನು ಗಂಭೀರಧ್ವನಿಯಲ್ಲಿ ಉತ್ತರ ಕೊಟ್ಟನು: "ನಮ್ಮ ಗ್ರಾಮದ ಮಠದ ಉಪಾಧ್ಯಾಯ ಪಟ್ಟವೇ ಅದು. ಪೂಜ್ಯರಾದ ಕಾಶೀನಾಥ ಪಂಡಿತರು ಆ ಮಠವನ್ನು ಸ್ಥಾಪಿಸಿ, ಅದನ್ನು ಐವತ್ತು ವರ್ಷಗಳಿಂದಲೂ ನಡಸಿಕೊಂಡು ಬಂದು, ನಮ್ಮ ಗ್ರಾಮದ ಎಲ್ಲ ಮಕ್ಕಳಿಗೂ ಜಾತಿಮತಭೇದವಿಲ್ಲದೆ ವಿದ್ಯಾದಾನಮಾಡಿ, ಎಲ್ಲರಿಗೂ ಬಹಳ ಬೇಕಾದವರಾಗಿದ್ದು, ಈಗ ಮೊನ್ನೆ ತಾನೆ ತೀರಿಹೋದರು. ಅವರು ತೀರಿಹೋದದ್ದರಿಂದ, ನಮ್ಮ ಗ್ರಾಮದ ಹುಡುಗರೆಲ್ಲ ಕುರುಬನಿಲ್ಲದ ಕುರಿಗಳಂತಾಗಿದ್ದಾರೆ. ನೀನು ಆ ಪಂಡಿತರ ಕೈಕೆಳಗೆ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿರುತ್ತೀಯೆ. ಅವರು ಬರಿಯ ಕಾಶೀನಾಥರು; ಅವರ ಅನುಭವಕ್ಕೆ ಎಷ್ಟಾದರೂ ಒಂದು ಮಿತಿಯಿತ್ತು. ನೀನು ಪ್ರಪಂಚವನ್ನೆಲ್ಲ ಸುತ್ತಾಡಿ 'ವಿಶ್ವನಾಥ'ನೆನ್ನಿಸಿಕೊಳ್ಳಲು ಅರ್ಹತೆಯನ್ನು ಪಡೆದಿರುತ್ತೀಯೆ. ಅವರ ನಿಧನದಿಂದ ತೆರಪಾಗಿರುವ ಸ್ಥಾನಕ್ಕೆ ಅವರ ಶಿಷ್ಯನಾದ, ಜ್ಞಾನಾನುಭವಗಳಲ್ಲಿ ಅವರನ್ನು ಮೀರಿಸಿರುವ ನೀನೇ ತಕ್ಕವನು."

"ನಿಮ್ಮ ಸೂಚನೆಯನ್ನು ಪರ್ಯಾಲೋಚಿಸಿ, ಇನ್ನು ಮೂರು ದಿನಗಳೊಳಗಾಗಿ ನನ್ನ ನಿಶ್ಚಯವನ್ನು ನಿಮಗೆ ತಿಳಿಸುತ್ತೇನೆ" ಎಂದು ವಿಶ್ವನಾಥನು ಅವಸರದಿಂದ ಉತ್ತರ ಕೊಟ್ಟನು.

ಇನ್ನು ಕೆಲವು ಮಾತುಗಳನ್ನಾಡಿದ ಮೇಲೆ ಗೌಡನೂ ಅವನ ಜೊತೆಯವರೂ ವಿಶ್ವನಾಥನನ್ನು ಬೀಳ್ಕೊಂಡು ಹೊರಟು ಹೋದರು. ಆದರೆ, ಅವನ ಕಲ್ಪನೆಯಲ್ಲಿ

ಅವರ ಪ್ರತಿಬಿಂಬಗಳು ಇನ್ನೂ ನೆಲಸಿದ್ದುವು; ಮತ್ತು, ಮೊದಲು ಅವನ ಕನಸಿನಲ್ಲಿ ಕಾಣಿಸಿಕೊಂಡು, ಆಮೇಲೆ ಪರಿಚಿತವಾದ ವಸ್ತುಗಳು ಹೇಗೋ ಹಾಗೆ ಅವನ ಎಚ್ಚರದ ವೇಳೆಯಲ್ಲೂ ಪರಿಚಿತ ಸ್ವರೂಪವನ್ನು ಧರಿಸಿ ಗೋಚರವಾಗುತ್ತಿದ್ದ ಆಕೃತಿಗಳ ಅಸ್ಪಷ್ಟ ಗಾಂಭೀರ್ಯವನ್ನು ಹೆಚ್ಚು ಹೆಚ್ಚಾಗಿ ತಳೆಯುತ್ತ ಬಂದುವು. ಅವನ ಮನಸ್ಸು ಗೌಡನ ಸ್ವರೂಪವನ್ನು ಕುರಿತು ಧ್ಯಾನಿಸುತ್ತ ಬಂದಂತೆಲ್ಲ ಅದು ತನ್ನ ಭಾವನಾವ್ಯಕ್ತಿಯಾದ ಮುನಿವರ್ಯನ ಸ್ವರೂಪವೇ ಎಂಬ ಭ್ರಮೆ ಬಲಿಯುತ್ತ ಬಂದು. ಒಂದು ವ್ಯಕ್ತಿ ಇನ್ನೊಂದು ವ್ಯಕ್ತಿಯ ನೆರಳು ಮಾತ್ರ ಎಂಬುದಾಗಿ ತೋರತೊಡಗಿತು. ಅದೇ ಮುಖಬಿಂಬ ಗಂಗಾ ತೀರದ ಸ್ನಾನಘಟ್ಟದಲ್ಲಿ ತನ್ನನ್ನು ದೃಷ್ಟಿಸಿ ನೋಡಿತ್ತಲ್ಲವೆ? ಅದೇ ಆಕೃತಿ ಮಧುರಾ ಪಟ್ಟಣದ ದೇವಸ್ಥಾನದ ಕೈಸಾಲೆಯಲ್ಲಿ ನಿಂತು ತನ್ನನ್ನು ಬಳಿಗೆ ಕರೆದಿತ್ತಲ್ಲವೆ? ಅದೇ ಮೂರ್ತಿ ಧಡಧಡನೆ ಧುಮುಕುತ್ತಿದ್ದ ಜಲಪಾತವೊಂದರಲ್ಲಿ ಮಬ್ಬಾಗಿ ವ್ಯಕ್ತಗೊಂಡಿತ್ತಲ್ಲವೆ? – ಎಂಬುದಾಗಿ ಅವನು ಈಗ ಆಲೋಚಿಸಿದನು. ಅವನು ಜ್ಞಾಪಕಕ್ಕೆ ತಂದುಕೊಳ್ಳಲು ಪ್ರಯತ್ನಪಟ್ಟ ಪ್ರತಿಸಲವೂ, ತಾನು ಸ್ವಪ್ನದಲ್ಲಿ ಕಂಡಿದ್ದ ಭಾಗ್ಯದೂತನ ಏನಾದರೂ ಒಂದು ಲಕ್ಷಣವನ್ನು ಈ ಶೀವಿಯ ಗಲಭೆಯ ಅಹಂಮನ್ಯನಾದ ಹಳ್ಳಿಯ ಚಿಕ್ಕ 'ದೊಡ್ಡಮನುಷ್ಯ'ನಲ್ಲಿ ಗುರುತು ಹಿಡಿಯುತ್ತಿದ್ದನು. ಇಂತಹ ಆಲೋಚನಾಪರಂಪರೆಯಲ್ಲಿ ಮುಳುಗಿ, ತನ್ನ ಪ್ರಯಾಣ ಸಾಹಸಗಳ ವಿಷಯವಾಗಿ ತಾಯಿ ಕೇಳಿದ ಸಾವಿರಾರು ಪ್ರಶ್ನೆಗಳಿಗೆ ಕಿವಿಗೊಡದೆಯೆ, ಒಂದುವೇಳೆ ಕಿವಿಗೊಟ್ಟರೂ ಅಸ್ಪಷ್ಟವಾಗಿ ಉತ್ತರ ಕೊಡುತ್ತ, ವಿಶ್ವನಾಥನು ಸುಮ್ಮನೆ ಕುಳಿತಿದ್ದನು. ಸಂಜೆಯಾದಾಗ ಅವನು ಎಚ್ಚರಗೊಂಡು ಸುತ್ತಾಡಿಕೊಂಡು ಬರುವುದಕ್ಕಾಗಿ ಹೊರಕ್ಕೆ ಹೊರಟನು; ಅಂಗಳದ ಆಲದ ಮರವನ್ನು ಹಾದು ಹೋಗುತ್ತಿದ್ದಾಗ, ಅರ್ಧ ಅಳಿಸಿ ಹೋಗಿದ್ದ ಅಕ್ಷರಗಳ ಕಡೆಗೆ ಕೆಳಮುಖವಾಗಿ ತೋರುತ್ತಿದ್ದ ಕೈಯ ಆಕೃತಿ ಮತ್ತೆ ಅವನ ಕಣ್ಣಿಗೆ ಬಿದ್ದಿತು.

ವಿಶ್ವನಾಥನು ಹಳ್ಳಿಯ ಹಾದಿಯಲ್ಲಿ ಮುಂದುಮುಂದಕ್ಕೆ ನಡೆದುಕೊಂಡು ಹೋದಂತೆ, ಸಂಜೆಯ ಸೂರ್ಯನ ಮಟ್ಟವಾದ ಕಿರಣಗಳು ಅವನ ನೆರಳನ್ನು ಅವನ ಮುಂದುಗಡೆ ಬಹು ದೂರಕ್ಕೆ ಬಿಂಬಿಸಿದ್ದುವು; ಇಂದು ದಾರಿಯಲ್ಲಿ ತನ್ನ ನೆರಳು ತನಗಿಂತ ಮುಂದಾಗಿ ಹೇಗೆ ದೂರ ವಸ್ತುಗಳೊಡನೆ ಚರಿಸುತ್ತಿದೆಯೊ ಹಾಗೆಯೆ ತನ್ನ ಮನದಿಂದೊಗೆದ ಮುಂಭಾವನೆಯೊಂದು ಜೀವನಮಾರ್ಗದುದ್ದಕ್ಕೂ ತನಗಿಂತ ಮುಂದಾಗಿ ಭವಿಷ್ಯದೊಡನೆ ಚರಿಸುತ್ತಿದೆ– ಎಂಬುದಾಗಿ ಅವನು ಯೋಚಿಸಿದನು. ತನಗಿಂತ ಮೊದಲೇ ತನ್ನ ಎತ್ತರವಾದ

ನೆರಳು ಬಳಿಸಾರಿದ್ದ ಪ್ರತಿಯೊಂದು ವಸ್ತುವಿನ ಸಮೀಪಕ್ಕೆ ಹೋದಾಗಲೂ, ಪ್ರತಿಯೊಂದೂ ತನ್ನ ಬಾಲ್ಯ ಯೌವನಗಳಲ್ಲಿ ಪರಿಚಿತವಾಗಿದ್ದು ನೆನಪಿನಲ್ಲಿ ಉಳಿದವುಗಳಲ್ಲಿ ಒಂದಾಗಿ ಇರುತ್ತಿತ್ತು. ಹಾದಿಯ ಒಂದೊಂದು ತಿರುವೂ ನೆನಪಿಗೆ ಬಂದಿತು. ದೃಶ್ಯದ ಹೆಚ್ಚು ಕ್ಷಣಿಕ ಲಕ್ಷಣಗಳು ಕೂಡ ಸಂದ ದಿನಗಳಲ್ಲಿ ಹೇಗಿದ್ದುವೊ ಇಂದೂ ಹಾಗೆಯೆ ಇದ್ದುವು. ಹಾದಿಯ ಹುಲ್ಲಂಚಿನ ಮೇಲೆ ಮಂದೆಗೂಡಿ ಮೇಯುತ್ತಿದ್ದ ಹಸುಗಳು ತಮ್ಮ ಉಸಿರಿನ ನರುಗಂಪಿನಿಂದ ಅವನನ್ನು ಆಮೋದಗೊಳಿಸಿದುವು. “ನಾನು ಪ್ರವಾಸದಲ್ಲಿ ಒಮ್ಮೆ ಬಳಲಿದಾಗ ನನ್ನನ್ನು ಹುರಿದುಂಬಿಸಿದ ಮಲಯ ಮಾರುತಕ್ಕಿಂತ ಇದು ಹೆಚ್ಚು ಮಧುರವಾಗಿದೆ” ಎಂದು ಅವನು ಬಗೆದನು. ಹಾಗೆಯೆ ಮುಂದುವರಿಯುತ್ತಿರಲು, ಒಂದು ಮುದ್ದಾದ ಸಣ್ಣ ಹಸುಳೆ ಮನೆಯ ಬಾಗಿಲಿನಿಂದ ಹಾದಿಗೆ ಉರುಳಿಬಂದು, ಎಳನಗೆಯನ್ನು ಬೀರುತ್ತ, ಸಂಜೆಗಂಪಿನಲ್ಲಿ ಚೆಂದರಳಿರಂತೆ ನಳನಳಿಸುತ್ತ, ಹೆಚ್ಚು ಕಡಮೆ ಅವನ ಅಡಿಗಳೆಡೆಯಲ್ಲಿ ಮಲಗಿತು. ದೀರ್ಘಕಾಯನಾದ ವಿಶ್ವನಾಥನು ಬಾಗಿ, ಮಗುವನ್ನು ಎತ್ತಿಕೊಂಡು, ಅದನ್ನು ಅಲ್ಲಿಯೆ ಬಳಿಯಲ್ಲಿದ್ದ ಅದರ ತಾಯ ವಶಕ್ಕೆ ಒಪ್ಪಿಸಿದನು. “ಇನ್ನು ಮುಂದೆ ಮಕ್ಕಳು ನನ್ನ ವಶದಲ್ಲಿ ಇರುವುವಲ್ಲವೆ!” ಎಂದು ಅವನು ಒಮ್ಮೆ ನಿಟ್ಟುಸಿರುಬಿಟ್ಟು, ನಸುನಕ್ಕು, ತನಗೆ ತಾನೆ ಹೇಳಿಕೊಂಡನು. ಸಹಜಭಾವದ ಪ್ರವಾಹ ಅವನ ಹೃದಯದಲ್ಲಿ ಬುಗ್ಗೆಯಂತೆ ಚಿಮ್ಮುತ್ತಿರಲು, ಎಷ್ಟು ಪ್ರಯತ್ನಪಟ್ಟಿದ್ದರೂ ಪ್ರವೇಶಿಸದೆ ಮುಂದಕ್ಕೆ ಹೋಗಲು ಸಾಧ್ಯವಾಗದಂತೆ ಅವನನ್ನು ತಡೆದು ನಿಲ್ಲಿಸುತ್ತಿದ್ದ ಮನೆಯೊಂದರ ಬಳಿಗೆ ಬಂದನು. ಆಳವೂ ಕೋಮಲವೂ ಆದ ಆತ್ಮದಿಂದ ಹೊರಹೊರಡುತ್ತಿದ್ದಂತೆ ತೋರುತ್ತಿದ್ದ ಇಂಚರವೊಂದು ಮನೆಯೊಳಗೆ ವಿಷಾದಪೂರ್ಣವಾದ ಲಘು ಗೀತೆಯೊಂದನ್ನು ಹಾಡುತ್ತಿದ್ದಿತು.

ಅವನು ತನ್ನ ತಲೆ ಬಗ್ಗಿಸಿ, ತಗ್ಗಾದ ಬಾಗಿಲನ್ನು ಹಾದು ಮನೆಯೊಳಕ್ಕೆ ಹೋದನು. ಹೊಸಿಲ ಮೇಲೆ ಅವನ ಹೆಜ್ಜೆಯ ಸದ್ದಾದಕೂಡಲೆ, ಮಬ್ಬಾದ ಮನೆಯೊಳಗಿನಿಂದ ತರುಣಿಯೊಬ್ಬಳು ಮೊದಲು ತವಕದಿಂದ, ಬಳಿಕ ಎಚ್ಚರಿಕೆಯಿಂದ ಹೆಜ್ಜೆ ಹಾಕುತ್ತ ಬಂದಳು; ಬಂದು, ಅವನ ಮುಂದೆ ನಿಂತು, ತುಸು ಲಜ್ಜೆಯಿಂದ ತಲೆಬಾಗಿದಳು. ಅವಳ ದೃಷ್ಟಿ ಅವನ ಪಾದಗಳ ಮೇಲೆ ನೆಲಸಿತ್ತು. ಅವರಿಬ್ಬರ ಆಕೃತಿಗಳಲ್ಲಿ ಒಂದು ಬಗೆಯ ವಿಚಿತ್ರ ವ್ಯತ್ಯಾಸ ಕಾಣುತಿತ್ತು: ಪ್ರಪಂಚದೊಡನೆ ಹೋರಾಡಿದ್ದ, ಎಲ್ಲ ಬಿಸಿಲುಗಳಿಗೂ ಎಲ್ಲ ಗಾಳಿಗಳಿಗೂ ಮೈಯೊಡ್ಡಿದ್ದ, ಅವನ ಬಣ್ಣ ಶ್ಯಾಮಲ, ರೂಪ ರುದ್ರರಮಣೀಯ; ಅವಳೋ ಹೆಸರಿಗೆ ತಕ್ಕಂತೆ ಗೌರಾಂಗಿ, ನೋಟಕ್ಕೆ ಮಧುರ ಮನೋಹರಳು, ಶಾಂತಿಮೂರ್ತಿ–

ಅವಳ ಸರಳ ಜೀವನದ ಶಾಂತ ಗಮನಕ್ಕೆ ತನ್ನ ಮನೋಭಾವಗಳೆಲ್ಲವನ್ನೂ ಅಧೀನಗೊಳಿಸಿದ್ದಳೊ ಎಂಬಂತೆ, ಮನಸ್ಸು ಕ್ಷುಬ್ಧವಾಗಿದ್ದರೂ ಕೂಡ ಶಾಂತಿಮೂರ್ತಿ. ಅವರ ಮುಖಗಳು ಇಂತು ಹೊರನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ ಅವುಗಳಲ್ಲಿ ಪರಸ್ಪರ ಸಂಬಂಧವುಳ್ಳ ಒಂದು ಭಾವ–ಅರ್ಧ ಆರಿದ್ದ ಬೂದಿಮುಚ್ಚಿದ ಕೆಂಡದಿಂದ ಹೇಗೋ ಹಾಗೆ ಮತ್ತೆ ಹೊಸದಾಗಿ ಚಿಮ್ಮಿದ ಪರಸ್ಪರ ಸಂಬಂಧ ಸೂಕವಾದ ಭಾವನೆಯ ಒಂದು ಹೊಳಹು–ಕಂಡುಬರುತ್ತಿತ್ತು.

"ಯಾವಾಗ ಬಂದೆ, ಕ್ಷೇಮವೆ?" ಎಂದು ಕೇಳಿದಳು ಗೌರಿ. ಅವಳು ಇನ್ನೂ ತಲೆಬಾಗಿಸಿಯೆ ಇದ್ದಳು; ನಸುಲಜ್ಜೆ ನೆಲಸಿಯೆ ಇತ್ತು.

ಆದರೆ ವಿಶ್ವನಾಥನು ಕೂಡಲೆ ಉತ್ತರಕೊಡಲಿಲ್ಲ; ಏಕೆಂದರೆ, ಗೌರಿ ಧರಿಸಿದ್ದ ಹೃದಯಾಕಾರದ ಪದಕವೊಂದು ಅವನ ದೃಷ್ಟಿಗೆ ಬಿದ್ದು, ಅದರಲ್ಲಿ ಅವನ ಗಮನವೆಲ್ಲ ಸಿಲುಕಿಹೋಗಿತ್ತು. ಅದು ಸಾಧಾರಣವಾದ ಬೆಣಚುಕಲ್ಲಿನದು; ತನ್ನ ಮನೆಯಂಗಳದಲ್ಲಿ ದೊರೆತ, ಹಾಲುಗಲ್ಲಿಗಿಂತ ಹೆಚ್ಚು ಬಿಳುಪಾಗಿದ್ದ, ಕೆಂಪು ರೇಖೆಗಳಿಂದ ರಂಜಿತವಾದ ಬೆಣಚು ಕಲ್ಲನ್ನು ಮಸೆಗಲ್ಲಿನ ಮೇಲೆ ತೇದು ತೇದು, ಅದು ಹೃದಯದಾಕಾರವನ್ನು ತಳೆದಾಗ ತನ್ನ ಮನವೊಪ್ಪಿ, ತನ್ನ ಎಳೆತನದ ಗೆಳತಿ ಗೌರಿಯ ಜೊತೆಯಲ್ಲಿ ಅದರೊಡನೆ ಆಟವಾಡುತ್ತಿದ್ದುದು ಅವನ ನೆನಪಿಗೆ ಬಂದಿತು. ಅವನ ಸ್ವಪ್ನಸುಂದರೆ ಧರಿಸಿದ್ದ ಹೃದಯಾಕಾರದ ಪದಕಕ್ಕೂ ಈಗ ಗೌರಿ ಧರಿಸಿದ್ದ ಪದಕಕ್ಕೂ ಯಾವ ಭೇದವೂ ಇದ್ದಂತೆ ಅವನಿಗೆ ಕಂಡುಬರಲಿಲ್ಲ. ವಿಶ್ವನಾಥನು ಅನ್ವೇಷಣ ಯಾತ್ರೆಗೆ ಹೊರಡುವ ಮುನ್ನ ಗೌರಿಯನ್ನು ಬೀಳ್ಕೊಳ್ಳುವ ಸಂದರ್ಭದಲ್ಲಿ, ತನ್ನ ಎಳೆತನದ ಆಟದ ವಸ್ತುವಿಗೆ ಚಿನ್ನದ ಕುಂದಣ ಕಟ್ಟಿಸಿ ಅದನ್ನು ತನ್ನ ಜ್ಞಾಪಕಾರ್ಥವಾಗಿ ಗೌರಿಗೆ ಕೊಟ್ಟು ತೆರಳಿದ್ದನು.

ಕಡೆಗೆ, ವಿಶ್ವನಾಥನು–"ಗೌರಿ, ನನ್ನ ಹೃದಯ ಪದಕವನ್ನು ನೀನು ಇನ್ನೂ ಧರಿಸಿದ್ದೀಯೆ!" ಎಂದನು.

ಅವನ ಪಾದಗಳ ಮೇಲೆ ನೆಲಸಿದ್ದ ಅವಳ ದೃಷ್ಟಿ ಕೊಂಚಕೊಂಚವಾಗಿ ಮೇಲಕ್ಕೆ ಸರಿದು ಅವನ ದೃಷ್ಟಿಯೊಡನೆ ಬೆರೆಯಿತು; ನಸು ಲಜ್ಜೆಗೊಂಡಿದ್ದ ಅವಳು ಪೂರ್ಣಲಜ್ಜೆಯಿಂದ ಬೆವರಿಹೋದಳು; ಮುಖ ಕೆಂಪಡರಿತು. ಬೇಗನೆ ಮನಸ್ಸನ್ನು ಹತೋಟಿಗೆ ತಂದುಕೊಂಡು, ಸ್ವಲ್ಪ ಧೈರ್ಯವನ್ನೂ ಕೂಡಿಸಿಕೊಂಡಳು. ಹೃದಯದಲ್ಲಿ ಎಲ್ಲಿಯೋ ಅಡಗಿದ್ದ ಎಳೆತನದ ಸಲಿಗೆಯ ಭಾವ ಉಕ್ಕಿಬಂದು ಅವಳನ್ನು ಕೆಣಕಲು, ಅವಳು ಅವನನ್ನು ಹೀಗೆ ಕೇಳಿದಳು:

"ಪ್ರಪಂಚವನ್ನೆಲ್ಲ ಸುತ್ತಾಡಿಕೊಂಡು ಬಂದಿರುವೆಯಲ್ಲ, ನನಗಾಗಿ ಮತ್ತೇನನ್ನು ತಂದಿರುವೆ?"

ಅದಮ್ಯವಾದ ಪ್ರೇರಣೆಗೆ ಒಳಗಾಗಿ, ವಿಧಿನಿಯಮದ ಪ್ರಕಾರ ತಾನು ಹೇಳಬೇಕಾದ ನುಡಿಗಳು ಎಂದು ಭಾವಿಸಿದ್ದ ಮಾತುಗಳನ್ನು ಅವನು ಉಚ್ಚರಿಸಿಬಿಟ್ಟನು: "ಗೌರಿ! ನನ್ನ ಭಾರವಾದ ಹೃದಯ ಹೊರತು ಮತ್ತೇನನ್ನೂ ನಾನು ನಿನಗಾಗಿ ತಂದಿಲ್ಲ. ಅದರ ಭಾರವನ್ನು ನಿನ್ನ ಹೃದಯದ ಮೇಲೆ ಹೊರಿಸಬಹುದೆ?"

ಕಂಪಿಸುತ್ತಿದ್ದ ತನ್ನ ಕೋಮಲಾಂಗುಲಿಯಿಂದ ಹೃದಯ ಪದಕವನ್ನು ತೋರುತ್ತ ಗೌರಿ ಇಂತು ನುಡಿದಳು: "ನೀನು ಹಾಗೆ ಮಾಡಬಹುದೆಂಬುದಕ್ಕೇ ನಾನು ಬಹಳ ಕಾಲದಿಂದ ಧರಿಸಿರುವ ನೆನಪಿನ ಕುರುಹಾದ ಈ ಪದಕವೇ ಭರವಸೆ."

''ಗೌರಿ, ಗೌರಿ! ನನ್ನ ನಿರರ್ಥಕವಾದ ಸ್ವಪ್ನವನ್ನು ನೀನು ಸಾರ್ಥಕಗೊಳಿಸಿರುವೆ!" ಎಂದು ವಿಶ್ವನಾಥನು ಅವಳನ್ನು ಆಲಿಂಗಿಸಿಕೊಂಡನು.

ಹುಚ್ಚು ಕನಸುಗಾರನು ಕೊನೆಗೆ ಎಚ್ಚತ್ತಿದ್ದನು: ಅವನು ಆ ರಹಸ್ಯ ನಿಧಿಯನ್ನು ದೊರಕಿಸಿಕೊಳ್ಳಲು, ತನ್ನ ಮನೆಯ ಸುತ್ತಮುತ್ತ ಇದ್ದ, ಸರಿಯಾಗಿ ಬೇಸಾಯಮಾಡಿಸುವವರಿಲ್ಲದೆ ಬಹುಭಾಗ ಪಾಳು ಬಿದ್ದಿದ್ದ ಹರವಾದ ಹೊಲವನ್ನು ಕೃಷಿಮಾಡಿ ಅದರ ಬೆಳಸಿನ ಫಲವನ್ನು ಅನುಭೋಗಿಸಬೇಕಾಗಿತ್ತು! ಯುದ್ಧ ವೀರನಾಗಿ ಆಜ್ಞೆ ಮಾಡುವ ಬದಲು, ಅಥವಾ ದೊರೆಯಾಗಿಯೊ ಧಾರ್ಮಿಕ ಮಹಾಪುರುಷನಾಗಿಯೊ ಪ್ರಭಾವಶಾಲಿಯಾಗುವ ಬದಲು, ಹಳ್ಳಿಯ ಮಕ್ಕಳನ್ನು ಆಳಬೇಕಾಗಿತ್ತು! ಅವನ ಕಲ್ಪನಾಕನ್ಯೆ ಮಾಯವಾಗಿ, ಅವಳ ಸ್ಥಾನದಲ್ಲಿ ತನ್ನ ಎಳೆತನದ ಒಡನಾಡಿಯನ್ನು ಇಂದು ಅವನು ಕಂಡನು.

* * *

ವಿಶ್ವನಾಥನು ಬಯಸಿದಂಥ ಹುಚ್ಚು ಬಯಕೆಯನ್ನು ಬಯಸುವವರು ಒಮ್ಮೆ ತಮ್ಮ ಸುತ್ತ ನೋಡಿದ್ದೇ ಆದರೆ, ಆ ಸುತ್ತಮುತ್ತಿನೆಡೆಯಲ್ಲೆ, ಎಲ್ಲಿ ದೈವವೇ ತಮ್ಮ ಭಾಗ್ಯವನ್ನು ಇಟ್ಟಿರುವುದೋ ಆ ಪದವಿಯಲ್ಲೆ, ಅವರು ತಮ್ಮ ಕರ್ತವ್ಯದ, ತಮ್ಮ ಪುರೋಭಿವೃದ್ಧಿಯ, ತಮ್ಮ ಸುಖಸಂತೋಷದ ನೆಲೆವೀಡನ್ನು ಅನೇಕ ವೇಳೆ ಕಂಡುಕೊಳ್ಳುವರು. ಪ್ರಯಾಸಕರವಾದ ಪ್ರಪಂಚಶೋಧನೆಯಿಲ್ಲದೆ, ಅಥವಾ ಜೀವಮಾನವನ್ನು ವ್ಯರ್ಥವಾಗಿ ವ್ಯಯ ಮಾಡದೆ, ತಮ್ಮ ಜೀವನದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವವರೇ ಧನ್ಯರು!

ಗುಂಡಿನೇಟು ಮತ್ತು ಇತರ ಕಥೆಗಳು

೧. ಗುಂಡಿನೇಟು
(The Shot)

ನಾವು ದ್ವಂದ್ವಯುದ್ಧವನ್ನು ಕಾದಿದೆವು

–ಬ್ಯಾರಟನ್ಸ್ಕಿ*

ದ್ವಂದ್ವಯುದ್ಧವನ್ನು ಕಾದುವ ಹಕ್ಕಿನ ಬಲದಿಂದ ಅವನನ್ನು ಗುಂಡಿಟ್ಟುಕೊಲ್ಲುವೆನೆಂದು ಶಪಥಮಾಡಿದೆನು.

–ಬ್ಯೂವ್ಯಾಕ್‌ನಲ್ಲಿ ಒಂದು ಸಂಜೆ+

---

* ಪುಷ್ಕಿನ್ನನ ಸ್ನೇಹಿತ ಎವ್‌ಜೆನಿ ಬ್ಯಾರಟನ್ಸ್ಕಿ ಎಂಬಾತನ "Ball" ಎಂಬ ಕೃತಿಯಿಂದ.

\+ ೧೮೨೫ರ ಡಿಸೆಂಬರಿನ ದಂಗೆಯಲ್ಲಿ ಭಾಗವಹಿಸಿದ್ದ ಬೆಸ್ಟ್ಯುಷೆವ್ ಮಾರ್ಲಿನ್ಸ್ಕಿ ಎಂಬಾತನ ಒಂದು ಕಥೆಯಿಂದ.

ಪ್ರಸ್ತಾವನೆ

ಅಲೆಕ್ಸಾಂಡರ್ ಪುಸ್ಕಿನ್ (೧೭೯೯–೧೮೩೭) ರಷ್ಯಾ ದೇಸದ ಪ್ರಖ್ಯಾತ ಕವಿ, ಈತ ೧೭೯೯ರ ಜೂನ್ ೬ ರಂದು ಮಾಸ್ಕೋ ನಗರದಲ್ಲಿ ಜನಿಸಿದನು; ಬೋಯರ್ (Boyars) ಎಂಬ ಪುರಾತನ ವಂಶಕ್ಕೆ ಸೇರಿದವನು. ಪುಷ್ಕಿನ್ನಿನ ಮಾತಾಮಹನ ತಂದೆ ರಷ್ಯದ ಚಕ್ರವರ್ತಿ ಪೀಟರ್ ಮಹಾಯನ (Peter the Great) ಆಳ್ವಿಕೆಯಲ್ಲಿ ದಂಡನಾಯಕನಾಗಿದ್ದು, ಚಕ್ರವರ್ತಿಯ ಸನ್ಮಾನಕ್ಕೆ ಪಾತ್ರನಾಗಿದ್ದನು. ಸೆಯ್‌ಂಟ್ ಪೀಟರ್ಸ್ ಬರ್ಗ್ ಬಳಿ ಹೊಸದಾಗಿ ಸ್ಥಾಪಿತವಾಗಿದ್ದ ಸಾಹಿತ್ಯ ಸದಸ್ಸಿಗೆ (Lyceum) ಪುಷ್ಕಿನ್ ೧೮೧೧ ವ್ಯವಹಾರ ಚಿವ ಶಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡನು. ಆರು ಸರ್ಗಗಳ ದೀರ್ಘರಂಜಕ ಕಾವ್ಯವೊಂದನ್ನು (Rulan and Ly'ndmila) ಅನು ಬರೆಯತೊಡಗಿದ್ದು ಇದೇ ವರ್ಷದಲ್ಲಿಯೆ ; ಅದು ೧೮೨೦ರಲ್ಲಿ ಸಮಾಪ್ತಿಯಾಯಿತು. ಈ ನಡುವೆ, ಪುಷ್ಕಿನ್ ಮಾಸ್ಕೋ ನಗರದ ವಿಲಾಸಪ್ರಿಯ ಸಮಾಜವರ್ಗದಲ್ಲಿ ಬಹುವಾಗಿ ಕಲೆಯುತ್ತಿದ್ದನು; ಅವನು ಕವಿಯಾಗಿ ಪ್ರಖ್ಯಾತನಾಗುವ ಬದಲು ಸೊಗಸುಗಾರನಾಗಿ ಪರಿಣಮಿಸಬಹುದೆಂಬ ಭಾವನೆ ಅವನನ್ನು ಬಲ್ಲವರಲ್ಲಿ ಬಲಿಯುತ್ತಿತ್ತು. ಆದರೆ, ಅವನು ರಚಿಸಿದ 'ಸ್ವಾತಂತ್ರ್ಯ ಪ್ರಗಾಥ' (Ode to Liberty) ಹಸ್ತಪ್ರತಿಯ ರೂಪದಲ್ಲಿಯೇ, ಸೆಯ್‌ಂಟ್ ಪೀಟರ್ಸ್ ಬರ್ಗಿನಲ್ಲಿ ಪ್ರಚಲಿತವಾದಾಗ, ಅದು ವರಿಷ್ಠ ಅಧಿಕಾರಿಗಳ ಗಮನಕ್ಕೆ ಬಂದು, ರಷ್ಯಾ ನಾಡಿನ ತೆಂಕಣ ಸೀಮೆಗೆ ಅವನನ್ನು ದೇಶಾಂತರಗೊಳಿಸಲಾಯಿತು. ಆ ಸಮಯದಲ್ಲಿ, ಹದಗೆಟ್ಟಿದ್ದ ತನ್ನ ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಲು ಪುಷ್ಕಿನ್ ದಂಡನಾಯಕ ರಯೆವ್ ಸ್ಕಿ ಎಂಬಾತನೊಂದಿಗೆ ಕಾಕಸಸ್ ಪರ್ವತ ಪ್ರಾಂತಕ್ಕೆ ಪ್ರವಾಸ ಹೋದನು. ಅಲ್ಲಿ ರಯೆವ್‌ಸ್ಕಿ ದಂಪತಿಗಳು ಪ್ರಖ್ಯಾತ ಆಂಗ್ಲಕವಿ ಲಾರ್ಡ್ ಬೈರನ್ನಿನ ಕವಿತೆಗಳನ್ನು ಅವನಿಗೆ ಪರಿಚಯ ಮಾಡಿಕೊಟ್ಟರು. ಈ ಹೊಸ ಪ್ರಭಾದ ಜತೆಗೆ ಆ ಪ್ರಾಂತದ ಭವ್ಯ ನಿಸರ್ಗ ಸೌಂದರ್ಯದ ಪ್ರಭಾವವೂ ಕೂಡಿಕೊಂಡು ಪುಷ್ಕಿನ್ನಿನ ಪ್ರತಿಭೆ ಉದ್ದೀಪನಗೊಂಡಿತು. ಇದರ ಪರಿಣಾಮ ಫಲಗಳೇ ಅವನು ಅಲ್ಲಿ ರಚಿಸಿದ ಹಲವಾರು ನೀಳ್ಗವಿತೆಗಳೂ: 'ಕಾಕಸಸ್ಸಿನ ಬಂದಿ' (The Captive of Caucasu–೧೮೨೨)' 'ಬಖ್ಚಿರಾಯಿನ ಚಿಲುಮೆ' (The Fountain of Bakhchisarai–೧೮೨೭); ಓವಿಡ್ ಮತ್ತು

ನೆಪೋಲಿಯನ್–ಇವರನ್ನು ಕುರಿತ ಕವಿತೆಗಳು. ಈ ತರುವಾಯದ ದೀರ್ಘ ಕವನ–'ಜಿಪ್ಸಿಗಳು' (The Gipies–೧೮೨೭). ದಕ್ಷಿಣ ರಷ್ಯಾದಲ್ಲಿದ್ದಾಗ, ಆಗ ನಾಡಿನ ತುಂಬ ಹುಟ್ಟಿಕೊಂಡಿದ್ದ ಗುಪ್ತ ಸಂಗಗಳ ಚಟುವಟಿಕೆಗಳಲ್ಲಿ ಅವನು ಭಾಗವಹಿಸುತ್ತಿದ್ದನು. ಈ ಕಾರಣದಿಂದ ಇರಬಹುದು, ಪುಷ್ಕಿನ್ನನನ್ನು ಅಧಿಕಾರಿಗಳು ಆಗಾಗ್ಗೆ ಸ್ಥಳಾಂತರಗೊಳಿಸುತ್ತಿದ್ದರು. ಕಡೆಗೊಮ್ಮೆ, ನಾಸ್ತಿಕತೆಯ ಕಡೆಗೆ ಒಲವುಳ್ಳ ಅನ ಪತ್ರವೊಂದು ಅಧಿಕಾರಿಗಳ ಕೈಗೆ ಸಿಕ್ಕಿದಾಗ, ಅವನನ್ನು ಉದ್ಯೋಗದಿಂದ ತೆಗೆದುಹಾಕಿದರು. ಉದ್ಯೋಗದಿಂದ ವಿಶ್ರಾಂತನಾದಮೇಲೆ, ಪುಷ್ಕಿನ್ ಪ್ರಾಚೀನ ರಷ್ಯದ ಜನಪದ ಕಾವ್ಯ ವ್ಯಾಸಂಗದಲ್ಲಿ ನಿರತನಾಗಿದ್ದನು. ಈ ಕಾಲದ ಅವನ ಕೆಲವು ರಚನೆಗಳಲ್ಲಿ ಬೈರನ್, ಹಾಗೂ ಫ್ರೆಂಚ್ ಬರಹಗಾರ ಅಂದ್ರೆ ಚೆನ್ಯರ್ (Andre Chenier) ಇವರ ಪ್ರಭಾವ ಪ್ರಿಣಾಮಕಾರಿಯಾಗಿತ್ತು, ಅವನು ೧೮೨೫ರಲ್ಲಿ ರಚಿಸಿದ 'ಬೋರಿಸ್ ಗೊದುನಾಫ್' (Boris Godunov) ಎಂಬ ದುರಂತ ದೃಶ್ಯ ಕಾವ್ಯದಲ್ಲಿ ಷೇಕ್ಸ್‌ಪಿಯರ್ ಕವಿಯ ಸತ್ಪ್ರಭಾವವನ್ನು ಕಾಣಬಹುದು.

೧೮೨೫ರಲ್ಲಿ ರಷ್ಯದ ಚಕ್ರವರ್ತಿಯ ವಿರುದ್ಧವಾದ ಒಂದು ಒಳಸಂಚು ತಲೆದೋರಿತು. ಸಂಚುಗಾರರು ಕೆಲವರು ಪುಷ್ಕಿನ್ನನ ಮಿತ್ರರಾಗಿದ್ದರು. ಇದರಿಂದಾಗಿ, ರಾಜದ್ರೋಹದ ಆರೋಪಣೆಗೆ ಅವನು ಗುರಿಯಾಗುವ ಸಂಭವವಿತ್ತು. ಈ ಬಗೆಗೆ ಸಾಕ್ಷ್ಯವಾಗಿ ಪರಿಣಮಿಸಬಹುದಾಗಿದ್ದ ಕೆಲವು ಕಾಗದ ಪತ್ರಗಳನ್ನು ಪುಷ್ಕಿನ್ ಸುಟ್ಟುಹಾಕಿಬಿಟ್ಟನು. "ರಷ್ಯದಲ್ಲೆಲ್ಲಾ ಅತ್ಯಂತ ಮೇಧಾವಿ" ಎಂದು ಉನ್ನತವಲಯಗಳಲ್ಲಿ ಖ್ಯಾತಿಗಳಿಸಿದ್ದ ಪುಷ್ಕಿನ್ನಿಗೆ ಕ್ಷಮಾದಾನದ ಭರಸೆಯನ್ನೂ ಚಕ್ರವರ್ತಿ ನೀಡಿದ್ದನು. ಅಂತೂ ಈ ಪ್ರಕರಣದಲ್ಲಿ ಅವನು ಯಾವ ಹಾನಿಗೂ ಒಳಗಾಗದೆ ಪಾರಾದುದು ಮಾತ್ರವಲ್ಲ, ೧೮೩೧ರಲ್ಲಿ ಅವನು ಮತ್ತೆ ವಿದೇಶ ವ್ಯವಹಾರ ಸಚಿವಶಾಖೆಯಲ್ಲಿ ಉದ್ಯೋಗವನ್ನು ಪಡೆದು. ಇದರ ಹಿಂದಿನ ವರ್ಷ ನಟಾಲಿಯಾ ಗೋಂಚರಾಫ್ ಎಂಬವಳನ್ನು ಅವನು ಮದುವೆಯಾಗಿದ್ದನು. ಇದಕ್ಕೆ ಮುಂಚೆ ೧೮೨೯ರಲ್ಲಿ 'ಪೊಲ್ಟಾವ' (Poltava) ಎಂಬ ಶಕ್ತಿಪೂರ್ಣ ಕಥನ ಕಾವ್ಯ ಪ್ರಕಟವಾಗಿತ್ತು. ಅದೇ ವರ್ಷ, ಪುಷ್ಕಿನ್ ಎರಡನೆಯ ಫಲ ಕಾಕಸಸ್ ಯಾತ್ರೆಯನ್ನು ಕೈಕೊಂಡು, ತನ್ನ ಪ್ರವಾಸಾನುಭವಗಳನ್ನು ಕಾವ್ಯರೂಪದಲ್ಲಿ ವರ್ಣಿಸಿದನು. ೧೮೩೦ರಲ್ಲಿ, 'ಐವಾನ್ ಬೆಲ್ಕಿನ್' ಎಂಬ ಕಾವ್ಯರೂಫದಲ್ಲಿ ವರ್ಣೀಸಿದನು. ೧೮೩೦ರಲ್ಲಿ, 'ಐವಾನ್ ಬೆಲ್ಕಿನ್' ಎಂಬ ಕಾವ್ಯನಾಮದಲ್ಲಿ ಒಂದು ಸಣ್ಣ ಕಥಾಸಂಕಲನವನ್ನು ಪ್ರಕಟಿಸಿದನು.

ಪುಷ್ಕಿನ್ ಉದ್ಯೋಗಕ್ಕೆ ಸೇರಿ (೧೮೩೨) ಸ್ವಲ್ಪ ನೆಮ್ಮದಿಯನ್ನು ಪಡೆದಮೇಲೆ 'ಎವ್‌ಜೆನಿಒನೆಜಿನ್' (೧೮೨೫-೩೩) ಎಂಬ ದೀರ್ಘ ಕಾವ್ಯವನ್ನು ಮುಗಿಇಸ, "೧೭೭೩ರ ಪ್ರಗಚೆಫ್ ದಂಗೆಯ ಇತಿಹಾಸ" (೧೮೩೪) ಎಂಬ ಐತಿಹಾಸಿಕ ಗ್ರಂಥವನ್ನೂ, "ನೌಕಾಧಿಪತಿಯ ಮಗಳು" (The Captain's Daughter) (೧೮೩೬) ಎಂಬ ಕಾದಂಬರಿಯನ್ನೂ ರಿಚಿಸಿದನು ; 'ಎವ್‌ಜೆನಿ ಒನೆಜಿನ್' ಕಾವ್ಯದಮೇಲೆ ಬೈರನ್ ಕವಿಯ ಪ್ರಭಾವವನ್ನು ಮತ್ತೆ ಕಾಣಬಹುದು. ೧೮೩೦ರಲ್ಲಿ ರಚಿಸಿದ ಗೊರ್‍ಯುಖೀಣೋ ಗ್ರಾಮದ ಚರಿತ್ರೆ' ಎಂಬ ವಿಡಂಬನಾತ್ಮಕ ಗ್ರಂಥ ಗಮನಾರ್ಹವಾದುದು; ಏಕೆಂದರೆ, ತನ್ನ ಸ್ವಂತ ಕಥೆಗಳ ಕಾಲ್ಪನಿಕ ಕರ್ತೃವಾದ ಐವಾನ್ ಪೆಟ್ರೊವಿಚ್ ಬೆಲ್ಕಿನ್ನಿನ ವಿನೋದಪೂರ್ಣ ಚಿತ್ರವನ್ನು ಪುಷ್ಕಿನ್ ಅದರಲ್ಲಿ ಚಿತ್ರಿಸಿದ್ದಾನೆ. ಅವನ ಸಣ್ಣ ಕಥೆಗಳಲ್ಲಿ 'ಇಸ್ಪೀಟು ರಾಣಿ' (೧೮೩೪) ಎಂಬುದು ಅತ್ಯಂತ ಪ್ರಸಿದ್ಧವಾಗಿದೆ.

ಡಚ್ ಜನಾಂಗದ ಹೆಕೆರೆನ್ (Heckeren) ಎಂಬಾತನು ಪುಸ್ಕಿನ್ನಿನ ಹೆಂಡತಿಯ ಸಹೋದರಿಯನ್ನು ಮದುವೆಯಾಗಿದ್ದನು ; ಹೆಕೆರೆನ್ ರಷ್ಯದಲ್ಲಿ ಡಚ್ ದೇಶದ ರಾಯಭಾರಿ. ಈತನ ದತ್ತು ಪುತ್ರ ಜಾರ್ಜ್‌ಡ ಆ್ಯಂತಿಸ್ (George d'Anthes) ಪುಷ್ಕಿನ್ನಿನ ಹೆಂಡತಿಯಲ್ಲಿ ಮೋಹಗೊಂಡನು. ಈ ಕಾರಣದಿಂದ, ಪುಷ್ಕಿನ್ನಿಗೂ ಡ'ಆ್ಯಂತಿಸ್ಸಿಗೂ ದ್ವಂದ್ವಯುದ್ಧವಾಗಿ, ಆದರಲ್ಲಿ ಪುಷ್ಕಿನ್ ಮಡಿದನು. ಈ ಪ್ರಣಯ ಪ್ರಕರಣ ದ್ವಂದ್ವ ಯುದ್ಧಕ್ಕೆ ನಿಜವಾದ ಕಾರಣವಲ್ಲವೆಂದೂ, ಪುಷ್ಕಿನ್ನಿನ ಪ್ರಜಾಪ್ರಭುತ್ವವಾದೀ ಅಭಿಪ್ರಾಯಗಳನ್ನು ಸಹಿಸದ ಉಚ್ಚಶ್ರೀಮಂತ ವರ್ಗದ ಕೈವಾಡವು ಈ ದ್ವಂದ್ವ ಯುದ್ಧ ಸಮನಿಸುವಂತೆ ಸಂಚುಮಾಡಿತೆಂದೂ, ಪುಷ್ಕಿನ್ನಿನ ಮರಣವು ಒಂದು ವಿಧವಾದ ರಾಜಕೀಯ ಕೊಲೆಯೆಂದೂ ರಷ್ಯಾದೇಶದ ಇತ್ತೀಚಿನ ವಿಮರ್ಶಕರು ಸಂಶೋಧನೆ ನಡೆಸಿ ತೀರ್ಮಾನಿಸಿದ್ದಾರೆ. ಕಾರಣವೇನಾದರೂ ಇರಲಿ, ಪುಷ್ಕಿನ್ನಿ ಮರಣದ ಬಗೆಗೆ ದೇಶಕ್ಕೆ ದೇಶವೇ ಮರುಗಿತು. ಮರಣಾನಂತರ ಅನ ಕೀರ್ತಿ ದೇಶ ವಿದೇಶಗಳಲ್ಲಿ ಬೆಳೆಯತೊಡಗಿತು.

ರಷ್ಯದ ಸಾಹಿತ್ಯದಲ್ಲಿ 'ಬೆಲ್ಕಿನ್ನಿನ ಕತೆಗಳು' ಎಂಬ ಕೃತಿಗೆ ಒಂದು ವಿಶಿಷ್ಟ ಸ್ಥಾನವಿದೆ. ಮೊತ್ತ ಮೊದಲಿಗೆ ಈ ಕತೆಗಳಲಿ ಪುಷ್ಕನ್ ವಾಸ್ತವಿಕ ಗದ್ಯ ಶೈಲಿಯನ್ನು ಬಳಸಿ, ಪ್ರಜಾಸತ್ತೆಯ ಒಲವು ನಿಲವುಗಳ ಕಡೆಗೆ ಗಮನ ಕೊಟ್ಟನು; ಮೊತ್ತಮೊದಲಿಗೆ ಸಾಮಾನ್ಯ ಜನದ ನಿತ್ಯ ಜೀವನ, ಅವರ ನೋವು ನಲಿವು, ಅವರ ಅಭಿರುಚಿ ಅಪೇಕ್ಷೆಗಳು, ಸಾಮಾಜಿಕ ಅನ್ಯಾಯಗಳು ಪ್ರಚಲಿತವಾಗಿದ್ದ ಪ್ರಪಂಚದಲ್ಲಿ ಅವರು ಎದುರಿಸಲೇ ಬೇಕಾಗಿದ್ದ ದಾರುಣ ದುರಂತತೆ-ಇವುಗಳ ಚಿತ್ರಣಕ್ಕೆ

ಸಾಹಿತ್ಯದಲ್ಲಿ ಪರಮುಖ ಸ್ಥಾನ ದೊರಕಿತು. ಮೊತ್ತ ಮೊದಲಿಗೆ ಕೃತಕಾಡಂಬರದ ವರ್ಣನೆ, ಅರ್ಥ ಅನ್ವಯಗಳಿಲ್ಲದ ಉಪಮಾನಗಳು, ರಷ್ಯನರ ನಿತ್ಯಬಳಕೆಯ ಮಾತಿನಲ್ಲಿ ರೂಢವಾಗಿಲ್ಲದ ಘನವಾದ ರೂಪಕಗಳು ಇವುಗಳ ಸ್ಥಾನದಲ್ಲಿ ಸರಳವಾದ ತಿಳಿಯಾದ ಕಥನ ಶೈಲಿಯೊಂದು ಪ್ರಚುರವಾಯಿತು.

ಪುಷ್ಕಿನ್ನಿನಲ್ಲಿ ಜೀವನ ದರ್ಶನ ತುಂಬಿ ತುಳುಕುತ್ತಿದೆ ; ಅವನು ತಾನು ಕಂಡ ಬದುಕಿನ ನೋಟಗಳನ್ನು ಅತ್ಯಂತ ಸತ್ಯನಿಷ್ಠೆಯಿಂದಲೂ ತನ್ನ ಗದ್ಯ ದ್ಯ ಕೃತಿಗಳಲ್ಲಿ ನಿರೂಪಿಸಲು ಶ್ರಮಿಸಿದನು; ಶ್ರಮಿಸಿ, ಪ್ರತಿಭೆ ಪ್ರಜ್ವಲಿಸುವಂತೆ ತನ್ನ ಧ್ಯೇಯವನ್ನು ಸಾಧಿಸಿದನು.

"ಒಂದು ನಿರ್ದಿಷ್ಟ ಯುಗದ ನಡವಳಿಕೆಗಳ, ರೀತಿ ನೀರಿಗಳು, ಭಾವ ಭಾವನೆಗಳು–ಇವುಗಳ ಬಗೆಗೆ ಮೇಧಾವಿಯೂ ಅನುಭವಶಾಲಿಯೂ ಪ್ರಾಮಾಣಿಕನೂ ಆದವನೊಬ್ಬನ ಅಮೂಲ್ಯ ಸಾಕ್ಷ್ಯಗಳಾಗಿವೆ ಅವನ ಕೃತಿಗಳು; ವಾಸ್ತವವಾಗಿ, ರಷ್ಯದ ಇತಿಹಾಸದ ಪ್ರೋಜ್ವಲ ಪ್ರಕರಣಗಳು ಅವು"

–ಅನುವಾದಕ

ವಂದನಾರ್ಪಣೆ

ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಎಂ. ವಿ. ಸೀತಾರಾಮಯ್ಯನವರು ತಾವು ಕಟ್ಟಿ ಬೆಳಸಿದ ಸಂಘದ ಮೇಲೆ ಅಭಿಮಾನವಿಟ್ಟು, ಈ ಅಮೂಲ್ಯ ಕೃತಿಯ ಮೊದಲ ಮುದ್ರಣವನ್ನು ಹೊರತರುವ ಹೆಮ್ಮೆಯ ಅವಕಾಶವನ್ನು ಸಂಘಕ್ಕೆ ಒದಗಿಸಿಕೊಟಟಿರುತ್ತಾರೆ. ಇದಕ್ಕಾಗಿ ಸಂಘವು ಅವರಿಗೆ ಋಣಿಯಾಗಿದೆ.

ತಾವು ಪಡೆದುಕೊಂಡಿದ್ದ ಮುದ್ರಣಸ್ವಾಮ್ಯವನ್ನು ನಮಗೆ ವಹಿಸಿ ಕೊಟ್ಟದ್ದಕ್ಕಾಗಿ ಮೈಸೂರಿನ 'ಪೀಪಲ್ಸ್ ಬುಕ್ ಹೌಸ್'ನ ಒಡೆಯರಾದ ಶ್ರೀ ಡಿ. ಆರ್. ಕೃಷ್ಣಮೂರ್ತಿಯವರಿಗೂ ನಾವು ಕೃತಜ್ಞರು.

ಈ ಗ್ರಂಥವನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಬಿ.ಕಾಂ. ತರಗತಿಗೆ (೧೯೬೬-೬೭) ಪಠ್ಯಪುಸ್ತಕವನ್ನಾಗಿ ಆರಿಸಿರುವುದಕ್ಕಾಗಿ ಪಠ್ಯ ಪುಸ್ತಕ ಸಮಿತಿಯವರಿಗೆ ಸಂಘವು ಕೃತಜ್ಞವಾಗಿದೆ.

ಪುಸ್ತಕವನ್ನು ಅತ್ಯಲ್ಪಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ. ಶ್ರೀಕಂಠಯ್ಯ ಅಚ್ಚುಕೂಟದ ಅಧಿಕಾರಿಗಳಿಗೂ ಅಧಿಕಾರಿಗಳಿಗೂ ಕೆಲಸಗಾರರಿಗೂ ಸಹ ನಮ್ಮ ವಂದನೆಗಳು ಸಲ್ಲುತ್ತವೆ.

–ಪ್ರಕಾಶಕರು

ನಾವು ಎಕ್ಸ್ (x)– ಎಂಬ ಸಣ್ಣ ಪಟ್ಟಣದಲ್ಲಿ* ಪಾಳೆಯ ಹಾಕಿದ್ದೆವು. ಸೈನ್ಯಾಧಿಕಾರಿಯ ಜೀವನ ಎಂಥದೆಂದು ಪ್ರತಿಯೊಬ್ಬರಿಗೂ ಗೊತ್ತೇ ಇದೆ. ಬೆಳಗ್ಗೆ ಕವಾಯಿತ್ ಆಯಿತು, ಸವಾರಿ ಕಲಿಸುವ ಶಾಲೆ; ಸೈನ್ಯದಳದ ನಾಯಕನ ಜೊತೆಯಲ್ಲಿ, ಇಲ್ಲವೆ ಯಾವುದಾದರೂ ಯೆಹೂದ್ಯ ಭೋಜನಗೃಹದಲ್ಲಿ, ಮಧ್ಯಾಹ್ನದ ಭೋಜನ; ಸಂಜೆ 'ಪಂಚ್' ಮದ್ಯಸೇವನೆ ಮತ್ತು ಇಸ್ಪೀಟಾಟ. ಎಕ್ಸ್–ಪಟ್ಟಣದಲ್ಲಿ ಹೋಗಲು ಒಂದು ಮನೆಯೂ ಇಲ್ಲ, ಮದುವೆಗೆ ನೆರೆದ ಕನ್ಯೆ ಒಬ್ಬಳೂ ಇಲ್ಲ. ಒಬ್ಬರು ಇನ್ನೊಬ್ಬರ ಬಿಡಾರದಲ್ಲಿ ನೆರೆಯುತ್ತಿದ್ದೆವು; ಒಬ್ಬರು ಇನ್ನೊಬ್ಬರ ಸಮವಸ್ತ್ರ (ಯೂನಿಫಾರ್‌ಮ್) ನೋಡುವುದಲ್ಲದೆ, ನೋಡಲು ಬೇರೆ ಇನ್ನೇನೂ ಇರಲಿಲ್ಲ.

ನಮ್ಮ ಗುಂಪಿನಲ್ಲಿ ಸೈನ್ಯಕ್ಕೆ ಸೇರದೆ ಇದ್ದವನೆಂದರೆ ಒಬ್ಬನೇ ಒಬ್ಬ. ಆತ ಸುಮಾರು ಮೂವತ್ತೈದರ ಪ್ರಾಯದವನು; ನಾವೇನೋ ಅವನನ್ನು ವಯಸ್ಸಾದವನೆಂದೇ ಎಣಿಸಿದ್ದೆವು. ತನ್ನ ಅನುಭವಸಂಪತ್ತಿನ ಕಾರಣದಿಂದ ಯಾವಾಗಲೂ ಅವನು ನಮಗಿಂತ ಮೇಲುಗೈ; ಇದರ ಜೊತೆಗೆ, ಅವನಿಗೆ ಅಭ್ಯಾಸವಾಗಿ ಬಂದಿದ್ದ ವಿಷಣ್ಣಭಾವ, ಕಠಿನಪ್ರಕೃತಿ, ಕೆಟ್ಟ ನಾಲಗೆ–ಇವು ಯುವಕರಾದ ನಮ್ಮ ಮನಸ್ಸಿನಮೇಲೆ ಶಕ್ತಿಯುತವಾದ ಪ್ರಭಾವವನ್ನು ಬೀರುತ್ತಿದ್ದುವು. ಆತನ ಸ್ಥಿತಿಗತಿ ರಹಸ್ಯದಲ್ಲಿ ಹುದುಗಿತ್ತು; ರಷ್ಯನನಂತೆಯೇ ಕಾಣುತ್ತಿದ್ದನು, ಆದರೂ ಅವನ ಹೆಸರು ಪರದೇಶೀಯವಾಗಿತ್ತು. ಹಿಂದೊಮ್ಮೆ ಅವನು ರಾವುತ ದಳದಲ್ಲಿ ಸೇವೆ ಸಲ್ಲಿಸಿದ್ದನು; ತನ್ನ ವೃತ್ತಿಯಲ್ಲಿ ಯಶಸ್ಸು ಗಳಿಸುವ ಸಂಭವವೂ ಇತ್ತು. ಅವನು ತನ್ನ ಸೈನ್ಯದ ಹುದ್ದೆಗೆ ರಾಜೀನಾಮೆ ಕೊಟ್ಟು, ಹಾಳುಬಿದ್ದ ಸಣ್ಣಪಟ್ಟಣವೊಂದರಲ್ಲಿ ಯಾಕೆ ನೆಲಸಿದ್ದನೆಂಬುದನ್ನು ಮಾತ್ರ ಯಾರೂ ಅರಿಯರು. ಅಲ್ಲಿ ಅವನ ಬದುಕೋ, ದುಂದಿನದು ಹಾಗೂ ಕೀಳು. ನವೆದ ಕಪ್ಪು ನಿಲುವಂಗಿ ತೊಟ್ಟು ಕಾಲ್ನಡಿಗೆಯಲ್ಲೇ ಸಂಚರಿಸುತ್ತಿದ್ದನು. ನಮ್ಮ ದಳದ ಎಲ್ಲ ಸೈನ್ಯಾಧಿಕಾರಿಗಳಿಗೂ ಅವನ ಮನೆಯ ಬಾಗಿಲು ಸದಾ ತೆರೆದಿತ್ತು. ಹಿಂದೆ ಸೈನಿಕನಾಗಿದ್ದವನೊಬ್ಬ ಅವನಿಗೆ ಅಡಿಗೆ ಮಾಡಿ ಹಾಕುತ್ತಿದ್ದ; ಅವನ ಭೋಜನದಲ್ಲಿ ಎರಡು ಅಥವಾ ಮೂರು ಬಗೆಯ ಭಕ್ಷ್ಯಗಳು ಮಾತ್ರ ಇರುತ್ತಿದ್ದುವು, ನಿಜ;

---

* ಹೆಸರಿಸಲು ಇಷ್ಟಪಡದಾಗ, ಅಥವಾ ಹೆಸರು ಗೊತ್ತಿಲ್ಲದ ಸಂದರ್ಭದಲ್ಲಿ, x ಮೊದಲಾದ ಅಕ್ಷರಗಳಿಂದ ನಿರ್ದೇಶಿಸುವುದು ಒಂದು ರೂಢಿ.

ಆದರೆ, 'ಷಾಂಪೇನ್' ಮದ್ಯ ಧಾರಾಳವಾಗಿ ಹರಿಯುತ್ತಿತ್ತು. ಅವನ ಆಸ್ತಿಪಾಸ್ತಿ ಏನು, ಅವನ ಆದಾಯ ಹೇಗೆ–ಇದು ಏನೊಂದನ್ನೂ ಯಾರೂ ಅರಿಯರು; ಈ ಬಗ್ಗೆ ಅವನನ್ನು ಪ್ರಶ್ನಿಸಲು ಯಾರಿಗೂ ಧೈರ್ಯವಿಲ್ಲ. ಅವನ ಬಳಿ ಒಂದು ಒಳ್ಳೆಯ ಪುಸ್ತಕಭಂಡಾರವಿತ್ತು; ಅದರ ತುಂಬ ಸೈನ್ಯವಿಚಾರದ ಗ್ರಂಥಗಳು ಮತ್ತು ಕಾದಂಬರಿಗಳು; ಅವುಗಳನ್ನು ಎರವಲು ಕೊಡಲು ಅವನು ಯಾವಾಗಲೂ ಸಿದ್ಧ; ಕೊಟ್ಟ ಪುಸ್ತಕವನ್ನು ಎಂದೂ ಹಿಂದಿರುಗಿ ಕೇಳುತ್ತಿರಲಿಲ್ಲ. ಅವನೂ ಕೂಡ ತಾನು ಎರವಲು ಕೊಡಲು ಅವನು ಯಾವಾಗಲೂ ಸಿದ್ಧ; ಕೊಟ್ಟ ಪುಸ್ತಕವನ್ನು ಎಂದೂ ಹಿಂದಿರುಗಿ ಕೇಳುತ್ತಿರಲಿಲ್ಲ. ಅವನೂ ಕೂಡ ತಾನು ಎರವಲು ತಂದು ಪುಸ್ತಕವನ್ನು ಪುಸ್ತಕ ಕೊಟ್ಟವರಿಗೆ ಎಂದೂ ಹಿಂದಿರುಗಿಸುತ್ತಿರಲಿಲ್ಲ. ಅವನ ಪ್ರಧಾನವಾದ ಉದ್ಯೋಗವೆಂದರೆ, ಒಂದು ಪಿಸ್ತೂಲಿನಿಂದ ಗುಂಡುಹಾರಿಸುವುದು. ಅವನ ಕೊಟಡಿಯ ಗೋಡೆಗಳೆಲ್ಲ ಗುಂಡಿನೇಟಿನ ತೂತುಗಳಿಂದ ತುಂಬಿಹೋಗಿ, ಜೇನುಹುಟ್ಟಿಯ ಸೀಳಿದ ಭಾಗದಂತೆ ಕಾಣುತ್ತಿತ್ತು. ಅವನು ವಾಸಿಸುತ್ತಿದ್ದ ಅಧ್ವಾನವಾದ ಮಣ್ಣಿನ ಮನೆಯಲ್ಲಿದ್ದ ಅವನ ಏಕಮಾತ್ರ ಸಂಪತ್ತೆಂದರೆ, ಅವನು ಕಲೆಹಾಕಿದ್ದ ಪಿಸ್ತೂಲುಗಳ ಅಮೂಲ್ಯ ಸಂಗ್ರಹ. ಗುಂಡು ಹೊಡೆಯುವುದರಲ್ಲಿ ಅವನು ಪಡೆದಿದ್ದ ಸಿದ್ಧಿ ಅತ್ಯಂತ ಮೇಲ್ಮಟ್ಟದ್ದು;' ಯಾರದ್ದಾದರೂ ತಲೆಯ ಟೋಪಿಯ ಮೇಲಿಟ್ಟ ಪೇರುಹಣ್ಣನ್ನು ಗುಂಡಿನಿಂದ ಹೊಡೆಯುವುದಾಗಿ ಅವನು ಸೂಚಿಸಿದ್ದಿದ್ದರೆ, ಅವನ ಗುಂಡಿನೇಟಿಗೆ ತಲೆಯೊಡ್ಡಲು ಹಿಂದೆಗೆಯುತ್ತಿದ್ದ ಒಬ್ಬನಾದರೂ ನಮ್ಮ ಸೈನ್ಯ ದಳದಲ್ಲಿರಲಿಲ್ಲ. ನಮ್ಮ ಸಂಭಾಷಣೆ ಆಗಾಗ್ಗೆ ದ್ವಂದ್ವಯುದ್ಧದ ವಿಚಾರದ ಕಡೆಗೆ ಹೊರಳುತ್ತಿತ್ತು; ಆದರೆ, ಸಿಲ್ವಿಯೊ (ಹಾಗೆಂದು ಅವನನ್ನು ಕರೆಯುತ್ತೇನೆ) ಅದರಲ್ಲಿ ಭಾಗವಹಿಸುತ್ತಲೇ ಇರಲಿಲ್ಲ. ಎಂದಾದರೂ ದ್ವಂದ್ವಯುದ್ಧದಲ್ಲಿ ಭಾಗವಹಿಸಿರುವನೇ ಎಂದು ಪ್ರಶ್ನಿಸಿದರೆ, ವಿವರವಾಗಿ ಏನನ್ನೂ ಹೇಳದೆ ಒಂದು ಮಾತಿನಲ್ಲಿ 'ಉಂಟು' ಎಂದು ಹೇಳುತ್ತಿದ್ದನು; ಅಂಥ ಪ್ರಶ್ನೆಗಳಿಂದ ಅವನಿಗೆ ಅಸಮಾಧಾನವಾಗುತ್ತಿತ್ತು ಎನ್ನುವುದು ಸ್ಪಷ್ಟ. ಯಾವನೋ ಅದೃಷ್ಟಹೀನನೊಬ್ಬ ಅವನ ಭೀಕರ ಕರಕೌಶಲಕ್ಕೆ ಬಲಿಯಾಗಿದ್ದು, ಆ ಸಂಗತಿ ಅವನ ಅಂತರಂಗವನ್ನು ಕೊರೆಯುತ್ತಿತ್ತೆಂದು ನಾವು ನಿಶ್ಚಯಿಸಿದೆವು. ಅವನಲ್ಲಿ ಹೇಡಿತನದ ಸುಳಿವಾದರೂ ಇದ್ದೀತೆಂದು ಸಂಶಯಪಡಲು ನಮಗೆ ಖಂಡಿತವಾಗಿಯೂ ಹೊಳೆಯಲೇ ಇಲ್ಲ. ಕೆಲವರ ವಿಚಾರದಲ್ಲಿ, ಕೇವಲ ಅವರ ಹೊರನೋಟವೇ ಸಾಕು: ಅಂಥ ಸಂಶಯಗಳಿಗೆ ಎಡೆಗೊಡುವುದಿಲ್ಲ. ಹೀಗಿರಲು, ಒಂದು ಸಂಗತಿ ನಡೆಯಿತು ನಮ್ಮನ್ನೆಲ್ಲ ಅಚ್ಚರಿಗೊಳಿಸಿತು.

ಒಂದು ದಿನ ನಮ್ಮ ಸೈನ್ಯಾಧಿಕಾರಿಗಳಲ್ಲಿ ಸುಮಾರು ಹತ್ತುಮಂದಿ ಸಿಲ್ವಿಯೋವಿನ ಬಿಡಾರದಲ್ಲಿ ಭೋಜನ ಮಾಡುತ್ತಿದ್ದೆವು. ಎಂದಿನಂತೆಯೇ–ಎಂದರೆ ಬಹು ಹೆಚ್ಚಾಗಿಯೇ –ಕುಡಿದೆವು. ಭೋಜಕವಾದ ಬಳಿಕ, ನಮ್ಮೆಲ್ಲರ ಜೂಜಿನಪಣದ ಹಣ ಇಟ್ಟುಕೊಂಡಿರುವಂತೆ ನಮ್ಮ ಆತಿಥೇಯ*ನನ್ನು ಕೇಳಿಕೊಂಡೆವು. ಅವನು ಬಡಪಟ್ಟಿಗೆ ಒಪ್ಪಲಿಲ್ಲ; ಏಕೆಂದರೆ ಅವನು ಇಸ್ಪೀಟಾಡುತ್ತಿದ್ದುದೇ ಅಪರೂಪ. ಆದರೆ, ಕಡೆಯಲ್ಲಿ, ಇಸ್ಪೀಟನ್ನು ತರಹೇಳಿದ; ಸುಮಾರು ಐವತ್ತು ಹತ್ತು–ರೂಬಲ್ ನಾಣ್ಯಗಳನ್ನು ಮೇಜಿನ ಮೇಲೆ ಹರಡಿದ; ಎಲೆಗಳನ್ನು ಹಂಚಲು ಪ್ರಾರಂಭಿಸಿದ. ನಾವೆಲ್ಲ ಅವನನ್ನು ಸುತ್ತುಗಟ್ಟಿದೆವು; ಆಟ ಮೊದಲಾಯಿತು. ಆಟವಾಡುವಾಗ ಸಿಲ್ವಿಯೋ ಮೌನ ಎಂದರೆ ಮೌನ; ವಾದವಿಲ್ಲ, ವಿವರಣೆಯಿಲ್ಲ: ಇದು ಅವನ ಅಭ್ಯಾಸ. 'ಪಂಟರ್' (ಜೂಜಿನ ನಿಧಿಗೆ ಎದುರಾಗಿ ಪಣವೊಡ್ಡುವವನು) ಒಂದು ವೇಳೆ ತಪ್ಪು ಮಾಡಿದರೆ, ಸಿಲ್ವಿಯೋ ಕೂಡಲೆ ಹಣ ಕೊಟ್ಟು ಬಿಡುತ್ತಿದ್ದ, ಇಲ್ಲವೆ ಹೆಚ್ಚಿನದನ್ನು ಗುರುತುಹಾಕುತ್ತಿದ್ದ. ನಮಗೆಲ್ಲ ಇದು ಗೊತ್ತಿತ್ತು; ಆದ್ದರಿಂದ, ಅವನು ತನ್ನ ನಿಯಮಗಳನ್ನು ವಿಧಿಸಲು ಅವಕಾಶಕೊಡುತ್ತಿದ್ದೆವು. ಆದರೆ ನಮ್ಮ ದಳಕ್ಕೆ ಹೊಸದಾಗಿ ವರ್ಗವಾಗಿ ಬಂದ ಒಬ್ಬ ಸೈನ್ಯಾಧಿಕಾರಿಯಿದ್ದ. ಈತ ಆಟವಾಡುವಾಗ ಅಡ್ಡಜ್ಞಾನದಲ್ಲಿ ಪಣವನ್ನು ಒಂದು 'ಅಂಕ' ಏರಿಸಿಬಿಟ್ಟ. ಸಿಲ್ವಿಯೊ ಯಥಾಪ್ರಕಾರ ಸೀಮೆಯ ಸುಣ್ಣ ತೆಗೆದುಕೊಂಡು, ಅಂಕಲೆಕ್ಕವನ್ನು ಸರಿಪಡಿಸಿದ. ಸಿಲ್ವಿಯೊ ತಪ್ಪು ಮಾಡಿದ್ದಾನೆಂದು ಎಣಿಸಿ ಸೈನ್ಯಾಧಿಕಾರಿ ವಿವರಣೆಗಳನ್ನು ಕೊಡತೊಡಗಿದ. ಸಿಲ್ವಿಯೊ ಮೌನವಾಗಿ ಆಟ ಸಾಗಿಸಿದ. ಸೈನ್ಯಾಧಿಕಾರಿ ತಾಳ್ಮೆಗೆಟ್ಟು, ಒರಸುವ ಬ್ರಷ್ ತೆಗೆದುಕೊಂಡು, ತಪ್ಪಾಗಿ ಬರೆದಿದೆ ಎಂದು ತನಗೆ ತೋರಿದ್ದನ್ನು ಉಜ್ಜಿ ಅಳಿಸಿಬಿಟ್ಟ. ಸಿಲ್ವಿಯೊ ಸೀಮೆಯಸುಣ್ಣ ಎತ್ತಿಕೊಂಡು, ಅಂಕಿಗಳನ್ನು ಮತ್ತೆ ಬರೆದ. ಮದ್ಯ, ಜೂಜಾಟ, ಸಂಗಡಿಗರ ನಗೆಯಾಟ–ಇವುಗಳಿಂದ ಕಾವೇರಿದ್ದ ಸೈನ್ಯಾಧಿಕಾರಿ ತಾನು ಬಹಳ ಅಪಮಾನಗೊಂಡವನಂತೆ ಭಾವಿಸಿದ; ಮೇಜಿನ ಮೇಲಿದ್ದ ಹಿತ್ತಾಳೆಯ ಮೋಂಬತ್ತಿಕೊಳವಿಯನ್ನು ತುಡುಕಿ, ಅದನ್ನು ಸಿಲ್ವಿಯೋವಿನ ಕಡೆಗೆ ಬೀರಿ ಎಸೆದ; ಅವನು ಅದರ ಹೊಡೆತವನ್ನು ಅದು ಹೇಗೋ ತಪ್ಪಿಸಿಕೊಂಡ. ನಾವೆಲ್ಲ ಬಹಳ ಕಳವಳಪಟ್ಟೆವು. ಸಿಲ್ವಿಯೊ ಮೇಲಕ್ಕೆದ್ದ; ಕೆರಳಿ ವಿವರ್ಣನಾಗಿದ್ದ; ಕಣ್ಣು ಫಳಫಳಿಸುತ್ತಿದ್ದುವು. ಆತ ಹೇಳಿದ: "ಸ್ವಾಮಿ, ತಾವು ಇನ್ನು ದಯವಿಟ್ಟು

ಆತಿಥ್ಯ ನೀಡುವವನು.

ಹೊರಡೋಣವಾಗಲಿ. ಇದು ನನ್ನ ಮನೆಯಲ್ಲಿ ನಡೆದದ್ದಕ್ಕಾಗಿ ದೇವರಿಗೆ ವಂದನೆ ಸಲ್ಲಿಸಿ."

ಈ ಹಗರಣದ ಫಲಿತಾಂಶವೇನೆಂಬ ಬಗೆಗೆ ನಮಗೆ ಸಂದೇಹವೇ ಇರಲಿಲ್ಲ; ನಮ್ಮ ಹೊಸ ಗೆಳೆಯ ಇನ್ನು ಸತ್ತಂತೆಯೇ ಎಂದು ತಿಳಿದೆವು. ಜೂಜಿನ ನಿಧಿಯನ್ನು ಇಟ್ಟುಕೊಂಡಿದ್ದಾತನಿಗೆ ಯಾವಾಗ ಅನುಕೂಲವಾಗುವುದೊ ಆಗ ತಾನು ಪಟ್ಟ ಅಪಮಾನಕ್ಕೆ ಪ್ರತೀಕಾರ ಮಾಡಲು ತಾನು ಸಿದ್ಧ ಎಂದು ಹೇಳುತ್ತ ಆ ಸೈನ್ಯಾಧಿಕಾರಿ ಹೊರಟುಹೋದ. ಆಟ ಇನ್ನು ಕೆಲವು ನಿಮಿಷ ನಡೆಯಿತು; ಆದರೆ ನಮ್ಮ ಅತಿಥೇಯ ಇನ್ನು ಆಟಕ್ಕೆ ತನ್ನ ಮನಸ್ಸು ಕೊಡಲಾರನೆಂದು ನಮಗೆಲ್ಲ ತೋರಿತು; ಒಬ್ಬೊಬ್ಬರಾಗಿ ನಾವು ಬೀಳ್ಕೊಂಡು, ಸದ್ಯದಲ್ಲಿಯೇ ಈ ಪ್ರಪಂಚದಲ್ಲಿ ಉಂಟಾಗಲಿದ್ದ ಒಂದು ತೆರಪಿನ ಸ್ಥಾನದ ಬಗೆಗೆ ಚರ್ಚಿಸುತ್ತ, ನಮ್ಮ ನಮ್ಮ ಬಿಡಾರದ ಕಡೆಗೆ ನಡೆದೆವು.

ಮಾರನೆಯ ದಿನ ಸವಾರಿಶಿಕ್ಷಣ, ಶಾಲೆಯಲ್ಲಿ ಆ ಬಡ ಲೆಫ್ಟೆನಂಟ್ (ಒಬ್ಬ ಸೈನ್ಯದ ಅಧಿಕಾರಿ) ಇನ್ನೂ ಜೀವಂತನಾಗಿರುವವನೇ ಎಂದು ಒಬ್ಬರನ್ನೊಬ್ಬರು ಕೇಳುತ್ತಿದ್ದಾಗ, ಆತನೇ ನಮ್ಮೆದುರು ಬಂದು ಕಾಣಿಸಿಕೊಂಡನು; ನಾವೆಲ್ಲ ಅವನಿಗೆ ಒಂದೇ ಪ್ರಶ್ನೆ ಹಾಕಿದೆವು. ಸಿಲ್ವಿಯೊ ಇನ್ನೂ ಏನನ್ನೂ ಹೇಳಿಕಳಿಸಿಲ್ಲವೆಂದು ಆತ ಉತ್ತರಕೊಟ್ಟನು. ಇದು ನಮ್ಮನ್ನು ಅಚ್ಚರಿಗೊಳಿಸಿತು. ನಾವು ಸಿಲ್ವಿಯೋವಿನ ಮನೆಗೆ ಹೋದೆವು; ಆಗ ಅವನು ಗೇಟಿಗೆ ಸೆಕ್ಕಿಸಿದ್ದ ಒಂದು ಏಸ್–ಕಾರ್ಡಿನ (ಹಾಸು ಇಸ್ಪೀಟೆಲೆ) ಮಧ್ಯಕ್ಕೆ ಸರಿಯಾಗಿ ಒಂದಾದಮೇಲೆ ಒಂದರಂತೆ ಗುಂಡು ಹೊಡೆಯುತ್ತಿದ್ದನು. ಅವನು ಇಂದೂ ಎಂದಿನಂತೆ ನಮ್ಮನ್ನು ಬರಮಾಡಿಕೊಂಡನು; ಹಿಂದಿನ ದಿನದ ಘಟನೆಯ ಬಗೆಗೆ ಒಂದು ಮಾತನ್ನೂ ಎತ್ತಲಿಲ್ಲ. ಮೂರು ದಿನ ಕಳೆಯಿತು; ಲೆಫ್ಟೆನೆಂಟ್ ಇನ್ನೂ ಬದುಕಿದ್ದನು. ಕಾದಾಡಲು ಸಿಲ್ವಿಯೋವಿಗೆ ಇಷ್ಟವಿಲ್ಲದಿರಬಹುದೇ ಎಂದು ಬೆರಗುಗೊಂಡು ಒಬ್ಬರನ್ನೊಬ್ಬರು ಪ್ರಶ್ನಿಸಿದೆವು. ಸಿಲ್ವಿಯೊ ಕಾದಾಡಲಿಲ್ಲ. ಏನೋ ಒಂದು ಸಣ್ಣ ನೆಪಹೇಳಿ ಅವನು ಸಮಾಧಾನಗೊಂಡನು; ಲೆಫ್ಟೆನೆಂಟಿನೊಂದಿಗೆ ರಾಜಿಮಾಡಿಕೊಂಡನು.

ಇದರಿಂದ ಕಿರಿಯರ ದೃಷ್ಟಿಯಲ್ಲಿ ಸಿಲ್ವಿಯೋವಿನ ವ್ಯಕ್ತಿತ್ವ ತಕ್ಕಮಟ್ಟಿಗೆ ಕುಗ್ಗಿರಬಹುದು. ತರುಣರು ಎಂದಿಗೂ ಧೈರ್ಯಹೀನತೆಯನ್ನು ಸಹಿಸುವುದಿಲ್ಲ; ಅವರ ದೃಷ್ಟಿಯಲ್ಲಿ ಧೈರ್ಯವೊಂದೇ ಪರಮೋತ್ಕೃಷ್ಟಗುಣ, ಅನೇಕಾನೇಕ ದೋಷಗಳನ್ನೂ ಮುಚ್ಚೀತು ಅದು. ಆದರೆ, ಕ್ರಮಕ್ರಮೇಣ ಎಲ್ಲವೂ ಮರೆತುಹೋಯಿತು; ಸಿಲ್ವಿಯೊ ತನ್ನ ಮೊದಲಿನ ಪ್ರಭಾವವನ್ನು ಮತ್ತೆ ಗಳಿಸಿಕೊಂಡನು.

ನನಗೊಬ್ಬನಿಗೆ ಮಾತ್ರ ಅವನ ವಿಚಾರದಲ್ಲಿ ಆ ಭಾವನೆ ಹೊಂದಲು ಸಾಧ್ಯವಾಗಲಿಲ್ಲ. ಸ್ವಭಾವತಃ ಆದರ್ಶರಮ್ಯ ಭಾವನೆಗಳುಳ್ಳ ನಾನು ರಹಸ್ಯಪೂರ್ಣ ಜೀವನವುಳ್ಳ ಆತನಲ್ಲಿ ಉಳಿದವರಿಗಿಂತ ಹೆಚ್ಚಾಗಿ ವಿಶ್ವಾಸ ಗೌರವಗಳನ್ನಿಟ್ಟಿದ್ದೆ; ನನ್ನ ದೃಷ್ಟಿಯಲ್ಲಿ ಆತನು ಯಾವುದೋ ರಹಸ್ಯಾತ್ಮಕ ಕಥೆಯ ಸಾಹಸವೀರನಂತಿದ್ದನು. ನನ್ನನ್ನು ಕಂಡರೂ ಆತನಿಗೆ ಅಷ್ಟೇ ಪ್ರೀತಿ. ಅಂತೂ ನನ್ನೊಬ್ಬನೊಂದಿಗೆ ಮಾತ್ರ ಆತ ನನ್ನ ಸ್ವಾಭಾವಿಕವಾದ ಕ್ರೂರ ವಿನೋದ ಕುಚೋದ್ಯಗಳಲ್ಲಿ ತೊಡಗುತ್ತಿರಲಿಲ್ಲ; ಬೇರೆ ಬೇರೆ ವಿಚಾರಗಳನ್ನು ಕುರಿತು ಸರಳರೀತಿಯಲ್ಲಿ, ತುಂಬ ಸೊಗಸಾಗಿ ಚರ್ಚಿಸುತ್ತಿದ್ದನು. ಆದರೆ, ತನ್ನ ಗೌರವಕ್ಕೆ ಅಂಟಿಕೊಂಡ ಕಳಂಕವನ್ನು ತನ್ನ ಸ್ವಂತ ಇಚ್ಛೆಯಿಂದ ತೊಳೆದುಕೊಳ್ಳದೆ ಹೋದ ಆ ದುರದೃಷ್ಟದ ಸಂಜೆಯ ನೆನಪು ನನ್ನನ್ನು ಬಿಟ್ಟುಹೋಗಿರಲಿಲ್ಲ; ಈ ಕಾರಣದಿಂದ ಅವನೊಂದಿಗೆ ಎಂದಿನಂತೆ ನಡೆದುಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಅವನ ದೃಷ್ಟಿಗೆ ಬೀಳಲು ನನಗೆ ಸಂಕೋಚವಾಗುತ್ತಿತ್ತು. ಸಿಲ್ವಿಯೊ ತುಂಬ ಚತುರನೂ ಅನುಭವಸ್ಥನೂ ಆದ್ದರಿಂದ ಈ ಸಂಗತಿಯನ್ನು ಗಮನಿಸಿ, ಅದರ ಕಾರಣವೇನೆಂಬುದನ್ನು ಊಹಿಸದೆ ಹೋಗಲಿಲ್ಲ. ಅವನಿಗೆ ವ್ಯಥೆಯಾಗಿದ್ದಂತೆ ತೋರಿತು; ನನ್ನೆದುರಿನಲ್ಲಿ ತನ್ನ ಹೃದಯವನ್ನು ತೋಡಿಕೊಳ್ಳಬೇಕೆಂಬ ಅವನ ಹಂಬಲವಂತೂ ಒಂದೆರಡು ಸಲ ನನ್ನ ಗಮನಕ್ಕೆ ಬಂತು. ಆದರೆ ಅಂಥ ಸಂದರ್ಭಗಳಿಂದ ನಾನು ತಪ್ಪಿಸಿಕೊಳ್ಳುತ್ತಿದ್ದೆ; ಸಿಲ್ವಿಯೊ ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡುತ್ತಿದ್ದ. ಇಲ್ಲಿಂದಾಚೆಗೆ ನನ್ನ ಜೊತೆಗಾರರೊಂದಿಗೆ ಮಾತ್ರ ಅವನನ್ನು ಕಾಣುತ್ತಿದ್ದೆ; ನಮ್ಮ ಹಿಂದಿನ ಬಿಚ್ಚು ಹೃದಯದ ಮಾತುಕತೆ ಕೊನೆಗಂಡಿತು.

ಹಳ್ಳಿಗಳ ಹಾಗೂ ಹಳ್ಳಿಗಾಡಿನ ಸಣ್ಣ ಸಣ್ಣ ಪಟ್ಟಣಗಳ ನಿವಾಸಿಗಳಿಗೆ ಪರಿಚಯವಾಗುವ ಅನೇಕ ವಿಶೇಷಾನುಭವಗಳ ಕಲ್ಪನೆಕೂಡ ಮಹಾನಗರಗಳ ಸುಖಜೀವಿ ನಿವಾಸಿಗಳಿಗೆ ಇರಲಾರದು: ಉದಾಹರಣೆಗೆ, ಮತ್ತೊಮ್ಮೆ ಅಂಚೆ ಬರುವ ದಿನಕ್ಕಾಗಿ ಕಾಯುವ ಅನುಭವ. ಮಂಗಳವಾರ ಶುಕ್ರವಾರಗಳಲ್ಲಿ ಸೈನ್ಯದಳದ ಮುಖ್ಯಕಾರ್ಯಾಲಯವು ಯಾವಾಗಲೂ ಸೈನ್ಯಾಧಿಕಾರಿಗಳಿಂದ ಕಿಕ್ಕಿರಿದಿರುತ್ತಿತ್ತು: ಕೆಲವರು ಹಣಕ್ಕಾಗಿ, ಕೆಲವರು ಕಾಗದಪತ್ರಗಳಿಗಾಗಿ, ಇನ್ನು ಕೆಲವರು ವೃತ್ತಪತ್ರಿಕೆಗಳಿಗಾಗಿ ನಿರೀಕ್ಷಿಸುತ್ತಿದ್ದರು. ಸಾಧಾರಣವಾಗಿ, ಕಾಗದಗಳು ಕೈಸೇರಿದೊಡನೆ ಆಗಲೇ ಅಲ್ಲಿಯೇ ಅವುಗಳ ಮುದ್ರೆಯೊಡೆದು, ಸುದ್ದಿ ಸಮಾಚಾರಗಳ ವಿವರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು; ಹೀಗಾಗಿ, ಕಚೇರಿಯಲ್ಲಿ ಮಹಾ ಸಂಭ್ರಮದ ದೃಶ್ಯ ಕಂಡುಬರುತ್ತಿತ್ತು. ಸೈನ್ಯದಳದ

ಮೂಲಕವಾಗಿಯೇ ತನ್ನ ಕಾಗದಗಳನ್ನು ಪಡೆಯುತ್ತಿದ್ದ ಸಿಲ್ವಿಯೊ ಕೂಡ ಸಾಧಾರಣವಾಗಿ ಅಲ್ಲಿ ಬಂದಿರುತ್ತಿದ್ದನು. ಒಂದು ದಿನ ಅವನ ಕೈಗೆ ಒಂದು ಕಾಗದ ತಂದುಕೊಟ್ಟಾಗ, ಅವನು ಅತ್ಯಂತ ತವಕದಿಂದ ಅದರ ಮುದ್ರೆಯನ್ನು ಒಡೆದನು. ಕಾಗದದ ಒಕ್ಕಣೆಯ ಮೇಲೆ ಅವನು ದೃಷ್ಟಿ ಓಡಿಸಿದಾಗ ಅವನ ಕಣ್ಣು ಫಳಫಳಿಸುತ್ತಿದ್ದುವು. ತಮ್ಮ ತಮ್ಮ ಕಾಗದಗಳನ್ನು ಓದಿಕೊಳ್ಳುವುದರಲ್ಲಿ ನಿರತರಾಗಿದ್ದ ಸೈನ್ಯಾಧಿಕಾರಿಗಳು ಏನನ್ನೂ ಗಮನಿಸಲಿಲ್ಲ. "ಮಹನೀಯರೆ, ನಾನು ಈ ಕ್ಷಣ ಹೊರಡಬೇಕಾದಂಥ ಸಂದರ್ಭವಿಶೇಷ ಒದಗಿದೆ. ಈ ರಾತ್ರಿಯೆ ನಾನು ಈ ಸ್ಥಳ ಬಿಡಬೇಕು. ಕಡೆಯ ಸಲ ನನ್ನೊಂದಿಗೆ ಭೋಜನಮಾಡಲು ನೀವು ನಿರಾಕರಿಸುವುದಿಲ್ಲವೆಂದು ನಂಬಿದ್ದೇನೆ" ಎಂದು ಸಿಲ್ವಿಯೊ ಗಟ್ಟಿಯಾಗಿ ಹೇಳಿ, ನನ್ನ ಕಡೆಗೆ ತಿರುಗಿ ಮುಂದುವರಿಸಿದನು: "ನಿಮ್ಮನ್ನು ನಿರೀಕ್ಷಿಸುತ್ತಿರುತ್ತೇನೆ. ನೀವು ಬರಲೇಬೇಕು." ಈ ಮಾತುಗಳನ್ನು ಹೇಳಿ, ಅವನು ಕಾರ್ಯಾಲಯದಿಂದ ಆತುರವಾಗಿ ಹೊರಟುಹೋದನು; ಸಿಲ್ವಿಯೋವಿನ ಮನೆಯಲ್ಲಿ ಸೇರುವುದೆಂದು ಗೊತ್ತುಮಾಡಿಕೊಂಡು, ನಾವೆಲ್ಲ ನಮ್ಮ ನಮ್ಮ ದಾರಿ ಹಿಡಿದೆವು.

ಗೊತ್ತಾದ ಹೊತ್ತಿಗೆ ಸರಿಯಾಗಿ ನಾನು ಸಿಲ್ವಿಯೋವಿನ ಮನೆಗೆ ಹೋದೆ; ಬಹುಮಟ್ಟಿಗೆ ಸೈನ್ಯದಳದವರೆಲ್ಲ ಅಲ್ಲಿ ನೆರೆದಿದ್ದರು. ಅವನ ಸಾಮಾನುಗಳನ್ನೆಲ್ಲಾ ಆಗಲೆ ಕಟ್ಟಿಡಲಾಗಿತ್ತು; ಗುಂಡಿನೇಟಿನ ತೂತುಗಳಿಂದ ತುಂಬಿದ್ದ ಬೋಳುಗೋಡೆಗಳ ಹೊರತಾಗಿ ಇನ್ನೇನೂ ಉಳಿದಿರಲಿಲ್ಲ. ನಾವು ಮೇಜಿನ ಮುಂದೆ ಊಟಕ್ಕೆ ಕುಳಿತೆವು; ನಮ್ಮ ಅತಿಥೇಯ ಅತ್ಯಂತ ಉತ್ಸಾಹಪೂರ್ಣನಾಗಿದ್ದನು; ಆತನ ಉಲ್ಲಾಸ ಬೇಗನೆ ಅತಿಥಿಗಳಿಗೂ ಹರಡಿತು. ಸೀಸೆಗಳ ಬಿರಡೆಗಳು 'ಪಾಪ್' ಎಂದು ಎಗರಿದವು; ದ್ರಾಕ್ಷಾ ಮದ್ಯ ಗಾಜಿನ ಲೋಟಗಳಲ್ಲಿ ಬುರಬುರನೆ ನೊರೆಯಾಡಿ ಬುಸ್ಸೆಂದಿತು; ನಾವೆಲ್ಲರೂ ಆತನಿಗೆ ಸುಖಪ್ರಯಾಣವನ್ನೂ ಅದೃಷ್ಟಲಾಭವನ್ನೂ ಅವಿಶ್ರಾಂತವಾಗಿ ಕೋರಿದೆವು. ನಾವು ಮೇಜನ್ನು ಬಿಟ್ಟದ್ದಾಗ ಸಂಜೆ ತುಂಬ ಹೊತ್ತಾಗಿತ್ತು. ನಾವು ನಮ್ಮ ಟೋಪಿಗಳನ್ನು ತೆಗೆದುಕೊಳ್ಳುತ್ತಿದ್ದಾಗ, ಸಿಲ್ವಿಯೊ ನಮ್ಮಲ್ಲಿ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಬೀಳ್ಕೊಂಡನು. ನಾನು ಇನ್ನೇನು ಹೊರಡಲಿದ್ದಾಗ ಆತ ನನ್ನ ಕೈಹಿಡಿದುಕೊಂಡು ನನ್ನನ್ನು ತಡೆದು ನಿಲ್ಲಿಸಿಕೊಂಡನು. "ನಿಮ್ಮೊಡನೆ ಸ್ವಲ್ಪ ಮಾತಾಡಬಯಸುತ್ತೇನೆ" ಎಂದು ಆತ ತಗ್ಗಿದ ದನಿಯಲ್ಲಿ ಹೇಳಿದನು. ನಾನು ಅಲ್ಲಿಯೇ ಉಳಿದುಕೊಂಡೆ.

ಅತಿಥಿಗಳೆಲ್ಲ ಹೊರಟುಹೋಗಿದ್ದರು; ಎದುರುಬದುರಾಗಿ ನಾವಿಬ್ಬರೇ ಕುಳಿತು, ಮೌನದಿಂದ ಚುಂಗಾಣಿಯನ್ನು ಹೊತ್ತಿಸಿಕೊಳ್ಳುತ್ತಿದ್ದೆವು. ಸಿಲ್ವಿಯೊ

ಅನ್ಯಮನಸ್ಕನಾಗಿದ್ದನು; ಅವನ ಗೆಲವಿನ ಉದ್ರೇಕದ ಲವಲೇಶವೂ ಉಳಿದಿರಲಿಲ್ಲ. ಆತನ ವಿಷಣ್ಣವಾದ ವಿವರ್ಣತೆ, ಫಳಫಳಿಸುವ ಕಣ್ಣುಗಳು, ಅವನ ಬಾಯಿಂದ ಹೊರಬರುತ್ತಿದ್ದ ದಟ್ಟವಾದ ಹೊಗೆ ಇವೆಲ್ಲ ಸೇರಿ ಅವನು ನಿಜವಾದ ದೈತ್ಯನಂತೆ ಕಾಣುವಹಾಗೆ ಮಾಡಿದ್ದುವು. ಕೆಲವು ನಿಮಿಷಗಳಾದಮೇಲೆ, ಸಿಲ್ವಿಯೊ ಮೌನವನ್ನು ಮುರಿದನು.

ಆತ ಹೇಳತೊಡಗಿದ : "ಬಹುಶಃ ನಾವು ಮತ್ತೆ ಸಂಧಿಸುವುದಿಲ್ಲ. ನಾವಿಬ್ಬರೂ ಅಗಲುವ ಮುನ್ನ, ನಿಮ್ಮೊಂದಿಗೆ ಮಾತಾಡಬಯಸುತ್ತೇನೆ. ನನ್ನ ವಿಚಾರವಾಗಿ ಇತರರು ನಿಮ್ಮ ಗಮನಕ್ಕೆ ಬಂದಿರಬಹುದು. ಆದರೆ, ನೀವೆಂದರೆ ನನಗೆ ಮೆಚ್ಚಿಗೆ; ನೀವು ತಪ್ಪುಭಾವನೆ ಇಟ್ಟುಕೊಳ್ಳುವಂತೆ ಮಾಡಿ ಹೋಗುವುದೆಂದರೆ ನನ್ನ ಮನಸ್ಸಿಗೆ ನೋವಾಗುತ್ತದೆ."

ಆತ ನಡುವೆ ನಿಲ್ಲಿಸಿ, ತನ್ನ ಚುಂಗಾಣಿಯ ಬಟ್ಟಲುಬಾಯಿಗೆ ಮತ್ತೆ ಹೊಗೆಸೊಪ್ಪು ತುಂಬತೊಡಗಿದ. ನಾನು ಒಂದು ಮಾತನ್ನೂ ಆಡದೆ ಕೆಳಮುಖನಾಗಿ ನೋಡುತ್ತಿದ್ದೆ.

ಆತ ಮುಂದುವರಿಸಿದ :

"ಆ ಕುಡುಕಷೋಕೀಲಾಲ ಆರ್(R)–ನನ್ನು ದ್ವಂದ್ವಯುದ್ಧಕ್ಕೆ ಕರೆಯಲಿಲ್ಲವೆಂದು ನಿಮಗೆ ಆಶ್ಚರ್ಯವಾಗಿರಬಹುದು. ಯಾವ ಆಯುಧವನ್ನು ಬೇಕಾದರೂ ಆರಿಸಿಕೊಳ್ಳುವ ಹಕ್ಕುಳ್ಳ ನನ್ನ ಕೈಯಲ್ಲಿ ಆತನ ಪ್ರಾಣವಿತ್ತು, ನನ್ನ ಪ್ರಾಣಕ್ಕೆ ಯಾವ ಭಯವೂ ಇರಲಿಲ್ಲ; ಇದನ್ನು ನೀವೂ ಒಪ್ಪುತ್ತೀರಿ. ನನ್ನ ಸಂಯಮಕ್ಕೆ ಕೇವಲ ಉದಾರಮನಸ್ಸೇ ಕಾರಣವೆಂದು ನೀವು ಭಾವಿಸಲು ನನ್ನ ಅಡ್ಡಿಯಿಲ್ಲ; ಆದರೆ ನಿಮ್ಮನ್ನು ಮೋಸಪಡಿಸಲು ನನಗೆ ಇಷ್ಟವಿಲ್ಲ. ನನ್ನ ಪ್ರಾಣಕ್ಕೆ ಸ್ವಲ್ಪವೂ ಅಪಾಯವಾಗದಂತೆ ಆ ಆರ್–ಗೆ ಬುದ್ಧಿ ಕಲಿಸಲು ಸಾಧ್ಯವಾಗದ್ದಿದ್ದರೆ, ನಾನು ಆತನನ್ನು ಕ್ಷಮಿಸುತ್ತಲೇ ಇರಲಿಲ್ಲ."

ನಾನು ಬೆರಗಿನಿಂದ ಆತನನ್ನು ದಿಟ್ಟಿಸಿ ನೋಡಿದೆ. ಆತ ಹೀಗೆ ಒಪ್ಪಿಕೊಂಡದ್ದು ನನ್ನನ್ನು ಚಕಿತಗೊಳಿಸಿತು. ಸಿಲ್ವಿಯೊ ಮುಂದುವರಿಸಿದ:

"ಹೌದು–ನನ್ನ ಪ್ರಾಣವನ್ನು ಅಪಾಯಕ್ಕೆ ಸಿಲುಕಿಸಲು ನನಗೆ ಹಕ್ಕಿಲ್ಲ. ಆರು ವರ್ಷಗಳ ಹಿಂದೆ ನನ್ನ ಮುಖಕ್ಕೆ ಏಟು ಬಿತ್ತು; ಆದರೆ ನನ್ನ ಹಗೆ ಇನ್ನೂ ಜೀವಂತನಾಗಿದ್ದಾನೆ."

ನನ್ನ ಕುತೂಹಲ ಬಲವಾಗಿ ಕೆರಳಿತು. "ಹಾಗಾದರೆ ನೀವು ಆತನೊಂದಿಗೆ ಕಾದಾಡಲಿಲ್ಲ? ಸಂದರ್ಭವಶಾತ್ ನೀವು ಬೇರೆಯಾಗಿ ದೂರಹೋದಿರಿ ಎಂದು ಕಾಣುತ್ತದೆ" ಎಂದೆ ನಾನು.

"ನಾನು ಆತನೊಂದಿಗೆ ಕಾದಾಡಿದ್ದುಂಟು. ನಮ್ಮ ದ್ವಂದ್ವ ಯುದ್ಧದ ನೆನಪಿನ ವಸ್ತು ನನ್ನ ಬಳಿ ಇಲ್ಲಿದೆ" ಎಂದು ಸಿಲ್ವಿಯೊ ಉತ್ತರ ಕೊಟ್ಟ.

ಆತ ಮೇಲಕ್ಕೆದ್ದು, ಒಂದು ರಟ್ಟಿನ ಪೆಟ್ಟಿಗೆಯಿಂದ ಒಂದು ಚಿನ್ನದ ಜರಿಯ ಕುಚ್ಚಿನ ಹೆಣಿಗೆಕೆಲಸದ ಕೆಂಪುಟೋಪಿಯನ್ನು ಹೊರತೆಗೆದ. (ಅಂಥದನ್ನು ಫ್ರೆಂಚರು 'ಪೊಲೀಸು ಕುಲಾವಿ' ಎನ್ನುತ್ತಾರೆ). ಆತ ಅದನ್ನು ಧರಿಸಿದ; ಹಣೆಯ ಮೇಲೆ ಒಂದು ಅಂಗುಲದಷ್ಟು ಮೇಲ್ಭಾಗದಲ್ಲಿ ಅದರಲ್ಲಿ ಒಂದು ಗುಂಡಿನೇಟಿನ ರಂಧ್ರವಿದ್ದುದು ಕಂಡುಬಂತು.

"ನಾನು ಒಮ್ಮೆ–ನೆಯ ರಾವುತ ದಳದಲ್ಲಿ ಇದ್ದದ್ದು ನಿಮಗೆ ಗೊತ್ತು. ಎಲ್ಲದರಲ್ಲಿಯೂ ಮೊದಲಾಗಿರುವುದು ನನ್ನ ಸ್ವಭಾವ; ನನ್ನ ಯೌವನದಲ್ಲಂತೂ ಅದೊಂದು ಹುಚ್ಚೇ ಆಗಿತ್ತು. ನಮ್ಮ ಕಾಲದಲ್ಲಿ ಪುಂಡಾಟವೇ ಮೆಚ್ಚಿನ ಪದ್ಧತಿ; ಸೈನ್ಯದಲ್ಲಿ ನಾನೊಬ್ಬ ಭಾರಿ 'ಬೆಂಕಿ ನವಾಬ.'* ಕುಡಿದು ಉನ್ಮತ್ತರಾಗುವುದು ನಮಗೊಂದು ಹೆಮ್ಮೆ; ಕವಿ ಡೆನಿಸ್ ಡ್ಯಾವಿಡಾಫ್ ಅಮರಗೊಳಿಸಿರುವ ಪ್ರಸಿದ್ಧ ಬರ್ಟ್‌ಸಾಫ್ ಮದ್ಯವನ್ನು ನಾನೊಮ್ಮೆ ಕುಡಿದು ಮೇಜಿನ ಕೆಳಗೆ ಬಿದ್ದಿದ್ದೆ. ನಮ್ಮ ದಳದಲ್ಲಿ ಪ್ರತಿ ನಿಮಿಷವೂ ಒಂದೊಂದು ದ್ವಂದ್ವ ಯುದ್ಧವಾಗುತ್ತಿತ್ತು; ನಾನು ಭಾಗವಹಿಸದೆ ಇದ್ದ ಕಾದಾಟ ಒಂದೂ ಇರಲಿಲ್ಲ; ಪ್ರತಿಯೊಂದರಲ್ಲಿಯೂ ನಾನು ಕಾದಾಡುವವನ ಸಹಾಯಕ, ಇಲ್ಲವೆ ನಾನೇ ಕಾದಾಡುವವ. ನನ್ನ ಸಂಗಡಿಗರಿಗೆ ನಾನು ಆರಾಧ್ಯಮೂರ್ತಿ; ಪದೇ ಪದೇ ಬದಲಾವಣೆಯಾಗುತ್ತಿದ್ದ ದಳದ ಅಧಿಕಾರಿಗಳ ದೃಷ್ಟಿಯಲ್ಲಿ ಒಂದು ಅನಿವಾರ್ಯ ಪೀಡೆ.

"ನಾನು ಶಾಂತನಾಗಿ (ಅಥವಾ, ಬಹುಶಃ ಅಷ್ಟೊಂದು ಶಾಂತನಾಗಿರದೆ) ನನ್ನ ಕೀರ್ತಿಗಾಗಿ ನಲಿಯುತ್ತಿದೆ; ಆಗ ಸತ್ಕುಲಪ್ರಸೂತನಾದ ಶ್ರೀಮಂತ ತರುಣನೊಬ್ಬ–ನಾನು ಅವನ ಹೆಸರು ಹೇಳುವುದಿಲ್ಲ–ನಮ್ಮ ದಳಕ್ಕೆ ಸೇರಿದ. ಅಂಥ ಅದೃಷ್ಟಶಾಲಿಯನ್ನು, ಅಂಥ ತೇಜಸ್ವಿಯನ್ನು ಹಿಂದೆ ನಾನೆಂದೂ ನೋಡಿರಲಿಲ್ಲ! ಯೌವನ, ಬುದ್ಧಿಶಕ್ತಿ, ಅಂದಚೆಂದ, ಕೋಲಾಹಲಕರವಾದ ಹುಮ್ಮಸ್ಸು, ಹಿಂದೆಮುಂದೆ ನೋಡದ ಕೆಚ್ಚು, ಭರ್ಜರಿಯಾದ ಹೆಸರು, ಮತ್ತು ತನ್ನ ಸ್ವಭಾವಕ್ಕೆ ಅನುಗುಣವಾಗಿ ಎಷ್ಟು ಧಾರಾಳವಾಗಿ ಖರ್ಚು ಮಾಡಿದರೂ ಮುಗಿಯುವಂತೆಯೇ ಕಂಡುಬರದಷ್ಟು ಹಣ–ಇವನ್ನೆಲ್ಲ ಉಳ್ಳಂಥ ವ್ಯಕ್ತಿಯನ್ನು ಕಲ್ಪಿಸಿಕೊಳ್ಳಿ; ಆತ ನಮ್ಮ ಮೇಲೆ ಖಂಡಿತವಾಗಿ ಎಂಥ ಪ್ರಭಾವ ಬೀರುತ್ತಿದ್ದ

---

* Fire-eater - ಜಗಳಕ್ಕೆ ಕಾಲುಕೆರೆದು ಹೋಗುವ ಶೀಘ್ರ ಕೋಪಿ.

ಎಂಬುದನ್ನು ಊಹಿಸಿಕೊಳ್ಳಲು ಪ್ರಯತ್ನಿಸಿ. ನಾಯಕನೆಂಬ ನನ್ನ ಬಿರುದು ಅಲುಗಾಡಿತು. ನನ್ನ ಹೆಸರುವಾಸಿಯಿಂದ ಆಕರ್ಷಿತನಾಗಿ ಆತ ನನ್ನ ಗೆಳೆತನ ಬೆಳಸಲು ಪ್ರಯತ್ನಿಸಿದ; ಆದರೆ ಆತನ ಸ್ನೇಹ ಸಂಪಾದನೆಯ ಪ್ರಯತ್ನಗಳಿಗೆ ನಾನು ಪುರಸ್ಕಾರ ಕೊಡಲಿಲ್ಲ. ಅವನಾದರೋ ಸ್ವಲ್ಪವೂ ವ್ಯಥೆ ಪಡದೆ ತನ್ನ ಪ್ರಯತ್ನವನ್ನು ಕೈಬಿಟ್ಟ, ಅವನ ಬಗ್ಗೆ ನನಗೆ ಬಲವಾದ ದ್ವೇಷಭಾವನೆಯುಂಟಾಯಿತು. ಸೈನ್ಯದಳದಲ್ಲಿಯೂ ಹೆಂಗಸರೊಡನೆಯೂ ಅವನು ಹೊಂದಿದ್ದ ಜನಪ್ರಿಯತೆ ನನ್ನನ್ನು ತೀವ್ರನಿರಾಶೆಗೆ ದೂಡಿತು. ನಾನು ಅವನೊಂದಿಗೆ ಜಗಳ ತೆಗೆಯಲು ಪ್ರಯತ್ನಿಸಿದೆ. ಅವನು ನನ್ನ ಚಾಟು ನುಡಿಗಳ ತಲೆಯ ಮೇಲೆ ತನ್ನವನ್ನು ಕುಳ್ಳಿರಿಸುತ್ತಿದ್ದ; ಅವನ ಚಾಟು ನುಡಿಗಳ ಯಾವಾಗಲೂ ನನ್ನದಕ್ಕಿಂತ ಹೆಚ್ಚು ಚತುರವಾಗಿಯೂ ಹೊಸವಾಗಿಯೂ ಇರುತ್ತಿದ್ದುವು. ಖಂಡಿತವಾಗಿಯೂ ನನ್ನವಕ್ಕಿಂತ ಬಹಳ ವಿನೋದಕರವಾಗಿರುತ್ತಿದ್ದುವು. ಅವನದು ಬರಿಯ ಲೇವಡಿ; ನನ್ನ ಹಾಸ್ಯದ ಬಾಣಗಳು ವಿಷಪೂರಿತ. ಕಡೆಗೆ, ಒಂದು ಸಂಜೆ ಒಬ್ಬ ಪೋಲೀಸ್ ಜಮೀನುದಾರ ಒಂದು ನೃತ್ಯಕೂಟವನ್ನು ಏರ್ಪಡಿಸಿದ್ದನು. ಅಲ್ಲಿ ಆತ ಎಲ್ಲ ಹೆಂಗಸರ, ಮುಖ್ಯವಾಗಿ ಮನೆಯೊಡತಿಯ, ಮೋಹನ ಮೂರ್ತಿಯಾಗಿದ್ದುದನ್ನು ಕಂಡು ಅವನ ಕಿವಿಯಲ್ಲಿ ಗ್ರಾಮ್ಯವಾದ ಕೆಲವು ಕುಚೋದ್ಯದ ನುಡಿಗಳನ್ನು ಉಸುರಿದೆನು; ಆಕೆಯೊಂದಿಗೆ ನನ್ನ ವ್ಯವಹಾರವೂ ಇತ್ತು. ಆತನ ಮುಖ ಕೆಂಪೇರಿ, ನನ್ನ ಮುಖಕ್ಕೆ ಹೊಡೆದನು. ಕತ್ತಿಯ ಹಿಡಿಗಳತ್ತ ನಮ್ಮ ಕೈಗಳು ಸರಿದವು. ಹೆಂಗಸರೆಲ್ಲ ಪ್ರಜ್ಞೆ ತಪ್ಪಿದರು; ನಮ್ಮನ್ನು ಬಲಾತ್ಕಾರವಾಗಿ ಬೇರ್ಪಡಿಸಿದರು; ಅಂದಿನಿರುಳೇ ದ್ವಂದ್ವಯುದ್ಧ ಮಾಡುವುದಕ್ಕಾಗಿ ನಾವು ಹೊರಟುಬಿಟ್ಟೆವು.

"ಆಗ ಸೂರ್ಯ ಹುಟ್ಟುವ ಹೊತ್ತು, ಗೊತ್ತಾದ ಸ್ಥಳದಲ್ಲಿ ನಾನು ನನ್ನ ಮೂವರು ಸಹಾಯಕ* ಸಾಕ್ಷಿಗಳೊಂದಿಗೆ ನಿಂತಿದ್ದೆ. ವರ್ಣಿಸಲಾಗದ ತವಕದಿಂದ ನಾನು ನನ್ನ ಎದುರಾಳಿಯನ್ನು ಕಾಯುತ್ತಿದ್ದೆ. ಆಗ ವಸಂತ ಮಾಸವಾದ್ದರಿಂದ ಸೂರ್ಯ ಮುಂದಾಗಿ ಹುಟ್ಟಿದ; ಆಗಲೇ ಸೆಕೆಯಾಗಿತ್ತು. ದೂರದಲ್ಲಿ ಅವನು ಬರುತ್ತಿದ್ದುದನ್ನು ಕಂಡೆ. ಕತ್ತಿಯ ಮೇಲೆ ತನ್ನ ಅಂಗಿಯನ್ನು ಹಾಕಿಕೊಂಡು ನಡೆದು ಬರುತ್ತಿದ್ದ; ಅವನ ಜೊತೆಗಿದ್ದವನು ಒಬ್ಬನೇ ಒಬ್ಬ ಸಹಾಯಕ. ನಾವು ಅವನನ್ನು ಎದುರುಗೊಳ್ಳಲು ಹೋದೆವು. ಅವನು ತನ್ನ ಟೋಪಿಯ ತುಂಬ

---

* Second - ದ್ವಂದ್ವ ಯುದ್ಧ (Duel) ದಲ್ಲಿ ಕಾದಾಡುವವನ ಜೊತೆಗೆ ಹೋಗುವ ಸಹಾಯಕ. ಸಹಾಕರು ಸಾಕ್ಷಿಗಳಾಗಿದ್ದುಕೊಂಡು ಕಾದಾಟದ ನಿಯಮಗಳಿಗೆ ಲೋಪಬರದಂತೆ ನೋಡಿಕೊಳ್ಳುತ್ತಾರೆ.

'ಚೆರಿ' ಹಣ್ಣು ತುಂಬಿಕೊಂಡು ಬಳಿಗೆ ಬಂದ. ಸಹಾಯಕರು ನಮ್ಮಿಬ್ಬರ ನಡುವೆ ಹನ್ನೆರಡು ಹೆಜ್ಜೆಗಳನ್ನು ಅಳೆದರು. ಮೊದಲು ಗುಂಡು ಹಾರಿಸಬೇಕಾಗಿದ್ದವನು ನಾನು; ಆದರೆ ಕೋಪದಿಂದ ನಾನು ಎಷ್ಟು ಕಂಪಿಸುತ್ತಿದ್ದೆನೆಂದರೆ, ನನ್ನ ಕೈ ದೃಢವಾಗಿರುವುದೆಂದು ನಾನು ನೆಚ್ಚುವಂತಿರಲಿಲ್ಲ; ಹೀಗಾಗಿ, ಮೊದಲು ಗುಂಡು ಹೊಡೆಯುವ ಅವಕಾಶವನ್ನು ಅವನಿಗೇ ಬಿಟ್ಟುಕೊಟ್ಟೆ. ಆದರೆ ಇದಕ್ಕೆ ಅವನು ಒಪ್ಪಲಿಲ್ಲ. ಆದ್ದರಿಂದ ಚೀಟಿ ಎತ್ತಿ ನಿರ್ಧರಿಸಲು ನಿಶ್ಚಯಿಸಿದೆವು. ಚೀಟಿ ಎತ್ತಿದಾಗ, ಯಾವಾಗಲೂ ಭಾಗ್ಯದೇವತೆಯ ನಚ್ಚಿನವನಾದ ಅವನಿಗೇ ಅವಕಾಶ ಲಭಿಸಿತು. ಅವನು ಗುರಿ ತೆಗೆದುಕೊಂಡು ಹಾರಿಸಿದ ಗುಂಡು ನನ್ನ ಟೋಪಿಯನ್ನು ಕೊರೆದುಕೊಂಡು ಹೋಯಿತು. ಆಗ ನನ್ನ ಸರದಿ ಬಂತು. ಕಡೆಗೊಮ್ಮೆ ಅವನ ಪ್ರಾಣ ನನ್ನ ಕೈವಶವಾಯಿತು. ಕಳವಳದ ಸುಳಿವಿನ ಕುರುಹು ಏನಾದರೂ ಇದ್ದೀತು ಎಂದು ಪರೀಕ್ಷಿಸುವ ಸಲುವಾಗಿ ಅವನನ್ನು ಬಹು ಸೂಕ್ಷ್ಮವಾಗಿ ದೃಷ್ಟಿಸಿ ನೋಡಿದೆ. ಅವನು ತನ್ನ ಟೋಪಿಯಿಂದ ಪಕ್ವವಾದ 'ಚೆರಿ' ಹಣ್ಣುಗಳನ್ನು ಆಯ್ದುಕೊಳ್ಳುತ್ತ, ನನ್ನ ಪಿಸ್ತೂಲನ್ನು ಎದುರಿಸಿ ನಿಂತ; ಅವನು ಉಗುಳುತ್ತಿದ್ದ ಬೀಜಗಳು ನಾನು ನಿಂತೆಡೆಯ ಹತ್ತಿರ ಬಂದು ಬೀಳುತ್ತಿದ್ದುವು. ಅವನ ಈ ನಿರಾತಂಕಭಾವ ನನ್ನನ್ನು ಕೆರಳಿಸಿತು. ತನ್ನ ಪ್ರಾಣಕ್ಕೆ ಅವನು ಏನೂ ಬೆಲೆ ಕೊಡದಿರುವಾಗ ಅವನ ಪ್ರಾಣ ತೆಗೆಯುವುದರಿಂದ ಏನು ಪ್ರಯೋಜನ ಎಂದು ನಾನು ಎಣಿಸಿದೆ. ಒಂದು ಪೈಶಾಚಿಕ ಯೋಚನೆ ನನ್ನ ಮನಸ್ಸಿನಲ್ಲಿ ಹಾದುಹೋಯಿತು. ಪಿಸ್ತೂಲನ್ನು ಹಿಡಿದಿದ್ದ ಕೈಯನ್ನು ನಾನು ತಗ್ಗಿಸಿದೆ.

"ಓಹೋ, ಸಾವಿನ ಬಗ್ಗೆ ಯೋಚಿಸಲಾಗದಷ್ಟು ಕೆಲಸ ಅಂತ ಕಾಣುತ್ತೆ ನಿಮಗೆ. ಫಲಾಹಾರದಲ್ಲೆ ನಿಮಗೆ ಸಂತೋಷ. ನಿಮಗೆ ವಿಘ್ನ ಉಂಟುಮಾಡಲು ನನಗೆ ಇಷ್ಟವಿಲ್ಲ" ಎಂದೆ ನಾನು. 'ನನಗೇನೂ ವಿಘ್ನವಾಗಿಲ್ಲ ನಿಮ್ಮಿಂದ, ದಯವಿಟ್ಟು ಗುಂಡುಹಾರಿಸಿ. ಆದರೂ ನಿಮ್ಮ ಇಷ್ಟ ಬಂದ ಹಾಗೆ ಮಾಡಬಹುದು. ನನ್ನನ್ನು ಗುಂಡಿನಿಂದ ಹೊಡೆಯುವುದು ನಿಮ್ಮ ಹಕ್ಕು; ನಾನು ಯಾವಾಗಲೂ ನಿಮ್ಮ ಸೇವೆಗೆ ಸಿದ್ಧ' ಎಂದು ಆತ ಪ್ರತಿಯಾಗಿ ಉತ್ತರಿಸಿದ. ನಾನು ಸಹಾಯಕರ ಕಡೆ ತಿರುಗಿ, ಸದ್ಯಕ್ಕೆ ಗುಂಡು ಹೊಡೆಯುವ ಉದ್ದೇಶ ನನಗಿಲ್ಲ ಎಂದು ಅವರಿಗೆ ಹೇಳಿದೆ. ಅಷ್ಟಕ್ಕೆ ಅಂದಿನ ದ್ವಂದ್ವಯುದ್ಧ ಮುಗಿಯಿತು.

"ನಾನು ಸೈನ್ಯಕ್ಕೆ ರಾಜಿನಾಮೆ ಕೊಟ್ಟು, ಈ ಚಿಕ್ಕ ಸ್ಥಳಕ್ಕೆ ಬಂದು ನೆಲಸಿದೆ. ಅಲ್ಲಿಂದೀಚೆಗೆ, ಸೇಡು ತೀರಿಸಿಕೊಳ್ಳುವುದು ಹೇಗೆಂದು ಚಿಂತಿಸದೆ ಒಂದು ದಿನವೂ ಕಳೆದಿಲ್ಲ. ನಾನು ಹಾತೊರೆಯುತ್ತಿದ್ದ ಕಾಲ ಈಗ ಒದಗಿಬಂದಿದೆ."

ಸಿಲ್ವಿಯೊ ತನಗೆ ಬೆಳಗ್ಗೆ ಬಂದಿದ್ದ ಕಾಗದವನ್ನು ತನ್ನ ಜೇಬಿನಿಂದ ಹೊರಕ್ಕೆ ಸೆಳೆದು, ಓದಿಕೊಳ್ಳಲೆಂದು ನನ್ನ ಕೈಗೆ ಕೊಟ್ಟ. ಯಾರೋ ಒಬ್ಬರು (ಬಹುಶಃ ಆತನ ವಕೀಲನೇ ಇರಬೇಕು) ಒಬ್ಬ ಗೊತ್ತಾದ ವ್ಯಕ್ತಿ ಒಬ್ಬಳು ಸುಂದರ ತರುಣಿಯನ್ನು ಶೀಘ್ರದಲ್ಲಿಯೇ ಶಾಸ್ತ್ರೋಕ್ತವಾಗಿ ಮದುವೆಯಾಗಲಿರುವನೆಂದು ಮಾಸ್ಕೋದಿಂದ ಬರೆದಿದ್ದನು.

"ಈ ಗೊತ್ತಾದ ವ್ಯಕ್ತಿ ಯಾರೆಂಬುದನ್ನು ನೀವು ಊಹಿಸಿದ್ದೀರಿ. ನಾನು ಮಾಸ್ಕೋವಿಗೆ ಹೋಗಲಿದ್ದೇನೆ. ಒಮ್ಮೆ ಟೋಪಿಯ ತುಂಬ 'ಚೆರಿ' ಹಣ್ಣು ತುಂಬಿಕೊಂಡು ಮರಣಕ್ಕೆ ಸಿದ್ಧನಾಗಿದ್ದಂತೆ ಈಗ ಮದುವೆಯ ಮುನ್ನವೂ ಅಷ್ಟೇ ಉದಾಸೀನನಾಗಿ ಅದನ್ನು ಎದುರಿಸುವನೇ ನೋಡೋಣ!" ಎಂದ ಸಿಲ್ವಿಯೊ.

ಇಷ್ಟು ಹೇಳಿ, ಸಿಲ್ವಿಯೊ ಮೇಲೆದ್ದು, ತನ್ನ ಟೋಪಿಯನ್ನು ನೆಲದ ಮೇಲೆ ಬಿಸಾಡಿ, ಬೋನಿನಲ್ಲಿಟ್ಟ ಹುಲಿಯಂತೆ ಕೋಣೆಯ ಅತ್ತಿಂದಿತ್ತ ಶತಪಥ ತಿರುಗಾಡತೊಡಗಿದನು. ವಿಚಿತ್ರವಾದ ಹಾಗೂ ಪರಸ್ಪರವಿರುದ್ಧವಾದ ಭಾವಗಳಿಂದ ಮನಸ್ಸು ಕಲಕಿ ಆತ ಕೋಣೆಯಿಂದ ಹೊರಹೊರಟಿದ್ದು ನೀರವನಿಶ್ಚಲಮೌನದಿಂದಿದ್ದ ನನಗೆ ಕೇಳಿಸಿತು.

ಕುದುರೆಗಳು ಸಿದ್ಧವಾಗಿವೆಯೆಂದು ಹೇಳಲು ಸೇವಕನು ಒಳಕ್ಕೆ ಬಂದನು. ಸಿಲ್ವಿಯೊ ತನ್ನ ಕೈಯನ್ನು ಪ್ರೀತಿಯಿಂದ ಅದುಮಿದನು; ಇಬ್ಬರೂ ಆಲಿಂಗನಮಾಡಿಕೊಂಡೆವು. ಅವನು ಗಾಡಿಯನ್ನೇರಿದನು; ಅದರಲ್ಲಿ ಎರಡು 'ಟ್ರಂಕು'ಗಳಿದ್ದುವು; ಒಂದರಲ್ಲಿ ಅವನ ಪಿಸ್ತೂಲುಗಳೂ ಇನ್ನೊಂದರಲ್ಲಿ ಅವನ ಹಣ ಕಾಸು ಮುಂತಾದ್ದೂ ಇದ್ದುವು. ನಾವು ಮತ್ತೊಮ್ಮೆ ಪರಸ್ಪರ ಬೀಳ್ಕೊಂಡೆವು; ಕುದುರೆಗಳು ಸಿದ್ಧವಾಗಿವೆಯೆಂದು ಹೇಳಲು ಸೇವಕನು ಒಳಕ್ಕೆ ಬಂದನು. ಸಿಲ್ವಿಯೊ ನನ್ನ ಕೈಯನ್ನು ಪ್ರೀತಿಯಿಂದ ಅದುಮಿದನು; ಇಬ್ಬರೂ ಆಲಿಂಗನಮಾಡಿಕೊಂಡೆವು. ಅವನು ಗಾಡಿಯನ್ನೇರಿದನು; ಕುದುರೆಗಳು ನಾಗಾಲೋಟದಲ್ಲಿ ಧಾವಿಸಿದುವು.

ಅನೇಕ ವರ್ಷಗಳು ಸಂದುವು; ಗೃಹಕೃತ್ಯದ ಸಂದರ್ಭಗಳ ದೆಸೆಯಿಂದ ನಾನು ಎಕ್ಸ್–ಜಿಲ್ಲೆಯ ಒಂದು ದಾರಿದ್ರ್ಯಪೀಡಿತವಾದ ಹಳ್ಳಿಯಲ್ಲಿ ನನ್ನ ನಿವಾಸವನ್ನು ಗೊತ್ತುಮಾಡಿಕೊಳ್ಳಬೇಕಾಯಿತು. ನನ್ನ ಹೊಲ ಮನೆಯ ಆಡಳಿತ ನೋಡಿಕೊಳ್ಳುವುದರಲ್ಲಿ ನಿರತನಾಗಿದ್ದಾಗ, ನನ್ನ ಹಿಂದಿನ ಕೋಲಾಹಲಕರವಾದ ಹಾಗೂ ನಿರ್ಲಕ್ಷ್ಯವಾದ ಜೀವನಕ್ಕಾಗಿ ನಿಟ್ಟುಸಿರುಗರೆಯುವುದನ್ನು ನಾನು ಎಂದೂ

ನಿಲ್ಲಿಸಲೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಶರತ್ಕಾಲ ಮತ್ತು ಹಿಮಕಾಲದ ಸಂಜೆಗಳಲ್ಲಿ ಪೂರ್ಣಏಕಾಂತ ವಾಸಕ್ಕೆ ಒಗ್ಗಿಕೊಳ್ಳುವುದು ನನಗೆ ಅತ್ಯಂತ ಕಷ್ಟವಾಗಿ ಕಂಡಿತು. ಹಳ್ಳಿಯ ಹೆಗ್ಗಡೆಯೊಂದಿಗೆ ಮಾತನಾಡುವುದು, ಕೆಲಸ ಹೇಗೆ ಸಾಗುತ್ತಿದೆಯೆಂದು ಪರಿಶೀಲಿಸಲು ಹೊಲಗಳ ಸುತ್ತ ಗಾಡಿಯಲ್ಲಿ ಓಡಾಡುವುದು, ಅಥವಾ ಹೊಸದಾಗಿ ಪ್ರಾರಂಭಿಸಿದ ಉದ್ಯಮಗಳಿಗೆ ಭೇಟಿಕೊಡುವುದು ಇವೇ ಮೊದಲಾದ ಕೆಲಸಗಳನ್ನಿಟ್ಟುಕೊಂಡು ಹಾಗೂ ಹೀಗೂ ಭೋಜನದ ಹೊತ್ತಿನವರೆಗೆ ಕಾಲ ಕಳೆಯಲು ಹವಣಿಸುತ್ತಿದ್ದೆ. ಆದರೆ ಸಂಜೆಯ ಮಬ್ಬು ಕವಿಯ ತೊಡಗಿದ ಕೂಡಲೆ ನಾನು ಏನು ಮಾಡಬೇಕೆಂಬುದೇ ನನಗೆ ತಿಳಿಯುತ್ತಿರಲಿಲ್ಲ. ಬೇರೆ ಬೇರೆ ಕಪಾಟುಗಳಲ್ಲಿಯೂ ಉಗ್ರಾಣದಲ್ಲಿಯೂ ನನಗೆ ದೊರೆತಿದ್ದ ಕೆಲವು ಪುಸ್ತಕಗಳ ವಿಷಯವೆಲ್ಲ ಆಗಲೆ ನನಗೆ ಬಾಯಿಪಾಠವಾಗಿತ್ತು. ಮನೆಯ ಕೆಲಸಗಿತ್ತಿ ಕಿರಿಲೋವ್ನ ತನ್ನ ಕತೆಗಳ ಸರಕನ್ನು ಮರಳಿ ಹೇಳಿ ಮುಗಿಸಿದ್ದಳು; ಹೆಂಗಸರ ಹಾಡುಗಳು ನನ್ನನ್ನು ಒಂದು ಬಗೆಯ ಖಿನ್ನಭಾವಕ್ಕೆ ಗುರಿಮಾಡಿದ್ದುವು. 'ಬಿಟರ್' ಮದ್ಯವು ನನ್ನ ತಲೆಗೆ ನೋವು ತರದೆ ಇದ್ದಿದ್ದರೆ ನಾನು ಅದರ ಕುಡಿತಕ್ಕೆ ಇಳಿದುಬಿಡಬಹುದಾಗಿತ್ತು. ಅಲ್ಲದೆ ಕೆಲಸವಿಲ್ಲದ ಬೇಸರದ ಪರಿಣಾಮವಾಗಿ ಎಲ್ಲಿ ಕುಡುಕನಾಗಿಬಿಡುತ್ತೇನೆಯೋ ಎಂದು ಹೆದರಿದ್ದೆನೆಂಬುದನ್ನು ನಾನು ಒಪ್ಪಿಕೊಳ್ಳಬೇಕು. ಕುಡುಕರಲ್ಲಿ ಅತ್ಯಂತ ಕೀಳೆಂದರೆ, ಮಾಡುವುದಕ್ಕೆ ಕೆಲಸವಿಲ್ಲದೆ ಕುಡಿತದ ಅಭ್ಯಾಸಕ್ಕೆ ಬಲಿ ಬೀಳುವವರು. ನಮ್ಮ ಪ್ರಾಂತ್ಯದಲ್ಲಿ ಅಂತಹ ಕುಡುಕರ ಅಸಂಖ್ಯಾತ ನಿದರ್ಶನಗಳನ್ನು ನಾನು ಕಂಡಿದ್ದೇನೆ. ಇಂಥ ಇಬ್ಬರು ಮೂವರು ನಿರ್ಭಾಗ್ಯರು ಮಾತ್ರ ನನ್ನ ನೆರೆಯವರಾಗಿದ್ದರು. ಅವರೊಡನೆ ಸಂಭಾಷಣೆಯೆಂದರೆ, ಮುಖ್ಯವಾಗಿ ಅವರ ಬಿಕ್ಕಳಿಕೆಗಳನ್ನೂ ನಿಟ್ಟುಸಿರುಗಳನ್ನೂ ಕೇಳುವುದೇ ಆಗಿದ್ದಿತು. ಇಂಥವರ ಸಹವಾಸಕ್ಕಿಂತ ಏಕಾಂತವಾಸ ಹೆಚ್ಚು ಸಹ್ಯವಾಗಿತ್ತು.

ನಾಲ್ಕು 'ವರ್‌ಸ್ಟ್'ಗಳ* ಆಚೆ 'ಕೌಂಟಿಸ್' (ಶ್ರೀಮಂತೆ) 'B' (ಬಿ)–ಎಂಬಾಕೆಯ ಬೆಲೆಬಾಳುವ ಹೊಲಮನೆಯಿತ್ತು. ಅಲ್ಲಿ ಅದರ ಮೇಲ್ವಿಚಾರಕ ಹೊರತು ಬೇರೆ ಯಾರೂ ವಾಸಿಸುತ್ತಿರಲಿಲ್ಲ; 'ಕೌಂಟೆಸ್' ತನ್ನ ಮದುವೆಯಾದ ಮೊದಲ ವರ್ಷದಲ್ಲಿ ಒಮ್ಮೆ ಮಾತ್ರ ತನ್ನ ಹೊಲಮನೆಗೆ ಭೇಟಿಕೊಟ್ಟಿದ್ದಳು. ಆಗಲೂ ಕೂಡ ಆಕೆ ಒಂದು ತಿಂಗಳಿಗಿಂತ ಹೆಚ್ಚಾಗಿ ಅಲ್ಲಿ ನಿಲ್ಲಲಿಲ್ಲ. ಆದರೆ ನನ್ನ ಏಕಾಂತವಾಸದ ಎರಡನೆಯ ವಸಂತಮಾಸದಲ್ಲಿ ಆ ಕೌಂಟಿಸ್ಸೂ ಅವಳ ಪತಿಯೂ ತಮ್ಮ

* ಒಂದು ರಸ್ತೆಯ ದೂರದ ಅಳತೆ–೩,೫೦೦ ಅಡಿಗಳು.

ಹೊಲಮನೆಯನ್ನು ಭೇಟಿ ಮಾಡಲು ಉದ್ದೇಶಿಸಿರುವರೆಂದು ವದಂತಿ ಹುಟ್ಟಿತು. ಜೂನ್ ತಿಂಗಳ ಪ್ರಾರಂಭದಲ್ಲಿ ಅವರು ನಿಜವಾಗಿ ಬಂದೇ ಬಿಟ್ಟರು.

ಐಶ್ವರ್ಯವಂತರಾದ ನೆರೆಯವರು ಬರುವುದೆಂದರೆ ಗ್ರಾಮವಾಸಿಗಳ ಜೀವನದಲ್ಲಿ ಒಂದು ನೂತನ ಶಕೆಯೇ ಪ್ರಾರಂಭವಾದಂತೆ. ಜಮೀನುದಾರರೂ ಅವರ ಮನೆಗೆಲಸದವರೂ ಅವರ ಆಗಮನಕ್ಕೆ ಎರಡು ತಿಂಗಳು ಮುಂಚೆ ಮತ್ತು ಆಮೇಲೆ ಮೂರು ವರ್ಷಗಳವರೆಗೆ ಅದರ ವಿಚಾರವಾಗಿ ಮಾತುಕತೆಯಾಡುತ್ತಿರುತ್ತಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ತರುಣಿಯೂ ಸುಂದರಿಯೂ ಆದವಳೊಬ್ಬಳು ನನ್ನ ನೆರೆಯವಳಾಗಿ ಬರಲಿರುವಳೆಂಬ ಸುದ್ದಿ ನನ್ನಮೇಲೆ ಅತ್ಯಂತ ಪ್ರಬಲವಾದ ಪ್ರಭಾವ ಬೀರಿತೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಅವಳನ್ನು ನೋಡಲು ನಾನು ತವಕಗೊಂಡು ತಹತಹಪಡುತ್ತಿದ್ದೆ; ಅವಳು ಬಂದ ಮೊದಲನೆಯ ಭಾನುವಾರವೇ ಭೋಜನವಾದಮೇಲೆ 'ಸಿ' (C)–ಹಳ್ಳಿಯನ್ನು ಕುರಿತು ಹೊರಟೆ; ಆ ಘನ ಶ್ರೀಮಂತರ ಅತ್ಯಂತ ಸಮೀಪದ ನೆರೆಯವನೆಂದೂ ಅವರ ಅತ್ಯಂತ ನಮ್ರ ಸೇವಕನೆಂದೂ ಅವರಿಗೆ ನನ್ನ ಪರಿಚಯಮಾಡಿಕೊಡಬೇಕೆಂದು ಉದ್ದೇಶಿಸಿದ್ದೆ.

ಡವಾಲಿಯ ಜವಾನ ನನ್ನನ್ನು ಶ್ರೀಮಂತರ ವ್ಯಾಸಂಗದ ಕೊಟಡಿಗೆ ಕರೆದೊಯ್ದು, ನನ್ನ ಆಗಮನವನ್ನು ಅವರಿಗೆ ತಿಳಿಸುವುದಕ್ಕಾಗಿ ಹೊರಟುಹೋದನು. ವಿಶಾಲವಾದ ಆ ವ್ಯಾಸಂಗದ ಕೋಣೆಯ ತುಂಬ ಮಹಾ ಶ್ರೀಮಂತಿಕೆಯ ಪೀಠೋಪಸ್ಕರಗಳು ಸಜ್ಜಾಗಿದ್ದುವು; ಗೋಡೆಯ ಉದ್ದಕ್ಕೂ ಪುಸ್ತಕಗಳು ತುಂಬಿದ್ದ ಪುಸ್ತಕ–ನಿಚ್ಚಣಿಕೆಗಳು ಇದ್ದುವು; ಪ್ರತಿಯೊಂದರ ಮೇಲ್ಭಾಗದಲ್ಲಿಯೂ ಕಂಚಿನ ಅರ್ಧಪ್ರತಿಮೆಯೊಂದಿದ್ದಿತು. ಅಮೃತಶಿಲೆಯ ಬೆಂಕಿಗೂಡಿನ ಮೇಲ್ಗಡೆ ಒಂದು ದೊಡ್ಡ ಕನ್ನಡಿ; ನೆಲ ತುಂಬ ಹಸುರಬಟ್ಟೆಯ ಹಾಸು; ಅದರಮೇಲೆ ಅಲ್ಲಲ್ಲಿ ರತ್ನಗಂಬಳಿ. ನನ್ನ ಅಭುಕ್ತ, ಮೂಲೆಯಲ್ಲಿ ಶ್ರೀಮಂತಿಕೆಯ ಅನುಭೋಗದ ಅಭ್ಯಾಸವೇ ತಪ್ಪಿಹೋಗಿತ್ತು; ಇತರರ ಸಂಪತ್ತನ್ನು ನೋಡುವ ಭಾಗ್ಯ ಕೂಡ ನಿಂತುಹೋಗಿತ್ತು. ಈ ಕಾರಣದಿಂದ, ಒಂದು ತೆರನ ಅಂಜುಬುರುಕುತನಕ್ಕೆ ಒಳಗಾಗಿ, ದೂರಪ್ರಾಂತದಿಂದ ಮನವಿ ಸಲ್ಲಿಸಬಂದವನು ಸಚಿವರ ಆಗಮನವನ್ನು ನಿರೀಕ್ಷಿಸುವಂತೆ ನಾನು ಏನೋ ಒಂದು ಬಗೆಯ ಗಾಬರಿಯಿಂದ ಶ್ರೀಮಂತರಿಗಾಗಿ ಕಾದಿದ್ದೆ. ಬಾಗಿಲು ತೆರೆಯಿತು; ಸುಮಾರು ಮೂವತ್ತೆರಡು ವರ್ಷ ಪ್ರಾಯದ ಅತ್ಯಂತ ಚೆಲುವನೊಬ್ಬನು ಪ್ರವೇಶಿಸಿದನು. ಆ ಶ್ರೀಮಂತನು ಸ್ನೇಹ ಸೌಹಾರ್ದಭಾವದಿಂದಲೇ ನನ್ನ ಬಳಿ ಸಾರಿದನು.

ಮನಸ್ಸನ್ನು ಸಮಾಧಾನಕ್ಕೆ ತಂದುಕೊಳ್ಳಲು ಪ್ರಯತ್ನಿಸಿ, ನನ್ನ ಪರಿಚಯವನ್ನು ಹೇಳಿಕೊಳ್ಳಬೇಕೆಂದಿರುವಷ್ಟರಲ್ಲಿಯೇ, ಪರಿಚಯದ ಪೀಠಿಕೆಯನ್ನು ಆತನೇ ಮೊದಲುಮಾಡಿಬಿಟ್ಟ, ನಾವಿಬ್ಬರೂ ಕುಳಿತುಕೊಂಡೆವು. ಸೌಜನ್ಯ ಸರಳತೆಗಳಿಂದ ಕೂಡಿದ ಆತನ ಸಂಭಾಷಣೆ ಏಕಾಂತವಾಸದ ಫಲವಾದ ನನ್ನ ಸಂಕೋಚ ಸ್ವಭಾವವನ್ನು ಬೇಗನೆಯೆ ತೊಲಗಿಸಿತು. ನನ್ನ ಮನಸ್ಸು ಒಂದು ಹತೋಟಿಗೆ ಬರುವಷ್ಟರಲ್ಲಿ ಶ್ರೀಮಂತೆ ಪ್ರವೇಶಿಸಿದಳು; ಮೊದಲಿಗಿಂತ ಬಹುಪಾಲು ಹೆಚ್ಚಾಗಿ ಮನಸ್ಸಿನ ಗೊಂದಲದಲ್ಲಿ ಮುಳುಗಿದೆನು. ಅವಳು ನಿಜವಾಗಿ ಚೆಲುವಿನ ಬೊಂಬೆ. ಶ್ರೀಮಂತನು ನನ್ನ ಪರಿಚಯ ಮಾಡಿಕೊಟ್ಟನು. ನಾನು ನಿರಾತಂಕ ಭಾವದಿಂದ ಕಾಣಬೇಕೆಂದು ಬಯಸಿದೆನು; ಆದರೆ ನಾನು ಎಷ್ಟು ಉದಾಸೀನ ಭಾವವನ್ನು ತಳೆಯಲು ಪ್ರಯತ್ನಿಸಿದೆನೋ ಅಷ್ಟೂ ಅಷ್ಟು ಪೇಚಾಟಕ್ಕೂ ಸಿಲುಕಿದೆ. ನಾನು ಮನಸ್ಸಮಾಧಾನವನ್ನು ಹೊಂದಿ ಅಪರಿಚಯಸ್ಥರೊಂದಿಗೆ ಹೊಂದಿಕೊಳ್ಳಲು ಅವಕಾಶ ಕಲ್ಪಿಸುವ ಸಲುವಾಗಿ, ಹೆಚ್ಚಿನ ಉಪಚಾರವಿಲ್ಲದೆ ನನ್ನನ್ನು ಒಳ್ಳೆಯ ನೆರೆಯವನೆಂದು ಪರಿಗಣಿಸುತ್ತ ತಮ್ಮ ತಮ್ಮಲ್ಲಿಯೇ ಮಾತಾಡಿಕೊಳ್ಳತೊಡಗಿದರು. ಈ ನಡುವೆ ನಾನು ಪುಸ್ತಕಗಳನ್ನೂ ಚಿತ್ರಪಟಗಳನ್ನೂ ನೋಡುತ್ತ ಅತ್ತಿಂದಿತ್ತ ನಡೆದಾಡತೊಡಗಿದೆ. ನನಗೆ ಚಿತ್ರಗಳ ವಿಚಾರ ಹೆಚ್ಚಾಗಿ ಏನೂ ತಿಳಿಯದು; ಆದರೆ ಅಲ್ಲಿದ್ದ ಒಂದು ಚಿತ್ರ ಮಾತ್ರ ನನ್ನ ಗಮನವನ್ನು ಸೆಳೆಯಿತು. ಅದು ಒಂದು ಸ್ವಿಸ್ ಭೂ ದೃಶ್ಯ; ನನ್ನ ಗಮನವನ್ನು ಸೆಳೆಯಿತು. ನನ್ನ ಗಮನವನ್ನು ಸೆಳೆದದ್ದು ಆ ಚಿತ್ರಕ್ಕಿಂತ ಹೆಚ್ಚಾಗಿ ಅದರಲ್ಲಿ ಸರಿಯಾಗಿ ಒಂದರ ಮೇಲೊಂದು ಇದ್ದ ಎರಡು ಗುಂಡಿನೇಟಿನ ರಂಧ್ರಗಳು. ನಾನು ಶ್ರೀಮಂತರ ಕಡೆಗೆ ತಿರುಗಿ–

"ಅದು ಭರ್ಜರಿಯಾದ ಗುಂಡಿನೇಟು" ಎಂದೆ.

"ಹೌದು, ಒಳ್ಳೆ ಅಪೂರ್ವವಾದ ಗುಂಡಿನೇಟು. ನೀವು ಚೆನ್ನಾಗಿ ಗುಂಡು ಹಾರಿಸಬಲ್ಲಿರೋ?" ಎಂದು ಕೇಳಿದ ಆತ.

ಮಾತು ನನ್ನ ಹೃದಯಕ್ಕೆ ಹತ್ತಿರವಾದ ವಿಷಯದ ಕಡೆಗೆ ಹೊರಳಿತೆಂದು ನನಗೆ ಸಂತೋಷವಾಯಿತು; ನಾನು ಹೀಗೆ ಉತ್ತರ ಕೊಟ್ಟೆ;

"ಭೇಷಾಗಿ! ಮೂವತ್ತು ಹೆಜ್ಜೆ ದೂರದಲ್ಲಿ ಇರುವ ಇಸ್ಪೀಟೆಲೆಯ ಗುರಿ ತಪ್ಪುವುದಿಲ್ಲ–ಅಂದರೆ ಮಾತ್ರ, ನನಗೆ ಪಳಕೆಯಾದ ಪಿಸ್ತೂಲುಗಳಾಗಬೇಕಷ್ಟೆ."

"ನಿಜವಾಗಿ?" ಎಂದು ತುಂಬ ಗಮನಕೊಟ್ಟು ಕೇಳಿದಳು ಶ್ರೀಮಂತೆ: "ಅಣ್ಣಾ, ಮೂವತ್ತು ಹೆಜ್ಜೆಗಳಾಚೆ ಇರುವ ಇಸ್ಪೀಟೆಲೆಯನ್ನು ನೀನು ಹೊಡೆಯಬಲ್ಲೆಯಾ?"

"ಒಂದು ದಿನ ಪ್ರಯತ್ನಿಸಿ ನೋಡೋಣ. ಒಂದು ಕಾಲದಲ್ಲಿ ನಾನು ಅಂಥ ಕೆಟ್ಟ ಗುರಿಗಾರನೇನಾಗಿರಲಿಲ್ಲ. ಆದರೆ ಈ ನಾಲ್ಕು ವರ್ಷ ಕಾಲ ನಾನು ಕೈಲಿ ಪಿಸ್ತೂಲು ಹಿಡಿದಿಲ್ಲ" ಎಂದ ಶ್ರೀಮಂತ.

"ಓಹೋ! ಹಾಗಿದ್ದ ಪಕ್ಷದಲ್ಲಿ ಇಪ್ಪತ್ತು ಹೆಜ್ಜೆಗಳಾಚೆ ಇರುವ ಇಸ್ಪೀಟೆಲೆಯನ್ನೂ ನೀವು ಹೊಡೆಯಲಾರಿರಿ ಮಹಾಸ್ವಾಮಿ, ಬೇಕಾದರೆ ನಾನು ಪಣ ತೊಡುತ್ತೇನೆ. ಪಿಸ್ತೂಲು ಹೊಡೆಯುವುದಕ್ಕೆ ಪ್ರತಿನಿತ್ಯದ ಅಭ್ಯಾಸವಿರಬೇಕು. ಅನುಭವದಿಂದ ಈ ವಿಚಾರವನ್ನು ನಾನು ಬಲ್ಲೆ. ನಮ್ಮ ಸೈನ್ಯದಳದಲ್ಲಿ ನನ್ನನ್ನು ಒಬ್ಬ ಶ್ರೇಷ್ಠ ಗುರಿಗಾರನೆಂದು ಪರಿಗಣಿಸುತ್ತಿದ್ದರು. ಆದರೆ ಒಮ್ಮೆ ಇಡಿಯ ಒಂದು ತಿಂಗಳ ಕಾಲ ಪಿಸ್ತೂಲನ್ನು ಮುಟ್ಟಲೂ ಅವಕಾಶವಾಗಲಿಲ್ಲ. ನನ್ನದು ರಿಪೇರಿಗೆ ಹೋಗಿತ್ತು. ಏನಾಯಿತು ಗೊತ್ತೆ ಮಹಾಸ್ವಾಮಿ? ಆಮೇಲೆ ಗುಂಡು ಹಾರಿಸಲು ನಾನು ಮೊದಲ ಸಲ ಪ್ರಯತ್ನಿಸಿದಾಗ, ನಾಲ್ಕು ಬಾರಿ ಗುರಿಯಿಟ್ಟು ಹೊಡೆದಾಗಲೂ ಇಪ್ಪತ್ತೈದು ಹೆಜ್ಜೆಗಳಾಚೆ ಇರುವ ಸೀಸೆಯನ್ನು ಹೊಡೆಯಲಾರದೆ ಹೋದೆ. ನಮ್ಮ 'ಕ್ಯಾಪ್ಟನ್' ಒಬ್ಬ ಇದ್ದಾನೆ, ಅವನು ಒಳ್ಳೆಯ ತಮಾಷೆಗಾರ. ಅವನು, 'ಮಿತ್ರಾ, ಶೀಸೆ ಒಡೆಯುವುದಕ್ಕೆ ನಿನಗೆ ಮನಸ್ಸು ಬರುವುದಿಲ್ಲ ಎನ್ನುವುದು ಯಾರಿಗಾದರೂ ವೇದ್ಯ' ಎಂದು ನನಗೆ ಹೇಳಿದ. ನೀವು ಆ ಅಭ್ಯಾಸವನ್ನು ಕಡೆಗಣಿಸಬಾರದು, ಮಹಾಸ್ವಾಮಿ. ಹಾಗೆ ಮಾಡಿದರೆ, ಬಹುಬೇಗ ನಿಮಗೆ ಅಭ್ಯಾಸ ತಪ್ಪಿಹೋಗುತ್ತದೆ. ನಾನು ಬಲ್ಲ ಅತ್ಯುತ್ತಮ ಗುರಿಗಾರನೊಬ್ಬ ಪ್ರತಿದಿನವೂ ಭೋಜನಕ್ಕೆ ಮೊದಲು ಮೂರು ಸಲವಾದರೂ ಗುಂಡುಹಾರಿಸಿ ಅಭ್ಯಾಸ ಮಾಡುತ್ತಿದ್ದ. ಊಟಕ್ಕೆ ಮೊದಲು ಒಂದು ಲೋಟ 'ವೋಡ್ಕ'* ಕುಡಿಯುವ ಹಾಗೆ ಅದೂ ಒಂದು ಅಭ್ಯಾಸವಾಗಿಬಿಟ್ಟಿತು ಅವನಿಗೆ."

—ಎಂದು ನಾನು ಹೇಳಿದೆ. ನಾನು ಕಡೆಗೆ ಬಾಯಿ ಬಿಟ್ಟೆನಲ್ಲಾ ಎಂದು ಶ್ರೀಮಂತನಿಗೂ ಶ್ರೀಮಂತಪತ್ನಿಗೂ ಸಂತೋಷವಾಯಿತು. "ಅವನು ಗುಂಡು ಹಾರಿಸುವ ವಿಚಾರ ಇನ್ನಷ್ಟು ಹೇಳಿ" ಎಂದು ಶ್ರೀಮಂತನು ಕೇಳಿದನು.

"ಆಗಲಿ, ಮಹಾಸ್ವಾಮಿ, ಅದೇನೆಂಬುದನ್ನು ನಿಮಗೆ ಹೇಳುತ್ತೇನೆ. ಕೆಲವು ವೇಳೆಗೆ ಗೋಡೆಯ ಮೇಲೆ ನೊಣ ಬಂದು ಕುಳಿತುಕೊಳ್ಳುತ್ತಿದ್ದುದು ಅವನ ದೃಷ್ಟಿಗೆ ಬೀಳುತ್ತಿತ್ತು–ಅಮ್ಮಾವರೆ, ನಿಮಗೆ ನಗು ಬರುತ್ತಿದೆ. ಆದರೆ, ನನ್ನಾಣೆಗೂ ನಾನು ಹೇಳುತ್ತಿರುವುದು ನಿಜ. ಇರಲಿ–ಅವನು ಹಾಗೆ ನೊಣವನ್ನು ಕಂಡಾಗ,

---

* ರಷ್ಯಾ ದೇಶದಲ್ಲಿ ಸಾಮಾನ್ಯ ಬಳಕೆಯಲ್ಲಿರುವ ಒಂದು ತೀಕ್ಷ್ಣವಾದ ಮದ್ಯ.

'ಕುಷ್ಕಾ, ಎಲ್ಲಿ ನನ್ನ ಪಿಸ್ತೂಲು!' ಎಂದು ಕೂಗಿಕೊಳ್ಳುತ್ತಿದ್ದನು; ಕುಷ್ಕ ಮದ್ದುಗುಂಡು ತುಂಬಿದ ಅವನ ಪಿಸ್ತೂಲನ್ನು ತಂದುಕೊಡುತ್ತಿದ್ದನು. ಢಮಾರ್ ಎಂದು, ಆ ನೊಣ ಅಪ್ಪಚ್ಚಿಯಾಗಿಬಿಡುತ್ತಿತ್ತು."

"ಅದ್ಭುತವಾಗಿದ್ದೆ! ಅವನ ಹೆಸರು?" ಎಂದು ಶ್ರೀಮಂತ ಬೆರಗಿನಿಂದ ಕೇಳಿದನು.

"ಸಿಲ್ವಿಯೋ, ಶ್ರೀಮಂತ ಮಹಾಶಯರೆ."

"ಸಿಲ್ವಿಯೋ! ಸಿಲ್ವಿಯೋ ನಿನಗೆ ಗೊತ್ತೆ?" ಎಂದು ಶ್ರೀಮಂತ ಜಿಗಿದು ಕೇಳಿದನು.

"ನನಗೆ ಚೆನ್ನಾಗಿ ಗೊತ್ತು, ಮಹಾಶಯಾ. ಆತನೂ ನಾನೂ ಆಪ್ತ ಸ್ನೇಹಿತರು. ನಮ್ಮ ಸೈನ್ಯದಲ್ಲಿ ದಳಕ್ಕೆ ಸೇರಿದವನಂತೆಯೇ ಅವನನ್ನು ಬರಮಾಡಿಕೊಳ್ಳುತ್ತಿದ್ದೆವು. ಆದರೆ ಐದು ವರ್ಷಗಳಿಂದೀಚೆಗೆ ಅವನ ಸುದ್ದಿಯನ್ನೇ ಕಾಣೆ. ಹಾಗಿದ್ದರೆ, ಶ್ರೀಮಂತ ಮಹಾಶಯರಿಗೂ ಆತ ಗೊತ್ತು?"

"ಗೊತ್ತು, ಚೆನ್ನಾಗಿ ಗೊತ್ತು. ಆತ ನಿಮಗೆ ಹೇಳಲೇ ಇಲ್ಲವೆ.... ಆ ಸಂದರ್ಭ ಬಿದ್ದಿರಲಾರದು... ಆದರು, ತನ್ನ ಜೀವನದ ಒಂದು ವಿಶೇಷ ಘಟನೆಯ ಬಗ್ಗೆ ಆತ ನಿಮಗೆ ಏನೂ ಹೇಳಲಿಲ್ಲವೆ?"

"ಅಂದರೆ, ಶ್ರೀಮಂತ ಮಹಾಶಯರ ಮನಸ್ಸಿನಲ್ಲಿರುವುದು, ಒಬ್ಬ ಸೊಗಸುಗಾರ ಯುವಕ ಅವನ ಮುಖದ ಮೇಲೆ ಹೊಡೆದ ಸಂದರ್ಭ ತಾನೆ?"

"ಆ ಸೊಗಸುಗಾರ ಯುವಕನ ಹೆಸರನ್ನು ಆತ ನಿಮಗೆ ಹೇಳಲಿಲ್ಲವೆ?"

"ಇಲ್ಲ ಶ್ರೀಮಂತ ಮಹಾಶಯ, ಆತ ಹೇಳಲಿಲ್ಲ"–ಎಂದು ನಾನು ಹೇಳುತ್ತಿರುವಾಗ ಇದ್ದಕ್ಕಿದ್ದಂತೆಯೇ ಸತ್ಯಸಂಗತಿ ನನ್ನಲ್ಲಿ ಸ್ಫುರಿಸಿತು. "ಹಾ! ಶ್ರೀಮಂತ ಮಹಾಶಯರೆ, ನನ್ನನ್ನು ದಯವಿಟ್ಟು ಕ್ಷಮಿಸಬೇಕು! ಹಾಗೆಂದು ನಾನು ಭಾವಿಸಿರಲಿಲ್ಲ.... ತಾವೇ ಏನು ಆ.....?"

"ಹೌದು, ನಾನೇ, ಗುಂಡಿನೇಟಿನ ರಂಧ್ರಗಳಿರುವ ಆ ಚಿತ್ರಪಟ ನಮ್ಮ ಕೊನೆಯ ಭೇಟಿಯ ಸವಿ ನೆನಪು..." ಎಂದು ಶ್ರೀಮಂತನು ಖಿನ್ನನಾಗಿ ನುಡಿದನು.

"ಹಾ! ಪ್ರಿಯಾ, ಆ ವಿಷಯ ಮಾತಾಡಬೇಡ, ಬೇಡಿಕೊಳ್ಳುತ್ತೇನೆ. ನಿನಗೂ ಗೊತ್ತು, ಅದನ್ನು ಕಂಡರೆ ನನಗೆ ಮಹಾಭೀತಿ...."

"ಹೌದು. ಆದರೆ ಹೇಳಿಬಿಡುತ್ತೇನೆ, ಅದೆಲ್ಲವನ್ನೂ ಹೇಳಿಬಿಡುತ್ತೇನೆ. ಇವರ ಸ್ನೇಹಿತನಿಗೆ ಹೇಗೆ ಅಪಚಾರ ಮಾಡಿದೆನೆಂಬುದು ಇವರಿಗೆ ಗೊತ್ತು. ಸಿಲ್ವಿಯೊ

ಹೇಗೆ ನನ್ನ ಮೇಲೆ ಸೇಡು ತೀರಿಸಿಕೊಂಡನೆಂಬುದನ್ನು ಇವರು ಕೇಳಿ ತಿಳಿಯಲಿ" ಎಂದು ಹೇಳಿ, ಶ್ರೀಮಂತನು ನನಗಾಗಿ ಒಂದು ಕುರ್ಚಿಯನ್ನು ಎಳೆದಿಟ್ಟನು. ನಾನು ಅವನ ಬಾಯಿಂದ ಈ ಮುಂದಿನ ಕಥನವನ್ನು ಅತ್ಯಂತ ಉತ್ಸಾಹಪೂರ್ಣ ಕುತೂಹಲದಿಂದ ಆಲಿಸಿದೆ:

"ಐದು ವರ್ಷಗಳ ಕೆಳಗೆ ನನಗೆ ಮದುವೆಯಾಯಿತು. ದಾಂಪತ್ಯದ ಮೊದಲ ಮಧುಮಾಸವನ್ನು ಈ ಹಳ್ಳಿಯಲ್ಲಿ ಕಳೆದೆ. ಈ ಮನೆ ನನ್ನ ಜೀವನದ ಅತ್ಯಂತ ಸುಖದ ಕ್ಷಣಗಳನ್ನು ಒದಗಿಸಿದೆ; ಅಂತೆಯೇ, ಅತ್ಯಂತ ದುಃಖದ ನೆನಪುಗಳಲ್ಲಿ ಒಂದಕ್ಕೂ ಈ ಮನೆಯೇ ಕಾರಣ.

"ಒಂದು ಸಂಜೆ ಕುದುರೆ ಸವಾರಿಗಾಗಿ ನಾವು ಹೊರ ಹೊರಟಿದ್ದೆವು. ನನ್ನ ಹೆಂಡತಿಯ ಕುದುರೆ ಮೊಂಡುಬಿದ್ದಿತು. ಅವಳು ದಿಗಿಲುಗೊಂಡು, ಲಗಾಮುಗಳನ್ನು ನನ್ನ ಕೈಗಿತ್ತು ನಡೆದುಕೊಂಡು ಮನೆಗೆ ಹಿಂದಿರುಗಿದಳು. ನಾನು ಸವಾರಿ ಮಾಡುತ್ತಲೇ ಸಾಗಿದೆ. ಅಂಗಳದಲ್ಲಿ ಒಂದು ಪ್ರಯಾಣದ ಬಂಡಿ ನಿಂತಿದ್ದುದನ್ನು ಕಂಡೆ. ಒಬ್ಬ ಮನುಷ್ಯ ನನ್ನ ಓದುವ ಕೋಣೆಯಲ್ಲಿ ನನಗಾಗಿ ಕಾಯುತ್ತಿರುವನೆಂದೂ, ನನ್ನೊಡನೆ ಏನೋ ಕೆಲಸವಿದೆಯೆಂದು ಮಾತ್ರ ತಿಳಿಸಿ ತನ್ನ ಹೆಸರನ್ನು ಹೇಳಲು ನಿರಾಕರಿಸಿದನೆಂದೂ ನನಗೆ ತಿಳಿಸಿದರು. ನಾನು ಈ ಕೋಣೆಯನ್ನು ಪ್ರವೇಶಿಸಿದೆ; ಮಬ್ಬುಗತ್ತಲೆಯಲ್ಲಿ ಇದೇ ಸ್ಥಳದಲ್ಲಿ, ಇದೇ ಬೆಂಕಿಗೂಡಿನ ಮುಂದೆ, ಒಬ್ಬನು ನಿಂತಿದ್ದನು; ಆತನ ಮೇಲೆಲ್ಲ ಧೂಳು ಕವಿದಿತ್ತು; ಆತ ಕ್ಷೌರ ಕೂಡ ಮಾಡಿಕೊಂಡಿರಲಿಲ್ಲ. ಆತ ಯಾರಿರಬಹುದೆಂದು ಜ್ಞಾಪಿಸಿಕೊಳ್ಳುತ್ತ ಆತನ ಬಳಿಗೆ ಹೋದೆ. 'ಶ್ರೀಮಂತ ಮಹಾಶಯರೇ, ನಾನು ಯಾರೆಂದು ತಮಗೆ ಗೊತ್ತಿಲ್ಲವೆ?' ಎಂದು ಆತ ಕಂಪಿತ ಸ್ವರದಲ್ಲಿ ಹೇಳಿದ– 'ಸಿಲ್ವಿಯೊ!' ಎಂದು ನಾನು ಗಟ್ಟಿಯಾಗಿ ಹೇಳಿದೆ; ಆಗ ನನ್ನ ಮೈಮೇಲಿನ ನವಿರು ನೆಟ್ಟಗೆ ನಿಂತುವೆಂದು ನಾನು ಒಪ್ಪಿಕೊಳ್ಳಬೇಕು. 'ಹೌದು. ಗುಂಡು ಹಾರಿಸಲು ಈಗ ನನ್ನ ಸರದಿ! ನನ್ನ ಪಿಸ್ತೂಲನ್ನು ಹಾರಿಸಲು ಬಂದಿದ್ದೇನೆ. ನೀವು ಸಿದ್ಧವಾಗಿದ್ದಿರೋ?' ಎಂದನವನು. ಆತನ ಎದೆಯ ಜೇಬಿನಿಂದ ಒಂದು ಪಿಸ್ತೂಲು ಹೊರಚಾಚಿ ಕಾಣುತ್ತಿತ್ತು. ನಾನು ಹನ್ನೆರಡು ಹೆಜ್ಜೆಗಳನ್ನು ಎಣಿಸಿ ಅಳತೆಮಾಡಿ, ಆ ಮೂಲೆಯಲ್ಲಿ ನಿಂತುಕೊಂಡೆ; ನನ್ನ ಹೆಂಡತಿ ಹಿಂದಿರುಗಿ ಇಲ್ಲಿಗೆ ಬರುವಷ್ಟರಲ್ಲಿ ತ್ವರೆಮಾಡಬೇಕೆಂದು ಆತನನ್ನು ಬೇಡಿಕೊಂಡೆ. ದೀಪಗಳು ಬೇಕೆಂದು ಹೇಳಿ ಆತ ತಡಮಾಡಿದ. ಮೋಂಬತ್ತಿಗಳನ್ನು ತರಿಸಿದೆ. ನಾನು ಬಾಗಿಲಿಗೆ ಬೀಗಹಾಕಿ, ಯಾರನ್ನೂ ಒಳಕ್ಕೆ ಬಿಡಕೂಡದೆಂದು ಅಪ್ಪಣೆಯಿತ್ತೆ;

ಗುಂಡು ಹಾರಿಸಬೇಕೆಂದು ಮತ್ತೊಂದು ಸಲ ಆತನನ್ನು ಕೇಳಿಕೊಂಡೆ. ಆತ ಪಿಸ್ತೂಲನ್ನು ಹೊರಸೆಳೆದು, ಗುರಿಯಿಟ್ಟನು. ನಾನು ಕ್ಷಣಗಳನ್ನು ಎಣಿಸಿದೆ. . . ಅವಳ ಯೋಚನೆಯಾಯಿತು. . . ಒಂದು ನಿಮಿಷಕಾಲದ ಭಯಂಕರ ಕುತೂಹಲದ ನಿರೀಕ್ಷೆ ಕಳೆಯಿತು. ಸಿಲ್ವಿಯೋ ತನ್ನ ಕೈಯನ್ನು ಕೆಳಕ್ಕೆ ಜೋಲುಬಿಟ್ಟ.

"ನನಗೆ ಒಂದೇ ವ್ಯಥೆ: ನನ್ನ ಪಿಸ್ತೂಲಿಗೆ ಚರೆ ತುಂಬಿಲ್ಲ! ಈ ಗುಂಡುಗಳು ಬಹುಭಾರ. ಏನು ಮಾಡಿದರೂ ಇದೊಂದು ಕೊಲೆಗೆಲಸವಾಗಿ ತೋರುತ್ತಿದೆಯೇ ಹೊರತು ದ್ವಂದ್ವಯುದ್ಧದಂತೆ ನನಗೆ ತೋರುತ್ತಿಲ್ಲ. ನಿಶ್ಶಸ್ತ್ರನಾದವನ ಮೇಲೆ ಗುರಿಯಿಡುವುದು ನನಗೆ ಅಭ್ಯಾಸವಿಲ್ಲ. ಮತ್ತೆ ಮೊದಲಿಂದ ಪ್ರಾರಂಭಮಾಡೋಣ– ಯಾರು ಮೊದಲು ಗುಂಡುಹಾರಿಸಬೇಕೋ ಚೀಟಿ ಎತ್ತಿ ನಿರ್ಧರಿಸೋಣ' ಎಂದು ಆತ ಹೇಳಿದ.

ನನ್ನ ತಲೆ ಗಿರ್ರೆಂದಿತು. . . ನನಗೆ ನೆನಪಿರುವ ಮಟ್ಟಿಗೆ, ಅದಕ್ಕೆ ನಾನು ಒಪ್ಪಿಕೊಳ್ಳಲಿಲ್ಲ. . . ಕಡೆಗೆ, ಇನ್ನೊಂದು ಪಿಸ್ತೂಲಿಗೆ ಮದ್ದುಗುಂಡು ತುಂಬಿದೆವು; ಎರಡು ಚೀಟಿಗಳನ್ನು ತಿರುಚಿದೆವು; ನಾನು ಹಿಂದೆ ಹೊಡೆದು ತೂತು ಮಾಡಿದ್ದ ತನ್ನ ಟೋಪಿಯೊಳಕ್ಕೆ ಅವನು ಆ ಚೀಟಿಗಳನ್ನು ಹಾಕಿದನು. ನಾನು ಮತ್ತೆ ಅದೃಷ್ಟ ಸಂಖ್ಯೆಯನ್ನು ಎತ್ತಿದೆ. 'ಶ್ರೀಮಂತ ಮಹಾಶಯರೇ, ನಿಮ್ಮದು ಸೈತಾನನ ಅದೃಷ್ಟ' ಎಂದು ಮುಗುಳುನಗೆಯೊಡನೆ ಹೇಳಿದ; ಆ ನಗೆಯನ್ನು ನಾನು ಎಂದಿಗೂ ಮರೆಯಲಾರೆ. ನನಗೆ ಏನು ಬಂತೋ, ನನ್ನನ್ನು ಹಾಗೆ ಮಾಡಗೊಡುವಂತೆ ಅದು ಹೇಗೆ ಅವನಿಗೆ ಅವಕಾಶ ಕೊಟ್ಟೆನೋ ಒಂದೂ ನನಗೆ ಅರ್ಥವಾಗುವುದಿಲ್ಲ. ಅಂತೂ ನಾನು ಗುಂಡುಹಾರಿಸಿದೆ; ಆ ಚಿತ್ರಪಟಕ್ಕೆ ಹೊಡೆದ." (ಗುಂಡಿನೇಟಿನ ರಂಧ್ರಗಳಿದ್ದ ಆ ಚಿತ್ರಪಟದ ಕಡೆ ಶ್ರೀಮಂತನು ಬೆರಳು ತೋರಿಸಿದನು. ಆತನ ಕೆನ್ನೆಗಳು ಕೆಂಪಡರಿದ್ದುವು; ಶ್ರೀಮಂತೆ ತನ್ನ ಶಾಲಿಗಿಂತ ಬೆಳ್ಳಗಾಗಿದ್ದಳು; ಒಂದು ಉದ್ಗಾರ ತೆಗೆಯದೆ ಇರಲು ನನ್ನಿಂದ ಆಗಲಿಲ್ಲ.)

ಶ್ರೀಮಂತನು ಮುಂದುವರಿಸಿದನು: "ನಾನು ಗುಂಡು ಹಾರಿಸಿದೆ. ದೇವರ ಕೃಪೆಯಿಂದ ಗುರಿತಪ್ಪಿತು. ಆಗ ಸಿಲ್ವಿಯೋ.... ಆ ಕ್ಷಣದಲ್ಲಿ ಅವನು ಹೇಗೆ ಭಯಂಕರವಾಗಿ ಕಾಣುತ್ತಿದ್ದ!... ನನ್ನ ಕಡೆ ಗುರಿಯಿಡತೊಡಗಿದ. ತಟ್ಟನೆ ಬಾಗಿಲು ತೆರೆಯಿತು; ಮಾಶಾ ಧಾವಿಸಿ ಬಂದು, ಕಿರಿಚುತ್ತ ನನ್ನ ಹೆಗಲ ಮೇಲೆ ಜೋತುಬಿದ್ದಳು. ಅವಳನ್ನು ಕಂಡು, ನನ್ನ ಚಿತ್ತ ಸ್ವಾಸ್ಥ್ಯ ಮರಳಿತು. ನಾನು ಅವಳಿಗೆ ಹೇಳಿದೆ: 'ಪ್ರಿಯೆ, ನಾವು ಸರಸವಾಡುತ್ತಿದೇವೆ ಎನ್ನುವುದು ನಿನಗೆ

ಕಾಣುವುದಿಲ್ಲವೆ? ನೀನು ಹೇಗಾಗಿ ಬಿಟ್ಟಿದೀಯೆ! ಒಳಕ್ಕೆ ಹೋಗಿ ಒಂದು ಲೋಟ ನಿರು ಕುಡಿದು ಮತ್ತೆ ನಮ್ಮ ಬಳಿಗೆ ಬಾ. ನನ್ನ ಹಳೆಯ ಮಿತ್ರರು, ಜೊತೆಗಾರರು, ಇವರ ಪರಿಚಯ ಮಾಡಿಕೊಡಬೇಕು ನಿನಗೆ.'–ಮಾಶಾ ನನ್ನನ್ನು ಇನ್ನೂ ನಂಬಲಿಲ್ಲ. ಅವಳು ಭಯಂಕರನಾಗಿ ಕಾಣುತ್ತಿದ್ದ ಸಿಲ್ವಿಯೋವಿನ ಕಡೆ ತಿರುಗಿ, 'ನನ್ನ ಪತಿ ಹೇಳುತ್ತಿರುವುದು ನಿಜವೆ, ಹೇಳಿ? ನೀವಿಬ್ಬರೂ ನಿಜವಾಗಿ ವಿನೋದವಾಡುತ್ತಿರುವಿರಾ?' ಎಂದು ಕೇಳಿದಳು. ಅದಕ್ಕೆ ಸಿಲ್ವಿಯೋ, 'ತಾಯೀ, ಅವರು ಯಾವಾಗಲು ವಿನೋದವಾಡುತ್ತಾರೆ. ಒಮ್ಮೆ ವಿನೋದಕ್ಕೆಂದು ನನ್ನ ಮುಖದಮೇಲೆ ಬಾರಿಸಿದರು. ವಿನೋದಕ್ಕೆಂದು ನನ್ನ ಟೋಪಿಯನ್ನು ಕೊರೆದುಕೊಂಡು ಹೋಗುವಂತೆ ಗುಂಡು ಹೊಡೆದರು. ಇದೇ ತಾನೆ ವಿನೋದಕ್ಕೆಂದೇ ಗುರಿತಪ್ಪಿದರು. ಈಗ ನಾನೂ ಒಂದು ವಿನೋದ ಮಾಡಬಯಸುತ್ತೇನೆ....' ಎಂದನು. ಈ ಮಾತುಗಳನ್ನಾಡಿ, ನನ್ನ ಕಡೆಗೆ ಗುರಿಯಿಟ್ಟಂತೆ ಮಾಡಿದನು–ಅವಳ ಎದುರಿಗೆ! ಆಗ ಮಾಶಾ ಅವನ ಕಾಲಮೇಲೆ ಕೆಡೆದಳು. 'ನಾಚಿಕೆಯಾಗುವುದಿಲ್ಲವೆ ಮಾಶಾ, ಮೇಲೇಳು' ಎಂದು ನಾನು ಕೆರಳಿ ಕೂಗಿಟ್ಟೆ. 'ಇನ್ನು ನೀವು ನಿರ್ಭಾಗ್ಯ ಸ್ತ್ರೀಯೊಬ್ಬಳ ಮುಂದೆ ಅಣಕವಾಡುವುದನ್ನು ನಿಲ್ಲಿಸುವಿರಾ? ಗುಂಡು ಹಾರಿಸಲು ನಿಮಗೆ ಇಷ್ಟವಿದೆಯೇ, ಅಥವಾ ಇಲ್ಲವೆ?' ಎಂದೆ. ಅದಕ್ಕೆ ಸಿಲ್ವಿಯೊ, 'ನನಗೆ ಗುಂಡು ಹಾರಿಸಲು ಇಷ್ಟವಿಲ್ಲ. ದ್ವಂದ್ವ ಯುದ್ಧ ಕಾದು ಗೆದ್ದಷ್ಟೆ ನನಗೆ ಸಮಾಧಾನವಾಗಿದೆ. ನೀವು ಗಾಬರಿಗೊಂಡು ತಳಮಳಪಟ್ಟಿದ್ದನ್ನು ಕಂಡಾಯಿತು. ನನಗೆ ನೀವು ಗುಂಡು ಹೊಡೆಯುವಂತೆ ಮಾಡಿಯಾಯಿತು. ನನಗಿಷ್ಟು ಸಾಕು. ನನ್ನ ನೆನಪು ನಿಮಗೆ ಇರುತ್ತದೆ. ಇನ್ನು ನೀವಾಯಿತು, ನಿಮ್ಮ ಆತ್ಮಸಾಕ್ಷಿಯಾಯಿತು' ಎಂದು ಹೇಳಿ, ಹೊರಡುವುದರಲ್ಲಿದ್ದವನು ಬಾಗಿಲಿಗೆ ಅಡ್ಡನಾಗಿ ನಿಂತು, ನಾನು ಹೊಡೆದಿದ್ದ ಚಿತ್ರಪಟದ ಕಡೆಗೆ ಕಣ್ಣು ಹಾಯಿಸಿದನು; ಬಳಿಕ, ಬಹುಮಟ್ಟಿಗೆ ಗುರಿತೆಗೆದುಕೊಳ್ಳದೆಯೇ ಆ ಚಿತ್ರಪಟಕ್ಕೆ ಗುಂಡುಹಾರಿಸಿ ಕಣ್ಮರೆಯಾದನು. ನನ್ನ ಹೆಂಡತಿ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ನನ್ನ ಸೇವಕರು ಅವನನ್ನು ಒಂದೇ ಸಮನೆ ದಂಗುಬಡಿದು ನೋಡುತ್ತಿದ್ದರು; ಅವನನ್ನು ತಡೆಯಲು ಅವರಿಗೆ ಧೈರ್ಯವಿರಲಿಲ್ಲ. ಅವನು ಮನೆಯ ಮುಂದಿನ ಮುಖ ಮಂಟಪಕ್ಕೆ ಹೋಗಿ, ತನ್ನ ಗಾಡಿಯವನನ್ನು ಕರೆದು, ಏನು ನಡಿಯಿತೆಂಬುದನ್ನು ನಾನು ಅರಿವಿಗೆ ತಂದುಕೊಳ್ಳುವ ಮೊದಲೇ ಹೊರಟುಹೋಗಿದ್ದನು."

ಶ್ರೀಮಂತನು ಇನ್ನು ಹೆಚ್ಚಿಗೆ ಏನನ್ನೂ ಹೇಳಲಿಲ್ಲ. ನನ್ನ ಮೇಲೆ ಅಪೂರ್ವ ಪ್ರಭಾವ ಮುದ್ರೆಯನ್ನು ಒತ್ತಿದ್ದ ಪ್ರಾರಂಭವುಳ್ಳ ಕಥೆಯ ಅಂತ್ಯವನ್ನು ನಾನು ಕಂಡುಕೊಂಡದ್ದು ಹೀಗೆ. ಅದರ ನಾಯಕನನ್ನು ನಾನು ಮತ್ತೆ ಸಂಧಿಸಲಿಲ್ಲ.

ಅಲೆಕ್ಸಾಂಡರ್ ಇಷ್ಮಿಲಾಂಟಿಯ* ಪ್ರತಿಭಟನೆಯ ಕಾಲದಲ್ಲಿ ಅವನು ಒಂದು ಸೈನ್ಯದ ತುಕಡಿಯ ನಾಯಕನಾಗಿದ್ದ, ಸ್ಕುಲ್ಯಾನಿ ಕದನದಲ್ಲಿ ಮಡಿದ ಎಂದು ಹೇಳುತ್ತಾರೆ.

೨. ಹಿಮಮಾರುತ
(Blizzard)

ತಮ್ಮ ಗೊರಸಿನ ಕೆಳಗೆ ಹಿಮವ ತುಳಿಯುತ್ತ
ಕುದುರೆಗಳು ಧಾವಿಸಿವೆ ಒರಟು ಭೂಮಿಯಮೇಲೆ....
ಆಗ ನೋಡಲ್ಲಿ! ನಿರ್ಜನದೆಡೆಯ ನಡುವೆ
ದೇವಮಂದಿರವೊಂದೆ ಗೋಚರಿಸಿತು
....
ತಟ್ಟನೆಯೆ ಮುಸುಕಿತೆಲ್ಲವು ಹಿಮದ ಗಾಳಿ,
ಹಿಮಬೀಳುತಿಹುದು ಸುಳಿಸುಳಿಯಾಗಿ ಹಳುಕಾಗಿ;
ಕಟ್ಟುಕಥೆಯಾ ಕಾಗೆ ಸಿಳ್ಳೆನುವ ರೆಕ್ಕೆಯಿಂ–
ದೆರುಗುತಿದೆ ನೆಗೆದೋಡುತಿಹ ಜಾರುಬಂಡಿ ಮೇಲೆ:
ಅದರ ಕಣಿನುಡಿವ ಕೂಗೊಳ್ಳಿತೇನಲ್ಲ!
ಧಾವಿಸುತ್ತಿಹ ಕುದುರೆ ದೂರಮಬ್ಬನು ತೂರಿ
ನೋಡುತಿವೆ ಕಂಗಳಿಗೆ ಬೇನೆ ಬರುವವೊಲು,
ಕೊರಳ ಕೂದಲು ಭಯದೆ ನಿಮಿರಿ ನಿಂತಿರಲು.

–ರುಕೊವ್ಸ್ಕಿ*

---

* ವ್ಯಾಸಿಲಿ ಜುಕೊವ್ಸ್ಕಿ (೧೭೮೩–೧೮೫೨) ಎಂಬ ರಷ್ಯನ್ ಕವಿಯ ನಾಡು ಪದದಿಂದ.

೧೮೧೧ನೆಯ ಇಸವಿಯ ಕಡೆಯ ಭಾಗ ನಮ್ಮ ಇತಿಹಾಸದಲ್ಲಿ ಮರೆಯಲಾಗದ ಕಾಲ; ಆಗ ಮಾನ್ಯನಾದ ಗಾವ್ರಿಲ ಗಾವ್ರಿಲೋವಿಚ್ ಆರ್. ಎಂಬಾತನು ತನ್ನ ಆಸ್ತಿಯಿದ್ದ ಗ್ರಾಮ ನೆನರಾಡೋವೊ ಎಂಬಲ್ಲಿ ವಾಸಿಸುತ್ತಿದ್ದನು; ಆ ಪ್ರಾಂತದ ಸುತ್ತಮುತ್ತ ಆತ ತನ್ನ ಆತಿಥ್ಯ ಔದಾರ್ಯಗಳಿಗೂ ದಯಾಪರತೆಗೂ ಹೆಸರಾಗಿದ್ದನು. ತಿಂದು, ಕುಡಿದು, ಆತನ ಹೆಂಡತಿಯೊಂದಿಗೆ ಐದು–ಕೊಪೆಕ್* ನಾಣ್ಯದ ಪಣಕಟ್ಟುವ 'ಬೋಸ್ಟನ್'+ ಆಡುವುದಕ್ಕೆ ನೆರೆಹೊರೆಯವರು ಆತನ ಮನೆಗೆ ನಿರಂತರವಾಗಿ ಭೇಟಿಕೊಡುತ್ತಿದರು; ಹದಿನೇಳರ ಹರೆಯದ, ತೆಳ್ಳಗೆ ಬಿಳಚಿಕೊಂಡಿದ್ದ ಅವರ ಮಗಳು, ಕನ್ಯೆ ಮಾರ್ಯ ಗಾವ್ರಿಲೋವ್ನಳನ್ನು ನೋಡಿ ತಣಿಯಲು ಕೆಲವರು ಬರುತ್ತಿದ್ದರು. ಎಲ್ಲರೂ ಅವಳನ್ನು ಒಳ್ಳೆಯ ಜೋಡಿಯೆಂದು ಭಾವಿಸಿದ್ದರು; ತಮಗೋ ಇಲ್ಲವೆ ತಮ್ಮ ಮಕ್ಕಳಿಗೋ ಅವಳನ್ನು ಪಡೆಯುವ ಆಸೆಯನ್ನೂ ಅನೇಕರು ಇಟ್ಟುಕೊಂಡಿದ್ದರು.

ಮಾರ್ಯ ಗ್ರಾವಿಲೋವ್ನ ಫ್ರೆಂಚ್ ಕಾದಂಬರಿಗಳನ್ನು ಓದಿ ಬೆಳೆದವಳು; ಅದರ ಫಲವಾಗಿ ಅವಳು ಪ್ರೇಮದಲ್ಲಿ ಮುಳುಗಿದನು. ರಜ ಪಡೆದುಕೊಂಡು, ತನ್ನ ಪೂರ್ವಿಕರ ಹಳ್ಳಿಯಲ್ಲಿ ನೆಲಸಿದ್ದ ವಿವರ್ಣ ಮುಖದ ಬಾವುಟ–ಸಿಪಾಯಿಯೊಬ್ಬ ಅವಳ ಬಯಕೆಯ ಗುರಿಯಾಗಿದ್ದ. ಆ ತರುಣನೂ ಸಹ ಅವಳುದ್ದಕ್ಕೆ ಸರಿಸಮನಾದ ಪ್ರೇಮ ಜ್ವಾಲೆಯಿಂದ ಧಗ ಧಗಿಸುತ್ತಿದ್ದ ಎಂದು ಬೇರೆ ಹೇಳಲೇಬೇಕಾಗಿಲ್ಲ. ಇವರಿಬ್ಬರು ಈ ಪರಸ್ಪರ ಒಳವನ್ನು ಗಮನಿಸಿದ ಹುಡುಗಿಯ ತಾಯಿತಂದೆಗಳು ಅವನನ್ನು ನೆನೆಯಲೂ ಕೂಡದೆಂದು ಅವಳಿಗೆ ತಡೆಹಾಕಿದರು; ಮತ್ತು, ಅವನೊಬ್ಬ ಅಧಿಕಾರನಿವೃತ್ತ ನ್ಯಾಯವಿಚಾರಕನಾಗಿದ್ದರೆ ಹೇಗೋ ಹಾಗೆ ಅವನನ್ನು ಅನಾದರದಿಂದ ಕಾಣುತ್ತಿದ್ದರು.

ನಮ್ಮ ಈ ಪ್ರಣಯಿಗಳು ಪತ್ರವ್ಯವಹಾರ ನಡೆಸುತ್ತಿದ್ದರು; ಒಂದು ನಿರ್ಜನವಾದ ಪೈನ್‌ಮರಗಳ ತೋಪಿನಲ್ಲೋ ಪ್ರಾಚೀನವಾದ ಆರಾಧನ ಮಂದಿರದಲ್ಲೋ ಪ್ರತಿದಿನವೂ ಸಂಧಿಸುತ್ತಿದ್ದರು. ಅಲ್ಲಿ ಅವರು ತಮ್ಮ ಅಮರಪ್ರೇಮದ ಪ್ರತಿಜ್ಞೆ ಕೈಗೊಳ್ಳುತ್ತಿದ್ದರು, ತಮ್ಮ ಶೋಚನೀಯ ಸ್ಥಿತಿಗೆ ಹಲುಬುತ್ತಿದ್ದರು, ಬಗೆಬಗೆಯ ಹಂಚಿಕೆ ಹಾಕುತ್ತಿದ್ದರು. ಆ ಬಗೆಯ ಪತ್ರವ್ಯವಹಾರದ

* ಕೊಪೆಕ್=ಒಂದು ರಷ್ಯದ ನಾಣ್ಯ, +ಬೋಸ್ಟನ್=ಒಂದು ಬಗೆಯ ಇಸ್ಪೀಟಾಟ.

ಮತ್ತು ಪ್ರೇಮ ಸಲ್ಲಾಪದ ಪರಿಣಾಮವಾಗಿ ಅವರು (ಸ್ವಾಭಾವಿಕವಾಗಿಯೆ) ಈ ತೀರ್ಮಾನಕ್ಕೆ ಬಂದರು: ನಾವು ಒಬ್ಬರನ್ನೊಬ್ಬರು ಬಿಟ್ಟು ಇರಲಾಗದ್ದರಿಂದ, ಕ್ರೂರಿಗಳಾದ ತಾಯಿತಂದೆ ನಮ್ಮ ಸೌಖ್ಯಕ್ಕೆ ಅಡ್ಡನಿಂತಿರುವುದರಿಂದ, ಅವರ ಒಪ್ಪಿಗೆಯ ಗೊಡವೆಯನ್ನೆ ತ್ಯಜಿಸಬಾರದೇಕೆ?–ಈ ಹಿತಕರವಾದ ಆಲೋಚನೆ ಮೊದಲು ತೋರಿದ್ದು ಆ ಯುವಕನಿಗೆ, ಅದು ರಮ್ಯಭಾವಜೀವಿ ಮಾರ್ಯ ಗಾವ್ರಿಲೋವ್ನಲಿಗೆ ತುಂಬ ಮೆಚ್ಚಿಗೆಯಾಯಿತು ಎಂಬುದನ್ನು ಯಾರಾದರೂ ಸುಲಭವಾಗಿ ಊಹಿಸಬಹುದು.

ಚಳಿಗಾಲ ಬಂದು, ಅವರ ಭೇಟಿಗಳನ್ನು ಕೊನೆಗಾಣಿಸಿತು; ಇದರಿಂದ ಅವರ ಪತ್ರವ್ಯವಹಾರಕ್ಕೆ ಇನ್ನಷ್ಟು ಹುರುಪೇರಿತು. ವ್ಲ್ಯಾಡಿಮಿರ್ ನಿಕೊಲಾಯೆವಿಚ್ ತನ್ನ ನಲ್ಲೆಗೆ ಬರೆದ ಪ್ರತಿಯೊಂದು ಪತ್ರದಲ್ಲಿಯೂ ಅವಳು ತನ್ನವಳಾಗಬೇಕೆಂದೂ, ತನ್ನನ್ನು ರಹಸ್ಯವಾಗಿ ಮದುವೆಯಾಗಿ ಸ್ವಲ್ಪ ಕಾಲ ತನ್ನೊಂದಿಗೆ ಅಜ್ಞಾತವಾಸಮಾಡಬೇಕೆಂದೂ, ಅನಂತರ ತಾವಿಬ್ಬರೂ ಅವಳ ಮಾತಾಪಿತೃಗಳ ಪಾದಗಳ ಮೇಲೆ ಕೆಡೆದರೆ ಪ್ರೇಮಿಗಳಾದ ತಮ್ಮ ಸಾಹಸಮಯವಾದ ಪ್ರೇಮನಿಷ್ಠೆಯನ್ನೂ ಕ್ಲೇಶವನ್ನೂ ಕಂಡು ಅವರ ಹೃದಯ ಕರಗದೆ ಇರಲಾರದೆಂದೂ, ಆಗ ಅವರು ಖಂಡಿತವಾಗಿ–'ಬನ್ನಿ ಮಕ್ಕಳೆ, ತಬ್ಬಿಕೊಳ್ಳುತ್ತೇನೆ ಬನ್ನಿ'–ಎಂದು ಉದ್ಗರಿಸುವರೆಂದೂ ಅವಳನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದನು.

ಮಾರ್ಯ ಗಾವ್ರಿಲೋವ್ನ ಒಂದು ನಿರ್ಧಾರಕ್ಕೆ ಬರಲು ಬಹಳ ಕಾಲ ತೆಗೆದುಕೊಂಡಳು: ಓಡಿಹೋಗಲು ಹಾಕಿದ ಅಸಂಖ್ಯಾಕ ಯೋಜನೆಗಳು ತಿರಸ್ಕೃತವಾದುವು. ಕಡೆಗೆ ಇದಕ್ಕೆ ಸಮ್ಮತಿಯಿತ್ತಳು: ಮೊದಲೆ ಗೊತ್ತಾದ ದಿನದಂದು ಅವಳು ತಲೆನೋವಿನ ನೆಪಹೇಳಿ, ರಾತ್ರಿ ಊಟದ ಮೇಜಿನ ಬಳಿ ಕಾಣಿಸಿಕೊಳ್ಳದೆ, ತನ್ನ ಮಲಗುವ ಕೋಣೆಯಲ್ಲಿಯೆ ಇರತಕ್ಕದ್ದು; ಅವಳ ಸೇವಕಿಯನ್ನು ಮಾತ್ರ ಈ ರಹಸ್ಯಕ್ಕೆ ಒಳಹಾಕಿಕೊಂಡು, ಇಬ್ಬರು ಬಾಲಿಕೆಯರೂ ಹಿಂಬಾಗಿಲ ಮುಖಾಂತರ ಉದ್ಯಾನಕ್ಕೆ ಹೋಗತಕ್ಕದ್ದು; ಅಲ್ಲಿ ಅವರಿಗಾಗಿ ಕಾದಿರುವ ಜಾರುಬಂಡಿಯಲ್ಲಿ ಕುಳಿತು, ನೆನರಾಡೋವೊವಿನಿಂದ ಷಾಡ್ರಿನೊ ಗ್ರಾಮಕ್ಕೆ ಐದು ವರ್ಸ್ಟ್‌ಗಳ ದೂರ ಪಯಣಮಾಡಿ ಅಲ್ಲಿ ನೇರವಾಗಿ ಚರ್ಚಿಗೆ ಹೋಗತಕ್ಕದ್ದು; ಅಲ್ಲಿ ವ್ಯಾಡಿಮಿರ್ ಅವರಿಗಾಗಿ ಕಾದಿರತಕ್ಕದ್ದು.

ಆ ನಿರ್ಧಾರದ ದಿನಕ್ಕೆ ಮುನ್ನ ಮಾರ್ಯ ಗಾವ್ರಿಲೋವ್ನ ರಾತ್ರಿಯೆಲ್ಲ ನಿದ್ರೆಮಾಡಲಿಲ್ಲ; ಅವಳು ತನ್ನ ಉಡುಪಿನ ಬೀರುವನ್ನೆಲ್ಲಾ ಹುಡುಕಾಡಿಬೇಕಾದ ಬಟ್ಟೆಬರೆ ಮತ್ತು ಉಡುಪುಗಳ ಗಂಟನ್ನು ಸಿದ್ಧಪಡಿಸಿದಳು; ತನ್ನ ಯಾರೋ

ಒಬ್ಬಳು ಭಾವಾತಿರೇಕ ಸ್ವಭಾವದ ತರುಣಿ ಗೆಳತಿಗೆ ಒಂದು ದೀರ್ಘಪತ್ರವನ್ನು ರಚಿಸಿದಳು, ಮತ್ತೊಂದು ತನ್ನ ತಾಯಿತಂದೆಗೆ ಬರೆದಿಟ್ಟಳು. ಆ ಪತ್ರದಲ್ಲಿ ಅವಳು ತನ್ನ ಈ ಕಾರ್ಯಕ್ಕೆ ಪ್ರಣಯಾವೇಶದ ದುರ್ದಮ್ಯ ಶಕ್ತಿಯೇ ಕಾರಣವೆಂದು ತಿಳಿಸಿ, ತನ್ನ ನೆಚ್ಚಿನ ತಾಯಿತಂದೆಗಳ ಅಡಿಗಳ ಮೇಲೆ ಬೀಳುವ ಅವಕಾಶದೊರೆತದಂದು ಅದು ತನ್ನ ಜೀವಮಾನದ ಅತ್ಯಂತ ಸುಖದ ಕ್ಷಣವೆಂದು ಭಾವಿಸುವುದಾಗಿ ಸಾರಿಹೇಳಿ ಪತ್ರವನ್ನು ಮುಗಿಸಿ, ಅವರನ್ನು ಮನಕರಗಿಸುವ ಮಾತುಗಳಲ್ಲಿ ಬೀಳ್ಕೊಂಡಿದ್ದಳು. ಒಂದು ಸಂದರ್ಭೋಚಿತ ವಾಕ್ಯದ ಮೇಲೆ ಎರಡು ದಗ್ಧ ಹೃದಯಗಳ ಚಿತ್ರವುಳ್ಳ ಮುದ್ರೆಯಿಂದ ಆ ಎರಡು ಪತ್ರಗಳಿಗೂ ಮುದ್ರೆಹಾಕಿ, ಬೆಳಗಾಗುವುದಕ್ಕೆ ಸ್ವಲ್ಪ ಮುಂಚೆ ತನ್ನ ಹಾಸಿಗೆಯ ಮೇಲೆ ಉರುಳಿಕೊಂಡು, ಹಾಗೆಯೇ ಒಂದು ಹೂನಿದ್ದೆಯಲ್ಲಿ ಮುಳುಗಿದಳು; ಆದರೆ ಅದರಲ್ಲಿ ಕೂಡ ಪ್ರತಿ ಕೆಲನಿಮಿಷಕ್ಕೊಮ್ಮೆ ಭೀಕರ ಸ್ವಪ್ನಗಳಿಂದ ಎಚ್ಚರಗೊಳ್ಳುತ್ತಿದ್ದಳು. ಒಂದು ಸಲ, ತಾನು ಚರ್ಚಿಗೆ ಹೋಗಬೇಕೆಂದು ಇನ್ನೇನು ಜಾರುಬಂಡಿಯನ್ನು ಹತ್ತುತ್ತಿರುವ ಕ್ಷಣದಲ್ಲಿಯೇ ತನ್ನ ತಂದೆ ಬಂದು ತಡೆದು ನಿಲ್ಲಿಸಿ, ತನ್ನನ್ನು ಹಿಮದ ಮೇಲೆ ಮರಣಸಂಕಟವಾಗುವಷ್ಟು ವೇಗದಿಂದ ಎಳೆದೊಯ್ದು ಒಂದು ತಮೋಮಯವಾದ ಪಾತಾಳಕಲ್ಪ ಕುಹರಕ್ಕೆ ಬಿಸಾಡಿದುದಾಗಿಯೂ ತನ್ನ ಹೃದಯ ನಿಂತಂತಾಗಿ ತಾನು ತಳತಳಕ್ಕೆ ಮುಳುಗುತ್ತಿದ್ದುದಾಗಿಯೂ ಕನಸುಕಂಡಳು; ಮತ್ತೊಮ್ಮೆ ವ್ಲ್ಯಾಡಿಮಿರ್ ಹುಲ್ಲು ಹಾಸಿನಮೇಲೆ ರಕ್ತಬಸಿಯುತ್ತ ವಿವರ್ಣನಾಗಿ ಬಿದ್ದಿರುವುದನ್ನು ತಾನು ನೋಡಿದಂತೆ ಕನಸುಕಂಡಳು: ಸಾಯುತ್ತಿದ್ದ ಅವನು ತಮ್ಮ ಮದುವೆಯನ್ನು ತ್ವರೆಗೊಳಿಸುವಂತೆ ಅವಳನ್ನು ಇರಿಯುವ ದನಿಯಲ್ಲಿ ಬೇಡಿಕೊಂಡಿದ್ದನು... ಅವಳ ಬಗೆಗಣ್ಣ ಮುಂದೆ ಒಂದಾದಮೇಲೆ ಒಂದರಂತೆ ಭಯಂಕರವಾದ, ಅವ್ಯವಸ್ಥಿತ ದೃಶ್ಯಗಳು ಹಾದುಹೋದುವು. ಕಡೆಗೆ ಅವಳು ಎಂದಿಗಿಂತ ಹೆಚ್ಚಾಗಿ ಬಿಳಿಚಿಕೊಂಡು, ನಿಜವಾದ ತಲೆನೋವಿನಿಂದ, ಎಚ್ಚತ್ತಳು. ಅವಳ ತಂದೆತಾಯಿ ಅವಳ ಕಳವಳವನ್ನು ಗಮನಿಸಿದರು. "ಏನಾಗಿದೆ, ಮಾಶಾ? ಮೈಗೆ ಸ್ವಸ್ಥವಾಗಿಲ್ಲವೆ, ಮಾಶಾ?"–ಇವೇ ಮೊದಲಾದ ಅವರ ನಿಲುಗಡೆಯಿಲ್ಲದ ಪ್ರಶ್ನೆಗಳು, ಮತ್ತು ಅವರ ಕರುಣಾ ಪೂರ್ಣ ಆತಂಕ ಅವಳ ಹೃದಯಕ್ಕೆ ಪೆಟ್ಟುಕೊಟ್ಟುವು. ಅವರ ಭೀತಿಯನ್ನು ನಿವಾರಿಸಿ, ಉಲ್ಲಾಸದಿಂದಿರುವಂತೆ ಕಾಣಲು ಅವಳು ಪ್ರಯತ್ನಪಟ್ಟಳು; ಆದರೆ ಈ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಸಂಜೆಯಾಯಿತು. ತನ್ನ ಕುಟುಂಬದ ಮಡಿಲಿನಲ್ಲಿ ತಾನು ಕಳೆಯುವ ಕಡೆಯ ದಿನವಿದು ಎಂಬ ಯೋಚನೆ ಬಂದು ಅವಳ ಹೃದಯ ಯಾತನೆಪಟ್ಟಿತು.

ಉಸಿರಾಡುವುದಕ್ಕೂ ಅವಳಿಗೆ ಕಷ್ಟವೆನಿಸಿತು; ತನಗೆ ಪಳಕೆಯಾದ ವ್ಯಕ್ತಿಗಳಿಗೂ ವಸ್ತುಗಳಿಗೂ ಗೋಪ್ಯವಾಗಿ ಕಡೆಯ ಪ್ರಣಾಮ ಸಲ್ಲಿಸಿದಳು. ರಾತ್ರಿಯ ಭೋಜನ ಬಡಿಸಿದರು; ಅವಳ ಹೃದಯ ಜೋರಾಗಿ ಬಡಿದುಕೊಳ್ಳತೊಡಗಿತು. ನಡುಗುವ ದನಿಯಲ್ಲಿ ತನಗೆ ಊಟ ಬೇಕಿಲ್ಲವೆಂದು ಹೇಳಿ, ತನ್ನ ತಾಯಿ ತಂದೆಗೆ ರಾತ್ರಿಯ ಶುಭಾಶಯವನ್ನು ಕೋರಿದಳು. ಅವರು ಎಂದಿನಂತೆ ಅವಳನ್ನು ಮುದ್ದಿಟ್ಟು, ಆಶೀರ್ವದಿಸಿದರು; ಅವಳು ಅತ್ತಳೆಂದೇ ಹೇಳಬೇಕು. ತನ್ನ ಮಲಗುವ ಕೋಣೆಗೆ ಹೋದಳೋ ಇಲ್ಲವೋ, ಒಂದು ಕುರ್ಚಿಯ ಮೇಲೆ ಕುಸಿದು ಕಣ್ಣೀರುಗರೆಯತೊಡಗಿದಳು. ಸಮಾಧಾನಗೊಂಡು, ಎಂದಿನಂತೆ ಉಲ್ಲಾಸದಿಂದಿರಬೇಕೆಂದು ಅವಳ ಸೇವಕಿ ಅವಳನ್ನು ಬೇಡಿಕೊಂಡಳು. ಎಲ್ಲವೂ ಸಿದ್ಧವಾಗಿತ್ತು. ಇನ್ನು ಅರ್ಧಗಂಟೆಯಾದ ಮೇಲೆ, ತನ್ನ ತಾಯ್ತಂದೆಗಳ ಗೃಹ, ತನ್ನ ಸ್ವಂತ ಕೊಟಡಿ, ತನ್ನ ಶಾಂತವಾದ ಬಾಲಿಕಾವಸ್ಥೆ–ಇವೆಲ್ಲವನ್ನೂ ಬೀಳ್ಕೊಂಡು ಮಾಶಾ ಹೊರಟುಬಿಡಬೇಕಾಗಿತ್ತು. . . ಹೊರಗಡೆ ಹಿಮವರ್ಷ ಭೋರ್ಗರೆಯುತ್ತಿತ್ತು; ಗಾಳಿ ಊಳಿಡುತ್ತಿತ್ತು; ಕಿಟಕಿಯ ಬಾಗಿಲುಗಳು ಅಲ್ಲಾಡುತ್ತ ಕಟಕಟ ಸುತ್ತಿದ್ದುವು; ಅವಳಿಗೆ ಇದೆಲ್ಲ ಒಂದು ಬೆದರಿಕೆಯಂತೆ, ಒಂದು ಶೋಕ ಪೂರ್ಣ ದುಶ್ಶಕುನದಂತೆ ಗೋಚರಿಸಿದುವು. ಬೇಗನೆಯೇ ಮನೆಯೆಲ್ಲ ನಿದ್ದೆಯ ಮುಸುಕುಹೊದೆಯಿತು. ಮಾಶಾ ಹೆಗಲಮೇಲೆ ಶಾಲನ್ನು ಹೊದೆದು, ಬೆಚ್ಚನೆಯ ಮೇಲಂಗಿ ಧರಿಸಿ, ತನ್ನ ಒಡವೆಪೆಟ್ಟಿಗೆಯನ್ನು ತೆಗೆದುಕೊಂಡು, ಹಿಂಬಾಗಿಲಿನಿಂದ ಮನೆಬಿಟ್ಟಳು; ಸೇವಕಿ ಎರಡು ಗಂಟುಮೂಟೆ ಹಿಡಿದು ಅವಳನ್ನು ಹಿಂಬಾಲಿಸಿದಳು. ಅವರು ಉದ್ಯಾನವನ್ನು ಹೊಕ್ಕರು. ಹಿಮವರ್ಷ ತಗ್ಗಿರಲಿಲ್ಲ; ಅಪರಾಧಿಯಾದ ಈ ತರುಣಿಯನ್ನು ತಡೆದುನಿಲ್ಲಿಸಲೋ ಎಂಬಂತೆ ಗಾಳಿ ಅವಳ ಮುಖಕ್ಕೆ ರಪರಪನೆ ಹೊಡೆಯುತ್ತಿತ್ತು. ಉದ್ಯಾನದ ಕೊನೆಮುಟ್ಟಲು ಅವರಿಗೆ ಎಷ್ಟೋ ಪ್ರಯಾಸವಾಯಿತು. ಬೀದಿಯಲ್ಲಿ ಒಂದು ಜಾರುಬಂಡಿ ಅವರಿಗಾಗಿ ಕಾದಿತ್ತು. ಕುದುರೆಗಳು ಚಳಿಯಿಂದ ಕೋರೈಸಿಹೋಗಿ ನಿಂತೆಡೆ ನಿಲ್ಲಲಾರದಾಗಿದ್ದುವು. ವ್ಲ್ಯಾಡಿಮಿರ್‌ನ ಬಂಡಿಹೊಡೆಯುವವನು ಆ ಚುರುಕಿನ ಕುದುರೆಗಳನ್ನು ಅಂಕೆಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ಗಾಡಿಯ ಮೂಕಿಗಳ ಮುಂದೆ ಅತ್ತಿಂದಿತ್ತ ಪರೆದಾಡುತ್ತಿದ್ದನು. ಅವನು ತರುಣಿಯನ್ನೂ ಸೇವಕಿಯನ್ನೂ ಕುಳ್ಳಿರಿಸಿ, ಅವರ ಗಂಟುಮೂಟೆಗಳನ್ನೂ ಒಡವೆಯ ಪೆಟ್ಟಿಗೆಯನ್ನೂ ಗಾಡಿಯಲ್ಲಿರಿಸಲು ಸಹಾಯಮಾಡಿದನು; ಅವನು ಕೈಗೆ ಲಗಾಮು ತೆಗೆದುಕೊಂಡ ಕೂಡಲೆ, ಕುದುರೆಗಳು ಒಂದೇ ಮನಸ್ಸಿನಿಂದ ಮುಂದಕ್ಕೆ ಹಾರಿದುವು.

ನಮ್ಮ ಕಥಾನಾಯಕಿಯನ್ನು ವಿಧಿಯ ಕರುಣೆಗೂ ಬಂಡಿ ಹೊಡೆಯುವ ಟೆರಷ್ಕನ ಕೈಚಳಕಕ್ಕೂ ಒಪ್ಪಿಸಿ, ಅತ್ತ ನಮ್ಮ ತರುಣ ಪ್ರಣಯಿಯ ಕಡೆ ಸ್ವಲ್ಪ ತಿರುಗೋಣ.

ವ್ಲಾಡಿಮಿರ್ ಹಗಲೆಲ್ಲಾ ಆ ಸ್ಥಳದಿಂದ ಈ ಸ್ಥಳಕ್ಕೆ ಗಾಡಿಯಲ್ಲಿ ಓಡಾಡುತ್ತಿದ್ದನು. ಬೆಳಗ್ಗೆ ಅವನು ಷಾಡ್ರಿನೋವಿನ ಪಾದ್ರಿಯನ್ನು ಭೇಟಿ ಮಾಡಿ, ತನ್ನ ಕೋರಿಕೆಯನ್ನು ಸಲ್ಲಿಸುವಂತೆ ಬಹಳ ಕಷ್ಟದಿಂದ ಅವನನ್ನು ಒಪ್ಪಿಸಿದನು; ಬಳಿಕ ನೆರೆಹೊರೆಯ ಜಮೀನುದಾರರಲ್ಲಿ ಸಾಕ್ಷಿಗಳನ್ನು ಹುಡುಕಿಕೊಂಡು ಹೊರಟನು. ಅವನು ಭೇಟಿ ಮಾಡಿದ ಮೊದಲ ವ್ಯಕ್ತಿ ಡ್ರ್ಯಾವಿನ್, ನಲವತ್ತು ವಯಸ್ಸಿನ ನಿವೃತ್ತ ಅಶ್ವಸೈನ್ಯಾಧಿಕಾರಿ; ಆತ ಕೂಡಲೆ ಒಪ್ಪಿದನು; ಈ ಸಾಹಸೋದ್ಯಮ ತನಗೆ ಹಿಂದಿನ ಕಾಲದ ಹಾಗೂ ರಾವುತರ ಕುಚೇಷ್ಟೆಗಳ ನೆನಪು ತರುತ್ತಿದೆಯೆಂದು ಹೇಳಿದನು. ವ್ಲಾಡಿಮಿರ್‌ನನ್ನು ತನ್ನೊಂದಿಗೆ ಭೋಜನಕ್ಕೆ ನಿಲ್ಲಬೇಕೆಂದು ಬಲಾತ್ಕಾರ ಮಾಡಿ, ಇನ್ನಿಬ್ಬರು ಸಾಕ್ಷಿಗಳನ್ನು ಹೊಂದಿಸುವುದು ಕಷ್ಟವಾಗದೆಂದು ಆಶ್ವಾಸನೆಯಿತ್ತನು. ವಾಸ್ತವವಾಗಿ, ಭೋಜನಾನಂತರ, ಕುದುರೆ ಚೋದಿಸುವ ಚುಚ್ಚಾಗಲಿ ಧರಿಸಿದ್ದ, ಮೀಸೆ ಬಿಟ್ಟಿದ್ದ ಮೋಜಣಿದಾರ ಷ್ಮಿಟ್ ಕಾಣಿಸಿಕೊಂಡನು. ಅವನ ಜೊತೆ ಜಿಲ್ಲಾ ಪೋಲೀಸ್ ಅಧಿಕಾರಿಯ ಮಗ; ಹದಿನಾರರ ಪ್ರಾಯದ ಹುಡುಗ ಇದ್ದನು; ಅವನು ಅದೇ ತಾನೆ ಸೈನ್ಯದಳವೊಂದಕ್ಕೆ ಸೇರಿಕೊಂಡಿದ್ದನು. ಅವರು ವ್ಲಾಡಿಮಿರ್‌ನ ಕೋರಿಕೆಗೆ ಒಪ್ಪಿದ್ದು ಮಾತ್ರವಲ್ಲ, ಅವನಿಗಾಗಿ ತಮ್ಮ ಪ್ರಾಣಗಳನ್ನು ಬೇಕಾದರೂ ಬಲಿಕೊಡಲು ಸಿದ್ಧರಾಗಿರುವುದಾಗಿ ಘೋಷಿಸಿದರು. ವ್ಲಾಡಿಮಿರ್ ಅವರನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು, ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕಾಗಿ ಮನೆಗೆ ತೆರಳಿದನು.

ಮುಚ್ಚಂಜೆಯ ಮಬ್ಬು ಎಂದೋ ಕವಿದಿತ್ತು. ಅವನು ತನ್ನ ನೆಚ್ಚಿನ ಟೆರೆಷ್ಕನಿಗೆ ಕೊಡಬೇಕಾದ ತಿಳಿವಳಿಕೆಯೆಲ್ಲವನ್ನೂ ಕೊಟ್ಟು ತನ್ನ ಮೂರು ಕುದುರೆ ಸಾರೋಟನ್ನು ಅವನೊಂದಿಗೆ ನೆನರಾಡೋವೋವಿಗೆ ಕಳಿಸಿಕೊಟ್ಟನು. ತನ್ನ ಚಿಕ್ಕ ಒಂಟಿ ಕುದುರೆಯ ಜಾರುಬಂಡಿಯನ್ನು ಕಟ್ಟಿಸಿದ್ಧಗೊಳಿಸುವಂತೆ ಆಜ್ಞೆಯಿತ್ತು, ಅದನ್ನು ತಾನೇ ಷಾಡ್ರಿನೋವಿಗೆ ಹೊಡೆದುಕೊಂಡು ಹೋದನು; ಇನ್ನು ಎರಡು ಗಂಟೆಗಳ ಅವಧಿಯಲ್ಲಿ ಮಾರ್ಯ ಗಾವ್ರಿಲೊವ್ನ ಅಲ್ಲಿಗೆ ಬಂದು ತಲುಪಬೇಕಾಗಿದ್ದಿತು. ರಸ್ತೆ ಅವನಿಗೆ ಪಳಕೆಯಾದದ್ದೆ; ಗಾಡಿಯ ಪ್ರಮಾಣಕ್ಕೆ ಇಪ್ಪತ್ತು ನಿಮಿಷಕ್ಕಿಂತ ಹೆಚ್ಚಿನ ಕಾಲ ಬೇಕಾಗಿರಲಿಲ್ಲ.

ವ್ಲಾಡಿಮಿರ್ ಹಳ್ಳಿಯನ್ನು ಹಿಂದುಳಿದು ಬಯಲು ಪ್ರದೇಶವನ್ನು ಹೊಕ್ಕನೋ

ಇಲ್ಲವೋ, ಅಷ್ಟರಲ್ಲಿ ಗಾಳಿಯೆದ್ದು, ಅವನು ಏನನ್ನೂ ನೋಡಲಾಗದ ಮಟ್ಟಿಗೆ ದಟ್ಟವಾಗಿ ಹಿಮವರ್ಷ ಬೀಳತೊಡಗಿತು. ಒಂದು ನಿಮಿಷದಲ್ಲಿ ರಸ್ತೆಯೆಲ್ಲ ಹಿಮದಿಂದ ಮುಚ್ಚಿಹೋಯಿತು: ಸುತ್ತಮುತ್ತಣ ಪ್ರದೇಶವನ್ನೆಲ್ಲಾ ಮಬ್ಬಾದ ಹಳದಿಯ ಛಾಯೆಯ ಹಿಮದ ಆವರಣವೊಂದು ಮುಸುಕಿತು; ಅದರ ನಡುನಡುವೆ ಬಳಿಯ ಹಿಮದ ಹಳುಕುಗಳು ಸುಟ್ಟರೆ ತಿರುಗುತ್ತಿದ್ದುವು; ಆಕಾಶವೂ ಭೂಮಿಯೂ ಒಂದಾದುವು; ತಾನು ಒಂದು ಹೊಲದ ನಡುವೆ ಇರುವುದಾಗಿ ವ್ಲ್ಯಾಡಿಮಿರ್‌ಗೆ ತಿಳಿದು, ರಸ್ತೆಗೆ ಹಿಂದಿರುಗಲು ಅವನು ವ್ಯರ್ಥ ಪ್ರಯತ್ನ ಮಾಡಿದನು. ಕುದುರೆ ಒಮ್ಮೆ ತಪ್ಪುದಾರಿ ಹಿಡಿದು ಹಿಮರಾಶಿಯ ಮೇಲೆ ನುಗ್ಗುತ್ತ, ಇನ್ನೊಮ್ಮೆ ಒಂದು ಹಳ್ಳಕ್ಕೆ ಉರುಟಿಕೊಳ್ಳುತ್ತ ಯಾವುದೋ ಗೊತ್ತಿಲ್ಲದ ಸ್ಥಳಕ್ಕೆ ಹೋಯಿತು; ಜಾರುಬಂಡಿಯಂತೂ ಪದೇ ಪದೇ ತಲೆಕೆಳಗಾಗುತ್ತಿತ್ತು. ವ್ಲ್ಯಾಡಿಮಿರನ ಪ್ರಯತ್ನಗಳೆಲ್ಲ ದಾರಿ ತಪ್ಪದಂತೆ ನೋಡಿಕೊಳ್ಳುವಷ್ಟಕ್ಕೆ ಮೀಸಲಾಗಿತ್ತು. ಅವನ ಭಾವನೆಯಂತೆ ಅರ್ಧಗಂಟೆ ಕಳೆದಮೇಲೆ, ಷಾಡ್ರಿನೋ ಬಳಿಯ ತೋಪನ್ನು ಅವನು ತಲಪಿರಲಿಲ್ಲ. ಸುಮಾರು ಇನ್ನೂ ಹತ್ತು ನಿಮಿಷಗಳಷ್ಟು ಕಾಲ ಕಳೆಯಿತು; ಆದರೂ ಆ ತೋಪು ಗೋಚರವಾಗಿರಲಿಲ್ಲ. ಉದ್ದನಾಗಿ ಅಡ್ಡನಾಗಿ ಆಳವಾದ ಕಮರಿಗಳಾಗಿದ್ದ ಬಯಲು ಪ್ರದೇಶದಲ್ಲಿ ವ್ಲ್ಯಾಡಿಮಿರ್ ಗಾಡಿ ಹೊಡೆದುಕೊಂಡು ಹೋದನು. ಹಿಮವರ್ಷ ಕಡಮೆಯಾಗಿರಲಿಲ್ಲ; ಆಕಾಶ ಇನ್ನೂ ಮೋಡ ಕವಿದಿತ್ತು.

ಕುದುರೆಗಳು ಆಯಾಸದ ಚಿಹ್ನೆ ತೋರತೊಡಗಿದುವು. ವ್ಲ್ಯಾಡಿಮಿರ್ ನಿರಂತರವಾಗಿ ಸೊಂಟದುದ್ದ ಹಿಮದಲ್ಲಿ ಮುಳುಗಿರುತ್ತಿದ್ದರೂ ಧಾರಾಳವಾಗಿ ಬೆವರಿದ್ದನು.

ಕಡೆಗೊಮ್ಮೆ ಅವನಿಗೆ ಗೊತ್ತಾಯಿತು, ತಾನು ತಪ್ಪಾದ ದಿಕ್ಕಿನಲ್ಲಿ ಪ್ರಯಾಣ ಮಾಡುತ್ತಿರುವೆನೆಂದು. ಅವನು ಕುದುರೆಯ ಲಗಾಮನ್ನು ಹಿಡಿದೆಳೆದು ಆಲೋಚನಾ ಮಗ್ನನಾದನು: ಏನೋ ನೆನೆದನು, ಏನೋ ಲೆಕ್ಕಾಚಾರ ಹಾಕಿದನು; ತಾನು ಬಲಕ್ಕೆ ತಿರುಗಬೇಕಾಗಿತ್ತೆಂಬ ನಿರ್ಣಯಕ್ಕೆ ಬಂದನು. ಈಗ ಹಾಗೆಯೇ ಮಾಡಿದನು. ಕುದುರೆ ಚಲಿಸುವುದೇ ದುಸ್ಸಾಧ್ಯವಾಗಿತ್ತು. ಈ ಮಾರ್ಗವಾಗಿ ಬಂದು ಆಗಲೇ ಒಂದು ಗಂಟೆಯ ಮೇಲಾಗಿತ್ತು. ಈಗ ಷಾಡ್ರಿನೋ ಬಹು ದೂರ ಇದ್ದಿರಲಾರದು. ಮುಂದು ಮುಂದಕ್ಕೆ ಗಾಡಿ ಹೊಡೆದುಕೊಂಡು ಸಾಗಿದನು–ಹಿಮರಾಶಿ ಮತ್ತು ಕಮರಿಗಳ ಹೊರತು, ಆ ಹೊಲಕ್ಕೆ ಕೊನೆಯೇ ಇದ್ದಂತೆ ಕಂಡುಬರಲಿಲ್ಲ. ಜಾರುಬಂಡಿ ಪದೇಪದೇ ಮಗುಚಿಕೊಳ್ಳುತ್ತಿತ್ತು; ವ್ಲ್ಯಾಡಿವಿರ್ ಅದನ್ನು ಪದೇಪದೇ ಸರಿಪಡಿಸಬೇಕಾಗಿಬರುತ್ತಿತ್ತು. ಕಾಲ ಕಳೆಯಿತು. ವ್ಲ್ಯಾಡಿಮರ್ ಅತ್ಯಂತ ಕಳವಳಪಡತೊಡಗಿದನು.

ಕಡೆಗೆ ಒಂದು ಪಕ್ಕದಲ್ಲಿ ಏನೋ ಕಪ್ಪಗೆ ಮಸಕುಮಸಗಿ ಕಾಣಿಸತೊಡಗಿತು. ವ್ಲ್ಯಾಡಿಮಿರ್ ಕುದುರೆಯನ್ನು ಅದರ ಕಡೆಗೆ ತಿರುಗಿಸಿದನು. ಅದನ್ನು ಸಮೀಪಿಸಿದಾಗ, ಅವನ ಮುಂದೆ ಒಂದು ತೋಪು ಕಾಣಿಸಿತು. ದೇವರ ದಯದಿಂದ ಈಗ ತಾನು ಬಹುಮಟ್ಟಿಗೆ ಅಲ್ಲಿಗೇ ಬಂದ ಹಾಗಾಯಿತು ಎಂದುಕೊಂಡನವನು. ಷಾಡ್ರಿನೋ ಇದ್ದದ್ದು ಅದರ ಆಚೆಯ ಕಡೆಗೇ–ಆದ್ದರಿಂದ ಅವನು ತೋಪನ್ನು ಹಾದುಹೋದನು: ತನಗೆ ಪರಿಚಿತವಾದ ರಸ್ತೆಗೆ ಹೋಗುತ್ತೇನೆ. ಇಲ್ಲವೆ ತೋಪನ್ನು ಬಳಸುತ್ತೇನೆ ಎಂದು ಅವನ ನಿರೀಕ್ಷೆ. ಬೇಗನೆಯ ಅವನಿಗೆ ರಸ್ತೆಯೇನೋ ಸಿಕ್ಕಿತು ಅವನು ಈಗ ಮರಗಳ ಮಬ್ಬುಗತ್ತಲೆಯಡಿಯಲ್ಲಿ ಗಾಡಿ ಹೊಡೆದುಕೊಂಡು ಹೋದನು; ಅವುಗಳ ಕೊಂಬೆಗಳೆಲ್ಲ ಚಳಿಗಾಲದ ದೆಸೆಯಿಂದ ಎಲೆಯುದುರಿ ತರಕಲಾಗಿದ್ದುವು; ಇಲ್ಲಿ ಗಾಳಿ ಭೋರ್ಗ್ಗರೆಯುವಂತಿಲ್ಲ; ದಾರಿ ಸಮನಾಗಿತ್ತು; ಕುದುರೆ ಮತ್ತೆ ಚೈತನ್ಯ ಪಡೆಯಿತು; ವ್ಲ್ಯಾಡಿಮಿರ್ ಮತ್ತೆ ಮನಸ್ಸಮಾಧಾನ ಹೊಂದಿದನು.

ಆದರೆ ಅವನು ಮುಂದಮುಂದಕ್ಕೆ ಹೊಡೆದುಕೊಂಡು ಹೋದನು; ಷಾಡ್ರಿನೋ ದೃಗ್ಗೋಚರವಾಗಲೇ ಇಲ್ಲ; ತೋಪಿಗೆ ಕೊನೆಯೇ ಇರಲಿಲ್ಲ. ಈಗ ವ್ಲ್ಯಾಡಿಮಿರ್ ತಾನು ಪರಿಚಯವಿಲ್ಲದ ಕಾಡೊಂದರಲ್ಲಿ ಸಿಕ್ಕಿಬಿದ್ದಿರುವೆನೆಂದು ಅರಿತು ಭಯಭ್ರಾಂತನಾದನು. ನಿರಾಶೆಗೆ ಒಳಗಾಗಿ, ಕುದುರೆಯನ್ನು ಹೊಡೆದನು; ಆ ಬಡಪ್ರಾಣಿ ಕುಕ್ಕೋಟಕ್ಕೆ ಪ್ರಾರಂಭಿಸಿ, ಬೇಗನೆ ಬಳಲಿ, ಹದಿನೈದು ನಿಮಿಷಗಳಾಗುವಷ್ಟರಲ್ಲಿ ಹಜ್ಜೆಯ ಮೇಲೆ ಹಜ್ಜೆಯಿಡತೊಡಗಿತು; ಖಿನ್ನವಾದ ವ್ಲ್ಯಾಡಿಮಿರ್‌ನ ಪ್ರಯತ್ನಗಳೆಲ್ಲ ನಿಷ್ಫಲವಾಗಿದ್ದುವು.

ಕಾಡು ಬರುಬರುತ್ತ ಮೊದಲಿನಷ್ಟು ದಟ್ಟವಾಗಿರಲಿಲ್ಲಿ; ಕಡೆಗೆ ವ್ಲ್ಯಾಡಿಮಿರ್ ಅದರಿಂದ ಹೊರಬಿದ್ದನು; ಆದರೂ ಷಾಡ್ರಿನೋ ಮಾತ್ರ ಇನ್ನೂ ಕಣ್ಣಿಗೆ ಬಿದ್ದಿರಲಿಲ್ಲ. ಬಹುಶಃ ಮಧ್ಯರಾತ್ರಿಯಾಗಿರಬಹುದೆಂದು ಅವನಿಗನ್ನಿಸಿತು. ಬಿರುಗಾಳಿ ನಿಂತಿತು, ಮುಗಿಲು ಚೆದರಿತು. ರಾತ್ರ ಬಹುಮಟ್ಟಿಗೆ ನಿಚ್ಚಳವಾಗಿತ್ತು. ಅನತಿ ದೂರದಲ್ಲಿ ಒಂದು ಸಣ್ಣ ಹಳ್ಳಿಯನ್ನು–ಎಂದರೆ ಕೇವಲ ಕೆಲವು ಹೊಲಮನೆಗಳ ಗುಂಪಲನ್ನು–ಅವನು ಕಾಣಬಹುದಾಗಿತ್ತು. ವ್ಲ್ಯಾಡಿಮಿರ್ ಆದರೆ ಹತ್ತಿರಕ್ಕೆ ಸಾಗಿಹೋದನು. ಸಿಕ್ಕಿದ ಮೊದಲ ಗುಡಿಸಿಲ ಮುಂದೆ ಅವನು ತನ್ನ ಜಾರುಬಂಡಿಯಿಂದ ಹೊರಕ್ಕೆ ಹಾರಿದನು; ಕಿಟಕಿಯ ಹತ್ತಿರಕ್ಕೆ ಓಡಿಹೋಗಿ, ತಟ್ಟಿದನು. ಕೆಲವು ನಿಮಿಷಗಳಲ್ಲಿ ಮರದ ಬಾಗಿಲು ತೆರೆಯಿತು; ಒಬ್ಬ ಮುದುಕನು ತನ್ನ ನರೆತ ಗಡ್ಡವನ್ನು ಹೊರಕ್ಕೆ ಚಾಚಿದನು.

"ನಿಮಗೇನು ಬೇಕು?"

"ಇಲ್ಲಿಂದ ಷಾಡ್ರಿನೋ ತುಂಬಾ ದೂರವೆ?"

"ಷಾಡ್ರಿನೋ ತುಂಬಾ ದೂರವೇ ಎಂದಿರಾ?"

"ಹೌದು, ಹೌದು, ಅದು ತುಂಬ ದೂರವೇ?"

"ದೂರವೇನಿಲ್ಲ; ಇಲ್ಲಿಂದ ಸುಮಾರು ಹತ್ತು ವರ್ಸ್ಟ್ ಇರಬಹುದು."

ಈ ಉತ್ತರ ಕೇಳಿ ವ್ಲ್ಯಾಡಿಮಿರ್ ತನ್ನ ಕೂದಲು ಕಿತ್ತುಕೊಂಡು, ತನ್ನ ಮರಣದಂಡನೆಯ ತೀರ್ಪನ್ನು ಆಗತಾನೆ ಕೇಳಿದವನಂತೆ, ಗೂಟಬಡಿದ ಹಾಗೆ ನಿಂತನು.

"ನೀವು ಎಲ್ಲಿಂದ ಬಂದಿರುವುದು?"–ಎಂದು ವೃದ್ಧನು ಪ್ರಶ್ನಿಸಿದನು. ಅವನ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು ಶಕ್ತಿ ವ್ಲ್ಯಾಡಿಮಿರ್‌ಗೆ ಇರಲಿಲ್ಲ. "ಷಾಡ್ರಿನೋವಿಗೆ ಹೋಗಲು ನನಗೆ ಒಂದು ಕುದುರೆ ಬೇಕಾಗಿತ್ತು, ಒದಗಿಸಿಕೊಡಬಲ್ಲೆಯಾ, ಅಜ್ಜಾ?" ಎಂದು ಅವನು ಕೇಳಿದನು. "ನಮ್ಮಲ್ಲಿ ಕುದುರೆಗಳೂ ಉಂಟೆಂದು ಭಾವಿಸಿದಿರೋ!" ಎಂದು ಆ ರೈತ ಉತ್ತರ ಕೊಟ್ಟನು. "ಒಳ್ಳೆಯದು ಹಾಗಿದ್ದರೆ, ದಾರಿ ತೋರಿಸಲು ಯಾರನ್ನಾದರೂ ಗೊತ್ತುಮಾಡಿಕೊಡಲಾರೆಯಾ? ಆತ ಕೇಳಿದಷ್ಟನ್ನು ಕೊಡುತ್ತೇನೆ" ಮುದುಕನು ಮರದ ಬಾಗಿಲನ್ನು ಸ್ವಲ್ಪ ಕೆಳಕ್ಕಿಳಿಸಿ, "ಒಂದು ನಿಮಿಷ ತಡೆಯಿರಿ. ನನ್ನ ಮಗನನ್ನು ಕಳಿಸಿಕೊಡುತ್ತೇನೆ. ಅವನು ನಿಮಗೆ ದಾರಿ ತೋರಿಸುತ್ತಾನೆ" ಎಂದನು. ವ್ಲ್ಯಾಡಿಮಿರ್ ಕಾದಿದ್ದ. ಇನ್ನೂ ಒಂದು ನಿಮಿಷವೂ ಆಗಿರಲಿಲ್ಲ. ಮತ್ತೆ ಕಿಟಕಿಟಯ ಬಳಿ ತಟ್ಟಿದ. ಬಾಗಿಲು ಮತ್ತೆ ತೆರೆಯಿತು, ಗಡ್ಡ ಪುನಃ ಕಾಣಿಸಿಕೊಂಡಿತು.

"ನಿಮಗೇನು ಬೇಕು?'

"ನಿನ್ನ ಮಗ ಎಲ್ಲಿ?'

"ಇನ್ನೇನು ಬರುತ್ತಾನೆ, ಬೂಡ್ಸು ಹಾಕಿಕೊಳ್ಳುತ್ತಿದ್ದಾನೆ. ಚಳಿಯಾದರೆ ಒಳಕ್ಕೆ ಬಂದು ಬೆಚ್ಚಗೆ ಮಾಡಿಕೊಳ್ಳಿ."

"ಬೇಡ, ವಂದನೆಗಳು–ನಿನ್ನ ಮಗನನ್ನು ತ್ವರೆಗೊಳಿಸಪ್ಪ."

ಬಾಗಿಲು ಕಿರ್ರೆಂದಿತು; ದೊಣ್ಣೆ ಹಿಡಿದ ಯುವಕನೊಬ್ಬ ಹೊರಕ್ಕೆ ಬಂದು, ಮುಂದುಗಡೆ ನಡೆದ. ಕೆಲವು ವೇಳೆ ರಸ್ತೆ ತೋರಿಸುತ್ತಿದ್ದ; ಅದು ಹಿಮರಾಶಿಯಿಂದ ಮುಚ್ಚಿಹೋಗಿದ್ದುದರಿಂದ, ಅದನ್ನು ಹುಡುಕಲು ಕೆಲವು ವೇಳೆ ನಿಲ್ಲುತ್ತಿದ್ದ. "ಹೊತ್ತು ಎಷ್ಟು?" ಎಂದು ವ್ಲ್ಯಾಡಿಮಿರ್ ಅವನನ್ನು ಕೇಳಿದನು. "ಇನ್ನೇನು ಬೆಳಕಾಗುತ್ತೆ" ಎಂದು ಆ ಕಿರಿಯ ಉತ್ತರ ಕೊಟ್ಟನು. ವ್ಲ್ಯಾಡಿಮಿರ್ ಇನ್ನೊಂದು

ಮಾತನ್ನೂ ಆಡಲಿಲ್ಲ.

ಕೋಳಿಗಳು ಕೂಗುತ್ತಿದ್ದುವು; ಅವರು ಷಾಡ್ರಿನೋ ತಲುಪುವ ಹೊತ್ತಿಗೆ ಆಗಲೆ ಬೆಳಗಾಗಿತ್ತು. ಚರ್ಚಿಗೆ ಬೀಗ ಹಾಕಿತ್ತು. ದಾರಿ ತೋರಿದ ಯುವಕನಿಗೆ ಹಣಕೊಟ್ಟು, ವ್ಲ್ಯಾಡಿಮಿರ್ ಪಾದ್ರಿಯ ಮನೆಗೆ ಹೋದನು. ಅಲ್ಲಿ ಅಂಗಳದಲ್ಲಿ 'ಟ್ರಾಯ್ಕ' (ಮೂರುಕುದುರೆ ಸಾರೋಟು) ಯಾವುದೂ ಇರಲಿಲ್ಲ. ಅಲ್ಲಿ ಅವನಿಗೆ ಕಾದಿದ್ದಾದರೂ ಎಂತಹ ಸಮಾಚಾರ!

ಇರಲಿ. ನಾವೀಗ ನೆನರಾಡೋವ್ಲೋವಿನ ದಣಿಗಳ ವಿಚಾರ ಅರಿಯೋಣ, ಅಲ್ಲಿ ಏನು ನಡೆಯುತ್ತಿದೆ ನೋಡೋಣ.

ಏನೂ ಇಲ್ಲ!

ಮುದುಕರೆಲ್ಲ ಎದ್ದಿದ್ದರು; ಗಾವ್ರಿಲ ಗಾವ್ರಿಲೋವಿಚ್ ಇರುಳು-ಕುಲಾವಿ ಮತ್ತು ಉಣ್ಣೆಯ ನಡುವಂಗಿ ಧರಿಸಿಕೊಂಡು, ಪ್ರಾಸ್ಕೋವ್ಯ ಪೆಟ್ರೋವ್ನ ಕವುದಿ ಬಟ್ಟೆಯ ಮೇಲಂಗಿ ಧರಿಸಿಕೊಂಡು ಹಜಾರಕ್ಕೆ ನಡೆದುಹೋದರು; ಗಾವ್ರಿಲ ಗಾವ್ರಿಲೋವಿಚ್ ಟೀ ಕುದಿಸುವ ಪಾತ್ರೆ (ಸ್ಯಾವೊವರ್)ತರಿಸಿಟ್ಟು, ಮಾರ್ಯಗಾವ್ರಿಲೋವ್ನ ಹೇಗಿದ್ದಾಳೆ, ರಾತ್ರಿ ಹೇಗೆ ನಿದ್ದೆ ಮಾಡಿದಳು ಎಂದು ಕೇಳಲು ಒಬ್ಬಳು ಹುಡುಗಿಯನ್ನು ಅವಳ ಬಳಿಗೆ ಕಳಿಸಿದನು. ಹೋಗಿದ್ದ ಹುಡುಗಿ ಹಿಂದಿರುಗಿ, ಚಿಕ್ಕ ಅಮ್ಮನವರು ಅಷ್ಟೇನೂ ಚೆನ್ನಾಗಿ ನಿದ್ದೆಮಾಡಲಿಲ್ಲವೆಂದೂ ಆದರೆ ಈಗ ಎಷ್ಟೋ ಮೇಲಾಗಿರುವರೆಂದೂ ಬೇಗನೆ ಹಜಾರಕ್ಕೆ ಬರಲಿರುವರೆಂದೂ ತಿಳಿಸಿದಳು. ಆಗ ಬಾಗಿಲು ತೆರೆಯಿತು, ಮಾರ್ಯಗಾವ್ರಿಲೊವ್ನ ಒಳಕ್ಕೆ ಬಂದು ತನ್ನ 'ಅಪ್ಪ'ನಿಗೂ 'ಅಮ್ಮ'ನಿಗೂ ವಂದನೆಮಾಡಿದಳು.

"ಈಗ ತಲೆ ಹೇಗಿದೆ, ಮಾಶಾ?" ಎಂದು ಕೇಳಿದನು ಗಾವ್ರಿಲ ಗಾವ್ರಿಲೋವಿಚ್.

"ಈಗ ಎಷ್ಟೋ ಮೇಲು, ಅಪ್ಪ" ಎಂದು ಮಾಶಾ ಉತ್ತರಕೊಟ್ಟಳು.

"ಎಲ್ಲೋ ಆ ಅಗ್ಗಿಷ್ಟಿಕೆಯಿಂದ ತಲೆನೋವಾಗಿರಬೇಕು, ಮಾಶಾ" ಎಂದಳು ಪ್ರಾಸ್ಕೋವ್ಯ ಪೆಟ್ರೋವ್ನ.

"ಇರಬಹುದು, ಅಮ್ಮಾ" ಎಂದು ಉತ್ತರಿಸಿದಳು ಮಾಶಾ.

ಯಾವ ವಿಶೇಷ ಘಟನೆಯೂ ಇಲ್ಲದೆ ದಿನ ಕಳೆಯಿತು; ಆದರೆ ಅಂದಿನಿರುಳು ಮಾಶಾ ಅಸ್ವಸ್ಥಳಾದಳು. ಒಬ್ಬ ವೈದ್ಯನಿಗಾಗಿ ನೆರೆಯೂರಿಗೆ ಹೇಳಿಕಳಿಸಲಾಯಿತು. ಆತ ಮಾರನೆಯ ಸಂಜೆ ಬಂದು, ರೋಗಿಗೆ ಸನ್ನಿ ಹಿಡಿದಿದೆ ಎಂದು ಅರಿತನು.

ಉಗ್ರಜ್ವರಕ್ಕೆ ಮೊದಲಿಟ್ಟು, ಆ ನಿರ್ಭಾಗ್ಯೆಯಾದ ಹುಡುಗಿ ಜೀವ ಸಾವುಗಳ ನಡುವೆ ಹೋರಾಡುತ್ತ ಎರಡುವಾರ ಕಾಲ ಹಾಸಿಗೆ ಹತ್ತಿ ಮಲಗಿದ್ದಳು.

ಮನೆಬಿಟ್ಟ ಓಡಿಹೋಗಬೇಕೆಂದಿದ್ದ ಉದ್ದೇಶ ಮನೆಯಲ್ಲಿ ಯಾರಿಗೂ ತಿಳಿಯದು. ಹಿಂದಿನ ಸಂಜೆ ಬರೆದಿದ್ದ ಕಾಗದಗಳನ್ನು ಸುಟ್ಟುಬಿಟ್ಟಿತ್ತು. ತನ್ನ ಒಡೆಯನ ಉಗ್ರ ಕೋಪಕ್ಕೆ ಅಂಜಿ, ಸೇವಕಿ ಯಾರಿಗೂ ಒಂದು ಮಾತನ್ನೂ ಉಸುರಿರಲಿಲ್ಲ. ಪಾದ್ರಿ, ನಿವೃತ್ತ ಅಶ್ವ ಸೈನ್ಯಾಧಿಕಾರಿ, 'ಗಿರಿಜಾ' ಮೀಸೆಯ ಮೋಜಣಿದಾರ, ತರುಣ–ಇವರೆಲ್ಲ ಸ್ವಂತ ಕಾರಣಗಳಿಗಾಗಿ ಬಾಯಿ ಮುಚ್ಚಿಕೊಂಡಿದ್ದರು. ಕುಡಿದು ಅಮಲೇರಿದ್ದಾಗ ಕೂಡ ಬಂಡಿಹೊಡೆಯುವ ಟೆರೆಷ್ಕ ಅನಾವಶ್ಯಕವಾದ ಒಂದು ಮಾತನ್ನೂ ತುಟಿಯಿಂದ ಹೊರ ಹಾಕಲಿಲ್ಲ. ಹೀಗೆ ಆರು ಮಂದಿಗಿಂತ ಹೆಚ್ಚು ಮಂದಿ ಸಂಚುಗಾರರು ಹಂಚಿಕೊಂಡಿದ್ದ ರಹಸ್ಯ ಭದ್ರವಾಗಿತ್ತು. ಆದರೆ, ತನ್ನ ಎಡೆಬಿಡದ ಸನ್ನಿಯಲ್ಲಿ ಮಾರ್ಯ ಗಾವ್ರಿಲೊವ್ನಳೇ ತನ್ನ ಗುಟ್ಟನ್ನು ಹೊರಕ್ಕೆ ಬಿಟ್ಟಿಬಿಟ್ಟಳು. ಆದರೆ ಅವಳ ಅಸ್ಪಷ್ಟವಾದ ನುಡಿಗಳಿಂದ ಅವಳ ಹಾಸಿಗೆಯ ಬಳಿಯೇ ಕಾವಲಿದ್ದ ಅವಳ ತಾಯಿಗೆ ಹೆಚ್ಚೇನೂ ತಿಳಿದು ಬರಲಿಲ್ಲ; ತನ್ನ ಮಗಳಿಗೆ ವ್ಲ್ಯಾಡಿಮಿರ್ ನಿಕೊಲಾಯಿವಿಚ್‌ನಲ್ಲಿ ಹುಚ್ಚು ಮೋಹ ಉಂಟಾಗಿದೆಯೆಂದೂ, ಈ ಪ್ರಣಯವೇ ಬಹುಶಃ ಅವಳ ಅಸ್ವಸ್ಥತೆಗೆ ಕಾರಣವೆಂದೂ ಗ್ರಹಿಸಿದಳು. ಅವಳು ತನ್ನ ಪತಿಯೊಂದಿಗೂ ನೆರೆಹೊರೆಯ ಕೆಲಮಂದಿಯೊಂದಿಗೂ ಆಲೋಚನೆ ಮಾಡಿದಳು; ಮಾರ್ಯ ಗಾವ್ರಿಲೋವ್ನಳ ಗತಿ ಹೀಗಾಗಬೇಕೆಂದು ಅವಳ ಹಣೆಯಲ್ಲಿ ಬರೆದಿತ್ತು, ವಿಧಿಯಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಬಡತನ ಘೋರವಾದ ಅಪರಾಧವೇನಲ್ಲ, ಬಾಳಬೇಕಾದದ್ದು ಮನುಷ್ಯಪ್ರಾಣಿಯೊಂದಿಗೆಯೆ ಹೊರತು ಹಣದ ಥೈಲಿಗಳೊಂದಿಗೆ ಅಲ್ಲ–ಎಂದು ಮುಂತಾಗಿ ಸಕಲರೂ ಸರ್ವಾನುಮತದಿಂದ ಒಮ್ಮತಕ್ಕೆ ಬಂದರು. ನಮ್ಮ ಕಾರ್ಯಗಳಿಗೆ ಹೆಚ್ಚಿನ ಸಮರ್ಥನೆ ದೊರೆಯದೆ ಹೋದಾಗ ನೀತಿವಾಕ್ಯಗಳು ಅತ್ಯಂತ ಸಹಾಯಕ.

ಈ ಮಧ್ಯೆ, ಹುಡುಗಿ ಕ್ರಮಕ್ರಮವಾಗಿ ಗುಣಹೊಂದಿದಳು. ವ್ಲಾಡಿಮಿರ್ ಬಹಳ ಕಾಲದವರೆಗೆ ಗಾವ್ರಿಲ ಗಾವ್ರಿಲೋವಿಚ್‌ನ ಮನೆಯಕಡೆ ಮುಖ ಹಾಕಿರಲಿಲ್ಲ. ಅವನಿಗೆ ಅಲ್ಲಿ ಸರ್ವಸಾಮಾನ್ಯವಾಗಿ ದೊರಕುತ್ತಿದ್ದ ಪುರಸ್ಕಾರ ಅವನನ್ನು ಅಂಜಿಸಿ ಓಡಿಸಿ ಬಿಟ್ಟಿತ್ತು. ಈಗ ಅವನಿಗೆ ಹೇಳಿ ಕಳಿಸಿ, ಅವನಿಗೆ ಕಾದಿದ್ದ ಅನಿರೀಕ್ಷಿತ ಭಾಗ್ಯದ ವಿಚಾರವನ್ನು–ಎಂದರೆ ಅಷ್ಟು ಮದುವೆಗೆ ಒಪ್ಪಿಗೆಯನ್ನು– ತಿಳಿಸಲಾಯಿತು. ಆದರೆ, ನೆನರಾಡೋವೋವಿನ ಒಡೆಯರ ಆಹ್ವಾನಕ್ಕೆ ಉತ್ತರವಾಗಿ

ಆ ತರುಣನಿಂದ ಅರೆಮರುಳಾದ ಪತ್ರ ಬಂದಾಗ ಅವರಿಗೆ ಆದ ಬೆರಗು ಅಷ್ಟಿಷ್ಟಲ್ಲ. ತಾನು ಅವರ ಮನೆಯ ಹೊಸಿಲನ್ನು ಮತ್ತೆ ಮೆಟ್ಟುವುದಿಲ್ಲವೆಂದು ನಂಬುಗೆಗೊಟ್ಟು, ತನ್ನಂಥ ನಿರ್ಭಾಗ್ಯ ವ್ಯಕ್ತಿಯನ್ನು ಮರೆತುಬಿಡಬೇಕೆಂದು ಪ್ರಾರ್ಥಿಸಿ, ಮರಣವೊಂದೇ ತನಗೆ ಉಳಿದಿರುವ ಕಡೆಯಾಸೆಯೆಂದು ತಿಳಿಸಿ ಅವನು ಬರೆದಿದ್ದನು. ಕೆಲವು ದಿನಗಳ ಬಳಿಕ, ಅವನು ಸೈನ್ಯಕ್ಕೆ ಹಿಂದಿರುಗಿದನೆಂದು ವರ್ತಮಾನ ಕೇಳಿದರು. ಇದು ನಡೆದದ್ದು ೧೮೧೨ರಲ್ಲಿ.

ಖಾಯಿಲೆಯಿಂದ ಚೇತರಿಸಿಕೊಳ್ಳುತ್ತಿದ್ದ ಮಾಶಾಗೆ ಈ ವಿಚಾರ ತಿಳಿಸಲು ಬಹಳ ಕಾಲದವರೆಗೆ ಯಾರೂ ಧೈರ್ಯಮಾಡಲಿಲ್ಲ. ಅವಳೂ ಸಹ ವ್ಲಾಡಿಮಿರ್‌ನ ವಿಷಯ ಪ್ರಸ್ತಾಪಮಾಡಲಿಲ್ಲ. ಕೆಲವು ತಿಂಗಳ ತರುವಾಯ, ಬೋರೋಡಿನೋ ಕದನವಾದಮೇಲೆ, ಧೈರ್ಯಕ್ಕಾಗಿ ಬಹುಮಾನಿತರಾದವರಲ್ಲಿ ಅವನ ಹೆಸರು ಇತ್ತೆಂದೂ ಆತ ಅಪಾಯಕರವಾಗುವಷ್ಟು ಗಾಯಗೊಂಡಿದ್ದನೆಂದೂ ಕೇಳಿ ತಿಳಿದು ಅವಳು ಪ್ರಜ್ಞೆತಪ್ಪಿದಳು; ಮತ್ತೆಲ್ಲಿ ಜ್ವರ ಪ್ರಾರಂಭವಾಗುವುದೋ ಎಂಬ ಶಂಕೆಯುಂಟಾಯಿತು. ದೇವರ ದಯದಿಂದ ಮೂರ್ಛೆ ಕೆಟ್ಟದ್ದಾಗಿ ಪರಿಣಮಿಸಲಿಲ್ಲ.

ಬೇಗನೆ ಮತ್ತೊಂದು ದುಃಖ ಅವಳಿಗೆ ಸಮನಿಸಿತು–ಅವಳ ತಂದೆ ಇಹಲೋಕವನ್ನು ತ್ಯಜಿಸಿದನು. ಇದರಿಂದ ಅವನ ಆಸ್ತಿಯೆಲ್ಲಕ್ಕೂ ಅವಳೇ ಉತ್ತರಾಧಿಕಾರಿಣಿಯಾದಳು. ಆದರೆ ಆ ಆಸ್ತಿಯ ಪ್ರಾಪ್ತಿಯಿಂದ ಅವಳಿಗೇನೂ ಸಮಾಧಾನವಾಗಲಿಲ್ಲ; ನಿರ್ಭಾಗ್ಯಳಾದ ಪ್ರಾಸ್ಕೊವ್ಯ ಪೆಟ್ರೊವ್ನಳ ದುಃಖದಲ್ಲಿ ಅವಳೂ ಪಾಲುಗಾರಳಾದಳು. ದುಃಖದ ನೆನಪು ಕೊಡುವ ನೆನರಾಡೋವೋವನ್ನು ಇಬ್ಬರೂ ತ್ಯಜಿಸಿ, (ಎಕ್ಸ್)–ಹಳ್ಳಿಯ ತಮ್ಮ ಜಮೀನಿನಲ್ಲಿ ವಾಸಿಸಲು ತೆರಳಿದರು.

ಇಲ್ಲಿಯೂ ಕೂಡ ಈ ಮೋಹಕ ಹಾಗೂ ಧನಿಕ ಉತ್ತರಾಧಿಕಾರಿಣಿಯ ಸುತ್ತಲೂ ಅನೇಕಮಂದಿ ವಿವಾಹಾಕಾಂಕ್ಷಿಗಳು ಮುತ್ತಿಮುಸುರುತ್ತಿದ್ದರು. ಒಬ್ಬ ಬಾಳ ಸಂಗಾತಿಯನ್ನು ಆಯ್ದುಕೊಳ್ಳುವಂತೆ ಅವಳ ತಾಯಿಯೂ ಕೆಲವುವೇಳೆ ಅವಳನ್ನು ಒತ್ತಾಯಪಡಿಸಲು ಪ್ರಯತ್ನಿಸುತ್ತಿದ್ದಳು; ಆದರೆ ಮಾರ್ಯ ಗಾವ್ರಿಲೊವ್ನ ಮಾತ್ರ ತಲೆಯಲ್ಲಾಡಿಸಿ, ಚಿಂತಾಕ್ರಾಂತಳಾಗುತ್ತಿದ್ದಳು. ವ್ಲ್ಯಾಡಿಮಿರ್ ಇನ್ನು ಜೀವಂತರ ಲೆಕ್ಕಕ್ಕೆ ಸೇರಿದವನಾಗಿರಲಿಲ್ಲ; ನಗರಕ್ಕೆ ಫ್ರೆಂಚರ ಪ್ರವೇಶವಾಗುವ ಮುನ್ನ ಅವನು ಮಾಸ್ಕೋದಲ್ಲಿ ಮಡಿದಿದ್ದನು. ಮಾಶಾ ಅವನ ನೆನಪನ್ನು ಬಹಳ ಪವಿತ್ರವಾಗಿಟ್ಟುಕೊಂಡಿದ್ದಳು; ಏನಾದರೂ ಆಗಲಿ, ಅವನ ನೆನಪು ಕೊಡುವ ಸರ್ವಸ್ವವನ್ನೂ–ಅವನು ಒಮ್ಮೆ ಓದಿದ್ದ ಪುಸ್ತಕಗಳು, ಅವನು ಬರೆದ ರೇಖಾ ಚಿತ್ರಗಳು, ತನಗಾಗಿ ಅವನು ಪ್ರತಿಮಾಡಿದ್ದ ಸಂಗೀತ ಕೃತಿಗಳು ಮತ್ತು

ಪದ್ಯಗಳು–ಪ್ರತಿಯೊಂದನ್ನೂ ಅವಳು ಕಾದಿಟ್ಟಳು. ಅವಳ ಈ ನಿಶ್ಚಲಪ್ರೇಮವನ್ನು ಕಂಡು ನೆರೆಹೊರೆಯವರು ಬೆರಗಾದರು; ಈ ಸತೀಮಣಿಯ ಶೋಚನೀಯ ಪ್ರೇಮನಿಷ್ಠೆಯನ್ನು ಕಡೆಗೊಮ್ಮೆ ಗೆಲ್ಲುವ ಭಾಗ್ಯಶಾಲಿಯಾದ ಸಾಹಸಪುರುಷ ಯಾವನೋ ಎಂದು ಅವರೆಲ್ಲ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಈ ನಡುವೆ ಯುದ್ಧವು ಜಯಪ್ರದವಾಗಿ ಕೊನೆಗೊಂಡಿತು; ಪರದೇಶೀಯ ಭಾಗಗಳಿಂದ ನಮ್ಮ ಸೈನ್ಯದಳಗಳು ಹಿಂದಿರುಗಿದವು. ಅವುಗಳನ್ನು ಎದುರುಗೊಳ್ಳಲು ಜನ ಮನೆಯುಳಿದು ಧಾವಿಸಿತು. ಶತ್ರುಗಳನ್ನು ಗೆದ್ದ ಸಂಕೇತವಾಗಿ ಅವರ ಕಡೆಯ ಹಾಡುಗಳನ್ನು 'ಬ್ಯಾಂಡು' (ಸೈನ್ಯದ ವಾದ್ಯವೃಂದಗಳು) ಬಾಜಿಸಿದುವು. ಯುದ್ಧಕಾರ್ಯಾಚರಣೆಗೆ ಕೇವಲ ಬಾಲಕರಾಗಿ ಸೇರಿದ ಅಧಿಕಾರಿಗಳು ಶಿಲುಬೆಯಾಕಾರದ ಪ್ರಶಸ್ತಿಪದಕಗಳನ್ನು ಧರಿಸಿ, ಯುದ್ಧರಂಗದ ವಾತಾವರಣದಿಂದ ಪಕ್ವವಾಗಿ ಹಿಂದಿರುಗಿದರು. ತಮ್ಮ ಮಾತುಕತೆಯಲ್ಲಿ ಫ್ರೆಂಚ್ ಮತ್ತು ಜರ್ಮನ್ ಪದಗಳನ್ನು ಬೆರಸುತ್ತ ಒಬ್ಬರೊಡನೊಬ್ಬರು ವಿನೋದವಾಗಿ ಹರಟುತ್ತಿದ್ದರು. ಮರೆಯಲಾಗದ ದಿನಗಳು! ಜನ್ಮಭೂಮಿ ಎಂದೊಡನೆ ರಷ್ಯನ್ ಹೃದಯ ಎಷ್ಟು ತೀವ್ರವಾಗಿ ಸ್ಪಂದಿಸುತ್ತಿತ್ತು! ಪುನಸ್ಸಮಾಗಮದ ಆನಂದಬಾಷ್ಪ ಅದೆಷ್ಟು ಮಧುರ! ನಾವೆಲ್ಲ ಅದು ಹೇಗೆ ಒಮ್ಮತದಿಂದ ರಾಷ್ಟ್ರಾಭಿಮಾನವನ್ನೂ ಜಾರ್ ಚಕ್ರವರ್ತಿಯ ಮೇಲಿನ ಪ್ರೇಮವನ್ನೂ ಒಂದುಗೂಡಿಸಿಕೊಂಡಿದ್ದೆವು! ಆತನಿಗಾದರೂ ಅದೆಂಥ ಕಾಲ!

ಸ್ತ್ರೀಯರು,–ರಷ್ಯಾ ದೇಶದ ಸ್ತ್ರೀಯರು,–ಅಂದಿನ ದಿನಗಳಲ್ಲಿ ಅನನುಕರಣೀಯರು. ಅವರಿಗೆ ಅಭ್ಯಾಸವಾದ ನಿರುತ್ಸಾಹ ಅವರನ್ನು ಬಿಟ್ಟು ತೊಲಗಿತು. ಅವರ ಉತ್ಸಾಹ ನಿಜವಾಗಿ ಉನ್ಮಾದಕರವಾಗಿತ್ತು. ಯುದ್ಧ ವಿಜಯಿಗಳನ್ನು ಎದುರುಗೊಂಡಾಗ,

ತಮ್ಮ ಟೋಪಿಗಳ ಆಗಸಕೆಸೆದು
'ಜೈಜೈ' ಎಂದರು ಹೆಂಗಸರು.'

ತನ್ನ ಅತ್ಯುತ್ತಮವಾದ, ಅತ್ಯಮೂಲ್ಯವಾದ ಬಹುಮಾನಕ್ಕೆ ಯಾವಳಾದರೂ ಹೆಂಗಸೊಬ್ಬಳಿಗೆ ತಾನು ಋಣಿ ಎಂದು ಆಗಿನ ಕಾಲದಲ್ಲಿ ಹೇಳಿಕೊಳ್ಳದಿದ್ದ ಸೈನ್ಯಾಧಿಕಾರಿ ಯಾರು?

---

* ಪುಷ್ಕಿನ್ನನ ಸಮಕಾಲೀನ ನಾಟಕಕಾರ ಅಲೆಗ್ಸಾಂಡರ್ ಗ್ರಿಬೊಯೆಡಾಫ್ ಎಂಬಾತನ ಪ್ರಸಿದ್ಧ ನಾಯಕದಲ್ಲಿ ಬರುವ ಸಾಲುಗಳು.

ಈ ಉಜ್ಜ್ವಲಕಾಲದಲ್ಲಿ ಮ್ವಾರ್ಯ ಗಾವ್ರಿಲೊವ್ನ ತನ್ನ ತಾಯಿಯೊಂದಿಗೆ ಎಕ್ಸ್(ನ)–ಹಳ್ಳಿಯ ಜಮೀನಿನಲ್ಲಿ ವಾಸಿಸುತ್ತಿದ್ದಳು; ರಾಜ್ಯದ ಎರಡು ಮುಖ್ಯ ನಗರಿಗಳಲ್ಲಿ ಸೈನಿಕರ ಪುನರಾಗಮನದ ಉತ್ಸವ ಸಮಾರಂಭಗಳು ಹೇಗೆ ನಡೆದುವೆಂದು ಅವಳು ಕಾಣಳು. ಆದರೆ ಸರ್ವಸಾಮಾನ್ಯ ಉತ್ಸಾಹ ಒಳನಾಡಿನ ಹಳ್ಳಿ ಹಳ್ಳಿಗಳಲ್ಲಿ ಇನ್ನೂ ಹೆಚ್ಚಾಗಿದ್ದಿತು. ಅಂಥ ಸ್ಥಳಗಳಲ್ಲಿ ಒಬ್ಬ ಸೈನಿಕ ಕಾಣಿಸಿಕೊಂಡನೆಂದರೆ ಗೆಲವೋ ಗೆಲವು; ನಿಲುವಂಗಿ ತೊಟ್ಟು ನಲಿಯುವ ಪ್ರಣಯ ವಿಲಾಸಿಯನ್ನು ಲಕ್ಷಿಸುವವರೇ ಇರಲಿಲ್ಲ.

ಮಾರ್ಯ ಗಾವ್ರಿಲೊವ್ನ ಉದಾಸೀನತೆಯನ್ನು ತೋರುತ್ತಿದ್ದರು ಕೂಡ ವಿವಾಹಾಕಾಂಕ್ಷಿಗಳು ಅವಳನ್ನು ಸುತ್ತುಗಟ್ಟಿದ್ದರೆಂದು ಆಗಲೇ ಹೇಳಿದೆ. ಆದರೆ ರಾವುತದಳಕ್ಕೆ ಸೇರಿದ ಗಾಯಗೊಂಡ 'ಕರ್ನಲ್' (ದಳಪತಿ) ಒಬ್ಬ ಅವಳ 'ದುರ್ಗ'ವನ್ನು ಪ್ರವೇಶಿಸಿದಾಗ ಅವರೆಲ್ಲ ಪಲಾಯನಮಾಡಬೇಕಾಯಿತು; ಅವನ ಹೆಸರು ಬರ್ಮಿನ್; ಸೆಯ್‌ಂಟ್ ಜಾರ್ಜನ ಪ್ರಶಸ್ತಿಯ 'ಕ್ರಾಸ್' ಪದಕ ಅವನ ಗುಂಡಿಕಾಜದ ಬಳಿ ಶೋಭಿಸುತ್ತಿತ್ತು; ಆ ಸ್ಥಳದ ಕುಲೀನ ತರುಣಿಯರು ಹೇಳುತ್ತಿದ್ದರಂತೆ, ಅವನ ಮುಖದಲ್ಲಿ 'ಸ್ವಾರಸ್ಯವಾದ ವಿವರ್ಣಕಾಂತಿ' ಇದ್ದಿತು. ಅವನು ರಜಾ ಪಡೆದು ತನ್ನ ಜಮೀನಿನಲ್ಲಿ ಬಂದು ನೆಲಸಿದ್ದನು; ಅದು ಮಾರ್ಯ ಗಾವ್ರಿಲೊವ್ನಳ ಸ್ವತ್ತಿಗೆ ಹತ್ತಿರದಲ್ಲೇ ಇದ್ದಿತು. ಅವನ ಬಗೆಗೆ ಮಾರ್ಯ ಗಾವ್ರಿಲೊವ್ನ ಹೆಚ್ಚಿನ ಪಕ್ಷಪಾತ ತೋರಿದ್ದಳು. ಅವನ ಸಮ್ಮುಖದಲ್ಲಿ ಅವಳ ಎಂದಿನ ವಿಷಣ್ಣತೆ ಒಂದು ವಿಧವಾದ ಗೆಲವಿಗೆ ಎಡೆಗೊಡುತ್ತಿತ್ತು. ಅವನೊಂದಿಗೆ ಅವಳ ನಡೆವಳಿಯಲ್ಲಿ ಬೆಡಗುಬಿನ್ನಾಣಗಳ ಸುಳಿವೇನಿರಲಿಲ್ಲ.

ಬರ್ಮಿನ್ ನಿಶ್ಚಯವಾಗಿ ಯಾರನ್ನಾದರೂ ಮನವೊಲಿಸಿಕೊಳ್ಳುವಂತಹ ತರುಣ ವ್ಯಕ್ತಿ. ಹೆಂಗಸರು ಮೆಚ್ಚಿಕೊಳ್ಳುವ ಬಗೆಯ ಮನಸ್ಸೆಂದರೆ ಅವನದ್ದು–ಮರ್ಯಾದೆಯರಿತದ್ದು. ಪರರ ವಿಚಾರಕ್ಕೆ ಗಮನ ಕೊಡತಕ್ಕದ್ದು, ಲವಲೇಶವಾದರೂ ಬೂಟಾಟಿಕೆಯಿಲ್ಲದ್ದು, ಸರಳ ಪರಿಹಾಸದ ಮೆರುಗುಳ್ಳದ್ದು. ಮಾರ್ಯ ಗಾವ್ರಿಲೊವ್ನಳ ಸಮ್ಮುಖದಲ್ಲಿ ಆತ ಸರಳತೆಯಿಂದ, ಸ್ವಾತಂತ್ರ್ಯದಿಂದ, ನಡೆದುಕೊಳ್ಳುತ್ತಿದ್ದ. ಅವಳು ಏನೇ ಹೇಳಲಿ ಮಾಡಲಿ, ಅವನ ಮನಸ್ಸು ಹಾಗೂ ಕಣ್ಣು ಅವಳನ್ನು ತಪ್ಪದೆ ಅನುಸರಿಸುತ್ತಿದ್ದವು. ಅವನು ಬಹಳ ಸೌಮ್ಯವಾಗಿ, ವಿವೇಚನಾಪರನಾಗಿ, ಕಾಣುತ್ತಿದ್ದನು! ಆದರೆ ಆತ ಹಿಂದೊಮ್ಮೆ ದುರ್ವ್ಯಸನಿಯಾಗಿದ್ದನೆಂಬ ವದಂತಿಯಿತ್ತು; ಆದರೆ ಮಾರ್ಯ ಗಾವ್ರಿಲೊವ್ನಳ ದೃಷ್ಟಿಯಲ್ಲಿ ಈ ಕಾರಣದಿಂದ ಅವನಿಗೇನೂ ಕೆಡುಕಾಗಲಿಲ್ಲ; ಧೈರ್ಯೋತ್ಸಾಹಗಳನ್ನು ಸೂಚಿಸುವ ಕುಚೇಷ್ಟೆಗಳನ್ನು (ಬಹುಮಂದಿ

ತರುಣಿಯರಂತೆ) ಅವಳೂ ಸಂತೋಷದಿಂದ ಕ್ಷಮಿಸತಕ್ಕವಳಾಗಿದ್ದಳು.

ಆದರೆ, ಆ ತರುಣ ರಾವುತ ಸಿಪಾಯಿಯ ಎಲ್ಲ ಗುಣಗಳಿಗಿಂತ ಹೆಚ್ಚಾಗಿ–ಅವನ ಮೃದು ವರ್ತನೆ, ಅವನ ಸರಸ ಸಂಭಾಷಣೆ, ಅವನ 'ಸ್ವಾರಸ್ಯವಾದ ವಿವರ್ಣಕಾಂತಿ', ಗಾಯದ ಬಟ್ಟೆಕಟ್ಟಿದ ಅವನ ತೋಳು–ಇವಲ್ಲೆಕ್ಕಿಂತ ಹೆಚ್ಚಾಗಿ ಅವನ ಬಿಗುಮಾನ ಅವಳ ಕುತೂಹಲವನ್ನು ಕೆರಳಿಸಿತು, ಕಲ್ಪನೆಯನ್ನು ಕುದುರಿಸಿತು. ತಾನು ಅವನ ಮೇಲೆ ದೊಡ್ಡ ಪ್ರಭಾವ ಮುದ್ರೆ ಒತ್ತಿರುವೆನೆಂದು ಅವಳು ಅರಿಯದೆ ಸಾಧ್ಯವೇ ಇರಲಿಲ್ಲ. ಬುದ್ಧಿಶಕ್ತಿ ಮತ್ತು ಅನುಭವಗಳುಳ್ಳ ಅವನೂ ಕೂಡ ಅವಳು ತನ್ನನ್ನು ಉಪೇಕ್ಷೆಮಾಡುತ್ತಿಲ್ಲವೆಂದು ನಿಸ್ಸಂದೇಹವಾಗಿ ಗ್ರಹಿಸಿದ್ದನು. ಆದರೂ, ಅದೇಕೆ ಇನ್ನೂ ಅವನು ತನ್ನ ಅಡಿಗಳ ಬಲಿ ಮಂಡಿಯೂರಿ ಕುಳಿತಿರಲಿಲ್ಲ, ತನ್ನ ಪ್ರೇಮವನ್ನು ಸಾರಿ ಹೇಳಿರಲಿಲ್ಲ? ಅವನನ್ನು ತಡೆಯುತ್ತಿರುವುದಾದರೂ ಏನು? ನಿಜವಾದ ಪ್ರೇಮಭಾವದಿಂದ ಬೇರ್ಪಡಿಸಲಾಗದ ಆತ್ಮವಿಶ್ವಾಸಲೋಪವೆ? ಗರ್ವವೆ? ಅನುಭವವುಳ್ಳ ಪ್ರಣಯವಿಲಾಸಿಯ ಚತುರತೆಯೆ? ಅವಳ ಭಾಗಕ್ಕೆ ಅವನು ಬಿಡಿಸಲಾರದ ಒಗಟೆಯಾಗಿದ್ದನು. ಬಹಳ ವಿಚಾರ ಮಾಡಿದಮೇಲೆ, ಆತ್ಮವಿಶ್ವಾಸವಿಲ್ಲದಿರುವುದೇ ಅವನ ಬಿಗುವಿನ ನಡೆತೆಗೆ ಮುಖ್ಯ ಕಾರಣವೆಂದು ನಿಶ್ಚಯಿಸಿದಳು; ಇನ್ನೂ ಹೆಚ್ಚು ಪ್ರಕಟವಾದ ಆದರೋಪಚಾರಗಳಿಂದ ಅವನಿಗೆ ಒತ್ತಾಸೆಕೊಡುವ ಕಾರ್ಯಭಾರವನ್ನು ತಾನೇ ವಹಿಸಿಕೊಂಡಳು; ಮತ್ತು ಸಮಯ ಸಂದರ್ಭ ಒದಗಿದಾಗ ಅವನ ಮೇಲೆ ಕರುಣೆಯನ್ನೂ ತೋರತೊಡಗಿದಳು. ಬಹುಮಟ್ಟಿಗೆ ಅನಿರೀಕ್ಷಿತವೆನಿಸುವ ಒಂದು ಸನ್ನಿವೇಶವನ್ನು ಕಲ್ಪಿಸಿ, ಅವನು ತನ್ನ ಪ್ರೇಮವನ್ನು ಪ್ರಕಾಶಗೊಳಿಸುವ ಗಳಿಗೆಯನ್ನು ಕಾತರಳಾಗಿ ಕಾಯತೊಡಗಿದಳು. ಯಾವ ಬಗೆಯ ರಹಸ್ಯವೇ ಆದರೂ ಅದು ಹೆಣ್ಣಿನ ಹೃದಯವನ್ನು ರೊಚ್ಚಿಗೆಬ್ಬಿಸುತ್ತದೆ. ಅವಳ ಈ ಯುದ್ಧತಂತ್ರಗಳು ಫಲಕಾರಿಯಾಗಿ ಪರಿಣಮಿಸಿದುವು. ಇನ್ನೇನಿಲ್ಲದಿದ್ದರೂ ಕಡೆಯಪಕ್ಷ ಅವನು ಧ್ಯಾನಮಗ್ನನಾಗಿ, ಅವನ ಕಪ್ಪು ಕಣ್ಣುಗಳು ಮಾರ್ಯ ಗಾವ್ರಿಲೊವ್ನಳ ಮುಖದ ಮೇಲೆ ಉತ್ಸಾಹದಿಂದ ನೆಲಸುವಮಟ್ಟಿಗಾಯಿತು; ಆ ನಿರ್ಣಾಯಕ ಕ್ಷಣ ಸನ್ನಿಹಿತವೆಂಬಂತೆ ತೋರಿತು. ಮದುವೆ ಗೊತ್ತಾದ ಹಾಗೆಯೆ ಎಂದು ನೆರೆಹೊರೆಯವರು ಆಗಲೇ ಮಾತಾಡಿಕೊಳ್ಳತೊಡಗಿದರು. ಸಾಧ್ವಿಯಾದ ಪ್ರಾಸ್ಕೊವ್ಯ ಪೆಟ್ರೊವ್ನ ತನ್ನ ಮಗಳು ಕಡೆಗೊಮ್ಮೆ ತನಗೆ ತಕ್ಕ ವರನನ್ನು ಹುಡುಕಿಕೊಂಡಳೆಂದು ಹಿಗ್ಗಿದಳು.

ಒಂದು ದಿನ ಆ ವೃದ್ಧೆ ತನ್ನ ಭೇಟಿಯ ಕೊನೆಯಲ್ಲಿ 'ಪೇಷೆನ್ಸ್' ಆಟಕ್ಕಾಗಿ

ಇಸ್ಪೀಟೆಲೆಗಳನ್ನು ಹರಡಿಕೊಂಡು ಕುಳಿತಿದ್ದಾಗ, ಬರ್ಮಿನ್ ಪ್ರವೇಶಿಸಿ ಮಾರ್ಯ ಗಾವ್ರಿಲೋವ್ನ ಎಲ್ಲಿ? ಎಂದು ಕೇಳಿದನು. "ಅವಳು ಉದ್ಯಾನದಲ್ಲಿದ್ದಾಳೆ. ಅವಳಿರುವಲ್ಲಿಗೆ ಹೋಗಪ್ಪಾ, ನಾನು ಇಲ್ಲೇ ಇರುತ್ತೇನೆ. ನಿಮ್ಮಿಬ್ಬರಿಗಾಗಿ ಕಾಯುತ್ತಿರುತ್ತೇನೆ" ಎಂದಳು ವೃದ್ಧೆ. ಬರ್ಮಿನ್ ಹೊರಕ್ಕೆ ಹೊರಟ, ವೃದ್ಧ ಶಿಲುಬೆಯ ಕರನ್ಯಾಸಮಾಡುತ್ತ, "ಬಹುಶಃ ಇವೊತ್ತು ಎಲ್ಲ ನಿಶ್ಚಯವಾಗುತ್ತೆ" ಎಂದು ಆಲೋಚಿಸಿದಳು.

ಬರ್ಮಿನ್ ಮಾರ್ಯ ಗಾವ್ರಿಲೊವ್ನಳನ್ನು ಕೊಳದ ಬಳಿ ಕಂಡನು; ಒಂದು ವಿಲೋ ವೃಕ್ಷದಡಿಯಲ್ಲಿದ್ದ ಅವಳು ಬಿಳಿಯುಡುಪು ಧರಿಸಿ, ಕೈಯಲ್ಲಿ ಒಂದು ಪುಸ್ತಕ ಹಿಡಿದು, ಕಾದಂಬರಿಯೊಂದರ ನಾಯಕಿಯಂತೆ ಕಂಡು ಬರುತ್ತಿದ್ದಳು. ಕುಶಲ ಪ್ರಶ್ನೆಗಳಾದ ಮೇಲೆ, ಮಾರ್ಯ ಗಾವ್ರಿಲೊವ್ನಬೇಕೆಂದೇ ಸಂಭಾಷಣೆಯನ್ನು ಮುಂದುವರಿಸದೆ ನಿಲ್ಲಿಸಿಬಿಟ್ಟಳು; ಇದರಿಂದ ಇಬ್ಬರ ಮನಸ್ಸೂ ಹೆಚ್ಚಿನ ಪೇಚಿಗೆ ಸಿಲುಕಿತು; ತಟ್ಟನೆ ನಿಶ್ಚಿತ ರೀತಿಯಲ್ಲಿ ಪ್ರೇಮವನ್ನು ಪ್ರಕಟಿಸುವುದೊಂದೇ ಈ ಪೇಚಿನ ಸ್ಥಿತಿಯನ್ನು ನಿವಾರಿಸುವ ಏಕಮಾತ್ರ ಉಪಾಯವಾಗಿತ್ತು. ಮುಂದೆ ನಡೆದದ್ದು ಇಷ್ಟು: ತನ್ನ ಪೇಚಾಟದ ಪರಿಸ್ಥಿತಿಯನ್ನರಿತ ಬರ್ಮಿನ್ ತನ್ನ ಹೃದಯವನ್ನು ಅವಳ ಮುಂದೆ ತೆರೆದಿಡಬೇಕೆಂದು ತಾನು ಬಹಳ ಕಾಲದಿಂದಲೂ ತಕ್ಕ ಅವಕಾಶಕ್ಕಾಗಿ ಕಾಯುತ್ತಿದ್ದನೆಂದು ತಿಳಿಸಿ, ಒಂದು ಕ್ಷಣಕಾಲ ತನ್ನ ಕಡೆ ಗಮನಕೊಡಬೇಕೆಂದು ಬೇಡಿಕೊಂಡನು. ಮಾರ್ಯ ಗಾವ್ರಿಲೊವ್ನ ತನ್ನ ಪುಸ್ತಕವನ್ನು ಮುಚ್ಚಿ, ಕಣ್ಣಿವೆಗಳನ್ನು ಕೆಳಕ್ಕಿಳಿಸುವುದರ ಮೂಲಕ ಸಮ್ಮತಿಯನ್ನು ಸೂಚಿಸಿದಳು.

ಬರ್ಮಿನ್ ಹೇಳಿದ : "ನಾನು ನಿನ್ನನ್ನು ಪ್ರೀತಿಸುತ್ತೇನೆ, ತೀವ್ರವಾಗಿ ಪ್ರೀತಿಸುತ್ತೇನೆ." (ಮಾರ್ಯ ಗಾವ್ರಿಲೊವ್ನ ಕೆಂಪೇರಿದಳು, ತನ್ನ ತಲೆಯನ್ನು ಇನ್ನೂ ಕೆಳಕ್ಕೆ ತಗ್ಗಿಸಿದಳು) ಪ್ರತಿನಿತ್ಯವೂ ನಿನ್ನನ್ನು ನೋಡಿ ನಿನ್ನ ಮಾತು ಕೇಳುವ ಉಲ್ಲಾಸಕರವಾದ ಅಭ್ಯಾಸಕ್ಕೆ ಮನಸೋತು, ಒಂದು ಅಕಾರ್ಯವನ್ನು ಮಾಡಿದ್ದೇನೆ... (ಮಾರ್ಯ ಗಾವ್ರಿಲೊವ್ನಳಿಗೆ ಸೆಯ್‌ನ್ಟ್ ಪ್ರೊ (St. Preux)ವಿನ ಮೊದಲ ಕಾಗದದ ನೆನಪಾಯಿತು) "ಈಗ ನನ್ನ ವಿಧಿಯ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದಕ್ಕೆ ಕಾಲ ಮೀರಿಹೋಗಿದೆ; ನಿನ್ನ ನೆನಪು, ನಿನ್ನ ಮಧುರವಾದ ಅನುಪಮವಾದ ಆಕೃತಿಯ ನೆನಪು, ಇನ್ನು ಮುಂದೆ ನನ್ನ ಇಡಿಯ ಜೀವಮಾನದಲ್ಲಿ ಎಷ್ಟು ಮಟ್ಟಿಗೆ ಸುಖ ಕೊಡುವುದೋ ಅಷ್ಟೇ ಹಿಂಸೆಯನ್ನೂ ಉಂಟುಮಾಡುವುದು. ನಾನು ನಿರ್ವಹಿಸಬೇಕಾದ ಕ್ಲೇಶಕರ ಕರ್ತವ್ಯವೊಂದು ಇನ್ನೂ ಉಳಿದಿದೆ: ನನ್ನ ನಿನ್ನ ನಡುವೆ ದಾಟಲಾಗದ ಅಡ್ಡಗೋಡೆಯನ್ನು ನಿರ್ಮಿಸುವ ಒಂದು ಭಯಂಕರ

ರಹಸ್ಯವನ್ನು ನಿನಗೆ ಬಹಿರಂಗಪಡಿಸಬೇಕಾಗಿದೆ...." ಮಾರ್ಯ ಗಾವ್ರಿಲೊವ್ನ ಉತ್ಸಾಹದಿಂದ ನಡುವೆ ಬಾಯಿ ಹಾಕಿದಳು; "ಆ ಅಡ್ಡಿ ಯಾವಾಗಲೂ ಇತ್ತು...ನಾನು ಎಂದಿಗೂ ನಿಮ್ಮ ಹೆಂಡತಿಯಾಗಲು ಸಾಧ್ಯವಿರಲಿಲ್ಲ....." "ನನಗೆ ಗೊತ್ತು: ನೀನು ಇನ್ನೊಬ್ಬನನ್ನು ಪ್ರೀತಿಸುತ್ತಿದ್ದೆ, ನನಗೆ ಗೊತ್ತು. ಆದರೆ, ಸಾವು, ಮೂರು ವರ್ಷದ ದುಃಖ... ಪ್ರಿಯೇ, ಕರುಣೀ, ಮಾರ್ಯ ಗಾವ್ರಿಲೋವ್ನ, ನನಗುಳಿದಿರುವ ಒಂದೇ ಸಮಾಧಾನವನ್ನು ಕಸಿದುಕೊಳ್ಳಬೇಡ! ನನ್ನ ಸೌಖ್ಯಕ್ಕೆ ನೆಲೆಯಾಗಲು ನೀನು ಒಪ್ಪುತಿದ್ದೆ ಎಂಬ ಆಲೋಚನೆಗೆ ಅವಕಾಶವಿತ್ತು; ಆದರೆ ಮಾತ್ರ ... ಸುಮ್ಮನಿರು, ಬೇಡಿಕೊಳ್ಳುತ್ತೇನೆ, ನೀನು ಸುಮ್ಮನಿರು! ನೀನು ನನ್ನನ್ನು ಚಿತ್ರಹಿಂಸೆಗೆ ಗುರಿಪಡಿಸಿದ್ದೀಯೆ! ನೀನು ನನ್ನವಳಾಗಬಹುದಾಗಿತ್ತು, ನಾನು ಬಲ್ಲೆ, ನನಗೆ ಹಾಗೆನ್ನಿಸುತ್ತದೆ. ಆದರೆ–ನಾನೊಬ್ಬ ದುರದೃಷ್ಟಶಾಲಿ–ನನಗೆ....ನನಗೆ ಮದುವೆಯಾಗಿದೆ!" ಎಂದು ಅವನು ಮೃದುವಾಗಿ ಉತ್ತರಕೊಟ್ಟನು.

ಮಾರ್ಯ ಗಾವ್ರಿಲೊವ್ನ ಚಕಿತಳಾಗಿ ಅವನ ಕಡೆ ದೃಷ್ಟಿಸಿದಳು.

ಬರ್ಮಿನ್ ಮುಂದುವರಿಸಿದ: "ನನಗೆ ಮದುವೆಯಾಗಿದೆ; ಮದುವೆಯಾಗಿ ನಾಲ್ಕು ವರ್ಷ. ನನ್ನ ಹೆಂಡತಿ ಯಾರು, ಅವಳೆಲ್ಲಿದ್ದಾಳೆ, ಅವಳನ್ನು ಎಂದಾದರೂ ಕಾಣುವ ಯೋಗವಿದೆಯೆ–ಇದೇನನ್ನೂ ನಾನರಿಯೆ."

ಬರ್ಮಿನ್ ಹೇಳತೊಡಗಿದ : "೧೮೧೨ನೆಯ ಇಸವಿಯ ಪ್ರಾರಂಭದಲ್ಲಿ ನಾನು ವಿಲ್ನಕ್ಕೆ ಆತುರಾತುರವಾಗಿ ಹೋಗುತ್ತಿದ್ದೆ; ಅಲ್ಲಿ ನಮ್ಮ ಸೈನ್ಯದಳ ನೆಲಸಿತ್ತು. ಒಂದು ಸಂಜೆ ಹೊತ್ತಾದ ಮೇಲೆ ಒಂದು ಅಂಚೆಯ ನಿಲ್ದಾಣಕ್ಕೆ ಬಂದು ಕೂಡಲೆ ಗಾಡಿಗೆ ಹೊಸ ಕುದುರೆಗಳನ್ನು ಹೂಡಬೇಕೆಂದು ಆಜ್ಞೆ ಮಾಡಿದೆ; ಆಗ ಇದ್ದಕ್ಕಿದ್ದ ಹಾಗೆ ಒಂದು ಭಯಂಕರ ಹಿಮವರ್ಷ ಪ್ರಾರಂಭವಾಯಿತು; ನಿಲ್ದಾಣದ ಒಡೆಯನೂ ಗಾಡಿ ಹೊಡೆಯುವವರೂ ಅದು ನಿಲ್ಲುವವರೆಗೂ ಕಾದಿರಬೇಕೆಂದು ನನಗೆ ಸಲಹೆ ಮಾಡಿದರು. ನಾನು ಅವರ ಸಲಹೆಗೇನೋ ಗಮನಕೊಟ್ಟೆ: ಆದರೆ ಒಂದು ವಿಚಿತ್ರ ಕಳವಳದ ಭಾವನೆಗೆ ಒಳಗಾದೆ; ನನ್ನನ್ನು ಯಾವುದೋ ಶಕ್ತಿ ಚೋದಿಸುತ್ತಿರುವಂತೆ ಭಾಸವಾಯಿತು. ಹಿಮಮಾರುತದ ಬಿರುಸು ಸ್ವಲ್ಪವೂ ಕಡಮೆಯಾಗಲಿಲ್ಲ; ನಾನು ತಾಳ್ಮೆಗೆಟ್ಟು, ಕುದುರೆಗಳನ್ನು ಹೂಡಬೇಕೆಂದು ಮತ್ತೆ ಆಜ್ಞೆಕೊಟ್ಟೆ; ಬಿರುಗಾಳಿಯನ್ನು ಎದುರಿಸಿಕೊಂಡೇ ಹೊರಟುಬಿಟ್ಟೆ. ಗಾಡಿ ಹೊಡೆಯುವವನು ನದಿಯ ಪಕ್ಕದಲ್ಲಿಯೇ ಹೋಗಬೇಕೆಂದು ಆಲೋಚಿಸಿದ; ಇದರಿಂದ ಪ್ರಯಾಣದಲ್ಲಿ ಮೂರು ವರ್ಸ್ಟ್‌ಗಳಷ್ಟು ದೂರ ಉಳಿಯಬೇಕಾಗಿತ್ತು. ದಡಗಳ ಮೇಲೆ ಹಿಮ ಕವಿದಿತ್ತು; ರಸ್ತೆಯ ಮೇಲೆಯ

ಹೋಗಿದ್ದರೆ ನಾವು ಯಾವ ಸ್ಥಳವನ್ನು ಮುಟ್ಟಬೇಕಾಗಿತ್ತೋ ಅದನ್ನು ಬಳಸಿಕೊಂಡು ಗಾಡಿ ಹೊಡೆಯುವವನು ಮುಂದೆ ಸಾಗಿದ: ಹೀಗಾಗಿ, ನಾವು ಅಪರಿಚಿತವಾದ ಸ್ಥಳಕ್ಕೆ ಬಂದುಬಿಟ್ಟೆವು. ಬಿರುಗಾಳಿ ತಗ್ಗುವ ಸೂಚನೆಗಳೇ ಇರಲಿಲ್ಲ; ನಾನು ಒಂದು ಬೆಳಕು ಕಂಡು, ಆ ಕಡೆಗೆ ಹೋಗುವಂತೆ ಗಾಡಿ ಹೊಡೆಯುವವನಿಗೆ ಹೇಳಿದೆ. ನಾವು ಒಂದು ಹಳ್ಳಿಗೆ ಬಂದೆವು; ಮರದಿಂದ ಕಟ್ಟಿದ ಚರ್ಚಿನಲ್ಲಿ ಒಂದು ದೀಪವಿತ್ತು. ಬಾಗಿಲು ತೆರೆದಿತ್ತು; ಹಲವು ಜಾರುಬಂಡಿಗಳು ಬೇಲಿಯೊಳಗಡೆ ಸಾಲಾಗಿ ನಿಂತಿದ್ದುವು; ಮುಖ ಮಂಟಪದ ಒಳಗಡೆ ಜನ ಅತ್ತಿಂದಿತ್ತ ಓಡಾಡುತ್ತಿದ್ದರು. 'ಈ ಕಡೆ! ಈ ಕಡೆ ಬನ್ನಿ!' ಎಂದು ಹಲವು ದನಿಗಳು ಕೂಗಿದುವು. ಚರ್ಚಿನ ಹತ್ತಿರಕ್ಕೆ ಹೋಗಬೇಕೆಂದು ನಾನು ಗಾಡಿ ಹೊಡೆಯುವವನಿಗೆ ಹೇಳಿದೆ. "ಇಷ್ಟು ತಡಯಾಕೆ? ವಧು ಪ್ರಜ್ಞೆ ತಪ್ಪಿದ್ದಾಳೆ; ಏನು ಮಾಡಬೇಕೋ ಪಾದ್ರಿಗೆ ತಿಳಿಯದು; ನಾವು ಇನ್ನೇನು ಮನೆಗೆ ತೆರಳಿದ್ದೆವು. ಬೇಗ ಒಳಕ್ಕೆ ಬಾರಪ್ಪ!" ಎಂದು ಯಾರೋ ನನಗೆ ಹೇಳಿದರು. ಒಂದು ಮಾತೂ ಆಡದೆ ನಾನು ಜಾರುಬಂಡಿಯಿಂದ ದುಮುಕಿ, ಚರ್ಚನ್ನು ಪ್ರವೇಶಿಸಿದೆನು; ಅದು ಕೆಲವು ಮೋಂಬತ್ತಿಗಳ ಮಂದ ಪ್ರಕಾಶದಿಂದ ಬೆಳಗುತ್ತಿತ್ತು. ಒಂದು ಕತ್ತಲೆ ಮೂಲೆಯಲ್ಲಿ ಒಬ್ಬಳು ಚಿಕ್ಕ ಹುಡುಗಿ ಒಂದು ಬೆಂಚಿನ ಮೇಲೆ ಕುಳಿತಿದ್ದಳು; ಇನ್ನೊಬ್ಬಳು ಅವಳ ಹಣೆಯ ಪಕ್ಕಗಳನ್ನು ಉಜ್ಜುತ್ತಿದ್ದಳು. ಅವಳು, "ದೇವರ ದಯದಿಂದ ನೀವು ಸಕಾಲಕ್ಕೆ ಬಂದಿರಿ. ನಮ್ಮ ಒಡತಿಯನ್ನು ನೀವು ಕೊಂದೇಬಿಟ್ಟಿದ್ದಿರಿ" ಎಂದಳು. ಒಬ್ಬ ವೃದ್ಧ ಪಾದ್ರಿ ನನ್ನ ಬಳಿಗೆ ಬಂದು, 'ಪ್ರಾರಂಭಿಸೋಣವೆ?' ಎಂದು ಕೇಳಿದನು. 'ಆಗಲಿ, ಆಚಾರ್ಯ, ಪ್ರಾರಂಭಿಸಿ' ಎಂದೆ ನಾನು ಅನ್ಯಮನಸ್ಕನಾಗಿ. ಹುಡುಗಿಯನ್ನು ಕೈಹಿಡಿದು ನಿಲ್ಲಿಸಿದರು. ನನಗೆ ಅವಳು ಬಹಳ ಅಂದವಾಗಿಯೇ ಕಂಡಳು...ವಿವರಿಸಲಾಗದ, ಅಕ್ಷಮ್ಯವಾದ ಹುಡುಗಾಟಿಕೆ.....ನಾನು ಪವಿತ್ರವೇದಿಕೆಯ ಬಳಿ ಅವಳ ಪಕ್ಕದಲ್ಲಿ ನಿಂತೆ; ಪಾದ್ರಿ ತುಂಬ ಅವಸರದಲ್ಲಿದ್ದ; ಮೂವರು ಗಂಡಸರು, ಮತ್ತು ಒಬ್ಬಳು ಸೇವಕಿ ಇನ್ನು ಯಾರಕಡೆಗೂ ಲಕ್ಷ್ಯಕೊಡದೆ ವಧುವನ್ನು ಬೀಳದಂತೆ ಹಿಡಿದು ನಿಲ್ಲಿಸಿಕೊಂಡಿದ್ದರು. ನಮ್ಮನ್ನು ಗಂಡಹೆಂಡಿರನ್ನಾಗಿ ಮಾಡಿಬಿಟ್ಟರು. 'ಮುದ್ದಿಡಿ' ಎಂದು ನಮಗೆ ಹೇಳಿದರು. ನನ್ನ ಹೆಂಡತಿ ತನ್ನ ಬಿಳಿಚಿದ ಮೋರೆಯನ್ನು ನನ್ನ ಕಡೆಗೆ ತಿರುಗಿಸಿದಳು. ನಾನು ಇನ್ನೇನು ಅವಳನ್ನು ಮುತ್ತಿಡುವುದರಲ್ಲಿದ್ದೆ. ಆಗವಳು, 'ಓ, ಇವರಲ್ಲ! ಇವರಲ್ಲ!' ಎಂದು ಚೀರಿ, ಪ್ರಜ್ಞೆ ತಪ್ಪಿ ಕೆಳಕ್ಕೆ ಬಿದ್ದಳೂ. ಮದುವೆಗೆ ಸಾಕ್ಷಿಯಾಗಿದ್ದವರು ಪರೀಕ್ಷಿಸುವ ನಟ್ಟನೋಟದಿಂದ ನನ್ನನ್ನು ನೋಡತೊಡಗಿದರು. ನಾನು ತಿರುಗಿ, ಯಾರ

ತಡೆಯೂ ಇಲ್ಲದೆ ಚರ್ಚನ್ನು ಬಿಟ್ಟು ಹೊರಟೆ! ನನ್ನ ಜಾರುಬಂಡಿಯೊಳಕ್ಕೆ ನುಗ್ಗಿ, 'ಹೊಡೆ' ಎಂದು ಗಟ್ಟಿಯಾಗಿ ಹೇಳಿದೆ.

"ಅಯ್ಯೋ ದೇವರೆ! ನಿಮ್ಮ ನಿರ್ಭಾಗ್ಯ ಪತ್ನಿಯ ಗತಿ ಏನಾಯಿತೆಂದು ನಿಮಗೆ ತಿಳಿಯದೆ?"

"ಇಲ್ಲ. ನನಗೆ ಎಲ್ಲಿ ಮದುವೆಯಾಯಿತೋ ಆ ಹಳ್ಳಿಯ ಹೆಸರು ನನಗೆ ಗೊತ್ತಿಲ್ಲ. ಆ ಹೊತ್ತಿನಲ್ಲಿ ನಾನು ಮಾಡಿದ ಆ ನಿಂದ್ಯವಾದ ಕುಚೇಷ್ಟೆಗೆ ನಾನು ಯಾವ ಪ್ರಾಮುಖ್ಯವನ್ನೂ ಕೊಡದೆ ಹೋದದ್ದರಿಂದ, ಚರ್ಚನ್ನು ಹಿಂದುಳಿದ ಕೂಡಲೆ ನಾನು ನಿದ್ದೆ ಹೋದವನು ಮರುದಿನ ಬೆಳಗ್ಗೆ ಮುಂದಿನ ಅಂಚೆಯ ನಿಲ್ದಾಣ ಸಿಕ್ಕುವವರೆಗೂ ಎಚ್ಚರಗೊಳ್ಳಲಿಲ್ಲ. ಆಗ ನನ್ನ ಜೊತೆಗಿದ್ದ ಸೇವಕ ಸೈನ್ಯಕಾರ್ಯಾಚರಣೆಯ ವೇಳೆಯಲ್ಲಿ ಸತ್ತುಹೋದ. ಹೀಗಾಗಿ, ನಾನು ಕ್ರೂರತನದಿಂದ ಪರಿಹಾಸಮಾಡಿದ ಆ ವ್ಯಕ್ತಿ ಈಗ ನನ್ನ ಮೇಲೆ ಅಷ್ಟೇ ಕ್ರೂರತನದಿಂದ ಸೇಡು ತೀರಿಸಿಕೊಂಡಂತಾಗಿದೆ; ಅವಳನ್ನು ಹುಡುಕುವ ಆಸೆಯೇ ಇಲ್ಲ."

"ಅಯ್ಯೋ ದೇವರೆ! ಹಾಗಿದ್ದರೆ ನೀವೇ ಅವರು! ನನ್ನ ಗುರುತು ಸಿಕ್ಕಲಿಲ್ಲವೆ ನಿಮಗೆ!"

ಬರ್ಮಿನ್ ವಿವರ್ಣನಾದನು......ಅವಳ ಪಾದಗಳೆಡೆ ಮಂಡಿಯೂರಿ ಕುಳಿತನು.

೩. ಶವಸಂಸ್ಕಾರ ನಿರ್ವಾಹಕ
(The Undertaker)

ಮುದಿಯಾಗುತ್ತಿಹ ನಮ್ಮೀ ವಿಶ್ವದ
ನರೆಗೂದಲ ತೆರವಿಹ ಶವಪೆಟ್ಟಿಗೆ-
ಗಳನೆಲ್ಲೆಲ್ಲಿಯು ನಾವು ನೋಡದೇ ?

—ಡರ್‌ಷಾವಿನ್*

---

* ೧೮ನೆಯ ಶತಮಾನದ ರಷ್ಯನ್‌ಕವಿ ಗ್ಯಾವ್ರಿರಲ್ ಡರ್‌ಷಾವಿನ್ ಎಂಬಾತನು ಬರೆದ 'Waterfall' (ಜಲಪಾತ) ಎಂಬ ಪ್ರಗಾಥದಿಂದ.

:

ಶವಸಂಸ್ಕಾರ ನಿರ್ವಾಹಕ* ಏಡ್ರಿಯನ್ ಪ್ರೊಖೊರಾಫ್‌ನ ಮನೆಯ ಚರಸ್ವತ್ತಿನ ಉಳಿಕೆಪಳಿಕೆಯನ್ನೆಲ್ಲ ಶವಸಾಗಿಸುವ ಬಂಡಿಯ ಮೇಲೆ ಹೇರಿದ್ದಾಗಿತ್ತು; ಗಾಡಿಯು ಸಣಕಲಾದ ಜೋಡಿಕುದುರೆಗಳು ನಾಲ್ಕನೆಯ ಸಲ ಬಾಸ್‌ಮಾನ್ಯರಸ್ತೆಯಿಂದ ನಿಕಿಟ್ಸಕಯ ರಸ್ತೆಗೆ ಪ್ರಯಾಸದಿಂದ ನಡೆದುಹೋದುವು; ಆತ ಆ ಬೀದಿಯಿಂದ ಈ ಬೀದಿಗೆ ತನ್ನ ಸಂಸಾರವನ್ನೆಲ್ಲಾ ಬದಲಾಯಿಸಿದ್ದ. ಅವನು ಅಂಗಡಿಗೆ ಬೀಗ ಹಾಕಿ, ಮನೆ ಬಾಡಿಗೆಗೆ, ಅಥವಾ ಮಾರಾಟಕ್ಕೆ, ಇದೆ ಎಂದು ಪ್ರಕಟನೆಯೊಂದನ್ನು ಮನೆಯ ದ್ವಾರದ ಮೇಲೆ ಮೊಳೆ ಹೊಡೆದು ಹಾಕಿ, ತನ್ನ ನೂತನ ನಿವಾಸಕ್ಕೆ ಕಾಲ್ನಡಗೆಯಲ್ಲಿ ಹೊರಟನು. ಬಹುಕಾಲದಿಂದ ತನ್ನ ಬಯಕೆಯ ಗುರಿಯಾಗಿದ್ದು ಕಡೆಗೊಮ್ಮೆ ತಕ್ಕಮಟ್ಟಿಗೆ ಹೆಚ್ಚಿನ ಮೊತ್ತದ ಹಣ ಸುರಿದು ಕೊಂಡುಕೊಂಡ ಆ ಮನೆಯ ಹಳದಿಯ ಬಣ್ಣದ ಗೋಡೆಗಳನ್ನು ಸಮೀಪಿಸಿದಾಗ ತನಗೆ ಸಂತೋಷ ಉಕ್ಕದಿದ್ದುದನ್ನು ಕಂಡು ಆತನಿಗೆ ಅಚ್ಚರಿಯೆನಿಸಿತು. ಹೊಸ ಮನೆಯ ಪಳಕೆಯಿಲ್ಲದ ಹೊಸಿಲನ್ನು ಮೆಟ್ಟಿನಿಂತು ತನ್ನ ಬಿಟ್ಟು ಬಂದ ಮುರುಕಲು ಜೋಪಡಿಯನ್ನು ನೆನೆದು ನಿಟ್ಟುಸಿರುಗರೆದನು: ಅಲ್ಲಿ ಹದಿನೆಂಟು ವರ್ಷ ಕಾಲ ವಾಸಮಾಡುತ್ತಿದ್ದಾಗ ಕಟ್ಟುನಿಟ್ಟಾದ ವ್ಯವಸ್ಥೆ ನೆಲಸಿತ್ತು; ಇಲ್ಲಿಯೊ, ಇನ್ನೂ ಎಲ್ಲವೂ ಅಸ್ತವ್ಯಸ್ತ, ಅವ್ಯವಸ್ಥೆ; ಅವರ ನಿಧಾನಕ್ಕಾಗಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನೂ ಕೆಲಸಗಿತ್ತಿಯನ್ನೂ ಗದರಿಸಿಕೊಂಡು, ಅವರಿಗೆ ಕೈನೆರವು ನೀಡತೊಡಗಿದ. ಬೇಗನೆ ಎಲ್ಲವನ್ನೂ ಒಂದು ವ್ಯವಸ್ಥೆಗೆ ತರಲಾಯಿತು; ಪ್ರತಿಮೆಗಳಿಂದ ಅಲಂಕೃತವಾದ ಮರದ ತಡಿಕೆ, ಪಿಂಗಾಣಿ ಸಾಮಾನಿಡುವ ಬೀರು, ಮೇಜು, ಆರಾಮಸೋಫ, ಹಾಸಿಗೆ ಮೊದಲಾದುವನ್ನೆಲ್ಲ ಹಿಂದುಗಡೆಯ ಕೋಣೆಯಲ್ಲಿ ಅವುಗಳ ಮೂಲೆಗಳಲ್ಲಿ ಇರಿಸಲಾಯಿತ; ಮನೆಯ ಯಜಮಾನನ ಸ್ವಂತ ಸಾಮಾನುಗಳನ್ನು–ಎಂದರೆ, ಎಲ್ಲ ಬಣ್ಣಗಳ ಮತ್ತು ಅಳತೆಗಳ ಹೆಣದ ಪೆಟ್ಟಿಗೆಗಳು, ದುಃಖಪ್ರದರ್ಶಕ ತಲೆಮುಸುಕು, ನಿಲುವಂಗಿ ಮತ್ತು ದೀವಟಿಗೆಗಳು ತುಂಬಿದ ಉಡುಪಿನ ಬೀರು ಮುಂತಾದುವನ್ನು–ಅಡಿಗೆ ಮನೆಯಲ್ಲೂ ಬೈಠಕುಖಾನೆಯಲ್ಲಿಯೂ ಪೇರಿಸಲಾಯಿತು. ಮನೆ ಮುಂದಿನ 'ಗೇಟಿ'ನ ಮೇಲೆ

---

* ಮುಖ್ಯವಾಗಿ ಪಾಶ್ಚಾತ್ಯ ದೇಶಗಳಲ್ಲಿ, ಶವಸಂಸ್ಕಾರ ಕಾರ್ಯಕ್ಕೆ ಬೇಕಾದ ಶವದಪಟ್ಟಿಗೆ ಶವವಸ್ತ್ರ, ಮೊದಲಾದ ಸಾಮಗ್ರಿಗಳನ್ನು ಒದಗಿಸಿಕೊಡುವವನು (Undertaker). –ಅನು.

ಒಂದು 'ಬೋರ್ಡು' ಹಾಕಲಾಯಿತು: ಅದರಲ್ಲಿ–'ಸಾಧಾರಣವಾದ ಹಾಗೂ ಬಣ್ಣದ ಹೆಣದ ಪೆಟ್ಟಿಗೆಗಳನ್ನು ಇಲ್ಲಿ ಮಾರುತ್ತೇವೆ. ಸಿದ್ಧಪಡಿಸಿಕೊಡುತ್ತೇವೆ, ಬಾಡಿಗೆಗೆ ಕೊಡುತ್ತೇವೆ; ಹಳೆಯ ಹಣದ ಪೆಟ್ಟಿಗೆಗಳನ್ನು ಸರಿಮಾಡುತ್ತೇವೆ'– ಎಂಬ ಬರಹದ ಮೇಲೆ, ಕೈಯಲ್ಲಿ ತಲೆಕೆಳಗಾಗಿ ಹಿಡಿದುಕೊಂಡ ಪಂಜನ್ನುಳ್ಳ ಮೈತುಂಬಿದ ಕಾಮದೇವತೆಯ* ಚಿತ್ರವನ್ನು ಬರೆದಿತ್ತು. ಅವನ ಪುತ್ರಿಯರು ತಮ್ಮ ಕೋಣೆಗೆ ಹೋದರು; ತನ್ನ ಹೊಸ ಮನೆಯನ್ನು ಪರಿಶೀಲಿಸಿದ ಮೇ, ಏಡ್ರಿಯನ್ ಕಿಟಕಿಯ ಬಳಿ ಕುಳಿತುಕೊಂಡು, ಚಹಾ ಕಾಯಿಸುವ ಪಾತ್ರೆಯನ್ನು ಬಿಸಿಗಿಡುವಂತೆ ಆಜ್ಞೆ ಮಾಡಿದನು.

ಷೇಕ್ಸ್‌ಪಿಯರ್ ಮಹಾಕವಿಯೂ ಸರ್ ವಾಲ್ಟರ್ ಸ್ಕಾಟನೂ ಪರಸ್ಪರ ವಿರುದ್ಧ ಚಿತ್ರಣಗಳ ಮೂಲಕ ನಮ್ಮ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವುಂಟುಮಾಡುವುದಕ್ಕಾಗಿ, ತಾವು ನಿರೂಪಿಸುವ ಹೆಣದ ಕುಳಿತೋಡುವವರ ಪಾತ್ರಗಳನ್ನು ಲಾಘವವುಳ್ಳವರನ್ನಾಗಿಯೂ ಕುಚೋದ್ಯಗಾರರನ್ನಾಗಿಯೂ ಚಿತ್ರಿಸಿರುವುದನ್ನು ಪ್ರಾಜ್ಞನಾದ ಓದುಗನು ಬಲ್ಲನಷ್ಟೆ ಆದರೆ ಅವರ ಮೇಲ್ಪಂಕ್ತಿಯನ್ನು ಅನುಸರಿಸಲು ನಮ್ಮ ಸತ್ಯನಿಷ್ಠೆ ನಮಗೆ ಅಡ್ಡ ನಿಲ್ಲುತ್ತದೆ; ನಮ್ಮ ಶವಸಂಸ್ಕಾರ ನಿರ್ವಾಹಕನ ಪ್ರಕೃತಿಯಾದರೋ ಅವನ ನಿರುತ್ಸಾಹದ ಕಸಬಿಗೆ ಪೂರ್ಣವಾಗಿ ಅನುಗುಣವಾಗಿತ್ತೆಂಬುದನ್ನು ನಾವು ಒಪ್ಪಿಕೊಳ್ಳದೆ ವಿಧಿಯಿಲ್ಲ. ಏಡ್ರಿಯನ್ ಪ್ರೊಖೊರಾಫ್ ಗಂಭೀರ ಮ್ಲಾನ ಮೂರ್ತಿ. ಯಾವಾಗಲಾದರೂ ಅಪೂರ್ವ ಸಂದರ್ಭಗಳಲ್ಲಿ ಅವನು ಮೌನವನ್ನು ಮುರಿದನೆಂದರೆ, ಅದು ತನ್ನ ಹೆಣ್ಣುಮಕ್ಕಳು ಏನೂ ಕೆಲಸವಿಲ್ಲದೆ ಕಿಟಕಿಯಿಂದ ಹೊರಗೆ ದಾರಿಹೋಕರನ್ನು ನೋಡುತ್ತಿದ್ದುದನ್ನು ಕಂಡಾಗ ಅವರನ್ನು ಝುಂಕಿಸುವುದಕ್ಕೆ; ಇಲ್ಲವೆ ತನ್ನ ಕೈಯಿಂದ ನಿರ್ಮಿಸಿದ ಪದಾರ್ಥಗಳ ಅವಶ್ಯಕತೆ ಹೊಂದಿರುವಮಟ್ಟಿಗೆ ದುರದೃಷ್ಟಶಾಲಿಗಳಾದ (ಅಥವಾ, ಸಂದರ್ಭಾನುಸಾರವಾಗಿ, ಅದೃಷ್ಟಶಾಲಿಗಳೇ ಆದ) ಗಿರಾಕಿಗಳಿಂದ ತಲೆಬೆಲೆಯನ್ನು ಕೇಳುವುದಕ್ಕೆ ಇಂತು, ಎಂದಿನಂತೆ ಖಿನ್ನನಾಗಿ ಚಿಂತೆಯಲ್ಲಿ ಮುಳುಗಿ, ಏಟ್ರಿಯನ್ ಏಳನೆಯ ಬಟ್ಟಲ ಚಹಾ ಕುಡಿಯುತ್ತ ಕಿಟಕಿಯ ಬಳಿ ಕುಳಿತಿದ್ದನು. ಕಳೆದವಾರ ನಿವೃತ್ತ 'ಬ್ರಿಗಡಿಯರ್'ನ (ದಳಪತಿ) ಶವದ ಮೆರವಣಿಗೆ ಸುಂಕದ ಕಟ್ಟೆಯನ್ನು ಹಾದುಹೋಗುತ್ತಿದ್ದಾಗ ಧಾರಕಾರವಾದ ಮಳೆ ಅದಕ್ಕೆ ಸ್ವಾಗತ ನೀಡಿದ್ದು ಅವನ ನೆನಪಿಗೆ ಬಂದಿತು.

---

* ಕಾಮದೇವನ ಚಿತ್ರ ಸಾಧಾರಣವಾಗಿ ರೆಕ್ಕೆಯುಳ್ಳ ಶಿಶುವಿನ ಆಕೃತಿಯಲ್ಲಿರುತ್ತದೆ–ಅನು.

ಅದರ ಪರಿಣಾಮವಾಗಿ ಅನೇಕ ನಿಲುವಂಗಿಗಳು ಕುಗ್ಗಿಹೋಗಿದ್ದುವು, ಟೋಪಿಯಂಚುಗಳು ಬಾಗು ಬಂದಿದ್ದುವು. ತಕ್ಕಮಟ್ಟಿಗೆ ಖರ್ಚು ಬೀಳುವುದೆಂದು ಆತ ನಿರೀಕ್ಷಿಸುತ್ತಿದ್ದ; ಏಕೆಂದರೆ, ಅವನ ಬಳಿಯಿದ್ದ ಶವಸಂಸ್ಕಾರ ವಸ್ತ್ರಗಳ ಪುರಾತನವಾದ ಸರಕೆಲ್ಲ ಶೋಚನೀಯ ಸ್ಥಿತಿಯಲ್ಲಿತ್ತು.

ಇಡಿಯ ವರ್ಷದಿಂದ ಗೋರಿಗೆ ಪ್ರಯಾಣ ಮಾಡಲೋ ಬೇಡವೊ ಎಂದು ಹಾಗೂ ಹೀಗೂ ತೂಗಾಡುತ್ತಿದ್ದ ವರ್ತಕನ ವಿಧವೆ ಹೆಂಡತಿ ಟ್ರ್ಯುಖಿನಾಳ ಶವಸಂಸ್ಕಾರದಿಂದ ತನ್ನ ನಷ್ಟವನ್ನೆಲ್ಲ ಕಟ್ಟಿಕೊಳ್ಳಬಹುದೆಂದು ಆತ ಆಶಿಸಿದ್ದ. ಆದರೆ ಟ್ರ್ಯುಖಿನಾ ರಾಜ್‌ಗುಲ್ಯಾಯಿಯಲ್ಲಿ ಸಾಯುವಳಿದ್ದಳು; ಅವಳ ಉತ್ತರಾಧಿಕಾರಿಗಳೇನೋ ತನಗೇ ಮಾತುಕೊಟ್ಟಿದ್ದರು; ಆದರೂ ಅವರು ತನಗೆ ಹೇಳಿಕಳಿಸುವಷ್ಟು ತೊಂದರೆ ತೆಗೆದುಕೊಳ್ಳಲಾರರೆಂದೂ ಅತ್ಯಂತ ಸಮೀಪದ 'ಕಂಟ್ರಾಕ್ಟರ' (ಗುತ್ತಿಗೆದಾರ)ನನ್ನು ಗೊತ್ತು ಮಾಡಿಕೊಳ್ಳಬಹುದೆಂದೂ ಪ್ರೊಖೊರಾಫ್ ಶಂಕಿಸಿದನು.

ಮುಂಬಾಗಿಲು (ರಹಸ್ಯ ಸಂಕೇತ ರೀತಿಯಲ್ಲಿ) ಮೂರು ಸಲ ತಟ್ಟಿದಂತಾಗಿ ಅವನ ಧ್ಯಾನಕ್ಕೆ ಭಂಗವುಂಟಾಯಿತು. ಶವಸಂಸ್ಕಾರ ನಿರ್ವಾಹಕನು 'ಯಾರಲ್ಲಿ?' ಎಂದು ಗಟ್ಟಿಯಾಗಿ ಕೇಳಿದನು. ಬಾಗಿಲು ತೆರೆಯಿತು; ಒಬ್ಬ ಮತ್ತೆ ಉಲ್ಲಾಸಭಾವದಿಂದ ಕೋಣೆಯೊಳಕ್ಕೆ ಪ್ರವೇಶಿಸಿ, ಶವಸಂಸ್ಕಾರ ನಿರ್ವಾಹಕನ ಸಮೀಪಕ್ಕೆ ಬಂದನು. ಅವನನ್ನು ನೋಡಿದ ಕೂಡಲೆ ಅವನು ಒಬ್ಬ .... ಗುರುತು ಹಿಡಿಯಬಹುದಾಗಿತ್ತು; ಈಗಲೂ ಕೇಳಿದರೆ ನಮ್ಮಲ್ಲಿ ಯಾರಿಗಾದರೂ ನಗುಬರುವಂತಹ 'ಅರ್ಧಂಬರ್ಧ' ರಷ್ಯನ್ ಭಾಷೆಯಲ್ಲಿ ಆತ ಹೇಳಿದ: 'ಸ್ವಾಮೀ, ದಯವಿಟ್ಟು ಕ್ಷಮಿಸಿ, ನಿಮಗೆ ವಿಘ್ನವುಂಟುಮಾಡುತ್ತಿದ್ದೇನೆಯೋ ಏನೋ. ಆದಷ್ಟು ಬೇಗ ನಿಮ್ಮ ಪರಿಚಯ ಮಾಡಿಕೊಳ್ಳಬೇಕೆಂದು ನನಗೆ ಆಸೆ. ನಾನೊಬ್ಬ ಜೋಡು ಹೊಲಿಯುವವನು; ಗಾಟ್ಲಿಯೆಬ್ ಷುಲ್‌ಟೆಸ್ ಎಂದು ನನ್ನ ಹೆಸರು; ನಿಮ್ಮ ಕಿಟಕಿಯಿಂದ ಕಾಣುತ್ತದೆ ನೋಡಿ, ಇದೇ ಬೀದಿಯ ಆಚೆಯ ಕಡೆ ಇರುವ ಆ ಚಿಕ್ಕಮನೆಯಲ್ಲಿ ನನ್ನ ವಾಸ. ನಾಳೆಯ ದಿನ ನನ್ನ ಮದುವೆಯ ರಜತೋತ್ಸವ; ಸ್ನೇಹಸೂಚಕವಾಗಿ ನೀವೂ ನಿಮ್ಮ ಪುತ್ರಿಯರೂ ದಯಮಾಡಿ ಬಂದು ನನ್ನೊಡನೆ ಭೋಜನ ಮಾಡಬೇಕೆಂದು ನಿಮ್ಮನ್ನು ಆಹ್ವಾನಿಸಬಯಸಿದ್ದೇನೆ." ಈ ಆಹ್ವಾನವನ್ನು ಆದರಪೂರ್ವಕ ಒಪ್ಪಿಕೊಳ್ಳಲಾಯಿತು. ಕುಳಿತುಕೊಂಡು ತನ್ನ ಸಂಗಡ ಒಂದು ಬಟ್ಟಲು ಚಹಾ ಕುಡಿಯಬೇಕೆಂದು ಶವಸಂಸ್ಕಾರ ನಿರ್ವಾಹಕನು ಮೋಚಿಯನ್ನು ಕೇಳಿಕೊಂಡನು; ಗಾಟ್ಲಿಯೆಬ್ ಷುಲ್‌ಟೆಸ್‌ನದು ಬಿಚ್ಚು ಹೃದಯದ

ಸ್ವಭಾವವಾದ್ದರಿಂದ, ಇಬ್ಬರೂ ಬೇಗನೆ ಅತ್ಯಂತ ಸ್ನೇಹ ಸೌಹಾರ್ದದಿಂದ ಹರಟೆ ಹೊಡೆಯ ತೊಡಗಿದರು.

"ನಿಮ್ಮ ಕಸಬು ಹೇಗೆ ಸಾಗುತ್ತಿದೆ?" ಎಂದು ಏಡ್ರಿಯನ್ ವಿಚಾರಿಸಿದನು.

ಷುಲ್‌ಟೆಸ್ ಉತ್ತರಕೊಟ್ಟ: "ಪರವಾಗಿಲ್ಲ, ನಮ್ಮ ಕಸಬಿನಲ್ಲೂ ಏರುಪೇರುಗಳಿವೆ. ನಾನು ಗೊಣಗುವ ಹಾಗೇನೂ ಇಲ್ಲ. ನಮ್ಮ ಸರಕು ನಿಮ್ಮದರ ಹಾಗಲ್ಲ–ಬದುಕಿರುವವರು ಜೋಡಿಲ್ಲದೆ ನಿರ್ವಹಿಸಬಹುದು; ಆದರೆ ಸತ್ತವನು ತನ್ನ ಹೆಣದ ಪೆಟ್ಟಿಗೆಯಿಲ್ಲದೆ ವಾಸಮಾಡಲಾರ."

"ಪೂರ್ತಿ ನಿಜ. ಅಷ್ಟೇ ಅಲ್ಲದೆ, ಬದುಕಿರುವವನಿಗೆ ಜೋಡುಕೊಳ್ಳಲು ದುಡ್ಡಿಲ್ಲದೆ ಹೋದರೆ, ನಿಮ್ಮ ಕಣ್ಣಿಗೆ ಬೀಳದಂತೆ ಬರಿಗಾಲಿನಲ್ಲಿ ನಡೆದುಹೋಗಬಹುದು. ಆದರೆ ಸತ್ತ ತಿರುಪೆಯವನೂ ಕೂಡ ಏನೂ ಖರ್ಚುಮಾಡದೆ ತನ್ನ ಹೆಣದ ಪೆಟ್ಟಿಗೆ ಗಿಟ್ಟಿಸಿಬಿಡುತ್ತಾನೆ" ಎಂದು ಏಡ್ರಿಯನ್ ಸಮ್ಮತಿಸಿ ನುಡಿದ. ಈ ರೀತಿ ಅದರ ಸಂಭಾಷಣೆ ಇನ್ನು ಕೊಂಚ ಕಾಲ ಮುಂದುವರಿಯಿತು. ಕಡೆಗೆ .... ಮೇಲಕ್ಕೆದ್ದು ಮತ್ತೆ ನನ್ನ ಆಹ್ವಾನವನ್ನು ನೀಡಿ, ಶವಸಂಸ್ಕಾರ ನಿರ್ವಾಹಕನನ್ನು ಬೀಳ್ಕೊಂಡು ಹೊರಟನು.

ಮಾರನೆಯ ದಿನ ಮಧ್ಯಾಹ್ನಕ್ಕೆ ಸರಿಯಾಗಿ ಶವಸಂಸ್ಕಾರ ನಿರ್ವಾಹಕನೂ ಅವನ ಹೆಣ್ಣುಮಕ್ಕಳೂ ಹೊಸದಾಗಿ ಕೊಂಡ ಮನೆಯ ಹೊರಬಾಗಿಲನ್ನು ದಾಟಿ ತಮ್ಮ ನೆರೆಯಾತನಿಗೆ ಭೇಟಿಕೊಡಲು ಹೊರಟರು. ಆಧುನಿಕ ಕಾದಂಬರಿಕಾರರ ಅಂಗೀಕೃತ ಪದ್ಧತಿಯನ್ನು ಈ ವಿಚಾರದಲ್ಲಿ ಪಾಲಿಸದೆ ಹೋದರೂ ಚಿಂತೆಯಿಲ್ಲ, ಏಡ್ರಿಯನ್ ಪ್ರೊಖೊರಾಫ್‌ನ, ರಷ್ಯನ್ ಮಾದರಿಯ 'ಕಫ್ತಾನ್' ಉಡುಪನ್ನಾಗಲಿ ಅಕ್ಯುಲೀನ ಮತ್ತು ದಾರ್ಯ ಇವರ ಯೂರೋಪಿನ ಮಾದರಿಯ ಉಡಿಗೆತೊಡಿಗೆಯನ್ನಾಗಲಿ ವರ್ಣಿಸುವ ಗೋಜಿಗೆ ಹೋಗುವುದಿಲ್ಲ. ಆದರೂ ಒಂದು ಸಂಗತಿಯನ್ನು ಸೂಚಿಸುವುದು ಹೆಚ್ಚೇನೂ ಆಗಲಾರದು: ಇಬ್ಬರು ಕುಮಾರಿಯರೂ ತಾವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಧರಿಸುತ್ತಿದ್ದ ಹಳದಿಯ ಟೋಪಿಗಳನ್ನೂ ಕೆಂಪು ಮೊಚ್ಚೆಗಳನ್ನೂ ಧರಿಸಿದ್ದರು.

ಮೋಚಿಯ ಸಣ್ಣಕೋಣೆ ಅತಿಥಿಗಳಿಂದ ಕಿಕ್ಕಿರಿದು ತುಂಬಿಹೋಗಿತ್ತು; ಅವರಲ್ಲಿ ಬಹುಮಂದಿ ತಮ್ಮ ಹೆಂಡಿರು ಮತ್ತು ಕೈಕೆಳಗೆ ಕೆಲಸ ಕಲಿಯುವವರೊಡನೆ ಬಂದಿದ್ದ ಜರ್ಮನ್ ಕೆಲಸಗಾರರು. ಅಲ್ಲಿಗೆ ಬಂದಿದ್ದ ಏಕಮಾತ್ರ ರಷ್ಯನ್ ಅಧಿಕಾರಿಯೆಂದರೆ ಪೊಲೀಸು ಕಾನ್‌ಸ್ಟೆಬಲ್ ಯುರ್ಕೋ; ಈತನ ಪದವಿ ಸಾಧಾರಣದ್ದಾದರೂ ಅತಿಥೇಯನ (ಅತಿಥಿ ಸತ್ಕಾರ ಮಾಡುವವನು) ವಿಶೇಷ

ಮನ್ನಣೆಗೆ ಪಾತ್ರನಾಗಿದ್ದನು. ಪೊಗೊರೆಲ್‌ಸ್ಕಿಯ ಪ್ರಸಿದ್ಧನಾದ ಅಂಚೆಯವನಂತೆ* ಅವನೂ ಶ್ರದ್ಧೆಯಿಂದ ಪ್ರಾಮಾಣಿಕತೆಯಿಂದ ಇಪ್ಪತ್ತೈದು ವರ್ಷ ಕಾಲ ತನ್ನ ವೃತ್ತಿಯಲ್ಲಿ ಸೇವೆ ಸಲ್ಲಿಸಿದ್ದನು. ೧೮೧೨ರ ಅಗ್ನಿಯ ಹಾವಳಿ ಪುರಾತನ ರಾಜಧಾನಿಯನ್ನು ನಾಶಮಾಡಿದ್ದರ ಜೊತೆಗೆ ಅವನ ಹಳದಿಯ ಕಾವಲು ಪೆಟ್ಟಿಗೆಯನ್ನೂ ನಿರ್ನಾಮ ಮಾಡಿತ್ತು. ಆದರೆ ಶತ್ರುಗಳನ್ನು ಆಚೆಗೆ ಓಡಿಸಿದ ಕೂಡಲೆ, ಅದರ ಸ್ಥಳದಲ್ಲಿ, ಬೂದು ಬಣ್ಣ ಬಳಿದು ಅದರ ಮೇಲೆ ಬಿಳಿಯ 'ಡೋರಿಕ್' ಸ್ತಂಭಗಳ ಚಿತ್ರ ಬರೆದಿದ್ದ ಹೊಸ ಕಾವಲು ಪೆಟ್ಟಿಗೆ ಕಾಣಿಸಿಕೊಂಡಿತು; ಅದರ ಮುಂದುಗಡೆ ಆಪಾದಮಸ್ತಕ ಶಸ್ತ್ರಸಜ್ಜಿತನಾಗಿ ಯುರ್ಕೋ ಮತ್ತೆ ಶತಪಥ ತಿರುಗಾಡಲು ಮೊದಲು ಮಾಡಿದ್ದನು. ನಿಕಿಟ್‌ಸ್ಕಿಪುರ ದ್ವಾರದ ಸುತ್ತ ಮುತ್ತಣ ಬೀದಿಗಳಲ್ಲಿ ವಾಸವಾಗಿದ್ದ ಜರ್ಮನರಲ್ಲಿ ಬಹುಮಂದಿಯನ್ನು ಅವನು ಬಲ್ಲವನಾಗಿದ್ದನು; ಅವರಲ್ಲಿ ಕೆಲವರು ಭಾನುವಾರ ರಾತ್ರಿಗಳಲ್ಲಿ ಅವನ ಕಾವಲು ಪೆಟ್ಟಿಗೆಯಲ್ಲಿ ಕಾಲ ಕಳೆಯಬೇಕಾಗಿ ಬರುತ್ತಿತ್ತು. ಸದ್ಯದಲ್ಲಿಯೋ ಆಮೇಲೋ ಎಂದಾದರೊಮ್ಮೆ ಆತನ ಸಹಾಯ ಬೇಕಾಗುವುದೆಂದು ಭಾವಿಸಿ, ಏಡ್ರಿಯನ್ ಆತನ ಪರಿಚಯ ಮಾಡಿಕೊಳ್ಳಲು ತವಕಪಟ್ಟನು; ಅತಿಥಿಗಳೆಲ್ಲಾ ಮೇಜಿನ ಮುಂದೆ ಕುಳಿತಾಗ, ಇವರಿಬ್ಬರೂ ಪಕ್ಕ ಪಕ್ಕದಲ್ಲಿ ಕುಳಿತರು. ಶ್ರೀಮಾನ್ ಮತ್ತು ಶ್ರೀಮತಿ ಷುಲ್‌ಟ್ಸ್ ಹಾಗೂ ಅವರ ಹದಿನೇಳು ವರ್ಷದ ಮಗಳು ಲಾಟ್‌ಷೆನ್ ಅತಿಥಿಗಳೊಂದಿಗೆ ಭೋಜನ ಮಾಡುವ ವೇಳೆಯಲ್ಲಿ ಮೇಜಿನ ಬಳಿ ಓಡಾಡುತ್ತ, ಭಕ್ಷ್ಯ ಭೋಜ್ಯದ ತಟ್ಟೆಗಳನ್ನು ಸಿದ್ಧಪಡಿಸಲು ಅಡಿಗೆಯವನಿಗೆ ಸಹಾಯ ಮಾಡುತ್ತಿದ್ದರು. ಬಿಯರ್ ಮದ್ಯ ಧಾರಾಳವಾಗಿ ಹರಿಯಿತು. ನಾಲ್ಕು ಜನದ ಊಟವನ್ನು ಯುರ್ಕೋ ಒಬ್ಬನೇ ಸಾಗಿಸಿದ. ಏಡ್ರಿಯನ್ನನೇನೂ ಅವನಿಗೆ ಹಿಂದುಳಿಯಲಿಲ್ಲ. ಅವನ ಹೆಣ್ಣು ಮಕ್ಕಳು ತಮ್ಮ ನಡೆನುಡಿಯ ಒಪ್ಪದ ಕಡೆ ಗಮನವಿತ್ತರು. ಜರ್ಮನ್ ಭಾಷೆಯಲ್ಲಿ ನಡೆಯುತ್ತಿದ್ದ ಸಂಭಾಷಣೆ ಬರುಬರುತ್ತ ಗಟ್ಟಿಯಾಗಿ ಕೇಳಿಬಂತು. ಇದ್ದಕ್ಕಿದ್ದ ಹಾಗೆ ಅತಿಥೇಯನು ಎಲ್ಲರ ಗಮನವನ್ನೂ ಸೆಳೆದು, ಅಲ್ಲಲ್ಲಿ ಟಾರು ಮೆತ್ತಿಕೊಂಡ ಶೀಸೆಯ ಬಿರಡೆ ತೆಗೆದು, "ನನ್ನ ಲ್ಯೂಸೆಯ ಕ್ಷೇಮಾಭ್ಯುದಯಕ್ಕೆ!" ಎಂದು ರಷ್ಯನ್ ಭಾಷೆಯಲ್ಲಿ ಗಟ್ಟಿಯಾಗಿ ಹೇಳಿದನು. ಸೌಮ್ಯವಾದ 'ಷಾಂಪೇನ್' ಮದ್ಯ ನೊರೆಯಾಡಿತು. ತನ್ನ ಮಧ್ಯವಯಸ್ಸಿನ ಮಡದಿಯ ಹೊಸ ಕಳೆಯ ಮುಖವನ್ನು ಅತಿಥೇಯನ ಮುದ್ದಿಟ್ಟನು;

* ಅಲೆಕ್ಸಿ ಪೆರಾಫಾಸ್ಕಿ)ಕಾವ್ಯನಾಮ : ಆಂಟೊನಿ ಪೊಗೊರೆಲ್‌ಸ್ಕಿ(ಎಂಬ ಒಬ್ಬ ಕಾದಂಬರಿಕಾರನ ಕಾದಂಬರಿಯೊಂದರ ಮುಖ್ಯಪಾತ್ರ

ಅತಿಥಿಗಳೆಲ್ಲರೂ ಆ ಸಾಧ್ವಿಯ ಕ್ಷೇಮಾಭ್ಯುದಯವನ್ನು ಹಾರೈಸಿ ಸಶಬ್ಧವಾಗಿ ಮದ್ಯಪಾನಮಾಡಿದರು. ಅತಿಥೇಯನು ಇನ್ನೊಂದು ಶೀಸೆಯ ಬಿರಡೆ ತೆಗೆದು, "ನನ್ನ ಪ್ರೀತಿಪಾತ್ರರಾದ ಅತಿಥಿಗಳ ಕ್ಷೇಮಾಭ್ಯುದಯಕ್ಕೆ!" ಎಂದು ಘೋಷಿಸಿದನು; ಅತಿಥಿಗಳು ಮತ್ತೆ ತಮ್ಮ ಲೋಟಗಳನ್ನು ಬರಿದು ಮಾಡಿ, ತಮ್ಮ ಪ್ರತಿವಂದನೆ ಸಲ್ಲಿಸಿದರು. ಪರಸ್ಪರ ಕ್ಷೇಮವನ್ನು ಕೋರುವ 'ಸ್ವಸ್ತಿಪಾನ' ಅವಿಚ್ಛಿನ್ನವಾಗಿ ಸಾಗಿತು– ಎಲ್ಲರೂ ಪ್ರತಿಯೊಬ್ಬ ವ್ಯಕ್ತಿಗೂ ಬೇರೆಬೇರೆಯಾಗಿ ಸ್ವಸ್ತಿಪಾನ ಮಾಡಿದರು; ಅನಂತರ ಮಾಸ್ಕೋ ನಗರಕ್ಕೆ ಶುಭಕೋರಿ ಪಾನಮಾಡಿದರು; ಅನಂತರ ಸುಮಾರು ಹತ್ತು ಹನ್ನೆರಡು ಸಣ್ಣ ಸಣ್ಣ ಜರ್ಮನ್ ಪಟ್ಟಣಗಳಿಗೆ; ಬಳಿಕ ಒಟ್ಟಿನ ಮೇಲೆ ಎಲ್ಲ ಕಸಬುಗಳಿಗೂ, ಆಮೇಲೆ ಪ್ರತ್ಯೇಕವಾಗಿ ಒಂದೊಂದಕ್ಕೂ ಸ್ವಸ್ತಿಪಾನ ನಡೆಯಿತು; ಎಲ್ಲ ಕೆಲಸಗಾರರ ಮತ್ತು ಅವರ ಕೈಕೆಳಗೆ ಕೆಲಸ ಕಲಿಯುವವರ ಆರೋಗ್ಯವನ್ನು ಕೋರಿ ಸ್ವಸ್ತಿಪಾನ ಮಾಡಿದರು. ಏಡ್ರಿಯನ್ ಅಂತಃಕರಣಪೂರ್ವಕವಾಗಿ ಪಾನಮಾಡಿ, ಕಡೆಗೆ ಎಷ್ಟು ಹಿಗ್ಗಿಹೋದನೆಂದರೆ, ನಿಜವಾಗಿಯೂ ವಿಚಿತ್ರವಾದ ಒಂದು ಸ್ವಸ್ತಿಪಾನವನ್ನು ಸೂಚಿಸಿದರು. ಅನಂತರ ಅತಿಥಿಗಳಲ್ಲಿ ಒಬ್ಬನಾದ ಬೊಜ್ಜು ಬೆಳೆದ ರೊಟ್ಟಿಯ ವ್ಯಾಪಾರಿಯೊಬ್ಬನು ತನ್ನ ಲೋಟವನ್ನು ಮೇಲಕ್ಕೆತ್ತಿ, "ಯಾರಿಗಾಗಿ ನಾವು ಕೆಲಸ ಮಾಡುತ್ತೇವೆಯೋ ಅವನ ಆರೋಗ್ಯವನ್ನು ಬಯಸಿ ಕುಡಿಯೋಣ!" ಎಂದು ಗಟ್ಟಿಯಾಗಿ ಹೇಳಿದನು. ಹಿಂದಿನಂತೆಯೇ ಎಲ್ಲರೂ ಒಂದಾಗಿ ಹಿಗ್ಗಿನಿಂದಲೇ ಈ ಸ್ವಸ್ತಿಪಾನ ಮಾಡಿದರು. ಅತಿಥಿಗಳು ಒಬ್ಬರಿಗೊಬ್ಬರು ತಲೆಬಾಗಲು ಪ್ರಾರಂಭಿಸಿದರು–ದರ್ಜಿ ಮೋಚಿಗೆ ತಲೆಬಾಗಿದನು, ಮೋಚಿ ದರ್ಜಿಗೆ ಮಣಿದನು, ರೊಟ್ಟಿಯಂಗಡಿಯವನು ಇಬ್ಬರಿಗೂ ನಮಸ್ಕಾರ ಮಾಡಿದನು, ನೆರೆದಿದ್ದವರ ಗುಂಪೆಲ್ಲ ರೊಟ್ಟಿಯಂಗಡಿಯವನಿಗೆ ತಲೆಬಾಗಿತು; ಹೀಗೆಯೇ ಸಾಗಿತು. ಈ ಪರಸ್ಪರ ನಮಸ್ಕಾರಗಳ ನಡುವೆ ಯುರ್ಕೋ ಶವಸಂಸ್ಕಾರಕರ್ತನ ಕಡೆ ತಿರುಗಿ, "ಮಿತ್ರವರ್ಯ, ಬಾರಯ್ಯಾ, ನಿನ್ನ ಸತ್ತ ಸ್ನೇಹಿತರ ಆರೋಗ್ಯವನ್ನು ಕೋರಿ ಪಾನಮಾಡಯ್ಯಾ!" ಎಂದು ಗಟ್ಟಿಯಾಗಿ ಹೇಳಿದನು. ಪ್ರತಿಯೊಬ್ಬರೂ ನಕ್ಕರು; ಆದರೆ ಶವ ಸಂಸ್ಕಾರಕರ್ತನು ಅಪಮಾನಗೊಂಡವನಾಗಿ, ಹುಬ್ಬುಗಂಟಿಕ್ಕಿದನು. ಯಾರೂ ಇದನ್ನು ಗಮನಿಸಲಿಲ್ಲ; ಅತಿಥಿಗಳು ಕುಡಿಯುತ್ತಲೇ ಇದ್ದರು; ಅವರು ಮೇಜನ್ನು ಬಿಟ್ಟು ಏಳುವ ವೇಳೆಗೆ ಸಾಯಂಸಂಧ್ಯಾ ಪ್ರಾರ್ಥನೆಯ ಘಂಟನಾದವಾಗುತ್ತಿತ್ತು.

ಬಹಳ ಹೊತ್ತಾದ ಮೇಲೆ ಅತಿಥಿಗಳೆಲ್ಲ ಚೆದರಿದರು; ಅವರಲ್ಲಿ ಬಹುಮಂದಿಗೆ ಕುಡಿತದ ಅಮಲೇರಿತ್ತು. ಬೊಜ್ಜುಮೈಯ ರೊಟ್ಟಿಯಂಗಡಿಯವನು,

'ಕೆಂಪು ಮೊರಾಕೊ:ಚಕ್ಕಳದಿಂದ ಬೈಂಡು' ಮಾಡಿದ ಹಾಗೆ ಕಾಣುವ ಮುಖವುಳ್ಳ ಪುಸ್ತಕ ಬೈಂಡು ಮಾಡುವವನು–ಇವರಿಬ್ಬರೂ ಪೋಲೀಸಿನವನ ತೋಳುಗಳ ಕೆಳಕ್ಕೆ ಕೈಕೊಟ್ಟು ಅವನನ್ನು ಅವನ ನಿವಾಸಕ್ಕೆ ಕರೆದೊಯ್ದು; ಈ ಸಂದರ್ಭದಲ್ಲಿ ಅವರು–ಸಾಲವನ್ನು ತೀರಿಸಿದಾಗ ಅದಕ್ಕೆ ಗೌರವ ಕೊಟ್ಟಹಾಗೆ–ಎಂಬ ರಷ್ಯನ್ ಗಾದೆಯನ್ನು ಪಾಲಿಸಿದರು. ಶವಸಂಸ್ಕಾರ ನಿರ್ವಾಹಕ ಗಲ್ಲಿಗೆ ಹಾಕುವವನ ಅಣ್ಣನೋ ಇಲ್ಲ ತಮ್ಮನೋ? ಈ ಪರಕೀಯರು ಹಾಗೆ ನಗುವುದಕ್ಕೆ ಏನು ಕಂಡರು? ಅವರ ದೃಷ್ಟಿಯಲ್ಲಿ ಶವಸಂಸ್ಕಾರಕರ್ತ ಕೋಡಂಗಿಯಾಗಿಬಿಟ್ಟನೆ? ನಾನು ಅವರನ್ನೆಲ್ಲ ನಮ್ಮ ಗೃಹಪ್ರವೇಶೋತ್ಸವಕ್ಕೆ ಕರೆಯೋಣವೆಂದುಕೊಂಡಿದ್ದೆ. ಇಷ್ಟೆಲ್ಲ ಆದಮೇಲೆ ಇನ್ನು ಕರೆಯುವುದಿಲ್ಲ! ನಾನು ಯಾರಿಗಾಗಿ ದುಡಿಯುತ್ತೇನೆಯೋ ಆ ನನ್ನ ಕ್ರೈಸ್ತ ಶವಗಳನ್ನು ಆಹ್ವಾನಿಸುತ್ತೇನೆ" ಎಂದು ತನ್ನಲ್ಲಿ ತಾನು ಗಟ್ಟಿಯಾಗಿ ಹೇಳಿಕೊಳ್ಳುತ್ತಿದ್ದನು. ಅವನ ಬೂಡ್ಸುಗಳನ್ನು ಕಳಚುತ್ತಿದ್ದ ಕೆಲಸದವಳು, "ಅಯ್ಯೋ, ಇದೇನು ಸ್ವಾಮಿ ಹೇಳುತ್ತಿರುವುದು! ಮೊದಲು ಶಿಲುಬೆಯ ಸಂಜ್ಞೆಮಾಡಿಕೊಳ್ಳಿ! ಗೃಹಪ್ರವೇಶೋತ್ಸವಕ್ಕೆ ಸತ್ತವರನ್ನು ಕರೆಯುವುದೇ! ಎಂಥ ಭಯಂಕರವಾದ ಕೆಲಸ!" ಎಂದು ಉದ್ಗಾರ ತೆಗೆದಳು. "ದೇವರಾಣೆಗೂ ನಾನು ಹಾಗೆಯೇ ಮಾಡುತ್ತೇನೆ! ನಾಳೆಯೇ ಹಾಗೆ ಮಾಡುತ್ತೇನೆ! ಓ ನನ್ನ ಉಪಕಾರಿಗಳೇ, ನಾಳೆ ರಾತ್ರಿ ನಮ್ಮ ಮನೆಗೆ ಔತಣಕ್ಕೆ ದಯಮಾಡಿಸುವ ಕೃಪೆಮಾಡಿ ನನಗೆ ಗೌರವ ತಂದುಕೊಡಬೇಕು. ನನ್ನಲ್ಲಿರುವ ಅಲ್ಪವನ್ನು ಸ್ವೀಕರಿಸಬೇಕು ಎಂದನು ಏಡ್ರಿಯನ್. ಈ ಮಾತುಗಳನ್ನು ನುಡಿದು ಶವಸಂಸ್ಕಾರ ಕರ್ತಹಾಸಿಗೆಯಲ್ಲಿ ಮಲಗಿ, ಬೇಗನೆ ಗೊರಕೆ ಹೊಡೆಯುತ್ತಿದ್ದನು.

ಏಡ್ರಿಯನ್ನನನ್ನು ಎಚ್ಚರಗೊಳಿಸಿದಾಗ ಹೊರಗಡೆ ಇನ್ನೂ ಕತ್ತಲೆ. ವರ್ತಕನ ಹೆಂಡತಿ ಟ್ರ್ಯುಖಿನಾ ರಾತ್ರಿ ಸತ್ತುಹೋಗಿದ್ದಳು. ಅವಳ ಸ್ವಂತ ಸೇವಕನ ಕಡೆಯಿಂದ ಒಬ್ಬ ಸುದ್ದಿಗಾರ ಆ ಸುದ್ದಿಯನ್ನು ಏಡ್ರಿಯನ್ನಿಗೆ ಮುಟ್ಟಿಸಲು ಕುದುರೆಯ ಮೇಲೆ ನಾಗಾಲೋಟದಲ್ಲಿ ಬಂದಿದ್ದನು. ಶವಸಂಸ್ಕಾರ ಕರ್ತನು ಅವನಿಗೆ 'ವೋಡ್ಕ' ಕುಡಿಯಲು ಹತ್ತು 'ಕೊಪೆಕ್'ಗಳ ಬಹುಮಾನವಿತ್ತು, ಆತುರಾತುರವಾಗಿ ಉಡುಪು ಧರಿಸಿಕೊಂಡು, ಒಂದು 'ಡ್ರಾಷ್ಕಿ' ಬಂಡಿಯನ್ನು ಕೂಗಿ ಕರೆದು, ರಾಸ್‌ಗುಲಾಯಿಗೆ ಅದರಲ್ಲಿ ಧಾವಿಸಿದನು. ಮೃತಳ ಮನೆಯ ದ್ವಾರದ ಮುಂದೆ ಆಗಲೆ ಪೋಲೀಸು ಪಹರೆ ಹಾಕಿಬಿಟ್ಟಿತು; ಹೆಣದ ವಾಸನೆ ಹಿಡಿದ ಕಾಗೆಗಳಂತೆ ವರ್ತಕರು ಅತ್ತಿಂದಿತ್ತ ಬಿಂಕದಿಂದ ಸುಳಿದಾಡುತ್ತಿದ್ದರು. ಶವವನ್ನು ಮೇಜಿನ ಮೇಲೆ ಮಲಗಿಸಿದ್ದರು; ಅವಳ ಮೋರೆ ಮೇಣದ ಮುದ್ದೆಯಾಗಿದ್ದರೂ ಮುಖ ಲಕ್ಷಣಗಳು ಕೊಳೆತದಿಂದ

ವಿಕಾರವಾಗಿರಲಿಲ್ಲ. ಬಂಧುಗಳು, ನೆರೆಹೊರೆಯವರು, ಮತ್ತು ಮನೆಗೆಲಸದವರು– ಇವರೆಲ್ಲ ಅವಳ ಸುತ್ತ ಗುಂಪುಗೂಡಿದ್ದರು, ಕಿಟಕಿಗಳೆಲ್ಲವೂ ತೆರೆದಿದ್ದುವು; ಮೋಂಬತ್ತಿಗಳು ಉರಿಯುತ್ತಿದ್ದುವು; ಮೃತಳ ಸದ್ಗತಿಗಾಗಿ ಪಾದ್ರಿಗಳು ಪ್ರಾರ್ಥನೆಗಳನ್ನು ಓದುತ್ತಿದ್ದರು.

ಏಡ್ರಿಯನ್ ಮೃತ ಮಹಿಳೆಯ ಸೋದರಳಿಯನ ಬಳಿಗೆ ಹೋದ; ಆ ತರುಣವರ್ತಕ ಸೊಗಸಾದ ನಿಲುವಂಗಿ ಧರಿಸಿ ನಿಂತಿದ್ದ; ಶವಸಂಪುಟ, ಅದರ ಮೇಲೆ ಹೊದಿಸುವ ವಸ್ತ್ರ, ಮೋಂಬತ್ತಿಗಳು ಮತ್ತು ಶವಸಂಸ್ಕಾರಕ್ಕೆ ಸಂಬಂಧಪಟ್ಟ ಇತರ ಸಾಮಾನು ಸರಂಜಾಮೆಲ್ಲವನ್ನೂ ಸುಸ್ಥಿತಿಯಲ್ಲಿ ಸರಬರಾಯಿ ಮಾಡಲಾಗುವುದೆಂದು ಏಡ್ರಿಯನ್ ಅವನಿಗೆ ತಿಳಿಸಿದನು. ಆ ಉತ್ತರಾಧಿಕಾರಿ ತಾನು ಕರೆಯದ ವಿಚಾರವಾಗಿ ಚೌಕಾಶಿ ಮಾಡುವುದಿಲ್ಲವೆಂದೂ ಶವಸಂಸ್ಕಾರ ನಿರ್ವಾಹಕನ ಮಾತಿನಲ್ಲಿ ಪೂರ್ಣ ವಿಶ್ವಾಸವಿಡುವುದಾಗಿಯೂ ಹೇಳಿ, ಅನ್ಯಮನಸ್ಕನಾಗಿ ಅವನಿಗೆ ವಂದನೆ ಸಲ್ಲಿಸಿದನು. ಶವಸಂಸ್ಕಾರಕರ್ತನು, ತನ್ನ ಪದ್ಧತಿಯ ಪ್ರಕಾರ, ತಾನು ಒಂದು ಕೊಪೆಕ್ಕನ್ನೂ ಹೆಚ್ಚಾಗಿ ಬೆಲೆಹಾಕುವುದಿಲ್ಲವೆಂದು ಹೇಳಿ, ಮೃತಳ ವೈಯಕ್ತಿಕ ಸೇವಕನ ಕೂಡ ಅರ್ಥಪೂರ್ಣ ದೃಷ್ಟಿಯನ್ನು ವಿನಿಮಯಮಾಡಿ, ಸಿದ್ಧತೆಗಳನ್ನು ಮಾಡಲು ಗಾಡಿಯಲ್ಲಿ ಹಿಂದಿರುಗಿದನು. ಆ ದಿನವೆಲ್ಲಾ ಅವನು ರಾಸ್‌ಗುಲಾಯಿ ಮತ್ತು ನಿಕಿಟ್‌ಸ್ಕಿ ದ್ವಾರಗಳ ನಡುವೆ ಗಾಡಿಯಲ್ಲಿ ಅಲ್ಲಿಂದಿಲ್ಲಿಗೆ ಓಡಾಡುತ್ತಲೇ ಇದ್ದನು. ಸಂಜೆಯ ಹೊತ್ತಿಗೆ ಎಲ್ಲ ಒಂದು ವ್ಯವಸ್ಥೆಗೆ ಬಂದಿತು; ಅವನು ಗಾಡಿಯವನನ್ನು ಹೊರಟುಹೋಗುವ ಹಾಗೆ ಹೇಳಿ ನಡೆದುಕೊಂಡೆ ಮನೆಗೆ ಹಿಂದಿರುಗಿದನು. ಅಂದು ಬೆಳುದಿಂಗಳ ರಾತ್ರಿ, ಶವಸಂಸ್ಕಾರ ನಿರ್ವಾಹಕನು ಸುರಕ್ಷಿತವಾಗಿ ನಿಕಿಟ್‌ಸ್ಕಿದ್ವಾರದ ಬಳಿಗೆ ಬಂದನು. ಅವನು 'ಅಸೆನ್‌ಷನ್' ಚರ್ಚನ್ನು* ಹಾದು ಹೋಗುತ್ತಿದ್ದಾಗ ನಮ್ಮ ಗೆಳೆಯ ಯುರ್ಕೋ ಅವನನ್ನು ತಡೆದು ನಿಲ್ಲಿಸಿದನು; ಶವಸಂಸ್ಕಾರಕರ್ತನೆಂದು ಗುರುತಿಸಿದ ಮೇಲೆ ಅವನಿಗೆ ಶುಭ ಕೋರಿಬೀಳ್ಕೊಟ್ಟನು. ರಾತ್ರಿ ತುಂಬ ಹೊತ್ತಾಗಿತ್ತು. ಶವಸಂಸ್ಕಾರ ಕರ್ತನು ತನ್ನ ಮನೆಯನ್ನು ಸಮಿಪಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಯಾರೋ ಗೇಟಿನ ಬಳಿಗೆ ಬಂದು, ಅದನ್ನು ತೆರೆದುಕೊಂಡು, ಅದರ ಮೂಲಕ ಕಣ್ಮರೆಯಾಗಿ ಹೊರಟುಹೋದಂತೆ ಅವನಿಗೆ ತೋರಿತು. "ಏನಿದರ ಅರ್ಥ?" ಎಂದು ಏಡ್ರಿಯನ್ ಅಚ್ಚರಿಗೊಂಡನು. "ನನ್ನ ಆವಶ್ಯಕ ಮತ್ತೆ ಯಾರಿಗಿದ್ದೀತು? ಮನೆಗೆ ನುಗ್ಗಿದ

---

* ಕ್ರಿಸ್ತನಸ್ವರ್ಗಾರೋಹಣದ ಜ್ಞಾಪಕಾರ್ಥವಾಗಿ ಕಟ್ಟಿದ ಚರ್ಚು –ಅನ್ನು

ಕಳ್ಳನಿರಬಹುದೆ? ಅಥವಾ ನನ್ನ ಚಿಕ್ಕ ಮೂರ್ಖರನ್ನು ಭೇಟಿ ಮಾಡಲು ಯಾರಾದರೂ ಯುವಕರು ಬಂದಿದ್ದಿರಬಹುದೆ?'' ತನ್ನ ನೆರವಿಗಾಗಿ ಯುರ್ಕೋವನ್ನು ಕರೆಯಬೇಕೆಂಬ ಆಲೋಚನೆಯೂ ಅವನಿಗೆ ಬಂದಿತು. ಅದೇ ತಾನೇ ಇನ್ನೊಬ್ಬ ವ್ಯಕ್ತಿ ಗೇಟಿನ ಬಳಿ ಸಾರಿ ಪ್ರವೇಶಿಸಲಿದ್ದವನು ಮನೆಯ ಕಡೆ ಅವಸರವಾಗಿ ಬರುತ್ತಿದ್ದ ಶವಸಂಸ್ಕಾರ ನಿರ್ವಾಹಕನನ್ನು ಕಂಡು, ಸ್ತಬ್ಧನಾಗಿ ನಿಂತು, ತನ್ನ ಅಂಚಿಲ್ಲದ ಚೂಪು ಟೋಪಿಯನ್ನು ಮೇಲಕ್ಕೆತ್ತಿದ. ಆತುರದಲ್ಲಿದ್ದ ಏಡ್ರಿಯನ್ನಿಗೆ ಆ ವ್ಯಕ್ತಿಯ ಮುಖವನ್ನು ಹತ್ತಿರದಲ್ಲಿ ಪರೀಕ್ಷಿಸಿ ತಿಳಿಯಲು ಸಾಧ್ಯವಾಗಲಿಲ್ಲ; ಆದರೂ ಆ ಮುಖವನ್ನು ತಾನು ಬಲ್ಲಂತೆ ಭಾವಿಸಿದನು.

ಅವನು ಮೇಲುಸಿರೆಳೆಯುತ್ತ, 'ನೀವು ನನ್ನನ್ನು ನೋಡಲು ಬರುತ್ತಿದ್ದಿರೇನೋ, ಒಳಕ್ಕೆ ದಯಮಾಡಿಸಿ'' ಎಂದನು. ಆ ಅಜ್ಞಾತ ವ್ಯಕ್ತಿ, "ಉಪಚಾರ ಗೀಚಾರ ಬೇಕಿಲ್ಲ, ಮಿತ್ರರೆ. ನೀವು ಮೊದಲು ಒಳಕ್ಕೆ ನಡೆಯಿರಿ, ನಿಮ್ಮ ಅತಿಥಿಗಳಿಗೆ ದಾರಿ ತೋರಿಸಿ–'' ಎಂದು ಕಪಟಧ್ವನಿಯಲ್ಲಿ ನುಡಿದನು. ಏಡ್ರಿಯನ್ ಅತ್ಯವಸರದಲ್ಲಿದ್ದುದರಿಂದ ಉಪಚಾರ ನಿಯಮಗಳಿಗೆ ಗಮನ ಕೊಡುವಂತೆಯೂ ಇರಲಿಲ್ಲ. ಅವನು ಗೇಟಿನ ಅಗುಳಿಯನ್ನು ತೆಗೆದು, ಮೆಟ್ಟಿಲುಗಳನ್ನು ಹತ್ತಿ ಮನೆಗೆ ಹೋದನು; ಇತರರು ಅವನನ್ನು ಹಿಂಬಾಲಿಸಿದರು. ತನ್ನ ಕೋಣೆಗಳಲ್ಲಿ ಜನ ಓಡಾಡುತ್ತಿದ್ದಾರೆಂದು ಏಡ್ರಿಯನ್ನಿಗೆ ಭಾಸವಾಯಿತು. ಒಳಕ್ಕೆ ಹೋಗುವ ಆತುರದಲ್ಲಿ ಅವನು, "ಇದೇನು ಅಧ್ವಾನ! ಒಂದೂ ಅರ್ಥವಾಗುವುದೇ ಇಲ್ಲವಲ್ಲಾ!'' ಎಂದು ಆಲೋಚಿಸುತ್ತಿರುವಂದು...... ಅವನ ಕಾಲು ಕುಸಿಯಿತು. ಕೋಣೆಯ ತುಂಬ ಹೆಣಗಳು! ಕಿಟಕಿಯ ಮೂಲಕ ಚಂದ್ರ ತೂರಿ ಬಂದು ಅವುಗಳ ಹಳದಿಯಾದ ಹಾಗೂ ನೀಲಿಗಟ್ಟಿದ ಮೋರೆಗಳನ್ನೂ, ಜೋತುಬಿದ್ದ ಬಾಯಿಗಳನ್ನೂ, ಮಂಕಾದ ಅರೆಮುಚ್ಚಿ ಕಣ್ಣುಗಳನ್ನೂ ಮೇಲಕ್ಕೆದ್ದ ಮೂಗುಗಳನ್ನೂ ಬೆಳಗುತ್ತಿದ್ದನು........ ಯಾರನ್ನೂ ಸಮಾಧಿ ಮಾಡಲು ತಾನು ನೆರವಾಗಿದ್ದನೋ ಅವರನ್ನೆಲ್ಲ ಗುರುತಿಸಿ ಏಡ್ರಿಯನ್ ಭಯಗೊಂಡನು; ತನ್ನೊಡನೆ ಒಳಕ್ಕೆ ಬಂದವನು, ಸುರಿಯುವ ಮಳೆಯಲ್ಲಿ ಸಮಾಧಿಗೊಂಡ ದಳಪತಿಯಾಗಿದ್ದನು. ಅಲ್ಲಿದ್ದ ಸ್ತ್ರೀಪುರುಷರಾದಿಯಾಗಿ ಎಲ್ಲರೂ ಶವಸಂಸ್ಕಾರ ನಿರ್ವಾಹಕನಿಗೆ ಬಾಗಿ ನಮಸ್ಕಾರ ಹೇಳುತ್ತ ಅವನ ಸುತ್ತ ಗುಂಪುಗೂಡಿದರು; ಒಬ್ಬ ಬಡಪ್ರಾಣಿ ಮಾತ್ರ ಹತ್ತಿರಕ್ಕೆ ಬಾರದೆ ತನ್ನ ಹರುಕಲು ಉಡುಪಿಗಾಗಿ ಲಜ್ಜೆಗೊಂಡವನಂತೆ ಕೋಣೆಯ ಒಂದು ಮೂಲೆಯಲ್ಲಿ ನಮ್ರನಾಗಿ ನಿಂತಿದ್ದನು; ಸ್ವಲ್ಪ ಕಾಲದ ಹಿಂದೆ ರುಸುಮು ತೆಗೆದುಕೊಳ್ಳದೆ ಅವನನ್ನು ಸಮಾಧಿ ಮಾಡಲಾಗಿತ್ತು. ಅವನನ್ನುಳಿದು ಮತ್ತೆಲ್ಲರೂ

ಅಚ್ಚುಕಟ್ಟಾಗಿ ಉಡುಪು ಧರಿಸಿದ್ದರು: ಹೆಂಗಸರು ಪಟ್ಟಿಪಟ್ಟಿಗಳಿಂದ ಅಲಂಕೃತವಾದ ಟೋಪಿಗಳನ್ನು ಧರಿಸಿದ್ದರು; ಸತ್ತ ಅಧಿಕಾರಿಗಳು ಸಮವಸ್ತ್ರ ತೊಟ್ಟಿದ್ದರು, ಆದರೆ ಕ್ಷೌರಮಾಡಿಸಿಕೊಂಡಿರಲಿಲ್ಲ; ವರ್ತಕರು ಅತ್ಯುತ್ತಮ ನಿಲುವಂಗಿಯನ್ನು ಹಾಕಿದ್ದರು. "ಇಲ್ಲಿ ನೋಡಯ್ಯಾ, ಪ್ರೊಖೊರಾಫ್ ನಿನ್ನ ಆಹ್ವಾನವನ್ನು ಅಂಗೀಕರಿಸಲು ನಾವೆಲ್ಲ ಎದ್ದು ಬಂದಿದ್ದೇವೆ. ಪೂರ್ತಿ ನಿಸ್ಸಹಾಯರಾದವರು, ಪೂರ್ತಿ ಕೊಳೆತುಹೋಗಿರುವವರು–ಇವರು ಮಾತ್ರ ಹಿಂದುಳಿದಿದ್ದಾರೆ; ಹಾಗೆಯೇ ಮಾಂಸವಿಲ್ಲದ ಮೂಳೆಯಲ್ಲದೆ ಇನ್ನೇನೂ ಇಲ್ಲದವರು ಕೂಡ ಬರಲಾಗಿಲ್ಲ; ಇಂಥವರಲ್ಲಿ ಒಬ್ಬ ಮಾತ್ರ ಬರದೆ ಇರಲಾಗಲ್ಲ, ನಿನ್ನನ್ನು ನೋಡಲು ಆತ ಅಷ್ಟು ಆಸಕ್ತಿ ಹೊಂದಿದ್ದ.........." ಎಂದು ಅಲ್ಲಿ ನೆರೆದಿದ್ದವರೆಲ್ಲರ ಪರವಾಗಿ ದಳಪತಿ ಮಾತಾಡಿದನು.

ಆ ಸಮಯಕ್ಕೆ ಸರಿಯಾಗಿ ಒಂದು ಚಿಕ್ಕ ಅಸ್ಥಿಪಂಜರ ಗುಂಪಿನ ನಡುವೆ ಮೊಳಕೈಯಿಂದ ದಾರಿಬಿಡಿಸಿಕೊಂಡು ಬಂದು ಏಡ್ರಿಯನನ್ನು ಸಮೀಪಿಸಿತು. ಅದರ ಮಾಂಸರಹಿತಮುಖ ಏಡ್ರಿಯನ್ನಿನ ಕಡೆ ಆದರ ಪೂರ್ವಕವಾಗಿ, ಓರೆ ನೋಟದಿಮದ ನೋಡಿತು. ಅಚ್ಚಹಸುರು ಮತ್ತು ಕೆಂಪಿನ ಬಟ್ಟೆಯ ಹಾಗೂ ದಾರ ಕಾಣುವಂತೆ ನಮೆದ ವಸ್ತ್ರದ ಪಟ್ಟಿಗಳು ಗಣಿಗೆ ಕಟ್ಟಿದ್ದರೆ ಹೇಗೋ ಹಾಗೆ ಅದರಿಂದ ಅಲ್ಲಲ್ಲಿ ತೂಗಾಡುತ್ತಿದ್ದುವು; ಎತ್ತರವಾದ ಸವಾರಿಬೂಡ್ಸುಗಳೊಳಗೆ ಅದರ ಮೊಳಕಾಲ ಮೂಳೆಗಳು ಒರಳೊಳಗಿನ ಒನಕೆಯಂತೆ ಲಟಪಟ ಸದ್ದು ಮಾಡುತ್ತಿದ್ದುವು. "ನನ್ನ ಗುರುತು ಸಿಕ್ಕಲಿಲ್ಲವೆ. ಪ್ರೊಖೊರಾಫ್? ೧೭೯೯ರಲ್ಲಿ ನಿನ್ನ ಮೊದಲನೆಯ ಶವಸಂಪುಟವನ್ನು ಮಾರಿದೆಯಲ್ಲ (ಅದು ಜಾಯಿಕಾಯಿ ಮರದ್ದು; ನೀನು ಓಕ್ ಮರದ್ದೆಂದು ಹೇಳಿದ್ದೆ), ಆ ಕಾವಲು ದಳದ ನಿವೃತ್ತ 'ಸಾರ್ಜೆಂಟ್' ಪ್ಯೋಟರ್ ಪೆಟ್ರೋವಿಚ್ ಕ್ಯುರಿಲ್‌ಕಿನ್, ಆ ಮನುಷ್ಯನೇ ನಾನು' ಎಂದು ಆ ಅಸ್ಥಿಪಂಜರ ಹೇಳಿ, ಮೂಳೆಯಾಲಿಂಗನಕ್ಕಾಗಿ ತನ್ನ ತೋಳುಗಳನ್ನು ಚಾಚಿತು; ಏಡ್ರಿಯನ್ ತನ್ನ ಬಲವನ್ನೆಲ್ಲ ಕೂಡಿಸಿಕೊಂಡು ಗಟ್ಟಿಯಾಗಿ ಕೂಗುತ್ತ ಅಸ್ಥಿಪಂಜರವನ್ನು ದೂರಕ್ಕೆ ದೂಡಿದನು, ಪ್ಯೋಟರ್ ಪೆಟ್ರೂವಿಜ್ ಅತ್ತಿತ್ತ ತೂಗಾಡಿ, ಕಾಲುತಪ್ಪಿದ್ದ ಮೂಳೆಗಳ ರಾಶಿಯಾಗಿ ನೆಲದಮೇಲೆ ಬಿದ್ದನು. ಶವಗಳ ಕಡೆಯಿಂದ ಒಂದು ಕ್ರೋಧದ ಹುಂಕಾರ ಮೇಲೆದ್ದಿತು. ಎಲ್ಲರೂ ತಮ್ಮ ಸಂಗಡಿಗನ ಗೌರವವನ್ನು ರಕ್ಷಿಸಲು ಆಸಕ್ತರಾಗಿ, ಏಡ್ರಿಯನ್ನನ್ನು ಶಪಿಸುತ್ತ ಬೆದರಿಸುತ್ತ ಅವನ ಮೇಲೆ ಬೀಳಲು ಹೋದರು. ನಿರ್ಭಾಗ್ಯನಾದ ಆತಿಥೇಯನು ಅವರ ಕೂಗಾಟಗಳಿಂದ ಕಿವುಡಾಗಿಹೋಗಿ, ಅವರ ಮುತ್ತಿಗೆಯಿಂದ ಬಹುಮಟ್ಟಿಗೆ

ನಜ್ಜುಗುಜ್ಜಾಗಿ, ತನ್ನ ಮನಶ್ಶಾಂತಿಯನ್ನೂ ಚಿತ್ತಸ್ಥೈರ್ಯವನ್ನೂ ಕಳೆದುಕೊಂಡು, ಮೃತನಾಗಿದ್ದ ಪಹರೆದಳದ ಸೈನಿಕನ ಮೂಳೆಗಳ ಮೇಲೆ ಪ್ರಜ್ಞಾ ಶೂನ್ಯವಾಗಿ ಬಿದ್ದು ಬಿಟ್ಟನು.

ಶವಸಂಸ್ಕಾರ ನಿರ್ವಾಹಕನು ಮಲಗಿದ್ದ ಹಾಸಿಗೆಯನ್ನು ಸೂರ್ಯಕಿರಣಗಳು ಬೆಳಗುತ್ತಿದ್ದುವು. ಕಡೆಗೆ ಅವನು ಕಣ್ಣು ತೆರೆದನು; ಚಹಾ ಕುದಿಸುವ ಪಾತ್ರೆಯ ಕೆಳಗಣ ಕೆಂಡಗಳ ಮೇಲೆ ಬೆಂಬೂದಿಯನ್ನು ಕೆಲಸಗಿತ್ತಿ ಊದುತ್ತಿದ್ದಳು. ಏಡ್ರಿಯನ್ ರಾತ್ರಿಯ ಘಟನೆಗಳನ್ನು ಭಯಭ್ರಾಂತನಾಗಿ ನೆನೆದನು. ಟ್ರ್ಯುಖಿನಾ, ದಳಪತಿ, ಸಾರ್ಜೆಂಟ್ ಕ್ಯುರಿಲ್ಕಿನ್–ಇವರು ಇವನ ಭಾವನಾಲೋಕದಲ್ಲಿ ಕಾಡತೊಡಗಿದರು. ಕೆಲಸದವಳು ಸಂಭಾಷಣೆಯನ್ನು ಮೊದಲು ಮಾಡಿ, ರಾತ್ರಿಯ ಅದ್ಭುತ ಘಟನೆಗಳ ಪರಿಣಾಮವೇನಾಯಿತೆಂಬುದನ್ನು ಹೇಳಲೆಂದು ಮೌನವಾಗಿ ಕಾದಿದ್ದನು.

ಅವನು ಬೆಳಗ್ಗೆ ಧರಿಸುವ ನಿಲುವಂಗಿಯನ್ನು ಅವನಿಗೆ ಕೊಡುತ್ತ ಅಕ್ಸಿನ್ಯ ನುಡಿದಳು:

"ರಾತ್ರಿ ಎಷ್ಟು ತಡವಾಗಿ ಮಲಗಿದಿರಿ, ನೀವು? ಆಚೆ ಮನೆಯ ದರ್ಜಿ ನಿಮ್ಮನ್ನು ನೋಡಲು ಬಂದಿದ್ದರು; ಇವೊತ್ತು ಪೊಲೀಸು ಇನ್‌ಸ್ಪೆಕ್ಟರ ನಾಮಕರಣ ದಿನ* ಎಂದು ತಿಳಿಸಲು ಪೊಲೀಸು ಕಾನ್‌ಸ್ಟೆಬಲು ಓಡಿಬಂದ; ಆದರೆ ನೀವು ನಿದ್ದೆಹೋಗುತ್ತಿದ್ದಿರಿ. ನಿಮ್ಮನ್ನು ಎಚ್ಚರಗೊಳಿಸಲು ಇಷ್ಟಪಡಲಿಲ್ಲ.."

"ಸತ್ತುಹೋದಳಲ್ಲ, ಆ ವಿಧವೆ ಟ್ರ್ಯುಖಿನಾ, ಅವಳ ಕಡೆಯಿಂದ ಯಾರಾದರೂ ಬಂದಿದ್ದರೆ?"

"ಟ್ರ್ಯುಖಿನಾ? ಏನು, ಅವಳು ಸತ್ತುಹೋದಳೆ?"

"ಎಂಥ ಮೂರ್ಖಳು ನೀನು ಅವಳ ಶವಸಂಸ್ಕಾರಕ್ಕೆ ವ್ಯವಸ್ಥೆ ಮಾಡಲು ನಿನ್ನೆ ನೀನು ನನಗೆ ಸಹಾಯಮಾಡಲಿಲ್ಲವೆ?"

"ನಿಮಗೆ ಹುಚ್ಚು ಹಿಡಿಯಿತೋ ಹೇಗೆ? ಇಲ್ಲ ನಿನ್ನೆಯ ಕುಡಿತದ ಕಾವು ಇನ್ನೂ ನಿಮಗೆ ಹತ್ತಿಕೊಂಡಿದೆಯೋ? ನಿನ್ನೆ ಯಾವ ಶವಸಂಸ್ಕಾರವೂ ಇರಲಿಲ್ಲ. ನಿನ್ನೆ ದಿನಪೂರ್ತಿ ಆ ಜರ್ಮನರವನ ಮನೆಯಲ್ಲಿ ಹಬ್ಬದೂಟ ಹೊಡೆದಿರಿ; ಕಂಠಪೂರ್ತಿ ಕುಡಿದು ಹಿಂದಿರುಗಿ ಹಾಸಿಗೆಯ ಮೇಲೆ ಬಿದ್ದುಕೊಂಡಿರಿ; ಇಲ್ಲಿಯವರೆಗೂ ನಿದ್ದೆ ಮಾಡಿದಿರಿ; ಚರ್ಚಿನ ಆರಾಧನೆಯ ಗಂಟೆ ಹೊಡೆದು ಹೊಡೆದು ನಿಂತಿತು."

---

* ಯಾವ ಸಂತನ ಹೆಸರಿಟ್ಟುಕೊಂಡಿರುತ್ತಾರೆಯೋ ಆ ಸಂತನ ದಿನ್ನ

ಮನಸ್ಸಿನ ಹೊರೆ ಇಳುಹಿದಂತಾಗಿ, "ನಾನು ಇದುವರೆಗೂ ನಿದ್ದೆಮಾಡಿದೆನೆ? " ಎಂದನು, ಶವಸಂಸ್ಕಾರ ನಿರ್ವಾಹಕ.

"ಹೌದು ಮತ್ತೆ" ಎಂದಳು ಕೆಲಸದವಳು.

"ಹಾಗಿದ್ದ ಪಕ್ಷದಲ್ಲಿ, ಎಲ್ಲಿ ಬೇಗ ಬೇಗ ಚಹಾ ತೆಗೆದುಕೊಂಡು ಬಾ; ಕುಮಾರಿಯನ್ನು ಕೂಗು."

೮. ಅಂಚೆ ಯಜಮಾನ

(The Post Master)

ಆತ ಗ್ರಾಮ ಸಲಹೆಗಾರ,
ಅಂಚೆಮನೆಯ ಅಂಕೆಯುಲ್ಲದಧಿಕಾರಿ

–ಪ್ರಿನ್ಸ್ ವ್ಯಾಸೆಮ್ಸ್ಕಿ*

---

*೧೯ನೆಯ ಶತಮಾನದ ಒಬ್ಬಕವಿ

ಅಂಚೆನಿಲ್ದಾಣದ ಯಜಮಾನನನ್ನು* ಎಂದೂ ಶಪಿಸದ, ಅಥವಾ ಆತನೊಂದಿಗೆ ಎಂದೂ ಕಚ್ಚಾಡದ ಮನುಷ್ಯನನ್ನು ನನಗೆ ತೋರಿಸಿ ಕೊಡಿ; ಮನಸ್ವೀವರ್ತನೆ, ಅಸಭ್ಯತೆ ಕಾಲನಿಯಮವನ್ನು ಮೀರುವುದು–ಈ ನಿರರ್ಥಕವಾದ ದೂರುಗಳನ್ನು ಬರೆದಿಡಲು ಆ ಹಾನಿಕಾರಿಯಾದ ಪುಸ್ತಕವನ್ನು ಕ್ರೋಧಾವೇಶದ ಭರದಲ್ಲಿ ಕೇಳದಿರುವ ಮನುಷ್ಯನನ್ನು ತೋರಿಸಿಕೊಡಿ ; ಅಂಚೆಯ ಯಜಮಾನರನ್ನು ಮನುಷ್ಯಾಕೃತಿಯ ರಾಕ್ಷಸರೆಂದು, ಬದುಕಿದ ಕೂಟಕ್ಕೆ ಸೇರದ ಕೆಲವು ಅಧಿಕಾರಗಳಿಗೆ ಸಮನೆಂದು, ಏನಿಲ್ಲವೆಂದರೂ 'ಮ್ಯುರೊಮ್' ದರೋಡೆಕೋರರಿಗಿಂತ ಮೇಲಲ್ಲವೆಂದು ಪರಿಗಣಿಸದೆ ಇರುವ ಒಬ್ಬ ಮನುಷ್ಯನನ್ನು ತೋರಿಸಿಕೊಡಿ. ಹೀಗಿದ್ದರೂ, ನಾವು ನ್ಯಾಯ ಪರರಾಗಿರಲು ಪ್ರಯತ್ನಿಸುತ್ತೇವೆ; ಅವರ ಸ್ಥಾನದಲ್ಲಿ ನಾವು ಇರುವಂತೆ ಭಾವಿಸುತ್ತೇವೆ; ಆಗ, ಬಹುಶಃ ಹೆಚ್ಚಿನ ದಯೆ ದಾಕ್ಷಿಣ್ಯಗಳಿಂದ ಅವರನ್ನು ತೂಗಿನೋಡಲು ಸಾಧ್ಯವಾದೀತು.

ಅಂಚೆ ಯಜಮಾನನೆಂದರೆ ಯಾರು ? ಸಣ್ಣ ಪುಟ್ಟ ಅಧಿಕಾರಿಗಳಲ್ಲಿ ಆತನೊಬ್ಬ ಆಹುತಾತ್ಮನೇ ಸರಿ ; ಕೈ ಏಟುಗಳಿಂದಲೂ ಮುಷ್ಟಿ ಪ್ರಹಾರಗಳಿಂದಲೂ ಆತನನ್ನು ರಕ್ಷಿಸಿರುವುದೆಂದರೆ, ಆತನ ಈ ಅಧಿಕಾರದ ದರ್ಜೆ ; ಇದು ಕೂಡ ಆತನನ್ನು ಯಾವಾಗಲೂ ಕಾಪಾಡುವುದಿಲ್ಲ. (ಈ ವಿಷಯದಲ್ಲಿ ನಾನು ವಾಚಕರ ಆತ್ಮಸಾಕ್ಷಿಯ ಮರೆಹೋಗುತ್ತೇನೆ) ಪ್ರಿನ್ಸ್ ವ್ಯಾಸೆಂಸ್ಕಿ ಆತನನ್ನು ವಿನೋದವಾಗಿ ಕರೆದಿರುವಂತೆ, ಈ ನಿರಂಕುಶಾಧಿಕಾರಿಯ ಪಾಡು ಎಷ್ಟು ಕಠಿನ ? ಆತನ ಕೆಲಸ ವಾಸ್ತವವಾಗಿ ಕಠಿನ ಸಜವಲ್ಲವೆ? ಹಗಲಾಗಲಿ ಇರುಳಾಗಲಿ ವಿಶ್ರಾಂತಿಯೆಂಬುದೇ ಇಲ್ಲ ! ಪ್ರಯಾಣಿಕನು ತನ್ನ ಬೇಸರದ ಪ್ರಯಾಣದಲ್ಲಿ ತುಂಬಿಕೊಂಡ ಮನಃಕ್ಲೇಶಗಳನ್ನೆಲ್ಲ ಅಂಚೆಯಜಮಾನನ ಮೇಲೆ ಹರಿಯಬಿಡುತ್ತಾನೆ. ಹವ :

---

* ಈತ ಕೇವಲ ಈಗಿನ ಕಾಲದ 'ಪೋಸ್ಟ್ ಮಾಸ್ಟರ್' ಅಲ್ಲ. ಪಾಶ್ಚಾತ್ಯದೇಶಗಳಲ್ಲಿ ಹಿಂದೆ ಪ್ರಯಾಣಮಾರ್ಗಗಳಲ್ಲಿ ಅಲ್ಲಲ್ಲಿಗೆ 'ಮಜಲು'ಗಳು ಅಥವಾ 'ಟಪ್ಪಾ'ಗಳು ಇರುತ್ತಿದ್ದುವು. ಪ್ರತಿ ಮಜಲಿನಲ್ಲೂ ಒಬ್ಬ ಅಧಿಕಾರಿಯ ವಶದಲ್ಲಿ ಕುದುರೆಗಳೂ, ಕುದುರೆ ಬಂಡಿಯೂ ಇರುತ್ತಿದ್ದುವು. ಆಗ ಅಂಚೆಯ ಕಾಗದಗಳನ್ನು ಕುದುರೆ ಸವಾರರು ಒಯ್ಯುತ್ತಿದ್ದರು. ಈ ಅಂಚೆಯ ನಿಲ್ದಾಣದ ಯಜಮಾನ ಅಂಚೆ ಕಾಗದಗಳನ್ನು ರವಾನಿಸುದರ ಜೊತೆಗೆ, ಪ್ರಯಾಣಿಕರಿಗೂ ಅಂಚೆ ಒಯ್ಯುವ ಮತ್ತು ಇತರ ಕುದುರೆ ಸವಾರರಿಗೂ ಅವರು ಅಪೇಕ್ಷಿಸಿದಾಗ ಕುದುರೆ ಬದಲಾಯಿಸಿಕೊಳ್ಳಲು ವ್ಯವಸ್ಥೆ ಮಾಡಬೇಕಾಗಿದ್ದಿತು. ಈ ಸಂಬಂಧದ ದಾಖಲೆಗಳನ್ನೆಲ್ಲ ಬರೆದಿಡಬೇಕಾಗಿತ್ತು–ಅನು.

ರೌದ್ರವಾಗಿದೆ, ರಸ್ತೆಗಳು ಕುಲಗೆಟ್ಟು ಹೋಗಿವೆ, ಬಂಡಿ ಹೊಡೆಯುವವನು ಮೊಂಡ, ಕುದುರೆಗಳು ಮೈಗಳ್ಳ–ಈ ಎಲ್ಲಕ್ಕೂ ಅಂಚೆಯಜಮಾನ ಹೊಣೆ ಹೊರಬೇಕು. ಅವನ ಬಡ ಕುಟೀರವನ್ನು ಪ್ರವೇಶಿಸುವ ಪ್ರಯಾಣಿಕನು ಅವನನ್ನು ಹಗೆಯೆಂದು ಎಣಿಸುತ್ತಾನೆ ; ಈ ಆಹ್ವಾನಿಸದ ಅತಿಥಿಯನ್ನು ಆದಷ್ಟು ಬೇಗ ತೊಲಗಿಸಿಕೊಳ್ಳುವುದರಲ್ಲಿ ಯಶಸ್ವಿಯಾದರೆ ಅಂಚೆ ಯಜಮಾನನು ಭಾಗ್ಯಶಾಲಿಯೇ ಸರಿ. ಒಂದು ವೇಳೆ, ಕುದರೆಗಳೇನಾದರೂ ದೊರಕದೆ ಹೋಗುವ ಸಂಭವವಿದ್ದರಂತೂ ಆಯಿತು ಅವನ ತಲೆಯ ಮೇಲೆ ಅದೆಷ್ಟು ಆಣೆ ಪ್ರತಿಜ್ಞೆ ಬೆದರಿಕೆಗಳ ಸುರಿಮಳೆ ಸುರಿಯುತ್ತದೆಯೋ, ದೇವರಿಗೇ ಪ್ರೀತಿ ! ಮಳೆಯಲ್ಲೂ ಕೆಸರಿನಲ್ಲೂ ಆತ ಮನೆಯಿಂದ ಮನೆಗೆ ಓಡಾಡಬೇಕು ; ಬಿರುಗಾಳಿ ಮಳೆ ಭೋರ್ಗರೆಯುತ್ತಿರುವಾಗಲೂ ಜನವರಿ ತಿಂಗಳ ಹಿಮವರ್ಷದಲ್ಲೂ ಆತ ಕೈಸಾಲೆಗೆ ಹೋಗಿನಿಲ್ಲುತ್ತಾನೆ–ಕ್ರುದ್ಧ ಪ್ರಯಾಣಿಕನ ಕೂಗಾಟ ನೂಕಾಟಗಳಿಂದ ತಪ್ಪಿಸಿಕೊಂಡು ಕೇವಲ ಒಂದು ಕ್ಷಣಕಾಲವಾದರೂ ವಿಶ್ರಾಂತಿ ಪಡೆಯುವುದಕ್ಕಾಗಿ ಮಾತ್ರ. ಒಬ್ಬ ಸೇನಾಪತಿ ಬರುತ್ತಾನೆ : ಕಂಪಿಸುತ್ತಿರುವ ಅಂಚೆಯ ಯಜಮಾನ ತನ್ನಲ್ಲಿರುವ ಉಳಿದ ಕಡೆಯೆರಡು 'ಟ್ರಾಯ್ಕ' (ಮೂರು ಕುದುರೆಯ) ಬಂಡಿಗಳನ್ನು ಅವನಿಗೆ ಕೊಡುತ್ತಾನೆ ; ಅವುಗಳಲ್ಲಿ ಒಂದು ಅಂಚೆಯ ಕಾಗದಗಳನ್ನೊಯ್ಯುವ ಬಂಡಿಗಾಗಿ ಕಾದಿಡಬೇಕಾದದ್ದು. ಒಂದು ವಂದನೆಯ ಮಾತನ್ನೂ ಸಲ್ಲಿಸದೆ ಸೇನಾಪತಿ ತೆರಳುತ್ತಾನೆ. ಐದು ನಿಮಿಷಗಳ ತರುವಾಯ ಗಂಟೆಗಳ ಸದ್ದು ಕೇಳಿಬರುತ್ತದೆ; ಸರಕಾರದ ಹರಿಕಾರನೊಬ್ಬ ಹೊಸ ಕುದುರೆಗಳನ್ನು ಕೋರುವ ಆಜ್ಞಾ ಪತ್ರವೊಂದನ್ನು ಮೇಜಿನ ಮೇಲೆ ಎಸೆಯುತ್ತಾನೆ. ಈ ಸಂದರ್ಭಗಳನೆಲ್ಲಾ ನೋಡಿ.......ಬದಲು, ನಿಮ್ಮ ಹೃದಯ ನಿಜವಾದ ಮರುಕದಿಂದ ತುಂಬುತ್ತದೆ. ಈ ವಿಷಯವಾಗಿ ಇನ್ನು ಕೆಲವು ಮಾತು : ಇಪ್ಪತ್ತು ವರ್ಷಕಾಲದಲ್ಲಿ ನಾನು ರಷ್ಯದಲ್ಲೆಲ್ಲಾ ಪ್ರಯಾಣ ಮಾಡಿದ್ದೇನೆ. ಬಹುಮಟ್ಟಿಗೆ ಅಂಚೆಯ ಮಾರ್ಗಗಳೆಲ್ಲ ನನಗೆ ಗೊತ್ತು ; ಬಂಡಿ ಹೊಡೆಯುವವರ ಅನೇಕ ತಲೆಮಾರುಗಳ ಪರಿಚಯ ನನಗಿದೆ ; ನನಗೆ ಗೊತ್ತಿಲ್ಲದ, ನಾನು ವ್ಯವಹಾರ ಇಟ್ಟುಕೊಳ್ಳದೆ ಹೋದ, ಒಬ್ಬ ಅಂಚೆ ಯಜಮಾನನೂ ಇಲ್ಲ; ಪ್ರಯಾಣಕಾಲದಲ್ಲಿ ನಾನು ಶೇಖರಿಸಿರುವ ಸ್ವಾರಸ್ಯವಾದ ಅನುಭವ ಸಂಗತಿಗಳ ಸರಕನ್ನು ಬೇಗನೆಯೇ ಪ್ರಕಟಿಸುವ ನಿರೀಕ್ಷೆ ಹೊಂದಿದ್ದೇನೆ; ಸದ್ಯಕ್ಕೆ, ಈ ಅಂಚೆ ಯಜಮಾನರ ಬಳಗದಬಗ್ಗೆ ಸಾರ್ವಜನಿಕರಿಗೆ ವಿಪರೀತ ತಪ್ಪು ತಿಳಿವಳಿಕೆಯುಂಟಾಗಿದೆಯೆಂದು ಮಾತ್ರ ತಿಳಿಸುತ್ತೇನೆ. ಹೀಗೆ ಬಹಳ ನಿಂದೆಗೆ ಗುರಿಯಾದ ಅಂಚೆ ಯಜಮಾನರು ಸರ್ವ ಸಾಮಾನ್ಯವಾಗಿ

ಶಾಂತಿಪ್ರಿಯರಾದ ಜನ, ದಯಾ ದಾಕ್ಷಿಣ್ಯವುಳ್ಳ ಪ್ರಕೃತಿಯುಳ್ಳವರು, ಸ್ನೇಹ ಸೌಹಾರ್ದಪರರು ; ತಮಗೆ ಸಲ್ಲಬೇಕಾದದ್ದರ ವಿಷಯದಲ್ಲಿ ಅತಿಶಯ ಭಾವನೆಯುಳ್ಳವರಲ್ಲ ; ಮತ್ತು ಎಂದಿಗೂ ಲೋಭಬುದ್ಧಿಯುಳ್ಳವರಲ್ಲ. ಅವರ ಸಂಭಾಷಣೆಯಿಂದ ವಿಚಿತ್ರವಾದ ಹಾಗೂ ಬೋಧಪ್ರದವಾದ ಎಷ್ಟೋ ವಿಷಯಗಳನ್ನು ಸಂಗ್ರಹಿಸಬಹುದು; ಅನೇಕ ಮಾನ್ಯ ಪ್ರಯಾಣಿಕರು ಹಾಗೆ ಮಾಡದೆ ಉಪೇಕ್ಷೆಮಾಡಿ ಒಂದು ದೊಡ್ಡ ತಪ್ಪು ಮಾಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ಸರ್ಕಾರಿ ಕೆಲಸದ ಮೇಲೆ ಪ್ರಯಾಣಮಾಡುವ ನಿಮ್ಮ ಎರಡನೆಯ ದರ್ಜೆಯ ಅಧಿಕಾರಿಗಳ ಭಾಷಣಗಳಿಗಿಂತ ಅವರ ಸಂಭಾಷಣೆಯನ್ನೆ ಹೆಚ್ಚು ಇಷ್ಟಪಡುತ್ತೇನೆ ಎಂದು ಒಪ್ಪಿಕೊಳ್ಳುತ್ತೇನೆ.

ಗೌರವ ಯೋಗ್ಯರಾದ ಈ ಅಂಚೆ ಯಜಮಾನರ ಬಳಗದಲ್ಲಿ ನನ್ನ ಮಿತ್ರರಿದ್ದಾರೆ ಎಂದು ಸುಲಭವಾಗಿ ಊಹಿಸಬಹುದಾಗಿದೆ. ವಾಸ್ತವಾಗಿ ಅವರ ಪೈಕಿ ಒಬ್ಬಾತನ ನೆನಪು ನನಗೆ ಅತ್ಯಮೂಲ್ಯವೆನಿಸಿದೆ. ನನ್ನ ಜೀವನದ ಒಂದೂ ನಿರ್ದಿಷ್ಟಕಾಲದಲ್ಲಿ ಸಂದರ್ಭವಶದಿಂದ ನಾವಿಬ್ಬರೂ ಒಟ್ಟು ಸೇರಿದ್ದೆವು ; ಆತನ ಕಥೆಯೇ ನನ್ನ ಸಹೃದಯರಾದ ವಾಚಕರಿಗೆ ಈಗ ನಾನು ಹೇಳಬೇಕೆಂದು ಉದ್ದೇಶಿಸಿರುವುದು.

೧೮೧೬ರ ಮೇ ತಿಂಗಳಲ್ಲಿ ನಾನು 'ಏಕ್ಸ್' (ಎಕ್ಸ್)–ಪ್ರಾಂತದಲ್ಲಿ ಒಂದು ಮಾರ್ಗದ ಮೂಲಕ ಸಂಚಾರ ಮಾಡಬೇಕಾದ ಸಂದರ್ಭವೊದಗಿತ್ತು ; ಈಗ ಆ ಮಾರ್ಗವೇ ಇಲ್ಲ. ನಾನು ಒಬ್ಬ ಚಿಕ್ಕ ಅಧಿಕಾರಿಯ ಹುದ್ದೆಯಲ್ಲಿದ್ದೆ ; ನಾನು ಸಂಚರಿಸುತ್ತಿದ್ದುದು ಅಂಚೆಯ ಮಾರ್ಗದಲ್ಲಿ ; ನನ್ನ ಅನುಕೂಲಕ್ಕೆ ಎರಡು ಕುದುರೆಗಳನ್ನು ಪಡೆಯಲು ಮಾತ್ರ ಸಾಕಾಗುತ್ತಿತ್ತು. ಮೊದಲೇ ತಾರುಣ್ಯ, ಜೊತೆಗೆ ಉದ್ರೇಕದ ಸ್ವಭಾವ ; ಈ ಕಾರಣದಿಂದ, ಯಾವನೋ ಒಬ್ಬ ಅಂಚೆಯ ಯಜಮಾನ ನನ್ನ ಉಪಯೋಗಕ್ಕೆಂದು ಸಜ್ಜಾಗಿದ್ದ ಕುದುರೆಗಳನ್ನು ಯಾರೋ ಉನ್ನತಾಧಿಕಾರಿಗೆ ಕೊಟ್ಟಾಗ ಆ ಅಂಚೆಯಜಮಾನನ ಕ್ಷುದ್ರತನ ಹೇಡಿತನಗಳನ್ನು ಕಂಡು ನಾನು ಕೆರಳಿದ್ದೆ. ಗೌರ್ನರರ ಭೋಜನ ಪಂಕ್ತಿಯಲ್ಲಿ ಭಕ್ಷ್ಯಭೋಜ್ಯಗಳನ್ನು ಬಡಿಸುವಾಗ ಪ್ರಚಂಡ ಬುದ್ಧಿಯ ಒರಟು ಪರಿಚಾರಕನೊಬ್ಬನು ನನ್ನನ್ನು ಉಪೇಕ್ಷೆಮಾಡಿ ಬಡಿಸದೆ ಮುಂದಕ್ಕೆ ಹೋದಾಗ, ಆ ತಾತ್ಸಾರಕ್ಕೆ ಹೊಂದಿಕೊಳ್ಳಲು ಬಹಳಕಾಲ ಹಿಡಿಯಿತು. ಈಗ ಈ ಎರಡು ಸನ್ನಿವೇಶಗಳೂ ಯಥಾಕ್ರಮದಲ್ಲಿರುವಂತೆ ನನಗೆ ತೋರುತ್ತಿವೆ. 'ಪದವಿ ಪದವಿಗೆ ಮಣಿಯಲಿ' ಎಂದೂ ಈಗ ಸಾರ್ವತ್ರಿಕವಾಗಿ ಅಂಗೀಕೃತವಾಗಿರುವ ನಿಯಮಕ್ಕೆ ಬದಲಾಗಿ

'ಮನಸ್ಸು ಮನಸ್ಸಿಗೆ ಮಣಿಯಲಿ' ಎಂಬ ನಿಯಮ ಬಳಕೆಗೆ ಬಂದುಬಿಟ್ಟರೆ, ನಮ್ಮ ಗತಿ ಏನಾದೀತು? ಎಂಥ ವಾದವಿವಾದಗಳು ಎದ್ದಾವು ! ಮನೆಗೆಲಸದವರು ಯಾರ ಸೇವೆಯನ್ನು ಮೊದಲು ಮಾಡಬೇಕು ? ಇರಲಿ, ಇನ್ನು ನನ್ನ ಕಥೆಗೆ ಹಿಂದಿರುಗುತ್ತೇನೆ.

ಅಂದು ತುಂಬ ಸೆಕೆಯಾದ ದಿನ, 'ಎಕ್ಸ್' ಅಂಚೆಯ ನಿಲ್ದಾಣದಿಂದ ಮೂರು 'ವರ್ಸ್ಟ್'ಗಳ ಆಚೆ ತುಂತುರು ಮಳೆಗೆ ಪ್ರಾರಂಭವಾಯಿತು ; ಒಂದು ನಿಮಿಷವಾದ ಮೇಲೆ ನಾನು ಧಡಧಡನೆ ಸುರಿದ ಮಳೆಯಲ್ಲಿ ನೆನೆದು ಒದ್ದೆ ಮುದ್ದೆಯಾದೆ. ನಿಲ್ದಾಣವನ್ನು ತಲಪಿದಕೂಡಲೆ, ಆದಷ್ಟು ಬೇಗ ನನ್ನ ಉಡುಪು ಬದಲಾಯಿಸುವುದು ನನ್ನ ಮೊದಲ ಎಚ್ಚರಿಕೆಯ ಕ್ರಮವಾಗಿತ್ತು ; ಎರಡನೆಯದು, ಚಹಾ ಕೇಳುವುದು. "ಏ ದುನ್ಯಾ ! ಚಹಾ ಕುದಿಸುವ ಪಾತ್ರೆ ಸಿದ್ಧಮಾಡಿ, ಹೋಗಿ ಸ್ವಲ್ಪ ಕೆನೆ ತೆಗೆದುಕೊಂಡು ಬಾ" ಎಂದು ಅಂಚೆ ಯಜಮಾನ ಕೂಗಿಹೇಳಿದನು. ಈ ನುಡಿಗಳಿಗೆ ಪ್ರತಿಯಾಗಿ ಸುಮಾರು ಹದಿನಾಲ್ಕು ವರ್ಷಗಳ ಹುಡುಗಿಯೊಬ್ಬಳು ಒಂದು ಅಡ್ಡಗೋಡೆಯ ಹಿಂದಿನಿಂದ ಕಾಣಿಸಿಕೊಂಡು, ಸರಸರನೆ ಕೈಸಾಲೆಗೆ ಓಡಿದಳು. ಅವಳ ಚೆಲುವನ್ನು ಕಂಡು ಚಕಿತನಾದೆ, "ನಿಮ್ಮ ಮಗಳೋ ಅವಳು ?" ಎಂದು ಅಂಚೆಯ ಯಜಮಾನನನ್ನು ಕೇಳಿದೆ. "ಹೌದು ಅವಳು ತುಂಬ ಬುದ್ಧಿವಂತೆ, ತುಂಬ ಚುರುಕು, ಎಲ್ಲ ಅವಳ ತಾಯಿಯ ತದ್ರೂಪು" ಎಂದು ಆತ ನಿರಾತಂಕ ಭಾವದಿಂದ ಉತ್ತರ ಕೊಟ್ಟನು. ಅಲ್ಲಿಂದಲ್ಲೆ ಕೂಡಲೆ ನನ್ನ ಕೋರಿಕೆ ಪತ್ರವನ್ನು ಪ್ರತಿಮಾಡತೊಡಗಿದನು ; ನಾನು ಆತನ ಸಾಮಾನ್ಯವಾದರೂ ಅಚ್ಚುಕಟ್ಟಾದ ಶುಭ್ರವಾದ ನಿವಾಸವನ್ನು ಅಲಂಕರಿಸಿದ್ದ ಚಿತ್ರಪಟಗಳ ಪರಿಶೀಲನೆಯಲ್ಲಿ ನಿರತನಾದೆ. ಅವು 'ದುಂದುಗಾರ ಮಗ'ನ ಕಥೆ*ಯನ್ನು ನಿರೂಪಿಸುವ ಚಿತ್ರಗಳಾಗಿದ್ದುವು. ಮೊದಲನೆಯ ಚಿತ್ರಪಟದಲ್ಲಿ ಇರುಳು ಕುಲಾವಿಯನ್ನೂ ಮೇಲಂಗಿಯನ್ನೂ ಧರಿಸಿದ್ದ ವೃದ್ಧನೊಬ್ಬನು ಚಡಪಡಿಸುವ ಯುವಕನೊಬ್ಬನನ್ನು ಬೀಳ್ಕೊಳ್ಳುತ್ತಿದ್ದನು ; ಯುವಕನು ಆತುರಾತುರವಾಗಿ ಆತನ ಆಶೀರ್ವಾದದೊಡನೆ ಒಂದು ಹಣದ ಚೀಲವನ್ನು ಈಸಿಕೊಳ್ಳುತ್ತಿದ್ದನು. ಇನ್ನೊಂದು ಚಿತ್ರವು, ಒಂದು ಮೇಜಿನ ಬಳಿ ಕಪಟ ಸ್ನೇಹಿತರಿಂದಲೂ ಲಜ್ಜೆಗೆಟ್ಟ ಸ್ತ್ರೀಯರಿಂದಲೂ ಪರಿವೃತನಾಗಿ ಕುಳಿತಿದ್ದ ಅವನ

* ಇದು The Prodigal Son ಎಂಬ ಪ್ರಸಿದ್ಧವಾದ, ಬೈಬಲ್ಲಿನ ದೃಷ್ಟಾಂತ ಕಥೆ – ಅನು.

ವಿಶೃಂಖಲ ವರ್ತನೆಯನ್ನು ವಿವರಪೂರ್ಣವಾಗಿ ಚಿತ್ರಿಸುತ್ತಿತ್ತು. ಅನಂತರ ಕಂಡುಬಂದ ಚಿತ್ರದಲ್ಲಿ, ಹಾಳಾದ ಯುವಕನು ಚಿಂದಿ ಪಂದಿಯಾದ ನಿಲುವಂಗಿಯನ್ನೂ ಚೂಪುಟೋಪಿಯನ್ನೂ, ಧರಿಸಿ, ಹಂದಿ ಕಾಯುತ್ತ ಅವುಗಳ ತಿನಿಸನ್ನೆ ತಿನ್ನುತ್ತಿದ್ದನು ; ಅವನ ಮುಖವು ಅಗಾಧ ಸಂತಾಪವನ್ನೂ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸುತ್ತಿತ್ತು. ಈ ಚಿತ್ರಮಾಲೆಯಲ್ಲಿ ಕಡೆಯದು ಅವನು ತನ್ನ ತಂದೆಯಲ್ಲಿಗೆ ಹಿಂದಿರುಗುತ್ತಿದ್ದುದನ್ನು ನಿರೂಪಿಸುತ್ತಿತ್ತು ; ಆ ಸಾಧು ವೃದ್ಧನು ಅದೇ ಇರುಳುಕುಲಾವಿಯನ್ನೂ ಮೇಲಂಗಿಯನ್ನೂ ಧರಿಸಿ ಅವನನ್ನು ಎದುರುಕೊಳ್ಳಲು ಧಾವಿಸುತ್ತಿದ್ದನು ; ದುಂದುಗಾರ ಮಗನು ಅವರ ಪಾದಗಳೆಡೆ ಮಂಡಿಯೂರಿ ಕುಳಿತಿದ್ದನು ; ಅಡಿಗೆಯವನು ಕೊಬ್ಬಿದ ಕರುವನ್ನು ಕಡಿಯುತ್ತಿರುವುದನ್ನೂ ಈ ನಲಿವಿಗೆಲ್ಲಾ ಕಾರಣವೇನೆಂದು ಹಿರಿಯ ಸೋದರನು ಸೇವಕರನ್ನು ಪ್ರಶ್ನಿಸುತ್ತಿರುವುದನ್ನೂ, ಹಿನ್ನೆಲೆಯಲ್ಲಿ ಕಾಣಬಹುದಾಗಿತ್ತು. ಪ್ರತಿಯೊಂದು ಚಿತ್ರದ ಕೆಳಗಡೆ ಬರೆದಿದ್ದ ಜರ್ಮನ್ ಭಾಷೆಯ ಸಂದರ್ಭೋಚಿತ ದ್ವಿಪದಿಗಳನ್ನು ನಾನು ಓದಿಕೊಂಡೆ. ಇವು, ಮತ್ತು ಇವುಗಳ ಜೊತೆಗೆ–ಆಗ ನನ್ನ ಸುತ್ತಲೂ ಇದ್ದ ಕರ್ಣಕುಂಡಲದ ಹೂಗಿಡಗಳಿದ್ದ ಕುಂಡಗಳು, ಪ್ರಕಾಶಮಾನವಾದ ಚಿತ್ರಾಲಂಕಾರಗಳ ಪರದೆಯಿದ್ದ ಹಾಸಿಗೆ, ಮತ್ತು ಇತರ ಪದಾರ್ಥಗಳು–ಇವೆಲ್ಲಾ ನನ್ನ ನೆನಪಿನಲ್ಲಿ ಇನ್ನೂ ಹೊಸದಾಗಿಯೆ ಇವೆ. ಸುಮಾರು ಐವತ್ತು ವರ್ಷ ವಯಸ್ಸಿನ, ಗಟ್ಟಿ ಮುಟ್ಟಾದ, ನಗುಮುಖದ, ಮಾಸಲು ಬಟ್ಟೆಪಟ್ಟಿಗಳಿಂದ ತೂಗಾಡುತ್ತಿದ್ದ ಮೂರು ಪದಕಗಳಿಂದ ಅಲಂಕೃತವಾದ ಹಸುರು ನಿಲುವಂಗಿಯನ್ನು ತೊಟ್ಟ ಆ ಅಂಚೆಮನೆಯ ಯಜಮಾನ ಈಗಲೂ ನನ್ನ ಕಣ್ಣಮುಂದೆ ಸುಳಿಯುವಂತೆ ತೋರುತ್ತದೆ.

ಮುದುಕನಾದ ಗುಡಿ ಹೊಡೆಯುವವನಿಗೆ ದುಡ್ಡುಕೊಡುವಷ್ಟರಲ್ಲಿ, ದುನ್ಯ ಕಾಯಿಸುವ ಪಾತ್ರೆಯೊಂದಿಗೆ ಹಿಂದಿರುಗಿದ್ದಳು; ನನ್ನ ಮೇಲೆ ತಾನು ಬೀರಿದ್ದ ಪ್ರಭಾವವನ್ನು ಗ್ರಹಿಸಿಕೊಳ್ಳುವುದರಲ್ಲಿ ಆ ಪುಟ್ಟ ಬಿನ್ನಾಣಗಿತ್ತಿ ಹಿಂದಾಗಿರಲಿಲ್ಲ ; ಕಪಟಲಜ್ಜೆಯಿಂದ ತನ್ನ ದೊಡ್ಡ ನೀಲಿಯ ಕಣ್ಣುಗಳನ್ನು ಕೆಳಕ್ಕಿಳಿಸಿದಳು. ನಾನು ಅವಳೊಂದಿಗೆ ಸಂಭಾಷಣೆಗೆ ತೊಡಗಿದೆ; ತಕ್ಕಮಟ್ಟಿಗೆ ಪ್ರಪಂಚಾನುಭವವುಳ್ಳ ಹುಡುಗಿಯಂತೆ ಅವಳು ನಿಸ್ಸಂಕೋಚವಾಗಿ ನನಗೆ ಉತ್ತರ ಕೊಟ್ಟಳು. ಅವಳ ತಂದೆಗೆ ಒಂದು ಲೋಟಪಂಚ್ ಪಾನೀಯವನ್ನು ಕೊಟ್ಟೆ ; ಅವಳಿಗೆ ಒಂದು ಬಟ್ಟಲು ಚಹಾ ಕೊಟ್ಟೆ. ಒಬ್ಬರನ್ನೊಬ್ಬರು ಯುಗ ಯುಗಾಂತರದಿಂದ ಬಲ್ಲವರಂತೆ ನಾವು ಮೂವರೂ ಹರಟೆ ಹೊಡೆಯುತ್ತಿದ್ದೆವು.

ಕುದುರೆಗಳು ಸಿದ್ಧವಾಗಿದ್ದುವು ; ಆದರೆ ಅಂಚೆಯ ಜವಾನ ಮತ್ತು ಅವನ ಮಗಳನ್ನು ಬಿಟ್ಟು ಹೊರಡಲು ನನಗೆ ಮನಸ್ಸೆ ಬರಲಿಲ್ಲ. ಕಡೆಗೆ ನಾನು ಅವರನ್ನು ಬೀಳ್ಕೊಂಡೆ ; ತಂದೆ ನನಗೆ ಸುಖಪ್ರಯಾಣವನ್ನು ಕೋರಿದನು ; ಮಗಳು ಗಾಡಿಯವರೆಗೆ ನನ್ನ ಜೊತೆ ಬಂದಳು. ನಾನು ಕೈಸಾಲೆಯಲ್ಲಿ ತಡೆದು ನಿಂತು ಅವಳನ್ನು ಮುತ್ತಿಡಲು ಅವಕಾಶ ಬೇಡಿದೆ ; ದುನ್ಯಾ ಒಪ್ಪಿದಳು......

'ಈ ವಿನೋದದಲ್ಲಿ ನಾನು
ನಲಿಯ ತೊಡಗಿದಂದಿನಿಂದ.........'

ಅಸಂಖ್ಯಾತ ಚುಂಬನಗಳನ್ನು ನಾನು ಸ್ಮರಿಸಿಕೊಳ್ಳಬಲ್ಲೆ ; ಆದರೆ, ಅವುಗಳಲ್ಲಿ ಯಾವುದೂ ಇದರಷ್ಟು ಸೊಗಸಾದ ಚಿರಸ್ಥಾಯಿಯಾದ ನೆನಪನ್ನು ಬಿಟ್ಟುಹೋಗಿಲ್ಲ.

ಹಲವು ವರ್ಷಗಳು ಸಂದುವು ; ಮತ್ತೆ ಅದೇ ಮಾರ್ಗವಾಗಿ ಹೋಗ ಬೇಕಾದ ಸಂದರ್ಭಸನ್ನಿವೇಶಗಳ ವೇಶಗಳ ಯೋಗ ಒದಗಿತ್ತು. ಅಂಚೆಯಜಮಾನನ ಮಗಳನ್ನು ಸ್ಮರಿಸಿಕೊಂಡೆ ; ಮತ್ತೊಮ್ಮೆ ಅವಳನ್ನು ನೋಡುವಂತಾಯಿತೆಂದು ಹಿಗ್ಗಿದೆ. ಆ ಹಳಬ ಅಂಚೆಯಜಮಾನನನ್ನು ಕೆಲಸದಿಂದ ತೆಗೆದು ಹಾಕಿರಬಹುದು, ಬಹುಶಃ ಈ ಹೊತ್ತಿಗೆ ದುನ್ಯಾ ಮದುವೆಯಾಗಿರಬಹುದು ಎಂಬ ಆಲೋಚನೆ ಆಮೇಲೆ ಮೂಡಿತು. ಇಬ್ಬರ ಪೈಕಿ ಒಬ್ಬರು ಸತ್ತು ಹೇಗಿದ್ದರೂ ಇರಬಹುದೆಂಬ ಆಲೋಚನೆಯೂ ಮನಸ್ಸಿನಲ್ಲಿ ಹೊಳೆದು ಹೋಯಿತು ; ದುಃಖದ ಅಳುಕು ಭಾವನೆಯಿಂದ 'ಎಕ್ಸ್‌'-ಅಂಚೆಯ ನಿಲ್ದಾಣದ ಬಳಿ ಸಾರಿದೆ.

ಅಂಚೆಯಜಮಾನನ ಪುಟ್ಟಮನೆಯ ಮುಂದೆ ನನ್ನ ಕುದುರೆಗಳು ನಿಂತವು. ಕೋಣೆಯೊಳಕ್ಕೆ ಹೋದಕೂಡಲೆ 'ದುಂದುಗಾರ ಮಗನ' ಕಥೆಗೆ ದೃಷ್ಟಾಂತರೂಪದ ಚಿತ್ರಗಳನ್ನು ಗುರುತಿಸಿದೆ. ಮೇಜು ಮತ್ತು ಹಾಸಿಗೆ ತಮ್ಮ ತಮ್ಮ ಪೂರ್ವಸ್ಥಾನಗಳಲ್ಲಿಯೆ ಇದ್ದುವು ; ಆದರೆ ಕಿಟಕಿಯ ತಳಕಟ್ಟಿನ ಮೇಲೆ ಹೂವುಗಳು ಮಾತ್ರ ಇರಲಿಲ್ಲ. ಕೋಣೆಯಲ್ಲಿನ ಪ್ರತಿಯೊಂದು ಪದಾರ್ಥವೂ ಕ್ಷೀಣತೆ ಉಪೇಕ್ಷೆಗಳ ಕುರುಹಾಗಿದ್ದಿತು. ಕುರಿಯ ಚರ್ಮದ ಅಂಗಿ ಹೊದೆದುಕೊಂಡು, ಅಂಚೆಯಜಮಾನನು ನಿದ್ದೆಹೋಗುತ್ತಿದ್ದರು. ನನ್ನ ಆಗಮನ ಅವನನ್ನು ಎಚ್ಚರಗೊಳಿಸಿ, ಅವನು ಎದ್ದು. ಕುಳಿತನು. ಅವನು ಸ್ಯಾಮ್ಸನ್ ವೈರಿನ್ನನೇ ; ಆದರೆ ಅವನು ಎಷ್ಟೊಂದು ಮುದಿಯಾಗಿಹೋಗಿದ್ದ ! ಅವನು ನನ್ನ ಕೋರಿಕೆಪತ್ರವನ್ನು ಪ್ರತಿಮಾಡುತ್ತಿದ್ದಾಗ ಅವನ ನರೆಗೂದಲು, ಕ್ಷೌರವಿಲ್ಲದ ಕೆನ್ನೆಗಳಮೇಲೆ ಬಿದ್ದಿದ್ದ ಆಳವಾದ ಗೆರೆಗಳು, ಬಾಗಿದ ಹೆಗಲುಗಳು-ಇವನ್ನು ಗಮನಿಸಿದೆನು ; ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ದೃಢಕಾಯನಾದವನು

ಎಂಥ ದುರ್ಬಲ ವೃದ್ಧನಾಗಿ ಮಾರ್ಪಟ್ಟಿದ್ದನೆಂಬುದನ್ನು ಕಂಡು ಅಚ್ಚರಿಗೊಂಡೆ. "ನಾನು ಯಾರೆಂದು ಗೊತ್ತಾಗಲಿಲ್ಲವೆ?" ಎಂದು ಹೇಳಿದೆ : "ನೀವೂ ನಾನೂ ಹಳೆಯ ಸ್ನೇಹಿತರು." ಆತ ಮಂಕಾಗಿ ಉತ್ತರ ಕೊಟ್ಟ : "ಇರಬಹುದು, ತುಂಬ ಜನಸಂಚಾರದ ಮಾರ್ಗ. ಬಹುಮಂದಿ ಪ್ರಯಾಣಿಕರು ಇಲ್ಲಿಗೆ ಬರುತ್ತಾರೆ." "ನಿಮ್ಮ ದುನ್ಯ ಹೇಗಿದ್ದಾಳೆ?" ಎಂದು ನಾನು ಮುಂದುವರಿಸಿದೆ. ಆ ಮುದುಕ ಹುಬ್ಬುಗಂಟಿಕ್ಕಿದ, "ದೇವರೇ ಬಲ್ಲ" ಎಂದ. ಅವನು ನನ್ನ ಪ್ರಶ್ನೆ ಕಿವಿಗೆ ಬೀಳಲೇ ಇಲ್ಲವೆಂಬಂತೆ ನಟಿಸಿದ, ಪಿಸುಮಾತಿನ ಧ್ವನಿಯಲ್ಲಿ ನಾನು ಕೊಟ್ಟಿದ್ದ ಕೋರಿಕೆ ಪತ್ರವನ್ನು ಓದಿಕೊಳ್ಳುತ್ತ ಹೋದ. ನಾನು ನನ್ನ ಪ್ರಶ್ನೆಗಳನ್ನು ನಿಲ್ಲಿಸಿಬಿಟ್ಟು, 'ಕೆಟಲ್' ಪಾತ್ರೆಯನ್ನು ಕೆಂಡದಮೇಳೆ ಇಡುವಹಾಗೆ ಹೇಳಿದೆ. ನನ್ನಲ್ಲಿ ಕುತೂಹಲ ಕೆರಳತೊಡಗಿತ್ತು ; 'ಪಂಚ್' ಪಾನೀಯ ನನ್ನ ವೃದ್ಧ ಸ್ನೇಹಿತನ ನಾಲಗೆಯನ್ನು ಸಡಿಲಗೊಳಿಸಬಹುದೆಂದು ಬಗೆದೆ.

ನನ್ನ ಎಣಿಕೆ ತಪ್ಪಾಗಲಿಲ್ಲ– ಆ ಮುದುಕ ನಾನು ನೀಡಿದ ಲೋಟವನ್ನು ನಿರಾಕರಿಸಲಿಲ್ಲ. "ರಂ" ಮದ್ಯ ಅವನ ಮಂಕುತನವನ್ನು ಬೆದರಿಸಿತೆಂದು ಕಂಡುಬಂದಿತು. ಎರಡನೆಯ ಲೋಟ ಕುಡಿಯುವ ವೇಳೆಗೆ ನಾನು ಯಾರೆಂದು ಜ್ಞಾಪಿಸಿಕೊಂಡೂ ಅಥವಾ ಜ್ಞಾಪಿಸಿಕೊಳ್ಳುವಂತೆ ನಟಿಸಿಯೊ, ಮಾತಾಳಿಯಾದ; ಆಗ ಅವನ ಬಾಯಿಂದ ಒಂದು ಕಥೆ ಕೇಳಿದೆ ; ಆಗ ಅದು ನನಗೆ ಸ್ವಾರಸ್ಯವಾಗಿತ್ತು, ಅಪೂರ್ವವಾದ ರೀತಿಯಲ್ಲಿ ಹೃದಯಸ್ಪರ್ಶಿಯಾಗಿತ್ತು.

ಆತ ಪ್ರಾರಂಭಿಸಿದ :

"ಹಾಗಾಗಿದ್ದರೆ ನನ್ನ ದುನ್ಯಾ ನಿಮಗೆ ಗೊತ್ತು ? ಆಹಾ, ಯಾರು ತಾನೆ ಅವಳನ್ನು ಕಾಣರು? ಹಾ, ದುನ್ಯಾ ? ಎಂಥ ಹುಡುಗಿ ಅವಳು ! ಇಲ್ಲಿ ಬಂದ ಪ್ರತಿಯೊಬ್ಬರೂ ಅವಳನ್ನು ಹೊಗಳುತ್ತಿದ್ದರು ; ಅವಳ ವಿರುದ್ಧ ಯಾರೂ ಒಂದೂ ಮಾತನ್ನೂ ಆಡಿರಲಿಲ್ಲ. ಮಹಿಳೆಯರು ಅವಳಿಗೆ ಒಂದು ರಕವಸ್ತ್ರವನ್ನೋ ಇಲ್ಲವೆ ಒಂದು ಜೊತೆ ಕಿವಿಯುಂಗುರಗಳನ್ನೋ, ಹೀಗೆ ಏನಾದರೂ ಬಹುಮಾನ ಕೊಡುತ್ತಿದ್ದರು. ಅಂಚೆನಿಲ್ದಾಣಕ್ಕೆ ದೊಡ್ಡ ಮನುಷ್ಯರು ಬಂದಾಗ ಮಧ್ಯಾಹ್ನದ ಊಟಕ್ಕೆಂದೋ ರಾತ್ರಿಯ ಊಟಕ್ಕೆಂದೋ ಇಲ್ಲಿ ಬೇಕೆಂದು ಉಳಿದುಕೊಳ್ಳುತ್ತಿದ್ದರು; ಅವಳನ್ನು ಇನ್ನು ಕೊಂಚಕಾಲ ನೋಡುತ್ತಿರಬೇಕೆಂದು ಅವರ ನಿಜವಾದ ಉದ್ದೇಶ. ಇಲ್ಲಿಗೆ ಬಂದ ದೊಡ್ಡ ಮನುಷ್ಯ ಎಷ್ಟೇ ಕೋಪಗೊಂಡಿರಲಿ, ಅವಳನ್ನು ಕಂಡಕೂಡಲೆ ಶಾಂತನಾಗಿ, ನನ್ನೊಂದಿಗೆ ಸೊಗಸಾಗಿ ಮಾತಾಡುತ್ತಿದ್ದನು. ಹೇಳಿದರೆ ನೀವು ನಂಬುತ್ತೀರೋ ಇಲ್ಲವೋ, ಸರ್ಕಾರದ ಓಲೆಕಾರರೂ ಇತರ ಹರಿಕಾರರೂ

ಅವಳೊಂದಿಗೆ ಅರ್ಧ ಅರ್ಧಗಂಟೆ ಮಾತಾಡುತ್ತಿದ್ದರು. ನನ್ನ ಮನೆ ಅವಳಿಂದ ಮನೆಯೆನಿಸಿತ್ತು–ಹೇಗೋ ಹೊತ್ತುಮಾಡಿಕೊಂಡು ಮನೆಯನ್ನು ಚೊಕ್ಕಟ ಮಾಡುತ್ತಿದ್ದಳು, ಅಡಿಗೆ ಮಾಡುತ್ತಿದ್ದಳು ; ಎಲ್ಲವನ್ನೂ ಮಾಡುತ್ತಿದ್ದಳು. ದಡ್ಡ ಮುದುಕನಾದ ನನ್ನ ದುನ್ಯಳನ್ನು ನಾನು ಪ್ರೀತಿಸುತ್ತಿರಲಿಲ್ಲವೆ ? ನನ್ನ ಮಗುವನ್ನು ನಾನು ಲಾಲಿಸಿ ಪಾಲಿಸುತ್ತಿರಲಿಲ್ಲವೆ? ಅವಳ ಬಾಳು ಸುಖವಾಗಿರಲಿಲ್ಲವೆ? ಆದರೆ, ಯಾರೇ ಆಗಲಿ ಪ್ರಾರ್ಥನೆಗಳಿಂದ ವಿಪತ್ತನ್ನು ತಡೆಗಟ್ಟಲು ಸಾಧ್ಯವಿಲ್ಲ ; ವಿಧಿಯ ಕಟ್ಟಳೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ." ಆಗ ಅವನು ತನ್ನ ದೌರ್ಭಾಗ್ಯದ ವಿವರವಾದ ಒಕ್ಕಣೆಯನ್ನು ನನಗೆ ಹೇಳ ತೊಡಗಿದನು.

ಮೂರು ವರ್ಷಗಳ ಹಿಂದೆ, ಒಂದೂ ಮಾಗಿಯ ಸಂಜೆ ಅಂಚೆ ಯಜಮಾನನು ತನ್ನ ಲೆಕ್ಕಪುಸ್ತಕಕ್ಕೆ ..... ಹಾಕಿಕೊಳ್ಳುತ್ತಿದ್ದನು. ಅವನ ಮಗಳು ಅಡ್ಡಗೋಡೆಯ ಹಿಂದೆ ಕುಳಿತು ಒಂದು ಉಡುಪನ್ನು ತಯಾರಿಸಿ ಕೊಳ್ಳುತ್ತಿದ್ದಳು; ಆಗ ಒಂದು 'ಟ್ರಾಯ್ಕ' (ಮೂರು ಕುದುರೆಯ ಸಾರೋಟು) ಹೊರಗಡೆ ನಿಂತಿತು ; 'ಕರ್‌ಕೇಷಿಯನ್' ಟೋಪಿ, ದೊಡ್ಡ ಸೈನಿಕ ಅಂಗಿ, ಒಂದು ದಪ್ಪನೆಯ 'ಮಫ್ಲರ್ !–ಇವನ್ನು ಧರಿಸಿದ್ದ ಒಬ್ಬ ಪ್ರಯಾಣಿಕನು ಕೋಣೆಯನ್ನು ಪ್ರವೇಶಿಸಿ, ಕುದುರೆಗಳು ಬೇಕೆಂದು ಕೇಳಿದನು. ಕುದುರೆಗಳೆಲ್ಲವೂ ಹೊರಗೆ ಹೋಗಿದ್ದವು. ಇದನ್ನು ಕೇಳಿ ಪ್ರಯಾಣಿಕನು ತನ್ನ ಧ್ವನಿಯನ್ನು ಎತ್ತರಿಸಿ, ಕೈಯ ಚಾವಟಿಯನ್ನು ಮೇಲಕ್ಕೆತ್ತಿದನು. ಇಂಥ ದೃಶ್ಯಗಳ ಪರಿಚಯವಿದ್ದ ದುನ್ಯ ನಡುಗೋಡೆಯ ಹಿಂದುಗಡೆಯಿಂದ ಓಡಿಬಂದು, ಪ್ರಯಾಣಿಕನನ್ನು ಕುರಿತು ನಯವಾಗಿ ಮಾತಾಡಿಸುತ್ತ, ಏನಾದರೂ ತಿನ್ನಲು ಅಪೇಕ್ಷೆಯಿದೆಯೆ ಎಂದು ಕೇಳಿದಳು. ದುನ್ಯಳ ಸಂದರ್ಶನ ತನ್ನ ಎಂದಿನ ಪರಿಣಾಮವನ್ನು ಬೀರಿತು. ಪ್ರಯಾಣಿಕನ ರೋಷ ಅವನನ್ನು ಬಿಟ್ಟು ತೊಲಗಿತು ; ಕುದುರೆಗಳಿಗಾಗಿ ಕಾದಿರಲೊಪ್ಪಿ, ರಾತ್ರಿಯೂಟಕ್ಕೆ ವ್ಯವಸ್ಥೆಮಾಡುವಂತೆ ಹೇಳಿದನು. ಅವನು ತನ್ನ ಒದ್ದೆಯಾದ ಗುಂಜುಗುಂಜಾದ ತುಪ್ಪಟದ ಟೋಪಿಯನ್ನು ತೆಗೆದಿಟ್ಟು, ಮಫ್ಲರನ್ನು ಬಿಚ್ಚಿ, ದೊಡ್ಡ ಅಂಗಿಯನ್ನು ಒಂದು ಕಡೆ ಬಿಸುಟಾಗ ಅವನೊಬ್ಬ ಸಣ್ಣ ಕಪ್ಪುಮಿಸೆಯ ತೆಳ್ಳನೆಯ ತರುಣ ರಾವುತಸಿಪಾಯಿಯೆಂಬುದು ಕಂಡುಬಂದಿತು. ಅವನು ಅಂಚೆಯಜಮಾನನ ಮನೆಯಲ್ಲಿ ಮನೆಯವನ ಹಾಗೆಯೇ ಹೊಂದಿಕೊಂಡುಬಿಟ್ಟು, ಆತನೊಡನೆಯೂ ಆತನ ಮಗಳೊಡನೆಯೂ ಉಲ್ಲಾಸವಾಗಿ ಹರಟೆ ಹೊಡೆಯತೊಡಗಿದನು. ರಾತ್ರಿಯೂಟವನ್ನು ಬಡಿಸಲಾಯಿತು. ಈ ನಡುವೆ ಕುದುರೆಗಳು ಹಿಂದಿರುಗಿದ್ದುವು ; ಅವಕ್ಕೆ ಮೇವನ್ನೂ ಕೊಡದೆ ಪ್ರಯಾಣಿಕನ

ಜಾರುಬಂಡಿಗೆ ಅವುಗಳನ್ನು ಹೂಡಬೇಕೆಂದು ಅಂಚೆಯಜಮಾನನು ಆಜ್ಞೆಮಾಡಿದನು. ಆದರೆ ಅವನು ತನ್ನ ಕೋಣೆಗೆ ಹಿಂದಿರುಗಿದಾಗ ಆ ಯುವಕನು ಬಹುಮಟ್ಟಿಗೆ ಪ್ರಜ್ಞೆತಪ್ಪಿ ಬೆಂಚಿನಮೇಲೆ ಮಲಗಿದ್ದುದು ಕಂಡುಬಂದಿತು. ಅವನಿಗೆ ಏನೋ ಸುಸ್ತು ಸಂಕಟ, ತಲೆನೋವು ; ಪ್ರಯಾಣಮಾಡಲು ಅವನು ಸಮರ್ಥನಾಗಿರಲಿಲ್ಲ.... ಅದಕ್ಕೆ ಏನೂ ಮಾಡುವಂತಿರಲಿಲ್ಲ ! ಅಂಚೆಯಜಮಾನನು ತನ್ನ ಹಾಸಿಗೆಯನ್ನು ಅವನಿಗೆ ಬಿಟ್ಟುಕೊಟ್ಟನು ; ರೋಗಿ ಮಾರನೆಯ ಬೆಳಗ್ಗೆಯ ಹೊತ್ತಿಗೆ ಉತ್ತಮಗೊಳ್ಳದಿದ್ದರೆ 'ಸಿ' (C) –ಗೆ ಒಬ್ಬ ವೈದ್ಯನಿಗಾಗಿ ಹೇಳಿ ಕಳಿಸತಕ್ಕದ್ದೆಂದು ನಿಶ್ಚಯವಾಯಿತು.

ಮಾರನೆಯ ದಿನ ರಾವುತ ಸಿಪಾಯಿಯ ಸ್ಥಿತಿ ಇನ್ನೂ ಕೆಟ್ಟಿತು. ಅವನ ಆಳು ವೈದ್ಯನಿಗಾಗಿ ನೆರೆಯೂರಿಗೆ ಕುದುರೆಯಮೇಲೆ ಹೋದನು. ದುನ್ಯ ವಿನೆಗರ್‌ನಲ್ಲಿ (ಧಾನ್ಯದ ಹುಳಿರಸ) ತೊಯಿಸಿದ ಕರವಸ್ತ್ರವನ್ನು ಅವನ ಹಣೆಯ ಮೇಲೆ ಹಾಕಿ, ತನ್ನ ಹೊಲಿಗೆ ಕೆಲಸಮಾಡುತ್ತ ಅವನ ಹಾಸಿಗೆಯ ಪಕ್ಕದಲ್ಲಿಯೆ ಕುಳಿತರು. ಅಂಚೆಯ ಯಜಮಾನನ ಎದರಿಗೆ ರೋಗಿ ಒಂದು ಮಾತನ್ನೂ ಆಡಲಾರದೆ ಮುಲುಕುತ್ತಿದ್ದನು. ಆದರೂ, ಎರಡು ಬಟ್ಟಲು ಕಾಫಿ ಕುಡಿದನು, ಮಧ್ಯಾಹ್ನದ ಊಟ ಬೇಕೆಂದು ಮುಲುಕುತ್ತಲೇ ಹೇಳಿದನು. ದುನ್ಯ ಅವನ ಪಕ್ಕವನ್ನು ಬಿಟ್ಟುಹೋಗುತ್ತಲೇ ಇರಲಿಲ್ಲ. ಏನಾದರೂ ಕುಡಿಯುವುದಕ್ಕೆ ಬೇಕೆಂದು ಅವನು ಕೇಳುತ್ತಲೆ ಇದ್ದನು ; ದುನ್ಯ ಸಣ್ಣ ಕೊಳಗ ದಪ್ಪಳೆ ತುಂಬ ಸ್ವಹಸ್ತದಿಂದ ತಯಾರಿಸಿದ 'ಲೆಮೊನೆಡ್' ಪಾನೀಯವನ್ನು ತಂದುಕೊಡುತ್ತಲೇ ಇದ್ದಳು. ರೋಗಿ ತನ್ನ ತುಟಿಗಳನ್ನು ನಾಲಗೆಯಿಂದ ಒದ್ದೆಮಾಡಿಕೊಳ್ಳುತ್ತಿದ್ದು, ಕೊಳಗದಪ್ಪಲೆಯನ್ನು ಹಿಂದಿರುಗಿಸಿದ ಪ್ರತಿಸಲವೂ ಕೃತಜ್ಞತಾಸೂಚಕವಾಗಿ ದುನ್ಯಳ ಕೈಗಳನ್ನು ಹಿಡಿಯಲಾರದೆ ಹಿಡಿದುಕೊಂಡು ಅದುಮುತ್ತಿದ್ದನು. ಊಟದ ಹೊತ್ತಿಗೆ ವೈದ್ಯನು ಬಂದನು. ಅವನು ರೋಗಿಯ ನಾಡಿ ಹಿಡಿದು ನೋಡಿದನು; ಅವನೊಂದಿಗೆ ಜರ್ಮನ್ ಭಾಷೆಯಲ್ಲಿ ಮಾತಾಡಿ, ಅವನಿಗೆ ಬೇಕಾಗಿರುವುದೆಲ್ಲಾ ವಿಶ್ರಾಂತಿಯೆಂದೂ ಇನ್ನು ಎರಡು ಮೂರು ದಿನಗಳಲ್ಲಿ ಅವನು ತನ್ನ ಪ್ರಯಾಣವನ್ನು ಮುಂದುವರಿಸಲು ಸಮರ್ಥನಾಗುವನೆಂದೂ ರಷ್ಯನ್ ಭಾಷೆಯಲ್ಲಿ ಹೇಳಿದನು. ವೈದ್ಯನ ಭೇಟಿಗಾಗಿ ರಾವುತ ಸಿಪಾಯಿ ಅವನಿಗೆ ಇಪ್ಪತ್ತೈದು 'ರೂಬಲ್' ಸಂಭಾವನೆ ಕೊಟ್ಟು, ತನ್ನ ಜೊತೆ ಊಟಮಾಡಬೇಕೆಂದು ಆಹ್ವಾನಿಸಿದನು. ವೈದ್ಯನು ಆಹ್ವಾನವನ್ನು ಅಂಗಿಕರಿಸಿದನು ; ಇಬ್ಬರೂ ತೃಪ್ತಿಯಾಗುವವರೆಗೆ ತಿಂದರು, ಒಂದು ಶೀಸೆ ದ್ರಾಕ್ಷಾಮದ್ಯವನ್ನು ಕುಡಿದರು, ಪರಸ್ಪರವಾಗಿ ತುಂಬ ಮೆಚ್ಚಿಕೊಂಡರು.

ಇನ್ನೊಂದು ದಿನ ಕಳೆಯಲಾಗಿ, ರಾವುತ ಸಿಪಾಯಿ ಸಂಪೂರ್ಣವಾಗಿ ಗುಣಮುಖನಾದನು. ಅವನು ಅತ್ಯಂತ ಉಲ್ಲಾಸಭರಿತತನಾಗಿದ್ದನು: ಎಡೆ ಬಿಡದೆ ಪರಿಹಾಸಮಾಡುವನು ; ಸೀಟಿ ಹಾಕುತ್ತ ರಾಗಾಲಾಪನೆ ಮಾಡುವನು. ಇತರ ಪ್ರಯಾಣಿಕರೊಂದಿಗೆ ಹರಟೆ ಹೊಡೆಯುವನು ; ಅವರು ಬದಲಾಯಿಸಿ ಕೊಂಡ ಟಪ್ಪಾ ಕುದುರೆಗಳ ದಾಖಲೆಯನ್ನು ಲೆಕ್ಕಪುಸ್ತಕದಲ್ಲಿ ತಾನೆ ಬರೆಯುವನು. ಹೀಗಾಗಿ ಆ ದಯಾಳುವಾದ ಅಂಚೆಯಜಮಾನನಿಗೆ ಇವನನ್ನು ಕಂಡರೆ ಎಷ್ಟು ಅಕ್ಕರೆಯುಂಟಾಯಿತೆಂದರೆ, ಮೂರನೆಯ ದಿನದ ಬೆಳಗ್ಗಿನ ಹೊತ್ತಿಗೆ ತನ್ನ ಅಚ್ಚುಮೆಚ್ಚಿನ ಅಭ್ಯಾಗತನನ್ನು ಅಗಲುವುದೆಂದರೆ ಅವನಿಗೆ ಅಸಹನೀಯವಾಗಿ ಕಂಡೀತು. ಅಂದು ಭಾನುವಾರ ; ದುನ್ಯ ಚರ್ಚಿಗೆ ಹೋಗಲು ಸಿದ್ಧಳಾದಳು. ರಾವುತಸಿಪಾಯಿಯ ಜಾರುಬಂಡಿಯನ್ನು ತಂದೂ ನಿಲ್ಲಿಸಲಾಯಿತು. ಅಂಚೆಯಜಮಾನನು ತನಗೆ ಒದಗಿಸಿದ ಊಟವಸತಿ ಸೌಕರ್ಯಗಳಿಗಾಗಿ ಧಾರಾಳವಾಧ ಸಂಭಾವನೆಯನ್ನು ಅವನಿಗೆ ಕೊಟ್ಟು, ರಾವುತ ಸಿಪಾಯಿ ಅವನನ್ನು ಬೀಳ್ಕೊಂಡನು. ಅವನು ದುನ್ಯಳಿಗೂ ಅಂತ್ಯಪ್ರಣಾಮವನ್ನು ಸಲ್ಲಿಸಿ, ಅವಳನ್ನು ಚರ್ಚಿನವರೆಗೆ ಕರೆದುಕೊಂಡು ಹೋಗಿಬಿಡುವುದಾಗಿ ಮುಂದೆ ಬಂದನು ; ಚರ್ಚು ಹಳ್ಳಿಯ ಇನ್ನೊಂದು ಕೊನೆಯಲ್ಲಿತ್ತು. ದುನ್ಯ ದಿಕ್ಕು ತೋಚದವಳಂತಿದ್ದಳು. ಅವಳ ತಂದೆ, "ಏನು ಕಂಡು ಹೆದರಿಕೆ ನಿನಗೆ? ಈ ದೊಡ್ಡ ಮನುಷ್ಯರು ತೋಳನಲ್ಲ, ನಿನ್ನನ್ನು ಕಚ್ಚುವುದಕ್ಕೆ ; ಚರ್ಚಿಗೆ ತಮ್ಮ ಗಾಡಿಯಲ್ಲಿ ನಿನ್ನನ್ನು ಕರೆದುಕೊಂಡು ಹೋಗಲಿ, ಬಿಡು" ಎಂದನು. ದುನ್ಯ ಜಾರುಬಂಡಿಯೊಳಕ್ಕೆ ಹೋಗಿ ರಾವುತ ಸಿಪಾಯಿಯ ಪಕ್ಕದಲ್ಲಿ ಕುಳಿತಳು; ಆಳು ಬಂಡಿ ಹೊಡೆಯುವವನ ಪಕ್ಕದ ಸ್ಥಳಕ್ಕೆ ಹಾರಿ ಕುಳಿತನು ; ಬಂಡಿಹೊಡೆಯುವವನು ಶೀಟಿ ಹಾಕಿದನು; ಕುದುರೆಗಳು ನಾಗಲೋಟ ಕಿತ್ತವು.

ತಾನು ತನ್ನ ಮಗಳು ದುನ್ಯಳನ್ನು ಆ ರಾವುತ ಸಿಪಾಯಿಯೊಂದಿಗೆ ಹೋಗಗೊಟ್ಟದ್ದು ಹೇಗೆ, ತಾನು ಅಷ್ಟು ಕುರುಡಾದದ್ದು ಹೇಗೆ ಆ ವೇಳೆಯಲ್ಲಿ ತನ್ನನ್ನು ಯಾವ ದುಷ್ಟಶಕ್ತಿ ಹಾಗೆ ವಶಪಡಿಸಿಕೊಂಡಿತ್ತು–ಇದೊಂದೂ ನಿರ್ಭಾಗ್ಯನಾದ ಆ ಅಂಚೆಯಜಮಾನನಿಗೆ ಅರ್ಥವಾಗಲಿಲ್ಲ! ಅರ್ಥಗಂಟೆಯಾಗುವುದರೊಳಗಾಗಿ ಅವನ ಹೃದಯವನ್ನು ಜಗ್ಗಿಸಿ ಎಳೆದಂತಾಗತೊಡಗಿತು ; ಅವನ ಆತಂಕ ಮಿತಿಮೀರಿ, ಅವನಿಗೆ ಸುಮ್ಮನಿರಲು ಸಾಧ್ಯವಾಗದೆ, ಅವಳನ್ನು ನೋಡಿಕೊಂಡು ಬರಲು ಚರ್ಚಿಗೆ ಹೋದನು. ಅವನು ಅದನ್ನು ಸಮೀಪಿಸುತ್ತಿದ್ದಂತೆ, ಜನ ಆಗಲೆ ಹೊರಕ್ಕೆ ಬರುತ್ತಿದ್ದುದು ಅವನಿಗೆ, ಕಂಡುಬಂದಿತು;

ಚರ್ಚಿನ ಅಂಗಳದಲ್ಲಾಗಲಿ ಮುಖಮಂಟಪದಲ್ಲಾಗಲಿ ದುನ್ಯ ಕಂಡುಬರಲಿಲ್ಲ. ಅವನು ಅತುರದಿಂದ ಚರ್ಚನ್ನು ಪ್ರವೇಶಿಸಿದನು ; ಪಾದ್ರಿಯೂ ವೇದಿಕೆಯನ್ನು ಬಿಟ್ಟು ಹೊರಟುಹೋಗಿದ್ದನ್ನು, ಚರ್ಚಿನ ಪಾರುಪತ್ಯಗಾರ (ಸೆಕ್ಸ್ಟನ್) ಮೋಂಬತ್ತಿಗಳನ್ನು ಆರಿಸುತ್ತಿದ್ದನು, ಮುದುಕಿಯರಿಬ್ಬರು ಒಂದು ಮೂಲೆಯಲ್ಲಿ ಇನ್ನೂ ಪ್ರಾರ್ಥನೆಗಳನ್ನು ಹೇಳಿಕೊಳ್ಳುತ್ತಿದ್ದರು ; ಆದರೆ ದುನ್ಯ ಮಾತ್ರ ಎಲ್ಲಿಯೂ ಕಂಡುಬರಲಿಲ್ಲ. ನೆಮ್ಮದಿಯಿಲ್ಲದ ತಂದೆ, ಅವಳು ಆರಾಧನೆಗೆ ಬಂದಿದ್ದಳೆ ಎಂದು ಪಾರುಪತ್ಯಗಾರನನ್ನು ತಡೆದು ತಡೆದು ಕೇಳಿದನು. ಅವಳು ಬಂದಿರಲಿಲ್ಲವೆಂದು ಪಾರುಪತ್ಯಗಾರ ಉತ್ತರ ಕೊಟ್ಟನು. ಅಂಚೆ ಯಜಮಾನನು ಹೆಸರಿಗೆ ಉಸಿರಾಡುತ್ತ ಹೆಣವಾಗಿ ಮನೆಗೆ ಹಿಂದಿರುಗಿದನು. ಅವನಿಗೆ ಉಳಿದದ್ದು ಒಂದೇ ಆಸೆ–ದುನ್ಯ ತಾರುಣ್ಯಕ್ಕೆ ಸಹಜವಾದ ಹುಡುಗಾಟಿಕೆಯಿಂದ ಮುಂದಿನ ಅಂಚೆನಿಲ್ದಾಣಕ್ಕೆ ಹೋಗಿರಬಹುದು ; ಅಲ್ಲಿ ಅವಳ 'ಧಾರ್ಮಿಕ' ಮಾತೆ* ವಾಸಿಸುತ್ತಿದ್ದಳು. ತಾಳ್ಮೆದಪ್ಪಿದ ದುಃಖೋದ್ವೇಗದಲ್ಲಿ ಮುಳುಗಿ ಅವನು ಗಾಡಿಯೊಂದಿಗೆ ಕಳಿಸಿದ್ದ ಕುದುರೆಗಳು ಹಿಂದಿರುಗುವುದನ್ನೇ ಕಾಯುತ್ತಿದ್ದನು. ಆದರೆ, ಹಗಲು ಕಳೆಯಿತು; ಗಾಡಿ ಹೊಡೆಯುವವನು ಹಿಂದಿರುಗಲೇ ಇಲ್ಲ. ಕಡೆಗೆ, ರಾತ್ರಿಯಾದಮೇಲೆ, ಅವನು ಕುಡಿದು ಅಮಲೇರಿ ಒಬ್ಬನೇ ಗಾಡಿಯಲ್ಲಿ ಹಿಂದಿರುಗಿದನು ; "ದುನ್ಯ ಆಮುಂದಿನ ಅಂಚೆನಿಲ್ದಾಣದಿಂದ ಆ ರಾವುತ ಸಿಪಾಯಿಯೊಂದಿಗೆ ಹೊರಟು ಹೋಗಿದ್ದಳು" ಎಂಬ ಎದೆಬಿರಿಯಿಸುವ ಸುದ್ದಿಯನ್ನು ಹೊತ್ತು ತಂದಿದ್ದನು.

ಆ ಮುದುಕನಿಗೆ ತನ್ನ ದೌರ್ಭಾಗ್ಯದ ಆಘಾತದಿಂದ ಪಾರಾಗಲು ಸಾಧ್ಯವಾಗಲಿಲ್ಲ ; ಆ ಸಂಜೆಯೇ ಅವನು ಹಾಸಿಗೆ ಹಿಡಿದನು–ಯಾವ ಹಾಸಿಗೆಯ ಮೇಲೆ ಹಿಂದಿನ ದಿನ ಆ ಠಕ್ಕ ಯುವಕ ಮಲಗಿಕೊಂಡಿದ್ದನೋ ಅದೇ ಹಾಸಿಗೆ ; ಅಂಚೆಯಜಮಾನ ಹಿಂದೆ ನಡೆದದ್ದನ್ನೆಲ್ಲಾ ನೆನೆದು, ಆ ಯುವಕನ ಖಾಯಿಲೆ ಬರಿಯ ನಟನೆಯದೆಂದು ಈಗ ಊಹಿಸಿದನು. ಆ ಬಡ ಮುದುಕನಿಗೆ ಉಗ್ರವಾದ ಜ್ವರ ಹಿಡಿಯಿತು ; ಅವನ ಸ್ಥಾನದಲ್ಲಿ ಇನ್ನೊಬ್ಬ ಅಂಚೆಯಜಮಾನನನ್ನು ಹಂಗಾಮಿಯಾಗಿ ನೇಮಿಸಿ, ಅವನನ್ನು 'ಸಿ' (C)–ಗೆ ಒಯ್ಯಲಾಯಿತು. ರಾವುತ ಸಿಪಾಯಿಯನ್ನು ಭೇಟಿಮಾಡಿದ್ದ ಅದೇ ವೈದ್ಯನೆ ಇವನ ಚಿಕಿತ್ಸೆಯನ್ನು ಮಾಡತೊಡಗಿದನು ; ಆ ತರುಣನು ಆಗ ಸಂಪೂರ್ಣವಾಗಿ ಸ್ವಸ್ಥವಾಗಿದ್ದನೆಂದೂ, ಆತನ ದುರುದ್ದೇಶವನ್ನು ತಾನು ಊಹಿಸಿದ್ದರೂ ಅವನ ಚಾವಟಿಯೇಟಿಗೆ

* ಧರ್ಮ ಶಿಕ್ಷಣದ ಹೊಣೆ ಹೊತ್ತವಳು = Godmother, – ಅನು.

ಹೆದರಿ ಏನೂ ಹೇಳಿರಲಿಲ್ಲವೆಂದೂ ಅಂಚೆ ಯಜಮಾನನಿಗೆ ನಂಬಿಕೆಯಿತ್ತನು. ಆ ಜರ್ಮನ್ನನು ನಿಜವನ್ನೆ ನುಡಿದನೋ, ಇಲ್ಲವೆ ತಾನು ಸೂಕ್ಷ್ಮಬುದ್ಧಿಯುಳ್ಳವನೆಂದು ತೋರಿಸಿಕೊಳ್ಳಬಯಸಿದನೋ, ಅವನು ಅಸುಖಿಯಾಗಿದ್ದ ತನ್ನ ರೋಗಿಗೆ ಕೊಂಚಡವಾದರೂ ಮನಸ್ಸಮಾಧಾನವನ್ನುಂಟುಮಾಡಲಾಗಲಿಲ್ಲ. ಅಂಚೆಯಜಮಾನನು ಖಾಯಿಲೆಯಿಂದ ಗುಣಹೊಂದುವುಕ್ಕೆ ಮೊದಲೆ 'ಸಿ'-ಯಲ್ಲಿನ ಅಧಿಕಾರಿಗಳನ್ನು ಎರಡು ತಿಂಗಳ ರಜಕ್ಕಾಗಿ ಬೇಡಿ, ತನ್ನ ಉದ್ದೇಶದ ಬಗ್ಗೆ ಯಾರಿಗೂ ಒಂದು ಮಾತನ್ನೂ ಉಸುರದೆ, ತನ್ನ ಮಗಳನ್ನು ಹುಡುಕಲು ಕಾಲ್ನಡಗೆಯಲ್ಲೆ ಹೊರಟುಬಿಟ್ಟನು. ಕ್ಯಾಪ್ಟನ್ ಮಿನ್ಸ್ಕಿ ಸ್ಮೊಲೆನ್‌ಸ್ಕ್‌ನಿಂದ ಪೀಟರ್ಸ್‌ಬರ್ಗಿಗೆ ಪ್ರಯಾಣ ಮಾಡಿದ್ದನೆಂದು ಲೆಕ್ಕಪುಸ್ತಕದಿಂದ ಕಂಡುಹಿಡಿದನು. ಅವನನ್ನು ಕರೆದೊಯ್ದ ಕೋಚ್ ಗಾಡಿಯನ್ನು, ದುನ್ಯ ತನ್ನ ಸ್ವಂತ ಇಷ್ಟದ ಪ್ರಕಾರವೇ ಹೋಗುತ್ತಿದ್ದಗೂ ದಾರಿಯುದ್ದಕ್ಕೂ ಅತ್ತಿದ್ದಳೆಂದು ನುಡಿದನು. "ದೇವರ ದಯೆಯೊಂದಿದ್ದರೆ, ದಾರಿತಪ್ಪಿದ ನನ್ನ ಕುರಿಮರಿಯನ್ನು ಮನೆಗೆ ಕರೆತರುತ್ತೇನೆ" ಎಂದು ಅಂಚೆ ಯಜಮಾನನು ಆಲೋಚಿಸಿದನು. ಈ ಭಾವನೆಯಿಂದ ಸ್ಫೂರ್ತಿಗೊಂಡು ಅವನು ಪೀಟರ್ಸ್‌ಬರ್ಗಿಗೆ ಹೋದನು ; ಅಲ್ಲಿನ ಇಸ್ಮೈಲಾಫ್ ದಳದ ಬರಾಕಿನಲ್ಲಿ, ತಾನು ಸೈನ್ಯ ಸೇವೆ ಸಲ್ಲಿಸುತ್ತಿದ್ದ ಕಾಲದಲ್ಲಿ ತನ್ನ ಜೊತೆಗಾರ ಸೈನಿಕನಾಗಿದ್ದು ಈಗ ಒಬ್ಬ ಮೇಲ್ದರ್ಜೆಯ ಸೈನ್ಯಾಧಿಕಾರಿಯಾಗಿ ನಿವೃತ್ತನಾಗಿದ್ದವನೊಬ್ಬನ ಮನೆಯಲ್ಲಿ ಇಳಿದುಕೊಂಡನು. ಅಲ್ಲಿದ್ದುಕೊಂಡು ಅವನು ತನ್ನ ಅನ್ವೇಷಣಕ್ಕೆ ತೊಡಗಿದನು. ಕ್ಯಾಪ್ಟನ್ ಮಿನ್ಸ್ಕಿ ಪೀಟರ್ಸ್ಬರ್ಗಿನಲ್ಲೇ ಡೆಮ್ಯುಟಾಫ್ ಉಪಾಹಾರ ಗೃಹದಲ್ಲಿ ವಾಸಿಸುತ್ತಿರುವನೆಂಬುದನ್ನು ಪತ್ತೆಮಾಡಿದನು. ಅವನನ್ನು ನೋಡುವುದಾಗಿ ಅಂಚೆ ಯಜಮಾನನು ನಿಶ್ಚಯಿಸಿದನು.

ಅವನು ಬೆಳಗ್ಗೆ ಹೊತ್ತಿಗೆ ಮುಂಚೆ ರಾವುತ ಸಿಪಾಯಿಯಿದ್ದ ಗೃಹದ ಮುಂಬಾಗಿಲ ಬಳಿ ಬಂದು, ಒಬ್ಬ ಹಳೆಯ ಸೈನಿಕನು ಅವರನ್ನು ನೋಡ ಬಯಸಿ ಬಂದಿರುವುದಾಗಿ ತಿಳಿಸಬೇಕೆಂದು ಸೇವಕನನ್ನು ಪ್ರಾರ್ಥಿಸಿಕೊಂಡನು. ಬೂಡ್ಸುನಿಲವಿನಮೇಲಿದ್ದ ಸವಾರಿ ಬೂಡ್ಸೊಂದಕ್ಕೆ ಮೆರುಗುಬಣ್ಣ ಹಾಕುತ್ತಿದ್ದ ಸೇವಕನು ತನ್ನ ದಣಿ ಮಲಗಿ ನಿದ್ದೆ ಮಾಡುತ್ತಿರುವುದಾಗಿಯೂ ಹನ್ನೊಂದು ಗಂಟೆಗೆ ಮುಂಚೆ ಯಾರನ್ನೂ ಕಾಣಗೊಡುವುದಿಲ್ಲವೆಂದೂ ಅವನಿಗೆ ತಿಳಿಸಿದನು. ಅಂಚೆ ಯಜಮಾನನು ಹೊರಟುಹೋಗಿ, ಗೊತ್ತಾದ ಗಂಟೆಯ ಹೊತ್ತಿಗೆ ಹಿಂದಿರುಗಿದನು. ಮಿನ್ಸ್ಕಿಮೇಲಂಗಿ ಮತ್ತು ಕೆಂಪು 'ಫೆಸ್' ಟೋಪಿ ಧರಿಸಿ ತಾನೇ ಹೊರಕ್ಕೆ ಅವನ ಬಳಿಗೆ ಬಂದನು. "ನನ್ನಿಂದ ನಿನಗೇನಾಗಬೇಕು,

ಅಣ್ಣಾ?" ಎಂದು ಕೇಳಿದನು. ಆ ಮುದುಕನ ಹೃದಯ ಭಾವಾವೇಶದಿಂದ ಕುದಿಯುತ್ತಿತ್ತು ; ಅವನ ಕಣ್ಣುಗಳಲ್ಲಿ ಕಂಬನಿ ಚಿಲುಮೆ ಚಿಮ್ಮಿತು ; "ಸ್ವಾಮಿ ! ದೇವರ ಪ್ರೀತ್ಯರ್ಥವಾಗಿಯಾದರೂ, ಸ್ವಾಮಿ...." ಎಂದು ನಡುಗುದನಿಯಲ್ಲಿ ಗೊಣಗಲು ಮಾತ್ರ ಅವನಿಗೆ ಸಾಧ್ಯವಾಯಿತು. ಮಿನ್ಸ್ಕಿ ಅವನ ಕಡೆಗೆ ಶೀಘ್ರವಾದ ಓರೆನೋಟವನ್ನು ಬೀರಿ, ಮುಖವೆಲ್ಲಾ ಕೆಂಪೇರಿ, ಅವನನ್ನು ಕೈಹಿಡಿದು ತನ್ನ ಓದುವ ಕೋಣೆಗೆ ಕರೆದುಕೊಂಡುಹೋಗಿ, ಅಲ್ಲಿ ಒಳಗಡೆಯಿಂದ ಬಾಗಿಲಿಗೆ ಬೀಗ ಹಾಕಿಕೊಂಡನು. "ಸ್ವಾಮಿ, ಕಳೆದು ಹೋದದ್ದು ಹೋಯಿತು ; ಆದರೆ ನನ್ನ ಬಡ ದುನ್ಯಳನ್ನು ನನಗೆ ಹಿಂದಿರುಗಿ ಕೊಡಿ ! ನೀವು ಅವಳಿಂದ ಪಡೆಯಬೇಕಾದ ಸುಖವನ್ನು ಪಡೆದಾಯಿತು–ಇನ್ನು ಅವಳನ್ನು ಅನ್ಯಾಯವಾಗಿ ಹಾಳುಮಾಡಬೇಡಿ" ಎಂದು ಮುದುಕ ಪ್ರಲಾಪಿಸಿದನು ನಿಜವಾಗಿ ಮನಕರಗಿದ ಆ ತರಣನು, "ಆದದ್ದು ಆಯಿತು, ಅದನ್ನು ತಪ್ಪಿಸಲಾಗುವುದಿಲ್ಲ. ನಾನು ನಿಮಗೆ ಅನ್ಯಾಯ ಮಾಡಿದ್ದೇನೆ, ನಿಮ್ಮ ಕ್ಷಮೆ ಬೇಡಲು ಸಿದ್ಧನಾಗಿದ್ದೇನೆ. ಆದರೆ ದುನ್ಯಳನ್ನು ನಾನು ಕೈ ಬಿಡತಕ್ಕವನೆಂದು ಮಾತ್ರ ಭಾವಿಸಬೇಡಿ. ನನ್ನ ಗೌರವದ ಆಣೆಯಿಟ್ಟು ಹೇಳುತ್ತೇನೆ, ಅವಳು ಸುಖವಾಗಿರುತ್ತಾಳೆ. ಅವಳಿಂದ ನಿಮಗೆ ಆಗ ಬೇಕಾದದ್ದಾದರೂ ಏನ? ಅವಳು ನನ್ನನ್ನು ಪ್ರೀತಿಸುತ್ತಾಳೆ; ಅವಳಿದ್ದ ಹಿಂದಿನ ಸ್ಥಿತಿಗತಿ ಅವಳಿಗೆ ಈಗ ಒಗ್ಗುವುದಿಲ್ಲ. ನೀವಾಗಲಿ ಅವಳಾಗಲಿ ನಡೆದದ್ದನ್ನು ಎಂದಿಗೂ ಮರೆಯಲಾರಿರಿ, ನಾನು ಬಲ್ಲೆ" ಎಂದನು. ಅನಂತರ, ಅಂಚೆ ಯಜಮಾನನ ಮುಂದೋಳಿನೊಳಕ್ಕೆ ಏನನ್ನೊ ತುರುಕಿ, ಬಾಗಿಲ ಬೀಗವನ್ನು ತೆಗೆದನು ; ಆ ಮುದುಕ ಬೀದಿಯಲ್ಲಿದ್ದನು, ಅದು ಹೇಗೆಂಬುದನ್ನು ಮಾತ್ರ ಅವನರಿಯನು.

ಅವನು ಬಹಳಹೊತ್ತು ನಿಶ್ಚಲನಾಗಿ ನಿಂತಿದ್ದನು ; ತನ್ನ ಮುಂದೋಳಿನ ಕೆಳಗೆ ಒಂದು ಕಾಗದದ ಕಟ್ಟಿದೆಯೆಂದು ಅವನಿಗೆ ಕಡೆಯಲ್ಲಿ ಗಮನಕ್ಕೆ ಬಂತು. ಅದನ್ನು ಹೊರಕ್ಕೆಳೆದನು ; ಬಿಡಿಸಿ ನೋಡಲು ಅನೇಕ ಮುದುಡಿದ ಐದು ಮತ್ತು ಹತ್ತು 'ರೂಬಲ್' 'ನೋಟು'ಗಳಿದ್ದುವು. ಮತ್ತೆ ಅವನ ಕಣ್ಣುಗಳಲ್ಲಿ ನೀರು ತುಂಬಿ ಬಂತು ; ಕ್ರೋಧದ ಕಂಬನಿ. ಅವನು ಆ 'ನೋಟು'ಗಳನ್ನೆಲ್ಲ ಒಂದು ಉಂಡೆಯಾಗಿ ಮುದುರಿ, ನೆಲದಮೇಲೆಸೆದು, ಅವುಗಳನ್ನು ಜೋಡಿನ ಹಿಮ್ಮಡಿಯಿಂದ ತುಳಿದು, ಹೊರಟುಹೋದನು.... ಕೆಲವು ಗಜ ಮುಂದೆ ನಡೆದುಹೋದಮೇಲೆ, ತನ್ನಲ್ಲಿ ತಾನು ಆಲೋಚಿಸಿದನು.....ಹಿಂದಿರುಗಿ ಹೆಜ್ಜೆ ಹಾಕದೊಡಗಿದನು. ಆದರೆ ನೋಟುಗಳು ಆಗ ಅಲ್ಲಿರಲಿಲ್ಲ. ಸೊಗಸಾಗಿ ಉಡುಪು

ಧರಿಸಿದ್ದ ತರುಣನೊಬ್ಬನು ಅವನನ್ನು ಕಂಡಕೂಡಲೆ ಒಂದು 'ಡ್ರಾಷ್ಕಿ' ಬಂಡಿಯ ಬಳಿಗೆ ಓಡಿಹೋಗಿ, ಆಶುರಾತುರವಾಗಿ ಅದರಲ್ಲಿ ಕುಳಿತು, 'ಹೊಡೆಯಯ್ಯಾ ಮುಂದಕ್ಕೆ' ಎಂದು ಕೂಗಿಕೊಂಡನು. ಅಂಚೆ ಯಜಮಾನನು ಅವನ ಬೆನ್ನಟ್ಟಿ ಹೋಗುವ ಪ್ರಯತ್ನವನ್ನೂ ಮಾಡಲಿಲ್ಲ. ತನ್ನ ಅಂಚೆಯ ನಿಲ್ದಾಣಕ್ಕೆ ಹಿಂದಿರುಗಲು ನಿಶ್ಚಯಿಸಿದನು ; ಆದರೆ, ಕಡೆಗೆ ಒಮ್ಮೆಯಾದರೂ ಸರಿಯೆ, ತನ್ನ ಬಡ ದುನ್ಯಳನ್ನು ಮೊದಲು ನೋಡಬೇಕೆಂದು ಆಸೆಯಾಯಿತು ಅವನಿಗೆ. ಆದ್ದರಿಂದ, ಎರಡು ದಿನ ಬಿಟ್ಟು, ಅವನು ಮತ್ತೆ ಮಿನ್ಸ್ಕಿಯ ಬಿಡಾರಕ್ಕೆ ಹೋದನು. ಆದರೆ, ಸೈನ್ಯದ ಸೇವಕನು ತನ್ನ ದಣಿ ಯಾರನ್ನೂ ನೋಡುವದಿಲ್ಲವೆಂದು ಕಠಿನವಾಗಿ ತಿಳಿಸಿಬಿಟ್ಟನು. ಅವನನ್ನು ಹೆಗಲಿಂದ ದಬ್ಬಿ ಹಜಾರದಾಚೆಗೆ ನೂಕಿ, ಅವನೆದುರಿಗೆ ಧಡಾರನೆ ಬಾಗಿಲು ಹಾಕಿಬಿಟ್ಟನು. ಅಂಚೆ ಯಜಮಾನನು ಹೊರಗಡೆ ಸ್ವಲ್ಪ ಹೊತ್ತು ನಿಂತಿದ್ದನು : ಅನಂತರ ಹೊರಟುಹೋದನು.

ಅದೇ ಸಂಜೆ ಅವನು 'ಸರ್ವಾಹುತಾತ್ಮರ' ಚರ್ಚಿನಲ್ಲಿ ಆರಾಧಾನೆಯ ಕಾಲದಲ್ಲಿದ್ದು, ಲಿಟೀನಯ ರಸ್ತೆಯಲ್ಲಿ ನಡೆದುಹೋಗುತ್ತಿದ್ದನು. ಒಂದು ಸೊಗಸಾದ ಬಂಡಿ ಅವನ ಪಕ್ಕದಲ್ಲಿ ನುಗ್ಗಿ ಹೋಯಿತು ; ಅಂಚೆ ಯಜಮಾನನು ಮಿನ್ಸ್ಕಿಯ ಗುರುತು ಹಿಡಿದನು. ಬಂಡಿ ಬಂದು ಮೂರು ಅಂತಸ್ತಿನ ಮನೆಯ ಬಾಗಿಲ ಮುಂದೆ ನಿಂತುಕೊಂಡಿತು ; ರಾವುತ ಸಿಪಾಯಿ ಗಾಡಿಯಿಂದ ಮುಖಮಂಟಪಕ್ಕೆ ಹಾರಿದನು. ಸುಖಕರವಾದ ಆಲೋಚನೆಯೊಂದು ಅಂಚೆ ಯಜಮಾನನ ಮನಸ್ಸಿನಲ್ಲಿ ಹಾದುಹೋಯಿತು. ಅವನು ಬಂಡಿಯ ಸಮೀಪಕ್ಕೆ ಹಿಂದಿರುಗಿ ನಡೆದುಹೋಗಿ, ಬಂಡಿ ಹೊಡೆಯುವವನನ್ನು ಕುರಿತು : "ಅಯ್ಯಾ, ಇದು ಯಾರ ಕುದುರೆ? ಮಿನ್ಸ್ಕಿಯವರದಲ್ಲವೊ?" ಎಂದು ಕೇಳಿದನು. ಅದಕ್ಕೆ ಕೋಚಿನವನು, "ಹೌದು, ಅವರದ್ದೆ. ಯಾಕೆ ಕೇಳಿದ್ದು ?" ಎಂದು ಪ್ರಶ್ನಿಸಿದನು.

"ಏಕೆಂಬುದನ್ನು ಹೇಳುತ್ತೇನೆ. ನಿಮ್ಮ ಯಜಮಾನರು ತಮ್ಮ ದುನ್ಯ ಅವರ ಬಳಿಗೆ ಒಂದು ಚೀಟಿ ತೆಗೆದುಕೊಂಡು ಹೋಗಿ ಕೊಡುವಂತೆ ನನಗೆ ಹೇಳಿದ್ದರು. ಈ ದುನ್ಯ ಎಲ್ಲಿ ವಾಸ ಮಾಡುತ್ತಾರೆ ಎನ್ನುವುದು ನನಗೆ ಮರೆತುಹೋಗಿದೆ.

"ಹಾಗೋ. ಆಕೆ ಎರಡನೇ ಅಂತಸ್ತಿನಲ್ಲಿ ವಾಸ ಮಾಡುತ್ತಾರೆ. ಆದರೆ, ನೀವು ಚೀಟಿ ತಂದದ್ದು ತಡವಾಯಿತು. ಈಗ ಅವರೇ ಆಕೆಯ ಬಳಿ ಇದ್ದಾರಲ್ಲ."

"ಚಿಂತೆಯಿಲ್ಲ. ನನಗೆ ತಿಳಿಯಹೇಳಿದ್ದಕ್ಕಾಗಿ ವಂದನೆ ಕಣಯ್ಯ. ಮಾತುಕೊಟ್ಟಂತೆ ನಡೆದುಕೊಳ್ಳಬೇಕೋ ಇಲ್ಲವೋ" ಎಂದು ಅಂಚೆ ಯಜಮಾನನು ಹೇಳಿದನು ; ಅವನ ಹೃದಯ ವಿಚಿತ್ರ ರೀತಿಯಲ್ಲಿ ಪಕಪಕನೆ ಹೊಡೆದುಕೊಳ್ಳುತ್ತಿತ್ತು.

ಇಷ್ಟು ಹೇಳಿ, ಅವನು ಮೆಟ್ಟಲುಗಳನ್ನೇರಿದನು.

ಬಾಗಿಲ ಬೀಗ ಹಾಕಿತ್ತು. ಗಂಟೆ ಬಾರಿಸಿ, ಆತಂಕದ ವೇದನೆಯನುಭವಿಸುತ್ತ ಕೆಲವು ಕ್ಷಣಗಳನ್ನು ಕಳೆದನು. ಬೀಗದಕ್ಕೆ ಬೀಗದಲ್ಲಿ ಕಿರಕಿರ ಸದ್ದುಮಾಡಿತು, ಬಾಗಿಲು ತೆರೆಯಿತು. "ಅವ್ದೊಟ್ಯ ಸ್ಯಾಮ್ಸೊನೊವ್ನ ಇಲ್ಲಿ ವಾಸಿಸುತ್ತಾರೆಯೇ?" ಎಂದು ಕೇಳಿದನು. "ಹ್ಞೂ, ವಾಸಿಸುತ್ತಾರೆ. ಅವರಿಂದ ನಿಮಗೇನಾಗಬೇಕು?" ಎಂದು ಯೌವನವತಿಯಾದ ಕೆಲಸಗಿತ್ತಿ ಉತ್ತಕೊಟ್ಟಳು. ಅಂಚೆಯಜಮಾನನು ಉತ್ತರ ಕೊಡದೆಯೆ ಹಜಾರದೊಳಕ್ಕೆ ಪ್ರವೇಶಿಸಿದನು. "ನೀವು ಹಾಗೆ ಒಳಕ್ಕೆ ಹೋಗಬೇಡಿ ! ಅವ್‌ಡೊಟ್ಟಿಯ ಸ್ಯಾಮ್ಸೊನೋವ್ನ ಯಾರ ಜೊತೆಯಲ್ಲಿಯೊ ಇದಾರೆ" ಎಂದೂ ಕೆಲಸದವಳು ಅವನಿಗೆ ಹಿಂದಿನಿಂದ ಕೂಗಿ ಹೇಳಿದಳು. ಆದರೆ ಆ ಮಾತಿಗೆ ಗಮನ ಕೊಡದೆಯೇ ಅಂಚೆ ಯಜಮಾನನು ಮುಂದೆ ನಡೆದು ಹೋದನು. ಅವನು ಹಾದುಹೋದ ಎರಡು ಕೋಣೆಗಳು ಕತ್ತಲೆಯಾಗಿದ್ದುವು ; ಮೂರನೆಯದರಲ್ಲಿ ಒಂದು ದೀಪವಿತ್ತು. ತೆರೆದಿದ್ದ ಬಾಗಿಲ ಬಳಿಗೆ ಹೋಗಿ, ಅಲ್ಲಿ ಹಾಗೆಯೆ ನಿಂತನು. ಉತ್ಕೃಷ್ಟವಾಗಿ ಸಜ್ಜಿತವಾಗಿದ್ದ ಕೋಣೆಯೊಳಗೆ ಮಿನ್ಸ್ಕಿ ಚಿಂತಾಮಗ್ನನಾಗಿ ಕುಳಿತಿದ್ದನು. ದುನ್ಯ ಆಗಿನ ಕಾಲದ ಅತಿ ಮೆಚ್ಚಿನ ಮಾದರಿಯ ಉಡುಪು ಧರಿಸಿ ಅವನು ಕುಳಿತಿದ್ದ ಕುರ್ಚಿಯ ತೋಳಿನ ಮೇಲೆ, ಇಂಗ್ಲಿಷ್ ಮಾದರಿಯಲ್ಲಿ ಪಕ್ಕಜೀನಿನಮೇಲೆ ಕುಳಿತು ಕುದುರೆ ಸವಾರಿ ಮಾಡುವ ರೀತಿಯಲ್ಲಿ ಕುಳಿತಿದ್ದಳು. ಅವಳು ಮಿನ್ಸ್ಕಿಯ ಕಪ್ಪು ಕುರುಳನ್ನು ಒಡವೆಗಳಿಂದ ಥಳಥಳಿಸುತ್ತಿದ್ದ ತನ್ನ ಬೆರಳುಗಳಿಂದ ಆಡಿಸುತ್ತ ಅವನ ಕಡೆ ಮೃದುಭಾವದಿಂದ ದೃಷ್ಟಿಸುತ್ತಿದ್ದಳು : ಅಯ್ಯೋ ಪಾಪ ! ಆ ಅಂಚೆ ಯಜಮಾನನಿಗೆ ತನ್ನ ಮಗಳು ಹಿಂದೆಂದೂ ಇಷ್ಟು ಮನೋಹರಳಾಗಿ ಕಂಡಿರಲಿಲ್ಲ ; ಅನೈಚ್ಛಿಕವಾದ ಮೆಚ್ಚುಗೆಯಿಂದ ಅವಳನ್ನು ಗಮನಿಸಿ ನೋಡುತ್ತಿದ್ದನು. ಅವಳು ತನ್ನ ತಲೆಯನ್ನು ಎತ್ತದೆಯೆ, "ಯಾರಲ್ಲಿ?" ಎಂದಳು. ಅವನು ಮೌನವಾಗಿ ನಿಂತಿದ್ದನು. ಉತ್ತರ ಬಾರದಿರಲು, ದುನ್ಯ ಕತ್ತೆತ್ತಿ ನೋಡಿದಳು... ಕಿರಿಚಿಕೊಂಡು ಜಮಖಾನದ ಮೇಲೆ ಬಿದ್ದುಬಿಟ್ಟಳು. ಗಾಬರಿಗೊಂಡ ಮಿನ್ಸ್ಕಿ ಅವಳನ್ನು ಮೇಲಕ್ಕೆತ್ತಲು ನುಗ್ಗಿಬಂದನು; ಆದರೆ ಬಾಗಿಲಬಳಿ ಮುದುಕನಾಥ ಅಂಚೆ ಯಜಮಾನನನ್ನು ಕಂಡು, ದುನ್ಯಳನ್ನು ಬಿಟ್ಟು, ಕೋಪದಿಂದ ಕಂಪಿಸುತ್ತ ಅವನನ್ನು ಸಮೀಪಿಸಿದನು. "ನಿನಗೇನು ಬೇಕು? ಕಳ್ಳನಹಾಗೆ ಯಾಕೆ ನನ್ನನ್ನು ಹಿಂಬಾಲಿಸುತ್ತಿದ್ದೀಯೆ? ನನ್ನ ಪ್ರಾಣ ತೆಗೆಯಬೇಕೆಂದು ಮಾಡಿದ್ದೀಯೇನು ? ಹೊರಡಾಚೆ !" ಎಂದು ಅವನು ಹಲ್ಲುಕಚ್ಚಿ ನುಡಿದನು. ಅಲ್ಲದೆ, ತನ್ನ ಬಲವಾದ ಕೈಯಿಂದ ಮುದುಕನ ಅಂಗಿಯ ಕೊರಳ ಪಟ್ಟಿಯನ್ನು

ಹಿಡಿದುಕೊಂಡು, ಮಹಡಿಯ ಮೆಟ್ಟಿಲ ಮೇಲಕ್ಕೆ ಅವನನ್ನು ದಬ್ಬಿದನು.

ಮುದುಕನು ತನ್ನ ನಿವಾಸಕ್ಕೆ ಹಿಂದಿರುಗಿದನು. ಅವನ ಸ್ನೇಹಿತನು ದೂರು ಕೊಡುವಂತೆ ಸಲಹೆ ಮಾಡಿದನು. ಆದರೆ, ಅಂಚೆ ಯಜಮಾನನು ಆ ವಿಚಾರವನ್ನು ಪರ್ಯಾಲೋಚಿಸಿ, ಆ ಆಲೋಚನೆಯನ್ನು ಕೈಬಿಟ್ಟಂತೆ ಕೈಯಲ್ಲಾಡಿಸಿಬಿಟ್ಟನು ; ವಿಷಯವನ್ನು ಹೇಗಿತ್ತೊ ಹಾಗೆ ಬಿಟ್ಟುಬಿಡಲು ನಿಶ್ಚಯಿಸಿದನು. ಎರಡು ದಿನಗಳ ತರುವಾಯ ಅವನು ಪೀಟರ್ಸ್‌ಬರ್ಗ್‌ನ್ನು ಬಿಟ್ಟು, ತನ್ನ ಅಂಚೆಯನಿಲ್ದಾಣಕ್ಕೆ ಹಿಂದಿರುಗಿ, ತನ್ನ ಹಿಂದಿನ ಕೆಲಸವನ್ನು ಮತ್ತೆ ಕೈಗೊಂಡನು.

ಅವನು ತನ್ನ ಕಥನವನ್ನು ಮುಗಿಸುತ್ತ–

"ದುನ್ಯಳಿಲ್ಲದೆ, ಅವಳ ವಿಚಾರವಾಗಿ ಒಂದು ಮಾತೂ ಇಲ್ಲದೆ, ವಾಸ ಮಾಡತೊಡಗಿ ಇಂದಿಗೆ ಹೆಚ್ಚು ಕಡಮೆ ಮೂರು ವರ್ಷ. ಅವಳು ಬದುಕಿದ್ದಾಳೆಯೋ ಸತ್ತಿದ್ದಾಳೆಯೋ ದೇವರಿಗೊಬ್ಬನಿಗೆ ಗೊತ್ತು. ಏನಾಗಿದ್ದರೂ ಆಗಿರಬಹುದು. ಇಷ್ಟಕ್ಕೂ, ಯಾವನೋ ದಾರಿಹೋಕ ಸೊಗಸುಗಾರನೊಬ್ಬ ದುಷ್ಪ್ರೇರಣೆಮಾಡಿ ಕೆಡಿಸಿ, ಮೊದಲು ಅವಳನ್ನು ತಾನು ಇಟ್ಟುಕೊಂಡು ಬಳಿಕ ಬಿಟ್ಟುಬಿಟ್ಟ ಹೆಣ್ಣುಗಳಲ್ಲಿ ಇವಳು ಮೊದಲನೆಯವಳೂ ಅಲ್ಲ, ಕಡೆಯವಳೂ ಆಗಲಾರಳು. ಅವಳಂಥ ಅವಿವೇಕಿಗಳಾದ ತರುಣಿಯರು ಪೀಟರ್ಸ್‌ಬರ್ಗಿನಲ್ಲಿ ಅನೇಕಮಂದಿ ಇದ್ದಾರೆ; ಇಂದು 'ಸ್ಯಾಟಿನ್' ಮತ್ತು ಮಕಮಲ್ಲ ಬಟ್ಟೆಯ ಉಡುಪು ಧರಿಸಿ ಮೆರೆಯುತ್ತಾರೆ; ನಾಳೆ, ನೀವೇ ನೋಡಿ, ಕೀಳುಮಂದಿಯೊಂದಿಗೆ ಬೀದಿಯ ಚೌಕಗಳಲ್ಲಿ ಕಸಗುಡಿಸುತ್ತಿರುತ್ತಾರೆ. ಕೆಲವು ವೇಳೆ, ದುನ್ಯ ಅಲ್ಲಿ ಹಾಗೆ ಸೊರಗುತ್ತಿರಬಹುದೆಂಬ ಆಲೋಚನೆ ಬಂದಾಗ, ಎಷ್ಟು ತಡೆದುಕೊಂಡರೂ, ಅವಳು ಸತ್ತು ಸಮಾಧಿಯಾಗಬಾರದೆ ಎಂಬ ಕೆಟ್ಟ ಬಯಕೆ ಉಂಟಾಗದೆ ಇರುವುದಿಲ್ಲ....." ಎಂದನು.

ನನ್ನ ಮಿತ್ರ ಆ ವೃದ್ಧ ಅಂಚೆ ಯಜಮಾನನ ಕಥೆ ಹೀಗಿತ್ತು ; ಕಥೆ ಆಗಾಗ್ಗೆ ಕಂಬನಿಗರೆತದಿಂದ ತಡವರಿಸುತ್ತಿತ್ತು ; ಕವಿ ಡಿಮಿಟ್ರೀಫ್‌ನ ಸೊಗಸಾದ ಹಾಡುಗಬ್ಬದಲ್ಲಿ ಬರುವ ಮನೆಗೆಲಸದ ಗುಲಾಮನಂತೆ, ಅವನು ಆ ಕಂಬನಿಯನ್ನು ತನ್ನ ಅಂಗಿಯ ಅಂಚಿನಿಂದ ಒರೆಸಿಕೊಳ್ಳುತ್ತಿದ್ದ ರೀತಿ ವಿಚಿತ್ರವಾಗಿತ್ತು. ಈ ಕಂಬನಿಯ ಧಾರೆಗೆ ಅರ್ಧಮಟ್ಟಿನ ಕಾರಣ ಅವನು ಕುಡಿದ 'ಪಂಚ್' ಪಾನೀಯ: ಕಥೆ ಹೇಳುತ್ತ ಹೇಳುತ್ತ ಐದನೆಯ ಲೋಟಗಳಷ್ಟನ್ನು ಇಳಿಸಿದ್ದನು ; ಆದರೂ, ಅವನ ಕಥನ ಬಲವಾಗಿ ನನ್ನ ಮನಸ್ಸನ್ನು ಕರಗಿಸಿತು. ಅವನನ್ನು ಬೀಳ್ಕೊಂಡು ಹೊರಟ ಮೇಲೆ, ಆ ಮುದುಕ ಅಂಚೆ ಯಜಮಾನನ ವಿಚಾರವನ್ನು

ನನ್ನ ತಲೆಯೊಳಗಿಂದ ಕೊಡಹಿಬಿಡುವುದಕ್ಕೇ ಆಗಲಿ, ನಿರ್ಭಾಗ್ಯಳಾದ ದುನ್ಯಳ ಬಗ್ಗೆ ಆಲೋಚಿಸಿದೆ ಇರುವುದಕ್ಕಾಗಲಿ ಬಹಳ ಕಾಲವೇ ಹಿಡಿಯಿತು.

ಈಚೆಗೆ ಸ್ವಲ್ಪ ಕಾಲದ ಹಿಂದೆ, 'ಎಕ್ಸ್' (X)-ಹಳ್ಳಿಯ ಮೂಲಕ ಹೋಗುತ್ತಿದ್ದಾಗ ನನ್ನ ಹಳೆಯ ಗೆಳೆಯನ ನೆನಪಾಯಿತು. ಅವನು ಆಡಳಿತ ನಡಸುತ್ತಿದ್ದ ಅಂಚೆಯ ನಿಲ್ದಾಣ ಈಗ ಇರಲಿಲ್ಲವೆಂದು ತಿಳಿಯ ಬಂತು. "ವೃದ್ಧ ಅಂಚೆ ಯಜಮಾನ ಇನ್ನೂ ಬದುಕಿರುವನೆ?" ಎಂಬ ನನ್ನ ಪ್ರಶ್ನೆಗೆ ಯಾರೂ ತೃಪ್ತಿಕರವಾದ ಉತ್ತರವನ್ನು ಕೊಡಲಾರದೆ ಹೋದರು. ಪರಿಚಿತ ಸ್ಥಳಗಳನ್ನು ಭೇಟಿಮಾಡಬೇಕೆಂಬ ಬಯಕೆಯಾಗಿ, ಕುದುರೆಗಳನ್ನು ಬಾಡಿಗೆಗೆ ತೆಗೆದುಕೊಂಡು 'ಎನ್' (N)-ಹಳ್ಳಿಗೆ ಪ್ರಯಾಣ ಹೊರಟೆ.

ಅದು ಶರತ್ಕಾಲ. ಆಕಾಶದ ತುಂಬ ಬೂದು ಮೋಡಗಳು. ಗಾಳಿ ತನ್ನ ಮಾರ್ಗದ ಮರಗಳ ಕೆಂಪು ಮತ್ತು ಹಳದಿ ಎಲೆಗಳನ್ನು ಹೊತ್ತು ತಂದು, ಬೋಳಾಗಿದ್ದ ಧಾನ್ಯದ ಹೊಲಗಳಿಂದ ಬೀಸಿ ಬರುತ್ತಿತ್ತು. ಸೂರ್ಯ ಮುಳುಗುವುದಕ್ಕೆ ಮುಂಚೆ ನಾನು ಹಳ್ಳಿಯನ್ನು ಸೇರಿದೆ. ದಪ್ಪನೆಯ ಹೆಂಗಸೊಬ್ಬಳು ಕೈಸಾಲೆಯೊಳಕ್ಕೆ ಬಂದಳು. (ಬಡ ದುನ್ಯ ಅಲ್ಲಿಯೇ ನನ್ನನ್ನು ಮುದ್ದಿಟ್ಟದ್ದು.) ನನ್ನ ಪ್ರಶ್ನೆಗಳಿಗೆ ಉತ್ತರವಾಗಿ, ಅಂಚೆ ಯಜಮಾನ ಸತ್ತು ಒಂದು ವರ್ಷವಾಯಿತೆಂದೂ, ಅವನ ಈ ಮನೆ ಈಗ ಸಾರಾಯಿ ಮಾಡುವವನಿಗೆ ಸೇರಿದೆಯೆಂದೂ, ತಾನೇ ಆ ಸಾರಾಯಿಗಾರನ ಹೆಂಡತಿಯೆಂದೂ ಉತ್ತರಕೊಟ್ಟಳು. ನನ್ನ ನಿರರ್ಥಕವಾದ ಪ್ರಯಾಣಕ್ಕಾಗಿ, ಅದಕ್ಕಾಗಿ ಅನ್ಯಾಯನಾಗಿ ವೆಚ್ಚಮಾಡಿದ ಏಳು ರೂಬಲ್‌ಗಳಿಗಾಗಿ, ನನಗೆ ವ್ಯಸನವಾಯಿತು. "ಅವನು ಏತರಿಂದ ಸತ್ತ?" ಎಂದು ಸಾರಾಯಿಗಾರನ ಹೆಂಡತಿಯನ್ನು ಹೇಳಿದೆ. "ಕುಡಿದು ಕುಡಿದು ಸತ್ತ ಸ್ವಾಮಿ" ಎಂದವಳು.

"ಅವನು ಎಲ್ಲಿ ಸಮಾಧಿಯಾಗಿದ್ದಾನೆ?"

"ಹಳ್ಳಿಯ ಆಚೆ ಸ್ವಲ್ಪ ದೂರ, ತನ್ನ ಹೆಂಡತಿಯ ಪಕ್ಕದಲ್ಲಿ."

"ಅವನ ಗೋರಿಯ ಹತ್ತಿರಕ್ಕೆ ನನ್ನನ್ನು ಕರೆದುಕೊಂಡು ಹೋಗಲು ಯಾರಾದರೂ ಸಿಕ್ಕುತ್ತಾರೆಯೆ?"

"ಓಹೋ, ಅದಕ್ಕೇನು.–ಹೇ, ವಾನ್ಕಾ ! ಆ ಬೆಕ್ಕನ್ನು ಅಲ್ಲಿ ಬಿಡು ! ಈ ದೊಡ್ಡಮನುಷ್ಯರನ್ನು ಮಸಣಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಅಂಚೆ ಯಜಮಾನರ ಗೋರಿಯನ್ನು ತೋರಿಸು."

ಚಿಂದಿ ಧರಿಸಿದ್ದ, ಕೆಂಚುಕೂದಲಿನ, ಒಕ್ಕಣ್ಣಿನ ಪೋರನೊಬ್ಬ ಓಡಿ ಬಂದ; ನನ್ನನ್ನು ಹಳ್ಳಿಯ ಕೊನೆಗೆ ಕರೆದೊಯ್ದ.

"ಅಂಚೆ ಯಜಮಾನ ನಿನಗೆ ಗೊತ್ತಿತ್ತು !" ಎಂದು ದಾರಿಯಲ್ಲಿ ಅವನನ್ನು ನಾನು ಕೇಳಿದೆ.

"ಓಹೋ, ಅವರು ನನಗೆ ಗೊತ್ತಿತ್ತು ! 'ಶಿಲ್ಪಿ' ಮಾಡುವುದನ್ನು ನನಗೆ ಹೇಳಿಕೊಟ್ಟವರೆ ಅವರು. ಅವರು ತಿಂಡಿಯಂಗಡಿಯಿಂದ ಹೊರಕ್ಕೆ ಬಂದಾಗ (ಪಾಪ, ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ!), ನಾವು ಅವರ ಹಿಂದೆ ಓಡಿಹೋಗಿ, 'ಮಾನ, ಮಾನ ! ನಮಗೆ ಸ್ವಲ್ಪ ಪಪ್ಪುಕಾಯಿ ಕೊಡಿ !' ಎಂದು ಕೇಳುತ್ತಿದ್ದೆವು. ಅವರು ತಮ್ಮಲ್ಲಿದ್ದ ಪಪ್ಪುಕಾಯಿಗಳೆಲ್ಲವನ್ನೂ ನಮಗೆ ಕೊಟ್ಟುಬಿಡುತ್ತಿದ್ದರು ಅವರು ಯಾವಾಗಲೂ ನಮ್ಮೊಂದಿಗೆ ಆಟವಾಡುತ್ತಿದ್ದರು."

"ಪ್ರಯಾಣಿಕರು ಎಂದಾದರೂ ಆತನ ವಿಚಾರ ಕೇಳುವುದುಂಟೋ?"

"ಈಗ ಮೊದಲಿನ ಹಾಗೆ ಪ್ರಯಾಣಿಕರೇ ಇಲ್ಲ. ಯಾರಾದರೂ ಇದ್ದರೆ, ಊರಿಂದೂರಿಗೆ ಸುತ್ತುವ ನ್ಯಾಯವಿಚಾರಕರು ಮಾತ್ರ. ಸತ್ತವರ ವಿಚಾರ ಅವರು ಯೋಚನೆ ಮಾಡುವುದೇ ಇಲ್ಲ. ಆದರೆ, ಈ ಬೇಸಗೆಯಲ್ಲಿ ಮಾತ್ರ ಒಬ್ಬಳು ಹೆಂಗಸು ಬಂದಿದ್ದಳು ; ಆ ಮುದುಕ ಅಂಚೆ ಯಜಮಾನನ ವಿಚಾರ ಕೇಳಿದಳು; ಅವನ ಗೋರಿ ನೋಡುವುದಕ್ಕೆ ಹೋಗಿದ್ದಳು."

"ಎಂಥವಳು ಆಕೆ ?"–ನಾನು ಕುತೂಹಲಗೊಂಡು ಕೇಳಿದೆ.

"ಒಳ್ಳೆ ಸುಂದರಿ ಆ ಹೆಂಗಸು. ಅವಳು ಆರು ಕುದುರೆ ಕಟ್ಟಿದ್ದ ಕೋಚು ಗಾಡಿಯಲ್ಲಿ ಬಂದಿದ್ದಳು. ಜೊತೆಗೆ ಅವಳ ಮೂರು ಮಕ್ಕಳು, ಒಬ್ಬಳು ದಾದಿ, ಒಬ್ಬ ಕಪ್ಪನೆಯ ಸೇವಕ ಇದ್ದರು. ಮುದುಕ ಅಂಚೆ ಯಜಮಾನ ಸತ್ತುಹೋದನೆಂದು ಅವಳಿಗೆ ತಿಳಿಸಿದಾಗ, ಅವಳು ಅತ್ತಳು ; ತನ್ನ ಮಕ್ಕಳನ್ನು ಕುರಿತು, 'ನೀವು ಇಲ್ಲೇ ಸುಮ್ಮನೆ ಇರಿ. ನಾನು ಸಮಾಧಿಯ ಸ್ಥಳಕ್ಕೆ ಹೋಗಿ ಬರುತ್ತೇನೆ' ಎಂದಳು. ನಾನು ಅವಳನ್ನು ಅಲ್ಲಿಗೆ ಕರೆದುಕೊಂಡು ಹೋಗಲು ಹೋದೆ. ಆದರೆ, ಅವಳು, "ನನಗೇ ದಾರಿ ಗೊತ್ತಿದೆ' ಎಂದಳು. ನನಗೆ ಬೆಳ್ಳಿಯ ಐದು ಕೊಪೆಕ್ ನಾಣ್ಯ ಕೊಟ್ಟಳು–ಅಂಥ ಒಳ್ಳೆಯ ಹೆಂಗಸು !" ಎಂದು ಆ ಹುಡುಗ ಹೇಳಿದನು.

ನಾವು ಶ್ಮಶಾನದ ಬಳಿಗೆ ಬಂದೆವು. ಬೇಲಿ ಕೂಡ ಇಲ್ಲದ ಬೋಳು ಜಾಗ. ಅಲ್ಲಲ್ಲೆ ಮರದ ಶಿಲುಬೆಗಳಿದ್ದುವು. ಬಿಸಿಲಿಗೆ ಮರೆ ಏನೂ ಇರಲಿಲ್ಲ. ಅಂಥ ಗೋಳುಕರೆಯುವ ಶ್ಮಶಾನವನ್ನು ನನ್ನ ಜೀವಮಾನದಲ್ಲಿ ಎಂದೂ ಕಂಡಿರಲಿಲ್ಲ.

ಆ ಚಿಕ್ಕ ಹುಡುಗ ಒಂದು ಮರಳ ದಿಬ್ಬದ ಮೇಲಕ್ಕೆ ಹಾರಿದ ; ಅದರ ಮೇಲೆ, ಹಿತ್ತಾಳೆ ವಿಗ್ರಹವಿದ್ದ ಕಪ್ಪು ಶಿಲುಬೆಯೊಂದಿತ್ತು ; "ಮುದುಕ ಅಂಚೆ

ಯಜಮಾನನ ಗೋರಿ ಇದೇಯೆ” ಎಂದ.

“ಆ ಹೆಂಗಸು ಇಲ್ಲಿಗೆ ಬಂದಿದ್ದಳೇ?” ಎಂದು ನಾನು ಕೇಳಿದೆ.

ವಾನ್ಯ ಉತ್ತರ ಕೊಟ್ಟ : “ಬಂದಿದ್ದಳು. ನಾನು ದೂರದಿಂದ ಅವಳನ್ನು ನೋಡುತ್ತಿದ್ದೆ. ಅವಳು ಇಲ್ಲಿ ಮಲಗಿದ್ದಳು, ಬಹಳ ಹೊತ್ತು ಮಲಗಿದ್ದಳು. ಅನಂತರ ಅವಳು ಹಳ್ಳಿಗೆ ಹೋಗಿ, ಪಾದ್ರಿಯನ್ನು ಕರೆದು ಅವನಿಗೆ ಸ್ವಲ್ಪ ಹಣ ಕೊಟ್ಟಳು. ನನಗೆ ಬೆಳ್ಳಿಯ ಐದು ಕೋಪೆಕ್ ನಾಣ್ಯ ಕೊಟ್ಟಳು–ಎಂಥ ಒಳ್ಳೆಯ ಹೆಂಗಸು ಅಂತ!”

ನಾನೂ ಸಹ ಆ ಚಿಕ್ಕ ಹುಡುಗನಿಗೆ ಒಂದು ಐದು ಕೋಪೆಕ್ ಬಿಲ್ಲೆ ಕೊಟ್ಟೆ. ಪ್ರಯಾಣಮಾಡಿ ಬಂದದ್ದಕ್ಕಾಗಲಿ ಅದಕ್ಕಾಗಿ ಏಳು ರೂಬಲ್ ವೆಚ್ಚವಾದದ್ದಕ್ಕಾಗಲಿ ಈಗ ನನಗೆ ವ್ಯಸನವಾಗಲಿಲ್ಲ.

೫. ಪರಿವರ್ತನೆ
(Lady into Lassie)

ಯಾವ ಉಡುಪಿನೊಳಿದ್ದರೂ,
ಇನಿಯೆ, ನೀನು ಮನೋಹರೆ.

–ಬೊಗ್ದ್ಯಾನೊವಿಚ್*

---

*೧೮ನೆಯ ಶತಮಾನದ ರಷ್ಯನ್ ಕವಿ ಇಪ್ಪೊಲಿಟ್ ಬೊಗ್ದ್ಯಾನೊವಿಚ್ ಎಂಬ ಕವಿಯ 'ಇನಿಯೆ' (Sweetheart) ಎಂಬ ಕವನದಿಂದ.

ಇವಾನ್ ಪೆಟ್ರೋವಿಚ್ ಬೆರಿಸ್ಟಾಫ್‌ನ ಜಮೀನು ಆಸ್ತಿ ನಮ್ಮ ನಾಡಿನ ಅತ್ಯಂತ ದೂರದ ಪ್ರಾಂತಗಳಲ್ಲಿ ನೆಲಸಿತ್ತು. ಅವನು ತರುಣನಾಗಿದ್ದಾಗ ಕಾವಲುದಳದಲ್ಲಿ ಸೇವೆ ಸಲ್ಲಿಸಿ, ೧೭೬೭ರಲ್ಲಿ ಅದರಿಂದ ನಿವೃತ್ತಿ ಪಡೆದು, ತನ್ನ ಆಸ್ತಿಯನ್ನು ನೋಡಿಕೊಂಡು ಜಮೀನಿನಲ್ಲಿಯೇ ವಾಸಮಾಡಲು ಹೋದನು ; ಮತ್ತೆ ಅವನು ಅದನ್ನು ಬಿಟ್ಟು ಬರಲೇ ಇಲ್ಲ. ಅವನು ಒಬ್ಬಳು ಬಡವೆಯಾದ ಸಾಮಾನ್ಯ ಸ್ತ್ರೀಯನ್ನು ಮದುವೆಯಾದನು ; ಅವನು ಸ್ವಲ್ಪ ದೂರದಾಚೆ ಬೇಟೆಯಾಡಲು ಹೋಗಿದ್ದಾಗ, ಅವಳು ಮಗು ಹೆತ್ತು ಸತ್ತುಹೋದಳು. ಅವನು ತನ್ನ ಆಸ್ತಿಯ ಮೇಲ್ವಿಚಾರಣೆ ನೋಡಿಕೊಳ್ಳುವ ಕಾರ್ಯದಲ್ಲಿ ಮಗ್ನನಾಗಿ, ಬೇಗನೆ ಅದರಲ್ಲಿಯೇ ಸಮಾಧಾನವನ್ನು ಕಂಡುಕೊಂಡು ತನಗಾದ ನಷ್ಟವನ್ನು ಮರೆತನು. ತಾನೇ ರಚಿಸಿದ ನಕ್ಷೆಗಳಿಗೆ ಅನುಸಾರವಾಗಿ ತನ್ನ ಮನೆಯನ್ನು ಕಟ್ಟಿಸಿದನು. ಜಮೀನಿನಲ್ಲಿ ಒಂದು ಬಟ್ಟೆ ಕಾರ್ಖಾನೆಯನ್ನು ಸ್ಥಾಪಿಸಿದನು. ತನ್ನ ಆದಾಯವನ್ನು ಹೆಚ್ಚಿಸಿಕೊಂಡನು : ಆ ಪ್ರಾಂತದಲ್ಲೆಲ್ಲ ತಾನೇ ಅತ್ಯಂತ ಬುದ್ಧಿಶಾಲಿಯೆಂದು ಭಾವಿಸಿದನು. ಅವನ ಮನೆಗೆ ಸಂಸಾರ ಸಮೇತರಾಗಿ ತಮ್ಮ ಬೇಟೆಯ ನಾಯಿಗಳೊಂದಿಗೆ ದೀರ್ಘ ಕಾಲ ಭೇಟಿಕೊಡುವ ಅಭ್ಯಾಸವಿಟ್ಟುಕೊಂಡಿದ್ದ ನೆರೆಹೊರೆಯವರು ಅವನ ಈ ಭಾವನೆಯನ್ನು ಕದಲಿಸಲು ಸಮರ್ಥರಾಗಿರಲಿಲ್ಲ. ಕೆಲಸದ ದಿನಗಳಲ್ಲಿ ಆತ ಒಂದು ಮಕಮಲ್ಲಿನಂಥ ಬಟ್ಟೆಯ ನಡುವಂಗಿ ತೊಟ್ಟು ತಿರುಗಾಡುತ್ತಿದ್ದನು : ವಿಶ್ರಾಂತಿ ದಿನಗಳಲ್ಲಿ ಮನೆನೆಯ್ಗೆಯ ಬಟ್ಟೆಯ ನಿಲುವಂಗಿಯನ್ನು ಧರಿಸುತ್ತಿದ್ದನು. ಲೆಕ್ಕಪತ್ರಗಳನ್ನೆಲ್ಲ ತಾನೇ ಬರೆದಿಡುತ್ತಿದ್ದನು ; ಶಾಸನ ಸಭೆಯ ಕಾರ್ಯಕಲಾಪಗಳ ವರದಿಯನ್ನಲ್ಲದೆ ಮತ್ತೇನನ್ನೂ ಓದುತ್ತಿರಲಿಲ್ಲ. ಒಟ್ಟಿನ ಮೇಲೆ ಅವನನ್ನು ಗರ್ವಿಷ್ಠನೆಂದು ಭಾವಿಸಿದ್ದರೂ ಎಲ್ಲರೂ ಅವನನ್ನು ಇಷ್ಟಪಡುತ್ತಿದ್ದರು. ಆತನಿಗೆ ಅತ್ಯಂತ ಸಮೀಪದ ನೆರೆಯವನಾದ ಗ್ರಿಗೊರಿ ಇರಾನೊವಿಚ್ ಮ್ಯುರೋಮ್ಸ್ಕಿಯೊಬ್ಬನೇ ಆತನೊಂದಿಗೆ ಹೊಂದಿಕೊಂಡು ಹೋಗದೆ ಇದ್ದವನು. ಅವನೊಬ್ಬ ಹಳೆಯ ಸಂಪ್ರದಾಯದ ರಷ್ಯನ್ ದೊಡ್ಡಮನುಷ್ಯ. ಮಾಸ್ಕೋದಲ್ಲಿದ್ದ ತನ್ನ ಆಸ್ತಿಯ ಬಹುಭಾಗವನ್ನು ಪೋಲು ಮಾಡಿಬಿಟ್ಟು, ವಿಧುರನಾದಮೇಲೆ ತನ್ನದಾಗಿ ಉಳಿದಿದ್ದ ಒಂದೇ ಒಂದಾದ ಹಳ್ಳಿಯಲ್ಲಿ ವಾಸಮಾಡಲು ಹೋಗಿದ್ದನು. ಅಲ್ಲಿ ತನ್ನ ಉಳಿದಿದ್ದ ದ್ರವ್ಯವನ್ನು ಅಪವ್ಯಯ ಮಾಡುವುದನ್ನು ಮುಂದುವರಿಸಿದನು ; ಆದರೆ, ಈಗ

ಬೇರೆಯ ವಿಧದಲ್ಲಿ, ಅಷ್ಟೆ. ತನ್ನದಾಗಿ ಉಳಿದಿದ್ದ ಒಂದೇ ಒಂದಾದ ಹಳ್ಳಿಯಲ್ಲಿ ವಾಸಮಾಡಲು ಹೋಗಿದ್ದನು. ಅಲ್ಲಿ ತನ್ನ ಉಳಿದಿದ್ದ ದ್ರವ್ಯವನ್ನು ಅಪವ್ಯಯ ಮಾಡುವುದನ್ನು ಮುಂದುವರಿಸಿದನು ; ಆದರೆ, ಈಗ ಬೇರೆಯ ವಿಧದಲ್ಲಿ, ಅಷ್ಟೆ. ತನ್ನಲ್ಲಿದ್ದಬದ್ದ ಹಣವನ್ನೆಲ್ಲಾ ವ್ಯಯಮಾಡಿ, ಇಂಗ್ಲಿಷ್ ಶೈಲಿಯಲ್ಲಿ ಒಂದು ಉದ್ಯಾನವನ್ನು ನಿರ್ಮಿಸಿದನು. ಆತನ ಲಾಯದ ಹುಡುಗರಿಗೆಲ್ಲ ಇಂಗ್ಲಿಷ್ ಕುದುರೆ ಸವಾರರ ಮಾದರಿಯ ಉಡುಪು. ಅವನ ಮಗಳಿಗೆ ಒಬ್ಬಳು ಇಂಗ್ಲಿಷ್ ಶಿಕ್ಷಕಿ. ಅವನು ತನ್ನ ಹೊಲವನ್ನು ಇಂಗ್ಲಿಷ್ ಮಾದರಿಯಲ್ಲಿ ಬೇಸಾಯ ಮಾಡಿಸಿದನು 'ಆದರೆ ಪರಕೀಯ ವಿಧಾನಗಳು ರಷ್ಯನ್ ಧಾನ್ಯಕ್ಕೆ ಹೊಂದುವುದಿಲ್ಲ.' ವ್ಯಯವನ್ನು ತಕ್ಕಮಟ್ಟಿಗೆ ತಗ್ಗಿಸಿದರೂ, ಗ್ರಿಗೊರಿ ಇವಾನೊವಿಚ್‌ನ ಆದಾಯಮಾತ್ರ ಹೆಚ್ಚಲಿಲ್ಲ; ಹಳ್ಳಿಗಾಡಿನಲ್ಲಿ ಕೂಡ ಅವನು ಹೊಸ ಸಾಲಗಳನ್ನು ಎತ್ತುವ ಮಾರ್ಗಗಳನ್ನು ಕಂಡುಕೊಂಡನು. ಇಷ್ಟೆಲ್ಲಾ ಆದರೂ ಅವನೊಬ್ಬ ಸಮರ್ಥನೆಂದೇ ಎಣಿಕೆಯಾಗಿತ್ತು. ತನ್ನ ಜಮೀನನ್ನು ಪ್ರಧಾನ ನ್ಯಾಯಸ್ಥಾನದ ಕಚೇರಿಗೆ ಭೋಗ್ಯಕ್ಕೆ ಹಾಕುವ ಯೋಚನೆ ಮಾಡಿದವನೆಂದರೆ, ಇವನೇ ಮೊದಲಿಗ ; ಈ ಕಾರ್ಯತಂತ್ರ ಆ ದಿನಗಳಲ್ಲಿ ಅತ್ಯಂತ ತೊಡಕಿನದು, ಸಾಹಸದ್ದು, ಎನಿಸಿಕೊಂಡಿತ್ತು. ಅವನನ್ನು ಖಂಡಿಸಿದವರಲ್ಲಿ ಅತ್ಯಂತ ಕಠಿನ ವಿಮರ್ಶಕನೆಂದರೆ ಬೆರಿಸ್ಟಾಫ್ ; ನವೀನ ಕ್ರಮಗಳನ್ನು ದ್ವೇಷಿಸುವುದೇ ಅವನ ಪ್ರಮುಖ ಗುಣವಿಶೇಷ. ತನ್ನ ನೆರೆಯವನ ಆ ಆಂಗ್ಲ ವ್ಯಾಮೋಹವನ್ನು ಕುರಿತು ಶಾಂತನಾಗಿ ಮಾತಾಡಲು ಆತನಿಗೆ ಸಾಧ್ಯವೇ ಇರಲಿಲ್ಲ ; ಅವನಲ್ಲಿ ಹುಳುಕು ಹುಡುಕುವುದರಲ್ಲಿ ದಣಿವೇ ಇಲ್ಲ. ಭೇಟಿ ಮಾಡಲು ಬಂದವರಿಗೆ ತನ್ನ ಹೊಲಮನೆಯನ್ನು ತೋರಿಸುವಾಗ ಅವರು ತನ್ನ ವ್ಯವಸ್ಥೆಯನ್ನು ಕುರಿತು ಮಾಡಿ ಪ್ರಶಂಸೆಗೆ ಉತ್ತರವಾಗಿ ಅವನು ಮುಚ್ಚುಮರೆಯ ವ್ಯಂಗ್ಯತೆಯಿಂದ ಹೀಗೆ ಹೇಳುತ್ತಿದ್ದನು : "ಒಳ್ಳೆಯದು, ಒಳ್ಳೆಯದು ! ನಮ್ಮ ನೆರೆಯವರಾದ ಗ್ರಿಗೊರಿ ಇವಾನೊವಿಚ್ ಮಹಾಶಯರ ರೀತಿಯಲ್ಲಿ ನಾವು ಇಲ್ಲಿ ಕೆಲಸ ಮಾಡುವುದಿಲ್ಲ. ಆಂಗ್ಲಶೈಲಿಯಲ್ಲಿ ನಮ್ಮನ್ನು ನಾವು ಹಾಳುಮಾಡಿಕೊಳ್ಳುವುದು ನಮ್ಮಂಥವರಿಗೆ ಹೇಳಿದ್ದಲ್ಲ. ತಿನ್ನುವುದಕ್ಕೆ ತಕ್ಕಷ್ಟು ನಮಗೆ ದೊರೆತರೆ ಸಾಕು, ನಾವು ತೃಪ್ತರು. ಇದು ರಷ್ಯನ್ ಮಾದರಿ !" ನೆರೆಹೊರೆಯವರ ಉತ್ಸಾಹದ ಪರಿಣಾಮವಾಗಿ, ಈ ಮತ್ತು ಇತರ ವ್ಯಂಗ್ಯಟೀಕೆಗಳು ಗ್ರಿಗೊರಿ ಇವಾನೊವಿಚ್‌ನ ಕಿವಿ ಮುಟ್ಟಿದುವು ; ಅವುಗಳ ನಿರೂಪಣೆಯಲ್ಲಿ ಅವುಗಳಿಗೆ ಏನೂ ಊನವಾಗಲಿಲ್ಲವೆಂದು ನೀವು ಖಾತರಿಯಾಗಿರಬಹುದು. ನಮ್ಮ ಪತ್ರಿಕೋದ್ಯೋಗಿಗಳಂತೆಯೇ ಆ

ಆಂಗ್ಲವ್ಯಾಮೋಹಿ಼ಯೂ ಟೀಕೆಯನ್ನು ಸಹಿಸದವನು. ಕೆರಳಿದ ಅವನು ಬೆರಿಸ್ಟಾಫ್‌ನನ್ನು ಶುದ್ಧ ಕರಡಿಯೆಂದೂ ಹಳ್ಳಿಯ ಗಮಾರನೆಂದೂ ಬೈದನು.

ಬೆರಿಸ್ಟಾಫ್‌ನ ಮಗ ತಂದೆಯ ಸಂದರ್ಶನ ಮಾಡಲು ಬಂದಾಗ ಈ ಇಬ್ಬರು ಜಮೀನುದಾರರ ಸಂಬಂಧ ಹೀಗಿತ್ತು. 'ಎಕ್ಸ್' (X)-ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಪಡೆದ ಅವನು ಸೈನ್ಯಕ್ಕೆ ಸೇರಲು ಉದ್ದೇಶಿಸಿದ್ದನು ; ಆದರೆ ಅವನ ತಂದೆ ಇದಕ್ಕೆ ಸಮ್ಮತಿಕೊಡದಾದನು. ಆ ತರುಣನಾದರೋ ತಾನು ಸರ್ಕಾರದ ಕೆಲಸಕ್ಕೆ ಪೂರ್ತಿ ಅನರ್ಹನೆಂದು ಭಾವಿಸಿದ್ದನು. ಇಬ್ಬರಲ್ಲಿ ಒಬ್ಬರೂ ಸೋಲರು. ಈ ನಡುವೆ ಯೌವನಸ್ಥನಾದ ಅಲೆಕ್ಸಿ ನಿರುದ್ಯೋಗಿಯಾದ ದೊಡ್ಡ ಮನುಷ್ಯನ ಜೀವನವನ್ನು ನಡಸುತ್ತಿದ್ದನು ; ಯಾವುದೇ ಜರೂರು ಸಂದರ್ಭಕ್ಕಾದರೂ ಆಗಲೆಂದು ಒಂದು ಮೀಸೆಯನ್ನೂ ಕೃಷಿಮಾಡಿ ಬೆಳಸಿದ್ದನು.

ಅಲೆಕ್ಸಿ ವಾಸ್ತವವಾಗಿ ಒಳ್ಳೆಯ ಸೊಗಸಾದ ಆಸಾಮಿ. ಅವನ ಲಲಿತಾಕೃತಿ ಸೈನಿಕ ಸಮವಸ್ತ್ರದಲ್ಲಿ ಮೆರೆಯುವ ಪುಣ್ಯವನ್ನು ಎಂದೂ ಪಡೆಯದೆ, ಧೈರ್ಯಶಾಲಿಯಾದ ಅಶ್ವಾರೋಹಿಯಾಗಿ ಕಂಗೊಳಿಸುವ ಬದಲು ಸರ್ಕಾರದ ಕಾಗದಪತ್ರಗಳ ಮೇಲೆ ಬಾಗಿ ಕುಳಿತು ತನ್ನ ಯೌವನವನ್ನೆಲ್ಲ ಕಳೆಯುವ ಸಂದರ್ಭವೊದಗಿದಲ್ಲಿ ಅದು ಖಂಡಿತವಾಗಿ ಮರುಕಪಡಬೇಕಾದ ವಿಷಯ. ಬೇಟೆಗೆ ಹೋದಾಗ ಅವನು ಮಾರ್ಗದಲ್ಲಿನ ಯಾವ ವಿಘ್ನಗಳನ್ನೂ ಲೆಕ್ಕಿಸದೆ ಎಲ್ಲರಿಗಿಂತ ಮುಂದೆ ನಾಗಾಲೋಟದಲ್ಲೀ ಸವಾರಿ ಮಾಡುತ್ತ ಹೋಗುತ್ತಿರುವುದನ್ನು ಕಂಡು. ನೆರೆಹೊರೆಯವರೆಲ್ಲ ಅವನೂ ಎಂದಿಗೂ ಒಳ್ಳೆಯ ಸರ್ಕಾರಿ ಅಧಿಕಾರಿಯಾಗಲಾರನೆಂದು ಒಮ್ಮತದಿಂದ ಒಪ್ಪಿದರು. ನೆರೆಹೊರೆಯ ತರುಣಿಯರು ಅವನೆಡೆಗೆ ಆಸಕ್ತಿಪೂರ್ಣವಾದ ಕಡೆಗಣ್ಣ ನೋಟವನ್ನು ಬೀರುತ್ತಿದ್ದರು ; ಆ ಆಸಕ್ತಿ ಮೆಚ್ಚಿಗೆಯಾಗಿ ಪರಿಣಮಿಸುತ್ತಿದ್ದುದೂ ಅಪೂರ್ವವೇನಾಗಿರಲಿಲ್ಲ. ಆದರೆ ಅಲೆಕ್ಸಿ ಇವುಗಳಿಗೆಲ್ಲ ಸ್ವಲ್ಪವೂ ಗಮನಕೊಡಲಿಲ್ಲ ; ಅದರಿಂದ ಅವನ ಈ ಔದಾಸೀನ್ಯಕ್ಕೆ ಪ್ರಣಯಪ್ರಸಂಗವೊಂದು ಕಾರಣವೆಂದು ಅವರು ಆರೋಪಿಸಿಲೇಬೇಕಾಯಿತು. ಈ ಅಭಿಪ್ರಾಯಕ್ಕೆ ಪೋಷಕವಾಗಿ, ಅವನ ಪತ್ರಗಳಲ್ಲಿ ಒಂದರಲ್ಲಿದ್ದ ಒಂದು ವಿಳಾಸದ ಪ್ರತಿಯನ್ನುಳ್ಳ ಚೀಟಿಯೊಂದು ಕೈಯಿಂದ ಕೈಗೆ ಸಾಗಿ ಹೋಯಿತು : ಮಾಸ್ಕೋ ನಗರದ, ಸೆಯ್‌ಂಟ್ ಅಲೆಕ್ಸಿಸ್ ಮಠದ ಎದುರಿಗೆ, ತಾಮ್ರ ಕೆಲಸಗಾರ ಸಾವೆಲ್ಯೆಫ್‌ನ ಮನೆಯಲ್ಲಿರುವ ಅಕ್ಯುಲೀನ ಪೆಟ್ರೋವ್ನ ಕುರೊಚ್ಚಿನಾಗೆ–'ಈ ಪತ್ರವನ್ನು ದಯವಿಟ್ಟು ಎ.ಎನ್.ಆರ್. (A.N.R.)-ಗೆ ತಲಪಿಸುವುದು.

ಗ್ರಾಮಾಂತರದಲ್ಲಿ ಎಂದೂ ವಾಸಮಾಡದೆ ಇರುವಂಥ ನನ್ನ ವಾಚಕರಿಕೆ ಹಳ್ಳಿಗಾಡಿನ ಈ ತರುಣಿಯರು ಎಷ್ಟು ಸಂತೋಷಭರಿತರೆಂಬ ಕಲ್ಪನೆಯಿರಲಾರದು. ನಿರ್ಮಲವಾದ ಗಾಳಿ ಕುಡಿಯುತ್ತ, ಸೇಬಿನ ತೋಟಗಳ ನೆರಳಲ್ಲಿ ಬೆಳೆಯುವ ಇವರು ಜೀವನ ಮತ್ತು ಸಮಾಜದ ವಿಚಾರವಾಗಿ ತಮ್ಮ ತಿಳಿವಳಿಕೆಯನ್ನೆಲ್ಲಾ ಪುಸ್ತಕಗಳಿಂದ ಪಡೆಯುತ್ತಾರೆ. ಏಕಾಂತ ವಾಸ, ಸ್ವಾತಂತ್ರ್ಯ, ಪುಸ್ತಕವಾಚನ ಇವು ನಮ್ಮ ಮುದ್ದಿನಲ್ಲಿ ಬೆಳೆದ ನಾಗರಿಕ ಸುಂದರಿಯರು ಕಾಣದ ಭಾವ ಭಾವೋದ್ರೇಕಗಳನ್ನು ಅವರಲ್ಲಿ ಮೊದಲಿನಲ್ಲೇ ಬೆಳಸುತ್ತವೆ. ಈ ಹಳ್ಳಿಯ ಕನ್ನೆಯರಿಗೆ ಗಂಟೆಗಳ ಝುಣತ್ಕಾರವನ್ನು ಕೇಳುವುದೇ ಒಂದು ಸಾಹಸಾನುಭವ, ಹತ್ತಿರದ ಪಟ್ಟಣಕ್ಕೆ ಭೇಟಿಕೊಡುವುದೇ ಅವರ ಜೀವನದ ಮಹಾಘಟನೆ ; ಹಳ್ಳಿಗೆ ಭೇಟಿಕೊಟ್ಟವರು ಚಿರಸ್ಥಯಿಯಾದ, ಕೆಲವುವೇಳೆ ಜೀನವಪರ್ಯಂತವಾದ ಸ್ಮರಣೆಗಳನ್ನು ಇವರಿಗೆ ಬಿಟ್ಟು ಹೋಗುತ್ತಾರೆ. ಈ ತರುಣಿಯರ ವಿಶೇಷ ಲಕ್ಷಣಗಳಾಗಿ ತೋರುವ ಕೆಲವು ವೈಚಿತ್ರ್ಯಗಳನ್ನು ಕಂಡು ನಗುವ ಹಕ್ಕು ನಿಮಗಿದೆ; ಆದರೆ ಮೇಲೆ ಮೇಲೆ ಮಾತ್ರ ಪರಿಶೀಲಿಸುವವನ ಹಾಸ್ಯ ಕುಚೋದ್ಯಗಳು ಅವರ ಮುಖ್ಯ ಗುಣಗಳನ್ನು ನಾಶಮಾಡಲಾರವು ; ಅವುಗಳಲ್ಲಿ ಮುಖ್ಯವಾದದ್ದು ಶೀಲ ವೈಶಿಷ್ಟ್ಯ ಅಥವಾ ವ್ಯಕ್ತಿತ್ವ ; ಜೀನ್ –ಪಾಲ್ ರಿಷ್ಟರ್‌ನ ಮತಾನುಸಾರ, ಆ ಒಂದು ವ್ಯಕ್ತಿಯಿಲ್ಲದೆ ಯಾವ ಮನುಷ್ಯ ಪ್ರಾಣಿಯೂ ಮಹಿಮಾಶಾಲಿಯೆನಿಸಲಾರ. ದೊಡ್ಡ ದೊಡ್ಡ ಮುಖ್ಯನಗರಗಳಲ್ಲಿ ಸ್ತ್ರೀಯರು ಮೇಲ್ತರದ ವಿದ್ಯಾಭ್ಯಾಸವನ್ನು ಪಡೆಯ ಬಹುದು ; ಆದರೆ ಸಮಾಜದ ರೀತಿನೀತಿಗಳು ಶೀಲದಮೇಲೆ ತಮ್ಮ ಸಮತಾಸಾಧಕ ಪ್ರಭಾವವನ್ನು ಬೀರಿ, ಅವರ ತಲೆಯ ಟೋಪಿಯನ್ನು ಹೇಗೋ ಹಾಗೆ ಅವರ ಮನಸ್ಸನ್ನೂ ಒಂದೇ ತೆರದ್ದನ್ನಾಗಿ ಮಾಡುತ್ತವೆ. ನ್ಯಾಯ ವಿಮರ್ಶೆಯಾಗಿ ಇಲ್ಲವೆ ನಿಂದಾತ್ಮಕವಾಗಿ ಹೀಗೆ ಹೇಳಿಲ್ಲ ; ಆದರೂ ಕೂಡ, ಒಬ್ಬ ಹಳಬನಾದ ಲೇಖಕನು ಹೇಳುವಂತೆ, ಹೇಳಿಕೆಯಂತೂ ಉಳಿಯುತ್ತದೆ.

ನಮ್ಮ ತರುಣಿಯರ ಮೇಲೆ ಅಲೆಕ್ಸಿ ಎಂಥ ಪ್ರಭಾವಮುದ್ರೆಯನ್ನು ಬೀರುತ್ತಾನೆನ್ನುವುದನ್ನು ಕಲ್ಪನೆ ಮಾಡಿಕೊಳ್ಳುವುದು ಸುಲಭ. ಅವರು ಸಂಧಿಸಿದವರ ಪೈಕಿ, ಭ್ರಾಂತಿನಿರಸನ ಹೊಂದಿ ಮ್ಲಾನನಾಗಿ ಕಾಣುತ್ತಿದ್ದ ಮೊದಲನೆಯ ವ್ಯಕ್ತಿಯೊಂದರೆ ಅವನೆ ; ತೀರಿಹೋದ ಸುಖಭೋಗಗಳು, ಬಾಡಿದ ಯೌವನ ಇವನ್ನು ಕುರಿತು ತಮ್ಮೊಂದಿಗೆ ಮಾತಾಡಿದ ಮೊದಲನೆಯವನೂ ಅವನೆ ; ಇವೆಲ್ಲಕ್ಕೆ ಕಳಶವಿಟ್ಟಂತೆ, ಮರಣಸೂಚಕ ಸಂಕೇತ ಚಿತ್ರವನ್ನು ಕೆತ್ತಿದ ಕಪ್ಪು ಉಂಗುರವೊಂದನ್ನು ಧರಿಸಿದ್ದನು. ಹಳ್ಳಿಗಾಡಿನ ಸೀಮೆಗೆ ಇದೆಲ್ಲಾ ತೀರ ಹೊಸದು.

ಎಲ್ಲ ಹುಡುಗಿಯರೂ ಅವನ ವಿಚಾರದಲ್ಲಿ ಹುಚ್ಚೆದ್ದುಹೋದರು.

ಆದರೆ, ಅವರಲ್ಲಿ ಯಾರೂ ಅವನನ್ನು ಆ ಆಂಗ್ಲವ್ಯಾಮೋಹಿಯ ಮಗಳು ಲೀಸ (ಅಥವಾ, ಅವಳ ತಂದೆ ಸಾಮಾನ್ಯವಾಗಿ ಕರೆಯುತ್ತಿದ್ದಂತೆ ಬೆಟ್ಸಿ)* ಮನಸ್ಸಿಗೆ ಹಚ್ಚಿಸಿಕೊಂಡಷ್ಟು ಹಚ್ಚಿಸಿಕೊಳ್ಳಲಿಲ್ಲ. ಇಬ್ಬರ ತಂದೆಯವರೂ ಒಬ್ಬರ ಮನೆಗೊಬ್ಬರು ಹೋಗುತ್ತಿರಲಿಲ್ಲ ; ಈ ಕಾರಣ, ಅವಳು ಅಲೆಕ್ಸಿಯನ್ನು ಇನ್ನೂ ನೋಡಿರಲಿಲ್ಲ ; ಹೀಗಿರುವಲ್ಲಿ, ಸುತ್ತಮುತ್ತಿನ ತರುಣಿಯರಿಗಾದರೂ ಅವನನ್ನು ಬಿಟ್ಟು ಬೇರೆ ಪ್ರಸ್ತಾಪವೇ ಇಲ್ಲ. ಲೀಸ ಹದಿನೇಳರ ಹರೆಯದವಳು. ಅವಳ ಆಕರ್ಷಕವಾದ, ಆಲಿವ್ ಬಣ್ಣದ *ಚರ್ಮದ ಮುಖವನ್ನು ಎರಡು ಕಪ್ಪು ಕಣ್ಣುಗಳು ಬೆಳಗುತ್ತಿದ್ದುವು. ಒಬ್ಬಳೇ ಮಗುವಾಗಿದ್ದು ಮುದ್ದಿನಿಂದ ಕೆಟ್ಟು ಹೋಗಿದ್ದಳೆಂದೇ ಹೇಳಬೇಕು. ಅವಳ ಗೆಲವು ನಲಿವು, ಕೊನೆ ಮೊದಲಿಲ್ಲದ ಕುಚೋದ್ಯ ಇವನ್ನು ಕಂಡು ತಂದೆಗೆ ಹಿಗ್ಗು : ಆದರೆ ಶಿಕ್ಷಿಕೆ ಮಿಸ್ ಜ್ಯಾಕ್ಸನ್ನಿಗೆ ಮಾತ್ರ ನಿರಾಶೆಗೆ ಕಾರಣ. ಆಕೆ ನಲವತ್ತು ವರ್ಷದ ಬಿಂಕದ ವೃದ್ಧಕನ್ಯೆ ; ಅವಳು ಕೆನ್ನೆಗಳಿಗೆ ಬಣ್ಣ ಹಾಕಿಕೊಂಡು, ಕಪ್ಪಿನಿಂದ ಹುಬ್ಬು ತಿದ್ದಿಕೊಳ್ಳುತ್ತಿದ್ದಳು ; ಪ್ರತಿ ಆರು ತಿಂಗಳಿಗೊಮ್ಮೆ 'ಪಮೀಲ' ಕಾದಂಬರಿಯನ್ನು ಆದ್ಯಂತವಾಗಿ ಓದುತ್ತಿದ್ದಳು; ಇಷ್ಟೆಲ್ಲಕ್ಕೂ ಅವಳು ವರ್ಷಕ್ಕೆ ಎರಡು ಸಾವಿರ ರೂಬಲ್‌ಗಳನ್ನು ಪಡೆಯುತ್ತಿದ್ದಳು; 'ರಷ್ಯವೆಂಬ ಈ ರಾಕ್ಷಸ ದೇಶ'ದಲ್ಲಿ ಬೇಸರದಿಂದ ನಮೆದು ಸಾಯುತ್ತಿದ್ದಳು.

ಲೀಸಳ ಪರಿಚರ್ಯೆಗೆ ಅವಳ ಸೇವಿಕೆ ನಾಸ್ತ್ಯ ಇದ್ದಳು ; ವಯಸ್ಸಿನಲ್ಲಿ ಅವಳಿಗಿಂತ ಸ್ವಲ್ಪ ದೊಡ್ಡವಳು ; ತನ್ನ ಚಿಕ್ಕ ಒಡತಿಯಂತೆಯೆ ಚಂಚಲ ಚಿತ್ತಳು. ಲೀಸಾಗೆ ಇವಳನ್ನು ಕಂಡರೆ ತುಂಬ ಅಕ್ಕರೆ; ಎಲ್ಲ ರಹಸ್ಯ ವಿಚಾರಗಳಲ್ಲಿಯೂ ಅವಳನ್ನು ತನ್ನ ಅಂತರಂಗಕ್ಕೆ ತೆಗೆದುಕೊಳ್ಳುತ್ತಿದ್ದಳು; ತನ್ನ ತಮಾಷೆ ಕುಚೋದ್ಯಗಳನ್ನು ಏರ್ಪಡಿಸುವುದರಲ್ಲಿ ಅವಳ ನೆರವು ಪಡೆಯುತ್ತಿದ್ದಳು. ಒಂದು ಮಾತಿನಲ್ಲಿ, ಫ್ರೆಂಚ್ ರುದ್ರನಾಟಕಗಳಲ್ಲಿ ಕಂಡುಬರುವ ಅನೇಕ ರಹಸ್ಯ ಸಂಗಾತಿಯರಿಗಿಂತ ನಾಸ್ತ್ಯ ಪ್ರಿಲುಚೀನೋ ಗ್ರಾಮದಲ್ಲಿ ಹೆಚ್ಚು ಪ್ರಮುಖ ಪಾತ್ರದ ವ್ಯಕ್ತಿಯಾಗಿದ್ದಳು.

ಒಂದು ದಿನ ಪ್ರಾತಃಕಾಲ ನಾಸ್ತ್ಯ ತನ್ನ ಒಡತಿಗೆ ವಸ್ತ್ರಧಾರಣೆ ಮಾಡಿಸುತ್ತಿದ್ದಾಗ, "ಇಂದು ಸ್ವಲ್ಪ ಹೊರಕ್ಕೆ ಹೋಗಿಬರಲೆ?" ಎಂದು ಕೇಳಿದಳು.

---

*Betsy – ಇದು ಇಂಗ್ಲಿಷ್ ಹೆಸರೆಂಬುದನ್ನೂ ಗಮನಿಸಬೇಕು–ಅನು.

* ಹಳದಿ ಕಂದು ಬಣ್ಣ.

"ಅಗತ್ಯವಾಗಿ ಆಗಬಹುದು ! ಎಲ್ಲಿಗೆ ಹೊರಟಿದ್ದೀಯೆ?"

"ಟ್ಯುಗಿಲೋವೋಗೆ, ಬೆರಿಸ್ಟಾಫ್‌ರ ಮನೆಗೆ. ಅವರ ಅಡಿಗೆಯವನ ಹೆಂಡತಿಯ ಹೆಸರಿನ ಸಂತನ ದಿನ ಇವೊತ್ತು ; ನಮ್ಮನ್ನು ಊಟಕ್ಕೆ ಕರೆಯಲು ನಿನ್ನೆ ಅವಳು ಬಂದಿದ್ದಳು."

"ಹಾಗೇನು ! ಅತ್ತ ಮನೆಯ ಯಜಮಾನರುಗಳಿಗೆ ವಿರಸ ; ಇತ್ತ ಅವರ ಸೇವಕರು ಒಬ್ಬರನೊಬ್ಬರು ಔತಣ ಕೂಟಕ್ಕೆ ಕರೆಯುತ್ತಾರೆ !" ಎಂದು ಲೀಸ ಅಚ್ಚರಿಗೊಂಡಳು.

ನಾಸ್ತ್ಯ ಪ್ರತಿಭಟಿಸಿದಳು : "ನಮ್ಮ ನಮ್ಮ ದಣಿಗಳ ಜಗಳದ ವಿಚಾರ ಕಟ್ಟಿಕೊಂಡು ನಮಗೇನು ? ಇಷ್ಟಕ್ಕು, ನಾನು ನಿಮ್ಮ ಸೇವಕಳೇ ಹೊರತು ನಿಮ್ಮ ಅಪ್ಪನ ಸೇವಕಳಲ್ಲವಲ್ಲ. ನೀವು ಗೊತ್ತು. ಆದ್ದರಿಂದ ಆ ಮುದು ಮುದುಕರು ತಮ್ಮ ತಮ್ಮಲ್ಲಿಯೇ ಕಾದಾಡಿಕೊಳ್ಳಲಿ, ಬಿಡಿ !"

"ನಾಸ್ತ್ಯ, ಪ್ರಯತ್ನಪಟ್ಟು ಅಲೆಕ್ಸಿ ಬೆಂಸ್ಟಾಫರನ್ನು ಒಂದು ಸಲ ನೋಡಿ ಬಾ. ಅವರು ಹೇಗಿದ್ದಾರೆ, ಯಾವ ಪ್ರಕಾರದ ಮನುಷ್ಯರು ಎನ್ನುವುದನ್ನು ನನಗೆ ಸರಿಯಾಗಿ ತಿಳಿದುಹೇಳು."

ನಾಸ್ತ್ಯ ಆಗಲಿ ಎಂದು ಮಾತುಕೊಟ್ಟಳು ; ತನ್ನ ಸೇವಿಕೆ ಮರಳುವುದನ್ನೇ ದಿನಪೂರ್ತಿಯೆಲ್ಲ ಲೀಸ ತಾಳ್ಮೆಯಿಲ್ಲದೆ ಕಾಯುತ್ತಿದ್ದಳು. ಸಂಜೆ ನಾಸ್ತ್ಯ ಹಿಂದಿರುಗಿದಳು. ಅವಳು ಕೊಟಡಿಯೊಳಕ್ಕೆ ಒಂದೊಡನೆಯೆ, "ಒಳ್ಳೆಯದು, ಲಿಸವೀಟ ಗ್ರಿಗೊರ್ರೈವ್ನ, ನಾನು ಕಿರಿಯ ಬೆರಿಸ್ಟಾಫ್‌ರನ್ನು ನೋಡಿದ್ದೇನೆ ; ಚೆನ್ನಾಗಿ ನೋಡಿದೆ. ದಿನವೆಲ್ಲಾ ನಾವು ಒಟ್ಟಿಗೆಯೆ ಇದ್ದೆವು" ಎಂದು ಹೇಳಿದಳು.

"ಏನು ? ಹಾಗಿದ್ದರೆ ಹೇಳು, ಮೊದಲಿಂದ ಕಡೆಯವರೆಗೆ ಎಲ್ಲವನ್ನೂ ನನಗೆ ಹೇಳು !"

"ಅಗತ್ಯವಾಗಿ ಆಗಲಿ, ನಾವೆಲ್ಲ ಅಲ್ಲಿಗೆ ಹೋದೆವು,–ನಾನು, ಅನಿಸ್ಯ ಯೊಗೊರೊವ್ನ, ನೆನಿಲಾ, ದುನ್ಯ......"

"ಅದೆಲ್ಲಾ ಇರಲಿ ಬಿಡು ! ಸರಿ, ಆಮೇಲೆ ?"

"ಎಲ್ಲವನ್ನೂ ತೀರ ಮೊದಲಿಂದ ನಿನಗೆ ಹೇಳೋಣ ಅಂತ, ಅಷ್ಟೆ. ಸರಿ, ಊಟದ ಹೊತ್ತಿಗೆ ನಾವೆಲ್ಲ ಅಲ್ಲಿಗೆ ಹೋದೆವು. ಕೋಣೆಯ ತುಂಬ ಜನ ಇದ್ದರು. ಕಾಲ್ಪಿನ್ ದಂಪತಿಗಳ, ಜಖರೈಫ್ ದಂಪತಿಗಳ ಸೇವಕರು ಅಲ್ಲಿದ್ದರು. ಜೊತೆಗೆ, ಉಗ್ರಾಣದವನ ಹೆಂಡತಿ ಮತ್ತು ಹೆಣ್ಣುಮಕ್ಕಳು, ಖ್ಲುಪಿನ್‌ರ ಮನೆಯ ಸೇವಕರು..."

"ಬೆರಸ್ಟಾಫ್‌ರ್ ವಿಚಾರ ಹೇಳಬಾರದೆ?"

"ಒಂದು ನಿಮಿಷ ತಾಳಿ, ಸರಿ, ನಾವೆಲ್ಲ ಮೇಜಿನ ಮುಂದೆ ಊಟಕ್ಕೆ ಕುಳಿತೆವು. ಊಟಕ್ಕೆ ಕರೆದವಳ ಪಕ್ಕದಲ್ಲಿಯೆ ಉಗ್ರಾಣದವನ ಹೆಂಡತಿ, ಅವಳ ಪಕ್ಕದಲ್ಲಿ ನಾನು.....ಆ ಹೆಣ್ಮಕ್ಕಳಿದ್ದಾರೆಯಲ್ಲ, ಅವರು ತುಟಿ ಉರುಗಿಸಿದರು ; ಆದರೆ ಅವರನ್ನು ನಾನು ಲೆಕ್ಕಕ್ಕೆ ಮಡಗುತ್ತೇನೆಯೆ ?"

"ಓ, ನಾಸ್ಟ್ಯ, ನಿನ್ನ ಕೊನೆ ಮೊದಲಿಲ್ಲದ ಈ ಒಕ್ಕಣೆಯಿಂದ ಅದೆಷ್ಟು ಬೇಸರಗೊಳಿಸುತ್ತೀಯೇ !"

"ನಿಮಗಂತೂ ಅದೆಷ್ಟು ಆತುರವೋ ! ಸರಿ ; ಆಮೇಲೆ, ನಾವು ಊಟ ಮುಗಿಸಿ ಎದ್ದೆವು......ಊಟ ಮುಗಿಯಬೇಕಾದರೆ ಮೂರುಗಂಟೆ ಹಿಡಿಯಿತು, ಅಷ್ಟು ಸೊಗಸಾಗಿತ್ತು ಊಟ–'ಬ್ಲಮಾನ್‌ಷೇ,'* ಹಣ್ಣು ಹೂರಣದ ಕಡಬುಗಳು, ನೀಲಿಯ ಬಣ್ಣದ್ದು, ಕೆಂಪುಬಣ್ಣದ್ದು, ಪಟ್ಟೆಪಟ್ಟೆಯದು.....ಸರಿ, ನಾವೆಲ್ಲ ಎದ್ದು ಹಿಡಿಯುವಾಟ ಆಡಲು ತೋಟಕ್ಕೆ ಹೋದೆವು. ಅಲ್ಲಿಗೆ ಚಿಕ್ಕದಣಿ ಬಂದರು."

"ಹಾಗೇನು? ಅವರು ಅಷ್ಟು ಚೆನ್ನಾಗಿದಾರೆಯಂತೆ, ನಿಜವೆ?"

"ಹೌದು, ಅಷ್ಟೊಂದು ಚೆನ್ನಾಗಿದಾರೆ, ನಿಜವಾಗಿ ಸುಂದರಪುರುಷ. ತೆಳ್ಳಗೆ ಎತ್ತರವಾಗಿದಾರೆ, ಕೆಂಪು ಕೆನ್ನೆ....."

"ನಿಜವಾಗಿ ! ಅವರ ಬಣ್ಣ ಮಾಸಲು ಎಂದು ನಾನು ಖಂಡಿತವಾಗಿ ತಿಳಿದಿದ್ದೆ. ಸರಿ, ಅವರು ಹೇಗೆ ಕಂಡರು ನಿನಗೆ–ಕೊರಗುತ್ತಿರುವಂತೆ ಕಂಡರೆ, ಚಿಂತೆಯಲ್ಲಿರುವಂತೆ ಕಂಡರೆ?"

"ಕೊಂಚವೂ ಹಾಗಿರಲಿಲ್ಲ! ನನ್ನ ಬದುಕಿನಲ್ಲಿ ಅಂಥ ಹುಚ್ಚರನ್ನು ನಾನು ಎಂದೂ ಕಂಡಿದ್ದಿಲ್ಲ. 'ನಮ್ಮ ಜೊತೆ ಹಿಡಿಯುವಾಟ ಆಡಬೇಕೆಂದು ಅವರಿಗೆ ಅನ್ನಿಸಿತು."

"ಅವರು ನಿಮ್ಮೊಂದಿಗೆ ಹಿಡಿಯುವಾಟ ಆಡುವುದೆ ! ನೀನು ಹೇಳುವುದು ಹುಡುಗಾಟವಲ್ಲ ತಾನೆ !"

"ಖಂಡಿತ ಅವರು ಆಡಿದರು ! ಅಷ್ಟೇ ಅಲ್ಲ–ಅವರು ಯಾರನ್ನಾದರೂ ಹಿಡಿದಾಗ, ಅವಳಿಗೆ ಒಂದು ಮುತ್ತು ಕೊಡುತ್ತಿದ್ದರು."

"ಓ, ನಾಸ್ಟ್ಯ, ನೀನು ಕಥೆ ಹೇಳುತ್ತಿದ್ದೀಯೆ !"

"ಖಂಡಿತ ಇಲ್ಲ. ನಾನು ಅವರನ್ನು ಬಿಟ್ಟು ದೂರ ಕೂಡ ಹೋಗಲಾಗಲಿಲ್ಲ. ಅವರು ದಿನವೆಲ್ಲ ನಮ್ಮೊಂದಿಗೆಯೇ ಇದ್ದರು."

"ಆದರೆ ಎಲ್ಲರೂ ಹೇಳುತ್ತಾರೆ, ಅವರು ಯಾರನ್ನೋ ಪ್ರೀತಿಸುತ್ತಾರೆ

ಅಂತ, ಯಾರ ಕಡೆಗೂ ತಿರುಗಿನೋಡುವುದಿಲ್ಲ ಅಂತ?"

"ಅದು ಇರಬಹುದು. ಆದರೆ ಅವರು ಖಂಡಿತ ನನ್ನ ಕಡೆ ನೋಡಿದರು, ಉಗ್ರಾಣದವಳ ಮಗಳು ಟಾನ್ಯ ಕಡೆಯೂ ನೋಡಿದರು. ಕಾಲ್ಬಿನ್ಸ್ ಪಾಶಾಳನ್ನೂ ಕಡೆಗಣಿಸಲಿಲ್ಲ....ಹಾಗೆ ಯೋಚನೆ ಮಾಡಿದರೆ, ಆ ತುಂಟ ಮನುಷ್ಯ ಯಾರನ್ನೂ ಉದಾಸೀನ ಮಾಡಲಿಲ್ಲ !"

"ಆಶ್ಚರ್ಯ ! ಅದು ಸರಿ, ಮನೆಯಲ್ಲಿ ಅವನಬಗ್ಗೆ ಏನು ಹೇಳುತ್ತಾರೆ ?"

"ಬಹಳ ಒಳ್ಳೆಯ ಮನುಷ್ಯನೆಂದೇ ಹೇಳುತ್ತಾರೆ. ತುಂಬ ದಯಾವಂತ ; ಯಾವಾಗಲೂ ಗೆಲವಾಗಿರುತ್ತಾನಂತೆ. ಆತನಲ್ಲಿರುವ ಒಂದೇ ದೋಷ ಅಂದರೆ, ಕಂಡ ಹುಡುಗಿಯ ಬೆನ್ನಟ್ಟಿ ಹೋಗುವುದರಲ್ಲಿ ತುಂಬ ಇಷ್ಟ. ಆದರೆ, ನನಗೆ ಅದರಿಂದ ತುಂಬ ಕೆಡುಕೆನಿಸುವುದಿಲ್ಲ–ಅವರದನ್ನು ಬಿಟ್ಟುಬಿಡುತ್ತಾರೆ."

"ಅವರನ್ನ ನೋಡಬೇಕು ಅಂತ ನನಗೆ ಎಷ್ಟು ಆಸೆ ಅಂತ !"–ಎಂದು ನಿಟ್ಟುಸಿರುಗರೆದಳು ಲೀಸ.

"ಆಯ್ಯೊ, ಅದೇನು ಬಹು ಸುಲಭ. ಟ್ಯುಗಿಲೋವೊ ಇಲ್ಲಿಂದ ಬಹಳ ದೂರವೇನಲ್ಲ–ಬರೀ ಮೂರು ವರ್ಸ್ಟ್, ಅಷ್ಟೆ. ಅಲ್ಲಿಗೆ ಒಮ್ಮೆ ನಡೆದು ಹೋದರಾಯಿತು, ಇಲ್ಲ ಕುದುರೆಯ ಮೇಲೆ ಹೋದರೂ ಆಯಿತು–ಖಂಡಿತ ನಿಮಗೆ ಸಿಕ್ಕೇ ಸಿಕ್ಕುತ್ತಾರೆ. ಅವರು ಪ್ರತಿದಿನ ಬೆಳಗ್ಗೆ ಹೊತ್ತಿಗೆ ಮುಂಚೆ ಬಂದೂಕ ಹಿಡಿದು ಹೊರಕ್ಕೆ ಹೊರಡುತ್ತಾರೆ."

"ಹ್ಞಾ, ಅದು ಮಾತ್ರ ಸಾಧ್ಯವಿಲ್ಲ. ಅವರ ಬೆನ್ನಟ್ಟಿ ನಾನು ಹೋಗುತ್ತಿದೇನೆಂದು ಅವರು ಭಾವಿಸಬಹುದು. ಅಲ್ಲದೆ, ನಮ್ಮ ತಂದೆಗೂ ಅವರ ತಂದೆಗೂ ಆಗುವುದಿಲ್ಲ; ಆದ್ದರಿಂದ ಏನು ಮಾಡಿದರೂ ಅವರ ಪರಿಚಯ ಮಾಡಿಕೊಳ್ಳುವ ಹಾಗಿಲ್ಲ...ಓ, ನಾಸ್ತ್ಯ ! ಏನು ಅಂತ ನಿನಗೆ ಹೇಳ್ತೇನೆ ! ರೈತನ ಹುಡುಗಿಯಂತೆ ಉಡುಪು ಹಾಕಿಕೊಂಡು ಬಿಡುತ್ತೇನೆ !"

"ಹಾಗೆ ಮಾಡಿ ಮತ್ತೆ ! ಕೈಯಲ್ಲಿ ನೆಯ್ದ ಬಟ್ಟೆಯ ಒಂದು ಕುಪ್ಪಸ, ಒಂದು 'ಸರಫಾನ್' (ಲಂಗ) ಇವನ್ನು ತೊಟ್ಟು ಧೈರ್ಯವಾಗಿ ಟ್ಯುಗಿಲೋವೋಗೆ ನಡೆದುಕೊಂಡು ಹೋಗಿ. ಬೆರಿಸ್ಟಾಫ್ ನಿಮ್ಮನ್ನು ಕಡೆಗಣಿಸುವುದಿಲ್ಲ ಅಂತ ಖಾತರಿ ಕೊಡುತ್ತೇನೆ."

"ಹಳ್ಳಿಯ ಜನರಂತೆಯೇ ನಾನು ಮಾತಾಡಬಲ್ಲೆ ! ಓ ನಾಸ್ತ್ಯ, ನನ್ನ ಮೆಚ್ಚಿನ ನಾಸ್ತ್ಯ ! ಎಂಥ ಸೊಗಸಾದ ಆಲೋಚನೆ !"

ತನ್ನ ವಿನೋದಕರವಾದ ಯೋಚನೆಯನ್ನು ಕಾರ್ಯರೂಪಕ್ಕೆ ತರುವ

ದೃಢನಿಶ್ಚಯದಿಂದ ಲೀಸ ಹಾಸಿಗೆಯ ಮೇಲೆ ಮಲಗಿದಳು. ಮಾರನೆಯ ದಿನವೇ ಅದನ್ನು ನಿರ್ವಹಿಸತೊಡಗಿ, ದಪ್ಪನೆಯ ನೀಲಿಯ ಮನೆನೆಯ್ಗೆಯ ಬಟ್ಟೆ ಮತ್ತು ಹಿತ್ತಾಳೆಯ ಗುಂಡಿಗಳನ್ನು ಪೇಟೆಯಿಂದ ತರಹೇಳಿದಳು. ನಾಸ್ತ್ಯಳ ನೆರವಿನಿಂದ ಅವಳು ಒಂದು ಕುಪ್ಪಸವನ್ನೂ 'ಸರಫಾನ'ನ್ನೂ ಕತ್ತರಿಸಿ, ಎಲ್ಲ ಕೆಲಸದ ಹುಡುಗಿಯರಿಗೂ ಆದರ ತಯಾರಿಕೆಯನ್ನು ವಹಿಸಿದಳು ; ಸಂಜೆಯ ಹೊತ್ತಿಗೆ ಎಲ್ಲವೂ ಸಿದ್ಧವಾಗಿತ್ತು. ಲೀಸ ತನ್ನ ಹೊಸ ಉಡುಪನ್ನು ಧರಿಸಿ, ಕನ್ನಡಿಯ ಮುಂದೆ ನಿಂತು ತನ್ನನ್ನು ತಾನೆ ನೋಡಿ ಕೊಂಡಾಗ, ತಾನು ಎಂದೂ ಅಷ್ಟು ಅಂದವಾಗಿದ್ದುದು ಕಂಡಿರಲಿಲ್ಲವೆಂದು ಒಪ್ಪಿಕೊಳ್ಳಬೇಕಾಯಿತು. ತನ್ನ ಪಾತ್ರಾಭಿನಯವನ್ನು ಅಭ್ಯಾಸ ಮಾಡಿಕೊಳ್ಳುವುದಕ್ಕಾಗಿ, ಬಾಗಿ ನಮಿಸಿದಳು; ಕುಳಿಯಲ್ಲಿ ತಲೆ ಆಡಿಸುವ ಮಣ್ಣಿನ ಬೆಕ್ಕಿನಂತೆ ತಲೆಯನ್ನು ಆ ಕಡೆಗೂ ಒಲೆದಾಡಿಸುತ್ತ ಅತ್ತಿತ್ತ ನಡೆದಾಡಿದಳು. ಸ್ಥಳೀಯ ದೇಸಿ ನುಡಿಯಲ್ಲಿ ಮಾತಾಡಿ, ನಗುಬಂದಾಗ ತೋಳತುದಿಯಿಂದ ಬಾಯಿ ಮುಚ್ಚಿಕೊಳ್ಳುತ್ತಿದ್ದಳು ; ಇಷ್ಟೆಲ್ಲ ಮಾಡಿ, ನಾಸ್ತ್ಯಳ ಪೂರ್ಣ ಅನುಮೋದನೆಯನ್ನು ಪಡೆದಳು. ಅವಳಿಗಾದ ಕ್ಲೇಶವೆಲ್ಲ, ಅಂಗಳದಲ್ಲಿ ಬರಿಗಾಲಿನಲ್ಲಿ ನಡೆದಾಡಲು ಪ್ರಯತ್ನಿಸಿದಾಗ ; ಏಕೆಂದರೆ ಹುಲ್ಲುನೆಲ ಅವಳ ಕೋಮಲ ಪಾದಗಳನ್ನು ನೋಯಿಸುತ್ತಿದ್ದಿತು. ಮರುಳು ಮತ್ತು ಕಲ್ಲುಚೂರು ಸಹಿಸಲಾಗದಂತೆ ಚುಚ್ಚುತ್ತಿದ್ದುವು. ಈ ಸಂದರ್ಭದಲ್ಲೂ ನಾಸ್ತ್ಯಗೇಟಿನ ಜಮೀನುದಾರದ ಮನೆಯ ಮುಂದೆ ದಾರಿ ಹಿಡಿದು ಸಾಗಿದುವು. ಟ್ರೋಫಿಮ್ ದಾರಿಯಲ್ಲಿ ಹೋಗುವಾಗ ಒಂದು ಜೊತೆ ಸಣ್ಣ ಹೊಳಪು ಬಣ್ಣದ ಜೋಡುಗಳನ್ನು ನಾಸ್ತ್ಯಳ ಕೈಗಿತ್ತನು ; ಅವಕ್ಕೆ ಬೆಲೆಯಾಗಿ ಐವತ್ತು ಕೊಪೆಕ್‌ಗಳು ಅವಳಿಂದ ಅವನಿಗೆ ದೊರೆತುವು. ಲೀಸ ಸದ್ದಿಲ್ಲದ ತನ್ನ ರೈತರ ಉಡುಪು ತೊಟ್ಟು, ಮಿಸ್ ಜ್ಯಾಕ್ಸನ್ನಿನ ವಿಚಾರದಲ್ಲಿ ಹೇಳಬೇಕಾದ ಎಚ್ಚರಿಕೆಯ ಮಾತನ್ನು ಪಿಸುಗುಟ್ಟಿ, ಹಿಂದಿನ ಕೈಸಾಲೆಯಿಂದ ಮನೆಬಿಟ್ಟು, ಮನೆಯ ಹಿತ್ತಿಲ ತೋಟದ ಮೂಲಕ ಬಯಲಾದ ಹೊಲಗಳ ಕಡೆಗೆ ಓಡಿದಳು.

ಮೂಡಗಡೆಯ ಆಕಾಶವನ್ನು ಮುಂಜಾನೆ ಬೆಳಗುತ್ತಿತ್ತು. ಆಸ್ಥಾನಿಕರು ತಮ್ಮ ಜಾರ್ ಚಕ್ರವರ್ತಿಗಾಗಿ ಕಾದಿರುವಂತೆ ಮುಗಿಲುಗಳು ಹೊಂಬಣ್ಣತೊಟ್ಟು ಸೂರ್ಯನಿಗಾಗಿ ಸಾಲುಗಟ್ಟಿ ನಿಂತು ಕಾಯುತ್ತಿರುವಂತೆ ಕಂಡವು ಸ್ವಚ್ಛವಾದ ಆಕಾಶ, ಪ್ರಾತಃಕಾಲದ ಹೊಚ್ಚ ಹೊಸತನ, ಇಬ್ಬನಿ, ಮೆಲು ಗಾಳಿ, ಹಕ್ಕಿಗಳ ಸಂಗೀತ– ಇವು ಲೀಸಳ ಹೃದಯದಲ್ಲಿ ಶಿಶುಸಹಜವಾದ ಉಲ್ಲಾಸವನ್ನು ತುಂಬಿದುವು. ಯಾರಾದರೂ ತನ್ನನ್ನು ಕಂಡಾರೆಂಬ ಭೀತಿಯಿಂದ ಅವಳು ನಡೆದು ಹೋಗುತ್ತಿಲ್ಲ,

ಹಾರಿ ಹೋಗುತ್ತಿದಾಳೆ ಎನ್ನುವಂತೆ ಕಾಣುತ್ತಿತ್ತು. ತನ್ನ ತಂದೆಯ ಜಮೀನಿನ ಎಲ್ಲೆಕಟ್ಟನ್ನು ಗುರುತಿಸಿದ್ದ ತೋಪನ್ನು ಸಮೀಪಿಸಿದಾಗ, ಅವಳು ನಿಧಾನಿಸಿದಳು. ಇಲ್ಲೆ ಅವಳು ಅಲೆಕ್ಸಿಗಾಗಿ ಕಾಯಬೇಕಾಗಿದ್ದದ್ದು. ಅವಳ ಹೃದಯ ಜೋರಾಗಿ ಬಡಿದುಕೊಳ್ಳ ತೊಡಗಿತು–ಏಕೆಂದು ಅವಳು ಹೇಳಲಾರದವಳಾಗಿದ್ದಳು. ನಮ್ಮ ಅನುಭವಕ್ಕೆ ಬರುವ ಕಳವಳವೇ ಅವುಗಳ ಮುಖ್ಯವಾದ ಸೊಬಗು. ಲೀಸ ತೋಪಿನ ನಸು ಬೆಳಕಿನ ಪ್ರದೇಶವನ್ನು ಹೊಕ್ಕಳು. ಆ ತೋಪಿನ ಅಂತರಾಳದಿಂದ ಮಂದವಾದ ಶಬ್ದಗಳು ಆ ಹುಡುಗಿಯ ಕಿವಿಗೆ ಬಿದ್ದು, ಅವಳ ಉಲ್ಲಾಸ ಆ ಕ್ಷಣದಲ್ಲಿಯೆ ಕುಗ್ಗಿಹೋಯಿತು. ತುಸುತುಸುವಾಗಿ ಅವಳು ಆನಂದದಾಯಕ ಧ್ಯಾನದಲ್ಲಿ ಮುಳುಗಿದಳು. ಅವಳು ಆಲೋಚಿಸಿದಳು, ಏನೆಂದರೆ......ಒಂದು ವಸಂತ ಪ್ರಾತಃಕಾಲದಂದು ಐದು ಆರು ಗಂಟೆಯ ಸಮಯದಲ್ಲಿ ಹದಿನೇಳರ ಹರೆಯದ ಕನ್ಯೆ ಒಂದು ತೋಪಿನಲ್ಲಿದ್ದಾಗ ಏನನ್ನು ಕುರಿತು ಆಲೋಚಿಸುವಳು ಎಂದು ಯಾರು ತಾನೆ ಹೇಗೆ ಖಚಿತವಾಗಿ ಹೇಳಲು ಸಾಧ್ಯ? ಅವಳು ತನ್ನ ಆಲೋಚನೆಗಳಲ್ಲಿ ಮುಳುಗಿ, ಇಕ್ಕಡೆಗಳಲ್ಲೂ ಇದ್ದ ಎತ್ತರವಾದ ಮರಗಳಿಂದ ನೆರಳು ಬೀಳುತ್ತಿದ್ದ ಒಂದು ದಾರಿಯುದ್ದಕ್ಕೂ ನಡೆದು ಹೋಗುತ್ತಿದ್ದಳು ; ಆಗ ತಟ್ಟನೆ ಒಂದು ಬೇಟೆಯ ನಾಯಿಬಗುಳುತ್ತ ಅವಳ ಕಡೆಗೆ ಓಡಿ ಬಂದಿತು. ಲೀಸ ಗಾಬರಿಗೊಂಡು ಕಿರಿಚಿದಳು. ಅದೇ ಕ್ಷಣದಲ್ಲಿಯೆ, ನಾಯಿಯನ್ನು ಗದರಿಸಿ ಕೂಗಿ ಕರೆಯುತ್ತಿದ್ದ ಒಂದು ಧ್ವನಿ ಅವಳಿಗೆ ಕೇಳಿಸಿತು; ಪೊದೆಗಳ ಹಿಂದಿನಿಂದ ಬಂದು ಒಬ್ಬ ಬೇಟೆಗಾರ ಕಾಣಿಸಿಕೊಂಡನು. “ಚೆಲುವೆ, ಹೆದರ ಬೇಡ ! ನನ್ನ ನಾಯಿ ಕಚ್ಚುವುದಿಲ್ಲ” ಎಂದು ಅವನು ಲೀಸಳಿಗೆ ಹೇಳಿ ಸನ್ನಿವೇಶವನ್ನು ಸದುಪಯೋಗಪಡಿಸಿಕೊಳ್ಳುವುದರಲ್ಲಿ ಹಿಂದಾಗಲಿಲ್ಲ. ಅವಳು ಭೀತಿ ಲಜ್ಜೆಗಳ ಮಿಶ್ರಭಾವವನ್ನು ನಟಿಸುತ್ತ, “ಆದರೆ, ನನಗೆ ಹೆದರಿಕೆ. ನಾಯಿ ಎಷ್ಟು ಭಯಂಕರವಾಗಿದೆ ನೋಡಿ ! ಅದು ಮತ್ತೆ ನನ್ನ ಮೇಲೆ ನೆಗೆದು ಬಿದ್ದೀತು” ಎಂದಳು. ಅಲೆಕ್ಸಿ (ಅವನು ಯಾರೆಂದು ವಾಚಕರಿಗೂ ಈಗಾಗಲೇ ಗೊತ್ತಾಗಿರಬೇಕಲ್ಲ) ಒಂದು ಕ್ಷಣ ಕಾಲ ರೈತರ ಹುಡುಗಿಯನ್ನು ದೃಷ್ಟಿಸಿ ನೋಡಿದನು. “ನಿನಗೆ ಹೆದರಿಕೆಯಾಗಿದ್ದರೆ ನಾನು ನಿನ್ನ ಜೊತೆ ಬರುತ್ತೇನೆ. ನಿನ್ನ ಜೊತೆ ನಡೆದುಬರಲು ಅಭ್ಯಂತರವಿಲ್ಲವಷ್ಟೆ?” ಎಂದನು. “ನಿಮ್ಮನ್ನು ತಡೆಯುವವರು ಯಾರು? ರಸ್ತೆಯಲ್ಲಿ ನಡೆದು ಹೋಗಲು ಎಲ್ಲರೂ ಸ್ವತಂತ್ರರು” ಎಂದು ಲೀಸ ಪ್ರತಿಯಾಡಿದಳು.

“ನೀನು ಎಲ್ಲಿಂದ ಬಂದಿದ್ದೀಯೆ?”

"ಪ್ರಿಲುಚಿನ್ನೋದಿಂದ. ಕಮ್ಮಾರ ವಾಸಿಲಿಯ ಮಗಳು, ನಾನು. ಅಣಬೆ ಕಿತ್ತುಕೊಂಡು ಹೋಗಲು ಬಂದೆ." (ಲೀಸ ತೊಗಟೆಯಿಂದ ಮಾಡಿದ ಬುಟ್ಟಿಯೊಂದನ್ನು ಅದಕ್ಕೆ ಕಟ್ಟಿದ್ದ ಹುರಿಯಿಂದ ತೂಗಾಡಿಸಿದಳು.) "ಅದು ಸರಿ, ನೀವು ಯಾರು ? ಟ್ಯುಗಿಲೋವೋದಿಂದ ಬಂದಿದ್ದೀರೋ?"

"ಹೌದು, ಹೌದು. ನಾನು ಚಿಕ್ಕ ದಣಿಗಳ ಕೈಯಾಳು" ಎಂದು ಅಲೆಕ್ಸಿ ಉತ್ತರಕೊಟ್ಟನು. ಅಲೆಕ್ಸಿ ಅವಳಿಗೆ ಸಮನಾದ ಸ್ಥಾನದಲ್ಲಿ ನಿಂತು ಅವಳೊಡನೆ ವ್ಯವಹರಿಸಲಿಚ್ಛಿಸಿದನು. ಆದರೆ ಲೀಸ ಅವನನ್ನು ನೋಡಿ ನಕ್ಕುಬಿಟ್ಟಳು.

"ಅಲ್ಲ, ನೀವು ಕೈಯಾಳಲ್ಲ. ನೀವು ನನ್ನನ್ನ ಮೋಸಮಾಡಲಾರಿರಿ. ನೀವೇ ದಣಿ ಎಂದೂ ನಾನು ಬಲ್ಲೆ" ಎಂದಳು ಅವಳು.

"ಹಾಗೆ ನೀನು ಯೋಚಿಸಲು ಕಾರಣ ?"

"ನಿಮ್ಮ ಸರ್ವಸ್ವವೂ ಅದನ್ನು ಸಾರುತ್ತಿದೆ."

"ಆದರೆ, ಸ್ಪಷ್ಟವಾಗಿ ಯಾವುದು, ಹೇಳು !"

"ಅಲ್ಲ, ಯಾರಿಗಾದರೂ ಗೊತ್ತಾಗುವುದಿಲ್ಲವೆ, ದಣಿ ಯಾರು, ಆಳು ಯಾರು ಅಂತ? ನೀವು ಉಡುಪು ತೊಟ್ಟಿರುವ ಬಗೆಯೆ ಬೇರೆ, ನಿಮ್ಮ ಮಾತಿನ ರೀತಿಯೇ ಬೇರೆ ; ನಿಮ್ಮ ನಾಯನ್ನು ಕರೆಯುವ ರೀತಿ ಕೂಡ ಬೇರೆ, ನಾವು ಕರೆಯುವ ಹಾಗಲ್ಲ."

ಲೀಸಳ ಸೊಬಗು ಅಲೆಕ್ಸಿಯ ಮೇಲೆ ಪ್ರಭಾವ ಬೀರತೊಡಗಿತು. ಹಳ್ಳಿಯ ಚೆಂದದ ಹುಡುಗಿಯರನ್ನು ತೀರ ಸಲುಗೆಯಿಂದ ಕಾಣುವ ಅಭ್ಯಾಸವುಳ್ಳ ಅವನು, ಅವಳ ಸುತ್ತ ತನ್ನ ತೋಳನ್ನು ಬಳಸಲು ಪ್ರಯತ್ನಿಸಿದನು. ಆದರೆ ಲೀಸ ಹಿಂದಕ್ಕೆ ಚಿಮ್ಮಿ, ತಟ್ಟನೆ ತಿರಸ್ಕಾರಸೂಚಕ ಹಾಗೂ ನಿರೋಧಿಸುವ ಮುಖಭಾವವನ್ನು ತಳೆದಳು ; ಅದನ್ನು ಕಂಡು ಅಲೆಕ್ಸಿಗೆ ವಿನೋದವೆನಿಸಿದರೂ, ತನ್ನ ಪ್ರಣಯ ಪ್ರದರ್ಶನದ ಪ್ರಯತ್ನದಲ್ಲಿ ಹೆಚ್ಚು ಮುಂದುವರಿಯಲು ಹಿಂದೆಗೆದನು.

"ತನ್ನ ಮುಂದೆ ನನ್ನೊಂದಿಗೆ ನೀವು ಸ್ನೇಹದಿಂದಿರಬೇಕಾದರೆ, ನೀವು ಮೈಮರೆತು ವರ್ತಿಸಕೂಡದು, ತಿಳಿಯಿತೆ?" ಎಂದು ಅವಳು ಬಿಂಕದಿಂದ ನುಡಿದಳು.

ಅಲೆಕ್ಸಿ ಹೊಟ್ಟೆತುಂಬ ನಕ್ಕು ಕೇಳಿದನು: "ಹೀಗೆ ಮಾತಾಡಲು ನಿನಗೆ ಹೇಳಿಕೊಟ್ಟವರು ಯಾರು? ನಿನ್ನ ಚಿಕ್ಕ ಒಡತಿಯ ಪರಿಚಾರಿಕೆ ಇದ್ದಾಳಲ್ಲ, ನನ್ನ ಗೆಳತಿ ನಾಸ್ಟೆಂಕ್, ಅವಳು ಕಲಿಸಿದಳೆ? ಈಗ ನಮಗೆ ಅರಿವಾಗುತ್ತಿದೆ, ವಿದ್ಯಾಭ್ಯಾಸ ಹೇಗೆ ಹರಡಿಬಿಟ್ಟಿದೆ ಅಂತ."

ಲೀಸ ತನ್ನ ಪಾತ್ರದ ಇತಿಮಿತಿಯನ್ನು ಮೀರಿ ತಾನು ಮಾತಾಡುತ್ತಿರುವುದಾಗಿ

ಭಾವಿಸಿದಳು ; ಕೂಡಲೆ ತಾನು ವಹಿಸಿದ್ದ ಪಾತ್ರದಂತೆಯೆ ಮತ್ತೆ ನಡೆದುಕೊಳ್ಳಲು ತವಕಿಸಿದಳು.

"ಅದು ಸರಿಯೆ. ಆ ದೊಡ್ಡ ಮನೆಗೆ ನಾನು ಹೋಗುವುದಿಲ್ಲ ಅಂತ ಯಾಕೆ ನೀವು ಭಾವಿಸುತ್ತೀರಿ ; ಕೂಡಲೆ ತಾನು ವಹಿಸಿದ್ದ ಪಾತ್ರದಂತೆಯೆ ಮತ್ತೆ ನಡೆದುಕೊಳ್ಳಲು ತವಕಿಸಿದಳು.

"ಅದು ಸರಿಯೆ. ಆ ದೊಡ್ಡ ಮನೆಗೆ ನಾನು ಹೋಗುವುದಿಲ್ಲ ಅಂತ ಯಾಕೆ ನೀವು ಭಾವಿಸುತ್ತೀರಿ ? ಅಲ್ಲಿ ನಾನು ಏನೆಲ್ಲಾ ಕೇಳಿ, ನೋಡಿ, ತಿಳಿಯುತ್ತೇನೆ. ಹೌದೋ ಅಲ್ಲವೊ ? ನಿಮ್ಮೊಂದಿಗೆ ಇಲ್ಲಿ ಹರಟೆ ಹೊಡೆಯುತ್ತ ನಿಂತುಬಿಟ್ಟರೆ, ನನಗೆ ತುಂಬ ಅಣಬೆಯ ಸಿಕ್ಕುವುದಿಲ್ಲ. ಇನ್ನು ನಿಮ್ಮ ದಾರಿ ನಿಮಗೆ, ಸ್ವಾಮಿ; ನನ್ನ ದಾರಿ ನನಗೆ, ನಮಸ್ಕಾರ."

ಲೀಸ ಹೊರಟಂತೆ ನಟಿಸಿದಳು. ಅಲೆಕ್ಸಿ ಅವಳ ಕೈ ತುಡುಕಿ, ಹಿಂದೆ ಹಿಡಿದು ನಿಲ್ಲಿಸಿದನು.

"ಓ ಚೆಲುವೆ, ನಿನ್ನ ಹೆಸರೇನು?"

ಲೀಸ ತನ್ನ ಕೈ ಬೆರಳುಗಳನ್ನು ಅಲೆಕ್ಸಿಯ ಕೈಯಿಂದ ಬಿಡಿಸಿ ಕೊಳ್ಳಲು ಪ್ರಯತ್ನಿಸುತ್ತ, "ಅಕ್ಯುಲಿನ. ಇರಲಿ, ನನ್ನನ್ನು ಬಿಡಿ, ಮನೆಗೆ ಹೋಗಲು ಹೊತ್ತಾಯಿತು" ಎಂದು ಉತ್ತರ ಕೊಟ್ಟಳು.

"ಇರಲಿ, ಅಕ್ಯುಲಿನಾ. ನಾನು ಖಂಡಿತ ಹೋಗಿ, ನಿಮ್ಮ ತಂದೆ ಕಮ್ಮಾರ ವಾಸಿಲಿ ಎಂದೆಯಲ್ಲ, ಅವರನ್ನು ನೋಡಿ ಬರುತ್ತೇನೆ."

"ಏನೆಂದಿರಿ? ದೇವರಾಣೆ, ಹಾಗೆ ಮಾಡಬೇಡಿ ! ನಾನು ತೋಪಿನಲ್ಲಿ ಒಬ್ಬಳೇ ಒಂಟಿಯಾಗಿ ಒಬ್ಬ ಪುರುಷನೊಂದಿಗೆ ಮಾತಾಡುತ್ತಿದ್ದೆನೆಂದು ಮನೆಯಲ್ಲಿ ಗೊತ್ತಾಗಿಬಿಟ್ಟರೆ, ನಾನು ಚೆನ್ನಾಗಿ ತಿನ್ನಬೇಕಾಗುತ್ತೆ. ನಮ್ಮ ತಂದೆ, ಕಮ್ಮಾರ ವಾಸಿಲಿಯವರು, ನನ್ನನ್ನು ಮೈ ನೀಲಿಗಟ್ಟುವಂತೆ ಹೊಡೆದುಬಿಡುತ್ತಾರೆ."

"ಆರೆ, ನಾನು ಮತ್ತೆ ನಿನ್ನನ್ನು ನೋಡಲೇಬೇಕಲ್ಲ"

"ಅಣಬೆ ಕೀಳುವುದಕ್ಕೆ ನಾನು ಬರುತ್ತಾ ಇರುತ್ತೇನೆ."

"ಆದರೆ, ಯಾವಾಗ?"

"ನನಗೆ ತಿಳಿಯದು–ಬಹುಶಃ ನಾಳೆ !"

"ಧೈರ್ಯವಿದ್ದಿದ್ದರೆ, ನಿನಗೆ...ಮುತ್ತು... ಕೊಡಬೇಕೆಂಬ ಆಸೆ, ಪ್ರಿಯ ಅಕ್ಯುಲಿನಾ. ನಾಳೆಯೇ ಬಂದುಬಿಡು, ಇದೇ ಹೊತ್ತಿಗೆ, ಖಂಡಿತವಾಗಿ !"

"ಆಗಲಿ."

“ನನ್ನನ್ನ ನಿರಾಶೆಗೊಳಿಸುವುದಿಲ್ಲ ತಾನೆ ?”

“ಇಲ್ಲ, ಹಾಗೆ ಮಾಡುವುದಿಲ್ಲ.”

“ಇಲ್ಲ ಅಂತ ಆಣೆಯಿಡು.”

“ಪವಿತ್ರವಾದ ಶಿಲುಬೆಯಾಣೆಗೂ ನಾನು ಬರುತ್ತೇನೆ.”

ಈ ತರುಣ ತರುಣಿಯರು ಒಬ್ಬರನ್ನೊಬ್ಬರು ಅಗಲಿದರು. ಲೀಸ ತೋಪಿನಿಂದ ಹೊರಬಂದು, ಹೊಲವನ್ನು ದಾಟಿ, ತೋಟದೊಳಕ್ಕೆ ನುಸುಳಿ, ಹೊಲಮನೆಗೆ ಧಾವಿಸಿದಳು ; ಅಲ್ಲಿ ನಾಸ್ತ್ಯ ಇವಳಿಗಾಗಿ ಕಾಯುತ್ತಿದ್ದಳು. ಇಲ್ಲಿ ಅವಳು ಉಡುಪು ಮಾರ್ಪಡಿಸಿ, ತನ್ನ ಎಂದಿನ ಉಡುಪನ್ನು ಧರಿಸಿದಳು ; ತನ್ನ ನಚ್ಚಿನ ಗೆಳತಿಯ ಕುತೂಹಲದ ಪ್ರಶ್ನೆಗಳಿಗೆ ಎಲ್ಲೋ ಜ್ಞಾನವಿಟ್ಟು ಉತ್ತರಕೊಡುತ್ತಿದ್ದಳು ; ಬಳಿಕ ಆತುರಾತುರವಾಗಿ ಭೇಟಿಯ ಕೋಣೆಗೆ ಹೋಗಿ ಕಾಣಿಸಿಕೊಂಡಳು. ಮೇಜಿನ ಮೇಲೆ ಬೆಳಗಿನ ಉಪಾಹಾರ ಬಡಿಸಿ ಸಿದ್ಧವಾಗಿತ್ತು. ಅಷ್ಟು ಹೊತ್ತಿಗೆಮುಂಚೆ ಕೂಡ ಮಿಸ್ ಜ್ಯಾಕ್ಸನ್ 'ಪೌಡರ್' ಹಾಕಿಕೊಂಡು, ತೆಳ್ಳಗೆ ಕಾಣುವಂತೆ ನಡುಬಿಗಿದುಕೊಂಡು, ಬ್ರೆಡ್ಡನ್ನು ತೆಳ್ಳನೆಯ ಹಲ್ಲೆಗಳಾಗಿ ಕೊಯ್ಯುತ್ತಿದ್ದಳು. ಲೀಸಳ ತಂದೆ ಅಷ್ಟು ಮುಂಚೆಯೆ ಹೊರಕ್ಕೆ ತಿರುಗಾಡಲು ಹೋಗಿದ್ದುದಕ್ಕಾಗಿ ಪ್ರಶಂಸಿಸಿದನು. ''ಸೂರ್ಯೋದಯಕ್ಕೆ ಸರಿಯಾಗಿ ಎದ್ದೇಳುವುದಕ್ಕಿಂತ ಆರೋಗ್ಯಕರವಾದದ್ದು ಯಾವುದೂ ಇಲ್ಲ” ಎಂದು ಹೇಳಿದನು. ಆನಂತರ ಅವನು ಆಂಗ್ಲ ಕಾಲಿಕ ಪತ್ರಿಕೆಗಳಿಂದ ಆಯ್ದ ದೀರ್ಘಾಯುಸ್ಸಿನ ಹಲವು ನಿದರ್ಶನಗಳನ್ನು ಉಲ್ಲೇಖಿಸಿ, ನೂರು ವರ್ಷಕ್ಕೆ ಮೇಲ್ಪಟ್ಟು ಬದುಕಿದವರೆಲ್ಲ 'ವೋಡ್ಕ'ವನ್ನು ಕುಡಿಯುತ್ತಿರಲಿಲ್ಲವೆಂದೂ ಬೇಸಗೆಯಾಗಲಿ ಮಾಗಿಯಾಗಲಿ ಹೊತ್ತುಮೂಡುವ ಹೊತ್ತಿಗೆ ಸರಿಯಾಗಿ ಏಳುತ್ತಿದ್ದರೆಂದೂ ತಿಳಿಸಿದನು. ಲೀಸ ಅವನು ಹೇಳಿದ್ದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಅವಳು ಬೆಳಗ್ಗೆ ನಡೆದ ರಹಸ್ಯ ಸಂದರ್ಶನದ ಸಂದರ್ಭಗಳು, ಅಕ್ಯುಲಿನ ಮತ್ತು ತರುಣ ಬೇಟೆಗಾರ ಇವರ ನಡುವೆ ನಡೆದ ಸಮಗ್ರ ಸಂಭಾಷಣೆ–ಇವೆಲ್ಲವನ್ನೂ ಮನಸ್ಸಿನಲ್ಲಿಯೇ ತಿರುವಿ ಹಾಕುತ್ತಾ ಮನಸ್ಸಿನಲ್ಲಿ ಅಳುಕ ತೊಡಗಿದ್ದಳು. ತಮ್ಮ ಸಂಭಾಷಣೆ ಸಭ್ಯತೆಯ ಹದ್ದುಮೀರಿರಲ್ಲಿಲವೆಂದೂ, ತನ್ನ ಹುಡುಗಾಟಿಕೆಯ ಪರಿಣಾಮವಾಗಿ ಯಾವ ಅನಿರೀಕ್ಷಿತ ಅನಿಷ್ಟ ಪರಿಣಾಮಗಳೂ ಉಂಟಾಗವೆಂದೂ ತನಗೆ ತಾನೆ ಸಮಾಧಾನ ಹೇಳಿಕೊಂಡದ್ದು ವ್ಯರ್ಥವೆನಿಸಿತು–ಏಕೆಂದರೆ, ತರ್ಕಸರಣಿಗಿಂತ ಆತ್ಮಸಾಕ್ಷಿಯ ಸೊಲ್ಲು ಮೇಲುಗೈಯಾಗಿತ್ತು. ಅವಳ ಆತಂಕಕ್ಕೆ ಮುಖ್ಯ ಕಾರಣ, ಅವಳು ಮಾರನೆಯ ದಿನಕ್ಕಾಗಿ ಕೊಟ್ಟಿದ್ದ ವಚನ ; ಅವಳು

ತನ್ನ ಪವಿತ್ರವಚನವನ್ನು ಇನ್ನೇನು ಮುರಿದುಬಿಡುವವರಲ್ಲಿದ್ದಳು. ಆದರೆ ಅಲೆಕ್ಸಿ ತನಗಾಗಿ ವ್ಯರ್ಥವಾಗಿ ಕಾದು, ದುಂಡುಮ್ಮೆಯ ಸಿಡುಬಿನ ಕಲೆಯ ಹುಡುಗಿ, ಕಮ್ಮಾರನ ಮಗಳು, ನಿಜವಾದ ಅಕ್ಯುಲಿನ ಯಾರೆಂದು ಹಳ್ಳಿಗೆ ಬರಬಹುದು ; ಈ ರೀತಿಯಲ್ಲಿ, ಲೀಸ ತನಗೆ ಮಾಡಿದ ಮೋಸವನ್ನು ಅವನು ಊಹಿಸಿಬಿಡಬಹುದು. ಈ ಯೋಚನೆ ಬಂದು ಅವಳು ದಿಗಿಲುಗೊಂಡಳು ; ಮಾರನೆಯ ಬೆಳಗ್ಗೆ ಮತ್ತೆ ಅಕ್ಯುಲಿನಳಾಗಿ ವೇಷಧರಿಸಿ ತೋಪಿಗೆ ಹೋಗುವುದಾಗಿ ನಿಶ್ಚಯಿಸಿಕೊಂಡಳು.

ಅಲೆಕ್ಸಿಯ ಆನಂದವಾದರೋ ಅಕಲುಷಿತವಾಗಿತ್ತು ; ದಿನವೆಲ್ಲಾ ತನ್ನ ಹೊಸ ಪರಿಚಯದ ವ್ಯಕ್ತಿಯ ವಿಚಾರವಲ್ಲದೆ ಬೇರೆಯ ಆಲೋಚನೆಯೇ ಇರಲಿಲ್ಲ ; ರಾತ್ರಿ ಅವನ ಕನಸಿನಲ್ಲಿ ಮಸಕುಮಸಕಾಗಿ ಕಾಣುವ ಸುಂದರಿಯ ದರ್ಶನ ಕಾಡುತ್ತಿತ್ತು. ಅವನು ಎದ್ದು ಬೆಳಗಾಗುವ ಮುನ್ನವೇ ಉಡುಪು ಧರಿಸಿದನು. ಕೋವಿಯನ್ನು ಬಾರುಮಾಡಿಕೊಳ್ಳುವಷ್ಟು ಹೊತ್ತೂ ಕಾಯದೆ, ತನ್ನ ನಿಷ್ಠೆಯ ನಾಯಿ ಸ್ಬೊಗರ್ ಸಂಗಡ ಹೊರಬಿದ್ದು, ಹೇಳಿದ್ದ ಭೇಟಿಯ ಸ್ಥಳದೆಡೆಗೆ ಧಾವಿಸಿದನು. ಅಲ್ಲಿ ಸಹಿಸಲಾಗದ ಆತಂಕದ ನಿರೀಕ್ಷೆಯಲ್ಲಿ ಸುಮಾರು ಅರ್ಧಗಂಟೆಯ ಕಾಲ ಹೇಗೋ ಕಳೆಯಿತು ; ಕಡೆಗೊಮ್ಮೆ ಪೊದೆಗಳ ನಡುವೆ ನೀಲಿಯ 'ಸರಫಾನ್' ಸುಳಿದಾಡಿದ್ದು ಅವನಿಗೆ ಕಾಣಿಸಿತು ; ಅವನು ತನ್ನ ಪ್ರಿಯೆ ಅಕ್ಯುಲಿನಳನ್ನು ಎದುರುಗೊಳ್ಳಲು ನುಗ್ಗಿ ಹೋದನು. ಅವಳು ಅವನ ಆನಂದಮಯವಾದ ಕೃತಜ್ಞತಾಭಾವವನ್ನು ಮುಗುಳ್ನಗೆ ನಕ್ಕು ಸ್ವೀಕರಿಸಿದಳು. ಆದರೆ ಅವಳ ಮುಖ ಭಾವದಲ್ಲಿ ನಿರುತ್ಸಾಹದ ಆತಂಕದ ಛಾಯೆಯಿದ್ದುದು ಬೇಗನೆ ಅಲೆಕ್ಸಿಯ ಗಮನಕ್ಕೆ ಬಂದಿತು. ಅದಕ್ಕೆ ಕಾರಣವೇನೆಂದು ಅವನು ವಿಚಾರಿಸಿದನು. ಅದಕ್ಕೆ ಲೀಸ, ತನ್ನ ನಡತೆ ಅನುಚಿತವೆಂದು ತಾನು ಈಗ ಭಾವಿಸಿರುವುದಾಗಿಯೂ ಅದಕ್ಕಾಗಿ ಪಶ್ಚಾತ್ತಾಪಪಟ್ಟಿರುವುದಾಗಿಯೂ, ಈ ಸಲಕ್ಕೆ ಕೊಟ್ಟ ಮಾತನ್ನು ಮುರಿಯಲು ತಾನು ಇಷ್ಟಪಡಲಿಲ್ಲವೆಂದೂ, ಇದೇ ತಮ್ಮ ಕಡೆಯ ಭೇಟಿಯೆಂದೂ, ಇಬ್ಬರಿಗೂ ಒಳಿತನ್ನುಂಟುಮಾಡದ ಪರಿಚಯವನ್ನು ಮುರಿದು ಬಿಡಬೇಕೆಂದು ತಾನು ಬೇಡಿಕೊಳ್ಳುವುದಾಗಿಯೂ ಅವನಲ್ಲಿ ತನ್ನ ಅಂತರಂಗವನ್ನು ತೆರೆದು ನುಡಿದಳು. ಇದನ್ನೆಲ್ಲಾ ಅವಳು ಹಳ್ಳಿಯ ಭಾಷೆಯಲ್ಲೇನೋ ವ್ಯಕ್ತಪಡಿಸಿದಳು ; ಆದರೆ ಮುಗ್ಧಳಾದ ಹುಡುಗಿಯಲ್ಲಿ ಅಸಾಧಾರಣವೆಂದು ಕಾಣುವ ಆ ಭಾವ ಭಾವನೆಗಳನ್ನು ಕಂಡು ಅಲೆಕ್ಸಿಬೆರಗಾದನು. ಅಕ್ಯುಲಿನ ತನ್ನ ನಿರ್ಧಾರವನ್ನು ಹಿಂದೆಗೆದುಕೊಳ್ಳುವಂತೆ ಮಾಡಲು ಅವನು

ತನ್ನ ವಾಕ್ಚಾತುರ್ಯವನ್ನೆಲ್ಲ ವ್ಯಯಮಾಡಿದನು ; ತನ್ನ ಉದ್ದೇಶಗಳು ನಿರ್ದುಷ್ಟವಾಗಿದ್ದುವೆಂದು ಅವಳಿಗೆ ಭರವಸೆಯಿತ್ತನು ; ಪಶ್ಚಾತ್ತಪಪಡಲು ಎಂದಿಗೂ ಅವಳಿಗೆ ಅವಕಾಶಕೊಡುವುದಿಲ್ಲವೆಂದೂ ಎಲ್ಲ ವಿಚಾರಗಳಲ್ಲಿಯೂ ಅವಳ ಇಷ್ಟವನ್ನು ನಡಸುವುದಾಗಿಯೂ ಪ್ರತಿಜ್ಞೆ ಮಾಡಿದನು ; ದಿನಬಿಟ್ಟು ದಿನ ಇಲ್ಲವೆ ವಾರಕ್ಕೆ ಎರಡು ದಿನವಾದರೂ ಅವಳನ್ನು ಒಂಟಿಯಾಗಿ ಕಾಣುವ ಸಂತೋಷವನ್ನು ತನ್ನಿಂದ ಕಸಿದುಕೊಳ್ಳ ಬೇಡವೆಂದು ಅವಳನ್ನು ಬೇಡಿಕೊಂಡನು. ಅವನು ಪ್ರಾಮಾಣಿಕವಾಗಿ ಭಾವಾವೇಶಸ್ಥಿತಿಯಲ್ಲಿರುವಾಗ ಉಪಯೋಗಿಸುವ ಭಾಷೆಯನ್ನುಪಯೋಗಿಸಿದನು ; ತತ್‌ಕ್ಷಣದಲ್ಲಿ, ತಾನು ಪ್ರೇಮದಲ್ಲಿ ಮುಳುಗಿರುವುದಾಗಿ ನಿಜವಾಗಿ ಭಾವಿಸಿದನು. ಅವನ ಮಾತೆಲ್ಲ ಮುಗಿದ ಮೇಲೆ, "ಹಳ್ಳಿಯಲ್ಲಿ ನನಗಾಗಿ ಹುಡುಕಿಕೊಂಡು ಬರುವುದಿಲ್ಲವೆಂದು, ನನ್ನನ್ನು ಕುರಿತು ವಿಚಾರಿಸುವುದಿಲ್ಲವೆಂದು ಮಾತು ಕೊಡು. ನಾನು ಗೊತ್ತುಮಾಡುವಷ್ಟಲ್ಲದೆ ಹೆಚ್ಚಿನ ಭೇಟಿಯನ್ನು ಅಪೇಕ್ಷಿಸುವುದಿಲ್ಲವೆಂದು ಮಾತುಕೊಡು' ಎಂದು ಅವಳೆಂದಳು. ಅಲೆಕ್ಸಿ ಇನ್ನೇನು 'ಪವಿತ್ರ ಶಿಲುಬೆಯ ಮೇಲೆ' ಆಣೆಯಿಟ್ಟು ಮಾತುಕೊಡುವುದರಲ್ಲಿದ್ದನು ; ಆದರೆ ಲೀಸ ಒಂದು ಮುಗಳ್ನಗೆಯಿಂದ ಬೇಡವೆಂದು ಸೂಚಿಸಿ ಅವನನ್ನು ತಡೆದಳು. "ಪ್ರತಿಜ್ಞೆ ಪ್ರಮಾಣಗಳು ನನಗೆ ಬೇಕಿಲ್ಲ. ನಿಮ್ಮ ಮಾತು ಸಾಕು" ಎಂದಳು. ಬಳಿಕ ಅವರು ಅತ್ಯಂತ ಸ್ನೇಹಪರರಾಗಿ ಮಾತಾಡುತ್ತ, ಪಕ್ಕಪಕ್ಕದಲ್ಲಿ ತೋಪನ್ನೆಲ್ಲಾ ಸುತ್ತಾಡಿದರು. ಕಡೆಗೆ ಲೀಸ, "ನಾನು ಇನ್ನು ಹೋಗಬೇಕು, ಹೊತ್ತಾಯಿತು" ಎಂದಳು. ಅವರಿಬ್ಬರೂ ಅಗಲಿದರು. ಒಬ್ಬನೇ ಉಳಿದ ಅಲೆಕ್ಸಿ, ಒಬ್ಬ ಮುಗ್ಧ ಗ್ರಾಮಕನ್ಯೆ ಕೇವಲ ಒಂದೆರಡು ಭೇಟಿಗಳಲ್ಲಿ ಅದು ಹೇಗೆ ತನ್ನ ಮೇಲೆ ಅಂಥ ಸ್ಪಷ್ಟವಾದ ಪರಿಣಾಮವನ್ನು ಬೀರಬಲ್ಲವಳಾದಳೆಂಬುದನ್ನು ಅರಿಯದಾದನು. ಅಕ್ಯುಲಿನಳೊಡನೆ ಅವನ ಸಂಬಂಧ ಸಂಪರ್ಕಗಳು ಅವನ ಪಾಲಿಗೆ ಒಂದು ನಾವೀನ್ಯದ ಸೊಗಸನ್ನು ಒದಗಿಸಿದ್ದುವು. ಆ ವಿಚಿತ್ರ ರೈತರ ಹುಡುಗಿಯ ಕಟ್ಟುಕಟ್ಟಳೆಗಳು ಅವನಿಗೆ ಪಾಲಿಸಲು ಕಷ್ಟ ಸಾಧ್ಯವಾಗಿ ಕಂಡುಬಂದರೂ, ಕೊಟ್ಟ ಮಾತನ್ನು ಮುರಿಯುವ ಭಾವನೆ ಅವನ ತಲೆಯಲ್ಲಿ ಸುಳಿಯಲೂ ಇಲ್ಲ. ನಿಜ ಹೇಳುವುದಾದರೆ, ಅವನಲ್ಲಿ ಒಂದು ಖಳಚ್ಛಾಯೆ, ನಿಗೂಢ ಸ್ವಭಾವ, ಭ್ರಾಂತಿಭಮೆಗಳಿಲ್ಲದ ನಿಷ್ಠುರತೆ ಇವೆಲ್ಲ ಕಂಡುಬಂದರೂ ಅವನೊಬ್ಬ ನಿಷ್ಕಳಂಕ ಹೃದಯದ, ಸದ್ಭಾವನೆಯ, ಭಾವೋದ್ರೇಕದ ತರುಣನಾಗಿದ್ದು, ಅತ್ಯಂತ ಸರಳಸಾಮಾನ್ಯ ಸುಖ ಸಂತೋಷಗಳನ್ನು ಅನುಭೋಗಿಸಬಲ್ಲವನಾಗಿದ್ದನು.

ಇತರರಿಗಾಗಿ ಅಲ್ಲದೆ ಕೇವಲ ಆತ್ಮ ಸಂತೋಷಾರ್ಥವಾಗಿ ಆಗಿದ್ದ ಪಕ್ಷದಲ್ಲಿ, ಈಗ ನಾನು ಆ ತರುಣ ತರುಣಿಯರ ಪ್ರಣಯಕ್ರೀಡೆ, ದಿನ ದಿನಕ್ಕೆ ಹೆಚ್ಚುತ್ತಿದ್ದ ಅವರ ಕೆಲಸ ಕಾರ್ಯಗಳು, ಅವರ ಮಾತುಕತೆ ಇವುಗಳ ವಿವಶಪೂರ್ಣವಾದ ವರ್ಣನೆಗೆ ತೊಡಗುತ್ತಿದ್ದ ; ಆದರೆ ನನ್ನ ಓದುಗರಲ್ಲಿ ಬಹುಮಂದಿ ನನ್ನ ಆ ಸಂತೋಷದಲ್ಲಿ ಪಾಲುಗೊಳ್ಳಲಿಚ್ಛಪಡುವುದಿಲ್ಲವೆಂಬುದನ್ನು ಬಲ್ಲೆ. ಅಂಥ ವಿವರಗಳು ಸಪ್ಪೆಯಾಗಿ ಕಂಡಾವು ; ಆದ್ದರಿಂದ ಅವನ್ನೆಲ್ಲ ಬಿಟ್ಟುಬಿಟ್ಟು, ಎರಡು ತಿಂಗಳು ಕಳೆಯುವಷ್ಟರಲ್ಲಿ ನಮ್ಮ ಅಲೆಕ್ಸಿ ಸಂಪೂರ್ಣವಾಗಿ ಪ್ರೇಮದಲ್ಲಿ ಮುಳುಗಿ ಬಿಟ್ಟಿದ್ದನು. ಬಾಹ್ಯ ಪ್ರದರ್ಶನ ಕಡಮೆಯಾದರೂ ಲೀಸ ಅಷ್ಟೇ ಪ್ರೇಮ ನಿಮಗ್ನಳಾಗಿದ್ದಳು ಎಂದಿಷ್ಟು ಮಾತ್ರ ಹೇಳಿಬಿಡುತ್ತೇನೆ. ಅವರಿಬ್ಬರೂ ಸದ್ಯದ ಸುಖದಲ್ಲಿ ನಲಿದರು; ಭವಿಷ್ಯದ ಕಡೆಗೆ ಸ್ವಲ್ಪವೂ ಗಮನ ಕೊಡಲಿಲ್ಲ.

ಹರಿಯಲಾಗದ ಬಂಧನದ ಆಲೋಚನೆಯೂ ಆಗಾಗ್ಗೆ ಅವರ ಮನಸ್ಸಿನಲ್ಲಿ ಹಾದುಹೋಯಿತು ; ಆದರೆ ಈ ವಿಚಾರವಾಗಿ ಅವರು ಒಬ್ಬರೊಡನೊಬ್ಬರು ಮಾತಾಡಲಿಲ್ಲ. ಇದಕ್ಕೆ ಕಾರಣವನ್ನು ದೂರ ಅರಸಬೇಕಾಗಿಲ್ಲ ; ಅಲೆಕ್ಸಿ ತನ್ನ ಪ್ರಿಯೆ ಅಕ್ಯುಲಿನಳಲ್ಲಿ ಅನುರಕ್ತನಾಗಿದ್ದರೂ, ತನಗೂ ಬಡ ರೈತರ ಹುಡುಗಿಗೂ ನಡುವೆ ಇದ್ದ ಅಂತರವನ್ನು ಪೂರ್ಣವಾಗಿ ಅರಿತಿದ್ದನು. ಇತ್ತ, ತಮ್ಮ ತಂದೆಗಳ ನಡುವೆ ಇದ್ದ ಹಗೆತನವನ್ನು ಬಲ್ಲ ಲೀಸ ಅವರಿಬ್ಬರ ನಡುವೆ ಮೈತ್ರಿ ಏರ್ಪಡುವುದೆಂದು ಆಶೆಯಿಟ್ಟುಕೊಳ್ಳುವ ಧೈರ್ಯ ಮಾಡಲಿಲ್ಲ. ಇದಕ್ಕಿಂತ ಹೆಚ್ಚಾಗಿ, ಟ್ಯುಗಿಲೋವ್ರೋದ ಉತ್ತರಾಧಿಕಾರಿ ಪ್ರಿಲುಚೀನೋ ಕಮ್ಮಾರನ ಮಗಳ ಅಡಿಗೆರಗುವ ದೃಶ್ಯವನ್ನು ಕಡೆಗೊಮ್ಮೆ ಕಾಣಬಹುದೆಂಬ ಅಸ್ಪಷ್ಟವಾದ ರಮ್ಯಭಾವನೆಯೊಂದು ಅವಳ ಅಂತರಂಗದ ಅಭಿಮಾನವನ್ನು ರಹಸ್ಯವಾಗಿ ಕೆಣಕಿ ಕುಣಿಸುತ್ತಿತ್ತು, ತಣಿಸುತ್ತಿತ್ತು. ಹೀಗಿರಲಿಲ್ಲ, ಒಂದು ಮುಖ್ಯ ಘಟನೆ ನಡೆದು, ಒಬ್ಬರ ದೃಷ್ಟಿಯಲ್ಲಿ ಇನ್ನೊಬ್ಬರ ಸ್ಥಾನಮಾನವನ್ನು ಮಾರ್ಪಡಿಸಲನುವಾಯಿತು.

ಒಂದು ಸೊಗಸಾದ ಚಳಿಯಾದ ಪ್ರಾತಃಕಾಲ (ನಮ್ಮ ರಷ್ಯದಲ್ಲಿ ಶರತ್ಕಾಲದಲ್ಲಿ ಸಾಮಾನ್ಯವಾದಂಥ ಪ್ರಾತಃಕಾಲ), ಇವಾನ್ ಪೆಟ್ರೋವಿಚ್ ಬೆರಿಸ್ಟಾಫ್ ಕುದುರೆ ಸವಾರಿಗೆ ಹೊರಟನು. ಅಕಸ್ಮಾತ್ ಏನಾದರೂ ಪ್ರಾಣಿ ಕಾಣಿಸಿಕೊಂಡರೆ ಸಮಯಕ್ಕಿರಲೆಂದು ತನ್ನೊಂದಿಗೆ ಐದಾರು ಬೇಟೆಯ ನಾಯಿಗಳನ್ನೂ ಕಾಸ್ತಾರನನ್ನೂ ರಟರಟಗಿಲಿಕೆ ತಿರುಗಿಸಲು ಕೆಲವು ಜೀತಗೆಲಸದ ಹುಡುಗರನ್ನೂ ಕಾಸ್ತಾರನನ್ನೂ ಮ್ಯುರೊಮ್ಸ್ಕಿ ಸೊಗಸಾದ ಹವಾಗುಣದಿಂದ ಆಕರ್ಷಿತನಾಗಿ ತನ್ನ ಹೆಂಗುದುರೆಗೆ ಜೀನುಹಾಕಿಸಿ, ತನ್ನ ಆಂಗ್ಲೀಕೃತ ಜಮೀನಿನಲ್ಲಿ

ಕುಲುಕೋಟದಲ್ಲಿ ಹೊರಟನು. ಅವನು ಕುರುಚುಕಾಡನ್ನು ಸೇರಿದಾಗ, ಜೀನಿನ ಮೇಲೆ ನಿಮಿರಿ ಕುಳಿತು ಬರುತ್ತಿದ್ದ ತನ್ನ ನೆರೆಯವನನ್ನು ಕಂಡನು ; ಆತ ನರಿಯ ಚರ್ಮದ ಅಸ್ತರಿಕೊಟ್ಟಿದ್ದ ನಡುವಂಗಿ ಧರಿಸಿದ್ದನು ; ತನ್ನ ಜೀತದ ಹೈಕಳು ಕೂಗಾಟಗಳಿಂದಲೂ ರಟರಟಗಿಲಿಕೆ ಸದ್ದಿನಿಂದಲೂ ಮೊಲಗಳನ್ನು ಪೊದೆಗಳಿಂದ ಹೊರಹೊರಡಿಸುತ್ತಿದ್ದು, ಮೊಲ ಕಾಣಿಸಿಕೊಳ್ಳುವುದನ್ನೆ ಕಾಯುತ್ತಿದ್ದನು. ಈ ಅನಿರೀಕ್ಷಿತ ಸಮಾಗಮವನ್ನು ಗ್ರಿಗೋರಿ ಇವಾನೊವಿಚ್ ಮುಂಗಂಡಿದ್ದಿದ್ದರೆ ಅವನು ನಿಸ್ಸಂದೇಹವಾಗಿ ಬೇರೆಯ ದಿಕ್ಕಿಗೆ ತಿರುಗಿಬಿಡುತ್ತಿದ್ದನು; ಆದರೆ ಅವನು ತೀರ ಅನಿರೀಕ್ಷಿತವಾಗಿ ಬೆರಿಸ್ಟಾಫ್‌ನನ್ನು ಸಂಧಿಸಿ, ಅವನಿಂದ ಪಿಸ್ತೂಲು ಗುಂಡು ಹೊಡೆತದಷ್ಟು ದೂರದಲ್ಲಿದ್ದನು. ಆಗ ಏನು ಮಾಡುವುದಕ್ಕೂ ಅವಕಾಶವಿರಲಿಲ್ಲ. ನರನರದಲ್ಲಿಯೂ ಒಬ್ಬ ಸುಸಂಸ್ಕೃತನಾದ ಯೂರೋಪಿಯನ್ ಎನಿಸಿದ್ದ ಮ್ಯುರೊಮ್ಸ್ಕಿ ಕುದುರೆಯ ಮೇಲೆಯ ತನ್ನ ಶತ್ರುವಿನ ಬಳಿ ಸಾರಿ, ಬಹಳ ಮರ್ಯಾದೆಯಿಂದ ಅವನಿಗೆ ಅಭಿವಂದಿಸಿದನು. ಸರಪಣಿಯಿಂದ ಕಟ್ಟಿದ ಕರಡಿ ತನ್ನ ನಾಯಕನ ಅಪ್ಪಣೆಯಂತೆ ಸಭ್ಯರಿಗೆ ತಲೆಬಾಗುವಂತೆ, ಬೆರಿಸ್ಟಾಫ್ ಅಷ್ಟೇ ಸೌಹಾರ್ದದಿಂದ ಪ್ರತಿಯಾಗಿ ನಮಸ್ಕಾರ ಮಾಡಿದನು. ಆ ಹೊತ್ತಿಗೆ ಸರಿಯಾಗಿ ಮೊಲ ಪೊದೆಗುಂಪಲಿನಿಂದ ಹೊರಬಂದು ಬಯಲಾದ ಹೊಲದ ಕಡೆಗೆ ಓಡಿತು. ಬೆರಿಸ್ಟಾಫ್ ಮತ್ತು ಅವನ ಕಾಸ್ತಾರ ಅತ್ಯುಚ್ಚ ಕಂಠದಲ್ಲಿ ಕೂಗು ಹಾಕಿ, ನಾಯಿಗಳನ್ನು ಹಾಸಗಳಚಿ ಬಿಟ್ಟು, ನಾಗಾಲೋದಲ್ಲಿ ಪೂರ್ಣ ವೇಗದಿಂದ ಮೊಲವನ್ನು ಹಿಂಬಾಲಿಸಿದರು. ಮ್ಯುರೊಮ್ಸ್ಕಿಯ ಕುದುರೆಯನ್ನು ಎಂದೂ ಬೇಟೆಗೆ ಉಪಯೋಗಿಸಿರಲಿಲ್ಲ ; ಅದು ಬೆದರಿ, ಹತೋಟಿಗೆ ಮೀರಿ ಓಟ ಕಿತ್ತಿತು. ಸೊಗಸಾದ ಕುದುರೆ ಸವಾರನೆಂದು ತೋರ್ಪಡಿಸಿಕೊಳ್ಳುತ್ತಿದ್ದ ಮ್ಯುರೊಮ್ಸ್ಕಿ ಈ ಅಕಸ್ಮಾತ್ ಘಟನೆಯಿಂದ ತನಗೆ ಹಿತವಲ್ಲದ ಭೇಟಿ ತಾನಾಗಿ ತಪ್ಪಿದ್ದಕ್ಕಾಗಿ ಒಳಗೊಳಗೇ ಸಂತಸಗೊಂಡು, ಕುದುರೆ ಕಮರಿಯ ಅಂಚಿನ ಹತ್ತಿರಕ್ಕೆ ಧಾವಿಸಿಬಿಟ್ಟಿತ್ತು ; ಆವರೆಗೆ ಅದನ್ನು ಅದು ನೋಡಿರಲಿಲ್ಲ ; ಇದ್ದಕ್ಕಿದ್ದ ಹಾಗೆ ಅದು ಬೆದರಿದಾಗ, ಮ್ಯುರೊಮ್ಸ್ಕಿಗೆ ಜೀನಿನ ಪೀಠದ ಮೇಲೆ ಕುಳ್ಳಿರಲು ಸಾಧ್ಯವಾಗಲಿಲ್ಲ. ಹಿಮ ಬಿದ್ದು ಬಿದ್ದು ಗಟ್ಟಿಯಾದ ನೆಲದ ಮೇಲೆ ಅವನು ಬಲವಾಗಿಯೇ ದೊಪ್ಪನೆ ಕೆಡೆದು, ತನ್ನ ಮೊಂಡು ಬಾಲದ ಕುದುರೆಯನ್ನು ಶಪಿಸುತ್ತ ಅಲ್ಲಿಯೆ ಬಿದ್ದಿದ್ದನು. ಆಗ ಕುದುರೆ ತನ್ನ ಮೇಲೆ ಸವಾರನಿಲ್ಲದುದನ್ನು ಅರಿತುಕೊಂಡು ಕೂಡಲೆ ಜ್ಞಾನೋದಯವಾದ ರೀತಿಯಲ್ಲಿ ತಟ್ಟನೆ ನಿಂತಿತು. ಇವಾನ್ ಪೆಟ್ರೋ ವಿಚ್ ಕುದುರೆಯನ್ನು ನಾಗಾಲೋಟದಲ್ಲಿ ಬಿಟ್ಟುಕೊಂಡು

ಹೋಗಿ, ಗಾಸಿಯಾಯಿತೆ ಎಂದು ಗ್ರಿಗೋರಿ ಇವಾನೊವಿಚ್‌ನನ್ನು ಕೇಳಿದನು. ಈ ನಡುವೆಯಲ್ಲಿ, ಕಾಸ್ತಾರನು ತಪ್ಪಿಸಗಿದ್ದ ಕುದುರೆಯನ್ನು ಹಿಂದಕ್ಕೆ ಕರೆದುಕೊಂಡು ಬಂದು, ಅದರ ಕಡಿವಾಣವನ್ನು ಹಿಡಿದು ನಿಂತಿದ್ದನು. ಮ್ಯುರೊಮ್ಸ್ಕಿ ಕುದುರೆಯೇರಲು ಅವನು ನೆರವಾದನು ; ಬೆರಿಸ್ಟಾಫ್ ಮ್ಯುರೊಮ್ಸ್ಕಿಯನ್ನು ತನ್ನ ಮನೆಗೆ ಬರುವಂತೆ ಆಹ್ವಾನಿಸಿದನು. ಮ್ಯುರೊಮ್ಸ್ಕಿ ಆಹ್ವಾನವನ್ನು ಒಪ್ಪಿಕೊಳ್ಳದೆ ಇರಲಾಗಲಿಲ್ಲ. ಈ ಪ್ರಕಾರದಲ್ಲಿ, ಬೆರಿಸ್ಟಾಫ್ ಒಂದು ಮೊಲವನ್ನು ಹಿಡಿದು, ಗಾಸಿಗೊಂಡು ಬಹುಮಟ್ಟಿಗೆ ಯುದ್ಧದ ಕೈದಿಯಂತಾಗಿದ್ದ ತನ್ನ ಶತ್ರುವನ್ನೂ ಜೊತೆಯಲ್ಲಿ ಕರೆದುಕೊಂಡು ವಿಜಯಶಾಲಿಯಾಗಿ ಮನೆಗೆ ಹಿಂದಿರುಗಿದನು.

ಪ್ರಾತಃಕಾಲದ ಉಪಾಹಾರವನ್ನು ತೆಗದುಕೊಳ್ಳುತ್ತ ಇಬ್ಬರು ನೆರೆಯವರೂ ಪೂರ್ಣ ಮೈತ್ರೀಭಾವದಿಂದ ಸಂಭಾಷಿಸುತ್ತಿದ್ದರು. ಮ್ಯುರೊಮ್ಸ್ಕಿ ತಾನು ಪಟ್ಟ ಗಾಸಿಯ ಪರಿಣಾಮವಾಗಿ ತನ್ನ ಹೆಂಗುದುರೆಯ ಮೇಲೆ ಕುಳಿತು ಹಿಂದಿರುಗುವುದಕ್ಕೆ ಅಸಮರ್ಥನಾಗಿರುವುದಾಗಿ ಒಪ್ಪಿಕೊಂಡು, ಒಂದು ಗಾಡಿಯನ್ನು ಕೊಡಬೇಕೆಂದು ಬೆರಿಸ್ಟಾಫ್‌ನನ್ನು ಕೇಳಿಕೊಂಡನು. ಬೆರಿಸ್ಟಾಫ್ ಬಾಗಿಲವರೆಗೂ ಅವನನ್ನು ಬಿಟ್ಟುಬರಲು ಜೊತೆಯಲ್ಲಿ ಹೋದನು ; ಮಾರನೆಯ ದಿನವೇ ಬೆರಿಸ್ಟಾಫ್ ಅಲೆಕ್ಸಿ ಇವಾನೊವಿಚ್‌ನೊಂದಿಗೆ ಬಂದು ತಮ್ಮ ಮನೆಯ ಅಲ್ಪಾತಿಥ್ಯವನ್ನು ಸ್ವೀಕರಿಸುವುದಾಗಿ ತನ್ನ ಗೌರವದ ಮೇಲೆ ಆಣೆಯಿಟ್ಟು ಮಾತುಕೊಡುವವರೆಗೂ ಮ್ಯುರೊಮ್ಸ್ಕಿ ಅಲ್ಲಿಂದ ಬಿಟ್ಟು ಹೊರಡಲೇ ಇಲ್ಲ. ಈ ರೀತಿ ಮೊಂಡುಬಾಲದ ಹೆಂಗುದುರೆಯ ಬೆದರಿಕೆಯ ದೆಸೆಯಿಂದ ಹಳೆಯದಾದ, ಆಳವಾಗಿ ಬೇರೂರಿದ ಹಗೆತನ ಕೊನೆಗೊಳ್ಳುವ ಸೂಚನೆ ಕಂಡುಬರುವಂತಾಯಿತು.

ಲೀಸ ಗ್ರೀಗೊರಿ ಇವಾನೊವಿಚ್‌ನನ್ನು ಎದುರುಗೊಳ್ಳಲು ಹೊರಕ್ಕೆ ಓಡಿಬಂದಳು. "ಅಪ್ಪಾ, ಏನು ಸಮಾಚಾರ? ಯಾಕೆ ಕುಂಟುತ್ತಾ ಇದೀಯಲ್ಲ? ನಿನ್ನ ಕುದುರೆ ಎಲ್ಲಿ? ಆ ಬಂಡಿಯಾರದ್ದು ?" ಎಂದು ಅವಳು ಬೆರಗಾಗಿ ಕೇಳಿದಳು. "ನೀನು ಊಹಿಸಲೂ ಆರೆ, ನನ್ನ ಮುದ್ದುಗುವರಿ (My dear)" ಎಂದು ಗ್ರಿಗೊರಿ ಇವಾನೊವಿಚ್ ಉತ್ತರ ಕೊಟ್ಟನು. ಆಂಗ್ಲ ಸಂಬೋಧನಾ ಕ್ರಮವನ್ನು ಅನುಸರಿಸುವುದೆಂದರೆ ಅವನಿಗೆ ಇಷ್ಟ. ನಡೆದ ಘಟನೆಯೆಲ್ಲವನ್ನೂ ಅವನು ಅವಳಿಗೆ ವಿವರಿಸಿ ಹೇಳಿದನು. ಲೀಸ ತನ್ನ ಕಿವಿಗಳನ್ನೇ ನಂಬಲಾರದೆ ಹೋದಳು. ಅವಳು ತನ್ನ ಬೆರಗಿನ ಭಾವದಿಂದ ಚೇತರಿಸಿಕೊಳ್ಳುವುದಕ್ಕೂ ಅವಕಾಶ ಕೊಡದ ಹಾಗೆ, ಮಾರನೆಯ ದಿನ ಇಬ್ಬರು ಬೆರಿಸ್ಟಾಫ್‌ರೂ (ತಂದೆ ಮತ್ತು ಮಗ) ತಮ್ಮ ಮನೆಗೆ ಊಟಕ್ಕೆ ಬರಲಿರುವರೆಂದು ಗ್ರಿಗೊರಿ

ಇವಾನೋವಿಚ್ ಅವಳಿಗೆ ಹೇಳಿದನು. ಅವಳು ವಿವರ್ಣಳಾಗಿ ಉದ್ಗಾರ ತೆಗೆದಳು: "ಏನು ! ಬೆರಿಸ್ಟಾಫ್‌ರು–ತಂದೆ ಮತ್ತು ಮಗ? ನಾಳೆ ನಮ್ಮೊಂದಿಗೆ ಊಟಮಾಡುತ್ತಾರೆಯೇ ! ಅಪ್ಪಾ, ನಿನ್ನ ಇಷ್ಟ ಬಂದ ಹಾಗೆ ನೀನು ಮಾಡು, ಆದರೆ ನಾನು ಮಾತ್ರ ಆಗ ಕಾಣಿಸಿಕೊಳ್ಳಲಾರೆ." ಅವಳ ತಂದೆಯೂ ಅಚ್ಚರಿಗೊಂಡು ಕೇಳಿದನು : "ನಿನಗೇನು ಹುಚ್ಚೋ ? ಇದ್ದಕ್ಕಿದ್ದ ಹಾಗೆ ಇಷ್ಟೊಂದು ನಾಚಿಕೆ ಪಡಲು ಕಾರಣ ಏನು? ಕಾದಂಬರಿಯ ಕಥಾನಾಯಕಿಯಂತೆ, ಅವನನ್ನು ಕಂಡರೆ ನಿನಗೆ ವಂಶಾನುಗತವಾದ ದ್ವೇಷವೇ? ಈ ಅವಿವೇಕ ಇನ್ನು ಸಾಕು...." "ಇಲ್ಲ ಅಪ್ಪಾ, ಖಂಡಿತ ಸಾಧ್ಯವಿಲ್ಲ. ಪ್ರಪಂಚದಲ್ಲಿರುವ ಯಾವುದೇ ವಸ್ತುವನ್ನು ತಂದುಕೊಟ್ಟರೂ ಬೆರಿಸ್ಟಾಫರ ಮುಂದೆ ನಾನು ಕಾಣಿಸಿಕೊಳ್ಳಲಾರೆ!" ಎಂದುಬಿಟ್ಟಳು ಅವಳು. ಅವಳನ್ನು ವಿರೋಧಿಸುವುದರಿಂದ ಏನೂ ಪ್ರಯೋಜನವಿಲ್ಲವೆಂಬುದನ್ನು ಬಲ್ಲ ಗ್ರಿಗೊರಿ ಇವಾನೊವಿಚ್ ತನ್ನ ಹೆಗಲನ್ನು ಹಾರಿಸಿ, ವಾದಿಸುವುದನ್ನು ಬಿಟುಬಿಟ್ಟು, ತನ್ನ ಸ್ಮರಣೀಯವಾದ ಸವಾರಿಯನಂತರ ವಿಶ್ರಾಂತಿ ತೆಗೆದುಕೊಳ್ಳಲು ಹೊರಟನು.

ಲಿಸವೀಟ ಗ್ರಿಗೊರ್ರೆನ್ನ ತನ್ನ ಕೋಣೆಗೆ ಹೋಗಿ, ನಾಸ್ತ್ಯಳನ್ನು ತನ್ನ ಬಳಿಗೆ ಕರೆದಳು. ಮಾರನೆಯ ದಿನದ ಭೇಟಿಯ ವಿಚಾರವಾಗಿ ಇಬ್ಬರೂ ದೀರ್ಘವಾದ ಸಮಾಲೋಚನೆ ನಡಸಿದರು. ಅಲ್ಲ, ಈ ಸುಶಿಕ್ಷಿತ ತರುಣಿಯೆ ತನ್ನ ಅಕ್ಯುಲಿನ ಎಂದು ಅಲೆಕ್ಸಿ ಗುರುತಿಸಿದಾಗ ಅವನು ಏನು ಬಗೆಯಬಹುದು? ತನ್ನ ನಡವಳಿ, ತನ್ನ ನೀತಿನಿಯಮ, ತನ್ನ ವಿವೇಕ–ಇವುಗಳ ಬಗ್ಗೆ ಅವನು ಏನು ಅಭಿಪ್ರಾಯ ಪಡಬಹುದು? ಇಷ್ಟರ ಜೊತೆಗೆ ಅಷ್ಟು ಅನಿರೀಕ್ಷಿತ ಬೇಟಿಯಾದಾಗ ಅವನ ಮೇಲೆ ತಾನು ಏನು ಪರಿಣಾಮ ಬೀರಬಹುದೆಂಬುದನ್ನು ತಿಳಿಯಲೂ ಅವಳು ಅತ್ಯಂತ ಕುತೂಹಲಗೊಂಡಿದ್ದಳು. ತಟ್ಟನೆ ಅವಳಿಗೆ ಒಂದು ಸೊಗಸಾದ ಆಲೋಚನೆ ಹೊಳೆಯಿತು. ತತ್‌ಕ್ಷಣವೇ ಅದನ್ನವಳು ನಾಸ್ತ್ಯಳಿಗೆ ತಿಳಿಸಿದಳು. ಆ ಆಲೋಚನೆಯಿಂದ ಇಬ್ಬರೂ ಹಿಗ್ಗಿದರು ; ಏನೇ ಆಗಲಿ ಅದನ್ನು ಕಾರ್ಯ ರೂಪಕ್ಕೆ ತರಲು ನಿಶ್ಚಯಿಸಿದರು.

ಮಾರನೆಯ ಪ್ರಾತಃಕಾಲ ಉಪಾಹಾರ ತೆಗೆದುಕೊಳ್ಳುವಾಗ, ಬೆರಿಸ್ಟಾಫ್‌ರು ಬಂದಾಗ ಕಣ್ಮರೆಯಾಗಿರಬೇಕೆಂದು ಇನ್ನೂ ಉದ್ದೇಶ ಪಟ್ಟಿರುವಳೇ ಎಂದು ಗ್ರಿಗೊರಿ ಇವಾನೊವಿಚ್ ತನ್ನಮಗಳನ್ನು ಕೇಳಿದನು. "ಅಪ್ಪಾ, ನೀನು ಅಪೇಕ್ಷೆಪಟ್ಟರೆ ಅವರನ್ನು ನಾನು ಬರಮಾಡಿಕೊಳ್ಳುತ್ತೇನೆ. ಆದರೆ ಒಂದು ಕರಾರರು : ನಾನು ಅವರ ಮುಂದೆ ಯಾವ ಬಗೆಯ ಉಡುಪು ಧರಿಸಿ ಬರಲಿ, ನಾನು ಏನೇ

ಮಾಡಲಿ, ನೀನು ನನ್ನನ್ನು ನಿಂದಿಸಕೂಡದು ; ಸ್ವಲ್ಪವಾದರೂ ಬೆರಗಿನ ಇಲ್ಲವೆ ಅಸಮಧಾನದ ಸೂಚನೆ ತೋರಿಸಕೂಡದು, ತಿಳಿಯಿತೆ?" ಎಂದು ಲೀಸ ಉತ್ತರಕೊಟ್ಟಳು. ಅದಕ್ಕೆ ಗ್ರಿಗೊರಿ ಇವಾ ನೋವಿಚ್ ನಗುತ್ತ, "ಮತ್ತೆ ನಿನ್ನ ಹುಡುಗಾಟಕ್ಕೆ ತೊಡಗಿದೆ ! ಆಗಲಿ, ನೀನು ಹೇಳಿದಕ್ಕೆ ಒಪ್ಪಿದೆ. ನನ್ನ ಕಪ್ಪುಕಣ್ಣಿನ ಹುಚ್ಚುಹುಡುಗಿ, ನಿನ್ನ ಇಷ್ಟವಿದ್ದಂತಾಗಲಿ!" ಎಂದನು. ಈ ಮಾತುಗಳನ್ನಾಡಿ, ಅವನು ಅವಳ ಹುಬ್ಬಿನ ಮೇಲೆ ಮುತ್ತಿಟ್ಟನು ; ಲೀಸ ತನ್ನ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕಾಗಿ ಓಡಿಹೋದಳು.

ಎರಡು ಗಂಟೆಗೆ ಸರಿಯಾಗಿ ಆರು ಕುದುರೆ ಕಟ್ಟಿದ, ಮನೆಯಲ್ಲಿ ನಿರ್ಮಾಣಮಾಡಿದ ಗಾಡಿಯೊಂದೂ ಮನೆಯ ಮುಂದಿನ ದುಂಡನೆಯ ಹಸುರು ಹಸಲೆಯನ್ನು ಬಳಸಿಕೊಂಡು ವಾಹನ ಸಂಚಾರದ ಮಾರ್ಗದಲ್ಲಿ ಬಂದು ನಿಂತಿತು. ಹಿರಿಯ ಬೆರಿಸ್ಟಾಫ್ ಮ್ಯುರೋಮ್ಸ್ಕಿಯ ಇಬ್ಬರು ಡವಾಲಿಯ ಜವಾನರ ಕೈನೆರವು ಪಡೆದು ಮುಖಮಂಟಪದ ಮೆಟ್ಟಲುಗಳನ್ನು ಹತ್ತಿದನು. ಅವನ ಮಗ ಅವನ ಹಿಂದೆಯೇ ಕುದುರೆಯೇರಿ ಬಂದು, ಊಟದ ಕೋಣೆಗೆ ಜೊತೆಯಲ್ಲಿಯೇ ಹೋದನು ; ಅಲ್ಲಿ ಮೇಜಿನ ಮೇಲೆ ಊಟಬಡಿಸಿ ಸಿದ್ಧವಾಗಿತ್ತು. ಮ್ಯುರೋಮ್ಸ್ಕಿ ತನ್ನ ಅತಿಥಿಗಳನ್ನು ಅತ್ಯಂತ ಆದರದಿಂದ ಸ್ವಾಗತಿಸಿ, ಊಟಕ್ಕೆ ಮೊದಲೇ ತನ್ನ ಉದ್ಯಾನವನ್ನೂ ಪ್ರಾಣಿಸಂಗ್ರಹಗಳನ್ನೂ ಪರಿಶೀಲಿಸುವಂತೆ ಆಹ್ವಾನಿಸಿ, ಚೆನ್ನಾಗಿ ಗುಡಿಸಿದ ಜಲ್ಲಿಹಾಕಿ ಗಟ್ಟಣೆಮಾಡಿದ ಮಾರ್ಗಗಳಲ್ಲಿ ಅವರನ್ನು ಕರೆದೊಯ್ದನು. ಅಂಥ ನಿಷ್ಪ್ರಯೋಜಕ 'ಖಯಾಲಿ'ಗಳಿಗಾಗಿ ಕಾಲ ಮತ್ತು ಶ್ರಮ ಅಪವ್ಯಯವಾಗಿರುವುದೆಂದು ವೃದ್ಧ ಬೆರಿಸ್ಟಾಫ್ ಒಳಗೊಳಗೇ ವ್ಯಸನಟ್ಟರೂ, ಮರ್ಯಾದೆಗೋಸ್ಕರ ಮೌನವಾಗಿದ್ದನು. ಅವನ ಮಗನಾದರೋ ಮಿತವ್ಯಯದ ಜಮೀನುದಾರನ ಅಸಮ್ಮತಿಯಲ್ಲಾಗಲಿ ಸ್ವಸಂತುಷ್ಟ ಆಂಗ್ಲವ್ಯಾಮೋಹಿಯ ಉತ್ಸಾಹದಲ್ಲಾಗಲಿ ಪಾಲುಗೊಳ್ಳಲಿಲ್ಲ. ಅವನು ಆತಿಥೇಯನ ಪುತ್ರಿಯ ಸಂದರ್ಶನಕ್ಕಾಗಿ ಹಾತೊರೆಯುತ್ತಿದ್ದನು; ಏಕೆಂದರೆ ಅವಳ ವಿಚಾರವಾಗಿ ಅವನು ಬಹಳವಾಗಿ ಕೇಳಿ ತಿಳಿದಿದ್ದನು. ನಾನು ಬಲ್ಲಂತೆ ಆತನ ಹೃದಯದೊಲವು ಬೇರೊಂದು ಕಡೆಗೆ ಮೀಸಲಾಗಿದ್ದರೂ, ಚೆಲುವೆಯಾದ ತರುಣಿ ಯಾವಾಗಲೂ ಅವನ ಭಾವನಾ ಶಕ್ತಿಯನ್ನು ಪ್ರಚೋದಿಸುತ್ತಿದ್ದಳು.

ಮೂರು ಮಂದಿಯೂ ಭೇಟಿಯ ಕೋಣೆಗೆ ಹಿಂದಿರುಗಿ ಕುಳಿತುಕೊಂಡರು. ಹಿರಿಯರಿಬ್ಬರೂ ಹಿಂದಿನ ದಿನಗಳನ್ನು ನೆನೆಯುತ್ತ, ಸೈನಿಕ ಜೀವನದ ಕಥೆಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡರು. ಲೀಸಳ ಸಮ್ಮುಖದಲ್ಲಿ ತನ್ನ ಪಾತ್ರವನ್ನು

ಹೇಗೆ ನಿರ್ವಹಿಸಿಬೇಕೆಂಬ ಪರಿಭಾವನೆಯಲ್ಲಿ ಅಲೆಕ್ಸಿ ಉದ್ಯುಕ್ತನಾಗಿದ್ದನು. ಬಿಂಕ ಬೆರೆತ ಔದಾಸೀನ್ಯ ಭಾವವೇ ತಕ್ಕದ್ದೆಂದು ನಿಶ್ಚಯಿಸಿ, ಅದಕ್ಕನುಗುಣವಾಗಿ ಅವನು ಸಿದ್ಧನಾಗುತ್ತಿದ್ದನು. ಬಾಗಿಲು ತೆರೆಯಿತು ; ಅವನು ಔದಾಸೀನ್ಯದಿಂದಲೂ ಅಪಾರ ತಿರಸ್ಕಾರ ಭಾರದಿಂದಲೂ ತನ್ನ ತಲೆಯನ್ನೂ ತಿರುಗಿಸಿದನು ; ಆ ಭಂಗಿಯಿಂದ ಎಂಥ ಕಡು ಬಿನ್ನಾಣಗಾತಿಯ ಹೃದಯವೂ ತುಡಿಯಬೇಕು. ಅವನ ದುರ ದೃಷ್ಟಕ್ಕೆ, ಬಂದವಳು ಲೀಸ ಅಲ್ಲ, ಮಿಸ್ ಜ್ಯಾಕ್ಸನ್ ; ಎಂದಿನಂತೆ ಅವಳು ಪೌಡರ್ ಹಾಕಿಕೊಂಡಿದ್ದಳು, ಗುತ್ತನೆಯ ಕುಪ್ಪಸ ತೊಟ್ಟಿದ್ದಳು ; ಕೋಣೆಗೆ ಪ್ರವೇಶಿಸಿದವಳೇ ಗೌರವ ಸೂಚಿಸಲು ನಡು ಬಗ್ಗಿಸಿದಳು. ಹೀಗಾಗಿ, ಅಲೆಕ್ಸಿಯ ಮಹಾ ಸೈನಿಕ ಆಕ್ರಮಣ ತಂತ್ರವೆಲ್ಲ ವ್ಯರ್ಥವಾಗಿ ಹೋಯಿತು. ಅವನು ಎಚ್ಚರಗೊಳ್ಳುತ್ತಿರುವಷ್ಟರಲ್ಲಿಯೇ ಮರಳಿ ಬಾಗಿಲು ತೆರೆಯಿತು ; ಈ ಸಲ ಲೀಸ ಕೋಣೆಯೊಳಕ್ಕೆ ಬಂದಳು. ಎಲ್ಲರೂ ಎದ್ದು ನಿಂತರು ; ಅತಿಥುಗಳನ್ನು ಇನ್ನೇನು ಪರಿಚಯಮಾಡಿ ಕೊಡುವುದರಲ್ಲಿದ್ದ ತಂದೆ ತಟ್ಟನೆ ತಡೆದು ನಿಂತು, ಅವಸರದಿಂದ ಅವುಡುಗಚ್ಚಿದನು....ಲೀಸ, ಅವನ ಅವ್ಯಕ್ತ ಸುಂದರಾಕೃತಿಯ ಲೀಸ, ಮಿಸ್ ಜಾಕ್ಸನ್ನಳನ್ನು ಮೀರಿಸುವ ರೀತಿಯಲ್ಲಿ ಕಿವಿಯವರೆಗೂ ಪೌಡರ್ ಮೆತ್ತಿಕೊಂಡಿದ್ದಳು; ಅವಳ ಸ್ವಂಯ ಕೂದಳಿಗಿಂತ ಸೊಗಸಾದ ಕೃತಕ ಕೇಶ ಕಲಾಪವು ಅವಳ ತಲೆಯ ಮೇಲೆ ಗುಂಗುರು ಮೆರೆಯುತ್ತಿತ್ತು. ತೋಳುಗಳು ಮುಂದಕ್ಕೆ ಹಾಯ್ದು ನೆಟ್ಟಗೆ ನಿಂತಿದ್ದುವು ; ಅವಳ ದೇಹಾಕೃತಿ X (ಎಕ್ಸ್) ಅಕ್ಷರದಂತೆ ಕಾಣುವ ರೀತಿಯಲ್ಲಿ ಅಲಂಕಾರದ ಪಟ್ಟಿಗಳು ಅವಳ ಉಡುಪನ್ನಲಂಕರಿಸಿದ್ದುವು ; ಇನ್ನೂ ಒತ್ತೆಯಿಟ್ಟಿಲ್ಲದಿದ್ದ ಅವಳ ತಾಯಿಯ ವಜ್ರದ ಒಡವೆಗಳೆಲ್ಲ ಅವಳ ಬೆರಳು, ಕೊರಳು, ಕಿವಿಗಳನ್ನಂಲಕರಿಸಿದ್ದುವು. ಈ ಜಾಜ್ವಲ್ಯಮಾನಳಾದ ಹಾಸ್ಯಾಸ್ಪದ ಸ್ತ್ರೀ ವ್ಯಕ್ತಿಯಲ್ಲಿ ಅಲೆಕ್ಸಿ ತನ್ನ ಅಕ್ಯುಲಿನಳನ್ನು ಗುರುತಿಸಲು ಸಾಧ್ಯವೇ ಇರಲಿಲ್ಲ. ಅವನ ತಂದೆ ಅವಳ ಕೈಯನ್ನು ಮುತ್ತಿಡಲು ಮೇಲೆದ್ದನು ; ಅಲೆಕ್ಸಿ ಇಷ್ಟವಿಲ್ಲದೆ ಆತನ ಮೆಲ್ಪಂಕ್ತಿಯನ್ನು ಅನುಸರಿಸಿದನು. ಅವನ ತುಟಿಗಳು ಅವಳ ಕೋಮಲಾಂಗುಲಿಗಳನ್ನು ಸವರಿಕೊಂಡು ಹೋದಾಗ ಅವು ಕೊಂಚ ಮಾತ್ರ ಕಂಪಿಸಿದಂತೆ ಅವನಿಗೆ ತೋರಿತು. ಅದೇ ವೇಳೆಯಲ್ಲಿ ಸಣ್ಣ ಪಾದವೊಂದನ್ನು ಅವನು ಗಮನಿಸಿದನು ; ಥಳಕು ಪಳಕು ಬೆಡಗಿನ ಪಾದರಕ್ಷೆಯನ್ನು ಮೆರೆಸಲೆಂದೇ ಆ ಪಾದವನ್ನು ಮುಂಚಾಚಿದ್ದುದು ಸುಸ್ಪಷ್ಟವಾಗಿತ್ತು. ಇದನ್ನು ನೋಡಿದ ಮೇಲೆ ಅವಳ ಉಳಿದ ವೇಷಭೂಷಣಗಳ ವಿಚಾರದಲ್ಲಿಯೂ ಅವನು ಹೇಗೋ ಮನ ಸ್ಸಮಾಧಾನವನ್ನು ತಂದುಕೊಂಡನು. ಇನ್ನು ಪೌಡರ್ ಮತ್ತು ಬಣ್ಣ : ಸರಳ

ಹೃದಯವುಳ್ಳ ಅವನು ಅವುಗಳನ್ನು ಮೊದಲು ಗಮನಿಸಲೇ ಇಲ್ಲ. ಆ ಬಳಿಕವೂ ಅವುಗಳ ಬಗ್ಗೆ ಅವನು ಸಂಶಯಪಡಲಿಲ್ಲ. ಗ್ರಿಗೊರಿ ಇವಾನೊವಿಚ್ ತಾನು ಕೊಟ್ಟಿದ್ದ ವಚನವನ್ನು ನೆನಪಿನಲ್ಲಿಟ್ಟಿದ್ದನು ; ಲವಲೇಶವಾದರೂ ವಿಸ್ಮಯ ಭಾವವನ್ನು ತೋರಲು ಪ್ರಯತ್ನಿಸಲಿಲ್ಲ. ಆದರೆ ತನ್ನ ಮಗಳ ಈ 'ಖಯಾಲಿ' ಯನ್ನು ಕಂಡು ಅವನಿಗೆ ಅತ್ಯಂತ ವಿನೋದ ವೆನಿಸಿತು ; ನೇರೆದುರಾಗಿ ಮುಖ ತೋರಿಸುವುದು ಅವನಿಗೆ ಕಷ್ಟವಾಯಿತು. ಆದರೆ ಆ ಸಭ್ಯತೆಯ ಸೋಗಿನ ಆಂಗ್ಲ ಮಹಿಳೆಗೆ ಅದು ನಗೆಯ ವಿಷಯವಾಗಿರಲಿಲ್ಲ. ಪೌಡರನ್ನೂ ಬಣ್ಣವನ್ನೂ ತನ್ನ ಅಲಂಕಾರ ಮಾಡಿಕೊಳ್ಳುವ ಮೋಜಿನಿಂದ ಎಗರಿಸಿಬಿಟ್ಟಿದೆಯೆಂದು ಅವಳು ಥಟ್ಟನೆ ಊಹಿಸಿದಳು ; ಅವಳ ಕಪೋಲಗಳ ಕೃತಕ ಧಾವಳ್ಯದ ಅಡಿಯಲ್ಲಿ ಕೋಪದ ಕೆಂಗಾಂತಿ ವ್ಯಕ್ತಪಟ್ಟಿತು. ಅವಳು ಆ ತುಂಟ ಯುವತಿಯ ಕಡೆಗೆ ರೋಷದ ಕಿಡಿ ಕಣ್ಣೋಟಗಳನ್ನು ಎಸೆದಳು ; ಆದರೆ ಆ ಯುವತಿ ಮುಂದೆ ಎಂದಾದರೂ ಸಂದರ್ಭವನ್ನು ವಿವರಿಸುವುದೆಂದುಕೊಂಡು, ಅವುಗಳನ್ನು ಗಮನಿಸಿದಂತೆಯೇ ಇದ್ದುಬಿಟ್ಟಳು.

ಅವರು ಮೇಜಿನ ಮುಂದೆ ಕುಳಿತರು. ಅಲೆಕ್ಸಿ ತಾನು ತಳೆದ ಅನ್ಯ ಮನಸ್ಕ ಖಿನ್ನವ್ಯಕ್ತಿಯ ಪಾತ್ರದ ನಟನೆಯನ್ನು ಮುಂದುವರಿಸಿದನು. ಲೀಸ ಹಲ್ಲು ಕಚ್ಚಿ, ಬೇಸರ ಹಿಡಿಸುವ ಏಕನಾದದಲ್ಲಿ, ಫ್ರೆಂಚಿನಲ್ಲಿ ಮಾತ್ರ ಮಾತನಾಡುತ್ತ ಹುಸಿನಗೆ ನಗುತ್ತಿದ್ದಳು. ಅವಳ ಉದ್ದೇಶವೇನೆಂಬುದು ತಿಳಿಯದೆ, ಅವಳ ತಂದೆ ಸುಮ್ಮನೆ ಅವಳನ್ನು ನೋಡುತ್ತಿದ್ದನು ; ಆದರೆ ಅವನಿಗೆ ಎಲ್ಲವೂ ಬಹು ವಿನೋದಕರವಾಗಿ ಕಾಣುತ್ತಿತ್ತು. ಆಂಗ್ಲರಮಣಿಯಂತೂ ಮಾತಿಲ್ಲದ ಕೋಪದ ಮುದ್ದೆಯಾಗಿದ್ದಳು. ನಿಜವಾಗಿಯೂ ನಿರಾತಂಕವಾಗದ್ದವನೆಂದರೆ ಇವಾನ್ ಪೆಟ್ರೋವಿಚ್ ; ಇಬ್ಬರು ತಿನ್ನುವಷ್ಟನ್ನು ಒಬ್ಬನೇ ತಿಂದನು ; ಎಂದಿನಂತೆ ಕಂಠಪೂರ್ತಿ ಕುಡಿದನು ; ತನ್ನ ಹಾಸ್ಯೋಕ್ತಿಗಳಿಗೆ ತಾನೇ ನಕ್ಕನು ; ಹೆಚ್ಚು ಹೆಚ್ಚು ಸ್ನೇಹಪರನಾಗಿ ಸಂಭಾಷಿಸತೊಡಗಿದನು.

ಕಡೆಗೆ ಮೇಜಿನ ಮುಂದಿನಿಂದ ಎದ್ದೇಳುವ ವೇಳೆಯಾಯಿತು. ಅತಿಥಿಗಳೂ ಬೀಳ್ಕೊಂಡು ಹೊರಟರು. ಆಗ ಮನಃಪೂರ್ತಿ ನಕ್ಕು, ಪ್ರಶ್ನೆ ಕೇಳುವ ಸ್ವಾತಂತ್ರ್ಯ ಗ್ರಿಗೊರಿ ಇವಾನೊವಿಚ್‌ಗೆ ದೊರಕಿತು. "ಅವರನ್ನು ಈ ರೀತಿ ಬೆಪ್ಪು ಹಿಡಿಸಬೇಕೆಂದು ನಿನಗೆ ತೋರಿದ್ದಾದರೂ ಯಾಕೆ? ಅದು ಹಾಗಿರಲಿ, ಪೌಡರ್ ಹಾಕಿಕೊಂಡರೆ ನಿನಗೆ ಒಪ್ಪುತ್ತೆ ! ಹೆಂಗಸರ ಅಲಂಕಾರ ಮಾಡಿಕೊಳ್ಳುವ ಮರ್ಮಗಳು ನನಗೆ ಗೊತ್ತಿಲ್ಲ ; ಆದರೆ, ನಾನು ನೀನಾಗಿದ್ದರೆ ಇಷ್ಟು ಹೊತ್ತಿಗೆ

ಪೌಡರ್ ಉಪಯೋಗಿಸಲು ಮೊದಲು ಮಾಡಿಬಿಡುತ್ತಿದ್ದೆ. ಅಂದಮಾತ್ರಕ್ಕೆ, ಅತಿಯಾಗಿ ಅಲ್ಲ ; ಕೊಂಚ ಕೊಂಚ, ಅಷ್ಟೆ" ಎಂದು ಅವನು ಲೀಸಳನ್ನು ಕುರಿತು ಹೇಳಿದನು. ತನ್ನ ಆಲೋಚನೆ ಫಲಿಸಿದ್ದನ್ನು ಕಂಡು ಲೀಸಳಿಗೆ ಸೊಗಸೆನಿಸಿತು. ಅವಳು ತನ್ನ ತಂದೆಯ ಕೊರಳ ಸುತ್ತ ತನ್ನ ತೋಳುಗಳನ್ನು ಬೀಸಿ ಎಸೆದಳು, ಅವನ 'ಸಲಹೆ ಕುರಿತು ವಿಚಾರ ಮಾಡುವುದಾಗ ಮಾತುಕೊಟ್ಟಳು; ಬಳಿಕ, ಕೆರಳಿ ಕ್ರುದ್ಧಳಾಗಿದ್ದ ಮಿಸ್ ಜ್ಯಾಕ್‌ಸನ್ನಳನ್ನು ಸಮಾಧಾನ ಗೊಳಿಸಲು ಓಡಿದಳು. ಅವಳು ಕೋಣೆಯ ಬಾಗಿಲು ತೆರೆದು, ತನ್ನ ಸಮಾಧಾನ ವಾಕ್ಯಗಳಿಗೆ ಕಿವಿಗೊಡುವಂತೆ ಮಾಡುವುದು ಲೀಸಳಿಗೆ ಪ್ರಯಾಸವೇ ಆಯಿತು. ಪರಿಚಯವಿಲ್ಲದವರ ಎದುರಿನಲ್ಲಿ ತನ್ನ ಶ್ಯಾಮವರ್ಣದ ಚರ್ಮವನ್ನು ತೋರಗೊಡುವುದಕ್ಕೆ ತನಗೆ ನಾಚಿಕೆಯಾಯಿತೆಂದು ಲೀಸ ಅವಳಿಗೆ ವಿವರಿಸಿದಳೂ; ಒಂದು ಮಾತು ಕೇಳುವುದಕ್ಕೆ ತನಗೆ ಧೈರ್ಯವಾಗಿರಲಿಲ್ಲ.... ಆದರೆ, ತನ್ನ ಪ್ರೀತಿಪಾತ್ರಳಾದ ಒಳ್ಳೆಯವಳಾದ ಮಿಸ್ ಜ್ಯಾಕ್‌ಸನ್ ತನ್ನನ್ನು ಕ್ಷಮಿಸುವಳೆಂದು ತನಗೆ ಪೂರ್ಣ ಭರವಸೆಯಿದೆ..ಇತ್ಯಾದಿ, ಇತ್ಯಾದಿ. ತನ್ನನ್ನು ಗೇಲಿಮಾಡುವುದು ಲೀಸಳ ಉದ್ದೇಶವಲ್ಲವೆಂದು ಮಿಸ್ ಜ್ಯಾಕ್ಸನ್ನಿಗೆ ನಂಬಿಕೆಯಾದಾಗ, ಅವಳು ಸಮಾಧಾನಗೊಂಡಳು ; ಲೀಸಳನ್ನು ಮುದ್ದಿಟ್ಟಳು ; ರಾಜಿಯಾದುದರ ಗುರುತಾಗಿ ಅವಳಿಗೆ ಒಂದು ಜಾಡಿ ತುಂಬ ಇಂಗ್ಲಿಷ್ ತಯಾರಿಕೆಯ ಬಿಳಿಯ ಪೌಡರ್ ಕೊಟ್ಟಳು. ಲೀಸ ಮುನಃಪೂರ್ವಕವಾದ ಕೃತಜ್ಞತೆಯಿಂದ ಅದನ್ನು ಸ್ವೀಕರಿಸಿದಳು.

ಮಾರನೆಯ ದಿನ ಲೀಸ ಗೊತ್ತಾಗಿದ್ದ ಭೇಟಿಯ ಸ್ಥಳಕ್ಕೆ ಹೋಗಲು ತಪ್ಪಲಿಲ್ಲವೆಂದು ವಾಚಕರು ಸುಲಭವಾಗಿ ಊಹಿಸಿರಬಹುದು. ಅವಳು ಅಲೆಕ್ಸಿಯನ್ನು ಕಂಡಕೂಡಲೆ, "ನೀವು ನಿನ್ನೆ ನಮ್ಮ ದಣಿಗಳ ಮನೆಯವರನ್ನು ನೋಡಲು ಹೋಗಿದ್ದಿರಷ್ಟೆ ನಿಮ್ಮ ಚಿಕ್ಕ ಒಡತಿಯವರ ವಿಚಾರ ನಿಮ್ಮ ಅಭಿಪ್ರಾಯ ಏನು?" ಎಂದು ಕೇಳಿದಳು. ತಾನು ಆಕೆಯನ್ನು ಗಮನಿಸಲಿಲ್ಲವೆಂದು ಅಲೆಕಸಿ ಉತ್ತರ ಕೊಟ್ಟನು. "ಎಂಥ ಅನ್ಯಾಯ !" ಎಂದು ಲೀಸ ಉದ್ಗಾರ ತೆಗೆದಳು. "ಏಕೆ?" ಎಂದು ಅಲೆಕ್ಸಿ ಕೇಳಿದನು.

"ಅವರು ಹೇಳುವುದು ನಿಜವೇ ಎಂದು ನಿಮ್ಮನ್ನು ಕೇಳಬೇಕೆಂದು ನನಗೆ ಆಸೆಯಾಯಿತು....."

"ಏನು ಹೇಳುತ್ತಾರೆ ಅವರು?"

"ಅವರು ಹೇಳುವುದು ನಿಜವಾದಲ್ಲಿ,..... ನಾನು ಅವಳ ಹಾಗೆಯೆ ಇದೇನೆಯಂತೆ."

"ಎಂಥ ತಿಳಿಗೇಡಿತನ ! ನಿನಗೆ ಹೋಲಿಸಿದರೆ ಅವಳು ಕರಾಳ ಮೂರ್ತಿ!"

"ಓಹ್, ನೀವು ಹಾಗೆ ಹೇಳಬಾರದು. ನಮ್ಮ ಚಿಕ್ಕ ಒಡತಿಯವರು ಅಷ್ಟು ಚೆನ್ನಾಗಿದ್ದಾರೆ. ಅಷ್ಟು ಸೊಗಸಾಗಿದ್ದಾರೆ ! ಅವರೆಲ್ಲಿ ನಾನೆಲ್ಲಿ !"

ಪ್ರಪಂಚದಲ್ಲಿರುವ ಎಲ್ಲ ಸುಂದರ ತರುಣಿಯರಿಗಿಂತ ಆಕೆ ಮೇಲೆಂದು ಅಲೆಕ್ಸಿ ಪ್ರಮಾಣಮಾಡಿ ಹೇಳಿದನು ; ಇವಳ ಮನಸ್ಸಿನಲ್ಲಿ ಏನಾದರೂ ಸಂಶಯ ಉಳಿದಿದ್ದರೆ ಅದನ್ನು ಹೋಗಲಾಡಿಸುವುದಕ್ಕಾಗಿ, ಇವಳ ಒಡತಿಯನ್ನು ತುಂಬ ಹಾಸ್ಯಾಂಶಗಳೊಂದಿಗೆ ವರ್ಣಿಸತೊಡಗಿದನು. ಇದನ್ನು ಕೇಳಿ ಲೀಸ ಹಿಡಿಸಲಾರದಷ್ಟು ನಕ್ಕಳು.

"ನಮ್ಮ ಚಿಕ್ಕ ಒಡತಿ ನಗುವಹಾಗೆಯೇ ಇರಬಹುದು. ಆದರೂ, ಅವರಿಗೆ ಹೋಲಿಸಿದರೆ ನಾನು ಓದುಬರಹ ಬಾರದ ದಡ್ಡಿ" ಎಂದು ಅವಳು ನಿಟ್ಟುಸಿರುಬಿಟ್ಟಳು. "ಓಹೋ, ಅದು ನಿನ್ನ ಮನಸ್ಸು ಕೊರೆಯುತ್ತಿದೆಯೋ? ನೀನು ಇಷ್ಟಪಟ್ಟರೆ ಈ ಕ್ಷಣದಿಂದಲೇ ನಿನಗೆ ಪಾಠಹೇಳಿಕೊಡಲು ಮೊದಲು ಮಾಡುತ್ತೇನೆ" ಎಂದನು ಅಲೆಕ್ಸಿ. "ಯಾಕೆ ಆಗಬಾರದು? ನಾನು ಯಾಕೆ ಪ್ರಯತ್ನಿಸಿ ನೋಡಬಾರದು ?" ಎಂದು ಲೀಸ ಉಬ್ಬಿ ನುಡಿದಳು. "ಆಗಲಿ, ನನ್ನ ಚಿನ್ನ. ಇಲ್ಲೇ ಈಗಲೇ ಪ್ರಾರಂಭಿಸಿಬಿಡೋಣ." ಅವರು ಕುಳಿತುಕೊಂಡರು. ಅಲೆಕ್ಸಿ ತನ್ನ ಜೇಬಿನಿಂದ ಒಂದು ಸೀಸದಕಡ್ಡಿಯನ್ನೂ ಬರೆಯುವ ಪುಸ್ತಕವನ್ನೂ ಹೊರತೆಗೆದನು ; ಅಕ್ಯುಲಿನ ಅತ್ಯಲ್ಪ ಕಾಲದಲ್ಲಿಯೆ ವರ್ಣಮಾಲೆಯನ್ನು ಕಲಿತುಬಿಟ್ಟಳು. ಅವಳ ಚುರುಕುತನವನ್ನು ಕಂಡು ಅಲೆಕ್ಸಿ ತನ್ನ ಬೆರಗನ್ನು ತಡೆಯಲಾಗಲಿಲ್ಲ. ಮಾರನೆಯ ಬೆಳಗ್ಗೆ ಅವಳು ಬರೆವಣಿಗೆಯನ್ನು ಪ್ರಯತ್ನಿಸಬೇಕೆಂದು ಆಶಿಸಿದಳು ; ಮೊದಲೇನೋ ಸೀಸದಕಡ್ಡಿ ಅವಳು ಹೇಳಿದ ಹಾಗೆ ಕೇಳಲಿಲ್ಲ ; ಆದರೆ ಕೆಲವು ನಿಮಿಷಗಳಲ್ಲಿ ಅವಳು ಚೆನ್ನಾಗಿಯೇ ಅಕ್ಷರಗಳನ್ನು ಬರೆಯುತ್ತಿದ್ದಳು. "ಭೇಷ್. ಇದೊಂದು ಅದ್ಭುತವೇ ಸರಿ. ಲಂಕ್ಯಾಸ್ಟರ್ ಪದ್ಧತಿಯಲ್ಲಿ ಆಗುವುದಕ್ಕಿಂತ ಶೀಘ್ರವಾಗಿ ನಾವು ಮುಂದುವರಿಯುತ್ತಿದ್ದೇವೆ" ಎಂದು ಅಲೆಕ್ಸಿ ನುಡಿದನು. ವಾಸ್ತವವಾಗಿ ಮೂರನೆಯ ಪಾಠ ಮುಗಿಯುವ ಹೊತ್ತಿಗೆ, ಅವಳು "ನಟಾಲ್ಯ, ಬೋಯರ್‌ನ ಮಗಳು" ಎಂಬ ಹೆಸರಿನ ಕಾಗುಣಿತ ಬಿಡಿಸಿ ಹೇಳಲು ಸಮರ್ಥಳಾಗಿದ್ದಳು. ಓದಿನ ನಡುನಡುವೆ ಅವಳು ಆಡುತ್ತಿದ್ದ ಮಾತುಗಳು ಅಲೆಕ್ಸಿಯನ್ನು ದಂಗುಬಡಿಸಿದುವು. ಅದೇ ಕಾದಂಬರಿಯಿಂದ ಅಯ್ದ ಸೂಕ್ತಿಗಳನ್ನು ಒಂದು ಹಾಳೆಯ ತುಂಬ ಬರೆದುಬಿಟ್ಟಿದ್ದಳು.

ಒಂದು ವಾರ ಕಳೆಯಿತು ; ಈಗ ಅವರ ನಡುವೆ ಪತ್ರಗಳ ವಿನಿಮಯ

ಸಾಗುತ್ತಿತ್ತು. ಒಂದು ಪುರಾತನ ಓಕ್ ವೃಕ್ಷದ ಪೊಟ್ಟರೆಯೆ ಅವರ ಅಂಚೆ ಕಚೇರಿ. ನಾಸ್ತ್ಯಗೋಪ್ಯವಾಗಿ ಅಂಚೆಯವನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಳು. ಅಲೆಕ್ಸಿ ಒಳ್ಳೆಯ ಸ್ಫುಟವಾದ ಅಕ್ಷರಗಳಿಂದ ಬರೆದ ಕಾಗದಗಳನ್ನು ಓಕ್ ವೃಕ್ಷದ ಬಳಿಗೆ ತರುತ್ತಿದ್ದನು ; ಅಲ್ಲಿ ತನ್ನ ಪ್ರಿಯೆ ಅಗ್ಗದ ನೀಲಿಯ ಕಾಗದದ ಮೇಲೆ ಗೀಚಿದ್ದ ಪತ್ರಗಳು ಅವನಿಗೆ ಸಿಕ್ಕುತ್ತಿದ್ದುವು. ಪ್ರತಿಯೊಂದು ಕಾಗದ ಬರೆದಂತೆ ಅಕ್ಕುಲಿನಳ ಉತ್ತಮಗೊಳ್ಳುತ್ತಿತ್ತು.

ಈ ನಡುವೆ ಇವಾನ್ ಪೆಟ್ರೋವೀಚ್ ಬೆರಿಸ್ಟಾಫ್ ಮತ್ತು ಗ್ರಿಗೊರಿ ಇವಾನೊವಿಚ್ ಮ್ಯುರೊಮ್ಸ್ಕಿ ಇವರ ನಡುವೆ ಈಚೆಗೆ ಮೊಳೆತ ಹೊಸ ಸಂಬಂಧ ಒಂದೇ ಸಮನಾಗಿ ಉತ್ತಮಗೊಳ್ಳುತ್ತಿತ್ತು ; ಬೇಗನೆ ಸ್ನೇಹವಾಗಿಯೂ ಪರಿಣಮಿಸಿತು. ಅದಕ್ಕೆ ಕಾರಣ ಈ ಮುಂದಿನ ಸಂದರ್ಭಗಳು : ಇವಾನ್ ಪೆಟ್ರೋವಿಚ್ ಮೃತನಾದಾಗ ಅವನ ಆಸ್ತಿಯೆಲ್ಲ ಅಲೆಕ್ಸಿ ಇವಾನೊವಿಚ್‌ಗೆ ಬರುವುದು ; ಆಗ ಅವನು ಜಿಲ್ಲೆಯಲ್ಲೆಲ್ಲ ಅತ್ಯಂತ ಐಶ್ವರ್ಯವಂತನಾದ ಜಮೀನುದಾರನಾಗುವನು ; ಅವನು ಲೀಸಳನ್ನು ಮದುವೆಯಾಗದಿರಲು ಕಾರಣವೇನೂ ಇರದು – ಇದು ಮ್ಯುರೊಮ್ಸ್ಕಿಯ ಲೆಕ್ಕಾಚಾರ. ಇತ್ತ ವೃದ್ಧ ಬೆರಿಸ್ಟಾಫ್ ತನ್ನ ನೆರೆಯವನಲ್ಲಿ ಕೆಲವು ವೈಚಿತ್ರ್ಯಗಳನ್ನು (ಅಥವಾ ಅವನ ಮಾತಿನಲ್ಲಿಯೇ ಹೇಳುವುದಾದರೆ, ಆಂಗ್ಲವೆನಿಸಿಕೊಂಡ ಎಲ್ಲದರ ಮೇಲಣ ಹುಚ್ಚುಗೀಳು) ಗಮನಿಸಿದ್ದನು, ದಿಟ ; ಆದರೆ ಅವನಲ್ಲಿ ಅನೇಕ ಉತ್ಕೃಷ್ಟ ಗುಣಗಳು ಇದ್ದುವೆಂಬುದನ್ನೂ ಆತ ನಿರಾಕರಿಸಲಿಲ್ಲ. ಆ ಗುಣಗಳಲ್ಲಿ, ಅಪೂರ್ವ ಬುದ್ಧಿಚಾತುರ್ಯ ಒಂದು ಗ್ರಿಗೊರಿ ಇವಾನೊವಿಚ್ ಪ್ರಸಿದ್ಧನೂ ಪ್ರಭಾವಶಾಲಿಯೂ ಆಗಿದ್ದ ಕೌಂಟ್‌ಪ್ರೋನ್ಸ್ಕಿಗೆ ಹತ್ತಿರದ ಸಂಬಂಧಿ. ಆ ಕೌಂಟ್ ಅಲೆಕ್ಸಿಗೆ ತುಂಬ ಪ್ರಯೋಜನಕಾರಿಯಾಗಬಹುದು; ಪ್ರಯೋಜನವಾಗುವ ಸಂದರ್ಭದಲ್ಲಿ ಮ್ಯುರೋಮ್ಸ್ಕಿ ತನ್ನ ಮಗಳನ್ನು ಮದುವೆಮಾಡಿಕೊಡಲು ನಿಸ್ಸಂದೇಹವಾಗಿ ಸಂತೋಷ ಪಡುವನು – ಹೀಗೆಂದು ಇವಾನ್ ಪೆಟ್ರೋವಿಚ್ ಆಲೋಚಿಸಿದನು. ಕೆಲವು ಕಾಲದವರೆಗೆ ಇಬ್ಬರು ವೃದ್ಧರೂ ತಮ್ಮ ತಮ್ಮ ಆಲೋಚನೆಗಳನ್ನು ಬಹಿರಂಗ ಪಡಿಸಲಿಲ್ಲ ; ಕಡೆಗೊಂದು ದಿನ ಇಬ್ಬರೂ ತಮ್ಮ ಮನಸ್ಸು ಬಿಚ್ಚಿ ಮಾತಾಡಿದರು, ಆಲಿಂಗಿಸಿಕೊಂಡರು ; ವಿಷಯವನ್ನು ಸಮಗ್ರವಾಗಿ ಪರಾಮರ್ಶಿಸುವುದಾಗಿ ಒಬ್ಬರಿಗೊಬ್ಬರು ಮಾತುಕೊಟ್ಟರು. ಇಬ್ಬರೂ ತಮ್ಮ ತಮ್ಮ ರೀತಿಯಲ್ಲಿ ಕಾರ್ಯ ಪ್ರಯತ್ನಕ್ಕೆ ತೊಡಗಿದರು. ಮ್ಯುರೊಮ್ಸ್ಕಿಯ ದೃಷ್ಟಿಯಲ್ಲಿ ಒಂದು ತೊಂದರೆ ಕಂಡುಬಂತು – ಅದೇನೆಂದರೆ, ತನ್ನ 'ಬೆಟ್ಸಿ'ಯನ್ನೂ ಅಲೆಕ್ಸಿಯನ್ನೂ ಒಂದುಗೂಡುವಂತೆ

ಮಾಡುವುದು ; ಅಂದಿನ ಭೋಜನಕೂಟವಾದಮೇಲೆ ಅವಳು ಅವನನ್ನು ನೋಡಿಯೆ ಇರಲಿಲ್ಲ. ಅವರು ಅಷ್ಟಾಗಿ ಪರಸ್ಪರ ಆಕರ್ಷಿತವಾಗಿರಲಿಲ್ಲ ಎಂಬ ಭಾವನೆಯಿತ್ತು. ಅದು ಹೇಗಿದ್ದರೂ, ಅಲೆಕ್ಸಿ ಮರಳಿ ಪ್ರಿಲುಚೀನೋಗೆ ಬರಲಿಲ್ಲ. ಇವಾನ್ ಪೆಟ್ರೋವಿಚ್ ಅವರ ಮನೆಗೆ ಮರ್ಯಾದೆಯ ಭೇಟಿ ಕೊಟ್ಟಾಗಲೆಲ್ಲ ಲೀಸ ತನ್ನ ಕೋಣೆಗೆ ಹೋಗಿಬಿಡುತ್ತಿದ್ದಳು. ಆದರೆ ಗ್ರಿಗೊರಿ ಇವಾನೊವಿಚ್ ಮಾತ್ರ, "ಅಲೆಕ್ಸಿ ಪ್ರತಿನಿತ್ಯವೂ ಬಂದರೆ ಬೆಟ್ಸಿ ಅವನನ್ನು ಪ್ರೀತಿಸುವುದು ಖಂಡಿತ. ಅದು ಕೇವಲ ಸ್ವಾಭಾವಿಕ. ಕಾಲ ಎಲ್ಲವನ್ನೂ ಸರಿಪಡಿಸುತ್ತದೆ."

ಆದರೆ ಇವಾನ್ ಪೆಟ್ರೋವಿಚ್ ತನ್ನ ಯೋಜನೆಗಳ ಯಶಸ್ಸಿನ ಬಗೆಗೆ ಅಷ್ಟು ಖಂಡಿತವಾಗಿರಲಿಲ್ಲ. ಅದೇ ಸಂಜೆ ಅವನು ತನ್ನ ಮಗನನ್ನು ತಾನಿದ್ದ ವ್ಯಾಸಂಗದ ಕೋಣೆಗೆ ಕರೆದು, ತನ್ನ ಚಿಲಿಮೆಯನ್ನು ಹೊತ್ತಿಸಿಕೊಂಡು, ತುಸ ತಡೆದು ಹೀಗೆ ಹೇಳಿದನು :

"ಇದೇಕೆ ಅಲ್ಯೋಷ, ಸೈನಿಕ ಉದ್ಯೋಗದ ವಿಚಾರ ನೀನು ಮಾತಾಡುವುದನ್ನೆ ನಿಲ್ಲಿಸಿಬಿಟ್ಟಿದ್ದೀಯೆ? ರಾವುತ ಸಿಪಾಯಿಯ ಸಮವಸ್ತ್ರ ಧರಿಸಿಬೇಕೆಂದು ಇನ್ನು ಮುಂದೆ ನೀನು ಹಂಬಲಿಸುವುದೇ ಇಲ್ಲವೆ?"

"ಇಲ್ಲ, ಅಯ್ಯಾ. ನಾನು ರಾವುತಸಿಪಾಯಿದಳಕ್ಕೆ ಸೇರುವುದು ನಿಮಗೆ ಇಷ್ಟವಿಲ್ಲವೆಂದು ನನಗೆ ಗೊತ್ತಾದಮೇಲೆ, ನಿಮ್ಮ ಇಷ್ಟಾನುಸಾರ ನಡೆದುಕೊಳ್ಳುವುದ ನನ್ನ ಕರ್ತವ್ಯ" ಎಂದು ಅಲೆಕ್ಸಿ ಗೌರವ ಪೂರ್ವಕವಾಗಿ ಉತ್ತರಕೊಟ್ಟನು.

ಅದಕ್ಕೆ ಇವಾನ್ ಪೆಟ್ರೋವಿಚ್– "ಒಳ್ಳೆಯದು. ನೀನು ಕರ್ತವ್ಯವನ್ನು ಬಲ್ಲ ಮಗ. ಇದರಿಂದ ನನ್ನ ಮನಸ್ಸಿಗೆ ಎಷ್ಟೋ ಸಮಾಧಾನ. ನಿನ್ನನ್ನು ಬಲಾತ್ಕರಿಸಲು ನನಗೂ ಕೂಡ ಇಷ್ಟವಿಲ್ಲ. ಸದ್ಯಕ್ಕೆ, ಸರ್ಕಾರಿ ಚಾಕರಿಗೆ ಸೇರಬೇಕೆಂದು ನಾನು ನಿನ್ನನ್ನು ಒತ್ತಾಯಮಾಡುವುದಿಲ್ಲ. ಈ ಮಧ್ಯೆ, ನೀನು ಮದುವೆ ಮಾಡಿಕೊಳ್ಳಬೇಕೆಂದೂ ನಾನು ಉದ್ದೇಶಿಸಿದ್ದೇನೆ" ಎಂದನು.

ಅಚ್ಚರಿಗೊಂಡ ಅಲೆಕ್ಸಿ– "ನಾನು ಯಾರನ್ನು ಮದುವೆಯಾಗ ಬೇಕೆಂದು ನಿಮ್ಮ ಇಷ್ಟ?" ಎಂದು ಕೇಳಿದನು.

"ಲಿಸವೀಟ ಗ್ರಿಗೊರ್‍ಯೆವ್ನ ಮ್ಯುರೊಮ್ಸ್ಕಯ. ಕೆಟ್ಟ ಆಯ್ಕೆ ಅಲ್ಲವೆಂದು ಭಾವಿಸಿದ್ದೇವೆ" ಎಂದು ಇವಾನ್ ಪೆಟ್ರೋವಿಚ್ ಉತ್ತರಕೊಟ್ಟನು.

"ಆದರೆ, ಮದುವೆಯ ವಿಚಾರ ಕುರಿತು ನಾನು ಇನ್ನೂ ಯೋಚನೆ ಮಾಡತೊಡಗಿಲ್ಲ."

"ನೀನು ಯೋಚಿಸುತ್ತಿಲ್ಲ, ಸರಿಯೆ. ಆದ್ದರಿಂದಲೇ ನಿನ್ನ ಪರವಾಗಿ ನಾನು

ಆಲೋಚನೆಮಾಡಿ, ನಿಶ್ಚಯಮಾಡಿಬಿಟ್ಟಿದ್ದೇನೆ."

"ಆದರೆ, ಅಯ್ಯಾ, ಲೀಸ ಮ್ಯುರೊಮ್ಸ್ಕಯಳನ್ನು ಕಂಡರೆ ನನಗೆ ಇಷ್ಟವಿಲ್ಲ."

"ಅವಳನ್ನು ಕಂಡರೆ ನಿನಗೆ ಆಮೇಲೆ ಇಷ್ಟವಾಗುತ್ತದೆ. ರೂಢಿಯಾದರೆ ಪ್ರೀತಿ ಅನುಸರಿಸಿ ಬರುತ್ತದೆ."

"ಅವಳನ್ನು ಸುಖಿಯಾಗಿ ಮಾಡುವ ಸಾಮರ್ಥ್ಯ ನನಗಿದೆ ಎನಿಸುವುದಿಲ್ಲ."

"ಅವಳ ಸುಖ ಕುರಿತು ನೀನು ಯೋಚಿಸಬೇಕಾಗಿಲ್ಲ. ಏನು, ಇದೇಯೋ ತಂದೆಯ ಇಚ್ಛೆಗೆ ನೀನು ಸಲ್ಲಿಸುವ ಗೌರವ? ನಾಚಿಕೆಗೇಡು !"

"ನಿಮಗೆ ಮೆಚ್ಚಿಗೆಯಾಗಲಿ ಬಿಡಲಿ, ನನಗೆ ಮದುವೆಯಾಗುವ ಇಷ್ಟವಿಲ್ಲ, ನಾನು ಮದುವೆಯಾಗುವುದೂ ಇಲ್ಲ."

"ನೀನು ಮದುವೆಯಾದೆಯೋ ಸರಿ. ಇಲ್ಲವೋ, ನೀನು ಎತ್ತಲಾಗಾದರೂ ಹಾಳಾಗಿಹೋಗು ; ದೇವರ ಪ್ರಮಾಣವಾಗಿಯೂ, ನಾನು ಆಸ್ತಿಯನ್ನೆಲ್ಲಾ ಮಾರಿ, ಬಂದ ಹಣವನ್ನು ಚೆಲ್ಲಾಪಿಲ್ಲಿಮಾಡಿಬಿಡುತ್ತೇನೆ. ಒಂದು ಕೊಪೆಕ್ಕನ್ನೂ ನಿನಗೆ ಉಳಿಸುವುದಿಲ್ಲ. ಆಲೋಚನೆ ಮಾಡುವುದಕ್ಕೆ, ನಿನಗೆ ಮೂರು ದಿನಗಳ ಅವಕಾಶಕೊಟ್ಟಿದ್ದೇನೆ. ಅಲ್ಲಿಯವರೆಗೆ ನನಗೆ ನಿನ್ನ ಮುಖ ತೋರಿಸಬೇಡ !"

ತನ್ನ ತಂದೆಯ ತಲೆಯೊಳಕ್ಕೆ ಏನಾದರೂ ಒಂದು ಭಾವನೆ ಹೊಕ್ಕಿಬಿಟ್ಟರೆ ಆದರಿಂದ ಪಾರಾಗುವ ಮಾರ್ಗವೇ ಇರಲಿಲ್ಲ ; ಟರಾಸ್ ಸ್ಕೊಟಿನಿನ್* ಹೇಳಿದಂತೆ, ಆ ಭಾವನೆಯುನ್ನು "ಮೊಳೆಯಿಂದಲೂ ಎಬ್ಬಿ ತೆಗೆ" ಯುವುದಕ್ಕಾಗುತ್ತಿರಲಿಲ್ಲ ಎಂಬುದು ಅಲೆಕ್ಸಿಗೆ ತಿಳಿದಿತ್ತು. ಆದರೆ ಅಲೆಕ್ಸಿಯೂ ಅವರ ಅಪ್ಪನ ಮಗ ತಾನೆ ; ಅವನು ತನ್ನ ಮನಸ್ಸನ್ನು ಮಾರ್ಪಡಿಸುವಂತೆ ಮಾಡುವುದೂ ಅಷ್ಟೇ ಕಷ್ಟವಾಗಿತ್ತು. ಅವನು ತನ್ನ ಕೋಣೆಯೊಳಕ್ಕೆ ಹೋಗಿ, ತನ್ನ ತಂದೆಯ ಅಧಿಕಾರ ವ್ಯಾಪ್ತಿಯ ಇತಿ ಮಿತಿ, ಲಿಸವೀಟ ಗ್ರಿತೊರ್ಯೆವ್ನಳ ವ್ಯಕ್ತಿತ್ವ, ತನ್ನನ್ನು ನಿರ್ಗತಿಕನನ್ನಾಗಿ ಮಾಡುವುದಾಗಿ ತನ್ನ ತಂದೆ ಹಾಕಿದ ಬೆದರಿಕೆ – ಇವೆಲ್ಲವನ್ನೂ ಕುರಿತು ಪರ್ಯಾಲೋಚಿಸಿದನು ; ಕಡೆಯಲ್ಲಿ ಅವನ ಅಲೋಚನೆ ಅಕ್ಯುಲಿನಳಲ್ಲಿ ನೆಲೆಸಿತು. ತಾನು ಅವಳಲ್ಲಿ ಗಾಢ ಪ್ರೇಮ ಹೊಂದಿರುವುದಾಗಿ ಮೊತ್ತ ಮೊದಲ ಸಾರಿಗೆ ಅವನು ಸ್ಪಷ್ಟವಾಗಿ ಅರಿತನು. ಒಬ್ಬ ರೈತ ಹುಡುಗಿಯನ್ನು ಮದುವೆಯಾಗಿ ತನ್ನ ದುಡಿಮೆಯಿಂದ ತಾನು ಜೀವಿಸುವ ರಮ್ಯ ಭಾವನೆಯೂ

---

* ಫಾನ್‌ವಿಸಿನ್ ಎಂಬಾತನ ಎಂಬ ಹಾಸ್ಯ ನಾಟಕದಲ್ಲಿನ ಒಂದು ಪಾತ್ರ : ಅವನೊಬ್ಬ ಮಾದರಿ ಜಮೀನುದಾರ, ಹೆಡ್ಡ, ಅಜ್ಞ

ಅವನ ಮನಸ್ಸಿನಲ್ಲಿ ಹಾದು ಹೋಯಿತು ; ಈ ಸುನಿಶ್ಚಿತ ಕಾರ್ಯವನ್ನು ಕುರಿತು ಆಲೋಚಿಸಿದಷ್ಟೂ ಅದು ಹೆಚ್ಚು ಹೆಚ್ಚು ಸಕಾರಣವಾಗಿ ಕಂಡಿತವನಿಗೆ. ಮಳೆಯ ಹವಾಗುಣದ ದೆಸೆಯಿಂದ, ತೋಪಿನಲ್ಲಿ ನಡೆಯುತ್ತಿದ್ದ ಅವರ ಸಮಾಗಮಗಳು ನಿಂತುಹೋಗಿದ್ದುವು. ಅವನು ಅಕ್ಯುಲಿನಳಿಗೆ ಒಂದು ಪತ್ರ ಬರೆದನು : ಸ್ಪಷ್ಟತೆಯಲ್ಲಿ ಬರವಣಿಗೆ ಆದರ್ಶ ಪ್ರಾಯವಾಗಿದ್ದರೂ ಶೈಲಿಮಾತ್ರ ಆವೇಶಪೂರ್ಣವಾಗಿತ್ತು ; ಪತ್ರದಲ್ಲಿ ಅವನು ತಮ್ಮ ಸುಖಕ್ಕೆ ಒದಗಬಹುದಾದ ವಿಪತ್ತನ್ನು ತಿಳಿಸಿ, ತಾನು ಅವಳ ಕೈಹಿಡಿಯಲು ಸಿದ್ಧನಾಗಿರುವುದಾಗಿ ಬರೆದಿದ್ದನು. ಒಡನೆಯೆ ಅವನು ಆ ಪತ್ರವನ್ನು ಓಕ್‌ಮರದ ಪೊಟ್ಟರೆಯ ಅಂಚೆಕಚೇರಿಗೆ ಕೊಂಡೊಯ್ದನು ; ತಾನು ಮಾಡಿದ್ದರಲ್ಲಿ ತೃಪ್ತಿಗೊಂಡು ಹಾಸಿಗೆಯ ಮೇಲೆ ಮಲಗಿದನು.

ಮಾರನೆಯ ದಿನ ಬೆಳಗ್ಗೆ ಹೊತ್ತಿಗೆ ಮುಂಚೆಯೇ ದೃಢನಿರ್ಧಾರ ಮಾಡಿದ್ದ ಅಲೆಕ್ಸಿ ಮ್ಯುರೊಮ್ಸ್ಕಿಯನ್ನು ಕಂಡು ಅವನೊಡನೆ ಬಿಚ್ಚು ಮನಸ್ಸಿನಿಂದ ಮಾತಾಡಲು ಹೋದನು. ಅವನು ಆತನ ಉದಾರ ಭಾವನೆಯನ್ನು ಜಾಗೃತಗೊಳಿಸಿ, ಅವನನ್ನು ತನ್ನ ಕಡೆಗೆ ಮಾಡಿಕೊಳ್ಳುವ ಆಶೆ ಹೊಂದಿದ್ದನು. ಅವನು ಪ್ರಿಲುಚಿನೋ ಭವನದ ಮುಖಮಂಟಪದ ಮುಂದೆ ತನ್ನ ಕುದುರೆಯನ್ನು ಲಗಾಮು ಹಿಡಿದು ನಿಲ್ಲಿಸಿ, “ಗ್ರಿಗೊರಿ ಇವಾನೊವಿಚ್ ಮನೆಯಲ್ಲಿದಾರೆಯೆ?” ಎಂದು ಕೇಳಿದನು. “ಇಲ್ಲ ಒಡೆಯಾ, ಗ್ರಿಗೊರಿ ಇವನೊವಿಚ್ ಅವರು ಈ ಬೆಳಗ್ಗೆ ಹೊತ್ತಿಗೆ ಮುಂಚೆಯೇ ಮನೆಬಿಟ್ಟು ಹೊರಟರು” ಎಂದು ಸೇವಕನು ಉತ್ತರ ಕೊಟ್ಟನು. “ಒಳ್ಳೆ ಕಿರುಕುಳವಾಯಿತೆ!” ಎಂದು ಅಲೆಕ್ಸಿ ಮನಸ್ಸಿನಲ್ಲೆ ಬೇಸರಗೊಂಡು, “ಹೋಗಲಿ, ಲಿಸವೀಟ ಗ್ರಿಗೊರ್ಯೆವ್ನ ಮನೆಯಲ್ಲಿದಾರೆಯೆ?” ಎಂದು ಕೇಳಿದನು. “ಇದ್ದಾರೆ, ಒಡೆಯಾ” ಎಂದ ಸೇವಕ. ಅಲೆಕ್ಸಿ ಕುದುರೆಯಿಂದ ಹಾರಿ ಇಳಿದು, ಲಗಾಮನ್ನು ಸೇವಕನ ಕೈಗಿತ್ತು, ತನ್ನ ಬರವನ್ನು ಹೇಳಿಸಿಕೊಳ್ಳದೆಯೇ ಒಳಕ್ಕೆ ಪ್ರವೇಶಿಸಿದನು.

ಅವನು ಭೇಟಿಯ ಕೋಣೆಯ ಕಡೆಗೆ ನಡೆದು ಹೋಗುತ್ತ, “ಇನ್ನೇನು, ಎಲ್ಲ ತೀರ್ಮಾನವಾಗಿ ಹೋಗುತ್ತೆ. ಆಕೆಯೊಂದಿಗೆಯೇ ಮಾತಾಡಿಬಿಡುತ್ತೇನೆ” ಎಂದುಕೊಂಡೇ ಹೋದನು. ಅವನು ಕೋಣೆಯನ್ನು ಪ್ರವೇಶಿಸಿದಾಗ, ಅವನಿಗೆ ಸಿಡಿಲೆರಗಿದಂತಾಯಿತು. ಲೀಸ.... ಅಲ್ಲ, ಅಲ್ಲ, ನಚ್ಚಿನ ಆಲಿವ್ ಕಂದುಬಣ್ಣದ ಅಕ್ಯುಲಿನ– ‘ಸರ್ ಫಾನ್’ ತೊಟ್ಟಿಲ್ಲ; ಪ್ರಾತಃಕಾಲಕ್ಕೆ ಒಪ್ಪುವಂತೆ ಶುಭ್ರವಸ್ತ್ರಧಾರಿಣಿಯಾಗಿದ್ದಾಳೆ. ಅವನ ಕಾಗದವನ್ನೋದಿಕೊಳ್ಳುತ್ತಾ ಕಿಟಕಿಯ ಬಳಿ ಕುಳಿತಿದ್ದಾಳೆ ; ಅವನು ಬಂದದ್ದನ್ನೂ ಕೇಳಿಸಿಕೊಳ್ಳದಷ್ಟು ಓದಿನಲ್ಲಿ

ತತ್ಪರಳಾಗಿದ್ದಾಳೆ. ಚಿಮ್ಮಿದ ಹರ್ಷೋದ್ಗಾರವನ್ನು ಅಲೆಕ್ಸಿ ತೆರದುಕೊಳ್ಳಲಾಗಲಿಲ್ಲ. ಲೀಸ ಬೆಚ್ಚಿಬಿದ್ದು, ತನ್ನ ತಲೆ ಎತ್ತಿ, ಕಿರಿಚಿಕೊಂಡು, ಇನ್ನೇನು ಓಡಿ ಹೋಗುವುದರಲ್ಲಿದ್ದಳು. ಅವನು ಅವಳನ್ನು ಬಲಾತ್ಕಾರದಿಂದ ತಡೆದು ನಿಲ್ಲಿಸಲು ಪ್ರಯತ್ನಿಸಿದನು.

"ಅಕ್ಯುಲಿನ, ಅಕ್ಯುಲಿನಾ !"

ಅವಳು ಅವನಿಂದ ಬಿಡಿಸಿಕೊಂಡು ದೂರ ಹೋಗಲು ಪ್ರಯತ್ನಿಸಿದಳು. ಹಾಗೆ ಬಿಡಿಸಿಕೊಳ್ಳಲು ಒದ್ದಾಡುತ್ತ, "ಬಿಡಿ ಬಿಡಿ. ನನ್ನನ್ನು ಬಿಡಿ" ಎಂದು ಒಂದೇ ಸಮನಾಗಿ (ಫ್ರೆಂಚಿನಲ್ಲಿ) ಹೇಳುತ್ತಿದ್ದಳು.

ಅವನು ಪುನಃ ಪುನಃ "ಅಕ್ಯುಲಿನಾ ! ನನ್ನ ಪ್ರಿಯೆ, ಅಕ್ಯುಲಿನಾ !" ಎಂದು ಜಪಿಸುತ್ತಾ ಅವಳ ಕೈಗಳ ಮೇಲೆ ಮುತ್ತಿನ ಮಳೆಗಡೆದನು. ಮಿಸ್ ಜ್ಯಾಕ್ಸನ್ ಈ ದೃಶ್ಯಕ್ಕೆ ಸಾಕ್ಷಿಯಾಗಿದ್ದಳು ; ಅವಳಿಗೆ ಏನೆಂದು ಆಲೋಚನೆ ಮಾಡುವುದಕ್ಕೂ ತೋರಲಿಲ್ಲ. ಆ ಹೊತ್ತಿಗೆ ಸರಿಯಾಗಿ ಬಾಗಿಲು ತೆರೆಯಿತು, ಗ್ರಿಗೊರಿ ಇವಾನೊವಿಚ್ ಪ್ರವೇಶಿಸಿದನು.

"ಓಹೋ ! ಈಗ ಎಲ್ಲವನ್ನೂ ನೀವೇ ಕೈಗೆ ತೆಗೆದುಕೊಂಡಿದ್ದೀರಿ, ಸಂತೋಷ . . . " ಎಂದನು ಅವನು.

ಕಥೆಯ ಅಂತ್ಯವನ್ನು ವರ್ಣಿಸುವ ಅನಾವಶ್ಯಕ ಕಾರ್ಯವನ್ನು ಓದುಗರು ನನಗೆ ಬಿಡಲಾರರು.

ಇಲ್ಲಿಗೆ

ಐ. ಪಿ. ಬೆಲ್ಕಿನ್ ಅವರ ಕಥೆಗಳು

ಸಮಾಪ್ತಿಗೊಂಡುವು.

ರತಿದೇವಿ ಮತ್ತು ಇತರ ಕಥೆಗಳು

೧. ಬೊಲೆಸ್ಲೊ

ಬಿನ್ನಹ

ಇದರಲ್ಲಿನ 'ಬೊಲೆಸೊ' ಎಂಭ ಕಥೆ ರಷ್ಯದ ಪ್ರಸಿದ್ಧ ಸಾಹಿತಿ ಮ್ಯಾಕ್ಸಿಂಗಾರ್ಕಿಯ ಅದೇ ಹೆಸರಿನ ಕಥೆಯ (ಇಂಗ್ಲಿಷ್ ಭಾಷಾಂತರದ) ಭಾಷಾಂತರ ಇನ್ನುಳಿದವು ಸ್ವತಂತ್ರ ಕಥೆಗಳು. ಇವು ಈ ಮೊದಲೆ 'ವಾಣಿ', 'ಕತೆಗಾರ', 'ವಾಕ್‌ಚಿತ್ರ', 'ಮಯೂರ' ಗ್ರಂಥಮಾಲೆ, 'ಗಾರ್ಕಿ' ಸ್ಮಾರಕ ಗ್ರಂಥ– ಈ ಪತ್ರಿಕೆ ಪ್ರಕಟನೆಗಳಲ್ಲಿ ಪ್ರಕಟವಾಗಿವೆ–ಇವುಗಳ ಸಂಪಾದಕರಿಗೆ ನಾನು ಕೃತಜ್ಞನಾಗಿದ್ದೇನೆ.

ಕಥೆಗಳ ಬಗ್ಗೆ ಏನೂ ಹೇಳಬಯಸುವುದಿಲ್ಲ : ವಾಚಕರ ಮುಂದಿಟ್ಟಿದ್ದೇನೆ ; ಅವರು ಓದಿ ನಲಿದರೆ, ಕಥೆ ಬರೆದದ್ದು ಸಾರ್ಥಕ ಎಂದು ನಾನೂ ನಲಿಯುತ್ತೇನೆ.

ಇದರ ಪ್ರಕಾಶನ ಕಾರ್ಯದಲ್ಲಿ ನೆರವಾದ ಸತ್ಯಶೋಧನ ಪ್ರಕಟನ ಮಂದಿರದ ಒಡೆಯರಿಗೂ ಅಚ್ಚುಮಾಡಿಕೊಟ್ಟ ಸುಬೋಧ ಮುದ್ರಣಾಲಯದವರಿಗೂ ವಂದನೆಗಳು.

ಬೆಂಗಳೂರು
೮–೮–೧೯೪೫ ಎಂ.ವಿ. ಸೀತಾರಾಮಯ್ಯ

ಬೊಲೆಸ್ಲೊ
(ರತಿದೇವಿ ಮತ್ತು ಇತರ ಕಥೆಗಳು)

ಒಂದು ದಿನ ನನ್ನ ಗೆಳೆಯನೊಬ್ಬ ನನಗೆ ಹೇಳಿದ್ದು ಇದು: ನಾನು ಮಾಸ್ಕೋದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಒಂದು ಸಣ್ಣ ಮನೆಯಲ್ಲಿ ವಾಸಮಾಡಿಕೊಂಡಿದ್ದೆ ; ಅಲ್ಲಿ ನನ್ನ ನೆರೆಯವಳು ಒಬ್ಬಳು ವಿಚಿತ್ರ ಹೆಣ್ಣು ಮಗಳು. ಅವಳು ಪೋಲಿಷರವಳು; ಹೆಸರು ಟೆರಿಸ. ಎತ್ತರವಾಗಿ, ಬಲವಾಗಿದ್ದಳು; ಬಣ್ಣ ಕಂಡು; ಕೊಡಲಿಯಿಂದ ಕೆತ್ತಿ ಮಾಡಿದವೋ ಎಂಬಂತೆದ್ದವು. ಅವಳ ದಪ್ಪನೆಯ ತುರುಗು ಹುಬ್ಬುಗಳು, ಒರಟು ಮುಖ ಲಕ್ಷಣಗಳು. ಅವಳ ಕಣ್ಣುಗಳು ಮಂಕಾಗಿದ್ದುವು, ದನಿ ಜೋರಾಗಿತ್ತು, ನಡೆ ನುಡಿ ಮುಷ್ಟಿಕಾಳಿಗದಲ್ಲಿ ಹಣಕ್ಕಾಗಿಹೋರಾಡುವ ಹೋರಾಳುವಿನ ನಡೆನುಡಿಯನ್ನು ನೆನಪಿಗೆ ತರುತ್ತಿದ್ದುವು. ಅವಳ ಕಾಯ ಸ್ಥೂಲವಾಗಿಯೂ ಬಲಿಷ್ಠವಾಗಿಯೂ ಇದ್ದು, ಅವಳ ಒಟ್ಟು ಸ್ವರೂಪ ಭಯ ಹುಟ್ಟಿಸುವಷ್ಟು ವಿಕಾರವಾಗಿತ್ತು. ಕಡೆಯಪ್ಪರಿಗೆಯಲ್ಲಿ ನಮ್ಮ ಕೋಣೆಗಳು ಎದುರುಬದುರಾಗಿದ್ದುವು. ಅವಳು ಮನೆಯಲ್ಲಿರುವುದಾಗಿ ನನಗೆ ತಿಳಿದಿದ್ದರೆ ನಾನು ನನ್ನ ಕೋಣೆಯ ಬಾಗಿಲನ್ನೇ ತೆರೆಯುತ್ತಿರಲಿಲ್ಲ. ಕೆಲವು ವೇಳೆ ಮಹಡಿ ಮೆಟ್ಟಲುಗಳ ಮೇಲೋ ಇಲ್ಲವೆ ಅಂಗಳದಲ್ಲೋ ಅವಳನ್ನು ಸಂಧಿಸುತ್ತಿದ್ದೆ; ಅಂದು ಅವಳು ನನ್ನನ್ನು ನೋಡಿ ವ್ಯಂಗ್ಯವಾಗಿ ನಗುತ್ತಿದ್ದಳು. ಅನೇಕ ವೇಳೆ ಅವಳು ಮನೆಗೆ ಹಿಂದಿರುಗಿ ಬರುತ್ತಿದ್ದಾಗ ಅವಳನ್ನು ಸಂಧಿಸುತ್ತಿದ್ದೆ; ಆಗ ಅವಳ ಕಣ್ಣುಗಳು ಕೆಂಪಗಿರುತ್ತಿದ್ದವು, ತಲೆಗೂದಲು ಕೆದರಿರುತ್ತಿತ್ತು. ಅಂಥ ಸಮಯಗಳಲ್ಲಿ ಅವಳು ನನ್ನನ್ನು ಲಜ್ಜೆಯಿಲ್ಲದೆ, ಮರ್ಯಾದೆಯಿಲ್ಲದೆ, ದಿಟ್ಟಿಸಿ ನೋಡುತ್ತಿದ್ದಳು. ತರುವಾಯ ಹೀಗೆ ಸಂಬೋಧಿಸುತ್ತಿದ್ದಳು; "ಓಹೋ, ವಿದ್ಯಾರ್ಥಿಗಳೇ!".

ಅವಳ ಪೆದ್ದುನಗೆ ಅಸಹ್ಯಕರವಾಗಿತ್ತು. ನನ್ನ ಕೋಣೆ ಬೇಕಾದರೂ ಬದಲಾಯಿಸಲು ಸಿದ್ಧನಾಗಿದ್ದೆ-ಅವಳಿಗೆ ಕಾಣಿಸಿಕೊಳ್ಳದೆ ಇರುವುದಕ್ಕಾಗಿ. ಆದರೆ, ಸ್ಥಳ ಬಹು ಸೊಗಸಾಗಿತ್ತು. ನಗರದ ನೋಟಕ್ಕೆ ಯಾವ ಅಡಚಣೆಯೂ ಇರಲಿಲ್ಲ; ಬೀದಿ ಶಾಂತವಾಗಿತ್ತು ; ಆದ್ದರಿಂದ ಅಲ್ಲಿಯೇ ಉಳಿದಿದ್ದೆ.

ಒಂದು ದಿನ ಬೆಳಗ್ಗೆ, ಉಡುಪು ಹಾಕಿಕೊಂಡು ಹಾಸಿಗೆಯ ಮೇಲೆ

ಬಿದ್ದುಕೊಂಡಿದ್ದಾಗ, ಇದ್ದಕ್ಕಿದ್ದ ಹಾಗೆ ಬಾಗಿಲು ತೆರೆಯಿತು; ಹೊಸಿಲ ಮೇಲೆ ಟೆರಿಸ ಕಾಣಿಸಿಕೊಂಡಳು.

"ಏನು, ವಿದ್ಯಾರ್ಥಿಗಳೇ!" ಎಂದು ಸಂಬೋಧಿಸಿದಳು ಅವಳು ತನ್ನ ಹೆದ್ದನಿಯಲ್ಲಿ.

"ನಿನಗೇನು ಬೇಕಮ್ಮ ?" – ನಾನು ಕೇಳಿದೆ.

ಅವಳನ್ನು ನೋಡಿದೆ: ಕಲಕಗೊಂಡ ಲಜ್ಜಾ ಭಾವದ ಮುದ್ರೆಯನ್ನು ತಳೆದಿತ್ತು ಅವಳ ಮುಖ ; ಆ ಭಾವವನ್ನು ನಾನು ಹಿಂದೆಂದೂ ಕಂಡಿರಲಿಲ್ಲ ಅವಳ ಮುಖದಲ್ಲಿ.

"ನಿಮ್ಮಿಂದ ಒಂದು ಉಪಕಾರ ಆಗಬೇಕೆಂದು ಕೇಳಬೇಕೆಂದಿದ್ದೇನೆ, ದಯವಿಟ್ಟು ಇಲ್ಲವೆನ್ನ ಬೇಡಿ !"

"ಇದೊಂದು ನೆಪ" ಎಂದು ನನ್ನಷ್ಟಕ್ಕೆ ನಾನೇ ಅಂದುಕೊಂಡೆ, ಹಾಗೆಯ ಮೇಲೆ ಮಲಗಿ. ಆದರೆ ಬಾಯಿ ಬಿಡಲಿಲ್ಲ.

"ಮನೆಗೊಂದು ಕಾಗದ ಬರೆಯಬೇಕಾಗಿದೆ" ಎಂದು ಮುಂದು ವರಿಸಿದಳವಳು.

"ಅವಳ ಮನಸ್ಸಿನಲ್ಲಿ ಏನಿರಬಹುದೋ ?" ಎಂದು ಯೋಚಿಸಿದೆ ನಾನು. ಹಾಸಿಗೆಯಿಂದ ನೆಗೆದೆದ್ದೆ, ಮೇಜಿನ ಮುಂದೆ ಕುಳಿತುಕೊಂಡೆ, ಕಾಗದ ಮಸಿ ಹವಣಿಸಿಕೊಂಡೆ, "ಒಳಕ್ಕೆ ಬಾರಮ್ಮಾ ; ಕುಳಿತುಕೊ ; ಬೇಕಾದ್ದನ್ನು ಹೇಳು, ಬರೆದುಕೊಡುತ್ತೇನೆ" ಎಂದೆ.

ಅವಳು ಒಳಕ್ಕೆ ಬಂದು, ಎಚ್ಚರಿಕೆಯಿಂದ ಕುಳಿತುಕೊಂಡಳು; ನನ್ನ ಕಣ್ಣುಗಳ ಕಡೆ ಸೂಕ್ಷ್ಮ ದೃಷ್ಟಿಯಿಂದ ನೋಡಿದಳು.

"ಒಳ್ಳೆಯದು, ಕಾಗದ ಯಾರಿಗೆ ಬರೆಯಲಿ ?" ಎಂದು ಕೇಳಿದೆ,

"ವಾರ್ಸಾ (Warsaw) ರೈಲು ರಸ್ತೆಯ ಮೇಲೆ ಸ್ವೆನ್ಸಿಯಾನಿ (Swenziani) ಇದೆಯಲ್ಲ, ಅಲ್ಲಿ ವಾಸಮಾಡುತ್ತಾರಲ್ಲ ಬೊಲೆಸ್ಲೊ ಕಾಷ್‌ವು (Boleslov Kaschput), ಅವರಿಗೆ"

"ಅವರಿಗೆ ಏನು ಬರೆಯಲಿ? ಹೇಳು."

"ನನ್ನ ಪ್ರಿಯ ಬೊಲೆಸ್–ನನ್ನ ಪ್ರಿಯತಮಾ–ನನ್ನ ಪ್ರೇಮವೇ–ನನ್ನ ಪ್ರಾಣಪದಕವೇ–ಮೇರಿ ಮಹಾತಾಯಿ ನಿನ್ನನ್ನು ಕಾಪಾಡಲಿ ! ನನ್ನ ಪ್ರಿಯನೇ, ಇಷ್ಟು ದೀರ್ಘಕಾಲವಾದರೂ ನಿನ್ನ ಮುದ್ದು ಪಾರಿವಾಳಕ್ಕೆ, ಇಷ್ಟೊಂದು ವ್ಯಸನ ಪಡುತ್ತಿರುವ ನಿನ್ನ ಟೆರಿಸಾಗೆ, ಏಕೆ ಇನ್ನೂ ಬರೆದಿಲ್ಲ?"

ಅವಳ್ನು ನೋಡಿ ನಗದೆ ಇರಲಾಗಲಿಲ್ಲ. "ವ್ಯಸನಪಡುತ್ತಿರುವ ಚಿಕ್ಕ ಪಾರಿವಾಳ!"–ಸುಮಾರು ಆರು ಅಡಿ ಎತ್ತರದ, ಗಟ್ಟಿಮುಟ್ಟಾದ ಮೈ ಕಟ್ಟನ್ನೂ ವ್ಯಾಯಾಮಪಟುವಿನ ಮುಷ್ಟಿಗಳನ್ನೂ ಹೊಂದಿದ್ದ 'ಪಾರಿವಾಳ'–ತನ್ನ ಬದುಕಿನಲ್ಲಿ ಸದಾಕಾಲವೂ ಹೊಗೆಕೊಳವೆ (Chimney) ಗಳೊಳಕ್ಕೆ ನುಗ್ಗಿ ಅವನ್ನು ಝೂಡಿಸುವುದಲ್ಲದೆ ಬೇರೆ ಇನ್ನೇನೂ ಕೆಲಸ ಕಾಣದೋ ಎಂಬಂತೆ ಕಪ್ಪಗಿದ್ದ ಮುಖವುಳ್ಳ ಈ ಚಿಕ್ಕ ಪಾರಿವಾಳವನ್ನು ನೆನೆದರೆ ನಗು ಬರದೆ ಇನ್ನೇನು !

ಆದರೆ, ಗಂಭೀರ ಮುಖ ಭಾವದಿಂದಲೇ ಕೇಳಿದೆ: "ಈ ಬೊಲೆಸ್ಲೊ ಯಾರು ?"

"ಬೊಲೆಸ್ಸೆ, ಅಣ್ಣಾ ?" ಎಂದು ಆಶ್ಚರ್ಯಭಾವದಿಂದ ಕೇಳಿದಳು : ಬೊಲೆಸ್ಲೊ ಯಾರಿಗೂ ಗೊತ್ತಿಲ್ಲ ಎಂದರೆ ನಂಬಲಾಗದ ಮಾತು ಎನ್ನುವಂತೆ. "ಬೊಲೆಸ್, ನನ್ನನ್ನು ಮದುವೆಯಾಗಲು ಮಾತುಕೊಟ್ಟಿರುವ ನನ್ನ ಪ್ರಿಯ---"

"ಮದುವೆಯಾಗಲು ಮಾತುಕೊಟ್ಟಿರುವವನೆ ?"

'ಯಾತಕ್ಕಪ್ಪ, ಇಷ್ಟೊಂದು ಆಶ್ಚರ್ಯಪಡುತ್ತೀರಿ ? ನನ್ನಂಥ ಎಳೆಯ ಹುಡುಗಿಗೆ ನಲ್ಲನಿರಕೂಡದೆ ?"

"ಎಳೆಯ ಹುಡುಗಿ !"–ಎಂಥ ವಿನೋದ! ನಾನು ಹೇಳಿದೆ : "ಎಲ್ಲವು ಸಾಧ್ಯವಿರಬಹುದು. ಮದುವೆಯ ನಿಶ್ಚಿತಾರ್ಥವಾಗಿ ಎಷ್ಟು ಕಾಲವಾಯಿತು ?"

"ಹತ್ತು ವರ್ಷ".

ಅಂತೂ ಕೊನೆಗೊಂದು ಕಾಗದ ಬರೆದುಕೊಟ್ಟೆ ಅವಳಿಗೆ : ಅದು ಎಷ್ಟು ಪ್ರೇಮಪೂರ್ಣವಾಗಿ, ಮರುಕಹುಟ್ಟಿಸುವುದಾಗಿತ್ತೆಂದರೆ, ಟೆರಿಸ ಅಲ್ಲದೆ ಬೇರೆ ಇನ್ನಾವಳಿಂದ ಆ ಪ್ರೇಮ ಸಂದೇಶ ಬರುವುದಾಗಿದ್ದರೂ ಬೊಲೆಸ್ಲೋವಿನ ಸ್ಥಾನದಲ್ಲಿರಬಯಸುತ್ತಿದ್ದೆ ನಾನು : ಅಷ್ಟು ಪ್ರೇಮಸೂಸುವ, ಎದೆ ಕರಗಿಸುವ ಪತ್ರವಾಗಿತ್ತು ನಾನು ಬರೆದುಕೊಟ್ಟದ್ದು.

ಟೆರಿಸ ಹೇಳಿದಳು : "ನಿಮಗೆ ಮನಸಾರ ವಂದನೆಗಳು. ನಿಮಗೆ ಏನಾದರೂ ಪ್ರತ್ಯುಪಕಾರ ಮಾಡುವುದಿದೆಯೆ ?" ಬಹಳ ಉದ್ವೇಗಗೊಂಡವಳಂತೆ ಕಾಣುತ್ತಿದ್ದಳು ಅವಳು.

"ಏನೂ ಇಲ್ಲ, ಪರವಾಯಿಲ್ಲ"

"ನಿಮ್ಮ ಷರಟುಗಳನ್ನೂ ಬಟ್ಟೆಬರೆಗಳನ್ನೂ ಹರಿದಿದ್ದರೆ ಹೊಲಿದು ಸರಿಮಾಡಿಕೊಡಬಲ್ಲೆ." ಈ ಮಾತು ನನ್ನನ್ನು ತುಸ ಬೇಸರಪಡಿಸಿತು. ನನಗೆ ಖಂಡಿತವಾಗಿಯೂ ಅವಳಿಂದ ಯಾವ ಬಗೆಯ ಪ್ರತಿಫಲವೂ ಬೇಕಿಲ್ಲವೆಂದು

ಅವಳಿಗೆ ಸಂಕ್ಷೇಪವಾಗಿ ಒತ್ತಿ ಹೇಳಿದೆ. ಅವಳು ಹೊರಟು ಹೋದಳು.

ಎರಡು ವಾರಗಳು ಕಳೆದುವು. ಒಂದು ದಿನ ಸಂಜೆ, ಬೇಸರ ಕಳೆಯುವುದಕ್ಕಾಗಿ ಏನು ಮಾಡುವುದೆಂದು ಯೋಚಿಸುತ್ತ, ಶೀಟಿ ಹಾಕುತ್ತ ಕಿಟಕಿಯ ಬಳಿ ಕುಳಿತಿದ್ದೆ. ಹೊರಗಡೆ ಹವಾ ಅಧ್ವಾನವಾಗಿತ್ತು ; ಹೊರಕ್ಕೆ ಹೊರಡಲು ಇಷ್ಟವಿರಲಿಲ್ಲ. ತಟ್ಟನೆ ಬಾಗಿಲು ತೆರೆಯಿತು.

"ಅಯ್ಯೋ ದೇವರೆ ! ಯಾರೋ ಬರುತ್ತಿರುವ ಹಾಗಿದೆಯೆ !, ಎಂದುಕೊಂಡೆ.

"ನಿಮಗೆ ಈಗ ತುಂಬ ಕೆಲಸವೆಂದು ಕಾಣುತ್ತೆ?" ಬಂದವಳು ಟೆರಿಸ. ಇವಳಲ್ಲದೆ ಬೇರೆ ಯಾಗು ಬಂದಿದ್ದರೂ ಪರವಾಯಿರಲಿಲ್ಲ.

"ಏನೂ ಇಲ್ಲ. ಯಾಕೆ ?"

"ನನಗೆ ಇನ್ನೊಂದು ಕಾಗದ ಬರೆದುಕೊಡುತ್ತೀರ ?"

"ಆಗಬಹುದು. ಬೊಲೆಸ್ಸಿಗೊ ?"

"ಅಲ್ಲ. ನನಗೆ"

"ನಿನಗೆ !"

"ಹೌದು. ನನಗೆ, ಅವನ ಉತ್ತರ ....."

"ಏನು !"

"ದಯವಿಟ್ಟು ಕ್ಷಮಿಸಿ ; ನಾನು ತಿಳಿಗೇಡಿ, ನಾನು ನಿಮಗೆ ತಿಳಿಯುವ ಹಾಗೆ ಮಾತಾಡಲಿಲ್ಲ. ಕಾಗದ ನನಗಲ್ಲ; ನನ್ನ ಸ್ನೇಹಿತರ ಪೈಕಿ ಒಬ್ಬರಿಗೆ– ಅಂದರೆ, ಅಂಥ ಸ್ನೇಹಿತರೇನಲ್ಲ, ಒಬ್ಬರು ಪರಿಚಯಸ್ಥರು. ಆತನಿಗೆ ಬರೆಯುವುದಕ್ಕೆ ಬರುವುದಿಲ್ಲ–ನನ್ನ ಹಾಗೆ ಒಬ್ಬಾಕೆಗೆ ಮದುವೆಯ ವಾಗ್ದಾನ ಮಾಡಿದ್ದಾನೆ—"

ನಾನು ಒಮ್ಮೆ ಅವಳ ಕಡೆ ನೋಡಿದೆ. ಅವಳು ನಾಚಿಕೆಗೊಂಡವಳಂತೆ ಕಾಣುತ್ತಿದ್ದಳು ; ಅವಳ ಕೈಗಳು ನಡುಗುತ್ತಿದ್ದುವು ; ಅವಳು ಕಕ್ಕಾ ಬಿಕ್ಕಿಯಾಗಿದ್ದಳು. ಅವಳ ವಿಚಾರ ನನಗೆ ಗೊತ್ತಾದಂತೆ ಬಗೆದೆ.

ಅವಳಿಗೆ ಎಚ್ಚರಿಕೆ ಕೊಟ್ಟೆ : "ಇಲ್ಲಿ ಕೇಳು. ನಿನ್ನ ವಿಚಾರ, ನಿನ್ನ ಬೊಲೆಸ್ಲೊ ವಿಚಾರ–ಮುಂತಾಗಿ ನೀನು ನನ್ನೊಡನೆ ಹೇಳುತ್ತಿರುವುದೆಲ್ಲ ಶುದ್ಧಾಂಗವಾಗಿ ನಿನ್ನ ಸೃಷ್ಟನೆ ; ನೀನು ನನಗೆ ಸುಳ್ಳು ಹೇಳುತ್ತಿದ್ದೀಯೆ. ನೀನು ಇಲ್ಲಿಗೆ ಬರುವುದಕ್ಕೆ ಅದೆಲ್ಲಾ ಒಂದು ನೆಪ. ಇನ್ನು ಮೇಲೆ ನಿನ್ನ ಮುಖ ಕೂಡ ನೋಡಲು ಇಷ್ಟವಿಲ್ಲ ನನಗೆ, ತಿಳಿಯಿತೋ ?"

ಅವಳು ಬೆದರಿದಂತೆ ಕಂಡುಬಂತು. ಅವಳ ಮುಖ ಕೆಂಪೇರಿತು ;

ಏನನ್ನೋ ಹೇಳಬೇಕೆಂದು ಬಹುಕಷ್ಟದಿಂದ ಪ್ರಯತ್ನಪಡುತ್ತಿದ್ದಳೂ. ಅವಳ ವಿಷಯವಾಗಿ ತಪ್ಪು ತಿಳಿದಿದ್ದೇನೆಂದು ತೋರತೊಡಗಿತು ನನಗೆ. ಅಂತೂ, ಒಳ್ಳೆಯ ನಡತೆಯ ದಾರಿಯಿಂದ ಕೆಟ್ಟ ದಾರಿಗೆ ನನ್ನನ್ನು ಎಳೆಯುವ ದುರ್ಭಾವನೆಯಿಂದ ಅವಳು ಬಂದಿರಲಿಲ್ಲ. ಆದರೆ, ಅವಳು ಹೀಗೆ ಬರುತ್ತಿದ್ದುದರಲ್ಲಿ ಏನೋ ಉದ್ದೇಶವಿತ್ತು. ಅದು ಏನೊ ?

"ವಿದ್ಯಾರ್ಥಿಗಳೇ–" ಎಂದು ಮೊದಲುಮಾಡಿದಳು ; ಆದರೆ, ಇದ್ದಕ್ಕಿದ್ದ ಹಾಗೆಯೇ ಮುಖ ತಿರುಗಿಸಿ, ಕೋಣೆಯಿಂದ ಹಿಂದಿರುಗಿ ಹೊರಟು ಹೋದಳು.

ನನ್ನ ಹೃದಯದಲ್ಲಿ ಏನೋ ತಳಮಳವಾದಂತಾಯಿತು. ಅವಳು ತನ್ನ ಕೋಣೆಯ ಬಾಗಿಲನ್ನು ಧಡಾರನೆ ಹಾಕಿಕೊಂಡದ್ದು ನನಗೆ ಕೇಳಬಂತು. ಅವಳು ಕೋಪಗೊಂಡಿದ್ದಳು. ಒಂದು ಕ್ಷಣ ಹಾಗೆಯೇ ಯೋಚಿಸಿ, ಅವಳನ್ನು ಹಿಂದಕ್ಕೆ ಕರೆಯುವುದೆಂದು ತೀರ್ಮಾನಿಸಿದೆ. ಅವಳಿಗೆ ಕಾಗದ ಬರೆದು ಕೊಡೋಣವೆನ್ನಿಸಿತು. ಅವಳಿಗಾಗಿ ವ್ಯಥೆಯುಂಟಾಯಿತು.

ಅವಳ ಕೋಣೆಗೆ ಹೋದೆ. ಅವಳು ಕೈಗಳಿಂದ ಮುಖ ಮುಚ್ಚಿಕೊಂಡು ಕುಳಿತಿದ್ದಳು.

"ಅಯ್ಯೋ, ಹುಡುಗೀ! ನೀನು–" ಎಂದು ಅವಳನ್ನು ಸಂತೈಸಹೋದೆ.

ಕಥೆಯಲ್ಲಿ ಈ ಭಾಗಕ್ಕೆ ಬಂದಾಗ ನನ್ನ ಮನಸ್ಸು ಕರಗಿಹೋಗುತ್ತದೆ. ಅವಳು ತಟ್ಟನೆ ಎದ್ದು, ನೆಟ್ಟಗೆ ನನ್ನ ಬಳಿಗೆ ಬಂದಳು; ಕಣ್ಣುಗಳು ಹೊಳೆಯುತ್ತಿದ್ದುವು; ನನ್ನ ಹೆಗಲ ಮೇಲೆ ತನ್ನ ತೋಳುಹಾಕಿ, ಎದೆ ಬಿರಿಯುವಂತೆ ಅಳತೊಡಗಿದಳು.

"ಈ–ಕೆಲವು–ಕೆಲವು ಪಂಕ್ತಿಗಳನ್ನು–ಬರೆದುಕೊಡಲು–ನಿಮಗೆಕೊಡಲು–ನಿಮಗೆ ನಿಮಗೆ–ಏನು ತೊಂದರೆ ? ಯಾರಿಗೆ–ಆದರೆ–ನಿಮಗೇನು–ಬಾಧಕ ? ಮೊದಲು–ಮೊದಲು ಅಷ್ಟು–ಅಷ್ಟು ಒಳ್ಳೆಯವರಾಗಿ ಕಂಡಿರಿ ! ಹೌದ–ಬೊಲೆಸ್ಲೊ ಯಾರೂ ಇಲ್ಲ–ಟೆರಿಸ–ಟೆರಿಸಾನೂ ಇಲ್ಲ. ಇರುವವಳು ನಾನು ಮಾತ್ರ–ನಾನೇ–ನಾನೊಬ್ಬಳೇ !"

ಅವಳ ಮಾತುಗಳನ್ನು ಕೇಳಿ ಕ್ಷಣಕಾಲ ದಂಗುಬಡಿದುಹೋದೆ ಅಚ್ಚರಿಯಿಂದ. "ಏನು ! ಬೊಲೆಸ್–ಬೊಲೆಸ್ಲೊ ಎಂಬಾತ ಇಲ್ಲವೇ ಇಲ್ಲವೆ ?" ಎಂದೆ.

"ಇಲ್ಲ".

"ಟೆರಿಸಾನೂ ಇಲ್ಲವೆ ?"

"ಇಲ್ಲ–ಅಂದರೆ–ಆದರೆ–ನಾನೇ ಟೆರಿಸ".

ನನ್ನ ತಲೆ ಗಿರ್ರನೆ ತಿರುಗತೊಡಗಿತು. ಬೆರಗು ನೋಟದಿಂದ ಅವಳ ಕಡೆ ನೋಡಿದೆ. ನಮ್ಮಿಬ್ಬರಲ್ಲಿ ಯಾರದೋ ಒಬ್ಬರ ತಲೆ ಕೆಟ್ಟಿರಬೇಕು ; ಅದು ಖಂಡಿತ. ಅವಳು ಮೇಜನ ಬಳಿ ಹೋಗಿ, ಸೆಳೆಖಾನೆಯಲ್ಲಿ ತಡಕಾಡಿ, ಒಂದು ಚೂರು ಕಾಗದ ತಂದಳು.

"ಇದೋ ನೋಡಿ, ನೀವು ಬರೆದುಕೊಟ್ಟ ಕಾಗದ ; ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ. ಇನ್ನೊಂದು ಕಾಗದ ಬರೆದುಕೊಡಲು ನಿಮಗೆ ಇಷ್ಟವಿಲ್ಲ. ನಿಮಗಿಂತ ಹೆಚ್ಚು ಕರುಣೆಯುಳ್ಳವರು ಯಾರನ್ನಾದರೂ ಕೇಳಿ ಕೊಂಡರೆ ಬರೆದುಕೊಟ್ಟಾರು".

ಅವಳ ಬೊಲೆಸ್ಲೋವಿಗೆ ಅವಳಿಗಾಗಿ ನಾನು ಬರೆದುಕೊಟ್ಟಿದ್ದ ಕಾಗದವನ್ನು ಅವಳು ಕೈಲಿ ಹಿಡಿದಿದ್ದಳು. ಇದರ ಅರ್ಥವೇನೋ ದೇವರೇ ಬಲ್ಲ ಎಂದುಕೊಂಡೆ.

"ಟೆರಿಸಾ, ಇಲ್ಲಿ ಕೇಳು. ಇದು ಏನು? ಇದನ್ನು ನೀನು ಅಂಚೆಗೆ ಹಾಕದೆ ಇರುವಾಗ, ಬೇರೆಯವರೇಕೆ ನಿನಗಾಗಿ ಕಾಗದಗಳನ್ನು ಬರೆದು ಕೊಡಬೇಕು?"

"ಇದನ್ನು ಯಾರಿಗೆ ಅಂಚೆಗೆ ಹಾಕಲಿ ?"

"ಯಾರಿಗೆ ಅಂದರೆ ! ಬೊಲೆಸೋವಿಗೆ–ನಿನ್ನನ್ನು ಮದುವೆಯಾಗುತ್ತೇನೆಂದು ಹೇಳಿರುವವನಿಗೆ!"

"ಆದರೆ–ಅಂಥವನೊಬ್ಬನು ಯಾರೂ ಇಲ್ಲ".

ನನಗೆ ಏನು ಹೇಳುವುದಕ್ಕೂ ತೋರಲಿಲ್ಲ, ಸುಮ್ಮನಾದೆ. ಹೊರಟು ಹೋಗುವುದಲ್ಲದೆ ಬೇರೆ ಮಾರ್ಗವೇ ಇರಲಿಲ್ಲ. ಆದರೆ ಅವಳು ಮತ್ತೆ ಮಾತನಾಡಲು ಮೊದಲು ಮಾಡಿದಳೂ :

"ಇಲ್ಲ ; ಅವನು – ಇಲ್ಲ ; ಬೊಲೆಸ್ಲೊ ಇಲ್ಲ" ಎಂದು ಒಂದು ಬಗೆಯ ಕೈಗಳ ಚೇಷ್ಟೆಯೊಡನೆ ಹೇಳಿದಳು ; ಹೇಳಬೇಕೆಂದಿದ್ದುದನ್ನು ವಿವರಿಸುವುದು ಅಸಾಧ್ಯವೆಂಬುದು ಅದರಿಂದ ವ್ಯಕ್ತವಾಗುತ್ತಿತ್ತು.

ಅವಳು ಮುಂದುವರಿಸಿದಳು : "ಆದರೆ, ಅವನು ಬದುಕಿದ್ದಿರ ಬೇಕೆಂದು ನನ್ನ ಆಸೆ, ನಾನು ಇತರರಂತಲ್ಲ, ನನಗೆ ಗೊತ್ತು–ನಾನು ಎಂಥವಳೆಂಬುದು ನನಗೆ ಗೊತ್ತು. – ಆದರೆ, ನಾನು ಅವನಿಗೆ ಬರೆಯುವುದರಿಂದ ಯಾರಿಗೂ ತೊಂದರೆಯಾಗುವುದಿಲ್ಲ".

"ಹಾಗೆಂದರೆ ? ಯಾರಿಗೆ ?"

"ಯಾರಿಗೆ! ಮತ್ತೆ ಯಾರಿಗೆ, ಬೊಲೆಸ್ಲೋಗೆ !"

"ಆದರೆ ಈಗ ತಾನೆ ನೀನು ಹೇಳಿದೆ, ಅಂಥ ವ್ಯಕ್ತಿ ಯಾರೂ ಇಲ್ಲ

ಎಂದು !" ಎಂದು ನಾನೆಂದೆ, ಮೊದಲಿನಂತೆಯೇ ಕಕ್ಕಾಬಿಕ್ಕಿಯಾಗಿ.

"ಅಯ್ಯೋ, ದೇವರೇ ! ಇಲ್ಲದೆಹೋದರೆ ಅದರಿಂದ ನನಗೇನು ! ಯಾರೂ ಇಲ್ಲ, ನಿಜ ; ಆದರೆ, ಬೊಲೆಸ್ಲೋ ಇದ್ದಾನೆಂದು ನನ್ನ ಕಲ್ಪನೆ. ಅವನು ವಾಸ್ತವವಾಗಿ ಬದುಕಿದ್ದಿದ್ದರೆ ಹೇಗೋಹಾಗೆ ಆತನಿಗೆ ಬರೆಯುತ್ತೇನೆ ; ಆತ ನನಗೆ ಉತ್ತರ ಕೊಡುತ್ತಾನೆ ; ನಾನು ಮತ್ತೆ ಬರೆಯುತ್ತೇನೆ, ಮತ್ತೆ ಆತ ಮಾರುತ್ತರ ಕೊಡುತ್ತಾನೆ–".

ಕಟ್ಟ ಕಡೆಗೆ ನನಗೆ ಅರ್ಥವಾಯಿತು.

ದೇಹದ ನೋವಿನಿಂದ ಹೇಗೊ ಹಾಗೆ ಧಕ್ಕೆ ತಗುಲಿದಂತಾಗಿ, ಏನೋ ಅಪರಾಧವೆಸಗಿದಂತೆ ಭಾವನೆಯಾಯಿತು, ನಾಚಿಕೆಯಾಯಿತು. ನನ್ನ ಬಳಿಯಲ್ಲಿ, ತೋಳು ಚಾಚಿನಷ್ಟು ಹತ್ತಿರದಲ್ಲಿ, ಇದ್ದ ಈ ಮಾನವ ಪ್ರಾಣಿಗೆ ಪ್ರೀತಿಯ ಲವಲೇಶವನ್ನು ತೋರುವವರೊಬ್ಬರಿರಲಿಲ್ಲ ಪ್ರಪಂಚದಲ್ಲಿ ; ತಂದೆ ತಾಯಿಯಿಲ್ಲ; ಕೆಳೆಯರಿಲ್ಲ, ಯಾರೂ ಇಲ್ಲ ! ಈ ಬಡಪ್ರಾಣಿ ತನಗಾಗಿ ಒಬ್ಬ ಇನಿಯನನ್ನು, ಮದುಮಗನನ್ನು, ಸೃಷ್ಟಿಸಿಕೊಂಡಿತ್ತು !

ಅವಳು ತನ್ನ ಬೇಸರ ಹಿಡಿಸುವ ಗೊರಗು ದನಿಯಲ್ಲಿ ಮುಂದುವರಿಸಿದಳು: "ಈ ಕಾಗದವನ್ನು ನೀವು ನನಗಾಗಿ ಬೊಲೆಸ್ಲೋಗೆ ಬರೆದಿರಿ–ಅದನ್ನು ನನಗೆ ಗಟ್ಟಿಯಾಗಿ ಓದಿ ಹೇಳುವಂತೆ ಬೇರೊಬ್ಬರನ್ನು ಕೇಳಿಕೊಂಡೆ. ಕಾಗದ ಕೇಳಿ, ಬೊಲೆಸ್ಲೊ ಬದುಕಿದ್ದಾನೆಂದು ಬಗೆದೆ, ಆಮೇಲೆ, ಬೊಲೆಸ್ಲೋವಿನಿಂದ ಟೆರಿಸ್ಸಾಗೆ–ಅಂದರೆ ನನಗೆ–ಉತ್ತರ ಬೇಕೆಂದು ಕೋರಿದೆ. ಬೊಲೆಸ್ಲೊ ಎಲ್ಲಿಯೋ ಬದುಕಿರಬೇಕೆಂದು ನನಗೆ ಖಂಡಿತವಾಗಿ ಅನಿಸಹತ್ತಿದೆ ; ಎಲ್ಲೋ ನಾನರಿಯೆ–ಹೀಗೆ, ನನಗೆ ಜೀವದಿಂದಿರಲು ಸಾಧ್ಯವಾಗಿದೆ. ಅಷ್ಟೊಂದು ಕಷ್ಟವಾಗಿಲ್ಲ, ಅಷ್ಟೊಂದು ಭಯಂಕರವಾಗಿಲ್ಲ, ಅಷ್ಟೊಂದು ಒಂಟಿಯಾಗಿಲ್ಲ!"

ಅಂತೂ, ಅಂದಿನಿಂದ ಮೊದಲ್ಗೊಂಡು, ವಾರಕ್ಕೆ ಎರಡು ದಿನ ಕ್ರಮವಾಗಿ. ಟೆರಿಸಾ ಇಂದ ಬೊಲೆಸ್ಲೋವಿಗೂ ಬೊಲೆಸ್ಲೋವಿನಿಂದ ಟೆರಿಸಾವಿಗೂ ಕಾಗದಗಳನ್ನು ಬರೆದೆ. ನಾನು ಅವುಗಳನ್ನು ಮನಃಪೂರ್ವಕವಾಗಿ ಬರೆದೆ ; ಅವುಗಳು, ಅದರಲ್ಲೂ ಉತ್ತರಗಳು, ಭಾವಾವೇಶದಿಂದ ತುಂಬಿ ತುಳುಕುತ್ತಿದ್ದುವು. ಅವಳು ಕಾಗದಗಳನ್ನು ಓದಿಸಿ ಕೇಳುತ್ತಿದ್ದಳು, ಕೇಳಿ ಅಳುತ್ತಿದ್ದಳು, ನಗುತ್ತಿದ್ದಳು, ಸುಖಪಡುತ್ತಿದ್ದಳು. ಇದಕ್ಕೆಲ್ಲ ಪ್ರತಿಯಾಗಿ, ನನ್ನ ಬಟ್ಟೆ ಬರೆಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಳು ; ನನ್ನ ಷರಟುಗಳನ್ನೂ ಕಾಲು ಚೀಲಗಳನ್ನೂ ಹರಿದಿದ್ದರೆ ಸರಿಪಡಿಸಿಕೊಡುತ್ತಿದ್ದಳು ; ಜೋಡುಗಳನ್ನು ಒರಸಿ, ಟೋಪಿಯ ಧೂಳು

ಝಾಡಿಸಿಡುತ್ತಿದ್ದಳು.

ಮೂರು ತಿಂಗಳುಗಳ ತರುವಾಯ ಏನೋ ಗುಮಾನಿಯ ಮೇಲೆ ಅವಳನ್ನು ದಸ್ತಗಿರಿಮಾಡಿ ಜೈಲಿಗೆ ಹಾಕಿದರು. ಅವಳನ್ನು ಮತ್ತೆ ಕಾಣಲಾಗಲಿಲ್ಲ. ಅವಳು ಸತ್ತುಹೋಗಿರಬೇಕು.

ಬಿಸಿಲು ಬೆಳದಿಂಗಳು ಕಥಾಸಂಕಲನ

ಬಿನ್ನಹ

ಈ ಸಂಕಲನದಲ್ಲಿನ ಕಥೆಗಳನ್ನು ಕುರಿತು ನಾನು ಬಿನ್ನವಿಸಿಕೊಳ್ಳಬೇಕಾದ ವಿಶೇಷ ಸಂಗತಿಯೇನೂ ಇಲ್ಲ. ಅದು ಏನಿದ್ದರೂ ಎರಡು ಕೃತಜ್ಞತೆಯ ಮಾತು.

ಈ ಹಿಂದೆ ಪ್ರಕಟವಾಗಿರುವ ನನ್ನ ಎಲ್ಲ ಕಥೆಗಳನ್ನಲ್ಲದಿದ್ದರೂ ಕೆಲವನ್ನಾದರೂ ಕನ್ನಡ ಲೋಕ ಮೆಚ್ಚಿಕೊಂಡಿದೆಯೆಂದು ನನ್ನ ನಂಬಿಕೆ. ಆ ನಂಬಿಕೆಯ ಸತ್ತ್ವದಲ್ಲಿ ನನ್ನ ಲೇಖನಿಯನ್ನದ್ದಿ ಇಲ್ಲಿನ ಕಥೆಗಳನ್ನು ಬರೆದದ್ದಾಗಿದೆ. ಇವನ್ನು ಬರಿದ ಕನ್ನಡ ವಾಚಕವೃಂದಕ್ಕೆ ನಾನು ಸದಾ ಕೃತಜ್ಞ.

ಈ ಸಂಕಲನದಲ್ಲಿನ ಎಲ್ಲ ಕಥೆಗಳೂ ಈ ಮುಂದೆ ಕಂಡಂತೆ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ : "ದೃಷ್ಟಿಲಾಭ"–ಕಥೆಗಾರ, ೧೮ನೆಯ ವಾರ್ಷಿಕ ಸಂಚಿಕೆ, ೧೯೪೯ ; "ನೂರನಲವತ್ತೆರಡು"–ಪ್ರಜಾಮತ, ದೀಪಾವಳಿಯ ಸಂಚಿಕೆ, ೧೯೪೮ ; "ನೂರನಲವತ್ತೆರಡು"–ಪ್ರಜಾಮತ, ದೀಪಾವಳಿಯ ಸಂಚಿಕೆ, ೧೯೪೭; "ನಿಷ್ಪ್ರಯೋಜಕ"–ಪ್ರಕಾಶ, ೧೯೪೮ ; "ತಂತಿ ಕಿತ್ತ ಪಿಟೀಲು"–ಕನ್ನಡನುಡಿ, ನವೆಂಬರ್ ೧೯೫೦ ; "ಆ ಚೋಟುದ್ದದ ಹುಡುಗ"–ಜೀವನ, ಆಗಸ್ಟ್ ೧೯೪೫ "ಗಂಡಿನ ಹೃದಯ"–ಪ್ರಭಾತ, ವಾರ್ಷಿಕ ಸಂಚಿಕೆ, ೧೯೫೧ ; "ಗೌರಿಯ ಸಾವು" – ವಾಹಿನಿ, ವಾರ್ಷಿಕ ಸಂಚಿಕೆ, ಸೆಪ್ಟೆಂಬರ್ ೧೯೪೬ ; "ತಾಯಿ–ಮಗ"–ಕಥಾವಳಿ, ವಾರ್ಷಿಕ ಸಂಚಿಕೆ, ೧೯೪೭ ; "ಮೋಡದ ದಿಬ್ಬಣ" ಜನಪ್ರಿಯ, ಡಿಸೆಂಬರ್ ೧೯೫೦. ೧೯೪೫ ರಿಂದ ೧೯೫೧ರ ವರೆಗೆ ಎಂದರೆ ಆರೇಳು ವರ್ಷಗಳ ಅವಧಿಯಲ್ಲಿ ಬರೆದ ಕಥೆಗಳಲ್ಲಿ ಕೆಲವು ಇಲ್ಲಿ ಬೆಳಕು ಕಂಡಿವೆ ; ಉಳಿದವು ಇನ್ನೊಂದು ಸಂಕಲನಕ್ಕೆ ಮೀಸಲಾಗಿವೆ.

ಮೇಲ್ಕಂಡ ಕಥೆಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ ಉಪಕಾರ ಮಾಡಿದ ಆಯಾ ಪತ್ರಿಕೆಗಳ ಸಂಪಾದಕರಿಗೆ ನನ್ನ ಕೃತಜ್ಞತೆಯ ವಂದನೆಗಳು.

ಇನ್ನು ಈ ಸಂಕಲನದ ಪ್ರಕಾಶನ ; ಪ್ರಭಾ ಪ್ರಕಟನಾಲಯದವರು ಕೇವಲ ಸಾಹಿತ್ಯ ಸೇವೆಯ ಸದುದ್ದೇಶದಿಂದ ಪ್ರೇರಿತರಾಗಿ, ನನ್ನ ಕಥೆಗಳ ಸಂಕಲನವನ್ನು ತಮ್ಮ ಮೊದಲ ಪ್ರಕಟನೆಯಾಗಿ ಪ್ರಕಟಿಸಬೇಕೆಂದು ಅಪೇಕ್ಷಿಸಿದರು. ಇದು ಅವರ

ವಿಶ್ವಾಸ ಮಾತ್ರವಲ್ಲದ, ಅವರು ನನಗೆ ತೋರಿದ ಗೌರವ ಇದಕ್ಕಾಗಿ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅವರಿಗೆ ಸಮರ್ಪಿಸಿ, ಅವರ ಸಾಹಿತ್ಯಸೇವೆ ವ್ಯಾಪಕವಾಗಿಯೂ ಬಹುಮುಖವಾಗಿಯೂ ಚಿರಕಾಲ ನಡೆಯಲೆಂದು ಹಾರೈಸುತ್ತೇನೆ.

ಈ ಗ್ರಂಥದ ಪ್ರಕಟನ ಕಾರ್ಯದಲ್ಲಿ ನನ್ನ ಗೆಳೆಯರು ಶ್ರೀ ಎಂ.ಎಸ್. ನಾರಾಯಣರಾಯರು ಬಗೆಬಗೆಯಲ್ಲಿ ಶ್ರಮವಹಿಸಿ ಸಹಕರಿಸಿದ್ದಾರೆ. ಅವರಿಗೂ ನನ್ನ ವಂದನೆ.

೩೦–೪೦–೧೯೫೩
ಬೆಂಗಳೂರು

ಮೈಸೂರು ಸೀತಾರಾಮಯ್ಯ

ಬಿಸಿಲು – ಬೆಳದಿಂಗಳು ಕಥಾಸಂಕಲನ

೧. ಗಂಡಿನ ಹೃದಯ

ನನ್ನ
ಕಾಲೇಜು ದಿನಗಳ
ಮೂವರು ಗೆಳೆಯರ
ಸ್ನೇಹದ
ಸವಿ ನೆನಪಿಗೆ

ಗಂಡಿನ ಹೃದಯ
(ಬಿಸಿಲು – ಬೆಳದಿಂಗಳು ಕಥಾಸಂಕಲನದಿಂದ)

ಗೂಗ್ಲಿಲ್ಮೊ ಬಾಗಿಲ ಕರೆಗಂಟೆ ಬಾರಿಸಿದ್ದನ್ನು ಕೇಳಿದನು. ಬಳಿಕ ಯಾರೋ ಒಳಕ್ಕೆ ಹೋಗಿ ಹಜಾರದಲ್ಲಿ ಮಾತಾಡುತ್ತಿದ್ದುದೂ ಅವನಿಗೆ ಕೇಳಿಸಿತು. ಆದರೆ ಅವನು ಕದಲಲಿಲ್ಲ. ಅವರು ಯಾರಿರಬಹುದು ಔಷಧಿಯಂಗಡಿಯ ಕೆಲಸದ ಹುಡುಗನೆ, ರೊಟ್ಟಿಯಂಗಡಿಯವನೆ, ಇಲ್ಲವೆ ಒಕ್ಕಲಗಿತ್ತಿಯೆ ? ತನ್ನ ಸರಳವಾದ ಏಕಪ್ರಕಾರವಾದ ಜೀವನದ ವಿವರಗಳೆಲ್ಲವೂ ಅವನಿಗೆ ಹೃದ್ಗತವಾಗಿದ್ದವು. ತನ್ನ ಓದುವ ಕೋಣೆಯಲ್ಲಿ ಕುಳಿತು ಅವನು ಪ್ರತಿದಿನದ ಕಾರ್ಯಕಲಾಪಗಳ ಗತಿಯ ಏಕನಾದವನ್ನು ಆಲಿಸುತ್ತಿದ್ದನು. ಅಂದು ಜರುಗುತ್ತಿದ್ದ ಎಂದಿನವಲ್ಲದ ಘಟನೆಗಳು ಕೂಡ ಅವನಿಗೆ ಹಿಂದೆ ಪರಿಚಯವಾದ ಘಟನೆಗಳಂತೆ ಕಿವಿಯಲ್ಲಿ ಮೊರೆಯ ತೊಡಗಿದವು : ಅವುಗಳಲ್ಲಿ ಅವನು ವಿಶೇಷ ಆಸಕ್ತಿ ವಹಿಸಲಿಲ್ಲ ; ಉದಾಹರಣೆಗೆ, ಔಷಧ ವ್ಯಾಪಾರಿ ಹೊಸಬ ; ಆದಮಾತ್ರಕ್ಕೆ ತಾನೇಕೆ ಕುಳಿತ ಕಡೆ ಬಿಟ್ಟು ಕದಲಬೇಕು ? ಘಟನೆಗಳ ಕಾರ್ಯಗತಿಯನ್ನು ವ್ಯತ್ಯಾಸಗೊಳಿಸಲು ಅವನು ಏನನ್ನೂ ಅರಿಯ ; ಅವನು ಏನನ್ನೂ ಮಾಡಲಾರ. ಅವನು ತನಗೆ ತಾನು ಕೇಳಿಕೊಳ್ಳುತ್ತಿದ್ದನು : "ಇನ್ನೇನು ತುಸು ಹೊತ್ತಿನಲ್ಲಿ ಸೂಲಗಿತ್ತಿ ಅಕಾರ್ಡಿ ಬರುತ್ತಾಳೆ. ಆಮೇಲೆ ಡಾಕ್ಟರು ಬರುತ್ತಾರೆ. ಅನಂತರ ಬಾಗಿಲ ಗಂಟೆ ಮತ್ತೆ ಮತ್ತೆ ಬಾರಿಸುತ್ತದೆ. ಒಂದೆರಡು ಗಂಟೆಯಲ್ಲಿ ಎಲ್ಲವೂ ಮುಗಿದುಹೋಗುತ್ತದೆ."

ತನ್ನ ಮನಸ್ಸಿನ ಆತಂಕವನ್ನು ಅಡಗಿಸುವುದಕ್ಕಾಗಿ ಅವನು ಮತ್ತೆ ಓದತೊಡಗಿದನು : ವಸಂತದ ಹಸುರುಹೊದೆದ ಊರಹೊರಗಿನ ಚಿಕ್ಕ ತೋಟದ ಕಡೆ ಕೆತ್ತೆತ್ತಿಯೂ ನೋಡಲಿಲ್ಲ. ಅವನ ವ್ಯಾಸಂಗವೂ ಅವನ ಬಾಳಿನಷ್ಟೆ ನಿರಾಡಂಬರವಾದದ್ದು. ಈಗ, ಓದ ಓದುತ್ತಲೇ ತನ್ನ ಬಾಳಿನ ವಿಚಾರವಾಗಿ ಆಲೋಚಿಸತೊಡಗಿದನು..........ಅವನಿಗೆ ಮದುವೆಯಾದಾಗ ಇಪ್ಪತ್ತೈದು ವರ್ಷ: ಈಗ ಅವನಿಗೆ ಮೂವತ್ತು. ಐದು ವರ್ಷಗಳ ವೈಶಿಷ್ಟ್ಯವಿಲ್ಲದ ಜೀವನ ; ಗಮನಿಸುವ ಮಟ್ಟಿಗೆ ಸುಖವಾದದ್ದೂ ಅಲ್ಲ, ಸುಖವಿಲ್ಲದ್ದೂ ಅಲ್ಲ. ಅವನಿಗೋಸುಗ ಅವನ ತಾಯಿ ಮಾಡಿದ್ದ ಆಸಾಧಾರಣವಾದ ವ್ಯವಸ್ಥೆ ಸಂಪೂರ್ಣವಾಗಿ ಸಿದ್ಧಿಸಿತ್ತು; ಅದು ಸಿದ್ಧಿಸಲು ಅವನೂ ಅವಕಾಶಕೊಟ್ಟಿದ್ದನು ; ತನ್ನ ವ್ಯಕ್ತಿಪ್ರಭಾವವನ್ನು

ತೋರಿಸುವುದಕ್ಕೇ ಆಗದಷ್ಟು ಅತಿ ಸೋಮಾರಿತನ ಅವನದು; ಅಲ್ಲದೆ ತನ್ನ ಗುಣಗಳಲ್ಲಿಯೇ ಆಗಲಿ ತನ್ನ ಕಾರ್ಯಸಾಮರ್ಥ್ಯದಲ್ಲಿಯೇ ಆಗಲಿ ಅವನಿಗೇ ನಂಬಿಕೆಯಿಲ್ಲ. ಅವನ ತಾಯಿಯಾದರೂ ಎಲ್ಲ ಮಧ್ಯವಯಸ್ಸಿನ ಸ್ತ್ರೀಯರಂತೆಯೇ ತನ್ನ ಮಗನ ವಿಚಾರದಲ್ಲಿ ಸಾಧಾರಣ ರೀತಿಯ ಬಯಕೆಗಳನ್ನೇ ಇಟ್ಟುಕೊಂಡಿದ್ದಳು; ತಮ್ಮ ಮಕ್ಕಳು ಕಟ್ಟಕಡೆಗೆ ಜೀವನವನ್ನು ಎದುರಿಸಬೇಕಾದ ಸನ್ನಿವೇಶದಲ್ಲಿ ಅವರ ಬಗ್ಗೆ ತಂದೆ ತಾಯಿಗಳು ಯಾವ ಹೆಚ್ಚಿನ ಭ್ರಾಂತಿಯನ್ನೂ ಇಟ್ಟುಕೊಳ್ಳದೆ ಎಚ್ಚರಿಕೆಯಿಂದ ಕೂಡಿದ ವಾತ್ಸಲ್ಯವನ್ನು ತೋರುತ್ತಾರೆಯೋ ಅದೇ ಬಗೆಯ ವಾತ್ಸಲ್ಯದಿಂದ ಆಕೆ ತನ್ನ ಮಗನಿಗೆ ಹೀಗೆ ಉಪದೇಶಮಾಡಿದ್ದಳು : "ನೀನು ಐರೀನಳನ್ನು ಮದುವೆಮಾಡಿಕೊ. ಅವಳು ನಿನಗೆ ತಕ್ಕ ಹೆಣ್ಣು. ನಿನಗೆ ಯೋಗ್ಯಳಾದವಳೆಂದರೆ ಅವಳೊಬ್ಬಳೆ. ಅವಳು ಅಷ್ಟು ಅಂದವಾಗಿಲ್ಲ, ಒಪ್ಪಿಕೊಳ್ಳುತ್ತೇನೆ. ಆದರೆ ಒಳ್ಳೆ ಗಂಭೀರ ಸ್ವಭಾವದವಳು : ಗಟ್ಟಿಗಳು. ಹಣವಂತಳಲ್ಲದಿದ್ದರೂ ತಕ್ಕಮಟ್ಟಿಗೆ ಅನುಕೂಲಸ್ಥಿತಿಯಲ್ಲಿದ್ದಾಳೆ.......... ಇಷ್ಟಕ್ಕೂ ಹಣವನ್ನಲ್ಲವಲ್ಲ ನೀನು ಮದುವೆಮಾಡಿಕೊಳ್ಳುವುದು ! ಮಕ್ಕಳುಮರಿ ಹಡೆದು, ಒಳ್ಳೆ ಗೃಹಿಣಿಯಾಗಿರುತ್ತಾಳೆ........... ಇದಕ್ಕಿಂತ ಹೆಚ್ಚಿಗೆ ನಿನಗೆ ಆಗಬೇಕಾದ್ದೇನು? ನೋಡು, ಇದು ನಿನಗೆ ತಿಳಿಯದ್ದಲ್ಲ ; ಇಲ್ಲದ ಸಲ್ಲದ ಭ್ರಾಂತಿ ಇಟ್ಟುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ."

ಖಂಡಿತವಾಗಿಯೂ ಅವನು ಯಾವ ಭ್ರಾಂತಿಯನ್ನೂ ಇಟ್ಟುಕೊಂಡಿರಲಿಲ್ಲ. ತನ್ನ ತಾಯಿಯನ್ನು ಮೆಚ್ಚಿಸುವುದಕ್ಕಾಗಿ ಅವನು ಐರೀನಳನ್ನು ಮದುವೆಯಾಗಿದ್ದನು. ತನ್ನ ತಾಯಿಯ ಸುಖದ ಕಲ್ಪನೆಗೆ ಅನುಗುಣವಾಗಿ ಸುಖವಾಗಿರುವುದನ್ನು ಅಭ್ಯಾಸಮಾಡಿಕೊಂಡಿದ್ದನು.

ಅದು ಸಪ್ಪೆಯಾದ, ಬತ್ತಿಹೋಗಿದ್ದ ಸುಖ ; ಪಥ್ಯವೆಂದು ಸಪ್ಪೆಯ ಸಾರು ಊಟಮಾಡಿದಂತೆ. ಅವನ ತಾಯಿ "ಭ್ರಾಂತಿ" ಎಂದು ಅವನೊಂದಿಗೆ ಹೇಳಿದಾಗ ಅದು ಏನೆಂಬುದನ್ನು ಅವಳು ಸಂಪೂರ್ಣವಾಗಿ ಅರಿತಿದ್ದಳು. ಗೂಗ್ಲೀಲ್ಮೋವಿನ ಭಾಗಕ್ಕೆ ಭ್ರಾಂತಿ ಎಂದರೆ ಅವನ ಸೋದರತ್ತೆಯ ಮಗಳು ಆನಾ. ಅವಳ ತಾಯಿ ಧನಿಕನಾದ ಒಬ್ಬ ವರ್ತಕನ ಹೆಂಡತಿ. ಗೂಗ್ಲೀಲ್ಮೋ ಹುಡುಗನಾಗಿದ್ದಂದು ಅವರ ಮನೆಗೆ ಬಹಳವಾಗಿ ಹೋಗಿಬರುತ್ತಿದ್ದನು ; ಆದರೆ ಅವನು ದೊಡ್ಡವನಾದಂತೆ ಅವನ ಸೋದರತ್ತೆಯ ಸಂಶಯಗಳೂ ಎರಡು ಕುಟುಂಬಗಳ ಭಾಗ್ಯಭೇದಗಳೂ ನಡುವೆ ಒಂದು ಕಮರಿಯನ್ನು ಕಲ್ಪಿಸಿದ್ದುವು. ಇದರಿಂದಾಗಿ ಅವನು ಅವರ ಮನೆಗೆ ಹೋಗುವುದನ್ನೇ

ಬಿಟ್ಟುಬಿಟ್ಟಿದ್ದನು. ಆನಾ ಎತ್ತರವಾದ, ಚೆಂದದ ಹುಡುಗಿ : ಯಾವಾಗಲೂ ಒಳ್ಳೆಯ ಉಡುಪನ್ನೇ ಉಟ್ಟು, ಪರಿಮಳ ಪೂಸಿಕೊಂಡು, ಸೊಗಸಾಗಿ ಕಾಣುವಳು. ಅವನ ತಾಯಿಗೆ ಇವಳೂ "ಭ್ರಾಂತಿ" ; ಇವಳ ವಿರುದ್ಧವಾಗಿಯೇ ಆಕೆಯ ಹೋರಾಟ. "ಇಂಥವನಿಂದ ಅವಳಿಗೆ ಆಗಬೇಕಾದದ್ದೇನು ? ಎಲ್ಲಿಂದೆಲ್ಲಿಗೆ ! ಅವಳ ಗುರಿ ಇನ್ನೂ ಬಹು ಮೇಲಿನದು............ಇವನಲ್ಲಿ ಪ್ರೀತಿಯೆ ? ಛೆ, ಎಲ್ಲಿ ಬಂತು. ತನ್ನ ವಿನೋದಕ್ಕಾಗಿ ಸುಮ್ಮನೆ ಇವನೊಂದಿಗೆ ಚೆಲ್ಲಾಟವಾಡುತ್ತಿದ್ದಾಳೆ ; ತನ್ನ ಮನಸ್ಸಿನಲ್ಲಿ ಇವನಿಗೆ ಸ್ವಲ್ಪವೂ ಎಡೆಕೊಟ್ಟಿಲ್ಲ. ಇದು ಅವನ ಅರಿವಿಗೆ ಬಂದಿಲ್ಲವೆ ?"

ಈ ಮಾತುಗಳು ಅವನ ಕನಸನ್ನು ಕರಗಿಸಿಬಿಟ್ಟಿದ್ದುವು ; ಕ್ರೂರವಾಗಿ, ಅಡೆತಡೆಯಿಲ್ಲದೆ ; ತೊಟತೊಟನೆ ತೊಟ್ಟಿಕ್ಕುವ ನೀರು ಕಲ್ಲನ್ನೇ ಸಮೆಸುವ ಹಾಗೆ. ಆದ್ದರಿಂದ ಅವನು ಐರೀನಳನ್ನು ಮದುವೆಯಾದನು–ಶಾಂತಿ, ಸುಖ......

ಸಪ್ಪೆಯ ಸುಖದ ಹಲವು ವರ್ಷ ಕಳೆದ ಮೇಲೆ ಐರೀನಳಿಗೆ ಪುತ್ರಜನನವಾಗುವುದರಲ್ಲಿತ್ತು. ಮೊದಲು ಈ ಬಗ್ಗೆ ಗೂಗ್ಲೀಲೊಗೆ ಅಷ್ಟೇನೂ ಉತ್ಸಾಹವಿರಲಿಲ್ಲ. "ಭ್ರಾಂತಿ"ಗಳನ್ನು ಇಟ್ಟುಕೊಳ್ಳಬೇಡ ಎಂದು ಎಚ್ಚರಿಕೆ ಕೊಡುವುದಕ್ಕಾಗಿಯೇ ಇನ್ನೊಂದು ಜೀವವನ್ನು ಬೆಳಸುವ ಕಾಲ ಬಂದಿತೆಂದು ಅವನು ಈಗ ಭಾವಿಸಿದನು. ಕೆಲವು ತಿಂಗಳುಗಳು ಕಳೆದ ಮೇಲೆ, ನದಿ ನೆರೆ ತುಂಬಿ ನಾಡನ್ನು ಕೊಚ್ಚುವಂತೆ, ಅವನ ಹೃದಯದ ತುಂಬ ನಲವೇರಿತು. ಕಡೆಗೊಬ್ಬ ಪುತ್ರ ; ತನ್ನ ಹಿಂದಿನ ಎಲ್ಲ ದುಃಖಗಳಿಗೂ ಪ್ರೇಮ ಸೌಖ್ಯಗಳ ತ್ಯಾಗಕ್ಕೂ ಪ್ರತಿಫಲ !

ಈ ಸಲ ಅವನು ಯೋಚನೆಯ ಮಂಪರದಿಂದ ಎಚ್ಚತ್ತು, ತನ್ನ ಓದುವ ಕೋಣೆಯನ್ನು ಬಿಟ್ಟು, ಹೊರಗೆ ನಡವೆಯನ್ನು ಸೇರಿದನು. ಪೂತಿನಾಶಕದ ಕಟುವಾಸನೆ ಅವನ ಹೆಂಡತಿಯ ಕೋಣೆಯಿಂದ ಹೊರ ಬರುತ್ತಿತ್ತು. ಅವನು ಬಹಳ ಕಷ್ಟದಿಂದ ಕಿವಿಕೊಟ್ಟು ಆಲಿಸಿದ್ದರೆ ಬಹಳ ನರಳುವ ದನಿಯೂ ಅವನಿಗೆ ಕೇಳಿಬರುತ್ತಿತ್ತು............ಆದರೆ ತಟ್ಟನೆ ಹೊರಗಿನಿಂದ ಒಂದು ನೆರಳು ಅವನ ಮುಂದೆ ಸುಳಿಯಿತು ; ಬಲವಾದ, ಶಾಂತವಾದ, ದನಿಯೊಂದು ಅವನ ಆಲೋಚನೆಯ ಎಳೆಯನ್ನು ಕತ್ತರಿಸಿತು. :

"ಇದೇ ತಾನೆ ನಾನಿಲ್ಲಿ ಬಂದೆ. ನಾನು ಬಂದದ್ದು ಗೊತ್ತಾಯಿತೆಂದು ಕಾಣುತ್ತೆ".

ಮಾತಾಡಿದಾತ ಡಾಕ್ಟರು : ಇವನ ಹಳೆಯ ಶಾಲಾ ಸ್ನೇಹಿತ ; ಇವನ

ಮನೆಗೆ ಹಿಂದೆ ಒಂದು ಕಾಲದಲ್ಲಿ ಆಗಾಗ್ಗೆ ಬರುತ್ತಿದ್ದನಾತ. ಸ್ಥೂಲ ಕಾಯ ; ಕೆಂಪು ಮುಖ ; ರಸ ಸ್ವಭಾವದವನು. ಹೊಸ ಜೀವಿಗಳನ್ನು ಪ್ರಪಂಚಕ್ಕೆ ತರುವ ಕಾರ್ಯಭಾರ ಅದು ಹೇಗೋ ಅವನಿಗೆ ಹೆಚ್ಚಿನ ಕಸುವನ್ನು ಕೊಟ್ಟಿತ್ತು.

"ನನ್ನ ಕೈಲಾದ ಮಟ್ಟಿಗೂ ಬೇಗ ಬಂದೆ.........ಆಕೆ ಹೇಗಿದ್ದಾಳೆ ? .... ಕ್ಷೇಮವಾಗಿದ್ದಾಳೆಯೋ ? ಒಳ್ಳೆಯದು..... ಗಾಬರಿಪಟ್ಟುಕೊಳ್ಳಬೇಡವಯ್ಯ........ ನಾನಾಗಿದ್ದರೆ ಹೊರಕ್ಕೆ ಹೊರಟುಹೋಗುತ್ತಿದ್ದೆ, ಇಲ್ಲವೆ ಓದುವ ಕೋಣೆಯಲ್ಲಿ ತೆಪ್ಪನೆ ಕುಳಿತಿರುತ್ತಿದ್ದೆ...... ಇನ್ನೊಂದೆರಡು ಗಂಟೆಯಲ್ಲಿ ಬಂದು ಎಲ್ಲವನ್ನೂ ತಿಳಿಸುತ್ತೇನೆ."

ಅವನು ನಕ್ಕು ಮಲಗುವ ಕೋಣೆಯೊಳಕ್ಕೆ ಹೋದನು. ಗೂಗ್ಲೀಲ್ಮೋ ತನ್ನ ಓದುವ ಕೋಣೆಗೆ ಹಿಂದಿರುಗಿದನು. ಹೊರಹೊರಡಬೇಕೆಂದು ಅವನು ಕ್ಷಣಕಾಲ ಯೋಚಿಸಿದನು ; ಆದರೆ, ಸಂತೋಷಭಯಮಿಶ್ರವಾದ ಒಂದು ಬಗೆಯ ಅಸ್ಪಷ್ಟವಾದ ಸಂವೇದನೆ ಅವನನ್ನು ತಡೆದು ನಿಲ್ಲಿಸಿತು. ಇದು ತನ್ನ ನರಗಳ ಉದ್ರೇಕದ ಫಲವೋ ಅಥವಾ ಇನ್ನೇನಾದರೂವೋ ಎಂದು ಅವನು ಅಚ್ಚರಿಗೊಂಡನು.

ಅವನು ಮತ್ತೆ ತನ್ನ ಬರೆಯುವ ಮೇಜಿನ ಮುಂದೆ ಕುಳಿತನು. ಅವನಿಗೆ ಒಂದು ಮಗು ಹುಟ್ಟಿ ಅವನ ಜೀವನವೇ ಭವಿಷ್ಯದ ತೆರೆಯ ಮೇಲೆ ರೂಪಗೊಳ್ಳುತ್ತಿದ್ದ ಆ ಕ್ಷಣದಲ್ಲಿ ಅವನ ಸದ್ಯದ ಆಲೋಚನೆಗಳು ವಕ್ರಪಥವನ್ನು ಹಿಡಿದು ಗತಕಾಲಕ್ಕೆ ದೂರ ದೂರ ಸಾಗಿಹೋಗುತ್ತಿವೆಯೋ ಎಂಬಂತೆ ಅವನ ಹಿಂದಣ ಆಲೋಚನೆಗಳು ಅವನಲ್ಲಿ ಮರುಕೊಳಿಸಿದವು.

ಅವನ ಭಾಗಕ್ಕೆ ಗತಕಾಲವೆಂದರೆ ಆನಾ–ಯಾವಾಗಲೂ ಆನಾ– ಅವಳೇ; ಅವಳು ಮತ್ತು ಅವಳ ಹೆಸರು : ಆನಾ !

ಅವನು ತನ್ನ ಮದುವೆಯಾದ ಮೇಲೆ ಆನಾಳನ್ನು ಹಲವು ಸಲ ಕಂಡಿದ್ದನು. ಅವಳಾದರೋ ಮದುವೆಯಾಗಲೇ ಇಲ್ಲ ; ಮದುವೆಯಾಗುವುದಕ್ಕಿಂತ ಸ್ವತಂತ್ರವಾಗಿರುವುದು ಲೇಸು–ಹೀಗೆಂದು ಅವಳೇ ನಸು ನಗುತ್ತ ಹೇಳುತ್ತಿದ್ದಳು. ಈಗ ಅವಳಿಗೆ ಇಪ್ಪತ್ತೇಳು ವಯಸ್ಸು ; ಒಂಟಿ ಬಾಳು ; ಮೇಲಿಂದ ಮೇಲೆ ಪ್ರಯಾಣಮಾಡುವಳು ; ಯಾವಾಗಲೂ ಏನಾದರೂ ಕೆಲಸಮಾಡುತ್ತಲೇ ಇರುವಳು ; ಆದರೂ ಎಂದಿನಂತೆಯೇ ಉಲ್ಲಾಸವಾಗಿದ್ದಾಳೆ, ಎಂದಿನಂತೆಯೇ ಅಂದವಾಗಿ ಕಾಣುತ್ತಾಳೆ. ಅವಳು ಕೆಲವು ವೇಳೆ ಇವರನ್ನು ನೋಡಲು ಬರುವಳು; ಐರೀನಳೊಂದಿಗೆ ಸ್ನೇಹದಿಂದ ವರ್ತಿಸುವಳು. ಅವನೊಂದಿಗೆ ಹೆಚ್ಚು

ಮಾತುಕತೆಯಿಲ್ಲ–ಹೆಚ್ಚೆಂದರೆ ಒಂದೆರಡು ಮುಗುಳುನಗೆ ; ಸ್ನೇಹಿತರಂತೆ ಅವನ ಕೈ ಕುಲುಕುವಳು. ತನ್ನ ತಾಯಿ ಅರ್ಧಮಟ್ಟಿಗೆ ಮಾತ್ರ ತಪ್ಪು ತಿಳಿದಳೆಂದು ಅವನು ಭಾವಿಸುವನು. ಆನಾ ಅಷ್ಟೊಂದು ಅತ್ಯಾಶೆಯುಳ್ಳವಳಲ್ಲದಿರಬಹುದು ; ಆದರೂ ವಿಶ್ವಾಸಪರಳಲ್ಲವೆಂಬುದು ಖಂಡಿತ.

ಹಜಾರದಲ್ಲಿ ಹೆಚ್ಚು ಜನರಿರುವರೆ? ಯಾರೋ ಕೆಲಸಗಿತ್ತಿಯೊಂದಿಗೆ ತಗ್ಗು ದನಿಯಲ್ಲಿ ಮಾತಾಡುತ್ತಿದ್ದರು. ಆ ದನಿ ಅವನನ್ನು ಬೆಚ್ಚು ಬೀಳುವಂತೆ ಮಾಡಿತು. ಬಳಿಕ, ಅವನ ಓದುವ ಕೋಣೆಯ ಬಾಗಿಲು ತೆರೆಯಿತು ; ಸುಂದರವಾದ ಮುಖವೊಂದು ಕಾಣಿಸಿತು.

"ನಾನು, ಗೂಗ್ಲೀಲ್ಮೊ. ಒಳಕ್ಕೆ ಬರಲೋ ?"

ತನ್ನ ಆಲೋಚನೆಗಳನ್ನೆಲ್ಲ ಮೇಜಿನ ಸಂದೂಕದೊಳಗೆ ಸೇರಿಸಿ ಮುಚ್ಚಿಡಲು ಬಯಸುವ ರೀತಿಯಲ್ಲಿ, ತಪ್ಪೆಸಗುವಾಗಲೇ ಸಿಕ್ಕಿಬಿದ್ದ ತಪ್ಪಿತಸ್ಥನಂತೆ, ನಿಸ್ಸಹಾಯಕನಾಗಿ ಮೇಜಿನ ಮೇಲೆ ಕೈಯಾಡಿಸಿದನು. ಆದರೆ ಆನಾ ಶಾಂತಳಾಗಿ, ಹಿಂದೆ ಮುಂದೆ ನೋಡದೆ, ಬಳಿ ಸಾರಿದಳು.

"ಹಾಗೆಯೇ ವಿಚಾರಿಸಿಕೊಂಡು ಹೋಗೋಣವೆಂದು ಬಂದೆ. ಹೇಗಿದ್ದಾಳೆ ಐರೀನ್ ?"

ಗೂಗ್ಲೀಲ್ಮೊ ಬಹಳ ಅನ್ಯಮನಸ್ಕನಾಗಿದ್ದುದನ್ನು ಕಂಡು, ಪ್ರೀತಿಯಿಂದ ಅವನ ಕಡೆ ನೋಡಿ, ಅವಳು ಮುಂದುವರಿಸಿದಳು :

"ಅಯ್ಯೋ ಪಾಪ. ನಿನಗೆ ತುಂಬ ಚಿಂತೆಗಿಟ್ಟುಕೊಂಡಿದೆ."

ಅವನು ಗೊಣಗಿದನು : "ಏನಿಲ್ಲ. ಡಾಕ್ಟರು ಬಂದಿದ್ದಾರೆ".

ಪ್ರೇಮದ ಹಾಗೂ ಜೀವನದ ಒಂದು ಘಟನೆಯಲ್ಲಿ ಅಷ್ಟೊಂದು ಆಸಕ್ತಿ ವಹಿಸಿದ್ದ ಈ ತರುಣಿಯನ್ನು ಕುರಿತು ತಟ್ಟನೆ ಅವನ ಮನಸ್ಸಿನಲ್ಲಿ ಒಂದು ಭಾವನೆ ಉದಿಸಿತು ; ಅದು ಅವನ ಮನಸ್ಸನ್ನು ಕಲಕಿತು ; ಏಕೆಂದರೆ, ಅವನು ಜಾಗರೂಕನಾಗಿದ್ದನು ; ಪರಿಶುದ್ಧ ಮನಸ್ಕನಾಗಿದ್ದನು. ಅವನು ಅಪ್ರಯತ್ನವಾಗಿ ಅವಳ ಸುಂದರ ದೇಹವನ್ನು–ಮಕ್ಕಳ ತಾಯಾಗಲು ಪೂರ್ಣವಾಗಿ ಹೊಂದಿಕೊಂಡಿದ್ದ ಅವಳ ದೇಹವನ್ನು–ದೃಷ್ಟಿಸಿದನು.

"ಒಂದು ಕ್ಷಣ ಕುಳಿತುಕೊ ಆನಾ......... ನೀನು ದೊಡ್ಡ ಮನಸ್ಸು ಮಾಡಿ ಬಂದದ್ದು ಬಹಳ ಸಂತೋಷ."

ಸ್ಥಾಯಿ ಬದಲಾಯಿಸಿದ ಸಂಗೀತ ಸ್ವರದಂತೆ, ಅವನ ಧ್ವನಿ ಅಪೂರ್ವವಾಗಿ ಕೇಳಿಸಿತವಳಿಗೆ. ಆನಾ ಅಚ್ಚರಿಗೊಂಡು ಅವನ ಕಡೆ ನೋಡಿದಳು ; ಕ್ಷಣಕಾಲ

ಅವಳು ಏನೂ ನುಡಿಯಲಿಲ್ಲ. ಆಮೇಲೆ ಕೇಳಿದಳು :

"ನಿನಗೆ ಏನಾದರೂ ಬೇಕಾಗಿದೆಯೇನು ? ನನ್ನಿಂದ ಏನಾದರೂ ಉಪಯೋಗವಾದೀತೋ ?"

ಉತ್ತರ ಕೊಡದಿರುವುದಕ್ಕೆ ಈಗ ಅವನ ಸರತಿ. ಅವರಿಬ್ಬರೂ ಸಿಲುಕಿದ್ದ ಮೌನದ ಸುಳಿ ಬರುಬರುತ್ತ ದೊಡ್ಡದಾಯಿತು. ಯಾವುದೋ ಬೇರೊಂದು ಧ್ವನಿಯನ್ನು, ಹಿಂದೊಮ್ಮೆ ನುಡಿದು ಈಗ ಮರೆತ ಇಲ್ಲವೆ ಹೇಳಬೇಕೆಂದು ಆಲೋಚಿಸಿ ಹೇಳದೆ ಬಿಟ್ಟ ಮಾತುಗಳನ್ನು, ನೆನಪಿನಲ್ಲಿ ಆಲಿಸುತ್ತಿದ್ದಂತೆ ಅವರಿಗೆ ಭಾಸವಾಯಿತು. ಇದ್ದಕ್ಕಿದ್ದಂತೆ ಗೂಗ್ಲೀಲ್ಮೊ ಒಂದು ವಿಚಿತ್ರವಾದ ಪ್ರಶ್ನೆ ಹಾಕಿ ಮೌನವನ್ನು ಮುರಿದನು ; ನಾಚಿಕೆಯ ಸ್ವಭಾವದ ಅಂಥವನಿಂದ ಅದು ಹೊರಬಂದದ್ದರಿಂದ ಆ ಪ್ರಶ್ನೆ ವಿಚಿತ್ರ ತರವಾಗಿ ಕಂಡಿತು ; ಅದರಿಂದ, ಹೇಗೆ ಹೇಗೋ ಮುದ್ದಾಡಿದಂತೆ ಎನಿಸಿತು ಅವಳಿಗೆ.

"ನೀನೆಷ್ಟು ಒಳ್ಳೆಯವಳು ಆನಾ.....ಏಕೆ ನೀನು ಮದುವೆಯೇ ಆಗಿಲ್ಲವಲ್ಲ?"

ಅವಳು ಹುಚ್ಚಾಬಟ್ಟೆ ಕೆಂಪೇರಿದಳು ; ಅವಳ ಮುಖವೆಲ್ಲವೂ ಬರಿದಾಗಿದ್ದ ಕೊರಳೂ ಅಚ್ಚಗೆಂಪಾದುವು. ಅವಳ ಕಣ್ಣನ್ನು ಕವಿದ ನೆನಪಿನ ನೆರಳನ್ನು ಮುಚ್ಚಿಡುವುದಕ್ಕಾಗಿ ಅವಳು ನಸುನಗಲು ಪ್ರಯತ್ನಿಸಿದಳು.

"ನೀನು ಈಗ ಯೋಚಿಸುತ್ತಿರುವುದೇನು, ಗೂಗ್ಲೀಲ್ಮೋ ?..... ನಾನು ಮದುವೆಯಾಗದೆ ಒಂಟಿಯಾಗಿರುವುದು ಏಕೆಂದರೆ–ಏಕೆಂದರೆ, ನಾನು ಯಾರಿಗೂ.......ಬೇಕಾಗಿಲ್ಲ....."

"ಓಹೋ !"

ಜೊತೆಗೆ ಗೂಗ್ಲೀಲ್ಮೊ ಹೊಟ್ಟೆ ಹಿಡಿಸಲಾರದಷ್ಟೂ ಗೊಳ್ಳನೆ ನಕ್ಕನು. ಅವಳು ಯಾರಿಗೂ ಬೇಕಾಗಲಿಲ್ಲವೆ ? ಊರಿನ ಇತರ ಎಲ್ಲ ಹುಡುಗಿಯರನ್ನೂ ಒಟ್ಟುಗೂಡಿಸಿ ಎಣಿಸದ್ದಕ್ಕಿಂತ ಹೆಚ್ಚು ಸಂಖ್ಯೆಯ ತರುಣರು ಅವಳ ಲೆಕ್ಕಕ್ಕೆ ಇದ್ದರಲ್ಲಾ !

"ನಿನಗೆ ಹೇಳಿದವರು ಯಾರು ?"

"ಯಾರೆ, ನನ್ನ ತಾಯಿ."

"ನಿಮ್ಮ ತಾಯಿಗೆ ಏನೂ ತಿಳಿದಿರಲಿಲ್ಲ, ಪಾಪ. ಹೋಗಲಿ, ಆಗ ನಾನು ಒಂದು ಪ್ರತಿಜ್ಞೆ ಮಾಡಿದೆ ಎಂದು ಇಟ್ಟುಕೊಳ್ಳೋಣ" ಎಂದು ಆನಾ ಇನ್ನೂ ನಗುತ್ತಲೇ ಹೇಳಿದಳು ; ಆದರೆ ಅವಳು ನಿಜವಾಗಿ ಪೇಚಾಟಕ್ಕೆ ಸಿಲುಕಿದ್ದಳು.

"ಪ್ರತಿಜ್ಞೆಯೆ ? ಆದರೆ ನಾವಿಬ್ಬರೂ ಚಿಕ್ಕವರಾಗಿದ್ದಾಗ ನೀನು ಆ ಇನ್ನೊಬ್ಬ"

"ಆಮೇಲೆ ಪ್ರತಿಜ್ಞೆ ಮಾಡಬಹುದಲ್ಲ-"

"ನೀನು ಮಾಡಿದ್ದು ಯಾವಾಗ ?"

"ಖಂಡಿತವಾಗಿ ಹೇಳಲಾರೆ.......ಸುಮಾರು ಐದಾರು ವರ್ಷಗಳ ಹಿಂದೆ"

"ನಾನು ಮದುವೆಯಾದಾಗ, ಅಲ್ಲವೆ ?"

ಅವಳು ಹೆಚ್ಚು ಹೆಚ್ಚು ಪೇಚಾಟಕ್ಕೆ ಸಿಲುಕಿದಂತವಳಾಗಿ, ಮಾತು ನಿಲ್ಲಿಸಿದಳು; ತುಟಿ ಕಚ್ಚಿಕೊಂಡಳೂ ; ಅವಳು ಅವಿವೇಕದ ಮಾತಾಡಿದ್ದಳು-

ಗೂಗ್ಲಿಲ್ಮೊ ಹೇಳಿದ : "ಹೌದು, ಹೌದು. ನನಗೆ ನೆನಪಿದೆ, ನೀನು ಆ ವರ್ಷ ಅಸ್ವಸ್ಥವಾಗಿದ್ದೆ.......ಯಾರಿಗೂ ಏನೆಂದು ಗೊತ್ತಾಗಲಿಲ್ಲ.... ನನಗೆ ನೆನಪಿದೆ-ನಾನು, ಐರೀನ್ ಸ್ವಿಟ್ಸರ್ಲಂಡಿನಲ್ಲಿದ್ದೆವು..... ಆಮೇಲೆ ಆ ವಿಚಾರ ಕೇಳಿ ತಿಳಿದೆ.... ಅವನು ಮುಗುಳುನಗೆ ನಗುತ್ತ ಮುಂದುವರಿಸಿದ : "ಆಗಲೇ ಅಲ್ಲವೆ ನೀನು ಹಾಗೆಂದು ನಿಶ್ಚಯಮಾಡಿದ್ದು ?"

"ಹೋಗಿ ಬರುತ್ತೇನೆ, ಗೂಗ್ಲಿಲ್ಮೊ. ಮತ್ತೆ ಬರುತ್ತೇನೆ. ಫೋನ್ ಮಾಡಿ ಎಲ್ಲ ವಿಚಾರವನ್ನೂ ನನಗೆ ತಿಳಿಸು."

"ಓಹೋ, ಅಗತ್ಯವಾಗಿ. ಅದೇಕೆ, ಕೈ ಕುಲುಕುವುದಿಲ್ಲವೇನು ?"

"ಅದಕ್ಕೇನು, ಆಗಲಿ. ಇಕೋ."

ಅವಳು ತನ್ನ ಹಸ್ತವನ್ನು ನೀಡಿದಳು. ಅವನು ಅದನ್ನು ಕುಲುಕಿ, ಅಪ್ರಯತ್ನವಾಗಿ ಅದನ್ನು ಹಿಡಿದುಕೊಂಡೇ ಇದ್ದನು. ಏನು ಸಮಾಚಾರವೋ ? ಅದೇಕೆ ಅವಳ ಕೈ ಹಾಗೆ ನಡುಗುತ್ತಿತ್ತು ? ಅವನು ಕೈಯನ್ನು ಇನ್ನೂ ಬಲವಾಗಿ ಅದುಮಿದನು ; ಅವಳು ಪರವಶಳಾಗಿ ಅವನಿಗೆ ತನ್ನನ್ನು ತಾನೇ ಅರ್ಪಿಸಿಕೊಂಡಂತೆ ಅವನಿಗೆ ಭಾಸವಾಯಿತು......... (ಓಹ್, ಹಠಾತ್ತಾದ, ಭ್ರಾಮಕವಾದ, ಆದರೂ ನಿಶ್ಚಯವಾದ ಭಾವನೆ!)

ಈಗ ಅವನು ಒಬ್ಬನೇ ಇದ್ದನು ; ತಾನು ಧೈರ್ಯಮಾಡಿ ಹೇಳಿದ ಮಾತಿಗಾಗಿ, ಬಗೆದ ಆಲೋಚನೆಗಾಗಿ, ಅಚ್ಚರಿಗೊಂಡನು. ಸತ್ಯವೇ ಮೂರ್ತಿಮತ್ತಾಗಿ ಅವನ ಮುಂದೆ ನಿಂತು ಅವನನ್ನು- "ನಿನಗೆ ಅರ್ಥವಾಗಲಿಲ್ಲವೇ?" ಎಂದು ಪ್ರಶ್ನಿಸುತ್ತಿರುವಂತೆ ಅವನಿಗೆ ತೋರಿತು.

ಇಲ್ಲ-ಅವನಿಗೆ ಅರ್ಥವಾಗಿರಲಿಲ್ಲ. ಅವನು ತನ್ನ ತಾಯ ಕುರುಡು ತನವನ್ನು ನಂಬಿ ಆಕೆ ಹೇಳಿದಂತೆ ನಡೆದಿದ್ದನು ; ಪ್ರಪಾತದ ಅಂಚಿಗೆ ನಡೆದು ಹೋಗಿ ಅನಿವಾರ್ಯವಾಗಿ ಅದರೊಳಕ್ಕೆ ಮಗುಚಿಕೊಂಡಿದ್ದನು.

ಈಗ ಹಿಂದಿನದೆಲ್ಲವೂ ಅದರ ಸಹಜವಾದ ಬೆಳಕಿನಲ್ಲಿ ಅವನಿಗೆ

ಗೋಚರವಾಯಿತು. ಅವನು ಅನೇಕ ವೇಳೆ ಆನಾಳನ್ನು ನೋಡಲು ಹೋಗಿದ್ದಾಗ, ಅವಳ ಮುಖಮಂಡಲವು ಬೆಳಗಿ ತೊಳಗುತ್ತಿತ್ತು ; ಅವನು ಅವಳನ್ನು ನೋಡುವುದು ಅಪರೂಪವಾದಾಗ, ಅವಳು ಅಸುಖಿಯಾಗುತ್ತಿದ್ದುದನ್ನೂ ಅವನು ಬಲ್ಲನು. ಬಳಿಕ ಅವಳು ಅಸ್ವಸ್ಥಳಾದಳು ; ಆಮೇಲೆ ಆ ಹಲವು ವರ್ಷಗಳಲ್ಲಿ ಉಪೇಕ್ಷಿತಳಾಗಿದ್ದ ಅವಳು ಬೇರೆ ಯಾರನ್ನೂ ಮದುವೆಯಾಗಲೊಪ್ಪಲೇ ಇಲ್ಲ..... ಹಾಗಾದರೆ, ಅವಳೇಕೆ ಏನನ್ನೂ ಹೇಳಲಿಲ್ಲ ? ಅದೇನು ನೊಂದ ಅಭಿಮಾನವೋ? ಇಲ್ಲವೆ, ಮುಖ ಭಂಗವಾಗಬಹುದೆಂಬ ಹೆದರಿಕೆಯೋ ? ಇಲ್ಲ ; ನಿಜವಾಗಿ ಅವಳಾದರೂ ಅರ್ಥಮಾಡಿಕೊಂಡಿರಲಿಲ್ಲ.

ಈಗಲೋ ? ತಟ್ಟನೆ ಎಲ್ಲವೂ ಬೆಳ್ಳಂಬೆಳಕು !... ಅವಳ ಮುಖ ಕೆಂಪೇರಿದ್ದು, ಅವಳ ಕೈನಡುಕ.......ಆನಾ ತನ್ನನ್ನು ಇನ್ನೂ ಪ್ರೀತಿಸುತ್ತಾಳೆ......... "ಇಲ್ಲ ; ಅದು ಸಾಧ್ಯವಿಲ್ಲ" ಎಂದು ಅವನು ತನಗೆ ತಾನೇ ಹೇಳಿಕೊಂಡನು. ಆದರೆ ಅವನ ಹೃದಯ ಸಹಜಪ್ರೇರಣೆಯನ್ನು ಪಡಿನುಡಿಯುವಂತೆ ಮಂದವಾಗಿ ಸ್ಪಂದಿಸುತ್ತಿತ್ತು. ಅದು ಹಾಗೆಯೇ ಸರಿ, ಅದು ಹಾಗೆಯೇ ಸರಿ..........

ದಾರುಣ ವೇದನೆಯ ಭೀಕರ ಚೀತ್ಕಾರವೊಂದು ಅವನ ಆಲೋಚನೆಯ ಎಳೆಯನ್ನು ಕತ್ತರಿಸಿತು. ತನ್ನ ಮಗು, ತನ್ನ ದೇಹದ ಒಂದು ಭಾಗ, ಹುಟ್ಟುವುದರಲ್ಲಿತ್ತು; ತಾನಿಲ್ಲವಾದ ಮೇಲೆ ತನ್ನ ಬಾಳನ್ನು ಮುಂದುವರಿಸುವುದಾಗಿತ್ತು; ತಾನಿಲ್ಲವಾದ ಮೇಲೆ ತನ್ನ ಬಾಳನ್ನು ಮುಂದುವರಿಸುವುದಾಗಿತ್ತು. ಒಂದು ಹೊಸ ನಲಿವು, ತನ್ನ ಮಗು, ತನ್ನೆಡೆಗೆ ಬಂದಿರುವಾಗ ತಾನು ಇಲ್ಲಿ ಕುಳಿತು ಕಣ್ಮರೆಯಾದ ಸುಖವನ್ನು ಕುರಿತು ಚಿಂತಿಸುತ್ತಿದ್ದಾನೆ ! ಆದರೂ ಆನಾಳ ನೆನಪು ಇನ್ನೂ ಕಾಡುತ್ತಿದೆ. ಅಂತೂ ಈ ಎರಡು ಹೆಚ್ಚಿನ ನಲಿವುಗಳೂ–ಒಂದು ಅಸಾಧ್ಯವಾದದ್ದು, ಬತ್ತಿಹೋದದ್ದು– ಇವೆರಡು ಹೇಗೋ ಒಂದರೊಡನೆ ಒಂದು ಬೆರೆತು, ಪರಸ್ಪರ ಪೂರಕವಾಗಬೇಕು.

"ಗೂಗ್ಲೀಲ್ಮೊ"

ಡಾಕ್ಟರು ಅವನ ಮುಂದೆ ಕಳವಳಗೊಂಡು ನಿಂತಿದ್ದರು ; ಅವರ ಮುಖ ವಿವರ್ಣವಾಗಿತ್ತು. ಗೂಗ್ಲೀಲ್ಮೊ ಚಿಗಿದು ನಿಂತು, ಗಾಬರಿಗೊಂಡು ಕೇಳಿದನು :

"ಏನು ? ಏನು ಸಮಾಚಾರ ?"

ಡಾಕ್ಟರು ಗಂಭೀರ ವಾಣಿಯಲ್ಲಿ ಹೇಳಿದರು : "ಆಕೆ ಅಪಾಯದಲ್ಲಿದ್ದಾಳೆ. ಅನಿರೀಕ್ಷಿತವಾಗಿ ತೊಡಕುಂಟಾಗಿದೆ. ಆದರೂ ಇನ್ನೂ ಆಶೆಯಿದೆ ; ಶಸ್ತ್ರಚಿಕಿತ್ಸೆ ಮಾಡಬೇಕಾದೀತು. ನಿನಗೆ ತಿಳಿಸುವುದು ಮೇಲೆಂದು ತೋರಿತು........"

ಗೂಗ್ಲೀಲ್ಮೊವಿನ ತಲೆ ತಿರುಗಿದಂತಾಯಿತು. ಜೀವವನ್ನು ನೋವಿಗೆ ಬಲಿಕೊಟ್ಟು ನರಳುತ್ತಿದ್ದ ತನ್ನ ಹೆಂಡತಿಯನ್ನು ನೆನೆದನು.

ಡಾಕ್ಟರು ಮುಂದುವರಿಸಿದರು : "ನಿನ್ನನ್ನು ಕೇಳೋಣವೆಂದು ಬಂದೆ. ಈಗ ಯಾವುದು ಉತ್ತಮ ಪಕ್ಷವೆಂಬುದನ್ನು ನಿನ್ನ ಅಂತರಾತ್ಮ ನಿರ್ಧರಿಸಬೇಕು. ಇಬ್ಬರಲ್ಲಿ ಒಬ್ಬರನ್ನು ಮಾತ್ರ ಉಳಿಸಬೇಕಾಗಿ ಬಂದರೆ, ಯಾರನ್ನು ಉಳಿಸಲಿ– ತಾಯಿಯನ್ನೆ, ಮಗುವನ್ನೆ ?"

"ಏನು ?" – ಗೂಗ್ಲಿಲ್ಮೊ ಸತ್ತವನನ ಹಾಗೆ ಬಿಳಿಚಿಕೊಂಡು ಚೀರಿದನು.

"ಹೌದು. ಇರುವ ಸಂಗತಿ ಹೀಗೆ. ಇಬ್ಬರಲ್ಲಿ ಒಬ್ಬರನ್ನು ಉಳಿಸುವುದು ವಿಜ್ಞಾನಕ್ಕೆ ಸಾಧ್ಯ. ನಿನಗೆ ನಾನು ಅಷ್ಟು ಮಟ್ಟಿಗೆ ಭರವಸೆ ಕೊಡಬಲ್ಲೆ. ಆದರೆ, ಬಹುಶಃ ಇಬ್ಬರನ್ನೂ ಸಾಧ್ಯವಾಗಲಾರದು...........ಯೋಚನೆಮಾಡಿ ನನಗೆ ತಿಳಿಸು....."

ಗೂಗ್ಲೀಲ್ಮೊವಿನ ಕಣ್ಣಮುಂದೆ ಅವನ ಹೊಸ ಜೀವ ಮಿಂಚಿನಂತೆ ಹೊಳೆದು ಗೋಚರವಾಯಿತು ; ವಿಧಿಯೇ ಕೈಯೆತ್ತಿಕೊಡಬಂದಿದ್ದ ಹೊಸ ಜೀವ, ಅವನ ಬಾಳಿನ ಮುಂದೆ ಒಡ್ಡಿದ ಒಂದು ಹೊಸ ಸೆಳೆತ. ಜೊತೆಗೆ ಗಂಡು ಜೀವ, ಪುತ್ರ; ಅವನ ಬಾಳಿನ ಗುರಿ. ಆನಾ ; ಮತ್ತು ಅವಳೊಂದಿಗೆ ಸುಖ ಜೀವನ. ಎಲ್ಲವೂ ಮಾರ್ಪಡುವುದು ; ಎಲ್ಲವೂ ಹೊಸತಾಗುವುದು. ಅವನ ಸೌಖ್ಯವು ಕಳೆಗುಂದಿ ನಿಸ್ತೇಜವಾಗಿರುವುದರ ಬದಲು, ಅವನು ಅನೇಕ ಸಲ ಕನಸು ಕಂಡಂತೆ ಪ್ರಕಾಶಮಾನವಾಗಿ ಉಜ್ಜಲವಾಗಿರುವುದು. ಇನ್ನು ಮುಂದೆ ಕರ್ತವ್ಯ ಪಾಲನೆಗೆ ಬದಲು ಪ್ರೇಮ ; ಪರಿಪಾಠಕ್ಕೆ ಬದಲು ವ್ಯಾಮೋಹ...........ಐರೀನ್ ಸತ್ತುಹೋದರೆ ಆನಾಳನ್ನು ತಾನು ಮದುವೆಯಾಗಬಹುದು.............ತನಗೆ ಯಾವುದು ಬೇಕೋ ಅದನ್ನು ಕೈನೀಡಿ ಆರಿಸಿಕೊಳ್ಳಬೇಕಾಗಿದೆ, ಅಷ್ಟೆ. ಯಾರು ತಾನೆ ತನ್ನನ್ನು ನಿಂದಿಸುವರು ? ಜೀವನದ ನಿಯಮಕ್ಕೆ, ಮನುಷ್ಯಜಾತಿಯ ಅವಶ್ಯಕತೆಗೆ, ಕಟ್ಟುಬಿದ್ದು ತಾನೆ ತಾನು ನಡೆದುಕೊಳ್ಳುತ್ತಿರುವುದು ?

"ಅಯ್ಯೋ ದೇವರೇ !" ಎಂದು ಗೂಗ್ಲೀಲ್ಮೊ ನರಳುದನಿಯಲ್ಲಿ ನುಡಿದನು.

ಅವನ ಹೃದಯ ನುಡಿಯುತ್ತಲೇ ಇತ್ತು :

"ನೀನು ನಿನ್ನ ಹೆಂಡತಿಯನ್ನು ಹೇಗೂ ಪ್ರೀತಿಸುವುದಿಲ್ಲ. ನಿನ್ನ ಭಾಗಕ್ಕೆ ಅವಳು ಇದ್ದರೂ ಒಂದೆ ಇಲ್ಲದಿದ್ದರೂ ಒಂದೆ. ನೀನು ಅವಳೊಂದಿಗೆ ಮಕ್ಕಳಿಲ್ಲದೆ ಒಂಟಿಯಾಗಿ ಜೀವಿಸುತ್ತ ಹೋಗಬೇಕಾದೀತು. ಎರಡನೆಯ ಸಲವೂ ಆ ಇನ್ನೊಬ್ಬಳು ಕೈತಪ್ಪಿ ಹೋದಾಳು, ಜೋಕೆ, ಸ್ವಲ್ಪ ಯೋಚಿಸಿ ನೋಡು.....

ಇಷ್ಟೆಲ್ಲಾ ನಿನ್ನ ತಪ್ಪಿನಿಂದ. ಹೂ, ಹೇಳು.... ಎರಡು ಮಾತು... ಅದು ಅಷ್ಟು ಕಷ್ಟವೆ ? ಅಯ್ಯೋ ಮಂಕೇ, ಹೇಳು ; 'ಮಗು' ಎಂದು ಹೇಳು."

ಅವನು ತಲೆಯೆತ್ತಿ ನಿರ್ವಿಣ್ಣನಾಗಿ ನುಡಿದನು :

"ತಾಯಿಯನ್ನು ಉಳಿಸಿಕೊಡಿ !"

(Cosimo Giorgeri Contri ಇಟ್ಯಾಲಿಯನ್ ಕಥೆಗಾರನ ಕಥೆಯ ಅನುವಾದ)

ನಿಲ್ದಾಣಗಳ ನಡುವೆ

ಸಪ್ರಾಕರ್ಷ

ನಿರಾಶ್ರಿತೆ ಮತ್ತು ಅಭಿಸಾರಿಕೆ

ಬಿನ್ನಹ

(ನಿಲ್ದಾಣಗಳ ನಡುವೆ ಕಥಾ ಸಂಕಲನಕ್ಕೆ)

'ಕರುಣಾಲಹರಿ' ಎಂಬ ನನ್ನ ಕಥಾ ಸಂಕಲನ ೧೯೫೫ರಲ್ಲಿ ಪ್ರಕಟವಾಯಿತು. ಅದಕ್ಕೆ ಸೇರಿಸದೆ ಉಳಿಸಿಕೊಂಡಿದ್ದ ಎರಡು ಮೂರು ಕಥೆಗಳನ್ನೂ ಅಲ್ಲಿಂದೀಚೆಗೆ ಬರೆದವನ್ನೂ ಕೂಡಿಸಿ, 'ನಿಲ್ದಾಣಗಳ ನಡುವೆ' ಎಂಬ ಮೂರು ಕಥೆಗಳನ್ನೂ ಅಲ್ಲಿಂದೀಚೆಗೆ ಬರೆದವನ್ನೂ ಕೂಡಿಸಿ, 'ನಿಲ್ದಾಣಗಳ ನಡುವೆ' ಎಂಬ ಈ ಸಂಕಲನವನ್ನು ಹೊರ ತರುವ ಸಾಹಸ ಮಾಡಿದ್ದೇನೆ. ಸಾಹಸ ಎನ್ನುವ ಮಾತು ಅರ್ಥಮಾಡಿಕೊಳ್ಳಬಲ್ಲವರಿಗೆ ಅರ್ಥವಾದೀತು. ರೂಪಾಂತರಗಳಾದ ಎರಡು ಕಥೆಗಳನ್ನು ಬಿಟ್ಟರೆ, ಉಳಿದ ಕಥೆಗಳಲ್ಲಿ ನಿರೂಪಿತವಾಗಿರುವ ನಮ್ಮ ಜನದ ಬದುಕಿನ ಹರವು ಸುಮಾರು ನಾಲ್ಕು ದಶಕಗಳ ಹಿಂದಿನ ('ಕಲಾಪುತ್ರ'ದ)ಸಂದರ್ಭದಿಂದ ಇಂದಿನದರ ('ಹಾಲಿಗೆ ಹೆಪ್ಪು ಹಾಕಿಲ್ಲ')ವರೆಗೆ ಬಿತ್ತರಗೊಂಡಿದೆ. ನಾನು ಆಗಲೂ ಇದ್ದೆ, ಈಗಲೂ ಇದ್ದೇನೆ ; ನನಗೆ ಇದೆಲ್ಲವೂ ಸಮಕಾಲೀನ. ಈಗಿನ ತಲೆಮಾರಿನ ಓದುಗರಿಗೆ ಕೆಲವು ಹಳಗಾಲದವು ಎಂದು ತೋರಬಹುದು. ಕಥೆಗಳ ಸಂಗತಿ ಸನ್ನಿವೇಶಗಳಲ್ಲಿ ಕೆಲವು ಕಂಡವು, ನಡೆದವು; ಕೇಳಿ ತಿಳಿದವು ; ಇನ್ನೂ ಕೆಲವು ಕಟ್ಟಿದವು. ಒಂದೆರಡು ಕೇವಲ ವಿನೋದ ಚಿತ್ರಗಳು. ಕಥೆಗಳ ಮೂಲ ಸಾಮಗ್ರಿ ಹೇಗಾದರೂ ಒದಗಿ ಬಂದಿರಲಿ, ಅವುಗಳಲ್ಲಿ ಬರುವ ಪಾತ್ರಗಳು ಜೀವನದಿಂದ ಮೂಡಿಬಂದವು; ಜೀವನದಿಂದ ಮೂಡಿಬಂದಿದ್ದರೂ ಜೀವಂತ ವ್ಯಕ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ರೂಪಿಸಿದವು ಅಲ್ಲ.

ಕೊನೆಯ ಕಥೆ ಹೊರತಾಗಿ, ಉಳಿದ ಕಥೆಗಳೆಲ್ಲವೂ ಪ್ರಜಾಮತ, ಚಿತ್ರಗುಪ್ತ, ಸಂಯುಕ್ತ ಕರ್ನಾಟಕ, ಕತೆಗಾರ, ಸುಧಾ, ಮಯೂರ, ಆದರ್ಶ, ಕೊರವಂಜಿ, ಪ್ರಬುದ್ಧ ಕರ್ಣಾಟಕ–ಈ ಪತ್ರಿಕೆಗಳಲ್ಲಿ ಈ ಮೊದಲೇ ಪ್ರಕಟವಾಗಿವೆ. ಕಥೆಗಳನ್ನು ನನ್ನಿಂದ ಬರಮಾಡಿಕೊಂಡು ಪ್ರಕಟಿಸಿದ ಈ ಪತ್ರಿಕೆಗಳ ಸಂಪಾದಕರುಗಳಿಗೆ ನಾನು ಕೃತಜ್ಞನಾಗಿದ್ದೇನೆ. 'ಮೆದರ ಚೆನ್ನಿ' ಮೊದಲು 'ನಡೆದು ಬಂದ ದಾರಿ'ಯಲ್ಲಿ ಪ್ರಕಟವಾಯಿತು ; ಅದೂ, 'ಸುಧಾ'ದಲ್ಲಿ ಪ್ರಕಟವಾದ 'ತಾಯೊಬ್ಬಳೇ ನನಗೆ

ಗೊತ್ತಿರುವುದು' ಎಂಬ ಕಥೆಯೂ ದಕ್ಷಿಣಭಾಷಾ ಪುಸ್ತಕನಿಧಿಯ ಸಂಕಲನಗಳಲ್ಲೂ ಸೇರಿವೆ.

ಪ್ರಭಾ ಮುದ್ರಣಾಲಯದ ಒಡೆಯರಾದ ಶ್ರೀ ಡಿ.ಎಸ್. ಕೃಷ್ಣಾಚಾರ್ಯರು ಈ ಪುಸ್ತಕದ ಪ್ರಕಟನೆಯಲ್ಲಿ ಮುದ್ರಣಕಾರರಾಗಿ ಮಾತ್ರವಲ್ಲದೆ ಅನೇಕ ವಿಧಗಳಲ್ಲಿ ಉಪಕಾರ ಮಾಡಿದ್ದಾರೆ. ಅವರಿಗೆ ನಾನು ಚಿರಋಣಿ. ಮಾರಾಟದ ವ್ಯವಸ್ಥೆಯ ಸಮಸ್ಯೆಯನ್ನು ಪರಿಹರಿಸಿ ಶ್ರೀ ಡಿ.ವಿ.ಕೆ. ಮೂರ್ತಿಯವರು ನೆರವಿಗೆ ನಿಂತಿದ್ದಾರೆ. ಅವರಿಗೂ ನಾನು ಕೃತಜ್ಞ.

ಎಂ.ವಿ. ಸೀತಾರಾಮಯ್ಯ
ಆನಂದನಾಮ ಸಂವತ್ಸರದ
ಶ್ರಾವಣಶುದ್ಧ ಪ್ರತಿಪದೆ.
(೨೦-೭-೧೯೭೪)
ಬೆಂಗಳೂರು.

೧. ಸರ್ಪಾಕರ್ಷ

ಒಳವು ಕೆಲವು ಸರ್ಪಂಗಳ್,
ಘಳಘಳಿಸುವ ನೇತ್ರ ಸೂತ್ರದಿಂದೆಳೆಯುತೆ ತಾಂ ॥
ಬಳಿಗೈದಿದ ಜೀವಿಗಳಂ
ಕೊಲುವುವು ; ಕಳೆಯಲ್ಕೆ ಕಷ್ಟ ಸರ್ಪಾಕರ್ಷಂ ॥

ತೆಳ್ಳನೆಯ ಜುಬ್ಬ ತೊಟ್ಟು, ಕಾಲಿಗೆ ಸ್ಲಿಪರ್ ಧರಿಸಿ, ಸೋಫಾದ ಮೇಲೆ ಸುಖವಾಗಿ ಕಾಲುಚಾಚಿ ಕುಳಿತಿದ್ದ ಶ್ರೀಧರಶರ್ಮನು ಪ್ರಮೋದಘೋಷರ "ಪ್ರಾಚೀನ ಭಾರತದ ವೈಜ್ಞಾನಿಕ ವೈಚಿತ್ರ್ಯಗಳು" ಎಂಬ ಅಪೂರ್ವ ಗ್ರಂಥದ ಕನ್ನಡ ಭಾಷಾಂತರವನ್ನು ತಿರುವಿಹಾಕುತ್ತ ಮೇಲ್ಕಂಡ ಪದ್ಯವನ್ನು ಓದಿ ನಸು ನಕ್ಕನು. "ಈ ವಿಚಾರದಲ್ಲಿ ನಿಜವಾದ ವಿಚಿತ್ರ ಎಂದರೆ, ನಮ್ಮ ಕಾಲದಲ್ಲಿ ದಡ್ಡರು ಕೂಡ ನಂಬದೆ ನಿರಾಕರಿಸುವುದನ್ನು ಪ್ರಾಚೀನ ಭಾರತದಲ್ಲಿ ವಿವೇಕಿಗಳು, ವಿದ್ವಾಂಸರು ಎನಿಸಿಕೊಂಡವರು ನಂಬುತ್ತಿದ್ದರಲ್ಲಾ, ಎಂಥ ಮೌಢ್ಯ !" ಎಂದು ತನಗೆ ತಾನೇ ಹೇಳಿಕೊಂಡನು.

ಶ್ರೀಧರಶರ್ಮ ವಿಚಾರಶೀಲ ; ಆದ್ದರಿಂದ ಸಹಜವಾಗಿಯೇ ಆಲೋಚನಾ ಪರಂಪರೆಯೊಂದು ಅವನ ತಲೆಯಲ್ಲಿ ಹಾಯ್ದು ಹೋಯಿತು ; ತನ್ನ ಕಣ್ಣುಗಳ ದೃಷ್ಟಿ ಪಥವನ್ನು ಕದಲಿಸದೆ, ತನಗರಿವಿಲ್ಲದೆಯೇ ತನ್ನ ಪುಸ್ತಕವನ್ನು ಕೆಳಕ್ಕೆ ತಗ್ಗಿಸಿ ಹಿಡಿದನು. ಗ್ರಂಥವು ದೃಷ್ಟಿ ರೇಖೆಯ ಕೆಳಗಡೆಗೆ ಹೋಯಿತೋ ಇಲ್ಲವೊ, ಕಣ್ಣಿಗೆ ಬೀಳದ ಕೋಣೆಯ ಮೂಲೆಯೊಂದರಲ್ಲಿ ಇದ್ದ ಯಾವುದೋ ವಸ್ತುವು ಸುತ್ತ ಮುತ್ತಣ ಪರಿಸರಕ್ಕೆ ಅವನ ಗಮನವನ್ನು ಮರಳಿ ಸೆಳೆಯಿತು. ಅವನ ಮಂಚದ ಕೆಳಗಣ ನೆರಳುಗತ್ತಲೆಯಲ್ಲಿ ಅವನು ಕಂಡದ್ದು, ಬೆಳಕಿನ ಜೋಡಿ ಕಿರುಚುಕ್ಕಿ ; ಆ ಚುಕ್ಕಿಗಳ ನಡುವಣ ಅಂತರ ಸುಮಾರು ಒಂದು ಅಂಗುಲದಷ್ಟು. ಅವನ ಮೇಲ್ಗಡೆ ಇದ್ದ ವಿದ್ಯುದ್ದೀಪದ ಸ್ವಿಚ್ಚುಗಳ ಥಳಥಳಿಸುವ ಲೋಹದ ಗುಂಡಿನ ಪ್ರತಿಫಲನವಾಗಿದ್ದಿರಬಹುದು, ಆ ಬೆಳಕಿನ ಚುಕ್ಕಿಗಳು ; ಅವನಂತೂ ಅವುಗಳನ್ನು ಕುರಿತು ಸ್ವಲ್ಪವೂ ಯೋಚಿಸದೆ, ಮತ್ತೆ ಓದತೊಡಗಿದನು.

ಒಂದು ಕ್ಷಣವಾದ ಮೇಲೆ, ಕೈಲಿ ಹಿಡಿದಿದ್ದ ಪುಸ್ತಕವನ್ನು ಕೆಳಕ್ಕೆ ತಗ್ಗಿಸಿ,

ತಾನು ಮೊದಲು ಕಂಡಿದ್ದ ಆ ಬೆಳಕಿನ ಚುಕ್ಕಿಗಳನ್ನು ಮರಳಿ ನೋಡುವಂತೆ ಅವನಿಗೆ ಏನೋ ಪ್ರೇರಣೆಯಾಯಿತು: ಏಕೆ ಹಾಗೆ ಪ್ರೇರಣೆಯಾಯಿತೆಂಬುದನ್ನು ಬೆದಕಿ ನೋಡಬೇಕೆಂದು ಅವನಿಗೆ ಹೊಳೆಯಲಿಲ್ಲ. ಆ ಬೆಳಕಿನ ಚುಕ್ಕಿಗಳು ಇನ್ನೂ ಅಲ್ಲಿಂಯೇ ನೆಲಸಿದ್ದುವು. ಅವು ಮೊದಲಿಗಿಂತ ಹೆಚ್ಚು ಪ್ರಕಾಶಮಾನವಾಗಿದ್ದುವು ; ಒಂದು ಬಗೆಯ ಹಸುರು ಹೊಳಪಿನಿಂದ ಮಿನುಗುತ್ತಿದ್ದುವು. ಈ ಅಂಶವನ್ನು ಅವನು ಮೊದಲು ಗಮನಿಸಿರಲಿಲ್ಲ. ಅಲ್ಲದೆ, ಅವು ಕೊಂಚ ಮಾತ್ರ ಚಲಿಸಿರಬಹುದು. ಸ್ವಲ್ಪ ಮಟ್ಟಿಗೆ ಮೊದಲಿಗಿಂತ ಹೆಚ್ಚು ಹತ್ತಿರದಲ್ಲಿವೆ ಎಂದು ಅವನು ಬಗೆದನು. ಆದರೂ, ಅಲಕ್ಷ್ಯದಿಂದಿರುವವರ ಗಮನಕ್ಕೆ ತಮ್ಮ ಸ್ವಭಾವವನ್ನೂ ಮೂಲವನ್ನೂ ಹೊರಪಡಿಸಲಾಗದಷ್ಟು ಅವು ಇನ್ನೂ ಆ ನೆರಳುಗತ್ತಲೆಯಲ್ಲಿಯೇ ಹುದುಗಿಕೊಂಡಿದ್ದುವು ; ಶ್ರೀಧರಶರ್ಮನು ಮರಳಿ ಓದತೊಡಗಿದನು. ತಟ್ಟನೆ ಗ್ರಂಥದ ಯಾವುದೋ ಒಂದು ಸಂಗತಿ ಒಂದು ವಿಚಾರಕ್ಕೆ ಎಡೆಗೊಟ್ಟಿತು. ಅವನು ಬೆಚ್ಚಿ ಪುಸ್ತಕವನ್ನು ಸೋಫದ ಪಕ್ಕದಲ್ಲಿ ಮೂರನೆಯ ಸಲ ಕೆಳಕ್ಕೆ ಹಾಕುವಂತೆ ಮಾಡಿತು; ಪುಸ್ತಕ ಅವನ ಕೈಯಿಂದ ಜಾರಿ ಬೆನ್ನು ಮೇಲಾಗಿ ತೆರೆದುಕೊಂಡು ನೆಲಕ್ಕೆ ಬಿದ್ದಿತು. ಅರ್ಧ ಮೇಲಕ್ಕೆದ್ದ ಶ್ರೀಧರಶರ್ಮನು ಮಂಚದ ಕೆಳಗಣ ಕತ್ತಲೆಯಿಡಿದ ಪ್ರದೇಶವನ್ನು ಬಿಡದೆ ದಿಟ್ಟಿಸಿ ನೋಡುತ್ತಿದ್ದನು. ಅಲ್ಲಿ ಆ ಬೆಳಕಿನ ಚುಕ್ಕಿಗಳು ಹೆಚ್ಚಿನ ಕಾಂತಿಯಿಂದ ಬೆಳಗುತ್ತಿದ್ದಂತೆ ಅವನಿಗೆ ತೋರಿತು. ಈಗ ಆತನ ಗಮನವು ಸಂಪೂರ್ಣವಾಗಿ ಆಕರ್ಷಿತವಾಗಿತ್ತು: ನಟ್ಟ ನೋಟದಲ್ಲಿ ಉತ್ಸುಕತೆಯಿತ್ತು ; ನೋಡದೆ ವಿಧಿಯಿಲ್ಲ ಎಂಬಂತಿತ್ತು. ಮಂಚದ ಅಡಿಯ ಅಡ್ಡ ಕಂಬಿಗಳಿಗೆ ನೇರವಾಗಿ ತಳಗಡೆ ಒಂದು ದೊಡ್ಡ ಸರ್ಪದ ಸುರುಳಿಗಳು ಅವನ ನೋಟಕ್ಕೆ ಗೋಚರವಾದುವು ; ಆ ಬೆಳಕಿನ ಚುಕ್ಕಿಗಳು ಅದರ ಕಣ್ಣುಗಳು ! ಅದರ ಭಯಂಕರವಾದ ತಲೆ ತೀರ ಒಳಗಿದ್ದ ಸುರುಳಿಯಿಂದ ಹೊರಹಾಯ್ದು ಹೊರಸುರುಳಿಯಮೇಲೆ ಚಪ್ಪಟೆಯಾಗಿ ನೆಲಸಿ ನೇರವಾಗಿ ಅವನ ಕಡೆಗೇ ತಿರುಗಿತ್ತು ; ಅದರ ಅಗಲವಾದ ರೂಕ್ಷವಾದ ದವಡೆಯ ಹಾಗೂ ಮೊದ್ದು ಮೊದ್ದಾದ ಮುಂದಲೆಯ ಆಕೃತಿರೇಖೆ ಅದರ ನಿರ್ದಯವಾದ ದುರು ದುರು ನೋಟದ ದಿಕ್ಕನ್ನು ಸೂಚಿಸುವುದಕ್ಕೆ ನೆರವಾಗಿತ್ತು. ಆ ಕಣ್ಣುಗಳು ಈಗ ಕೇವಲ ಪ್ರಕಾಶಮಾನ ಬಿಂದುಗಳಾಗಿರಲಿಲ್ಲ ; ಅವು ಅವನ ಕಣ್ಣುಗಳನ್ನೇ ಅರ್ಥಪೂರ್ಣವಾದ ಅಪಾಯಸೂಚಕ ತೀಕ್ಷ್ಣತೆಯಿಂದ ನೋಡುತ್ತಿದ್ದುವು.

ಆಧುನಿಕ ನಗರವೊಂದರ ಭವ್ಯಮಂದಿರದ ಶಯ್ಯಾಗೃಹದಲ್ಲಿ ಸರ್ಪವೊಂದು ಸೇರಿಕೊಂಡಿತ್ತೆಂದರೆ ಯಾವ ವಿವರಣೆಯೂ ಅಗತ್ಯವಿಲ್ಲವೆನ್ನುವ ಮಟ್ಟಿಗೆ ಅದು ಅಷ್ಟೇನೂ ಸರ್ವಸಾಧಾರಣವಾದ ಘಟನೆಯಲ್ಲ. ಶ್ರೀಧರಶರ್ಮನು ಮೂವತ್ತೈದು ವರ್ಷದವನಾದರೂ ಇನ್ನೂ ಬ್ರಹ್ಮಚಾರಿ ; ಆತ ವಿದ್ವಾಂಸ, ವ್ಯಾಯಾಮಪಟುವೆಂದೂ ಹೇಳಬಹುದು. ಆದರೆ ಸೋಮಾರಿ. ಶ್ರೀಮಂತ, ಹತ್ತು ಜನಕ್ಕೆ ಬೇಕಾದವನು ; ಅರೋಗ ದೃಢಕಾಯದವನು ; ಅನೇಕ ಅಪರಿಚಿತ ದೂರ ದೇಶಗಳಲ್ಲಿ ಸಂಚರಿಸಿ, ದೇಶಾಂತರವಾಸಪ್ರಿಯರಾದ ಕನ್ನಡಿಗರನ್ನು ಆಕರ್ಷಿಸುತ್ತಿದ್ದ ಬೊಂಬಾಯಿಯಲ್ಲಿ ಬಂದು ಬೆಲಸಿದ್ದನು. ಶ್ರೀಮಂತಿಕೆಗೆ ಸಹಜವಾದ, ಅವನ ಶ್ರೀಮಂತ ಅಭಿರುಚಿಗಳು ಬಹುಕಾಲದಿಂದ ತೃಪ್ತಿಹೊಂದಲು ಸಾಧ್ಯವಾಗದೆ, ಒಂದು ಬಗೆಯ ಪ್ರಕೋಪಸ್ಥಿತಿಯಲ್ಲಿದ್ದುವು ; 'ತಾಜ್‌ಮಹಲ್' ಹೋಟಲಿನ ಸುಖಸಾಧನ ಸಂಪತ್ತು ಕೂಡ ಅವುಗಳನ್ನು ತಣಿಸಲಾರದೆ ಹೋಗಿದ್ದುವು. ಆದ್ದರಿಂದ, ಅವನು ತನ್ನ ಪರಮ ಮಿತ್ರನೂ ಪ್ರಸಿದ್ಧ ವಿಜ್ಞಾನಿಯೂ ಆದ ಡಾ॥ ಮೆಹ್ತಾ ಅವರ ಅತಿಥ್ಯವನ್ನು ಸ್ವೀಕರಿಸಿದ್ದನು.

ಡಾ॥ ಮೆಹ್ತಾ ಅವರ ಮನೆ ಭವ್ಯವಾದುದಾದರೂ ಹಳೆಯ ಮಾದರಿಯದು; ಅದು ಇದ್ದ ಸ್ಥಳ, ಈಗಿನ ನಗರದ ಅಭುಕ್ತಮೂಲೆಯಾಗಿ ಪರಿಣಮಿಸಿತ್ತು ; ಅದರ ಹೊರನೋಟದಲ್ಲಿ ಆಕರ್ಷಕವಲ್ಲದಿದ್ದರೂ ಪುರಾತನವಾದ ಘನತೆಯಿತ್ತು. ಮಾರ್ಪಾಟಾದ ಸುತ್ತು ಮುತ್ತಣ ಪರಿಸರದೊಂದಿಗೆ ಅದು ಸ್ಪಷ್ಟವಾಗಿ ಹೊಂದಿಕೊಳ್ಳುತ್ತಿರಲಿಲ್ಲ; ಪ್ರತ್ಯೇಕತೆಯ ಪರಿಣಾಮವಾಗಿ ಉಂಟಾಗುವ ಕೆಲವು ವೈಲಕ್ಷಣಗಳು ಅದಕ್ಕೆ ಅಂಟಿ ಕೊಂಡು ಬೆಳೆದು ಬಂದಿದ್ದುವು. ಕಟ್ಟಡದ ವಾಸ್ತುಶಿಲ್ಪಕ್ಕೆ ಏನೇನೂ ಹೊಂದಿಕೊಳ್ಳದೆ ಎದ್ದು ಕಾಣುತ್ತಿದ್ದ ಕಟ್ಟಡದ ಪಕ್ಕದ ಚಾಚುಭಾಗ ಅಂಥ ವೈಲಕ್ಷಣ್ಯಗಳಲ್ಲಿ ಒಂದಾಗಿತ್ತು; ಆ ಭಾಗದ ಉದ್ದೇಶವೂ ಅಷ್ಟೇ ವಿಚಿತ್ರವಾಗಿತ್ತು ; ಏಕೆಂದರೆ, ಅದು ಪ್ರಯೋಗಶಾಲೆ, ಮೃಗಶಾಲೆ, ಮತ್ತು ಅಪೂರ್ವ ವಸ್ತುಸಂಗ್ರಹ ಶಾಲೆಗಳ ಒಂದು ಸಂಯೋಜನೆಯಾಗಿತ್ತು. ನಮ್ಮ ಡಾಕ್ಟರ್ ಸಾಹೇಬರು ತಮ್ಮ ಆಸಕ್ತಿಯನ್ನು ಕೆರಳಿಸಿದ ಪ್ರಾಣಿಜಾತಿಗಳ ಪರಿಶೀಲನೆಯನ್ನು ನಡೆಸಿ ತಮ್ಮ ಹುಟ್ಟುಗುಣವಾದ ವೈಜ್ಞಾನಿಕ ಕುತೂಹಲವನ್ನು ತಣಿಸಿ, ತಮ್ಮ ಅಭಿರುಚಿಯನ್ನು ಸಂತೃಪ್ತಿಪಡಿಸುತ್ತಿದ್ದುದು ಈ ಸ್ಥಳದಲ್ಲಿಯೆ ; ಅವರು ಹಾಗೆ ಪರಿಶೀಲಿಸುತ್ತಿದ್ದುದು ಕೇವಲ ಕೆಳವರ್ಗದ ಪ್ರಾಣಿ ಜಾತಿಗಳೆಂಬುದನ್ನು ಒಪ್ಪಿಕೊಳ್ಳಬೇಕು. ಮೇಲುವರ್ಗದ ಪ್ರಾಣಿಜಾತಿಗಳಲ್ಲಿ ಯಾವುದಾದರೂ ಒಂದು ಇವರ ಕೋಮಲೇಂದ್ರಿಯಗಳಿಗೆ ಮೆಚ್ಚಿಗೆಯಾಗಬೇಕಾದರೆ, ಸರ್ಪಗಳ ಮತ್ತು ಮಂಡೂಕಗಳ ಬಾಂಧವ್ಯವನ್ನು

ಸೂಚಿಸುವ ಕೆಲವು ನಿರ್ದಿಷ್ಟವಾದ ಮೂಲಭೂತ ಲಕ್ಷಣಗಳನ್ನು ಹೊಂದಿರಬೇಕಾಗಿತ್ತು. ಅವರ ವಿಜ್ಞಾನದ ಒಲವು ಸ್ಪಷ್ಟವಾಗಿ ಸರ್ಪಜಾತಿಯ ಕಡೆಗಿತ್ತು ; ಅವರ ಪ್ರೇಮವೆಲ್ಲ ಪ್ರಕೃತಿಯ "ದೀನದಲಿತ ವರ್ಗದ" ಕಡೆಗೆ; ಅವರ ಪತ್ನಿ ಪುತ್ರಿಯರ ಪರಿಯೇ ಬೇರೆ: ನಮ್ಮ ಒಡಹುಟ್ಟುಗಳೇ ಎನಿಸಿದ ಈ ಹೀನಜಾತಕದ ಪ್ರಾಣಿಬಂಧುಗಳ ರೀತಿ ರಚನೆಗಳ ವಿಚಾರವಾಗಿ ಮೆಹ್ತಾ ಹೊಂದಿದ್ದ ಪ್ರಬುದ್ಧ ಕುತೂಹಲದಲ್ಲಿ ಭಾಗಿಗಳಾಗುವ ಸೌಭಾಗ್ಯವನ್ನು ಅವರು ಹೊಂದಿರಲಿಲ್ಲ ; ಆದ್ದರಿಂದ 'ಸರ್ಪಾಲಯ' ಎಂದು ಆತ ಕರೆಯುತ್ತಿದ್ದ ಗೃಹಭಾಗದಿಂದ ಅವರು ಬಹಿಷ್ಕೃತರಾಗಿದ್ದು, ಸಜಾತಿಪ್ರಾಣಿಗಳೊಂದಿಗೆಯೇ ಅವರು ಸದಾ ವಾಸಮಾಡಬೇಕಾಗಿದ್ದಿತು. ಅವರ ಈ ದುರವಸ್ಥೆಯ ಕಷ್ಟ ನಿಷ್ಠುರಗಳನ್ನು ಕಡಮೆಮಾಡಲೋಸುಗ ತನ್ನ ಅಪಾರ ಸಂಪತ್ತನ್ನು ವ್ಯಯಮಾಡಿ, ಸರ್ಪಗಳಿಗಿಂತ ಹೆಚ್ಚಿನ ಕಾಂತಿಯಿಂದ ಬೆಳಗುವಂತೆಯೂ ಅವುಗಳ ವಾಸಸ್ಥಳಕ್ಕಿಂತ ಹೆಚ್ಚು ವೈಭವೋಪೇತವಾದ ನಿವಾಸದಲ್ಲಿರಲು ಸಾಧ್ಯವಾಗುವಂತೆಯೂ ಅವನು ಅವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದನು.

ವಾಸ್ತುಶಿಲ್ಪದ ದೃಷ್ಟಿಯಿಂದಲೂ ಸಜ್ಜುಸರಂಜಾಮಿನ ವಿಚಾರದಲ್ಲಿಯೂ, 'ಸರ್ಪಾಲಯ'ವು ತನ್ನ ನಿವಾಸಿಗಳ ದೀನ ಸ್ಥಾನಮಾನಕ್ಕೆ ಅನುಗುಣವಾಗಿ ಅತ್ಯಂತ ಸರಳವಾಗಿತ್ತು ; ಸುಖಭೋಗಗಳ ಪೂರ್ಣಾನುಭವಕ್ಕೆ ಅವಶ್ಯವಾದ ಸ್ವಾತಂತ್ರ್ಯವನ್ನು ಅವುಗಳಲ್ಲಿ ಹಲವಕ್ಕೆ ನೀಡಿ, ಸುರಕ್ಷಿತವಾಗಿರುವುದು ಸಾಧ್ಯವಾಗಿರುತ್ತಿರಲಿಲ್ಲ ; ಏಕೆಂದರೆ, ಅವು ಜೀವಂತವಾಗಿದ್ದುದೇ ಅವುಗಳ ಸಂಬಂಧವಾಗಿದ್ದ ವಿಶೇಷ ಬಾಧಕ ! ಹೀಗಿದ್ದರೂ, ಅವುಗಳ ವಾಸಸ್ಥಾನಗಳಲ್ಲಿ ಅವು ಒಂದನ್ನೊಂದು ನುಂಗಿಹಾಕುವ ಕೆಟ್ಟಚಾಳಿಯನ್ನು ತಡೆಗಟ್ಟಲು ಎಷ್ಟು ಆವಶ್ಯಯಕವೋ ಅಷ್ಟು ಹೊರತಾಗಿ ಅವುಗಳ ಚಲನವಲನಕ್ಕೆ ಹೆಚ್ಚಿನ ನಿರ್ಬಂಧಗಳೇನೂ ಇರಲಿಲ್ಲ. ತತ್ಪರಿಣಾಮವಾಗಿ, ಅವುಗಳಲ್ಲಿ ಕೆಲವು ಬೇರೆ ಬೇರೆ ಕಾಲಗಳಲ್ಲಿ ಸುತ್ತಮುತ್ತಣೆಡೆಗಳಲ್ಲಿ ಗೋಚರವಾಗುವ ಪರಿಪಾಟಿಯಿತ್ತು ; ಆ ಸ್ಥಳಗಳಲ್ಲಿ ಅವು ಇರಲು ಕಾರಣವೇನೆಂಬುದನ್ನು ವಿವರಿಸುವುದೂ ಕಷ್ಟವಾಗುತ್ತಿತ್ತು ; ಈ ಬಗೆಗೆ ಶ್ರೀಧರಶರ್ಮನಿಗೆ ಮೊದಲೇ ಎಚ್ಚರಿಗೆ ಕೊಡಲಾಗಿತ್ತು. ಇಂತು ಈ ಸರ್ಪಾಲಯ' ಇದರ ಸಂಬಂಧವಾದ ಭಯೋತ್ಪಾದಕ ಭಾವನೆ – ಇವು ಇದ್ದರೂ ಕೂಡ ಮೆಹ್ತಮಹಲಿನಲ್ಲಿನ ಜೀವನವು ಶ್ರೀಧರನ ಮನಸ್ಸಿಗೆ ಹಿತಕರವಾಗಿಯೇ ಇದ್ದಿತು.

ಬೆರಗಿನಿಂದ ತಲೆ 'ದಿಂ' ಎಂದಿತು. ಹೇವರಿಕೆಯಿಂದ ಮೈ ನಡುಗಿತು –

ಇಷ್ಟು ಹೊರತಾಗಿ, ಶ್ರೀಧರಶರ್ಮ ಯಾವ ತೀಕ್ಷ್ಣ ಪರಿಣಾಮಕ್ಕೂ ಒಳಗಾಗಲಿಲ್ಲ. ಕರೆಗಂಟೆ ಬಾರಿಸಿ, ಸೇವಕನೊಬ್ಬನನ್ನು ಬರಮಾಡಿಕೊಳ್ಳಬೇಕೆಂಬ ಆಲೋಚನೆ ಆತನಿಗೆ ಮೊದಲು ಉಂಟಾಯಿತು. ಆದರೆ ಕರೆಗಂಟೆಯ ಹುರಿ ಸುಲಭವಾಗಿ ನಿಲುಕುವಷ್ಟು ದೂರದಲ್ಲಿದ್ದರೂ, ಆತ ಆ ಕಡೆಗೆ ಸ್ವಲ್ಪವೂ ಸರಿಯಲಿಲ್ಲ ; ಹಾಗೆ ಮಾಡಿದರೆ, ತಾನು ಭೀತಿಶಂಕೆಗೆ ಒಳಗಾಗುವೆನೆಂದು ಅವನಿಗೆನ್ನಿಸಿತ್ತು; ನಿಜವಾಗಿ ಅವನು ಭಯಗ್ರಸ್ತನಾಗಿರಲಿಲ್ಲ. ಆಗಿನ ಸನ್ನಿವೇಶದ ಅಪಾಯಸಂಭವಕ್ಕಿಂತ ಹೆಚ್ಚಾಗಿ ಅದರ ಅಸಂಬದ್ಧ ಸ್ವಭಾವದ ಅರಿವು ಅವನಲ್ಲಿ ತೀವ್ರವಾಗಿತ್ತು. ಸನ್ನಿವೇಶ ಮನಸ್ಸಿಗೆ ಕಿರಿಕಿರಿಯುಂಟುಮಾಡುತ್ತಿತ್ತು. ಹಾಸ್ಯಾಸ್ಪದವೂ ಆಗಿತ್ತು.

ಆ ಜಾತಿಯ ಸರ್ಪದ ಪರಿಚಯ ಶ್ರೀಧರಶರ್ಮನಿಗೆ ಇರಲಿಲ್ಲ. ಅದರ ಉದ್ದ ಎಷ್ಟೆಂಬುದನ್ನು ಅವನು ಊಹಿಸಿಕೊಳ್ಳಲುಮಾತ್ರ ಸಾಧ್ಯವಾಗಿತ್ತು ; ಕಣ್ಣಿಗೆ ಕಾಣುವಂತಿದ್ದ ಅದರ ಅತ್ಯಂತ ದಪ್ಪನೆಯ ದೇಹಭಾಗ ಸುಮಾರು ಅವನ ಮೊಳಕೈ ಗಾತ್ರದಷ್ಟಿತ್ತು. ಯಾವುದಾದರೂ ರೀತಿಯಲ್ಲಿ ಅದು ಅಪಾಯಕರವಾಗಿದ್ದರೆ, ಯಾವ ರೀತಿಯಲ್ಲಿ? ಅದು ವಿಷದ್ದೇ ಮೈಗೆ ಸುತ್ತುಹಾಕಿಕೊಳ್ಳುವ ಹೆಬ್ಬಾವೇ? ಅದು ಏನೆಂದು ಹೇಳುವಮಟ್ಟಿಗೆ, ಪ್ರಕೃತಿಯ ಅಪಾಯ ಸೂಚನೆಗಳ ಪರಿಜ್ಞಾನ ಅವನಿಗಿರಲಿಲ್ಲ: ಆ ಸಂಕೇತಭಾಷೆಯನ್ನು ಅವನು ಎಂದೂ ಅರ್ಥಮಾಡಿಕೊಂಡಿರಲಿಲ್ಲ.

ಆ ಪ್ರಾಣಿ ಅಪಾಯಕರವಾಗಿಲ್ಲದಿರಬಹುದು. ಆದರೆ ಇನ್ನೇನಲ್ಲವೆಂದರೂ, 'ಅಸಹ್ಯವಾಗಿತ್ತು.' ಅದು ಅಲ್ಲಿರತಕ್ಕದ್ದಲ್ಲ : ಸ್ಥಳಕ್ಕೆ ಹೊಂದದ ವಸ್ತು ; ಸ್ಥಳದ ಘನತೆಗೆ ಅಪಮಾನಕರ. ಕುಂದಣಕೊಪ್ಪದ ರತ್ನದಂತೆ. ನಮ್ಮ ದೇಶದ ಈಗಿನ ಚಿತ್ರಪಟಗಳು ಕಿಕ್ಕಿರಿದಿದ್ದುವು. ನೆಲದ ಪೀಠ ಪರಿಕರಗಳು ಇಡಿಕಿರಿದಿದ್ದುವು. ಆ ಪೀಠಪರಿಕರಗಳ ಮೇಲೆಲ್ಲಾ ಚಿತ್ರವಿಚಿತ್ರ ವಸ್ತುಗಳು ಇಟ್ಟಾಡುತ್ತಿದ್ದುವು. ಹೀಗಿದ್ದರೂ ಕೂಡ, ಈ ಕ್ರೂರ ವನ್ಯ ಜಂತುವಿಶೇಷಕ್ಕೆ ಈ ಸ್ಥಳ ಯೋಗ್ಯವಾಗಿ ಕಾಣುತ್ತಿರಲಿಲ್ಲ. ಇಷ್ಟರ ಜೊತೆಗೆ, ಅದು ಬಿಟ್ಟ ಉಸಿರು ಅಲ್ಲಿನ ಗಾಳಿಯೊಂದಿಗೆ ಬೆರೆಯುತ್ತಿತ್ತು. ಆ ಗಾಳಿಯನ್ನು ಅವನು ಉಚ್ಛ್ವಾಸಿಸುತ್ತಿದ್ದನು !

ಅಂತೂ, ಶ್ರೀಧರನ ಮನಸ್ಸಿನಲ್ಲಿ ಈ ಭಾವನೆಗಳು ಸ್ಪಷ್ಟವಾಗಿಯೋ ಅಸ್ಪಷ್ಟವಾಗಿಯೋ ರೂಪುಗೊಂಡಿದ್ದು, ಕಾರ್ಯಪ್ರೇರಕವಾದುವು. ಈ ಮಾನಸಿಕ ಕ್ರಿಯಾವಿಧಾನವನ್ನು 'ಪರ್ಯಾಲೋಚನೆ ತದನಂತರ ನಿರ್ಧಾರ' ಎಂದು ಕರೆಯುತ್ತೇವೆ. ನಾವು ವಿವೇಕಿಗಳು ಇಲ್ಲವೆ ಅವಿವೇಕಿಗಳು ಎನ್ನಿಸುವುದು ಈ ರೀತಿಯೆ. ಮಾಗಿಯ ಗಾಳಿಯಲ್ಲಿ ಒಣಗಿದ ಎಲೆಯೊಂದು ನೆಲದಮೇಲೋ

ಜಲದಮೇಲೋ ಬೀಳುವುದರಲ್ಲಿ ತನ್ನ ಜೊತೆಯೆಲೆಗಳಿಗಿಂತ ಹೆಚ್ಚಿನ ಅಥವಾ ಕಡಮೆಯ ಪ್ರಜ್ಞೆಯನ್ನು ತೋರುವುದೂ ಹೀಗೆಯೇ. ಮಾನವ ಕರ್ಮದ ಮರ್ಮ ಬಹಿರಂಗವಾದುದು. ಯಾವುದೋ ಒಂದು ಶಕ್ತಿ ನಮ್ಮ ಸ್ನಾಯುಗಳನ್ನು ಸಂಕೋಚನಗೊಳಿಸುತ್ತವೆ. ಪೂರ್ವಸಿದ್ಧತೆಯ ರೂಪದ ಈ ಸೂಕ್ಷ್ಮ ವ್ಯತ್ಯಾಸಗಳಿಗೆ ಇಚ್ಛಾ ಶಕ್ತಿ ಎಂದು ನಾಮಕರಣ ಮಾಡಿದರೆ ಬಾಧಕವಿಲ್ಲವಷ್ಟೆ ?

ಶ್ರೀಧರಶರ್ಮನು ಎದ್ದುನಿಂತು, ಸಾಧ್ಯವಾದರೆ ಸರ್ಪವನ್ನು ಎಚ್ಚರಗೊಳಿಸದ ರೀತಿಯಲ್ಲಿ ಬಾಗಿಲಮೂಲಕ ಮೆಲ್ಲಮೆಲ್ಲನೆ ಹಿಂದಕ್ಕೆ ಸರಿಯಲು ಅನುವಾದನು. ಸಾಮಾನ್ಯವಾಗಿ ಜನರು ಮಹಾಪುರುಷರ ಸಮ್ಮುಖದಲ್ಲಿ ಹೀಗೆ ನಿರ್ಗಮಿಸುತ್ತಾರೆ. ಏಕೆಂದರೆ, ಮಹತ್ವ ಒಂದು ಶಕ್ತಿ ; ಯಾವಾಗಲೂ ಭಯಕಾರಿ. ತಡೆಬಡೆಯಿಲ್ಲದೆ ಹಿಂದುಹಿಂದಕ್ಕೆ ನಡೆದುಹೋಗಿ, ತಪ್ಪದೆ ಬಾಗಿಲನ್ನು ಕಂಡುಕೊಳ್ಳಬಹುದೆಂದು ಅವನು ಬಲ್ಲನು. ಒಂದು ವೇಳೆ ಆ ಕ್ರೂರಜಂತು ಹಿಂಬಾಲಿಸಿದರೆ ? ಯಾವ ಅಭಿರುಚಿ ಗೋಡೆಗಳನ್ನು ಚಿತ್ರಮಯವಾಗಿ ಮಾಡಿತ್ತೋ ಅದೇ ಅಭಿರುಚಿ ಶಸ್ತ್ರ ಸಂಗ್ರಹಣವನ್ನೂ ಅಲ್ಲಿ ಒದಗಿಸಿಕೊಟ್ಟಿತ್ತು ; ಅದರಿಂದ ಸಂದರ್ಭಕ್ಕೆ ತಕ್ಕ ಒಂದನ್ನು ಅವನು ಸೆಳೆದುಕೊಳ್ಳಬಹುದಾಗಿತ್ತು. ಈ ನಡುವೆ, ಆ ಸರ್ಪದ ಕಣ್ಣುಗಳು ಮೊದಲಿಗಿಂತ ಹೆಚ್ಚಿನ ನಿರ್ದಯ ದೌಷ್ಟ್ಯದಿಂದ ಪ್ರೋಜ್ವಲವಾಗಿದ್ದುವು.

ಹಿಂದಕ್ಕೆ ಹೆಜ್ಜೆಯಿಡಬೇಕೆಂಬ ಉದ್ದೇಶದಿಂದ, ಶ್ರೀಧರಶರ್ಮನು ತನ್ನ ಬಲ ಅಡಿಯನ್ನು ನೆಲದಿಂದ ಬಿಡಿಸಿಕೊಂಡು ಮೇಲೆತ್ತಿದ್ದನು. ಆ ಕ್ಷಣವೇ ಹಾಗೆ ಮಾಡಲು ಹೇವರಿಕೆಯುಂಟಾಯಿತು.

"ನಾನು ಧೈರ್ಯಶಾಲಿಯೆಂದು ಎಲ್ಲ ತಿಳಿದಿದ್ದಾರೆ. ಧೈರ್ಯ ಪ್ರತಿಷ್ಠೆಗಿಂತ ಮೇಲಾದುದಲ್ಲವೇನು ? ಲಜ್ಜಾಸ್ಪದವಾದ ವರ್ತನೆಯನ್ನು ನೋಡಲು ಯಾರೂ ಇಲ್ಲವೆಂದ ಮಾತ್ರಕ್ಕೆ ನಾನು ಈ ರೀತಿ ಪಲಾಯನ ಮಾಡಿಬಿಡಲೆ ?" ಎಂದು ಅವನು ತನ್ನಲ್ಲಿ ತಾನು ಗೊಣಗಿಕೊಂಡನು.

ಎತ್ತಿದ ಕಾಲನ್ನು ಎತ್ತಿದ ಹಾಗೆಯೇ ಇಟ್ಟುಕೊಂಡು, ಕುರ್ಚಿಯೊಂದರ ಬೆನ್ನಿನಮೇಲೆ ಬಲಗೈಯ್ಯನ್ನೂರಿ, ಸ್ಥೈರ್ಯದಿಂದಿರಲು ಅವನು ಪ್ರಯತ್ನಿಸುತ್ತಿದ್ದನು.

"ಛೆ! ಎಂಥ ಅವಿವೇಕ ! ಹೆದರಿಕೊಂಡಿರುವಂತೆ ನನಗೆ ನಾನೇ ಕಾಣುವುದಕ್ಕೂ ಹೆದರುವಷ್ಟು ಮಹಾ ಅಂಜುಬುರುಕನೇನಲ್ಲ ನಾನು." ಎಂದು ಗಟ್ಟಿಯಾಗಿಯೇ ಹೇಳಿದನವನು.

ಮಂಡಿಯನ್ನು ಸ್ವಲ್ಪ ಬಗ್ಗಿಸಿ, ಪಾದವನ್ನು ಇನ್ನು ಸ್ವಲ್ಪ ಮೇಲಕ್ಕೆ ಎತ್ತಿದನು; ಇನ್ನೊಂದು ಪಾದಕ್ಕೆ ಅರ್ಧ ಅಂಗುಲದಷ್ಟು ಮುಂದುಗಡೆಯಲ್ಲಿ ಅದನ್ನು ಠಪಾರನೆ

ಇಟ್ಟನು ! ಅದು ಹೇಗೆ ಆ ಕ್ರಿಯೆ ನಡೆಯಿತೋ ಅವನು ಯೋಚಿಸಲಾರದವನಾಗಿದ್ದನು. ಎಡಗಾಲನ್ನು ಎತ್ತಿಟ್ಟಾಗಲೂ ಹಾಗೆಯೇ ಆಯಿತು; ಅದು ಬಲಗಾಲಿನ ಮುಂಭಾಗದಲ್ಲಿತ್ತು. ಹಿಂದೆ ಕುರ್ಚಿಯ ಮೇಲಿದ್ದ ಕೈ ಅದನ್ನು ಬಲವಾಗಿ ಹಿಡಿದಿತ್ತು ; ತೋಳು ಸ್ವಲ್ಪ ನೆಟ್ಟನೆ ಹಿಂದಕ್ಕೆ ಚಾಚಿತ್ತು. ಹಿಡಿದಿದ್ದ ಹಿಡಿತವನ್ನು ಬಿಟ್ಟು ಬಿಡಲು ಅವನಿಗೆ ಇಷ್ಟವಿಲ್ಲವೆಂದು ಯಾರಿಗಾದರೂ ಕಾಣುವಂತಿತ್ತು. ಸರ್ಪದ ಭಯಂಕರವಾದ ಮೂರ್ತಿ ಮೊದಲಿನಂತೆಯೇ ಕುತ್ತಿಗೆಯ ಮಟ್ಟದಲ್ಲಿ ಒಳ ಸುರಳಿಯಿಂದ ಹೊರಹಾಯ್ದಿತ್ತು. ಅದು ಚಲಿಸಿಯೇ ಇರಲಿಲ್ಲ: ಆದರೆ, ಈಗ ಅದರ ಕಣ್ಣುಗಳು ಅಸಂಖ್ಯಾತ ಪ್ರಕಾಶಮಾನ ಸೂಚಿಕಿರಣಗಳನ್ನು ಬೀರುವ ವಿದ್ಯುತ್ ಕಿಡಿಗಳಾಗಿದ್ದುವು.

ಅವನು ವಿವರ್ಣನಾಗಿ ಬೂದಿ ಬಳಿದುಕೊಂಡಂತೆ ಬಿಳಿಚಿಕೊಂಡಿದ್ದನು. ಕುರ್ಚಿಯನ್ನೂ ತನ್ನೊಡನೆ ಎಳೆದುಕೊಂಡು, ಮರಳಿ ಇನ್ನೊಂದು ಹೆಜ್ಜೆ ಮುಂದಿಟ್ಟನು ; ಮತ್ತೂ ಒಂದು ಹೆಜ್ಜೆಯಿಟ್ಟನು. ಕೈಬಿಟ್ಟಾಗ ಕುರ್ಚಿ ನೆಲದ ಮೇಲೆ ದಢಾರನೆ ಬಿದ್ದಿತು. ಅವನು ನರಳುವಂತೆ ಚೀರಿದನು ; ಸರ್ಪವು ಚಲಿಸಲೂ ಇಲ್ಲ, ಸದ್ದನ್ನೂ ಮಾಡಲಿಲ್ಲ ; ಆದರೆ ಅದರ ಕಣ್ಣುಗಳು ಮಾತ್ರ ಪ್ರಜ್ವಲಿಸುವ ಎರಡು ರವಿಗಳಂತಿದ್ದುವು. ಅವು ಸರ್ಪವನ್ನೇ ಸಂಪೂರ್ಣವಾಗಿ ಮರೆಮಾಡಿದ್ದವೆನ್ನಬೇಕು. ದಟ್ಟವಾದ ಹಾಗೂ ನಿಚ್ಚಳವಾದ ಬಣ್ಣಬಣ್ಣಗಳ, ಬರುಬರುತ್ತ ದೊಡ್ಡವಾಗುವ ಉಂಗುರಗಳನ್ನು ಅವು ಹೊರಹೊಮ್ಮಿಸುತ್ತಿದ್ದುವು. ಆ ಉಂಗುರಗಳು ಅತ್ಯಂತ ದೊಡ್ಡದಾದಾಗ, ಒಂದಾದಮೇಲೆ ಒಂದರಂತೆ ಸಾಬೂನು ಗುಳ್ಳೆಗಳ ಹಾಗೆ ಮಾಯವಾಗುತ್ತಿದ್ದುವು. ಅವು ಅವನ ಮುಖವನ್ನೇ ತಾಗಿ ಸಾಗಿಹೋಗುತ್ತಿದ್ದುವು. ಒಂದು ದೊಡ್ಡ ಭೇರಿಯ ನಿರಂತರವಾದ ಬಡಿತ ಎಲ್ಲಿಂದಲೋ ಅವನಿಗೆ ಕೇಳಿಬರುತ್ತಿತ್ತು; ಅದರೊಂದಿಗೆ. ಗಾಂಧರ್ವವೀಣಾಸ್ವರಗಳಂತೆ ಊಹಿಸಲಾಗದಷ್ಟು ಇಂಪಾಗಿ, ಒಮ್ಮೆ ಅಲ್ಲಿ ಒಮ್ಮೆ ಇಲ್ಲಿ ಎನ್ನುವಂತೆ, ಉಕ್ಕಿ ಕೇಳಿಬರುತ್ತಿತ್ತು ದೂರದ ಸಂಗೀತ. ಪ್ರಾಚೀನ ಭಾರತದ ಸಾರ್ವಭೌಮನೊಬ್ಬನ ರಾಜಮಂದಿರದಲ್ಲಿ ಆತನು ಉಪ್ಪವಡಿಸಲೆಂದು ಆಸ್ಥಾನದ ಗಾಯಕನು ಉದಯರಾಗವನ್ನು ಹಾಡುತ್ತಿರುವಂತೆಯೂ, ತಾನು ಅಲ್ಲಿಯೇ ನಿಂತುಕೊಂಡು ಶತಮಾನಗಳ ಮೌನವನ್ನು ಭೇದಿಸಿಕೊಂಡು ಬರುತ್ತಿದ್ದ ಆ ದಿವ್ಯ ಸಂಗೀತವನ್ನು ಆಲಿಸುತ್ತಿರುವಂತೆಯೂ ಶ್ರೀಧರಶರ್ಮನು ಭಾವಿಸಿಕೊಂಡನು.

ಸಂಗೀತವು ನಿಂತಿತು ; ಹಾಗೆನ್ನುವುದಕ್ಕಿಂತ ದೂರ ದೂರಕ್ಕೆ ಹಿಮ್ಮೆಟ್ಟುತ್ತಿರುವ ಗುಡಿಗಿನ ಮೊಳಗಿನಂತೆ ಕ್ರಮ ಕ್ರಮವಾಗಿ ಮಂದವಾಗುತ್ತ ಬಂತು ಎನ್ನಬಹುದು.

ಆಗ ಅವನ ಮುಂದೆ ಚಾಚಿ ಗೋಚರವಾಯಿತು ಒಂದು ಸುಂದರ ದೃಶ್ಯ : ಫಳಫಳಿಸುವ ಬಿಸಿಲು–ಮಳೆ ; ವರ್ಣರಂಜಿತವಾದ ಬಾಗಿದ ಕಾಮನಬಿಲ್ಲು ; ಅದರ ದೈತ್ಯ ಚಾಪಾಕೃತಿಯ ಅಳವಿನಲ್ಲಿ ನೂರಾರು ನಗರಗಳ ಹರವುನೋಟ. ದೂರದಲ್ಲಿ ಮಧ್ಯದಲ್ಲೊಂದು ಮಹಾಸರ್ಪ ; ಅದರ ತಲೆಯಮೇಲೊಂದು ಕಿರೀಟ; ಅದು ತನ್ನ ಭಾರಿ ಸುರುಳಿಗಳೊಳಗಿಂದ ತಲೆಯನ್ನು ಹೊರಹಾಕಿ ಅವನ ಸತ್ತ ತಾಯಿಯ ಕಣ್ಣುಗಳನ್ನು ನೆನಪಿಗೆ ತರುವ ಕಣ್ಣುಗಳಿಂದ ಅವನನ್ನು ನೋಡತೊಡಗಿತು. ತಟ್ಟನೆ ಈ ಮೋಹಕ ದೃಶ್ಯವು ರಂಗಭೂಮಿಯ ದೃಶ್ಯದ ತೆರೆ ಮೇಲೇಳುವಂತೆ ಬೇಗನೆ ಮೇಲೆದ್ದು ಕಣ್ಮರೆಯಾಗಿ ಶೂನ್ಯದಲ್ಲಡಗಿತು. ಆಗ ಅವನ ಮುಖ ಮತ್ತು ಎದೆಗಳ ಮೇಲೆ ಏನೋ ಬಲವಾಗಿ ಹೊಡೆದಂತಾಯಿತು. ಅವನು ನೆಲದ ಮೇಲೆ ಬಿದ್ದಿದ್ದನು ; ಅವನ ಒಡೆದ ಮೂಗಿನಿಂದಲೂ ಬಿರಿದ ತುಟಿಗಳಿಂದಲೂ ರಕ್ತ ಹರಿಯುತ್ತಿತ್ತು. ಕ್ಷಣ ಕಾಲ ಅವನು ದಿಗ್ಭ್ರಮೆ ಹಿಡಿದು, ನಿಶ್ಚೇಷ್ಟಿತನಾಗಿ, ಕಣ್ಣುಮುಚ್ಚಿ, ಬಾಗಿಲಿಗೆ ಅಭಿಮುಖನಾಗಿ ಮಲಗಿದ್ದನು. ಕೆಲವು ಕ್ಷಣಗಳಲ್ಲಿಯೆ ಎಚ್ಚರಗೊಂಡನು ; ಆಗ, ತಾನು ಕೆಳಗೆ ಬಿದ್ದ ಕಾರಣ ಕಣ್ಣುಗಳನ್ನು ಬೇರೆಯಕಡೆಗೆ ತಿರುಗಿಸಿದಂತಾಗಿ, ತನ್ನನ್ನು ಬಂಧಿಸಿದ್ದ ಮೋಹಶಕ್ತಿಯಿಂದ ತಾನು ವಿಮುಕ್ತನಾಗಿರುವೆನೆಂದು ಅರಿತನು. ಈಗ ತನ್ನ ದೃಷ್ಟಿಯನ್ನು ಬೇರೆಯ ಕಡೆಗೆ ಹೊಳಿಸಿ ಇಟ್ಟುಕೊಂಡರೆ, ತಾನು ಹಿಮ್ಮೆಟ್ಟಲು ಸಾಧ್ಯವಾಗಬಹುದು ಎಂದು ಭಾವಿಸಿದನು. ಆದರೆ, ಆ ಸರ್ಪವು ಈಗ ಕಣ್ಣಿಗೆ ಬೀಳದಿದ್ದರೂ, ತನ್ನ ಮೇಲೆ ಎಗರಿಬಿದ್ದು ತನ್ನ ಕೊರಳಿಗೆ ಸುತ್ತಿಹಾಕಿಕೊಳ್ಳಲು ಹವಣಿಸುತ್ತಿದೆ–ಎಂಬ ಆಲೋಚನೆ ಬಹು ಭಯಂಕರವೆನಿಸಿತು. ಆಗ ಅವನು ತನ್ನ ತಲೆಯೆತ್ತಿದನು ; ಮರಳಿ ಆ ವಿಪತ್ಕಾರಕ ನೇತ್ರಗಳನ್ನೊಮ್ಮೆ ದೃಷ್ಟಿಸಿ ನೋಡಿದನು ; ಮರಳಿ ಬಂಧನಕ್ಕೊಳಗಾದನು.

ಸರ್ಪವು ಚಲಿಸಲಿಲ್ಲ ; ಭಾವನಾಶಕ್ತಿಯ ಮೇಲೆ ತನ್ನ ಪ್ರಭಾವವನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಂತೆ ಕಾಣುತ್ತಿತ್ತು ; ಕೆಲವು ಕ್ಷಣಗಳ ಹಿಂದಿನ ವೈಭವ ಪೂರ್ಣವಾದ ಮಾಯಾದೃಶ್ಯಗಳು ಪುನಃ ಕಾಣಿಸಿಕೊಳ್ಳಲಿಲ್ಲ. ಚಪ್ಪಟೆಯಾದ ಮೆದುಳಿಲ್ಲದ ಅದರ ಹಣೆಯ ಕೆಳಗೆ ಕಪ್ಪನೆಯ ಮಣಿನೇತ್ರಗಳು ಮೊದಲಿನಂತೆಯೇ ಫಳಫಳಿಸುತ್ತಿದ್ದುವು ; ಅವುಗಳ ನೋಟ ಹೇಳಲಾಗದಷ್ಟು ಕ್ರೂರವಾಗಿದ್ದುವು. ತನಗೆ ಜಯ ಖಂಡಿತ ಎಂದು ತಿಳಿದು, ತನ್ನ ಮಾಯಾ ಜಾಲವನ್ನು ಇನ್ನು ಬೀಸುವುದಿಲ್ಲವೆಂದು ನಿರ್ಧರಿಸಿದೆಯೋ ಎಂಬಂತಿತ್ತು ಆ ಪ್ರಾಣಿ.

ಈಗಲೀಗ ಭಯಪೂರ್ಣ ದೃಶ್ಯವೊಂದು ಮೊದಲಾಯಿತು. ತನ್ನ ಶತ್ರುವಿಗೆ

ಒಂದು ಗಜದಷ್ಟು ಅಂತರದಲ್ಲಿ ನೆಲದಮೇಲೆ ಮುಖವಡಿಯಾಗಿ ಮಲಗಿದ್ದ ಅವನು ಮೊಳಕೈಯೂರಿ ತನ್ನ ದೇಹದ ಶಿರೋಭಾಗವನ್ನು ಮೇಲೆತ್ತಿದನು. ಅವನ ತಲೆ ಹಿಂದಕ್ಕೆ ಒಲೆದಿತ್ತು ; ಅವನ ಕಾಲುಗಳು ಪೂರ್ತಿ ನೀಡಿದಾಗಿ ಚಾಚಿದ್ದುವು. ರಕ್ತ ಸುರಿದು ಸುರಿದು ಅವನ ಮುಖ ಬೆಳ್ಳಗಾಗಿತ್ತು ; ಎಷ್ಟು ಸಾಧ್ಯವೋ ಅಷ್ಟು ಅಗಲವಾಗಿ ನೋಯುವ ಮಟ್ಟಿಗೆ ಕಣ್ಣು ತೆರೆದಿದ್ದುವು. ತುಟಿಗಳ ಮೇಲೆ ನೊರೆ ಕವಿದು, ಹುಳುಕು ಹಳುಕಾಗಿ ಕೆಳಕ್ಕೆ ಬೀಳುತ್ತಿದ್ದುವು. ಅವನ ದೇಹದಾದ್ಯಂತ ಬಲವಾದ ಎಳೆತ ಮೊದಲಾಗಿ, ಬಹುಮಟ್ಟಿಗೆ ಸರ್ಪಾಕೃತಿಯಲ್ಲಿ ಅದು ಏಳೂಬೀಳಾಗುತ್ತಿತ್ತು. ಅವನು ತನ್ನ ಕಾಲುಗಳನ್ನು ಆ ಪಕ್ಕದಿಂದ ಈ ಪಕ್ಕಕ್ಕೆ ಆಡಿಸುತ್ತ, ಸೊಂಟದ ಬಳಿಬಾಗಿ ಏಳುವುದರಲ್ಲಿದ್ದನು. ಆದರೆ, ಪ್ರತಿಕ್ಷಣವೂ ಅವನು ಸರ್ಪಕ್ಕೆ ತುಸುತುಸು ಹತ್ತಿರವಾಗುತ್ತಿದ್ದನು. ಉರಿಕೊಂಡು ಹಿಂದಕ್ಕೆ ಚಲಿಸುವ ಉದ್ದೇಶದಿಂದ ಅವನು ಕೈಗಳನ್ನು ಮುಂದಕ್ಕೆ ಚಾಚುತ್ತಿದ್ದನು ; ಆದರೂ, ತನ್ನ ಮೊಳಕೈಯೂರಿ ಮುಂದು ಮುಂದಕ್ಕೇ ಸರಿದುಹೋಗುತ್ತಿದ್ದನು.

ಡಾ॥ ಮೆಹ್ತಾ, ಅವನ ಹೆಂಡತಿ, ಪುಸ್ತಕಭಂಡಾರದಲ್ಲಿ ಕುಳಿತಿದ್ದರು. ಬಹಳ ಅಪೂರ್ವವಾಗಿ ಆ ವಿಜ್ಞಾನಿ ವಿನೋದದ ಮನೋಭಾವ ಹೊಂದಿದ್ದರು.

"ಇನ್ನೊಬ್ಬರು ಪ್ರಾಣಿ ಸಂಗ್ರಾಹಕರೊಂದಿಗೆ ಅದಲುಬದಲು ಮಾಡಿಕೊಂಡು, ನಾನು ಇದೇ ತಾನೇ ವ್ಯಾಳಭಕ್ಷಕಜಾತಿಯ ಉತ್ಕೃಷ್ಟ ಮಾದರಿಯೊಂದನ್ನು ಸಂಪಾದಿಸಿದ್ದೇನೆ" ಎಂದು ಆತ ಹೇಳಿದನು.

"ಅದು ಎಂಥಾದ್ದೋ ?" ಎಂದು ಆಕೆ ಅಷ್ಟೇನೂ ಆಸಕ್ತಿ ವಹಿಸದೆ ಪ್ರಶ್ನಿಸಿದಳು.

"ಅಯ್ಯೋ ದೇವರೆ! ಎಂಥ ಮೌಢ್ಯ! ವಿವಾಹವಾದ ಮೇಲೆ ತನ್ನ ಪತ್ನಿಗೆ ಸಂಸ್ಕೃತಭಾಷೆ ಗೊತ್ತಿಲ್ಲವೆಂದು ಪತಿಯಾದವನಿಗೆ ತಿಳಿದರೆ, ಆತನು ಆ ಕಾರಣದಿಂದ ವಿವಾಹವಿಚ್ಛೇದನವನ್ನು ಪಡೆಯಬಹುದು, ಹೊಸ ಕಾನೂನಿನ ಪ್ರಕಾರ ! 'ವ್ಯಾಳಭಕ್ಷಕ' ಎಂದರೆ, ಇತರ ಹಾವುಗಳನ್ನು ತಿನ್ನುವ ಒಂದು ಜಾತಿಯ ಹಾವು."

ಆಕೆ ಯಾವುದೋ ಜ್ಞಾನದಲ್ಲಿ ದೀಪವನ್ನು ಪಕ್ಕಕ್ಕೆ ಸರಿಸುತ್ತ ನುಡಿದಳು: "ಅದು ನೀವು ಸಾಕಿರುವ ಹಾವುಗಳನ್ನೆಲ್ಲ ತಿಂದುಬಿಡುತ್ತದೆ ಹಾಗಾದರೆ ! ಅದುಸರಿ, ಅದು ಇತರ ಹಾವುಗಳನ್ನು ಹೇಗೆ ತಿನ್ನುತ್ತದೆ ? ಅವುಗಳನ್ನು ಆಕರ್ಷಿಸಿ ತನ್ನ ಬಳಿಗೆ ಸೆಳೆದುಕೊಳ್ಳುತ್ತದೆಯೆ ?" ಸ್ವಲ್ಪ ತುಂಟತನವನ್ನು ತೋರುತ್ತ, ಡಾಕ್ಟರ್ ತಿಳಿಸಿದರು : "ಅದು ನಿನ್ನ ಹಾಗೆಯೇ, ಪ್ರಿಯೆ ! ... ಆದರೂ, ಸರ್ಪದ

ಆಕರ್ಷಣಶಕ್ತಿಯ ಬಗ್ಗೆ ಇರುವ ಆ ಮೂಢನಂಬಿಕೆಯನ್ನು ಪ್ರಸ್ತಾಪಿಸಿದರೆ, ನನಗೆ ಮೈಯೆಲ್ಲಾ ಉರಿಯುತ್ತೆ."

ಇದ್ದಕ್ಕಿದ್ದಂತೆಯೆ ಭಾರಿ ಚೀತ್ಕಾರವೊಂದು, ಪಾತಾಳಗವಿಯೊಳಗೆ ರಾಕ್ಷಸ ವ್ಯಕ್ತಿಯಿದ್ದು ಆರ್ಭಟಿಸುತ್ತಿದ್ರೆ ಹೇಗೋ ಹಾಗೆ, ಆ ನಿಶ್ಶಬ್ದವಾದ ಮನೆಯ ತುಂಬ ಮೊಳಗಿಡುತ್ತ, ಅವರ ಸಂಭಾಷಣೆಗೆ ವಿಘ್ನವುಂಟುಮಾಡಿತು. ಭೀಕರವಾಗಿ ಸುಸ್ಪಷ್ಟವಾಗಿ ಆ ಕೂಗು ಮತ್ತೆ ಮತ್ತೆ ಧ್ವನಿಸಿತು. ಮೆಹ್ತಾ ಗಾಬರಿಗೊಂಡರು. ಆಕೆ ಬೆದರಿ ಬಣ್ಣಗೆಟ್ಟು ಮೂಕಳಾದಳು; ಇಬ್ಬರೂ ಕುಳಿತಿದ್ದವರು ನೆಗೆದೆದ್ದು ನಿಂತರು.

ಕೊನೆಯ ಸಲದ ಚೀರಾಟದ ಮಾರ್ಮೊಳಗು ಕ್ಷೀಣವಾಗುವುದಕ್ಕೆ ಮೊದಲೇ ಡಾಕ್ಟರ್ ಕೋಣೆಯಿಂದ ಹೊರಬಿದ್ದು. ಒಂದೊಂದು ಸಲಕ್ಕೆ ಎರಡೆರಡು ಮೆಟ್ಟಲಂತೆ ಮಹಡಿಯ ಮೆಟ್ಟಲುಗಳ ಮೇಲೆ ಹಾರಿಹೋಗುತ್ತಿದ್ದರು ಶ್ರೀಧರಶರ್ಮನಿದ್ದ ಕೋಣೆಯ ಮುಂಭಾಗದ ನಡವೆಯಲ್ಲಿ ಆತನು ಕೆಲಮಂದಿ ಸೇವಕರನ್ನು ಸಂಧಿಸಿದರು; ಅವರು ಮೇಲ್ಮಹಡಿಯಿಂದ ಅಲ್ಲಿಗೆ ಬಂದಿದ್ದರು. ಅವರೆಲ್ಲರೂ ಒಟ್ಟಿಗೆ ಬಾಗಿಲ ಕಡೆಗೆ ಧಾವಿಸಿದರು ; ಅದನ್ನು ತಟ್ಟದೆಯೆ ನುಗ್ಗಿದಾಗ, ಅಗುಳೀ ಹಾಕದಿದ್ದ ಬಾಗಿಲು ತಾನಾಗಿ ತೆರೆಯಿತು. ಶ್ರೀಧರಶರ್ಮನು ನೆಲದಮೇಲೆ ಬೆನ್ನು ಮೇಲಾಗಿ ಸತ್ತು ಒರಗಿದ್ದನು. ಆತನ ತಲೆ ತೋಳುಗಳು ಮಂಚದ ಅಡಿಯ ಅಡ್ಡ ಕಂಬಿಗಳ ಕೆಳಗೆ ಅರ್ಧ ಮರೆಯಾಗಿದ್ದುವು. ಅವರು ಕಳೇಬರವನ್ನು ಈಚೆಗೆಳೆದು, ಮುಖ ಮೇಲಾಗಿ ಮಾಡಿದರು. ಮುಖದ ತುಂಬ ರಕ್ತ, ನೊರೆ, ಮೆತ್ತಿಕೊಂಡಿದ್ದುವು ; ಕಣ್ಣುಗಳು ತೆಟ್ಟತೆರೆದು ನಿಟ್ಟನೆ ನೋಡುತ್ತಿದ್ದುವು– ಒಟ್ಟುನೋಟ ಭಯಂಕರವಾಗಿತ್ತು.

ವಿಜ್ಞಾನಿ ಮಂಡಿಯೂರಿ ಕುಳಿತು, ಮೃತನ ಹೃದಯದ ಮೇಲೆ ಕೈಯಿಟ್ಟು "ಮೂರ್ಛೆ ಬಂದು ಸತ್ತಿದ್ದಾನೆ"–ಎಂದರು. ಹಾಗೆ ಕುಳಿತಿದ್ದಾಗ, ಆತನ ದೃಷ್ಟಿ ಮಂಚದ ಕೆಳಗೆ ಹರಿಯಿತು. "ಎಲ ಎಲಾ ! ಹಾಳಾದ್ದು ಇದು ಹೇಗೆ ಇಲ್ಲಿ ಬಂತು" ಎಂದರು.

ಆತ ಮಂಚದಡಿಯಲ್ಲಿ ತೂರಿ, ಇನ್ನೂ ಸುರುಳಿಸುತ್ತಿಕೊಂಡಿದ್ದ ಆ ಸರ್ಪವನ್ನು ಹೊರಕ್ಕೆಳೆದು, ಅದನ್ನು ಕೋಣೆಯ ಮಧ್ಯಕ್ಕೆ ಬಿಸಾಡಿದರು; ಅಲ್ಲಿಂದ ಅದು ಕರ್ಕಶವಾದ ಕೀಚುಸದ್ದಿನೊಂದಿಗೆ ನುಣ್ಣನೆ ಮಿರುಗುವ ನೆಲದ ಮೇಲೆ ಸರಿದುಹೋಗಿ, ಎದುರು ಗೋಡೆಯಂಚಿನಲ್ಲಿ ನಿಶ್ಚಲವಾಗಿ ಬಿದ್ದಿತು.

ಸತ್ತ ಸರ್ಪ ಅದು–ಒಳಗೆಲ್ಲಾ ಹೊಟ್ಟನ್ನು ಗಿಡಿದು ತುಂಬಿದ್ದು ; ಅದರ ಕೋರೈಸುವ ಕಣ್ಣುಗಳು, ಕೇವಲ ಕರಿಯಮಣಿಗಳೆರಡು !*

Ambroce Bierce ಎಂಬ ಆಂಗ್ಲ ಕಥೆಗಾರನ The Snake ಎಂಬ ಕಥೆಯ ರೂಪಾಂತರ. "ನಿಲ್ದಾಣಗಳ ನಡುವೆ" ಕಥಾಸಂಕಲನದಿಂದ.

೨. ನಿರಾಶ್ರಿತೆ ಮತ್ತು ಅಭಿಸಾರಿಕೆ

ಅವಳು ನನ್ನ ಕಡೆಗೆ ಸಾರಿ ಬಂದಳು ; ಹಿಂದೆ ಮುಂದೆ ನೋಡುತ್ತ, ಸುತ್ತ ಮುತ್ತ ದೃಷ್ಟಿ ಹರಿಸುತ್ತ, ತನ್ನನ್ನು ಯಾರಾದರೂ ಗುರುತಿಸಿಯಾರೋ ಏನೋ ಎಂಬ ಕಳವಳವನ್ನು ಅಡಗಿಸಲು ಪ್ರಯತ್ನಿಸುತ್ತ, ಯಾರನ್ನೋ ಹುಡುಕುತ್ತಿರುವಂತೆ ನನ್ನ ಬಳಿಗೆ ಬಂದಳು. ಸಂಶಯ ಭಾವದಿಂದ ತಲೆ ತಗ್ಗಿಸಿ ನನ್ನೆದುರು ನಿಂತಳು.

ಶುಭ್ರವಸ್ತ್ರ ಧಾರಿಣಿಯವಳು ; ನಿರಾಭರಣ ಸುಂದರಿಯವಳು ; ದಿವ್ಯತೇಜಃ ಪುಂಜ ಪ್ರಭಾಮಂಡಿತೆಯವಳು.

ನನಗವಳು ಅಪರಿಚಿತೆ.

"ನೀನು ಯಾರು ?" ಎಂದು ಕೇಳಿದೆ, ಕುತೂಹಲದಿಂದ.

"ಸತ್ಯ" ಎಂದು ಉತ್ತರಿಸಿದಳು.

"ನಿನ್ನ ವಿಚಾರ ಕೇಳಿ ಬಲ್ಲೆ. ಅಪರಿಚಿತೆಯಂತೆ ಕಂಡದ್ದಕ್ಕಾಗಿ ಕ್ಷಮಿಸು."

"ಚಿಂತೆಯಿಲ್ಲ. ಬಹುಮಟ್ಟಿಗೆ ನನ್ನನ್ನು ಯಾರೂ ಕಂಡರಿಯರು. ಯಾರ ಬಳಿಗೆ ಹೋದರೂ 'ನೀನು ಯಾರು ?' ಎಂದೇ ಕೇಳುತ್ತಾರೆ. ನನ್ನ ಪರಿಚಯವನ್ನು ಎಷ್ಟು ಹೇಳಿಕೊಂಡರೂ ಯಾರೂ ನನ್ನನ್ನು ಗುರುತಿಸರು ; ಅರ್ಥಮಾಡಿಕೊಳ್ಳರು" ಎಂದು ವ್ಯಸನಪಟ್ಟು ನುಡಿದಳು.

"ನನ್ನಿಂದ ನಿನಗೆ ಏನಾಗಬೇಕು ?"

"ನಿನ್ನ ಆಶ್ರಯ ಬಯಸಿ ಬಂದಿದ್ದೇನೆ."

"ನನ್ನ ಆಶ್ರಯವೇ ? ಯಾಕೆ ?"

"ನಾನು ನಿರಾಶ್ರಿತೆ. ನಾನು ಆಶ್ರಯಿಸಿದ ಪುರುಷಸಿಂಹರೆಲ್ಲರೂ ನನಗಾಗಿ ಪ್ರಾಣಾರ್ಪಣೆ ಮಾಡಬೇಕಾಗಿ ಬಂದಿದೆ ; ಇಲ್ಲವೆ ಕೊನೆ ಮೊದಲಿಲ್ಲದ ಕಷ್ಟಪರಂಪರೆಗೆ ಗುರಿಯಾಗಿದ್ದಾರೆ. ನೀನು ನನಗೆ ಆಶ್ರಯ ಕೊಡಲು ಸಾಧ್ಯವೆ? ಧೈರ್ಯವಿದೆಯ"

"ಯೋಚನೆ ಮಾಡಿ ನಾಳೆ ಹೇಳುತ್ತೇನೆ."

"ನಾಳೆ.......ನಾಳೆಯೆ ?.......ವರ್ಷಗಟ್ಟಳೆ ನಿರಾಶ್ರಿತೆಯಾಗಿ ಅಲೆಯುತ್ತಿರುವ

ನನಗೆ ಒಂದಿರುಳು ನೂಕುವುದು ಕಷ್ಟವಾಗದು. ಆದರೆ, ನಿನ್ನನ್ನು ಕಂಡ ಕೂಡಲೆ ನಿನ್ನಲ್ಲಿ ನನಗೆ ನಂಬಿಕೆ ಹುಟ್ಟಿತು ; ಕೇಳಿದೆ."

"ನಾನು ಸಣ್ಣ ಮನುಷ್ಯ ; ಸಾಧಾರಣ ವ್ಯಕ್ತಿ."

"ಚಿಂತೆಯಿಲ್ಲ, ನನಗೆ ಬೇಕಾದದ್ದು ನಿಲ್ಲಲು ನೆಲೆ. ಪ್ರಚಾರವಲ್ಲ, ಕೀರ್ತಿಯಲ್ಲ."

"ನೀನು ಹೇಳಿದ್ದನ್ನು ಕೇಳಿದಮೇಲೆ, ನಿನಗೆ ಆಶ್ರಯ ಕೊಡಬೇಕಾದರೆ ನಿಜವಾಗಿ ಯೋಚನೆಮಾಡಬೇಕು. ನಾಳೆ ಬಂದರೆ, ಯೋಚನೆ ಮಾಡಿ,...."

"ನಾಳೆ.......ನಾಳೆ...... ಹಾಗೆಯೇ ಆಗಲಿ" ಎಂದು ನಿರಾಶೆಯಿಂದ ತಲೆ ತಗ್ಗಿಸಿ ಹೊರಟುಹೋದಳು ಸತ್ಯವತಿ.

ನಾನು ನಿರೀಕ್ಷಿಸಿದ್ದಂತೆ, ಮಾರನೆಯ ಬೆಳಗ್ಗೆ ಅವಳು ಬಂದಳು. ಅತ್ಯಾದರದಿಂದ ಅವಳನ್ನು ಸ್ವಾಗತಿಸಿದೆ.

ಆದರೆ, ನನಗೆ ಆಶ್ಚರ್ಯವಾಯಿತು. ಇವಳೇ ಅವಳು ಎಂದು ನಂಬುವಂತಿರಲಿಲ್ಲ. ಅದೇ ಆಕಾರ. ಅದೇ ರೂಪ, ಅದೇ ಸೌಂದರ್ಯ. ಆದರೆ, ಎಂಥ ಮಾರ್ಪಾಟು !

ಇಂದವಳು ಸರ್ವಾಲಂಕಾರ ಭೂಷಿತೆ; ಸುಪ್ರಸನ್ನೆ; ಹಾವಭಾವ ವಿಲಾಸರಮ್ಯ. ನೀನಿಂದು ? 'ನೀನು ಯಾರು ?' ಎಂದು ಕೇಳುವಂತೆಯೇ ಇರುವೆ. ನನ್ನ ಕಣ್ಣನ್ನು ನಾನೇ ನಂಬಲಾರೆ. ಇರಲಿ. ನಿನ್ನೆ ಇಲ್ಲಿಂದ ಹೋಗುವಾಗ ವ್ಯಾಕುಲೆ ಯಾಗಿದ್ದಂತೆ ಕಂಡೆ. ಈಗ ಮನಸ್ಸಿಗೆ ನೆಮ್ಮದಿ ತಾನೆ ? ಯೋಚನೆ ಮಾಡಿ, ನಿರ್ಧರಿಸಿದ್ದೇನೆ...........ಒಳಕ್ಕೆ ಬಾ, ಸತ್ಯವತೀದೇವಿ......."

ಅಪಚಾರಗೊಂಡವಳಂತೆ ನುಡಿದಳು, ಹೊಸಿಲಬಳಿ ನಿಂತಿದ್ದ ಹೊಸಬಳು:

"ನಾನು ಸತ್ಯವತೀ ದೇವಿಯಲ್ಲ. ಮಿಥ್ಯಾಮೋಹಿನಿ, ತಿಳಿಯಿತೆ?"

"ಹ್ಞಾ! ಮಿಥ್ಯಾಮೋಹಿನಿಯೇ ? ಸತ್ಯವತಿಯ ಹಾಗೆಯೇ ಇದ್ದೀಯೆ !"

"ಥೂ ! ಅವಳ ಹೆಸರೆತ್ತಬೇಡ. ಅವಳು ನನ್ನ ಆಜನ್ಮವೈರಿ! ಅವಳ ನೆರಳಿದ್ದ ಕಡೆಯೂ ನಾನು ಸುಳಿಯುವುದಿಲ್ಲ."

"ನನ್ನಿಂದ ನಿನಗೆ ಏನಾಗಬೇಕು ? ಆಶ್ರಯ ಬೇಕೆ, ಇಲ್ಲವೆ........."

"ಅಸಂಖ್ಯಾತರ ಆಶ್ರಯ ನನಗುಂಟು. ನಾನು ಅನಾಥೆಯಲ್ಲ. ನಿನ್ನನ್ನು ಒಲಿದು ಬಂದಿದ್ದೇನೆ. ನನ್ನನ್ನು ವರಿಸು."

"ಯೋಚನೆ ಮಾಡಿ ನಾಳೆ ಹೇಳುತ್ತೇನೆ."

"ನಾಳೆ ಎಂದರೆ ನಷ್ಟ. ಇಂದೇ ವರಿಸಿದರೆ ಇಂದ್ರಲೋಕದ ಸಕಲ

ಸೌಭಾಗ್ಯಗಳೇ ನಾನು ನಿನಗೆ ತರುವ ಬಳುವಳಿ."

"ನಿನ್ನ ಸಹವಾಸ ನನಗೆ ಬೇಡ ಮಹಾರಾಯಿತಿ, ದಯವಿಟ್ಟು ಹೊರಟು ಹೋಗು" ಎಂದೆನ್ನುವಷ್ಟರಲ್ಲಿಯೇ ಅವಳು ನನ್ನ ಕೊರಳಿಗೆ ಹೂಮಾಲೆ ಹಾಕಿ ಹಾರಿಹೋಗಿದ್ದಳು.

"ಅಯ್ಯೋ" ಎಂದು ಕೈಕೈ ಹಿಸುಕಿಕೊಳ್ಳುತ್ತಿರುವಷ್ಟರಲ್ಲಿ–ಎಚ್ಚರವಾಯಿತು.

"ದೇವರ ದಯದಿಂದ, ಕನಸು" ಎಂದು ಸಮಾಧಾನಗೊಂಡೆ.

"ಅದೂ ನಾನೇ" ಎಂದು ಮಿಥ್ಯೆ ನನ್ನೆದುರು ಪ್ರತ್ಯಕ್ಷಳಾಗಿ ನಸುನಗುತ್ತ ನಿಂತಿದ್ದಳು.*

---

* E.V. Lucas ಅವರ Truth and Another ಎಂಬ ಬರಹದಿಂದ ಪ್ರೇರಿತ. (ವಿಲ್ದಾಣಗಳ ನಡುವೆ – ಕಥಾಸಂಕಲನದಿಂದ)

ಗುಂಪು ೪ – ವಿಜ್ಞಾನ (ಲೇಖನಗಳು)

೧. ಠಾಕೂರರು ಮತ್ತು ಪಾಶ್ಚಾತ್ಯ ಸಂಗೀತ
೨. ಮಳೆಬಿಲ್ಲು

೧. ಠಾಕೂರರು ಮತ್ತು ಪಾಶ್ಚಾತ್ಯ ಸಂಗೀತ

ಲೇಖಕ: ಆರ್ನಲ್ಡ್ ಬೇಕ್

(ಅನುವಾದಕ: ಎಂ.ವಿ. ಸೀತಾರಾಮಯ್ಯ)

ಕಳೆದ ಆರೇಳು ಶತಮಾನಗಳ ಅವಧಿಯಲ್ಲಿ ತನ್ನದೇ ಆದ ಸಮಯಾಚಾರಗಳನ್ನು (conventions) ರೂಢಿಸಿಕೊಂಡು ಬೆಳೆದುಬಂದಿರುವ ಪಾಶ್ಚಾತ್ಯ ಸಂಗೀತವು, ಅದಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ಹಾಗೂ ಅದಕ್ಕಿಂತ ಹೆಚ್ಚು ಪುರಾತನವಾದ ಸಮಯಾಚಾರಗಳ ಆಧಾರದ ಮೇಲೆ ನೆಲೆ ನಿಂತಿರುವ ಭಾರತೀಯ ಸಂಗೀತ ಪದ್ಧತಿಯ ವಾತಾವರಣದಲ್ಲಿ ಬೆಳೆದ, ಸೂಕ್ಷ್ಮ ಮನೋವೃತ್ತಿಯ, ಸಂಗೀತಜ್ಞನೊಬ್ಬನ ಮೇಲೆ ಯಾವ ಪರಿಣಾಮವನ್ನು ಹೊಂದಿರುವುದು?

ರವೀಂದ್ರರ ಸೃಷ್ಟ್ಯಾತ್ಮಕ ಕಾರ್ಯ ಕಲಾಪಗಳಲ್ಲಿ ಸಂಗೀತವು ಬಹು ಪ್ರಮುಖವಾದ ಪಾತ್ರವನ್ನು ವಹಿಸಿದ್ದಿತು; ಅತ್ಯುತ್ತಮ ಭಾರತೀಯ ಸಂಗೀತವು ದಿನದಿನದ ಬದುಕಿನಲ್ಲಿ ಒಂದು ಜೀವಂತ ಶಕ್ತಿಯಾಗಿದ್ದ ಮನೆಯಲ್ಲಿ ಅವರು ಹುಟ್ಟಿದರು; ಇದರಿಂದಾಗಿ, ಅವರು ಅವರ ಸಂಪ್ರದಾಯ ಸಮಯಾಚಾರಗಳನ್ನು ಒಳಗೊಂಡು, ಕಡೆಗೆ ಅವು ಅವರ ಸಂಗೀತ ಸ್ವಭಾವದ ಮುಖ್ಯಭಾಗವಾಗಿಯೂ, ಅವರ ಸಂಗೀತ ಕಲಾಭಿಜ್ಞತೆಯ ಆಧಾರವಾಗಿಯೂ ಪರಿಣಮಿಸಿದುವು. ಅವರ ರಚನೆಗಳ ಅತ್ಯಂತ ಪ್ರಮುಖ ಲಕ್ಷಣವೆಂದರೆ, ಸಂಗೀತಕ್ಕೂ ಸಾಹಿತ್ಯಕ್ಕೂ ಇರುವ ನಿಕಟ ಐಕ್ಯಭಾವ; ವಾಸ್ತವವಾಗಿ, ಆ ಐಕ್ಯಗುಣ ಅವರ ಸ್ವಂತ ಭಾರತೀಯ ಸಂಗೀತವಲ್ಲಿಯೇ ಆಳವಾಗಿ ಬೇರುಬಿಟ್ಟಿದೆ. ನಿಜದ ಸಂಗತಿ ಎಂದರೆ, ಮಧ್ಯಯುಗದ ಉತ್ತರಭಾಗದ ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಪಟ್ಟಿ ಮಾಡಿರುವ ಪ್ರಕಾರ, ಸಾಹಿತ್ಯ–ಸಂಗೀತಗಳೆರಡನ್ನೂ ನಿರ್ಮಾಣ ಮಾಡುವ 'ವಾಗ್ಗೇಯಕಾರ'ನೇ ಸಂಗೀತ ರಚನಕಾರರಲ್ಲಿ ಅತ್ಯಂತ ಉಚ್ಚ ದರ್ಜೆಯವರು. ಈ ವಿವರಣೆ ರವೀಂದ್ರನಾಥ ಠಾಕೂರರಿಗೆ ಸಂಪೂರ್ಣವಾಗಿ ಸರಿಹೊಂದುತ್ತದೆ.

ಆದರೂ, ಠಾಕೂರರ ರಚನೆಗಳಲ್ಲಿ ಅತ್ಯಂತ ಪ್ರಬಲ ಶಕ್ತಿಯೆನಿಸಿದ, ಈ ಸಾಹಿತ್ಯ–ಸಂಗೀತ ರೂಪಗಳ ('ಮಾತು' ಮತ್ತು 'ಧಾತು'ಗಳ) ಐಕ್ಯವು ಅವರ

---

೧. ಧಾತು=Melody; ಸಂಗೀತಕ್ಕೆ ಆಧಾರಭೂತವಾದ ನಾದ ನಾದದ್ರವ್ಯ.

ಜನ್ಮ ಕಾಲದಲ್ಲಿ ಭಾರತ ದೇಶದಲ್ಲಿ ಹಿಂದಿನಷ್ಟು ಪ್ರಾಮುಖ್ಯವನ್ನು ಹೊಂದಿರಲಿಲ್ಲ. ಹದಿನೈದನೆಯ ಶತಮಾನದ ಅಂತ್ಯ ಭಾಗದಿಂದ ಮುಂದಕ್ಕೆ, ಮುಸ್ಲಿಮರ ಆಳ್ವಿಕೆ ಸ್ಥಾಪಿತವಾದ ಮೇಲೆ ವಿಶೇಷವಾಗಿ ಉತ್ತರಭಾರತದಲ್ಲಿ ಸಂಗೀತದಲ್ಲಾದ ಬೆಳವಣಿಗೆಗಳು ಅರಬ್ಬೀ ಮತ್ತು ಪಾರಸಿಕ ಪ್ರಪಂಚದ ಸಂಗೀತದ ಪ್ರಭಾವಕ್ಕೆ ಒಳಪಟ್ಟು, ಸಾಹಿತ್ಯ ಭಾಗದ (Text) ಅರ್ಥವ್ಯಾಪ್ತಿಯಿಂದ ಆಚೆಗೆ ಸರಿದು, ಶುದ್ಧಾಂಗವಾಗಿ ಆಲಂಕಾರಿಕವಾದ ಒಂದು ವಾದ್ಯನಿಷ್ಠ ಸಂಗೀತ ಶೈಲಿಯ (Instrumental, floried style) ಕಡೆಗೆ ಹೊರಳಿತ್ತು. ಆಗ, 'ಕಲಾ–ಸಂಗೀತ'ವು (Art-music) (ಎಂದರೆ, ಕೇವಲ ಕಲಾದೃಷ್ಟಿಯ ಸಂಗೀತ–ಅನು.) ಶುದ್ಧಾಂಗವಾಗಿ ನಾದದ ಹಾಗೂ ಲಯದವೈಖರಿಗಳ ಸಾಧ್ಯತೆಗಳನ್ನು ಅನ್ವೇಷಿಸುವುದರಲ್ಲಿಯೇ ನಲಿಯತೊಡಗಿತು; ಅದರೊಳಗಿನ ಸಾಹಿತ್ಯಭಾಗ– ಒಂದು ವೇಳೆ ಅದು ಏನಾದರೂ ಇದ್ದರೆ, ರಾಗ ಧಾಟಿಯ ಮೇಲೆ ಪ್ರಭಾವ ಬೀರುವುದು ತಪ್ಪಿಹೋಗಿತ್ತು? ಈ ಬೆಳವಣಿಗೆ ಸಂಪೂರ್ಣವಾಗಿಯು ಪಾಶ್ಚಾತ್ಯ ದೇಶಗಳಲ್ಲಿ ೧೭–೧೮ನೆಯ ಶತಮಾನಗಳಲ್ಲಿ ತಲೆದೋರಿದಂತಹ ಬೆಳವಣಿಗೆಯ ಹಾಗೆಯೇ ಇದ್ದಿತು; ಆಗ, ಹಾಡುಗಾರನೊಬ್ಬನು ಸಂಬಂಧಪಟ್ಟ ಪದದ ಅರ್ಥಕ್ಕಾಗಲಿ, ವಾಕ್ಯದಲ್ಲಿ ಅಥವಾ ಒಟ್ಟು ಕವಿತೆಯಲ್ಲಿ ಅದರ ಮುಖ್ಯತೆಗಾಗಲಿ ಲವಲೇಶವೂ ಆದರೆ, ಸಾಮಾನ್ಯ ಹಾಡುಗಳ (Melodies) ಹೆಚ್ಚು ಸರಳವಾದ ಧಾಟಿಗೂ (fine) ನೇರವಾದ ರಂಜಕ ಗುಣಕ್ಕೂ ಅವರ ಹೃದಯ ಮಾರುಹೋಯಿತು. ಭಾರತೀಯ ಸಂಗೀತ ಶಾಸ್ತ್ರವು ಪ್ರತಿಯೊಂದು ರಾಗಕ್ಕೂ ಉಂಟೆಂದು ತಿಳಿಯಹೇಳುವ ರಸಭಾವಾತ್ಮಕ ಗುಣಗಳನ್ನು ಅಂಗೀಕರಿಸಿ, ಪ್ರಾಚೀನ ಪದ್ಧತಿಯ ಶಾಸ್ತ್ರೀಯ ಸಂಗೀತದ ರಾಗಗಳನ್ನು ಅವರು ಉಪಯೋಗಿಸಿಕೊಂಡಾಗ ಕೂಡ ಆ ಹಾಡುಗಳ ಸರಳತೆಯನ್ನು ಅನುಸರಿಸಿದರು. ಅವರು ಭಾರತದ ಶಾಸ್ತ್ರೀಯ ಸಂಗೀತವನ್ನು ಬಲ್ಲವರಾಗಿದ್ದು, ಅರ್ಥ ಮಾಡಿಕೊಂಡಿದ್ದರು. ಅವರು ಸದಾ ಕಾಲದಲ್ಲಿಯೂ ಅದರಿಂದ ಸ್ಫೂರ್ತಿಯನ್ನು ಪಡೆಯದಿದ್ದರೂ, ಅದು ಅವರ ಆಧ್ಯಾತ್ಮಿಕ ಸಂಪತ್ತಿನ ಒಂದು ಭಾಗವಾಗಿತ್ತು.

ಪಾಶ್ಚಾತ್ಯ ಸಂಗೀತದೊಂದಿಗೆ ಅವರು ಸಂಪರ್ಕ ಹೊಂದಿದಾಗ, ಅವರು ಹೇಗೆ ಪ್ರತಿಕ್ರಿಯೆ ತೋರಿದರು? ಬಹುಮಟ್ಟಿಗೆ ಅದರಲ್ಲಿ ಅವರಿಗೆ ಯಾವ ಆಕರ್ಷಣೆಯೂ ಕಂಡುಬರಲಿಲ್ಲ ಎಂಬುದಂತೂ ಸ್ಪಷ್ಟ 'ಪಾಶ್ಚಾತ್ಯ 'ಧ್ವನಿ ಸಾಂಗತ್ಯ' ರಚನೆಗಳ (Harmonic Compositions) ಉತ್ಕಟ ಊರ್ಧ್ವ ಸಂಚಾರ (Over

powering vertical structure) ಸಂಗೀತಜ್ಞರಾದ ಅವರಿಗೆ ಪರಕೀಯವಾಗಿಯೆ ಉಳಿದುದಲ್ಲದೆ, ಕೆಲಮಟ್ಟಿಗೆ ವಿಕರ್ಷಕವಾಗಿಯೂ ಇದ್ದಿತು. ಜೊತೆಗೆ ಪರಿಕರ ಯಾವುದೂ ಇಲ್ಲದ ಒಂದೇ ಒಂದು ರಾಗ ಧಾಟಿಯ (unaccompanied melodical line) ನಾಜೂಕಾದ ಅಚ್ಚನ್ನು (Delicate moulding) ರಚಿಸುವುದು ಅವರ ಮಾರ್ಗ; ಅದರಲ್ಲಿ ಅವರ ಕವನದ ರಸಭಾವಾತ್ಮಕ ಧ್ವನಿಗಳೆಲ್ಲವೂ (Emotional overtones) ಪ್ರಕಟಗೊಳ್ಳುತ್ತಿದ್ದುವು. ಸ್ವರಮೇಳಗಳ ಕಟ್ಟುನಿಟ್ಟಾದ ನಿಯಮದ ಮೂಲಕ ಆ ಸ್ವತಂತ್ರವಾದ ಬೆಳವಣಿಗೆಗೆ ಒದಗುವ ಯಾವುದೇ ನಿರ್ಬಂಧವಾಗಲಿ, ಅಥವಾ ಅಂಗೀಕೃತ ಧ್ವನಿಸಾಂಗತ್ಯ ಮಾರ್ಗದಲ್ಲಿ (Harmonie lines) ಒಂದು ಆಧಾರ ಸ್ವರ ಪದ್ಧತಿಯಿಂದ (Key) ಇನ್ನೊಂದು ಆಧಾರ ಸ್ವರ ಪದ್ಧತಿಗೆ ಬದಲಾಯಿಸುವ ಯಾವುದೇ ಸೂಚನೆಯಾಗಲಿ, ಅವರ ವಿಚಾರಕ್ರಮಕ್ಕೆ ಪರಕೀಯವೆನಿಸಿತ್ತು. ಅವರ ಸಂಗೀತ ಸಂಬಂಧವಾದ ಕಲ್ಪಕಶಕ್ತಿಯು ಪರಿಶುದ್ಧವಾದ ರಾಗಪದ್ಧತಿಯ ತತ್ತ್ವಕ್ಕೆ (Modal Principle) ಎಂದೆಂದಿಗೂ ಸಂಲಗ್ನವಾಗಿಹೋಗಿತ್ತು. ಆ ತತ್ತ್ವದ ಮೇರೆಗೆ, ಬೇರೆಬೇರೆ ಸ್ವರಾಷ್ಟಕ ಶ್ರೇಣಿಗಳ ಸ್ವರಗಳು ಒಂದು ಖಚಿತ ಸ್ವರಾಸ್ಥಾನಕ್ಕೆ (One fixed point) ಎಂದರೆ ಆಧಾರ ಶ್ರುತಿಗೆ ಅವು ಹೊಂದಿರುವ ಬೇರೆ ಬೇರೆ ಸಂಬಂಧಗಳಲ್ಲಿ ಮಾತ್ರ ಪರಿಗಣನೆಗೆ ಬರುತ್ತವೆ. ಎಂದರೆ, ಆ ಖಚಿತ ಸ್ವರ ಕೇಂದ್ರಕ್ಕೆ (Tonal Centre) ಹೊಂದಿಕೊಂಡಂತೆ ಪ್ರತಿ ಸ್ವಕಾಂಶದ ಆಂತರಿಕ ಸಂಬಂಧದ ವಿಷಯದಲ್ಲಿ ಒಂದು ರಾಗಪದ್ಧತಿಯು (Mode) ಇನ್ನೊಂದರಿಂದ ಭಿನ್ನವಾಗಿರುತ್ತದೆ; ಅದು ಯಾವುದೇ ಸ್ಥಾಯಿಯಲ್ಲಿ (Pitch) ಇರಬಹುದು. ಇದಕ್ಕೆ ವ್ಯತಿರಿಕ್ತವಾಗಿ, ಪಾಶ್ಚಾತ್ಯ ಸಂಗೀತದ ಎಲ್ಲ ಆಧಾರ ಸ್ವರ ಪದ್ಧತಿಗಳೂ (Western Keys)– ಅವು ವರಿಷ್ಠವಾಗಲಿ, ಅವರಿಷ್ಠವಾಗಲಿ (Major or Minior) ತಮ್ಮ ಸ್ವರಭಾವಕ್ಕೆ (Tonal base) ಸಂಬಂಧಪಟ್ಟಂತೆ ಒಂದು ವ್ಯತ್ಯಾಸವಾಗದ ಸ್ಥಿರ ಅಂತರಿಕ ಸಂಬಂಧವನ್ನು ಹೊಂದಿರುತ್ತವೆ; ವ್ಯತ್ಯಾಸಗೊಳ್ಳುವ ಏಕಮಾತ್ರ ಅಂಶವೆಂದರೆ, ಆಧಾರಸ್ವರವು (ಅಥವಾ ಮೂಲಸ್ವರವು: Tonic) ಯಾವ ಸ್ಥಾಯಿಗೆ (pitch) ಅಳವಡಿಸಲ್ಪಟ್ಟಿದೆಯೋ ಆ ಸ್ಥಾಯಿಗೆ ಎದುರಾಗಿ ಅವುಗಳ ಮೊತ್ತದ ಸ್ಥಾನ ('C') ('ಸ') (ವರಿಷ್ಠ)ದ (C Major) ಸ್ವರಪದ್ಧತಿಯ ಆಂತರಿಕ ಸಂಬಂಧವು ತದ್ವತ್ತಾಗಿ ಇತರ ಯಾವುದೇ ವರಿಷ್ಠ ಸ್ವರ ಪದ್ಧತಿಯ (Major key) ಆಂತರಿಕ ಸಂಬಂಧದ ಹಾಗೆಯೇ ಇರುತ್ತದೆ. ಅವುಗಳಲ್ಲಿ ಒಂದಕ್ಕೂ ಇನ್ನೊಂದಕ್ಕೂ ಇರುವ ಏಕಮಾತ್ರ ಸಂಬಂಧ ಎಂದರೆ, ತಮ್ಮ ತಮ್ಮ ಆಧಾರ ಸ್ವರಗಳ ('Tonics')

ಖಚಿತ ಸ್ಥಾಯಿ. ನಿಜವಾಗಿ ಈ ಸಂಬಂಧವಾದ, ಪರಿಚಯ ಜ್ಞಾನ ಹೊಂದುವುದು ಯಾವ ಭಾರತೀಯ ಸಂಗೀತಗಾರನಿಗಾದರೂ ಬಹಳ ಕಷ್ಟವೆ. ಪ್ರತಿಯೊಂದು (ಸ್ವರ ಪದ್ಧತಿಯ) ಬದಲಾವಣೆಯಲ್ಲಿಯೂ ಅಂತರ್ಗತವಾದ ಸ್ವರ ಪ್ರಾರಂಭ ಸ್ಥಾನದ (Tonal starting point) ಅಥವಾ ಆಧಾರ ಷಡ್ಜ ಸ್ವರದ (Tonic) ಸ್ಥಾನಾಂತರವು ಭಾರತೀಯ ಶ್ರೋತೃಗಳನ್ನು ದಿಗ್ಭ್ರಮೆಗೊಳಿಸುವುದು ಖಂಡಿತ. ವ್ಯತ್ಯಾಸ ಹೊಂದದ ಆಧಾರ ಷಡ್ಜದ ಮೇಲೆ ರಚಿತವಾದ ರಾಗ(Melodic basis)ವನ್ನು ಹಿಡಿದು, ಸ್ವರ ಸ್ಥಾಯಿಯ ಅಂತರಗಳನ್ನು (Intervals: 'ಶ್ರುತಿ;ಗಳನ್ನು) (ತನಗರಿವಿಲ್ಲದಂತೆಯೆ) ಹೋಲಿಸುತ್ತ ಹೋಗುವುದೇ ಆತನು ಸಂಗೀತವನ್ನು ಅಲಿಸುವ ವಿಧಾನ.

ಹೀಗಿರುವುದರಿಂದ, ಸಂಗೀತ ರಚನಕಾರರು (Composers) ಬಂದು ರವೀಂದ್ರರ ಸಾಹಿತ್ಯಕ್ಕೆ (Texts) ತಮ್ಮ ಸಂಗೀತ ರಚನೆಗಳನ್ನು ಹೊಂದಿಸಿ ನುಡಿಸಿ ತೋರಿಸಿ, ಆಧುನಿಕ ಬೆಳವಣಿಗೆಗಳೆಲ್ಲವನ್ನೂ ಒಳಗೊಂಡ 'ಧ್ವನಿ ಸಾಂಗತ್ಯ' ಪದ್ಧತಿಯನ್ನು (Harmonic system) ಅವರು ಮೆಚ್ಚಿ ಪ್ರೀತಿಸಬೇಕೆಂದು ನಿರೀಕ್ಷಿಸಿದಾಗ, ಅದು ಅವರಿಗೆ ಹಿಡಿಸಲೇ ಇಲ್ಲ; ಏಕೆಂದರೆ, ತಮ್ಮ ಕವಿತೆಗಳ ಭಾವವನ್ನು ಒಂದೇ ಮಟ್ಟಿನ ಧಾಟಿಯಲ್ಲಿ (Single metadic line) ಹೊರತಾಗಿ ಅನ್ಯಥಾ ಅಭಿವ್ಯಕ್ತಿಗೊಳಿಸುವುದನ್ನು ಅವರು ಕಲ್ಪಿಸಿಕೊಳ್ಳಲಾರದವರಾಗಿದ್ದರು. ಆದರೂ, ಭಾರತೀಯು ಸಂಗೀತದಲ್ಲಿ ಧ್ವನಿಸಾಂಗತ್ಯ ಪದ್ಧತಿಯು ಬೆಳವಣಿಗೆಯಲ್ಲದಿದ್ದರೆ ಕಡೆಯ ಪಕ್ಷ ಬಹುರಾಗಾತ್ಮಕವಾದ (polyphone) ಬೆಳವಣಿಗೆ ಮುಂದೆ ಎಂದಾದರೊಮ್ಮೆ ಸಂಭವಿಸಲು ತಾತ್ತ್ವಿಕವಾಗಿ ಯಾವ ಅಡ್ಡಿಯೂ ಇರದೆಂಬುದನ್ನು ಅವರು ಸ್ಪಷ್ಟವಾಗಿ ಕಂಡುಕೊಂಡರು. ಮೂಲ ಭಾರತೀಯ ಗೀತ(Melody)ವೊಂದಕ್ಕೆ ಶುದ್ಧ ಪಾಶ್ಚಾತ್ಯ ಧ್ವನಿಸಾಂಗತ್ಯ ಪದ್ಧತಿಯನ್ನು ಅನ್ವಯಿಸುವುದರಿಂದ ಅದಕ್ಕೆ ಯಾವ ರೀತಿ ಪೂರ್ಣ ಹಾನಿಯುಂಟಾಗುವುದೋ ಆ ರೀತಿಯ ಹಾನಿಯುಂಟುಮಾಡದಂತಹ ಹೊಸ ಭಾವನೆಗಳನ್ನು ಪಾಶ್ಚಾತ್ಯ ಸಂಗೀತದಿಂದ ಸ್ವೀಕರಿಸಿ ಪ್ರಯೋಗ ನಡೆಸಲು ಅವರು ಆಗಾಗ್ಗೆ ಪ್ರಯತ್ನಿಸಿದರು; ಆದರೆ ಇದು ಹೃದಯದಿಂದ ಹೊಮ್ಮಿದ ಸ್ಫೂರ್ತಿಯಾಗಿರದೆ ಕೇವಲ ಬೌದ್ಧಿಕ ವಿನೋದವಾಗಿಯೇ ಉಳಿಯಿತು, ನಿಜವಾಗಿ ಎಂದಿಗೂ ಫಲಪ್ರದವಾಗಲಿಲ್ಲ. ಭಾರತೀಯ ಸಂಗೀತದಲ್ಲಿ 'ಸ್ಥಾಯಿ' (first stanza of song = ಕರ್ನಾಟಕ ಪದ್ಧತಿಯ 'ಪಲ್ಲವಿ'– ಅನು.) ಎಂದರೆ ಹಾಡಿನ ಮೊದಲ 'ಅಂಗಭಾಗ' ನಿಜವಾಗಿ ಆಧಾರಭೂತವಾಗಿದ್ದು, ಮುಂದಿನ 'ಅಂಗಭಾಗ'ಗಳು ಅದರಿಂದಲೇ ಬೆಳೆದು

ಬಂದು, ಅದರಿಂದ ಭಿನ್ನವಾಗಿ ನಿಲ್ಲುತ್ತವೆ; ಮಧ್ಯಯುಗದ ಪಾಶ್ಚಾತ್ಯ ಗೀತಗಳಲ್ಲಿರುವಂತೆ, ಈ 'ಸ್ಥಾಯಿ'ಯನ್ನು ಪೂರ್ತಿಯಾಗಿಯೋ ಇಲ್ಲವೆ ಭಾಗವಾಗಿಯೋ ಒಂದು ಬಗೆಯ ಮೇಳಗೀತ ಖಂಡ("Pes")ದಂತೆ ಉಪಯೋಗಿಸುವುದು ಅವರ 'ವಿಚಾರಗಳಲ್ಲಿ ಒಂದಾಗಿದ್ದಿತು. ಈ 'ಗೀತಖಂಡ'ದ ಒಂದು ಉಚಿತ ಭಾಗವನ್ನು ಗಾಯಕರ ಒಂದು ತಂಡವು ಪುನರಾವೃತ್ತಿಯಾಗಿ ಹಾಡುತ್ತಿರುವಾಗ, ಇತರರು (ಇನ್ನೊಂದು ತಂಡ) ಮುಂದಿನ ಬೆಳವಣಿಗೆಯ ಭಾಗವನ್ನು ಹಾಡುತ್ತಿರುವರು. ಎರಡು ತಂಡಗಳೂ ಒಂದೇ ರಾಗರಚನೆಯಲ್ಲಿ (modal structure) ಉಪಯೋಗಿಸುತ್ತಿದ್ದುದರಿಂದಲೂ, ಆ ಪ್ರಯುಕ್ತ, ಆರಿಸಿಕೊಂಡ ಸ್ವರಗ್ರಾಮದ ಅವೇ ಪ್ರಧಾನ ಸ್ವರಗಳ್ನು ಒತ್ತಿ ಉಚ್ಚರಿಸುತ್ತ ಹಾಗೂ ಅವೇ ಪ್ರಧಾನವಲ್ಲದ ಸ್ವರಗಳನ್ನು ವರ್ಜಿಸುತ್ತ, ಅದೇ ನಿರ್ದಿಷ್ಟ ಸಮಾಪ್ತಿ ಸ್ವರದ ಮೇಲೆ ವಿಶ್ರಮಿಸುತ್ತ ಇದ್ದುದರಿಂದಲೂ, ಆ ಎರಡು ನಿಕಟವರ್ತಿ ಗೀತಧಾಟಿಗಳ (Melodical strains) ಹೆಣೆಗೆಯಲ್ಲಿ ಕೆಲವು ಧ್ವನಿಸಂಯೋಗ ಇದ್ದೇ ಇರುತ್ತಿದ್ದಿತು.

ಈ ಪ್ರಯೋಗವು ಎಷ್ಟರಮಟ್ಟಿಗೆ ("Sumar is icumen in ಎಂಬಂತಹ ಹಾಡುಗಳಲ್ಲಿನ) ಮೇಳ ಗೀತಖಂಡ(pes)ವನ್ನು ಕೇಳುವುದರಿಂದ ಬಹುಶಃ ಪ್ರೇರಿತವಾಯಿತು ಎಂದು ಹೇಳುವುದು ಅಸಾಧ್ಯ. ಆದರೆ, ಏನೇ ಆಗಲಿ, ಪಾಶ್ಚಾತ್ಯ ಸಂಗೀತದ ಈ ಪ್ರಭಾವವು ಪ್ರಬಲವಾದುದೇನೂ ಆಗಿರಲಿಲ್ಲ, ಹಾಗೂ ಮೊತ್ತದಲ್ಲಿ ಅವರ ಗೀತ ರಚನಾವಿಧಾನದ ಮೇಲೆ ಶಾಶ್ವತವಾದ ಪರಿಣಾಮವನ್ನು ಹೊಂದಿರಲಿಲ್ಲ. ವೇದದ ಋಕ್ಕುಗಳನ್ನು ಸಾಂಪ್ರದಾಯಿಕ ಪಾಶ್ಚಾತ್ಯ ಧ್ವನಿಸಾಂಗತ್ಯ ಪದ್ಧತಿಗೆ (Harmony) ಅಳವಡಿಸುವ ಪ್ರಯತ್ನಗಳಲ್ಲಿ ಅವರ ತಂದೆಗೆ ಒಲವಿದ್ದಂತೆ ಕಾಣುತ್ತದೆ; ಅವು ಕೂಡ ಯಾವ ಸ್ಥಿರವಾದ ಪರಿಣಾಮವನ್ನೂ ಬೀರಿದಂತೆ ಕಾಣುವುದಿಲ್ಲ. ಹೀಗೆ, ಸಹಜಪ್ರವೃತ್ತಿಯಿಂದ ಪ್ರೇರಿತರಾಗಿ ಅವರು ಪರಸ್ಪರ ಹೊಂದದ ಎರಡು ವಸ್ತುಗಳನ್ನು ಒಂದುಗೂಡಿಸುವ ನಿಷ್ಫಲ ಪ್ರಯತ್ನದಿಂದ ಅವರು ದೂರ ಸರಿದಿರಬೇಕು.

ಸೃಷ್ಟಿಶೀಲಕಲಾಕಾರರೆನಿಸಿದ ಅವರ ಜೀವಮಾನದಲ್ಲಿ ಪಾಶ್ಚಾತ್ಯ ಸಂಗೀತದ ಯಾವುದೋ ಒಂದು ಪ್ರಕಾರವು ಅವರ ಕಾರ್ಯದ ಮೇಲೆ ಸ್ಪಷ್ಟವಾದ ಮುದ್ರೆಯೊತ್ತಿರಬಹುದಾದ ಒಂದೇ ಒಂದು ಕಾಲವಿದೆ. ಇದು ಅವರು ಬಹಳ ಚಿಕ್ಕವರಾಗಿದ್ದಾಗ; ಅವರು ನ್ಯಾಯಶಾಸ್ತ್ರವನ್ನು ವ್ಯಾಸಂಗಮಾಡಲು ಇಂಗ್ಲೆಂಡಿಗೆ ತೆರಳಿದ್ದರು (ಆ ಪ್ರಯತ್ನ ಅಷ್ಟೇನೂ ಯಶಸ್ವಿಯಾಗಲಿಲ್ಲ); ಆಗ, ಅವರು ಅತಿಥಿಯಾಗಿ ಹೋಗುತ್ತಿದ್ದ ಬೇರೆ ಬೇರೆ ಮನೆಗಳ ದಿವಾನಖಾನೆಗಳಲ್ಲಿ ಸ್ಕಾಟ್,

ಐರಿಷ್ ಮತ್ತು ಹಳೆಯ ಇಂಗ್ಲಿಷ್ ಭಾಷೆಗಳ ಹಲವಾರು ಗೀತಗಳನ್ನು ಕೇಳಿ, ಅವನ್ನು ಮೆಚ್ಚಿಕೊಂಡರು. ಗಮನಾರ್ಹ ವಿಶಿಷ್ಟಾಂಶವೇನೆಂದರೆ, ಸಾಹಿತ್ಯಕ್ಕೂ ಸಂಗೀತಕ್ಕೂ (Melody and words) ಬಹಳ ನೇರವಾದ ಸಂಬಂಧ ಹೊಂದಿದ್ದ ಗೀತಗಳಾಗಿದ್ದವು ಅವು.

ಇಂಗ್ಲೆಂಡಿಗೆ ಅವರಿತ್ತ ಈ ಭೇಟಿಯ ಪ್ರಾರಂಭ ಭಾಗ ಬಹಳ ಸುಖಕರವಾಗಿತ್ತು; ಆಗ ಅವರು ತಮ್ಮ ಅಣ್ಣ ಸತ್ಯೇಂದ್ರನಾಥ ಮತ್ತು ಅವರ ಪತ್ನಿಯೊಂದಿಗೆ ಬ್ರೈಟನ್ನಿನಲ್ಲಿ (Brighton) ಉಳಿದುಕೊಂಡಿದ್ದರು; 'ಇಂಡಿಯನ್ ಸಿವಿಲ್ ಸರ್ವಿಸ್' ಹುದ್ದೆಯಲ್ಲಿದ್ದ ಸತ್ಯೇಂದ್ರನಾಥರು ತಮ್ಮ ಹಕ್ಕಿನ ರಜವನ್ನು ಉಪಯೋಗಿಸಿಕೊಂಡು ಅಲ್ಲಿ ನೆಲಸಿದ್ದರು. ರವೀಂಧ್ರನಾಥ ತಮ್ಮ ಅಣ್ಣನಿಗಿಂತ ಹದಿನೆಂಟು ವರ್ಷ ಚಿಕ್ಕವರಾಗಿದ್ದರು; ತಾವು ಬ್ರೈಟನ್ನಿನಲ್ಲಿ ಕಳೆದ ಕೆಲವು ವಾರಗಳ ಕಾಲವನ್ನು ತಾವು ಮೆಚ್ಚಿಕೊಂಡಿದ್ದ ಸಂಗತಿಯನ್ನು ಅವರು ತಮ್ಮ 'ನೆನಪುಗಳು' ಎಂಬ ಗ್ರಂಥದಲ್ಲಿ ಬಹಳ ವಿವರಪೂರ್ಣವಾಗಿ ಸ್ಮರಿಸಿದ್ದಾರೆ. ಆ ಬಳಿಕ, ತಾವು ಒಬ್ಬೊಂಟಿಗ ಎಂಬ ಭಾವನೆಗೆ ಒಳಗಾಗಿದ್ದರೂ, (ಒಮ್ಮೆ ತಾವೊಬ್ಬರೇ ಲಂಡನ್ನಿಗೆ ಹೋಗಿದ್ದರು), ಅನೇಕ ಕುಟುಂಬಗಳ ಸಂತೋಷಗೋಷ್ಠಿಗಳಲ್ಲಿ ಭಾಗವಹಿಸುವ ಮಟ್ಟಿಗೆ ಅವರು ಅಲ್ಲಿನ ಜನರೊಂದಿಗೆ ಬೆರೆತಿರಬೇಕು; ಐರೋಪ್ಯ ಗೀತಗಳನ್ನು ತಾವೇ ಹಾಡಿ ಕಲಿತಿದ್ದುದರಿಂದ, ಆ ಗೋಷ್ಠಿಗಳಲ್ಲಿ ಅವರಿಗೆ ಹೆಚ್ಚಿನ ಸ್ವಾಗತವೂ ಇದ್ದಿತು. ಇಂಗ್ಲೆಂಡಿನಲ್ಲಿ ಅವರಿದ್ದ ಕಾಲದಲ್ಲಿನ ಈ ಸಂಗೀತದ ಅನುಭವದ ಪರಿಣಾಮ ಏನಾಯಿತೆಂದರೆ, ಇಂಗ್ಲೆಂಡಿಗೆ ಭೇಟಿಕೊಟ್ಟು ಕಲ್ಕತ್ತೆಗೆ ಹಿಂದಿರುಗಿದ ತರುಣದಲ್ಲಿ ಬರೆದ ನಾಟಕಗಳಲ್ಲಿ ತಾವು ಮೆಚ್ಚಿಕೊಂಡಿದ್ದ ಅನೇಕ ಹಾಡುಗಳನ್ನು (Tunes) ಅಳವಡಿಸತೊಡಗಿದರು. ರವೀಂದ್ರನಾಥರ 'ವಾಲ್ಮೀಕಿ ಪ್ರತಿಭಾ' ಎಂಬ ನಾಟಕವನ್ನು ನೋಡುವಾಗ, ವಾಲ್ಮೀಕಿಯ ಭಂಡಾರವನ್ನು ಲೂಟಿ ಮಾಡುವ ದರೋಡೆಕೋರರು ಇದ್ದಕ್ಕಿದ್ದ ಹಾಗೆ ಸ್ಕಾಟರ್ ಮತ್ತು ಆಂಗ್ಲರ ಮಟ್ಟುಗಳಲ್ಲಿ ಹಾಡು ಹಾಡಿದರೆ, ಎಷ್ಟೇ ಭಾರತೀಕರಣವಾಗಿದ್ದರೂ ಗುರುತಿಸಬಹುದಾದ ಆ ಮೂಲ ಮಟ್ಟುಗಳನ್ನು ಐರೋಪ್ಯ ಪ್ರೇಕ್ಷಕನೊಬ್ಬನು ಕೇಳಿದನಾದರೆ, ಅದು ಅವನಿಗೆ ವಿಚಿತ್ರವಾಗಿ ತೋರಿತು.

ಅದು ಹೇಗಾದರೂ, ಆ ಗೀತಗಳನ್ನು ಪ್ರಚಾರಕ್ಕೆ ತಂದ ನಲವತ್ತು ಐವತ್ತು ವರ್ಷಗಳಾದ ಮೇಲೆ ಮೂಲ ಕೃತಿಗಳ ಪರಿಚಯವಿಲ್ಲದ ತರುಣ ವಿದಾರ್ಥಿಗಳು ಅವುಗಳನ್ನು ಹಾಡಿದ್ದನ್ನು ಯಾರಾದರೂ ಕೇಳಿದಾಗ, ಮಾರ್ಪಡುಗಳಲ್ಲಿ ಯಾವವು ನಾಟಕಕರ್ತನಿಂದ ಹಿಂದೆ ಆದವು ಮತ್ತು ಯಾವವು ರಂಗಸ್ಥಲದ ನಟರ ಮನಸ್ಸಿನ

ಹುಚ್ಚು ಲಹರಿಗೆ ಸೇರಿದ್ದವು ಎಂಬುದನ್ನು ನಿರ್ಧರಿಸುವುದು ಕಷ್ಟ. ಆದಾಗ್ಯೂ, ಕೆಲವು ವಿರಳ ನಿದರ್ಶನಗಳಲ್ಲಿ ಠಾಕೂರರ ಚಿತ್ತವೃತ್ತಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅರಿಯುವುದು ಈಗಲೂ ಸಾಧ್ಯ; ಅವರು ಆಮೇಲಿನ ವರ್ಷಗಳಲ್ಲಿ ಭಾರತೀಯ ಹಾಡಿನ ಮಟ್ಟುಗಳನ್ನೇ ಅವಲಂಬಿಸಿ, ಅವುಗಳನ್ನು ತಮ್ಮ ವ್ಯಕ್ತಿತ್ವದ ಮೂಲಕ ಶೋಧಿಸಿ, ಸಂಪೂರ್ಣವಾಗಿ ತಮ್ಮದೇ ಆದ ಸ್ಪಷ್ಟವಾದ ಸವಿಕಟ್ಟನ್ನು ಅವುಗಳಲ್ಲಿ ಅಡಗಿಸಿ, ಅವುಗಳನ್ನು ತಮ್ಮವನ್ನಾಗಿಯೇ ಮಾಡಿಕೊಳ್ಳುತ್ತಿದ್ದಾಗ ಯಾವ ವಿಧಾನಗಳನ್ನು ಅನುಸರಿಸುತ್ತಿದ್ದರೋ ಆ ವಿಧಾನಗಳನ್ನೇ ಮೊದಲಿನ ಕಾಲದಲ್ಲಿ ಕೂಡ ಅನುಸರಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಅಸಲು ಪ್ರತಿ (ಮಾತೃಕೆ) ಅಲ್ಲಿ ಇದ್ದೇ ಇರುತ್ತದೆ; ಆದರೆ, ಅದು ಮಾರ್ಪಟು ಹೊಂದಿರುತ್ತದೆ.

ರವೀಂದ್ರನಾಥ ಠಾಕೂರರು ಇಂಗ್ಲೆಂಡಿನಲ್ಲಿದ್ದಾಗಿನ ಮೊದಲ ಕೆಲವು ವಾರಗಳನ್ನು ತಮ್ಮ ಅಣ್ಣ ಸತ್ಯೇಂದ್ರನಾಥರ ಮಗಳು ಇಂದಿರಾದೇವಿಯೊಂದಿಗೆ ಸುಖವಾಗಿ ಕಳೆದಿದ್ದರಷ್ಟೆ; ಈಗ ಎಂಬತ್ತು ವರ್ಷಗಳ ಮೇಲೆ ವಯಸ್ಸಾಗಿರುವ ಆಕೆ, ಕೆಲವು ವರ್ಷಗಳ ಹಿಂದೆ 'Drink to me only with thine, thine eyes' ('ನಿನ್ನ ಕಣ್ಣಿಂದಲೇ ಪಾನಮಾಡೆನಗೆ ಶುಭಕೋರಿ') ಎಂಬ ಗೀತವನ್ನು ಯಾರೋ ಹಾಡುತ್ತಿದ್ದುದನ್ನು ಅಕಸ್ಮಾತ್ ಕೇಳಿದರು; ಕೇಳಿ, ತಮ್ಮ ಚಿಕ್ಕಪ್ಪ ಆ ಹಾಡಿನ ಮಟ್ಟನ್ನು ತಮ್ಮ ಕವನಗಳಲ್ಲಿ ಒಂದಕ್ಕೆ ಉಪಯೋಗಿಸಿಕೊಂಡಿದ್ದರೆಂದು ಹೇಳಿದರು. ರವೀಂದ್ರನಾಥರ ಕೃತಿಯನ್ನು ಆಕೆ ಹಾಡಿತೋರಿಸಿದ ರೀತಿಯೇ ಈ ಲೇಖನದಲ್ಲಿ ಮಂಡಿಸಿರುವ ಪರಸ್ಪರ ಹೋಲಿಕೆಗೆ ಆಧಾರ; ಇದು ವಿಶ್ವಾಸಾರ್ಹವಾದ ಆಧಾರ. ಏಕೆಂದರೆ, ಸುಮಾರು ಎಪ್ಪತ್ತು ವರ್ಷಗಳ ಹಿಂದೆ, ಬಹುಶಃ ಆ ಗೀತ ರಚಿತವಾದ ಒಡನೆಯೇ ಆಕೆ ಅದನ್ನು ಕಲಿತಿರಬೇಕು. ಆಗ ಚಿಕ್ಕಪ್ಪನಿಗೂ ಸೋದರಮಗಳಿಗೂ ವಯಸ್ಸಿನಲ್ಲಿ ಹದಿನೈದು ವರ್ಷಕ್ಕಿಂತ ಕಡಮೆಯ ಅಂತರವಿದ್ದಿತು; ಚಿಕ್ಕ ಹುಡುಗಿ ಇಂದಿರಾದೇವಿ ಕವಿಯ ಕುಟುಂಬ ವರ್ಗದಲ್ಲಿ ಬಹುಮಟ್ಟಿಗೆ ಖಾಯಮ್ಮಾಗಿಯೆ ನೆಲಸಿದ್ದಳು. ತೀರ ಬಾಲ್ಯದಿಂದಲೂ ಆಕೆ ಅಪಾರ ಸಂಗೀತ ಪ್ರತಿಭೆಯನ್ನು ತೋರುತ್ತಿದ್ದಳು; ಸುಮಾರು ಎಪ್ಪತ್ತು ವರ್ಷಕಾಲ ಪರ್ಯಂತ ತಮ್ಮ ಸ್ಮರಣಶಕ್ತಿ ಉಳಿಸಿಕೊಂಡು ಬಂದಿರುವ ಅನೇಕ ಗೀತಗಳನ್ನು ಆಕೆ ನಿಧಿಯಂತೆ ಕಾಪಾಡಿಕೊಂಡು ಬಂದಿದ್ದಾರೆ.

ಪರಸ್ಪರ ಹೋಲಿಸಿ ನೋಡಲು ಅನುಕೂಲವಾಗಲೆಂದು ಎರಡು ಗೀತಗಳನ್ನೂ ಇಲ್ಲಿ ಎತ್ತಿಕೊಡಲಾಗಿದೆ. ಮೂಲ ಇಂಗ್ಲಿಷ್ ಗೀತ ರಚನಾಕ್ರಮ ನಿಜವಾಗಿ ಬಹು ಸರಳ. ಪ್ರತಿ ಚರಣಕ್ಕೂ ('ನುಡಿ'ಗೂ) ಎಂಟು ಸಾಲುಗಳಂತೆ

ಅದರಲ್ಲಿ ಎರಡು ಚರಣಗಳಿವೆ; ಎರಡೂ ಚರಣಗಳು ಒಂದೇ ವರ್ಣ ಮಟ್ಟಿನಲ್ಲಿ (Melody) ಹಾಡತಕ್ಕವು. ಈ ವರ್ಣ ಮಟ್ಟಿನ ಕಟ್ಟಡವಾದರೋ (Structure) ಏನೂ ತೊಡಕಿಲ್ಲದ್ದು; ಅದರ ಸಂವಿಧಾನವನ್ನು a-b, a-b, c-d, a-b ಎಂಬಂತೆ ನಿರೂಪಿಸಬಹುದು; ಇದರಲ್ಲಿ ಪ್ರತಿ ಅಕ್ಷರವೂ ಚರಣದ ಎಂಟು ಪಂಕ್ತಿಗಳಲ್ಲಿ ಪ್ರತಿಯೊಂದರ ಹಾಡಿನ ಮಟ್ಟಿಗೆ ಸಂಕೇತವಾಗಿದೆ.

Drink to me only with thine eyes
And I will pledge with mine
or leave a kiss within the cup
And I'll not ask for wine
The Thirst that from the soul doth rise
Doth ask a drink divine,
But might I of Jove's nectar seep
I would not change for thine[೨]

ಮೊದಲ ಎರಡು ಸಾಲುಗಳ ಮಟ್ಟನ್ನೇ ಮೂರು–ನಾಲ್ಕನೆಯ ಸಾಲುಗಳಿಗೂ ಬಳಸಲಾಗಿದ್ದು, ಅದರ ರಚನೆ ಐದು ಮತ್ತು ಆರನೆಯ ಸಾಲುಗಳಿಗೆ ಬಳಸಲಾದ ಮಟ್ಟಿಗಿಂತ ಬೇರೆಯ ತೆರನಾಗಿದೆ; ಅದು ಪುನಃ ಕಾಣಿಸಿಕೊಂಡು ಆವರ್ತ ಪೂರ್ತಿಯಾಗುತ್ತದೆ. ಪ್ರಾಸವು ಸಮಪಾದಗಳ ಅಂತ್ಯಪದಗಳ ಮೇಲೆ ಕುಳಿತು (mine-wine-divine-thine) ಇಡಿಯ ಪದ್ಯವನ್ನು ಒಂದಿಗೆ ಬಂಧಿಸುತ್ತದೆ.

---

೨. ಇಂಗ್ಲಿಷ್ ಕವನದ ಕನ್ನಡ ಅನುವಾದ:

ನಿನ್ನ ಕಣ್ಣಿಂದಲೇ ಪಾನ ಮಾಡೆನಗೆ ಶುಭಕೋರಿ,
ನನ್ನ ಕಣ್ಣುಗಳಿಂದ ಪ್ರತಿಪಾನಗೈವೆ;
ಇಲ್ಲದೊಡೆ, ಬಿಡು ಬಟ್ಟಲೊಳಗೆ ಮುತ್ತೊಂದ,
ಆಗ ನಾ ಬೇರೆ ಮಧುವನ್ನು ಕೇಳೆ

ಅಂತರಾತ್ಮದಿನೊಗೆದು ದಾಹ ಮೇಲೇರಿ
ದಿವ್ಯಪಾನವನೊಂದ ಕೋರುವುದು ತನಗೆ;
ದೊರೆಯಬಹುದೆನಗಮೃತ ದೇವೇಂದ್ರನಿಂದ,
ನೀನೀವ ಪಾನದೆಡೆಗದು ಬೇಡವೆನಗೆ

ಇದಕ್ಕೆ ಸಂವಾದಿಯಾದ ಬಂಗಾಳಿ ಕವನದ ರಚನೆಯನ್ನು ಇದರೊಂದಿಗೆ ಹೋಲಿಸಿದೆವಾದರೆ, ಆದು ಮೂಲತಃ ಭಿನ್ನವಾಗಿರುವುದು ನಮಗೆ ಕಾಣಬರುತ್ತದೆ:

ಕೊತೊಬಾರ್ ಭೇಬೇ ಛಿನು ಅಪೊನಾ ಭುಲಿಯಾ
ತೊಮಾರ್ ಚರಣೆದಿಬೊ ಹೃದಯ ಖುಲಿಯಾ
ಚರಣ್ ಧರಿಯಾ ತಬ ಕಹಿಬೊ ಪ್ರಕಾಶಿ
ಗೋಪನೆ ತೊದೊರೆ ಸಖ ಕೊತೊ ಭಾಲಬಾಶಿ
ಭೆಬೇ ಛಿನು ಕೊಥಾ ತುಮಿ ಸ್ವರ್ಗೇರ್ ದೇಬತಾ
ಕೆಮೋನ್ ತೊಮಾಶಿ ಕೊಬೊ ಪ್ರಣಯೇರ್ ಕಥಾ
ಭೆಬೇ ಛಿನು ಮನೇಮನೇ ದೊರೆದೊರೆ ಥಾಕಿ
ಚಿರಜನ್ಮ ಸಂಗೋಪನೆ ಪೂಜಿಬೊ ಏಕಾಕಿ
ಕೇಹೊ ಜಾನಿಬೆನಾ ಮೋರ್ ಗಭೀರ ಪ್ರಣಯ ಕೇಹೊ
ದೇಖಿಬೆನಾ ಮೋರ್ ಅಶ್ರುಬಾರಿಚಯ
ಅಪೊನಿ ಆಜಿಕೆ ಜಬೆ ಶುಧಾಯಿಭೊ ಆಶಿ
ಕೆಮೊನೆ ಪ್ರಕಾಶಿ ಕಬೊ ಕೊತೊ ಭಾಲ ಬಾಶಿ[೩]

ಇಲಿ, "ಭುಲಿಯಾ–ಖುಲಿಯಾ, ಪ್ರಕಾಶಿ–ಭಾಲಬಾಶಿ, ದೇಬತಾ–ಕಥಾ, ಥಾಕಿ–ಏಕಾಕಿ, ಆಶಿ–ಭಾಲಬಾರೆ"– ಈ ಪ್ರಕಾರವಾಗಿ ಜೊತೆಜೊತೆಯಾಗಿ ಪ್ರಾಸ ಕೊಡುವ ನಾಲ್ಕು ಪಾದಗಳ ಮೂರು ಚರಣಗಳನ್ನು[೪] (ಪದ್ಯಗಳನ್ನು) ಕಾಣುತ್ತೇವೆ.

---

೩. ಈ ಕವನದ ಪದಶಃ ಭಾಷಾಂತರ ಹೀಗಿದೆ:

ನಿನ್ನ ಚರಣದ ಬಳಿ ನನ್ನ ಹೃದಯವನ್ನು ತೆರೆದಿಡಬೇಕೆಂದು ಎಷ್ಟು ಬಾರಿ ನಾನು ನೆನೆದಿಲ್ಲ? ನನ್ನ ಸಖನೆ, ನಿನ್ನನ್ನು ಎಷ್ಟು ಪ್ರೀತಿಸುವೆ ಎಂಬುದನ್ನು ನಿನ್ನ ಚರಣವನ್ನು ಹಿಡಿದು ನಿನಗೆ ಮಾತ್ರ ತಿಳಿಸಬೇಕೆಂದು (ಎಷ್ಟು ಬಾರಿ ನಾನು ನೆನೆದಿಲ್ಲ)?

ಸ್ವರ್ಗ ದೇವತೆಯೆ, ನೀನೆಲ್ಲಿರುವೆಯೆಂದು, ನನ್ನ ಪ್ರಣಯ ಕಥೆಯನ್ನು ನಿನಗೆ ಹೇಗೆ ತಿಳಿಸಬೇಕೆಂದು, ನಾನು ಚಿಂತಿಸಿರುವೆ. ನಾನು ದೂರ ದೂರವಿದ್ದು, ಚಿರಜನ್ಮವೂ ಏಕಾಕಿಯಾಗಿ ನಿನ್ನನ್ನು ಪೂಜಿಸಬೇಕೆಂದು ಮನಸ್ಸಿನಲ್ಲಿ ಮರಳಿ ಮರಳಿ ಬಗೆದಿರುವೆ.

ನನ್ನ ಗಂಭೀರ ಪ್ರಣಯವನ್ನು ಯಾರೂ ಅರಿಯರು, ನನ್ನ ಅಶ್ರುವನ್ನು ಯಾರೂ ನೋಡರು. ಇಂದು ನಿನ್ನೆದುರು ನಾನು ಬಂದರೆ, ನಿನ್ನನ್ನು ಎಷ್ಟು ಪ್ರೀತಿಸುವೆನೆಂಬುದನ್ನು ಹೇಗೆ ಪ್ರಕಾಶಗೊಳಿಸಲಿ?

೪. ಪಾದ, ಚರಣ ಎರಡೂ ಸಮನಾರ್ಥಕಗಳಾದರೂ, ಇಲ್ಲಿ 'ಚರಣ' ('ನುಡಿ') ಎಂಬ ಮತನ್ನು ಸಂಗೀತ ಪರಿಭಾಷೆಯಲ್ಲಿ ಬಳಸುವ ಅರ್ಥದಲ್ಲಿ ಬಳಸಿದೆ.

ಕಡೆಯ ಪ್ರಾಸದ ಜೋಡಿ ಮತ್ತೆ ಮೊದಲ ಪ್ರಾಸದ ಜೋಡಿಯ ಹಾಗೆಯೇ ಇರುವ ವೈಲಕ್ಷಣ್ಯ ಮುಖ್ಯವಾದದ್ದು; ಏಕೆಂದರೆ, ಠಾಕೂರರು ತಮ್ಮ ಪಕ್ವದಶೆಯಲ್ಲಿ ರಚಿಸಿದ ಗೀತ–ಕವನಗಳಲ್ಲಿ ಬಹು ಸಂಖ್ಯೆಯವಕ್ಕೆ ಅದು ಮುನ್ಸೂಚನೆಯಾಗಿದೆ; ಅಲ್ಲದೆ, ನಿಜವಾಗಿ ಹಾಡಿನ ರೂಪದಲ್ಲಿರುವ ಕವನದ ಸಂಗೀತ ರಚನೆಯ ಆಧಾರದ ಮೇಲೆ ಮಾತ್ರ ಆ ವೈಲಕ್ಷಣ್ಯವನ್ನು ವಿವರಿಸುವುದು ಸಾಧ್ಯ. ಭಾರತೀಯ ಸಂಗೀತದ ಇತಿಹಾಸದ ಮುಂಚಿನ ಕಾಲದಲ್ಲಿಯೆ, ಗೇಯ ಕಾವ್ಯದ (sung poetry) ಅತ್ಯಂತ ಸಂಪ್ರದಾಯನಿಷ್ಠ ಶಾಸ್ತ್ರೀಯ ಪ್ರಕಾರವೆನಿಸಿದ 'ಧ್ರುಪದ್'[೫] ಪ್ರಕಾರದ ಲಕ್ಷಣ ನಿರೂಪಣೆಯಲ್ಲಿ ಮೊದಲ ಪದ್ಯಕ್ಕೆ ಅಪಾರ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಆಧುನಿಕ ಕಾಲದಲ್ಲಿ ಕೂಡ ಇದನ್ನು 'ಸ್ಥಾಯಿ',[೬] ಎಂದರೆ 'ಸ್ಥಿರವಾದ ಖಚಿತವಾದ ಅಂಗ', ಎಂದು ಕರೆಯಲಾಗಿದೆ; ಈಚಿನ ಈ ಪದವು ತಟ್ಟನೆ ಅದರ ಪ್ರಾಚೀನ ರೂಪದೊಡನೆ ಸಂಬಂಧವನ್ನು ಸೂಚಿಸುತ್ತದೆ; ಏಕೆಂದರೆ, 'ಧ್ರುಪದ್' ಎಂಬ ಪದದ ಅರ್ಥವೂ 'ಸ್ಥಿರ ಮತ್ತು ಚಿರ' ಎಂಬುದೇ ಆಗಿದೆ. ಈ 'ಸ್ಥಾಯಿ' ಗೀತದ ಆಧಾರಭೂತವಾದ ಮೂಲಭಾವದ ಭಾಗವಾಗಿದ್ದು, 'ಅಂತರ'[೭] ಮತ್ತು 'ಆಭೋಗ್'[೮] ಎಂಬ ಅದರ ಮುಂದಿನ ಭಾಗಗಳು (ಕೆಲವು ವೇಳೆ 'ಸಂಚಾರಿ'[೯] ಎಂಬ ಇನ್ನೊಂದು ಮೂರನೆಯ ವಿಭಾಗವೂ ಸಹ) ಭಾವದಲ್ಲಿ ಹಾಗೂ ಸಂಗೀತ ರೂಪದಲ್ಲಿ ಅದಕ್ಕೆ ವಿಷಮವಾಗಿ ನಿಲ್ಲುತ್ತವೆ. ಪ್ರತಿಯೊಂದು ವಿಭಾಗ ಹಾಡಿಕೆಯ ಅನಂತರ 'ಸ್ಥಾಯಿ'ಯನ್ನು ಪೂರ್ತಿಯಾಗಿಯೋ ಇಲ್ಲವೆ ಭಾಗಭಾಗವಾಗಿಯೋ ಪಲ್ಲವಿಯಾಗಿ (Refrain) ಪುನರಾವೃತ್ತಿ ಮಾಡಲಾಗುವುದು. ವಿಶೇಷವಾಗಿ ದೇಶ ಭಾಷಾ ಕವಿತೆಯಲ್ಲಿ ಬೆಳೆದು ಬಂದ ಪ್ರಕಾರ, ಹಾಗೂ ಠಾಕೂರರು ಅದನ್ನು ಪರಿಪೂರ್ಣಗೊಳಿಸಿದ ಪ್ರಕಾರ, ಪ್ರಾಸಕ್ರಮವು (Rhyme scheme) ಈ ವೈಲಕ್ಷಣ್ಯವನ್ನು ಗಣನೆಗೆ ತೆಗೆದು ಕೊಂಡಿದೆ; ಹೀಗಾಗಿ, 'ಅಂತರ'ದ ಮತ್ತು ಅದರ ಮುಂದಿನ 'ಚರಣ'ಗಳ ಕಡೆಯ ಪಾದವು ಹಿಂದಿನ ಪಾದಗಳೊಂದಿಗೆ

---

೫. **ಧ್ರುಪದ್:** = 'ಧ್ರುವಪದ'; ಬಗೆಯ ಸಂಗೀತ ಕೃತಿ, ಹಾಗೂ ಅದನ್ನು ಹಾಡುವ ಶೈಲಿ (–ಅನು.)

೬. **ಸ್ಥಾಯಿ:** ಇದನ್ನು 'ಅಸ್ತಾಯಿ' ಎಂದೂ ನಿರ್ದೇಶಿಸಲಾಗಿದೆ. ಕರ್ಣಾಟಕ ಪದ್ಧತಿಯಲ್ಲಿ ಇದು 'ಪಲ್ಲವಿಗೆ' ಸಮಾನ. (–ಅನು.)

೭. **ಅಂತರ:** ಕರ್ಣಾಟಕ ಪದ್ಧತಿಯಲ್ಲಿ 'ಅನುಪಲ್ಲವಿ' (–ಅನು.)

೮. **ಆಭೋಗ್:** ಹಿಂದೂಸ್ತಾನಿ ಪದ್ಧತಿಯಲ್ಲಿ ಹಾಡಿನ ಸಮಾಪ್ತಿ ಭಾಗ. (–ಅನು.)

೯. **ಸಂಚಾರಿ:** ಕರ್ಣಾಟಕ ಪದ್ಧತಿಯಲ್ಲಿ 'ಚರಣ' (ಪದ್ಯ, ನುಡಿ). (ಅ.ಸು.)

ಪ್ರಾಸ ಕೊಡುವುದಿಲ್ಲ. ಆದರೆ, ಪುನರಾವೃತ್ತಿಗೊಳ್ಳುವ 'ಸ್ಥಾಯಿ'ಯೊಂದಿಗೆ ಪ್ರಾಸಗೊಂಡು ಅದು ಮುಗಿಯುತ್ತದೆ. ಬಲು ಹಿಂದಿನ ಈ ಗೀತದಲ್ಲಿಯೆ ಈ ತಂತ್ರದ ಮೊದಲ ಸೂಚನೆಗಳು ಕಂಡುಬರುತ್ತವೆ.

ವಾಸ್ತವವಾಗಿ, ಮೂರನೆಯ 'ಚರಣ'ದ ಕಡೆಯ ಪಾದದ "ಕೊತೊ ಭಾಲ ಬಾಶಿ' ಎಂಬೀ ಪದಗಳು 'ಸ್ಥಾಯಿ'ಯ ಕಡೆಯ ಪಂಕ್ತಿಯ ಕಡೆಯ ಪದಗಳ ಪುನರಾವೃತ್ತಿಯಾಗಿರುವ ಪ್ರಯುಕ್ತ, ಛಂದಸ್ಸಿನ ದೃಷ್ಟಿಯಿಂದ 'ಸ್ಥಾಯಿ'ಯು ಸಮಾಪ್ತಿ ಭಾಗ (ಅಥವಾ 'ಮುಡಿವು') ಎಂದು ಪರಿಗಣಿಸಬಹುದಾಗಿದೆ; ಆದರೆ, ಸಂಗೀತದೃಷ್ಟಿಯಿಂದ ಅವು ತೃಪ್ತಿಕರವಾದ ಸಮಾಪ್ತಿಭಾಗವಾಗುವುದಿಲ್ಲ. ಪೂರ್ತಿಯಾಗಿ ಮೊದಲ ನಾಲ್ಕು ಪಂಕ್ತಿಗಳನ್ನು ಪುನರಾವೃತ್ತಿ ಮಾಡುವುದರಿಂದಲೇ ಹಾಡು ತನ್ನ ಸರಿಯಾದ ಸಮಾಪ್ತಿಯನ್ನು ಪಡೆಯುತ್ತದೆ.

ಮೂಲ ಇಂಗ್ಲಿಷ್ ಗೀತವನ್ನು ಠಾಕೂರರ ರೂಪಾಂತರದೊಂದಿಗೆ ಹೋಲಿಸಿದಾಗ, ಅಚ್ಚ ಇಂಗ್ಲಿಷ್ ನಮೂನೆಯ ಈ ಹಾಡು ಅಷ್ಟೇ ಅಚ್ಚ ಬಂಗಾಳಿ ನಮೂನೆಯ ಹಾಡಾಗಿ ರೂಪಾಂತರ ಹೊಂದಿರುವುದು ಯಾರಿಗಾದರೂ ಬಲವಾಗಿ ಮನದಟ್ಟಾಗುತ್ತದೆ. ರೂಪಾಂತರದಲ್ಲಿ ಮೂಲಕೃತಿಯ ಘಟಕಾಂಶಗಳ ಗುರುತು ಸಿಕ್ಕುತ್ತದೆ; ಆದರೆ ಅವು ನಿರ್ವಹಿಸುವ ಕಾರ್ಯ ಸಂಪೂರ್ಣವಾಗಿ ಭಿನ್ನವಾದುದು. ಮೊದಲ ಪಂಕ್ತಿ ಇಂಗ್ಲಿಷ್ ಹಾಡಿನ ಮೊದಲ ಎರಡು ಪಂಕ್ತಿಗಳಿಗೆ ಸರಿಯಾಗಿ ಅನುರೂಪವಾಗಿದೆ. ಮುಂದಿನ ಪಂಕ್ತಿ ಮಾತ್ರ 'Drink to me' ಎಂಬಲ್ಲಿಯ ಹಾಡಿನ ಮಟ್ಟನ್ನು (Melody) ಪುನರಾವೃತ್ತಿ ಮಾಡದೆ, ಅದಕ್ಕೆ ಪ್ರತಿರೀತಿಯ ಮಟ್ಟಿನ ಧಾಟಿಯನ್ನು (Contrasting melodical line) ಅನುಸರಿಸಿ, ತಾರಸ್ಥಾಯಿಯ ಸ್ವರಾಷ್ಟಕದಿಂದ (upper octave) ಪಾಶ್ಚಾತ್ಯ ಪದ್ಧತಿಯ ಮೂಲಸ್ವರಕ್ಕೆ (Jonic) ಸಮನಾದ ಸ್ವರಕ್ಕೆ ಇಳಿದು ಬರುತ್ತದೆ. ಅನಂತರ, ಬಂಗಾಳಿ ಕವಿಯ ಮೂರನೆಯ ಪದವು ಇಂಗ್ಲಿಷ್ ಗೀತದ ಐದು ಹಾಗೂ ಆರನೆಯ ಪಂಕ್ತಿಗಳಿಗೆ ಪೂರ್ತಿ ಸರಿಸಮನಾಗಿ ಮುಂದುವರಿಯುತ್ತದೆ; ಕಡೆಯ ಪಂಕ್ತಿಯ ಪ್ರಾರಂಭ ಗೀತ ಭಾಗದ ಪುನರಾವೃತ್ತಿಯಾದರೂ ಅದರ ಯಾಂತ್ರಿಕ (ಮಕ್ಕಿಕಾಮಕ್ಕಿ) ಅನುಕರಣೆಯಲ್ಲ; ಏಕೆಂದರೆ, ಮೊದಲ ಆವರ್ತಖಂದ(Bar)ದಲ್ಲಿ ಅದು ಸೂಕ್ಷ್ಮವಾದ ವ್ಯತ್ಯಾಸವನ್ನು ಹೊಂದಿದೆ. ಇದರ ಪರಿಣಾಮವಾಗಿ, ಇಂಗ್ಲಿಷ್ ಗೀತದ ಪೂರ್ಣವ್ಯಾಪ್ತಿ ಬಂಗಾಳಿ ಗೀತದ ಮೊದಲ ಚರಣಕ್ಕೇ ಬರಿದಾಗಿ

ಹೋಗಿದೆ. ಅಲ್ಲಿಂದ ಮುಂದಕ್ಕೆ ಕವಿ ತನ್ನ ಮಾದರಿಯನ್ನು ನೈಜ ಬಂಗಾಳಿ ಹಾಡಾಗಿಯೆ ಭಾವಿಸಿದ್ದಾರೆ; ಹಾಗೂ, ಸ್ವರಶ್ರೇಣಿಯ ಅತ್ಯಂತ ಕೆಳಭಾಗಕ್ಕೆ ಪ್ರಾಧಾನ್ಯವನ್ನು ಕೊಡುವುದರ ಮೂಲಕವೂ, ಸಾಹಿತ್ಯದ (ಗೀತದ ಮಾತುಗಳ) ಧ್ಯಾನಭಾವಕ್ಕೆ ಸೂಕ್ಷ್ಮವಾದ ಮಾರುಲಿಯಾಗಿ 'ಆಧಾರಸ್ವರ;ಕ್ಕೆ (Jonic) ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದರ ಮೂಲಕವೂ 'ಸ್ಥಾಯಿ'ಯ (ಪಲ್ಲವಿಯ) 'ವರ್ಣಮಟ್ಟಿ'ನ ವಿನ್ಯಾಸಕ್ಕೆ (Melodic pattern) ವಿದೃಶವಾಗಿರುವಂತೆ ಉಚಿತ 'ಅಂತರ'ವನ್ನು (ಅನುಪಲ್ಲವಿಯನ್ನು) ತಂದಿದ್ದಾರೆ. ಈ ಚರಣದ ದ್ವಿತೀಯಾರ್ಧವು 'ಸ್ಥಾಯಿ'ಯ ದ್ವಿತೀಯಾರ್ಧಕ್ಕೆ ಸಂವಾದಿಯಾಗಿದೆ. ಮೂರನೆಯ ಚರಣದಲ್ಲಿ ಎರಡನೆಯದರ ಪುನರಾವೃತ್ತಿಯ ಸೂಚನೆ ಕಂಡುಬರುತ್ತದೆ; ಆದರೆ, ಅದರ ದ್ವಿತೀಯಾರ್ಧದಲ್ಲಿ ಒಂದು ಅನಿರೀಕ್ಷಿತ ಬೆಳವಣಿಗೆ ತಟ್ಟನೆ ಗೋಚರಿಸುತ್ತದೆ; ಇಲ್ಲಿ, ತನ್ನ ಆರಾಧ್ಯಮೂರ್ತಿಯನ್ನು ಸಂಧಿಸುವ ಸಾಧ್ಯತೆಯ ಆಲೋಚನೆ ತಾರ ಸ್ವರಾಷ್ಟಕಕ್ಕೆ (upper octave) ಪ್ರಾಧಾನ್ಯ ಕೊಡುವಂತೆ ಗಾಯಕನನ್ನು ಚೋದಿಸುತ್ತದೆ; ತದನಂತರ, ಒಂದು ಪ್ರಾತಿನಿಧಿಕವಾದ ಭಾರತೀಯ ವೈಲಕ್ಷಣ್ಯವನ್ನು ಬಳಸುತ್ತಾನೆ: ಅದು ಏನೆಂದರೆ, ಅವರೋಹಣ ಸ್ವರಶ್ರೇಣಿಯ ಪ್ರಭಾವ ಕೋಮಲ ಸ್ವರ (The flattened leading note in a descending passage, ಇದು, ಹಿಂದಿನ ಆವರ್ತ ಖಂಡದಲ್ಲಿ (Bar) ಪ್ರಧಾನವಾಗಿರುವ ಅದೇ ಸ್ವರದ ಅರ್ಧಸ್ವರ ರೂಪಕ್ಕೆ (semitone) ಕೊಟ್ಟಿರುವ ಪ್ರಾಮುಖ್ಯತೆಯೊಂದಿಗೆ ಹೋಲಿಸಿದರೆ, ತೀವ್ರವೂ ಅನಿರೀಕ್ಷಿತವೂ ಆದ ವೈಷಮ್ಯವಾಗಿ ಕಂಡುಬರುತ್ತದೆ. ಈ ಅವರೋಹಣವು ಪಾಶ್ಚಾತ್ಯ ಸಂಗೀತದಲ್ಲಿ ಇರುವಂತೆ ಸ್ವರಶ್ರೇಣಿಯ ನಾಲ್ಕನೆಯ ಸ್ವರದ (Sub-dominant) ಸ್ವರ ಪರಿವರ್ತನೆಯಲ್ಲ. ಈ ಸ್ವರ ಸಂಯೋಜನೆ (Notation)ಯಲ್ಲಿ ಕಾಣಿಸಿರುವಂತೆ ಸ್ವರವೆ (ಸ) ರಾಗಗ್ರಾಮದ ಆಧಾರ ಷಡ್ಜಸ್ವರ (Modal basis)ವಾಗಿದೆ. ತಟ್ಟನೆ ಆ ಕೋಮಲ ಸ್ವರಕ್ಕೆ (flat) ತಿರುಗುವ ಈ ಪರಿವರ್ತನೆ. ಹಿತಕರವಾದ ವಿದೃಶ ಪರಿವರ್ತನೆಯಾಗಿ ತೋರುತ್ತದೆಯೆ ಹೊರತು, ಆಧಾರ ಸ್ವರದ (Tonic) ಪ್ರಾಸಂಗಿಕ ಪರಿವರ್ತನೆಯಾಗಿ ಎಂದಿಗೂ ಅಲ್ಲ. ಸ್ವರಮುಖ್ಯವಾದ 'ಕೊತೊ ಭಾಲಬಾರೆ' ಎಂಬ ಪದಗಳನ್ನು ಒಳಗೊಂಡ ಮುಂದಿನ ಆವರ್ತಖಂಡದಲ್ಲಿ B (Bar) ಶುದ್ಧ ಸ್ವರವನ್ನು (G natural) ಮತ್ತೆ ಅವರೋಹಣದಲ್ಲಿ ತರಲಾಗಿದೆ. ಇವುಗಳ ಪರಿಣಾಮವಾಗಿ ಪ್ರಾರಂಭ ಚರಣದ ಪುನರಾವೃತ್ತಿ ಅಗತ್ಯವಾಗುತ್ತದೆ.

ಈ ಗೀತವನ್ನು ಪರಿಶೀಲಿಸಿದರೆ, ಸ್ವತಂತ್ರ ಬಂಗಾಳಿ ಗೀತದ ಬದಲಾಗದಂತಹ ಒಂದು ಆವರ್ತಖಂಡವು (Bar) ಅದರಲ್ಲಿ ಇಲ್ಲ (Aಅಡಿ ಟಿಪ್ಪಣಿ ನೋಡಿ) ಆದರೂ, ಅದರಲ್ಲಿ ಇಂಗ್ಲಿಷ್ ಮೂಲದ ನೆನಪು ಸ್ಪಷ್ಟವಾಗಿ ಅಚ್ಚೊತ್ತಿರುವುದು ವ್ಯಕ್ತಪಡುತ್ತದೆ; ಈ ಅಂಶವನ್ನು ಗಮನಿಸದಿರಲಾಗುವುದಿಲ್ಲ. ತರುಣನೊಬ್ಬನ ಕಾರ್ಯವಿಧಾನಕ್ಕೆ ಅದು ಅತ್ಯುತ್ಕೃಷ್ಟ ನಿದರ್ಶನ; ಆತ ವಯಸ್ಸಾದ ಮೇಲೆ, "ದುರ್ಬಲರು ಮಾತ್ರ ಎರವಲು ಪಡೆಯಲು ಹೆದರುತ್ತಾರೆ; ಏಕೆಂದರೆ, ತಮ್ಮ ಸ್ವಂತ ನಾಣ್ಯಗಳ ಮೂಲಕ ಸಾಲವನ್ನು ಹಿಂತಿರುಗಿಸಲಾರೆವು" ಎಂದು ಅವರು ಬಲ್ಲರು. ಅಲ್ಲಲ್ಲಿ ಅಪಕ್ವತೆಯ ಕುರುಹುಗಳು ಕಂಡು ಬಂದರೂ ಕೂಡ, ಅತ್ಯಂತ ಯಶಸ್ವಿಯಾಗಿಯೂ, ಅದ್ಭುತವಾಗಿಯೂ ರೂಪಾಂತರ ಕಾರ್ಯ ಸಿದ್ಧಿಸಿದೆ. ಅವರು ತಾವು ಪಡೆದ ಸಾಲವನ್ನು ತಮ್ಮ ಸ್ವಂತ ನಾಣ್ಯದಲ್ಲಿ ಆಗಲೇ ತೀರಿಸಿ ಬಿಟ್ಟಿದ್ದಾರೆ.

ಆಮೇಲಿನ ವರ್ಷಗಳಲ್ಲಿ ತರುಣರಾಗಿದ್ದಾಗ ಪಾಶ್ಚಾತ್ಯ ಸಂಗೀತದಿಂದ ಅವರು ಪಡೆಯುತ್ತಿದ್ದ ಈ ಎರವಲುಗಳು ಪೂರ್ತಿ ನಿಂತುಹೋಗಿವೆ. ಅವರ ಬಹು ಪೂರ್ವ ವಯಸ್ಸಿನಲ್ಲಿ ಕಂಡುಬಂದ ಐರೋಪ್ಯ ಗೀತಗಳ ಪ್ರಭಾವವು ಅವರ ಪಕ್ವದಶೆಯ ಕೃತಿಗಳಲ್ಲಿ ಕಂಡುಬರುವುದಿಲ್ಲ. ಶಾಂತಿನಿಕೇತನದ ಶಾಲಾಗೀತ, ಅಥವಾ 'ಅಚಲಾಯತನ'ದಲ್ಲಿ ಬರುವ 'ಆಲೋ ಆಮಾರ್ ಆಲೋ' ('ಬೆಳಕೇ ನನ್ನ ಬೆಳಕೇ') ಎಂಬ 'ಅಮರ ಜ್ಯೋತಿ'ಯನ್ನು ಕುರಿತ ಗೀತ– ಇಂತಹ ಪ್ರಬೋಧಕ ಗೀತೆಗಳಲ್ಲಿ ಆ ಪ್ರಭಾವವು ಕೆಲವು ವೇಳೆ ಗಮನಕ್ಕೆ ಬರುತ್ತದೆ; ಅಂಥಲ್ಲಿ, ಒಂದಾನೊಂದು ಕಾಲದಲ್ಲಿ ಅವರಿಗೆ ಐರೋಪ್ಯಗೀತಗಳು ಗೊತ್ತಿಲ್ಲದಿದ್ದರೆ, ಅಸ್ತಿತ್ವಕ್ಕೆ ಬಾರದಿರುತ್ತಿದ್ದಂತಹ ಸಂಗೀತ ರಚನಾ ವೈಖರಿ (Turn of musical phrasing) ತಟ್ಟನೆ ಗೋಚರಿಸುತ್ತದೆ. (ಅಡಿ ಟಿಪ್ಪಣಿ ನೋಡಿ B). ಆದರೆ ಮಾತ್ರ, ಅದು ಯಾವಾಗಲೂ ರಾಗ ಧಾಟಿಗೆ (Melodical line) ಸಂಬಂಧಪಟ್ಟಿರುತ್ತದೆ. ರವೀಂದ್ರನಾಥರು ಎಂದಿಗೂ 'ಧ್ವನಿಸಾಂಗತ್ಯ'ದ (star

---

A ಅಡಿಟಿಪ್ಪಣಿ: 'ದೊರೆ' ಎಂಬ ಪದ ಸಂಬಂಧವಾದ ಕಿಂಚಿತ್ ಅಪೂರ್ವಸ್ವರ ಸಂಚಾರವನ್ನು (Chromatic passage) ಬಿಟ್ಟು,

೧೦. ರವೀಂದ್ರರ ಒಂದು ನಾಟಕ.

B. ೩ ಮತ್ತು ೪ನಯ ಆವರ್ತ ಖಂಡಗಳಲ್ಲಿ ೧ನೆಯ ಮತ್ತು ೨ನೆಯ ಆವರ್ತಖಂಡಗಳ ರಾಘಧಾಟಿಯ ಅನುಕರಣೆಯಿದ್ದು, ಶುದ್ಧ ಭಾರತೀಯ ಸಂಪ್ರದಾಯಗಳ ಪ್ರಕಾರ 'ಶುದ್ಧ' ಸ್ವರವಾಗಿ ಉಳಿಯಬೇಕಾಗಿದ್ದುದು 'ತೀವ್ರ'ವಾಗಿ ಪರಿಣಮಿಸಿದೆ.(Chromatic passage) ಬಿಟ್ಟು

mony) ಕಡೆಗೆ ಅಕರ್ಷಿತರಾಗಲಿಲ್ಲ; ಮತ್ತು, ಅವರ ಒಪ್ಪಿಗೆಯಿಲ್ಲದೆ, ಅವರ ಮರಣಾನಂತರ ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತಕಾರರು ಅವರ ಗೀತಗಳಿಗೆ (Melodies) 'ಧ್ವನಿಸಾಂಗತ್ಯ ರಚನೆಗಳನ್ನು (Harmonies) ಸಂಯೋಜಿಸಲು ಪ್ರಯತ್ನ ಪಟ್ಟಾಗಲೆಲ್ಲ ಗುರುತು ಹಿಡಿಯಲಾಗದಂತೆ ಅವರ ಗೀತಗಳನ್ನು ಕುಲಗೆಡಿಸಿಬಿಟ್ಟಿದ್ದಾರೆ.

ಏನೇ ಆಗಲಿ, ರವೀಂದ್ರರ ಸಂಗೀತದಲ್ಲಿ ಒಂದು ಸಾಧನೆ ಫಲಿಸಿದೆ; ಪಾಶ್ಚಾತ್ಯ ಸಂಗೀತ ರಚನೆಗಳ ಪರಿಚಯ ಅವರಿಗಿಲ್ಲದಿದ್ದ ಭಾಗದಲ್ಲಿ ಅದು ಅಷ್ಟು ಯಶಸ್ವಿಯಾಗಿ ಸಿದ್ಧಿಸುತ್ತಿರಲಿಲ್ಲ. ತಮ್ಮ ಗೀತಗಳು ಅನುಲ್ಲಂಘನೀಯ ವಾದವುಗಳು, ಇತರ ಗಾಯಕರು ಯಾರವೋ ಹಾಡುಗಳನ್ನು ಹಾಡುಗಳು ರೂಢಿಯಾಗಿ ಮಾಡುವಂತೆ ಸ್ವಂತದ ಮಾರ್ಪಾಟುಗಳನ್ನು ತಮ್ಮ ಗೀತಗಳಲ್ಲಿ ತರಕೂಡದು, ಎಂದು ಪರಿಗಣಿಸಿದ ಪ್ರಥಮ ಸಂಗೀತರಚನಕಾರರು ಇವರು. ಅಲ್ಲದೆ, ತಮ್ಮ ಸಂಗೀತರಚನೆಗಳು ಪರಿಪೂರ್ಣಕೃತಿಗಳು. ಅವುಗಳಲ್ಲಿ ಎಲ್ಲಿ ಅಲಂಕರಣ ಅವಶ್ಯವೆಂದು ತಾವೇ ಉದ್ದೇಶ ಪಟ್ಟಿರುವರೋ ಅಲ್ಲಿ ಮಾತ್ರ ಅವನ್ನು ತರತಕ್ಕದ್ದು ಎಂದು ಭಾವಿಸಿದ ಪ್ರಥಮ ಭಾರತೀಯ ಕೃತಿಕಾರರು ಯಾರೆಂದರೆ, ನಿಸ್ಸಂದೇಹವಾಗಿ ಇವರೆ. ಹಾಡಿನ ಮಟ್ಟಿನಲ್ಲಿ ಒಂದು ವ್ಯತ್ಯಾಸ, ಲಯಗತಿಯಲ್ಲಿ (ತಾಳದಲ್ಲಿ) ಒಂದು ಮಾರ್ಪಾಟು, ಅಲ್ಲೋ ಇಲ್ಲೋ ಒಂದು ಹೆಚ್ಚಿನ 'ಕಂಪನ' (Trill) ಅಥವಾ ಸ್ವರಗಳ ತ್ವರಿತ ಓಟ (ಉರುಟು) (Run)– ಇಷ್ಟು ಸಾಕು ಮೂಲಭಾವವನ್ನು ಊನ ಮಾಡುವುದಕ್ಕೆ.

ತಾವು ರಚಿಸಿದ ಮಟ್ಟು ತಾವು ಇಟ್ಟು ಪದಗಳಲ್ಲಿ ಅಡಗಿರುವ ಭಾವವನ್ನು ಪ್ರಕಾಶಪಡಿಸುತ್ತದೆ ಎಂದು ಅವರು ದೃಢವಾಗಿ ನಂಬಿದ್ದರು; ಆದ್ದರಿಂದ ಅವರು ರಚಿಸಿದ್ದರಲ್ಲಿ ಏನಾದರೊಂದು ಮಾರ್ಪಡು ಮಾಡುವುದೆಂದರೆ, ಅವರ ಉದ್ದೇಶಗಳನ್ನು ತಪ್ಪದೆ ಭಂಗಗೊಳಿಸಿದಂತೆಯೇ ಸರಿ. ಷುಬರ್ಟರ (Schubert) ಗೀತವನ್ನು ಆ ರಚನಕಾರರ ಉದ್ದೇಶಕ್ಕೆ ಎಷ್ಟು ಸಮೀಪವಾಗಿ ಹಾಡಬಹುದೋ ಅಷ್ಟು ಸಮೀಪವಾಗಿ ಹಾಡಿದಾಗ ಅದು ಹೇಗೆ ಉತ್ತಮವಾಗಿರುವುದೋ ಅದೇ ರೀತಿಯಲ್ಲಿ, ಠಾಕೂರರು ತಮ್ಮ ಗೀತ ಹೇಗಿರಬೇಕೆಂದು ಅಪೇಕ್ಷಿಸಿದರೋ ಆ ರೀತಿಗೆ ಆದಷ್ಟು ಸಮೀಪವಾಗಿ ಹಾಡಿದಾಗಲೇ ಅದು ಉತ್ತಮವಾಗಿರುವುದು. ಹೀಗೆಂದಾಗ, ಸರ್ವಸಾಮಾನ್ಯವಾದ ಭಾರತೀಯ ಮನೋಭಾವದಲ್ಲಿಯೇ ಒಂದು ಪರಿವರ್ತನೆ ಎಂದಾಯಿತು; ಪೂರ್ತಿಯಾಗಿ ಪರಿಷ್ಕಾರ ಮಾಡಿದ ಐರೋಪ್ಯ

ಗೀತವೊಂದರ ಪರಿಪೂರ್ಣತೆಯ ಸೊಬಗನ್ನು ರವೀಂದ್ರರು ಒಂದು ಕಾಲದಲ್ಲಿ ಮನಗಾಣದೆ ಹೋಗಿದ್ದರೆ, ಬಹುಶಃ ಆ ಪರಿವರ್ತನೆ ಸಂಭವಿಸುತ್ತಲೇ ಇರಲಿಲ್ಲ.

* * * *

[ವಿಶೇಷ ಸೂಚನೆ: ಅಂಕಿಗಳಿಂದ ನಿರ್ದೇಶಿಸಿರುವ ಅಡಿಟಿಪ್ಪಣಿಗಳೆಲ್ಲವೂ ಅನುವಾದಕನವು. ಅಡಿಟಿಪ್ಪಣಿ ೨ರಲ್ಲಿ ಕೊಟ್ಟಿರುವ ರವೀಂದ್ರ ಗೀತದ ಭಾವಾನುವಾದವನ್ನು ಮೂಲ ಲೇಖಕರ ಇಂಗ್ಲಿಷ್ ಅನುವಾದವನ್ನು ಅವಲಂಬಿಸಿ ಮಾಡಲಾಗಿದೆ. –ಅನುವಾದಕ]

೨. ಮಳೆಬಿಲ್ಲು

ನನ್ನ ಕಣ್ಣಿಗೆ ಹಬ್ಬ ಬಾಲ ಚಿಲುಮೆಯ ಚೆಲುವು;
ಜೀವನ ಪಾನಭವನ; ಒಲವ ಮದಿರೆಯ ಕುಡಿವೆನಲ್ಲಿ ಮನಸಾರ;
ಜ್ಞಾನಮಾರ್ಗದಲಿ, ಧ್ಯಾನಪಥದಲ್ಲಿ, ಯಾತ್ರಿಕನು ನಾನು:
ಶಮೆ ಶಾಂತಿಗಳ ಸದಾ ಕಾಪಾಡುವವನು.
ನನ್ನ ಸಂಸ್ಕೃತಿಯ ನಯವಿನಯಗಳ ಕುರುಹು, ಎಲ್ಲೋರ;
ನನ್ನ ಪವನ ಜೀವನದ ಚೇತನದ ರಕ್ಷೆ, ಅಜಂತ.
ನನ್ನ ಜೀವನದರ್ಶನದ ಫಲಿತ ಸೂಕ್ಷ್ಮ ನಯ ನೀತಿಗಳೆ
ಹಾರಾಡುತಿಹ ಪಾರಿವಾಳಗಳು ನನ್ನ ಬಗೆ ಬಾನಿನಲಿ.

ಇಲ್ಲಿಯೇ ಗೌತಮನು ಸಾರಿದುದು ಮಾನವ ಪ್ರೇಮ ಸಂದೇಶವನು;
ಇಲ್ಲಿಯೇ ಕೃಷ್ಣನಾ ಮಧುರ ಮುರಲೀನಾದ ಹೊಮ್ಮಿದ್ದು;
ಇಲ್ಲಿಯೇ ಐಕ್ಯ ಪ್ರವಚನವನು ನೀಡಿದುದು ನಾನಕ್;
ಇಲ್ಲಿಯೇ ಅಜಮೀರಿ ಖಾಜನಿಂದಾಯ್ತು ನಾಡು ಪವಿತ್ರ;
ನಮ್ಮ ಸಂಸ್ಕೃತಿ ನಮ್ಮ ಐಕ್ಯ ಸಮತಾಭಾವಗಳಿಗೆ ಜೀವಂತ ಸಾಕ್ಷಿ;
ಲಾಲಜಿಯವರ ಸಾಧುತ್ವ ಸಜ್ಜನಿಕೆ ಮತ್ತೊಂದು ಸಾಕ್ಷಿಯದಕೆ;
ಅದರ ಹೊಂಬೆಳಗೆ ಷೇಕ್ ನೂರು ದೀನರ ಕಣ್ಣ ಹೊಳಪು;
ಇಂದಿಗೂ ನಮ್ಮ ಕವಿಗಳ ಗೀತಕಾಧಾರವೈಕ್ಯಭಾವ.

ನಾವವರ ಸಂತಾನ: ಎಡರು ತೊಡರುಗಳೇನೆ ಇರಲಿ,
ನಮ್ಮ ಭವ್ಯ ಪರಂಪರೆಯ ನಾವು ಕಾಯ್ದುಕೊಳ್ಳುವೆವು: ಇದು ನನ್ನ ವಿಶ್ವಾಸ.
ಬನ್ನಿ ಗೆಳೆಯರೆ, ಬಾಳ ಸುಖದ ಸಂಗೀತಕ್ಕೆ ದನಿಯ ಕೂಡಿಸುವ,
ಪ್ರೇಮಜಲಧಿಯನದರ ಗಾಢನಿದ್ರೆಯ ಬಿಡಿಸುತೆಚ್ಚರಿಸುವ
ವಂಗಕನ್ಯೆಯ ಕುಂತಳದ ಕುಟಿಲಜಾಲವನು ಬಿಡಿಸುತಿರೆ ನಿನ್ನ ಬೆರಳು,
ಕಾಶ್ಮೀರ ಕನ್ನೆಕೆನ್ನೆಯ ಮಚ್ಚೆಗಳ ಮೇಲಲಂಕರಿಸುವೆನು ಮುತ್ತಗಳ ನಾನು.
ಸಂಗಾತಿ ಯೌವನವ ನೀನಿಂದು ಎಚ್ಚರಿಸು,
ಪ್ರೇಮಮಧುಪಾತ್ರೆಯನು ಅದಕೆಂದೆ ತುಂಬಿಡುವೆ ನಾನು.

ಪ್ರೇಮ ಗೀತಗಳ ಕವಿಗಾಯಕರೆ ನೀವೆಲ್ಲ ನೆರೆದು
ತುಂಬುಜೌವನದೆ ಗೆಲವಿನ ಶಾಂತಿ ವಧುವ ಸಿಂಗರಿಸಿ.
ಕಾಶ್ಮೀರದಿಂದ ಕೇರಳದವರೆಗಿಹ ನಾಡ ಬಾಂಧವರೆ,
ಬಂದು ಒಂದಾಗಿ ನೆರೆಯಿರಿ, ಹೃದಯದಾಳವನು ಮಿಡಿವ ಪ್ರೀತಿಯ
ಗೀತಗಳ ಹಾಡಿ:
ನಮ್ಮೆಲ್ಲ ಗೀತಗಳ ಶ್ರುತಿಯೊಂದೆ ಲಯವೊಂದೆ,
ನುಡಿ ಬೇರೆ ದನಿ ಬೇರೆಯಾದರೇನು, ರಾಗದೊಳಚೇತನದ ಭಾವವೊಂದೆ.
ನನ್ನ ಎದೆ ಮಿಡಿತಗಳ ಅರ್ಥವನು ಅರುಹೆ ನಾಲಗೆ ತೊಳಲುತಿದೆ ಬಳಲುತಿದೆ
ಅಹುದು, ಮೌನವೆ ತಕ್ಕ ಭಾಷೆ ಪ್ರೇಮದ ಸಾರ್ಥಸೂಚನೆಗೆ
ಐಕ್ಯ, ಏಕೋಭಾವ– ಇದೆ ನಮ್ಮ ಜೀವನದ ಪೂರ್ವಿಕರ ಉಳಿಕೆ ಗಳಿಕೆ;
ಹಲವು ನುಡಿತನವೆಂದಿಗೂ ಹರಿಯಲಾರದೀ ಒಂದುತನದ ಬಂಧುತನವ
ನಾವೆಲ್ಲರೊಂದೇ; ನಮ್ಮೆಲ್ಲರೆದೆಯಾಶೆಯಾಕಾಂಕ್ಷೆಗಳ ಸಲಹುತಿರುವುದೊಂದುತನ;
ನಮ್ರತೆಯ ಪ್ರೇಮದಲಿ ನಾವಿಟ್ಟ ವಿಶ್ವಾಸ ನಮ್ಮ ಕಣ್ಣಿನ ಬೆಳಕ
ಧನ್ಯವಾಗಲಿ ಚಿರಂತನವಿಂಥ ಭಾವನೆಗಳ ತಳೆದು ಮಾನವಕುಲ;
ನಮ್ಮ ಪೂಜೆಗಳಲ್ಲಿ ಹರಿದು ಬೆಳಗಲಿ ನಿತ್ಯವೀ ಸ್ನೇಹ ದೀಪ;
ಈಗಲೂ ಆಗೊಮ್ಮೆ ಈಗೊಮ್ಮೆ ಮೇಘಗರ್ಜನೆಯ ಕೋಲಾಹಲವು ನಭದ
ಉದ್ಘೋಷಿಸಬಹುದು;
ಆದರದೊ ನೋಡಲ್ಲಿ ಐಕ್ಯತೆಯ ಮಳೆಬಿಲ್ಲು, ಅದರದೇ ಸೊಬಗು
ಸೊಂಪೆಲ್ಲೆಲ್ಲು.

* * * *

ಕಾಶ್ಮೀರಿ ಮೂಲ: ರಷೀದ್ ನಾಸ್‌ಕಿ;
ಕನ್ನಡ ಅನುವಾದ: ಎಂ.ವಿ. ಸೀತಾರಾಮಯ್ಯ

೨೨–೧–೧೯೬೮
ಬೆಂಗಳೂರು–೧೯

ಗುಂಪು ೫ – ವಿಜ್ಞಾನ (ಗ್ರಂಥ)

ಆಕಾಶಯಾನ

ವಿಷಯಸೂಚಿ

ಮೊದಲ ಭಾರಿಯ ಭೂಮಿಯ ಸುತ್ತಣ ಹಾರಿಕೆಗಳು; ಉತ್ತರ ಧ್ರುವಕ್ಕೆ ಹಾರಿಕೆಗಳು; ಅಟ್ಲಾಂಡಿಕ್ ಸಾಗರವನ್ನು ದಾಟಿದ್ದು; ಒಬ್ಬ ಹೆಂಗಸು ಮೊದಲ ಸಲ ತನಿಯಾಗಿ ದಾಟಿದ್ದು; ಪೆಸಿಫಿಕ್ ಸಾಗರ ದಾಟಿದ್ದು; ಇಂಗ್ಲೆಂಡಿನಿಂದ ಇಂಡಿಯಕ್ಕೆ ಹಾರಿಕೆಗಳು; ಇಂಗ್ಲೆಂಡ್–ಆಸ್ಟ್ರೇಲಿಯಾ ಹಾರಿಕೆಗಳು; ಇಂಗ್ಲೆಂಡ್–ಆಸ್ಟ್ರೇಲಿಯಾ ಹಾರಿಕೆಗಳು; ಇಂಗ್ಲೆಂಡಿನಿಂದ ಆಫ್ರಿಕಕ್ಕೆ ಹಾರಿಕೆಗಳು.

ಪ್ರಕರಣ ೬

ಸಾಗಣೆ; ಆಕಾಶ ಪರಿಶೀಲನೆ ಮತ್ತು ಆಕಾಸ ಛಾಯಾಚಿತ್ರ ಗ್ರಹಣ; ಪ್ರಾಚೀನ ವಸ್ತುಶಾಸ್ತ್ರ; ಪರಿಶೋಧನೆ; ಸಂಕೀರ್ಣ; ಯುದ್ಧ.

ಪ್ರಕರಣ ೭

ವಿಮಾನದ ಪರಿಮಿತಿಗಳು: ಅದರ ಮುಂದಿನ ಬೆಲವಣಿಗೆ; ಮೇಲಾಕಾಶ ಹಾರಿಕೆ, ರಾಕೆಟ್ ಹಾರಿಕೆ.

ಪ್ರಕರಣ ೮

ಆಕಾಶಯಾನದಲ್ಲಿ ಜೀವನಮಾರ್ಗಗಳು; ವಿಮಾನ ಹಾರಿಸುವುದು; ವಿಮಾನ ನಡಸುವವನ ಜೀವನ; ಅಸೈನಿಕ ಹಾರಿಕೆಗೆ ಸಂಬಂಧಪಟ್ಟ ಉದ್ಯೋಗಗಳು; ವಾಣಿಜ್ಯ ಹಾರಿಕೆ ಮತ್ತು ಬಾಡಿಗೆ ವಿಮಾನ ಹಾರಿಕೆ; ವಿಮಾನ ಪರೀಕ್ಷೆಯ ಹಾರಿಕೆ; ಪ್ರದರ್ಶನ ಹಾರಿಕೆ ಮತ್ತು ವ್ಯಾಪಾರ ಪ್ರಕಟನೆ ಹಾರಿಕೆ; ಖಾಸಗಿ ಉದ್ಯೋಗ; ವಾಯುಯಾನ ಶಿಲ್ಪ; ನಿಸ್ತಂತು ಕಾರ್ಯನಿರ್ವಾಹ; ವಿಮಾನ ಕಾರ್ಯಾಡಳಿತ; ವಿಮಾನ ರಚನೆ; ವಿಮಾನ ಮಾರಾಟ.

ಆಕಾಶಯಾನ

ಪ್ರಕರಣ ೧

ಆಕಾಶಯಾನದ ಚರಿತ್ರೆ ಮತ್ತು ಬೆಳವಣಿಗೆ

ಮನುಷ್ಯನು ಈ ಭೂಗ್ರಹದ ಮೇಲೆ ತನ್ನ ಅತ್ಯಂತ ವೈವಿಧ್ಯಪೂರ್ಣವಾದ ಜೀವನವನ್ನು ಮೊದಲು ಮಾಡಿದಂದಿನಿಂದಲೂ ಆಕಾಶದಲ್ಲಿ ಹಾರಬೇಕೆಂಬುದು ಅವನ ಕನಸಾಗಿದೆ. ದೈವಸೃಷ್ಟಿಯಲ್ಲಿ ಅತ್ಯಂತ ಪ್ರಿಯವಾದ, ಚೆಲುವಾದ ಹಕ್ಕಿಗಳು ತಮ್ಮ ಮನಬಂದಂತೆ ಹಾರಾಡುವ ರೀತಿಯಲ್ಲಿ ತಾನೂ ಸಹ ಮರದಿಂದ ಮರಕ್ಕೆ, ಬೆಟ್ಟದಿಂದ ಬಯಲಿಗೆ, ಬಯಲಿನಿಂದ ಕಡಲಿಗೆ ಹಾರಿಹೋಗಬೇಕೆಂಬುದು ಅವನು ಹೃದಯದಲ್ಲಿ ಕಾಪಿಟ್ಟುಕೊಂಡು ಬಂದಿರುವ ಹಂಬಲಾಗಿದೆ. ಮನುಷ್ಯರು ರೆಕ್ಕೆ ಕಟ್ಟಿಕೊಂಡು ಹಾರಲು ಪ್ರಯತ್ನಪಟ್ಟು ಪ್ರಾಣ ಕಳೆದುಕೊಂಡಿರುವ ನಿದರ್ಶನಗಳನ್ನು ಗ್ರೀಕ್ ಪುರಾಣದಿಂದ ಎತ್ತಿಕೊಡಬಹುದು. ಮತ್ತೆ, ಈ ಭೂಮಿಯಲ್ಲಿ ದೇವತೆಗಳೇ ಸಂಚರಿಸುತ್ತಿದ್ದಂತಹ ಆ ಪ್ರಾಚೀನ ಕಾಲದಲ್ಲಿ ಪ್ರಭುವಾದ ರಾಮದೇವರು ತನ್ನ ಪ್ರಿಯೆಯಾದ ಸೀತೆಯೊಡನೆ ಲಂಕೆಯಿಂದ ಅಯೋಧ್ಯಾ ನಗರಿಗೆ ಮಾಡಿದ ಪ್ರಸಿದ್ಧವಾದ ವಿಮಾನ ಪ್ರಯಾಣದ ಉಲ್ಲೇಖ ರಾಮಾಯಣದಲ್ಲಿ ಬರುತ್ತದೆ. ಬೇರೆ ಬೇರೆ ನಾಗರಿಕತೆಗಳ ಪುರಾಣಗಳು ಚಾರಿತ್ರಿಕ ಸತ್ಯಗಳಲ್ಲವೆಂದೂ ಹಿಂದಿನ ಕಾಲದ ಕೆಲವು ಕವಿಗಳ ಕಲ್ಪನಾಶಕ್ತಿಯುಳ್ಳ ಪ್ರತಿಭೆ ಸೃಷ್ಟಿಸಿದ ಬರಿಯ ಕಟ್ಟುಕತೆಗಳೆಂದೂ ಇಟ್ಟುಕೊಳ್ಳೋಣ; ಆ ಪುರಾಣಗಳ ಕರ್ತೃಗಳಿಗೆ ಮನುಷ್ಯರು ಆಕಾಶದಲ್ಲಿ ಹಾರುವರೆಂಬ ಕಲ್ಪನೆಯಿದ್ದ ಅಂಶವೇ, ಅನಾದಿಕಾಲದಿಂದಲೂ ಮನುಷ್ಯನ ಮನಸ್ಸಿನಲ್ಲಿ ಹಾರುವಿಕೆಯ ಭಾವನೆ ಇತ್ತೆಂಬುದನ್ನು ಸ್ಥಿರಪಡಿಸುತ್ತದೆ. ಹೀಗಿರುವುದರಿಂದ, ಆಕಾಶದಲ್ಲಿ ಪ್ರಯಾಣ ಮಾಡಬೇಕೆಂಬ ಮನುಷ್ಯನ ಅಪೇಕ್ಷೆಯೂ ಅವನ ಬಹುಮುಖವಾದ ಚರಿತ್ರೆಯೂ ಹೆಚ್ಚು ಕಡಮೆ ಒಟ್ಟಿಗೆ ಮೊದಲಾದುವೆಂದು ಹೇಳುವುದು ಅತ್ಯುಕ್ತಿಯಾದೀತೆ? ಅದು ಹೇಗಾದರೂ, ಅನೇಕ ಶತಮಾನಗಳವರೆಗೆ ಆ ಭಾವನೆ ಫಲಿಸಲಿಲ್ಲ. ಮನುಷ್ಯನು ಪರ್ವತಗಳನ್ನು ಹತ್ತಬಲ್ಲವನಾಗಿದ್ದನು, ಸಮುದ್ರಗಳ ಮೇಲೆ ಸಂಚರಿಸಬಲ್ಲವನಾಗಿದ್ದನು, ತನ್ನ ಗುರಿಗಳನ್ನು ಸಾಧಿಸಲು ಪ್ರಕೃತಿಯ ಹಲವು ಶಕ್ತಿಗಳನ್ನು ಉಪಯೋಗಿಸಿಕೊಳ್ಳಬಲ್ಲವನಾಗಿದ್ದನು. ಆದರೆ, ಭೂಮ್ಯಾಕರ್ಷಣ ಶಕ್ತಿಗೆ ವಿರುದ್ಧವಾಗಿ ತನ್ನನ್ನು ತಾನು ಮೇಲಕ್ಕೆ ಒಯ್ಯುವ ಸೋಜಿಗ ಎಂದಿಗೂ

ಕನಸಾಗಿಯೇ ಉಳಿಯಿತು. ಅಂತಹ ಪ್ರಯತ್ನವು ದೇವರ ಅತ್ಯಂತ ಪವಿತ್ರವಾದ ನಿಯಮಗಳನ್ನು ಮೀರುವುದಾದ್ದರಿಂದ ಅದು ಮಾನವಕೋಟಿಯನ್ನೇ ದೇವರ ಶಾಪಕ್ಕೆ ಗುರಿಮಾಡುವುದು ಎಂದು ಮುಂಚಿನ ತತ್ತ್ವಶಾಸ್ತ್ರಜ್ಞರು ಹೆದರಿ ಕೂಡ ಇದ್ದರು. ಭೂಮಿಯ ಮೇಲೆ ಮಾತ್ರ ಇರುವುದಕ್ಕಾಗಿ ಮನುಷ್ಯನನ್ನು ದೇವರು ಸೃಷ್ಟಿಸಿದನು ಎಂದು ಅವರು ಎಣಿಸಿದ್ದರು. ಹೀಗೆ, ಮನುಷ್ಯನು ವಾಯು ಮಂಡಲವನ್ನು ಸುತ್ತಿ ನೋಡದೆಯೇ ಶತಮಾನಗಳು ಉರುಳಿದುವು.

ಹದಿನೇಳನೆಯ ಶತಮಾನದ ಹತ್ತಿರ ಹತ್ತಿರದಲ್ಲಿ ಅನೇಕ ಮಂದಿ ಫ್ರೆಂಚ್, ಇಂಗ್ಲಿಷ್ ಮತ್ತು ಇತರ ಯಂತ್ರಶಿಲ್ಪಿಗಳು ಈ ಭಾವನೆಯ ಅಂಕುರವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಯೋಗ ನಡೆಸುತ್ತಿದ್ದರು. ಇಷ್ಟಾದರೂ ಆಕಾಶ ಬುಟ್ಟಿಯೊಂದನ್ನು ಯಶಸ್ವಿಯಾಗಿ ಹಾರಿಸಿದ್ದು ೧೭೮೩ರಲ್ಲಿ: ಬಿಸಿಗಾಳಿಯನ್ನು ತುಂಬಿ ಊದಿಸಿದ ಆ ಆಕಾಶಬುಟ್ಟಿಯನ್ನು ಕಂಡುಹಿಡಿದವರು ಮಾಂಗೊಲ್ ಫ್ಯೇ (Montgolfier) ಸೋದರರು. ಅದೇ ವರ್ಷ ಅಕ್ಟೋಬರಿನಲ್ಲಿ, ಬಿಸಿಗಾಳಿ ತುಂಬಿ ಊದಿಸಿದ, ಆದರೆ ಹಗ್ಗದಿಂದ ನೆಲಕ್ಕೆ ಕಟ್ಟಿದ, ಅಂತಹದೇ ಆಕಾಶಬುಟ್ಟಿಯಲ್ಲಿ ಮನುಷ್ಯನು ಮೊದಲ ಸಲ ಆಕಾಶಕ್ಕೆ ಏರಿಹೋದನು. ಅದಕ್ಕೆ ಕೆಲವು ತಿಂಗಳು ಮುಂಚೆ ಪ್ಯಾರಿಸ್ ಪಟ್ಟಣದ ಕ್ಯಾಂಪ್–ಡ–ಮಾರ್ಸ್ (Camp-de-Mars) ಎಂಬ ಸ್ಥಳದಿಂದ ಫಿರಂಗಿಯೊಂದನ್ನು ಹಾರಿಸಿದ ಕೂಡಲೇ ಜಲಜನಕ ತುಂಬಿದ ಆಕಾಶಬುಟ್ಟಿಯೊಂದನ್ನು ಹಾರಿಬಿಡಲಾಯಿತು. ಈ ಘಟನೆಯನ್ನು ಸಾವಿರಾರು ಮಂದಿ ನೋಟಕರು ಕೌತುಕದಿಂದ ನೋಡಿದರು. ಆಮೇಲೆ ಈ ಆಕಾಶಬುಟ್ಟಿ ಪ್ಯಾರಿಸ್ಸಿಗೆ ಹದಿನೈದು ಮೈಲಿ ದೂರದ ಹಳ್ಳಿಯೊಂದರಲ್ಲಿ ಕೆಳಕ್ಕೆ ಇಳಿಯಿತು; ದಿಗಿಲುಗೊಂಡ ಹಳ್ಳಿಯವರು ಅದನ್ನು ಒಂದು ವಿಚಿತ್ರ ಪ್ರಾಣಿಯೆಂದು ಭಾವಿಸಿದರು. ಅದೇ ವರ್ಷ ಸ್ವಲ್ಪ ಕಾಲಾನಂತರ ಪೀಲಾಟ್‌ರ್–ಡ–ರೊಸ್ಯೇ (Pilatre-de-Rosier) ಎಂಬ ಫ್ರೆಂಚನು ಮಾರ್ಕ್ವಿಸ್ ಆಫ್ ಆರ್ಲೆಂಡ್ಸ್ (Marques of Arlands) ಎಂಬವನ ಜೊತೆಗೂಡಿ ಬಿಸಿಗಾಳಿ ತುಂಬಿ ಊದಿಸಿದ ಆಕಾಶಬುಟ್ಟಿಯಲ್ಲಿ ವಾಯುಪ್ರಯಾಣ ಮಾಡಿದನು. ಯಂತ್ರಶಿಲ್ಪದಲ್ಲಿ ಆಸಕ್ತಿಯಿದ್ದ ಬ್ಲಾನ್‌ಷರ್ (Blanchard) ಎಂಬ ಫ್ರೆಂಚನು ಮಾಂಗೊಲ್‌ಫ್ಯೇ ಸೋದರರ ಆಕಾಶಬುಟ್ಟಿಯ ನಿರ್ಮಾಣದಿಂದ ಆಶ್ಚರ್ಯಗೊಂಡಿದ್ದನು. ಈತನು ೧೭೮೪ರಲ್ಲಿ ಇಂಗ್ಲೆಂಡಿಗೆ ಬಂದು, ಜನವರಿ ೭ರಲ್ಲಿ ಜೆಫ್ರಿಸ್ (Jeffris) ಎಂಬಾತನ ಜೊತೆಗೂಡಿ ಮೊದಲ ಸಲ ಆಕಾಶಬುಟ್ಟಿಯಲ್ಲಿ ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿದನು. ಈ

ಅಲ್ಪಪ್ರಯತ್ನಗಳನ್ನು ಆಕಾಶಯಾನದ ಪ್ರಾರಂಭವೆಂದು ಸರಿಯಾಗಿ ಕರೆಯಬಹುದು.

ಆಕಾಶಬುಟ್ಟಿ ಮತ್ತು ವಾಯುಹಡಗು (Airship): ವಾಯುವಿಗಿಂತ ಹಗುರವಾದ ವಾಯುಯಾನಗಳು (Lighter than air Aircraft) :–

ಹೀಗೆ, ಆಕಾಶಯಾನದ ಅಲ್ಪಾರಂಭಗಳು ಯಾವುವೆಂದು ಹುಡುಕುತ್ತ ಹೊರಟರೆ, ಹಾರಲು ಮಾಡಿದ ಮೊದಲ ಪ್ರಯತ್ನಗಳು ಆಕಾಶಬುಟ್ಟಿಯಲ್ಲಿ ಮಾಡಿದವುಗಳೆಂದು ತಿಳಿಯಬರುತ್ತದೆ. ಆಕಾಶಬುಟ್ಟಿ ಅನಿಲದಿಂದ (Gas) ತುಂಬಿದ ವರ್ತುಳಾಕಾರದ ಹೊದಿಕೆ ಅಥವಾ ಆವರಣ; ಅದಕ್ಕೆ ನಡೆಸುವವರ ತಂಡವನ್ನುಳ್ಳ (Crew) ಬುಟ್ಟಿಯೊಂದನ್ನು ಜೋಡಿಸಿರುತ್ತದೆ. ಆವರಣದ ತಳದಲ್ಲಿ ಒಂದು ಬಾಯಿ ಉಂಟು; ಒಳಗಿರುವ ಅನಿಲ ವಾತಾವರಣದ ಒತ್ತಡವನ್ನು ಮೀರದಂತೆ ಇದು ತಡೆಯುತ್ತದೆ. ದೋಣಿ ನೀರಿನಲ್ಲಿ ಹೇಗೆ ತೇಲುತ್ತದೆಯೊ ಹಾಗೆ ಆಕಾಶಬುಟ್ಟಿ ವಾಯುವಿನಲ್ಲಿ ತೇಲುತ್ತದೆ. ಆಕಾಶಬುಟ್ಟಿಯ ಘನಪರಿಮಾಣವು (Volume) ಆಕ್ರಮಿಸಿಕೊಂಡ ಸ್ಥಳದಲ್ಲಿದ್ದ ವಾಯು, ವಾಯುವಿನಲ್ಲಿನ ಆಕಾಶಬುಟ್ಟಿಯ ತೂಕವನ್ನು ಹೊರಲು ಸಾಕಾಗುವಮಟ್ಟಿಗೆ ಸಾಂದ್ರವಾಗಿದೆ. ಮೊದಲು ಆಕಾಶಬುಟ್ಟಿಯನ್ನು ಸಾಂದ್ರತೆಯಲ್ಲಿ (Density) ವಾಯುವಿಗಿಂತ ಹಗುರವಾದ ಬಿಸಿಗಾಳಿಯಿಂದಾಗಲಿ ಜಲಜನಕದಿಂದಾಗಲಿ ತುಂಬುತ್ತಿತ್ತು. ಆಕಾಶ ಬುಟ್ಟಿಯನ್ನು ಕೆಳಗಿಳಿಸಬೇಕಾದಾಗ ಸ್ವಲ್ಪ ಅನಿಲವನ್ನು ಹೊರಬಿಡಲಾಗುತ್ತದೆ; ಸ್ವಲ್ಪ ಅಡಿತೂಕವನ್ನು (Ballast) ತೆಗೆದಾಗ ಆಕಾಶಬುಟ್ಟಿ ಮೇಲೇರುತ್ತದೆ; ಅಡಿತೂಕವನ್ನು ಪೂರ್ತಿ ತೆಗೆದಾಗ ಅದರ ಹಾರಿಕೆ ಸಾಮಾನ್ಯವಾಗಿ ಕೊನೆಗೊಳ್ಳುತ್ತದೆ. ಆಕಾಶಬುಟ್ಟಿಯ ಸಹಾಯದಿಂದ ಮನುಷ್ಯನು ಮೇಲಕ್ಕೇರುವುದು ಸಾಧ್ಯವಾದರೂ ಅದು ವಾಯುಪ್ರಯಾಣದಲ್ಲಿ ಒಂದು ಹೆಚ್ಚುಗಾರಿಕೆಯನ್ನು ಪಡೆಯಲಾಗಲಿಲ್ಲ. ಆಕಾಶಬುಟ್ಟಿ ಹಾರುವ ದಿಕ್ಕು ಯಾವಾಗಲೂ ಗಾಳಿ ಬೀಸುವ ದಿಕ್ಕಿಗೆ ಅಧೀನವಾಗಿತ್ತು; ಅಂದರೆ ವಾಯುಯಾನ ನಡಸುವವನು (Pilot) ಗಾಳಿಗೆ ಅಧೀನನಾದಹಾಗಾಯಿತು. ಬೇರೆ ಬೇರೆ ಎತ್ತರಗಳಲ್ಲಿ ಗಾಳಿಯ ಹಕ್ಕನ್ನು ಸರಿಯಾಗಿ ಅಂದಾಜು ಮಾಡುವುದರಿಂದ, ಮತ್ತು ಅದಕ್ಕನುಸಾರವಾಗಿ ಆಕಾಶ ಬುಟ್ಟಿಯನ್ನು ಮೇಲೇರಿಸುವುದರಿಂದ ಮತ್ತು ಕೆಳಗಿಳಿಸುವುದರಿಂದ ಮಾತ್ರ ಆಕಾಶಬುಟ್ಟಿ ನಡೆಸುವವನು ಅದು ಹೋಗುವ ದಿಕ್ಕನ್ನು ಸ್ವಲ್ಪಮಟ್ಟಿಗೆ ತನ್ನ ಹತೋಟಿಯಲ್ಲಿಟ್ಟುಕೊಳ್ಳಬಲ್ಲನು. ಅದರ ವೇಗ ಕೂಡ ಗಾಳಿಯ ವೇಗಕ್ಕೇ

ಅಧೀನವಾಗಿತ್ತು. ಹೀಗೆ, ಆಕಾಶಬುಟ್ಟಿ ಹಾರಿಕೆ ಅತ್ಯಂತ ಉತ್ತೇಜಕವಾದ ಅನುಭವವಾಗಿದ್ದರೂ ಅದು ಆಕಾಶಯಾನದಲ್ಲಿ ನಿಜವಾಗಿ ಮುಂದುವರಿಯಿತೆಂಬುದಾಗಿ ಎಂದಿಗೂ ಹೇಳಲಾಗುವುದಿಲ್ಲ.

ಆಕಾಶ ಬುಟ್ಟಿಗಳು ಎರಡು ಮಾದರಿಯವು: ಕಟ್ಟಿಲ್ಲದ (ಸ್ವತಂತ್ರ) ಆಕಾಶ ಬುಟ್ಟಿ ಮತ್ತು ಹಗ್ಗದಿಂದ ನೆಲಕ್ಕೆ ಬಿಗಿದ ಕಟ್ಟುಳ್ಳ (ಬಂಧಿತ) ಆಕಾಶಬುಟ್ಟಿ. ಸುಮಾರು ೨೦ ವರ್ಷಗಳ ಹಿಂದಿನವರೆಗೂ ಸ್ವತಂತ್ರ ಆಕಾಶಬುಟ್ಟಿಗಳನ್ನು ವಿನೋದ ಕ್ರೀಡೆಗಳಿಗಾಗಿ ಉಪಯೋಗಿಸುತ್ತಿತ್ತು; ಏಕೆಂದರೆ ಅವುಗಳಲ್ಲಿ ಮಾಡಿದ ಪ್ರಯಾಣಗಳು ಉಲ್ಲಾಸಕರವಾಗಿದ್ದುವು. ಸ್ವಲ್ಪವೂ ಶಬ್ದವಿಲ್ಲದ್ದರಿಂದ ನೆಲದ ಮೇಲಿನ ಜನರ ಸದ್ದುಗಳನ್ನೂ, ಕೆಲವು ವೇಳೆ ಹಕ್ಕಿಗಳ ಚಿಲಿಪಿಲಿಗಳನ್ನೂ ಸಹ, ಕೇಳಬಹುದಾಗಿತ್ತು. ಇಂಗ್ಲೆಂಡಿನಲ್ಲಿ ಸಮುದ್ರದ ಕಡೆಗೆ ಸಾಗಿ ಹೋಗುವ ಅಪಾಯ ಸಂಭವವಿದ್ದುದರಿಂದ ಆಕಾಶಬುಟ್ಟಿ ಹಾರಿಕೆಗಳನ್ನು ಅಲ್ಲಿ ಕೈಗೊಳ್ಳುತ್ತಿರಲಿಲ್ಲ. ಹೆಚ್ಚು ದೂರ ಹಾರಬೇಕೆಂದು ಇಷ್ಟಪಟ್ಟರೆ ಯುರೋಪು ಖಂಡದಲ್ಲಿ ಎಲ್ಲಿಯಾದರೂ ಪ್ರಯಾಣವನ್ನು ಮೊದಲು ಮಾಡಬೇಕಾಗಿತ್ತು. ೧೭ನೆಯ ಶತಮಾನದಲ್ಲಿ ಸೈನಿಕ ಪರಿಶೀಲನೆಗಾಗಿ ಬಂಧಿತ ಆಕಾಶಬುಟ್ಟಿಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿತ್ತು. ಇಂದಿಗೂ ಪವನಶಾಸ್ತ್ರ (Meteorology) ಸಂಬಂಧವಾದ ಪ್ರಯೋಗಗಳಿಗಾಗಿ ಸಣ್ಣ ಸ್ವತಂತ್ರ ಆಕಾಶಬುಟ್ಟಿಗಳನ್ನು ಉಪಯೋಗಿಸುತ್ತಿದೆ. ಇಂಥ ಆಕಾಶಬುಟ್ಟಿಯಲ್ಲಿ ಕೆಲವು ಲೇಖನ ಸಲಕರಣೆಗಳು (Recording instruments) ಇರುತ್ತವೆ. ಆಕಾಶಬುಟ್ಟಿ ಸಾಕಷ್ಟುಮಟ್ಟಿಗೆ ಮೇಲಕ್ಕೆ ಹೋದಾಗ ಆವರಣವು ಒಡೆದು ಹೋಗಿ, ಹಗುರವಾದ ಲೇಖನ ಸಲಕರಣೆಗಳು ಸಣ್ಣ ಇಳಿ ಕೊಡೆಯ (Parachute) ಸಹಾಯದಿಂದ ತಮಗೆ ತಾವೇ ಕೆಳಗಿಳಿಯುತ್ತವೆ. ಕೆಲವು ಸಂದರ್ಭಗಳಲ್ಲಿ ಈ ರೀತಿ ೨೦ ಮೈಲಿಗಳಷ್ಟು ಎತ್ತರವನ್ನು ಗುರುತಿಸಲಾಗಿದೆ. ಮೇಲಣ ವಾಯುಮಂಡಲದ ವೈಜ್ಞಾನಿಕ ಪರಿಶೋಧನೆಗಳಿಗಾಗಿ ಒಂದು ವಿಶಿಷ್ಟ ಮಾದರಿಯ ಸ್ವತಂತ್ರ ಆಕಾಶಬುಟ್ಟಿಯನ್ನು ಉಪಯೋಗಿಸಲಾಗುತ್ತದೆ. ಆವಶ್ಯಕ ಸಲಕರಣೆಗಳನ್ನೂ ಸ್ವಾಭಾವಿಕ ವಾಯುವಿನ ಸರಬರಾಯಿಯನ್ನೂ ಉಳ್ಳ, ಗಾಳಿತೂರದ ಕೋಣೆಯಲ್ಲಿ ನಡಸುವವರ ತಂಡ ಇರುತ್ತದೆ. ಆಕಾಶಬುಟ್ಟಿ ಪರಿಮಿತಿಗಳಿಗೆ ಒಳಪಟ್ಟಿರುವುದರಿಂದ ಅದರಲ್ಲಿ ದೂರ ವ್ಯಾಪ್ತಿಯ ಹಾರುವ ಪ್ರಯಾಣಗಳನ್ನು ಮಾಡಲಾಗುವುದಿಲ್ಲ.

ವಾಯು ಹಡಗು

ವಾಯು ಪ್ರಯಾಣದಲ್ಲಿ ಮೊದಲ ಹೆಜ್ಜೆ ಇಟ್ಟದ್ದು ವಾಯುಹಡಗು ಅಥವಾ ವಾಯುವಿಗಿಂತ ಹಗುರವಾದ ವಾಯುಯಾನ. ವಾಯುಹಡಗು ಸ್ವತಂತ್ರ ಆಕಾಶಬುಟ್ಟಿಯ ಸಹಜ ಬೆಳವಣಿಗೆ: ಮಾಂಗೋಲ್ ಫ್ಯೇ (Montgolfier) ಸೋದರರು ಮೊದಲ ಸಲ ಆಕಾಶಬುಟ್ಟಿ ಹಾರಿಸಿದ ಒಂದು ವರ್ಷದೊಳಗಾಗಿ, ಆಕಾಶಬುಟ್ಟಿ ವಾಯುಮಂಡಲದ ವಾಯುಚಲನೆಗಳಿಗೆ ಒಳಪಡದೆ ಸ್ವತಂತ್ರವಾಗಿ ಹಾರುವಂತೆ ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವ ಮತ್ತು ನಡಸುವ ವಿಧಾನಗಳನ್ನು ನಿರ್ಮಾಪಕರು ಪರ್ಯಾಲೋಚಿಸುತ್ತಿದ್ದರು. ಅದರ ಫಲಿತಾಂಶವೇ ವಾಯುಹಡಗು: ಇದು ಸ್ವತಂತ್ರ ಆಕಾಶಬುಟ್ಟಿಯಾಗಿರುವುದರ ಜೊತೆಗೆ ಯಂತ್ರಶಕ್ತಿಯಿಂದ ಚಾಲನೆಗೊಳ್ಳುತ್ತದೆ. ವಾಯುಹಡಗಿನ ಮೂಗಿಗೆ ಒಂದು ಚಾಲಕವನ್ನು (Propeller) ಜೋಡಿಸಿರುತ್ತದೆ. ಇದು ತಿರುಗುವುದರಿಂದ, ಹುಟ್ಟುಗಳು ನೀರನ್ನು ಪಕ್ಕಕ್ಕೆ ತಳ್ಳಿದಾಗ ದೋಣಿ ನೀರಿನಲ್ಲಿ ಹೇಗೆ ನುಗ್ಗಿ ಹೋಗುತ್ತದೆಯೊ ಹಾಗೆ ವಾಯುಯಾನ ವಾಯುವಿನಲ್ಲಿ ನುಗ್ಗಿಹೋಗಲು ನೆರವಾಗುತ್ತದೆ.

ವಾಯುಹಡಗುಗಳ ಬೆಳವಣಿಗೆಯ ಬಹಳ ಮುಂಚಿನ ಮಟ್ಟದಲ್ಲೆ ಅದರ ಅನಿಲ ಕೋಶ (Gas container) ಗೋಳಾಕೃತಿಯಿಂದ ದೀರ್ಘಾಕೃತಿಗೆ ಮಾರ್ಪಾಟು ಹೊಂದಿತು. ಏಕೆಂದರೆ, ವಾಯುವಿನಲ್ಲಿ ವಾಯುಯಾನದ ಗತಿಗೆ ದೀರ್ಘಾಕೃತಿಯಿಂದ ಕಡಮೆಯ ನಿರೋಧ ಉಂಟಾಗುತ್ತದೆಂದು ಗೊತ್ತಾಯಿತು. ಆವಿ ಎಂಜಿನ್ನಿನಿಂದ ಚಾಲನೆಗೊಂಡ ಮೊದಲ ವಾಯುಹಡಗನ್ನು ಗಿಫರ್ಡ್ (Giffard) ಎಂಬ ಫ್ರೆಂಚನು ೧೮೫೨ರಲ್ಲಿ ಕಟ್ಟಿ ಹಾರಿಸಿದನು. ಈ ವಾಯುಹಡಗು, ೧೧ ಅಡಿ ವ್ಯಾಸವುಳ್ಳ ಮತ್ತು ಮೂರು ಅಶ್ವಸಾಮರ್ಥ್ಯದ ಎಂಜಿನ್ನಿನಿಂದ ನಡೆಯುತ್ತಿದ್ದ ಚಾಲಕದಿಂದ ಚಾಲನೆಗೊಳ್ಳುತ್ತಿತ್ತು. ಆ ಎಂಜಿನ್ನು, ಅದರ ಕುದಿಪಾತ್ರೆಗಳು, ಒಂದು ಗಂಟೆ ಕಾಲಕ್ಕೆ ಸಾಕಾಗುವಷ್ಟು ನೀರು– ಎಲ್ಲ ಸೇರಿ ೪೬೦ ಪೌಂಡು ತೂಗುತ್ತಿತ್ತು. ಆ ವಾಯುಹಡಗಿನ ಘನ ಅಳತೆ ೨೮,೦೦೦ ಘನ ಅಡಿಗಳು; ಉದ್ದ ೧೪೪ ಅಡಿಗಳು; ಅತ್ಯಂತ ಹೆಚ್ಚಿನ ವ್ಯಾಸ ೩೯ ಅಡಿಗಳು. ಅದು ಗಂಟೆಗೆ ೬ ಮೈಲಿಗಳವರೆಗೂ ಹೋಗುತ್ತಿತ್ತು ಮತ್ತು ಚುಕ್ಕಾಣಿಯ (Rudder) ಚಲನೆಗಳಿಗೆ ಅನುಸಾರವಾಗಿ ಚಲಿಸುತ್ತಿತ್ತು. ಯಂತ್ರಶಕ್ತಿಯ ಸಹಾಯದಿಂದ ಹಾರಿದ ಮೊದಲನೆಯ ವಾಯುಯಾನೀ ವಾಯು ಹಡಗು. ಇದಾದ ೩೦ ವರ್ಷಗಳ ತರುವಾಯ, ಎಂದರೆ ೧೮೮೪ರಲ್ಲಿ, ರೀನಾಂಡ್ (Renand) ಮತ್ತು ಕ್ರೆಬ್ಸ್ (Krebs) ಎಂಬ ಇಬ್ಬರು ಫ್ರೆಂಚ್ ಸೈನ್ಯಾಧಿಕಾರಿಗಳು

೬೦,೦೦೦ ಘನ ಅಡಿಗಳ ವಾಯುಹಡಗನ್ನು ಕಟ್ಟಿದರು; ಆ ವೇಳೆಗಾಗಲೇ ಕಂಡುಹಿಡಿದಿದ್ದ ವಿದ್ಯುತ್ ಮೋಟಾರಿನ ಸಹಾಯದಿಂದ ಇದು ನಡೆಯುತ್ತಿತ್ತು. 'ಲಾ ಫ್ರ್ಯಾನ್ಸ್' (La France) ಎಂಬ ಹೆಸರಿನ ಈ ವಾಯುಹಡಗು ೧೮೮೪ರಲ್ಲೂ ೧೮೮೫ರಲ್ಲೂ ಅನೇಕ ಸಲ ಯಶಸ್ವಿಯಾಗಿ ಹಾರಿತು. ಇದಾದ ಕೂಡಲೆ ಪೆಟ್ರೋಲ್ ಎಂಜಿನನ್ನು ಕಂಡುಹಿಡಿಯಲಾಯಿತು; ಇದರಿಂದ ವಾಯುಹಡಗಿನ ಬೆಳವಣಿಗೆ ಬಹುಮಟ್ಟಿಗೆ ಮುಂದುವರಿಯಿತು. ೧೯೮೭ರಿಂದ ೧೯೨೦ಂವರೆಗಿನ ವರ್ಷಗಳ ಅವಧಿಯಲ್ಲಿ ಈಗಿನ ಕಾಲದ ಸಾಗಣೆಯ ಉದ್ದೇಶಗಳಿಗಾಗಿ ಅನೇಕ ವಾಯುಹಡಗುಗಳನ್ನು ಕಟ್ಟಲಾಯಿತು. ಜರ್ಮನಿ ದೇಶವೊಂದು ಮಾತ್ರ ವಾಯುಹಡಗನ್ನು ಕಟ್ಟುವುದರಲ್ಲಿ ಎತ್ತಿದ ಕೈ ಎಂಬುದನ್ನೂ, ಸಾಗರ ಮಾರ್ಗ ಜಹಜು (Ocean Liner) ಎಷ್ಟರಮಟ್ಟಿಗೆ ಕಾಲಕ್ರಮವನ್ನು ಅನುಸರಿಸುತ್ತದೆಯೊ ಅಷ್ಟರಮಟ್ಟಿಗೆ ಕಾಲಕ್ರಮಾನುಸಾರವಾಗಿ ಅಟ್ಲಾಂಟಿಕ್ ಸಾಗರದ ಮೂಲಕ ಅಮೆರಿಕಾ ದೇಶಕ್ಕೆ ವಾಯುಹಡಗಿನ ಪ್ರಯಾಣದ ಏರ್ಪಾಟನ್ನು ನಡಸಿಕೊಂಡು ಬರುತ್ತಿದೆ ಯೆಂಬುದನ್ನೂ ಗಮನಿಸಬೇಕು. ಡಾ॥ ಎಕನರ್ (Ecaner) ಎಂಬುವರು ಪ್ರಸಿದ್ಧವಾದ ಗ್ರಾಫ್ ಜೆಪ್ಲಿನ್ (Graf Zeppelin) ಎಂಬ ವಾಯುಹಡಗಿನ ಸಹಾಯದಿಂದ ಈ ಏರ್ಪಾಟನ್ನು ನಡಸುತ್ತಿದ್ದಾರೆ. ಜೆಪ್ಲಿನ್ ವಾಯುಹಡಗುಗಳಲ್ಲಿ ದುರಂತ ಅಪಘಾತಗಳು ಆಗಿಲ್ಲದಿರುವುದು ಗಮನಾರ್ಹವಾಗಿದೆ. R ೧೦೦ ಮತ್ತು R ೧೦೧ ಎಂಬ ಎರಡು ದೊಡ್ಡ ಬ್ರಿಟಿಷ್ ವಾಯು ಹಡಗುಗಳನ್ನು ಪ್ರಯಾಣಿಕರಿಗಾಗಿ ಕಟ್ಟಲಾಯಿತು. ಆದರೆ R ೧೦೧ ವಾಯುಹಡಗು ೧೯೩೦ರಲ್ಲಿ ಬಹಳ ಶೋಚನೀಯಸ್ಥಿತಿಯಲ್ಲಿ ನಾಶಹೊಂದಿತು. ಅಲ್ಲಿಂದೀಚೆಗೆ ಆ ದೇಶದಲ್ಲಿ ವಾಯುಹಡಗನ್ನು ಕಟ್ಟುವುದು ಸಂಪೂರ್ಣವಾಗಿ ನಿಂತಿದೆ. ಅಮೆರಿಕದಲ್ಲೂ ಸಹ ಸೈನ್ಯ ಸಹಕಾರಕ್ಕಾಗಿ ಕಟ್ಟಿದ ಸಂಯುಕ್ತ ಸಂಸ್ಥಾನಗಳ ವಾಯು ಹಡಗುಗಳು ಅದೇ ಗತಿಯನ್ನು ಹೊಂದಿದುವು. ಅಲ್ಲಿಂದ ಈಚೆಗೆ ಅಮೆರಿಕದಲ್ಲಿ ವಾಯುಹಡಗನ್ನು ಕಟ್ಟುತ್ತಿಲ್ಲ. ವಾಯುಹಡಗುಗಳನ್ನು ಕಟ್ಟಿ ಅವುಗಳನ್ನು ನಿರ್ವಹಿಸಲು ಅವಶ್ಯವಾದ ಅನುಭವವೂ ಕೌಶಲವೂ ಜರ್ಮನರಿಗೆ ಮಾತ್ರ ಇರುವಂತೆ ಕಾಣುತ್ತದೆ.

ವಾಯುಹಡಗುಗಳನ್ನು ನಿರ್ವಹಿಸುವುದರಲ್ಲಿ ಅನೇಕ ಸಮಸ್ಯೆಗಳೂ ತೊಂದರೆಗಳೂ ಇವೆ. ಈ ಯಾನವು ವಾಯುವಿಗಿಂತ ಹಗುರವಾಗಿರುವುದರಿಂದ ಗಾಳಿ ಬೀಸುತ್ತಿರುವಾಗ ಅದನ್ನು ಅದರ ಮನೆಯೊಳಕ್ಕೆ ತೆಗೆದುಕೊಂಡು ಹೋಗುವುದೂ ಅಲ್ಲಿಂದ ಹೊರಕ್ಕೆ ತರುವುದೂ ಕಷ್ಟದ ಕೆಲಸ. ಹಡಗನ್ನು

ಒಳಕ್ಕೂ ಹೊರಕ್ಕೂ ನಡಸಿಕೊಂಡು ಹೋಗುವುದಕ್ಕೆ ಜನರ ತಂಡಗಳೇ ಬೇಕು; ತುಂಬು ಗಾಳಿ ಇದ್ದರೆ, ಹಡಗನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ ಕಷ್ಟ. ಈಚೆಗೆ ವಾಯುಹಡಗನ್ನು ಕಟ್ಟಿಹಾಕುವ ಕೂವೆಗೆ (ಕಂಬಕ್ಕೆ) (Mooring mast) ಬಿಗಿಯುತ್ತಾರೆ. ಅದನ್ನು ಸರಿಪಡಿಸಬೇಕಾದಾಗಾಗಲಿ ಬಿಚ್ಚಿ ಪರೀಕ್ಷಿಸಬೇಕಾದಾಗಾಗಲಿ ಮಾತ್ರ ವಾಯುಹಡಗನ್ನು ಅದರ ಮನೆಗೆ ಸಾಗಿಸುತ್ತಾರೆ. ಎರಡನೆಯದಾಗಿ, ವಾಯುಹಡಗು ಹಾರುತ್ತಿರುವಾಗ ಅದರ ಉರುವಲು (Fuel) ಮುಗಿಯುತ್ತ ಬಂದಂತೆ ಹಡಗಿನ ಭಾರ ವ್ಯತ್ಯಾಸಗೊಳ್ಳುತ್ತದೆ. ಇದು ಯಂತ್ರವನ್ನು ವಾಯುವಿನಲ್ಲಿ ಮೇಲಕ್ಕೇರಿಸಲು ಕಾರಣವಾಗುತ್ತದೆ. ಗ್ರಾಫ್ ಜೆಪ್ಲಿನ್ ಪೆಟ್ರೋಲಿಗೆ ಬದಲು ಅನಿಲದ ಉರುವಲನ್ನು ಉಪಯೋಗಿಸುತ್ತದೆ. ಈ ಉರುವಲು ಸಾಂದ್ರತೆಯಲ್ಲಿ ವಾಯುವಿಗೆ ಸಮನಾಗಿರುವುದರಿಂದ, ಉರುವಲು ಉಪಯೋಗಗೊಳ್ಳುತ್ತ ಬಂದಂತೆ ಅದು ತುಂಬಿದ್ದ ಚೀಲಗಳನ್ನು ವಾಯುವಿನಿಂದ ತುಂಬಲಾಗುತ್ತದೆ.

* * * *

ಪ್ರಕರಣ ೨
ವಾಯುವಿಗಿಂತ ಭಾರವಾದ ವಾಯುಮಾನದ ಬೆಳವಣಿಗೆ: ಹಾರಿಕೆಯ ತತ್ತ್ವ

ವಾಯುವಿಗಿಂತ ಹಗುರವಾದ ವಾಯುಯಾನಗಳ ಬೆಳವಣಿಗೆಯಾಗುತ್ತಿರುವಾಗಲೇ ವಾಯುವಿಗಿಂತ ಭಾರವಾದ ಕಾರ್ಯಗಳನ್ನು ಭೂಮ್ಯಾಕರ್ಷಣ ಶಕ್ತಿಗೆ ವಿರುದ್ಧವಾಗಿ ಮೇಲೆತ್ತಲು ನಿರ್ಮಾಪಕರು ಪ್ರಯೋಗಗಳನ್ನು ನಡಸುತ್ತಿದ್ದರು. ವಿಮಾನದ ಚಾಲಕವೊಂದು ಹೊರತಾಗಿ ಇತರ ಯಾವ ಭಾಗಗಳೂ ವ್ಯಕ್ತವಾಗಿ ಚಲಿಸದೆ ವಿಮಾನವು ಆಕಾಶದಲ್ಲಿ ವೇಗವಾಗಿ ಹೋಗುವುದು ನಿಜವಾಗಿಯೂ ಅಚ್ಚರಿಯ ಘಟನೆಯೇ ಸರಿ.

ಈ ಘಟನೆಯಲ್ಲಿ ಅಡಗಿರುವ ತತ್ತ್ವ ಯಾವುದೆಂದರೆ, ಚಲನಾತ್ಮಕ ಶಕ್ತಿ (Kinetic energy) ಅಥವಾ ವಾಯುವನ್ನು ಬೇಗ ಬೇಗನೆ ಚಲಿಸುವಂತೆ ಮಾಡುವ ಸಾಮರ್ಥ್ಯ. ಈ ಶಕ್ತಿ ಎಷ್ಟು ಬಲವಾದದ್ದೆನ್ನುವುದು ನಮ್ಮಲ್ಲಿ ಪ್ರತಿಯೊಬ್ಬರಿಗೂ ತಿಳಿದಿದೆ. ವಿಮಾನ ಏನೆಂಬುದನ್ನು ಕನಸಿನಲ್ಲೂ ಕಾಣದಿದ್ದ ಕಾಲದಿಂದಲೂ ಗಾಳಿಯಂತ್ರವನ್ನು ಅಥವಾ ನೀರೆತ್ತುವ ಪಂಪನ್ನು ನಡಸುವುದರಲ್ಲಿ ಈ ಶಕ್ತಿಯ ಉಪಯೋಗವನ್ನು ನಾವು ಕಾಣುತ್ತಿದ್ದೇವೆ. ಅಲ್ಲದೆ, ಗಂಟೆಗೆ ೫೦–೬೦ ಮೈಲಿಗಳ ವೇಗದಲ್ಲಿ ಬೀಸುವ ಗಾಳಿಯಿಂದ ಸಮುದ್ರದಲ್ಲಿ ದೊಡ್ಡ ಆವಿಜಹಜುಗಳು ನಡಸಲ್ಪಡುವುದನ್ನು ಕಂಡಿದ್ದೇವೆ. ವಿಮಾನಗಳನ್ನು ವಾಯುವಿನಲ್ಲಿ ಮೇಲಕ್ಕೆತ್ತುವುದಕ್ಕಾದರೂ ಇದೇ ಶಕ್ತಿಯನ್ನು ಉಪಯೋಗಿಸಿಕೊಂಡಿದೆ.

ಒಂದು ಕಾಯವನ್ನು ಮೇಲಕ್ಕೆತ್ತಲು ಚಲಿಸುವ ವಾಯು ಅವಶ್ಯಕವಾದರೆ, ವಾಯುವಿನ ವ್ಯಕ್ತ ಚಲನೆಯಿಲ್ಲದೆ ಸಂಪೂರ್ಣವಾಗಿ ಶಾಂತವಾಗಿರುವ ದಿನದಲ್ಲಿ ವಿಮಾನ ಹೇಗೆ ಮೇಲೇರುತ್ತದೆ?– ಎಂಬುದಾಗಿ ಕೇಳಬಹುದು. ಸ್ವಲ್ಪವೂ ಗಾಳಿಯಿಲ್ಲದ ದಿನದಲ್ಲಿ ವೇಗವಾಗಿ ಚಲಿಸುವ ವಸ್ತುವಿನಿಂದ ವಾಯುಚಲನೆಯನ್ನು ಉಂಟುಮಾಡಬಹುದು. ಉದಾಹರಣೆಗಾಗಿ, ಒಬ್ಬನು ಗಾಳಿಯಿಲ್ಲದ ದಿನ ಬೈಸಿಕಲ್ಲಿನ ಮೇಲಾಗಲಿ, ಮೋಟಾರು ಬಂಡಿಯಲ್ಲಾಗಲಿ ಸವಾರಿ ಹೊರಟರೆ, ಅಂದು ನಿಜವಾಗಿಯೂ ಗಾಳಿ ಬೀಸುತ್ತಿಲ್ಲವೆಂದು ನಮಗೆ ಚೆನ್ನಾಗಿ ಗೊತ್ತಿದ್ದರೂ, ವಾಯುವಿನಲ್ಲಿ ಮೋಟಾರು ಬಂಡಿ ಅಥವಾ ಬೈಸಿಕಲ್ಲು ಚಲಿಸುವುದರಿಂದ

ಗೋಚರವಾಗುವ ಮಟ್ಟಿಗೆ ಗಾಳಿಯೆನ್ನಬಹುವಾದದ್ದೊಂದು ಉಂಟಾಗಿರುವುದು ಗೊತ್ತಾಗುತ್ತದೆ. ಚಲಿಸುತ್ತಿರುವ ಮೋಟಾರು ಬಂಡಿಯ ಹೊರಕ್ಕೆ ಕೈನೀಡಿದರೆ ಈ ಗಾಳಿಯ ಒತ್ತಡ ಚೆನ್ನಾಗಿ ಅನುಭವಕ್ಕೆ ಬರುತ್ತದೆ. ವೇಗ ಗಂಟೆಗೆ ೩೦ ಮೈಲಿ ಇದ್ದರೆ, ಅದೇ ವೇಗದ ಗಾಳಿಗೆದುರಾಗಿ ನಿಂತರೆ ಯಾವ ಒತ್ತಡವನ್ನು ಅನುಭವಿಸುತ್ತೇವೆಯೋ ಅದಕ್ಕೆ ಈ ಒತ್ತಡ ಸಮನಾಗಿರುತ್ತದೆ. ಆದ್ದರಿಂದ ಗಾಳಿಯಿಲ್ಲದ ದಿನ ವಾಯುವಿಗೂ ವಿಮಾನಕ್ಕೂ ಪರಸ್ಪರ ಸಂಬಂಧವುಳ್ಳ ಚಲನೆಯೊಂದನ್ನು ಕಲ್ಪಿಸಿದ್ದೇ ಆದರೆ ಹಾರಿಕೆಗೆ ಬೇಕಾದ ಮೊದಲ ಅವಶ್ಯಕತೆಗಳನ್ನು ಪಡೆದಂತಾಗುತ್ತದೆ.

ಒಂದು ಚಪ್ಪಟೆಯಾದ ಫಲಕವನ್ನು ತೆಗೆದುಕೊಂಡು ಅದನ್ನು ವಿದ್ಯುತ್ ಬೀಸಣಿಗೆಯಿಂದ ಉಂಟಾಗುವಂತಹ ಚಲಿಸುವ ವಾಯುವಿಗೆ ಎದುರಾಗಿ ಸಮಕೋನದಲ್ಲಿ ಹಿಡಿದುಕೊಂಡರೆ ಒಂದು ಒತ್ತಡ ಫಲಕವನ್ನು ಹಿಂದಕ್ಕೆ ತಳ್ಳಲು ಪ್ರಯತ್ನಿಸುತ್ತಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಚಲಿಸುವ ಗಾಳಿಯ ಕಡೆಗೆ ೪೫°ಗಳ ಕೋನದಲ್ಲಿ ಇರುವಂತೆ ಫಲಕವನ್ನು ನಿಧಾನವಾಗಿ ಓರೆಮಾಡಿದರೆ, ಫಲಕವು ವಿದ್ಯುತ್ ಬೀಸಣಿಗೆಯಿಂದ ದೂರಕ್ಕೂ ಮತ್ತು ಮೇಲೆ ಮೇಲಕ್ಕೂ ಚಲಿಸುವಂತೆ ನಮಗೆ ಕಂಡುಬರುತ್ತದೆ. ಮೊದಲಿಗಿಂತ ಕಡಮೆಯ ಕೋನದಲ್ಲಿರುವಂತೆ ಫಲಕವನ್ನು ಇನ್ನೂ ಸ್ವಲ್ಪ ಓರೆ ಮಾಡಿದರೆ ಫಲಕದ ಮೇಲಕ್ಕೇರುವ ಪ್ರವೃತ್ತಿ ಹೆಚ್ಚಿ, ಕಡೆಗೆ ಫಲಕವು ಚಲಿಸುವ ವಾಯುಪ್ರವಾಹದಲ್ಲಿ ಚಪ್ಪಟೆಯಾಗಿ ನಿಲ್ಲುತ್ತದೆ. ಆಗ ಫಲಕ ಯಾವ ರೀತಿಯಲ್ಲೂ ಚಲಿಸುತ್ತಿರುವುದಿಲ್ಲ. ಫಲಕವನ್ನು ವೇಗವಾಗಿ ಚಲಿಸುವ ವಾಯುಪ್ರವಾಹಕ್ಕೆ ಎದುರಾಗಿ ಇಡುವ ಬದಲು ಫಲಕವನ್ನು ಜೋರಾದ ವೇಗದಿಂದ ವಾಯುವಿನಲ್ಲಿ ಚಲಿಸುವಂತೆ ಮಾಡಿದರೂ ಇದೇ ಪರಿಣಾಮ ಕಂಡುಬರುವುದು. ಯಾವ ಕೋನದಲ್ಲಿ ಫಲಕವು ಮೇಲಕ್ಕೇರಲು ಅತ್ಯಂತ ಹೆಚ್ಚಿನ ಪ್ರವೃತ್ತಿಯುಳ್ಳದ್ದಾಗಿರುತ್ತದೆಯೋ ಆ ನಿರ್ದಿಷ್ಟ ಕೋನದಲ್ಲಿರುವಂತೆ ಚಪ್ಪಟೆಯಾದ ರೆಕ್ಕೆಗಳನ್ನು ಭಾರವಾದ ಕಾಯವೊಂದಕ್ಕೆ ಜೋಡಿಸಿದರೆ, ಮತ್ತು ವಾಯುವಿಗೂ ವಿಮಾನದ ಒಡಲಿಗೂ ಪರಸ್ಪರ ಸಂಬಂಧವುಳ್ಳ ಚಲನೆಯನ್ನು ಉಂಟುಮಾಡಿದ್ದೇ ಆದರೆ, ರೆಕ್ಕೆಗಳೂ ವಾಯುವೂ ಆ ಚಲನೆಯ ಪ್ರಭಾವಕ್ಕೊಳಗಾಗಿ ರೆಕ್ಕೆಗಳು ವಿಮಾನದ ಒಡಲಿನೊಡನೆ ಮೇಲಕ್ಕೇರುವುವು. ಚಾಲಕದ ಮತ್ತು ಎಂಜಿನ್ನುಗಳ ಸಹಾಯದಿಂದ ರೆಕ್ಕೆಗಳು ಜೋರಾದ ವೇಗದಿಂದ ಚಲಿಸುವಂತೆ ಮಾಡಿದರೆ ಈ ಚಲನೆಯುಂಟಾಗುತ್ತದೆ. ಚಾಲಕ ವೇಗವಾಗಿ ಚಲಿಸಿದಾಗ ಅದು ಸುತ್ತಲೂ ಇರುವ ವಾಯುವನ್ನು ತನ್ನ

ಹಿಂದಕ್ಕೆ ತಳ್ಳಿ, ಹುಟ್ಟುಗಳು ನೀರನ್ನು ಪಕ್ಕಕ್ಕೆ ತಳ್ಳಿದಾಗ ದೋಣಿ ಹೇಗೆ ಮುಂದುವರಿಯುತ್ತದೆಯೊ ಹಾಗೆ ವಿಮಾನದೊಡನೆ ಮುಂದಕ್ಕೆ ನುಗ್ಗಿ ಹೋಗುತ್ತದೆ. ಹೀಗೆ ರೆಕ್ಕೆಗಳಿಗೂ ಅವುಗಳ ಸುತ್ತಲೂ ಇರುವ ವಾಯುವಿಗೂ ಪರಸ್ಪರ ಸಂಬಂಧವುಳ್ಳ ಚಲನೆಯೊಂದು ಉಂಟಾಗುವ ರೀತಿಯಲ್ಲಿ ವಿಮಾನವು ವೇಗವಾಗಿ ಚಾಲನೆಗೊಂಡರೆ, ರೆಕ್ಕೆಗಳು ವಾಯುವನ್ನು ಒತ್ತತೊಡಗುವುವು. ವೇಗ ಹೆಚ್ಚಿದಂತೆಲ್ಲ ಈ ಒತ್ತಡವೂ ಹೆಚ್ಚುತ್ತ ಹೋಗಿ, ಕಡೆಗೆ ಒತ್ತಡ ಅತ್ಯಂತ ಹೆಚ್ಚಿದಾಗ ರೆಕ್ಕೆಗಳನ್ನು ಮೇಲಕ್ಕೆತ್ತಲು ಬೇಕಾದ ಒತ್ತಡವನ್ನು ಪಡೆಯುವವರೆಗೂ ಅದು ಸ್ವಲ್ಪ ದೂರ ನೆಲದ ಮೇಲೆ ಓಡಬೇಕಾಗಿರುವುದು. ಈ ಕಾರಣದಿಂದ. ವಿಮಾನದ ರೆಕ್ಕೆಗಳಿಗೂ ಸಮತಲಕ್ಕೂ ನಡುವಣ ಕೋನಕ್ಕೆ ಆಪಾತ ಕೋನ (Angle of incidence) ಎಂದು ಹೆಸರು. ವಿಮಾನದ ಬಹುಮಟ್ಟಿನ ಮೇಲೇರುವ ಸಾಮರ್ಥ್ಯ ಈ ಕೋನಕ್ಕೆ ಅಧೀನವಾಗಿದೆ.

ಹಾಗಾದರೆ, (ಫಲಕ) ವಿಮಾನ (Aeroplane) ಹಾರುವುದು ಹೇಗೆ, ಅದನ್ನು ಕಟ್ಟುವುದು ಹೇಗೆ? (ಫಲಕ) ವಿಮಾನವು ವಾಯುಪ್ರವಾಹಕ್ಕೆ ಅತ್ಯಂತ ಕಡಮೆಯ ನಿರೋಧವನ್ನು ಒಡ್ಡುವ ದೀರ್ಘವೃತ್ತಾಕಾರದ ಒಂದು ಒಡಲು; ಸಮತಲಕ್ಕೆ ನಿರ್ದಿಷ್ಟ ಕೋನದಲ್ಲಿರುವಂತೆ ಎರಡು ಚಪ್ಪಟೆಯಾದ ರೆಕ್ಕೆಗಳನ್ನು ಈ ಒಡಲಿಗೆ ಜೋಡಿಸಿರುತ್ತದೆ. ಒಡಲಿನ ಮುಂಭಾಗದಲ್ಲಿ ಒಂದು ಎಂಜಿನ್ನೂ ಒಂದು ಚಾಲಕವೂ ಇವೆ. ಮೊದಲು, ಎಂಜಿನ್ನು ಚಾಲಕವನ್ನು ತಿರುಗಿಸುತ್ತದೆ. ಚಾಲಕದ ತಿರುಗುವಿಕೆಯಿಂದ ವಾಯು ಪಕ್ಕಕ್ಕೆ ತಳ್ಳಲ್ಪಟ್ಟು ವಿಮಾನವು ವಾಯುವಿನಲ್ಲಿ ತೇಲುತ್ತ ಹೋಗತೊಡಗುತ್ತದೆ. ವಿಮಾನ ನೆಲದಮೇಲೆ ಸಾಕಷ್ಟು ವೇಗವನ್ನು ಹೊಂದಿದಾಗ ಸುತ್ತಣ ವಾಯುವಿಗೂ ರೆಕ್ಕೆಗಳಿಗೂ ಪರಸ್ಪರ ಸಂಬಂಧವುಳ್ಳ ಚಲನೆಯೊಂದು ಉಂಟಾಗುತ್ತದೆ. ಇದರ ಪರಿಣಾಮವಾಗಿ ವಾಯು ರೆಕ್ಕೆಗಳನ್ನು ಒತ್ತುತ್ತದೆ; ಕಡೆಯಲ್ಲಿ ಈ ಒತ್ತಡ ಅತ್ಯಂತ ಹೆಚ್ಚಿ ರೆಕ್ಕೆಗಳು ವಾಯುವಿನಲ್ಲಿ ಮೇಲಕ್ಕೆ ತಳ್ಳಲ್ಪಡುತ್ತವೆ. ರೆಕ್ಕೆಗಳು ವಿಮಾನವನ್ನು ತಮ್ಮೊಡನೆ ಒಯ್ಯುತ್ತವೆ. ಇದೇ ವಿಮಾನದ ಹಾರಿಕೆ ಮೊದಲಾಗುವ ರೀತಿ. ಮೇಲಕ್ಕೆ ಎತ್ತಲ್ಪಟ್ಟ ವಿಮಾನದ ಒಟ್ಟು ತೂಕ ರೆಕ್ಕೆಯ ಮೇಲ್ಮೈಯ ಒಟ್ಟು ಕ್ಷೇತ್ರಕ್ಕೆ ವಿಸ್ತಾರಕ್ಕೆ ಅಧೀನವಾಗಿದೆ ಯೆಂಬುದನ್ನು ನೆನಪಿನಲ್ಲಿಡಬೇಕು. ರೆಕ್ಕೆಯ ಕ್ಷೇತ್ರದ ಒಂದು ಚದರಡಿ ಸರಿಸುಮಾರಾಗಿ ಹನ್ನೆರಡು ಪೌಂಡುಗಳ ಭಾರವನ್ನು ಮೇಲಕ್ಕೆತ್ತುವ ಸಾಮರ್ಥ್ಯ ಹೊಂದಿದೆ.

ವಿಮಾನ ವಾಯುಮಂಡಲಕ್ಕೆ ಏರಿದ ಕೂಡಲೆ ಅದರ ಚಲನೆಗಳನ್ನು ಚುಕ್ಕಾಣಿ, ಮೇಲೆತ್ತಿಗೆ (Elevator) ಮತ್ತು ರೆಕ್ಕೆಗಳಲ್ಲಿನ ಪಾರ್ಶ್ವನಿಯಂತ್ರಕ (Aileron)– ಇವುಗಳ ಸಹಾಯದಿಂದ ಹತೋಟಿಯಲ್ಲಿಟ್ಟುಕೊಳ್ಳಲಾಗುತ್ತದೆ. ವಿಮಾನದ ಬಾಲಕ್ಕೆ ಜೋಡಿಸಿರುವ ಚುಕ್ಕಾಣಿಯನ್ನು ತಿರುಗಿಸಿದಾಗ ಬಾಲದ ಮೊದಲ ಮೇಲ್ಮೈಯ ಮೇಲಣ ವಾಯುವಿನ ಒತ್ತಡವು ಬಾಲವನ್ನು ಎಡಕ್ಕೆ ತಳ್ಳುತ್ತದೆ; ಮತ್ತು ಇದರ ಪರಿಣಾಮವಾಗಿ ವಿಮಾನದ ಮೂಗು ಬಲಕ್ಕೆ ತಿರುಗುತ್ತದೆ. ಮೂಗನ್ನು ಎಡಕ್ಕೆ ತಿರುಗಿಸಬೇಕಾದಾಗ ಇದಕ್ಕೆ ವ್ಯತಿರಿಕ್ತವಾದ ವಿಧಾನವನ್ನು ಅನುಸರಿಸಲಾಗುತ್ತದೆ. ವಿಮಾನದ ಬಾಲಕ್ಕೆ ಜೋಡಿಸಿರುವ ಮತ್ತು ಸಮತಲ ಸ್ಥಿತಿಯಲ್ಲಿರುವ ಮೇಲೆತ್ತಿಗೆ ವಿಮಾನವನ್ನು ಮೇಲಕ್ಕೇರಿಸುವ ಅಥವಾ ಕೆಳಕ್ಕಿಳಿಸುವ ಕಾರ್ಯವನ್ನು ಮಾಡುತ್ತದೆ. ವಿಮಾನ ನಡಸುವನು ವಿಮಾನವನ್ನು ಏರಿಸಬೇಕೆಂದು ಇಷ್ಟಪಟ್ಟರೆ ಅವನು ಮೇಲೆತ್ತಿಗೆಯನ್ನು ಮೇಲ್ಮುಖಕ್ಕೆ ಓರೆಮಾಡುತ್ತಾನೆ. ಮೇಲೆತ್ತಿಗೆಯ ಚಪ್ಪಟೆಯಾದ ಮೇಲ್ಮೈ ವಾಯುವಿನ ಹರಿವಿನಿಂದ ಒತ್ತಲ್ಪಟ್ಟು, ಬಾಲ ಕೆಳಕ್ಕೆ ನೂಕಲ್ಪಡುತ್ತದೆ; ಇದರ ಪರಿಣಾಮವಾಗಿ ವಿಮಾನದ ಮೂಗು ಮೇಲೇಳುತ್ತದೆ. ಮೇಲೆತ್ತಿಗೆ ಎಷ್ಟು ಹೆಚ್ಚು ಕೋನದಲ್ಲಿ ಓರೆಯಾಗಿರುತ್ತದೆಯೊ ಅಷ್ಟು ಕಡಿದಾಗಿ ಯಂತ್ರ ಮೇಲೇರುತ್ತದೆ. ವಿಮಾನ ನಡಸುವವನು ಯಂತ್ರ ಇಳಿಯಬೇಕೆಂದು ಇಷ್ಟಪಟ್ಟರೆ, ಅವನು ಮೇಲೆತ್ತಿಗೆಯನ್ನು ಕೆಳಕ್ಕೆ ತಳ್ಳುತ್ತಾನೆ; ಆಗ ವಾಯುವಿನ ಒತ್ತಡ ಕೆಳಗಣ ಮೇಲ್ಮೈಯ ಮೇಲೆ ಬಿದ್ದು ಬಾಲವನ್ನು ಮೇಲಕ್ಕೆತ್ತುತ್ತದೆ; ಇದರ ಪರಿಣಾಮವಾಗಿ ವಿಮಾನದ ಮೂಗು ಕೆಳಮುಖವಾಗುತ್ತದೆ. ಇವೆರಡು ನಿಯಂತ್ರಕಗಳಲ್ಲದೆ, (ರೆಕ್ಕೆಯ ಚಲ ಭಾಗಗಳಿಂದ ಏರ್ಪಡಿಸಿರುವ) ಪಾರ್ಶ್ವ ನಿಯಂತ್ರಕವಿದೆ: ಇದು ಎಲ್ಲ ಪರಿಸ್ಥಿತಿಯಲ್ಲೂ ವಿಮಾನವನ್ನು ಸಮಮಟ್ಟದಲ್ಲಿ ಇಟ್ಟಿರಲು ನೆರವಾಗುತ್ತದೆ. ವಿಮಾನದ ಕಟ್ಟಡವನ್ನು ಪದರ ಹಲಗೆ, ರಟ್ಟು ಮತ್ತು ಅಲ್ಯೂಮಿನಿಯಂ– ಇವುಗಳಿಂದ ತಯಾರು ಮಾಡಲಾಗುತ್ತದೆ.

ಈ ರೀತಿ, ವಾಯುವಿಗಿಂತ ಭಾರವಾದ ವಿಮಾನದ ಹಾರಿಕೆಯ ಅದ್ಭುತವನ್ನು ಮನುಷ್ಯನು ಸಾಧಿಸಿದ್ದಾನೆ. ಪ್ರತಿಯೊಂದು ಬೀಳುವ ಎಲೆಯಲ್ಲೂ, ಪ್ರತಿಯೊಂದು ನೀರ ಪ್ರವಾಹದಲ್ಲೂ ವ್ಯಕ್ತಗೊಳ್ಳುವ ಭೂಮ್ಯಾಕರ್ಷಣಶಕ್ತಿಯನ್ನು ಗೆಲ್ಲಲಾಗಿದೆ. ಅದ್ಭುತವಾದ ಈ ನಿರ್ಮಾಣಕ್ಕೆ ಈ ಶಾಖೆಯಲ್ಲಿ ಮೊದಲಿಗರಾಗಿದ್ದ ರೈಟ್ (Wright) ಸೋದರರಿಗೆ ನಾವು ಋಣಿಗಳಾಗಿದ್ದೇವೆ; ಅವರು ೧೯೦೩ನೆಯ ಇಸವಿ ಡಿಸೆಂಬರ್ ೧೭ರಲ್ಲಿ ಅಂತಹ ವಿಮಾನದಲ್ಲಿ ಯಶಸ್ವಿಯಾಗಿ ಹಾರಿದರು. ಈ ಪ್ರತಿಭಾಶಾಲಿಗಳಿಗೆ ನಮ್ಮ ಅಭಿವಂದನೆಗಳು ಸಲ್ಲಬೇಕು. ಮೊದಲನೆಯ

ರೈಟ್ ವಿಮಾನ ೧೨ರಿಂದ ೧೫ ಅಶ್ವಸಾಮರ್ಥ್ಯದ ಎಂಜಿನ್ನಿನ ಸಹಾಯದಿಂದ ಹಾರಿತು; ಅದು ಗಂಟೆಗೆ ಸುಮಾರು ೩೫ ಮೈಲಿಗಳ ವೇಗದಲ್ಲಿ ಹೋಗುತ್ತಿತ್ತು. ಅಲ್ಲಿಂದೀಚೆಗೆ ೪೦ ವರ್ಷಗಳ ಅವಧಿಯಲ್ಲಿ ವಿಮಾನಪ್ರಯಾಣದಲ್ಲಿ ಆಗಿರುವ ಅಭಿವೃದ್ಧಿ ವಿಜ್ಞಾನದ ಇತಿಹಾಸದಲ್ಲಿ ಅದ್ವಿತೀಯವಾಗಿದೆ. ಈಗ, ಗಂಟೆಗೆ ೩೦೦ ಮೈಲಿಗಳ ವೇಗದಲ್ಲಿ ಹಾರುತ್ತ ೧೬೯ ಪ್ರಯಾಣಿಕರನ್ನು ಒಯ್ಯುವ ಸಾಮರ್ಥ್ಯವುಳ್ಳ ವಿಮಾನಗಳಿವೆ.

೪೦ ವರ್ಷಗಳ ಅವಧಿಯಲ್ಲಿ ಆಗಿರುವ ಈ ಆಶ್ಚರ್ಯಕರವಾದ ಅಭಿವೃದ್ಧಿಗೆ ಕಳೆದ ಮಹಾಯುದ್ಧ ಬಹುಮಟ್ಟಿಗೆ ಕಾರಣ. ವಿಜ್ಞಾನದ ಅಭಿವೃದ್ಧಿಗೆ ಯುದ್ಧ ಅತ್ಯಂತ ದೊಡ್ಡ ಪ್ರೇರಕಶಕ್ತಿಯಾಯಿತು. ಯುದ್ಧದ ನಾಲ್ಕು ವರ್ಷಗಳೂ ಪ್ರತಿಯೊಂದು ರಣಕ್ಷೇತ್ರದಲ್ಲಿಯೂ ವಿಮಾನಬಲದಲ್ಲಿ ಮೇಲುಗೈಯಾಗಲು ಪ್ರತಿಯೊಂದು ಜನಾಂಗವು ಈ ಘೋರವಾದ ಹೋರಾಟಕ್ಕಾಗಿ ರಕ್ತ, ಸಾಮಗ್ರಿ ಮತ್ತು ಸಂಪತ್ತುಗಳನ್ನು ಲಕ್ಷ್ಯವಿಲ್ಲದೆ ಸುರಿಯಿತು. ಆ ವರ್ಷಗಳಲ್ಲಿ ಮಾಡಿದ ನೂತನ ನಿರ್ಮಾಣಗಳ ಮತ್ತು ಪಡೆದ ಅನುಭವದ ಫಲವಾಗಿ ಯುದ್ಧ ನಿಂತ ಕೂಡಲೆ ಹಿಂದಿನದನ್ನು ಮೀರಿಸಿದ ಅನೇಕ ವಿಮಾನ ಹಾರಿಕೆಗಳು ನಡೆದುವು. ಸಣ್ಣ ಪ್ರಮಾಣದ ಪ್ರಯೋಗಗಳ ಹವ್ಯಾಸವಾಗಿದ್ದ ವಿಮಾನ ಪ್ರಯಾಣವನ್ನು ಯುದ್ಧ ಭೂತಾಕಾರಕ್ಕೆ ಬೆಳೆಯಿಸಿತು. ಆರ್ಥಿಕ ಸಾಮರ್ಥ್ಯವನ್ನು ಲಕ್ಷಿಸದೆ, ದ್ರವ್ಯವನ್ನೂ ಸಾಮಗ್ರಿಯನ್ನೂ ಧಾರಾಳವಾಗಿ ವೆಚ್ಚ ಮಾಡಿದ ಹಾಗೆಲ್ಲ ವಿಮಾನ ತಯಾರಿಕೆಯ ವಿಧಾನಗಳು ಬೇಕಾದಷ್ಟು ಮುಂದುವರಿದುವು. ಆ ವರ್ಷಗಳಲ್ಲಿ ವಿಮಾನ ಪ್ರಯಾಣ ಬೇಕಾದಷ್ಟು ಮುಂದುವರಿಯಿತು; ಆದರೆ ಯುದ್ಧ ಮುಗಿದ ಕೂಡಲೆ ಅದು ಒಂದು ಕ್ರಮವಾದ ರೀತಿಯಲ್ಲಿ ಮುಂದುವರಿಯುತ್ತ ಬಂತು.

ವಿಮಾನಗಳಿಗೆ ಮರಳಿ ಉರುವಲು ತುಂಬುವುದು

ವಿಮಾನಗಳು ತಮ್ಮ ಉರುವಲಿನ ಸರಬರಾಯಿ ಮುಗಿಯುವುದಕ್ಕೆ ಮುಂಚೆ ವಿಮಾನಾಂಗಣಕ್ಕೆ (Aerodrome) ಬಂದಿಳಿಯುವುದು ಸಾಮಾನ್ಯ ಪದ್ಧತಿ, ಆದರೆ ಇನ್ನು ಮುಂದೆ, ಮುಖ್ಯವಾಗಿ ಬಹುದೂರ ಹಾರಬೇಕಾದ ಸಂದರ್ಭಗಳಲ್ಲಿ, ಈ ಪದ್ಧತಿಯೇ ನಡೆದುಕೊಂಡು ಬರುತ್ತದೆಂಬುದು ಸ್ಥಿರವಲ್ಲ. ಮಾರ್ಪಾಟು ಸಾಧ್ಯವೆಂಬುದಕ್ಕೆ ಕಾರಣಗಳು ಎರಡು ; ಮೊದಲನೆಯದಾಗಿ, ವಿಮಾನ ಹೊರಬೇಕಾದ ಉರುವಲು ಎಷ್ಟು ಕಡಮೆಯಾಗಿರುತ್ತದೆಯೊ ಅಷ್ಟೊ ಅಷ್ಟು ಹೆಚ್ಚಿನ ಉಪಯುಕ್ತವಾದ ಹೇರು ಹಿಡಿಸುವುದಲ್ಲದೆ ಸಾಮಾನುಗಳಿಗೂ

ಟಪ್ಪಾಲುಗಳಿಗೂ ಹೆಚ್ಚಿನ ಸ್ಥಳಾವಕಾಶ ಸಾಧ್ಯವಾಗುತ್ತದೆ; ಏಕೆಂದರೆ, ಬೇಕಾಗಿರುವ ಉರುವಲು ಪಾತ್ರೆಗಳು ಸಣ್ಣವಾಗಿರಬಹುದು. ಎರಡನೆಯದಾಗಿ, ಮುಖ್ಯವಾಗಿ ವಿಮಾನಾಂಗಣಗಳು ಸಣ್ಣವಾಗಿದ್ದಾಗ, ವಿಮಾನವು ವಾಯುವಿಗೆ ಒಯ್ಯಬಲ್ಲ ಒಟ್ಟು ತೂಕದ ಮಿತಿ ವಿಮಾನ ನೆಲೆಬಿಟ್ಟು ಮೇಲಕ್ಕೇರುವ ಸ್ಥಿತಿಗತಿಗಳಿಗೆ ಅಧೀನವಾಗಿದೆ. ವಿಮಾನ ನೆಲದ ಮೇಲೆ ಓಡುತ್ತಿರುವಾಗ ಸಾಧಾರಣ ರೀತಿಯ ಚಾಲಕ ಚೆನ್ನಾಗಿ ಕೆಲಸ ಮಾಡುವುದಿಲ್ಲ ; ವಿಮಾನ ಮುಂಬರಿಯುವ ವೇಗ ಹಾರಿಕೆಯ ವೇಗಕ್ಕೆ ಸಮನಾಗಿದ್ದಾಗ ಮಾತ್ರ ಅದು ಚೆನ್ನಾಗಿ ಕೆಲಸ ಮಾಡುತ್ತದೆ. ಆದ್ದರಿಂದ, ವಿಮಾನ ನೆಲೆಬಿಟ್ಟು ಮೇಲೇರಲು ಓಡುವ ಓಟದ ಬಹುಭಾಗದಲ್ಲಿ, ಇರುವ ಎಲ್ಲ ಎಂಜಿನ್‌ಸಾಮರ್ಥ್ಯವನ್ನೂ ಉಪಯೋಗಿಸುವುದಕ್ಕೆ ಸಾಧ್ಯವಾಗದಿರಬಹುದು; ತುಂಬ ಹೊರೆಹೊತ್ತಿರುವ ವಿಮಾನಗಳು ನೆಲೆಬಿಟ್ಟು ಮೇಲಕ್ಕೆ ಹಾರಲಿ ಬಹು ದೂರ ಓಡಬೇಕಾಗಬಹುದು; ಇದು ಸಣ್ಣ ವಿಮಾನಾಂಗಣಗಳಲ್ಲಿ ಸಾಧ್ಯವಿಲ್ಲ.

ಬಹಳ ಗಮನಕೊಟ್ಟು ಬೇರೊಂದು ಏರ್ಪಾಡನ್ನು ಪರ್ಯಾಲೋಚನೆ ಮಾಡಲಾಗಿದೆ. ಅದೇನೆಂದರೆ, ಕಡಾಯಿಗಳಲ್ಲಿ ಪೆಟ್ರೋಲನ್ನು ಕಡಮೆ ಮಾಡಿ, ವಿಮಾನದ ಹೊರೆಯನ್ನೂ ಕಡಮೆಮಾಡಿ, ಆಕಾಶದಲ್ಲಿ ಹಾರುತ್ತಿರುವಾಗಲೇ ಮತ್ತೊಂದು ವಿಮಾನದ ಸಹಾಯದಿಂದ ಉರುವಲ ಸರಬರಾಯಿಯನ್ನು ಮತ್ತೆ ತುಂಬುವುದು. ಮತ್ತೆ ಉರುವಲು ತುಂಬುವ ಈ ವಿಧಾನ ಬಹಳ ಸುಲಭವಾದದ್ದು. ಎರಡನೆಯ ವಿಮಾನವೊಂದರಲ್ಲಿ ಉರುವಲಿನ ಸರಬರಾಯಿಯನ್ನು ಒಯ್ಯುವುದಕ್ಕಾಗಿ ವಿಶೇಷ ರೀತಿಯ ಕಡಾಯಿಗಳನ್ನು ಜೋಡಿಸಿರುತ್ತದೆ, ಮತ್ತು ಯಾವ ವಿಮಾನದ ಕಡಾಯಿಗಳಿಗೆ ಮತ್ತೆ ಉರುವಲು ತುಂಬಬೇಕೊ ಆ ಹಾರುತ್ತಿರುವ ವಿಮಾನದ ಮೇಲುಗಡೆ ಇದನ್ನು ಹಾರಿಸಲಾಗುತ್ತದೆ. ಒಂದು ಉದ್ದನೆಯ ಮೆತುಕೊಳವೆಯನ್ನು ಇಳಿಯಬಿಡಲಾಗುತ್ತದೆ; ಇದನ್ನು ಕೆಳಗಿನ ವಿಮಾನದಲ್ಲಿನ ವಿಮಾನ ನಡಸುವವರು ಉರುವಲಿನ ಕಡಾಯಿಗೆ ಒಯ್ಯುವ ಒಂದು ವಿಶೇಷ ಜೋಡಣೆಗೆ ಜೋಡಿಸುತ್ತಾರೆ. ಬಳಿಕ ತಿರುಪುಬಿರಡೆಯನ್ನು ತೆರೆಯಲಾಗಿ, ಗುರುತ್ವಾಕರ್ಷಣ ಶಕ್ತಿಯಿಂದ ಉರುವಲು ಮೇಲಣ ಯಂತ್ರದಿಂದ ಕೆಳಗಣ ಯಂತ್ರಕ್ಕ ಹರಿದು ಬರುತ್ತದೆ. ಇದುವರೆಗೆ ಸಾಮಾನ್ಯವಾಗಿ ಒಂದು ವಿಮಾನಾಂಗಣದ ಮೇಲೆ ಈ ವಿಧಾನವನ್ನು ನಡಸಿದೆ. ಈ ವಿಧಾನದಿಂದ ಒಂದು ವಿಮಾನಾಂಗಣದ ಮೇಲೆ ಅನೇಕ ದೂರಹಾರಿಕೆಗಳನ್ನು ಮಾಡಲಾಗಿದೆ. ಎಲ್ಲರ ಗಮನವನ್ನೂ ಸೆಳೆದ ಇಂತಹ

ಮೊದಲ ಹಾರಿಕೆಯನ್ನು ಅಮೆರಿಕದ ಸಂಯುಕ್ತ ಸಂಸ್ಥಾನಗಳ 'ಪ್ರಶ್ನೆ ಚಿಹ್ನೆ (Question Mark) ಎಂಬ ವಿಮಾನ ೧೯೨೭ರಲ್ಲಿ ಹಾರಿತು; ಅದು ೧೪ ದಿನಗಳಿಗಿಂತ ಹೆಚ್ಚುಕಾಲ ಕೆಳಗಿಳಿಯದೆ ಹಾರುತ್ತಲೇ ಇತ್ತು.

ವಾಯು ಹಡಗುಗಳಿಗೆ ಆಕಾಶದಲ್ಲಿ ಮತ್ತೆ ಉರುವಲು ತುಂಬುವ ಪ್ರಶ್ನೆಯನ್ನು ವಿಚಾರಮಾಡಿದೆ; ಆದರೆ ಕಾರ್ಯತಃ ಪರೀಕ್ಷಿಸಿಲ್ಲ. ಕೆಲಸ ಮಾಡುತ್ತಿರುವ ಒಂದೇ ಒಂದು ವಾಯು ಹಡಗಾದ ಗ್ರಾಫ್ ಜೆಪ್ಲಿನ್ ಎಂಬುದಕ್ಕೆ, ಅದು ಪ್ರಯಾಣ ಗಳನ್ನು ಮುಗಿಸಿದ ಕಡೆಯಲ್ಲಿ ಕೂವೆಗಳಿಗೆ ಬಿಗಿದಿರುವಾಗ ಮತ್ತೆ ಉರುವಲನ್ನು ತುಂಬುತ್ತಿದೆ.

ಜಾರುವಿಮಾನ (Glider): ವಾಯುವಿಗಿಂತ ಭಾರವಾದ ವಿಮಾನಗಳ ವಿಚಾರ ಮಾಡುತ್ತಿರುವಾಗ ಜಾರು ವಿಮಾನದ ಪರಿಶೀಲನೆ ಮಾಡುವುದು ಮುಖ್ಯವೋ ಸ್ವಾರಸ್ಯವುಳ್ಳದೂ ಆಗಿದೆ. ಜಾರುವಿಮಾನ ಎಂಜಿನ್ನಿಲ್ಲದ, ಸ್ಥಿರ ರೆಕ್ಕೆಗಳುಳ್ಳ ವಿಮಾನ. ಬರುಬರುತ್ತಾ ಎತ್ತರ ಕಡಮೆಯಾಗುವ ಸ್ವತಂತ್ರ ಹಾರಿಕೆಗಳಲ್ಲಿ ಅದನ್ನು ಉಪಯೋಗಿಸಲಾಗುತ್ತದೆ. ವಾಯುವಿಗಿಂತ ಭಾರವಾದ ಕಾಯವೊಂದನ್ನು ಆಕಾಶದಲ್ಲಿ ತೇಲಿಬಿಟ್ಟಾಗ, ಅದಕ್ಕೆ ವಿಸ್ತಾರವಾದ ಮೇಲ್ಮೈ ಕ್ಷೇತ್ರವಿದ್ದರೆ ಅದು ಆಕಾಶದಲ್ಲೇ ಇರಬಲ್ಲದೆಂಬುದು ಹಕ್ಕಿಗಳ ಮತ್ತು ಗಾಳಿಪಟದ ಉದಾಹರಣೆಯಿಂದ ಸ್ಪಷ್ಟವಾಗಿದೆ. ಅದೇ ರೀತಿಯಲ್ಲಿ, ಜಾರುವಿಮಾನದ ರೆಕ್ಕೆಯ ಮೇಲ್ಮೈ ವಿಸ್ತಾರವು, ಗಾಳಿಯ ವೇಗ ಸಾಧಾರಣವಾಗಿರುವಾಗ, ವಿಮಾನದ ಭಾರವನ್ನು ಆಕಾಶದಲ್ಲಿ ಹೊರಲು ತಕ್ಕಷ್ಟು ದೊಡ್ಡದಾಗಿರುವಂತೆ ಜಾರುವಿಮಾನದ ಸಂವಿಧಾನವನ್ನು ಗೊತ್ತುಮಾಡಲಾಗಿದೆ. ಈ ಜಾರುವಿಮಾನಗಳನ್ನು ಗುಡ್ಡಗಳ ಮೇಲಿಂದ ಇಲ್ಲವೆ ಬೇರೆಯ ಎತ್ತರವಾದ ಸ್ಥಳಗಳಿಂದ ತೇಲಬಿಡಲಾಗುತ್ತದೆ. ಈ ವಿಮಾನಗಳನ್ನು ಮುಂದಕ್ಕೆ ನಡೆಸಿಕೊಂಡು ಹೋಗುವುದಕ್ಕೆ ಎಂಜಿನ್ನುಗಳಿಲ್ಲದಿರುವುದರಿಂದ ಅವು ನಿಧಾನವಾಗಿ ಭೂಮಿಯ ಕಡೆಗೆ ಕೆಳಕ್ಕೆ ಬರುತ್ತವೆ. ಆದರೆ ಗಾಳಿ ಬೀಸುತ್ತಿದ್ದ ಪಕ್ಷದಲ್ಲಿ ಅವು ಗಾಳಿ ಬೀಸುವ ದಿಕ್ಕಿನಲ್ಲೇ ಮುಂದಕ್ಕೆ ಹಾರಿ ಹೋಗುತ್ತವೆ, ಮತ್ತು ಬಹಳ ದೀರ್ಘವಾದ ಆಕಾಶದಲ್ಲೇ ಇರುತ್ತವೆ. ಸಮತಲಕ್ಕೂ ಪ್ರಮಾಣಭೂತವಾದ ವಾತಾವರಣದಲ್ಲಿ ಜಾರುವಿಮಾನ ಸಂಚರಿಸುವ ಪಥಕ್ಕೂ ನಡುವಣ ಕೋನಕ್ಕೆ ಜಾರುಕೋನ (Gliding angle) ಎಂದು ಹೆಸರು.

ಜಾರು ಹಾರಿಕೆಯನ್ನು ಮೂರು ಬಗೆಯಾಗಿ ವಿಂಗಡಿಸಬಹುದು: ಜಾರುವುದು, (ಹಾರುತ್ತ) ಮೇಲೇರುವುದು, ಮತ್ತು ತೇಲುವುದು, ಮೊದಲನೆಯದಾದ ಜಾರು ಹಾರಿಕೆಯಲ್ಲಿ ವಿಮಾನ ನಡಸುವವನಿಗೆ ಎಂಜಿನ್ನಿಲ್ಲದ

ವಿಮಾನದ ಹತೋಟಿಯೂ ಸ್ವಭಾವ ಪರಿಚಯವೂ ಉಂಟಾಗುತ್ತವೆ. ಈ ಉದ್ದೇಶಕ್ಕಾಗಿರಿಸಿದ ಜಾರುವಿಮಾನಗಳು ಆಕಾಶದಲ್ಲಿ ಅಲ್ಪಾವಧಿಕಾಲ ಇರುವುದಕ್ಕಾಗಿ ರಚಿಸಲ್ಪಟ್ಟಿವೆ. ಇಳಿಜಾರಿನ ನೆತ್ತಿಯಿಂದ ಅವನ್ನು ತೇಲಿಬಿಟ್ಟಾಗ ಅವು ನಿಧಾನಗತಿಯಿಂದ, ಸರಿಸುಮಾರಾದ ಜಾರುಕೋನದಲ್ಲಿ ಮುಂದಕ್ಕೆ ಇಳಿಯುತ್ತವೆ. ಕ್ರಮಕ್ರಮವಾಗಿ ಹೆಚ್ಚು ಕಾಲ ಹಾರುತ್ತ ಅನೇಕ ಸಲ ಈ ಮಾದರಿಯಲ್ಲಿ ಹಾರಿದ ಮೇಲೆ ವಿಮಾನ ನಡಸುವವನು ಮೇಲಕ್ಕೇರುವ ಯಂತ್ರದಲ್ಲಿ ಹಾರುತ್ತಾನೆ. ಇವುಗಳಿಗೆ ವಿಸ್ತಾರವಾದ ಕ್ಷೇತ್ರವುಳ್ಳ ರೆಕ್ಕೆಗಳೂ ವಾಯುಪ್ರವಾಹಕ್ಕೆ ಅತ್ಯಂತ ಕಡಮೆಯ ನಿರೋಧವನ್ನೊಡ್ಡುವ ಒಡಲೂ ಇವೆ; ಹೀಗಿರುವುದರಿಂದ, ಒಂದು ಗುಡ್ಡದ ಗಾಳಿ ಬೀಸುವ ಪಕ್ಕದಿಂದ ಇವನ್ನು ತೇಲಬಿಟ್ಟರೆ ತಕ್ಕಮಟ್ಟಿಗೆ ದೀರ್ಘಕಾಲ ಹಾರುತ್ತಿರಬಹುದು. ವಿಮಾನ ನಡಸುವವನು ಮೇಲ್ಗಾಳಿಯ ಪ್ರದೇಶಗಳಲ್ಲಿ ಇರಬಲ್ಲನಾದರೆ ಆಗ ಮೇಲಕ್ಕೇರುವುದೂ ಸಾಧ್ಯ. ಅತ್ಯಂತ ಅನುಕೂಲವಾದ ವಾಯುವಿನ ಮೇಲ್‌ಪ್ರವಾಹಗಳು ಎಲ್ಲೆಲ್ಲಿ ಇರುತ್ತವೆ ಎಂಬುದನ್ನೂ ಅವುಗಳೊಳಗೇ ಇರಲಾಗುವಂತೆ ಹಾರುವ ಸರಿಯಾದ ವಿಧಾನವನ್ನೂ ಹೆಚ್ಚಾಗಿ ಅನುಭವಕ್ಕೆ ತಂದುಕೊಂಡಂತೆಲ್ಲ ವಿಮಾನ ನಡಸುವವನು ಅನಿರ್ದಿಷ್ಟ ಕಾಲ ಮೇಲುಮೇಲಕ್ಕೆ ಏರಬಲ್ಲವನಾಗಿರುತ್ತಾನೆ.

ಜಾರುಹೀರಿಕೆಯಲ್ಲಿ ಉತ್ಸಾಹವುಳ್ಳವರೆಲ್ಲರ ಗುರಿ ಎಂದರೆ ನಿಜವಾದ ತೇಲುಹಾರಿಕೆ; ಬಹು ಮೇಲಾದ ಸಾಮರ್ಥ್ಯವಿರುವಂತೆ ಕಟ್ಟಿದ ಯಂತ್ರಗಳಲ್ಲಿ ಈ ಬಗೆಯ ಹಾರಿಕೆ ಹಾರಲಾಗುತ್ತದೆ. ಈ ಬಗೆಯ ಜಾರುವಿಮಾನಗಳಿಗೆ ಅನೇಕ ವೇಳೆ ನೂರು ಅಡಿಗಳಷ್ಟು ವಿಸ್ತಾರವಾದ ಅಡ್ಡಗಲದ ಮತ್ತು ಬಹು ಸೂಕ್ಷ್ಮವಾಗಿ ಚೂಪಾಗುತ್ತ ಹೋಗುವ ರೆಕ್ಕೆಗಳುಂಟು. ವಾಯುಪ್ರವಾಹಕ್ಕೆ ಸ್ವಲ್ಪವೂ ನಿರೋಧವನ್ನೊಡ್ಡದ ಒಡಲೊಂದು ಈ ರೆಕ್ಕೆಗಳಿಗೆ ಆಧಾರವಾಗಿರುತ್ತದೆ. ನಿಶ್ಚಲ ವಾಯುಮಂಡಲದಲ್ಲಿ ಈ ಯಂತ್ರಗಳು ಬಹುಮಟ್ಟಿಗೆ ಸಮತಲದಲ್ಲೇ ಜಾರಬಲ್ಲವು. ಮತ್ತು ಇವು ಮೇಲೇರಲು ಅತ್ಯಂತ ಸೂಕ್ಷ್ಮ ಮೇಲ್‌ಪ್ರವಾಹಗಳು ಸಾಕು. ಕಳೆದ ೨೦ ವರ್ಷಗಳಲ್ಲಿ ಮೋಟಾರಿಲ್ಲದ ವಿಮಾನ ಹಾರಿಕೆಯಿಂದ ಬಹಳ ಪ್ರಯೋಜನ ವುಂಟಾಗಿದೆ. ೧೯೨೨ರಿಂದ ಈಚೆಗೆ ಹಾರಿಕೆಯ ಅತ್ಯಂತ ಹೆಚ್ಚಿನ ಅವಧಿ ೨ ಗಂಟೆಗಳ ಕಾಲದಿಂದ ೩೬ ಗಂಟೆ ೩೫ ನಿಮಿಷಗಳ ಕಾಲಕ್ಕೆ ಹೆಚ್ಚಿದೆ; ಸರಳರೇಖೆಯಲ್ಲಿ ಅಳೆದ ಅತ್ಯಂತ ಹೆಚ್ಚಿನ ದೂರ ೮ರಿಂದ ೧೬೫ ಮೈಲಿಗಳಿಗೆ ಹೆಚ್ಚಿದೆ; ಅತ್ಯಂತ ಹೆಚ್ಚಿನ ಎತ್ತರ (ಸಮುದ್ರ ಮಟ್ಟದ ಮೇಲೆ) ೩೪೦ ಅಡಿಗಳಿಂದ ೧೨,೩೬೧ ಅಡಿಗಳವರೆಗೆ ಹೆಚ್ಚಿದೆ.

ಮೋಟಾರಿಲ್ಲದ ವಿಮಾನ ಹಾರಿಕೆಗಳ ಉಪಯೋಗ ಏನು, ಮುಖ್ಯತೆ ಏನು?– ಎಂದು ಕೇಳಬಹುದು. ಪಂದ್ಯದ ಮೋಟಾರು ಬಂಡಿಗಳ ಮತ್ತು ವೇಗದ ಸ್ಪರ್ಧೆಗಳಿಗಾಗಿ ಕಟ್ಟಿದ ವಿಮಾನಗಳ ಸಂಬಂಧವಾಗಿ ಇದೇ ತೆರದ ಪ್ರಶ್ನೆಗಳನ್ನು ಅನೇಕ ವೇಳೆ ಕೇಳಲಾಗಿದೆ. ಅಂಥ ಯಂತ್ರಗಳು ವಿಮಾನ ರಚನೆಯ ವಿಧಾನಗಳನ್ನು ಉತ್ತಮಪಡಿಸುತ್ತವೆ ಎಂಬುದೇ ಉತ್ತರ. ಮತ್ತು ಮೋಟಾರು ಬಂಡಿಗಳ ಮತ್ತು ಸಾಮಾನ್ಯ ಬಳಕೆಯ ವಿಮಾನಗಳ ರಚನೆಯಲ್ಲಿ ಹೆಚ್ಚಿನ ಆವಶ್ಯಕತೆಗಳನ್ನು ಪೂರಯಿಸಲು ಹೊಸ ತಯಾರಿಕೆಯ ವಿಧಾನಗಳು ಏರ್ಪಡುತ್ತವೆ. ತೇಲುವಿಮಾನಗಳು ಅಥವಾ ಜಾರುವಿಮಾನಗಳು ಅದೇ ಬಗೆಯ ಉದ್ದೇಶಕ್ಕೆ ಒದಗಿಬರುತ್ತವೆ. ವಾಣಿಜ್ಯ ವಿಮಾನಗಳಲ್ಲಿ ಮಿತವ್ಯಯ ಬಹು ಮುಖ್ಯ ಅಂಶ; ಆದ್ದರಿಂದ ಬೇರೆ ಬೇರೆ ಬಗೆಯ ವಿಮಾನಗಳ ತಯಾರಿಕೆಯ ಅನುಭವದಿಂದ ದೊರೆತ ಪ್ರಯೋಜನಗಳನ್ನು ಮುಖ್ಯವಾಗಿ ವಾಣಿಜ್ಯ ವಿಮಾನಗಳ ತಯಾರಿಕೆಗಾಗಿ ವಿನಿಯೋಗಿಸಲಾಗಿದೆ. ವಾಣಿಜ್ಯ ವಿಮಾನಗಳು ಏರುವಾಗ ಮತ್ತು ಇಳಿಯುವಾಗ ಬಹಳ ಸಣ್ಣ ಕೋನಗಳಲ್ಲಿ ಏರಿ ಇಳಿಯುವಂತೆ ರಚಿಸಿದರೆ ಒಂದು ಗೊತ್ತಾದ ಅಶ್ವ ಸಾಮರ್ಥ್ಯಕ್ಕೆ ಹೆಚ್ಚಿನ ಹಣ ದೊರೆಯುವ ಹೇರನ್ನು ಒಯ್ಯಲು ಸಾಧ್ಯವಾಗುತ್ತದೆ. ಇಲ್ಲವೆ, ಹೇರು ಇದ್ದಷ್ಟೆ ಇದ್ದು, ಹಿಂದೆ ಉಪಯೋಗಿಸುತ್ತಿದ್ದುದಕ್ಕಿಂತ ಸಣ್ಣ ಎಂಜಿನ್ನುಗಳನ್ನು ಉಪಯೋಗಿಸಬಹುದಾಗಿದೆ. ಎರಡನೆಯದಾಗಿ, ಜಾರುವಿಮಾನದಲ್ಲಿ ಹಾರುವ ಚಳವಳಿಯ ಫಲವಾಗಿ ಪ್ರಪಂಚದ ವಾಯುಯಾನ ಮತ್ತು ಪವನಶಾಸ್ತ್ರ ಸಂಬಂಧವಾದ ಜ್ಞಾನಭಂಡಾರ ತಕ್ಕಮಟ್ಟಿಗೆ ಹೆಚ್ಚಿದೆ. ಇವಲ್ಲದೆ, ವಿಮಾನದಲ್ಲಿ ಹಾರುವುದನ್ನು ಕಲಿಸುವುದಕ್ಕೂ ಆಕಾಶ ಯಾನದ ಅಭಿರುಚಿಯನ್ನು ಮುಂದುವರಿಸುವುದಕ್ಕೂ ಜಾರುವಿಮಾನದಲ್ಲಿ ಹಾರುವುದು ಅಮೂಲ್ಯವಾದ ಸಾಧನವಾಗಿದೆ. ವಿಮಾನ ನಡಸುವವರು ಹೆಚ್ಚು ಸ್ವಾಭಾವಿಕವಾಗಿ ವಿಮಾನದಲ್ಲಿ ಹಾರುವುದಕ್ಕೂ ತಾವು ಹಾರುವ ಆಕಾಶದ ವಿಷಯವಾಗಿ ಮೊದಲಿಗಿಂತ ಉತ್ತಮವಾದ ತಿಳಿವಳಿಕೆ ಪಡೆಯುವುದಕ್ಕೂ ಇದರಿಂದ ಸಾಧ್ಯ. ಇದುವರೆಗೆ ತಿಳಿಸಿದ ಪ್ರಯೋಜನಗಳನ್ನು ಬಿಟ್ಟರೂ, ಆಕಾಶದ ಮೇಲೇರುವುದೂ ಅದರಲ್ಲಿ ತೇಲುವುದೂ ಅತ್ಯಂತ ಮನೋರಂಜಕ ವಿನೋದ ಕ್ರೀಡೆಯಾಗಿದ್ದು, ಜನಾಂಗದ ತರುಣರಿಗೆ ಅತ್ಯಂತ ರುಚಿಸುವುದಾಗಿದೆ. ಆಕಾಶದಲ್ಲಿ ಮೇಲೇರುವ ವಿಮಾನಸಾರಥಿ (Pilot) ಏರುವ ವಾಯುಪ್ರವಾಹಗಳ ಪ್ರದೇಶ ಗಳೊಳಗೆ ಇರುವುದಕ್ಕೂ ಬಲಾತ್ಕಾರದಿಂದ ಕೆಳಕ್ಕಿಳಿದಾಗ ತಾನು ಮೊದಲಿದ್ದ ಎತ್ತರಕ್ಕೆ ಮತ್ತೆ ಏರುವುದಕ್ಕೂ ತನ್ನ ಸ್ವಂತ ವಿವೇಚನೆ, ಕೌಶಲಗಳನ್ನು

ಅವಲಂಬಿಸಬೇಕು. ಕಡೆಯದಾಗಿ, ಹಿತಕರವಾದ ವಿನೋದ ಕ್ರೀಡೆಯನ್ನು ವಿಜ್ಞಾನದ ಬೆಳವಣಿಗೆಗಾಗಿ ಉಪಯೋಗಿಸಿಕೊಳ್ಳುವುದರಿಂದ ಜಾರು ವಿಮಾನ ಹಾರಿಕೆಯಲ್ಲಿ ವಿನೋದ ಕ್ರೀಡೆ, ಕೌಶಲ, ಮತ್ತು ವಿಜ್ಞಾನ– ಇವುಗಳ ಒಂದು ಅಪೂರ್ವವಾದ ಸಮ್ಮಿಳನವುಂಟಾಗಿದೆ.

* * * *

ಪ್ರಕರಣ ೩
ವಾಯುಯಾನಗಳ ಮಾದರಿಗಳು

ವಾಯುಯಾನಗಳನ್ನು ಎರಡು ಮುಖ್ಯ ವರ್ಗಗಳಾಗಿ ವಿಂಗಡಿಸಬಹುದು. ವಾಯುವಿಗಿಂತ ಹಗುರವಾದವು, ಮತ್ತು ವಾಯುವಿಗಿಂತ ಭಾರವಾದವು. ಹಿಂದೆಯೇ ವಿವರಿಸಿರುವಂತೆ, ಇವು ಬೇರೆ ಬೇರೆ ತತ್ತ್ವಗಳಿಗನುಸಾರವಾಗಿ ಕಾರ್ಯ ಮಾಡುತ್ತವೆ. ಮುಂದೆ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಬೇರೆ ಒಳವಿಭಾಗಗಳ ವಿವರಣೆಯಿದೆ:–

ವಾಯುಯಾನಗಳು

- ವಾಯುವಿಗಿಂತ ಹಗುರವಾದವು
  - ಯಂತ್ರ ಸಹಾಯವಿಲ್ಲದೆ ನಡೆಯುವವು
    - ಆಕಾಶ ಬುಟ್ಟಿಗಳು
  - ಯಂತ್ರ ಸಹಾಯದಿಂದ ನಡೆಯುವವು
    - ವಾಯು ಹಡಗುಗಳು
- ವಾಯುವಿಗಿಂತ ಭಾರವಾದವು
  - ಯಂತ್ರ ಸಹಾಯವಿಲ್ಲದೆ ನಡೆಯುವವು
    - ಜಾರು ವಿಮಾನಗಳು
  - ಯಂತ್ರ ಸಹಾಯದಿಂದ ನಡೆಯುವವು
    - (ಫಲಕ) ವಿಮಾನಗಳು
      - ಭೂ ವಿಮಾನಗಳು
      - ಸಮುದ್ರ ವಿಮಾನಗಳು
      - ಸ್ಥಲಜಲ ವಿಮಾನಗಳು

(ಫಲಕ) ವಿಮಾನಗಳನ್ನು ಕೆಲವು ವೇಳೆ ಅವುಗಳಿಗೆ ಜೋಡಿಸಿರುವ ಎಂಜಿನ್ನುಗಳಿಗೆ ಅನುಸಾರವಾಗಿ ವರ್ಗೀಕರಿಸಲಾಗುತ್ತದೆ. ಬಹುದೂರ ಪ್ರಯಾಣ ಮಾಡುವ ಕೆಲವು ಆಧುನಿಕ ವಿಮಾನಗಳಿಗೆ ಎರಡು, ಮೂರು ಅಥವಾ ನಾಲ್ಕು ಎಂಜಿನ್ನುಗಳಿರುತ್ತವೆ; ಇದರಿಂದ, ಒಂದು ಎಂಜಿನ್ನು ಕೆಟ್ಟುಹೋದರೆ ಉಳಿದವುಗಳ ಬಲದ ಮೇಲೆ ವಿಮಾನವನ್ನು ಹಾರಿಸುತ್ತಿರಬಹುದು. ಹೀಗೆ, ಎರಡು ಎಂಜಿನ್ನುಗಳಿದ್ದರೆ ಎರಡೆಂಜಿನ್ನಿನ ವಿಮಾನವೆಂದೂ ಮೂರು ಎಂಜಿನ್ನುಗಳಿದ್ದರೆ ಮೂರೆಂಜಿನ್ನಿನ ವಿಮಾನವೆಂದೂ ಹೆಸರು.

ಇನ್ನೊಂದು ಮುಖ್ಯ ವರ್ಗೀಕರಣ, ವಿಮಾನ ನೆಲದ ಮೇಲೆ ಇಳಿಯ ಬೇಕೆಂದು ಉದ್ದೇಶಿಸಿದೆಯೆ, ಕಡಲ ಮೇಲೆ ಇಳಿಯಬೇಕೆಂದು ಉದ್ದೇಶಿಸಿದೆಯೆ, ಕಡಲ ಮೇಲೆ ಇಳಿಯಬೇಕೆಂದು ಉದ್ದೇಶಿಸಿದೆಯೆ, ಇಲ್ಲವೆ ಎರಡರಮೇಲೂ ಇಳಿಯಬೇಕೆಂದು ಉದ್ದೇಶಿಸಿದೆಯೆ– ಎಂಬುದಕ್ಕೆ ಅನುಸಾರವಾಗಿದೆ. ಮೊದಲನೆಯದರ ಹೆಸರು ಭೂವಿಮಾನ, ಎರಡನೆಯ ತೆರದ ಹೆಸರು ಸಮುದ್ರ ವಿಮಾನ, ಮೂರನೆಯದು ಸ್ಥಲಜಲ ವಿಮಾನ. ಭೂವಿಮಾನದ ಒಡಲಿಗೆ (Hull) ಎರಡು ಗಾಲಿಗಳು ಜೋಡಿಸಿರುತ್ತವೆ; ಸಮುದ್ರದ ಮೇಲೆ ಇಳಿಯಲನು ಕೂಲವಾಗುವಂಥ ಸಮುದ್ರವಿಮಾನಕ್ಕೆ ಒಂದು (ಅಥವಾ ಎರಡು) ದೋಣಿಯಾಕಾರದ ಒಡಲಿರುತ್ತದೆ. ಸಾಗರಗಳ ಮೇಲೆ ಹಾರುವ ಪ್ರಯಾಣ ಗಳನ್ನು ಕೈಕೊಂಡಾಗ ಅಂಥ ಸಮುದ್ರ ವಿಮಾನಗಳನ್ನು ಅಥವಾ ಹಾರುಹಡಗುಗಳನ್ನು ಉಪಯೋಗಿಸಲಾಗುತ್ತದೆ. ಸ್ಥಲಜಲ ವಿಮಾನಗಳೂ ಸಮುದ್ರ ವಿಮಾನಗಳೆ; ಆದರೆ, ನೆಲದ ಮೇಲೂ ಇಳಿಯಲಾಗುವಂತೆ ಅವಕ್ಕೆ ಗಾಲಿಗಳೂ ಇರುತ್ತವೆ. ನೀರಿನ ಮೇಲೆ ಇಳಿಸಬೇಕಾದಾಗ ಈ ಗಾಲಿಗಳನ್ನು ಒಳಸೆಳೆಯ ಲಾಗುತ್ತದೆ.

ಕೆಲವು ವೇಳೆ ವಿಮಾನಗಳನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸ ಲಾಗುತ್ತದೆ ಎಂಬುದನ್ನು ಅನುಸರಿಸಿಯೂ ಅವುಗಳ ವರ್ಗೀಕರಣ ಮಾಡುವುದುಂಟು. ಈ ಸಂದರ್ಭದಲ್ಲಿ, ಮುಖ್ಯ ವಿಭಾಗಗಳು; ಅಸೈನಿಕ ವಿಮಾನಗಳು ಮತ್ತು ಸೈನಿಕ ವಿಮಾನಗಳು. ಅಸೈನಿಕ ವಿಮಾನಗಳಲ್ಲಿ ಮೂರು ಒಳವಿಭಾಗಗಳುಂಟು: ಖಾಸಗಿ ವಿಮಾನಗಳು, ವಾಣಿಜ್ಯ ವಿಮಾನಗಳು, ಪಂದ್ಯದ ಅಥವಾ ವಿನೋದ ಕ್ರೀಡೆಯ ವಿಮಾನಗಳು. ಯುದ್ಧದಲ್ಲಿ ಉಪಯೋಗಿಸುವ ವಿಮಾನಗಳಿಗೆ ಯುದ್ಧ ಸನ್ನಾಹಗಳನ್ನು ಸಜ್ಜುಗೊಳಿಸಿರುತ್ತದೆ: 'ಟಾರ್ಪೆಡೊ ಗುಂಡು'ಗಳನ್ನು ಒಯ್ಯುವವಾದರೆ 'ಟಾರ್ಪೆಡೊ ವಾಹಕ'ಗಳೆಂದೂ, ನಗರಗಳ ಮೇಲೆ 'ಬಾಂಬು'ಗಳನ್ನು ಹಾಕುವದಾದರೆ 'ಬಾಂಬರು'(ಬಾಂಬು ಹಾಕುವ ವಿಮಾನ)ಗಳೆಂದೂ, ಶತ್ರು ವಿಮಾನಗಳನ್ನು ಅಡ್ಡಗಟ್ಟಿ ಅವುಗಳೊಡನೆ ಕಾದಾಡುವವಾದರೆ ಯುದ್ಧ ವಿಮಾನಗಳೆಂದೂ ಬೇರೆ ಬೇರೆ ಹೆಸರುಗಳು ಇವೆಲ್ಲವೂ ಭೂವಿಮಾನಗಳಾಗಿರಬಹುದು, ಸಮುದ್ರವಿಮಾನಗಳಾಗಿರಬಹುದು, ಇಲ್ಲವೆ ಸ್ಥಲಜಲ ವಿಮಾನಗಳಾಗಿರಬಹುದು.

ವಿಮಾನಾಂಗಣಗಳು

ವಿಮಾನಗಳನ್ನು (ಅವು ಖಾಸಗಿಯಾಗಿರಲಿ, ವಾಣಿಜ್ಯ ಸಂಬಂಧದವಾಗಲಿ, ಸೈನಿಕ ಸಂಬಂಧದವಾಗಲಿ) ತಂಗಿಸುವುದಕ್ಕೂ ಹಾರಿಸುವುದಕ್ಕೂ ಉಪಯೋಗಿಸುವ ಹರವಾದ ಭೂಪ್ರದೇಶಗಳೆ ವಿಮಾನಾಂಗಣಗಳು. ಯಾವ ವಿಮಾನಾಂಗಣವೇ ಆಗಲಿ, ಅದನ್ನು ಸರಿಯಾದ ನಿವೇಶನದಲ್ಲಿ ಸ್ಥಾಪಿಸಬೇಕಾದುದು ಅತ್ಯಂತ ಆವಶ್ಯಕ. ಸಾಧಾರಣ ಅಳತೆಯ ವಾಯುಯಾನದ ಸಾಮಾನ್ಯ ಉಪಯೋಗಕ್ಕೆ ಬೇಕಾದ ಸ್ಥಳಾವಕಾಶ ನಾಲ್ಕೂ ಕಡೆಯೂ ಕಡೆಯ ಪಕ್ಷ ೬೦೦ ಗಜಗಳಿರಬೇಕು. ಪ್ರದೇಶ ಯಾವ ಅಡಚಣೆಯೂ ಇಲ್ಲದೆ ೬೦ರಿಂದ ೨೦೦ ಎಕರೆಗಳವರೆಗೂ ಇರಬೇಕು. ಹಾಗೂ, ವಿಮಾನ ಇಳಿಯುವುದಕ್ಕಾಗಿ ಕನಿಷ್ಠ ಪ್ರಮಾಣದ ಸ್ಥಳ ಮಾತ್ರ ಇದ್ದರೆ ಸಾಲದು. ಅದರ ಇಡಿಯ ಎಲ್ಲೆಕಟ್ಟಿನಲ್ಲಿ ಇರುವ ಅಡಚಣೆಗಳನ್ನೆಲ್ಲ ನಿರ್ಮೂಲ ಮಾಡಬೇಕು. ವಿಮಾನ ಯಾವ ಕೋನದಲ್ಲಿ ನೆಲಕ್ಕಿಳಿಯುತ್ತದೆಯೊ ಆ ಕೋನಕ್ಕಿಂತ ಹೆಚ್ಚಿನ ಎತ್ತರಕ್ಕೆ ಕಟ್ಟಡಗಳಾಗಲಿ ಮರಗಳಾಗಲಿ ತಂತಿಗಳಾಗಲಿ ಹೋಗಿರದಂತೆ ನೋಡಿಕೊಳ್ಳಬೇಕು; ಇದಕ್ಕೆ ಮೈದಾನದ ಸುತ್ತಲೂ ತಕ್ಕಮಟ್ಟಿಗೆ ಹೆಚ್ಚಿನ ಪ್ರದೇಶವನ್ನು ಕೊಂಡುಕೊಳ್ಳಬೇಕು, ಇಲ್ಲವೆ ಸ್ವಾಧೀನಪಡಿಸಿಕೊಳ್ಳಬೇಕು. ನೆಲ ಮಟ್ಟವಾಗಿಯೂ ನಯವಾಗಿಯೂ ಒಂದೇ ಸಮನಾಗಿಯೂ ಬಿದ್ದ ನೀರು ಚೆನ್ನಾಗಿ ಆಚೆಗೆ ಹರಿದುಹೋಗುವಂತೆಯೂ ಇರಬೇಕು. ಮಂಜಾಗಲಿ ಕೆಳಗೆ ತೇಲುವ ಮೋಡಗಳಾಗಲಿ ಅಷ್ಟಾಗಿ ಇಲ್ಲದಿರ ಬೇಕಾದದ್ದು ಮತ್ತೊಂದು ವಿಚಾರ.

ವಿಮಾನಗಳನ್ನು ಇಳಿಸುವುದಕ್ಕೆ ಉಪಯೋಗಿಸುವ ಎಲ್ಲ ವಿಮಾನಾಂಗಣ ಗಳೂ ಸನ್ನದು ಪಡೆದಿರುತ್ತವೆ. ಸನ್ನದು ಪಡೆದ ಎಲ್ಲ ವಿಮಾನಾಂಗಣಗಳೂ ವಿಮಾನ ಸಚಿವ ಶಾಖೆ (Air Ministry) ವಿಧಿಸುವ ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರಬೇಕು.

(೧) ವಿಮಾನಾಂಗಣದಿಂದ ೫೦೦ ಗಜಗಳ ದೂರದೊಳಗಿರುವ, ಹಾರುವುದಕ್ಕೆ ಅಪಾಯಕರವಾದ ಎಲ್ಲ ಅಡಚಣೆಗಳ ಮೇಲೂ ತಕ್ಕ ಸಂಜ್ಞೆಗಳನ್ನು ಹಾಕಬೇಕು. ರಾತ್ರಿಯ ಕಾಲದಲ್ಲಿ ವಿಮಾನ ಇಳಿಸುವ ನಿರೀಕ್ಷೆಯಿದ್ದರೆ, ವಿಮಾನಾಂಗಣದ ಎಲ್ಲ ಎಲ್ಲೆಕಟ್ಟನ್ನೂ ದೀಪಗಳ ಮೂಲಕ ಸ್ಪಷ್ಟವಾಗಿ ಕಾಣುವಂತೆ ಮಾಡಬೇಕು. ಅಲ್ಲದೆ, ಅಡಚಣೆಗಳನ್ನೂ ಸಹ ದೀಪಗಳ ಮೂಲಕ ಗುರುತು ಗೊತ್ತಾಗುವಂತೆ ಮಾಡಬೇಕು. (೨) ಇಳಿಯಬೇಕಾದ ದಿಕ್ಕುಗಳನ್ನು ಪ್ರಕಾಶಮಾನವಾದ T ಸಂಜ್ಞೆಗಳಿಂದಾಗಲಿ ಸಮದ್ವಿಬಾಹು ತ್ರಿಕೋನವಾಗಿ

ರೂಪಗೊಳ್ಳುವ ಮೂರು ಬಿಳಿಯ ದೀಪಗಳಿಂದಾಗಲಿ ನಿರ್ದೇಶಿಸಬೇಕು; ಹೀಗೆ ಏರ್ಪಡಿಸಿದಾಗ ಕೆಳಕ್ಕಿಳಿಯುವ ವಿಮಾನ ಈ ತ್ರಿಕೋನದ ಆಧಾರರೇಖೆಗೆ ಸಮಕೋನಗಳಲ್ಲಿಯೂ ಮತ್ತು ಅದರ ಮಧ್ಯದಲ್ಲಿಯೂ ಇಳಿದು, ತ್ರಿಕೋನದ ಕೋಟಿ (ಅಗ್ರಭಾಗ)ಯನ್ನು ಮುಟ್ಟುವುದಕ್ಕೆ ಮುಂಚೆ ನೆಲೆನಿಲ್ಲುವಂತಿರಬೇಕು. (೩) ಗಾಳಿಯ ದಿಕ್ಕನ್ನು ಕೂವೆಯ ಮೇಲೆ ಏರಿಸಿದ ಗೋಚರವಾಗುವಂಥ ಗೋಳದ ಮೂಲಕ ನಿರ್ದೇಶಿಸಬೇಕು. (೪) ತಕ್ಕಷ್ಟು ಪ್ರಥಮ ಚಿಕಿತ್ಸೆಯ ಸಲಕರಣೆಗಳು ಕೈಗೆ ಸಿಕ್ಕುವಂತೆ ಸಿದ್ಧವಾಗಿರಬೇಕು. (೫) ವಿಮಾನ ರಾತ್ರಿಯ ಕಾಲದಲ್ಲಿ ಇಳಿಯುವುದೆಂಬ ನಿರೀಕ್ಷೆಯಿರುವಾಗ, ರಾತ್ರಿಯಲ್ಲಿ ಸಂಚರಿಸುವ ವಿಮಾನಗಳ ಉಪಯೋಗಕ್ಕಾಗಿ ತಕ್ಕ ಪ್ರವಾಹದೀಪಗಳೂ ಸಂಜ್ಞಾದೀಪಗಳೂ ಇರಬೇಕು.

ಬೇರೆ ಬೇರೆ ವಿಮಾನ ಪ್ರಯಾಣದ ಏರ್ಪಾಡುಗಳು ಮೊದಲಾಗುವ ಅಂತ್ಯ ವಿಮಾನಾಂಗಣದಲ್ಲಿ (Terminal Aerodrome) ಸಾಮಾನ್ಯವಾಗಿ ಆ ಏರ್ಪಾಡುಗಳನ್ನು ನಡಸುವ ಸಂಘಗಳ ಉಪಯೋಗಕ್ಕಾಗಿ ಆಡಳಿತ ಕಚೇರಿಗಳು ಇಲ್ಲವೆ ಟಿಕೆಟ್ಟುಮಾರುವ ಕಚೇರಿಗಳು ಇರುತ್ತವೆ. ಅಲ್ಲದೆ, ವಿಮಾನಗಳನ್ನು ಬಿಡುವುದಕ್ಕೆ ವಿಮಾನಖಾನೆಗಳೂ (Hangars) ಅವನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕಾಗಿ ಸರಿಮಾಡುವ ಸ್ಥಳಗಳೂ ಮತ್ತು ವಿಮಾನ ಮಾರ್ಗ ಪ್ರಯಾಣಿಕರ ಉಪಯೋಗಕ್ಕಾಗಿ ವಿಶ್ರಾಂತಿ ಮತ್ತು ಉಪಾಹಾರ ಸೌಕರ್ಯಗಳೂ ಇರುತ್ತವೆ. ವಿಮಾನಗಳಿಗೆ ಉರುವಲು ಹಾಕಲು ಎಣ್ಣೆ ಮತ್ತು ಪೆಟ್ರೋಲ್ ಶೇಖರಣೆಗಳು ದೊರೆಯುತ್ತವೆ. ವಿಮಾನಾಂಗಣವನ್ನು ಅಂತರರಾಷ್ಟ್ರೀಯ ವಾಯುಪ್ರಯಾಣಗಳಿಗೆ ಉಪಯೋಗಿಸಿಕೊಳ್ಳುವ ಸಂದರ್ಭದಲ್ಲಿ, ಸುಂಕದ ಸೌಕರ್ಯಗಳೂ ಒದಗಿಸಲ್ಪಡುತ್ತವೆ. ಕ್ರಾಯ್‌ಡನ್ (Croydon) ವಿಮಾನಾಂಗಣ ಅತ್ಯಂತ ಸುಸಜ್ಜಿತವಾದ ಪ್ರಥಮ ದರ್ಜೆಯ ವಿಮಾನಾಂಗಣಕ್ಕೆ ಮಾದರಿಯಾದ ಉದಾಹರಣೆ. ಕರಾಚಿಯಲ್ಲಿರುವ ವಿಮಾನಾಂಗಣ ಸಹ, ಲಂಡನ್ನಿನಿಂದ ಆಸ್ಟ್ರೇಲಿಯಕ್ಕೆ ಹೋಗುವ ಬ್ರಿಟಿಷ್ ಸಮುದ್ರೋಪರಿ ವಾಯುಮಾರ್ಗಗಳ (The British Overseas Airways) ವಿಮಾನಗಳು ಅದನ್ನು ಉಪಯೋಗಿಸುವುದರಿಂದ, ತಕ್ಕಮಟ್ಟಿಗೆ ಸುಸಜ್ಜಿತವಾದ ಸ್ಥಳವಾಗಿದೆ.

ಖಾಸಗಿ ಉಪಯೋಗಕ್ಕಾಗಿ ಉದ್ದೇಶಿಸಿರುವ ವಿಮಾನಾಂಗಣಗಳಿಗೂ, ಪ್ರಯಾಣಿಕರನ್ನು ಒಯ್ಯುವ ವಾಣಿಜ್ಯ ವಿಮಾನಗಳು ಸಾಮಾನ್ಯವಾಗಿ ಉಪಯೋಗಿಸದ ವಿಮಾನಾಂಗಣಗಳಿಗೂ, ತುರ್ತಾಗಿ ವಿಮಾನಗಳನ್ನು

ಇಳಿಸಬೇಕಾದ ಪ್ರದೇಶಗಳಿಗೂ ಸನ್ನದು ಪಡೆಯಬೇಕಾಗಿಲ್ಲ. ಅಲ್ಲದೆ, ವಿಮಾನ ಸಚಿವ ಶಾಖೆ ವಿಧಿಸಿರುವ ಷರತ್ತುಗಳಿಗೆ ಅವು ಅವಶ್ಯಕವಾಗಿ ಒಳಪಟ್ಟಿರುವುದಿಲ್ಲ.

ವಿಮಾನಾಂಗಣಕ್ಕೆ ಕಲ್ಲು ಹಾಸಿದ್ದರೆ ಇಲ್ಲವೆ ಸಿಮೆಂಟು ಹಾಕಿದ್ದರೆ ವಿಮಾನಗಳನ್ನು ನಡಸುವುದಕ್ಕೆ ಅತ್ಯುತ್ತಮ. ಆದರೆ ಇಡಿಯ ವಿಮಾನಾಂಗಣವನ್ನು ಹೀಗೆ ರಚಿಸುವುದಕ್ಕೆ ಮಿತಿಮೀರಿದ ವೆಚ್ಚವಾಗುವುದರಿಂದ, ತಕ್ಕಂತೆ ಕಟ್ಟಿದ ಓಡುದಾರಿಗಳ (Runways) ಮೇಲೆ ವಿಮಾನ ಓಡುವಂತೆ ಮಾಡಲಾಗುತ್ತದೆ. ಈ ಓಡುದಾರಿಗಳು, ವಿಮಾನಗಳು ಇಳಿಯಲು ಮಾಡಿದ ಕಲ್ಲು ಹಾಸಿದ ದಾರಿಗಳು. ಮುಖ್ಯವಾಗಿ, ಮಳೆ ಬಿದ್ದು ವಿಮಾನಾಂಗಣ ಕೊಚ್ಚೆಯಾಗಿರುವಾಗ ಈ ಓಡುದಾರಿಗಳು ವಿಮಾನಗಳನ್ನಿಳಿಸಲು ತುಂಬ ಅನುಕೂಲ.

ವಾಯುಹಡಗಿನ ವಿಮಾನಾಂಗಣಗಳು

ಅಂತರರಾಷ್ಟ್ರೀಯ ಪ್ರಯಾಣದಲ್ಲಿ ತೊಡಗಿರುವ ವಾಯುಹಡಗುಗಳ ಉಪಯೋಗಕ್ಕಾಗಿ ಉದ್ದೇಶಿಸಿದ ವಿಮಾನಾಂಗಣಗಳಲ್ಲಿ ಮೇಲೆ ಹೇಳಿದ ಸೌಕರ್ಯಗಳ ಜೊತೆಗೆ ಒಂದು ಕಟ್ಟಿಹಾಕುವ ಕೂವೆ ಇರುತ್ತದೆ. ಈ ಕೂವೆ ೨೦೦ ಅಡಿಗಳ ಎತ್ತರದ ಉಕ್ಕಿನ ಜಂತೆಯ ಕಟ್ಟಡ. ಇದರ ತುದಿಗೆ ವಾಯುಹಡಗನ್ನು ತೂಗುಕಟ್ಟಿರುತ್ತದೆ. ಕೂವೆಯ ಮೇಲ್ಭಾಗಕ್ಕೆ ಎಣ್ಣೆ, ನೀರು ಮತ್ತು ಉರುವಲುಗಳ ಸರಬರಾಯಿಯನ್ನು ಕೊಳವೆಗಳ ಮೂಲಕ ಸಾಗಿಸುತ್ತದೆ. ಪ್ರಯಾಣಿಕರು ವಾಯುಹಡಗಿಗೆ ಹತ್ತುವುದಕ್ಕೂ ಅಲ್ಲಿಂದ ಇಳಿಯುವುದಕ್ಕೂ ಒಂದು ಎತ್ತಿಗೆ (Lift) ಇರುತ್ತದೆ. ಈ ವಿಮಾನಾಂಗಣಗಳಲ್ಲಿ ವಾಯುಹಡಗನ್ನು ತುಂಬಿ ಊದಿಸಲು ಆವಶ್ಯಕವಾದ ಅನಿಲವನ್ನು ಉತ್ಪತ್ತಿ ಮಾಡುವುದಕ್ಕಾಗಿ ಒಂದು ಅನಿಲ ತಯಾರಿಕೆಯ ಸ್ಥಳವೂ ಇರುತ್ತದೆ. ಈ ರೀತಿ ಸಜ್ಜಾದ ವಿಮಾನಾಂಗಣಗಳು ಕೆಲವು ಮಾತ್ರ, ಬ್ರಿಟನ್ನಿನಲ್ಲಿರುವ ಇಂತಹ ಒಂದೇ ಒಂದು ವಿಮಾನಾಂಗಣ, ಇಸ್ಮಾಲಿಯಾ, ಕರಾಚಿ, ಮೆಲ್ಬೋರ್ನ್– ಈ ಸ್ಥಳಗಳಲ್ಲಿನ ವಿಮಾನಾಂಗಣಗಳಲ್ಲಿ ಕಟ್ಟಿಹಾಕುವ ಕೂವೆಗಳು ಮಾತ್ರ ಇವೆ.

ಸಮುದ್ರ ವಿಮಾನಗಳಿಗೆ ಬೇಕಾದ ವಿಮಾನಾಂಗಣಗಳಲ್ಲಿ ಭೂಪ್ರದೇಶದ ಬದಲು ವಿಮಾನಗಳಿಳಿಯಬಹುದಾದ ತೆರಪಾದ ಜಲಪ್ರದೇಶವಿರುತ್ತದೆ. ಭೂವಿಮಾನಾಂಗಣಗಳಿಗೆ ಅನ್ವಯಿಸುವ ನಿಯಮಗಳೇ ಇವಕ್ಕೂ ಅನ್ವಯಿಸುತ್ತವೆ. ಸಾಗರ ಮೂಲಕ ವಿಮಾನ ಸಂಚಾರದ ಏರ್ಪಾಡನ್ನು ನಡಸಿಕೊಂಡು ಬರುವಾಗ,

ಸಾಗರದಲ್ಲಿ ಅಲ್ಲಲ್ಲಿ ಲಂಗರು ಬಿಟ್ಟ ತೇಲುವ ವಿಮಾನ ಬಂದರುಗಳನ್ನು ನೆಲೆಗೊಳಿಸಿರಲಾಗುತ್ತದೆ. ಇವಕ್ಕೆ ಸಮುದ್ರ ವಿಮಾನಾಂಗಣಗಳು ಅಥವಾ ತೇಲುದ್ವೀಪಗಳು ಎಂದು ಹೆಸರು. ಈ ದ್ವೀಪಗಳ ಉದ್ದ ಸಮಯ ೧೫೦೦ ಅಡಿಗಳು, ಅಗಲ ೩೦೦ ಅಡಿಗಳು. ಈ ದ್ವೀಪಕ್ಕೆ ಆಧಾರವಾಗಿ ಅಡಿಯಲ್ಲಿ ಕಂಬಗಳಿರುತ್ತವೆ. ವಿಮಾನವಿಳಿಯುವ ಅಟ್ಟದ ಕೆಳಗಡೆ ಹೋಟೆಲುಗಳೂ ನಿಸ್ತಂತು ವಾರ್ತಾಸ್ಥಳಗಳೂ (Wireless Stations) ವಿಮಾನ ಖಾನೆಗಳೂ ಪೆಟ್ರೋಲ್ ಸರಬರಾಯಿಯ ಏರ್ಪಾಡುಗಳೂ ಇರುತ್ತವೆ. ಕಡಲು ಎಷ್ಟೇ ಅಲೆಯೆದ್ದು ಹೊಯ್ದಾಡುತ್ತಿರಲಿ, ಸಮುದ್ರ ವಿಮಾನಾಂಗಣ ಸ್ವಲ್ಪವೂ ಉರುಳಾಡದಂತೆ ಇವುಗಳಿಗೆ ಲಂಗರು ಹಾಕಿರುತ್ತದೆ. ಕೆಲವು ವೇಳೆ ಸಾಗರ ಮಧ್ಯದಲ್ಲಿ ವಿಮಾನಗಳನ್ನು ಇಟ್ಟುಕೊಳ್ಳುವುದಕ್ಕೂ ಹಾರಿಸಿ ಇಳಿಸುವುದಕ್ಕೂ ದೊಡ್ಡ ಸಾಗರ ಪ್ರಯಾಣ ಜಹಜುಗಳನ್ನು ಉಪಯೋಗಿಸಲಾಗುತ್ತದೆ. ಇವುಗಳಿಗೆ ವಿಮಾನ ವಾಹಕ (ಹಡಗು) (Aircraft carrier)ಗಳೆಂದು ಹೆಸರು. ಇಂಥ ಹಡಗಿನ ಅಟ್ಟದ ಮೇಲೆ ವಿಮಾನಗಳು ಇಳಿಯುವುದಕ್ಕೂ ಹಾರುವುದಕ್ಕೂ ಏರ್ಪಾಡು ಮಾಡಿರುತ್ತದೆ. ಹಡಗಿನ ಅಟ್ಟದ ಸ್ಥಳಾವಕಾಶ ಎಷ್ಟೇ ಹೆಚ್ಚೆಂದರೂ ಕಡಮೆಯಾದ್ದರಿಂದ ವಿಮಾನವನ್ನು ಇಳಿಸಿ ಹಾರಿಸಬೇಕಾದರೆ ವಿಮಾನ ನಡಸುವವನಿಗೆ ತಕ್ಕಮಟ್ಟಿನ ಶಿಕ್ಷಣವೂ ಕೌಶಲವೂ ಅಗತ್ಯ. ಶತ್ರು ನಗರಗಳು ಸ್ವದೇಶದಲ್ಲಿನ ವಿಮಾನಾಂಗಣ ಗಳಿಂದ ಹೊರಡುವ 'ಬಾಂಬರು'ಗಳ ಸಂಚಾರವ್ಯಾಪ್ತಿಯ ಹೊರಗಿದ್ದಾಗ ಇಂಥ ವಿಮಾನಾಂಗಣಗಳನ್ನು ಬಹುಮಟ್ಟಿಗೆ ಸೈನಿಕ ಕಾರ್ಯಾಚರಣೆಗಳಿಗಾಗಿ ಉಪಯೋಗಿಸಲಾಗುತ್ತದೆ.

ಉದ್ಯೋಗಿ ಮಂಡಲಿ (Personnel)

ವಿಮಾನವನ್ನು ನಿರ್ವಹಿಸುವುದು, ಹಾರಿಸುವುದು, ಮತ್ತು ನಡಸುವುದು– ಇವು ಕಷ್ಟದ ಕೆಲಸಗಳೆಂದೂ ಇವಕ್ಕೆ ವಿಶೇಷ ಶಿಕ್ಷಣ ಆವಶ್ಯಕವೆಂದೂ ವಾಚಕರಿಗೆ ಸ್ಪಷ್ಟವಾಗಿರಬೇಕು. ಈ ಉದ್ದೇಶಕ್ಕಾಗಿ, ಪ್ರತಿಯೊಂದು ದೇಶದಲ್ಲೂ ಅಸೈನಿಕ ಆಕಾಶಯಾನ ಇಲಾಖೆಗಳು ಅಥವಾ ಅಧಿಕೃತ ಸಂಸ್ಥೆಗಳು, ಆವಶ್ಯಕವಾದ ಶಿಕ್ಷಣವನ್ನು ಪಡೆದು ಸಂಸ್ಥೆ ವಿಧಿಸಿರುವ ವಿಶೇಷ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ವ್ಯಕ್ತಿಗಳಿಗೆ ಸನ್ನದುಗಳನ್ನು ಕೊಡುತ್ತವೆ. ಇಂಥ ಸನ್ನದುಳ್ಳ ವ್ಯಕ್ತಿಗಳಿಗೆ ಮಾತ್ರ ವಿಮಾನ ನಡಸುವ ಅವಕಾಶವುಂಟು. ಈ ಸಂಸ್ಥೆ ವಿವಿಧ ದರ್ಜೆಗಳ ಹತ್ತೊಂಬತ್ತು ಬೇರೆ ಬೇರೆ ಸನ್ನದುಗಳನ್ನು ಕೊಡುತ್ತದೆ. ವಿಮಾನಗಳು,

ಆಕಾಶಬುಟ್ಟಿಗಳು ಮತ್ತು ವಾಯುಹಡಗುಗಳನ್ನು ವಾಯುಪ್ರಯಾಣದಲ್ಲಿ ನಡಸುವುದು, ವಿಮಾನ ಹಾರಿಸುವ ಶಿಕ್ಷಣ ಕೊಡುವುದು, ವಾಯುಯಾನ ಸಂಬಂಧವಾದ ಯಂತ್ರಶಿಲ್ಪ ಮತ್ತು ವಾಯುವಿಗಿಂತ ಭಾರವಾದ ವಿಮಾನವನ್ನು ನಡೆಸುವವನಿಗೆ 'ಬಿ' (B) ಮತ್ತು ಪ್ರವೀಣ ವಿಮಾನ ಸಾರಥಿಯ (Master pilot) ಯೋಗ್ಯತಾಪತ್ರ, 'ಎ' ತರಗತಿಯ ಸನ್ನದು, ವಿನೋದಕ್ಕಾಗಲಿ ತನ್ನ ಸ್ವಂತ ವ್ಯವಹಾರೋದ್ದೇಶಗಳಿಗಾಗಲಿ ವಿಮಾನದಲ್ಲಿ ಹಾರಲು ಇಷ್ಟಪಡುವ ಖಾಸಗಿ ವ್ಯಕ್ತಿಗೆ ಕೊಡುವಂಥದು. ಅವನು ಯಾವ ಮಾದರಿಯ ವಾಯುಯಾನದಲ್ಲಾದರೂ, ಯಾವ ದೇಶದಲ್ಲಿ ಬೇಕಾದರೂ ಹಾರಿ ಹೋಗಬಹುದು; ಮತ್ತು ಖಾಸಗಿ ವಿಮಾನಗಳಲ್ಲಿ ಪ್ರಯಾಣಿಕರನ್ನು ಬೇಕಾದರೂ ಒಯ್ಯಬಹುದು; ಆದರೆ, ಅವನು ಅವರಿಂದ ಯಾವ ರುಸುಮನ್ನೂ ತೆಗೆದುಕೊಳ್ಳಕೂಡದು. ಈ ಸನ್ನದನ್ನು ಅಪೇಕ್ಷಿಸುವವರು ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರಬೇಕು: (೧) ಅವರಿಗೆ ೧೭ ವರ್ಷ ವಯಸ್ಸಾಗಿರಬೇಕು. (೨) ಅವರು ಶರೀರದಾರ್ಢ್ಯದ ಬಗ್ಗೆ ಯೋಗ್ಯತಾಪತ್ರವನ್ನು ತೋರಿಸಬೇಕು. (೩) ವಾಯುಯಾನದಲ್ಲಿ ಒಬ್ಬನೇ ಕುಳಿತು ಮೂರು ಗಂಟೆಗಳ ಕಾಲ ಹಾರುವ ಅನುಭವ ಹೊಂದಿರಬೇಕು. ವಿಮಾನದಲ್ಲಿ ಹಾರುವ ಸಾಮರ್ಥ್ಯವನ್ನು ಪರೀಕ್ಷಿಸುವ ಏರ್ಪಡಿಸುವ ಎರಡು ಪರೀಕ್ಷೆಗಳಲ್ಲೂ ಯಂತ್ರವಿದ್ಯೆಯ ಸಂಬಂಧವಾಗಿ ಕೇಳುವ ಬಾಯಿ ಪ್ರಶ್ನೆಗಳ ಪರೀಕ್ಷೆಯಲ್ಲೂ ತೇರ್ಗಡೆಹೊಂದಬೇಕು. 'ಬಿ' ತರಗತಿಯ ಸನ್ನದು ಕಸಬುದಾರಿ ವಿಮಾನ ನಡಸುವವನ ಸನ್ನದು ; ಪ್ರಯಾಣಿಕರನ್ನೂ ಸರಕುಗಳನ್ನೂ ಟಪ್ಪಾಲನ್ನೂ ತೆಗದುಕೊಂಡು ಹೋಗುವ ವಿಮಾನ ನಡಸುವವರು ಈ ಸನ್ನದನ್ನು ಪಡೆದಿರಬೇಕು. ಇದನ್ನು ೧೯ ರಿಂದ ೪೫ ವರ್ಷಗಳೊಳಗಿನ ಗಂಡಸರಿಗಾಗಲಿ ಹೆಂಗಸರಿಗಾಗಲಿ ಕೊಡಲಾಗುತ್ತದೆ. ಇಂಥವರು ಕಡೆಯ ಪಕ್ಷ ೧೦೦ ಗಂಟೆಗಳ ಕಾಲ ತನಿಯಾಗಿ ವಿಮಾನದಲ್ಲಿ ಹಾರುವ ಅನುಭವ ಹೊಂದಿರಬೇಕು. ವಿಮಾನ ಹಾರಿಸುವ ಪರೀಕ್ಷೆಯಲ್ಲೂ ತೇರ್ಗಡೆಹೊಂದಿರಬೇಕು. ವಿಮಾನದಲ್ಲಿರುವ ಕೆಲವು ಸಲಕರಣೆಗಳ ಸಹಾಯದಿಂದ ರಾತ್ರಿಯಲ್ಲಿ ಸ್ವಲ್ಪಕಾಲ ಹಾರಬೇಕು. ಮತ್ತು ಕಣ್ಣು ಕಟ್ಟಿಕೊಂಡು ಸ್ವಲ್ಪಕಾಲ ಹಾರಬೇಕು. ಇವುಗಳ ಜೊತೆಗೆ ಅವರು ಪವನ ಶಾಸ್ತ್ರ, ವಾಯುಪ್ರಯಾಣ ಮತ್ತು ವಾಯು ಎಂಜಿನ್ನುಗಳು– ಇವುಗಳ ಸಂಬಂಧದಲ್ಲೂ ಪರೀಕ್ಷೆ ಕೊಡಬೇಕು. ಈ ವಿಮಾನ ಸಾರಥಿಗಳು ತಾವು ಯಾವ ಬಗೆಯ ವಿಮಾನಗಳಲ್ಲಿ ಹಾರುವ ವಿಶೇಷ ಪ್ರವೀಣತೆ ಹೊಂದಿರುತ್ತಾರೆಯೊ ಮತ್ತು ಯಾವ ವಿಮಾನಗಳಲ್ಲಿ ಹಾರುವುದಾಗಿ ಸನ್ನದಲ್ಲಿ

ನಮೂದಿಸಿರುತ್ತದೆಯೋ ಅಂಥ ವಿಮಾನಗಳಲ್ಲಿ ಮಾತ್ರ ಹಾರಲು ಅವರಿಗೆ ಅಧಿಕಾರ ಕೊಟ್ಟಿರುತ್ತದೆ. ಪ್ರತಿ ಆರು ತಿಂಗಳಿಗೊಮ್ಮೆ ಈ ಸನ್ನದನ್ನು ಪಡೆಯಬೇಕು. ಈ ಸನ್ನದುಗಳನ್ನು ಪಡೆಯಲು ತಗುಲುವ ಒಟ್ಟು ವೆಚ್ಚ ಸುಮಾರು ೪,೦೦೦ ರೂ. ಗಳಿಂದ ೬,೦೦೦ ರೂ.ಗಳವರೆಗೂ ಆಗುತ್ತದೆ. ವಿಮಾನ ಸಾರಥಿಯ ಸನ್ನದುಗಳಲ್ಲಿ ಪ್ರವೀಣ ವಿಮಾನ ಸಾರಥಿಯ ಯೋಗ್ಯತಾಪತ್ರವೇ ಅತ್ಯಂತ ಮೇಲು ದರ್ಜೆಯದು.

ಶಿಕ್ಷಕರ ಯೋಗ್ಯತಾಪತ್ರಗಳು

ವಿಮಾನದಲ್ಲಿ ಹಾರುವುದನ್ನು ಕಲಿಯುವ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವವರಿಗೆ ಇವುಗಳನ್ನು ಕೊಡಲಾಗುತ್ತದೆ. ಈ ಯೋಗ್ಯತಾಪತ್ರವನ್ನು ಪಡೆದಿರುವವರು 'ಬಿ' ತರಗತಿಯ ಸನ್ನದನ್ನು ಪಡೆದಿರುವ ಜತೆಗೆ ವಿಮಾನ ಹಾರಿಕೆಯ ಶಿಕ್ಷಕರಾಗಿ ವಿಶೇಷ ತರಪೇತು ಹೊಂದಿರಬೇಕು.

ವಾಯುಹಡಗಿನ ಸಾರಥಿಯ (Airship pilot) ಸನ್ನದುಗಳು

ಇವುಗಳಲ್ಲಿ ಮೊದಲನೆಯ, ಎರಡನೆಯ ಮತ್ತು ಮೂರನೆಯ ತರಗತಿಗಳ ಸನ್ನದುಗಳಿವೆ. ಇವುಗಳಲ್ಲಿ ಯಾವುದಾದರೂ ಒಂದು ತರಗತಿಯ ಸನ್ನದುಳ್ಳವನು ಮಾತ್ರ ದಾಖಲೆಯಾದ (ರಿಜಿಸ್ಟರಾದ) (Registered) ವಾಯು ಹಡಗಿನಲ್ಲಿ ಹಾರಲು ಅರ್ಹತೆ ಹೊಂದಿರುತ್ತಾನೆ. ಮೂರನೆಯ ತರಗತಿಯ ಸನ್ನದುಳ್ಳವನು ೨,೦೦,೦೦೦ ಘನ ಅಡಿಗಳ ಘನ ಅಳತೆಯ ವಾಯುಹಡಗಿನಲ್ಲಿ ಹಾರಲು ಅರ್ಹನಾಗಿರುತ್ತಾನೆ. ಅವನು ಆಕಾಶಬುಟ್ಟಿ ನಡಸುವವನ ಸನ್ನದನ್ನೂ ವಾಯುನಾವಿಕನ ಯೋಗ್ಯತಾಪತ್ರವನ್ನೂ ಪಡೆದಿರಬೇಕು. ಎರಡನೆಯ ತರಗತಿಯ ಸನ್ನದುಳ್ಳವನು ೭೦,೦೦,೦೦೦ ಘನ ಅಡಿಗಳ ಘನ ಅಳತೆಯ ವಾಯುಹಡಗಿನ ನಾಯಕನಾಗಿರಲು ಅರ್ಹನಾಗಿರುತ್ತಾನೆ; ಈತನು ಮೂರನೆಯ ತರಗತಿಯ ವಿಮಾನ ನಡಸುವವನ ಸನ್ನದನ್ನೂ ಹೊಂದಿರಬೇಕು. ಇರುವ ಸನ್ನದುಗಳಲ್ಲೆಲ್ಲ ಅತ್ಯಂತ ಮೇಲು ದರ್ಜೆಯ ಮೊದಲ ತರಗತಿಯ ಸನ್ನದುಳ್ಳವನು ಯಾವ ಅಳತೆಯ ವಾಯುಹಡಗಿಗೆ ಬೇಕಾದರೂ ನಾಯಕನಾಗಿರಲು ಅರ್ಹನಾಗಿರುತ್ತಾರೆ. ಈ ದರ್ಜೆಯ ವಿಮಾನ ನಡಸುವವನು, ವಾಯು ಹಡಗುಗಳನ್ನು ಹಾರಿಸಲು ಕೊಡುವ ಎರಡನೆಯ ತರಗತಿಯ ಸನ್ನದನ್ನು ಹೊಂದಿರಲೇಬೇಕು, ಮತ್ತು ಈತನಿಗೆ ವಾಯುಹಡಗಿನಲ್ಲಿ ನಾಲ್ಕು ತಿಂಗಳ ಕಾಲ ಹಾರಿದ ಅನುಭವವಿರಬೇಕು.

ವಾಯುನಾವಿಕನ (Navigator) ಸನ್ನದು

ಇದರಲ್ಲಿ ಎರಡು ದರ್ಜೆಯ ಸನ್ನದುಗಳಿವೆ: ಮೊದಲ ತರಗತಿಯದು, ಎರಡನೆಯ ತರಗತಿಯದು. ಅಂತರರಾಷ್ಟ್ರೀಯ ಕಾನೂನಿನ ಮೇರೆಗೆ, ವಾಯುಯಾನವು ನಡುಕಡಲಿನ ಮೇಲೆ ೧೦೦ರಿಂದ ೬೨೫ ಮೈಲಿಗಳವರೆಗೆ ಇಲ್ಲವೆ ನಿರ್ಜನ ಭೂ ಪ್ರದೇಶದ ಮೇಲೆ ರಾತ್ರಿಯ ಕಾಲದಲ್ಲಿ ೬೨೫ ಮೈಲಿಗಳಿಗೆ ಮೇಲ್ಪಟ್ಟು, ನಡುವೆ ಎಲ್ಲಿಯೂ ಕೆಳಕ್ಕಿಳಿಯದೆ ಪ್ರಯಾಣ ಮಾಡಬೇಕಾದ ಸಂದರ್ಭದಲ್ಲಿ ಪ್ರತಿಯೊಂದು ವಾಯುಯಾನವೂ ಮೊದಲ ತರಗತಿಯ ವಾಯು ನಾವಿಕನನ್ನು ಕರೆದೊಯ್ಯಬೇಕು. ಸನ್ನದುದಾರರು ವೈದ್ಯ ಪರೀಕ್ಷೆಯಲ್ಲೂ ವಾಯುಯಾನದ ಶಾಸ್ತ್ರ ವಿಚಾರ ಭಾಗದ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿರಬೇಕು, ಮತ್ತು ವಿಮಾನ ನಡಸುವರ ತಂಡದ ಕೆಲಸಗಾರರಲ್ಲಿ ಒಬ್ಬನಾಗಿ ಆಕಾಶದಲ್ಲಿ ಹಾರುವ ಅನುಭವ ಪಡೆದಿರಬೇಕು. ಮೊದಲ ತರಗತಿಯವರಿಗೆ ಈ ಅನುಭವ ನಾಲ್ಕು ವರ್ಷಗಳದ್ದಾಗಿರಬೇಕು.

ಭೂಯಂತ್ರಶಿಲ್ಪಿಯ (Ground Engineer) ಸನ್ನದುಗಳು

ಇವುಗಳಲ್ಲಿ ಐದು ವರ್ಗ. ವಾಯುಯಾನಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟು ಕೊಳ್ಳುವುದರಲ್ಲೂ ಸರಿಪಡಿಸುವುದರಲ್ಲೂ ತಿಳಿವಳಿಕೆ ಹೊಂದಿರುವವರಿಗೆ ಇವುಗಳನ್ನು ಕೊಡಲಾಗುತ್ತದೆ. ಇವು A, B, C, D ಮತ್ತು X ಎಂಬ ವರ್ಗಗಳಿಗೆ ಸೇರಿವೆ. ಒಬ್ಬ ಭೂ ಯಂತ್ರಶಿಲ್ಪಿ ಐದು ಸನ್ನದುಗಳನ್ನು ಹೊಂದಿರಬಹುದು; ಆದರೆ, ಕಡೆಯ ಪಕ್ಷ A ಮತ್ತು C ಸನ್ನದುಗಳನ್ನು ಹೊಂದಿರಲೇಬೇಕು. ಮೊದಲನೆಯ (ಅಂದರೆ A) ಸನ್ನದು, ವಾಯುಯಾನ ಆಕಾಶ ಪ್ರಯಾಣ ಮಾಡಲು ತಕ್ಕದ್ದಾಗಿದೆಯೆಂಬ ಯೋಗ್ಯತಾ ಪತ್ರವನ್ನು ಕೊಡುವುದಕ್ಕಾಗಿ ಬೇಕು. A ಸನ್ನದು, ಹಾರುವುದಕ್ಕೆ ಮುಂಚೆ ವಾಯುಯಾನವನ್ನು ಪರೀಕ್ಷಿಸುವುದಕ್ಕಾಗಿ; B ಸನ್ನದು, ವಾಯುಯಾನವನ್ನು ಬಿಚ್ಚಿನೋಡಿದ ಮೇಲೆ ಪರೀಕ್ಷಿಸುವುದಕ್ಕಾಗಿ, ಅದೇ ರೀತಿಯಲ್ಲಿ, C ಸನ್ನದು, ಹಾರುವುದಕ್ಕೆ ಮುಂಚೆ ವಾಯು ಎಂಜಿನ್ನಿನ ಪರೀಕ್ಷೆಗಾಗಿ; D ಸನ್ನದು, ಅದನ್ನು ಬಿಚ್ಚಿ ನೋಡಿದ ಮೇಲೆ ಪರೀಕ್ಷಿಸುವುದಕ್ಕಾಗಿ. ಯಂತ್ರಸಾಧನ ಸರಿಪಡಿಕೆ ಮೊದಲಾದ ವಿಶೇಷ ಕೆಲಸಗಳನ್ನು ಮಾಡಲು X ವರ್ಗದ ಸನ್ನದು ಬೇಕು. ಪ್ರತಿಯೊಬ್ಬ ಭೂ ಯಂತ್ರಶಿಲ್ಪಿಯೂ ೨೧ ವರ್ಷ ವಯಸ್ಸಿಗೆ ಮೇಲ್ಪಟ್ಟವನಾಗಿದ್ದು, ವಿಮಾನಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟು ಕೊಳ್ಳುವುದರಲ್ಲಿ ಎರಡು ವರ್ಷಗಳ ಅನುಭವ ಹೊಂದಿರುವುದಲ್ಲದೆ, ಕೆಲವು

ವರ್ಷಗಳ ಅನುಭವ ಹೊಂದಿರುವುದಲ್ಲದೆ, ಕೆಲವು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು. ವಿಮಾನ ನಡಸುವವರಿಗೂ ಯಂತ್ರ ಶಿಲ್ಪಿಗಳಿಗೂ ಸಾಮಾನ್ಯವಾಗಿ ಬೇರೆಬೇರೆ ವಿಮಾನ ಹಾರಿಕೆ ಸಂಘಗಳು ಶಿಕ್ಷಣ ಕೊಡುತ್ತವೆ; ಸರಕಾರಗಳಿಂದ ಅಧಿಕಾರ ಹೊಂದಿದ ಸಂಸ್ಥೆಗಳು ಆವಶ್ಯಕ ಪರೀಕ್ಷೆಗಳನ್ನು ನಡಸಿದ ಮೇಲೆ ಸನ್ನದುಗಳನ್ನು ಕೊಡುತ್ತವೆ.

ನಿಸ್ತಂತು ಕಾರ್ಯಕರ್ತನ (Wireless Operator) ಸನ್ನದುಗಳು

ಪ್ರತಿಯೊಂದು ವಾಣಿಜ್ಯ ವಿಮಾನದಲ್ಲೂ ನಿಸ್ತಂತು ವಾರ್ತಾ ಯಂತ್ರ ಸಲಕರಣೆ ಜೋಡಿಸಿರುವುದರಿಂದ ಅಂಥ ಪ್ರತಿಯೊಂದು ವಿಮಾನದಲ್ಲೂ ನಿಸ್ತಂತು ಸಮಾಚಾರಗಳನ್ನು ಗ್ರಹಿಸುವುದಕ್ಕೂ ಕಳಿಸುವುದಕ್ಕೂ ತಕ್ಕ ಶಿಕ್ಷಣ ಪಡೆದ ಒಬ್ಬ ನಿಸ್ತಂತು ಕಾರ್ಯಕರ್ತನಿರಬೇಕು. ಈ ವಿಭಾಗದ ಶಿಕ್ಷಣವನ್ನು ಸಾಮಾನ್ಯವಾಗಿ ಅಂಚೆ ಕಚೇರಿಗಳು ಕೊಡುತ್ತವೆ. ಆಯಾ ದೇಶದ ಪೋಸ್ಟ್‌ಮಾಸ್ಟರ್ ಜನರಲ್ ಅವರು ಸನ್ನದು ಕೊಡುತ್ತಾರೆ.

ಇವುಗಳ ಜೊತೆಗೆ, ಜಾರು ವಿಮಾನದಲ್ಲಿ ಹಾರುವವರ ಯೋಗ್ಯತಾಪತ್ರಗಳು, ಇಳಿ ಕೊಡೆಯವನ ಸನ್ನದುಗಳು ಮತ್ತು ಆಕಾಶಬುಟ್ಟಿ ನಡಸುವವನ ಸನ್ನದುಗಳು– ಇವೂ ಇವೆ. ಆಯಾ ವಿಭಾಗದಲ್ಲಿ ಅವಶ್ಯ ಅನುಭವವನ್ನು ಹೊಂದಿರುವವರಿಗೆ ಇವನ್ನು ಕೊಡಲಾಗುತ್ತದೆ.

ಜಾರುವಿಮಾನದಲ್ಲಿ ಹಾರಲು ಯೋಗ್ಯತಾಪತ್ರಗಳು (Gliding Certificates)

ಜಾರುವಿಮಾನದಲ್ಲಿ ಹಾರಲು ಯಾವ ಸನ್ನದೂ ಬೇಕಿಲ್ಲ. ಆದರೆ, ಸಂಯುಕ್ತ ರಾಜ್ಯದ ರಾಜವಿಮಾನ ಶಾಖೆ (Royal Aeroplanes of the United Kingdom) ಅಂತರರಾಷ್ಟ್ರೀಯ ವಾಯುನಾವಿಕ ಸಂಘ ವಿಧಿಸಿರುವ ಷರತ್ತುಗಳ ಮೇರೆಗೆ ಸನ್ನದುಗಳನ್ನು ಕೊಡುತ್ತದೆ.

ಪ್ರದರ್ಶನ ಇಳಿಕೊಡೆಯವರ (Exhibition Parachutists) ಸನ್ನದು

ವಿಮಾನ ಸಚಿವಮಂಡಲಿ ಕೊಡುವ ವಿಶೇಷ ಸನ್ನದನ್ನು ಪಡೆದಿರುವವರನ್ನುಳಿದು ಬೇರೆ ಯಾರೂ, ತುರ್ತು ಸಂದರ್ಭಗಳಲ್ಲಿ ವಿನಾ, ಇಳಿಕೊಡೆಗಳಲ್ಲಿ ಇಳಿಯಲು ಅನುಮತಿಯಿಲ್ಲ. ಇಳಿಕೊಡೆಯಲ್ಲಿ ಇಳಿಯಲು ಅರ್ಹನಾಗಬೇಕೆಂದು ಬಯಸುವವನು ಹತ್ತು ಸಲವಾದರೂ ಇಳಿಕೊಡೆಯಲ್ಲಿ ಇಳಿದಿರಬೇಕು, ಮತ್ತು ಭೂ ಯಂತ್ರಶಿಲ್ಪಿಯ X ಸನ್ನದನ್ನು ಹೊಂದಿರಬೇಕು.

* * * *

ಪ್ರಕರಣ ೪
ವಿಮಾನ ಹಾರಿಕೆಯ ಸಹಾಯಸಾಧನಗಳು: ವಿಮಾನ ಯಂತ್ರ ಸಾಧನಗಳು, ನಿಸ್ತಂತು (Wireless) ಮತ್ತು ಪವನಶಾಸ್ತ್ರ (Meteorology)–

ಮನುಷ್ಯನು ತನಗಾಗಿ ನಿರ್ಮಿಸಿಕೊಂಡಿರುವ ಸಮಾಚಾರಗಳ ಮತ್ತು ಸಾಗಣೆಯ ಬೇರೆಬೇರೆ ಸಾಧನಗಳ ಪ್ರಗತಿಯನ್ನೂ, ಬೆಳವಣಿಗೆಯನ್ನೂ ಪರಿಶೀಲಿಸಿದರೆ, ಸಾಧನ ವಿಧಾನ ಮುಂದುವರಿದಷ್ಟೂ ಅದರಲ್ಲಿ ಅಪಾಯಗಳೂ ತೊಂದರೆಗಳೂ ಹೆಚ್ಚೆಂಬುದು ವ್ಯಕ್ತವಾಗುತ್ತದೆ. ತನ್ನ ಸ್ವಂತ ಕಾಲುಗಳನ್ನು ಆಶ್ರಯಿಸಿರುವವನು ಕುದುರೆಯ ಮೇಲೆ ಅಥವಾ ಎತ್ತಿನ ಗಾಡಿಯ ಮೇಲೆ ಇರುವವನಿಗಿಂತ ಹೆಚ್ಚು ಸುರಕ್ಷಿತನಾಗಿರುತ್ತಾನೆ. ಅಪಘಾತಗಳು ಎಷ್ಟೇ ವಿರಳವೆಂದರೂ, ಹತೋಟಿ ತಪ್ಪಿ ಕುದುರೆ ಸಿಕ್ಕಾಬಟ್ಟೆ ಓಡಬಹುದು, ಬಂಡಿ ನಡುದಾರಿಯಲ್ಲಿ ಮುರಿದುಹೋಗಬಹುದು. ಆದರೆ, ಎತ್ತಿನ ಬಂಡಿಗೆ ಹೋಲಿಸಿದರೆ ಅದಕ್ಕಿಂತ ಮೋಟಾರು ಬಂಡಿಯಾಗಲಿ ಸ್ವಯಂಚಾಲಿತ ಎಂಜಿನ್ನಾಗಲಿ (Locomotive) ಎಷ್ಟು ಕ್ರಾಂತಿಕಾರಕ ಮುನ್ನಡೆಯಾಗಿದೆಯೊ ಪ್ರಾಚೀನ ಸಂಚಾರ ಸಾಧನೆಗಳಿಗೆ ಹೋಲಿಸಿದರೆ ಕುದುರೆಯಾಗಲಿ ಎತ್ತಿನ ಬಂಡಿಯಾಗಲಿ ಅಷ್ಟು ಕ್ರಾಂತಿಕಾರಕ ಮುನ್ನಡೆಯಾಗಿಲ್ಲ. ಮೋಟಾರು ಬಂಡಿಯಲ್ಲಿ ಮನುಷ್ಯರಿಗೆ ಹೆಚ್ಚು ಅನುಕೂಲವೂ ಸುಖವೂ ದೊರೆಯುತ್ತವೆ; ಆದರೆ ಅಪಘಾತಗಳ ಸಂಭವವೂ ಹೆಚ್ಚು. ಎತ್ತಿನ ಬಂಡಿಯಲ್ಲಿ ಹೋಗುವವನು ತಾನು ತಲುಪಬೇಕಾದ ಸ್ಥಳಕ್ಕೆ ಖಂಡಿತ ಸುರಕ್ಷಿತವಾಗಿ ತಲುಪುವ ಸಂಭವವಿದೆ; ಆದರೆ, ಮೋಟಾರು ಬಂಡಿಯಲ್ಲಿ ಹೋಗುವವನು ದಾರಿಯಲ್ಲೆ ಅಜ್ಜಿಬಜ್ಜಿಯಾಗುವ ಸಂಭವವಿದ್ದೇ ಇದೆ. ಈ ರೀತಿ, ಮನುಷ್ಯನು ಪ್ರಕೃತಿಯನ್ನು ಎಷ್ಟು ಬಲವಾಗಿ ಪ್ರತಿಭಟಿಸುತ್ತಾನೆಯೋ ಅಷ್ಟೇ ಹೆಚ್ಚಾಗಿ ಅಡಚಣೆಗಳನ್ನೂ ಅಪಾಯಸಂಭವಗಳನ್ನೂ ಅದು ಅವನ ಹಾದಿಯಲ್ಲೊಡ್ಡುತ್ತದೆ. ಪ್ರಕೃತಿಯ ಆಧಾರಭೂತ ನಿಯಮಗಳಲ್ಲಿ ಒಂದಾದ ಭೂಮ್ಯಾಕರ್ಷಣ ಶಕ್ತಿಗೆ ಆಕಾಶಯಾನ ನೇರವಾದ ಪ್ರತಿಭಟನೆ. ಆ ಶಕ್ತಿಗೆ ವಿರುದ್ಧವಾಗಿ ತನ್ನನ್ನು ತಾನು ಮೇಲೆತ್ತುವುದರ ಮೂಲಕ ಮನುಷ್ಯನು ಪ್ರಕೃತಿಯನ್ನು ಪ್ರತಿಭಟಿಸಿದ್ದಾನೆ. ಭೂಮ್ಯಾಕರ್ಷಣ ಶಕ್ತಿಗಿಂತ ಅತಿ ಬಲವಾದ

ನಿಯಮವನ್ನು ಗೆಲ್ಲುವುದರಿಂದ ಅಪಾಯ ಸಂಭವ ಬಹು ಹೆಚ್ಚು; ಈ ಪ್ರಯತ್ನವನ್ನು ಪ್ರಕೃತಿ ಸ್ನೇಹಭಾವದಿಂದ ನೋಡುವುದಿಲ್ಲ. ಅತ್ಯಲ್ಪ ದೋಷವಿದ್ದರೂ ಪ್ರಕೃತಿಯ ದಂಡನೆಗೆ ಚೆನ್ನಾಗಿ ಗುರಿಯಾಗಬೇಕಾಗುತ್ತದೆ. ಆದ್ದರಿಂದ, ಮನುಷ್ಯನು ಅತ್ಯಂತ ಎಚ್ಚರಿಕೆಯಿಂದಲೂ ಸೂಕ್ಷ್ಮ ಪರಿಶೀಲನೆಯಿಂದಲೂ ವಿಮಾನದ ಸಂವಿಧಾನವನ್ನೂ ರಚನೆಯನ್ನು ಮಾಡಿದ್ದಾನೆ. ಸಾಧ್ಯವಿರುವ ಎಲ್ಲ ಎಚ್ಚರಿಕೆಗಳನ್ನೂ ತೆಗೆದುಕೊಂಡು ಅತ್ಯಲ್ಪ ದೋಷ ಸಹ ನುಸುಳದಂತೆ ರಕ್ಷಣೆ ಕಲ್ಪಿಸಲಾಗಿದೆ. ಮನುಷ್ಯನು ಅತ್ಯಂತ ಎಚ್ಚರಿಕೆಯಿಂದ ವಿಮಾನವನ್ನು ಯೋಜಿಸದೆ ಹೋಗಿದ್ದರೆ ವಿಮಾನ ಪ್ರಯಾಣದಲ್ಲಿ ಸುರಕ್ಷಿತತೆಯ ಸುಳಿವೂ ಇರುತ್ತಿರಲಿಲ್ಲ, ನಷ್ಟಸಂಭವಗಳು ಬೆಟ್ಟದಷ್ಟಿರುತ್ತಿದ್ದುವು. ಯಂತ್ರಶಿಲ್ಪದಲ್ಲಿ ವಿಮಾನ ರಚನೆ ಅತ್ಯಂತ ಬುದ್ಧಿಚಾತುರ್ಯವನ್ನಪೇಕ್ಷಿಸುವ ಶಾಖೆ; ಅತ್ಯಂತ ಸೂಕ್ಷ್ಮ ವಿವರವನ್ನು ಸಹ ಎಚ್ಚರಿಕೆಯಿಂದ ಕಲ್ಪಿಸಿದೆ. ಆದ್ದರಿಂದಲೇ ಅಪಘಾತಗಳಾಗುವ ಸಂಭವಗಳೆಲ್ಲವನ್ನೂ ಆದಷ್ಟುಮಟ್ಟಿಗೆ ನಿವಾರಿಸಿ, ಸುರಕ್ಷಿತತೆಯನ್ನು ಬಹಳವಾಗಿ ಹೆಚ್ಚಿಸಿದೆ.

ಆಕಾಶದಲ್ಲಿರುವವನು ಶೇಕಡ ೯೯ರಷ್ಟು ಸುರಕ್ಷಿತತೆಯಿಂದ ವಿಮಾನವನ್ನು ಮರಳಿ ಭೂಮಿಯ ಮೇಲಕ್ಕೆ ತರಲು ಅವನಿಗೆ ನೆರವಾಗುವ ಬೇರೆ ಬೇರೆ ವಿಮಾನ ಹಾರಿಕೆಯ ಸಹಾಯ ಸಾಧನಗಳನ್ನು ಪರಿಶೀಲಿಸುವುದು ಅವಶ್ಯಕ ಮತ್ತು ಸ್ವಾರಸ್ಯವುಳ್ಳದ್ದು. ಸಹಾಯ ಸಾಧನಗಳನ್ನು ಮೂರು ವರ್ಗಗಳಾಗಿ ವಿಂಗಡ ಮಾಡಬಹುದು: (೧) ವಿಮಾನದಲ್ಲಿರುವ ಬೇರೆ ಬೇರೆ ಲೇಖನ ಸಲಕರಣೆಗಳು (Recording instruments); (೨) ರೇಡಿಯೊ; (೩) ಪವನ ಶಾಸ್ತ್ರ.

ವಿಮಾನ ಕೆಲಸ ಮಾಡುವುದು ಬಹುಮಟ್ಟಿಗೆ ಎಂಜಿನ್ನನ್ನು ಅವಲಂಬಿಸಿರುವುದರಿಂದ, ಸಾಮಾನ್ಯ ರೀತಿಯಲ್ಲಿ ಕೆಲಸ ಮಾಡಲು ತಕ್ಕಂತಿರುವಂತೆ ಎಂಜಿನ್ನನ್ನು ರಚಿಸಲು ಎಲ್ಲ ಎಚ್ಚರಿಕೆಯನ್ನು ತೆಗೆದುಕೊಂಡಿರುತ್ತದೆ. ಆದರೆ ಎಂಜಿನ್ನಿನ ಸಂವಿಧಾನ, ರಚನೆಗಳ ಬಗ್ಗೆ ತೆಗೆದುಕೊಂಡ ಮುನ್ನೆಚ್ಚರಿಕೆಗಳ ಜೊತೆಗೆ, ಎಂಜಿನ್ನಿನ ಸ್ಥಿತಿಯನ್ನು ಸೂಚಿಸಿ ಅದು ಕೆಟ್ಟು ಹೋಗಿದ್ದರೆ ಮುಂಚಿತವಾಗಿಯೇ ಎಚ್ಚರಿಕೆ ಕೊಡುವ ಕೆಲವು ಸಲಕರಣೆಗಳು ವಿಮಾನಕ್ಕೇ ಜೋಡಿಸಲ್ಪಟ್ಟಿರುತ್ತವೆ.

ಈ ಎಂಜಿನ್ನಿನ ಸಲಕರಣೆಗಳಲ್ಲಿ ಮೊದಲನೆಯದು (೧) **ನಿಮಿಷ ಪರಿವರ್ತನ ಸೂಚಕ** (R.P.M.=Revolution Pet Minute Indicator): ಇದು ಎಂಜಿನ್ನು ಕೆಲಸ ಮಾಡುವ ವೇಗವನ್ನು ತೋರಿಸುತ್ತದೆ. ಇದು ಎಂಜಿನ್ನಿನ

ತಿರುಗಚ್ಚು (ತಿರುಗುವ ಅಚ್ಚು, (Crank shaft) ನಿಮಿಷಕ್ಕೆ ಎಷ್ಟು ಸಲ ಸುತ್ತುತ್ತಿದೆಯೆಂಬುದನ್ನು ಗುರುತು ಮಾಡುತ್ತದೆ. ಎಂಜಿನ್ನಿನ ತಿರುಗಚ್ಚು ಎಂಜಿನ್ನು ಹೇಗೆ ಕೆಲಸ ಮಾಡುತ್ತಿದೆಯೆಂಬುದನ್ನೂ ಜೋಡಣೆಗಳು ಸರಿಯಾಗಿವೆಯೆ ಇಲ್ಲವೆ ಎಂಬುದನ್ನೂ ತಿಳಿಸುವುದರಿಂದ, ವಿಮಾನ ನಡಸುವವನಿಗೆ ಈ ಸಲಕರಣೆಯ ತಿಳಿವಳಿಕೆ ಅತ್ಯಗತ್ಯ. ಎಂಜಿನ್ನು ಉತ್ಪತ್ತಿಮಾಡುವ ಸಾಮರ್ಥ್ಯ ಅದರ ವೇಗವನ್ನು ಅವಲಂಬಿಸಿದೆ; ಸೂಚಕ ಬೇಗನೆಯೂ ಖಚಿತವಾಗಿಯೂ ವೇಗ ಕುಗ್ಗುವುದನ್ನು ತೋರಿಸುತ್ತದೆ. ವಿಮಾನವನ್ನು ಹಾರಿಸುವುಕ್ಕೆ ಮುಂಚೆ ಎಂಜಿನ್ನನ್ನು ಯಾವಾಗಲೂ ನೆಲದ ಮೇಲೆ ಓಡಿಸುತ್ತದೆ; ನಿಮಿಷ ಪರಿವರ್ತನ ಸೂಚಕವು ಎಂಜಿನ್ನು ಸಮರ್ಪಕವಾಗಿಯೂ ಸಮರ್ಥವಾಗಿಯೂ ಕೆಲಸ ಮಾಡುತ್ತಿದೆಯೆಂಬುದನ್ನು ತೋರಿಸುವವರೆಗೆ ವಿಮಾನವನ್ನು ಹಾರಿಸುವುದಿಲ್ಲ. ವಿಮಾನ ಹಾರುತ್ತಿರುವಾಗ, ಈ ಸೂಚಕದ ಸಹಾಯದಿಂದ ವಿಮಾನ ನಡಸುವವನು ಎಂಜಿನ್ನನ್ನು ಸಮವೇಗದಿಂದ ನಡಸುವುದಕ್ಕೂ ಅದರ ಮೇಲೆ ಮಿತಿಮೀರಿದ ಕಾರ್ಯದ ಒತ್ತಡ ಬೀಳುವ ಅಪಾಯಸಂಭವವನ್ನು ನಿವಾರಿಸುವುದಕ್ಕೂ ಸಾಧ್ಯವಾಗುತ್ತದೆ. ಎಂಜಿನ್ನಿನ ಭದ್ರತೆಯನ್ನು ಕಾಪಾಡುವ ಮತ್ತೊಂದು ಯಂತ್ರ ಸಲಕರಣೆ (೨) **ಎಣ್ಣೆಯ ಒತ್ತಡ ಮಾಪಕ** (Oil Pressure Guage): ಎಂಜಿನ್ನಿಗೆ ಎಣ್ಣೆ ಹಚ್ಚಿ ಚಲನಸೌಲಭ್ಯವುಂಟುಮಾಡುವ ಏರ್ಪಾಟಿನಲ್ಲಿನ ಒತ್ತಡವನ್ನು ಇದು ಸೂಚಿಸುತ್ತದೆ. ಈ ಮಾಪಕ ಕೊಡುವ ತಿಳಿವಳಿಕೆ ಬಹು ಮುಖ್ಯ: ಏಕೆಂದರೆ, ಎಣ್ಣೆಯ ಪರಿಚಲನೆ ನಿಂತುಹೋದರೆ ಎಂಜಿನ್ನು ಹಿಡಿದುಕೊಂಡು ನಿಂತು ಹೋಗುವ ಅಪಾಯ ಸಂಭವವಿದೆ. (೩) **ಎಂಜಿನ್ನಿನ ಮತ್ತು ಎಣ್ಣೆಯ ಶಾಖ ಮಾಪಕ:** ಇವು ಬೇರೆ ಬೇರೆ ಎರಡು ಸಲಕರಣೆಗಳು. ಇವುಗಳ ಸಹಾಯದಿಂದ ವಿಮಾನ ಮೇಲೆ ಕಣ್ಣಿಡಲು ಸಾಧ್ಯ. ಎಣ್ಣೆ ಅತಿಯಾಗಿ ಕಾದುಹೋದರೆ ಅದರ ಚಲನಸೌಲಭ್ಯಕಾರಕ ಗುಣಗಳು ನಾಶವಾಗುವುವು; ಎಣ್ಣೆ ಅತಿಯಾಗಿ ತಣ್ಣಗಾದರೆ ಅದು ತಡೆಯಿಲ್ಲದೆ ಪರಿಚಲಿಸಲಾಗದಷ್ಟು ತುಂಬ ಜಿಗುಟಾಗುವುದು. ಮೇಲಿನ ಸಲಕರಣೆಗಳ ಸಹಾಯದಿಂದ ಈ ಅಪಾಯಗಳನ್ನು ನಿವಾರಿಸಬಹುದು. ಎಂಜಿನ್ನಿನ ಶಾಖ ಮಾಪಕದ ಸಹಾಯದಿಂದ ವಿಮಾನ ನಡಸುವವನು ಎಂಜಿನ್ನು ಚೆನ್ನಾಗಿ ತಣ್ಣಗಾಗುವಂತೆ ಮಾಡಬಹುದು. (೪) **ಪೆಟ್ರೋಲು ಮಾಪಕಗಳು:** ಪೆಟ್ರೋಲಿನ ಒತ್ತಡ, ಮೊತ್ತ, ಮತ್ತು ಹರಿವು– ಇವುಗಳನ್ನು ತೋರಿಸಲು ಬೇರೆ ಬೇರೆ ಸಲಕರಣೆಗಳಿವೆ. **ಪೂರ್ಣ ಮಟ್ಟ ಸೂಚಕ** (Full Level Indicator) ಕಡಾಯಿಗಳಲ್ಲಿ ಉಳಿದಿರುವ ಉರುವಲಿನ ಮೊತ್ತವನ್ನು ಗುರುತಿಸುತ್ತದೆ. ಇದರಿಂದ ಪೆಟ್ರೋಲಿನ

ಸರಬರಾಯಿ ಮುಗಿಯುತ್ತಾ ಬಂದಿದೆಯೆ ಇಲ್ಲವೆ, ಪೆಟ್ರೋಲಿನ ಒತ್ತಡವೂ ಹರಿವೂ ಸರಿಯಾಗಿವೆಯೆ ಇಲ್ಲವೆ ಎಂಬ ಬಗ್ಗೆ ವಿಮಾನ ನಡಸುವವನಿಗೆ ಮುನ್ನೆಚ್ಚರಿಕೆಯಾಗಿ, ಅವನು ಆವಶ್ಯಕವಾದ ಜೋಡಣೆಗಳನ್ನು ಮಾಡಲು ಸಾಧ್ಯವಾಗುತ್ತದೆ.

ಎಂಜಿನ್ನಿನ ಯಂತ್ರ ಸಲಕರಣೆಗಳ ಜೊತೆಗೆ, ವಿಮಾನ ನಡಸುವವನು ಸುರಕ್ಷಿತವಾಗಿ ಹಾರಲು ನೆರವಾಗುವ ಕೆಲವು ಹಾರಿಕೆಯ ಸಂಬಂಧದ ಯಂತ್ರ ಸಲಕರಣೆಗಳಿವೆ. ಇವುಗಳಲ್ಲಿ ಮೊದಲನೆಯದು, (೧) **ವಾಯುವೇಗ ಸೂಚಕ** (Air Speed Indicator): ವಾಯುವಿಗಿಂತ ಭಾರವಾದ ವಿಮಾನ ಆವಶ್ಯಕವಾದ ವೇಗವನ್ನು ಹೊಂದಿ, ಇದರ ಪರಿಣಾಮವಾಗಿ ವಿಮಾನವನ್ನು ಮೇಲೆತ್ತಲು ನೆರವಾಗುವ ವಾಯುವಿನ ಒತ್ತಡ ಹೆಚ್ಚಾಗುವುದರಿಂದ ಮಾತ್ರ ವಿಮಾನ ತನ್ನನ್ನು ತಾನು ಮೇಲಕ್ಕೆತ್ತಿಕೊಳ್ಳಲು ಸಾಧ್ಯ. ಈ ಯಂತ್ರ ಸಲಕರಣೆ ವಿಮಾನ ನಡಸುವವನಿಗೆ, ಅವನು ಬೇಕಾದ ವೇಗವನ್ನು ಯಾವಾಗ ಮುಟ್ಟಿದ್ದಾನೆ ಎಂಬುದನ್ನು ತಿಳಿಸುತ್ತದೆ; ಇದಕ್ಕನುಗುಣವಾಗಿ ಅವನು ನಿಯಂತ್ರಕಗಳನ್ನು ತಿರುಗಿಸುತ್ತಾನೆ. ಇದೇ ರೀತಿಯಲ್ಲಿ, ವಿಮಾನ ನೆಲಕ್ಕಿಳಿಯಬೇಕಾದಾಗ ವೇಗವನ್ನು ಒಂದು ಬೇಕಾದ ಮಟ್ಟಕ್ಕೆ ಕಡಮೆ ಮಾಡಬೇಕು; ಇದನ್ನು ಸಹ ವೇಗ ಸೂಚಕ ತೋರಿಸುತ್ತದೆ. ವಿಮಾನ ಕೆಳಕ್ಕಿಳಿಯುವಾಗ ಅಥವಾ ನೆಲೆ ಬಿಟ್ಟು ಮೇಲಕ್ಕೆ ಹಾರುವಾಗ ಸರಿಯಾದ ವೇಳೆಯಲ್ಲೂ ವೇಗದಲ್ಲೂ ನಿಯಂತ್ರಕಗಳನ್ನು ಪ್ರಯೋಗಿಸದೆ ಹೋದರೆ ಅಪಘಾತವಾಗುವ ಅಪಾಯ ಬೇಕಾದಷ್ಟಿದೆ. ಆದ್ದರಿಂದ, ಈ ಯಂತ್ರ ಸಲಕರಣೆ ವಿಮಾನ ನಡಸುವವನಿಗೆ ಅತಿಮುಖ್ಯ. (೨) **ಉನ್ನತಿ ಮಾಪಕ** (Altimeter): ಸಮುದ್ರ ಮಟ್ಟದ ಮೇಲೆ ವಿಮಾನ ಸುಮಾರು ಎಷ್ಟು ಎತ್ತರದಲ್ಲಿದೆಯೆಂಬುದನ್ನು ಲೇಖಿಸುತ್ತದೆ. ಸಾಮಾನ್ಯ ವಾಯುಸ್ಥಿತಿಯಲ್ಲಿ ವಿಮಾನ ನಡಸುವವನು ಭೂಮಿಯನ್ನು ನೋಡಬಹುದು, ಮತ್ತು ತಾನು ಇರುವ ಎತ್ತರವನ್ನು ನಿಶ್ಚಯಿಸಿ ಕೊಳ್ಳಬಹುದು. ಆದರೆ ಮಳೆಗಾಲದ ಪರಿಸ್ಥಿತಿಯಲ್ಲಿ ಏನೂ ಸ್ಪಷ್ಟವಾಗಿ ಗೋಚರವಾಗದೆ ಅವನು ಇತರ ವಸ್ತುಗಳನ್ನು ನೋಡಲಾಗದಿರುವಾಗ ಈ ಯಂತ್ರ ಸಲಕರಣೆ ಎಷ್ಟು ಮುಖ್ಯ ಎಂಬುದು ಸ್ಪಷ್ಟವಾಗಿಯೇ ಇದೆ. ತಾನು ಯಾವ ಎತ್ತರದಲ್ಲಿ ಹಾರುತ್ತಿದ್ದೇನೆಂಬುದು ವಿಮಾನ ನಡಸುವವನಿಗೆ ಗೊತ್ತಿಲ್ಲದಿದ್ದರೆ, ಅವನು ಒಂದು ಪರ್ವತಶಿಖರಕ್ಕೊ ಎದುರಿನಲ್ಲಿ ಬರುತ್ತಿರುವ ಮತ್ತೊಂದು ವಿಮಾನಕ್ಕೊ ಹೋಗಿ ಡಿಕ್ಕಿ ಹೊಡೆಯುತ್ತಾನೆ. ಅಲ್ಲದೆ, ಬಿರುಗಾಳಿ ಮಳೆ ಕೂಡಿದ ವಾಯುಸ್ಥಿತಿಯಿಂದ ಇಲ್ಲವೆ ಎದುರುಗಾಳಿಯಿಂದ

ದೂರವಾಗಿರುವುದಕ್ಕೂ ಸಹ ಅವನು ಗೊತ್ತಾದ ಎತ್ತರದಲ್ಲಿ ಹಾರುತ್ತಿರಬೇಕು, ಹಾಗೂ ಒಂದು ಎತ್ತರದಿಂದ ಮತ್ತೊಂದು ಎತ್ತರಕ್ಕೆ ಬದಲಾಯಿಸುತ್ತಿರಬೇಕು. (೩) **ಕೃತಕಕ್ಷಿತಿಜ:** ಒಂದು ಸೂಕ್ಷ್ಮಾಕಾರದ ವಿಮಾನ ಮತ್ತು ಕ್ಷಿತಿಜರೇಖೆ-ಇವೆರಡರ ರೂಪದಲ್ಲಿದೆ ಈ ಸೂಚಕಯಂತ್ರ. ವಿಮಾನವು ಕ್ಷಿತಿಜದಿಂದ ಎಡಕ್ಕೆ ಅಥವಾ ಬಲಕ್ಕೆ ತಿರುಗಿದಾಗ ಈ ಸೂಕ್ಷ್ಮಾಕಾರದ ವಿಮಾನವೂ ಕ್ಷಿತಿಜರೇಖೆಯಿಂದ ಎಡಕ್ಕೆ ಅಥವಾ ಬಲಕ್ಕೆ ಜರುಗುತ್ತದೆ. ಈ ರೀತಿಯಲ್ಲಿ, ವಿಮಾನಕ್ಕೂ ಕ್ಷಿತಿಜಕ್ಕೂ ಇರುವ ಪರಸ್ಪರ ಸ್ಥಾನಸಂಬಂಧವನ್ನು ಈ ಯಂತ್ರ ತೋರಿಸುತ್ತದೆ. ಸಾಮಾನ್ಯ ಪರಿಸ್ಥಿತಿಯಲ್ಲಿ ವಿಮಾನ ನಡಸುವನು ತನ್ನ ಯಾನದ ಸ್ಥಾನವನ್ನು ಕಂಡುಕೊಂಡು ಅದಕ್ಕನುಸಾರವಾಗಿ ಚಲನೆಗಳನ್ನು ಸರಿಹೊಂದಿಸಬಹುದು. ಆದರೆ, ಮಳೆಗಾಲದಂಥ ಪರಿಸ್ಥಿತಿಯಲ್ಲಿ ವಿಮಾನದ ಸಮತಲ ಮಟ್ಟವನ್ನು ಸರಿಯಾಗಿಟ್ಟು ಕೊಳ್ಳಲು ಈ ಸೂಚಕ ಸಲಕರಣೆಯೆ ಏಕಮಾತ್ರ ಸಾಧನ. (೪) **ಏರು (ಆರೋಹ) ಸೂಚಕ** (Climb Indicator): ವಿಮಾನ ಮೇಲೇರುತ್ತಿರುವ ವೇಗವನ್ನು ಇದು ತೋರಿಸುತ್ತದೆ. (೫) **ವಾಯುಶಾಖ ಮಾಪಕ** (Air Temperature Guage): ವಿಮಾನ ಎಲ್ಲ ಕಡೆಯೂ ಮುಚ್ಚಿದ ಒಂದು ಕೋಣೆಯಾದ್ದರಿಂದ ಹೊರಗಣ ವಾಯುವಿನ ಶಾಖವನ್ನು ತಿಳಿಯಲಾಗುವುದಿಲ್ಲ. ಹೊರಗಣ ವಾಯುವಿನ ಶಾಖ ವಿಮಾನದ ಏರಿಕೆಯ ಮೇಲೆ ಪರಿಣಾಮವುಳ್ಳದ್ದಾದ್ದರಿಂದ, ಈ ಯಂತ್ರ ಸಲಕರಣೆಯ ಸಹಾಯದಿಂದ ವಿಮಾನ ನಡಸುವವನು ಬೇಕಾದ ವ್ಯವಸ್ಥೆಗಳನ್ನು ಮಾಡಲು ಸಾಧ್ಯವಾಗುತ್ತದೆ. (೬) ಕಡೆಯದೂ ಅತ್ಯಂತ ಮುಖ್ಯವೂ ಆದ, ವಿಮಾನ ಹಾರಿಕೆಗೆ ನೆರವಾಗುವ, ಯಂತ್ರ ಸಲಕರಣೆ **ದಿಕ್‌ಸೂಚಿ** (Compass): ವಿಮಾನ ನಡಸುವವನು ಯಾವ ದಿಕ್ಕಿನಲ್ಲಿ ಹಾರುತ್ತಿದ್ದಾನೆಂಬುದನ್ನು ಇದು ತೋರಿಸುತ್ತದೆ. ಸಾಗರದ ಮೇಲಾಗಲಿ, ಪರಿಚಯವಿಲ್ಲದಿರುವ ಭೂಪ್ರದೇಶಗಳ ಮೇಲಾಗಲಿ ಹಾರುವಾಗ, ಸಮುದ್ರದ ಮೇಲೆ ಪ್ರಯಾಣ ಮಾಡುವ ನಾವಿಕನಿಗೆ ಈ ದಿಕ್‌ಸೂಚಿ ಯಾವ ರೀತಿ ದಾರಿ ತೋರಿಸುತ್ತದೆಯೋ ಹಾಗೆಯೆ ವಿಮಾನ ನಡಸುವವನಿಗೂ ದಾರಿ ತೋರಿಸುತ್ತದೆ.

ನಿಸ್ತಂತು (Wireless)

ವಿಮಾನದ ಮೇಲಿನಿಂದಲೇ ನಿಸ್ತಂತು ವಾರ್ತೆಯನ್ನು ಕಳಿಸುವ ಏರ್ಪಾಡಿನಿಂದ ವಿಮಾನ ಹಾರಿಕೆಯ ಸುರಕ್ಷಿತತೆ ಬಹುಮಟ್ಟಿಗೆ ಹೆಚ್ಚಿದೆ. ನಿಜವಾಗಿ ಯೋಚಿಸಿ ನೋಡಿದರೆ, ನಿಸ್ತಂತು ವಾರ್ತೆಯ ಏರ್ಪಾಟನ್ನು

ಕಂಡುಹಿಡಿಯದಿದ್ದಲ್ಲಿ, ಸುರಕ್ಷಿತ ವಾಯುಪ್ರಯಾಣವೆಂದಿಗೂ ಸಾಧ್ಯವಾಗುತ್ತಿರಲಿಲ್ಲ ಎಂದು ಧಾರಾಳವಾಗಿ ಹೇಳಬಹುದು. ನಿಸ್ತಂತು ವಾರ್ತೆ ಇಲ್ಲದಿದ್ದಲ್ಲಿ ಆಕಾಶದಲ್ಲಿರುವವನು ಮತ್ತೆ ಭೂಮಿಗೆ ಇಳಿಯುವವರೆಗೂ ಭೂಮಿಯೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲಾಗುತ್ತಿರಲಿಲ್ಲ. ವಾಯುವಿನ ಸ್ಥಿತಿ ಒಂದು ಕ್ಷಣ ಇದ್ದ ಹಾಗೆ ಇನ್ನೊಂದು ಕ್ಷಣ ಇರುವುದಿಲ್ಲ; ಹೀಗಿರುವಾಗ, ವಿಮಾನ ನಡಸುವವನು ಸಂಪೂರ್ಣವಾಗಿ ವಾಯುವಿಗೆ ಅಧೀನನಾಗಿ, ಅವನು ಅತ್ಯಂತ ಅಪಾಯ ಸ್ಥಿತಿಯಲ್ಲಿರಬೇಕಾಗುತ್ತಿತ್ತು. ನಿಸ್ತಂತು ವಾರ್ತೆಯ ಸಹಾಯದಿಂದ, ಹಾರುತ್ತಿರುವಾಗ ವಾಯುಸ್ಥಿತಿಯಲ್ಲಿ ಆಗುವ ವ್ಯತ್ಯಾಸಗಳ ಬಗ್ಗೆ ಸಂಪೂರ್ಣ ತಿಳಿವಳಿಕೆಯುನ್ನೂ ತಲುಪಬೇಕಾದ ಸ್ಥಳದ ಬಗ್ಗೆ ಸಂಪೂರ್ಣ ಮಾರ್ಗದರ್ಶನವನ್ನೂ ವಿಮಾನ ನಡಸುವವನು ಪಡೆಯಲು ಸಾಧ್ಯ. ಹೀಗೆ, ನೆಲದ ಮೇಲೆ ಗಾಡಿಯ ಸಂಚಾರ ಎಷ್ಟು ಸುರಕ್ಷಿತವಾಗಿದೆಯೊ ವಿಮಾನ ಹಾರಿಕೆಯನ್ನೂ ಅಷ್ಟೇ ಸುರಕ್ಷಿತವಾಗಿ ಮಾಡಿದೆ ನಿಸ್ತಂತು ವಾರ್ತೆ. ನಿಸ್ತಂತು ವಾರ್ತೆಯ ಚರಿತ್ರೆ ಬೆಳವಣಿಗೆಗಳೂ ಆಕಾಶ ಪ್ರಯಾಣದ ಚರಿತ್ರೆ ಬೆಳವಣಿಗೆಗಳೂ ಹೆಚ್ಚು ಕಡಮೆ ಒಂದೇ ಕಾಲಕ್ಕೆ ಸೇರಿದವು. ಆಕಾಶ ಪ್ರಯಾಣ ಮತ್ತು ರೇಡಿಯೋ– ಇವು ಹೆಚ್ಚು ಕಡಮೆ ಒಟ್ಟಿಗೆ ಮೊದಲಾಗಿ ಜೊತೆಯಲ್ಲೇ ಬೆಳೆದುಕೊಂಡು ಬಂದುವು. ೨೦ನೆಯ ಶತಮಾನದ ವೈಜ್ಞಾನಿಕ ಪ್ರಗತಿಯ ಎರಡು ಅತ್ಯಂತ ಪ್ರಮುಖ ನಿದರ್ಶನಗಳಾದ ಇವುಗಳ ಸಹಸಂಬಂಧ ನಿಜವಾಗಿಯೂ ಉಚಿತವಾಗಿಯೇ ಇದೆ.

ವಿದ್ಯುತ್ ಕಾಂತ ತರಂಗ (Electro Magnetic Wave)ಗಳನ್ನು ಮೊದಲು ಕಂಡುಹಿಡಿದವರು ಶ್ರೀಯುತ ಜಗದೀಶ ಚಂದ್ರ ಬೋಸರವರು. ಅವರ ದುರದೃಷ್ಟದಿಂದ, ಸಾಮಾನ್ಯವಾಗಿ ಎಲ್ಲ ಭಾರತೀಯರ ವಿಷಯದಲ್ಲೂ ಇರುವ ತಿರಸ್ಕಾರಭಾವ ಅವರನ್ನೂ ಬಿಡಲಿಲ್ಲ; ಜೊತೆಗೆ ಸಹಾಯ ಸಂಪತ್ತೂ ಸಾಲದು; ಆದ್ದರಿಂದ ಅವರು ತಮ್ಮ ಸಂಶೋಧನೆಗಳನ್ನು ಮುಂದುವರಿಸಲಾಗದೆ, ನಿಸ್ತಂತು ವಾರ್ತೆಯ ನಿರ್ಮಾಪಕನಾಗಿರುವ ಗೌರವ ಇಟಲಿಯ ವಿಜ್ಞಾನಿಯಾದ ಮಾರ್ಕೋನಿಗೆ (Marconi) ಹೋಯಿತು. ಸರಕಾರದ ಸಹಾಯವೂ ಪ್ರೋತ್ಸಾಹವೂ ಇದ್ದಿದ್ದರೆ ಈ ಗೌರವ ಭಾರತೀಯನೊಬ್ಬನಿಗೆ ಬರುತ್ತಿತ್ತು. ಯುದ್ಧದ ವೇಳೆಯಲ್ಲಿ ನಿಸ್ತಂತು ವಾರ್ತೆ ಬಹು ಶೀಘ್ರವಾಗಿ ಅದ್ಭುತ ಪ್ರಗತಿಯನ್ನು ಹೊಂದಿತು; ಅದು ಇಂದು ಆಧುನಿಕ ನಾಗರಿಕತೆಯ ಅಗತ್ಯ ವೈಲಕ್ಷಣ್ಯವಾಗಿ ಪರಿಣಮಿಸಿದೆ. ಮೊದಮೊದಲು ಎರಡು ಮೈಲಿಗಳಿಂದ ಮೂರು ಮೈಲಿಗಳವರೆಗೆ ಸಂಚರಿಸುತ್ತಿದ

ನಿಸ್ತಂತು ತರಂಗಗಳು ಈಗ ಪ್ರಪಂಚದ ಮೇಲೆಲ್ಲ ಸಂಚರಿಸಬಲ್ಲವು, ಮತ್ತು ಯಾವ ಸಮಾಚಾರ ಸಂದೇಶವನ್ನು ಬೇಕಾದರೂ ವಿದ್ಯುದ್ವೇಗದಿಂದ ಪ್ರಪಂಚದ ಮೇಲೆಲ್ಲ ಹರಡಬಲ್ಲವು. ಅತ್ಯಂತ ಅಲ್ಪಾವಧಿಯಲ್ಲಿ, ಸಾಗಣೆಯಲ್ಲೂ ಆಕಾಶ ಅಥವಾ ಸಮುದ್ರ ಪ್ರಯಾಣದಲ್ಲೂ ನಿಸ್ತಂತುವಾರ್ತೆ ಎಷ್ಟು ಮುಖ್ಯ ಅಂಗವಾಗಿದೆಯೆಂದರೆ, ಆಕಾಶ ಸಾಗಣೆಯ (Air transport) ಮುಂದಿನ ಬೆಳವಣಿಗೆ ರೇಡಿಯೊ ಯಂತ್ರಶಿಲ್ಪದ ಬೆಳವಣಿಗೆಯೊಂದಿಗೆ ಬೇರ್ಪಡಿಸಲಾಗದಂತೆ ಹೊಂದಿಕೊಂಡಿದೆ.

ಇಂದು ರೇಡಿಯೋ ಸಜ್ಜಿತ ವಿಮಾನವನ್ನು ನಡಸುವವನು ರೇಡಿಯೋವಿನ ಸಹಾಯದಿಂದ, ಸಾಧಾರಣ ರಸ್ತೆ ಬಂಡಿ ಹೊಡೆಯುವವನು ನೆಲದ ಮೇಲಿನ ಜನರೊಡನೆ ಎಷ್ಟು ಸಂಪರ್ಕವುಳ್ಳವನಾಗಿರುತ್ತಾನೆಯೊ ಅದಕ್ಕಿಂತ ಹೆಚ್ಚು ಹತ್ತಿರದ ಸಂಪರ್ಕವುಳ್ಳವನಾಗಿದ್ದಾನೆ. ವಿಮಾನದ ರೇಡಿಯೋ ಸಜ್ಜು– ಎಂದರೆ ನಿಸ್ತಂತು ವಾರ್ತಾ ಪ್ರೇರಕ ಮತ್ತು ಗ್ರಾಹಕ– ಈ ಮುಂದಿನ ಕೆಲಸಗಳಿಗೆ ಉಪಯೋಗ: (೧) ದಿಕ್‌ನಿಯಂತ್ರಣ, (೨) ವಾಯುಸ್ಥಿತಿಯ ವರದಿಗಳನ್ನು ಪಡೆಯುವುದು, (೩) ತುರ್ತು ಸಂಜ್ಞೆಗಳನ್ನು ಕಳಿಸುವುದು.

(೧) ಒಂದು ವಿಮಾನವನ್ನು ನಡಸುವವನು ಹಾರುತ್ತಿರುವ ಎಲ್ಲ ವಿಮಾನಗಳಿಗೂ ತಂಗುವ ನಿಲ್ದಾಣಗಳು, ನಿಸ್ತಂತು ಕೇಂದ್ರಗಳು, ವಿಮಾನ ಒಂದು ಸ್ಥಳಕ್ಕೆ ಬಂದ ಮತ್ತು ಅದನ್ನು ಬಿಡುವ ಹೊತ್ತು– ಈ ಸಂಗತಿಗಳ ಬಗ್ಗೆ ತಿಳಿವಳಿಕೆ ಕೊಡಬಲ್ಲನು; ಇದರಿಂದ ಮಾರ್ಗದಲ್ಲಿ ಹಾರುತ್ತಿರುವ ಇತರ ವಿಮಾನಗಳು ತಮ್ಮ ದಾರಿಯನ್ನು ಸರಿಹೊಂದಿಸಿಕೊಳ್ಳಬಲ್ಲವು. ಉದಾಹರಣೆಗಾಗಿ, ಒಂದು ವಿಮಾನ ತಾನು ೪,೦೦೦ ಅಡಿಗಳ ಎತ್ತರದಲ್ಲಿ ಹಾರುತ್ತಿರುವುದಾಗಿ ತಿಳಿಸುತ್ತದೆ; ಅದೇ ಮಾರ್ಗದಲ್ಲಿ ಹಾರಿಹೋಗುತ್ತಿರುವ ಇತರ ವಿಮಾನಗಳು ಆ ಎತ್ತರದಲ್ಲಿ ಹಾರುವುದನ್ನು ಬಿಟ್ಟು, ಆ ವಿಮಾನಕ್ಕೆ ಡಿಕ್ಕಿಹೊಡೆದು ಅಪಘಾತ ಕ್ಕೀಡಾಗುವ ಸಂಭವದಿಂದ ಪಾರಾಗುತ್ತವೆ. ಹಿಂದೆ, ಒಂದು ವಿಮಾನ ಎಷ್ಟು ಎತ್ತರದಲ್ಲಿ ಹಾರುತ್ತಿದೆ ಎಂದು ಪರಸ್ಪರ ತಿಳಿದುಕೊಳ್ಳಲು ವಿಮಾನಗಳಿಗೆ ಅಸಾಧ್ಯವಾಗಿತ್ತು.

(೨) ವಿಮಾನ ನೆಲವನ್ನು ಬಿಟ್ಟಮೇಲೆ ವಾಯುಸ್ಥಿತಿಯಲ್ಲಿ ಆಗಿರುವ ವ್ಯತ್ಯಾಸಗಳನ್ನೂ ಅದು ಮುಂದೆ ಸಂಧಿಸಬೇಕಾಗಿರುವ ವಾಯುಗುಣವನ್ನೂ ಹಾರುತ್ತಿರುವ ವಿಮಾನಕ್ಕೆ ತಿಳಿಸಿ, ವಿಮಾನ ನಡಸುವವನಿಗೆ ಪೂರ್ವಭಾವಿಯಾಗಿ ಎಚ್ಚರಿಕೆ ಕೊಡಬಹುದು. ಉದಾಹರಣೆಗೆ, ಬಿರುಗಾಳಿ ಮಳೆ ಬರುವುದೆಂಬ

ಹೆದರಿಕೆಯಿದ್ದರೆ, ನೆಲೆ ನಿಲ್ದಾಣ (Ground station) ಹಾರುತ್ತಿರುವ ವಿಮಾನಕ್ಕೆ ಇನ್ನು ಮುಂದಕ್ಕೆ ಹೋಗಕೂಡದೆಂದು ತಿಳಿಸಿ, ಅದನ್ನು ಹಿಂದಕ್ಕೆ ಕರೆಯಬಹುದು. ಅಥವಾ, ಬಿರುಗಾಳಿ ಮಳೆ ಯಾವ ಎತ್ತರದಲ್ಲಿ ಭೋರ್ಗರೆಯುತ್ತಿದೆಯೆಂಬುದನ್ನು ವಿಮಾನ ನಡಸುವವನಿಗೆ ಸರಿಯಾಗಿ ತಿಳಿಸುವುದರ ಮೂಲಕ, ಅವನು ತನ್ನ ಎತ್ತರವನ್ನು ಬದಲಾಯಿಸಿಕೊಂಡು ಬಿರುಗಾಳಿ ಮಳೆಗೆ ಸಿಕ್ಕಿಕೊಳ್ಳದೆ ಅದರಿಂದ ಪಾರಾಗುವಂತೆ ಮಾಡಬಹುದು. ಅಥವಾ, ಒಂದು ಗೊತ್ತಾದ ಎತ್ತರದಲ್ಲಿ ಬಲವಾದ ಎದುರುಗಾಳಿಗಳು ಬೀಸುತ್ತಿದ್ದರೆ ಈ ವಿಚಾರವನ್ನು ವಿಮಾನ ನಡಸುವವನಿಗೆ ತಿಳಿಸಿ, ಸಾಮಾನ್ಯ ಸ್ಥಿತಿಯುಳ್ಳ ಹೆಚ್ಚು ಎತ್ತರದ ಪ್ರದೇಶದಲ್ಲಿ ಹಾರುವಂತೆ ಮಾಡಬಹುದು. ಅಲ್ಲದೆ, ಅವನು ಇಳಿಯಬೇಕೆಂದಿರುವ ವಿಮಾನಾಂಗಣ ಅಕಸ್ಮಾತ್ ಮಳೆಯಿಂದಾಗಲಿ ಇಲ್ಲವೆ ಬೇರೆ ಯಾವುದಾದರೂ ಅನಿರೀಕ್ಷಿತ ಘಟನೆಯಿಂದಾಗಲಿ ಉಪಯೋಗಿಸಲಾಗದಂತಾಗಿದ್ದರೆ ವಿಮಾನಾಂಗಣದ ಸ್ಥಿತಿಯನ್ನು ಅವನಿಗೆ ತಿಳಿಸಬಹುದು. ಈ ಮುನ್‌ತಿಳಿವಳಿಕೆ ಪಡೆದ ವಿಮಾನ ನಡಸುವವನು ತನ್ನ ಮಾರ್ಗವನ್ನು ಬದಲಾಯಿಸಿಕೊಂಡು ಇನ್ನೆಲ್ಲಿಯಾದರೂ ಇಳಿಯಲು ಏರ್ಪಾಡು ಮಾಡಿಕೊಳ್ಳುತ್ತಾನೆ. ಹಾರುತ್ತಿರುವ ವಿಮಾನಕ್ಕೂ ನೆಲಕ್ಕೂ ಈ ರೀತಿ ಸಂಪರ್ಕವಿಲ್ಲದೆ ಹೋಗಿದ್ದರೆ, ವಿಮಾನ ನಡಸುವವನು ಇಂಥ ಎಡರು ತೊಡರುಗಳಿಂದ ಪಾರಾಗುವುದು ದುಸ್ಸಾಧ್ಯವಾಗುತ್ತಿತ್ತು: ಮತ್ತು, ವಿಮಾನ ಪ್ರಯಾಣ ಮಾಡುವುದು ಅತ್ಯಂತ ಅಪಾಯಕರವಾಗುತ್ತಿತ್ತು.

(೩) ದಿಕ್‌ನಿರ್ದೇಶಕ ನಿಸ್ತಂತುವಿನ ಸಹಾಯದಿಂದ ವಿಮಾನ ನಡಸುವವನು ಬೇರೆ ಹೊರಗಿನ ಸಹಾಯವಾವುದೂ ಇಲ್ಲದೆ, ತನ್ನ ದಾರಿಯನ್ನು ಕಂಡುಹಿಡಿದು ಕೊಳ್ಳಬಹುದು. ಏನೂ ಚೆನ್ನಾಗಿ ಗೋಚರವಾಗದಿರುವ ಸ್ಥಿತಿಯಲ್ಲಿ ವಿಮಾನನಡಸುವವನಿಗೆ ನೆಲ ಕಾಣದಿರುವಾಗ, ಅವನು ತಾನು ತಲುಪಬೇಕಾದ ಸ್ಥಳದ ನಿಸ್ತಂತು ಕೇಂದ್ರದಿಂದ ಕಳಿಸಲ್ಪಟ್ಟ ಕಿರಣದ ವ್ಯಾಪ್ತಿಯೊಳಗೇ ಹೋಗುತ್ತ ಆ ಸ್ಥಳವನ್ನು ತಲುಪಬಹುದು. ತನ್ನ ನೆಲೆಯೇ ತನಗೆ ತಿಳಿಯದಿದ್ದರೂ ಕೇಂದ್ರದೊಡನೆ ಸಂತತ ಸಂಪರ್ಕವಿಟ್ಟುಕೊಳ್ಳುವುದರಿಂದ ತಾನು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದೇನೆಂದು ಅವನು ದೃಢವಾಗಿರಬಹುದು. ಕೇಂದ್ರದೊಡನೆ ನಿಸ್ತಂತು ಸಂಪರ್ಕ ತಪ್ಪಿದ ಕೂಡಲೆ ತಾನು ದಾರಿ ತಪ್ಪುತ್ತಿರುವುದಾಗಿ ಅವನಿಗೆ ಗೊತ್ತು. ಇದೇ ರೀತಿಯಲ್ಲಿ, ವಿಮಾನ ಹಾರುತ್ತಿರುವಾಗ ಅದರ ಮಾರ್ಗವನ್ನು ನೆಲ ನಿಲ್ದಾಣಗಳು ಗೊತ್ತುಹಿಡಿಯಬಹುದು. ವಿಮಾನ ನೆಲೆ ತಪ್ಪಿದರೆ, ಒಂದು

ನಿರ್ದಿಷ್ಟ ಕ್ಷಣದಲ್ಲಿ ಅದರ ನೆಲೆಯೇನು, ಸ್ಥಿತಿಯೇನು ಎಂಬುದನ್ನು ಅದಕ್ಕೆ ತಿಳಿಸಲು ಸಾಧ್ಯ. ತುರ್ತಾದ ಸಂದರ್ಭದಲ್ಲಿ ವಿಮಾನ ನಡಸುವವನು ತಾನು ಕೆಳಗಿಳಿಯಬೇಕಾಗಿ ಬಂದಿದೆಯೆಂದಾಗಲಿ ತನಗೆ ಸಹಾಯ ಬೇಕಾಗಿದೆಯೆಂದಾಗಲಿ ಮಾರ್ಗದಲ್ಲಿನ ಎಲ್ಲ ನಿಲ್ದಾಣಗಳಿಗೂ ಸಂಜ್ಞೆ ಮಾಡಬಹುದು; ಸಾಧ್ಯವಾದ ಸಹಾಯವನ್ನು ಅವನಿಗೆ ಕೂಡಲೆ ಒದಗಿಸಬಹುದು.

ಹೀಗೆ, ರೇಡಿಯೋವಿನ ಸಹಾಯದಿಂದ ಆಕಾಶಸಾಗಣೆ ಸುರಕ್ಷಿತವಾಗಿ ಮಾಡಲ್ಪಟ್ಟಿದೆ; ಮಂಜು ಮತ್ತು ಕೆಟ್ಟ ವಾಯುಸ್ಥಿತಿಯಲ್ಲಿ ಕೂಡ ಹಾರುವುದು ಸಾಧ್ಯವಾಗಿರುವುದು ಮಾತ್ರವಲ್ಲದೆ ಸುರಕ್ಷಿತವಾಗಿಯೂ ಇದೆ.

ಪವನ ಶಾಸ್ತ್ರ

ಮನುಷ್ಯನು ಸಾಧ್ಯವಿರುವ ಮಟ್ಟಿಗೂ ವಾಯುಗುಣದ ಪರಿಸ್ಥಿತಿಗೆ ಅಧೀನನಾಗದೆ ಇರುವಂತೆ ಮಾಡುವುದಕ್ಕಾಗಿ, ಅವನ ಬಹುಮಟ್ಟಿಗಿನ ಸಾಮರ್ಥ್ಯವೆಲ್ಲ– ಬುದ್ಧಿಪೂರ್ವಕವಾಗಿಯೊ ಬುದ್ಧಿಪೂರ್ವಕವಾಗಿಲ್ಲದೆಯೊ– ವಿನಿಯೋಗವಾಗಿದೆ. ವಾಯು ನಾವಿಕನು ಇತರ ಮಾನವರು ಎದುರಿಸ ಬೇಕಾದ ಸಮಸ್ಯೆಯನ್ನೇ ಎದುರಿಸಬೇಕಾಗಿದೆ– ಆದರೆ, ಸ್ವಲ್ಪಮಟ್ಟಿಗೆ ಬೇರೆ ದೃಷ್ಟಿಕೋನದಿಂದ. ಯಶಸ್ವಿಯಾಗಿ ಆಕಾಶ ಪ್ರಯಾಣ ಮಾಡುವುದನ್ನೂ ಸುರಕ್ಷಿತವಾಗಿ ಹಾರುವುದನ್ನೂ ದೃಢಪಡಿಸಿಕೊಳ್ಳಬೇಕಾದರೆ ಸಾಮಾನ್ಯ ಕಾರ್ಯವೆಲ್ಲ– ಅತ್ಯಂತ ವಿಪರೀತ ಸ್ಥಿತಿಯುಂಟಾದರೆ ವಿನಾ– ಸ್ವಲ್ಪವೂ ವ್ಯತ್ಯಾಸ ಹೊಂದಕೂಡದು. ವಿಮಾನ ನಡಸುವವನು ಹಾರುವುದಕ್ಕೆ ಮುನ್ನ ತಾನು ತನ್ನ ಮಾರ್ಗದಲ್ಲಿ ಸಂಧಿಸಲಿರುವ ವಾಯುಸ್ಥಿತಿಗಳ ತಕ್ಕಮಟ್ಟಿನ ಪರಿಚಯವನ್ನು ಪಡೆದಿರಬೇಕು. ಇದು ಮಾತ್ರವಲ್ಲದೆ, ಹಾರುತ್ತಿರುವಾಗ ವಾಯುಸ್ಥಿತಿಯಲ್ಲಿ ನಿರಂತರವಾಗಿ ಉಂಟಾಗುತ್ತಿರುವ ಬದಲಾವಣೆಗಳ ವರದಿಗಳನ್ನು ಅವನಿಗೆ ಒದಗಿಸುತ್ತಿರಬೇಕು. ಈ ಮುನ್ನೆಚ್ಚರಿಕೆಗಳನ್ನೆಲ್ಲ ತೆಗೆದುಕೊಂಡ ಮೇಲೆಯೇ ಹಾರುವುದು ಯುಕ್ತ.

ಒಂದು ನಿಯಮಿತ ಕಾಲಾವಧಿಯಲ್ಲಿ, ಒಂದು ನಿರ್ದಿಷ್ಟ ಪ್ರದೇಶದಲ್ಲಿ, – ವಾಯುಗುಣ, ಗಾಳಿ, ಇಲ್ಲವೆ ಬೇರೆ ಯಾವುದಾದರೂ ಹೆಚ್ಚು ಮುಖ್ಯವಾದ ಪವನ ಶಾಸ್ತ್ರ ವಿಷಯಕವಾದ ಭೂಶಕ್ತಿಯಲ್ಲಿ ಹೀಗೆ ಹೀಗೆಯೇ ಬದಲಾವಣೆಗಳು ಸಂಭವಿಸಬಹುದೆಂದು ಮುಂದಾಗಿ ಹೇಳಬೇಕಾದರೆ, ಒಂದು ನಕ್ಷೆಗಳ ಮಾಲೆ ಆವಶ್ಯಕ. ಈ ನಕ್ಷೆಗಳಲ್ಲಿ ಪ್ರತಿಯೊಂದೂ, ಮುನ್‌ಸೂಚನೆ ಯಾವ ಪ್ರದೇಶಕ್ಕೆ

ಸಂಬಂಧಪಟ್ಟಿದೆಯೋ ಅದನ್ನೊಳಕೊಂಡ ಒಂದು ವಿಶಾಲ ಪ್ರದೇಶದಲ್ಲಿ ಒಂದು ಗೊತ್ತಾದ ಕಾಲದಲ್ಲಿ ಪವನಶಾಸ್ತ್ರ ಪ್ರಕಾರ ಸ್ಥಿತಿಗತಿಗಳು ಹೇಗಿವೆಯೆಂಬುದನ್ನು ತೋರಿಸುತ್ತದೆ. ಈ ಆಧಾರಭೂತವಾದ ಆವಶ್ಯಕತೆಯ ಪರಿಣಾಮವಾಗಿ ಕಳೆದ ೮೫ ವರ್ಷಗಳ ಅವಧಿಯಲ್ಲಿ ಒಂದು ವ್ಯವಸ್ಥೆ ಬೆಳೆಯಲವಕಾಶವಾಗಿದೆ; ಈ ವ್ಯವಸ್ಥೆಯ ಮೂಲಕ ಬೇರೆ ಬೇರೆ ದೇಶಗಳಲ್ಲಿ ಕ್ರಮವಾದ ಪರಿಶೀಲನೆಗಳನ್ನು ನಡಸಿ ಅವುಗಳನ್ನು ಶೀಘ್ರವಾಗಿ ವಿನಿಮಯ ಮಾಡಿಕೊಳ್ಳಲಾಗುತ್ತಿದೆ; ಹೀಗೆ, ಪವನ ಶಾಸ್ತ್ರ ಸಂಬಂಧವಾದ ಪರಿಶೀಲನೆ ನಡಸುವ ಯಾವ ಸಂಸ್ಥೆಗಾದರೂ ಈ ತಿಳಿವಳಿಕೆ ತಕ್ಕಮಟ್ಟಿಗೆ ಅಲ್ಪಕಾಲದಲ್ಲಿ ದೊರೆಯುವಂತಾಗಿದೆ. ಅಂತರರಾಷ್ಟ್ರೀಯ ಸಮ್ಮತಿಯಿಂದ ರಚಿತವಾದ ಈ ವ್ಯವಸ್ಥೆಗೆ, ರೇಡಿಯೋ ಬಂದಂದಿನಿಂದ ಈಚೆಗೆ ಹೆಚ್ಚಿನ ಸೌಕರ್ಯವುಂಟಾಗಿದೆ. ಈಗ ಬಹುಮಟ್ಟಿಗೆ ಪ್ರತಿಯೊಂದು ನಾಗರಿಕ ದೇಶವೂ ಪರಿಶೀಲನ ಕಾರ್ಯಸ್ಥಳಗಳ ಶಾಖೋಪಶಾಖೆಗಳನ್ನು ನಡಸಿಕೊಂಡು ಬರುತ್ತಿದೆ. ಉದಾಹರಣೆಗಾಗಿ, ಯೂರೋಪಿನಲ್ಲೂ ಪಶ್ಚಿಮ ರಷ್ಯದಲ್ಲೂ ಸುಮಾರು ೬೦೦ ಕಾರ್ಯಸ್ಥಳಗಳಿವೆ. ಪ್ರತಿಯೊಂದು ಪರಿಶೀಲನ ಕಾರ್ಯಸ್ಥಳವೂ ರಾಷ್ಟ್ರೀಯ ಪವನ ಶಾಸ್ತ್ರ ಕಾರ್ಯಾಲಯಕ್ಕೆ ಒಂದು ಅಥವಾ ಹೆಚ್ಚಿನ ವರದಿಗಳನ್ನು ಕಳಿಸುತ್ತವೆ. ಪರಿಶೀಲನೆಗಳನ್ನು ನಡಸುವ ಕಾಲಗಳನ್ನು ಅಂತರರಾಷ್ಟ್ರೀಯ ಸಮ್ಮತಿಯಿಂದ ಗೊತ್ತುಮಾಡಿದೆ. ರಾಷ್ಟ್ರೀಯ ಪವನಶಾಸ್ತ್ರ ಕಾರ್ಯಾಲಯಕ್ಕೆ ಬೇರೆ ಬೇರೆ ಪರಿಶೀಲನ ಕಾರ್ಯಸ್ಥಳಗಳಿಂದ ಬರುವ ಸಮಾಚಾರಗಳಲ್ಲಿರುವ ಅಂಶಗಳು ಇವು: ಸರಾಸರಿ ಸಮುದ್ರಮಟ್ಟಕ್ಕೆ ಇಳಿಸಿ ಅದಕ್ಕನುಗುಣವಾಗಿ ಸರಿಪಡಿಸಿದ, ವಾಯುಭಾರ ಮಾಪಕ ಯಂತ್ರದ ಒತ್ತಡ (Barometric Pressure) ಮತ್ತು ಕಳೆದ ಮೂರು ಗಂಟೆಗಳ ಕಾಲದಲ್ಲಿ ಅದರಲ್ಲಾದ ವ್ಯತ್ಯಾಸಗಳು; ಪರಿಶೀಲನ ಸಮಯದಲ್ಲಿನ ಶಾಖ; ವಾಯುವಿನ ಆರ್ದ್ರತೆ; ಗಾಳಿಯ ದಿಕ್ಕು ಮತ್ತು ಜೋರು; ಮೋಡಗಳ ಮಾದರಿ, ಮೊತ್ತ, ಮತ್ತು ಎತ್ತರ; (ಗೋಚರತೆ (Visibility); ಮತ್ತು ವಾಯುಗುಣದ ಸಾಮಾನ್ಯ ಲಕ್ಷಣ. ಬೆಳಗ್ಗೆಯ ಮತ್ತು ಸಂಜೆಯ ಪರಿಶೀಲನೆಗಳ ಸಮಾಚಾರದಲ್ಲಿ ಮಳೆ, ಹಿಂದಿನ ೧೩ ಅಥವಾ ೧೧ ಗಂಟೆಗಳ ಕಾಲದಲ್ಲಿನ ಪರಮಾವಧಿಯ ಮತ್ತು ಕನಿಷ್ಠಾವಧಿಯ ಶಾಖ– ಇವೂ ಸೇರಿರುತ್ತವೆ. ಈ ಎಲ್ಲ ಪರಿಶೀಲನೆಗಳೂ ಮೇಲ್ಮೈಯ ಸ್ಥಿತಿಗತಿಗಳನ್ನು ಕುರಿತವು; ಇವುಗಳನ್ನು ಪ್ರತ್ಯಕ್ಷವಾಗಿ ಅಳೆಯದೆ ಮೇಲ್ಮೈಯಿಂದಲೇ ಪರಿಶೀಲಿಸಬಹುದು. ಇಷ್ಟೇ ಅಲ್ಲದೆ, ಬೇರೆ ಬೇರೆ ಎತ್ತರಗಳಲ್ಲಿ ಗಾಳಿಯ ವೇಗ ಮತ್ತು ದಿಕ್ಕುಗಳ ಸಂಬಂಧವಾಗಿಯೂ ಶಾಖಗಳು ಊರ್ಧ್ವಮುಖದಲ್ಲಿ ಹೇಗೆ ಹಂಚಿಕೆಗೊಂಡಿವೆಯೆಂಬ ಬಗ್ಗೆಯೂ

ತಿಳಿವಳಿಕೆ ಆವಶ್ಯಕ. ಆಕಾಶಬುಟ್ಟಿ ಪರಿಶೀಲನೆ ನಡಸಲು ಸಜ್ಜಾದ ಕಾರ್ಯಸ್ಥಳಗಳ ಸಣ್ಣ ಜಾಲವೊಂದು ಮೊದಲನೆಯ ತೆರದ ಸಮಾಚಾರವನ್ನು ಒದಗಿಸುತ್ತದೆ; ಮೇಲ್ಭಾಗದ ವಾಯು ಶಾಖಗಳ ಪ್ರತ್ಯಕ್ಷ ಪರಿಶೀಲನೆಗಳು ಪರಿಮಿತ ಸಂಖ್ಯೆಯ ವಿಮಾನ ನಿಲ್ದಾಣಗಳಿಂದ ದೊರೆಯುತ್ತವೆ. ತಂತಿ ವರ್ತಮಾನದ ಮೊತ್ತವನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸುವುದಕ್ಕಾಗಿಯೂ ಎಲ್ಲ ಪರಿಶೀಲನೆಗಳನ್ನೂ ಒಂದು ಅಂತರ ರಾಷ್ಟ್ರೀಯ ಸಂಕೇತ ಭಾಷೆಯ ಮೂಲಕ ಕಳಿಸಿಕೊಡಲಾಗುತ್ತದೆ. ಭೂಮಿಯ ಮೇಲಣ ಕಾರ್ಯಸ್ಥಳಗಳಿಂದ ಕಳಿಸಿದ ಪರಿಶೀಲನೆಗಳ ಜೊತೆಗೆ, ಅಂತರಾಷ್ಟ್ರೀಯ ವರದಿ ಕಾಲದ ಗಂಟೆಗಳ ಸಮಯಕ್ಕೆ ಸರಿಯಾಗಿ ಸಮುದ್ರದ ಮೇಲೆ ಹಡಗುಗಳಿಂದ ಮಾಡಿದ ಪರಿಶೀಲನೆಗಳನ್ನು ಕಳಿಸಲಾಗುತ್ತದೆ. ಇಂಡಿಯಾದಲ್ಲೂ ಇದೇ ಬಗೆಯ ಪರಿಶೀಲನ ಕಾರ್ಯಸ್ಥಳಗಳು ನಾಡಿನಲ್ಲೆಲ್ಲಾ ಚೆದುರಿವೆ. ಈ ಎಲ್ಲ ಕಾರ್ಯಸ್ಥಳಗಳೂ ತಮ್ಮ ವರದಿಗಳನ್ನು ಪುಣೆಯ ಸಮೀಕ್ಷಾ ಮಂದಿರಕ್ಕೆ (Observatory) ಕಳಿಸುತ್ತವೆ; ಅಲ್ಲಿ ಬೇಕಾದ ಸಮಾಚಾರಗಳನ್ನೆಲ್ಲ ಪರಿಶೋಧಿಸಿ, ಲೆಕ್ಕಾಚಾರ ಮಾಡಿ, ಎಲ್ಲ ವಾಯುಗುಣ ವರದಿಗಳನ್ನೂ ಪ್ರಕಟಗೊಳಿಸಲಾಗುತ್ತದೆ.

ಯಾವುದೇ ವಾಯುಯಾನ ನಿಲ್ದಾಣವಾದರೂ ಅಲ್ಲಿ ವಿಮಾನ ನಡಸುವವನ ಉಪಯೋಗಕ್ಕೆ ಸಿದ್ಧವಾಗಿಟ್ಟಿದ್ದು, ವಿಮಾನ ಹಾರುತ್ತಿರುವಾಗ ರೇಡಿಯೋ ಮೂಲಕ ಎಡಬಿಡದೆ ಅವನಿಗೆ ಕಳಿಸುವ ಅಂಥ ವಾಯುಗುಣ ವರದಿಗಳು, ಆಯಕರ ಪ್ರದೇಶಗಳಿಂದಲೂ ವಾಯು ಮಂಡಲದ ಬಿರುಗಾಳಿ ಮಳೆಯ ಸ್ಥಳಗಳಿಂದಲೂ ದೂರವಾಗಿರುವುದಕ್ಕೆ ಮತ್ತು ಅನುಕೂಲವಾದ ಗಾಳಿಗಳ ಪ್ರಯೋಜನ ಹೊಂದುವುದಕ್ಕೆ ಅವನಿಗೆ ನೆರವಾಗುತ್ತವೆ. ಪವನ ಶಾಸ್ತ್ರದ ವಿಜ್ಞಾನ ಬಹು ಹಳೆಯದು; ಹಿಂದಿನ ಕಾಲದಲ್ಲಿ ಸಮುದ್ರ ಪ್ರಯಾಣ ಮಾಡುತ್ತಿದ್ದ ಪುರಾತನ ನಾವಿಕನು ಇದರ ಉಪಯೋಗ ಹೊಂದಿದ್ದಾನೆ. ಅದೇ ರೀತಿಯಲ್ಲಿ, ಈಗಿನ ಸಮುದ್ರ ಪ್ರಯಾಣವೂ ಅನುಕೂಲವಾಗಿರುವುದಕ್ಕೆ ಪವನಶಾಸ್ತ್ರವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿರುವುದೇ ಬಹುಮಟ್ಟಿಗೆ ಕಾರಣ. ವಾಯುವಿನಂಥ ಚಂಚಲ ಪ್ರವೃತ್ತಿಯ ಭೂತಶಕ್ತಿಯ ಮಾರ್ಗವಾಗಿ ವಾಯುನಾವಿಕನು ಪ್ರಯಾಣ ಮಾಡಬೇಕಾಗಿರುವುದರಿಂದ ಅವನು ಪವನ ಶಾಸ್ತ್ರದಿಂದ ಇನ್ನೂ ಹೆಚ್ಚಿನ ಪ್ರಯೋಜನ ಪಡೆಯಬೇಕಾದದ್ದು ಅಗತ್ಯ. ಈ ವಿಜ್ಞಾನ ಅಪರಿಪೂರ್ಣವಾಗಿದ್ದರೂ ಇದರ ಸಹಾಯದಿಂದ ವಿಮಾನಪ್ರಯಾಣ ತಕ್ಕಮಟ್ಟಿಗೆ ಸುರಕ್ಷಿತವಾಗಿ ಪರಿಣಮಿಸಿದೆ.

ಹೀಗೆ, ವಿಮಾನದಲ್ಲಿರುವ ಬೇರೆ ಬೇರೆ ಭದ್ರತೆಯ ಯಂತ್ರ ಸಲಕರಣೆಗಳು, ರೇಡಿಯೋ ಮತ್ತು ಪವನ ಶಾಸ್ತ್ರ– ಇವುಗಳು ವಿಮಾನ ಹಾರಿಕೆಯನ್ನು ಭೂಮಿಯ ಮೇಲಿನ ಇತರ ಯಾವುದೇ ಪ್ರಯಾಣವಿಧಾನದಷ್ಟೇ ಸುರಕ್ಷಿತವಾಗಿ ಮಾಡಿವೆ. ಈ ವೈಜ್ಞಾನಿಕ ಸಹಾಯಗಳಿಲ್ಲದೆ ಹೋಗಿದ್ದರೆ, ವಿಮಾನ ಪ್ರಯಾಣ ಇಂದಿನಷ್ಟು ಜನಪ್ರಿಯವಾಗುತ್ತಿರಲಿಲ್ಲ.

* * * *

ಪ್ರಕರಣ ೫೫
ವಿಮಾನ ಟಪ್ಪಾಲು ಮತ್ತು ಪರಮಾವಧಿ ಹಾರಿಕೆಗಳ (Record Flight) ಚರಿತ್ರೆ

ವಿಮಾನ ಟಪ್ಪಾಲು (ಆಕಾಶ ಟಪ್ಪಾಲು, ಬಾನಂಚೆ) ಕ್ರಮವಾದ ವಾಣಿಜ್ಯ ಏರ್ಪಾಡಾಗಿ ಬೆಳೆದದ್ದು ೧೯೧೮ರಲ್ಲಿ. ಇದಕ್ಕೆ ಮುಂಚೆ, ವಿಶೇಷ ಅಥವಾ ಪ್ರಾಯೋಗಿಕ ರೀತಿಯ ವಿಮಾನ ಹಾರಿಕೆಗಳಲ್ಲಿ ವಿಮಾನ ಟಪ್ಪಾಲನ್ನು ಒಯ್ಯಲಾಗುತ್ತಿತ್ತು. ಉದಾಹರಣೆಗೆ, ೧೮೪೧ರಲ್ಲಿ ವಾಯುನಾವಿಕನಾದ ಜಿಪ್ಸನ್ (Gypson) ಎಂಬವನು ಲೈಯನ್ಸ್ (Lyons) ಪಟ್ಟಣದಿಂದ ಲಂಡನ್ ಪಟ್ಟಣಕ್ಕೆ ಆಕಾಶಬುಟ್ಟಿಯಲ್ಲಿ ಒಂದು ಕಾಗದ ತೆಗೆದುಕೊಂಡು ಹೋದನು. ಮತ್ತು ೧೮೭೦ರಲ್ಲಿ ಪ್ಯಾರಿಸ್ ಪಟ್ಟಣದ ಮುತ್ತಿಗೆಯ ಕಾಲದಲ್ಲಿ ಒಂದು 'ಆಕಾಶಬುಟ್ಟಿ ಅಂಚೆ'ಯನ್ನು ಏರ್ಪಡಿಸಲಾಗಿತ್ತು; ಆಗ ೬೦ ಆರೋಹಣಗಳು ಆದುವು; ಅವು ಒಂದೇ ಸಮನಾಗಿ ಯಶಸ್ವಿಯಾಗಿರಲಿಲ್ಲ. ೧೯೦೯ರಲ್ಲಿ ಜರ್ಮನಿಯಲ್ಲಿ ಜೆಪ್ಲಿನ್ ವಾಯುಹಡಗುಗಳಲ್ಲಿ ಟಪ್ಪಾಲು ಒಯ್ಯುವ ಪ್ರಯೋಗಗಳು ನಡೆದುವು. ಅದರ ಮರುವರ್ಷ ಬ್ರಿಟಿಷ್ ವಾಯುನಾವಿಕನಾದ ಗ್ರಾಂ ವ್ಹೈಟ್ (Gram White) ಎಂಬಾತನು ಬ್ಲ್ಯಾಕ್ ಪೂಲಿನಿಂದ ಟಪ್ಪಾಲು ತೆಗೆದುಕೊಂಡು ವಿಮಾನದಲ್ಲಿ ಹಾರಿದನು. ಗ್ರೇಟ್ ಬ್ರಿಟನ್, ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಇಂಡಿಯಾ, ದಕ್ಷಿಣ ಅಮೆರಿಕ, ಮತ್ತು ಫ್ರಾನ್ಸ್- ಈ ದೇಶಗಳ ಟಪ್ಪಾಲು ಕಚೇರಿಗಳು ೧೯೧೧ರಲ್ಲಿ ಪ್ರಾಯೋಗಿಕವಾಗಿ ಆಕಾಶ ಟಪ್ಪಾಲಿನ ಏರ್ಪಾಡುಗಳನ್ನು ನಡಸಿದುವು.

ಈ ಮೊದಮೊದಲಿನ ಪ್ರಯೋಗಗಳು ತಾತ್ಕಾಲಿಕ ಸ್ವಭಾವದಾದ್ದರಿಂದ ಅವುಗಳಲ್ಲಿ ಯಾವುದನ್ನೂ ವಾಣಿಜ್ಯ ಆಕಾಶ ಟಪ್ಪಾಲು ಏರ್ಪಾಡೆಂದು ಪರಿಗಣಿಸ ಲಾಗುವುದಿಲ್ಲ. ಈ ಹೆಸರು ಸರಿಯಾಗಿ ಅನ್ವಯಿಸುವ ಮೊದಲನೆಯ ಏರ್ಪಾಡೆಂದರೆ, ಅಮೆರಿಕದ ಸಂಯುಕ್ತ ಸಂಸ್ಥಾನಗಳ ಯುದ್ಧ ಶಾಖೆ ೧೯೧೮ನೆಯ ಇಸವಿ ಮೇ ೧೫ರಲ್ಲಿ ನ್ಯೂಯಾರ್ಕಿನಿಂದ ವಾಷಿಂಗ್‌ಟನ್ನಿಗೆ ತೆರೆದ ಆಕಾಶಮಾರ್ಗ. ಈ ಮಾರ್ಗದ ಉದ್ದ ೨೧೮ ಮೈಲಿಗಳು. ೧೯೧೯ರಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸಂಘಗಳು ಲಂಡನ್ನಿನಿಂದ ಪ್ಯಾರಿಸ್ಸಿಗೆ ಮಾರ್ಗವೊಂದನ್ನು ಪ್ರಾರಂಭಿಸಿದಾಗ, ಯೂರೋಪಿನಲ್ಲಿ ಟಪ್ಪಾಲು ಒಯ್ಯುವ ಮೊದಲ ವಾಣಿಜ್ಯ

ವಾಯುಮಾರ್ಗ ಕಾರ್ಯಮಾಡತೊಡಗಿತೆಂದು ಹೇಳಬಹುದು. ಅಂದಿನಿಂದ ವಾಯುಮಾರ್ಗದ ಮೂಲಕ ಸಾಗಿಸುವುದು ಬಹಳ ಜನಪ್ರಿಯವಾಗಿದೆ; ಮತ್ತು ಸಾರ್ವಜನಿಕರಲ್ಲಿ ಬಹುಮಂದಿ ವಿಮಾನವನ್ನು ಕ್ರಮವಾದ ಸಂಚಾರ ಸಾಧನವಾಗಿ ಉಪಯೋಗಿಸುತ್ತಿದ್ದಾರೆ. ಈಚೆಗೆ ಹಲವು ದೂರದ ವಾಯುಮಾರ್ಗಗಳು ಏರ್ಪಟ್ಟು, ಅವುಗಳನ್ನು ಉಪಯೋಗಿಸುವ ಹಲವಾರು ಸಂಘಗಳು ಹುಟ್ಟಿಕೊಂಡಿವೆ. ಇಂದು ಪ್ರಪಂಚದ ಇತರ ಮುಖ್ಯ ನಗರಗಳೊಂದಿಗೆ ಆಕಾಶಮೂಲಕ ಸಂಸರ್ಗವಿಟ್ಟುಕೊಂಡಿಲ್ಲದ ಒಂದು ದೊಡ್ಡ ನಗರವೂ ಇಲ್ಲ. ಆದರೂ ಅನೇಕ ದೇಶಗಳಲ್ಲಿ ಕಾರ್ಯ ಮಾಡುವಂಥವು ಖಾಸಗಿ ಸಂಘಗಳು; ಅನೇಕ ಟಪ್ಪಾಲು ಕಚೇರಿಗಳು ಟಪ್ಪಾಲು ಒಯ್ಯಲು ಬರಿಯ ಗುತ್ತಿಗೆದಾರರ ಸ್ಥಾನವನ್ನು ವಹಿಸಿಕೊಂಡಿವೆ. ಟಪ್ಪಾಲು ಕಚೇರಿಗಳ ಈ ಮನೋವೃತ್ತಿ ಪರಿಣಾಮದಲ್ಲಿ ಆಕಾಶ ಟಪ್ಪಾಲಿನ ಬೆಳವಣಿಗೆಯನ್ನು ಹಿಮ್ಮೆಟ್ಟಿಸುವುದಾಗಿದೆ. ಇದರ ಫಲಿತಾಂಶ ಏನೆಂದರೆ, ಆಕಾಶ ಟಪ್ಪಾಲಿನ ದರ ಬಲು ಹೆಚ್ಚಾಗಿದೆ; ಮಿತಿಮೀರಿದ ರುಸುಮು ಹಾಕುವ ತೊಡಕಿನ ಪದ್ಧತಿಗೆ ಅವಕಾಶವಾಗಿದೆ. ಈ ಕಾರಣಗಳಿಂದ ಸಮಾಜದ ಮಧ್ಯಮ ವರ್ಗಕ್ಕೆ ಸೇರಿದವನು ತನ್ನ ಕಾಗದ ಕಳಿಸಲು ವಿಮಾನವನ್ನುಪಯೋಗಿಸಲಾರ. ಇವೆಲ್ಲದರ ಪರಿಣಾಮವಾಗಿ ವಿಮಾನ ಇನ್ನೂ ಧನಿಕರ ಏಕಸ್ವಾಮ್ಯವಾಗಿದೆ. ಟಪ್ಪಾಲು ಕಚೇರಿಗಳು ಟಪ್ಪಾಲು ಸಾಗಿಸುವ ಕಾರ್ಯದಲ್ಲಿ ಭಾಗವಹಿಸದಿರುವುದರಿಂದ, ಪ್ರಯಾಣಿಕರನ್ನೊಯ್ಯುವುದು ಕಾರ್ಯಕರ್ತ ಸಂಘಗಳಿಗೆ ಆದಾಯಕ್ಕೊಂದು ಮುಖ್ಯ ಸಾಧನವಾಗಿದೆ. ಆಕಾಶ ಮಾರ್ಗವಾಗಿ ಪ್ರಯಾಣಿಕರನ್ನು ಸಾಗಿಸುವುದರ ಚರಿತ್ರೆಯೊಂದಿಗೆ ಆಕಾಶ ಟಪ್ಪಾಲಿನ ಚರಿತ್ರೆ ಹೆಣೆದುಕೊಂಡಿದೆ. ಆದರೆ, ಇಂದು ರುಸುವನ್ನು ಕಡಮೆ ಮಾಡಿ ಮೇಲ್‌ರುಸುಮನ್ನು ತೆಗೆದುಹಾಕುವ ಪ್ರವೃತ್ತಿ ಹೆಚ್ಚುತ್ತಿದೆ. ಇಂಡಿಯದ ಅಂಚೆ ಕಚೇರಿ ಆಕಾಶಟಪ್ಪಾಲನ್ನು ಸಾಗಿಸಲು 'ತಾತಾ ಆಕಾಶ ಮಾರ್ಗಗಳು' (Tata Air Lines), 'ರಾಷ್ಟ್ರೀಯ ಆಕಾಶ ಮಾರ್ಗಗಳು' (National Air ways)– ಇವೇ ಮುಂತಾದ ಖಾಸಗಿ ಸಂಘಗಳಿಗೆ ಗುತ್ತಿಗೆ ಕೊಟ್ಟಿವೆ; ಆದ್ದರಿಂದಲೇ ಒಂದು ಮುಖ್ಯನಗರದಿಂದ ಇನ್ನೊಂದಕ್ಕೆ ಕಾಗದಗಳನ್ನೊಯ್ಯಲು ಅಷ್ಟು ಹೆಚ್ಚಿನ ದರ.

ಪ್ರಪಂಚದ ಅತ್ಯಂತ ಮುಖ್ಯವಾದ ಮತ್ತು ಅತ್ಯಂತ ಚಟುವಟಿಕೆಯಿಂದ ಕೂಡಿದ ಆಕಾಶಮಾರ್ಗಗಳು ಈ ಮುಂದಿನವು:–

ದಿ ಬ್ರಿಟಿಷ್ ಓವರ್‌ಸೀಸ್ ಏರ್‌ವೇಸ್ (ಬ್ರಿಟಿಷ್ ಸಮುದ್ರೋಪರಿ ಆಕಾಶಮಾರ್ಗಗಳು (Old Imperial Airways): ಈ ಆಕಾಶಮಾರ್ಗ ಇಂದು ಯೂರೋಪ್, ಆಫ್ರಿಕ, ಏಷ್ಯ ಮತ್ತು ಆಸ್ಟ್ರೇಲಿಯ– ಈ ನಾಲ್ಕು ಭೂಖಂಡಗಳಿಗೂ ಸಂಬಂಧ ಕಲ್ಪಿಸಿದೆ. ೧೯೨೪ರಲ್ಲಿ ನಾಲ್ಕು ಬೇರೆ ಬೇರೆ ಸಂಘಗಳು ಒಗ್ಗೂಡಿ ಈ ಸಂಘ ಮೊತ್ತ ಮೊದಲು ಜನ್ಮ ತಾಳಿತು. ಕ್ರಮಕ್ರಮವಾಗಿ ೧೯೨೭ರಲ್ಲಿ ಕರಾಚಿಯನ್ನು ಲಂಡನ್ನಿನೊಡನೆ ಸೇರಿಸಿ, ಲಂಡನ್ನಿನಿಂದ ಇಂಡಿಯಾಕ್ಕೆ ಒಂದು ಆಕಾಶಮಾರ್ಗವನ್ನು ಏರ್ಪಡಿಸಿತು. ೧೯೩೦ರಲ್ಲಿ, ಈ ಸಂಘ ಕೇಪ್‌ಟೌನಿನಿಂದ ಕೈರೋವಿಗೆ ಸಹ ಒಂದು ವಿಮಾನದ ಏರ್ಪಾಡನ್ನು ಮೊದಲು ಮಾಡಿತು. ೧೯೩೨ರಲ್ಲಿ, ಇದೇ ಮಾರ್ಗವನ್ನು ಉತ್ತರಕ್ಕೂ ಬೆಳಸಿ, ಕೇಪ್‌ಟೌನನ್ನು ಲಂಡನ್ನಿಗೆ ಕೂಡಿಸಿತು. ೧೯೩೩ರ ಜುಲೈ ತಿಂಗಳಲ್ಲಿ, ಇಂಡಿಯಾ ಮಾರ್ಗವನ್ನು ಪೂರ್ವದಲ್ಲಿ ಕಲ್ಕತ್ತಕ್ಕೂ, ಅದೇ ವರ್ಷದಲ್ಲಿ ಸ್ವಲ್ಪ ಕಾಲಾನಂತರ ರಂಗೂನ್ ಮತ್ತು ಸಿಂಗಪುರಗಳಿಗೂ ವಿಸ್ತರಿಸಲಾಯಿತು. ೧೯೩೪ರಲ್ಲಿ, ಲಂಡನ್ನಿನಿಂದ ಆಸ್ಟ್ರೇಲಿಯದಲ್ಲಿ ಕ್ಯಾನ್‌ಬೆರ (Canberra) ಎಂಬ ಸ್ಥಳಕ್ಕೆ ಒಂದು ನೇರ ಮಾರ್ಗವನ್ನು ಸ್ಥಾಪಿಸಿತು; ಈ ಎಲ್ಲವೂ ಸೇರಿ ಮಾರ್ಗದ ಒಟ್ಟು ದೂರ ೧೧,೦೦೦ ಮೈಲಿಗಳಾದವು.

ಪ್ರಪಂಚದ ಇತರ ಮುಖ್ಯ ಆಕಾಶ ಮಾರ್ಗಗಳು ಯಾವುವೆಂದರೆ:– **ಏರ್ ಫ್ರಾನ್ಸ್ ರೂಟ್ (ಫ್ರಾನ್ಸ್ ಆಕಾಶ ಮಾರ್ಗ)** (The Air France Route): ಇದು ಪ್ಯಾರಿಸ್ಸನ್ನು ಪಶ್ಚಿಮ ಆಫ್ರಿಕದ ಮೂಲಕ ದಕ್ಷಿಣ ಅಮೆರಿಕದೊಡನೆ ಸಂಬಂಧಿಸುತ್ತದೆ. ಇದನ್ನು ೧೯೨೭ರಷ್ಟು ಮುಂಚೆಯೇ ಸ್ಥಾಪಿಸಲಾಯಿತು. ಇದಲ್ಲದೆ, ನ್ಯೂಯಾರ್ಕನ್ನು ಸ್ಯಾನ್‌ಫ್ರ್ಯಾನ್ಸಿಸ್ಕೋವಿಗೂ, ಅಲ್ಲಿಂದ ಮುಂದೆ ಸ್ಯಾನ್‌ಫ್ರ್ಯಾನ್ಸಿಸ್ಕೋವಿನಿಂದ ಪೆಸಿಫಿಕ್ ಸಾಗರದ ಮುಖಾಂತರ ಹವಾಯ್ ಮತ್ತು ಫಿಲಿಫೈನ್ಸ್ ದ್ವೀಪಗಳಿಗೂ, ಅಲ್ಲಿಂದ ಹಾಂಗ್–ಕಾಂಗ್ ಮತ್ತು ಚೀಣಾವಿಗೂ ಕೂಡಿಸುವ ಮಾರ್ಗವಿದೆ. ನ್ಯೂಯಾರ್ಕಿಗೂ ಇಂಗ್ಲೆಂಡಿಗೂ ನಡುವೆ ಉತ್ತರ ಅಟ್ಲಾಂಟಿಕ್ ಸಾಗರದ ಮೇಲೆ ಇನ್ನೊಂದು ಮುಖ್ಯ ಆಕಾಶ ಮಾರ್ಗವಿದೆ. ನೆಲದ ಮೇಲ್ಗಡೆಯ ಮಾರ್ಗಗಳಲ್ಲಿ ಅತ್ಯಂತ ಉದ್ದವಾದದ್ದು ಬರ್ಲಿನ್ ನಗರವನ್ನು ಮಾಸ್ಕೋ ನಗರಕ್ಕೆ ಕೂಡಿಸಿ, ಇನ್ನೂ ಮುಂದೆ ಸೈಬೀರಿಯಾದ ಪೂರ್ವದ ಕೊಟ್ಟ ಕೊನೆಯ ವ್ಲಾಡಿವೊಸ್ಟಾಕ್ ನಗರಕ್ಕೆ ಸಂಬಂದಿಸಿದೆ. ಹೀಗೆ, ಪ್ರಪಂಚದ ಮೇಲಿನ ಅತ್ಯಂತ ದೂರದ ಮೂಲೆ ಮೂಲೆಗಳಿಗೆಲ್ಲ ಪರಸ್ಪರ ಸಂಬಂಧ ಕಲ್ಪಿಸಿದೆ.

ಇಂಡಿಯದಲ್ಲಿ ಆಕಾಶ ಸಂಚಾರ

ದೆಹಲಿಯನ್ನು ಕಲ್ಕತ್ತದೊಡನೆ ಕೂಡಿಸುವ 'ಬ್ರಿಟಿಷ್ ಓವರ್‌ಸೀಸ್ ಏರ್‌ವೇಸ್' ಎಂಬ ಮಾರ್ಗವಲ್ಲದೆ, 'ತಾತಾ ಏರ್‌ವೇಸ್' (ತಾತಾ ಆಕಾಶ ಮಾರ್ಗಗಳು), 'ದಿ ಇಂಡಿಯನ್ ಟ್ರ್ಯಾನ್ಸ್ ಕಾಂಟಿನೆಂಟಲ್ ಏರ್‌ವೇಸ್', (ಇಂಡಿಯದ ಖಂಡಾಂತರ ಆಕಾಶಮಾರ್ಗಗಳು), 'ದಿ ಇಂಡಿಯನ್ ನ್ಯಾಷನಲ್ ಏರ್‌ವೇಸ್' (ಇಂಡಿಯದ ರಾಷ್ಟ್ರೀಯ ಆಕಾಶ ಮಾರ್ಗಗಳು) ಎಂಬ ಮೂರು ಮುಖ್ಯ ಆಕಾಶಮಾರ್ಗಗಳಿವೆ. ಇವೆಲ್ಲವೂ ತಮ್ಮ ಮಾರ್ಗಗಳಲ್ಲಿ ಅಂಚೆಯನ್ನು ಒಯ್ಯುವುದರ ಜೊತೆಗೆ ಪ್ರಯಾಣಿಕರನ್ನೂ ಒಯ್ಯುತ್ತವೆ. 'ದಿ ತಾತಾ ಏರ್‌ವೇಸ್' ಕರಾಚಿಯನ್ನು,– ಭೂಜ್, ಅಹಮದಾಬಾದು, ಬೊಂಬಾಯಿ, ಹೈದರಾಬಾದು, ಮದರಾಸು, ತಿರುಚನಾಪಲ್ಲಿ– ಇವುಗಳ ಮಾರ್ಗವಾಗಿ ಕೊಲಂಬೋವಿಗೆ ಕೂಡಿಸುತ್ತದೆ. ಈ ಮಾರ್ಗವಿರುವುದರಿಂದ, ಈ ನಗರಗಳಿಗೂ ಬ್ರಿಟಿಷ್ ಓವರ್‌ಸೀಸ್ ಮಾರ್ಗಕ್ಕೂ ಪೂರ್ವ ಪಶ್ಚಿಮಗಳೆರಡು ಕಡೆಯೂ ನೇರವಾದ ಆಕಾಶ ಮೂಲಕ ಸಂಬಂಧ ಕಲ್ಪಿತವಾಗಿದೆ. ಇವುಗಳ ಜೊತೆಗೆ, ಇಂದೂರ್, ಭೂಪಾಲ್, ಗ್ವಾಲಿಯರ್– ಇವುಗಳ ಮಾರ್ಗವಾಗಿ ಬೊಂಬಾಯಿನಿಂದ ದೆಹಲಿಗೂ, ಮಲಬಾರು ತೀರದ ಉದ್ದಕ್ಕೆ ಗೋವ, ಕ್ಯಾನನೂರ್ ಮಾರ್ಗವಾಗಿ ಬೊಂಬಾಯಿನಿಂದ ತಿರುವನಂತಪುರಕ್ಕೂ ಕ್ಲುಪ್ತಕಾಲದ ಪ್ರಯಾಣದ ಏರ್ಪಾಡನ್ನು ಅವರು ನಡಸುತ್ತಾರೆ. ದಿ ಇಂಡಿಯನ್ ನ್ಯಾಷನಲ್ ಏರ್‌ವೇಸ್‌ನವರು ಲಾಹೋರಿನಿಂದ ದೆಹಲಿಗೂ, ದೆಹಲಿಯಿಂದ ಕರಾಚಿಗೂ ಎರಡು ಪ್ರಯಾಣಗಳ ಏರ್ಪಾಡನ್ನು ನಡಸುತ್ತಾರೆ. ದಿ ಇಂಡಿಯನ್ ಟ್ರ್ಯಾನ್ಸ್ ಕಾಂಟಿನೆಂಟಲ್ ಏರ್‌ವೇಸ್‌ನವರು ಕರಾಚಿಯಿಂದ ಕಲ್ಕತ್ತಕ್ಕೆ ಪ್ರಯಾಣದ ಏರ್ಪಾಡನ್ನು ಇಟ್ಟಿದ್ದಾರೆ. ಈ ಮಾರ್ಗಗಳು ಆಕಾಶ ಪ್ರಯಾಣ ಮಾಡುವುದಕ್ಕೆ ಬಹಳ ಜನಪ್ರಿಯವಾಗಿದ್ದರೂ ಸಂಚಾರದ ಖರ್ಚು ಮಿತಿಮೀರಿ ಹೆಚ್ಚಾಗಿರುವುದರಿಂದ ಜನಸಾಮಾನ್ಯನ ಬಹುಮಂದಿಗೆ ಅವು ಉಪಯೋಗಕರವಾಗಲಾರವು.

ಕೆಲವು ಮುಖ್ಯ ಅಗ್ರಗಾಮಿ ಹಾರಿಕೆಗಳು

ವಾಯುಮಂಡಲದ ದಿಗ್ವಿಜಯಕ್ಕೆ ಸಾಧಕಗಳಾದ ಕೆಲವು ಅಗ್ರಗಾಮಿ ಹಾರಿಕೆಗಳ ಸಂಕ್ಷೇಪ ಉಲ್ಲೇಖವನ್ನು ಮುಂದೆ ಕೊಟ್ಟಿದೆ. ಪ್ರತಿಯೊಂದು ವಿಶೇಷ ರೀತಿಯ ಹಾರಿಕೆಯನ್ನೂ ಈಗ ಸಾಧಿಸಿಯಾಗಿದೆ. ಪ್ರಪಂಚದ ಅತ್ಯುನ್ನತ ಪರ್ವತದ ಮೇಲೆ ಹಾರಿದೆ. ಪ್ರತಿ ಸಾಗರವನ್ನೂ ದಾಟಿ, ಮರಳಿ ದಾಟಿದೆ. ಪ್ರಪಂಚದ

ರಾಜಧಾನಿ ನಗರಗಳಲ್ಲಿ ಆಕಾಶಮಾರ್ಗದ ಮೂಲಕ ಪರಸ್ಪರ ಸಂಬಂಧ ಹೊಂದಿಲ್ಲದ ಎರಡು ರಾಜಧಾನಿಗಳು ಯಾವುವೂ ಇಲ್ಲ. ಉತ್ತರಧ್ರುವ ಸಮುದ್ರವೂ ದಕ್ಷಿಣ ಧ್ರುವ ಸಮುದ್ರವೂ ವಿಮಾನದೆಂಜಿನ್ನಿನ ಘೋರ್ಗರೆತಕ್ಕೆ ಮಾರ್ದನಿಗೊಟ್ಟಿವೆ. ಆದ್ದರಿಂದ, ಈ ಸಂದರ್ಭದಲ್ಲಿ, ಈ ಅಸಾಧಾರಣ ಸಾಹಸಕಾರ್ಯಗಳನ್ನು ಮೊದಲು ಸಾಧಿಸಿದವರು ಯಾರು, ಹೇಗೆ ಸಾಧಿಸಿದರು ಎಂಬುದನ್ನು ತಿಳಿದುಕೊಳ್ಳುವುದು ಸ್ವಾರಸ್ಯಕರವಾಗಿದೆ.

ಮೊದಲ ಬಾರಿಯ ಭೂಮಿಸುತ್ತಣ ಹಾರಿಕೆಗಳು

ಹಿಂದಿನಿಂದಲೂ ಅನೇಕ ಮಂದಿ ವಾಯುನಾವಿಕರು ಭೂಮಿಯ ಸುತ್ತ ಹಾರಲು ಪ್ರಯತ್ನಿಸುತ್ತಿದ್ದರೂ, ಅನೇಕ ಅಡಚಣೆಗಳುಂಟಾದದ್ದರಿಂದ ಪ್ರಯತ್ನಗಳನ್ನು ಬಿಡಬೇಕಾಯಿತು. ಹಾಗಾದರೂ, ೧೯೨೪ರಲ್ಲಿ ನಾಲ್ಕು ಡಗ್ಲಾಸ್ (Douglas) ವಾಯುಯಾನಗಳು ಮೊದಲಸಲ ಭೂಮಿಯ ಸುತ್ತ ಯಶಸ್ವಿಯಾಗಿ ಹಾರಿದುವು. ಈ ಯಾತ್ರೆಯಲ್ಲಿ ಮೇಜರ್ ಪಿ.ಎಲ್. ಮಾರ್ಟಿನ್ (Martin), ಲೆಫ್ಟಿನೆಂಟರುಗಳಾದ ಲೋಎಲ್ (Lowell), ಸ್ಮಿತ್ (Smith), ಲೀವೇಡ್ (Leighwade), ಇ.ಎಚ್.ನೆಲ್ಸನ್ (Nelson), ಎಲ್.ಎಲ್.ಆರ್ನಲ್ಡ್ (Arnold) ಮತ್ತು ಇತರರು ಇದ್ದರು. ಹಾರಿಕೆ ಏಪ್ರಿಲ್ ೬ರಲ್ಲಿ ಸಿಯಟ್‌ಲ್(Seattle)ನಲ್ಲಿ ಪ್ರಾರಂಭವಾಗಿ ಜಪಾನ್, ಇಂಡಿಯಾ, ಯೂರೋಪ್, ಸ್ಕಾಟ್ಲೆಂಡ್, ಐಸ್ಲೆಂಡ್, ಗ್ರೀನ್‌ಲಂಡ್– ಇವುಗಳ ಮಾರ್ಗವಾಗಿ ಮತ್ತೆ ಸಿಯಟ್‌ಲ್‌ನಲ್ಲಿ ಕೊನೆಗೊಂಡಿತು. ಹಾರಿಕೆ ೧೭೪ ದಿನಗಳಾದ ಮೇಲೆ ಸೆಪ್ಟೆಂಬರ್ ೨೦ರಲ್ಲಿ ಮುಗಿಯಿತು.

ಮೊದಲಸಲ ಭೂಮಿಯಸುತ್ತ ಹಾರಿದ ವಾಯುಹಡಗು ಎಂದರೆ ಗ್ರಾಫ್ ಜೆಪ್ಲಿನ್; ಇದರ ನಾಯಕರು ಡಾ॥ ಅಕ್ನರ್ (Ackner), ಇವರು ೧೯೨೯ರ ಆಗಸ್ಟ್ ೮ರಲ್ಲಿ ಲೇಕ್‌ಹರ್‌ಸ್ಟ್ (Lakehurst) ಬಿಟ್ಟು, ಟೋಕಿಯೊ (Tokio) ಮತ್ತು ಲಾಸ್ ಆ್ಯಂಜೆಲೆಸ್ (Los Angeles) ಮಾರ್ಗವಾಗಿ ಹಾರಿ, ಅದೇ ತಿಂಗಳು೨೯ಕ್ಕೆ ಲೇಕ್‌ಹರ್‌ಸ್ಟಿಗೆ ಹಿಮ್ಮರಳಿ, ಒಟ್ಟು ಪ್ರಯಾಣವನ್ನು ೨೧ ದಿನಗಳಲ್ಲಿ ಮುಗಿಸಿದರು. ೧೯೩೩ರ ಜುಲೈ ತಿಂಗಳಲ್ಲಿ ವಿಲೀ ಪೋಸ್ಟ್ (Wiley Post) ಎಂಬಾತನು ಲಾಕ್‌ಹೀಡ್ (Lockheed) ಏಕಫಲಕ ವಿಮಾನದಲ್ಲಿ (Mono-plane) ಮೊದಲ ಸಲ ಭೂಮಿಯ ಸುತ್ತ ತನಿಯಾಗಿ ಹಾರಿದನು. ಅವನು ೭ ದಿನ ೧೮ ಗಂಟೆಗಳಲ್ಲಿ ಪ್ರಯಾಣವನ್ನು ಮುಗಿಸಿದನು. ಈ ಪ್ರಯಾಣ ನ್ಯೂಯಾರ್ಕಿನಿಂದ ಮೊದಲಾಗಿ, ಅಟ್ಲಾಂಟಿಕ್ ಸಾಗರದ ಮೇಲೆ ಬರ್ಲಿನ್,

ಮಾಸ್ಕೊ, ಇರ್‌ಕೋಲ್ಸ್ಕ್ (Irkoulsk), ಕಾಬಾರೊಫ್ಸ್ಕ್ (Khabarovsk) ಮತ್ತು ಫೇರ್‌ಬಾಂಕ್ಸ್ ಮಾರ್ಗವಾಗಿ ಸಾಗಿ ಮತ್ತೆ ನ್ಯೂಯಾರ್ಕಿನಲ್ಲಿ ಕೊನೆಗೊಂಡಿತು.

ಉತ್ತರಧ್ರುವಕ್ಕೆ ಹಾರಿಕೆಗಳು

ಉತ್ತರಧ್ರುವದ ಮೇಲೆ ಮೊದಲನೆಯ ಸಲ ೧೯೨೬ರಲ್ಲಿ ಫಾಕರ್ F VII (Fokker F VIII) ವಿಮಾನದಲ್ಲಿ ಹಾರಲಾಯಿತು; ನಾಯಕರಾಗಿದ್ದವರು ರಿಚರ್ಡ್ ಬರ್ಡ್ (Richard Byrd) ಮತ್ತು ಫ್ಲಾಯ್ಡ್ ಬೆನೆಟ್ (Floyd Bennet). ಮೇ ೯ರಲ್ಲಿ ಸ್ಪಿಟ್ಸ್‌ಬರ್ಗ್‌ನಿಂದ (Spitsbergh) ಹಾರಿಸಿ ಹೊರಟಲಾಗಿ, ಉತ್ತರಧ್ರುವದ ಮೇಲೆ ಪ್ರಯಾಣ ಮಾಡಿ, ಹಿಂದಿರುಗಲಾಯಿತು.

ದಕ್ಷಿಣಧ್ರುವದ ಮೇಲೆ ಮೊದಲ ಸಲ ೧೯೨೯ರಲ್ಲಿ ಫೋರ್ಡ್ ಏಕಫಲಕ ವಿಮಾನದಲ್ಲಿ ಹಾರಲಾಯಿತು. ನಡಸುವವರ ತಂಡದಲ್ಲಿ ನಾಯಕ ಬರ್ಡ್ ಎಂಬಾತನೂ ಆತನ ಜೊತೆಯವರೂ ಇದ್ದರು. ಅವರು ಲಿಟ್‌ಲ್ ಅಮೆರಿಕದಿಂದ (Little America) ಹಾರಿಕೆ ಮೊದಲುಮಾಡಿ, ದಕ್ಷಿಣ ಧ್ರುವ ಸಮುದ್ರ ಪ್ರದೇಶಗಳ ಮೇಲಿನಿಂದ ದಕ್ಷಿಣಧ್ರುವಕ್ಕೆ ಹಾರಿ, ಮರುದಿನವೇ ಹಿಂದಿರುಗಿದರು.

ಅಟ್ಲಾಂಟಿಕ್ ಸಾಗರವನ್ನು ದಾಟಿದ್ದು

ವಿಮಾನದ ಬರವಿನಿಂದ ಸಾಗಣೆಯಲ್ಲುಂಟಾದ ಕ್ರಾಂತಿಯ ಪೂರ್ಣಪ್ರಮಾಣಕ್ಕೆ ಈ ಅಂಶವನ್ನು ನಿದರ್ಶನವಾಗಿ ಹೇಳಬಹುದು: ಸಾವಿರಾರು ಮೈಲಿಗಳ ವಿಸ್ತಾರದ ಅಟ್ಲಾಂಟಿಕ್ ಸಾಗರವನ್ನು ದಾಟುವ ಸಾಹಸ ಮಾಡಿದವರಿಗೂ ೨೦ ಮೈಲಿಗಳ ಅಗಲದ ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಲಾಗುವುದೋ ಇಲ್ಲವೋ ಎಂದು ತತ್ತರಿಸುತ್ತ ಇದ್ದವರಿಗೂ ನಡುವಣ ಕಾಲದ ಅಂತರ ಹತ್ತು ವರ್ಷಗಳು ಮಾತ್ರ. ಈ ಅತ್ಯಲ್ಪ ಕಾಲಾವಧಿಯಲ್ಲಿ ಹಿಕ್ಸ್ (Hicks), ಗ್ರಾಂ ವೈಟ್ (Gram White) ಮತ್ತು ಹ್ಯಾಮೆಲ್ (Hamel) ಮುಂತಾದವರು ಹಾರಿಸಿದ, ಹುರುಳಿಲ್ಲದ ಕೆಲಸಕ್ಕೆ ಬಾರದ ಸಣ್ಣ ಯಾನಗಳೇ ದಾಟಲು ಹೆದರುತ್ತಿದ್ದ ಉತ್ತರ ಅಟ್ಲಾಂಟಿಕ್ ಸಾಗರವನ್ನು ಸಹ ದಾಟಲು ತಕ್ಕ ನಿಜವಾದ ಹಾರುಯಂತ್ರಗಳಾಗಿ ಪರಿಣಮಿಸಿದುವು. ಹಿಂದಿನ ನಾಲ್ಕು ಪ್ರಯತ್ನಗಳು ನಿಷ್ಫಲವಾಗಿದ್ದರೂ, ಬ್ರಿಟಿಷ್ ಸೈನ್ಯಾಧಿಕಾರಿಗಳಾದ ಕ್ಯಾಪ್ಟನ್ ಆಲ್‌ಕಾಕ್ (Alcock) ಮತ್ತು ವಿಮಾನ ಸಾರಥಿ ಲೆಫ್ಟಿನೆಂಟ್ ಆರ್ತರ್ ವಿಟ್‌ನ್ ಬ್ರೌನ್ (Arthur

Whitten Brown) ಎಂಬವರು ಸಾಗರವನ್ನು ದಾಟುವುದರಲ್ಲಿ ಜಯಶೀಲರಾದರು. ಅವರು ೧೯೧೯ರ ಜೂನ್ ೧೪ರಲ್ಲಿ ನ್ಯೂಫೌಂಡ್‌ಲೆಂಡಿನ ಸೆಂಟ್‌ಜಾನ್ಸ್ ಎಂಬಲ್ಲಿ Vickers "Vimy" (ವಿಕರ್ಸ್ ವಿಮಿ) ಎಂಬ ದ್ವಿಫಲಕ ವಿಮಾನವನ್ನು (Biplane) ಏರಿ, ೧೫ ಗಂಟೆ ೧೫ ನಿಮಿಷಗಳ ತರುವಾಯ ಕ್ಲಿಫ್‌ಡೆನ್ ಗಾಲ್‌ವೇ (Clifden Galway) ಬಳಿ ಜೌಗು ಭೂಮಿಯಲ್ಲಿ ಇಳಿದರು. ಆ ದೊಡ್ಡ ವಿಮಾನ ಮೆತುವಾದ ನೆಲದಲ್ಲಿ ತನ್ನ ಮೂಗಿನ ಮೇಲೆ ಮೆಲ್ಲನೆ ಇಳಿಯಿತು. ಈ ಸಣ್ಣ ದುರ್ಘಟನೆಯಿಂದ ಹಾರುವವರು ಲಂಡನ್ನಿಗೆ ಮುಂದುವರಿಯಲಾಗಲಿಲ್ಲ. ಆದರೆ ಈ ಅಂಶ, ಮೊದಲ ಸಲ ಹಾರು ಯಂತ್ರವೊಂದು ಅಟ್ಲಾಂಟಿಕ್ ಸಾಗರದ ಭೀಕರ ವಿಸ್ತಾರದ ಈ ಕೊನೆಯಿಂದ ಆ ಕೊನೆಗೆ ನಡುವೆ ನಿಲ್ಲದೆ ಹಾರಿತೆಂಬ ಕೀರ್ತಿಯನ್ನು ಮಸುಳಿಸುವುದಿಲ್ಲ. ೧೮೯೦ ಮೈಲಿಗಳ ಈ ದಾಟುವಿಕೆಯನ್ನು ಗಂಟೆಗೆ ೧೧೮ ಮೈಲಿಗಳ ಸರಾಸರಿ ವೇಗದಲ್ಲಿ ಮುಗಿಸಲಾಯಿತು; ಮತ್ತು, ಇದು ಸುಮಾರು ೧೩ ವರ್ಷ ಕಾಲ ಅತ್ಯಂತ ವೇಗದ ಸಾಗರ ದಾಟುವಿಕೆಯಾಗಿ ಉಳಿದು ಬಂತು. ಅಂದಿನಿಂದ ಎಂಟು ವರ್ಷಗಳವರೆಗೂ ಯಾವ ವಿಮಾನಗಾಮಿಯೂ ವಿಮಾನದ ಮೂಲಕ ಸಾಗರವನ್ನು ದಾಟುವುದರಲ್ಲಿ ಯಶಸ್ವಿಯಾಗಿರಲಿಲ್ಲ; ಇದು ಮೇಲ್ಕಂಡ ಸಾಹಸ ಕಾರ್ಯದ ಅಗ್ಗಳಿಕೆಯನ್ನು ಹೆಚ್ಚಿಸುತ್ತದೆ.

೧೯೧೯ರಲ್ಲಿ ದಳನಾಯಕ (Squadron leader) ಸ್ಕಾಟ್ ಎಂಬಾತನು ೩೦ ಮಂದಿಯನ್ನೊಳಕೊಂಡ ವಿಮಾನ ನಡಸುವವರ ತಂಡದೊಡನೆ ಅಟ್ಲಾಂಟಿಕ್ ಸಾಗರವನ್ನು R ೩೪ ವಾಯುಹಡಗಿನಲ್ಲಿ ಇಮ್ಮಡಿ ದಾಟಿದನು. ಅಟ್ಲಾಂಟಿಕ್ ಸಾಗರವನ್ನು ಎರಡು ಬಾರಿ, ಅದರಲ್ಲೂ ವಾಯು ಹಡಗಿನಲ್ಲಿ, ದಾಟಿದ್ದು ಇದೇ ಮೊದಲು. ಅವನು ಸ್ಕಾಟ್ಲೆಂಡಿನ ಈಸ್ಟ್ ಫಾರ್ ಟ್ಯುನ್ (East Fortune) ಎಂಬಲ್ಲಿಂದ ಮೊದಲು ಮಾಡಿ ನ್ಯೂಯಾರ್ಕಿಗೆ ಹಾರಿದನು; ಹೀಗೆ ೩,೬೦೦ ಮೈಲಿಗಳನ್ನು ೧೦೮ ಗಂಟೆಗಳಲ್ಲಿ ಹಾರಿದನು. ನ್ಯೂಯಾರ್ಕನ್ನು ತಲುಪಿದ ಮೂರು ದಿನಗಳ ತರುವಾಯ, ಆ ನಗರದ ಮೇಲೆ ಗೆಲುವುಗೂಡಿ ಮೆರೆದು ಹಾರಾಡಿದ ಬಳಿ, R ೩೪ ವಾಯು ಹಡಗು ಹಿಮ್ಮರಳುವ ಪ್ರಯಾಣಕ್ಕಾಗಿ ಮತ್ತೆ ಮೇಲೇರಿತು. ಮೊದಲಿಗಿಂತ ಸ್ವಲ್ಪ ಹೆಚ್ಚು ನಿಡಿದಾದ ಹಾದಿ ಹಿಡಿದು, ಈ ವಾಯುಹಡಗು ೭೫ ಗಂಟೆಗಳಲ್ಲಿ ೩,೮೦೦ರವರೆಗೆ ಯಾರೂ ಮೀರಿಸಲಿಲ್ಲ; ೧೯೨೮ರಲ್ಲಿ ಡಾ॥ ಅಕ್ನರ್ ಅವರ ನಾಯಕತ್ವದಲ್ಲಿ ಗ್ರಾಫ್ ಜೆಪ್ಲಿನ್ ಈ ಪ್ರಯಾಣವನ್ನು ಮಾಡಿತು.

ಒಬ್ಬ ಹೆಂಗಸು ಮೊದಲ ಸಲ ತನಿಯಾಗಿ ದಾಟಿದ್ದು

ಮಿಸ್ ಅಮಿಲಿಯ ಇಯರ್‌ಹಾರ್ಟ್ ಎಂಬ ಅಮೆರಿಕಾ ದೇಶದ ಹೆಂಗಸು ೧೯೩೨ರಲ್ಲಿ "ಲಾಕ್‌ಹೀಡ್ ವೇಗ" (Lockheed Vega) ಎಂಬ ವಿಮಾನದಲ್ಲಿ ಮೊದಲನೆಯ ಸಲ ಒಂಟಿಯಾಗಿ ಒಂದೇ ದಿನದಲ್ಲಿ ಹಾರಿದಳು. ಆಕೆ ನ್ಯೂಯಾರ್ಕಿನಲ್ಲಿ ಪ್ರಯಾಣವನ್ನು ಮೊದಲು ಮಾಡಿ, ಐರ್ಲೆಂಡಿನಲ್ಲಿ ಬಂದಿಳಿದಳು.

ಫೆಸಿಫಿಕ್ ಸಾಗರ ದಾಟಿದ್ದು

ಮೇಜರ್ ಪಿ.ಎಲ್.ಮಾರ್ಟಿನ್ ಮತ್ತು ಜೊತೆಯ ವಿಮಾನ ನಡಸುವ ತಂಡದವರು ಭೂಮಿಯ ಸುತ್ತ ಹಾರಿದಾಗ ಅದರ ಒಂದು ಮಜಲಾಗಿ, ೧೯೨೪ರಲ್ಲಿ ಮೊದಲಸಲ ಪೆಸಿಫಿಕ್ ಸಾಗರದ ಮೇಲೆ ಹಾರಿದರು. ಈ ಹಾರಿಕೆಯ ವಿವರಗಳನ್ನು ಭೂಮಿಯ ಸುತ್ತಣ ಹಾರಿಕೆಗಳ ನಿರೂಪಣೆಯಲ್ಲಿ ಕೊಟ್ಟಿದೆ. ೧೯೩೫ರಲ್ಲಿ ಪೆಸಿಫಿಕ್ ಸಾಗರವನ್ನು ದಾಟಿದ ಮೊದಲ ಹೆಂಗಸು ಮಿಸ್ ಇಯರ್‌ಹಾರ್ಟಳೆ. ಈಕೆ ತನ್ನ "ಲಾಕ್‌ಹೀಡ್ ವೇಗ" ವಿಮಾನದಲ್ಲಿ ಹಾನೊಲುಲುವಿನಿಂದ (Honolulu) ಹಾರಿ ಕ್ಯಾಲಿಫೋರ್ನಿಯದ ಓಕ್‌ಲೆಂಡಿನಲ್ಲಿಳಿದಳು.

ಇಂಗ್ಲೆಂಡಿನಿಂದ ಇಂಡಿಯಕ್ಕೆ ಹಾರಿಕೆಗಳು

ಇಂಡಿಯಕ್ಕೆ ಮೊದಲ ಸಲ ೧೯೧೮ರಲ್ಲಿ ದಳನಾಯಕ ಎ.ಸಿ.ಎಸ್. ಮೆಕಾಲೀನ್ (Mclean) ಮತ್ತು ಜೊತೆಯ ವಿಮಾನ ನಡಸುವ ತಂಡದವರು ಹಾರಿದರು. ಅವರು ಮಾರ್ಲ್‌ಷಮ್‌ಹೀತ್ ಎಂಬಲ್ಲಿಂದ 'ಹ್ಯಾಂಡ್ಲಿ ಪೇಜ್' ಎಂಬ ಬಾಂಬರ್ ವಿಮಾನದಲ್ಲಿ ಹೊರಟು ಜನವರಿಯಲ್ಲಿ ದೆಹಲಿಯನ್ನು ತಲುಪಿದರು.

ಇಂಗ್ಲೆಂಡಿಗೂ ಇಂಡಿಯಕ್ಕೂ ಹಾರುವ ಮೊದಲನೆಯ ಭಾರತೀಯ ವಿಮಾನ ನಡಸುವವನಿಗೆ ಕೊಡಲು ಇಂಡಿಯಾ ಸರಕಾರದವರು ಇಟ್ಟಿದ್ದ ೫೦೦ ಗಿನಿಗಳ ಬಹುಮಾನವನ್ನು ಶ್ರೀ ರಾಮನಾಥ್ ಚಾಲೆ ಮತ್ತು ಶ್ರೀ ಎಸ್.ಪಿ.ಎಂಜಿನಿಯರ್ ಎಂಬ ಇಬ್ಬರು ಭಾರತೀಯ ವೈಮಾನಿಕರು ೧೯೩೦ನೆಯ ಮಾರ್ಚಿಯಲ್ಲಿ ಪಡೆದರು. ಅವರು ಮಾರ್ಚಿ ೩ರಿಂದ ೨೧ರವರೆಗಿನ ಅವಧಿಯಲ್ಲಿ ಕರಾಚಿಯಿಂದ ಕ್ರಾಯ್‌ಡಾನಿಗೆ 'ಜಿಪ್ಸಿ ಮಾತ್' (Gipsy Moth) ಎಂಬ ದ್ವಿಫಲಕ ವಿಮಾನದಲ್ಲಿ ಹಾರಿದರು. ಅದೇ ವರ್ಷ ಏಪ್ರಿಲ್‌ನಲ್ಲಿ ಶ್ರೀ

ಎಂಜಿನಿಯರ್, ಆಘಾಖಾನರು ಇಟ್ಟಿದ ಬಹುಮಾನವೊಂದನ್ನು ಗೆಲ್ಲುವುದಕ್ಕಾಗಿ ಇಂಡಿಯಕ್ಕೆ ಮರಳಿ ಹಾರಿದರು; ಆದರೆ ಎಂಜಿನಿಯರ್ ಹೊರಟ ೯ ದಿನಗಳ ಮೇಲೆ ಕ್ರಾಯ್‌ಡಾನ್ ಬಿಟ್ಟು ಆತನಿಗಿಂತ ಒಂದು ದಿನ ಮಾತ್ರ ತಡವಾಗಿ ಕರಾಚಿಯನ್ನು ಮುಟ್ಟಿದ ಶ್ರೀ ಜೆ.ಆರ್.ಡಿ. ತಾತಾ ಎಂಬವರು ಆ ಬಹುಮಾನವನ್ನು ಗೆದ್ದರು.

ಇಂಗ್ಲೆಂಡ್–ಆಸ್ಟ್ರೇಲಿಯಾ ಹಾರಿಕೆಗಳು

ಇಂಗ್ಲೆಂಡಿನಿಂದ ಆಸ್ಟ್ರೇಲಿಯಾಕ್ಕೆ ಮೊದಲನೆಯ ಸಲ ೧೯೧೯ರಲ್ಲಿ (ಲಂಡನ್ನಿನ) ಹೇಸ್ಟನ್ನಿನಿಂದ ಡಾರ್‌ವಿನ್ ಬಂದರಿಗೆ ಹಾರಲಾಯಿತು. ಈ ಹಾರಿಕೆಯನ್ನು ಕ್ಯಾಪಟನ್ ರಾಸ್‌ಸ್ಮಿತ್ ಮತ್ತು ಜೊತೆಯ ವಿಮಾನ ನಡಸುವ ತಂಡದವರು 'ವಿಕರ್ಸ್ ವಿಮಿ' ವಿಮಾನದಲ್ಲಿ ಮಜಲುಗಳಲ್ಲಿ ಹಾರಿದರು. ಈ ಹಾರಿಕೆಗೆ ೪ ವಾರ, ೩ ದಿನ ಹಿಡಿಯಿತು. ಮೇ ೧೯೩೦ರಲ್ಲಿ ಮಿಸ್ ಏಮಿ ಜಾನ್‌ಸನ್ (Miss Amy Johnson) ಎಂಬಾಕೆ ಒಂಟಿಯಾಗಿ ಆಸ್ಟ್ರೇಲಿಯಕ್ಕೆ ಹಾರಿದ್ದು ಪ್ರಪಂಚದಲ್ಲೆಲ್ಲ ಉತ್ಸಾಹ ಹುಟ್ಟಿಸಿತು. 'ಷಾರ್ಟ್‌ಹ್ಯಾಂಡ್ ಟೈಪಿಸ್ಟ್' ಆಗಿ ಕೆಲಸ ಮಾಡುತ್ತ, ಹಾರುವ ಶಿಕ್ಷಣ ಪಡೆಯುವುದಕ್ಕಾಗಿ ತಕ್ಕಷ್ಟು ಹಣ ಕೂಡಿಟ್ಟು ಕೊಂಡಿದ್ದ ಹುಡುಗಿಯೊಬ್ಬಳು ಕೆಲವು ದಿನಗಳಲ್ಲಿ ಅಂತರರಾಷ್ಟ್ರೀಯ ವೀರನಾರಿ ಎನ್ನಿಸಿಕೊಂಡಳು. ಅವಳು ಮೇ ೫ರ ಮುಂಜಾನೆ ಕ್ರಾಯ್‌ಡಾನನ್ನು ಬಿಟ್ಟಳು. ಮೊದಲನೆಯ ದಿನವೇ ಅವಳು ವಿಯೆನ್ನಾ ನಗರವನ್ನು ಸೇರಿದ್ದು ಕೆಲವರಲ್ಲಿ ಆಸಕ್ತಿ ಹುಟ್ಟಿಸಿತು. ಬಳಿಕ, ಮೇ ೧೦ರಲ್ಲಿ ಕರಾಚಿಯಲ್ಲಿಳಿದು, ಹಗುರ ವಿಮಾನ ವೊಂದರಲ್ಲಿ ೬ ದಿನಗಳಲ್ಲೆ ಇಂಡಿಯಕ್ಕೆ ಹಾರಿದ ಪರಮಾವಧಿಯನ್ನು (Record) ಸ್ಥಾಪಿಸಿದಳು. ಎರಡು ದಿನಗಳ ತರುವಾಯ ಅವಳು ಕಲ್ಕತ್ತದಲ್ಲಿದ್ದಳು; ಆಮೇಲೆ ಸಿಂಗಪುರವನ್ನು ಸೇರಿದಳು. ಕಡೆಯ ಮಜಲುಗಳಲ್ಲಿ ಅದೃಷ್ಟ ಅವಳಿಗೆ ಪ್ರತಿಕೂಲವಾಗಿತ್ತು; ಹಿಂದೆ ಸ್ಥಾಪಿಸಿದ್ದ ಪರಮಾವಧಿಯನ್ನು ಅವಳು ಮೀರಿಸಲಾರದೆ ಹೋದಳು; ಲಂಡನ್ನನ್ನು ಬಿಟ್ಟ ೧೯ ದಿನಗಳ ಮೇಲೆ ಮೇ ೨೪ರಲ್ಲಿ ಅವಳು ಡಾರ್‌ವಿನ್ ಬಂದರನ್ನು ತಲುಪಿದಳು. ಅವಳದ್ದು ಮಹಾಸಾಧನೆ; ಅವಳ ಮೇಲೆ ಮಳೆಗರೆದ ಹೊಗಳಿಕೆಗಳಿಗೂ ಬಹುಮಾನಗಳಿಗೂ ಅವಳು ನಿಜವಾಗಿಯೂ ಅರ್ಹಳು.

ಇಂಗ್ಲೆಂಡಿನಿಂದ ಆಫ್ರಿಕಕ್ಕೆ ಹಾರಿಕೆಗಳು

೧೯೨೦ರಲ್ಲಿ ಕರ್ನಲ್ ಪಿಯೆರ್ (Col. pierre) ಮತ್ತು ಇತರರು 'ವಿಕರ್ಸ್ ವಿಮಿ' ವಿಮಾನದಲ್ಲಿ ಮೊದಲ ಸಲ ಲಂಡನ್ನಿನಿಂದ ಕೇಪ್‌ಟೌನಿಗೆ ಹಾರಿದರು. ೮,೫೦೦ ಮೈಲಿಗಳ ಈ ಪ್ರಯಾಣವನ್ನು ೪ ದಿನ ೧೩ವರೆ ಗಂಟೆಗಳೊಳಗಾಗಿ ಮಾಡಲಾಯಿತು. ಫೆಬ್ರುವರಿ ೧೨ರಲ್ಲಿ ಲೇಡಿ ಹೀತ್ ಎಂಬಾಕೆ ಕೇಪ್‌ಟೌನಿನಿಂದ ಆವ್ರೊ ಏವಿಯನ್ ('Avro Avian') ಎಂಬ ವಿಮಾನದಲ್ಲಿ ಒಬ್ಬಳೇ ಹಾರಿ ಇಂಗ್ಲೆಂಡು ಸೇರಿದಳು. ಈ ಹಾರಿಕೆಯನ್ನು ಹಾರಿದವರಲ್ಲಿ ಈಕೆಯೇ ಮೊದಲನೆಯ ಸ್ತ್ರೀ ವಿಮಾನ ಸಾರಥಿ.

* * * *

ಪ್ರಕರಣ ೬

ಸಾಗಣೆ

ವಿಮಾನ ಮೊದಲು ನಿರ್ಮಾಣವಾದಂದಿನಿಂದ ಅದು ಅನೇಕ ವಿಧಗಳಲ್ಲಿ ಉಪಯೋಗವಾಗುವುದೆಂಬುದು ದೃಢಪಟ್ಟಿದೆ. ಸಾಗಣೆಯ ವಾಹಕವಾಗಿ (Medium) ವಾಯು ಎರಡು ವಿಧಗಳಲ್ಲಿ ಅಸಾಧಾರಣವಾಗಿದೆ. ಮೊದಲನೆಯದಾಗಿ, ಭೂಮಿಯ ಮೇಲೆ ಒಂದು ಸ್ಥಳದಿಂದ ನೇರವಾಗಿ ಮತ್ತೊಂದು ಸ್ಥಳಕ್ಕೆ ಭೌಗೋಲಿಕ ಅಡಚಣೆಗಳಾವುವೂ ಇಲ್ಲದ ಪ್ರಧಾನ ಮಾರ್ಗವೊಂದನ್ನು ಒದಗಿಸುತ್ತದೆ. ನೆಲವಾಗಲಿ, ನೀರಾಗಲಿ ಯಾವುದಾದರೂ ಎರಡು ಸ್ಥಳಗಳಿಗೆ ನಡುವೆ ನಿರಂತರವಾಗಿರುವುದಿಲ್ಲ; ಆದ್ದರಿಂದ ರಸ್ತೆಯ ವಾಹನದಿಂದ ಹಡಗಿಗೆ, ಹಡಗಿನಿಂದ ವಾಹನಕ್ಕೆ ಬದಲಾಯಿಸಬೇಕಾಗಬಹುದು. ಈ ಕಾರಣದಿಂದ ಬೆಲೆ ಬಾಳುವ ಸರಕನ್ನು ಸಾಗಿಸುವುದಕ್ಕೆ ವಿಮಾನಗಳನ್ನು ಉಪಯೋಗಿಸಲಾಗುತ್ತದೆ; ಏಕೆಂದರೆ, ಸರಕುಗಳನ್ನು ಹಿಡಿದಾಡುವುದು ಎಷ್ಟುಮಟ್ಟಿಗೆ ಕಡಮೆಯಾಗುತ್ತದೆಯೋ ಅವುಗಳು ನಷ್ಟವಾಗುವ ಇಲ್ಲವೆ ಕೆಟ್ಟು ಹೋಗುವ ಅಪಾಯಸಂಭವವೂ ಅಷ್ಟುಮಟ್ಟಿಗೆ ಕಡಮೆಯಾಗುತ್ತದೆ; ಇದಕ್ಕನುಗುಣವಾಗಿ ಅವುಗಳ ವಿಮಾದರಗಳೂ ಇಳಿಯುತ್ತವೆ. ಆಕಾಶಮಾರ್ಗವಾಗಿ ಒಯ್ಯುವ ಬೆಲೆ ಬಾಳುವ ಸರಕುಗಳಲ್ಲಿ ಚಿನ್ನ ಮತ್ತು ಒಡವೆಗಳು, ಸೊಗಸಾದ ರೇಷ್ಮೆ ಸರಕುಗಳು ಮತ್ತು ಬಟ್ಟೆಗಳು, ಪಂದ್ಯದ ಕುದುರೆಗಳು ಮುಂತಾದ ಬೆಲೆ ಬಾಳುವ ಜಾನುವಾರುಗಳು– ಇವೆಲ್ಲ ಇರುತ್ತವೆ.

ವಾಯುವಿಗಿರುವ ಎರಡನೆಯ ಪ್ರಯೋಜನವೇನೆಂದರೆ, ಉಚಿತ ಆಕಾರದ ವಾಹನಗಳು ಹೋಗುವುದಕ್ಕೆ ನೆಲಕ್ಕಿಂತಾಗಲಿ ನೀರಿಗಿಂತಾಗಲಿ ಕಡಮೆ ನಿರೋಧವನ್ನೊಡ್ಡುತ್ತದೆ. ಈ ರೀತಿ, ಮೋಟಾರು ಬಂಡಿಗಳು, ರೈಲು ಬಂಡಿಗಳು ಮತ್ತು ಹಡಗುಗಳು– ಇವುಗಳಿಗಿಂತ ವಿಮಾನಗಳು ಹೆಚ್ಚು ವೇಗವಾಗಿ ಹೋಗಬಲ್ಲವು; ಇದರ ಫಲವಾಗಿ ಆಗುವ ಕಾಲದ ಉಳಿತಾಯ ಮುಖ್ಯವಾಗಿ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿರುವವನಿಗೆ ಅನೇಕ ವೇಳೆ ಬಹಳ ಅಮೂಲ್ಯ. ಅವನು ಎರಡು ವಿಧಗಳಲ್ಲಿ ಇದರ ಪ್ರಯೋಜನ ಹೊಂದಬಹುದು: ಅವನ

ಆಕಾಶಮಾರ್ಗವಾಗಿ ಪ್ರಯಾಣ ಮಾಡಬಹುದು; ಮತ್ತು ತನ್ನ ಅಂಚೆಯನ್ನು ಕಳಿಸಲು ವಿಮಾನಗಳನ್ನು ಉಪಯೋಗಿಸಬಹುದು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಆಕಾಶಮಾರ್ಗಗಳ ಪದ್ಧತಿಯಲ್ಲಿ ಎರಡು ವಿಧಗಳಿಗೂ ಅತ್ಯುತ್ತಮ ನಿದರ್ಶನಗಳಿವೆ. ಅಲ್ಲಿ, ತೀರದಿಂದ ತೀರಕ್ಕೆ ೩,೦೦೦ ಮೈಲಿಗಳ ಅಳತೆಯ ಖಂಡದ ಅಗಲಕ್ಕೂ ಪ್ರಯಾಣದ ಏರ್ಪಾಡಿದೆ; ಇದಕ್ಕೆ ಅಡ್ಡಲಾಗಿ ಗಂಟೆಗೆ ೪೦ ಮೈಲಿಗಳಂತೆ ರೈಲು ಬಂಡಿಗಳು ತಿರುಗುತ್ತವೆ. ಆಧುನಿಕ ವಾಯುಮಾರ್ಗ ವಿಮಾನದ (Air Liner) ವೇಗ, ನಿಲುಗಡೆಗಳೂ ಸೇರಿ, ಗಂಟೆಗೆ ಸರಾಸರಿ ೧೫೦ ಮೈಲಿಗಳು; ಈ ವೇಗ ಸದ್ಯದಲ್ಲೇ ಬಹುಶಃ ಇನ್ನೂ ಹೆಚ್ಚುವುದು. ಒಬ್ಬನು ನ್ಯೂಯಾರ್ಕಿನಿಂದ ಲಾಸ್ ಆ್ಯಂಜೆಲೆಸ್ಸಿಗೆ– ಅಂದರೆ ೩,೦೦೦ ಮೈಲಿಗಳನ್ನು– ೨೪ ಗಂಟೆಗಳಲ್ಲಿ ಪ್ರಯಾಣ ಮಾಡಲು ಸಾಧ್ಯ; ರೈಲು ಪ್ರಯಾಣಕ್ಕೆ ಹಿಡಿಯುವ ೫ ದಿನ ಗಳೊಡನೆ ಹೋಲಿಸಿದರೆ ಅವನು ವ್ಯರ್ಥ ಮಾಡಬೇಕಾದದ್ದು ಒಂದು ದಿನ ಮಾತ್ರ. ಅವನು ತನ್ನ ಕಾರ್ಯಗಳನ್ನು ಮುಗಿಸಿಕೊಂಡು ಮರುದಿನವೇ ಹಿಂದಿರುಗಬಹುದು; ಇದರಿಂದ ಅವನು ತನ್ನ ಕಚೇರಿಯಿಂದ ಒಟ್ಟು ಮೂರು ದಿನಗಳು ಮಾತ್ರ ಗೈರುಹಾಜರಾಗಿರಬೇಕಾಗುತ್ತದೆ, ಅಷ್ಟೆ. ವಾಯುಮಾರ್ಗ ವಿಮಾನದ ಉತ್ತಮ ಉಪಯೋಗಕ್ಕೆ ಇದು ಮಾದರಿಯಾದ ನಿದರ್ಶನ. ಅವನ ಅಂಚೆಯ ಸಾಗಣೆಯೂ ಇಷ್ಟೇ ಮುಖ್ಯ. ಅದೇ ಎರಡು ಸ್ಥಳಗಳಲ್ಲಿ ಒಂದಕ್ಕೊಂದಕ್ಕೆ ಮೂರು ದಿನಗಳೊಳಗಾಗಿ ಒಂದು ಕಾಗದ ಕಳಿಸಿ ಉತ್ತರ ತರಿಸಿಕೊಳ್ಳಬಹುದು, ಅಥವಾ ಚೆಕ್ಕುಗಳನ್ನು ಕಳಿಸಿ ಬ್ಯಾಂಕಿನ ಮೂಲಕ ಸರಿನೋಡಿಸಬಹುದು. ಹಿಂದೆ ಇದೇ ಕೆಲಸಕ್ಕೆ ಸರಿಸುಮಾರಾಗಿ ೧೫ ದಿನ ಬೇಕಾಗುತ್ತಿತ್ತು. ವ್ಯಾಪಾರ ವ್ಯವಹಾರಗಳು ಮೊದಲಿಗಿಂತ ಎಷ್ಟು ಹೆಚ್ಚು ಚುರುಕಿನಿಂದ ನಡೆಯಲು ಸಾಧ್ಯವಾಗಿದೆಯೆಂಬುದು, ಸ್ಥಳಗಳು ದೂರ ದೂರ ಇರುವ ಇಂಡಿಯಾ ದೇಶದಲ್ಲಿ ಬಹು ಸುಲಭವಾಗಿ ಮನದಟ್ಟಾಗುತ್ತದೆ. ಬೊಂಬಾಯಿಯ ವ್ಯಾಪಾರಸ್ಥನೊಬ್ಬನು ಕರಾಚಿಯಲ್ಲಿ ವ್ಯವಹಾರ ನಡಸಬೇಕಾದರೆ ಅವನು ಬೆಳಗ್ಗೆ ೧೦ ಗಂಟೆಗೆ ಹೊರಟು ಸಂಜೆ ೫ ಗಂಟೆಗೆ ಕರಾಚಿಯನ್ನು ಸೇರಬಹುದು; ಹೀಗೆ, ಅವನ ಪ್ರಯಾಣಕ್ಕೆ ೭ ಗಂಟೆ ಕಾಲ ಮಾತ್ರ ಸಾಕು. ಅವನು ಜಹಜಿನ ಮೇಲಾಗಲಿ ರೈಲು ಬಂಡಿಯಲ್ಲಾಗಲಿ ಹೋಗಿದ್ದರೆ ಹಿಂದೆ ಕನಿಷ್ಠ ಪಕ್ಷ ಅವನಿಗೆ ಎರಡು ದಿನ ಬೇಕಾಗುತ್ತಿತ್ತು. ಒಂದು ಮುಖ್ಯವಾದ ಕಾಗದವನ್ನಾಗಲಿ ಪದಾರ್ಥವನ್ನಾಗಲಿ ದೆಹಲಿಗೆ ಕಳಿಸಬೇಕಾದರೆ ೬ ಗಂಟೆಗಳ ಕಾಲ ಸಾಕು; ಬೇರೆಯ ರೀತಿಯಲ್ಲಾದರೆ ಇದರ ನಾಲ್ಕರಷ್ಟು ಕಾಲ ಬೇಕಾದೀತು.

ಅದೇ ರೀತಿಯಲ್ಲಿ, ವಾಯುಪ್ರಯಾಣಗಳಿಂದ ಸಮುದ್ರ ದಾಟುವುದು ತಪ್ಪಿದೆ; ಪರಿಣಾಮವಾಗಿ, ವಾಯುಪ್ರಯಾಣಗಳೇ ಹೆಚ್ಚು ರೂಢಿಗೆ ಬರುತ್ತಿವೆ. ಇಲ್ಲಿ ದೂರುಗಳು ಹೆಚ್ಚು ನಿಡಿದಾದ್ದರಿಂದ ಕಾಲದ ವಿಷಯ ಹೆಚ್ಚು ಮುಖ್ಯ. ಸಾಮಾನ್ಯವಾಗಿ ಮನುಷ್ಯನಿಗೆ ಉಪಯೋಗಕ್ಕೆ ಬರುವ ಪ್ರತಿಯೊಂದು ಪದಾರ್ಥವನ್ನೂ ಒಂದಲ್ಲ ಒಂದು ವೇಳೆಯಲ್ಲಿ ಆಕಾಶ ಮೂಲಕವೇ ಸಾಗಿಸಲಾಗಿದೆ. ಹಣ್ಣುಗಳು, ಮೀನು, ಉಷ್ಣದೇಶದ ಹಣ್ಣುಗಳು ಮುಂತಾದ ಬೇಗನೆ ಕೆಟ್ಟುಹೋಗುವ ಸರಕುಗಳನ್ನು ಆಗಿಂದಾಗ್ಗೆ ಒಯ್ಯಲಾಗುತ್ತದೆ. ಯಂತ್ರಗಳಂಥ ಭಾರವಾದ ವಸ್ತುಗಳನ್ನು ಸಹ, ಹಾಗೆ ಸಾಗಿಸುವುದು ಅತ್ಯಂತ ಅಗ್ಗವೆಂದು ಕಂಡುಬಂದಾಗ ಆಕಾಶ ಮುಖಾಂತರವೇ ಸಾಗಿಸಲಾಗಿದೆ. ೧೯೩೧ರಲ್ಲಿ ನ್ಯೂಗಿನಿಯಲ್ಲಿ ಚಿನ್ನದ ಗಣಿಯೊಂದನ್ನು ಪ್ರಾರಂಭಿಸಿದಾಗ ಒಂದು ಉತ್ಕೃಷ್ಟ ಉದಾಹರಣೆ ಗಮನಕ್ಕೆ ಬಂತು. ಕಾಡಿನ ಮೂಲಕ ದಾರಿ ಮಾಡಿಸಬೇಕಾಗಿದ್ದರೆ ತುಂಬ ವೆಚ್ಚವಾಗುತ್ತಿತ್ತು. ಆದ್ದರಿಂದ ಎಲ್ಲ ಯಂತ್ರಗಳನ್ನೂ ಭಾಗ ಭಾಗವಾಗಿ ತೆಗೆದೊಯ್ಯಲು 'ಜಂಕರ್ಸ್' (Junkers) ವಿಮಾನಗಳನ್ನು ಇದೇ ಉದ್ದೇಶಕ್ಕಾಗಿ ಜೋಡಿಸಲಾಯಿತು. ಒಂದು ಎಂಜಿನ್ನಿಗಾಗಿ ಒಂದು ಭಾರವಾದ ತಿರುಗಚ್ಚನ್ನು (Crank shaft) ಒಯ್ಯಬೇಕಾಗಿ ಬಂದಾಗ, ವಿಮಾನದ ರಚನಾಸಂವಿಧಾನವನ್ನೇ ಇದಕ್ಕನುಗುಣವಾಗಿ ಸರಿ ಹೊಂದಿಸಿಕೊಳ್ಳಲಾಯಿತು: ಹೇಗೆಂದರೆ, ಈ ತಿರುಗಚ್ಚನ್ನೆ ವಿಮಾನದ ಕಟ್ಟಡದ ಒಂದು ಭಾಗವಾಗಿ ಉಪಯೋಗಿಸಿಕೊಳ್ಳಲಾಯಿತು. ಇಲ್ಲದೆ ಹೋಗಿದ್ದರೆ, ವಿಮಾನ ವಾಯುವಿನಲ್ಲಿ ಎತ್ತುವ ಭಾರ ಬಹು ಹೆಚ್ಚಾಗಿಬಿಡುತ್ತಿತ್ತು.

ಪರ್ವತಗಳ ಮೇಲೆ ಅಥವಾ ಪರ್ವತಗಳುಳ್ಳ ದೇಶಗಳ ಮೇಲೆ, ಅದರಲ್ಲೂ ಕಾಲವಿಷಯ ಸರ್ವಮುಖ್ಯವಾಗಿದ್ದಾಗ, ವಿಮಾನವನ್ನು ಅದೇ ರೀತಿ ಉಪಯೋಗಿಸಿ ಕೊಳ್ಳಲಾಗಿದೆ. ಬ್ರಿಟಿಷ್ ಗಯೆನಾದಲ್ಲಿ ವಿಮಾನವನ್ನು ಚರಚಿಕಿತ್ಸಾಲಯವಾಗಿ (Ambulance) ಉಪಯೋಗಿಸಲಾಗುತ್ತಿದೆಯೆಂದು ಸೂಚಿಸಬಹುದಾಗಿದೆ. ಹಿಂದೆ ಅಲ್ಲಿ ಮುಖ್ಯವಾಗಿ ತೋಡುದೋಣಿಯ ಮೂಲಕ ೧೦ ದಿನ ಹಿಡಿಯುತ್ತಿದ್ದ ಒಂದು ಗೊತ್ತಾದ ಪ್ರಯಾಣಕ್ಕೆ ಈಗ ೮ ದಿನಗಳು ಸಾಕು. ನಿರ್ದಿಷ್ಟ ರೋಗಗಳ (ಉದಾಹರಣೆಗಾಗಿ, ನಾಯಿಕಡಿತದ ಹುಚ್ಚು) ಚಿಕಿತ್ಸೆಗೆ ಬೇಕಾದ ವಿಶಿಷ್ಟ 'ಸೀರಂ'ಗಳನ್ನು ಅವು ದೊರೆಯುವ ಕೆಲವು ಕೇಂದ್ರಗಳಿಂದ ಶೀಘ್ರವಾಗಿ ಕಳಿಸಿಕೊಟ್ಟಿದೆ. ಇದರಿಂದ ವಿಮಾನದ ಉಪಯೋಗ ಎಷ್ಟೆಂಬುದು ಮನದಟ್ಟಾಗುವುದು.

ಅಕಾಶ ಪರಿಶೀಲನೆ ಮತ್ತು ಆಕಾಶ ಛಾಯಾಚಿತ್ರಗ್ರಹಣ (Air Survey and Photography)

೧೯೧೪-೧೮ರ ಯೂರೋಪಿನ ಯುದ್ಧದಲ್ಲಿ ಬೇರೆ ಬೇರೆ ಯುದ್ಧ ಪಕ್ಷಗಳ ವಿಮಾನ ನಡಸುವವರು ಸೈನಿಕೋದ್ದೇಶಗಳಿಗಾಗಿ ಬೇರೆಬೇರೆ ಪ್ರದೇಶಗಳ ಛಾಯಾಚಿತ್ರಗಳನ್ನು ತೆಗೆದುಕೊಂಡರು; ಅದೇ ಆಕಾಶಪರಿಶೀಲನೆಯ ಪ್ರಾರಂಭ ಎಂದು ಹೇಳಬಹುದು. ಅಂದಿನಿಂದೀಚೆಗೆ, ಚೆನ್ನಾಗಿ ತಿಳಿದಿರುವ ಮತ್ತು ಸ್ವಲ್ಪವೂ ತಿಳಿಯದ ಭೂ ಪ್ರದೇಶಗಳ ನಕ್ಷೆಯನ್ನು ಶೀಘ್ರವಾಗಿ ಗುರುತಿಸಿಕೊಳ್ಳುವುದು ಮುಂತಾದ ಅನೇಕ ಬಗೆಯ ಉಪಯೋಗಗಳಿಗೆ ಈ ಆಕಾಶಪರಿಶೀಲನೆ ಒದಗಿಬರುವಂತೆ ಮಾಡಿಕೊಂಡಿದೆ. ೧೯೨೯ರಲ್ಲಿ ವಿಮಾನ ಕಾರ್ಯಕರ್ತ ಸಂಘವೊಂದು ರಿಯೋ-ಡ-ಜನೆರಿಯೋ (Rio-de-Janerio) ಎಂಬ ನಗರವನ್ನು ನೆಲದ ಮೇಲಿನಿಂದ ಮೋಜಣಿ ಮಾಡಿತು. ನಗರದ ಮಧ್ಯ ಭಾಗವನ್ನು ಒಂದು ಮೈಲಿಗೆ ೬೩ ಅಂಗುಲದ ಪ್ರಮಾಣದಲ್ಲಿ ನಕ್ಷೆ ಮಾಡಲಾಯಿತು. ಕಡೆಯಲ್ಲಿ ಸಿದ್ಧವಾದ ನಕ್ಷೆ ಎಷ್ಟು ನಿಷ್ಕೃಷ್ಟವಾಗಿತ್ತೆಂದರೆ, ಒಂದು ಗಜದೊಳಗಿನ ಯಾವ ಸ್ಥಳವನ್ನು ಬೇಕಾದರೂ ಅದರಲ್ಲಿ ಗುರುತು ಹಿಡಿಯಬಹುದಾಗಿತ್ತು. ಹೀಗೆ ಸಿದ್ಧಪಡಿಸಿದ ಕಡೆಯ ನಕ್ಷೆಗಳನ್ನು, ಭೂಮಿಯ ಮೇಲಿನ ಪರಿಶೀಲನೆಯಿಂದ ಅಳೆದ ಸ್ಥಳಗಳೊಡನೆ ಹೋಲಿಸಿ ಸರಿನೋಡಲಾಗುವುದು. ಇದರ ವೆಚ್ಚ ಒಂದು ಚದರ ಮೈಲಿಗೆ ಸುಮಾರು ೨,೫೦೦ ಪೌಂಡುಗಳಷ್ಟಾಗಿದೆ; ೪ ವರ್ಷಗಳಿಗಿಂತ ಕಡಮೆಯ ಕಾಲದಲ್ಲಿ ಮುಗಿಸಿದ ಈ ಕೆಲಸದ ವ್ಯಾಪ್ತಿ ೧೫,೦೦,೦೦೦ ಮನೆಗಳುಳ್ಳ ಪ್ರದೇಶವನ್ನು ಒಳಗೊಂಡಿತ್ತು. ಇದೇ ನಕ್ಷೆಯನ್ನು ಹಳೆಯ ವಿಧಾನಗಳಲ್ಲಿ ತಯಾರಿಸಿದ್ದರೆ ವೆಚ್ಚ ಇನ್ನೂ ಹೆಚ್ಚಾಗುತ್ತಿದ್ದಿತಲ್ಲದೆ ಕೆಲಸ ಮುಗಿಸಲು ಅದಕ್ಕಿಂತ ಮೂರರಷ್ಟು ಇಲ್ಲವೆ ನಾಲ್ಕರಷ್ಟು ಕಾಲ ಹಿಡಿಯುತ್ತಿತ್ತು.

ಪ್ರಪಂಚದ ಅನೇಕ ಭಾಗಗಳಲ್ಲಿ ಎಲ್ಲೆ ಕಟ್ಟುಗಳನ್ನು ಗೊತ್ತು ಮಾಡುವುದಕ್ಕಾಗಿ ಛಾಯಾಚಿತ್ರಗ್ರಹಣವನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸಲಾಗಿದೆ; ಮತ್ತು ಈ ರೀತಿಯಲ್ಲಿ ನ್ಯಾಯವಿವಾದಗಳನ್ನು ಬಗೆಹರಿಸಲಾಗಿದೆ. ಕಲ್ಕತ್ತದಲ್ಲಿ ಬಂದರಿನ ಅಧಿಕಾರಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳನ್ನು ಗೊತ್ತು ಮಾಡುವುದಕ್ಕಾಗಿ ಪರ್ವ ಕಾಲದ ಭರತದಲ್ಲಿ (Spring tide) ಮತ್ತು ಕಡಮೆಯ ಭರತದಲ್ಲಿ (Neap tide) ಹೂಗ್ಲಿ ನದಿಯ ಎರಡು ದಡಗಳನ್ನೂ ಆಕಾಶ ಪರಿಶೀಲನೆಯ ಮೂಲಕಳೆಯಿಸಿದರು. ಆಕಾಶದಿಂದ ತೆಗೆದ ಛಾಯಾಚಿತ್ರಗಳು ನೀರು ಹೆಚ್ಚಾಗಿದ್ದಾಗ ಮತ್ತು ಕಡಮೆಯಾಗಿದ್ದಾಗ ನೀರಿನ ಮಟ್ಟದ ಪರಿಮಿತಿಗಳನ್ನು

ಸ್ಪಷ್ಟವಾಗಿ ತೋರಿಸುತ್ತವೆ. ಅವು ನೀರಿನ ಮೇಲ್ಮೈ ಕೆಳಗಿನ ಆಳವಿಲ್ಲದ ಸ್ಥಳಗಳು, ಅಡಚಣೆಗಳು ಮತ್ತು ಬಂಡೆಗಳು– ಇವುಗಳನ್ನು ಸಹ ಗೋಚರಪಡಿಸುತ್ತವೆ. ಇಷ್ಟೇ ಅಲ್ಲದೆ, ನಡುವೆ ತೇಲಾಡುವ ಸಣ್ಣ ಸಣ್ಣ ಕಣಗಳನ್ನು ಒಯ್ಯುವ ಮಟ್ಟಿಗೆ ಪ್ರವಾಹವು ವೇಗವಾಗಿರುವಾಗ ನೀರಿನ ಆಳವನ್ನೂ ಅಂದಾಜು ಮಾಡುವುದು ಸಾಧ್ಯ. ಬೇರೆಬೇರೆ ಕಾಲಗಳಲ್ಲಿರುವ ನೀರಿನ ಮಟ್ಟವನ್ನು ಹೋಲಿಸುವುದರಿಂದ ನದಿಯ ದಡಗಳ ಸ್ಥಳಬದಲಾವಣೆಯಿಂದಲೂ ಸವೆಯುವಿಕೆಯಿಂದಲೂ ಆಗುವ ವ್ಯತ್ಯಾಸಗಳು ವ್ಯಕ್ತವಾಗುತ್ತವೆ.

ಇಂಗ್ಲೆಂಡಿನ ಮಿಡ್ಲ್‌ಸೆಕ್ಸ್ ಪ್ರಾಂತದ ವೀಲ್ಡ್‌ಸ್ಟನ್ನಿನ (Wealdstone) ನಕ್ಷೆ ಆಕಾಶ ಛಾಯಾಚಿತ್ರ ಗ್ರಹಣಕ್ಕೆ ಮತ್ತೊಂದು ಉದಾಹರಣೆ; ಇದರ ಪ್ರಮಾಣ ಒಂದು ಮೈಲಿಗೆ ೧೦೦ ಅಂಗುಲಗಳು; ಇದು ಈಚೀಚೆಗೆ ಹಬ್ಬಿರುವ ಮಾದರಿಯಾದ ಆಧುನಿಕ ನಿವಾಸ ಪ್ರದೇಶವನ್ನು ತೋರಿಸುತ್ತದೆ. ಮನೆ ಕೊಳ್ಳಬೇಕೆಂದಿರುವವನು ನೆರೆಹೊರೆಯ ಪ್ರಾಂತದ ಚಿತ್ರ ನೋಡಬೇಕೆಂದು ಬಯಸಿದರೆ ಅವನಿಗೆ ಈ ನಕ್ಷೆಯಿಂದ ತುಂಬ ಸಹಾಯವಾಗುತ್ತದೆ. ಇಂಥ ಕಾರ್ಯ ಮಾಡುವುದು ಹೇಗೆನ್ನುವುದನ್ನು ಸಂಕ್ಷೇಪದಲ್ಲಿ ಹೀಗೆ ವಿವರಿಸಬಹುದು: ಬಲಕ್ಕೆ, ಎಡಕ್ಕೆ ಅಥವಾ ಮಧ್ಯಕ್ಕೆ ಛಾಯಾಚಿತ್ರಗಳನ್ನು ತೆಗೆಯಲಾಗುವಂತೆಯೂ ಹಾಗೆ ತೆಗೆದ ಚಿತ್ರಗಳು ಒಂದರ ಮೇಲೊಂದು ಕೂರುವಂತೆಯೂ ವಿಮಾನದ ಮೂಗಿನ ಭಾಗದಲ್ಲಿ ಆಕಾಶ ಛಾಯಾಚಿತ್ರಕವನ್ನು (Ariel camera) ಅಳವಡಿಸಿರುತ್ತದೆ. ೫,೦೦೦ ಅಡಿಗಳ ಎತ್ತರದ ಮೇಲೆ ನೇರ ಮಾರ್ಗದಲ್ಲಿ ವಿಮಾನವನ್ನು ಹಾರಿಸಲಾಗುತ್ತದೆ, ಮತ್ತು ಎರಡು ಮೈಲಿ ಬಿಟ್ಟು ಒಂದರಂತೆ ಮೂರು ಚಿತ್ರಪಟಲಗಳನ್ನು ಚಿತ್ರ ಗ್ರಹಣಕ್ಕೆ ಒಡ್ಡಲಾಗುತ್ತದೆ. ಒಂದೇ ದಿಕ್ಕಿನಲ್ಲಿ ನೇರ ದಾರಿಯಲ್ಲಿ ಹಾರಿದ ಮೇಲೆ ಆರು ಮೈಲಿಗಳಷ್ಟು ಪಕ್ಕಕ್ಕೆ ತಿರುಗಿ, ಅಲ್ಲಿಂದ ಮೊದಲಿನ ನೇರ ದಾರಿಗೆ ಸಮಾಂತರದಲ್ಲಿ ಹಿಂದಕ್ಕೆ ಹಾರಲಾಗುತ್ತದೆ. ಈ ರೀತಿಯಲ್ಲಿ, ಒಟ್ಟು ಪ್ರದೇಶವೆಲ್ಲವನ್ನೂ ಛಾಯಾಚಿತ್ರ ತೆಗೆಯಲಾಗುತ್ತದೆ. ಇದಕ್ಕೆ ಓರೆ ಛಾಯಾಚಿತ್ರ ಗ್ರಹಣ (Oblique photography) ಎಂದು ಹೆಸರು. ಊರ್ಧ್ವ ಛಾಯಾಚಿತ್ರಗಳಿಂದಲೂ (Vertical photograph) ನಕ್ಷೆಗಳನ್ನು ಮಾಡಲಾಗುತ್ತದೆ. ಆಕಾಶ ಛಾಯಾಚಿತ್ರ ಗ್ರಹಣವನ್ನು ವ್ಯಾಪಾರ ಪ್ರಕಟನೆ ಮತ್ತು ವಿದ್ಯಾಭ್ಯಾಸ ಸಂಬಂಧವಾದ ಉದ್ದೇಶಗಳಿಗಾಗಿ ಬಹಳ ಮಟ್ಟಿಗೆ ಉಪಯೋಗಿಸುತ್ತಿದೆ. ಆಕಾಶ ಛಾಯಾಚಿತ್ರ ಗ್ರಹಣ ಒಂದು ಪ್ರಾಂತದ ಅತಿ ವಿಶಾಲ ನೋಟವನ್ನು ಒದಗಿಸಿಕೊಡುತ್ತದೆ. ಆಕಾಶ ಛಾಯಾಚಿತ್ರ ಗ್ರಹಣದ

ಅತ್ಯಂತ ಅದ್ಭುತ ನಿದರ್ಶನವೆಂದರೆ, ೧೯೩೩ರ ವಸಂತ ಕಾಲದಲ್ಲಿ ಹೂಸ್ಟನ್ ವೆಸ್ಟ್ಲೆಂಡ್ ವಿಶೇಷ ಕಾರ್ಯಯಾತ್ರೆಯ ಹಾರಿಕೆಯವರು (Houstan Westland Expedition Flight) ತಯಾರಿಸಿದ ಹಿಮಾಲಯ ಪರ್ವತದ ಗೌರೀಶಂಕರ, ಮಾಕಾಲೂ ಮತ್ತು ಅಕ್ಕಪಕ್ಕದ ಶಿಖರಗಳ ನಕ್ಷೆಗಳು. ಎರಡು ಯಂತ್ರಗಳು ಹಾರಿಹೋಗಿ, ಈ ಪರ್ವತ ಶಿಖರಗಳ ಮೇಲೂ ಸುತ್ತಲೂ ಹಾರಾಡಿ, ಬೇರೆ ಯಾವ ರೀತಿಯಿಂದಲೂ ದುರ್ಗಮವಾಗಿದ್ದ ಹಿಮಾಲಯದ ಭಾಗಗಳನ್ನು ಯಶಸ್ವಿಯಾಗಿ ಛಾಯಾಚಿತ್ರಣ ಮಾಡಿದುವು.

ಪ್ರಾಚೀನ ವಸ್ತುಶಾಸ್ತ್ರ

ಪ್ರಾಚೀನ ವಸ್ತುಶಾಸ್ತ್ರ (Archaeology) ಸಂಬಂಧದ ಉದ್ದೇಶಗಳಿಗಾಗಿ ವಿಮಾನವನ್ನು ಮೊದಲಸಲ ಯೂರೋಪಿನಲ್ಲಿ ಯುದ್ಧ ಸಮಯದಲ್ಲಿ ಉಪಯೋಗಿಸಿತು; ಆಗ ಯೂರೋಪಿನಲ್ಲಿ ಟೈಗ್ರಿಸ್ ನದಿಯ ಉದ್ದಕ್ಕೂ ಇದ್ದ ಪ್ರಾಚೀನ ನಗರಗಳ ಹಾಳುಗಳ ಛಾಯಾಚಿತ್ರಗಳನ್ನು ತೆಗೆದುಕೊಂಡಿತು. ಈಚೀಚಿನ ವರ್ಷಗಳಲ್ಲಿ ವಿಮಾನದ ಸಹಾಯದಿಂದ ತುಂಬ ಪರಿಶೋಧನೆಗಳನ್ನು ನಡೆಸಿದೆ. ಈ ವಿಧಾನದ ಯಶಸ್ವಿತೆಗೆ, ಮುಖ್ಯವಾಗಿ, ಹಳೆಯ ಅವಶೇಷಗಳ ನಿವೇಶನದಲ್ಲಿ ಬೆಳೆಯುವ ಸಸ್ಯವರ್ಗದ ಬಣ್ಣದಲ್ಲಾಗಲಿ ಸ್ವಭಾವ ಮತ್ತು ಹೊರ ಆಕಾರಗಳಲ್ಲಾಗಲಿ ತೋರುವ ವ್ಯತ್ಯಾಸ ಹಾಗೂ ಛಾಯಾಚಿತ್ರಗಳಲ್ಲಿ ನೆರಳುಗಳಾಗಿ ಕಾಣುವ ಬೆಳಕಿನಲ್ಲಿನ ಅಲ್ಪಸ್ವಲ್ಪ ವ್ಯತ್ಯಾಸಗಳು ಕಾರಣ. ವಾಸ್ತವವಾಗಿ, ನೆಲದ ಮೇಲ್ಭಾಗದ ಬಳಿಯ ಇಟ್ಟಿಗೆಯ ಅಥವಾ ಮಣ್ಣಿನ ಕಟ್ಟಡದ ಉಳಿಕೆಗಳು ಇರಬಹುದೆಂಬ ನಿರೀಕ್ಷೆಯಿರುವ ಸಂದರ್ಭದಲ್ಲಿ ಆಕಾಶ ಛಾಯಾಚಿತ್ರ ಗ್ರಹಣವು ಭೂ ಶೋಧನೆಗೆ ಅಗತ್ಯವಾದ ಪ್ರಾರಂಭ ಕಾರ್ಯವಾಗಿ ಪರಿಣಮಿಸಿದೆ.

ಪರಿಶೋಧನೆ

ಪರಿಶೋಧನೆಗೆ ವಿಮಾನಗಳು ಸರ್ವೋತ್ಕೃಷ್ಟ. ಅವು ಪ್ರಪಂಚದ ಯಾವ ಭಾಗಕ್ಕೆ ಬೇಕಾದರೂ ಹಾರಬಲ್ಲವು, ಮತ್ತು ಮನುಷ್ಯರನ್ನೂ ಅವರ ಸಾಮಗ್ರಿ ಸಲಕರಣೆಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅತ್ಯಲ್ಪ ಕಾಲದಲ್ಲಿ ಒಯ್ಯಬಲ್ಲವು. ವಿಮಾನಗಳು ಯಾವ ಸ್ಥಳಕ್ಕೆ ಬೇಕಾದರೂ ಹಾರಬಲ್ಲವೆಂಬುದಕ್ಕೆ ಧ್ರುವಯಾತ್ರೆ ಅತ್ಯುತ್ತಮ ನಿದರ್ಶನ. ಈ ಯಾತ್ರೆಗಳ ಸಂಬಂಧವಾಗಿ ಪ್ರಮುಖವಾಗಿ ಎದ್ದು ಕಾಣುವವು ಮೂರು ಹೆಸರುಗಳು: ಆಮಂಡ್‌ಸೆನ್ (Amundsen),

ಬರ್ಡ್ (Byrd) ಮತ್ತು ವಿಲ್ಕಿನ್ಸ್ (Wilkins). ಇವರೆಲ್ಲರೂ ಧ್ರುವಗಳ ಮೇಲೆ ಹಾರಿದ್ದಾರೆ, ಮತ್ತು ಅನೇಕ ಛಾಯಾಚಿತ್ರಗಳು ತೆಗೆಯಲ್ಪಟ್ಟಿವೆ. ಸರ್ ಎಚ್.ಜಿ.ವಿಲ್ಕಿನ್ಸ್‌ರವರು ದಕ್ಷಿಣ ಧ್ರುವದಲ್ಲಿ ಆಕಾಶದಿಂದ ದೊಡ್ಡ ಪ್ರದೇಶಗಳ ಪರಿಶೀಲನೆ ಮಾಡುವುದಕ್ಕಾಗಿ ಧ್ರುವದ ಮೇಲೆ ಹಾರಿದ್ದಾರೆ. ಈ ಕಾರ್ಯ ಮಾಡುತ್ತಿದ್ದಾಗ, ದಕ್ಷಿಣ ಧ್ರುವ ಖಂಡದ ಭಾಗವೆಂಬುದಾಗಿ ವರ್ಣಿತವಾಗಿದ್ದದ್ದು ಒಂದು ದೊಡ್ಡ ದ್ವೀಪ ಮಾತ್ರವೆಂಬುದಾಗಿ ಅವರು ಸ್ಥಿರಪಡಿಸಿರು. ಈಗ ಆ ದ್ವೀಪದ ಹೆಸರು ದಕ್ಷಿಣ ಗ್ರ್ಯಾಹಮ್ ದ್ವೀಪ (South Graham Island).

ಸಂಕೀರ್ಣ

ಭೂಮಿಯ ಮೇಲ್ಮೈಯ ವಿಸ್ತಾರವಾದ ನೋಟ ಪಡೆಯಲು ವಾಯು ಮಂಡಲವೇ ಉತ್ತಮ ಸ್ಥಳವಾದ್ದರಿಂದ ಜನ ವಾಹನ ಸಂಚಾರ ನಿಯಂತ್ರಣಕ್ಕೆ (Traffic Control) ವಿಮಾನಗಳನ್ನು ಉಪಯೋಗಿಸಲಾಗಿದೆ. ನಿಯಂತ್ರಕ ವಿಮಾನಗಳು ನಿಧಾನವಾಗಿ ಹೋಗಬಲ್ಲವಾಗಿರಬೇಕಾದದ್ದು ಆವಶ್ಯಕವಾದ್ದರಿಂದ ಈ ಉದ್ದೇಶಕ್ಕಾಗಿ ಮೊತ್ತಮೊದಲು ವಾಯುಹಡಗುಗಳನ್ನು ಉಪಯೋಗಿಸಲಾಯಿತು. ದೊಡ್ಡ ಕುದುರೆ ಪಂದ್ಯ ಕೂಟಗಳಿಗೆ ಹೋಗಿ ಬರುವ ಜನರ ಗುಂಪಿನ ಮೇಲೆ ಕಾವಲಿರುವುದಕ್ಕಾಗಿ ಪೋಲೀಸು ಇಲಾಖೆಯವರು R ೩೬ ಮತ್ತು R ೧೦೧ ವಿಮಾನಗಳನ್ನು ಉಪಯೋಗಿಸಿದ್ದರು; ಮತ್ತು ಜನ ವಾಹನ ಸಂಚಾರದಲ್ಲಿ ನಡುನಡುವೆ ಹಾದಿಗಟ್ಟುಗಳನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸುವುದಕ್ಕಾಗಿ ಸಂಚಾರವನ್ನು ಅದರ ಪ್ರಮಾಣಕ್ಕನುಸಾರವಾಗಿ ಬೇರೆಯ ಕಡೆಗೆ ತಿರುಗಿಸಲಾಗುತ್ತಿತ್ತು. ಬಹಳ ವರ್ಷಗಳಿಂದ ಸಾಮಾನ್ಯ ಸಾರ್ವಜನಿಕ ಕಾರ್ಯಗಳಿಗಾಗಿ ವಿಮಾನಗಳನ್ನು ಉಪಯೋಗಿಸಲಾಗುತ್ತಿದೆ. ಇಂಡಿಯಾ ದೇಶದ ವಾಯುವ್ಯ ಗಡಿನಾಡಿನಂತಹ ಗಲಭೆಯ ಪ್ರಾಂತವನ್ನು, ಬಾಂಬು ಹಾಕುವ ಸೈನಿಕ ಕಾರ್ಯದಿಂದಾಗಲಿ ಭಯಗ್ರಸ್ತ ಸ್ಥಳಗಳಿಗೆ ಅಲ್ಪ ಸಂಖ್ಯೆಯಲ್ಲಿ ಸೈನಿಕ ದಳಗಳನ್ನು ಸಾಗಿಸುವುದರಿಂದಾಗಲಿ– ಅಂತೂ ಕನಿಷ್ಠ ಬಲಪ್ರಯೋಗದಿಂದ ಹತೋಟಿಗೆ ತರುವುದಕ್ಕೆ ವಿಮಾನಗಳು ಸಹಾಯವಾಗುತ್ತವೆ. ಇವುಗಳನ್ನೆಲ್ಲ ಎಲ್ಲಿಂದ ಒಯ್ಯಬೇಕೊ ಆ ವಿಮಾನ ನೆಲೆ ನೂರಾರು ಮೈಲಿ ಆಚೆ ಇರಬಹುದು. ಈ ಗಡಿನಾಡಿನಲ್ಲಿ ತಟ್ಟನೆ ಎದ್ದ ಅನೇಕ ದಂಗೆಗಳನ್ನು ಈ ವಿಧಾನದಿಂದ ಬೇಗನೆ ಅಡಗಿಸಲಾಗಿದೆ; ಇದರಲ್ಲಿ ಪ್ರಾಣ, ಧನ ಮತ್ತು ಕಾಲಗಳ ವ್ಯಯದಲ್ಲಿ ಎಷ್ಟೋ ಉಳಿತಾಯವಿದೆ.

ಅಮೆರಿಕದ ಸಂಯುಕ್ತ ಸಂಸ್ಥಾನಗಳು, ರಷ್ಯ ಮತ್ತು ಇತರ ಕಡೆಗಳಲ್ಲಿ ಬೆಳೆಗಳ ಮೇಲೆ ಕ್ರಿಮಿನಾಶಕಗಳನ್ನು ತುಂತುರು ಎರಚುವ ಹಳೆಯ ವಿಧಾನಗಳಿಗೆ ಬದಲಾಗಿ ಧೂಳೆರಚುವ ಪದ್ಧತಿ ರೂಢಿಗೆ ಬಂದಿದೆ. ವಿಮಾನಗಳ ಸಹಾಯದಿಂದ ದೊಡ್ಡ ಪ್ರದೇಶಗಳಿಗೆ ಈ ರೀತಿ ಚಿಕಿತ್ಸೆ ಮಾಡಬಹುದು. ಉದಾಹರಣೆಗೆ, ಹತ್ತಿಹುಳು (Bollweevil) ತುಂಬಿದ ಹತ್ತಿಯ ಹೊಲದ ಮೇಲೆ ಸುಣ್ಣದ ಆರ್ಸನೇಟ್ (Calcium arsenate) ಲವಣವನ್ನು ಈ ರೀತಿ ಪ್ರಯೋಗಿಸಲಾಗಿದೆ. ಮಿಡತೆಗಳ ಹಿಂಡನ್ನು ನಾಶಮಾಡುವುದಕ್ಕೂ ಇದೇ ಬಗೆಯ ವಿಧಾನಗಳನ್ನು ಕೈಗೊಳ್ಳಲಾಗಿದೆ; ಆದರೆ, ಈ ಕೀಟಗಳ ಸಂಖ್ಯೆ ಅಪಾರವಾದ್ದರಿಂದ ಅವುಗಳನ್ನು ನಾಶಗೊಳಿಸುವ ಪ್ರಯತ್ನಪೂರ್ಣವಾಗಿ ಯಶಸ್ವಿಯಾಗಿಲ್ಲ. ಅವು ಹುಟ್ಟುವ ನೆಲೆಗಳ ಮೇಲೆಯೇ ಕ್ರಿಮಿನಾಶಕವನ್ನು ಪ್ರಯೋಗ ಮಾಡುವುದು ಹೆಚ್ಚು ಪರಿಣಾಮಕಾರಿಯಾಗಬಹುದು. ಕೆಸರು ಸ್ಥಳಗಳಲ್ಲೂ ಜೌಗು ಪ್ರದೇಶಗಳಲ್ಲೂ ಸೊಳ್ಳೆ ಹುಟ್ಟುವ ಎಡೆಗಳ ಮೇಲೆ ವಿಮಾನದಿಂದ ಎಣ್ಣೆ ಹರಡುವುದು ಮಲೇರಿಯಾ ರೋಗವನ್ನು ಅಡಗಿಸುವುದರಲ್ಲಿ ಈಗಾಗಲೇ ಎಷ್ಟೋ ಸಹಕಾರಿಯಾಗಿದೆ. ಆಕಾಶದಿಂದಲೇ ಬೀಜ ಬಿತ್ತುವ ವಿಶೇಷ ಯಂತ್ರದಿಂದ ಸಜ್ಜಿತವಾದ ವಿಮಾನಗಳನ್ನು ರಷ್ಯದಲ್ಲಿ ಉಪಯೋಗಿಸಿ ನೋಡಿ ಯಶಸ್ವಿಯಾಗಿದ್ದಾರೆ.

ಯುದ್ಧ

ವಿಮಾನದ ಆಗಮನದಿಂದ ಆಧುನಿಕ ಯುದ್ಧವಿಧಾನದಲ್ಲಿ ಒಂದು ದೊಡ್ಡ ಕ್ರಾಂತಿಯುಂಟಾಗಿದೆ. ಶತ್ರುದೇಶಕ್ಕೆ ನೆಲ ಜಲಗಳ ಮೂಲಕ ಸೈನ್ಯಗಳು ಪ್ರವೇಶಿಸುವುದು ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿಮಾನಗಳಿಂದ ಇಳಿ ಕೊಡೆಗಳ ಮೂಲಕ ಸೈನಿಕರನ್ನು ಇಳಿಸಬಹುದು. ಈ ವಿಧಾನದಿಂದ ದೇಶಗಳನ್ನು ಗೆಲ್ಲಲಾಗಿದೆ: ಉದಾಹರಣೆಗೆ, ಕ್ರೀಟ್ ಮತ್ತು ಫಿಲಿಪೈನ್ಸ್ ದ್ವೀಪಗಳು; ಅಲ್ಲದೆ ನೆಲಯುದ್ಧದಲ್ಲಿ ಶತ್ರು ಸೈನಿಕರ ನಡುವೆ ಒಂಟೊಂಟಿಯಾಗಿ ಇಳಿಕೊಡೆಯಾಳು (Parachutist)ಗಳನ್ನು ಇಳಿಸಬಹುದು. ಹಾಗೆ ಇಳಿಸಿದ ಇಳಿಕೊಡೆಯಾಳುಗಳು ಶತ್ರು ಸಮೂಹದಲ್ಲಿ ಹಾವಳಿ ಮಾಡಿ, ಎಲ್ಲೆಡೆಯೂ ಬೇಕಾದಷ್ಟು ಅವಸ್ಥೆಯುಂಟು ಮಾಡಬಲ್ಲರು. ಒಂಟಿಗನಾದ ಇಳಿಕೊಡೆಯಾಳು ಎಷ್ಟು ಕಿರುಕುಳ ಕೊಡಬಲ್ಲ ನೆಂಬುದು ಫ್ರಾನ್ಸಿನಲ್ಲೂ ಪೋಲೆಂಡಿನಲ್ಲೂ ಯುದ್ಧವಾಗುತ್ತಿದ್ದ ಸಂದರ್ಭದಲ್ಲಿ ಚೆನ್ನಾಗಿ ನಿದರ್ಶನಕ್ಕೆ ಬಂದಿದೆ; ಆ ದೇಶಗಳಲ್ಲಿ ಜರ್ಮನಿಯ ಮಿತಿ

ಮೀರಿದ ಜಯಕ್ಕೆ ಈ ಇಳಿಕೊಡೆಯಾಳುಗಳು ಎಷ್ಟೋ ಮಟ್ಟಿಗೆ ಸಹಾಯ ಮಾಡಿದ್ದಾರೆ.

ಎರಡನೆಯದಾಗಿ ಬಂದರುಗಳು, ರೈಲುಮಾರ್ಗಗಳು ಮತ್ತು ವಿಮಾನಾಂಗಣಗಳು– ಇವುಗಳ ಮೇಲೆ ಬಾಂಬು ಹಾಕಿ ಶತ್ರುಗಳ ಸಂಚಾರ ಮಾರ್ಗಗಳನ್ನು ಅಣಿಗೆಡಿಸುವುದರಲ್ಲಿ ಬಾಂಬರುಗಳು (ಬಾಂಬೆಸೆಯುವ ವಿಮಾನಗಳು) ಭೇಷಾದ ಕೆಲಸ ಮಾಡುತ್ತವೆ. ಇದರಿಂದ ಕಾದಾಡುವ ಸೈನಿಕರಿಗೆ ಮದ್ದುಗುಂಡು, ಆಹಾರ, ಬಟ್ಟೆಗಳನ್ನು ಸರಿಯಾಗಿ ಒದಗಿಸುವುದು ಅಸಾಧ್ಯವಾಗುತ್ತದೆ. ಆಧುನಿಕ ಬಾಂಬರು ಯುದ್ಧ ಮಾಡದ ಪ್ರಜೆಗಳ ಮೇಲೆ ಬಾಂಬು ಹಾಕಿ ಯುದ್ಧೋದ್ಯೋಗಿಗಳಲ್ಲದವರ ಧೈರ್ಯಸ್ಥೈರ್ಯಗಳನ್ನು ಉಡುಗಿಸಲು ಸಾಧನವಾಗಿದೆ. ಅಲ್ಲದೆ, ಅತ್ಯಂತ ಘೋರ ನಾಶ ವಿಧಾನವಾದ ವಿಷವಾಯು ಯುದ್ಧಕ್ಕೆ ತೊಡಗಿ ಅವು ಶತ್ರುಶ್ರೇಣಿಗಳಲ್ಲಿ ಹಾವಳಿ ಮಾಡಬಲ್ಲವು.

ವಿಮಾನದ ಮುಂದೆ ದೂರವೆಂಬ ಸಂಗತಿ ಮಾಯವಾಗಿದೆ. ಒಂದು ಸ್ಥಳ ಶತ್ರುದೇಶದಿಂದ ದೂರದಲ್ಲಿದೆ ಎಂಬ ಮಾತ್ರಕ್ಕೆ ಅದು ಸುರಕ್ಷಿತವೆಂಬ ಖಾತರಿಯಿಲ್ಲ. ಆಧುನಿಕ ವಿಮಾನವಾಹಕ (ಹಡಗು)ಗಳ ದೆಸೆಯಿಂದ ಲಂಡನ್ನು ಬರ್ಲಿನ್ನಿಗೆ ಎಷ್ಟು ಸುಗಮ್ಯವೊ ಬೊಂಬಾಯಿ ಅಥವಾ ಮದರಾಸು ಬರ್ಲಿನ್ನಿಗೆ ಅಷ್ಟೇ ಸುಗಮ್ಯವಾಗಿವೆ. ವಿಮಾನದ ಉಪಟಳ ಸಮುದ್ರಕ್ಕೂ ತಪ್ಪಿದಲ್ಲ. ಶತ್ರು ನೌಕಾಬಲಕ್ಕೆ ಜಲಾಂತರನಾವೆ ಎಷ್ಟು ಅಪಾಯಕರವೊ ಟಾರ್‌ಪೆಡೋವಾಹಕ ವಿಮಾನಗಳೂ ಅಷ್ಟೇ ಅಪಾಯಕರ. ನಿಜವಾಗಿ ಟಾರ್‌ಪೆಡೋವಾಹಕಗಳೇ ಜಲಾಂತರನಾವೆಗಳಿಗಿಂತ ಹೆಚ್ಚು ಬೆಲೆಯುಳ್ಳವು; ಏಕೆಂದರೆ, ನೂರಾರು ಮೈಲಿ ದೂರವಿದ್ದರೂ ವಿಮಾನದಿಂದ ಗುರುತು ಹಚ್ಚಬಹುದು; ಜಲಾಂತರನಾವೆ ಇದನ್ನು ಮಾಡಲಾರದು. ಆಧುನಿಕ ಸೈನಿಕ ವಿಮಾನ ಸ್ಥಳಪರೀಕ್ಷೆಗೆ ಅತ್ಯುತ್ತಮವಾಗಿದೆ. ವಿಮಾನವು ತಾನಿರುವ ಎತ್ತರದಲ್ಲಿ ವಿಶಾಲವ್ಯಾಪಕವಾದ ನೋಟವುಳ್ಳದ್ದಾದ್ದರಿಂದ ವಿಸ್ತಾರವಾದ ಭೂ ಜಲ ಪ್ರದೇಶಗಳನ್ನು ಪರೀಕ್ಷಿಸಿನೋಡಿ, ಶತ್ರುಸ್ಥಾನಗಳನ್ನು ಕಂಡುಹಿಡಿಯಬಲ್ಲದು. ಆಧುನಿಕ ವಿಮಾನ ಸೈನ್ಯದ ಬೆಲೆ ಇಂಥದು: ಬೇರೆಯ ರೀತಿಯಲ್ಲಿ ಉತ್ಕೃಷ್ಟವಾಗಿ ಸಜ್ಜಾದ ಸೈನ್ಯಗಳು ಸಮರ್ಥವಾದ ವಿಮಾನ ಬಲವಿಲ್ಲದ್ದರಿಂದ ನಿಷ್ಪ್ರಯೋಜಕವಾಗಿವೆ. ಯಾವ ದೇಶದ ನೌಕಾಬಲವಾಗಲಿ, ಭೂ ಸೈನ್ಯವಾಗಲಿ ವಿಮಾನಗಳ ಬೆಂಬಲವಿಲ್ಲದೆ ದಕ್ಷತೆಯಿಂದ ಕಾರ್ಯಮಾಡಲಾರದು. ಜಪಾನಿಗೂ ವಿಮಾನ ಬಲದಲ್ಲಿ ಅದಕ್ಕಿಂತ ಕಡಮೆಯ ಸಾಮರ್ಥ್ಯವುಳ್ಳ ಮಿತ್ರ ರಾಷ್ಟ್ರಗಳಿಗೂ ದೂರಪ್ರಾಚ್ಯದಲ್ಲಿ ನಡೆಯುತ್ತಿರುವ

ಹೋರಾಟದಲ್ಲಿ ಈ ಅಂಶ ಚೆನ್ನಾಗಿ ನಿದರ್ಶನಕ್ಕೆ ಬರುತ್ತಿದೆ. ಡಂಕರ್ಕ್ ಮತ್ತು ಕ್ರೀಟ್‌ಗಳಲ್ಲಿ ಸಹ ಇದೇ ಸ್ಥಿರಪಟ್ಟಿತು. ಈ ದೇಶಗಳಲ್ಲಿ ಮಿತ್ರಸೈನ್ಯಗಳು ಉತ್ಕೃಷ್ಟವಾಗಿ ಸಜ್ಜಾಗಿದ್ದರೂ ಪರಿಣಾಮಕಾರಿಯಾಗುವ ಮಟ್ಟಿನ ವಿಮಾನ ಬೆಂಬಲವಿಲ್ಲದ್ದರಿಂದ ಬಹು ಹೆಚ್ಚಾಗಿ ಕಷ್ಟನಷ್ಟಗಳಿಗೀಡಾದುವು. ವಿಮಾನ ಬೆಂಬಲ ಸಾಲದಿದ್ದರೆ, ಉಳಿದ ಎಲ್ಲ ಕಾದಾಡುವ ಸೈನ್ಯಶಾಖೆಗಳೂ ಮೇಲೆಬಿದ್ದು ಬರುವ ಶತ್ರು ವಿಮಾನಬಲದ ಮುಂದೆ ಏನೂ ಮಾಡಲಾರದೆ ತೆಪ್ಪನಿರಬೇಕು.

ಹಿಂದಿನ ಕಾಲದ ಯುದ್ಧಗಳಲ್ಲಿ ಕಾದಾಡುವ ಸೈನ್ಯಗಳು ಮಾತ್ರ ಯುದ್ಧದಲ್ಲಿ ತೊಡಗಿದ್ದು ಪ್ರಜಾ ಜೀವನವು ಯಥಾಪ್ರಕಾರವಾಗಿ ಇರುತ್ತಿತ್ತು: ಆಧುನಿಕ ಯುದ್ಧ ಜನಾಂಗವೆಲ್ಲವನ್ನೂ ರಣರಂಗಕ್ಕೆ ಎಳೆದುಕೊಳ್ಳುತ್ತದೆ. ಫ್ರಾನ್ಸಿನಲ್ಲಿ "ಮ್ಯಾಜಿನೋ" ರಕ್ಷಣಾಪಂಕ್ತಿಯಿಂದ (Maginot Line) ವಿಚಿಯ (Vichy)ವರೆಗೆ ಎಲ್ಲವನ್ನೂ ವಿಮಾನ ಅಪಾಯಕ್ಕೊಳಪಡಿಸಿತು. ನಿರಪರಾಧಿಗಳಾದ ಹೆಂಗಸರೆನ್ನದೆ ಮಕ್ಕಳೆನ್ನದೆ, ದೊಡ್ಡವರೆನ್ನದೆ ಚಿಕ್ಕವರೆನ್ನದೆ, ಸೈನಿಕರೆನ್ನದೆ ಅಸೈನಿಕರೆನ್ನದೆ ಎಲ್ಲರನ್ನೂ ವಿಮಾನ ಕೊಲೆ ಮಾಡುತ್ತದೆ. ಕಟ್ಟಡಗಳು, ಪವಿತ್ರ ಸ್ಥಳಗಳು, ಆಸ್ಪತ್ರೆಗಳೂ, ಚರ್ಚುಗಳು, ಮಸೀದಿಗಳು, ದೇವಾಲಯಗಳು- ಒಂದು ಮಾತಿನಲ್ಲಿ, ವಿಮಾನದ ವ್ಯಾಪ್ತಿಗೆ ಒಳಗಾದ ಸಮಸ್ತವೂ ಅದರ ದಾಳಿಗೆ ಆಹುತಿಯಾಗುತ್ತದೆ.

ಇಂದು ಯೂರೋಪಿನ ಬಹುಸಂಖ್ಯೆಯ ರಾಜಧಾನಿ ನಗರಗಳ ಮೇಲೆ ವೈಜ್ಞಾನಿಕ ನಿಷ್ಕೃಷ್ಟತೆಯಿಂದ ಬಾಂಬು ಹಾಕಲಾಗುತ್ತಿದೆ, ದುಮುಕು ಬಾಂಬು (Dive bomb) ಹಾಕಲಾಗುತ್ತಿದೆ. ಇಂದು ಅತ್ಯಂತ ಸುಂದರವಾಗಿದ್ದ ನಗರಗಳು ನಾಳೆ ಹಾಳುಬೀಳುಗಳ ಗುಡ್ಡೆಯಾಗುವ ರೀತಿಯಲ್ಲಿ ಅವು ವಿಧ್ವಂಸಗೊಳ್ಳುತ್ತಿವೆ. ಶತ್ರು ಬಾಂಬರಿನಿಂದ ಹಾಕಿದ ಕೆಲವು ಉರಿಬಾಂಬುಗಳು (Incendiary bombs), ನಗರವೆಲ್ಲವನ್ನೂ ಅತ್ಯಲ್ಪ ಕಾಲದಲ್ಲಿ ಒಂದೇ ಬಾರಿಗೆ ಆಹುತಿ ತೆಗೆದುಕೊಳ್ಳಬಲ್ಲ ಉರಿಯನ್ನು ಹೊತ್ತಿಸಬಲ್ಲವು. ಕಟ್ಟಡಗಳ ತಂಡಗಳ ಮೇಲೆ ಕೆಲವು ಬಾಂಬುಗಳು ಬಿದ್ದರೆ ಕಟ್ಟಡಗಳೆಲ್ಲ ನೆಲಸಮವಾಗಿ ಒಳಗಿರುವ ಸಾವಿರಾರು ನಿರ್ದೋಷಿ ಹೆಂಗಸರು ಮಕ್ಕಳು ಅಲ್ಲಿಯೇ ಹೂತುಹೋಗಬಹುದು. ಈ ಉರಿಬಾಂಬುಗಳಿಂದ ಹಾರುವ ಕಿಡಿಗಳು ಮನುಷ್ಯರನ್ನು ಬದುಕಿರುವವರೆಗೂ ಕುಂಟರನ್ನಾಗಿಯೋ ಬೇರೆ ರೀತಿಯಲ್ಲಿ ಅಂಗಹೀನರನ್ನಾಗಿಯೋ ಮಾಡಬಲ್ಲವು, ಅಥವಾ ಅವರನ್ನು ಒಂದೇ ಸಲಕ್ಕೆ ಇಲ್ಲವೆನಿಸಬಲ್ಲವು; ವಿಮಾನಗಳಲ್ಲಿನ ಯಂತ್ರಬಂದೂಕುಗಳು, ತಮ್ಮತಮ್ಮ ನಿತ್ಯಗೆಲಸಗಳಿಗೆ ಹೋಗುತ್ತಿರುವ ಸಾವಿರಾರು ನಿರಪರಾಧಿ

ಪಾದಚಾರಿಗಳನ್ನು ಗುಂಡುಹಾರಿಸಿ ಕೊಲ್ಲಬಲ್ಲವು. ಆಧುನಿಕ ಬಾಂಬರಿನ ಕರಾಳಶಕ್ತಿ ಇಷ್ಟರಮಟ್ಟಿಗಿದೆ.

ವಿಮಾನ, ಅದರ ಹುಟ್ಟು ಮತ್ತು ಬೆಳವಣಿಗೆ– ಇವು ಎಷ್ಟರಮಟ್ಟಿಗೆ ಯುದ್ಧದೊಡನೆ ಸಂಬಂಧಪಟ್ಟಿವೆಯೆಂದರೆ,– ವಿಮಾನ ನಮಗೆ ಲಭಿಸಿದ ವರವಲ್ಲ, ನಮ್ಮ ಮೇಲೆ ಬಿದ್ದ ಶಾಪ ಎಂಬಂತೆ ತೋರುತ್ತಿದೆ. ಅದರಿಂದ ಉದ್ದಕ್ಕೂ ಆಗುತ್ತಿರುವ ದುಃಖಾನುಭವಗಳು ಮಾನವಕೋಟಿಗೆ ಅದರಿಂದ ದೊರೆಯ ಬೇಕಾಗಿರುವ ಅನುಕೂಲತೆಗಳಿಗಿಂತ ಅತಿ ಹೆಚ್ಚಾಗಿವೆ. ಸಾಮಾನ್ಯ ಮನುಷ್ಯನಿಗೆ ಅದರ ಭೀಕರವಾದ ಕೊಲ್ಲುವ ಶಕ್ತಿಯ ಪರಿಚಯ ಹೆಚ್ಚಾಗಿದೆಯೇ ಹೊರತು ಅದು ತನ್ನನ್ನು ಸುರಕ್ಷಿತ ಸ್ಥಳಕ್ಕೆ ಕ್ಷಣದಲ್ಲಿ ಒಯ್ಯಬಲ್ಲದೆಂಬುದರ ಪರಿಚಯ ಕಡಮೆ. ಹೀಗೆ, ವಿಮಾನಪ್ರಯಾಣದಲ್ಲಿ ಮಾನವಕೋಟಿಗೆ ಅನುಕೂಲತೆ ಮತ್ತು ಸುಖಗಳನ್ನು ಒದಗಿಸುವ ಒಳ್ಳೆಯತನ ಒಂದು ಕಡೆ ಇದ್ದರೆ, ಅದಕ್ಕೆ ಸಮತೂಗುವ ಕರಾಳ ಸ್ವಭಾವ ಮತ್ತೊಂದು ಕಡೆ ಇದೆ. ಎಲ್ಲ ಆಧುನಿಕ ವೈಜ್ಞಾನಿಕ ನಿರ್ಮಾಣಗಳೂ ಯಾವಮಟ್ಟಿಗೆ ಮಾನವ ಕೋಟಿಯ ಸ್ಥಿತಿಯನ್ನು ಹೆಚ್ಚು ಸುಖಮಯವಾಗಿ ಮಾಡಬಲ್ಲ ಸಾಮರ್ಥ್ಯ ಹೊಂದಿವೆಯೋ ಅದೇ ಮಟ್ಟಿಗೆ ಅಪಾರ ವಿನಾಶಕ ಶಕ್ತಿಯನ್ನೂ ಹೊಂದಿವೆ: ಇದೇ ಅವೆಲ್ಲವುಗಳ ಮೇಲಿರುವ ಶಾಪ; ಆಕಾಶಯಾನ ಈ ಸೂತ್ರಕ್ಕೆ ಅಪವಾದವೇನೂ ಅಲ್ಲ. ಸಂಕಟಪಡುವ ಒಬ್ಬನ ಶರೀರದ ದುರ್ಮಾಂಸವನ್ನು ತೆಗೆದುಹಾಕಲು ಶಸ್ತ್ರವೈದ್ಯನಿಗೆ ನೆರವಾಗುವ ಚಾಕುವೇ ಕೊಲೆಗಡಿಕನ ಕೈಯಲ್ಲಿ ಒಬ್ಬ ನಿರಪರಾಧಿಯ ಜೀವತೆಗೆಯುವ ಆಯುಧವಾಗುತ್ತದೆ. ರೋಗದಿಂದ ನರಳುತ್ತಿರುವವನ ಹಾಸಿಗೆಯ ಬಳಿಗೆ ಒಬ್ಬನನ್ನು ಬೇಗನೆ ಕರೆದುಕೊಂಡು ಹೋಗುವ ಅಥವಾ ರೋಗಗಳಿಂದಲೂ ಕ್ಷಾಮಗಳಿಂದಲೂ ಪೀಡಿತವಾದ ಪ್ರದೇಶಗಳಿಗೆ ವೈದ್ಯ ಸಹಾಯವನ್ನಾಗಲಿ, ಆಹಾರ ಸಾಮಗ್ರಿಯನ್ನಾಗಲಿ ಶೀಘ್ರವಾಗಿ ಒಯ್ಯಬಲ್ಲ ಅದೇ ರೈಲುಗಾಡಿ, ಸಾವಿರಾರು ಮಂದಿ ನಿರಪರಾಧಿಗಳಿಗೆ ಕ್ರೂರವಾದ ಸಾವನ್ನುಂಟುಮಾಡುವ ಸೈನ್ಯದಳಗಳನ್ನೂ, ಮದ್ದುಗುಂಡುಗಳನ್ನೂ ಅಷ್ಟೇ ಶೀಘ್ರವಾಗಿ ಒಯ್ಯಬಲ್ಲದು. ಮಾನವಕೋಟಿಯ ಸಂಕಷ್ಟಗಳನ್ನು ಕಡಮೆ ಮಾಡುವುದಕ್ಕಾಗಿ ವಿಶೇಷರೀತಿಯ ವಿಷಗಳನ್ನೂ ವಿಷಹಾರಿಗಳನ್ನೂ (Toxins and anti-toxins) ಕಂಡುಹಿಡಿದಿರುವ ವೈಜ್ಞಾನಿಕನೇ ಯಾವ ಸಾಂಕ್ರಾಮಿಕ ರೋಗವೂ ಕೊಲ್ಲಲಾರದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕೊಲ್ಲಬಲ್ಲ ಘೋರ ವಿಷವಾಯುಗಳನ್ನು ಕಂಡುಹಿಡಿದಿದ್ದಾನೆ. ಇದೇ ರೀತಿಯಲ್ಲಿ, ಆಶ್ಚರ್ಯ ವಾಗುವಷ್ಟು ಅತ್ಯಲ್ಪ ಕಾಲದಲ್ಲಿ ಒಬ್ಬನನ್ನು ಪ್ರಪಂಚದ ಸುತ್ತ

ಕರೆದೊಯ್ಯಬಲ್ಲ ವಿಮಾನವೇ ಜನ ಸಮುದಾಯಗಳ ಮತ್ತು ಆಸ್ತಿಪಾಸ್ತಿಗಳ ಮೇಲೆ ಸಾವನ್ನೂ ವಿನಾಶವನ್ನೂ ಮಳೆಗರೆಯಬಲ್ಲ ಭಯಂಕರ ಶಕ್ತಿಯನ್ನು ಹೊಂದಿದೆ. ವಿನಾಶಕ ಶಕ್ತಿಯಲ್ಲಿ ಮನುಷ್ಯನ ವಶದಲ್ಲಿರುವ ಉಳಿದೆಲ್ಲ ಆಯುಧಗಳನ್ನೂ ಮೀರಿಸುವ ಭಯಂಕರ ಆಯುಧವಿದು. ಇಂದು ಪ್ರಕೃತಿ ತನ್ನ ಅಂಕೆಯಲ್ಲಿರುವ ವಿನಾಶಕ ಶಕ್ತಿಯೆಲ್ಲವನ್ನೂ ಈ ಬಾಂಬರಿನ ರೂಪದಲ್ಲಿ ಹೊರಬಿಟ್ಟಿರುವಂತೆ ಕಾಣುತ್ತದೆ. ಇದೆಲ್ಲವನ್ನೂ ನೋಡಿದರೆ, ಹಾರಿಕೆಯ ಗೆಲವು ಹೆಮ್ಮೆಪಡಬೇಕಾದ ಮಹಾಸಾಧನೆಯೇ, ಇಲ್ಲವೆ ಬೇಗನೆ ನಿವಾರಿಸಿಕೊಳ್ಳಬೇಕಾದಂಥ ವ್ರಣಗಟ್ಟಿದ ಒಂದು ಅನಿಷ್ಟ ದುರ್ಮಾಂಸವೇ ಎಂದು ಸಂದೇಹಪಡಬೇಕಾಗುತ್ತದೆ. ವಿಮಾನವನ್ನು ನಿರ್ಮಿಸಿರುವುದರಿಂದ ಒಟ್ಟೊಟ್ಟಿಗೆ ಕೊಲೆ ಮಾಡುವ ಯಂತ್ರ ಸಲಕರಣೆ ಯೊಂದನ್ನು ಮಾನವನು ನಿರ್ಮಿಸಿದಂತಾಗಿಲ್ಲವೆ?– ಎಂದು ಪ್ರಶ್ನಿಸ ಬೇಕಾಗುತ್ತದೆ. ಕಡೆಗೆ ಅಹಿತವಾದ ಅರಿವು ನಮ್ಮಲ್ಲಿ ಮೂಡುತ್ತದೆ: ಆಧುನಿಕ ಪ್ರಗತಿಯೆಲ್ಲವೂ ಮನುಷ್ಯನ ಐಹಿಕ ಆವರಣದಲ್ಲಿ ಆಗಿರುವ ಪ್ರಗತಿ; ಮಾನವನಿನ್ನೂ ಹಿಂದೆ ಹೇಗಿದ್ದನೋ ಹಾಗೆಯೇ ಇದ್ದಾನೆ. ಮನುಷ್ಯನ ಬಯಕೆಗಳನ್ನೂ ಗೆಯ್ಮೆಗಳನ್ನೂ ನೋಡಿದರೆ ಅವನು ಪ್ರಾಕೃತನಾಗಿ, ಪ್ರಾಚೀನ ಕಾಲದ ಗವಿಯ ಮನುಷ್ಯ ಪ್ರಾಣಿಯಾಗಿ, ಪಶು ಸಹಜವಾದ ಬುದ್ಧಿಯುಳ್ಳವನಾಗಿ ಕಾಣುತ್ತಾನೆ. ಅವನ ರಕ್ತದಾಹ ಇನ್ನೂ ಹಿಂಗಿಲ್ಲ, ಅವನು ಸ್ವಲ್ಪವಾದರೂ ಮುಂದುವರಿದಿಲ್ಲ. ಅವನ ಮೇಲಾದ ಬುದ್ಧಿಶಕ್ತಿಯಿಂದೊಗೆದ ನಿರ್ಮಾಣವೆಲ್ಲ ಅವನ ಪ್ರಾಕೃತ ಮನಸ್ಸನ್ನು ತೃಪ್ತಿಪಡಿಸುವ ಯಂತ್ರವಾಗಿದೆಯೇ ಹೊರತು ಬಳಲಿರುವ ಅವನನ್ನು ಪ್ರಗತಿಪಥದಲ್ಲಿ ಕರೆದೊಯ್ಯುವ ತಂತ್ರವಾಗಿಲ್ಲ.

* * * *

ಪ್ರಕರಣ ೭

ವಿಮಾನದ ಪರಿಮಿತಿಗಳು: ಅದರ ಮುಂದಿನ ಬೆಳವಣಿಗೆ

ಹಿಂದಿನ ಪ್ರಕರಣವೊಂದರಲ್ಲಿ ಸೂಚಿಸಿರುವಂತೆ, ೩೦ ವರ್ಷಗಳ ಕಾಲಾವಧಿಯಲ್ಲಿ ಆಗಿರುವ ವಾಯುಯಾನ ವಿಜ್ಞಾನದ ಬೆಳವಣಿಗೆ ಮತ್ತು ಪ್ರಗತಿ ಚಕಿತಗೊಳಿಸುವಂತಿವೆ, ಮತ್ತು ಆಧುನಿಕ ವಿಜ್ಞಾನದ ಚರಿತ್ರೆಯಲ್ಲಿ ಹೋಲಿಕೆಯಿಲ್ಲದವಾಗಿವೆ. ವಿಮಾನದ ಮೊದಲಿನ ವೇಗವೂ ಕಾರ್ಯದಕ್ಷತೆಗೂ ಹನ್ನೆರಡು ಮಡಿ ಹೆಚ್ಚಿವೆ; ಮುಂದೆ ಅದರ ವೇಗ ೧,೦೦೦ ಮೈಲಿಗಳವರೆಗೆ ಕೂಡ ಹೆಚ್ಚಬಹುದೆಂದು ತಜ್ಞರು ಭವಿಷ್ಯ ಹೇಳುತ್ತಿದ್ದಾರೆ. ಆದರೂ ಕೂಡ, ಭವಿಷ್ಯದ ಪ್ರಯಾಣದ ಎಲ್ಲ ಆವಶ್ಯಕತೆಗಳನ್ನೂ ವಿಮಾನ ಪೂರೈಸಲಾರದು. ಅನೇಕರು ಈ ಹೇಳಿಕೆಯನ್ನು ತಿಳಿದುಕೊಳ್ಳದೆ ಹೋಗುವರು ಮತ್ತು ಇದರ ನಿಜತ್ವವನ್ನು ಪ್ರಶ್ನಿಸುವರು. ಇದು ನ್ಯಾಯವೆ. ಗಂಟೆಗೆ ೧,೦೦೦ ಮೈಲಿಗಳವರೆಗೆ ಹೋದರೆ ಸಾಕು, ಭವಿಷ್ಯದ ಪ್ರಯಾಣದ ಆವಶ್ಯಕತೆಗಳೆಲ್ಲವನ್ನೂ ಪೂರೈಸಿದಂತೆ– ಎಂದು ಅವರು ಬಗೆಯುವರು. ಕಡೆಯಲ್ಲಿ ಇದಕ್ಕಿಂತ ಇನ್ನೂ ಹೆಚ್ಚಿನ ವೇಗಗಳು ಅವಶ್ಯ. ಆದರೂ ಸಹ, ನಿರ್ಮಾಣ ಕಾರ್ಯದಲ್ಲೂ ಹೊಸಹೊಸದನ್ನು ಕಂಡುಹಿಡಿಯುವ ಕಾರ್ಯದಲ್ಲೂ ಉಂಟಾಗುವ ಅಭಿವೃದ್ಧಿಯ ಸಾಧಾರಣ ಮಟ್ಟ ಅಂಥ ವೇಗಪ್ರಯಾಣಗಳಿಗೆ ಅನುಗುಣವಾಗಿರುವುದೆಂದು ಊಹಿಸುವುದು ಸಕಾರಣವಾಗಿರಲಾರದೆ? ಆಕಾಶಯಾನದಲ್ಲಿ ಆಶ್ಚರ್ಯಕರವಾದ ಬೆಳವಣಿಗೆಯೂ ಪ್ರಗತಿಯೂ ಸಾಧಿಸಲ್ಪಟ್ಟಿರುವುದು ನಿಜವಾದರೂ, ಮಹಾಯುದ್ಧವು ವಿಮಾನ ಹಾರಿಕೆಯಲ್ಲಿ ಕ್ರಾಂತಿಯನ್ನುಂಟುಮಾಡಿತೆಂಬುದನ್ನೂ ಅದೇ ರೀತಿಯ ಪ್ರಗತಿಯನ್ನು ನಿರೀಕ್ಷಿಸುವುದು ಸಕಾರಣವಾಗಿಲ್ಲವೆಂಬುದನ್ನೂ ಅಲಕ್ಷಿಸಕೂಡದು.

ಈ ಸಂದುಕಟ್ಟಿನಲ್ಲೆ ಮೇಲಾಕಾಶಯಾನದ (Astranautics or Space Flight) ವಿಜ್ಞಾನ ಕ್ರಮಕ್ರಮವಾಗಿ ಜನಗಮನಕ್ಕೆ ತಾನಾಗಿ ಎದ್ದು ಕಾಣಿಸಿ ಕೊಳ್ಳುವುದು. ಕಳೆದ ಅನೇಕ ವರ್ಷಗಳಿಂದ ಉತ್ಸಾಹಶಾಲಿಗಳಾದ ಕಾರ್ಯಕರ್ತರು, ವೈಜ್ಞಾನಿಕರು, 'ಕನಸುಗಾರ'ರು ಮತ್ತು ವ್ಯವಹಾರತಜ್ಞರು ಹೊರ ಆಕಾಶದ ನಿರ್ವಾಯು ಪ್ರದೇಶದಲ್ಲಿ ಅಥವಾ ಶೂನ್ಯಾಕಾಶದಲ್ಲಿ ಸಂಚಾರ ಮಾಡುವ

ಸಮಸ್ಯೆಯನ್ನು ಬಿಡಿಸಲು ಹೆಣಗುತ್ತಿದ್ದಾರೆ. ಭೂಮಿಯ ವಾತಾವರಣದ ಮೇಲಣ ಮಿತಿಯ ಪ್ರದೇಶಗಳಲ್ಲಿ ಮಾತ್ರವಲ್ಲದೆ ಅದರಾಚೆಯ ಮೇಲಾಕಾಶದ ಶೂನ್ಯದಲ್ಲೂ ಹಾರಲು ಇರಬೇಕಾದ ಸ್ಥಿತಿಗತಿಗಳ ಸಂಬಂಧವಾಗಿ ಅವರುಗಳು ಪಟ್ಟ ಶ್ರಮ, ಮಾಡಿದ ಪ್ರಯೋಗಗಳು, ಲೆಕ್ಕಾಚಾರಗಳು, ವಿಭಜನೆಗಳು– ಇವುಗಳ ಫಲವೇ ಮೇಲಾಕಾಶಯಾನವೆಂಬ ನೂತನ ವಿಜ್ಞಾನ ಭಾಗದ ಮೂಲಾಧಾರ.

ಸಾಂದ್ರತೆಯಲಿ ಅತ್ಯಂತ ಕಡಮೆಯಾಗಿರುವ ಮೇಲಣ ಮತ್ತು ಹೊರ ಆಕಾಶಗಳಲ್ಲಿ ಸಂಚರಿಸಲು ಸಾಮಾನ್ಯ ವಿಮಾನ ವಿಕಾಸ ಮಾಡುವ ಸಾಮರ್ಥ್ಯದ ಅಂಶ ಮಾತ್ರ ಸಾಕು; ಅಲ್ಲದೆ, ಅಷ್ಟು ಎತ್ತರದಲ್ಲಿ ಎಂದೆಂದಿಗೂ ಏನೂ ವ್ಯತ್ಯಾಸವಾಗದ 'ಅನಂತ ಯಥಾಸ್ಥಿತಿ' (Eternal sameness) ನೆಲಸಿರುತ್ತದೆ. ಭೂಮಿಯ ಮೇಲ್ಮೈಯ ಹತ್ತಿರ ಹತ್ತಿರದಲ್ಲಿ ಸಂಧಿಸಲಾಗುವ ಮಂಜು, ಹಿಮ, ಮಿಂಚು– ಇವುಗಳಂಥ ಪ್ರತಿಕೂಲ ವಾಯುಗುಣಸ್ಥಿತಿಗಳು ಅಲ್ಲಿಲ್ಲ. ಆದ್ದರಿಂದ, ಕೆಳಮಟ್ಟದ ಸ್ಥಿತಿಗಳು ಹೇಗೇ ಇರಲಿ, ಆ ಎತ್ತರದ ಮಟ್ಟಗಳಲ್ಲಿ ಅತಿ ಹೆಚ್ಚಿನ ವೇಗಗಳಲ್ಲಿ ಸುರಕ್ಷಿತವಾಗಿಯೂ ಭರವಸೆಯಿಂದಲೂ ಸಂಚರಿಸುವುದು ಯಾವಾಗಲೂ ಸಾಧ್ಯ.

ಇದಲ್ಲದೆ, ಒಳರಿತದ ಎಂಜಿನ್ನುಳ್ಳ ಯಾವ ರೂಪದ ವಿಮಾನವೂ ಈ ಸಾಂದ್ರತೆ ಕಡಮೆಯಾದ (Rerefied) ಪ್ರದೇಶಗಳಲ್ಲಿ– ನಾವು ಊಹಿಸುವ ಮಟ್ಟಿಗೆ– ನಡೆಯಲಾರದಾದ್ದರಿಂದಲೂ, ಘರ್ಷಣೆಯಿಂದ ಉತ್ಪತ್ತಿಯಾಗುವ ಕಾವಿನ ದೆಸೆಯಿಂದ ಕೆಳಗಣ ಪ್ರದೇಶಗಳಲ್ಲಿ ಅತಿ ಹೆಚ್ಚಿನ ವೇಗಗಳಲ್ಲಿ ವಿಮಾನಹಾರಿಕೆ ತೀರ ಅಸಾಧ್ಯವಾದದ್ದರಿಂದಲೂ, ಪೂರ್ತ ಹೊಸ ಮಾದರಿಯ ಮೇಲಾಕಾಶನಾವೆ (Space ship) ವಿಕಾಸಗೊಳ್ಳಬೇಕಾಯಿತು. ಈ ಮೇಲಾಕಾಶದ ಹಾರಿಕೆ ತೀರ ಹೊಸದಾದ ವಿಜ್ಞಾನ; ಇದನ್ನು ಮೇಲಾಕಾಶಯಾನ ಎಂದು ಕರೆದಿದೆ.

ಇಂದಿನ ಕಾಲದ ವಿಮಾನದ ಸಂಬಂಧವಾಗಿ ಅಪರಿಮಿತವಾದ ಪ್ರಗತಿ ಬೆಳವಣಿಗೆಗಳಾಗಿರುವುವಾದರೂ, ಅದರ ಭವಿತವ್ಯದ ಬಗ್ಗೆ ಪ್ರತಿಭಾಪೂರ್ಣ ಭವಿಷ್ಯವಾಣಿಗಳು ನುಡಿದಿರುವುವಾದರೂ, ಮೇಲಾಕಾಶಯಾನ ವಾದಿಗಳು ಈ ರೀತಿ ಪ್ರತಿಪಾದಿಸುತ್ತಾರೆ: ಮೇಲಾಕಾಶಯಾನದ ಶಕ್ಯತೆ ಬಹಳ ವಿಶಾಲವಾದದ್ದು, ಬಹಳ ಮಹತ್ತರವಾದದ್ದು; ಹಿಂದಿನ ಕಾಲದ ಕುದುರೆಯ ಮಜಲುಬಂಡಿಯೊಡನೆ ಸ್ವಯಂಚಲಿ ಎಂಜಿನ್ನನ್ನಾಗಲಿ ಮೋಟಾರು ಬಂಡಿಯನ್ನಾಗಲಿ ಹೋಲಿಸಿದರೆ, ಪ್ರಯಾಣಿಕರನ್ನು ಒಯ್ಯುವ ವಿಧಾನದಲ್ಲಿ ಇವುಗಳಿಂದ ಎಷ್ಟು ದೊಡ್ಡ

ಕ್ರಾಂತಿಯುಂಟಾಯಿತೆಂದು ಸ್ಪಷ್ಟವಾಗುತ್ತದೆ; ಅದೇ ರೀತಿಯಲ್ಲಿ, ಈಗಿನ ಕಾಲದ ಆಕಾಶಯಾನದೊಡನೆ ಭವಿಷ್ಯದ ಮೇಲಾಕಾಶಯಾನವನ್ನು ಹೋಲಿಸಿದರೆ, ಮುಂದೆ ಅದರಿಂದ ಅಷ್ಟೇ ದೊಡ್ಡ ಕ್ರಾಂತಿಯುಂಟಾಗುವ ಅವಕಾಶವಿದೆಯೆಂದು ಹೇಳಬಹುದಾಗಿದೆ. ಇನ್ನು ಮುಂದೆ ದೂರಪ್ರಯಾಣಗಳನ್ನು ದಿನಗಟ್ಟಲೆಯಲ್ಲಿ ಮಾಡುವ ಭರವಸೆ ಆಕಾಶ ಹಾರಿಕೆಯಲ್ಲಿ ಇದ್ದರೆ, ಆ ಪ್ರಯಾಣಗಳನ್ನೆ ಗಂಟೆಗಟ್ಟಲೆಯಲ್ಲಿ ಮಾಡುವ ಭರವಸೆ ಮೇಲಾಕಾಶ ಹಾರಿಕೆಯಲ್ಲಿ ಉಂಟು. ನಿಜವಾಗಿ, ಪ್ರಪಂಚದ ಎಷ್ಟೇ ದೂರದ ಭಾಗಕ್ಕಾದರೂ ಸಹ ಮೇಲಾಕಾಶ ಹಾರಿಕೆಯ ಮೂಲಕ ಪ್ರಯಾಣ ಮಾಡಿದರೆ ೨–೩ ಗಂಟೆಗಳಿಗಿಂತ ಹೆಚ್ಚಾಗಿ ಹಿಡಿಯಲಾರದೆಂದು ಖಂಡಿತವಾಗಿ ಹೇಳಲಾಗಿದೆ. ಇಷ್ಟೇ ಅಲ್ಲದೆ, ಈ ಮಜಲನ್ನು ಮುಟ್ಟಿದ ಮೇಲೆ, ಚಂದ್ರಮಂಡಲಕ್ಕಾಗಲಿ ಅಂಗಾರಕ ಗ್ರಹಕ್ಕಾಗಲಿ ಶುಕ್ರ ಗ್ರಹಕ್ಕಾಗಲಿ ಪ್ರಯಾಣಗಳು ಅಸಾಧ್ಯವಾಗಿರುವ ಬದಲು ಸಾಧ್ಯವಾಗಬಹುದು.

ಗಂಟೆಗಳಲ್ಲಿ ಪ್ರಯಾಣ ಮಾಡುವ ಆದರ್ಶವನ್ನಾಗಲಿ, ಗ್ರಹಾಂತರ ಪ್ರಯಾಣ ಗಳನ್ನಾಗಲಿ ವಿಮಾನ ಎಂದಿಗೂ ಸಾಧಿಸಲಾರದು. ಮೊದಲನೆಯದಾಗಿ, ಭೂಮಿಯ ವಾಯುಮಂಡಲದ ಮೂಲಕ ಹೋಗುವ ಯಾವುದಾದರೂ ಕ್ಷಿಪಣಿಯ ವೇಗ ಒಂದು ಗೊತ್ತಾದ ಮಟ್ಟದ ವೇಗಕ್ಕಿಂತ ಹೆಚ್ಚಿದರೆ, ವಾಯುವಿನ ನಿರೋಧದ ಪರಿಣಾಮವಾಗಿ ಉತ್ಪತ್ತಿಯಾದ ಕಾವು ಕ್ಷಿಪಣಿಯ ಶಾಕವನ್ನು ಹೆಚ್ಚಿಸುತ್ತದೆಂಬುದು ಖಚಿತವಾಗಿ ತಿಳಿದ ವಿಷಯ. ಉಲ್ಕೆ ಬೀಳುವಾಗ ಅದರಲ್ಲಿ ಉತ್ಪತ್ತಿಯಾಗುವ ಕಾವು ಅದರಲ್ಲಿನ ಖನಿಜ ಪದಾರ್ಥವೆಲ್ಲವನ್ನೂ ಸಂಪೂರ್ಣವಾಗಿ ಸುಟ್ಟುಹಾಕಿ ಬಿಡುವಷ್ಟು ಭೀಕರವೆಂಬ ಸಂಗತಿಯನ್ನು ಎಲ್ಲರೂ ಬಲ್ಲರು. ಕ್ಷಿಪಣಿಗೆ ಅನ್ವಯಿಸುವಂಥದು ಯಾವ ಪ್ರಯಾಣಿಕ ವಾಹನಕ್ಕಾದರೂ ಅನ್ವಯಿಸುತ್ತದೆ. ಹೀಗೆ, ವಿಮಾನ ಗಂಟೆಗೆ ೪೫,೦೦೦ ಮೈಲಿಗಳ ವೇಗದಲ್ಲಿ ಹೋಗಬಲ್ಲದೆಂದು ಇಟ್ಟುಕೊಂಡರೂ, ವಾಯುವಿನೊಡನೆ ಯಂತ್ರದ ಘರ್ಷಣೆಯಿಂದ ಸೃಷ್ಟಿಯಾಗುವ ಕಾವು ಎಷ್ಟು ಹೆಚ್ಚಾಗಿರುತ್ತದೆಯೆಂದರೆ, ವಿಮಾನದಲ್ಲಿರುವವರು ಜೀವ ಸಹಿತ ಬೆಂದು ಹೋಗುವರು. ಇದಲ್ಲದೆ, ಎರಡು ಮುಖ್ಯಕಾರಣಗಳಿಗಾಗಿ, ೧೦೦ ಮೈಲಿಗಳ ಮಟ್ಟಕ್ಕಿಂತ ಆಚೆಗೆ ಏರಲು ವಿಮಾನಕ್ಕೆ ಸಂಪೂರ್ಣವಾಗಿ ಅಸಾಧ್ಯ. ಮೊದಲನೆಯದಾಗಿ, ಆ ಎತ್ತರದಲ್ಲಿ ವಾಯುವಿನ ಸಾಂದ್ರತೆ, ವಿಮಾನ ಈಗ ಹಾರುವ ಸಾಧಾರಣ ಎತ್ತರಗಳಲ್ಲಿರುವ ವಾಯುವಿನ ಸಾಂದ್ರತೆ ಎಷ್ಟಿರುತ್ತದೆಯೊ ಅದರ ಕೋಟ್ಯಂಶಕ್ಕಿಂತ ಕಡಮೆಯಾಗಿರುತ್ತದೆ; ಆದ್ದರಿಂದ, ಎಷ್ಟೇ ಬಲವಾದ ಸಾಮರ್ಥ್ಯವನ್ನೊದಗಿಸಿದ್ದರೂ ಅದು ಉಪಯೋಗಕರವಾದ ಎಳೆಯುವ

ಪರಿಣಾಮವುಂಟಾಗುವ ರೀತಿಯಲ್ಲಿ ಚಾಲಕವನ್ನು ಪ್ರಚೋದಿಸಲಾರದು. ಎರಡನೆಯದಾಗಿ, ಆವಶ್ಯಕವಾದ ಹೊತ್ತಿಕೊಳ್ಳುವ ಮಿಶ್ರಣವನ್ನೊದಗಿಸಲು ತಕ್ಕಮಟ್ಟಿಗೆ ವಿಪುಲವಾಗಿ ಆಮ್ಲಜನಕವುಳ್ಳ ವಾಯುವಿನ ಸರಬರಾಯಿ ಪೆಟ್ರೋಲು ಎಂಜಿನ್ನಿಗೆ ಅತ್ಯಾವಶ್ಯಕ. ಆ ಎತ್ತರದಲ್ಲಿ ವಾಯು ಬಹು ಕಡಮೆಯ ಸಾಂದ್ರತೆ ಯುಳ್ಳದ್ದಾದ್ದರಿಂದ ಈ ಉದ್ದೇಶಕ್ಕೆ ಅನುಪಯುಕ್ತ ಮಾತ್ರವಲ್ಲ, ಬಹುಶಃ ಅದರಲ್ಲಿ ಆಮ್ಲಜನಕವೇ ಇದ್ದಿರಲಾರದು. ಸಮುದ್ರಮಟ್ಟಕ್ಕೆ ಐದೂವರೆ ಮೈಲಿ ಮಾತ್ರ ಎತ್ತರದಲ್ಲಿರುವ ಗೌರೀಶಂಕರ ಶಿಖರದ ಮೇಲೆ ಹಾರಹೊರಟ ಈಚಿನ ಪ್ರಯತ್ನದಲ್ಲಿ ಕೂಡ, ವಾಯುವಿನ ಸಾಂದ್ರತೆಯ ಕೊರತೆಯನ್ನು ಎದುರಿಸುವುದಕ್ಕಾಗಿ ಎಂಜಿನ್ನುಗಳಿಗೆ ಅವಶ್ಯ ಶಕ್ತಿಯ ಅಧಿಕಪೂರಣ (Supercharge) ಮಾಡಬೇಕಾದದ್ದು ಅವಶ್ಯವಾಯಿತು. ಆದ್ದರಿಂದ, ಇದಕ್ಕಿಂತ ೨೦ರಷ್ಟು ಹೆಚ್ಚಿನ ಎತ್ತರದಲ್ಲಿ ಒಳ ಉರಿತದ ಎಂಜಿನ್ನಿನ (Internal Combustion Engine) ಸಹಾಯದಿಂದ ಹಾರಲಾಗುವುದೆಂದು ನಿರೀಕ್ಷಿಸುವುದು ಹೇಗೆ ಅಸಾಧ್ಯವೆಂಬುದು ಸ್ಪಷ್ಟವಾಗಿಯೇ ಇದೆ.

ಮೇಲಾಕಾಶ ಹಾರಿಕೆ, ರಾಕೆಟ್ ಹಾರಿಕೆ (Stratosphere and Rocket Flight)

ಮೇಲಾಕಾಶಯಾನದ (Astranautics) ಮುಂದಿನ ಗುರಿ ಏನೂ ಇಲ್ಲದ ಶೂನ್ಯಪ್ರದೇಶದಲ್ಲಿ ಹಾರುವುದಾಗಿದೆ. ಆದ್ದರಿಂದ, ಮೊದಲು ವೈಜ್ಞಾನಿಕರು ಮೇಲಾಕಾಶ (Space or Stratosphere) ಎಂದು ಕರೆಯುವಂಥದು ಏನೆಂಬುದನ್ನು ತಿಳಿದುಕೊಳ್ಳಬೇಕು. ಭೂಮಿಯ ಮೇಲ್ಮೈಯಿಂದ ೧೦ ಮೈಲಿಗಳ ಮಟ್ಟದ ಮೇಲಣ ವಾಯುಮಂಡಲದ ಪ್ರದೇಶಕ್ಕೆ ಮೇಲಾಕಾಶ (ಅಥವಾ ಮೇಲ್ವಾಯುಮಂಡಲ) ಎಂದು ಹೆಸರು. ಈ ಪ್ರದೇಶದಲ್ಲಿ ಮೋಡಗಳು, ಬಿರುಗಾಳಿ ಮಳೆಗಳು, ಹಿಮ, ನೀರ್ಗಲ್ಲು, ಋತುಗಳು, ವಾಯುಗುಣ ವ್ಯತ್ಯಾಸಗಳು– ಇವು ಯಾವವೂ ಇಲ್ಲ; ಮತ್ತು ಒಂದು ದತ್ತ ಸ್ಥಳದಲ್ಲಿನ ವಾಯುವಿನಲ್ಲೆಲ್ಲ ಯಾವಾಗಲೂ ಒಂದೇ ಸಮವಾಗಿರುವ ಶಾಖವಿರುತ್ತದೆ. ಪ್ರಪಂಚದ ಈ ಮೇಲ್‌ಚಾವಣಿಯ ಬಗ್ಗೆ ನಮಗಿರುವ ತಿಳಿವಳಿಕೆ ಇನ್ನು ಅತ್ಯಲ್ಪ; ಅದನ್ನು ಇನ್ನೂ ಪರಿಶೋಧಿಸಿ ನೋಡಿ ಅಂತ್ಯದಲ್ಲಿ ಅದನ್ನು ಗೆದ್ದದ್ದೇ ಆದರೆ, ವಿಶ್ವದ ವಿಷಯವಾಗಿ ನಮ್ಮ ಭಾವನೆ ತೀರ ಮಾರ್ಪಡಬೇಕಾಗುತ್ತದೆ. ಮೇಲಣ ಆಕಾಶವನ್ನು ಪರೀಕ್ಷಿಸಿ ತಿಳಿಯಬೇಕೆಂಬ ಪ್ರಯತ್ನಗಳು ೧೮ನೆಯ ಶತಮಾನದಲ್ಲೇ ಮೊದಲಾದುವು. ಮೊದಮೊದಲಿನ ಅಗ್ರಗಾಮಿಗಳ ಪ್ರಯೋಗಗಳಿಂದ ಮೇಲಣ

ಆಕಾಶದ ವಿಷಯವಾಗಿ ಹೆಚ್ಚಾದ ತಿಳಿವಳಿಕೆ ಸಂಗ್ರಹಿಸಿಕೊಳ್ಳಲು ನಮಗೆ ಸಹಾಯವಾಗಿದೆ. ಆಕಾಶಬುಟ್ಟಿಗಳಲ್ಲಿ ಮೇಲಕ್ಕೇರಿದ ಮನುಷ್ಯರು ತಾವು ಮೇಲಕ್ಕೇರಿದಂತೆಲ್ಲ ವಾತಾವರಣ ಬರುಬರುತ್ತ ಹೆಚ್ಚು ಹೆಚ್ಚು ತಣ್ಣಗೂ ವಿರಳವಾಗಿಯೂ ಹಗುರವಾಗಿಯೂ ಪರಿಣಮಿಸುತ್ತ ಬಂದಿತೆಂಬುದನ್ನು ಕಂಡುಹಿಡಿದರು. ಹೆಚ್ಚಿನ ಶೈತ್ಯ ಅವರಿಗೆ ಸಾಯುವಮಟ್ಟಿನ ಚಳಿ ಹಿಡಿಸುವ ಭಯ ತೋರಿಸಿತು, ವಾಯುವಿನ ವಿರಳತೆ ಅವರಿಗೆ ಉಸಿರಾಡಲು ಕಷ್ಟವಾಗುವಂತೆ ಮಾಡಿತು. ಈ ರೀತಿ, ಮೇಲಾಕಾಶದಲ್ಲೂ ಅದರಾಚೆಯ ಪ್ರದೇಶಗಳಲ್ಲೂ ನಾವು ಮೇಲೆಮೇಲೆ ಹೋದಂತೆಲ್ಲ ವಾಯು ಹೆಚ್ಚು ಹೆಚ್ಚು ವಿರಳವಾಗುತ್ತ ಬರುತ್ತದೆ, ಮತ್ತು ಹೆಚ್ಚು ಹೆಚ್ಚು ಚಳಿಯಾಗುತ್ತದೆ. ಒಂದು ಗೊತ್ತಾದ ಎತ್ತರವಾದ ಮೇಲೆ, ಅಲ್ಲಿ ವಾಯುವಿರುವುದಿಲ್ಲ, ಮತ್ತು ಒಂದು ಬಗೆಯ ಶೂನ್ಯ ಮೊದಲಾಗುತ್ತದೆ.

ಮೇಲಾಕಾಶದಲ್ಲಿ ಹಾರುವ ವಿಜ್ಞಾನವೇ ಮೇಲಾಕಾಶಯಾನ. ಮೇಲಾಕಾಶದಲ್ಲಿ ಹಾರುವುದೆಂದರೆ ಭೂಮಿಯ ವಾತಾವರಣದ ಪ್ರದೇಶದಲ್ಲೂ ಅದರಾಚೆಯ ಶುದ್ಧಾಕಾಶದಲ್ಲೂ (Ether) ಮಾಡುವ ಪ್ರಯಾಣ ಎಂದರ್ಥ. ಈ ಶುದ್ಧಾಕಾಶವನ್ನು ಬಹುಮಟ್ಟಿಗೆ– ಆದರೆ ಪೂರ್ತಿಯಾಗಲ್ಲ– ಪರಿಪೂರ್ಣ ಶೂನ್ಯಪ್ರದೇಶ (ಅಥವಾ ನಿರ್ವಾಯು ಪ್ರದೇಶ) ಎಂದು ಪರಿಗಣಿಸಲಾಗಿದೆ.

ಸ್ವಲ್ಪ ವಿಚಾರಮಾಡಿ ನೋಡಿದರೆ, ತನ್ನ ಚಲನೆಗೆ ಚಾಲಕವನ್ನಾಶ್ರಯಿಸಿ ಕೊಂಡಿರುವ ಯಾವ ರೂಪದ ಯಂತ್ರವೂ ನಾವು ಊಹಿಸುವ ಮಟ್ಟಿಗೆ ಶೂನ್ಯದಲ್ಲಿ ನಡೆಯಲಾರದು. ಏಕೆಂದರೆ, ಅಲ್ಲಿ ಎಳೆಯುವ ಕಾರ್ಯಸಿದ್ಧಿ (Tractive effect) ಉಂಟಾಗಿರುವುದಿಲ್ಲ. ಆದರೆ ರಾಕೆಟ್‌ನಿಂದ (Rocket: ಆಕಾಶ ಬಾಣದಂಥ ಮೇಲಕ್ಕೆ ಚಿಮ್ಮಿಹಾರುವ ಸಾಧನವಿಶೇಷ) ಚಾಲನೆಗೊಂಡ ಹಡಗು (ನಾವೆ) ಶೂನ್ಯದಲ್ಲಿ ಕಾರ್ಯ ಮಾಡಬಲ್ಲದು. ಭೂಮಿಯನ್ನು ಸುಮಾರು ೧೦ ಮೈಲಿಗಳವರೆಗೆ ಆವರಿಸಿಕೊಂಡಿರುವ, ತಕ್ಕಮಟ್ಟಿಗೆ ಸಾಂದ್ರವಾಗಿರುವ ವಾತಾವರಣದಲ್ಲಿ ಚಾಲಕದಿಂದ ನಡೆಯುವ ವಿಮಾನ ಹೇಗೆ ಸಮರ್ಥವಾಗಿ ಕಾರ್ಯ ಮಾಡಬಲ್ಲದೊ ವಾಯು ತೀರ ವಿರಳವಾಗಿರುವ ಕಡೆ ರಾಕೆಟ್ಟಿನಿಂದ ನಡೆಯುವ ನಾವೆ ಹಾಗೆ ಪರಮಾವಧಿಯ ಸಮರ್ಥತೆಯಿಂದ ಕಾರ್ಯ ಮಾಡಬಲ್ಲದು.

ರಾಕೆಟ್ ಮೋಟಾರನ್ನು ತೀವ್ರವಾಗಿ ಗುಂಡು ಹಾರಿಸುವ ಫಿರಂಗಿಗೆ ಹೋಲಿಸಬಹುದು. ಫಿರಂಗಿ ಹಾರಿಸಿದಾಗ ಅದು ಹಿಂದಕ್ಕೆ ಸರಿಯುತ್ತದೆಂದು

ಪ್ರತಿಯೊಬ್ಬರಿಗೂ ಗೊತ್ತು; ದೊಡ್ಡ ಫಿರಂಗಿಗಳಾದರೆ ಈ ಹಿಂಜರಿತ ಬಹು ಸ್ಪಷ್ಟವಾಗಿ ಕಾಣುತ್ತದೆ. ಒಂದು ದೊಡ್ಡ ಫಿರಂಗಿಯನ್ನು ಚಕ್ರಗಳ ಮೇಲೆ ಕೂರಿಸಿ, ನೀರ್ಗಲ್ಲು ಮುಚ್ಚಿದ ಸರೋವರದಂಥ ಬಹು ನಯವಾದ ಮೇಲ್ಮೈಯ ಮೇಲೆ ಇಟ್ಟು ಅದನ್ನು ಶೀಘ್ರವಾಗಿ ಹಾರಿಸಿದರೆ ಫಿರಂಗಿ ತಕ್ಕಮಟ್ಟಿನ ವೇಗದಲ್ಲಿ ಹಿಂದಕ್ಕೆ ಚಲಿಸುತ್ತದೆ. ಅದೇ ರೀತಿಯಲ್ಲಿ, ಆಕಾಶದ ಕಡೆಗೆ ಮೂಗು ಮಾಡಿಕೊಂಡು, ಕೆಳಕ್ಕೆಳೆದು ಹಿಡಿಯಲು ತಳದಲ್ಲಿ ಏನೂ ಇಲ್ಲದ ರಾಕೆಟ್ಟು ಸಿಡಿತಗಳ ಪರಂಪರೆಯಿಂದ ಚಾಲನೆಗೊಂಡು ಆಕಾಶಕ್ಕೆ ಚಿಮ್ಮಿ ಹೋಗುತ್ತದೆ. ಫಿರಂಗಿಗೂ ರಾಕೆಟ್ಟಿಗೂ ತತ್ವದಲ್ಲಿರುವ ಒಂದೇ ಒಂದು ವ್ಯತ್ಯಾಸವೇನೆಂದರೆ: ಫಿರಂಗಿ ಒಂದು ಕ್ಷಿಪಣಿಯನ್ನು ಹೊರಬಿಡುತ್ತದೆ, ರಾಕೆಟ್ಟು ಸಿಡಿತದಿಂದ ಉಂಟಾದ ಅನಿಲವನ್ನು ಹೊರಬಿಡುತ್ತದೆ. ಈಗ, ನಿರ್ವಾಯು ಪ್ರದೇಶದಲ್ಲಿ (ಅಥವಾ ಶೂನ್ಯಾಕಾಶದಲ್ಲಿ) ಕಾರ್ಯಮಾಡುವುದು ಹೇಗೆಂಬ ಪ್ರಶ್ನೆ ಏಳುತ್ತದೆ. ರಾಕೆಟ್ಟು ಮೇಲಕ್ಕೆ ಚಿಮ್ಮುವುದು, ಸಿಡಿತಗಳು ವಾಯುವನ್ನು ನೂಕುವುದರಿಂದ ಅಲ್ಲ; ಅವು ರಾಕೆಟ್ಟನ್ನೇ ನೂಕುತ್ತವೆ. ಸಿಡಿದ ಅನಿಲ ತಪ್ಪಿಸಿಕೊಂಡು ಹೋಗದಂತೆ ಅದನ್ನು ವಾಯು ತಡೆಯುವುದರಿಂದ, ವಾಯುವಿರುವುದು ಒಂದು ಅಡಚಣೆಯೆ. ಡೈನಮೈಟು ಬಂಡೆಗಳನ್ನು ಹೇಗೆ ಒಡೆಯುತ್ತದೆ ಎಂಬುದನ್ನು ನೆನಪಿಗೆ ತಂದುಕೊಂಡರೆ ಈ ತತ್ವವನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಬಂಡೆಯ ಮೇಲೆ ಡೈನಮೈಟಿನ ಮದ್ದನ್ನು ಇಟ್ಟು ಅದರ ಮೇಲೆ ಏನನ್ನಾದರೂ ತೆಳ್ಳನೆಯ ಮುಚ್ಚಿಗೆಯನ್ನು ಮುಚ್ಚಿ ಮದ್ದು ಹೊತ್ತಿಸಿದರೆ, ಡೈನಮೈಟು ಮೇಲಣ ಮುಚ್ಚಿಗೆಯನ್ನು ಎಗುರಿಸಿಬಿಟ್ಟು ಬಂಡೆಯನ್ನು ಒಡೆಯುತ್ತದೆ. ಇದರಿಂದ ಸಿದ್ಧವಾಗುವುದೇನೆಂದರೆ, ಸಿಡಿತಗಳು ತಮಗೆ ಅತ್ಯಂತ ನಿರೋಧವೊಡ್ಡುವ ಪದಾರ್ಥಗಳನ್ನು ನೂಕುತ್ತವೆ. ಹಾಗಿಲ್ಲದಿದ್ದ ಪಕ್ಷದಲ್ಲಿ, ಡೈನಮೈಟು ಬಂಡೆಯನ್ನು ಒಡೆಯುವುದರ ಬದಲು ತನ್ನ ಪಾಡಿಗೆ ತಾನು ವಾಯುವಿನಲ್ಲಿ ಸಿಡಿದು ಹೋಗುತ್ತಿತ್ತು.

ಭಾವಿ ಮೇಲಾಕಾಶ ಪ್ರಯಾಣಿಕನನ್ನು ಎದುರಿಸುವ ಮೊದಲ ದೊಡ್ಡ ಸಮಸ್ಯೆ ಯಾವುದೆಂದರೆ, ತನ್ನ ರಾಕೆಟ್ಟನ್ನು ಭೂಮಿಯ ಆಕರ್ಷಣಶಕ್ತಿಯ ವ್ಯಾಪ್ತಿಯಿಂದಾಚೆಗೆ ತೆಗೆದುಕೊಂಡು ಹೋಗುವುದು. ಫಿರಂಗಿಯಿಂದ ಒಂದು ಸಿಡಿ ಗುಂಡನ್ನು ಗಂಟೆಗೆ ೨೫,೦೦೦ ಮೈಲಿಗಳ ವೇಗದಲ್ಲಿ ಹಾರಿಸಿ ಕಳಿಸುವುದು ಸಾಧ್ಯವಾದ ಪಕ್ಷದಲ್ಲಿ, ಆ ಗುಂಡು ಭೂಮ್ಯಾಕರ್ಷಣವನ್ನು ತಪ್ಪಿಸಿಕೊಂಡು ಮರಳಿ ಭೂಮಿಗೆ ಎಂದೆಂದಿಗೂ ಹಿಂದಿರುಗಲಾಗದಂತೆ ಮೇಲಾಕಾಶಕ್ಕೆ ಚಿಮ್ಮಿ ಹೋಗಲು ತಕ್ಕಷ್ಟು ಶೀಘ್ರತೆಯನ್ನು ಹೊಂದಿರಬಲ್ಲದು– ಎಂಬುದನ್ನು ತತ್ವದ

ಮಟ್ಟಿಗೆ ಸಿದ್ಧಾಂತಪಡಿಸಲಾಗಿದೆ. ಆದರೆ, ಪ್ರಯಾಣಿಕನೊಬ್ಬನನ್ನು ಇನ್ನೊಂದು ಗ್ರಹಕ್ಕೆ ಸಾಗಿಸಲು ಸಿಡಿಗುಂಡು ತಕ್ಕ ಸಾಧನವಾಗಲಾರದು. ಏಕೆಂದರೆ, ಮೊದಲನೆಯದಾಗಿ, ವೇಗವರ್ಧನವು ಅವನು ತಡೆದುಕೊಳ್ಳಲಾರದಷ್ಟು ಹೆಚ್ಚಾಗಿರುವುದು; ಎರಡನೆಯದಾಗಿ, ಅಷ್ಟು ವೇಗವಿರುವಾಗ ಭೂಮಿಯ ವಾತಾವರಣದಲ್ಲಿ ಉಂಟಾಗುವ ವಾಯು ನಿರೋಧದ ಪರಿಣಾಮವಾಗಿ ಸಿಡಿಗುಂಡು ಬೆಳ್ಳಾವಿಗೆ ತಿರುಗುವಷ್ಟು ಕಾದುಹೋಗುವುದು. ಮೇಲಾಕಾಶದಲ್ಲಿ ಹಾರುವ ಯಂತ್ರ ತನ್ನ ಸಾಮರ್ಥ್ಯದಿಂದಲೇ ಭೂಮಿಯನ್ನು ಬಿಡಬೇಕು, ಮತ್ತು ಯಂತ್ರದ ವೇಗವನ್ನು ಹತೋಟಿಯಲ್ಲಿಡಲು ಸಾಧ್ಯವಾಗುವಂತಿರಬೇಕು. ಆ ಯಂತ್ರ ತನ್ನ ಭಾರವನ್ನು ಭೂಮಿಯ ಎಳೆತದಿಂದ ಆಚೆಗೆ ಮೇಲಕ್ಕೆತ್ತಲು ತಕ್ಕಷ್ಟು ಸಾಮರ್ಥ್ಯವನ್ನು ಅದಕ್ಕೆ ಕೊಡಬಲ್ಲ ಉರುವಲು ನಮಗೆ ತಿಳಿದಮಟ್ಟಿಗೆ ಯಾವುದೂ ಇಲ್ಲ. ಆದರೂ ಕೂಡ, ೨೦ ಟನ್ನುಗಳು ತೂಗುವ ನಾಲ್ಕುಮಂದಿ ನಡಸುವವರ ತಂಡವುಳ್ಳ, ಭೂಮಿಯ ಆಕರ್ಷಣದ ಪ್ರಭಾವವನ್ನು ಮೀರಿ ಮೇಲಾಕಾಶಕ್ಕೆ ಏರಿ ಹೋಗಿ ಮತ್ತೆ ಭೂಮಿಗೆ ಹಿಂದಿರುಗಬಲ್ಲ, ರಾಕೆಟ್ ಹಡಗನ್ನು ರಚಿಸುವುದು ತತ್ವತಃ (Theoretically) ಸಾಧ್ಯ. ಅಪಾರ ವೆಚ್ಚವಾಗುವುದರಿಂದ ಅಂಥ ರಾಕೆಟ್ ಹಡಗನ್ನು ಕಟ್ಟುವುದು ಸಧ್ಯದಲ್ಲಿ ಕಾರ್ಯಸಾಧ್ಯವಲ್ಲ. ಆದರೆ, ಮುಂದೆ ಹೆಚ್ಚು ಸಾಮರ್ಥ್ಯವುಳ್ಳ ಉರುವಲುಗಳನ್ನು ತನ್ನ ವಶದಲ್ಲುಳ್ಳ ರಾಕೆಟ್ಟಿಗನು (Rocketnian) ರಾಕೆಟ್ ಹಡಗೊಂದನ್ನು ರಚಿಸಲು ಸಮರ್ಥನಾಗುವ ದಿನ ಪ್ರಾಯಶಃ ಬರಬಹುದು. ರಾಕೆಟ್‌ಹಡಗು ಒಮ್ಮೆ ಸ್ವಸಾಮರ್ಥ್ಯದಿಂದ ಗಂಟೆಗೆ ೨೫,೦೦೦ ಮೈಲಿಗಳ ವೇಗವನ್ನು ಪಡೆದು ಭೂಮಿಯ ಎಳೆತದಿಂದ ತಪ್ಪಿಸಿಕೊಂಡಿತೆಂದರೆ ಅದು ತನ್ನ ಪೂರ್ವನಿಶ್ಚಿತ ಗುರಿಯನ್ನು ಮುಟ್ಟುವವರೆಗೂ ಯಾವ ಚಾಲಕಶಕ್ತಿಯ ಸಹಾಯವೂ ಇಲ್ಲದೆ ಪ್ರಯಾಣ ಮಾಡುತ್ತ ಮೇಲಾಕಾಶಕ್ಕೆ ಹೋಗಬಲ್ಲದು: ಇದೇ ರಾಕೆಟ್ಟಿಗನ ಮುಖ್ಯ ಭರವಸೆ. ಮೇಲಾಕಾಶದಲ್ಲಿ ಘರ್ಷಣೆ ಇಲ್ಲದಿರುವುದರಿಂದ, ರಾಕೆಟ್ ಹಡಗಿನ ಗತಿಯನ್ನು ನಿಧಾನಗೊಳಿಸಿ ಕೆಳಕ್ಕೆ ತರುವಂಥದು ಯಾವುದೂ ಅಲ್ಲಿ ಇಲ್ಲವೆಂಬುದನ್ನು ನೆನೆಯುವವರೆಗೂ ಇದು ನಂಬಲಾಗದಂತೆ ತೋರಬಹುದು.

"ಮನುಷ್ಯನು ಗಂಟೆಗೆ ೨೫,೦೦೦ ಮೈಲಿಗಳಂತೆ ಪ್ರಯಾಣ ಮಾಡಿಯೂ ಜೀವದಿಂದುಳಿಯಬಲ್ಲನೆ?" ಎಂದು ಯಾರಾದರೂ ಸಹಜವಾಗಿ ಪ್ರಶ್ನಿಸಬಹುದು. ವೇಗವು ಕ್ರಮೇಣ ಹೆಚ್ಚುತ್ತ ಬಂದ ಪಕ್ಷದಲ್ಲಿ ಮಾನವ ಶರೀರ ಈ ವೇಗವನ್ನು

ಸುಲಭವಾಗಿ ಸಹಿಸಬಲ್ಲದೆಂದು ವೈಜ್ಞಾನಿಕರು ಭರವಸೆ ಕೊಡುತ್ತಾರೆ. ಸ್ಥಾಯಿಯಾದ ಸ್ಥಿತಿಯಿಂದ ತಟ್ಟನೆ ಗಂಟೆಗೆ ೨೫,೦೦೦ ಮೈಲಿಗಳ ವೇಗದಲ್ಲಿ ನೆಗೆದರೆ ತತ್‌ಕ್ಷಣ ಪ್ರಾಣ ಹಾನಿಯಾಗುವುದು ಖಂಡಿತ. ಆದರೆ, ರಾಕೆಟ್ಟು ಸ್ಥಾಯಿಯಾಗಿದ್ದದ್ದು ಗಂಟೆಗೆ ೨೫,೦೦೦ ಮೈಲಿಗಳ ವೇಗಕ್ಕೆ ತನ್ನ ವೇಗವನ್ನು ಹೆಚ್ಚಿಸಿಕೊಳ್ಳಲು ೮ ನಿಮಿಷಗಳನ್ನು ತೆಗೆದುಕೊಂಡರೆ ಪ್ರಯಾಣಿಕರು ಜೀವದಿಂದುಳಿಯಬಲ್ಲರೆಂದು ಜರ್ಮನ್ ರಾಕೆಟ್ಟಿಗರು ಸಿದ್ಧಪಡಿಸಿದ್ದಾರೆ. ಅದು ಹಾಗಿಲ್ಲದಿದ್ದ ಪಕ್ಷದಲ್ಲಿ ಗ್ರಹಾಂತರ ಪ್ರಯಾಣದ ಆಸೆಯನ್ನೆಲ್ಲ ಕೈಬಿಡಬೇಕಾಗುತ್ತದೆ. ಗ್ರಹಗಳ ನಡುವಣ ದೂರ ಅಪಾರವಾಗಿದ್ದು ಅಲ್ಲಿ ಪ್ರಯಾಣ ಮಾಡಬೇಕಾಗಿದ್ದಲ್ಲಿ, ಮೇಲಾಕಾಶ ಹಡಗಿನ ವೇಗಮಾಪಕ ದಶಸಹಸ್ರ ಮೈಲಿಗಳ ಪ್ರಮಾಣದಲ್ಲಿ ವೇಗ ತೋರಿಸುವಂತಿರಬೇಕು, ಅಂದರೆ ಹಡಗು ಅಷ್ಟು ವೇಗದಲ್ಲಿ ಚಲಿಸುವಂತಿರಬೇಕು.

ಮೇಲಾಕಾಶ ಹಡಗು ಮೇಲಾಕಾಶದಲ್ಲಿ ಪ್ರಯಾಣ ಮಾಡಿದ ಮೇಲೆ ಹಾಗೆಯೇ ಉಳಿಯುವುದು ಅಸಾಧ್ಯವೆಂದು ಊಹೆ ಮಾಡಲ್ಪಟ್ಟಿದೆ. ಮೇಲಾಕಾಶ ಹಡಗು ಒಳಗಾಗುವ ಶಾಖವೂ ಸೂರ್ಯನ ಅತಿಯಾದ ಕಾವೂ ಹಡಗನ್ನು ಸುಟ್ಟು, ಅದರಲ್ಲಿರುವರು ಜೀವಸಹಿತ ಹುರಿದುಹೋಗುವರು ಎಂಬುದೇ ಈ ಊಹೆಗೆ ಕಾರಣ. ಸೂರ್ಯನ ಕಡೆಗೆ ಅಭಿಮುಖವಾಗಿರುವ ಮೇಲಾಕಾಶ ಹಡಗಿನ ಒಮ್ಮಗ್ಗುಲು ಅತಿಯಾದ ಕಾವಿಗೆ ಒಳಗಾಗುವುದೆಂಬುದು ನಿಜ; ಅಲ್ಲದೆ, ಇನ್ನೊಂದು ಮಗ್ಗುಲು ಅತಿಯಾದ ಚಳಿಗೆ ಗುರಿಯಾಗುವುದೂ ನಿಜ. ಆದರೆ ಹಡಗಿನ ಒಳಗಣ ಶಾಖವನ್ನು ಬೇರೆ ಬೇರೆ ಸಾಧನೋಪಾಯಗಳಿಂದ ಸಮಸ್ಥಿತಿಯಲ್ಲಿಟ್ಟಿರುವುದು ಸಾಧ್ಯ. ಉದಾಹರಣೆಗೆ, ಎರಡು ಗೋಡೆಗಳನ್ನು ರಚಿಸಿ ಅವುಗಳ ನಡುವೆ (ಥರ್ಮಾಸ್ ಫ್ಲ್ಯಾಸ್ಕಿನಲ್ಲಿ ಹೇಗೂ ಹಾಗೆ) ನಿರ್ವಾಯು ಪ್ರದೇಶವಿರುವಂತೆ ಹಡಗನ್ನು ಕಟ್ಟಬಹುದು. ಹೀಗೆ ಮಾಡಿದರೆ ಅತಿ ಚಳಿಯಾಗಲಿ ಅತಿ ಕಾವಾಗಲಿ ಹಡಗಿನ ಒಳ ಗೋಡೆಯನ್ನು ಭೇದಿಸಿಕೊಂಡು ಹೋಗಲಾರದು.

ನಮ್ಮ ಭೂಗೋಳವನ್ನು ಉಲ್ಕೆಗಳು ಯಾವಾಗಲೂ ಮುತ್ತುತ್ತಲೇ ಇರುತ್ತವೆ; ಆದರೆ ಭೂಮಿಯನ್ನು ಮುಟ್ಟುವವು ಕೆಲವು ಮಾತ್ರ. ಬಹುಸಂಖ್ಯೆಯವು ಮುಟ್ಟಲಾರವು; ಏಕೆಂದರೆ, ಮೇಲಾಕಾಶದ ಮೂಲಕ ಹಾಯ್ದುಬರುವಾಗ ಖಂಡಖಂಡವಾಗಿ ಹೋಗುತ್ತವೆ. ಮೇಲಾಕಾಶ ಹಡಗಿಗೆ ಉಲ್ಕೆಯೊಂದು ಬಂದು ಹೊಡೆದರೆ, ಅದು ಹಡಗನ್ನು ಕೊರೆದುಕೊಂಡು ಹೋಗಿ ಹಡಗಿನಲ್ಲಿ ಒಂದು ಸಣ್ಣ ರಂಧ್ರವಾಗುವುದು; ಹಡಗೇ ದೊಡ್ಡ ಉಲ್ಕೆಯೊಂದಕ್ಕೆ ಡಿಕ್ಕಿ ಹೊಡೆದರೆ

ಹಡಗು ನಾಶವಾಗಿಹೋಗುವುದು. ಮೊದಲ ನೋಟಕ್ಕೆ ಈ ಅಪಾಯ ಬಹು ದೊಡ್ಡದಾಗಿ ಕಾಣುತ್ತದೆ; ಮೇಲಾಕಾಶ ಪ್ರಯಾಣದ ವಿಷಯವಾಗಿ ಹೆಚ್ಚಿನ ಚರ್ಚೆ ವ್ಯರ್ಥವಾಗಿ ತೋರುತ್ತದೆ. ಆದರೆ, ಗ್ರಹಾಂತರ ಆಕಾಶ ಅನಂತ, ಅಪಾರ; ಹತ್ತಿರದ ಗ್ರಹವನ್ನು ಕುರಿತು ಸಾಗುತ್ತಿರುವ ಉಲ್ಕೆ ಈ ಮೇಲಾಕಾಶ ಹಡಗಿಗೆ ಡಿಕ್ಕಿ ಹೊಡೆಯುವ ಸಂಭವ ಕೋಟಿಗೆ ಒಂದು– ಎಂಬುದಾಗಿ ವೈಜ್ಞಾನಿಕರು ಭರವಸೆ ಕೊಡುತ್ತಾರೆ.

ರಾಕೆಟ್ ಹಡಗನ್ನು ಮೇಲಾಕಾಶಪ್ರಯಾಣಕ್ಕೆ ಕಳಿಸುವುದು ಮಾತ್ರವಲ್ಲದೆ, ಪ್ರಯಾಣಿಕರಿಗೆ ಪ್ರಾನಹಾನಿಯಾಗದಂತೆಯೂ ಭೂಮಿಯ ವಾತಾವರಣದಲ್ಲಿ ಮತ್ತು ಅದರಾಚೆಯ ಮೇಲಾಕಾಶ ಪ್ರದೇಶದಲ್ಲಿ ಪ್ರಯಾಣ ಮಾಡುತ್ತಿರುವಾಗ ಅವರ ಶರೀರಕ್ಕೆ ಅಸೌಖ್ಯವಾಗದಂತೆಯೂ ಭದ್ರಪಡಿಸುವುದು ಕೂಡ ತತ್ವತಃ ಸಾಧ್ಯವೆಂಬುದನ್ನು ನಾವು ಈಗ ಅರಿಯಬಹುದಾಗಿದೆ.

ಮೇಲಾಕಾಶ ಹಡಗಿನ ನಾವಿಕನು ತಾನು ಹೋಗಲು ನಿಶ್ಚಯಿಸಿರುವ ಗ್ರಹಕ್ಕಾಗಲಿ ಬೇರೆಯ ಸ್ಥಳಕ್ಕಾಗಲಿ ಶೂನ್ಯದ ಮೂಲಕ ತನ್ನ ದಾರಿ ಕಂಡುಕೊಳ್ಳುವುದು ಹೇಗೆ?– ಎಂಬುದೇ ಮುಂದಿನ ಪ್ರಶ್ನೆ. ಈ ಪ್ರಶ್ನೆಯ ಮುಖ್ಯತೆಯನ್ನು ಒತ್ತಿ ಹೇಳುವ ಆವಶ್ಯಕತೆಯಿಲ್ಲ; ಏಕೆಂದರೆ, ಮೇಲಾಕಾಶ ಹಡಗು ತನ್ನ ಗುರಿ ತಪ್ಪಿದರೆ, ಏನೋ ಒಂದು ಅದ್ಭುತ ಮಾತ್ರ ಅದರಲ್ಲಿರುವವರನ್ನು ಮೃತ್ಯುಮುಖದಿಂದ ತಪ್ಪಿಸಬಲ್ಲದು. ಹಡಗು ಅನಂತಕಾಲವೆಲ್ಲ ಮೇಲಾಕಾಶದಲ್ಲಿ ತೇಲುತ್ತ ಹೋಗುತ್ತಿರಬೇಕು. ಅದರಲ್ಲಿರುವವರೆಲ್ಲ ಸತ್ತ ಮೇಲೆ, ಅದರ ಉರುವಲರೆಲ್ಲ ಮುಗಿದ ಮೇಲೆ, ಆಕಾಶಸ್ಥ ಕಾಯಗಳಲ್ಲಿ ಒಂದರ ಪಥಕ್ಕೆ ಅದು ಸೆಳೆಯಲ್ಪಟ್ಟು ಆ ಕಾಯದ ಉಪಗ್ರಹವಾಗಿ, ಅದರ ಸುತ್ತಲೂ ಚಂದ್ರ ನಮ್ಮ ಭೂಮಿಯ ಸುತ್ತಲೂ ಸುತ್ತುತ್ತಿರುವಂತೆ ಸುತ್ತುತ್ತಿರಬಹುದು. ಇಲ್ಲವೆ, ಅದು ಸೂರ್ಯನ ಕಡೆಗೆ ಸೆಳೆಯಲ್ಪಟ್ಟು ಸುಟ್ಟು ಬೂದಿಯಾಗಬಹುದು, ಗ್ರಹವೊಂದಕ್ಕೆ ಡಿಕ್ಕಿ ಹೊಡೆದು ನುಚ್ಚುನೂರಾಗಬಹುದು. ಈ ಸಂಭವಗಳನ್ನೆಲ್ಲ ವಿಚಾರ ಮಾಡಿದರೆ, ಬಹಳ ಎಚ್ಚರಿಕೆಯಿಂದ ಅಚ್ಚುಕಟ್ಟಾದ ಪಥವನ್ನು ಮುನ್ನೇರ್ಪಾಡುಮಾಡಿಟ್ಟುಕೊಳ್ಳದಿದ್ದ ಭಾಗದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲಿಷ್ಟವುಳ್ಳವರು ಮಾತ್ರ ಮೇಲಾಕಾಶ ಪ್ರಯಾಣವನ್ನು ಮಾಡುವ ಸಾಹಸಕ್ಕೆ ತೊಡಗುವರೆಂಬುದು ಸ್ಪಷ್ಟ. ಮೇಲಾಕಾಶ ನಾವಿಕನು ಸಂಪೂರ್ಣವಾಗಿ ಸರಿಯಾದ ಪಥವನ್ನು ನಕ್ಷೆ ಮಾಡಿಟ್ಟುಕೊಳ್ಳುವ ಮಟ್ಟಿಗೆ ಮೇಲಾಕಾಶ ವಿಷಯಕವಾದ ತಿಳಿವಳಿಕೆ ಸಾಕಷ್ಟು ಮುಂದುವರಿದಿದೆಯೆಂದು ವೈಜ್ಞಾನಿಕರು ವಾದಿಸುತ್ತಾರೆ.

ರಾಕೆಟ್ ನ್ನಾವಿಕರು ಭೂಮಿಗೂ ಇತರ ಗ್ರಹಗಳಿಗೂ ಸಂಸರ್ಗ ವನ್ನೇರ್ಪಡಿಸುವ ಮುನ್ನ ಅವರು ತಮ್ಮ ಯಂತ್ರಗಳನ್ನು ಭೂಮಿಯ ವಾಯು ಮಂಡಲದ ಎಲ್ಲೆಕಟ್ಟಿನಲ್ಲಿ ಸಾಮಾನ್ಯ ರೀತಿಯಲ್ಲಿ ಉಪಯೋಗಿಸಿ ಅವುಗಳ ಹುರುಳನ್ನು ದೃಢಮಾಡಿಕೊಳ್ಳಬೇಕು. ೧೯೩೧ರಲ್ಲಿ, ಫ್ರೀಡಿಕ್ ಸ್ಮಿಟ್ (Friedrich Schmidt) ಎಂಬಾತನು ಆಸ್ಟ್ರಿಯದಲ್ಲಿ ಎರಡು ಪಟ್ಟಣಗಳಿಗೆ ಗ್ರಾಟ್‌ಜ್ (Graz) ಪರ್ವತ ಪ್ರದೇಶದ ಮೇಲಿನಿಂದ ರಾಕೆಟ್ ಆಚೆಯ ಏರ್ಪಾಟನ್ನು ಕಲ್ಪಿಸಿದನು. ಎರಡು ಪಟ್ಟಣಗಳಿಗೂ ನಡುವಣ ಅಂತರ ಕೆಲವು ಮೈಲಿಗಳು ಮಾತ್ರ. ಆದರೆ, ಪರ್ವತಪ್ರದೇಶವಾದ್ದರಿಂದ ಆ ಎರಡು ಪಟ್ಟಣಗಳಿಗೆ ಸಂಚಾರಸಂಸರ್ಗ ಕಷ್ಟ. ಹೀಗಾಗಿ, ಈ ಹೊಸ ಅಂಚೆಯ ಏರ್ಪಾಟು ಬಹಳ ಪ್ರಯೋಜನಕರವಾಗಿ ಪರಿಣಮಿಸಿತು. ಇದಾದ ಸ್ವಲ್ಪ ಕಾಲದಲ್ಲೆ, ಜೆರಾರ್ಡ್ ಜೂಕರ್ (Gerhard Zucker) ಎಂಬಾತನು ಜರ್ಮನಿಯಲ್ಲಿ ಹಾರ್‌ಟ್‌ಜ್ (Harz) ಪರ್ವತಗಳ ಮೇಲೆ ಇದೇ ಬಗೆಯ ಅಂಚೆಯ ಏರ್ಪಾಟನ್ನು ಸ್ಥಾಪಿಸಿದನು. ಇವುಗಳಲ್ಲಿ ಮುಖ್ಯತೆಯನ್ನು ಹೊಂದಿಲ್ಲದಿದ್ದರೂ, ರಾಕೆಟ್ಟು ಯಾವ ರೀತಿಯಲ್ಲಿ ಉಪಯೋಗ ಕರವಾಗಬಲ್ಲದೆಂಬುದರ ಕಡೆಗೆ ಇವು ಸುಳಿವು ತೋರುತ್ತವೆ. ವಿಮಾನ ತೆಗೆದುಕೊಳ್ಳುವ ಕಾಲಪ್ರಮಾಣದ (ಈ ಪ್ರಮಾಣ ಒಂದು ಗಂಟೆ ಎಂದು ಇಟ್ಟು ಕೊಳ್ಳೋಣ) ಒಂದು ಅಂಶ ಕಾಲದಲ್ಲಿ ಜನರಿಂದ ನಡಸಲ್ಪಡದ ರಾಕೆಟ್ ಹಡಗು ಯೂರೋಪಿನಿಂದ ಅಮೆರಿಕಕ್ಕೂ, ಅಮೆರಿಕದಿಂದ ಏಷ್ಯಕ್ಕೂ ಆಚೆ ಒಯ್ಯುವ ಕಾಲ ಬಹು ದೂರವಿರಲಾದು.

ಅಂಥ ಹಡಗುಗಳನ್ನು ಬಹುಶಃ ೬೦ ಡಿಗ್ರಿಗಳ ಕೋನದಲ್ಲಿ ಹಾರಿಸ ಲಾಗುವುದು; ಅವು ಭೂಮಿಯಿಂದ ಅನೇಕಾನೇಕ ಮೈಲಿಗಳ ಮೇಲಕ್ಕೆ ಮತ್ತು ಎರಡು ಭೂ ಖಂಡಗಳ ಮಧ್ಯ ಪ್ರದೇಶದಷ್ಟು ದೂರಕ್ಕೆ ನೆಗೆದು ಹಾರಿ, ಆಮೇಲೆ ಕ್ರಮಕ್ರಮವಾಗಿ ಕಡಮೆಯಾಗುವ ವೇಗದಿಂದ ಆದರೂ ಶೀಘ್ರವಾಗಿ ತಮ್ಮ ಗುರಿಯನ್ನು ತಲುಪುವುವು. ಅವು ಹಾರುವ ದೋಣಿಗಳಂತೆ ಬಹುಶಃ ನೀರಿನ ಮೇಲೆ ಇಳಿಯುವುವು.

* * * *

ಪ್ರಕರಣ ೮

ಆಕಾಶಯಾನದಲ್ಲಿ ಜೀವನಮಾರ್ಗಗಳು

ಆಕಾಶಯಾನದಲ್ಲಿ ವಿಮಾನ ನಡಸುವನ ವಿಶೇಷ ಶಿಲ್ಪವಿಷಯಕ ಸ್ಥಾನ ನಿಮಿತ್ತದಿಂದ ಅವನಿಗೆ ದೊರಕುವ ಬೇರೆ ಬೇರೆ ಉದ್ಯೋಗಗಳ ಮೇಲೆಯೇ ಎಲ್ಲರ ಗಮನವೂ ಕೇಂದ್ರೀಕೃತವಾಗುವ ಒಲವಿದೆ; ಆದರೂ, ವಾಸ್ತವವಾಗಿ ಯಾವುದೇ ಬಗೆಯ ವಾಯುಯಾನ ಸಂಬಂಧದ ಚಟುವಟಿಕೆಯಲ್ಲಿ ನೇಮಕ ಹೊಂದಿರುವವರ ಒಟ್ಟು ಸಂಖ್ಯೆ ಬರಿಯ ವಿಮಾನ ನಡಸುವವರ ಸಂಖ್ಯೆಗೆ ತಪ್ಪದೆ ಹಲವುಮಡಿಯಾಗಿರುತ್ತದೆ. ನಿಜವಾಗಿ ವಿಚಾರ ಮಾಡಿದರೆ, ಹಲವು ಸಂದರ್ಭಗಳಲ್ಲಿ, ವಿಮಾನ ಹಾರಿಸುವುದಕ್ಕೆ ಸಂಬಂಧಪಡದ ಉದ್ಯೋಗಗಳಲ್ಲಿ ಕೆಲಸ ಮಾಡಲು ವಿಮಾನ ನಡಸುವುದಕ್ಕೆ ಸಂಬಂಧಪಟ್ಟ ಉದ್ಯೋಗಿಗಳಿಗೆ ಬೇಕಾಗಿರುವಷ್ಟೇ ವಿಶೇಷಾನುಭವ ಬೇಕಾಗುತ್ತದೆ. ಆಕಾಶ ಯಾನದ ಬೇರೆಬೇರೆ ಕ್ಷೇತ್ರಗಳನ್ನು ಈ ರೀತಿ ವಿಂಗಡಿಸಬಹುದು: (೧) ವಿಮಾನ ಹಾರಿಸುವುದು (Flying), (೨) ವಾಯುಯಾನ ಶಿಲ್ಪ (Aeronautical Engineering), (೩) ವಿಮಾನಗಳ ಸಂಬಂಧದ ಆಡಳಿತ ಕಾರ್ಯ (Aircraft Operation), (೪) ವಿಮಾನ ರಚನೆ (Aircraft Construction), (೫) ವಿಮಾನ ಮಾರಾಟ, (೬) ರಾಜ ವಿಮಾನ ಬಲ (Royal Air Force: R.A.F.) ಮತ್ತು (೭) ಇತರ.

ವಿಮಾನ ಹಾರಿಸುವುದು (ಅಥವಾ ನಡಸುವುದು)

ವಿಮಾನ ನಡಸುವವನ ಕಸಬಿಗೆ ಸಂಬಂಧಪಟ್ಟ ಅವಕಾಶಗಳನ್ನು ಎರಡು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು: ಅಸೈನಿಕ (Civil) ಮತ್ತು ಸೈನಿಕ (Military). ಇವೆರಡು ಬಗೆಯ ಉದ್ಯೋಗಗಳೂ ಸ್ವಾರಸ್ಯವುಳ್ಳವು ಮತ್ತು ತಕ್ಕಮಟ್ಟಿಗೆ ಹೆಚ್ಚಿನ ಸಂಬಳಗಳನ್ನು ದೊರಕಿಸಿಕೊಡುವಂಥವು. ಆದರೆ, ಸದ್ಯ ಸ್ಥಿತಿಯಲ್ಲಿ ಆಕಾಶಯಾನದ ಕಾರ್ಯಕ್ಷೇತ್ರದಲ್ಲಿ ಅಪಾರ ದ್ರವ್ಯ ಗಳಿಸಲಾಗುವುದಿಲ್ಲ. ಹೆಚ್ಚಾದ ಸಂಬಳ ದೊರಕಿಸಿಕೊಡದಿದ್ದರೂ ಹಿತಕರವಾದ ಕಸಬನ್ನು

ಹುಡುಕುವವರಿಗೆ ಇದು ಮೆಚ್ಚಿಗೆಯಾಗಿರುತ್ತದೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿ ವಿಮಾನ ನಡಸುವವನು ಅಸೈನಿಕ ವಿಮಾನ ಹಾರಿಸುವ ಶಾಖೆಯಲ್ಲಿ ಪಡೆಯಬಹುದಾದ ಅತ್ಯಂತ ಹೆಚ್ಚಿನ ಸಂಬಳದ ಉದ್ಯೋಗವೆಂದರೆ, ಭಾರಿ ವಿಮಾನ ತಯಾರಿಕೆಯ ಸಂಸ್ಥೆಯಲ್ಲಿ ವಿಮಾನಗಳನ್ನು ಪರೀಕ್ಷೆ ಮಾಡುವ ವಿಮಾನ ನಡಸುವವನ (ಪರೀಕ್ಷಾ ವಿಮಾನ ಸಾರಥಿ) ಉದ್ಯೋಗ: ಇದರಲ್ಲಿ ಕೂಡ ಅತ್ಯಂತ ಅನುಕೂಲ ಪರಿಸ್ಥಿತಿಯಲ್ಲಿ ವರ್ಷಕ್ಕೆ ೧,೫೦೦ ಪೌಂಡುಗಳಿಗಿಂತ ಹೆಚ್ಚಿನ ವರಮಾನ ದೊರೆಯಲಾರದು. ಸೈನ್ಯದಲ್ಲಿ ವಿಮಾನ ಹಾರಿಸುವುದನ್ನು ತೆಗೆದುಕೊಂಡರೆ, ರಾಜ ವಿಮಾನ ಬಲದಲ್ಲಿ (Royal Air Force) ಅತ್ಯುಚ್ಚ ಪದವಿಗೆ ಕೆಳಗಿನ ಪದವಿಯ ಉದ್ಯೋಗಸ್ಥನಾದ ಪ್ರಧಾನ ವಿಮಾನ ದಳಾಧಿಪತಿಗೆ (Air Chief Marshal) ಬರುವ ಒಟ್ಟು ಮೊಬಲಗು ವರ್ಷಕ್ಕೆ ೨,೫೦೦ ಪೌಂಡುಗಳು; ವೈಮಾನಿಕ ಸೈನ್ಯದ ಅಧಿಕಾರಿಗೆ, ಕೆಲಸಕ್ಕೆ ಸೇರಿದ ಮೊದಲ ಎರಡು ವರ್ಷಗಳಲ್ಲಿ ವರ್ಷಕ್ಕೆ ೩೬೫ ಪೌಂಡುಗಳು ಮಾತ್ರ.

ವಿಮಾನ ನಡಸುವವನ ಜೀವನ

ಬಹು ಹೆಚ್ಚಿನ ದರದ ಸಂಬಳವನ್ನು ನಿರೀಕ್ಷಿಸಲಾಗದಿದ್ದರೂ ವಿಮಾನ ಸಾರಥಿಯ ಜೀವನದಲ್ಲಿ ಹಲವು ಪ್ರತಿಫಲಗಳುಂಟು. ಅವನ ಬದುಕೆಲ್ಲ ಬಯಲಿನಲ್ಲಿ; ಅತ್ಯಂತ ಕೆಳದರ್ಜೆಯ ವಿಮಾನ ಸಾರಥಿಯಾದರೂ, ಇತರ ಕಸಬುಗಳಲ್ಲಿ ಇಲ್ಲದ ಕೆಲಮಟ್ಟಿನ ಸ್ವಾತಂತ್ರ್ಯವೂ ಅಧಿಕಾರವೂ ಅವನಿಗುಂಟು. ಹಡಗಿನ ನಾಯಕನಂತೆ ಅವನು ತನ್ನ ಯಂತ್ರಕ್ಕೆ ತಾನೇ ಒಡೆಯ; ನಿಸ್ತಂತುವನ್ನು (Wireless) ಹೆಚ್ಚು ಹೆಚ್ಚಾಗಿ ಬಳಸುತ್ತಿರುವುದರಿಂದ ಆಕಾಶದಲ್ಲಿರುವವನ (ಅಂದರೆ ವಿಮಾನ ಸಾರಥಿಯ) ಜವಾಬ್ದಾರಿಯ ಕೆಲಭಾಗ ನೆಲದ ಮೇಲಿರುವವನ (ಅಂದರೆ ನಿಸ್ತಂತು ಕಾರ್ಯಕರ್ತನ) ಪಾಲಿಗೆ ಬಿದ್ದಿರುವುದಾದರೂ ಆಕಾಶದಲ್ಲಿರುವನೇ ಇನ್ನೂ ಆ ಹೊಣೆಯ ಹೆಚ್ಚಿನ ಭಾಗವನ್ನು ಹೊತ್ತು ಯಂತ್ರದ ಅಧಿಕಾರಿಯಾಗಿದ್ದಾನೆ. ವಿಮಾನ ನಡಸುವವನು ಅನುಭೋಗಿಸುತ್ತಿರುವ ಇನ್ನೊಂದು ಪ್ರಯೋಜನವಿದೆ; ಅನೇಕವೇಳೆ ಅದನ್ನು ನಾವು ಲಕ್ಷಿಸುವುದಿಲ್ಲ; ಅದೇನೆಂದರೆ, ಈವರೆಗೆ ಕಲ್ಪಿಸಿರುವ ಕೌಶಲದ ಕಾರ್ಯಗಳಲ್ಲೆಲ್ಲ ಅತ್ಯಂಥ ಮನೋರಂಜಕವಾದದ್ದು ವಿಮಾನನಿಯಂತ್ರಣ ಕಾರ್ಯ. ವಿಮಾನವನ್ನು ನೆಲದಿಂದ ಮೇಲಕ್ಕೆ ಹಾರಿಸುವುದು; ಅದನ್ನು ಆಕಾಶದಲ್ಲಿ ಹಾರಿಸುವುದು, ತಿರುಗಿಸುವುದು, ನಡಸುವುದು; ಕಡೆಗೆ ಕೆಳಕ್ಕಿಳಿಸುವುದು– ಈ ಎಲ್ಲವುಗಳಿಂದಲೂ ತುಂಬ

ಮನಸ್ತೃಪ್ತಿಯುಂಟಾಗುವುದೆಂದು ಎಲ್ಲ ಅನುಭವಸ್ಥ ವಿಮಾನ ಸಾರಥಿಗಳೂ ಒಪ್ಪುತ್ತಾರೆ. ಕೆಟ್ಟ ವಾಯುಸ್ಥಿತಿಯಲ್ಲಿ, ಏನೊಂದೂ ಚೆನ್ನಾಗಿ ಗೋಚರವಾಗದಿರುವಾಗ, ಬಹು ಪ್ರಯಾಸದಿಂದ ವಿಮಾನ ಹಾರಿಸುವುದರಲ್ಲಿ ಕೂಡ ಹಲವು ಪ್ರತಿಫಲಗಳಿವೆ; ತುಂಬ ಕೆಟ್ಟ ವಾಯುಸ್ಥಿತಿಯಲ್ಲಿ ಸರಿಯಾದ ದಾರಿ ಬಿಟ್ಟು ಅಡ್ಡದಾರಿಗಳನ್ನು ಹಿಡಿದು ವಿಮಾನ ಹಾರಿಸುತ್ತ ಕಡೆಗೆ ಹಾರಿಕೆ ಯಶಸ್ವಿಯಾಗಿ ಮುಗಿದರೆ ವಿಮಾನ ನಡಸುವವನಿಗೆ ದೊರೆಯುವ ತೃಪ್ತಿ ಅಷ್ಟಿಷ್ಟಲ್ಲ.

ಅಸೈನಿಕ ವಿಮಾನ ಹಾರಿಕೆ ಬಹುಮಟ್ಟಿಗೆ ಕೌತುಕವಿಲ್ಲದ್ದು. ಯಾವನು ಜಾಗರೂಕನೆಂದೂ ನಂಬಿಕೆಯವನೆಂದೂ ಹೆಸರು ಪಡೆದಿರುತ್ತಾನೊ ಅಂಥ ವಿಮಾನ ಸಾರಥಿಗೆ ಎಲ್ಲೆಲ್ಲೂ ಸ್ವಾಗತ. ವಿಮಾನಪ್ರಯಾಣ ಸಂಸ್ಥೆಗಳು ಯಾವಾಗಲೂ ಜಾಗರೂಕರಾದ ವಿಮಾನ ಸಾರಥಿಗಳನ್ನೇ ಹುಡುಕುತ್ತಿರುತ್ತವೆ. ಅವನಿಗೆ ತೀಕ್ಷ್ಣಬುದ್ಧಿಯುಳ್ಳವರು ಬೇಕಾಗಿಲ್ಲ. ಆದರೆ, ವಿಮಾನ ಸಾಮು (Aerobatics) ಮತ್ತು ಇತರ ಕೌತುಕಾತ್ಮಕ ವಿಮಾನ ಹಾರಿಕೆಗಳಲ್ಲಿ ವಿಶೇಷ ಆಸಕ್ತಿ ವಹಿಸಿರುವವರಿಗೆ ಬೇಕಾದಷ್ಟು ಅವಕಾಶವಿದೆ. ಇಂಡಿಯಾದಲ್ಲಿ ವಿಮಾನಹಾರಿಕೆ ಸಂಘಗಳು ಆಗಿಂದಾಗ್ಗೆ ಹಾರಿಕೆಯ ಪ್ರದರ್ಶನಗಳನ್ನು ಏರ್ಪಡಿಸುತ್ತಿರುತ್ತವೆ. ಇವುಗಳಲ್ಲೂ ಬೇರೆ ಬೇರೆ ವಿಮಾನಹಾರಿಕೆ ಪಂದ್ಯಗಳಲ್ಲೂ ವಿಮಾನ ಸಾಮಿನಲ್ಲಿ ನುರಿತ ವಿಮಾನ ಸಾರಥಿಗಳಿಗೆ ತಕ್ಕಮಟ್ಟಿನ ಅವಕಾಶವಿದೆ.

ಅಸೈನಿಕ ಹಾರಿಕೆಗೆ ಸಂಬಂಧಪಟ್ಟ ಉದ್ಯೋಗಗಳು

ಪ್ರದರ್ಶನಗಳಿಗಾಗಿ ಹಾರುವ ವಿಮಾನ ಸಾಮಿನ ಹಾರಿಕೆಗೂ ಸ್ಥಿರವಾದ ಆಕಾಶಮಾರ್ಗದಲ್ಲಿ ಕ್ರಮವಾಗಿ ನಡೆಯುವ ವಾಣಿಜ್ಯ ಸಂಬಂಧದ ಹಾರಿಕೆಗೂ ನಡುವೆ ಬೇರೆ ಬೇರೆ ಬಗೆಯ ಉದ್ಯೋಗಗಳು ಚತುರನೂ ಪೂರ್ಣ ಸನ್ನದುದಾರನೂ ಆದ ವಿಮಾನ ಸಾರಥಿಗೆ ದೊರೆಯುತ್ತವೆ. ಮುಖ್ಯವಾಗಿ ಬೇಕಾದದ್ದು 'ಬಿ' ಸನ್ನದು; ವಾಯುನಾವಿಕನ ಸನ್ನದಿನಂಥ ಇತರ ಸನ್ನದುಗಳೂ ಇದ್ದರೆ ಹೆಚ್ಚು ಬೆಲೆಯುಂಟು. ರಾಜ ವಿಮಾನ ಬಲದಲ್ಲಿ ಕೆಲವು ಕಾಲ ಕೆಲಸ ಮಾಡಿದ್ದರೆ ಯಾವ ಬಗೆಯ ಅನುಭವ ದೊರೆಯುತ್ತದೆಯೊ ಆ ಬಗೆಯ ಅನುಭವವಿದ್ದರೂ ಸಹ ಹೆಚ್ಚಿನ ಬೆಲೆಯುಂಟು. ಆವಶ್ಯಕವಾದ ಸನ್ನದುಗಳ ಬಲದ ಮೇಲೆ ಅಸೈನಿಕ ವಿಮಾನ ಸಾರಥಿ ಈ ಮುಂದಿನ ಯಾವ ಉದ್ಯೋಗಕ್ಕಾದರೂ ಪ್ರಯತ್ನ ಪಡಬಹುದು: (೧) ವಾಣಿಜ್ಯ ವಿಮಾನ ಪ್ರಯಾಣ ಮಾರ್ಗದ ವಿಮಾನ ಸಾರಥಿ; (೨) ಬಾಡಿಗೆ ವಿಮಾನ ಸಾರಥಿ; (೩) ಹಾರಿಕೆಯ

ಸಂಘದಲ್ಲಿ ಅಥವಾ ಹಾರಿಕೆಯ ಶಿಕ್ಷಣ ಶಾಲೆಯಲ್ಲಿ ಶಿಕ್ಷಕ; (೪) ಆಕಾಶ ಪರಿಶೀಲನೆ; (೫) ಆಕಾಶ ಲೇಖನ ಅಥವಾ ಬಾವುಟ ಹಾರಿಕೆ; (೬) ವಿಮಾನ ಪರೀಕ್ಷೆಯ ಹಾರಿಕೆ; (೭) ಪ್ರದರ್ಶನ ಹಾರಿಕೆ; (೮) ಸಲಹೆಗಾರ ವಿಮಾನ ಸಾರಥಿ; (೯) ವಿಹಾರ ಸವಾರಿ ಮತ್ತು ಖಾಸಗಿ ಉದ್ಯೋಗ.

ವಾಣಿಜ್ಯ ಹಾರಿಕೆ ಮತ್ತು ಬಾಡಿಗೆವಿಮಾನ ಹಾರಿಕೆ

ಬಾಡಿಗೆ ವಿಮಾನ ಹಾರಿಕೆಗೆ (Taxi Flying) ಅತ್ಯಂತ ಹೆಚ್ಚಿನ ಮಟ್ಟದ ವಿಮಾನ ಸಾರಥ್ಯ ಕೌಶಲ ಇರಬೇಕು. ವೃತ್ತಪತ್ರಿಕೆಗಳ ವರದಿಗಾರರೊಡನೆಯೂ ಛಾಯಾಚಿತ್ರಕಾರರೊಡನೆಯೂ ಈ ಬಗೆಯ ಕೆಲಸವನ್ನು ಹೆಚ್ಚಾಗಿ ಮಾಡ ಬೇಕಾಗುತ್ತದೆ; ಆದ್ದರಿಂದ, ಕಾಲಾವಕಾಶ ಅತ್ಯಲ್ಪ, ಕೆಲಸದ ಒತ್ತಡ ಬಹು ಹೆಚ್ಚು. ಅನೇಕವೇಳೆ ಕೆಟ್ಟ ವಾಯುಸ್ಥಿತಿಯಲ್ಲಿ ಹಾರಬೇಕಾಗುತ್ತದೆ. ಹೀಗಾಗಿ, ವಿಮಾನ ನಡಸುವವನ ಕೌಶಲ ಮತ್ತು ಸಹನಶಕ್ತಿಗಳ ಮೇಲೆ ತಕ್ಕಮಟ್ಟಿಗೆ ಹೆಚ್ಚಾಗಿಯೇ ಹೊರೆ ಬೀಳುತ್ತದೆ. ದೊರೆಯುವ ಸಂಬಳದಲ್ಲಿ ಸಂದರ್ಭಾನುಸಾರ ತುಂಬ ಹೆಚ್ಚು ಕಡಮೆಗಳುಂಟು. ಕೆಲವು ಬಾಡಿಗೆ ವಿಮಾನ ಸಾರಥಿಗಳು ಕೆಟ್ಟ ವಾಯುಸ್ಥಿತಿಯನ್ನು ಲೆಕ್ಕಿಸದೆ ವಿಮಾನ ನಡಸುವುದರಲ್ಲಿ ಹೆಸರುವಾಸಿ ಯಾಗಿರುತ್ತಾರೆ; ಅಂಥವರು ಇತರರಿಗಿಂತ ಹೆಚ್ಚಿನ ಸಂಬಳ ಕೇಳಲು ಅವಕಾಶವಿದೆ. ಪ್ರಮುಖರಾದ ಬಾಡಿಗೆ ವಿಮಾನ ಸಾರಥಿಗಳಲ್ಲಿ ಹಲವರು ತಾವು ಕೆಲಸ ಮಾಡುತ್ತಿರುವ ಸಂಸ್ಥೆಗಳ ನಿರ್ದೇಶಕರಾಗಿದ್ದಾರೆ.

ಕ್ರಮವಾದ ಆಕಾಶಮಾರ್ಗಗಳಲ್ಲಿನ ವಾಣಿಜ್ಯ ಸಂಬಂಧದ ವಿಮಾನಹಾರಿಕೆ ಕಸಬುದಾರಿ ಅಸೈನಿಕ ವಿಮಾನಹಾರಿಕೆಯ ಒಂದು ಶಾಖೆ. ಪೂರ್ವ ಶಿಕ್ಷಣ ಪಡೆದ, ನಂಬಿಕಸ್ಥರಾದ ವಿಮಾನ ನಡಸುವವರಿಗೆ ಇದರಲ್ಲಿ ಒಂದೇ ಸಮನಾಗಿ ಬೆಳೆಯುತ್ತ ಹೋಗುವ ಅವಕಾಶಗಳಿವೆ. ಸಂಬಳ ವರ್ಷಕ್ಕೆ ೩೦೦ ಪೌಂಡುಗಳಿಂದ ಹಿಡಿದು ೧,೦೦೦ ಪೌಂಡುಗಳವರೆಗೆ ಹೆಚ್ಚು ಕಡಮೆಯಾಗಿರುತ್ತದೆ. ಮುಂಚೆಗೆ ವಾಣಿಜ್ಯಕ್ಕಾಗಿ ವಿಮಾನ ನಡಸುವುದು ನರಬಲವನ್ನು ಕುಗ್ಗಿಸುತ್ತದೆಂಬ ನಿರೀಕ್ಷೆಯಿತ್ತು; ಆದರೆ ಅದಕ್ಕೆ ವಿರುದ್ಧವಾಗಿ, ವಾಣಿಜ್ಯ ವಿಮಾನ ಸಾರಥಿಗಳು ತಾವು ಬಹು ದೀರ್ಘ ಕಾಲ ನಿಷ್ಕೃಷ್ಟತೆಯಿಂದಲೂ ಕ್ರಮಬದ್ಧವಾಗಿಯೂ ವಿಮಾನ ಹಾರಿಸ ಬಲ್ಲೆವೆಂಬುದನ್ನು ದೃಢಪಡಿಸುತ್ತಿದ್ದಾರೆ. ವಾಣಿಜ್ಯ ವಿಮಾನಸಾರಥಿಯ ಚಟುವಟಿಕೆಯಿಂದ ಕೂಡಿದ ಜೀವನಾವಧಿ ಅಲ್ಪವೆಂಬುದಕ್ಕೆ ಇನ್ನೂ ಯಾವ ಸೂಚನೆಯೂ ಕಂಡುಬಂದಿಲ್ಲ. ಹಾಗೆ ನೋಡಿದರೆ, ೪೦ ವರ್ಷಕ್ಕೆ ಮೇಲ್ಪಟ್ಟ

ವಯಸ್ಸಿನ ವಿಮಾನಸಾರಥಿಗಳು ಕಿರಿಯರಿಗಿಂತ ಮೇಲಲ್ಲದಿದ್ದರೂ ಅವರಷ್ಟೇ ಸಮರ್ಥರೆಂದು ಹೇಳಲು ಹಲವು ಸೂಚನೆಗಳಿವೆ. ಹೀಗಿರುವುದರಿಂದ, ಸ್ಥಿರವಾದ ಮತ್ತು ಕ್ರಮವಾದ ಸಂಬಳ ದೊರೆಯುವ ಉದ್ಯೋಗ ಬಯಸುವವನಿಗೆ ಅಸ್ಯೆನಿಕ ವಿಮಾನಹಾರಿಕೆಯ ಕ್ಷೇತ್ರದಲ್ಲೆಲ್ಲ ಇದಕ್ಕಿಂತ ಮೇಲಾದ ಉದ್ಯೋಗ ಬೇರೊಂದಿಲ್ಲ. ವಿಮಾನಸಾಮಿನಲ್ಲಿ ಅತಿಶಯವಾದ ಒಲವುಳ್ಳ, ಚಡಪಡಿಸುವ ಸ್ವಭಾವದವನಿಗೆ ವಾಣಿಜ್ಯ ವಿಮಾನಹಾರಿಕೆ ಅತ್ಯಂತ ಬೇಸರದ ಕೆಲಸವಾಗಿ ತೋರಬಹುದು. ಆಕಾಶಯಾನದಲ್ಲಿ ಒಂದು ಸರಿಯಾದ ನೆಚ್ಚಿಕೆಯ ಸ್ಥಾನದಲ್ಲಿ ನೆಲಸಬೇಕೆಂದು ಇಷ್ಟಪಡುವವನಿಗೆ ಇದಕ್ಕಿಂತ ಮೇಲಾದ ಬೇರೆಯ ಕ್ಷೇತ್ರವಿಲ್ಲ.

ಇಷ್ಟೇ ಅಲ್ಲದೆ, ಅಕಾಶಮಾರ್ಗಗಳ ಸಂಖ್ಯೆ ವರ್ಷವರ್ಷಕ್ಕೆ ಹೆಚ್ಚುತ್ತಿದೆ. ಆದ್ದರಿಂದ, ಸಿಬ್ಬಂದಿ ಕಡಮೆ ಮಾಡುವ ಯೋಜನೆಗೆ ಸಿಕ್ಕಿ ಕೆಲಸ ಕಳೆದುಕೊಳ್ಳುವ ಹೆದರಿಕೆಯಿಲ್ಲ. ಒಂದು ಸಂಘದಲ್ಲಿ ಸಿಬ್ಬಂದಿ ಕಡಮೆ ಮಾಡುತ್ತಿದ್ದರೆ ಸಿಬ್ಬಂದಿ ಹೆಚ್ಚು ಮಾಡುತ್ತಿರುವ ಬೇರೊಂದು ಸಂಘ ಖಂಡಿತ ಇರುತ್ತದೆ. ಗೊತ್ತಾದ ವಯಸ್ಸಾದ ಮೇಲೆ ವಿಮಾನ ಹಾರಿಸುವ ಕೆಲಸ ನಿಲ್ಲಿಸಬೇಕೆಂದು ಇಷ್ಟಪಡುವ ವಿಮಾನಸಾರಥಿಗಳು ಕ್ರಮವಾದ ಆಕಾಶಮಾರ್ಗಗಳಲ್ಲಿ ಉದ್ಯೋಗದಲ್ಲಿದ್ದ ಪಕ್ಷದಲ್ಲಿ, ಆಡಳಿತ ವಿಭಾಗದಲ್ಲಿ ವಿಮಾನಾಂಗಣ ನಿಯಂತ್ರಣಾಧಿಕಾರಿಗಳಂಥ (Aerodrome Control officers) ಉದ್ಯೋಗಗಳನ್ನು ತಪ್ಪದೆ ಪಡೆಯಬಹುದು.

ವಿಮಾನ ಪರೀಕ್ಷೆಯ ಹಾರಿಕೆ (Test Flying)

ಪರೀಕ್ಷಾ ಹಾರಿಕೆಯ ಉದ್ಯೋಗದೊಡನೆಯೇ ಸಲಹೆಗಾರ ವಿಮಾನ ಸಾರಥಿಯ (Pilot consultant) ಉದ್ಯೋಗವೂ ಸೇರಿಕೊಂಡಿದೆ; ಏಕೆಂದರೆ, ಇವೆರಡರಲ್ಲೂ ಕೆಲಸ ಒಂದೇ ತೆರ. ಅಸ್ಯೆನಿಕ ಹಾರಿಕೆಗಳಲ್ಲೆಲ್ಲ ಪರೀಕ್ಷಾ ಹಾರಿಕೆ ಅತ್ಯಂತ ಪಕ್ವವಾದದ್ದು ಹಾಗೂ ಅತ್ಯಂತ ಹೆಚ್ಚಿನ ಸಂಬಳವುಳ್ಳದ್ದು. ವಿಮಾನ ಸಾರಥಿಗೆ ಬೇರೆ ಬೇರೆ ಮಾದರಿಗಳ ವಿಮಾನಗಳನ್ನು ನಡಸುವುದರಲ್ಲಿ ವಿಶಾಲವಾದ ಪರಿಶ್ರಮವಿಲ್ಲದೆಹೋದ ಪಕ್ಷದಲ್ಲಿ ಉದ್ಯೋಗ ಪಡೆಯಲು ಪ್ರಯತ್ನಿಸುವುದು ವ್ಯರ್ಥ. ಬಹುಸಂಖ್ಯೆಯ ವಿಮಾನ ತಯಾರಕರ ಬಳಿ ಕೆಲಸಕ್ಕಿರುವ ಪರೀಕ್ಷಾ ವಿಮಾನ ಸಾರಥಿಗಳು ತಾವು ಆ ಕೆಲಸಕ್ಕೆ ಅರ್ಹರಾಗಲು ಬೇಕಾದ ಅನುಭವವನ್ನು ರಾಜ ವಿಮಾನ ಬಲದ ವಿಮಾನಪರೀಕ್ಷಾ ಕೇಂದ್ರಗಳಲ್ಲಾಗಲಿ (Royal Air Force Aeroplane Test Stations), ಮಾರ್ತ್‌ಷಮ್ ಹೀತ್‌ನಲ್ಲಾಗಲಿ (Marthesham Heath) ಸಂಪಾದಿಸಿರುತ್ತಾರೆ.

ಪರೀಕ್ಷಾ ವಿಮಾನಸಾರಥಿಯ ಕೆಲಸ ಯಂತ್ರವನ್ನು ಹಾರಿಸಿ ಅದು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ಮಾತ್ರವಲ್ಲ; ಇದಕ್ಕಿಂತ ಹೆಚ್ಚಿನದು. ವನು ಅನೇಕ ವೇಳೆ ಸಂಸ್ಥೆಯ ವಿಮಾನ ರಚನಾ ಸಂವಿಧಾನ (ನಕ್ಷೆ) ಶಾಖೆಯವರಿಗೆ ಸಲಹೆ ಕೊಡುತ್ತಾನೆ, ಮತ್ತು ಯಂತ್ರಗಳ ಹೊಸ ಮಾದರಿಗಳನ್ನು ತಯಾರಿಸುವುದರಲ್ಲಿ ಅವನು ಕೊಡಬೇಕಾದ ಅಭಿಪ್ರಾಯ ಎಷ್ಟೋ ಇರುತ್ತದೆ. ಅವನಿಗೆ ಸುಮಾರಾಗಿ ಹೆಚ್ಚಾದ ಸ್ಥಿರ ಸಂಬಳ ದೊರೆಯುತ್ತದೆ; ಅದು ವರ್ಷಕ್ಕೆ ೫೦೦ ಪೌಂಡುಗಳಿಂದ ಹಿಡಿದು ೮೦೦ ಪೌಂಡುಗಳವರೆಗಿರಬಹುದು. ಹೊಸ ಯಂತ್ರವನ್ನು ಪರೀಕ್ಷೆ ಮಾಡಿದ ಪ್ರತಿಸಲವೂ ಅವನಿಗೆ ಹೆಚ್ಚಿನ ರುಸುಮು ಕೊಡಲಾಗುತ್ತದೆ; ಹೊಸ ಮಾದರಿಯ ಯಂತ್ರಗಳನ್ನು ಮೊದಲ ಸಲ ಹಾರಿಸಿದಾಗ ಈ ರುಸುಮಿನ ದರ ವಿಶೇಷ ಹೆಚ್ಚಾಗಿರುತ್ತದೆ. ಒಟ್ಟಿನಲ್ಲಿ, ಅವನು ವರ್ಷಕ್ಕೆ ೧,೫೦೦ ಪೌಂಡು ಸಂಪಾದಿಸಬಹುದು. ಕೆಲವು ಸಂಸ್ಥೆಗಳು ವಿಶೇಷ ರುಸುಮಿನ ಬದಲು ಸ್ಥಿರ ಸಂಬಳವನ್ನು ಕೊಡುತ್ತವೆ. ಆದರೆ, ಸಾಮಾನ್ಯವಾಗಿ ವಿಶೇಷ ರುಸುಮು ಕೊಡುವುದೇ ರೂಢಿ. ಪರೀಕ್ಷಾ ವಿಮಾನಸಾರಥಿ ವಿಶೇಷ ಮಾದರಿಯ ವ್ಯಕ್ತಿ. ಅವನು ವಿಮಾನಹಾರಿಕೆಯಲ್ಲೂ ವಿಮಾನತಯಾರಿಕೆಯಲ್ಲೂ ಎಲ್ಲ ಕಾರ್ಯಭಾಗದ ತಿಳಿವಳಿಕೆಯನ್ನು ಪಡೆದವನಾಗಿದ್ದು, ವಾಯುಯಾನ ವಿಮರ್ಶಕನಾಗಿರಬೇಕು. ಅನೇಕ ವೇಳೆ ಅವನಿಂದಲೇ ಸಂಸ್ಥೆಗೆ ಯಶಸ್ಸು ದೊರೆಯಬೇಕಾಗಿರುತ್ತದೆ. ಯಂತ್ರವನ್ನು ಹಾರಿಸಿ ಅದನ್ನು ಪರೀಕ್ಷಿಸುವುದು, ವಿಮಾನಗಳನ್ನು ಮೇಲಕ್ಕೇರಿಸುವಾಗ ಮತ್ತು ವೇಗ ಪರೀಕ್ಷೆಗಾಗಿ ಅವನ್ನು ಓಡಿಸುವಾಗ ನಾನಾ ದೊಡ್ಡ ಯಂತ್ರ ಸಲಕರಣೆಗಳು ಗುರುತಿಸುವ ದಾಖಲೆಗಳನ್ನು ಓದುವುದು– ಇಷ್ಟು ಮಾತ್ರವಲ್ಲದೆ, ಹೊಸ ಮಾದರಿಯ ಯಂತ್ರಗಳ ಗುಣಾವಗುಣಗಳನ್ನು ಚರ್ಚಿಸುವ ರಚನಾ ಸಂವಿಧಾನ ಸಭೆಗಳಲ್ಲೂ ಅವನು ಹಾಜರಿರಬೇಕು. ಆಕಾಶಯಾನದಲ್ಲಿ ತೀವ್ರಾಸಕ್ತಿ ಉಳ್ಳವರಿಗೆ ಎಲ್ಲ ಬಗೆಯ ಹಾರಿಕೆಗಳಿಗಿಂತ ವಿಮಾನ ಪರೀಕ್ಷೆಯ ಹಾರಿಕೆಯೇ ಬಹುಶಃ ಅತ್ಯಂತ ಸ್ವಾರಸ್ಯವುಳ್ಳದ್ದು. ಆದರೆ, ಅದರ ಸಂಗಡಲೇ ಅದಕ್ಕೆ ವಿಶಿಷ್ಟವಾದ ಅಪಾಯಗಳೂ ಅನುಗೂಡಿ ಬರುತ್ತವೆ. ಆಕಾಶ ಮಧ್ಯದಲ್ಲಿ ಅನಿರೀಕ್ಷಿತವಾಗಿ ಏನೋ ತಪ್ಪುಂಟಾಗಿ, ಸನ್ನಿಹಿತವಾದ ಅಪಾಯದಿಂದ ಬಹು ಪ್ರಯಾಸಪಟ್ಟು ಪಾರಾಗದಿರುವ ಪರೀಕ್ಷಾ ವಿಮಾನಸಾರಥಿಗಳು ಕೇವಲ ವಿರಳ.

ಪ್ರದರ್ಶನ ಹಾರಿಕೆ ಮತ್ತು ವ್ಯಾಪಾರ ಪ್ರಕಟನೆ ಹಾರಿಕೆ

ಪ್ರದರ್ಶನ ಹಾರಿಕೆ ಹಾರುವುದು ಮುಖ್ಯವಾಗಿ ನಾಡಿನಲ್ಲಿ ಸಂಚಾರಮಾಡುವ ಸರ್ಕಸ್ಸುಗಳಲ್ಲಿ ಮಾತ್ರ. ಅವು ಅನೇಕ ವೇಳೆ ಸಂತೋಷ ಸವಾರಿ ಸಂಸ್ಥೆಗಳ (Joy Fiding Firms) ಜೊತೆಗೂಡಿ ಕೆಲಸ ಮಾಡುತ್ತವೆ, ಇಲ್ಲವೆ ಸ್ವತಃ ಅಂಥ ಸಂಸ್ಥೆಗಳಾಗಿರುತ್ತವೆ. ಅವುಗಳಲ್ಲಿ ಪ್ರದರ್ಶಿಸುವ ವಿಮಾನ ಸಾಮುಹಾರಿಕೆಯಲ್ಲಿ ಬಹು ಮೇಲ್ಮಟ್ಟದ ಹಾರಿಕೆಯ ಕಲೆಯನ್ನು ಉಪಯೋಗಿಸಲಾಗುತ್ತದೆ; ರಾಜ ವಿಮಾನ ಬಲದವರು ತೋರಿಸುವ ಪ್ರದರ್ಶನಗಳಲ್ಲಿ ಕಾಣಬರುವ ಯಾವುದೇ ಸಾಹಸಕಾರ್ಯವನ್ನು ಮೀರಿಸುವಂಥ ವಿಮಾನ ಸಾಮಿನ ಪ್ರದರ್ಶನಗಳನ್ನು ಪ್ರದರ್ಶನ ವಿಮಾನಸಾರಥಿ ತೋರಿಸಲು ತಯಾರಾಗಿರಬೇಕು. ಈ ಬಗೆಯ ಕಸಬು ಕೆಲವರಿಗೆ ಮಾತ್ರ ರುಚಿಸುತ್ತದೆ. ಉದಾಹರಣೆಗೆ, ಹಿಂದೆ ಸ್ಥಾಪಿತವಾದ ಪರಮಾವಧಿ ಹಾರಿಕೆಗಳನ್ನು ಮೀರಿಸಲಾಶಿಸುವವರೂ ಹಾರಿಕೆಯಲ್ಲಿ ಕೀರ್ತಿಯನ್ನು ಸಂಪಾದಿಸಬೇಕೆಂದಿರುವವರೂ ಪ್ರಾರಂಭದಲ್ಲಿ ಪ್ರದರ್ಶನದ ಹಾರಿಕೆಗೆ ಸೇರುವುದು ಒಳ್ಳೆಯದು.

ವ್ಯಾಪಾರ ಪ್ರಕಟನೆಯ ಹಾರಿಕೆ ಅನೇಕ ಪರಿವರ್ತನೆಗಳನ್ನು ಹೊಂದಿದೆ. ಧೂಮ ಲೇಖನ (ಹೊಗೆ ಬರಹ) ಮೊದಮೊದಲು ಬಹಳ ಗಮನ ಸೆಳೆಯಿತು; ಹಲವು ದೊಡ್ಡ ವಾಣಿಜ್ಯ ಸಂಸ್ಥೆಗಳು ತಮ್ಮ ಸರಕನ್ನು ಪ್ರಕಟಗೊಳಿಸಲು ಇದನ್ನು ಉಪಯೋಗಿಸಿಕೊಂಡರು. ಆದರೆ ಈಚೀಚೆಗೆ ಇದಕ್ಕೆ ಮೊದಲಿನಷ್ಟು ಪುರಸ್ಕಾರವಿಲ್ಲ. ಆದ್ದರಿಂದ ಕಸಬುದಾರಿ ವಿಮಾನಸಾರಥಿಗೆ ಇದರಲ್ಲಿ ದೊರೆಯ ಬಹುದಾದ ಅವಕಾಶ ಕಡಮೆ. ಸಂಬಳವೇನೋ ಚೆನ್ನಾಗಿಯೇ ದೊರೆಯುತ್ತದೆ; ಆದರೆ ಕೆಲಸ ಕಷ್ಟ. ಆಕಾಶದಲ್ಲಿ ಹೊಗೆಯಿಂದ ಬರೆಯಲು ಕಲಿಯುವುದಕ್ಕೆ ತುಂಬ ಕಾಲವ್ಯವಧಾನವೂ ತಾಳ್ಮೆಯೂ ಬೇಕು. ಇದಕ್ಕೆ ಬೇಕಾದ ಪೂರ್ವಾಭ್ಯಾಸವನ್ನು ಪೆಡಲ್ ಬೈಸಿಕಲ್ಲಿನ ಸಹಾಯದಿಂದ ಮಾಡಲಾಗುತ್ತದೆ; ಈ ಬೈಸಿಕಲ್ಲಿಗೆ, ಅದರ ಹಿಂದಕ್ಕೆ ಮರಳಿನ ಸಾಲನ್ನು ಹೊರಕ್ಕೆ ಬಿಡುವಂತಹ ಸಾಧನವಿರುತ್ತದೆ. ಬರಹವನ್ನು ಕನ್ನಡಿಯಲ್ಲಿ ಕಾಣುವ ಆಕಾರದಲ್ಲಿ ಬರೆಯಲಾಗುತ್ತದೆ. ಬಾವುಟ ಹಾರಿಕೆಗೆ ಹೊಗೆ ಬರಹಕ್ಕಿಂತ ಕಡಮೆಯ ಕೌಶಲ ಸಾಕು; ಆದರೆ, ಇದೂ ಸಹ ಜನಾಭಿಪ್ರಾಯದ ಏರಿಳಿತಗಳಿಗೆ ಒಳಪಟ್ಟಿದೆ. ಕೆಲವು ಸಂದರ್ಭಗಳಲ್ಲಿ, ಜನಸಾಂದ್ರತೆಯುಳ್ಳ ಪ್ರಾಂತಗಳಲ್ಲಿ ಕೆಳಮಟ್ಟದಲ್ಲಿ ಹಾರುವ ಸೂಚನೆ ಕಂಡುಬಂದರೆ ಜನರು ತೀವ್ರವಾಗಿ ಪ್ರತಿಭಟಿಸುತ್ತಾರೆ; ಇದರ ಪರಿಣಾಮವಾಗಿ, ವಾಣಿಜ್ಯ ಸಂಸ್ಥೆಗಳ ಪ್ರಕಟನೆಯ ಉದ್ದೇಶಗಳಿಗಾಗಿ ಬಾವುಟವನ್ನು ಉಪಯೋಗಿಸಲು ಹಿಂಜರಿಯುತ್ತವೆ.

ಖಾಸಗಿ ಉದ್ಯೋಗ

ಖಾಸಗಿ ಉದ್ಯೋಗದ ಹಾರಿಕೆ ಎಂದರೆ, ಸ್ವಂತ ವಿಮಾನ ಇಟ್ಟುಕೊಂಡಿರುವವನ ಖಾಸಾ ವಿಮಾನಸಾರಥಿಯಾಗಿದ್ದುಕೊಂಡು, ಆತನ ಯಂತ್ರ ಅಥವಾ ಯಂತ್ರಗಳನ್ನು ವಶದಲ್ಲಿಟ್ಟುಕೊಂಡು, ಅವುಗಳನ್ನು ನಡಸಲು ಸದಾ ಸಿದ್ಧನಾಗಿರುವುದು. ಸದ್ಯದಲ್ಲಿ ಖಾಸಗಿ ಉದ್ಯೋಗದ ಹಾರಿಕೆಯಲ್ಲಿ ಅವಕಾಶಗಳು ಕಡಮೆ. ಆದರೆ, ವಿಮಾನಗಳನ್ನು ಇಟ್ಟುಕೊಂಡು ತಾವೇ ಅವನ್ನು ನಡಸದಿರುವವರ ಸಂಖ್ಯೆ ಬೆಳೆಯುತ್ತಿದೆ; ಆದ್ದರಿಂದ ಈ ಬಗೆಯ ಉದ್ಯೋಗದಲ್ಲಿ ಇನ್ನು ಮುಂದೆ ಹೆಚ್ಚು ಅವಕಾಶಗಳು ದೊರೆಯಬಹುದು. ಹಿಂದೆ ಅತ್ಯಂತ ಪ್ರಸಿದ್ಧರಾದ ಅಸೈನಿಕ ವಿಮಾನಸಾರಥಿಗಳು ಈ ರೀತಿಯಲ್ಲಿ ತಮ್ಮ ಜೀವನ ಮಾರ್ಗವನ್ನು ಪ್ರಾರಂಭಿಸಿದರು.

ಇಂಡಿಯಾದಲ್ಲಿ ವಿಮಾನ ತಯಾರಿಕೆಯ ಸಂಸ್ಥೆಗಳು ಇಲ್ಲದಿರುವುದರಿಂದ ಇಲ್ಲಿ ಅಸೈನಿಕ ವಿಮಾನ ಸಾರಥಿಗಿರುವ ಅವಕಾಶಗಳು ಬೇರೆ ಯಾವ ಪರದೇಶದಲ್ಲಿರುವುದಕ್ಕಿಂತ ತುಂಬ ಕಡಮೆಯೆ. ಇಂಡಿಯಾದಲ್ಲಿರುವ ಸನ್ನದುಳ್ಳ ಅಸೈನಿಕ ವಿಮಾನಸಾರಥಿ ಯಾವುದಾದರೂ ಆಕಾಶಮಾರ್ಗಕ್ಕೇ ಸೇರಿಕೊಳ್ಳಬೇಕು: ಅದೊಂದೇ ಅವನಿಗೆ ತೆರೆದಿರುವ ದಾರಿ.

ವಾಯುಯಾನ ಶಿಲ್ಪ

ವಾಯುಯಾನ ಶಿಲ್ಪಕ್ಕೆ ಹೆಚ್ಚಾದ ಯಂತ್ರವಿದ್ಯೆಯ ಯೋಗ್ಯತೆ ಬೇಕು. ವಾಣಿಜ್ಯ ಹಾಗೂ ಸೈನಿಕ ಆಕಾಶಯಾನದಲ್ಲಿ ಇದರ ಪ್ರಯೋಜನ ಬಹಳ. ವಾಸ್ತವವಾಗಿ, ಪೂರ್ಣ ಯೋಗ್ಯತೆಯುಳ್ಳ ವಾಯುಯಾನ ಶಿಲ್ಪಿ ಉಳಿದ ಎಲ್ಲ ಶಿಲ್ಪಿಗಳಿಗಿಂತ ಉಚ್ಚ ಶಿಕ್ಷಣ ಪಡೆದವನೆಂದು ಹೇಳಬಹುದು. ವಾಯುಯಾನ ಶಿಲ್ಪಿಯ ಆಧಾರಭೂತಶಿಕ್ಷಣವು ಪ್ರಾರಂಭ ದೆಸೆಯಲ್ಲಿ ಕೈಗಾರಿಕಾ ಕ್ಷೇತ್ರದ ಬೇರೆ ಯಾವುದಾದರೂ ಶಾಖೆಯ ಶಿಲ್ಪಶಿಕ್ಷಣದಿಂದಲೇ ಪ್ರಾರಂಭವಾಗಬೇಕು. ತೀರ ಮುಂಚೆ ಪ್ರವೀಣತೆ ಪಡೆಯಲು ಪ್ರಯತ್ನಿಸುವುದು ಒಳ್ಳೆಯದಲ್ಲ; ಏಕೆಂದರೆ, ಪರಿಹರಿಸಬೇಕಾದ ಸಮಸ್ಯೆಗಳನ್ನು ಎದುರಿಸಲು ಸಮಗ್ರವೂ ಸಂಪೂರ್ಣವೂ ಆದ ಶಿಕ್ಷಣ ಬೇಕು. ಒಳಉರಿತದ ಎಂಜಿನ್ನುಗಳು ಮತ್ತು ಆಕಾಶಗಮನದ ಚಾಲಕ ಶಕ್ತಿಗಳ ಇತರ ರೂಪಗಳು, ಉಪಯೋಗಿಸುವ ಪದಾರ್ಥಗಳ ರಚನೆ ಮತ್ತು ಸಾಮರ್ಥ್ಯದ ತತ್ತ್ವ, ಲೋಹ ಶಾಸ್ತ್ರ, ರಾಸಾಯನಿಕ ವಿಜ್ಞಾನ, ಭೌತವಿಜ್ಞಾನ, ಆಕಾಶಯಾನದ ಇತರ ಶಾಖೆಗಳಾದ ಪವನಶಾಸ್ತ್ರ, ನಿಸ್ತಂತು ಮತ್ತು ಇತರ ವಿಷಯಗಳು– ಇವುಗಳ ಸಂಬಂಧವಾದ ಪೂರ್ಣಜ್ಞಾನ ಆವಶ್ಯಕ. ಆದರೆ,

ವಿದ್ಯಾರ್ಥಿ ಯಾವುವಾದರೂ ಒಂದು ಶಾಖೆಯಲ್ಲಿ ಶಿಕ್ಷಣ ಪಡೆಯುವುದು ಸಾಮಾನ್ಯ ರೂಢಿ.

ವಿಮಾನ ಸಾರಥ್ಯದ ವಿಷಯದಲ್ಲಿ ಹೇಗೊ ಹಾಗೆ ವಾಯುಯಾನ ಶಿಲ್ಪಕ್ಕೂ ಆವಶ್ಯಕವಾದ ಯೋಗ್ಯತಾಪತ್ರಗಳನ್ನು ವಿಮಾನ ಸಚಿವಶಾಖೆಯೇ ಕೊಡುತ್ತದೆ. ಯಂತ್ರ ಶಿಲ್ಪಿಗೆ ಸನ್ನದು ಕೊಡಬೇಕಾದದ್ದು ವಿಮಾನದ ಕಟ್ಟಡಗಳನ್ನು ಪರೀಕ್ಷಿಸುವುದಕ್ಕಾಗಿಯೆ, ಇಲ್ಲವೆ ಹಾರುವುದಕ್ಕೆ ಮುಂಚೆ ಎಂಜಿನ್ನುಗಳನ್ನು ಪರೀಕ್ಷಿಸುವುದಕ್ಕಾಗಿಯೆ, ಇಲ್ಲವೆ ವಿಮಾನ ಕಟ್ಟಡವನ್ನಾಗಲಿ ಎಂಜಿನ್ನನ್ನಾಗಲಿ ಪರೀಕ್ಷೆಗಾಗಿ ಬಿಚ್ಚಿ ಜೋಡಿಸಿದ ಮೇಲೆ ಮಾಡುವ ಇನ್ನೂ ಹೆಚ್ಚಿನ ಜವಾಬ್ದಾರಿಯ ಕೆಲಸವಾದ ಪರೀಕ್ಷೆಗಾಗಿಯೆ– ಎಂಬುದಕ್ಕೆ ಅನುಸಾರವಾಗಿ, ಭೂ ಯಂತ್ರ ಶಿಲ್ಪಿಯ ಸನ್ನದುಗಳಾದ A, B, C, D ಅಥವಾ X ಸನ್ನದುಗಳನ್ನು ಕೊಡಲಾಗುತ್ತದೆ. ಜೊತೆಗೆ, ದಿಕ್ಸೂಚಿ ಅಥವಾ ಇಳಿಕೊಡೆಗಳು– ಇವುಗಳಂಥ ಚಿಲ್ಲರೆ ಸನ್ನಾಹಗಳ ಪರೀಕ್ಷೆಗಾಗಿಯೂ ಯೋಗ್ಯತಾಪತ್ರಗಳನ್ನು ಕೊಡಲಾಗುತ್ತದೆ. ಜವಾಬ್ದಾರಿಯ ಪ್ರಮಾಣಕ್ಕೆ ಅನುಗುಣವಾಗಿ ಸಂಬಳವೂ ಹೆಚ್ಚುಕಡಮೆಯಾಗುತ್ತದೆ. ಉಮೇದುದಾರನಿಗೆ ಹೆಸರಿಗೆ ಕೊಡುವ ಸಂಬಳದ ದರವೇ ಅತ್ಯಂತ ಕಡಮೆಯದು; ಆಮೇಲೆ ಬೇರೆ ಬೇರೆ ಕೌಶಲದ ಉದ್ಯೋಗಗಳಿಗೆ ಉಚಿತವಾದ ಸಂಬಳ ದರಗಳು ಉಂಟು; ದೊಡ್ಡ ಆಕಾಶಮಾರ್ಗ ಸಂಘದ ಎಲ್ಲ ವಿಮಾನ ಸನ್ನಾಹಗಳನ್ನೂ ಸರಿಯಾಗಿ ನೋಡಿಕೊಳ್ಳುವುದಕ್ಕೂ, ಬಿಚ್ಚಿನೋಡಿ ಪರೀಕ್ಷಿಸುವುದಕ್ಕೂ ಪ್ರಧಾನ ಯಂತ್ರಶಿಲ್ಪಿಗೆ ಕೊಡುವ ಸಂಬಳವೇ ಒಬ್ಬನು ನಿರೀಕ್ಷಿಸಬಹುದಾದ ಅತ್ಯಂತ ಹೆಚ್ಚಿನ ಸಂಬಳ. ಈ ಸಂಬಳ ಇಂಡಿಯಾದಲ್ಲಿ ತಿಂಗಳಿಗೆ ೨,೦೦೦ ರೂಪಾಯಿಗಳಾದರೂ ಆಗಿರಬಹುದು.

ನಿಸ್ತಂತು ಕಾರ್ಯನಿರ್ವಾಹ

ವಿಮಾನಗಳನ್ನು ಪರೀಕ್ಷಿಸುವುದು, ಬಿಚ್ಚಿನೋಡುವುದು, ಮತ್ತು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದು– ಈ ಕೆಲಸಗಳಿಗಾಗಿ ನೇಮಿಸಿಕೊಂಡ ಸಿಬ್ಬಂದಿಯ ಮುಖ್ಯತೆ, ಇತರ ಕಡಮೆ ಮುಖ್ಯತೆಯುಳ್ಳ ಆದರೆ ನಿಜವಾಗಿಯೂ ಪ್ರತ್ಯೇಕವಾದ ಕಸಬುಗಳನ್ನು ದೃಷ್ಟಿಯಿಂದ ಮರೆಮಾಡುತ್ತದೆ. ಉದಾಹರಣೆಗೆ, ನಿಸ್ತಂತು ಕಾರ್ಯಕರ್ತನ ಮತ್ತು ಯಾಂತ್ರಿಕನ (Mechanic) ಕಸಬು ಪ್ರತ್ಯೇಕವಾದದ್ದು; ಆದರೆ ಇದನ್ನು ಸಾಮಾನ್ಯ ಭೂ ಯಂತ್ರಶಿಲ್ಪಿಯ ಕಸಬಿನ ದರ್ಜೆಗೇ ಸೇರಿಸಲಾಗುತ್ತದೆ. ಏಕೆಂದರೆ, ನಿಸ್ತಂತು ಕಾರ್ಯಕರ್ತನು ಒಕ್ಕಡೆ ವಿಮಾನ

ನಡಸುವವರ ತಂಡಕ್ಕೆ ಸೇರಿದವನು; ವಾಯುಯಾನದ ನಿಸ್ತಂತು ಸನ್ನಾಹವನ್ನು ಸರಿಯಾಗಿ ಇಟ್ಟುಕೊಂಡು ಅದನ್ನು ಸರಿಪಡಿಸುತ್ತಿರಬೇಕಾದ ಜವಾಬ್ದಾರಿಯುಳ್ಳವನೂ ಆದ್ದರಿಂದ ಅವನು ಭೂ ಯಂತ್ರಶಿಲ್ಪಿಯೂ ಆಗಿರುತ್ತಾನೆ. ಹೀಗಿದ್ದರೂ ಕೂಡ, ನಿಸ್ತಂತು ಬರುಬರುತ್ತ ಪ್ರಾಮುಖ್ಯತೆಗೆ ಬರುತ್ತಿರುವುದನ್ನು ನೋಡಿದರೆ, ಮುಂದೆ ವಿಮಾನ ನಿಸ್ತಂತುಶಾಖೆ ತನ್ನದೇ ಆದ ಬಗೆಬಗೆಯ ಉದ್ಯೋಗಗಳನ್ನು ಒದಗಿಸುವ ಒಂದು ಮುಖ್ಯವಾದ ಕಸಬಾಗುವುದೆಂಬ ಸೂಚನೆ ಕಂಡುಬರುತ್ತದೆ.

ವಿಮಾನ ಕಾರ್ಯಾಡಳಿತ

ಆಕಾಶ ಸಾಗಣೆ ಸಂಘದ ಆಡಳಿತ ಬರುಬರುತ್ತ ತೊಡಕಾಗುತ್ತಿರುವುದರಿಂದ ಅದರದ್ದೇ ಒಂದು ಕಸಬಾಗಿದೆ. ಈ ಇಲಾಖೆಗೆ ಬೇಕಾದ ಬಗೆಬಗೆಯ ಕರ್ತವ್ಯಗಳ ಉದಾಹರಣೆಯಾಗಿ, ಇಂಪೀರಿಯಲ್ ಏರ್‌ವೇಸ್ ಸಂಸ್ಥೆಯವರು ತಾವು ಸೇರಿಸಿಕೊಳ್ಳುವ ವಾಣಿಜ್ಯ ಶಾಖೆಯ ಹೊಸಬರಿಗಾಗಿ ಏರ್ಪಡಿಸಿರುವ ಮೂರು ವರ್ಷಗಳ ಕಾಲದ ಶಿಕ್ಷಣ ವ್ಯವಸ್ಥೆಯನ್ನು ಉದಾಹರಿಸಬಹುದಾಗಿದೆ. ವಾಣಿಜ್ಯ ಸಂಬಂಧವಾದ ಕಾರ್ಯದ ಎಲ್ಲ ಇಲಾಖೆಗಳ ಅನುಭವವೂ ಈ ಶಿಕ್ಷಣದಲ್ಲಿ ಸೇರಿರುತ್ತದೆ; ಶಿಕ್ಷಣ ಕಾಲದಲ್ಲಿ ಕೆಲಸಗಾರನು ಕಚೇರಿಯ ನಿತ್ಯಗಟ್ಟಲೆಯ ಕೆಲಸ, ವಿಮಾನ ಸಂಬಂಧದ ಕಾಗದ ಪತ್ರಗಳು, ಒಂದು ಅಥವಾ ಹೆಚ್ಚು ಪರದೇಶ ಭಾಷೆಗಳು, ವಿಮಾನ ನಕಾಸೆಗಳು, ಪ್ರಕಟನೆ ಮತ್ತು ಪ್ರಚಾರ, ಸಂಚಾರದ ಆಡಳಿತ– ಇವೇ ಮುಂತಾದ ಕೆಲಸಗಳ ಪರಿಚಯ ಪಡೆಯಬೇಕು. ಶಿಕ್ಷಣ ಕಾಲದಲ್ಲಿ ಆತನು ತನ್ನ ಕಾರ್ಯಸಮರ್ಥತೆಯನ್ನು ತೋರಿಸಿಕೊಟ್ಟರೆ, ಸಾಧಾರಣವಾಗಿ ಒಡನೆಯೇ ಅವನು ವಿಮಾನಾಂಗಣದ ಮೇಲ್ವಿಚಾರಕನಾಗಿ ನೇಮಕ ಹೊಂದುತ್ತಾನೆ. ಈ ಅಧಿಕಾರದಲ್ಲಿ ಅವನು ವಿಮಾನವು ಇಳಿಯುವ ಭೂಪ್ರದೇಶದ ಮತ್ತು ಆಕಾಶಮಾರ್ಗದ ಒಂದು ವಿಭಾಗದ ಸಂಚಾರದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾನೆ. ದೊಡ್ಡ ಆಕಾಶಮಾರ್ಗ ಪ್ರಯಾಣದ ವಿಮಾನದ ಪಾರುಪತ್ಯಗಾರನ ಕೆಲಸ ಇಲ್ಲವೆ ಕಚೇರಿಯ ಗುಮಾಸ್ತನ ಕೆಲಸ– ಇವೇ ಮುಂತಾದವು ಆಕಾಶಯಾನದಲ್ಲಿ ದೊರೆಯುವ ಇತರ ಕೆಲವು ಉದ್ಯೋಗಗಳು.

ಇತರ: ವಾಸ್ತವವಾಗಿ ಆಕಾಶಸಂಚಾರಕ್ಕೆ ಸಂಬಂಧ ಪಡದ ಇತರ ವಿಮಾನ ಕಾರ್ಯ ಶಾಖೆಗಳಲ್ಲಿ, ವಿಮಾನವನ್ನು ನಡಸುವ ಸಾಮರ್ಥ್ಯವಿಲ್ಲದಿದ್ದರೂ

ಆಕಾಶಯಾನ ಸಂಬಂಧವಾದ ತಿಳಿವಳಿಕೆಯುಳ್ಳವರಿಗೆ ಉದ್ಯೋಗಗಳು ದೊರೆಯುತ್ತವೆ. ವಿಮಾನ ಹಾರಿಕೆ ಸಂಘದ ಅಥವಾ ಶಾಲೆಯ ಕಾರ್ಯದರ್ಶಿಯಾಗಲಿ ವ್ಯವಸ್ಥಾಪಕನಿಗಾಗಲಿ, ಅದೇ ಪ್ರಮಾಣದ ಸಾಮಾಜಿಕ ಸಂಘದ ಕಾರ್ಯದರ್ಶಿಗೆ ಅಥವಾ ವ್ಯವಸ್ಥಾಪಕನಿಗೆ ದೊರೆಯುವಷ್ಟೇ ಸಂಬಳ ದೊರೆಯುತ್ತದೆ. ಕೆಲಸ ಶ್ರಮಸಾಧ್ಯವಾದರೂ ವೈವಿಧ್ಯಯವುಳ್ಳದ್ದು; ಬುದ್ಧಿವಂತರೂ ವ್ಯವಹಾರ ಸಮರ್ಥರೂ ಆದ ಪುರುಷರಾಗಲಿ ಸ್ತ್ರೀಯರಾಗಲಿ, ಈ ಉದ್ಯೋಗ ಮುಂದೆ ಹೆಚ್ಚು ಪ್ರತಿಫಲ ಕೊಡುವ ಮತ್ತು ಸ್ವಾರಸ್ಯವುಳ್ಳ ಉದ್ಯೋಗವೆಂಬುದನ್ನು ಅವರು ತಾವಾಗಿ ಅರಿತುಕೊಳ್ಳುತ್ತಾರೆ.

ವಿಮಾನ ರಚನೆ

ವಿಮಾನರಚನೆಯ ಕೆಲಸ ವಿದ್ಯುತ್‌ಶಿಲ್ಪ, ವಾಸ್ತು ಶಿಲ್ಪ ಮತ್ತು ಸ್ವಯಂ ಯಾನ ಶಿಲ್ಪ (Electrical, Civil and Automobile Engineering)– ಇವುಗಳಷ್ಟೆ ವಿಶಿಷ್ಟ ಯಂತ್ರವಿದ್ಯೆಯನ್ನೂ ವಿಸ್ತಾರವಾದ ಅಸ್ತಿಭಾರಗಳನ್ನೂ ಉಳ್ಳದ್ದು. ಯಂತ್ರಶಿಲ್ಪದ ಇತರ ಶಾಖೆಗಳಲ್ಲಿರುವಂತೆ ಇದರ ಕಾರ್ಯಕ್ಷೇತ್ರವನ್ನೂ ಒಟ್ಟಿನ ಮೇಲೆ ಕಾರ್ಖಾನೆಗಳು ಮತ್ತು ರೇಖನ ಕಚೇರಿ (ಅಥವಾ ತಯಾರಿಕೆಯ ಸ್ಥಳ ಮತ್ತು ನಕಾಸೆಯ ಸ್ಥಳ) ಎಂಬುದಾಗಿ ವಿಂಗಡಿಸಬಹುದು. ಕಾರ್ಖಾನೆಗಳಲ್ಲಿ ಕೈಯಿಂದ ಮಾಡುವ ಕೆಲಸಕ್ಕೆ ಅತ್ಯಂತ ಹೆಚ್ಚಿನ ನಿಷ್ಕೃಷ್ಟತೆ ಬೇಕು; ಮತ್ತು ವಿಮಾನ ತಯಾರಿಕೆಯ ಎಲ್ಲ ಮಟ್ಟಗಳಲ್ಲೂ, ಪ್ರತಿಯೊಂದು ಕಾರ್ಯ ವಿಧಾನವನ್ನೂ ವಿವರವಾಗಿ ಪರೀಕ್ಷಿಸಿ ಹತೋಟಿಯಲ್ಲಿಟ್ಟುಕೊಳ್ಳುವುದರಲ್ಲೂ ಕೈಯಿಂದ ಜೋಡಣೆಗಳನ್ನು ಮಾಡಬೇಕಾದ ಕಾರ್ಯವೇ ಹೆಚ್ಚಾಗಿರುತ್ತದೆ: ಇವೇ ಕಾರ್ಖಾನೆಯ ಕೆಲಸದ ಮುಖ್ಯ ಲಕ್ಷಣಗಳು. ಯಂತ್ರ ಸಲಕರಣೆಗಳನ್ನು ಜೋಡಿಸುವವರು ಮತ್ತು ಅವುಗಳ ಕಾರ್ಯಕರ್ತರು, ಬಡಗಿಗಳು, ಲೋಹ ಕೆಲಸದವರು, ಜೋಡಣೆದಾರರು, ವಸ್ತ್ರ ಮತ್ತು ಮೆರುಗೆಣ್ಣೆ ಕೆಲಸಗಾರರು– ಇವರುಗಳವೇ ವಿಮಾನ ರಚನೆಯಲ್ಲಿರುವ ಮುಖ್ಯ ಕಸಬುಗಳು. ಈ ಶಾಖೆಯಲ್ಲಿ ಮುಖ್ಯ ಕಾರೇಗಾರರಿಂದ ಹಿಡಿದು ಕಾರ್ಯಗಳ ವ್ಯವಸ್ಥಾಪಕರವರೆಗೆ ಎಲ್ಲ ಕುಶಲ ಕೆಲಸಗಾರರೂ ವಿಶೇಷ ಜಾಗರೂಕತೆಯಿಂದಲೂ, ನಿಷ್ಕೃಷ್ಟತೆಯಿಂದಲೂ ಕೆಲಸ ಮಾಡಬೇಕಾಗಿರುವುದರಿಂದ ಕೊಡುವ ಸಂಬಳ ತಕ್ಕಮಟ್ಟಿಗೆ ಹೆಚ್ಚಾಗಿಯೇ ಇರುತ್ತದೆ.

ಎಲ್ಲ ನಕಾಸೆಯ ಮತ್ತು ಪ್ರಯೋಗಪರೀಕ್ಷೆಯ ಸಿಬ್ಬಂದಿಯನ್ನೂ ಒಳಕೊಂಡ ರೇಖನ ಕಚೇರಿಯ ಸಿಬ್ಬಂದಿ ತಯಾರಿಕೆ ಇಲಾಖೆಯ ಸಿಬ್ಬಂದಿಗಿಂತ ದೊಡ್ಡದು.

ರೇಖನ ಸಿಬ್ಬಂದಿಯನ್ನು ತಯಾರಿಕೆ ಸಿಬ್ಬಂದಿಗೆ ಹೋಲಿಸಿದರೆ, ಇತರ ಯಾವ ಯಂತ್ರ ಶಿಲ್ಪ ಕೈಗಾರಿಕೆಯಲ್ಲೂ ಈ ಪ್ರಮಾಣ ಇಲ್ಲ. ಇದು ವಾಯುಯಾನ ಶಿಲ್ಪದ ಶಾಸ್ತ್ರೀಯ ಹಾಗೂ ಪ್ರಾಯೋಗಿಕ ಸ್ವರೂಪವನ್ನು ತೋರಿಸುತ್ತದೆ. ಇಲ್ಲಿ ಅನೇಕ ಮಂದಿ ನಕ್ಷೆಗಾರರನ್ನು ನೇಮಿಸಿಕೊಂಡಿರುತ್ತದೆ. ವಾಯುಯಾನ ಶಿಲ್ಪದಲ್ಲಿ, ಒತ್ತಡದ ಪರಿಣಾಮದಿಂದುಂಟಾಗುವ ಆಕೃತಿ ವಿಕಾರದ (Strain) ಸೂಕ್ಷ್ಮ ಲೆಕ್ಕಾಚಾರಗಳು ಒಂದು ವಿಶೇಷ ಲಕ್ಷಣ. ಆದ್ದರಿಂದ, ಯಂತ್ರಶಿಲ್ಪದ ಇತರ ಶಾಖೆಗಳಲ್ಲಿರುವಂತೆ, ಇಲ್ಲಿಯೂ ವಿಶ್ವವಿದ್ಯಾನಿಲಯದ ಪದವಿಗಳು ಉಪಯುಕ್ತವಾಗುತ್ತವೆ. ಈಗ ಹಲವು ವಿಶ್ವವಿದ್ಯಾನಿಲಯಗಳಲ್ಲಿ ವಾಯುಚಲನ ವಿಜ್ಞಾನದ (Dynamics) ವಿಷಯದಲ್ಲೂ ಪರೀಕ್ಷೆ ಇಟ್ಟಿದ್ದಾರೆ.

ವಿಮಾನ ಮಾರಾಟ

ವಿಮಾನ ಕೈಗಾರಿಕೆ ಹೆಚ್ಚು ವಾಣಿಜ್ಯ ಸಂಬಂದವುಳ್ಳದ್ದಾಗುತ್ತಿರುವುದರಿಂದ, ವಿಮಾನ ಮಾರಾಟದ ಇಲಾಖೆಯಲ್ಲಿನ ಅವಕಾಶಗಳು ಹೆಚ್ಚುತ್ತಿವೆ; ಹೀಗೆ, ಈ ಇಲಾಖೆ ಯಂತ್ರಶಿಲ್ಪ ಶಾಖೆಯಷ್ಟೆ ಪ್ರಮುಖವಾಗುತ್ತಿದೆ. ಹಿಂದೆ ಬಹುಮಟ್ಟಿಗೆ ಎಲ್ಲ ಸಂಘಗಳೂ ಹೊಸ ಮಾರಾಟಗಳನ್ನು ಮಾರಾಟದ ವ್ಯವಸ್ಥಾಪಕನ ಮತ್ತು ಮಾರಾಟದ ನಿರ್ದೇಶಕನ ವಶಕ್ಕೆ ಒಪ್ಪಿಸುತ್ತಿದ್ದುವು; ಇವರುಗಳ ಇಲಾಖೆ ನೇರವಾಗಿ ಆಕಾಶಮಾರ್ಗ ಸಂಸ್ಥೆಯ ಕಾರ್ಯಕರ್ತನಿಗಾಗಲಿ ಖಾಸಗಿ ವಿಮಾನ ಸಂಚಾರಿಗಾಗಲಿ ಮಾರಾಟ ಮಾಡುತ್ತಿತ್ತು. ಈಚೀಚೆಗೆ ವಿಮಾನ ಉಪಯೋಗಿಸುವವನೊಡನೆಯೆ ನೇರವಾಗಿ ವ್ಯವಹಾರ ನಡಸುವ ಹೊಣೆ ವಹಿಸಿಕೊಳ್ಳುವ ಕಡೆಗೆ ಪ್ರವೃತ್ತಿಯುಂಟಾಗುತ್ತಿರುವಂತೆ ತೋರಿಬರುತ್ತಿದೆ. ಕಾಲಾನುಕಾಲದಲ್ಲಿ ವಿಮಾನಗಳನ್ನು ಮಾರುವ ಕೆಲಸವೆಲ್ಲ ಸ್ಥಳೀಯ ಪ್ರತಿನಿಧಿಗಳ ವಶಕ್ಕೆ ಬರುವುದೆಂದು ನಿರೀಕ್ಷಿಸಬಹುದಾಗಿದೆ. ಆದ್ದರಿಂದ, ವಿಮಾನ ಮಾರಾಟದಲ್ಲಿ ಮುಂದೆ ದೊರೆಯಬಹುದಾದ ಜೀವನಮಾರ್ಗಗಳೆಲ್ಲ ಸ್ಥಳೀಯ ಪ್ರತಿನಿಧಿಗಳ ಉದ್ಯೋಗಗಳಾಗಿರುವುವು.

* * * *

ಗುಂಪು ೬ – ಸ್ತೋತ್ರಗಳು

ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರೀ

ಗುಂಪು ೬ – ಸ್ತೋತ್ರಗಳು

ಶ್ರೀ ಶಂಕರಾಚಾರ್ಯ ವಿರಚಿತ

ಸೌಂದರ್ಯಲಹರೀ

(ಕನ್ನಡ ಪದ್ಯಾನುವಾದ)

ಶ್ರೀ ಶಂಕರಾಚಾರ್ಯ ವಿರಚಿತ

ಸೌಂದರ್ಯಲಹರೀ

೧

ಹೇ ದೇವಿ! ದೇವಾಧಿದೇವನೆನಿಸಿದ ಶಿವನು
ಶಕ್ತಿಯುಕ್ತನುಯೆನಿಸಿದಂದು ಶಕ್ತನು ತಾನು
ಸೃಷ್ಟಿಕಾರ್ಯವನೆಸಗಲಂತಲ್ಲದಿರಲವನು ಕದಲಲೂ ಆರನಲ್ತೆ;
ಇಂತಿರಲು ಹರಿಹರ ವಿರಿಂಚಾದ್ಯರಿಂದ ಸಂ-
ಪೂಜ್ಯೆಯಾಗಿರುವ ನಿನಗೆಂತು ಪ್ರಣಾಮವನು
ಸಂಸ್ತೋತ್ರಗಳನರ್ಪಿಸಲ್ಕಾರ್ಪನೆನಿಸುವನು ಕೃತಪುಣ್ಯನಲ್ಲದವನು

೨

ಹೇ ದೇವಿ! ಅಡಿದಾವರೆಯ ಸೂಕ್ಷ್ಮಾತಿ
ಸೂಕ್ಷ್ಮಧೂಳಿಯ ಕಣವ ಪಡೆದೊಟ್ಟುಗೂಡಿಸುತ
ಈರೇಳು ಲೋಕಗಳನಾ ವಿರಿಂಚಿಯು ವಿರಚಿಸುವನಲ್ತೆ ಸೊಗಸುವಂತೆ;
ಈ ಲೋಕಗಳನೆಲ್ಲ ಬಹಳ ಪ್ರಯಾಸದಿಂ-
ದಾ ವಿಷ್ಣು ಧರಿಸಿಹನು ಶಿರಸಹಸ್ರಗಳಿಂದ
ಲೋಕಗಳ ಪುಡಿಗುಟ್ಟಿ ಪುಡಿಯ ಹರ ಬಳಿದುಕೊಳುವನು ಭಸ್ಮಲೇಪನದೊಲು

೩

ಅಜ್ಞಾನವಂತರಂತಃಕರಣತಿಮಿರಕ್ಕೆ
ಭಾಸ್ಕರದ್ವೀಪನಗರವಿದು, ಜಡತೆಯ ಜನಕೆ
ಚೈತನ್ಯವೆಂಬ ಹೂಗೊಂಚಲಿಂದೊಸ*ರ್ವ ಮಕರಂದ ಝರಿಯಾಗಿರುವುದು;
ಬಡವರಿಗೆ ಚಿಂತಾಮಣಿಯ ಮಾಲೆಯಾಗಿಹುದು
ಜನ್ಮಜಲಧಿಯೊಳು ಮುಳುಗಿರುವರನ್ನುದ್ಧರಿಸಿ
ಪೊರೆವ ಮುರರಿಪುವರಾಹನ ದಾಡೆಯಾಗಿಹುದು ತವಪಾದಪದ್ಮಧೂಳಿ

೪

ಸರ್ವಲೋಕಶರಣ್ಯೆ! ನಿನ್ನಿಂದಿತರ ದೇವ
ಗಣಗಳೆರಡೂ ಕೈಗಳಿಂದ ಕೊಡುವರು ವರವ–
ನಭಯವನು; ನೀನೊಬ್ಬಳೇ, ತಾಯೆ, ವರದಾಭಯಾಭಿನಯವಿಲ್ಲದವಳು;
ಭಯಭೀತರಾಗಿ ತಲ್ಲಣಗೊಳದ ತೆರದಲ್ಲಿ
ಪೊರೆಯಲೂ ವಾಂಛಿತಕ್ಕಧಿಕವಹ ಫಲಗಳನು
ನೀಡಲೂ ನಿನ್ನೆರಡು ದಿವ್ಯ ಚರಣಗಳೆ ಸಾಲವೆ ಪೇಳು ಕೈಗಳೇಕೆ?

೫

ನತಜನಕೆ ಸೌಭಾಗ್ಯವನು ಸಂಜನಿಪ ನಿನ್ನ–
ನಾರಾಧಿಸುವ ವಿಷ್ಣು ಮುನ್ನ ಪಡೆಯುತ ಹೆಣ್ಣ
ರೂಪವನು ಪುರರಿಪುಮಹೇಶ್ವರನನೂ ಸಹ ಕ್ಷೋಭೆಗೊಳಗಾಗಿಸಿದನು;
ಮನ್ಮಥನು ಕೂಡ ನಮಿಸುತ ನಿನಗೆ, ರತಿಗೆ ಕಣ್
ಸವಿಯಾದ ಮೈಸೊಬಗೆವಡೆದು ಮುನಿಪುಂಗವರ
ಅಂತರಂಗದಲಿ ಸಹ ಮೋಹವನು ಮೂಡಿಸಲು ತಾನ್ಶಕ್ತನಾದನಲ್ತೆ

೬

ಹಿಮಗಿರಿಸುತೇ! ಬಿಲ್ಲು ಹೂವಿನದು, ಆ ಹೆದೆಯೊ
ತುಂಬಿಯಿಂದಾಗಿಹುದು, ಬಾಣವೈದೇ ಐದು,
ಸಾಮಂತನು ವಸಂತ, ಮಲಯಮಾರುತರಥ, ಯುದ್ಧ ಮಾಡುವನನಂಗ;
ಅಲ್ಲದೆಯುಮೇಕಾಕಿ; ಇಂತಿರಲ್ಕವನಿರವು,
ನಿನ್ನಯ ಕೃಪಾಮಯ ಕಟಾಕ್ಷವೀಕ್ಷಣಮಹಿಮೆ–
ಯಿಂದವನು ಬಲವಡೆದು ಯೀಜಗವನೆಲ್ಲವನು ಗೆಲ್ಲುತಿಹನಲ್ತೆ ತಾಯೇ

೭

ದನಿಗೈವ ಕಾಂಚಿಯನು ತಳೆದವಳು, ಕರಿಕಲಭ–
ಕುಂಭವನು ಪೋಲ್ವ ಕುಚಗಳ ಭಾರದಿಂದ ನಸು–
ಬಾಗಿಹಳು, ಬಡನಡುವಿನವಳು, ಶಾರದಸಮಯಪೂರ್ಣೇಂದುಸದೃಶವದನೆ,

ಬಿಲುಬಾಣಗಳನು ಪಾಶಾಂಕುಶಗಳನು ನಾಲ್ಕು
ಕೈಗಳಲಿ ಪಿಡಿದವಳು– ತ್ರಿಪುರಾಂತಕನ ಮಡದಿ
ಅವನಹಂಕಾರರೂಪಿಣಿ ನಮ್ಮ ಹೃತ್ಕಮಲಕೈತಂದು ನೆಲಸಲಲ್ಲಿ

೮

ಅಮೃತೋದಧಿಯ ನಡುವೆ ಕಲ್ಪವೃಕ್ಷೋಪವನ–
ದಿಂದ ಪರಿವೃತವಾದ ರತ್ನಮಯ ದೀವಿಯೊಳು
ನಿಪೋಪವನದಿಂದ ಶೋಭಿಸುವ ಚಿಂತಾಮಣಿವಿನಿರ್ಮಿತಾಲಯದಲಿ
ಶಿವನಾಕೃತಿಯ ಮಂಚದಲಿ ಪರಮಶಿವ ತಾನು
ಪರ್ಯಂಕವೆನಿಸಲದರಲ್ಲಿ ಪವಡಿಪ ಮಹಿಮೆ–
ಯುಳ್ಳ ನಿನ್ನನು ಚಿದಾನಂದಲಹರಿಯನು ಕೆಲಬರೆ ಧನ್ಯರಾದವರು ಭಜಿಸುತಿಹರು

೯

ಭೂಮಿ ಮೂಲಾಧಾರ ಚಕ್ರದಲಿ, ಮಣಿಪೂರ
ಚಕ್ರದಲಿ ಜಲವಗ್ನಿಯರಿಯೆ *ಸ್ವಾಧಿಷ್ಠಾನ
ಚಕ್ರದಲಿ, ಹೃದಯದಲಿ ಮಾರುತನು, ಮೇಲಿಹ ವಿಶುದ್ಧದಲ್ಲಾಕಾಶವು;
ಹುಬ್ಬುಗಳ ನಡುವೆಯಾಜ್ಞಾಚಕ್ರದಲಿ ಮನಸು–
ಇಂತಿವೆಲ್ಲದರ ಕುಲಪಥವ ನೆರೆ ಭೇದಿಸುತ
ನೀ ಸಹಸ್ರಾರ ಕಮಲದಲಿ ಪತಿಯೊಡನೆಯೇಕಾಂತದಲಿ ನಲಿಯುತಿರುವೆ

೧೦

ಅಡಿದಾವರೆಗಳಿಂದ ಸುರಿಮಳೆಯ ತೆರದಲ್ಲಿ
ಸುರಿವಮೃತವರ್ಷದಿಂ ನಾಡೀಪ್ರಪಂಚವನು
ತೋಯಿಪಳು ಸಾಹಸ್ರಕಮಲಸ್ಥ ಚಂದ್ರಮಂಡಲ ಸಮಾಯುಕ್ತಳೆನಿಸಿ;
ಮತ್ತೆಯ್ದಿ ತನ್ನ ಮೂಲಾಧಾರ ಭೂಮಿಯನು
ಪುಚ್ಛ ಕಚ್ಚಿದ ಸರ್ಪವನು ಪೋಲ್ವ ಕುಂಡಲಿನಿ–
ಶಕ್ತಿಯನು ತನ್ನ ತೆರನಾಗಿಸುತ ಕುಲಕುಂಡಕುಹರದಲಿ ನಿದ್ರಿಸುವಳು

೧೧

ನಾಲ್ಕು* ಶ್ರೀಕಂಠ ಚಕ್ರಗಳಿಂದೆ ಮೇಣ ಶಂಭು
ಚಕ್ರಪ್ರಭಿನ್ನವಹ ಐದು ಶಿವಯುವತಿ ಚ–
ಕ್ರಗಳಿಂದೆಯಿವು ಕೂಡಿದೊಂಬತ್ತು ಮೂಲಪ್ರಕೃತಿಗಳೆನಿಸಿದವುಗಳಿಂದೆ;
ವಸುದಳ ಕಲಾಶ್ರತ್ರಿವಲಯ ತ್ರಿರೇಖೆಗಳು
ಕೂಡಿಕೊಂಡಿರಲಾಗಿ ನಿನ್ನ ನಲನೆಲೆಯಾಗಿ
ಪರಿಣಮಿಸಿ ಶೋಭಿಸಿವೆ ನಾಲ್ವತ್ತು ನಾಲ್ಕು ತ್ರಿಕೋಣಗಳು ಬಿಂದುವೆನಿಸಿ

೧೨

ಹೇ ತುಹಿನಗಿರಿಕನ್ಯೆ! ಎಣೆಯಿಲ್ಲದಿಹ ನಿನ್ನ
ಚೆಲುವನುಪಮಿಸಲರಿವರೇನಾ ವಿರಿಂಚಿ ಮುಂ–
ತಪ್ಪ ಕವಿವರ್ಯರಿನ್ನುಳಿದ ಕವಿಗಳ ಕುಬ್ಜಕಲ್ಪನೆಗೆ ಸಾಧ್ಯವಹುದೇ?
ತಪದಿಂದಲೂ ಕೂಡ ಪಡೆಯಲಾಗದ ಶಿವನ
ಸಾಯುಜ್ಯ ಪದವಿಯನು ಆ ಸೊಬಗಿನಾಲೋಕ–
ದೌತ್ಸುಕ್ಯಮಾತ್ರದಿಂದೈದುವರು ಮನಸಿನಲಿ ದೇವಲಲನಾಮಣಿಗಳು

೧೩

ಅತಿವೃದ್ಧನರತಗಣ್ಣವನು ರತಿಸುಖ ವಿಮುಖ–
ನಿಂತಿಪ್ಪ ನರನಮೇಲೊಡನೆ ಬೀಳಲು ನಿನ್ನ
ಕಡೆಗಣ್ಣ ನೋಟವಾಕ್ಷಣದಲ್ಲಿ, ಓ ದೇವಿ, ನೂರಾರು ಎಳೆವೆಣ್ಗಳು
ಮುಡಿಗಟ್ಟು ಬಿಚ್ಚಿಕೊಳೆ ಎದೆಯ ಮೇಲುದ ಜಾರೆ
ತಟ್ಟನೆ ಮುರಿಯೆ ಕಾಂಚಿ ತೊಟ್ಟನುಟ್ಟುಡೆಕಳಚೆ
ಎಂಥ ಸೋಜಿಗವೆಂದು ಲೋಕನಿಬ್ಬೆರಗಾಗೆ ಅವನ ಹಿಂದೋಡಿಬಹರು

೧೪

ಐವತ್ತು ಮೇಲಾರು ಭೂನಿಷ್ಠ ಚಕ್ರದಲಿ
ಐವತ್ತು ಮೇಲೆರಡು ಜಲಯುಕ್ತ ಚಕ್ರದಲಿ
ಅಗ್ನಿ ಚಕ್ರದಲಾರು ಹತ್ತು ಮೇಲೆರಡನಿಲದಲ್ಲಿ ಐವತ್ತುನಾಲ್ಕು

ಆಕಾಶ ಚಕ್ರದಲ್ಲೆಪ್ಪತ್ತು ಮೇಲೆರಡು
ಮಾನಸದ ಚಕ್ರದಲ್ಲರುವತ್ತು ನಾಲ್ಕಂತು
ಮುನ್ನೂರರರುವತ್ತು ಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ

೧೫

ಶಾರದದ ಬೆಳ್ದಿಂಗಳಂತೆ ಶುಭ್ರಳು, ಚಂದ್ರ-
ನನು ಮುಡಿದ ಜಡೆಮುಡಿಯ ಮುಡಿಯವಳು, ವರವೀವ
ಅಭಯದೋರುವ ಪಳಿಕುಗಳಸ ಹೊತ್ತಗೆಗಳನು ಪಿಡಿದ ನಾಲ್ಕೈಗಳವಳು;
ಇಂಥಳಹ ನಿನಗೊಮ್ಮೆಯಾದರೂ ನಮಿಸದಿರೆ
ಎಂತೊದಗುವುದು ತಾಯೆ, ಹಾಲುಜೇನುದ್ರಾಕ್ಷೆ-
ಗಳ ಮಧುರಗುಣವುಳ್ಳ ಕವಿತೆಯದು ಕಾವ್ಯ ಕರ್ಮಾಸಕ್ತಸಜ್ಜನರಿಗೆ

೧೬

ಕವಿವರರ ಮನವೆಂಬ ತಾವರೆಯ ತಂಡವ-
ನ್ನರಳಿಸುವ ಬಾಲಸೂರ್ಯನ ಕೆಂಪು ಕಿರಣಗಳ
ಅರುಣವರ್ಣದ ನಿನ್ನನಾರಾಧಿಸುವರು ಕೆಲಬರು ಸಾಧುಸತ್ಪುರುಷರು;
ಅಂಥ ಸಂತರು ವಿರಿಂಚಿಯ ಮಡದಿ ಶಾರದೆಯ
ಶೃಂಗಾರ ರಸಪೂರ್ಣ ಗಂಭೀರ ವಾಕ್ತ್ರವಾ-
ಹದೊಳು ಮುಳುಗಿಸಿ ತೇಲಿಸುವರು ರಂಜಿಸಿ ರಸಿಕ ಸಜ್ಜನರನು

೧೭

ಎಲೆ ತಾಯೆ, ಮಾತುಗಳ ಮಾತೆಯಾಗಿಹ, ಚಂದ್ರ-
ಕಾಂತಶಿಲೆಯೊಡೆಯಲೊಗೆತರ್ಪ ಕಿರಣಗಳಂತೆ
ಶೋಭಿಪ ವಶಿನ್ಯಾದಿ ಶಕ್ತಿಗಳ ಕೂಡಿರುವ ನಿನ್ನ ಚಿಂತಿಸುವಾತನು
ವಾಗ್ದೇವಿಯಾ ವದನದಿಂದೊಗೆವ ಸೌಗಂಧ
ಮಾಧುರ್ಯ ಪರಿಪೂರ್ಣ ವಚನರಚನಾಸುಭಗ
ವರ ಮಹಾಕಾವ್ಯ ಕೃತಿಕಾರ ತಾನೆನಿಸುವನು ನಿನ್ನ ವಾಗ್ವರದಾನದೆ

೧೮

ಉದಯರವಿ ರಶ್ಮಿರಾಶಿಯ ತೆರನ ಅರುಣತೆಯ
ನಿನ್ನೊಡಲ ಕಾಂತಿಯೊಳು ಮುಳುಗಿ ಕೆಂಪಾಗಿರುವ
ಭೂವ್ಯೋಮವೆಲ್ಲದರ ಕೆಂಬೆಳಕನೇ ಸ್ಮರಿಸುತಿಹನಾವನಾ ಭಕುತಗೆ
ಕಾಡುಹುಲ್ಲೆಯ ಬೆದರುಕಂಗಳಂತಹ ಕಂಗ–
ಳಿಂದೊಪ್ಪುತಿಹ ಊರ್ವಶೀಸಹಿತ ದೇವಲೋ–
ಕದ ವೇಶ್ಯೆವೆಣ್ಗಳವರಾರಾದರೇನವರು ವಶವಾಗದಿಹರೆ, ತಾಯೆ?

೧೯

ಹೇ ಹರನರಾಣಿ! ಮುಖವನು ಬಿಂದು ಮಾಡುತ್ತ–
ಲದರಡಿಯೊಳ್ಕುಚಯುಗವನದರಡಿಯೊಳ್ಜಾನಿಸುತ
ಹರನರ್ಧವನ್ನಲ್ಲಿ ನಿನ್ನ ಮನ್ಮಥಕಲೆಯ ಜಾನಿಸುವನಾವನವನು
ತಾನಾಗಳಿಚ್ಚೆಸಿದ ಹೆಣ್ಣಮನವನು ಕಲಕಿ
ಸೆಳೆವನೆಂಬುದು ದೊಡ್ಡಿತಲ್ಲ, ರವಿಶಶಿಗಳೇ
ಕುಚಯುಗ್ಮವಾದ ತ್ರಿಲೋಕಿಯನ್ನಾಕ್ಷಣದೆ ತಳ್ಳಂಕಗೊಳಿಸುವನು

೨೦

ಹೇ ಜನನಿ, ಅಂಗಾಂಗಜನ್ಯಕಿರಣಾಳಿಯಿಂ
ದುಗುವಮೃತರಸರೂಪಿ ಶಶಿಶಿಲಾಮೂರ್ತಿಯೆನೆ
ನಿನ್ನನಾವನು ತನ್ನ ಹೃತ್ಕಮಲದಲಿ ಧರಿಸಿಕೊಂಡಿಹನೊ ಆ ಭಕ್ತನು
ಕಣ್ನೋಟದಿಂದಲೇ ಸರ್ಪಗಳ ದರ್ಪವನು
ಮುರಿಯಲಾರ್ಪನು ತಾನು ಪಕ್ಷಿರಾಜನವೋಲು,
ಜ್ವರತಪ್ತರಿಗೆ ಸುಖವನೀಯಬಲ್ಲನು ಸುಧೆಗೆ ನೆಲೆಯಾದ ಸೆರೆಗಳಿಂದ

೨೧

ಸೆಳೆಮಿಂಚಿನೊಡಲವಳು, ಸೂರ್ಯ ಚಂದ್ರಾಗ್ನಿಸ್ವ–
ರೂಪತೇಜೋಮಯೀ, ಷಟ್ಕಮಲಗಳ ಮೇಲೆ
ಮೆರೆವ ಸಾಹಸ್ರಕಮಲದ ನಡುವೆ ನೆಲಸಿರುವ ತಾಯೆ, ನಿನ್ನಯ ಕಲೆಯನು,–

ತನ್ನೊಳಗಿನ ಜ್ಞಾನ ಕಾಮ ಮದ ಮಾತ್ಸರ್ಯ
ಮೊದಲಪ್ಪ ಕೊಳೆಯೆಲ್ಲವನು ನೀಗಿಕೊಂಡ ಮನ-
ದಿಂದ ಕಾಣುವ ಮಹಾನ್ತನು ಪಡೆವನಲ್ತೆ ಪರಮಾಹ್ಲಾದ ಲಹರಿಯನ್ನು

೨೨

"ಹೇ ಭವಾನೀ ನೀನು ದಾಸನಾದೆನ್ನಲ್ಲಿ
ನಿನ್ನ ಕರುಣಾಪೂರ್ಣ ದೃಷ್ಟಿಯನ್ನಿರಿಸೆ"ಂದು
ಸಂಪ್ರಾರ್ಥಿಸಲ್ಕಿಚ್ಛಿಸುತ 'ಭವಾನೀ ನೀ...' ಎನುತ ನುಡಿಯುವನಿತರಲ್ಲಿ
ಅವನಿಗಾಗಲೆ ನೀನು ಬ್ರಹ್ಮೇಂದ್ರ ವಿಷ್ಣುಗಳ
ತೊಳಗುವ ಕಿರೀಟಗಳು ಬೆಳುವಾರತಿಯಿಂದ
ಹೊಳೆವ ನಿನ್ನಡಿಗಳೆಡೆಯಲ್ಲಿ ಸಾಯುಜ್ಯಪದವಿಯನು ದಯೆಗೈವೆ ಮುದದಿ

೨೩

ಹೇ ದೇವಿ, ಶಂಭುವಿನ ದೇಹದೆಡಭಾಗವನು
ಕಸಿದುಕೊಂಡೂ ನೀನು ತಣಿಯದಿಹ ಮನಸಿಂದ
ಉಳಿದ ದೇಹಾರ್ಧವನು ಕಸಿದುಕೊಂಡಿಹೆಯೆಂದು ಶಂಕೆಯಾಗುತಿದೆ ನನಗೆ;
ಏಕೆನಲು, ನಿನ್ನ ದೇಹವದೆಲ್ಲ ಕೆಂಪಾಗಿ,
ಮೂರು ಕಣ್ಗಳನೊಂದಿ, ಕುಚಭಾರದೊಳು ಬಾಗಿ
ಕೊಂಕುಚಂದಿರನ ಮುಡಿದಿಹ ಜಡೆಮುಡಿಯ ಕಿರೀಟವ ಧರಿಸಿಯೊಪ್ಪುತಿಹುದು

೨೪

ಜಗವಸೃಷ್ಟಿಸುವನು ವಿಧಾತೃ, ಹರಿ ಪೊರೆಯುವನು,
ನಾಶಗೊಳಿಪನು ರುದ್ರ; ಸರ್ಗಪಾಲನ ನಾಶ-
ತತ್ತ್ವಗಳನೀಶ ತನ್ನೊಳೆ ಲಯಿಸಿ ತನ್ನೊಡಲ ಲಯಿಪನು ಸದಾಶಿವನೊಳು;
ಬಳಿಕಾಸದಾಶಿವನು ನಿನ್ನ ಸುಭ್ರೂಲತಿಕೆ
ಚಣಮಾತ್ರ ಚಲನೆಯಿಂದೊರೆವಾಣತಿಯ ಕೊಂಡು
ಸೃಷ್ಟಿಪಾಲನ ನಾಶಗಳಿಗೆ ಕಾರಣವಪ್ಪ ತತ್ತ್ವಗಳ ಸೃಷ್ಟಿಸುವನು

೨೫

ಹೇ ಶಿವೇ! ನಿನ್ನ ಗುಣಮೂರರಿಂ ಹುಟ್ಟುವಡೆ
ದಿರುವ ಅಜ ವಿಷ್ಣುರುದ್ರರುಗಳಿಗದಾವುದದು
ಪೂಜೆಯೆನಲಾವ ಪೂಜೆಯು ನಡೆವುದೋ ನಿನ್ನ ಚರಣಗಳಿಗದೆಯವರಿಗೂ;
ನಿನ್ನಡಿಗಳನ್ನೆತ್ತಿ ಹಿಡಿದಿರುವ ಮಣಿಖಚಿತ
ಪೀಠದ ಸಮೀಪದಲಿ ಮುಗಿದ ಕೈಗಳಿನೆಸೆವ*
ಮಕುಟಗಳ ದೇವರ್ಕಳಿಹರಲ್ತೆ– ಏಕವರ್ಗೆ ಬೇರೆ ಪೂಜೆ?

೨೬

ಪಂಚತ್ವವನು ವಿರಿಂಚಿಯು ಪಡೆವನಾ ಹರಿ ವಿ–
ರಾಮವನ್ನೊಂದುವನು ಕೀನಾಶನಿಗೆ ಕೊನೆಗೆ
ಗತಿ ವಿನಾಶವು ಧನದನವನಾಗುವನು ನಿಧನ ನೋಡು ಇಂತಿವರ ಪಾಡು;
ಮಾಹೇಂದ್ರ ಮೊದಲಪ್ಪ ದೇವರ್ಕಳೆಲ್ಲರುಂ
ದೀರ್ಘನಿದ್ರೆಯ ಕಡೆಗೆ ತೆರಳುವರು ಕೊನೆಗೊಮ್ಮೆ;
ಹೇ ಸತಿಯೆ, ಈ ಮಹಾಪ್ರಲಯದಲಿ ನಿನ್ನ ಪತಿ
ವಿಹರಿಸುತ್ತಿರುವನಲ್ತೆ!

೨೭

ಹೇ ಜನನಿ, ಆತ್ಮಾರ್ಪಣದ ಬುದ್ಧಿಯಿಂದ ನಾ–
ನುಡಿವ ನುಡಿಯೇ ಜಪವು, ಗೈವ ಗೈಮೆಗಳೆಲ್ಲ
ಮುದ್ರಾವಿರಚನೆ, ತಿರುಗಾಟ ಪ್ರದಕ್ಷಿಣವು, ಅಶನವಾಹುತಿಯು ನಿನಗೆ;
ನಾಮಲಗಲದುವೆ ಪ್ರಣಾಮವಾಗಲಿ ನಿನಗೆ,
ನಾನು ಭೋಗಿಪ ವಿಷಯಸುಖವಾವುದಿದೆ
ಅದನೆ ನಾನರ್ಪಿಸುವ ಸರ್ವೋಪಚಾರ ಪೂಜಾವಿಧಿಯುನಿನಗಾಗಲಿ.

೨೮

ಓ ತಾಯೆ, ಬಹು ಭಯಂಕರಗಳಹ ಮುಪುಸಾ–
ವುಗಳ ಕಳೆದಮೃತವನು ಸವಿದಿರ್ದೊಡೇನಂತೆ
ಬ್ರಹ್ಮೇಂದ್ರರಾದಿ ದೇವತೆಗಳೆಲ್ಲರು ತಾವು ಮರಣವನ್ನೈದುವವರೇ;

ಅತಿಘೋರವಾದಚ್ಚನಂಜನೇ ನುಂಗಿದಾ
ಶಂಭುವಿಗೆ ಕಾಲದಾಕಟ್ಟಿಲ್ಲದಿರಲದಕೆ
ಕಾರಣವು ನಿನ್ನ ಕಿವಿದೊಡವುವೋಲೆಯಮಹಿಮೆ, ಅದನೆಂತು ಬಣ್ಣಿಸುವುದೋ!

೨೯

ಹೇ ಒಡತಿ, 'ಮುಂದೆ ಚಾಚಿಹ ವಿರಿಂ-
ಚಿಯ ಕಿರೀಟವನಲ್ಲಿ ಬಿಟ್ಟುಬಿಡು', 'ಕೈಟಾಭಾ-
ರಿಯ ಕಠೋರ ಕಿರೀಟವೆಡಹೀಯೆ, 'ಜಂಭಾರಿಮಕುಟವಿದೊ ಬಿಟ್ಟುಸಾಗು'
ಎಂಬ- ಈ ದೇವರ್ಕಳಿವರು ಮೈಚಾಚಿರುವ
ಸಮಯದಲಿ, ನಿನ್ನ ಭವನಕೆ ಬಂದ ಭವನಬರ-
ಮಾಡಿಕೊಳೆ ಸಡಗರಿಸುತೆದ್ದು ನೀ ತೆರಳುತಿರೆ, ಪರಿಜನಪರಾಕುಗೆಲ್ಗೆ!

೩೦

ಒಂದೊಂದಕೂ ಬೇರೆ ಸಿದ್ಧಿಯನು ಕೊಡುವಂಥ
ಅರುವತ್ತುನಾಲ್ಕು ತಂತ್ರಗಳನ್ನು ಬಳಸುತ್ತ
ಪಶುಪತಿಯು ಸಕಲಭುವನವನು ವಂಚನೆಗೆ ಗುರಿ ಮಾಡಿ ಬಳಿಕ,
ಹೇ ದೇವಿ, ನಿನ್ನ ನಿರ್ಬಂಧಕ್ಕೆ ತಲೆವಾಗಿ
ಅಖಿಲ ಪುರುಷಾರ್ಥಗಳ ತಾನಾಗಿಯೇ ಕೊಡುವ
ನಿನ್ನೀಸ್ವತಂತ್ರತಂತ್ರವನು ಭೂತಲದಿ ಹರಹಿ ನೆಲೆಗೊಳಿಸಿರುವನು

೩೧

ಶಿವಶಕ್ತಿ ಕಾಮ ಧರೆ ಬಳಿಕ ರವಿ ಶೀತಕಿರಣ
ಸ್ಮರಹಂಸ ಶಕ್ರರು ಬಳಿಕ ಪರಾ ಮಾರ ಹರಿಯು
ಈ ಮೂರು ನಾಮಖಂಡಗಳ ವರ್ಣಗಳ ಕಡೆಯೆಡೆ ಕೂಡಲು
ಮೂರು ಹೃಲ್ಲೇಖಗಳು ನಿನ್ನ ನಾಮಾವಯವವಹವು ಜನನಿ

೩೨

ನೀ ನಿತ್ಯೆ, ಪಾರವಿಲ್ಲದ ನಿತ್ಯ ಸುಖವನು-
ಭೋಗಿಸುವ ಮನವುಳ್ಳ ನಿನ್ನ ಭಕ್ತರು ಕೆಲರು

ಸ್ಮರಯೋನಿ ಲಕ್ಷ್ಮೀತ್ರಿತಯವಿದನು ನಿನ್ನ ಮಂತ್ರದ ಮೊದಲಿನಲ್ಲಿರಿಸುವ
ಚಿಂತಾಮಣಿಗಳ ಕೋದಕ್ಷಮಾಲೆಯ ಪಿಡಿದು
ಸುರಭಿಘೃತದಿಂದ ಧಾರಾಕಾರವಾಗಿ ಶತ–
ಸಂಖ್ಯೆಯಲಿ ಶಿವೆಯಗ್ನಿಗಾಹುತಿಯನರ್ಪಿಸುತ ನಿನ್ನನಾರಾಧಿಸುವರು

೩೩

ಹೇ ಭಗವತೀ! ಶಂಭುವಿನ ದೇಹವಾಗಿರುವ
ನಿನಗೆ ಕುಚಯುಗ್ಮವಾಗಿಹರು ಶಶಿ ದಿನಕರರು,
ನಿರ್ದೋಷವಹ ನಿನ್ನ ದೇಹವು ನವಾತ್ಮನಹ ಶಂಭುವೆಂದರಿವೆ;
ಅದುವೆ ಕಾರಣದಿಂದ ಶೇಷಶೇಷೀ ಭಾವ–
ರೂಪದೀ ಸಂಬಂಧ ಸಮರಸಪರಾನಂದ–
ಪರರೆನಿಪ ನಿಮ್ಮಿರ್ವರೊಳಗುಭಯ ಸಾಧಾರಣತ್ವದಲಿ ನೆಲಸಿರುವುದು

೩೪

ಹೇ ಶಿವನ ಯುವಪತ್ನಿ! ನೀ ಮನಸು, ಆಕಾಶ
ನೀನು, ಮಾರುತನು ನೀನಗ್ನಿ ನೀಭೂಮಿ ನೀ–
ನಾಪ ನೀನಿಮತಿವೆಲ್ಲವು ನೀನೆಯಾಗಿರಲು ಪರಿಣಮಿಸಿ, ನಿನ್ನ ಹೊರತಾವುದಿಲ್ಲ;
ವಿಶ್ವರೂಪದಲಿ ಪರಿಣಮಿಸುವಿಚ್ಛೆಯ ತಳೆದು
ಚಿಚ್ಛಕ್ತಿರೂಪವಾನಂದರೂಪಗಳನ್ನು
ಕಾರ್ಯಕಾರಣವೆನಿಪ್ಪುಭಯ ಸ್ವರೂಪವನು ನಿನ್ನೊಳಗೆ ನೀ ಧರಿಸಿಹೆ

೩೫

ಹೇ ದೇವಿ! ನಿನ್ನಯಾಜ್ಞಾ ಚಕ್ರದಲ್ಲಿರುವ
ಕೋಟಿಸೂರ್ಯೇಂದು ಸಮಕಾಂತಿಯನು ಧರಿಸಿರುವ
ಪಾರ್ಶ್ವದಲ್ಲಿ ಚಿಚ್ಛಕ್ತಿಯನು ಕೂಡಿಕೊಂಡಿರುವ ಪರಶಿವನ ವಂದಿಸುವೆನು;
ಭಕ್ತಿಯಿಂದವನಾನಾರಾಧಿಸುವ ಭಕ್ತನವ
ನಲ್ಲಿ ರವಿಶಶಿಯಗ್ನಿ ಕಾಣಿಸದ ನಿರ್ಜನದ
ನಮ್ಮಿಳೆಯ ಬೆಳಕಿರದನಿ ಬೆಳ್ದಿಂಗಳಿಹ ಲೋಕದಲಿ ವಾಸಿಸುವನು

೩೬

ಹೇ ದೇವಿ! ನಿನ್ನಯ ವಿಶುದ್ಧಿಚಕ್ರದಲಿರುವ
ಶುದ್ಧಸ್ಫಟಿಕ ವಿಶದನಾಕಾಶಜನಕನಹ
ಶಿವನನಂತೆಯೆ ಶಿವಸಮಾನಪ್ರಯತ್ನಳಹ ದೇವಿಯನು ಸೇವಿಸುವೆನು;
ಶಶಿಕಿರಣಕನುರೂಪಕಾಂತಿಯನು ಹೊಂದಿರುವ
ಶಿವಶಕ್ತಿಗಳ ಕಾಂತಿಯಲಿ ಮಿಂದು ಮೂಲೋಕ
ತನ್ನೊಳಗಿನಜ್ಞಾನತಮವ ನೀಗುತ ನಲಿಯುವುದು ಚಕೋರಿಯ ತೆರದಲಿ

೩೭

ಚೆನ್ನರಲ್ದ ಸುಜ್ಞಾನಕಮಲಮಕರಂದವನು
ಸೇವಿಸುತ ಯೋಗೀಶ್ವರರ ಮಾನಸದಲಿ ಸಂ-
ಚರಿಪ ಹಂಸದ್ವಂದ್ವವನು ನಾನು ಭಜಿಸುವೆನು, ಹೇ ದೇವಿ ಭಕ್ತಿಯಿಂದ;
ಯಾವ ಹಂಸದ್ವಯದ ಸಲ್ಲಾಪದಿಂದಹುದೊ
ಹದಿನೆಂಟು ವಿದ್ಯೆಗಳ ಪರಿಣತಿಯು, ನೀರುಳಿಸಿ
ಪಾಲುಣುವ ತೆರದಿ ದೋಷವನುಳಿದು ಗುಣವನೇ ಕೊಳುವ ಆ ಹಂಸಗಳನು

೩೮

ಹೇ ಜನನಿ! ನಿನ್ನ* ಸ್ವಾಧಿಷ್ಠಾನ ಚಕ್ರದಲಿ
ಹುತವಹನನಾಶ್ರಯಿಸಿಪೊಡನೆ ಸಂವರ್ತನನು
ನುತಿಸುವೆನು ನಿರತ, ಜೊತೆಗಧಿಕಶಕ್ತಿ ಸ್ವರೂಪಳು ಸಮಯೆಯನು ನುತಿಪೆನು
ಯಾವಂದವನ ಮಹಾಕ್ರೋಧಯುಕ್ತಾಲೋಕ-
ವದು ಲೋಕಗಳನೆಲ್ಲ ಸುಡತೊಡಗಲಿಹುದಾಗ
ತಂಪನೆರೆಯುವ ದಯಾಮಯವಾದ ನೋಟ ಬೀರುವ ಸಮಯೆಯನ್ನು ನುತಿಪೆ

೩೯

ಹೇ ಜನನಿ! ನಿನ್ನ ಮಣಿಪೂರ ಚಕ್ರದಲಿ ನೆಲ-
ಸಿರುವ ಕತ್ತಲೆಗೆ ಹಗೆಯೆನಿಸಿ ಬೆಳಗುವ ಶಕ್ತಿ
ರೂಪವಹ ಮಿಂಚನೊಡಗೂಡಿರುವ, ಥಳಥಳಿಪ ಬಗೆಬಗೆಯ ರತ್ನದಿಂದ

ಸಮೆದೊಡವೆಗಳ ಬಣ್ಣನೆಳಗು ನಿರ್ಮಿಸಿದಂಥ
ಇಂದ್ರಚಾಪವ ತಳದ ಹರಮಿಹಿರನಿಂದ ಬಲು
ಬೆಂದ ಮೂಲೋಕಕ್ಕೆ ಮಳೆಗೆರೆದ ನೀಲವೇಷ ಸ್ವರೂಪನ ಸೇವಿದೆ

೪೦

ಓ ತಾಯೆ! ನಿನ್ನ ಮೂಲಾಧಾರ ಚಕ್ರದಲಿ
ಲಾಸ್ಯತತ್ಪರೆ ಸಮಯೆಯೊಡನೆ ನವರಸಯುಕ್ತ
ಘನತಾಂಡವವನಾಡುವಾನಟನಾನಾನಂದ ಭೈರವನೆನುತ ತಿಳಿವೆನು;
ದಗ್ಧಲೋಕವಮರಳಿ ಸೃಷ್ಟಿಸುವ ಬಗೆ ಕುರಿತು
ದಯೆಯಿಂದ ಜೊತೆಗೂಡಲವರಿಬ್ಬರಾವೇಳೆ
ಜನನಿ ಜನಕರನು ಪಡೆದಂತಾಗಿ ಸಂಭವಿಸಿತೀ ಲೋಕದುತ್ಪತ್ತಿಯು

೪೧

ಹಿಮಗಿರಿಸುತೇ! ನಿನ್ನ ಹೊನ್ನ ಮುಡಿಯೆಂಥದಹ!
ಮಾಣಿಕ್ಯತನವನ್ನೈದಿದ ಗಗನಮಣಿಗಳೇ
ಸಂಘಟಿಸಿ ಸಾಂದ್ರಗೊಳಿಸಿರುವ ಆ ಮುಡಿಯ ಬಣ್ಣಿಸಲಾರ್ತ ಕವಿಯಾತನು
ರತ್ನರಶ್ಮಿಗಳ ಬಗೆಬಗೆವರ್ಣಗಳ ಬಲೆಗೆ
ಸಿಲುಕಿ ಬಹುವರ್ಣಗಳ ಶಬಲತೆಯ ಪಡೆದಿರುವ
ಚಂದ್ರಶಕಲವನಿಂದ್ರಚಾಪವೆಂದೇ ಬಗೆದು ವರ್ಣನೆಯ ಮಾಡದಿಹನೇ

೪೨

ದಟ್ಟೈಸಿ ಚೆಲುವಾಂತ ಕನ್ನೈದಿಲೆಯ ವನವ
ಪೋಲ್ವ ಕುರುಳೋಳಿ ನಿನ್ನದು, ಶಿವೇ, ನಮ್ಮ ಅಂ–
ತಃಕರಣದಜ್ಞಾನ ತಮವ ಪರಿಹರಿಸಿ ಕಾಪಿಡುತಿರಲಿ ನಿರುತ ತಾಯೆ;
ನಿನ್ನ ಈ ಕುರುಳೊಡನೆ ಒಗೆತಂದ ನರುಗಂಪ
ಕೊಳಲೆಂದೆ ಇಂದ್ರನಂದನವನದ ತರುವೃಂದ–
ಸುಮಗಳವು ನಿನ್ನ ಈ ನಲ್ಗುರುಳನಾಶ್ರಯಿಸಿರುವುವೆಂದು ನಾನು ತಿಳಿದಿರುವೆ ತಾಯೆ.

೪೩

ನಿನ್ನ ಮುಖಸೌಂದರ್ಯಲಹರೀ ಪ್ರವಾಹವದು
ಹರಿವ ಪಾತ್ರವೊ ಎನುವವೊಲು ಮೆರೆವ ಬಯ್ತಲೆಯು-
ನಿನ್ನ ಕೂದಲಹೊರೆಯ ಇರುಳೆಂಬ ಕಡುವೈರಿ ದಳಕೆ ಸೆರೆಸಿಲುಕಿಹೋಗಿರುವ
ನವಬಾಲಸೂರ್ಯಕಿರಣದ ವೋಲು ಮೆರೆಯುತಿಹ
ಚಾರು ಸಿಂಧೂರಚೂರ್ಣವ ತಳೆದ ಬಯ್ತಲೆಯು,
ಎಲೆ ತಾಯೆ, ನೀಡುತಿರಲೆಮಗೆ ಸುಕ್ಷೇಮವನ್ನು ಇಂದು ಮುಂದೆಂದೆಂದಿಗೂ

೪೪

ತನ್ನತನದಿಂದಲೇ ನೀಲಿಮೆಯನಾಂತ ಮರಿ-
ದುಂಬಿಗಳ ವರ್ಣಸಂಪದವ ಹೊಂದಿರುವ ಮುಂ-
ಗುರುಳು ಬಳಸಿರುವಂಥ ನಿನ್ನ ಮೊಗ ನಗುತಿರುವುದಲ್ತೆ ತಾವರೆಯ ಹೊಗರ;
ಅದರರಳುನಗೆಯಲಿ ಮೆರೆವ ದಂತಾವಳಿಯ
ಕೇಸರದ ಕಿರಣಕಾಂತಿಯಲಿ ಸೌಗಂಧದಲಿ
ಮದಿಸಿಹುದು ಮನುಮಥನ ಸುಟ್ಟಂಥ ಶಿವನ ಹಣೆಗಣ್ಣೆಂಬ ಮಧುಪಾಯಿಯು

೪೫

ಅಮಲವಹ ಲಾವಣ್ಯಕಾಂತಿಯಿಂದೊಪ್ಪುತಿಹ
ನಿನ್ನಯ ಲಲಾಟಕ್ಕೆ ಪಡಿಯೆನಿಸಿ ಮಕುಟದಲಿ
ನೆಲಸಿರುವ ಚಂದ್ರಾರ್ಧವೆರಡನೆಯ ಅರ್ಧವೆಂದರಿತು ನಾನಿಂತು ಬಗೆವೆ;
ಈಯೆರಡು ಅರ್ಧಗಳು ತಮ್ಮ ಅಡಿಮೇಲಾಗಿ
ಅಮೃತಲೇಪದ ಬೆಸುಗೆವಡೆದೊಂದೆನಿಸಲಾಹ
ಪೂರ್ಣಚಂದ್ರನೆಯಾಗಿ ಪರಿಣಮಿಸಿ ಪೂರ್ಣಸೌಂದರ್ಯದಿಂದೆಸೆವುದಲ್ತೆ!

೪೬

ಹೇ ಉಮೇ! ಇಳೆಯ ಭಯವನು ಕಳೆವ ಹರಿಬವನು
ಹೊತ್ತವಳೆ, ನಿನ್ನ ನಸುಬಾಗಿರುವ ಹುಬ್ಬೆರಡು
ಕಣ್ಣೆಂಬ ಕದ್ದುಂಬಿಯಿಂದೊಗೆದ ಕಾಂತಿಕಿರಣದ ಹೆದೆಯ ಧರಿಸಿಹುದನು

ರತಿಪತಿಯು ತನ್ನೆಡದ ಕೈಚಾಚಿ ಬಿಗಿಮುಷ್ಟಿ–
ಯಿಂದ ಬಲ್ವಿಡಿದು ಬಲು ಬಿಂಕದಲಿ ನಿಂತಿರಲು
ಮಧ್ಯಭಾಗವದವನ ಹಿಡಿಯಲಡಗಿರುವ ಆತನ ಧನುಸ್ಸೆಂದು ಬಗೆವೆ.

೫೭

ಎಲೆ ದೇವಿ! ನಿನ್ನ ಬಲಗಣ್ಣು ನೇಸರನನೊಳ–
ಗೊಂಡು ಹಗಲಿಗೆ ಹುಟ್ಟು; ನಿನ್ನೆಡದ ಕಣ್ಣಿರುಳಿ–
ಗೊಡೆಯನನ್ನೊಳಗೊಂಡು ಮೂರು ಜಾವದ ಮಾನದಿರುಳ ಸೃಷ್ಟಿಸುತಿಹುದು;
ಮೂರನೆಯ ಹಣೆಗಣ್ಣು ಮುಚ್ಚಿಬಿಚ್ಚಿಯುಯಿದ್ದು
ಅರೆಯರಳಿ ಮೆರೆವ ಹೊಂದಾವರೆಯ ಹೊಳಪನ್ನು
ಹಸರಿಸುತ ಹಗಲಿರುಳನಡುವೆ ಸಂಚಿರಪ ಸಂಜೆಯನ್ನುಂಟು ಮಾಡುತಿಹುದು.

೫೮

ತಾಯೇ! ವಿಶಾಲ, ಕಲ್ಯಾಣಿ, ಪ್ರಕಾಶೀ ಕು–
ವಲಯಕ್ಕಯೋಧ್ಯಾ, ಕೃಪಾಧಾರೆಗಾಧಾರ,
ಅವ್ಯಕ್ತಮಧುರ, ಆ ಭೋಗವತಿ, ಮೇಲಾಗವಂತೀ, ವಿಜಯವೆನ್ನುವ
ಪೆಸರ್ಗಳಿಂದೆಸೆಯುತಿಹ ಬಹುಸಂಖ್ಯ ನಗರಗಳ
ನಾಮಗಳ ತಳೆಯಲರ್ಹತೆಯ ಹೊಂದಿರುವ ನಿ–
ನ್ನಯ ದೃಷ್ಟಿಯಾನಾಮ ನಿರ್ದಿಷ್ಟ ಗುಣಗಳಿಂದಾವಗಂ ಗೆಲ್ಗೆಗೆಲ್ಗೆ

೫೯

ಕವಿಕೃತಿಗಳೆಂಬ ಹೂಗೊಂಚಲಿನ ಮಧುವ ಸವಿ–
ಯುವ ರಸಿಕವೆವೆನಿಸಿರ್ಪ ನಿನ್ನ ಕಿವಿಜೋಡಿಯನು,
ನವರಸಾಸ್ವಾದದಲಿ ನಲಿವ ಕಡೆಗಣ್ಣ ನೋಟಗಳ ಮರಿದುಂಬಿಗಳನು,
ಎಡೆಬಿಡದೆ ನೋಡುತ್ತ ತನಗೆ ದಕ್ಕದ ಸುಖವ
ನೆನೆದಸೂಯಾಪರತೆಯಿಂದ ಕಿಡಿಕಿಡಿವೋಗಿ
ನಿನ್ನ ಹಣೆಗಣ್ಣುನಸುಗೆಂಪನಾಂತುದು, ತಾಯೆ, ತಾಳಲಾರದೆ ಕೋಪವ

೫೦

ತಾಯೆ, ಶಿವನೆಡೆ ನಿನ್ನ ನೋಟವದು ಶೃಂಗಾರ,
ಶಿವನನುಳಿದಿತರರೊಳು ಬೀಭತ್ಸ, ಗಂಗೆಯನು
ಕಂಡೊಡನೆಯೇ ರೌದ್ರ, ಗಿರಿಶನಯನಕೆ ವಿಸ್ಮಯವ ತಳೆದರಳುತಿಹುದು,
ಹರನಹಿಗೆ ಬಹುಭೀತಿ, ಸರಸಿರುಹಸೌಭಾಗ್ಯ-
ವನು ಜಯಿಸುವೆಡೆ ವೀರ, ಸಖಿಯರೊಳುದರಹಾಸ;
ಭಕ್ತನಾದೆನ್ನಮೇಲಿಹುದಲ್ತೆ ನಿನ್ನ ಕರುಣಾಪೂರ್ಣ ದೃಷ್ಟಿವೃಷ್ಟಿ

೫೧

ಹಿಮವಂತಕುಲಕಲಂಕಾರಳಾದವಳೆ, ಶಿವೇ,
ಕಿವಿಯ ಬಳಿಸಾರಿರುವ, ಕಣೆಗರಿಯ ತೆರನಕಂ-
ಗಳರೆಪ್ಪೆಗಳ ಮೆರೆವ, ಮುನ್ನ ಶಿವನ ಪ್ರಶಮರಸವ ಭಂಗಿಸಿದ ಕೊನೆಯ
ಪಡೆದಿರುವ ಈ ನಿನ್ನ ಕಮನೀಯ ಕಣ್ಣೆರಡು
ಕಿವಿವರೆಗೆ ತೆಗೆದೆಳೆದ ಮನ್ಮಥನ ಬಾಣಗಳ
ರಾಗಭಾವಗಳನುದ್ರೇಕಿಸುವ ಸಿರಿಸೊಬಗನಾವಗಂ ಮೆರೆಯುತಿಹುವು

೫೨

ಹೇ ಮಹಾದೇವೀ! ವಿಲಾಸಕೆಂದೇ ನೀನು
ಹಚ್ಚಿಕೊಂಡಿಹ ಕಣ್ಣಕಪ್ಪಿನಿಂದೊಡಗೂಡಿ
ನಿನ್ನ ಕಣ್ಮೂರು ಹೃತ್ಕಮಲದೊಳು ಬೇರ್ಪಟ್ಟ ಮೂಬಣ್ಣವೆನುವ ತೆರದಿ
ಪ್ರಳಯಕಾಲದಿ ನಿನ್ನೊಳೈಕ್ಯರಾದಾ ಬ್ರಹ್ಮ
ಹರಿರುದ್ರ ದೇವರನು ಮರಳಿ ಸೃಷ್ಟಿಸಲೆಂದೆ
ಸತ್ತ್ವ ಮೇಣ್‌ರಜ ತಮೋ ಗುಣ ಮೂರ ಧರಿಸಿರುವೆಯೋ ಎನಲು
ಹೊಳೆಯುತಿಹುದು

೫೩

ಪಶುಪತಿ ಪರಾಧೀನ ಹೃದಯೇ, ಶಿವೆ, ನಿನ್ನ
ದಯೆಗೂಡಿದಾ ಕಣ್ಣುಗಳ ಕೆಂಪು ಬಿಳಿಪಿಂದ
ಕಪ್ಪಿಂದ ಶೋಣ ಗಂಗಾಯಮುನೆಯರ ಪುಣ್ಯಕರ ಸಂಗಮವನು ನೆರಹಿ

ಆ ಮೂರು ನದನದೀಗಳ ದಿವ್ಯತೀರ್ಥಗಳು
ನಮ್ಮನೆಲ್ಲಾ ಕಾಲದಲು ಪವಿತ್ರೀಕರಿಸಿ
ಉದ್ಧಾರ ಮಾಡುತಿರುವಂತೆ ಸಂಘಟಿಸಿತಿರುವೆ, ಏನಮ್ಮ ನಿನ್ನ ಕರುಣೇ!

೫೪

ಹೇ ಹಿಮಾಲಯತನಯೆ! ಕಣ್ಣುಮುಚ್ಚಲು ನೀನು
ವಿಲಯ ಹೊಂದುವುದು ಜಗ, ಕಣ್ಣು ತೆರೆಯಲ್ಕೊಡನೆ
ಉದಯಿಸುವುದದು ಮರಳಿ ಎಂದಿಂತು ನುಡಿವರು ಮಹಾಜ್ಞಾನಿಗಳು ಸಂತರು;
ನಿನ್ನ ಕಣ್‌ತೆರೆವಿನಿಂದುದಯಿಸುವ ಈ ಜಗವು
ಪ್ರಲಯಹೊಂದದ ತೆರದಿ ಅದನು ರಕ್ಷಿಸಲೆಂದೆ
ನಿನ್ನ ಕಣ್ಣೆವೆ ಸದಾ ಮುಚ್ಚದೆಯೆ ತೆರದಿಹವುಯೆಂದು ನಾ ಬಗೆವೆ ತಾಯೇ

೫೫

ತಾಯೇ, ಅಪರ್ಣಾ! ಸಮೀಪಕರ್ಣಾಂತವಹ
ನಿನ್ನ ನಯನದ ಚಾಡಿಕೋರತನಕಳುಕುತ್ತ
ಶಫರಮೀನ್ಗಳು ತೆರೆದೆ ಕಣ್ಣು ತೆರೆದಂತೆ ನೀರೊಳು ಮುಳುಗಿರುವುವು ಲೇಸು;
ಮೇಣಿತ್ತ ನೈದಿಲೆಯ ಅಂದಚೆಂದದ ಸಿರಿಯು,
ಮುಚ್ಚಿಕೊಳಲೆಸಳ ಬಾಗಿಲು, ಹೂವ ತೊರೆಯುತ್ತ
ಮತ್ತಿರುಳಿನಲಿ ಎಸಳ ಬೆಸುಗೆಯನು ಬಿಡಿಸುತ್ತ ಒಳಸೇರಿಕೊಂಡಿಹುದು

೫೬

ಹೇ ಶಿವೇ! ಅರೆಯರಳ್ದ* ನೀಳ ಕನ್ನೈದಿಲೆಯ
ಕಮನೀಯತೆಯ ನಿನ್ನ ಕಡೆಗಣ್ಣ ನೋಟದಾ
ಕಾಂತಿ ಬಲು ದೂರವಿಹ ದೀನನೆನ್ನನು ಕೃಪಾರಸದ ಮಜ್ಜನಗೈಸಲಿ;
ಅದರಿಂದ ನಾ ಧನ್ಯನಾಗುವೆನು, ನಿನಗಿನಿತು
ಹಾನಿಯಾಗದು, ತಾಯೆ; ಎಂತೆನಲು ತಂಗದಿರ
ತನ್ನ ತಂಬೆಳಕನುಪ್ಪರಿಗೆಯಡವಿಗಳಲ್ಲಿ ಸಮನಾಗಿ ಸುರಿವನಲ್ತೆ

೫೭

ಹೇ ನಗಾಧಿಪತನಯೆ! ನಿನ್ನ ಕಿವಿಹಾಲೆಗಳ
ವಕ್ರತಾವೈಖರಿಯು ಕುಸುಮಶರನಿಕ್ಷುಕೋ–
ದಂಡಸೌಭಾಗ್ಯವನ್ನಾರಿಗಾದರು ತಾನು ಮಾಡದಿರುವುದೆ ನೋಡಲು?
ಆ ಹಾಲೆಗಳ ನಡುವೆ ಹಾಯ್ದು ಬೆಳಗುತ್ತಿರುವ
ನಿನ್ನ ಕಡೆಗಣ್‌ನೋಟ ತಾನಲ್ಲಿ ಕೂಡುವೆಡೆ
ಅಂಬಹೂಡುವ ತೋರಿಕೆಯ ತೆರನ ನೋಡುವರ ಮನಕೆ ತೋರ್ಪಂತಿರುವುದು

೫೮

ಹೇ ದೇವಿ! ನಿನ್ನ ಚೆನ್ನನ್ನ ಕೆನ್ನೆಯ ಕನ್ನ–
ಡಿಯಲಿ ಮಾರ್ಪೊಳೆಯುತಿಹ ರನ್ನದೋಲೆಗಳೆರಡ–
ರಿಂದೆಸೆವ ಮೊಗವನ್ನ ಮನ್ಮಥನ ರಥವೆಂದೆನುತ ನಾನು ತಿಳಿದಿರುವೆನು;
ಆ ರಥವನೇರಿ ಮಾರನು ಮಹಾವೀರನೆನಿ–
ಸುತ, ಸೂರ್ಯ ಚಂದ್ರ ಚಕ್ರಯುತ ಭೂ–
ರಥವನಣಿಗೈದು ಸಜ್ಜಾಗಿಹ ಪ್ರಮಥಪತಿ ಶರ್ಮನನ್ನೆದುರಿಸುವನು

೫೯

ತಾಯೆ, ಶರ್ವಾಣಿ, ಅಮೃತವ ಹೊನಲ ಸುಭಗತೆಯ
ಹೊನಲ ಹರಿಸುವ ನಿನ್ನ ಸೂಕ್ತಿಗಳ ಸಾರವನು
ಕಿವಿಬೊಗಸೆಯೊಡ್ಡಿ ಕುಡಿಕುಡಿದು ನುಡಿಗಳ ಬೆಡಂಗನು ಮೆಚ್ಚುತ
ಬೆರಗಿಂದ ತಲೆದೂಗಲು ಸರಸ್ವತಿಯ ಕರ್ಣ–
ಕುಂಡಲಗಣದ ಝಣತ್ಕಾರ ತಾರಧ್ವನಿಯ
ಮಾರ್ನುಡಿಗಳೆನಲೆಸೆವುದಾ ಸೂಕ್ತಿಮುಕ್ತಾಫಲಗಳು ನಿನ್ನಯ ಕರುಣೆಯು

೬೦

ತಾಯೆ, ಹಿಮಗಿರಿ ಕುಲಪತಾಕಾಸ್ವರೂಪೆ, ನೇರ್–
ಬಂಚದೊಲು ನೀಳವಹ ನಿನ್ನನಾಸಿಕ ಕೊಡುಗೆ
ನನ್ನಂತರಂಗಕೆ ಸಮೀಪತಮವಾದ ಸಮುಚಿತವೆನಿಪ ಫಲವನಿರತ;

ನಾಸಿಕದ ಆ ಬಂಚ ಮುತ್ತುಗಳನೊಳಕೊಂಡು
ಚಾಂದ್ರನಿಃಶ್ವಾಸದೊತ್ತರದಿಂದ ಆ ಮುತ್ತು
ಜಗುಳೆ ನಾಸಿಕವು ಮುತ್ತಿನ ಮಣಿಯ ಮೂಗುತಿಯ ಧರಿಸಿ ಶೋಭಿಸುತಿರುವುದು

೬೧

ಹೇ ಸುದತಿ, ಸಹಜವಾಗಿಯೆ ರಕ್ತವರ್ಣವನು
ತಳೆದಿರುವ ನಿನ್ನ ತುಟಿಗಳ ಕೆಂಪುಕಾಂತಿಗೆಣೆ–
ಯನು ಪೇಳ್ವೆ; ಹವಳಬಳ್ಳಿಯು ತಾನು ಹಣ್ಣುಬಿಟ್ಟಿದೆಯೆಂದು ಹೇಳಲುಂಟು;
ನಿನ್ನ ತುಟಿಗಳ ಕೆಂಪು ಪ್ರತಿಬಿಂಬಿಸಲು ಬಿಂಬ–
ವೆಂಬ ಹೆಸರನು ತೊಂಡೆಹಣ್ಣು ತಳೆದಿರಲೇನು?
ನಿನ್ನ ತುಟಿಗೆಣೆ ನಾನು ಎಂದೆನಲು ನಾಚಿಕೊಳದಿರುವುದೇ ತೊಂಡೆ ತಾನು?

೬೨

ಹೇ ಮಾತೆ, ನಿನ್ನ ಮೊಗ ಚಂದಿರನ ಸುಧೆಗರೆವ
ಬೆಳ್ದಿಂಗಳನು ಪಾನಮಾಡಿದ ಚಕೋರಗಳ
ನಾಲಗೆಯು ಮಧುರರಸದತಿಯಿಂದ ವೆಗಟುಗೊಂಡಿಹುದರೋಚಕತೆಯಿಂದ;
ಅದರಿಂದಲಾ ಚಕೋರಗಳು ಹುಳಿಗಂಜಿಯನು
ಕುಡಿವೆಣಿಕೆಯಿಂದಾಮ್ಲರುಚಿಯುಳ್ಳ ಹಿಮಕರನ
ಅಮೃತಲಹರಿಯನಧಿಕವಾಗಿಷ್ಟಬಂದಂತೆ ಇರುಳಿರುಳು ಹೀರುತಿಹವು

೬೩

ಹೇ ಜನನಿ! ನಿನ್ನ ಆ ನಾಲಗೆಯು ಎಡೆಬಿಡದೆ
ಪತಿಯಾಪ್ರಸಿದ್ಧ ಗುಣಗಣದ ಕಥನದ ಜಪಾ–
ಸಕ್ತಿಯಿಂದಾನುತ ಜಪಾಕುಸುಮವರ್ಣವನು ಮೆರೆದು ಗೆಲುವಾಂತಿರುವುದು;
ನಿನ್ನ ನಾಲಗೆಯ ತುದಿಪೀಠದಲಿ ಕುಳಿತಿರುವ
ಪಳಿಕುಗಲ್ಲಿನ ಶುದ್ಧ ಧವಳಕಾಂತಿಯಿನೆಸೆವ
ಶಾರದೆಯ ವಿಗ್ರಹವು ಮಾಣಿಕ್ಯಮಯಮೂರ್ತಿಯಾಗಿ ಪರಿಣಮಿಸಿರುವುದು

೬೪

ಎಲೆ ತಾಯೆ, ಯುದ್ಧದಲಿ ಜಯಿಸಿ ರಾಕ್ಷಸರನ್ನು,
ತಮ್ಮ ತಲೆಗಾಪು ಮೈಜೋಡುಗಳ ತೆಗೆದಿಟ್ಟು
ಚಂಡಾಂಶ ತ್ರಿಪುರಹರ ನಿರ್ಮಾಲ್ಯವನು ಮನ್ನಿಸದೆ ಕಡೆಗಣಿಸುತ ತಾವು
ಷಣ್ಮುಖೇದ್ರೋಪೇಂದ್ರರೈತರಲು ಸನ್ನಿಧಿಗೆ
ಶಶಿಯಂತೆ ಶುಭ್ರವಹ ಕರ್ಪೂರ ಖಂಡಗಳು
ಬೆರೆತ ಬಾಯ್ದಂಬುಲದ ತುತ್ತುಗಳು ಕರಗಿಹೋದುವುವವರ ಬಾಯ್ಗಳಲಿ

೬೫

ಪಶುಪತಿಯ ವಿವಿಧ ಸಚ್ಚರಿತೆಯನು ವೀಣೆಯಲಿ
ನೀನು ನುಡಿಸುತ್ತಿರಲು, ಓ ತಾಯೆ, ಆಗಾನ
ನಿನ್ನದೆಂಬೊಲವಿಂದ ಲೇಸು ಲೇಸೆಂದೆನುತ ಶಿವನು ತಲೆ ತೂಗುತಿರಲು
ನಿನ್ನ ವೀಣಾಗಾನ ಮಾಧುರ್ಯದಪಹಾಸ-
ಕಾಗ ಗುರಿಯಾಗೆ ತನ್ನಯ ವೀಣೆತಂತಿಗಳ
ಕಲರವವು, ವಾಣಿಯೊಡನೆಯೆ ತನ್ನ ವೀಣೆಯನು ಮುಚ್ಚಿದಳು ಹೊದಿಕೆತೊಡಿಸಿ

೬೬

ಗಿರಿಸುತೇ, ಹಿಮವಂತ ವಾತ್ಸಲ್ಯದಿಂದ ಕೈ
ತುದಿಯಿಂದ ಹಿಡಿದ, ನಿನ್ನಧರಪಾನವ ಬಯಸು-
ತದ ಸವಿದು ತುಷ್ಟಿವಡೆಯದೆ ಮತ್ತೆ ಸವಿವಾಕುಲತೆಯಿಂದ ಕೈಲಿ ಹಿಡಿದ
ತನ್ನ ಮುಖದಂದವನು ನೋಡಿಕೊಳಲೆಳಸುತ್ತ
ನಿನ್ನ ಪತಿಪರಮೇಶ್ವರನು ಹಿಡಿಯುವಾರನ್ನ-
ಗನ್ನಡಿಯ ಹಿಡಿಯಾದ, ಉಪಮೆಗೆಟುಕದ, ನಿನ್ನ ಗಲ್ಲವನು ಹೊಗಳಲೆಂತು?

೬೭

ತ್ರಿಪುರಹರ ಪರಶಿವನ ತೋಳುತಬ್ಬಿನಲಿರುತ
ಅನುದಿನವು ಮುಳ್ಳುಗಳ ತಳೆದ ಮೊಗದಾವರೆಯ
ದಂಟಿನಾನಲ್ಸೊಬಗ ಸಿರಿಯನಾನುವುದಲ್ತೆ ನಿನ್ನ ಕೋಮಲವಾದ
ಕೊಳಲುಗೊರಳು;

ಆ ಕೊರಳಕೆಳಗೆ ಕಾಳಾಗರುವಿನಧಿಕವಹ
ಕೆಸರಮಲಿನತೆಯಿಂದ ಹುಟ್ಟುಬಿಳಿ ಬಣ್ಣದಾ
ಹಾರಲತಿಕೆಯು ತಾನು ತಾವರೆಯ ದಂಟಸೊಬಗನು ಧರಿಸಿ ಮೆರೆಯುತಿಹುದು

೬೮

ಗತಿಗಮಕಯುಕ್ತ ಸಂಗೀತನಿಪುಣೇ, ಶಿವೇ,
ವೈವಾಹಸಮಯದಲಿ ನಿನ್ನ ಕೊರಳಿಗೆ ಶಿವನು
ತಾನೆ ಕಟ್ಟಿರುವ ಮೂರೆಳೆಯ ಮಂಗಲಸೂತ್ರವೋ, ವಿವಿಧ ರೀತಿಯೊಳಿಹ
ಮಧುರ ಸಂಗೀತರಾಗಾವಳಿಗೆ ಮೂಲವಹ
ತ್ರಿಸ್ವರಗ್ರಾಮಗಳ ನಿಯಮಿತ ಸ್ಥಳವ
ಸೂಚಿಸುವ ಸೀಮೆಗಳೂ ಎನೆ ನಿನ್ನ ಕೊರಳಲ್ಲಿ ಗೆರೆಮೂರು ಶೋಭಿಸುತಿವೆ

೬೯

ತನ್ನೈದನೆಯ ತಲೆಯ ಚಿವುಟಿ ತೆಗೆದಂಧಕಾ-
ಸುರವೈರಿಯಾ ಉಗುರುಗಳಿಗಂಜುತಿನ್ನುಳಿದ
ನಾಲ್ಕು ತಲೆಗಳ ಉಳಿವಿಗಭಯ ಹಸ್ತವ ನೀಡಬೇಕೆನುತ ಬೇಡಿಕೊಳಲು
ನಾಲ್ಮೊಗನು ತನ್ನ ನಾಲ್ಕೂ ಮುಖಗಳಿಂದೇಕ
ಕಾಲದಲಿ ತಾವರೆಯದಂಟಿನೊಲು ಮೃದುವಾದ
ನಿನ್ನ ನಾಲ್ತೋಳುಬಳ್ಳಿಯ ಬಂಧುರತೆಯ ನುತಿಸುತ್ತಿರುವನಲ್ತೆ ದೇವಿ

೭೦

ಹೇ ಉಮೇ, ಉಗುರ್ವೆಳಗಿನಿಂದ ಹೊಸ ತಾವರೆಯ
ಕೆಂಪನುಪಹಾಸಗೈಯುವ ನಿನ್ನ ಕೈಗಳಾ
ಕಾಂತಿಯನು ಹೇಗೆ ಬಣ್ಣಿಸೆ ಸೊಗಸು ಆ ಪರಿಯನೆಮಗೆ ನೀನರುಹುತಾಯೆ;
ತುಸುವಾದರೂ ಅವುಗಳೊಡನೆ ತಾವರೆ ತಾನು
ಸಮವೆನಿಸಿಕೊಳಬಲ್ಲುದೇ, ಸಾಧ್ಯವಾಗದದು;
ತನ್ನಲ್ಲಿಕ್ರೀಡಿಸುವ ಲಕುಮಿಯಡಿಯಲತಿಕೆಯ ಕೊಳಲಾಗಸಾಧ್ಯವೇನೋ

೭೧

ಓ ದೇವಿ! ಕುಚಯುಗದ ತೊಟ್ಟು ಪಾಲ್ತೊರೆಯುತಿರೆ
ಸಮವಾಗಿ ಗಜಮುಖ ಸ್ಕಂದರಿಬ್ಬರು ಕುಡಿಯ–
ಲದರ ತಣಿಸಿದ ನಿನ್ನ ಕುಚವೆರಡು ನಮ್ಮ ಖೇದವ ಸತತ ಪರಿಹರಿಸಲಿ;
ಕುಚಯುಗವ ನೋಡಿ ನೆನೆಯುತ ತನ್ನ ಕುಂಭಗಳ
ಕಸಿದುಕೊಂಡಳೊ ತಾಯಿ ಎಂದು ಶಂಕಾಕುಲಿತ–
ನಾಗಿ ಸೊಂಡಿಲಿನಿಂದ ತಡವರಿಸಿಕೊಳೆ ತಲೆಯ, ನಗೆಹುಟ್ಟಿಸಿದನು ತಾಯ್ಗೆ!

೭೨

ತಾಯೆ, ಹಿಮವಂತಪರ್ವತಪತಾಕೇ, ನಿನ್ನ
ಈ ಸ್ತನದ್ವಯವಮೃತರಸವು ನೆರೆ ತುಂಬಿರುವ
ಮಾಣಿಕ್ಯಕಲಶವೆರಡೆನ್ನುವೆಡೆ ನಮಗಿಲ್ಲ ಸಂದೇಹದಿನಿತು ಸುಳಿವು;
ಅದರಿನಲ್ಲವೆ ಯಿಂದಿಗೂ ಗಣಪ ಷಣ್ಮುಖರು
ನವವಧೂಸಂಗರಾಸಿಕ್ಯವನ್ನರಿಯದರು
ತಾಯ ಮೊಲೆವಾಲ್ಕುಡಿಯುತುಳಿದಿಹರು ಕೌಮಾರಭಾವದಲಿ ನಲಿನಲಿಯುತ

೭೩

ಹೇ ಅಂಬ! ಗಜದನುಜ ಕುಂಭದೆಡೆಯಲಿ ದೊರೆತ
ಮುಕ್ತಾಮಣಿಗಳಿಂದ ಕೋದ ನಿರ್ಮಲಹಾರ–
ಲತಿಕೆಯನು, ಬಿಂಬಾಧರದ ಕಾಂತಿಯಿಂದೊಳಗೆ ಕೆಂಪಾಗಿ ಶೋಭಿಪುದನು,
ತ್ರಿಪುರಹರ ಶಿವನಪ್ರತಾಪಮಿಶ್ರಿತವಾದ
ಕೀರ್ತಿಯನು ತಾನು ತಳೆದಿರುವುದೋ ಎನುವಂತೆ
ನಿನ್ನ ಕುಚಯುಗದ ಮೇಲ್ಗಡೆಯ ಚೆಂದದ ಎಡೆಯ ಹರಹು ಧರಿಸಿರುವುದದನು

೭೪

ಹೇ ಧರಣಿಧರಕನ್ಯೆ! ನಿನ್ನ ಹೃದಯದೊಳುಕ್ಕಿ
ಹರಿವ ಹಾಲ್ಗಡಲಾದ ನಿನ್ನಯೆದೆಹಾಲನ್ನು
ಸಾರಸ್ವತಸ್ವರೂಪಾವತಾರವದೆಂದೆ ನಾನು ತಿಳಿದಿರುವೆ ತಾಯೆ;

ನೀ ದಯಾಮಯಿಯಾಗಿ ನೀಡಿದಾಯೆದೆ ಹಾಲ–
ನೀದ್ರವಿಡಶಿಶುಸವಿದು ಕವಿವರರ ಮಧ್ಯದಲಿ
ತಾನೊರ್ವ ಕಮನೀಯಕವಿಯಾಗಿ ಪರಿಣಮಿಸಿ ಕೊಂಡಾಡುವನು ನಿನ್ನನು

೭೫

ಹೇ ಅಚಲತನಯೇ, ಹರನ ಕೋಪಜ್ವಾಲೆ
ಬಾಚಿ ತಬ್ಬುತಲಿರಲು ಬೇಯುವೊಡಲಿನ ಮದನ
ನಿನ್ನ ಗಂಭೀರವಹ ನಾಭೀಸರಸಿಯ ಸಂಗವ ಬೆಳಸಿಕೊಂಡನಲ್ತೆ;
ಅದುವೆ ಕಾರಣವಾಗಳಲ್ಲಿಂದ ತೆಳ್ಳನೆಯ
ಹೊಗೆಬಳ್ಳಿಕೊನರಿ ಕುಡಿವರಿದು ಹಬ್ಬಿತು ನೇರ;
ಜನವದನು, ಎಲೆ ತಾಯೆ, ನಿನ್ನ ರೋಮಾವಲೀ ಲೇಖೆಯೆಂದರಿಯುತಿಹುದು

೭೬

ಹೇ ಶಿವೇ! ನಿನ್ನ ಬಡನಡುವಿನಲಿ ಕಾಲಿಂದಿ
ತೊರೆಯ ಬಲು ತೆಳ್ಳನೆಯ ತೆರನಾಕೃತಿಯ ತಾನು
ತಳೆದಿರುವವೊಲು ತೋರುಹುದಾವುದದು ಸುಬುದ್ಧಿಗಳಿಗಾರೋಮರಾಜಿ
ಕುಚಕಲಶಗಳ ನಡುವೆ ಸಿಲುಕಿಯವುಗಳ ಪರ–
ಸ್ಪರವಿಮರ್ದನದ ದೆಸೆಯಿಂದ ತೆಳುತೆಳುವಾಗಿ
ಆಗಸವು ಹೊಕ್ಕುಳಕುಳಿಯ ಹೊಕ್ಕವೊಲು ತೋರುತೊಪ್ಪುತಿಹುದಲ್ತೆ ತಾಯೇ

೭೭

ಹೇ ಗಿರಿಸುತೇ! ನಿನ್ನ ನಾಭಿ ಗಂಗಾನದಿಯ
ನೀರೊಳಲುಗದಿಹ ಸುಳಿ, ಮೊಲೆಮೊಗ್ಗುಗಳ ಬಿಟ್ಟ
ರೋಮಾವಲೀಲತೆಯ ಪಾತಿ, ಮನ್ಮಥನ ತೇಜೋಽಗ್ನಿ ಬೆಳಗುವ ಕುಂಡವು;
ರತಿಯಲೀಲಾಗಾರ, ರಜತಗಿರಿಗೊಡೆಯನಹ
ಸರ್ವೇಶ್ವರನ ನಯನಗಳ ತಪಸ್ಸಿದ್ಧಿ ಸ–
ರ್ವಸ್ವವೂ ಹೋಗುವ ಗುಹೆಯದ್ವಾರ– ಇಂತೆಂದದರ ಗೆಲುವ ಹೊಗಳಲೆಂತು

೭೮

ಹೇ ಗಿರಿಜೆ, ಪೆಣ್ಮಣಿಯೆ! ಸಹಜವಾಗಿಯೆ ನಿನ್ನ
ನಡು ಬಡವು, ಮೊಲೆಹೊರೆಯ ಹೊತ್ತು ಬಳಲಿದೆ ಮತ್ತೆ,
ಬಾಗಿ ಬಳುಕುವರೂಹಿನಿಂದಿನಿತರಲ್ಲಿಯೇ ಮುರಿದು ಬೀಳ್ವಂತಿರುವುದು;
ಒಡೆದ ಹೊಳೆದಡದಲಿಹ ಮರಕೆ ಸರಿದೊರೆಯೆನಿಸಿ
ಬೀಳ್ವ ಭಯಹುಟ್ಟಿಸುತ ಬೀಳದೆಯೆ ನಿಂತಿರುವ
ಆ ನಿನ್ನ ಬಡನುಡುವಿಗೆಂದೆಂದಿಗೂ ಕುಶಲವುಂಟಾಗುತಿರಲಿ ತಾಯೇ

೭೯

ಅದೆ ತಾನೆ ಬುಡದಲ್ಲಿ ಬೆವರಿಟ್ಟು ಬಿಗಿಕಟ್ಟು-
ವಡೆದ ಕುಪ್ಪಸಪೊಟ್ಟನೊಡೆದು ಹರಿವಂತಿರಲು
ತೋಳತಳಕುಜ್ಜತಿಹ ಚಿನ್ನ ಕಳಸದ ತೆರನ ಚೆನ್ನ ಮೊಲೆಜೋಡಿಯನ್ನ
ನಿನ್ನ ನಡು ಮುರಿದು ಬೀಳದೆ ಧರಿಸಲಾರ್ಪಂತೆ
ಮನ್ಮಥನು ಯೇಲಕಿಯ ಬಳ್ಳಿಯಿಂದದನು ಮೂ-
ವಳಸಾಗಿ ಬಳಸಿ ಬಲುಬಿಗಿಯಾಗಿ ಬಂಧಿಸಿಹ-
ನೆನುವಂತೆ, ಎಲೆದೇವಿ, ನಿನ್ನ ನಡುವಿನ ಬಳಿಯ ತಿವಳಿಯದು ಶೋಭಿಸಿಹುದು*

೮೦

ಪಾರ್ವತೀ, ಹಿಮವಂತನಂದು ಬಳಿವಳಿಕೊಡುವ
ಕಾಲದಲಿ ತನ್ನ ವಿಸ್ತಾರಗೌರವಗಳನು
ತನ್ನಯನಿತಂಬದಿಂದಲೆ ಪಡೆದು ನಿನಗೆ ಬಳಿವಳಿಯಾಗಿ ಕೊಟ್ಟನಲ್ತೆ;
ಅದರಿಂದಲೊದಗಿರುವ ನಿನ್ನಯ ನಿತಂಬಗಳ
ವಿಸ್ತಾರಗೌರವಗಳೀ ಭಾರಬಂಧುರತೆ
ವಸುಮತಿಯದೆಲ್ಲವನು ಮುಚ್ಚಿಮರೆ ಮಾಡುತ್ತ ಲಘುವಾಗಿ ಮಾಡಿರುವುದು

---

* ಮೂಲದ ಭಾವವೆಲ್ಲವೂ ಆರು ಸಾಲುಗಳಲ್ಲಿ ಮೂಡಲಶಕ್ಯವೆನಿಸಿ ಷಟ್ಪದಿಯಾಗಿರಬೇಕಾದದ್ದು ಸಪ್ತಪದಿಯಾಗಿ ಪರಿಣಾಮಿಸಿದೆ.

೮೧

ಹೇ ಗಿರಿಸುತೇ! ವೇದವಿಧಿಗಳನು ಬಲ್ಲವಳೆ!
ಉತ್ತಮೋತ್ತಮವಾದ ಆನೆಗಳ ಸೊಂಡಿಲನು
ಬಂಗಾರದಿಂದಾದ ಬಾಳೆಕಂಬವನು ನಿನ್ನೆರಡು ತೊಡೆಯಿಂದ ಗೆಲುತ,
ಮಂಡಿಯೂರುತ ಮಂಡೆಯನು ಬಾಗಿಸುತ ಪತಿಗೆ
ನಿತ್ಯ ನಮಿಸುತ್ತ ಬಲು ಕಠಿನತೆಯನಾಂತಿರುವ
ಗುಂಡುಮಂಡಿಗಳಿಂದ ದಿಗ್ಗಜದ ಕುಂಭದ್ವಯವ ಗೆಲ್ಲುತಿದ್ದೆ

೮೨

ಗಿರಿಸುತೇ! ರುದ್ರನನುಗೆಲಲೆಂದು ಪಂಚಶರ-
ನಿಮ್ಮಡಿಯ ಬಾಣಗಳನೊಳಗೊಂಡ ಬತ್ತಳಿಕೆ
ಯೆರಡನತಿಶಯವೆನಿಸೆ ನಿನ್ನ ಜಂಘೆಗಳಿಂದ ನಿರ್ಮಾಣ ಮಾಡಿರುವನು;
ಆ ಜಂಘೆವತಳಿಕೆಯಗ್ರದಲಿ ಕಾಣುತಿವೆ
ಉಗುರುಕೊನೆರೂಹಾಗಿ, ನಮಿತದೇವೇಂದ್ರಾದಿ
ಸುರಮಕುಟಶಾಣೆಯಲಿ ಮಸೆದ ಹತ್ತಂಬುಗಳ ಹೊಳೆಹೊಳೆವ ಕೂರ್ಮೊನೆಗಳು

೮೩

ಎಲೆ ತಾಯೆ, ನಿನ್ನಾವ ಚರಣಯುಗ ವೇದ-
ಶಿರಕಾಗಿಹುದೊ ಭೂಷಣವು, ನಿನ್ನಾವ ಪಾದಗಳ
ತೊಳೆದ ಪಾವನ ಜಲವು ಶಿವನ ಜಡೆಮುಡಿಯಲಿಹ ಗಂಗೆ ತಾನಾಗಿರುವುದೋ
ನಿನ್ನ ಯಾವಲತಿಗೆಯ ಬಣ್ಣಸಿರಿ ಹರಿಯ ಚೂ-
ಡಾಮಣಿಯ ಕಾಂತಿಯನು ಕೆಂಪಾಗಿ ಮಾಡಿಹುದೊ
ಆ ಪಾದಪದ್ಮಯುಗಲವನೆನ್ನ ಶಿರದ ಮೇಲಿರಿಸಮ್ಮ ಕರುಣೆಯಿಂದ

೮೪

ಕಣ್ಸವಿಯ ಕಮನೀಯ ಕಾಂತಿಯಿಂದೊಪ್ಪುವಲ-
ತಿಗೆಯ ಲೇಪದ ನಿನ್ನ ಚಾರು ಚರಣಯುಗಕ್ಕೆ
'ನಮಿಸುವೆವು ನಮಿಸುವೆವು ಹೇ ದೇವಿ' ಎಂದು ನುಡಿಯುತ ನಾವು ನಲಿಯುತಿಹೆವು;

ಆ ನಿನ್ನ ಮೃದುಪಾನ ತಾಡನದ ಸೌಖ್ಯವನು
ಅನುಭವಿಸಲೆಳಸುವ ವಿಹಾರವನದ ಅಶೋಕ
ವೃಕ್ಷವನು ಕಂಡು ಪಶುಪತಿ ಮತ್ಸರಗ್ರಸ್ತನಾಗುವನು ಬಹಳವಾಗಿ

೮೫

ನಿನ್ನೊಡನೆ ನಲಿವಂದು ಹೆಸರುತಪ್ಪುತ ಕರೆದು
ತನ್ನ ತಪ್ಪನ್ನರಿತು ದಿಕ್ಕುಗಾಣದೆ ತಲೆಯ
ತಗ್ಗಿಸಿದ ಪತಿಯ ಹಣೆಯನು ನಿನ್ನ ಚರಣಕಮಲವು, ದೇವಿ, ತಾಡಿಸುತಿರೆ
ದಹನಗೊಂಡಂದಿನಿಂದೊಳಗೆ ಕುದಿಯುತ್ತಿದ್ದ
ಹರವೈರಿಯಿಂದ ಹೊರಹೊಮ್ಮಿತೋ ಗೆಲುವುದನಿ
ಯೆನುವಂತೆ ನಿನ್ನನೂಪುರವಲುಗಿ ಘಲಿರುಘಲ್ ಘಲಿರೆನುತ ದನಿಗೈದುವು

೮೬

ಎಲೆ ತಾಯೆ, ಮಂಜುವೆಟ್ಟದ ಕೊರೆತಕಂಜದೆಯ
ಚರಿಪಚತುರತೆಯುಳ್ಳ, ಹಗಲಿರುಳಲೊಂದೆ ಬಗೆ-
ಯೊಪ್ಪಿರುವ, ಭಕ್ತರಿಗೆ ಹಿರಿಯಸಿರಿಯನು ಕೊಡುವ ನಿನ್ನಡಿಯ ತಾವರೆಗಳು-
ಮಂಜಿಗಂಜುತಸೊರಗಿ ಇರುಳಿನಲಿ ಮರೆದೊರಗಿ
ಬರಿಯ ನೆಲೆವೀಡನಿತೆ ಮಾಲಗುಮಿಗೆನಿಸಿರುವ
ಸರಸಿಯ ಸರೋಜವನು ತಾವು ಗೆಲ್ಲುತ್ತಿಹವು ಸೋಜಿಗವದೇನದರೊಳು

೮೭

ಹೇ ದೇವಿ, ಕೀರುತಿಗೆ ನೆಲೆವೀಡು ತಾಣವ-
ಲ್ಲಾಪದಕೆ, ಇಂತಪ್ಪ ಆ ನಿನ್ನ ಮುನ್ನಡಿಯ-
ನೆಂತು ಜಾಣರು ಕವಿಗಳಾಮೆಬೆನ್ನಿನ ಗಟ್ಟಿಚಿಪ್ಪಿಗೆಣೆಯೆಂದಿರುವರು;
ಎಂತು ಆ ಮೆಲ್ಲಡಿಯನೆತ್ತಿ ಸಾಣೆಯಕಲ್ಲ-
ಮೇಲಂದು ನಿನ್ನ ಮದುವೆಯವೇಳೆ ತನ್ನೆರಡು
ಕೈಗಳಿಂದ ಪುರಾರಿ ತುಂಬುದಯೆಮನದವನು ತಾನಿರಿಸೆ ಮನದಂದನು

೮೮

ಹೇ, ಚಂಡಿ! ದೇವಲೋಕದ ದಿವ್ಯವೃಕ್ಷಗಳು
ತಳಿರ್ಗೈಗಳಿಂದ ದೇವತೆಗಳಿಗೆ ಫಲಗಳನು
ಕೊಡುತಿಹವು, ಅದರೊಳೇನತಿಶಯವದೆಲೆ ದೇವಿ, ಆ ವೃಕ್ಷಗಳನು–
ನಾಕಿಗಳಿಗೆಂತಂತೆಯೇದರಿದ್ರರಿಗೆಯೂ
ಸತತ ಸಿರಿಯನು ಕೊಡುವ ನಾಕನಾರಿಯರ ಕರ–
ಕಮಲಗಳ ಮುಗುಳಿಸುವ ನಖಶಶಿಗಳಿಂ ನಿನ್ನ ಚರಣಗಳು ನಗುತಿರುವುವು

೮೯

ಎಲೆ ತಾಯೆ, ಪೇಳಮ್ಮ ಅಲತಿಗೆಯ ರಸಲೇಪ–
ದಿಂದ ಸೊಬಗಾಂತ ನಿನ್ನಯ ಪಾದವನು ತೊಳೆದ
ನೀರನೀ ವಿದ್ಯಾರ್ಥಿಯಾಗಿರುವ ನಾನೆಂದು ಧನ್ಯನಾಗುವೆ ಸೇವಿಸಿ;
ಹುಟ್ಟುಮೂಗರಿಗಾದೊಡೆಯು ಕವಿತ್ವದ ಶಕ್ತಿ–
ಯನು ಕೊಡುವ ಕಾರಣಗಿನಾ ತೀರ್ಥಸೇವನೆಯು
ಸರಸತಿಯ ಮೊಗದಾವರೆಯ ತಾಂಬುಲದ ರಸದ ಮಹಿಮೆಗದು ಮಿಗಿಲೆನಿಪುದು

೯೦

ಹೇ ದೇವಿ! ಅವರವರ ಬಯಕೆಗನುಗುಣವಾಗಿ
ದೀನರಿಗೆ ಸಿರಿಯನನವರತವೂ ಕೊಡುತಿರುವ,
ಚೆಲುವನೊಟ್ಟೈಸಿದಂತಿರುವ ಮಕರಂದವನು ಬಹುವಾಗಿ ಹೊರಸೂಸುವ
ಮಂದಾರಪುಷ್ಪಗುಚ್ಛದ ಸೊಬಗಿನಿಂದೊಪ್ಪು–
ತಿಹ ನಿನ್ನವೀಯಡಿಗಳಲಿ ಮುಳುಗಿ ಸತತವೂ
ಆರಡಿತನವ ಪಡೆಯಲೆನ್ನಾರು ಕರಣಚರಣಗಳಿಂದ ಜೀವವೆನ್ನಾ

೯೧

ಚಾರುಚರಿತೇ! ನಿನ್ನ ಅಡಿಯಿಡುವ ಲೀಲಾವಿ–
ಲಾಸವನು ಕಲಿಯಬೇಕೆನುವ ಮನವುಳ್ಳ ಮನೆ–
ಯಂಚೆಗಳು ತಪ್ಪುಹೆಜ್ಜೆಯ ನಿಡುವ ತಮ್ಮ ನಡಿಗೆಯ ಬಗೆಯ ಬಿಡಲೊಲ್ಲವು;
ಅದುವೆ ಕಾರಣ ನಿನ್ನ ಚರಣ ಕಮಲವು ತನ್ನ

ಚೆಲುವಾದ ಮಣಿಖಚಿತ ನೂಪುರಧ್ವನಿಗಳಾ
ನೆವದಿಂದಲಾ ಅಂಚೆಗೆಳಿಗೆ ಚೆಲುನಡೆಯ ಕಲಿಕೆಯನು ಕಲಿಪಂತಿರುವುದು

೯೨

ಉಂಗುರುಂಗುರಗುರುಳು ನಿಜದೆ ಮೆಲುನಗೆಯರಳು
ಮೆಯ್‌ಶಿರೀಷದ ಮೆಲುಪು ಕುಚತಟವು ಕಲ್ನುಣುಪು
ನಡುವು ಬಲುಬಡವು ದೊಡ್ಡವು ಕುಚನಿತಂಬಗಳು
ಇಂತಪ್ಪ ಶಿವನಕರುಣಾರುಣಾರೂಪೆ ಶಿವೆ ಪೂರೆಗೆ ಜಗವ

೯೩

ಹೇ ದೇವಿ, ತ್ರಿಪುರಾಂತಕನ ಪಟ್ಟದರಸಿ ನೀ
ನಾಗಿಯವನಂತಃಪುರದ ವೊಡತಿಯಾಗಿರುವೆ,
ಅದರಿಂದಲಲ್ತೆ ಪೂಜೆಯ ವೋಜೆ ಚಂಚಲಮನಸ್ಕರಿಗೆ ಸುಲಭವಲ್ಲ;
ಅಂತಿರಲು ದೇವೇಂದ್ರ ಮುಂತಪ್ಪ ದೇವತೆಗ–
ಳೆಲ್ಲರೀ ನಿನ್ನ ಭವನದ ಬಾಗಿಲಾಚೆಯೇ
ನೆಲಸಿದಣಿಮಾದ್ಯಷ್ಟಸಿದ್ಧಿಗಳ ಕೂಡಿರುತ ಸಕಲಸಿದ್ಧಿಯ ಪಡೆವರು

೯೪

ಎಲೆ ದೇವಿ, ಹರಿಹರ ಬ್ರಹ್ಮರುದ್ರರುಗಳಾ
ನಿನ್ನ ಪವಡಿಪ ಮಂಚರೂಪವನೆ ಹೊಂದಿದರು,
ಶಿವನು ತಾನಚ್ಚಬಿಳಿಯವನಾಗಿ ಮೇಲುಹಾಸಿನ ತೋರ್ಕೆಯವನಾದನು;
ನಿನ್ನ ಮೈವೆಳಗಿನಾ ಮಾರ್ಪೊಳಪಿನಿಂದಾದ
ರಾಗ ರಂಜಿತರಕ್ತ ವರ್ಣತ್ವಕಾರಣದೆ
ಶೃಂಗಾರರಸದೆ ಮೈವೆತ್ತುದೆನೆ ಕಂಗಳಿಗೆ ಕೌತುಕವ ಕರೆಯುತಿಹನು

೯೫

ಕಪ್ಪುಕಲೆಯಲ್ಲವದು ಕಸ್ತೂರಿ, ಇಂದು ಬಿಂ–
ಬವದಲ್ಲ ಶುದ್ಧಜಲ, ಹದಿನಾರು ಕಲೆಯಲ್ಲ
ಪರಿಮಳದ ಕರ್ಪೂರವಿವು ತುಂಬಿರುವ ಪಚ್ಚೆಗಲ್ಲಿನ ಕರಂಡವದನು

ಪ್ರತಿದಿವಸವೂ ನೀನು ಭೋಗಿಸಲು ಬಳಸುತಿರೆ
ಬಂದಾಗಲದನು ವಿಧಿ ನಿನ್ನ ಭೋಗಕ್ಕೆಂದೆ,
ಎಲೆದೇವಿ, ಆ ಪರಿಮಳ ದ್ರವ್ಯದಿಂದ ತುಂಬುವನಲ್ತೆ ಮರಳಿ ಮರಳಿ

೯೬

ಹೇ ನಿಷೇವ್ಯೇ, ನಿತ್ಯೆ, ನಿನ್ನೊಡಲಿನಿಂದುದಿಸಿ
ಕಿರಣರೂಪದಿ ಹೊಮ್ಮಿದಣಿಮಾದಿ ಸಿದ್ಧಿಗಳು
ಸೇವಿಸುತ್ತಿರುವ ನಿನ್ನನು ಸದಾ ನಾನೆಂದು ಯಾವಾತ ಭಾವಿಸುವನೋ
ಮುಕ್ಕಣ್ಣಮ್ಮೆಮೆಯನು ಹುಲುಕಡ್ಡಿಗೆಣೆಮಾಡಿ–
ದಾ ಮಹಾಮಹಿಮಗೋಹೋ ಮಹಾಪ್ರಲಯ–
ಕಾಲಾಗ್ನಿಯೇ ನಿರಾಜನವಿಧಿಯಗೈವುದಚ್ಚರಿಯೆ, ಅದು ನಿನಗೆ ಕೊನೆಗೆ

೯೭

ಹೇ ಸತಿ! ವಿಧಾತ್ರನ ಕಳತ್ರವನ್ನೆನಿತೆನಿತು
ಕವಿಜನರು ತಾವ್ ಭಜಿಸದಿಹರು? ಯಾವುದೊ ಧನವ
ಪಡೆದು ಧನಪತಿಯೆನಿಸಿದಾತಾ ಲಕ್ಷ್ಮೀಪತಿಯು ತಾನಾಗದಿಹನು ಜಗದಿ?
ಸತಿಯೆನಿಸಿಕೊಳ್ವಳೊಳು ಸರ್ವೋತ್ತಮೇ ದೇವಿ,
ನಿನ್ನ ವಕ್ಷಸ್ಥಲಾಲಿಂಗನದ ಸೌಭಾಗ್ಯ–
ವದು ಮಹಾದೇವನನ್ನುಳಿದು ಕುರವಕತರುವಿಗೂ ಸುಲಭವಲ್ಲದಿಹುದು

೯೮

ಹೇ ಪರಬ್ರಹ್ಮಮಹಿಷೀ, ಚತುರ್ಮುಖನೆನಿಪ
ಬ್ರಹ್ಮನವಧೂ ವಾಣಿ, ಹರಿಯ ಹೆಂಡಿತಿ ಪದ್ಮೆ,
ಹರನ ಸಹಚರಿಯದ್ರಿತನಯೆ ನೀನೆನುತಾಗಮನರಿತವರು ಪೇಳ್ವರು;
ನೀ ತುರೀಯಳು ಸಕಲ ವಿಶ್ವವೂ ನೀನಹುದು
ಅರಿಯಲಸದಳವಾದಪಾರಮಹಿಮಾಸ್ಪದೆಯು
ನೀ ಮಹಾಮಾಯೆ, ತಾಯೇ, ನೀನು ಭ್ರಮೆ ಹುಟ್ಟಿಸುತ್ತಿರುವೆ ಬಹುರೂಪಿಣಿ

೯೯

ನಿನ್ನ ಭಜಿಪನು ಸರಸ್ವತಿ ಲಕ್ಷ್ಮಿಯವರೊಡನೆ
ವಿಹರಿಸುತ ವಿಧಿಹರಿಗಳಿಗೆ ಕರುಬುಹುಟ್ಟಿಪನು,
ರಮ್ಯದೇಹವ ಪಡೆದು ರತಿಯ ಪಾತಿವ್ರತ್ಯಭಂಗಗೈವನು, ನಿಶ್ಚಿತ;
ಇದಕಿಂತ ಮಿಗಿಲಾಗಿ, ಪಶುಪಾಶ ಬಂಧವನು
ಹರಿದು ಬಿಡುಗಡೆವಡೆದು ಚಿರಕಾಲ ಜೀವಿಸುವ
ಪರಲೋಕದಾನಂದ ರಸವ ಸವಿವನು, ತಾಯೆ, ನೀನು ಕೃಪೆದೋರಲಂದು

೧೦೦

ಹೇ ಜನನಿ! ಅವನ ಪ್ರದೀಪಕಿರಣಗಳಿಂದ
ದಿನಕರಗೆ ನೀರಾಜನವದೆಂತೊ ಅಮೃತಕರ–
ನಿಗೆ ಚಂದ್ರಕಾಂತಶಿಲೆಯಿಂದುಗುವ ನೀರ್ಪನಿನರ್ಘ್ಯವನು ಕೊಡುವುದೆಂತೊ
ಜಲನಿಧಿಯ ಜಲದಿಂದ ಬೊಗಸೆನೀರನುಕೊಂಡು
ಅದಕದನೆ ಸಲಿಸುತ್ತ ತೃಪ್ತಿಪಡಿಸುವುದೆಂತೊ
ಅಂತಲ್ತೆ ನಿನ್ನ ವಾಗ್ವರದಿಂದ ಮೂಡಿದೀ ವಚನರಚನಾಸ್ತೋತ್ರವು

–ಹರಿಃ ಓಂ ತತ್ಸತ್–

ಅನುಬಂಧಗಳು

೧. ಸಂಪುಟ ೮(ಭಾಗ ೧-೨)ರ ವಿಷಯ ಸೂಚಿ
೨. ಎಂವಿಸೀ ಜೀವನಪಥ ಸೂಚಿ
೩. ಎಂವಿಸೀ ಸಮಗ್ರ ಗ್ರಂಥ ಸೂಚಿ
೪. ಎಂವಿಸೀ ಸಮಗ್ರ ಲೇಖನ ಸೂಚಿ
೫. ಎಂವಿಸೀ ಅವರನ್ನು ಕುರಿತ ಗ್ರಂಥಲೇಖನ ಸೂಚಿ

ಅನುಬಂಧ – ೧

ಎಂ.ವಿ.ಸೀ ಜೀವನಚರಿತ್ರೆ ಮತ್ತು ಅನುವಾದ ಸಾಹಿತ್ಯ ವಿಷಯ ಸೂಚಿ

ಸಂಪುಟ ೮ರ(ಭಾಗ ೧ ಮತ್ತು ೨) ಸೂಚಿ

[ಸೂಚನೆ : ಎಂ.ವಿ.ಸೀ. ಅವರ ಜೀವನಚರಿತ್ರೆ ಮತ್ತು ಅನುವಾದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಮಗ್ರ ಗ್ರಂಥ–ಲೇಖನಗಳ ಸೂಚಿ ಇಲ್ಲಿದೆ. ಭಾಗ ೧ ರಿಂದ ೩ ರವರೆಗೆ ಸಂಪುಟ ೮ ಭಾಗ ೧ರಲ್ಲಿ ಪ್ರಕಟವಾಗಿದೆ. ಭಾಗ ೪ ರಿಂದ ೯ ವರೆಗೆ ಸಾಹಿತ್ಯ ಸಂಪುಟ ೮ ಭಾಗ ೨ರಲ್ಲಿ ಪ್ರಕಟವಾಗಿದೆ.]

ಗುಂಪು ೧ – ಆತ್ಮಕಥೆ

ನನ್ನ ಸಾಹಿತ್ಯ ಜೀವನ ಸ್ಮೃತಿಗಳು (ಆತ್ಮಕಥೆ)

ಗ್ರಂಥ : ಎಂ.ವಿ.ಸೀ. ಅವರಿಗೆ ಅರ್ಪಿಸಿದ ಅಭಿವಂದನ ಗ್ರಂಥ 'ಆಸ್ವಾದ'

ಪ್ರಕಾಶಕರು : ಉದಯಭಾನು ಕಲಾ ಸಂಘ, ಬೆಂಗಳೂರು

ಇ. ೧೯೮೩ ಸಂ : ಶ್ರೀವತ್ಸ, ಅನಂತಪದ್ಮನಾಭ ರಾವ್, ಎಚ್‌ಎಂ ರಂಗನಾಥ್. ಪುಟಗಳು ೨೮

ವಿದ್ಯಾರ್ಥಿಯಾಗಿ ನಾನು ಕಂಡಂತೆ (ಪ್ರಸಿದ್ಧ ಕರ್ನಾಟಕ)

ಗುಂಪು ೨ – ಜೀವನಚರಿತ್ರೆ

ಎ.ಆರ್. ರಾಜರಾಜವರ್ಮ (ಜೀವನಚರಿತ್ರೆ)

(ಕೆ.ಎಂ. ಜಾರ್ಜ್ ಅವರ ಇಂಗ್ಲಿಷ್ ಕೃತಿಯ ಅನುವಾದ)

ಪ್ರ. : ಕೇಂದ್ರ ಸಾಹಿತ್ಯ ಅಕಾಡೆಮಿ ೧೯೮೬ ಪುಟಗಳು ೮೬

ಗುಂಪು ೩ – ಕಾದಂಬರಿ – ೧
ಏಳು ಇಪ್ಪಾರಿನ ಮನೆ (ಕಾದಂಬರಿ)
(ನ್ಯಾಥಾನಿಯಲ್ ಹಾರ್ಥಾರ್ನ್ ಅವರ 'ದಿ. ಹೌಸ್ ಆಫ್ ದಿ ಸೆವನ್ ಗೇಬಲ್ಸ್' ಕಾದಂಬರಿಯ ಅನುವಾದ)
ಪ್ರ : ಕಾವ್ಯಾಲಯ, ಮೈಸೂರು, ೧೯೬೬ ಪುಟಗಳು ೪೪೦
ಜೂಡಿಲಕ್ಷ್ಮಿ (ಕಾದಂಬರಿ) – ೨
(ನಯೋಮಿ ಮಿಚಿಸನ್ ಅವರ 'ಜೂಡಿ ಅಂಡ್ ಲಕ್ಷ್ಮಿ' ಕಾದಂಬರಿಯ ಅನುವಾದ) ೧೯೬೫, ಪುಟಗಳು ೧೫೬
ಪ್ರ : ನ್ಯಾಷನಲ್ ಬುಕ್ ಟ್ರಸ್ಟ್‌ರ ಶಾರದಾ ಪ್ರಕಟನಾಲಯ, ಬೆಂಗಳೂರು.

ಗುಂಪು ೪ (ವಿಜ್ಞಾನ)
ಆಕಾಶಯಾನ (ವಿಜ್ಞಾನ ಗ್ರಂಥ)
(ಬಿ.ಕೆ. ಎನ್ ರಾವ್ ಅವರ 'ಏವಿಯೇಷನ್' ಗ್ರಂಥದ ಅನುವಾದ)
ಪ್ರ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ೧೯೪೨, ಪುಟಗಳು ೧೩೪

ಗುಂಪು ೫ – ಸ್ತೋತ್ರ
ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರೀ
(ಶಂಕರರ ಸಂಸ್ಕೃತ ಸ್ತೋತ್ರದ ಅನುವಾದ) 'ಹಸ್ತಪ್ರತಿ ಅಪ್ರಕಟಿತ'

ಗುಂಪು – ೬ ವ್ಯಕ್ತಿ ಚಿತ್ರಗಳು
೧. ಸೋಸಲೆ ಅಯ್ಯಾಶಾಸ್ತ್ರಿ
೨. ಕಾನಕಾನಹಳ್ಳಿ ವರದಾಚಾರ್ಯ
೩. ನಾರಾಯಣಶಾಸ್ತ್ರಿ ಎನ್.ಎಸ್.
೪. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ
೫. ಮೋಟಗಾನಹಳ್ಳಿ ಶಂಕರಶಾಸ್ತ್ರಿ
೬ ನಾರಾಯಣ ಶ್ರೀನಿವಾಸ ರಾಜಪುರೋಹಿತ
೭ ವಾಸುದೇವಾಚಾರ್ಯ
೮. ನಾನು ಕಂಡ ಶಿವರುದ್ರಪ್ಪನವರು
(೧–೮ ಲೇಖನಗಳು ಕನ್ನಡ ವಿಷಯ ವಿಶ್ವಕೋಶದಲ್ಲಿ ಪ್ರಕಟವಾಗಿದೆ)

೯. ಕನ್ನಡಕ್ಕೆ ಒಲಿದು ಬಂದ ಶ್ರೀ
೧೦. ಬಿಎಂಶ್ರೀ ಅವರ ಬಹುಮುಖದ ವಿದ್ವತ್ತು, ಬಹುಮುಖ ಪ್ರತಿಭೆ
೧೧. ಪರಿಷತ್ತನ್ನು ಬೆಳೆಸಿದ ಬಿಎಂಶ್ರೀ
೧೨. ಶ್ರೀಯವರ ವ್ಯಕ್ತಿತ್ವದಲ್ಲಿಯ ವಿರೋಧಾಭಾಸಗಳು
೧೩. ಶ್ರೀ ಸ್ಮೃತಿ
(೯–೧೩ ಲೇಖನಗಳು 'ನಾಡೋಜ ಬಿಎಂಶ್ರೀ' ಗ್ರಂಥದಲ್ಲಿ ಪ್ರಕಟವಾಗಿದೆ)
೧೪. ಶ್ರೀ ಬಸವಣ್ಣನವರು
೧೫. ಮಾರ್ಗದರ್ಶಕ (ರಾಮಕೃಷ್ಣ ಪರಮಹಂಸರು)
೧೬. ಶ್ರೀ ಪುರಂದರದಾಸರು
(೧೪–೧೬ ಲೇಖನಗಳು 'ಬಾಳಿನಬುತ್ತಿ' ಗ್ರಂಥದಲ್ಲಿ ಪ್ರಕಟವಾಗಿವೆ)
೧೭. ಗೋವಿಂದ ಪೈ
(ಗುಡಿನುಡಿಯ ಗೊಮ್ಮಟ)
೧೮. ಬಿಎಂಶ್ರೀ
ವಿದ್ಯಾರ್ಥಿಯಾಗಿ ನಾನು ಕಂಡಂತೆ
೧೯. ಟಿ.ಎಸ್. ವೆಂಕಣ್ಣಯ್ಯ
ಟಿ.ಎಸ್.ವಿ. – ಗುರುವಿನ ಒಂದು ಭಾವಚಿತ್ರ
೨೦. ಎ.ಆರ್. ಕೃ
ಪೂಜ್ಯ ಎ.ಆರ್. ಕೃ ಅವರನ್ನು ಕುರಿತು ನಾಲ್ಕು ನೆನಪಿನ ಮಾತು
೨೧. ಡಿ.ವಿ.ಜಿ.
ಕಗ್ಗದ ಮಂಕುತಿಮ್ಮನಿಗೆ
'ನನ್ನನ್ನು ಕಂಡರಿಸಿದ ರೂವಾರಿ'
೨೨. ತೀ.ನಂ.ಶ್ರೀ
'ನಮೋಗುರುವೆ'
ನಾನು ಕಂಡ ತೀನಂಶ್ರೀ
೨೩. ಮಾಸ್ತಿ
ಶ್ರೀನಿವಾಸನಿಗೆ
'ಗುರುಸ್ಥಾನಿಯರು'
೨೪. ಕೆ. ವೆಂಕಟಪ್ಪ
'ಕಲಾತಪಸ್ವಿ'

೨೫. ಬೇಂದ್ರೆ
ಶ್ರೀ ದ.ರಾ. ಬೇಂದ್ರೆ
'ಚಾರಣಕವಿ ಬೇಂದ್ರೆ'
೨೬. ವಿ.ಸೀ
ವಿ. ಸೀತಾರಾಮಯ್ಯ
'ವಿ.ಸೀ. ನಾನು ತಿಳಿದಹಾಗೆ'
೨೭. ರಾಜರತ್ನಂ ಜಿ.ಪಿ
ಸ್ನೇಹ ಸಾಹಿತ್ಯ ಪರಿಚರ್ಯೆ
೧೭–೨೭ ಲೇಖನಗಳು
'ಪ್ರತಿಮಾ ಗೃಹ' ಪ್ರ. ರಾಘವ ಪ್ರಕಾಶನ, ಬೆಂಗಳೂರು
೧೯೯೦. ೧೪೦ ಪುಟಗಳು
೨೮. ವಿಮರ್ಶಕ ನರಸಿಂಹಸ್ವಾಮಿ
೨೯. ಜಿ. ನಾರಾಯಣ ೧, ೨
೩೦. ಸ್ನೇಹದ ನೆನಪು (ವಿಮರ್ಶಕ ಸಿ.ನರಸಿಂಹಮೂರ್ತಿ)
೩೧. ಚೌಂಡರಸ
೩೨. ತಿಮ್ಮ
೩೩. ಉದಯಾದಿತ್ಯ
೩೪. ಜ್ಯೋತಿರ್ಲಿಂಗಾನುಭವಿ ಶ್ರೀ ಜ.ಚ.ನಿ.
೩೫. ತುಂಬಲೂರಾಚಾರ್ಯ
೩೬. ಪಂಪ ೧–೨
೩೭. ಕರ್ಣನ ಒಂದು ಚಿತ್ರ
೩೮. ಪುರಂದರದಾಸರು
೩೯. ಪೂಜ್ಯ ಕೃಷ್ಣಶಾಸ್ತ್ರಿಗಳಿಂದ ಕಲಿತಪಾಠ
೪೦. ಕುಮಾರವ್ಯಾಸ
೪೧. ಮಾ.ನಾ. ಚೌಡಪ್ಪ
೪೨. ಮಾಸ್ತಿ
೪೩. ದೇಜಗೌ
೪೪. ಹರಿಹರ
(೨೮ ರಿಂದ ೪೪ ಲೇಖನಗಳು ಮುನ್ನುಡಿ ಭಾಷಣ ಲೇಖನಗಳು ಸಂಪುಟ ೭ರಲ್ಲಿ ಪ್ರಕಟವಾಗಿವೆ)

ಗುಂಪು ೭ ಮಕ್ಕಳ ಜೀವನಚರಿತ್ರೆಗಳು

೧. ರನ್ನ
೨. ಯುಧಿಷ್ಠಿರ
೩. ವೈಣಿಕವಿದ್ವಾನ್ ಎಲ್. ರಾಜರಾವ್
೪. ವಿವೇಕಾನಂದ
೫. ಶ್ರೀರಾಮಕೃಷ್ಣಪರಮಹಂಸ

(೧,೨,೩. ಮಕ್ಕಳ ಸಾಹಿತ್ಯ ನಾಟಕ ಸಂಪುಟ ೫ ರಲ್ಲಿ ಪ್ರಕಟವಾಗಿದೆ. ೪ ಲಭ್ಯವಿಲ್ಲ. ಪ್ರಬಂಧಗಳು ಮತ್ತು ವ್ಯಕ್ತಿಚಿತ್ರಗಳು ಸಂಪುಟದಲ್ಲಿ ಪ್ರಕಟವಾಗಿದೆ.)

ಗುಂಪು ೮ (ವ್ಯಕ್ತಿ ಕಥೆಗಳು)

೧. ಗುಮಾಸ್ತೆ ಗುಂಡಪ್ಪ
೨. ನಾಟಕದ ಸುಬ್ಬಣ್ಣ
೩. ಅರಮನೆ ಶಾಮರಾಯರು
೪. ಭಿಕ್ಷಾನ್ನದ ಭಾಗೀರಥಮ್ಮ
೫. ಜಗಲಿ ಜೋಯಿಸರು
೬ ಹಾಲಿನ ಹನುಮಕ್ಕ
೭ ಕೊಟ್ಟಣದ ನೀಲಮ್ಮ
೮. ಆನೆಕಾಲು ರಾಮರಾಯರು
೯. ಒಂಟೆ ಸಂಜೀವ
೧೦. ಕಡಲೆಪುರಿಯ ಕೆಂಪಮ್ಮ
೧೧. ವೀಳ್ಯೆದೆಲೆಯ ಮಂಚಮ್ಮ
೧೨. ಔಷಧದ ಅಜ್ಜಮ್ಮ
೧೩. ಅಂಚೆ ಅನಂತಯ್ಯ

(ಎಂವಿಸೀ ಅವರ ಜೀವನ ನಾಟಕ ಗ್ರಂಥದಲ್ಲಿ ೧–೩ ವ್ಯಕ್ತಿಗಳು ಪ್ರಕಟವಾಗಿವೆ. ಇದು 'ಎಂ.ವಿ.ಸೀ. ಅವರ ಸಮಗ್ರ ಸಣ್ಣಕಥೆಗಳು' (ಸಂಪುಟ ೩–ಗ್ರಂಥದಲ್ಲಿ ಸೇರಿದೆ.)

ಗುಂಪು ೯ ಕಥೆ ಕವಿತೆ ಅನುವಾದಗಳು

೧. ಶಿಲಾಮುಖ (ಹಾರ್ಥಾನಿನ ಮೂರು ಕಥೆಗಳ ರೂಪಾಂತರಗಳು)
೨. ಯೌವನ ಸುಧೆ (ಹಾರ್ಥಾನಿನ ನಾಲ್ಕು ಕಥೆಗಳ ರೂಪಾಂತರ)
೩. ಗುಂಡಿನೇಟು ಮತ್ತು ಇತರ ಕಥೆಗಳು (ಪುಷ್ಕಿನ್ನನ ೫ ಕಥೆಗಳ ಅನುವಾದ)
೪. ರತಿದೇವಿ ಮತ್ತು ಇತರಕಥೆಗಳು ೯ಅನುವಾದ ಮತ್ತು .....
೫. ಬಿಸಿಲುಬೆಳದಿಂಗಳು (ಅನುವಾದಿತ ಮತ್ತು ಸ್ವತಂತ್ರ ಕಥೆಗಳು)
೬ ನಿಲ್ದಾಣಗಳ ನಡುವೆ ೨೫ ಕಥೆಗಳು)
೭ ಪುರಾತನನಾವಿಕ (ಕೋಲರಿಜ್ ಕವಿಯ ಏನ್ಷಿಯಂಟ್ ಮಾರ್‍ರೈನರ್ ಕವಿತೆಯ ಅನುವಾದ)

ಅನುಬಂಧ - ೨

ಎಂ.ವಿ.ಸೀ. ಅವರ ಜೀವನಪಥ

೧೯೧೦ : ಜನನ, ಮೈಸೂರು ಸೆಪ್ಟೆಂಬರ್ ೯ (ಸಾಧಾರಣ ಸಂವತ್ಸರ ಭಾದ್ರಪದ ಶುದ್ಧ ಷಷ್ಠಿ)

೧೯೧೬-೨೬ : ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಿಕ್ಷಣ: (ಸರ್ಕಾರಿ ಪ್ರಾಥಮಿಕ ಹಾಗೂ ಬನುಮಯ್ಯನವರ ವಿದ್ಯಾಶಾಲಾ, ಮೈಸೂರು.)

೧೯೨೦ : ಸಂಗೀತಾಭ್ಯಾಸ (ಮೃದಂಗ) ಪ್ರಾರಂಭ. ಮುಂದೆ ಎಲ್.ರಾಜಾರಾಯರೊಂದಿಗೆ ಅಭ್ಯಾಸ.

೧೯೨೧ : ಚಿತ್ರಕಲಾಭ್ಯಾಸ ಪ್ರಾರಂಭ.

೧೯೨೨ : ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ Pen & Ink draw in ರೇಖಾಚಿತ್ರಗಳಿಗೆ ಪ್ರಶಸ್ತಿ ಪತ್ರ (Certificate of merit)

೧೯೨೩ : ಮದರಾಸಿನ ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಅದೇ ಚಿತ್ರಗಳಿಗೆ ಪ್ರಶಸ್ತಿ ಪತ್ರ.

೧೯೨೮ : ವಿವಾಹ, ಧರ್ಮಪತ್ನಿ ಸೌ॥ಸಾವಿತ್ರಮ್ಮ ಅವರೊಂದಿಗೆ.

೧೯೩೦ : ಮೊದಲ ಕವನ 'ಬೀದಿಯೊಳಗಲೆಯುತಿಹಳಾರಿವಳು ಚೆಲುವೆ' ಕವನವನ್ನು ತೀ.ನಂ.ಶ್ರೀ ಅವರಿಂದ ತಿದ್ದಿಸಿದ್ದು. ಸ್ವಯಂ ಚಿತ್ರ ಬರೆದುಕೊಂಡದ್ದು.

೧೯೩೧ : ಬಿ.ಎ. ಪದವಿ, (ಕನ್ನಡ, ಇಂಗ್ಲಿಷ್ ಚರಿತ್ರೆ)

೧೯೩೨ : ಕೆ.ವೆಂಕಟಪ್ಪನವರ ಶಿಷ್ಯತ್ವದಲ್ಲಿ ಚಿತ್ರಕಲಾಭ್ಯಾಸ.

೧೯೩೩ : ಎಂ.ಎ. ಪದವಿ. ಶ್ರೀಪದಕ (ಕನ್ನಡ): ಆ ಚಿತ್ರಗಳು ಕವನಕ್ಕೆ. ಚಿತ್ರಕಲೆ ಕಲಿಯಲು ಶಾಂತಿನಿಕೇತನ್‌ಗೆ ಪ್ರಯಾಣ, ಟಿ.ಎಸ್.ವೆಂಕಟಣ್ಣಯ್ಯನವರಿಂದ ಬೀಳ್ಕೊಡುಗೆ.

೧೫-೧೧-೧೯೩೪ : ಮಗಳು ಶಾರದಳ ಜನನ

೧೯೩೬ : ಮೊದಲ ಪ್ರಕಟನೆಗಳು: (೧) ಶಿಲಾಮುಖ

		(೨) ಯೌವನ ಸುಧೆ) ಮೊದಲನೇ ಮಗ ವೆಂಕಟೇಶನ ಜನನ (ಮರಣ ೧೯೪೫)
೧೯೩೪–೩೯	:	ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿ
೨೬–೧೧–೧೯೩೯	:	೨ನೇ ಮಗ ಭಾಸ್ಕರನ ಜನನ.
೧೯೩೯–೪೬	:	ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ–ಇಂಗ್ಲಿಷ್ ಕೋಶದ ಸಹ–ಸಂಪಾದಕ
೨೪–೬–೧೯೪೩	:	೩ನೇ ಮಗ ರಾಮಪ್ರಸಾದನ ಜನನ
೨೫–೯–೧೯೪೫	:	೪ನೇ ಮಗ ರಾಧಾಕೃಷ್ಣನ ಜನನ
೧೯೪೬	:	ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭ. "ಹಕ್ಕಿಹಾಡು" ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಹಾಗೂ "ಕನ್ನಡ ಸಾಹಿತ್ಯ ಪರಿಷತ್ತಿನ" ಬಹುಮಾನ.
೧೯೫೧	:	"ರಾಘವ ಪ್ರಕಾಶನ" ಪ್ರಾರಂಭ "ಮಾದನ ಮಗಳು" ಕಾದಂಬರಿಗೆ "ದೇವರಾಜ ಬಹದ್ದೂರ್" ಬಹುಮಾನ.
೧೯೫೩	:	ಬೆಂಗಳೂರು ಸರ್ಕಾರಿ ಕಾಲೇಜಿನ ಕರ್ಣಾಟಕ ಸಂಘವನ್ನು ಶ್ರೀ ಜಿ.ಪಿ.ರಾಜರತ್ನಂ ಅವರಿಂದ ವಹಿಸಿಕೊಂಡದ್ದು.
೨೯–೯–೧೯೫೪	:	೫ನೇ ಮಗ ಶೇಷಾದ್ರಿನಾಥನ ಜನನ.
೧೯೫೭	:	"ಮುಗಿಯದ ಮಾಯೆ" ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ. "ತೊಟ್ಟಿಲು ತೂಗದಕ್ಕೆ" ನಾಟಕಕ್ಕೆ ರಾಜ್ಯ ಸರ್ಕಾರ ಪ್ರಶಸ್ತಿ
೧೯೫೯	:	"ಕರ್ನಾಟಕ ಸಂಘ"ದ ಪುನರಾರಂಭ.
೧೯೬೦	:	"ಜೀವನ ನಾಟಕ" ಕಾದಂಬರಿಗೆ ರಾಜ್ಯ ಸರ್ಕಾರದ ಪ್ರಶಸ್ತಿ.
೧೯೬೧	:	ಆಕಾಶವಾಣಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದು
೧೯೬೩	:	ಕನ್ನಡ ರೀಡರ್ ಆಗಿ ನೇಮಕ.
೧೯೬೪	:	ದಕ್ಷಿಣಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ ನಡೆದ

ಮಕ್ಕಳ ಸಾಹಿತ್ಯದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದು.

೧೯೬೫ : ಅಣ್ಣಾಮಲೈ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ನಡೆದ ಭಾಷಾವಿಜ್ಞಾನ ಗೋಷ್ಠಿಯಲ್ಲಿ ಭಾಗವಹಿಸಿದ್ದು.

೧೯೬೭ : ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಿದ್ದು.

೧೯೬೭ : ನಿವೃತ್ತಿ, ಮಾರ್ಚ್ ೨೪.
ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಿವೃತ್ತರಾದ ಸಮಯದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಪರವಾಗಿ "ರಾಘವ ಸನ್ಮಾನ ಸಮಿತಿ"ಯಿಂದ ಸನ್ಮಾನ (ಅಧ್ಯಕ್ಷತೆ ಡಾ॥ಮಾಸ್ತಿ ವೆಂಕಟೇಶ ಅಯ್ಯಂಗಾರ್)

೧೯೬೭ : ಶ್ರೀ ನಿಡುಮಾಮಿಡಿ ಶ್ರೀಗಳವರಾದ ಡಾ:ಜ.ಚ.ನಿ. ಅವರಿಂದ ಸ್ವರ್ಣ ಪದಕ ಸಮೇತ 'ವಿಚಾರ ರತ್ನಾಕರ' ಎಂಬ ಪ್ರಶಸ್ತಿ.

೧೯೬೮–೭೩ : ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕ (೧೯೭೩–೭೪ ಗೌರವ ಪ್ರಾಧ್ಯಾಪಕ)

೧೯೬೮ : 'ಕವಿರಾಜ ಮಾರ್ಗ' ಪ್ರಕಟಣೆ

೧೯೬೯ : ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದು.

೧೯೭೦ : ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ ಮೂರು ವಿಶೇಷ ಉಪನ್ಯಾಸಗಳು (ವಿಷಯ: "ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ")

೧೯೭೩ : ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
ಮಿಥಿಕ್ ಸೊಸೈಟಿ ಆಶ್ರಯದಲ್ಲಿ ರಾಷ್ಟ್ರಕೂಟ ವಂಶದ ಮತ್ತು ಕಲ್ಯಾಣ ಚಾಲುಕ್ಯರ ವಿಷಯವಾಗಿ ನಡೆದ ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಿದ್ದು.
ಧಾರವಾಡದಲ್ಲಿ ನಡೆದ ದ್ರಾವಿಡ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಪ್ರಬಂಧ ಮಂಡನೆ.
ಬೆಂಗಳೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದು.

೧೯೭೫ : ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದ ಸಂದರ್ಭದಲ್ಲಿ "ಗ್ರಂಥ ಸಂಪಾದನ ಕ್ಷೇತ್ರದಲ್ಲಿ" ಸೇವೆಗಾಗಿ ಪ್ರಶಸ್ತಿ.

೧೯೭೮ : ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಆಶ್ರಯದಲ್ಲಿ ಮೂರು ವಿಶೇಷೋಪ–ನ್ಯಾಸಗಳು (ವಿಷಯ: "ಕನ್ನಡ ಸಾಹಿತ್ಯದಲ್ಲಿ ಶಾಂತರಸ")
ರಾಜ್ಯ ಸರ್ಕಾರದಿಂದ ಆಜೀವ ಗೌರವ ಮಾಸಿಕ ವೇತನ.

೧೯೭೯ : "ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ"ದ ಸ್ಥಾಪನೆ.

೧೯೮೦ : ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ: 'ಕನ್ನಡ ವ್ಯಾಕರಣಗಳು' ಪುಸ್ತಕಕ್ಕೆ.

೧೯೮೨ : ಬೆಂ.ವಿ.ವಿ, ಕನ್ನಡ ಅಧ್ಯಯನ ಕೇಂದ್ರದಲ್ಲಿ, ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷತೆ
ಗೋಕಾಕ್ ವರದಿ ಹೋರಾಟದಲ್ಲಿ ಪಾಲ್ಗೊಂಡು, ನಗರದ ಸಾಹಿತಿ ಕಲಾವಿದರ ಬಳಗದ ಚಟುವಟಿಕೆಗಳ ಸಹಾಯಕ್ಕಾಗಿ 'ಕನ್ನಡಮ್ಮನ ಕೊರಗು' ಪುಸ್ತಕವನ್ನು ಪ್ರಕಟಿಸಿ ದಾನಮಾಡಿದ್ದು.

೧೯೮೩ : ಕನ್ನಡ ಸಾಹಿತ್ಯ ಪರಿಷತ್ತಿನ ತುಮಕೂರು ಜಿಲ್ಲಾ ಸಮಿತಿಯಿಂದ ಡಾ॥ಗೋವಿಂದ ಪೈ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಸನ್ಮಾನ.
ಕೋಲಾರದ ಕನ್ನಡ ಪಕ್ಷ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಯಿಂದ ಸನ್ಮಾನ.
ಲಯನ್ಸ್ ಕ್ಲಬ್ ಬೆಂಗಳೂರು (ಪಶ್ಚಿಮ)ರವರಿಂದ ಸನ್ಮಾನ.
ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಸಮಿತಿ ಕೊಳ್ಳೆಗಾಲದಲ್ಲಿ ನಡೆಸಿದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸನ್ಮಾನ.
ಮೈಕೋ ಕಾರ್ಖಾನೆ, ಬೆಂಗಳೂರು ಅವರಿಂದ ರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನ.
ಬಬ್ಬೂರು ಕಮ್ಮೆ ಸಂಘದಿಂದ ಮೈಸೂರಿನಲ್ಲಿ ಸನ್ಮಾನ.

ಮಾರ್ಚಿ ೧೨, ೧೯೯೦ರಂದು ನಿಧನ

ಕುಟುಂಬ ವಿವರಗಳು:

ಎಂ.ವಿ.ಸೀತಾರಾಮಯ್ಯ : ಕಾವ್ಯನಾಮ "ರಾಘವ"
(ಮೈಸೂರು ವೆಂಕಟದಾಸಪ್ಪನವರ ಸೀತಾರಾಮಯ್ಯ)

ತಂದೆ : ಎಂ.ವೆಂಕಟದಾಸಪ್ಪ (ಮೈಸೂರು)

ತಾಯಿ : ಸಾವಿತ್ರಮ್ಮ (ಅರಕಲಗೂಡು ಛತ್ರದ ರಾಮಣ್ಣನವರ ಮಗಳು)

ಒಡಹುಟ್ಟಿದವರು:

ಅಣ್ಣಂದಿರು : ಇಬ್ಬರು (ಈಗ ಇಲ್ಲ)

ತಮ್ಮಂದಿರು : ಇಬ್ಬರು (ಈಗ ಇಲ್ಲ)

ತಂಗಿಯರು : ಇಬ್ಬರು (ಒಬ್ಬಳು ಈಗ ಇಲ್ಲ)

ಪತ್ನಿ : ಸಾವಿತ್ರಮ್ಮ (ಕೋಣನೂರು ನಂಜುಂಡಯ್ಯನವರ ಮಗಳು)

ಗಂಡುಮಕ್ಕಳು : ಐವರು

ಹೆಣ್ಣುಮಕ್ಕಳು : ಒಬ್ಬಳು

ಅನುಬಂಧ – ೩

ಎಂ.ವಿ.ಸೀ. ಅವರ ಸಮಗ್ರ ಕೃತಿಸೂಚಿ

<u>೧. ಕಾವ್ಯ</u>

೧. **ಹಕ್ಕಿ ಹಾಡು:**
ಸತ್ಯಶೋಧನ ಪ್ರಕಟನ ಮಂದಿರ, ೧೯೪೪ (ದೇವರಾಜ ಬಹದ್ದೂರ್ ಸಾಹಿತ್ಯ ನಿಧಿಯ ಬಹುಮಾನ ೧೯೪೫, ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ, ೧೯೪೫)

೨. **ಆ ಚಿತ್ರಗಳು ಮತ್ತು ಇತರ ಕಥನ ಕವನಗಳು:**
ಸತ್ಯಶೋಧನ ಪ್ರಕಟನ ಮಂದಿರ, ೧೯೪೬ (ಆ ಚಿತ್ರಗಳು: ಬಿ.ಎಂ.ಶ್ರೀ ರಜತೋತ್ಸವ ಸ್ವರ್ಣಪದಕ ಪಡೆದ ಕವಿತೆ, ೧೯೩೩)

೩. **ರಾಗ (ಪ್ರಣಯ ಗೀತೆಗಳು)**
ಸತ್ಯಶೋಧನ ಪ್ರಕಟನ ಮಂದಿರ, ೧೯೪೮

೪. **ಅಶೋಕ ಚಕ್ರ (ದೇಶಭಕ್ತಿ ಕವನಗಳು):**
ಸತ್ಯಶೋಧನ ಪ್ರಕಟನ ಮಂದಿರ, ೧೯೪೭

೫. **ವಿಶ್ವಜ್ಯೋತಿ ಬಾಪು:**
ಸತ್ಯಶೋಧನ ಪ್ರಕಟನ ಮಂದಿರ, ೧೯೪೮

೬. **ರಾಷ್ಟ್ರರಥ:**
ಸತ್ಯಶೋಧನ ಪ್ರಕಟನ ಮಂದಿರ, ೧೯೫೧

೭. **ರಾಷ್ಟ್ರದಿನೋತ್ಸವ ಗೀತೆ:**
ರಾಘವ ಪ್ರಕಾಶನ, ೧೯೫೪

೮. **ಮುಗಿಯದ ಮಾಯೆ:**
ರಾಘವ ಪ್ರಕಾಶನ, ೧೯೫೮ (ದೇವರಾಜ ಬಹದ್ದೂರ್ ಸಾಹಿತ್ಯ ನಿಧಿಯ ಬಹುಮಾನ)

೯. **ಗೀತ ಭಾರತಿ: (ಆಯ್ದ ದೇಶಭಕ್ತಿ ಗೀತೆಗಳ ಸಂಕಲನ)**
ರಾಘವ ಪ್ರಕಾಶನ, ೧೯೬೯

೧೦. **ಹಂಸಪಥ:**
ರಾಘವ ಪ್ರಕಾಶನ, ೧೯೭೧

೧೧. **ಬೀಸಿ ಬಂದ ಗಾಳಿ:**
ರಾಘವ ಪ್ರಕಾಶನ, ೧೯೮೦

೧೨. **ಮೊದಲ ಹೆಜ್ಜೆ (ಪ್ರಾರಂಭದ ಕವನಗಳು):**
ರಾಘವ ಪ್ರಕಾಶನ, ೧೯೮೧.

೧೩. **ಕಾವ್ಯಾಲಾಪ:**
(೪೬ ಬಿಡಿ ಪದ್ಯಗಳ ಸಂಕಲನ; ಕಾವ್ಯ ಜಿಜ್ಞಾಸೆ; ೧೯೪೪. ಸುಮಾರು ೩೫೦ ಪದ್ಯಗಳ ವಿಸ್ತೃತ ಸಂಕಲನ–ಅಪ್ರಕಟಿತ)

೧೪. **ಸೌಂದರ್ಯ ಲಹರಿ:**
(೧೯೮೦) ಶ್ರೀ ಶಂಕರಾಚಾರ್ಯ ರಚಿತ ಸಂಸ್ಕೃತ, ಸೌಂದರ್ಯ ಲಹರಿಯ ಅನುವಾದ: ಅಪ್ರಕಟಿತ_

೧೫. **ಪುರಾತನ ನಾವಿಕ:**
(ಕೋಲರಿಜ್ ಕವಿಯ Ancient Mariner ಕವನದ ಅನುವಾದ: ಅಪ್ರಕಟಿತ)

<u>**೨. ಮಕ್ಕಳ ಪದ್ಯಗಳು**</u>

೧. **ಹೂವಾಡಗಿತ್ತಿ**
ಕಾವ್ಯಾಲಯ, ಮೈಸೂರು (೧೯೪೬; ತೃತೀಯ ಆವೃತ್ತಿ ೧೯೬೮)

೨. **ಹಾವಾಡಿಗ**
ಕಾವ್ಯಾಲಯ, ಮೈಸೂರು; ೧೯೫೮ (ದ್ವಿ.ಆ. ೧೯೬೮)

೩. **ಕೋಡಂಗಿ**
ಕಾವ್ಯಾಲಯ, ಮೈಸೂರು; ೧೯೭೯

<u>**೩. ಸಣ್ಣಕಥೆ**</u>

೧. **ಶಿಲಾಮುಖ (ಹಾಥಾರ್ನಿನ ಮೂರು ಕಥೆಗಳ ರೂಪಾಂತರ):**
ಭಾರತೀ ಸಾಹಿತ್ಯ ಮಂದಿರ, ಬೆಂಗಳೂರು, ೧೯೩೬.

೨. **ಯೌವನ ಸುಧೆ (ಹಾಥಾರ್ನಿನ ನಾಲ್ಕು ಕಥೆಗಳ ರೂಪಾಂತರ):**
ಸ್ವಂತ ಪ್ರಕಟಣೆ, ೧೯೪೬.

೩. **ಮಾರ್ಗದರ್ಶಕ (೧೩ ಸಣ್ಣ ಕಥೆಗಳು)**
ಮನೋಹರ ಗ್ರಂಥಮಾಲೆ, ಧಾರವಾಡ, ೧೯೪೦ (ದ್ವಿ ಮು.೧೯೪೮)

೪. **ರತಿದೇವಿ ಮತ್ತು ಇತರ ಕಥೆಗಳು (೭ ಸಣ್ಣ ಕಥೆಗಳು):**
ಸತ್ಯಶೋಧನ ಪ್ರಕಟನ ಮಂದಿರ, ೧೯೪೫.

೫. **ಕರುಣಾಲಹರಿ (೧೧ ಸಣ್ಣ ಕಥೆಗಳು):**
ಶಾರದಾ ಮಂದಿರ, ಮೈಸೂರು, ೧೯೫೫.

೬. **ಬಿಸಿಲು–ಬೆಳುದಿಂಗಳು (೧೧ ಸಣ್ಣ ಕಥೆಗಳು):**
ಪ್ರಭಾ ಪ್ರಕಟನಾಲಯ, ೧೯೫೩, (ದ್ವಿಮು. ರಾಘವ ಪ್ರಾಕಶನ ೧೯೫೪)

೭. **ಜೀವನ ನಾಟಕ (೧೧ ವ್ಯಕ್ತಿ ಕಥೆಗಳು):**
ರಾಘವ ಪ್ರಕಾಶನ, ೧೯೬೧ (ರಾಜ್ಯ ಸರಕಾರದ ಪ್ರಶಸ್ತಿ)

೮. **ಗುಂಡಿನೇಟು ಮತ್ತು ಇತರ ಕಥೆಗಳು:**
ಕರ್ಣಾಟಕ ಸಂಘ, ಗೌ॥ ಕಾಲೇಜು ಬೆಂಗಳೂರು, ೧೯೬೬
(ಪುಷ್ಕಿನ್ನನ ೫ ಕಥೆಗಳ ಅನುವಾದ)

೯. **ನಿಲ್ದಾಣಗಳ ನಡುವೆ (೨೫ ಸಣ್ಣ ಕಥೆಗಳು):**
ರಾಘವ ಪ್ರಕಾಶನ, ೧೯೭೪

೧೦. **ವಿರಹಿಗಳ ಶೃಂಗಾರ**
(ಕನ್ನಡ ಕಾವ್ಯಗಳಿಂದ ಆಯ್ದ ಪ್ರಣಯ ಪ್ರಸಂಗಗಳು–ಅಪ್ರಕಟಿತ)

೪. ಕಾದಂಬರಿ

೧. **ಭಾಗ್ಯಲಕ್ಷ್ಮಿ:**
ಎಸ್.ಎಸ್.ಎನ್. ಬುಕ್ ಡಿಪೋ, ಬೆಂಗಳೂರು; ೧೯೪೨
(ದ್ವಿಮು. ೧೯೪೪)

೨. **ರಾಬಿನ್ ಸನ್ ಕ್ರೂಸೊ (೧):**
ಎಸ್.ಎಸ್.ಎನ್. ಬುಕ್ ಡಿಪೋ, ಬೆಂಗಳೂರು, ೧೯೪೮

೩. **ಮಾದನ ಮಗಳು:**
ಮನೋಹರ ಗ್ರಂಥಮಾಲೆ, ೧೯೫೦
(ದೇವರಾಜ ಬಹದ್ದೂರ್ ಸಾಹಿತ್ಯ ನಿಧಿ ಬಹುಮಾನ)

೪. **ಸೌಭಾಗ್ಯವತಿ:**
ಎಸ್.ಎಸ್.ಎನ್. ಬುಕ್ ಡಿಪೋ, ೧೯೫೧

೫. **ನಂಜಿನ ಸವಿ:**
ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೫೨
೬. **ಸ್ನೇಹದ ಕಾಣಿಕೆ:**
ರಾಘವ ಪ್ರಕಾಶನ; ೧೯೫೭
೭. **ತಾಯ ಬಯಕೆ:**
ಸುಧಾ ಪ್ರಕಾಶನ,; ೧೯೫೪
(ದ್ವಿಮು. ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೫೯)
೮. **ಕುಂಕುಮ ಭಾಗ್ಯ:**
ಉಷಾ ಸಾಹಿತ್ಯಮಾಲೆ, ೧೯೫೫
೯. **ಜೀವನದ ಜೊತೆಗಾತಿ:**
ಶಾರದಾ ಪ್ರಕಟನಾಲಯ, ೧೯೫೯
೧೦. **ಜೂಡಿ ಲಕ್ಷ್ಮಿ:** (ಇಂಗ್ಲಿಷಿನಿಂದ ಅನುವಾದ)
ನ್ಯಾಷನಲ್ ಬುಕ್ ಟ್ರಸ್ಟ್, ೧೯೬೫.
೧೧. ಏಳು ಇಪ್ಪಾರಿನ ಮನೆ: (ಹಾಥಾರ್ನಿನ ಕಾದಂಬರಿ ಅನುವಾದ)
ಕಾವ್ಯಾಲಯ, ೧೯೬೬.
(ಭಾಗ್ಯಲಕ್ಷಿ ಮತ್ತು ಸೌಭಾಗ್ಯವತಿ ಕಾದಂಬರಿಗಳು ಒಟ್ಟಾಗಿ ಗಂಡನನ್ನು ಗೆದ್ದವಳು ಹೆಸರಿನಲ್ಲಿ ೧೯೭೪ರಲ್ಲಿ ಪ್ರಕಟವಾಗಿದೆ)

<u>೫. ಸಾಹಿತ್ಯ ಸಮೀಕ್ಷೆ</u>

೧. **ಹೊಸಗಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು:**
ರಾಘವ ಪ್ರಕಾಶನ, ೧೯೫೮ (೧೯ ಲೇಖನಗಳು)
೨. **ಕನ್ನಡ ಜೀವನ ಚರಿತ್ರೆ:**
ಕನ್ನಡ ಸಾಹಿತ್ಯ ಪರಿಷತ್ತು, ೧೯೭೩.
೩. **ಶಾಸ್ತ್ರ ಸಾಹಿತ್ಯ:**
ಬೆಂಗಳೂರು ವಿಶ್ವವಿದ್ಯಾಲಯ, ೧೯೭೫.

<u>೬. ನಾಟಕ</u>

೧. **ಹೂವಿನ ಆಸೆ:**
ಭಾರತೀ ಸಾಹಿತ್ಯ ಮಂದಿರ, ೧೯೩೬ (ದ್ವಿಮು.೧೯೪೩)

೨. **ತೆರೆಮರೆಯ ಚಿತ್ರಗಳು:**
ಕಾವ್ಯಾಲಯ, ೧೯೪೧.

೩. **ಸ್ವಯಂವರ:**
ರಾಘವ ಪ್ರಕಾಶನ, ೧೯೫೩.

೪. **ಕವಿಯ ಹೆಂಡತಿ:**
ರಾಘವ ಪ್ರಕಾಶನ, ೧೯೫೫

೫. **ತೊಟ್ಟಿಲು ತೂಗದ ಕೈ:**
ಶಾರದಾ ಪ್ರಕಟನಾಲಯ, ೧೯೫೯
(ಮೈಸೂರು ಸರ್ಕಾರದ ಬಹುಮಾನ)

೬. **ತಿರುಕಿಯ ಕನಸು:**
ಪ್ರ : ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಬೆಂ.

೭. **ಕುಮಾರ ಗೌತಮ:**
ಹಂಸಧ್ವನಿ ಪ್ರಕಾಶನ, ೧೯೭೯ (ಮಕ್ಕಳ ನಾಟಕ)

೮. **ಕೈಕೋಲು:**
ಕಾವ್ಯಾಲಯ, ೧೯೭೯ (ಮಕ್ಕಳ ನಾಟಕ)

೯. **ಕರುಣೆಯ ಕುಡಿ:**
ರಾಘವ ಪ್ರಕಾಶನ, ೧೯೮೦ (ಮಕ್ಕಳ ನಾಟಕ)

<u>೭. ಪ್ರಬಂಧಗಳು</u>

೧. **ಹಿಡಿ ಹೂವು:**
ರಾಘವ ಪ್ರಕಾಶನ, ೧೯೪೬ ('ಕನ್ನಡಮ್ಮನ ಕೊರಗು' ಶೀರ್ಷಿಕೆಯಲ್ಲಿ ಪುನರ್ಮುದ್ರಿತ, ೧೯೮೩)

೨. **ಮುಗಿಲುಗಳು:**
ಎಸ್.ಎಸ್.ಎನ್. ಬುಕ್ ಡಿಪೋ, ೧೯೫೦.
(ದ್ವಿ.ಮು. ಧೂಮಲೀಲೆ ಮತ್ತು ಮುಗಿಲುಗಳು: ರಾಘವ ಪ್ರಕಾಶನ, ೧೯೫೯)

೩. **ಬಾಳಿನ ಬುತ್ತಿ:**
ಸಾಹಿತ್ಯ ಮಂದಿರ, ಬೆಂಗಳೂರು, ೧೯೫೭.

೮. ವ್ಯಕ್ತಿ ಚಿತ್ರ

೧. **ಗುರುಹಿರಿಯರು ಮತ್ತು ಗೆಳೆಯರು (ಅಪ್ರಕಟಿತ)**

೯. ಕಾವ್ಯಮೀಮಾಂಸೆ

೧. **ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ:**
ಮೈಸೂರು ವಿಶ್ವವಿದ್ಯಾನಿಲಯ, ೧೯೭೦.

೨. **ಕನ್ನಡ ಸಾಹಿತ್ಯದಲ್ಲಿ ಶಾಂತರಸ:**
ಕರ್ನಾಟಕ ವಿಶ್ವವಿದ್ಯಾಲಯ, ೧೯೭೦.

೧೦. ಗ್ರಂಥ ಸಂಪಾದನೆ

೧. **ಕವಿರಾಜಮಾರ್ಗ:**
ಕರ್ನಾಟಕ ಸಂಘ, ಗೌ: ಕಾಲೇಜು, ಬೆಂಗಳೂರು ೧೯೬೮, ಇದೇ ಗ್ರಂಥದ ವಿದ್ಯಾರ್ಥಿಗಳ ಆವೃತ್ತಿ ಡಿ.ವಿ.ಕೆ. ಮೂರ್ತಿ ಮೈಸೂರು, ೧೯೭೫.

೨. **ಉದಯಾದಿತ್ಯಾಲಂಕಾರ:**
ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೬೯

೩. **ಅರ್ಚನ:**
ಬೆಂಗಳೂರು ವಿಶ್ವವಿದ್ಯಾಲಯ, ೧೯೭೧.

೪. **ಕೀರ್ತನ ಕುಸುಮಾಂಜಲಿ:**
ಬಿ.ಎಂ.ಶ್ರೀ ಪ್ರತಿಷ್ಠಾನ, ೧೯೮೦

೫. **ಕವಿ ಕವಿವೆಂಕಣ್ಣನ ಕೃತಿಗಳು:**
ಕೆಳದಿ ಗುಂಡಾಜೋಯಿಸರೊಂದಿಗೆ; ಕೆಳದಿ ಮ್ಯೂಸಿಯಂ, ೧೯೮೦.

೬. **ಸೂತ ಭಾರತ:**
ಶ್ರೀ ಕೃಷ್ಣಭಟ್, ಎಂ.ಜಿ.ಹೆಗಡೆ ಅವರೊಂದಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೨

೭. **ಸರ್ವಜ್ಞ ವಚನಗಳು:**
ಕೆ.ಆರ್.ಗಣೇಶ್ ಮತ್ತು ವಿ.ವೆಂಕಟರಾವ್ ಅವರೊಂದಿಗೆ; ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೨.

೮. **ಕೃಷ್ಣದೇವರಾಯನ ದಿನಚರಿ:**
ಡಾ॥ವಿ.ಎಸ್.ಆಚಾರ್ ಅವರೊಂದಿಗೆ; ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೮೩

೯. **ಧ್ರುವ ಚರಿತ್ರೆ:**
ಡಾ॥ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರೊಂದಿಗೆ ಬಿ.ಎಂ.ಶ್ರೀ ಪ್ರತಿಷ್ಠಾನ, ೧೯೮೩.

೧೦. **ಶ್ರೀ ಕೃಷ್ಣ ಬಾಲಲೀಲೆ:**
ಬಿ.ಎಂ.ಶ್ರೀ ಪ್ರತಿಷ್ಠಾನ

೧೧. **ವೀರ ಅಭಿಮನ್ಯು:**
ಕ.ಸಂಘ, ಗೌ॥ಕಾಲೇಜು, ೧೯೬೦,
(ಶ್ರೀಮತಿ ಎಂ.ಎಲ್.ಲಲಿತಮ್ಮನವರ ಜೊತೆ)

೧೨. **ಮಣಿಹ:**
ಸಿದ್ಧಯ್ಯ ಪುರಾಣಿಕ, ಶೇಷಶಾಸ್ತ್ರಿಗಳ ಜೊತೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನ ೧೯೮೨.

೧೩. **ಬೇಂದ್ರೆ ಸ್ಮೃತಿ:**
ಗೋವಿಂದ ಅ.ಜಾಲಿಹಾಳರ ಜೊತೆಯಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನ ೧೯೮೨.

೧೪. **ಹಸ್ತಪ್ರತಿ ಶಾಸ್ತ್ರ:**
ಡಾ॥ ಚಿದಾನಂದಮೂರ್ತಿಯವರ ಜೊತೆಯಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನ, ೧೯೮೩.

<u>೧೧. ವ್ಯಾಕರಣ</u>

೧. **ಪ್ರಾಚೀನ ಕನ್ನಡ ವ್ಯಾಕರಣಗಳು;**
ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು, ೧೯೮೦.

<u>೧೨. ಮಕ್ಕಳ ಸಾಹಿತ್ಯ (ಜೀವನ ಚರಿತ್ರೆ)</u>

೧. **ಯುಧಿಷ್ಠಿರ:**
ರಾಷ್ಟ್ರೋತ್ಥಾನ ಪರಿಷತ್ತು, ಬೆಂಗಳೂರು. ೧೯೭೩
(ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

೨. **ಕವಿರನ್ನ:**
ರಾಷ್ಟ್ರೋತ್ಥಾನ ಪರಿಷತ್ತು, ೧೯೭೬.

೩. **ಕನ್ನಡದ ಕತೆ:**
ಕನ್ನಡ ಸಾಹಿತ್ಯ ಪರಿಷತ್ತು, ೧೯೭೯.

೪. ವೈಣಿಕ ವಿದ್ವಾನ್ ಎಲ್.ರಾಜಾರಾವ್, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೩.
೫. ವಿವೇಕಾನಂದ:
(ವೆಲ್ಲೂರಿನ ಶ್ರೀಮತಿ ಕೃಷ್ಣಕುಮಾರಿ ಅವರ ತೆಲುಗು ಕೃತಿ ಅನುವಾದ) ವಿವೇಕ ಪಬ್ಲಿಷರ್ಸ್, ಬೆಂಗಳೂರು, ೧೯೫೧.)
೬. ಎ.ಆರ್.ರಾಜರಾಜವರ್ಮ:
(ಕೆ.ಎಂ.ಜಾರ್ಜ್ ಅವರ ಇಂಗ್ಲಿಷ್ ಕೃತಿಯ ಅನುವಾದ, ಸಾಹಿತ್ಯ ಅಕಾಡೆಮಿ)

೧೩. ಸಂಕಲನಗಳು

೧. ರಾಘವ ಕವನಕೋಶ :
(ಹಂಸ ಪಥ, ಮುಗಿಯದ ಮಾಯೆ ಮತ್ತು ಗೀತ ಭಾರತಿ ಸಂಕಲನಗಳ ಕೂಡು ಸಂಪುಟ)
೨. ಗೀತ ಭಾರತಿ :
(ಆಯ್ದ ದೇಶಭಕ್ತಿ ಗೀತಗಳ ಸಂಕಲನ) ರಾಘವ ಪ್ರಕಾಶನ ೧೯೬೯
೩. ಗಂಡನನ್ನು ಗೆದ್ದವರು :
(ಭಾಗ್ಯಲಕ್ಷ್ಮಿ ಮತ್ತು ಸೌಭಾಗ್ಯವತಿ ಕಾದಂಬರಿಗಳ ಕೂಡು ಸಂಪುಟ) ಗೀತ ಬುಕ್ ಹೌಸ್ ೧೯೭೪
೪. ರಸಿಕತೆ :
(ಲಲಿತ ಪ್ರಬಂಧ : ಮೂರು ಹೊಸ ಪ್ರಬಂಧಗಳ ಜೊತೆಗೆ ಹಳೆಯವು ಕೆಲವನ್ನು ಸೇರಿಸಿ ಪ್ರಕಟಿಸಿದ ಸಂಕಲನ) ಹಂಸಧ್ವನಿ ಪ್ರಕಾಶನ
೫. ದಾದಿರನ್ನೆ (ಮಕ್ಕಳಿಗಾಗಿ ಕಥನ ಕವನ) :
ಆ ಚಿತ್ರಗಳು ಮತ್ತು ಇತರ ಕವನ ಸಂಕಲನಗಳಿಂದ ಆಯ್ದವು ಹಂಸಧ್ವನಿ ಪ್ರಕಾಶನ ೧೯೬೯.
೬. ಕಾವ್ಯ ಪ್ರದೀಪಿಕೆ :
(ಲೇಖಕರು : ಎಂವಿಸೀ ; ಜಿ.ವಿ.; ಕ.ವೆಂ ಕಾವ್ಯ ಸಮೀಕ್ಷೆ) ಕರ್ನಾಟಕ ಸಂಘ ಗೌ॥ ಕಾಲೇಜು, ಬೆಂಗಳೂರು
೭. ಬಿರಿಮೊಗ್ಗು :
(ವಿದ್ಯಾರ್ಥಿಗಳ ಬರಹ) ಸಂಪಾದಿತ ; ಕ.ಸಂಘ ಗೌ ॥ ಕಾಲೇಜು.

೮. **ಸೊಡರು :**
(ವಿದ್ಯಾರ್ಥಿಗಳ ಕವನ ಸಂಕಲನ) ಸಂಪಾದಿತ ; ಕ. ಸಂಘ ಗೌ : ಕಾಲೇಜು

೯. **ಹೊಳಪು–ಝಳಪು :**
(ಬೇರೆ ಬೇರೆ ಕವಿಗಳ ಯುದ್ಧಗೀತೆಗಳ ಸಂಕಲನ ಸಂಪಾದಿತ : ಗೌ : ಕಾಲೇಜು ಕನ್ನಡ ಸಂಘ)

೧೪. ವಿಶೇಷ ಸಂಚಿಕೆಗಳ ಸಂಪಾದನೆ

೧. **ವಿಕಾಸ :**
(ಮೂರು ಸಂಚಿಕೆಗಳು : ವಿದ್ಯಾರ್ಥಿಗಳ ಪ್ರಬಂಧಗಳು)
ಸಂಪಾದಿತ : ಕ. ಸಂಘ, ಗೌ : ಕಾಲೇಜು

೨. **ಚಿನ್ನದ ಬೆಳಸು :**
ಸಂಪಾದಿತ ಕನ್ನಡ ಸಾಹಿತ್ಯ ಪರಿಷತ್ತಿನ ಸ್ವರ್ಣ ಮಹೋತ್ಸವದ ಪ್ರಕಟನೆ, ಕ.ಸಾ.ಪ. ೧೯೭೦

೩. **ಕೌಸ್ತುಭ :**
ಸಂಪಾದಿತ : ಕನ್ನಡ ಮತ್ತು ಇಂಗ್ಲಿಷಿನಲ್ಲಿ : ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಪ್ರಕಟನೆ, ಕ.ಸಾ.ಪ. ೧೯೭೭

ಅನುಬಂಧ – ೪

ಎಂ.ವಿ.ಸೀ. ಅವರ ಸಮಗ್ರ ಲೇಖನಸೂಚಿ

೧೫. ಗ್ರಂಥ ವಿಮರ್ಶೆ

೧. **ಕುಮಾರ ಸಂಭವ :**
ಕಾವ್ಯ ಪ್ರದೀಪಿಕೆ ೧೯೫೮

೨. **ಕುವೆಂಪು ಅವರ ಪ್ರೇಮದರ್ಶನ :**
ಉಪಾಯನ ಕೃತಿ ಕರಂಡ
ಶ್ರೀ ಕುವೆಂಪು ಸಂಭಾವನಾಗ್ರಂಥ, ಚಿಕ್ಕಮಗಳೂರು ೧೯೬೯

೩. **ಡಿ.ವಿ.ಜಿ. ಅವರ ನಿವೇದನ :**
ಕುಸುಮಾರ್ಪಣೆ, ಬೆಂಗಳೂರು

೪. **ತಿಮ್ಮಪ್ಪದಾಸರ ಕೃಷ್ಣದರ್ಶನ :**
ಜೀವನ ೨೯.೯.೧೯೬೯

೫. **ಗೊರೂರು ಅವರ 'ಹಳ್ಳಿಯ ಚಿತ್ರಗಳು :**
ಗೊರೂರು ಗೌರವಗ್ರಂಥ, ಮೈಸೂರು ೧೯೭೩

೬. **ವಿನಾಯಕರ 'ಚೆಲುವು ನಿಲುವು' (ಪ್ರಬಂಧಗಳು) :**
ವಿನಾಯಕ ವಾಙ್ಮಯ, ಮೈಸೂರು ೧೯೭೩

೭. **ಶ್ರೀನಿವಾಸರ ಗೇಯ ಕಾವ್ಯ :**
'ಶ್ರೀನಿವಾಸ', ಬೆಂಗಳೂರು

೧೬. ವಿಚಾರ ಪ್ರಬಂಧ

೧. **ಇಂದಿನ ಜೀವನ ದರ್ಶನ :**
ನಂದಿನಿ (ದಸರಾ ವಿಶೇಷಾಂಕ)

೨. **ಜ್ಞಾನದೀಪ :**
ವಿಶ್ವಕರ್ನಾಟಕ (ದೀಪಾವಳಿ ಸಂಚಿಕೆ) ೧೯೪೯

೩. **ವಿದ್ಯಾಭ್ಯಾಸದ ಪರಿ–ಗುರಿ :**
ಶಿಕ್ಷಣ–ಸಂಸ್ಕೃತಿ, ಬೆಂಗಳೂರು ೧೯೮೩

೪. **ಸಂಯಮ ಪಾಲನದಿಂದಲೇ ಸಾಹಿತ್ಯದ ಉಳಿವು :**
ವಿಶ್ವಕರ್ನಾಟಕ, ೧೫–೮–೧೯೪೮

೫. **ಭಾಗವತಧರ್ಮ :**
ಸೇವಾಸದನ, ಜನವರಿ ೧೯೭೬

೬. **ಭಾವೈಕ್ಯ :**
ಸಾಧನೆ ೧೯೮೧

೭. **ಕನ್ನಡಕ್ಕೆ ಕ್ರೈಸ್ತರ ಕಾಣಿಕೆ :**
ಕನ್ನಡ ನುಡಿ, ೨೯–೭–೧೯೬೬

೧೭. ಸಾಹಿತ್ಯ ಸಮೀಕ್ಷೆ

೧. **ಕನ್ನಡ ಕಾವ್ಯ :**
೧೯೨೦–೧೯೪೭ (ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ),
ಬೆಂಗಳೂರು ವಿಶ್ವವಿದ್ಯಾಲಯ, ೧೯೭೩

೨. **ಕವಿಕಂಡ ಕಡಲು :**
ಪಂಡಿತ ಮಂಡಲ ಪತ್ರಿಕೆ, ೬–೨–೧೯೭೫

೩. **ಚಲನಚಿತ್ರದಿಂದ ನಾಟಕಕ್ಕೆ ಧಕ್ಕೆಯೇ ? :**
ವಾಕ್ಚಿತ್ರ, ಏಪ್ರಿಲ್ ೧೯೪೬

೪. **ಜನಕ್ಕಾಗಿ ಸಾಹಿತ್ಯ :**
ತಾಯಿನಾಡು, ೧೯೬೦

೫. **ಪರಿವರ್ತನಕಾರ್ಯ (ಸಣ್ಣಕತೆ) :**
ಕನ್ನಡ ನುಡಿ : (ವರ್ಷ ?)

೬. **ಪದ್ಯಕಾವ್ಯಕ್ಕೆ ಪ್ರೋತ್ಸಾಹ :**
ಕನ್ನಡ ನುಡಿ. ೧೪–೭–೧೯೫೧

೭. **ಸಣ್ಣಕತೆಗಳ ಬೆಳವಣಿಗೆ (ಸಾತಂತ್ರ್ಯ ಪೂರ್ವದಲ್ಲಿ) :**
ಕನ್ನಡ ನುಡಿ, ೨೬–೧೨–೧೯೬೩

೮. **ಸಾಹಿತ್ಯದಲ್ಲಿ ಮೌಲ್ಯಗಳು :**
ಸಮನ್ವಯ–೮, ಬೆಂಗಳೂರು ಆಗಸ್ಟ್ ೧೯೬೯

೯. **ಸಾಹಿತ್ಯ ಮತ್ತು ಚಿತ್ರಕಲೆ :**
ಪ್ರಬೋಧಕ ೧.೮+೯, ಫೆಬ್ರವರಿ–ಮಾರ್ಚ್ ೧೯೩೧

೧೦. **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ :**
ಬಿಡುಗಡೆ ಬೆಳ್ಳಿ, ಮೈಸೂರು ೧೯೭೪

೧೧. **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಒಲವು – ನಿಲವುಗಳು – ವಸ್ತು, ಉದ್ದೇಶ ಮತ್ತು ಪಾತ್ರ :**
ಸುವರ್ಣ ಸಂಚಯ, ಮೈಸೂರು ೧೯೬೭

೧೨. **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರೀಯ ಪ್ರಜ್ಞೆ**
೧೯೭೩

<u>೧೮. ಸಂಶೋಧನೆ</u>

೧. **ಉದಯಾದಿತ್ಯಾಲಂಕಾರದ ಕೆಲವು ಸಮಸ್ಯೆಗಳು :**
ಪರಿಷತ್ ಪತ್ರಿಕೆ, ೫೪–೧, ೧೯೬೯

೨. **ಉದಯಾದಿತ್ಯಾಲಂಕಾರ ಕರ್ತೃ ವಿಚಾರ (ವಿವೇಚನೆ) :**
ಕರ್ನಾಟಕ ಭಾರತಿ ೭–೪, ೧೯೭೫

೩. **ಎರಡನೇ ನಾಗವರ್ಮನ ಕಾಲ ವಿಚಾರ :**
ಪರಿಷತ್ಪತ್ರಿಕೆ, ೫೪–೧, ೧೯೬೯

೪. **ಓವನಿಗೆ :**
ಕರ್ನಾಟಕ ಭಾರತಿ, ೬–೪, ೧೯೭೪

೫. **ಕನ್ನಡ ಗ್ರಂಥ ಸಂಪಾದನೆಗೆ ತೀ.ನಂ. ಶ್ರೀ. ಯವರ ಕೊಡುಗೆ :**
ಶ್ರೀಕಂಠ ತೀರ್ಥ, ಬೆಂಗಳೂರು – ೧೯೭೬

೬. **ಕವಿರಾಜಮಾರ್ಗದ ಹೆಸರು–ಒಂದು ಟಿಪ್ಪಣಿ :**
ಪ್ರಬುದ್ಧ ಕರ್ನಾಟಕ, ೫೩–೧

೭. **ಕವಿರಾಜಮಾರ್ಗದಲ್ಲಿನ ರಾಮಾಯಣ ಪದ್ಯಗಳು :**
ಪರಿಷತ್ಪತ್ರಿಕೆ, ೫೧–೧, ೨, ೧೯೬೬

೮. **ಕವಿರಾಜಮಾರ್ಗದಲ್ಲಿ ಕಾರಕ ವಿಚಾರ :**
ಸಾಧನೆ, ೪–೩,೧೯೭೫

೯. **ಕವಿರಾಜಮಾರ್ಗದ ಮೇಲೆ ಉದ್ಭಟನ ಪ್ರಭಾವ :**
ಸಾಧನೆ, ೪–೨, ೧೯೭೫

೧೦. **ಕವಿರಾಜಮಾರ್ಗದ ಮೂರು ಶಬ್ದಗಳ ವಿಚಾರ–ಕೀ, ತೂ, ಪೊಳ್ (ಪುಳ್ ?)**

೧೧. **ಕವಿರಾಜಮಾರ್ಗ :**
ಶ್ರೀ ವಿಜಯ ಕರ್ತೃತ್ವದ ಬಗೆಗೆ ಹೊಸ ಬೆಳಕು, ಪ್ರಬುದ್ಧ ಕರ್ನಾಟಕ ೫೫–೩

೧೨. **ಪುರುಷವ್ರತ ಮತ್ತು ಕವಿರಾಜಮಾರ್ಗ :**
ಪರಿಷತ್ಪತ್ರಿಕೆ

೧೩. **ಕವಿರಾಜಮಾರ್ಗ :**
ಕಾಲ ಕರ್ತೃ, ಸ್ವರೂಪ : ಕವಿಕಾವ್ಯ ಪರಂಪರೆ ೧ ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೫

೧೪. **ಶ್ರೀ ವಿಜಯರ ಕವಿರಾಜಮಾರ್ಗಂ – (ಒಂದು ವಿವರಣೆ) :**
ಸಾಧನೆ ೫–೧, ೧೯೭೬ ಪು. ೧೪೯.

೧೫. **ಸಭಾಮಧ್ಯಲಬ್ಧವರಂ ಶ್ರೀವಿಜಯಂ :**
ಸಾಹಿತ್ಯ ಜೀವಿ (ಜಿ. ವೆಂಕಟಸುಬ್ಬಯ್ಯ ಅಭಿನಂದನ ಗ್ರಂಥ), ಬೆಂಗಳೂರು ೧೯೭೬

೧೬. **ಸರ್ವಜ್ಞನ ತ್ರಿಪದಿಗಳು–ಪುನಃ ಪರಿಷ್ಕರಣದ ಅಗತ್ಯ :**
ಪರಿಷತ್ಪತ್ರಿಕೆ, ೬೦–೧, ೧೯೭೫ ಪು. ೪೩.

<u>೧೯. ಸಾಹಿತ್ಯ ವಿಮರ್ಶೆ</u>

೧. **ಕಥಾ ಸಾಹಿತ್ಯ :**
ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ ೧೯೬೯

೨. **ಕನ್ನಡ ಕಾವ್ಯಗಳಲ್ಲಿ ಪ್ರಣಯ ಕಥೆಗಳು (೧–೬)**

೧) **ಅಮೃತಮತಿಯ ಅಪಾತ್ರ ಪ್ರಣಯ :** ಚಿತ್ರಗುಪ್ತ ವಾರಪತ್ರಿಕೆ, ಬೆಂಗಳೂರು, ೧೭–೨–೧೯೫೦

೨) **ಪ್ರಣಯಚ್ಚಲಿ ಚಂಡಶಾಸನ :** ಚಿತ್ರಗುಪ್ತ, ೨೪–೨, ೧೯೫೦, ೩–೩–೧೯೮೧

೩) **ಕೀಚಕ ವಿಲಾಸ :** ಚಿತ್ರಗುಪ್ತ, ೧೦–೩–೧೯೫೦, ೩೧–೩–೧೯೫೦

೪) ಪ್ರಣಯಸಾವರ್ತ : ಚಿತ್ರಗುಪ್ತ ೨೪-೩-೧೯೫೦, ೩೧-೩-೧೯೫೦

೫) ಪಾಂಡುವಿನ ಮರಣ : ಚಿತ್ರಗುಪ್ತ ೭-೪-೧೯೫೦

೬) ಕಾಮಲತೆ : ಚಿತ್ರಗುಪ್ತ, ೨೮-೪-೧೯೫೦

೩. ಕನ್ನಡ ನಾಟಕ :
ಕನ್ನಡ ನುಡಿ ೩-೭-೧೯೪೦

೪. ಕನ್ನಡ ಸಾಹಿತ್ಯದ ಪಕ್ಷಿನೋಟ (ಹೊಸಗನ್ನಡ ಯುಗ), ಕನ್ನಡ ನುಡಿ, ೫-೩೯, ೧೯೬೨

೫. ಕನ್ನಡ ಸಾಹಿತ್ಯದಲ್ಲಿ ಮಾನವ ಭ್ರಾತೃತ್ವ ಕಲ್ಪನೆ, ನಂದನವನ (ಶ್ರೀ ರಾಘವೇಂದ್ರಸ್ವಾಮಿ ಅಭಿನಂದನ ಗ್ರಂಥ), ಮಲ್ಲಾಡಿಹಳ್ಳಿ ೧೯೭೮

೬. ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಹೆಜ್ಜೆಗಳು :
ಮಲೆನಾಡು, ಆಗಸ್ಟ್ ೧೯೫೬

೭. ಕವಿರಾಜಮಾರ್ಗ-ಕನ್ನಡಿಗರ ಕೈಗನ್ನಡಿ :
ಜನಪದ, ೧೧-೧೩, ನವೆಂಬರ್ ೧, ೧೯೭೬

೮. ಕಾವ್ಯಗಳಲ್ಲಿ ಕರ್ನಾಟಕ :
ಕನ್ನಡ ನುಡಿ ೩೭-೧, ೧೯೭೪

೯. ಕುಮಾರವ್ಯಾಸನ ವರ್ಣನೆ :
ಕನ್ನಡ ನುಡಿ ೧೯೩೮

೧೦. ಕುವೆಂಪು ಸಾಹಿತ್ಯದಲ್ಲಿ ಸಾರ್ವಕಾಲೀನ ಪ್ರಜ್ಞೆ:
ಸಹ್ಯಾದ್ರಿ, ಮೈಸೂರು ೧೯೭೫

೧೧. ಪಂಪನ ಕಾವ್ಯಧರ್ಮ, ಸತ್ಸಂಗ ೧೯೬೮

೧೨. ವಿಮರ್ಶಕ ನರಸಿಂಹಸ್ವಾಮಿ :
ಚಂದನ, ಬೆಂಗಳೂರು ೧೯೭೨

<u>೨೦. ಗ್ರಂಥ ವಿಮರ್ಶೆ</u>

೧. ಅಭಿಜ್ಞಾನ ಶಾಕುಂತಲ (ವಿಜಯ ಗ್ರಂಥ ಪ್ರಕಾಶನ) :
ಸುಧಾ ೨೩-೬-೧೯೭೪

೨. ಆಳಿದ ಮಹಾಸ್ವಾಮಿಯವರು (ಸಿ.ಕೆ.ವೆಂ) :
ಪರಿಷತ್ಪತ್ರಿಕೆ, ೨೬-೨

೩. **ಕರ್ಣಾಟಕ ಕಾದಂಬರಿ** (ಸಂ : ಎನ್. ಅನಂತರಂಗಾಚಾರ್) ಸುಧಾ ೧೧–೫–೧೯೭೫

೪. **ಕನ್ನಡ ಕಾವ್ಯಗಳು :**
ಜೀವನ, ಸಂ : ೨೪

೫. **ಕನ್ನಡ ಒಗಟುಗಳು** (ಶ್ಯಾಮಲಾ)
ಕನ್ನಡ ಮರಾಠಿವಾದ ಅಥವಾ ಕರ್ನಾಟಕದಲ್ಲಿಯ ಮಹಾರಾಷ್ಟ್ರ ಪ್ರದೇಶ ವೆಂ. ಶ್ರೀ ಪಂಡಿತ) : ಪರಿಷತ್ಪತ್ರಿಕೆ, ೨೨–೧, ೨

೬. **ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ** (ಡಾ. ಎಂ.ಎಂ. ಕಲಬುರ್ಗಿ):
ಕನ್ನಡನುಡಿ ೧೬–೮–೧೯೭೩

೭ **ಜೈನರ ಮೂರು ರತ್ನಗಳು** (ಕೆ. ಭುಜಬಲಿಶಾಸ್ತ್ರಿ), ಪರಿಷತ್ಪತ್ರಿಕೆ, ೨೦–೨

೮. **ದ್ರಾವಿಡ ಭಾಷಾ ವಿಜ್ಞಾನ** (ಹಂಪನಾ) ಕನ್ನಡನುಡಿ, ೧೧–೧೩, ೧೯೬೮

೯. **ನಾಡಹಬ್ಬ** (ಶ್ರೀ ರಾಮರಾಯರು) ; ವಿದೇಶೀಯ ಲೋಕೋಪಕಾರಿಗಳು (ಎಸ್. ಸ್ವಾಮಿರಾಮ), ಸರ್.ಸಿ.ವಿ. ರಾಮನ್ ಅವರ ಜೀವನ ಚರಿತ್ರೆ (ಎಸ್.ಎಸ್. ಲೋಕನಾಥ್), ಹಾಡಿನ ಚಿಲುಮೆ (ಹೊಯಿಸಳ) ; ಪರಿಷತ್ಪತ್ರಿಕೆ, ೨೩–೧–೧೯೩೮, ಪು. ೫೮.

೧೦. **ನಿಷ್ಕ್ರಮಣ** (ಹ.ಪಿ. ಜೋಶಿ) ; ಪರಿಷತ್ಪತ್ರಿಕೆ, ೨೦–೧

೧೧. **ಪಕ್ಷ್ಮಲಾಕ್ಷಿ** (ಎಂ.ಜಿ. ನಂಜುಂಡಾರಾಧ್ಯ) ; ಮಹಾಯುದ್ಧ (ವೈ. ಎಂ ಷಣ್ಮುಖಯ್ಯ); ಮಾಂಗಲ್ಯ (ಓ.ಎನ್. ಲಿಂಗಣ್ಣಯ್ಯ) ; ವೈಶಾಖ ಅಥವಾ ಬುದ್ಧನ ಕಡೆಯ ದಿನಗಳು (ಎಂ. ಗೋವಿಂದಪೈ) : ಪುಸ್ತಕ ಪ್ರಪಂಚ, ೨–೨, ಸುವರ್ಣ ಸಂಪುಟ (ಎಚ್.ಪಿ. ವೀರಪ್ಪ) ಸೆಪ್ಟಂಬರ್ ೧೯೪೩

೧೨. **ಭಾನುವಾರದ ಬಯಕೆ** (ರ.ವೆಂ. ಶ್ರೀನಿವಾಸ್) ; ಬೃಂದಾವನ : ಜೀವನ ಸಂ. ೧೪

೧೩. **ಮದುವಣಿಗ ಸೋಮಶೇಖರ :** (ಪರಮಿಪದ್ಮನಾಭಯ್ಯ) : ಪರಿಷತ್ಪತ್ರಿಕೆ ೨೦–೧

೧೪. **ಮಹಾದೇವಿಯಕ್ಕನ ಚರಿತ್ರೆ** (ಟಿ.ಎನ್. ಮಹದೇವಯ್ಯ) : ಪರಿಷತ್ಪತ್ರಿಕೆ ೨೨-೧೨

೧೫. **ಮಾಕಂದ** (ಸಂ : ಆನಂದಮಿತ್ರ) ; ತರುಣ-ಧಮನಿ (ಚಕ್ರಪಾಣಿ ;) ಪರಿಷತ್ಪತ್ರಿಕೆ, ೨೨-೩, ೧೯೩೭, ಪು ; ೧೯೩

೧೬. **ವಿಶ್ವವಾಣಿ** (ಸಂ : ಸಿದ್ದಲಿಂಗಪ್ಪ) ಪರಿಷತ್ಪತ್ರಿಕೆ, ೧೯-೩

೧೭. **ವಾಲ್ಮೀಕ ವೀರರತ್ನ ಪ್ರಕಾಶಿಕೆ :** ಪರಿಷತ್ಪತ್ರಿಕೆ, ೨೦-೨

೧೮. **ಶ್ರೀ ರಾಮಾಶ್ವಮೇಧಂ** (ಗೋವಿಂದ ಪೈ ಸ್ಮಾರಕ ಗ್ರಂಥ ಪ್ರಕಾಶನ) : ಸುಧಾ ೧೬-೬-೧೯೭೪

೧೯. **ಸಂಸ್ಕೃತಿಯ ಸ್ವರೂಪ** (ಡಿ.ವಿ.ಜಿ.) : ಜೀವನ ೨೦-೫, ಆಗಸ್ಟ್ ೧೯೫೪

೨೦. **ಸವ್ಯಸಾಚಿ** (ಉಡುಪಿ ಕಲಾವೃಂದದ ಪ್ರಕಟನೆ) ; ಗಿರಿಜಾ ಕಲ್ಯಾಣವು (ಪಂಪ ಸಾಹಿತ್ಯ ಪ್ರಕಟನಾಲಯ ದಾವಣಗೆರೆ) ಕನ್ನಡ ನುಡಿ ೨೦-೧೦-೧೯೫೭

೨೧. **ಸಾಹಿತ್ಯ ವಾರ್ಷಿಕ** ೧೯೭೧, (ಬೆಂ.ವಿ.ವಿ) : ಸುಧಾ, ೧೯-೮-೧೯೭೩

೨೨. **ಸುಭಾಷಿತಗಳು** (ಅನು : ಎನ್. ರಂಗಾಚಾರ್) ಪ್ರಜಾವಾಣಿ ೨೦-೫-೧೯೫೬

೨೩. **ಸೌಂದರ್ಯಲಹರಿ ಮತ್ತು ಶಿವಮಹಿಮ ಸ್ತೋತ್ರ,** (ಡಾ: ಬಿ.ಪುಟ್ಟಸ್ವಾಮಯ್ಯ ನವರ ಪುಸ್ತಕಕ್ಕೆ ಬರೆದುಕೊಟ್ಟ ಅಭಿಪ್ರಾಯ)

೨೪. **ಸ್ನೇಹಸೂಕ್ತಿ :** ಜೀವನ ನಂ ೧೩

೨೫. **ಹೊನಲು** (ಎಂ.ಜಿ. ಆನಂದಮೂರ್ತಿ) ಕನ್ನಡ ನುಡಿ ಸಂ. ೧, ೧೯೩೮

೨೬. **ಹುಲಿಯ ಮೇವು** ; ದ್ವಾಸುಪರ್ಣ ; ಬೆಟ್ಟದಿಂದ ಬಟ್ಟಲಿಗೆ, ಆಕಾಶವಾಣಿ

೨೭. **ಹೊಸ ಪುಸ್ತಕಗಳು :** ಅಗ್ನಿಕನ್ನೆ, ವಿಲಾಸಿನಿಯ ಅಕಾಲಮರಣ, ನಳಪಾಕ, ಗಾಳಿಯ ಹಾವಳಿ, ಸುಧಾಮ ಚರಿತ್ರೆ, ಪಂಡಿತ ಜವಹರಲಾಲ ನೆಹರು ಚಕ್ರವರ್ತಿಯ ಕೋಗಿಲೆ, ಚಂದ್ರನನ್ನು ತಂದವರು, ಅಲಿವರ್ ಟ್ವಿಸ್ಟ್, ಬಮ್ಮೇರ ಪೋತನ, ಅಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು.

– ಪುಸ್ತಕ ಪ್ರಪಂಚ, ೧–೮ ಮಾರ್ಚ್ ೧೯೩೪

ಚರಿತ್ರಹೀನರು, ಕಳ್ಳಸಂತೆ ಬೆಸ್ತರ ಕರಿಯ, ಪುರಂದರದಾಸರ ಪರಿಚಯ, ಬೆಳಗಾವಿಯಲ್ಲಿ ಕನ್ನಡ ಚಳವಳಿಯ ಸಮಸ್ಯೆ, ಕರ್ನಾಟಕದ ಕಣ್ಮರೆಯಾದ ಆಗಸ್ಟ್ ವೀರರು, ಕ್ರಾಂತಿಯ ನೂರು ವರುಷ, ಗಾಂಧೀಜಿಯರ ರಾಜಕೀಯ ಪತ್ರಗಳು, ನಡುಗಾಲ ಪ್ರಭುತ್ವ, ವಿಪರ್ಯಾಸ, ಮೀನಾಮದುವೆ, ನವೀನ ನಾಟಕಗಳು, ಲೋಹವರಾಹ, ಪುಟಾಣಿ ಪಂಚತಂತ್ರ, ಅಗಲಿದ ಮಗಳು, ಸುಳ್ಳನ ಸೋಲು – ಪುಸ್ತಕ ಪ್ರಪಂಚ, ೧–೮, ಏಪ್ರಿಲ್ ೧೯೪೮೭

ಪೂರ್ಣಚಂದ್ರ, ಬಾಡದಹೂವು ಮುಂಬೆಳಗು, ರಾಗ, ಉದ್ಘೋಷ, ರಘುನಾಥನ ಸಾಹಸ, ಸಂಧಿಕಾಲ, ರಕ್ತ ಸರೋವರ, ಕಸದ ಬುಟ್ಟಿ, ಒಡೆದ ಕನ್ನಡಿ ರಾಬಿನ್ ಹುಡ್, ಕಲಿರ್ತರ್, ಮರಿ ವಿಜ್ಞಾನಿ, ರಂಕುಲ್ ರಾಟೆ, ಮನೆಮದ್ದು.

–ಪುಸ್ತಕ ಪ್ರಪಂಚ, ೧–೧೦, ಮೇ ೧೯೪೭

ಪಲಾಯನ, ರಕ್ತಾಂಜಲಿ, ಪುಣ್ಯಭೂಮಿ, ರುದ್ರವೀಣೆ, ಆಹಾರ ವಿಜ್ಞಾನ–ಸಂತಾನ ವಿಜ್ಞಾನ, ದಾಂಪತ್ಯ ವಿಜ್ಞಾನ, ಕಟ್ಟೆಯ ಬಸವೇಶ್ವರನ ವಚನಗಳು, ಅಕ್ಕಮಹಾದೇವಿ, ಅಮ್ಮ ಮತ್ತು ಬಾಬರನ ಪಾಠ, ಭಾರತದಿಂದ ತೊಲಗಿರಿ, ಜವಾಬ್ದಾರಿ ಸರ್ಕಾರ, ಕೈಲಾಸಂ.

–ಪುಸ್ತಕ ಪ್ರಪಂಚ, ೧–೧೧, ಜೂನ್ ೧೯೭೪

ಕುಮುದಿನಿ, ವಿಧಿ ತಂದ ವಧು, ಸವತಿ, ಲೋಕ ಚರಿತ್ರೆ

–ಪುಸ್ತಕ ಪ್ರಪಂಚ, ೧–೧೨, ಜುಲೈ ೧೯೪೭

ಪುನರಾಗಮನ, ಮಾಧವ ಲೀಲೆ, ಕಾಂಚನ ಮೃಗ, ಹೊಸ ಹೆಜ್ಜೆ, ಪ್ರೇತ ಸಂಸಾರ, ಭಾಸನ ಭಾರತ, ಮಂಜಿನ ಮಣಿ, ಕನ್ನಡದಲ್ಲಿ ವಿಡಂಬನ ಸಾಹಿತ್ಯ, ಯುಗಾಂತರ

–ಪುಸ್ತಕ ಪ್ರಪಂಚ, ೨–೧, ಆಗಸ್ಟ್ ೧೯೪೭

ಕರ್ತವ್ಯ, ಮುರುಕು ಮಂಟಪ, ಕಥಾವಲ್ಲರಿ, ೧೮೫೭ ದೊಡ್ಡ ದಂಗೆ, ಮಹಾತ್ಮರ ಸ್ವಾತಂತ್ರ್ಯ ಭಾರತದ ರಾಜ್ಯ ಘಟನೆ, ನಾಡ ಪದಗಳು

–ಪುಸ್ತಕ ಪ್ರಪಂಚ, ೨–೩, ಅಕ್ಟೋಬರ್ ೧೯೪೭

ಅನಕೃ. ಸತೀ ತುಳಸಿ, ಆಶೆ–ನಿರಾಶೆ

–ಪುಸ್ತಕ ಪ್ರಪಂಚ ೨–೪, ನವೆಂಬರ್ ೧೯೪೭

೨೮. **ನಗರದಲ್ಲಿ ನೆರಳು (ಕಣವಿ)** : ಚೆಂಬೆಳಕು, (ಚೆನ್ನವೀರ ಕಣವಿ ಸಂಭಾವನಾ ಗ್ರಂಥ) ಧಾರವಾಡ ೧೯೮೦

೨೯. **ಶರ್ವರೀ ಸುಷಮೆ (ಪು.ತಿ.ನ.)** : ಯದುಗಿರಿ (ಪು.ತಿ.ನ ಸಂಭಾವನಾ ಗ್ರಂಥ) ಮೈಸೂರು

೩೦. **ಶೂದ್ರರ್ಷಿ (ಗೋವಿಂದ ಪೈ)** ; **ತೆಂಗಾಳಿ (ಶ್ರೀನಿವಾಸ)** ; **ಗೊಮ್ಮಟೇಶ್ವರ, (ಕುವೆಂಪು)** : ಆಕಾಶವಾಣಿ

<u>೨೧. ಕಾವ್ಯ ಮೀಮಾಂಸೆ</u>

೧. **ಅನ್ವಯ ಜಿಜ್ಞಾಸೆ–ಪ್ರತಿಕ್ರಿಯೆ** ; ಪರಿಷತ್ಪತ್ರಿಕೆ ೫೮–೨

೨. **ಅನುಭೂತಾಭ್ಯಾಸ–ಒಂದು ಅಲಂಕಾರ** : ಸಾಧನೆ, ೧–೧

೩. **ಅಷ್ಟಾದಶವರ್ಣನೆ** : ಪ್ರಭಾತ ವಿಶೇಷ ಸಂಚಿಕೆ, ಮಂಗಳೂರು

೪. **ಕನ್ನಡ ಸಾಹಿತ್ಯದಲ್ಲಿ ಶಾಂತರಸ** : ಶಂಕರಮಠ ನವರಾತ್ರಿ ಧರ್ಮ ಸಮ್ಮೇಳನದ ಸಾಹಿತ್ಯ ಗೋಷ್ಠಿಯಲ್ಲಿ ಓದಿದ ಪ್ರಬಂಧ ೧೯೭೫ (ಅಪ್ರಕಟಿತ)

೫. **ಕವಿಗಳ ಅನುಭವ ಸಂಪತ್ತು** : ೧೯೫೯

೬. **ಕರ್ನಾಟಕ ಕಾವ್ಯಕಲೆ** : ಜೀವನ ೧೭–೧೯೬

೭. **ಕಾವ್ಯದ ವಸ್ತು** : ಶ್ರದ್ಧಾಂಜಲಿ (ಮುಳಿಯ ತಿಮ್ಮಪ್ಪಯ್ಯ ಸ್ಮರಣ ಸಂಪುಟ) ಮಂಗಳೂರು, ೧೯೫೬ ಪು. ೧೭೪–೧೮೪

೮. **ಕಾವ್ಯ ಮೀಮಾಂಸೆಯ ಬಗೆಗೆ ಷಡಕ್ಷರ ಕವಿಯ ಚಿಂತನ ಮಂಥನ** : ಮಹಾ ಕವಿ ಷಡಕ್ಷರಿ, ಎಳಂದೂರು, ೧೯೭೫, ಪು. ೫೩–೬೫

೯. **ನಾಟಕ ಕಲೆ** : ಸಮರ್ಪಣೆ, (ಮಂಜಯ್ಯ ಹೆಗ್ಗಡೆ ಅಭಿನಂದನ ಗ್ರಂಥ) ೧೯೫೦, ಪು ೨೨೭–೨೨೯

೧೦. **ಪಂಪನ ಅಲಂಕಾರ ಧ್ವನಿ** : ಸಾಧನೆ, ೩–೩, ೧೯೭೩

೧೧. **ಮಹೋಪಮೆ–ಕನ್ನಡಕ್ಕೆ ಕುವೆಂಪು ಅವರ ಕೊಡುಗೆ** : ಉಡುಗೊರೆ, ಮೈಸೂರು ೧೯೫೬

೧೨. **ರಸಪ್ರಸ್ಥಾನ** : ಸಿದ್ಧಯ್ಯ ಪುರಾಣಿಕ ಅಭಿನಂದನ ಗ್ರಂಥ ೧೯೮೧

೧೩. **ಕಾವ್ಯ–ಕವಿಯ ಅನುಭವ** : ವಿಭೂತಿ ಗಿರಿಯಾಪುರ ೧೯೬೧, ಪು. ೪೫೪–೪೬೧

೧೪. **ವೀರಶೈವ ಸಾಹಿತ್ಯದಲ್ಲಿ ಲಕ್ಷಣ ಪ್ರಜ್ಞೆ**: ಜಂಗಮಜ್ಯೋತಿ, ಚಿತ್ರದುರ್ಗ ೧೯೭೫, ಪು ೨೮೦

೧೫. **ಶಾಕುಂತಲದಲ್ಲಿ ದೈವಪ್ರಾಬಲ್ಯ ದೃಷ್ಟಿ** (ಕಾಳಿದಾಸನ ದೃಷ್ಟಿ–ಸೃಷ್ಟಿ) ಕ.ಸಾ. ಪರಿಷತ್ತಿನ ಪ್ರಕಟನೆ ೧೯೬೬

೧೬. **೧೯೪೭ರ ಸಣ್ಣಕತೆಗಳು** : ವಾಹಿನಿ (ದ್ವಿತೀಯ ವಾರ್ಷಿಕ ಸಂಚಿಕೆ) ಪು. ೧೯೧–೧೯೮

೧೭. **ಶಾಂತರಸ** : ಜೈನಧರ್ಮದ ಕೊಡುಗೆ (ಅಪ್ರಕಟಿತ)

೧೮. **ವಿಮರ್ಶೆಯ ಭಾಷೆ ಮತ್ತು ಪರಿಭಾಷೆ** : (ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ವಿಚಾರಗೋಷ್ಠಿಯಲ್ಲೀ ಓದಿದ ಪ್ರಬಂಧ)

೨೨. ಛಂದಸ್ಸು ವ್ಯಾಕರಣ, ಭಾಷೆ

೧. **ಕನ್ನಡ ಹಾಡಿನ ವಿಕಾಸ ಮತ್ತು ಲಯ ಸ್ವರೂಪ** : ಚಿನ್ನದ ಬೆಳಸು ೧೯೭೦

೨. **ಗೀತಿಕೆ, ಮದನ ಮತಿ, ಅಕ್ಕರಿಕೆ, ಚೌಪದಿ (ಗೆ). ಉತ್ಸಾಹ, ಛಂದೋವಸಂತ ಲಕ್ಷಣ ಪ್ರಯೋಗ** : ಛಂದಸ್ಸಿನ ಚರಿತ್ರೆ (ಮೈ.ವಿ.ವಿ.)

೩. **ಏಳೆಯ ಸ್ವರೂಪ** : ಚಿಂತನ, ಬೆಂಗಳೂರು ೧೯೭೧–೭೨

೪. **ಉದ್ಧಂಡ ಷಟ್ಪದಿಯ ಸಮಸ್ಯೆ (ಸಂಶೋಧನೆ)** : ಪರಿಷತ್ಪತ್ರಿಕೆ ೫೪–೧

೫. **ರಾಘವಾಂಕನು ಷಟ್ಪದಿಯ ನಿರ್ಮಾಪಕನೆ** : ಬೆಳ್ಳಿ ಶಾರದೆ, ಮೈಸೂರು ೧೯೭೩

೬. **ಕನ್ನಡ ನುಡಿಯ ಅಳಿವು–ಉಳಿವು** : ಅಭಿವಂದನೆ, ಮೈಸೂರು ೧೯೫೬

೭. **ಕನ್ನಡದ ತದ್ಧಿತ ಪ್ರತ್ಯಯಗಳು** : ಅಧ್ಯಯನ, ಬೆಂಗಳೂರು ೧೯೮೦

೮. **ಕೆಲವು ಅಕ್ಷರಗಳ ಅನುನಾಸಿಕೋಚ್ಚಾರಗಳು** : ಕನ್ನಡನುಡಿ, ಜನವರಿ–ಫೆಬ್ರವರಿ ೧೯೫೭

೯. **ಪ್ರಾಚೀನ ಕನ್ನಡ ವ್ಯಾಕರಣಗಳು** : ಕನ್ನಡ ಭಾಷೆಯ ಚರಿತ್ರೆ (ಮೈ.ವಿ.ವಿ)

೧೦. **ವ್ಯಾಕರಣ ಮತ್ತು ಹಾಸ್ಯ** : ಸುನಂದಾಭಿನಂದನ, ಬೆಂಗಳೂರು–೧೯೭೪

೧೧. ಶಬ್ದಾವತಾರ : ಗೋವಿಂದಪೈ ಸ್ಮಾರಕ ಉಪನ್ಯಾಸ (ಗೋಖಲೆ ವಿಚಾರ ಸಂಸ್ಥೆ) ೧೯೮೦
೧೨. ಶಿಲಾಹಾರ-ವಂಶನಾಮದ ನಿರ್ವಚನೆ : ಅಪ್ರಕಟಿತ
೧೩. ಕಾವ್ಯಾಲಾಪಾಂಶ್ಚ ವರ್ಜಯೇತ್ : ಜಿ.ಪಿ. ರಾಜರತ್ನಂ ಸ್ಮಾರಕೋಪನ್ಯಾಸ (ಗೊ.ಸಾ.ವಿ. ಸಂಸ್ಥೆ)

<u>೨೩. ಸಂಗೀತ ಮತ್ತು ಕಲೆ</u>

೧. ಬೃಹದ್ದೇಶಿ-ಪರಿಚಯಾತ್ಮಕ ಲೇಖನ : ಪರಿಷತ್ಪತ್ರಿಕೆ, ೬೨-೧, ೨
೨. ಭಾರತೀಯ ಚಿತ್ರಕಲೆ-ಅದರ ಚೇತನ ಮತ್ತು ಬೆಳವಣಿಗೆ : ಹೊಸಬೆಳಕು, ಮೈಸೂರು ೧೯೬೦, ಪು : ೧೪೭-೧೫೬
೩. ರತ್ನಾಕರನ ಕಲಾಭಿಜ್ಞತೆ : ಪರಿಷತ್ಪತ್ರಿಕೆ
೪. ಸ್ವತಂತ್ರ ಭಾರತದಲ್ಲಿ ಕಲಾ ಶಿಕ್ಷಣ, ಕನ್ನಡ ನುಡಿ ೧೬-೧-೧೯೪೮
೫. ಗಮಕ ಕಲೆಯ ಸ್ವರೂಪ : ಗಮಕ ಕಲೆ, ಕ.ಸಾ.ಪ. ೧೯೭೪
೬. ಸಂಗೀತ ಸಾಹಿತ್ಯ : ಲೋಚನ ೧-೧, ೧೯೮೩

<u>೨೪. ವ್ಯಕ್ತಿ ಚಿತ್ರ</u>

೧. ಎತ್ತರ ವ್ಯಕ್ತಿ (ಬೆಳ್ಳಾವೆ ವೆಂಕಟನಾರಾಯಣಪ್ಪ) : (ಅಪ್ರಕಟಿತ)
೨. ಬಿ.ಎಂ.ಶ್ರೀ-(ಅಪ್ರಕಟಿತ)
೩. ಕನ್ನಡದ ಹೊಸ ಸಾಹಿತ್ಯದಲ್ಲಿ ಪ್ರೊ : ಎ.ಆರ್. ಕೃಷ್ಣಶಾಸ್ತ್ರಿಗಳ ಸ್ಥಾನ. ಜೀವನ ೧೩-೪, ೧೯೫೨ ಪು. ೧೧೩
೪. ಕಲಾ ತಪಸ್ವಿ ಕೆ. ವೆಂಕಟಪ್ಪ, ಕನ್ನಡನುಡಿ
೫. ಕಲೆಯಲ್ಲಿ ಪರಿಪಕ್ವ ಸ್ಥಿತಿಯನ್ನು ಮುಟ್ಟಿರುವವರು : ಗಾನಕೋಗಿಲೆ ಜಿ. ಚನ್ನಮ್ಮ ಸನ್ಮಾನ ಸಂಚಿಕೆ, ಬೆಂಗಳೂರು, ಪು. ೧೯-೨೦
೬. ಡಿ.ವಿ. ಗುಂಡಪ್ಪನವರ ಪೂರ್ಣ ವ್ಯಕ್ತಿತ್ವ : ಸಾರ್ವಜನಿಕ, ಬೆಂಗಳೂರು ೧೦-೧೧-೧೯೭೫
೭. ಗುರುವಿನ ಒಂದು ಭಾವಚಿತ್ರ : ಸವಿ ನೆನಪು, ಮೈಸೂರು-೧೯೭೦
೮. ಗುರುಸ್ಮರಣೆ : ಅನಂತರಾಗ, ಮೈಸೂರು-೧೯೭೭

೯. **ಜ್ಯೋತಿರ್ಲಿಂಗಾನುಭವಿ ಶ್ರೀ ಜ.ಚ.ನಿ.** ದಾಸೋಹ ಬೆಂಗಳೂರು, ೧೯೬೩ ಪು. ೧–೧೮
೧೦. **ತಪಸ್ವಿನಿ ಯಶೋಧರ** : ಪೌರವಾಣಿ ೧೯೬೨
೧೧. **ನನ್ನನ್ನು ಕಡೆದ ರೂವಾರಿ ಡಿ.ವಿ.ಜಿ.** : ಕರ್ಮವೀರ ೮–೨–೧೯೭೦
೧೨. **ನಾನು ಕಂಡ ಕೆ. ಗೋಪಾಲಕೃಷರಾಯರು** : ಕನ್ನಡ ನುಡಿ ೧.೩೧, ೧೯೬೮ ಪು. ೪
೧೩. **ನಾನು ಕಂಡ ತೀ.ನಂ.ಶ್ರೀ** : ಕನ್ನಡ ನುಡಿ ೨೯–೧೦, ೧೯೬೬
೧೪. **ನಾನು ಕಂಡ ಶಿವರುದ್ರಪ್ಪನವರು** : ಸ್ನೇಹಕಾರ್ತೀಕ, ಬೆಂಗಳೂರು, ೧೯೭೭
೧೫. **ನುಡಿಸೇವೆ** : ಸ್ವರ್ಣರಶ್ಮಿ, ಬೆಂಗಳೂರು ೧೯೭೯, ಪು. ೧೧–೧೨
೧೬. **ಪೂಜ್ಯ ಎ.ಆರ್.ಕೃ ಅವರನ್ನು ಕುರಿತು ನಾಲ್ಕು ನೆನಪಿನ ಮಾತು** : ಕನ್ನಡ ನುಡಿ, ೩೧–೪–೫, ೧೯೬೮
೧೭. **ಪೂಜ್ಯ ಕೃಷ್ಣಶಾಸ್ತ್ರಿಗಳಿಂದ ನಾನು ಕಲಿತ ಪಾಠ** : ಎ.ಆರ್.ಕೃ. ಜೀವನ ಮತ್ತು ಸಾಧನೆ : ಮೈ.ವಿ.ವಿ. ೧೯೭೧
೧೮. **ಬಳ್ಳಾರಿಯ ಸಮ್ಮೇಳನ – ಅದರ ಅಧ್ಯಕ್ಷರು** : ಕನ್ನಡ ನುಡಿ ೨೧–೫, ೧೯೭೮, ಪು. ೧೧೬–೧೧೮
೧೯. **ವಾಗ್ಗೇಯಕಾರ ವಾಸುದೇವಾಚಾರ್ಯ** : ವಾಗ್ಗೇಯಕಾರ ವಾಸುದೇವಾಚಾರ್ಯ, ಮೈಸೂರು ೧೯೬೫, ಪು. ೨೪೧–೨೪೮
೨೦. **ವಿನಯಶಾಲಿ ವೀರ ಕನ್ನಡಿಗ** : ರಸಷಷ್ಟಿ, ಮೈಸೂರು ೧೯೮೦, ಪು. ೯೫–೧೦೧
೨೧. **ವಿ.ಸೀ. – ನಾನು ತಿಳಿದ ಹಾಗೆ** : ವಿ.ಸೀ. ೭೫, ಬೆಂಗಳೂರು ೧೯೭೩
೨೨. **ಶ್ರೀರಾಮಕೃಷ್ಣ ಪರಮಹಂಸರು** : ಪ್ರಜಾಮತ
೨೩. **ಸಾಹಿತ್ಯ–ರಾಜರತ್ನಂ ಅವರ ಪರಿಚರ್ಯ** : ರಾಜಮಾರ್ಗ, ಬೆಂಗಳೂರು ೧೯೮೦
೨೪. **ವೈಣಿಕ ವಿದ್ವಾನ್ ಎಲ್. ರಾಜಾರಾವ್** : ೧೯೭೯

೨೫. ಮುನ್ನುಡಿ : ಪ್ರಸ್ತಾವನೆ

೧. **ಚಂದ್ರಪ್ರಭ** – (ಜಚನಿ ಗ್ರಂಥಕ್ಕೆ) ೭–೬–೧೯೮೧)
೨. **ಚೆನ್ನಿಗ ಚೆಲವಯ್ಯ** (ಸಂ : ಕ. ರಾ. ಕೃ.) ಜನಪದ ಅಕಾಡೆಮಿ, ಬೆಂಗಳೂರು ೧೯೬೫

೩. **ನ್ಯಾಥಾನಿಯಲ್ ಹಾಥಾರ್ನ್ ಮತ್ತು ಏಳು ಇಪ್ಪಾರಿನ ಮನೆ :** ಕಾವ್ಯಾಲಯ, ಮೈಸೂರು

೪. **ವಿನೋಬ ಜೀವನ ದರ್ಶನ :** ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ಬೆಂಗಳೂರು ೧೯೭೫

೫. **ವೆಂಕಣ್ಣನ ಕೃತಿಗಳು :** ಕೆಳದಿ ಮ್ಯೂಸಿಯಂ, ಕೆಳದಿ ೧೯೮೦

೬. **ಉದಯ ವಂದನೆ :** ವಿ. ಹರಿಕೃಷ್ಣಲಕ್ಷಣ ಅಳವರದಾ, ಕವನ ಸಂಕಲನ, ೧೯೬೩

೭. **ಕಾಣಿಕೆ :** (ಸಂ. ನಾ – ಗೀತಾಚಾರ್ಯ, ಇತರರನ್ನು ಕನ್ನಡ ಅಧ್ಯಯನ ಕೇಂದ್ರ, ಬೆಂ.ವಿ.ವಿ. ಬೆಂಗಳೂರು ೧೯೮೨

೨೬. ಕನ್ನಡ ವಿಶ್ವಕೋಶದ ಬರಹಗಳು

೧. ಅಯ್ಯ ಶಾಸ್ತ್ರಿ ಸೋಸಲೆ
೨. ಉದಯಾದಿತ್ಯಾಲಂಕಾರ
೩. ಕನ್ನಡದಲ್ಲಿ ಪ್ರಬಂಧ ಸಾಹಿತ್ಯ
೪. ಕವಿರಾಜಮಾರ್ಗ
೫. ಕುಮಾರವ್ಯಾಸ
೬. ಖಗೇಂದ್ರ ಮಣಿದರ್ಪಣ
೭. ಗೀತಿಕೆ
೮. ಚಂದ್ರಪ್ರಭ ಪುರಾಣ
೯. ಚೌಂಡರಸ
೧೦. ಜೀವನ ಚರಿತ್ರೆ
೧೧. ಕರ್ನಾಟಕ ಸಂಘಗಳು
೧೨. ಕನ್ನಡ ಸಾಹಿತ್ಯ ಪರಿಷತ್ತು
೧೩. ಕಾನಕಾನಹಳ್ಳಿ ವರದಾಚಾರ್ಯ
೧೪. ತಿಮ್ಮ
೧೫. ತಿಮ್ಮಪ್ಪದಾಸರು
೧೬. ತುಂಬಲೂರಾಚಾರ್ಯ
೧೭. ನೃಪತುಂಗ
೧೮. ನಾರಾಯಣದಾಸರು
೧೯. ನಾರಾಯಣಶಾಸ್ತ್ರಿ
೨೦. ಪಂಪ
೨೧. ಮೋಟಗಾನಹಳ್ಳಿ ಶಂಕರಶಾಸ್ತ್ರಿ
೨೨. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ
೨೩. ರಾಜಪುರೋಹಿತ ನಾರಾಯಣ ಶ್ರೀನಿವಾಸ
೨೪. ವಾಸುದೇವಾಚಾರ್ಯ
೨೫. ಶ್ರೀವಿಜಯ
೨೬. ಸೂಕ್ತಿ ಸುಧಾರ್ಣವ

೨೭. ಬಾನುಲಿ ಬರಹ

೧. ಅಯೋಧ್ಯೆಯ ಅರಸು [ರೂಪಕ]
೨. ಇಂದಿನ ಸಾಹಿತ್ಯದ ಕೆಲವು ಸಮಸ್ಯೆಗಳು [ಭಾಷಣ]
೩. ಕನ್ನಡ ಸಣ್ಣ ಕಥೆ [ಭಾಷಣ]
೪. ಕರೀಮದ್ದು – ಬಿಳೀಹಾವು [ನಾಟಕ]
೫. ಕಾರ್ತಿಕೇಯ [ಸಂಭಾಷಣೆ] ೧೧–೧೨–೧೯೫೬
೬. ಕೈಕೋಲು [ಮಕ್ಕಳ ಕಾರ್ಯಕ್ರಮ]
೭. ಗಾಂಧಿಸ್ಮೃತಿ ೧೦–೮–೧೯೭೯
೮. ಜನ್ನನ ಯಶೋಧರ ಚರಿತೆ [ರೂಪಕ]
೯. ಜೀರ್ಣೋದ್ಧಾರ [ಸಣ್ಣಕತೆ] ಪ್ರ : ಸಮಾಜ ಕಲ್ಯಾಣ
೧೦. ಜೈಮಿನಿ ಭಾರತ [ರೂಪಕ] ಪ್ರ : ಜೀವನ
೧೧. ದಂಡಿಗೆ ಬೆತ್ತ ಹಿಡಿಸಿದಳಯ್ಯ [ರೂಪಕ] ೧೭–೧–೧೯೮೧
೧೨. ಬಾಲಬಸವೇಶ್ವರ [ರೂಪಕ–ಮಕ್ಕಳ ಕಾರ್ಯಕ್ರಮ]
೧೩. ಮಾದನ ಮಗಳು [ರೇಡಿಯೋ ರೂಪಾಂತರ] ಧಾರವಾಡ ನಿಲಯ ೧೬–೧೨–೧೯೭೩
೧೪. ಮಾಲಿನಿ [ನಾಟಕ] ಮೂಲ : ರವೀಂದ್ರನಾಥ ಠಾಕೂರ್, ಪ್ರ : ಜೀವನ
೧೫. ಮೋಹನ ಮುರಲಿ [ರೂಪಕ]
೧೬. ಯತ್ರನಾರ್ಯಸ್ತು ಪೂಜ್ಯತೆ [ರೂಪಕ] ಪ್ರ : ಸಮಾಜ ಕಲ್ಯಾಣ
೧೭. ಯುಗಧರ್ಮವಾಣಿ [ಗೇಯರೂಪಕ]
೧೮. ಸಾಹಿತ್ಯ ಸ್ಮೃತಿಗಳು [೧ ರಿಂದ ೫]
೧೯. ಪುರಂದರದಾಸರು ಮತ್ತು ದಾಸಕೂಟ [ಭಾಷಣ]
೨೦. ಡಾ॥ ಜಿ.ಪಿ. ರಾಜರತ್ನಂ [ಭಾಷಣ] ನವೆಂಬರ್ ೧೯೮೦
೨೧. ಹಸ್ತಪ್ರತಿಗಳ ಸಂಗ್ರಹಣ ಮತ್ತು ಸಂರಕ್ಷಣ [ಭಾಷಣ] ಪ್ರ : ಮಣಿಹ
೨೨. ಹೋರಾಟ [ರೂಪಕ] ಏಪ್ರಿಲ್ ೧೯೬೦
೨೩. ಹೊಸಗನ್ನಡ ಕವಿತೆಯಲ್ಲಿ ಹೇಮಂತ ಋತು ವರ್ಣನೆ [ಭಾಷಣ] ೧೩–೧೦–೬೧ ಪ್ರ : ಶಾರದಾ ಮಂದಿರ

೨೮. ಅನುವಾದ ಗ್ರಂಥಗಳು

೧. **ಆಕಾಶಯಾನ** : [ಸರ್ ಕೆ.ಪಿ. ಪುಟ್ಟಣ್ಣ ಚೆಟ್ಟಿ ಪುದುವಟ್ಟಿನ ಗ್ರಂಥಮಾಲೆ] ಮೈ.ವಿ.ವಿ.

೨. **ಕನ್ನಡ ನಾಡಿನ ಚರಿತ್ರೆ** : [ಮೂಲ : ಸಾಲೆತೋರೆ ಅವರ ಲೇಖನ] ಕ.ಸಾ. ಪರಿಷತ್ತಿನ ಪ್ರಕಟನೆ

೩. **ಠಾಕೂರರು ಮತ್ತು ಪಾಶ್ಚಾತ್ಯ ಸಂಗೀತ** : ರವೀಂದ್ರ ಪೂಜನ : ಬೆಂ. ೧೯೬೩, ಪು. ೧೮೭–೨೦೩

೪. **ತೆಲುಗು ಏಕಾಂಕ ನಾಟಕಗಳು** : [ಎನ್.ಬಿ.ಬಿ.] ಅಪ್ರಕಟಿತ

೫ **ನಿಜವಾದ ಒಲವು, ಒಲ್ಲಭಿಯ ಕಂಗಳು** : [ಮೂ : ಷೇಕ್ಸ್‌ಪಿಯರ್ ಸಾನೆಟ್ ೧೧೬, ೧೩೦] ಷೇಕ್ಸ್‌ಪಿಯರಿಗೆ ನಮಸ್ಕಾರ, ದೆಹಲಿ ೧೯೬೬

೬ **ಮಹಾತ್ಮ** : [ಪುಸ್ತಕ] ಮೂಲ : ಹೆಂಡೋಲ್ಕರ್ ಭಾಗ ೭, ಪು. ೨೭೭–೪೧೫, ಮೈ.ವಿ.ವಿ.

೨೯. "ಇಂಗ್ಲಿಷ್ ಪತ್ರಿಕೆಗಳಲ್ಲಿ ಕನ್ನಡ ಗ್ರಂಥಗಳ ವಿಮರ್ಶೆ"

೧. **ಬಲೆಯ ಬೀಸಿದರು** : ಹಿಂದು, ೭–೮–೧೯೫೫

೨. **ಅಭಿವ್ಯಕ್ತಿ** : ಡೆಕ್ಕನ್ ಹೆರಾಲ್ಡ್

೩. **ಚಂದವಳ್ಳಿಯ ತೋಟ** : ಹಿಂದು, ೧೦–೭–೧೯೫೫

೪. **ದೇವದಾಸಿ ; ಎಚ್ಚಮನಾಯಕ ; ರಾಜಾಮಲಯ ಸಿಂಹ ಭಾಗ–೧** (ಎಂ.ವಿ. ಶ್ರೀನಿವಾಸಾಚಾರ್ಯ) : ಹಿಂದು, ೧೫–೫–೧೯೫೫

೫. **ಫೋಕ್ಲೋರ್ ಆಸ್ ಕೋರ್ ಆಫ್ ಕಲ್‌ಚರಲ್ ಹೆರಿಟೇಜ್** : ಡೆಕ್ಕನ್ ಹೆರಾಲ್ಡ್ ೬–೭–೧೯೬೦

೬ **ಕನ್ನಡ ಮಿಸ್ಸಲಿನಿ** : ಡೆಕ್ಕನ್ ಹೆರಾಲ್ಡ್ ೨೭–೯–೧೯೭೦

೭ **ಕನ್ನಡ ಡಿಂಡಿಮ (ಕುವೆಂಪು)** : ಡೆಕ್ಕನ್ ಹೆರಾಲ್ಡ್

೮. **ಕೇದಿಗೆ ವನ** : ಹಿಂದು ೮–೫–೧೯೫೫

೯. **ನಗೆಯ ನೆಲೆ (ಎಸ್.ಕೆ. ರಾಮಚಂದ್ರರಾವ್)** : **ನಕ್ಷತ್ರಲೋಕ (ಜಿ.ಟಿ. ನಾರಾಯಣರಾವ್)** : ಡೆಕ್ಕನ್ ಹೆರಾಲ್ಡ್

೧೦. **ಶ್ರೀ ಶ್ರೀ ಬಾಬಾರವರ ಶಾಸನಗಳು ಮತ್ತು ಅಮೃತವಾಣಿಗಳು** : ಹಿಂದು ೧೮–೫–೧೯೬೯

೧೧. ಮದುವೆ ಬೇಕೆ (ಎನ್. ಸೀತಾರಾಮಶಾಸ್ತ್ರಿ) : ಡೆಕ್ಕನ್ ಹೆರಾಲ್ಡ್
೧೨. ಸಮಾಜ ಗರ್ಭದಲ್ಲಿ ಜನಿವಾರ ಮತ್ತು ಶಿವದಾರ : ಹಿಂದು ೩೦-೭-೧೯೫೫
೧೩. ಸುಗ್ಗಿಯ ಕಣ (ವಿರೂಪಾಕ್ಷ) : ಹಿಂದು ೨೯-೫-೧೯೬೦
೧೪. ಶಬ್ದಮಣಿ ದರ್ಪಣ ದಿಗ್ದರ್ಶನ (ದೊಡ್ಡಸ್ವಾಮಿ) : ಡೆಕ್ಕನ್ ಹೆರಾಲ್ಡ್
೧೫. ಡಾ: ಜಾಕೀರ್‌ಹುಸೇನ್ (ಮುತ್ತೂರು ಕೃಷ್ಣಮೂರ್ತಿ) : ಡೆಕ್ಕನ್ ಹೆರಾಲ್ಡ್

<u>೩೦. ಇಂಗ್ಲಿಷ್ ಬರಹಗಳು</u>

1. Adoption of Devenagari as an Additional sript for use in Karnataka in particular and in India in General : (Unpublished)
2. A note on the Historical Information in Neminatha Purana by Karnaparya (C 1140)-Unpublished.
3. Art and Architecture : Kaustubha 1975
4. Biographical Writings in Kannada, 1979 (Comparative Indian literature Kerala Sahitya Akademy)
5. Creative writing : P.E.N. 1955.
6. The case system in Kannada : Kannada Studies Vol. : 2-2, 1966.
7. Contribution for symposiam : Traditional Values Modern thinking : Deccan Herald.
8. Chavundaraya and Attimabbe : March of Karnataka 1981 (March)
9. Etymology of silahara-Unpublished.
10. Kannada Literary Journals : P.E.N. August 1963.
11. Kannada Vs Sanskrit ? No. Deccan Herald, 1979.
12. Kavirajamargam : 1982
13. Goravas of Karnataka : Sri Kanthika Mysore 1973 : PP 316-322.

14. Nagari as the First-script of India (A note) ; Old Kannada Souvenir of the First world Kannada meet-Nagapur times, 25-2-1974.
15. Relavance of Grammar in the Study of Poetics : Mythic Society Journel. LXV-2, 1974 : pp : 24-31.
16. Study of Language-Aids & Means, Hindu.
17. Social Function and Ideology of a writer : 1977
18. Sastra Literature during the Kalyana Chalukyan Period. Mysthic Society Journal, Feb : 1976.
19. Sree Purandara Dasa : Life and Thought : 9th National Geetha Gyana Yagna, Bangalore 1981.
20. Sri Ramapattabhishekam by Masti : (Short Note)
21. Taddhita (Derivative) Suffixes in Kannada : Un published.
22. "Bankimachandra" : Note on the Biography of Bankimchandra by Dr. A.R.K.
23. 'Antiquity of Kannada' : Nagapur Karnataka Sangha Souvernir (1974)
24. "Kannada : 1965-1760" Karnataka through the ages 1968.
25. The Place of Kanaka Dasa in Haridasa Literature : (Indluded in "Priceless gold", Publised by Kalidasa Samskitika Sanga, Bangalore)

ಭಾರತೀಯ ಸಾಹಿತ್ಯ ವಿಶ್ವಕೋಶಕ್ಕೆ ಬರೆದ ಕಿರುಲೇಖನಗಳು

1. Brahmashiva
2. Chamarasa
3. Chikkadeva Raja
4. Duragasimha
5. Mummadi Krishana Raja
6. Anthologies of Poetry and Prose in Kannada
7. Ashtaka in Kannada Poetry.
8. Harikatha in Kannada
9. Basavappa Shastri
10. Halakatti, P.G.

11. Awards, Literary
12. Elegy in Kannada Poetry.
13. Encyclopedia's in Kannada
14. Institutions (Literary)
15. Gadayuddha.
16. Grammars in Kannada
17. Kirtana Poems in Kannada
18. Poetics in Kannada.
19. Research (Kannada Literary)
20. Sarvajna
21. Ranna

<u>೩೧. ಇತರೆ</u>

೧. ಏಕಲಿಪಿ ಸಮಸ್ಯೆ : ವಿಚಾರವಾಣಿ, ಮಂಗಳೂರು ೧೯೫೬.
೨. ಒಂದು ಸ್ಮರಣೀಯ ಸಂದರ್ಶನ : ಡಿ.ವಿ.ಜಿ. ಅವರೊಂದಿಗೆ : ಜೀವನ.
೩. ಕನ್ನಡ ನಾಟಕ (ಭಾಷಣ) ಕನ್ನಡ ನುಡಿ (ಸಾರಾಂಶ ಪ್ರಕಟನೆ) ೬–೬–೧೯೪೮
೪. ಕನ್ನಡ ಟೈಪರೈಟರಿಗೊಂದು ಕೀ ಬೋರ್ಡ್ : ಜೀವನ ೧೯೫೩
೫. ಗೊಮ್ಮಟ ದರ್ಶನ : ಉದಯವಾಣಿ, ದೀಪಾವಳಿ ವಿಶೇಷಾಂಕ ೧೯೮೦.
೬. ನಾನು ಮತ್ತು ನನ್ನ ಸಾಹಿತ್ಯ (ಭಾಷಣ) ವ್ಯಾಕರಣ ಗ್ರಂಥಕ್ಕೆ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ೧೯೮೧
೭. ಪಂಚಶೀಲ (ಭಾಷಣ–ಬುದ್ಧಜಯಂತಿಗೆ) ಮಲೆನಾಡು, ೩–೩, ಮೇ, ೫೬ ಪು. ೯.

ಅನುಬಂಧ - ೫

ಎಂ.ವಿ.ಸೀ. ಅವರನ್ನು ಕುರಿತ ಗ್ರಂಥ-ಲೇಖನ ಸೂಚಿ

೧. ಆಸ್ವಾದ (ಎಂ.ವಿ.ಸೀ. ಅವರಿಗೆ ಅರ್ಪಿಸಿದ ಅಭಿನಂದನಗ್ರಂಥ)
ಸಂ : ಶ್ರೀವತ್ಸ, ಅನಂತಪದ್ಮನಾಭರಾವ್, ಎಚ್.ಎಂ. ರಂಗನಾಥ್
ಪ್ರ : ಉದಯಭಾನು ಕಲಾಸಂಘ (ರಿ) ಬೆಂಗಳೂರು ೧೯೮೩

೨. ಎಂ.ವಿ. ಸೀತಾರಾಮಯ್ಯ (ಕಿರಿಪರಿಚಯ-ನುಡಿಮುತ್ತುಗಳು)
ಲೇ : ಎಸ್.ವಿ. ಶ್ರೀನಿವಾಸರಾವ್ ೨೦೦೯
ಪ್ರ : ಎಂ.ವಿ.ಸೀ. ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

೩. ಎಂ.ವಿ.ಸೀ. ೮೦ (ಪರಿಚಯ ಗ್ರಂಥ) ೧೯೮೯
ಸಂ : ವಿ. ವೆಂಕಟರಾವ್, ನಾ ಗೀತಾಚಾರ್ಯ
ಪ್ರ : ಎಂ.ವಿ.ಸೀ. ೮೦ : ಅಭಿನಂದನ ಸಮಿತಿ, ಬೆಂಗಳೂರು

೪. ಮರೆಯಲಾಗದ ನೆನಪು (ಎಂ.ವಿ.ಸೀ. ಕುರಿತು)
ಸಂ : ಎಂ.ಎಸ್. ಭಾಸ್ಕರ್ ೨೦೧೦
ಪ್ರ : ಲಿಪಿ ಪ್ರಕಾಶನ, ಬೆಂಗಳೂರು

೫. ಮಕ್ಕಳ ಎಂ.ವಿ.ಸೀ. (ಜೀವನ ಚರಿತ್ರೆ) ೨೦೧೦
ಲೇ : ಬೆ. ಗೋ ರಮೇಶ್
ಪ್ರ : ಎಂ.ವಿ.ಸೀ. ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೬. ಎಂ.ವಿ.ಸೀ. ಸ್ಮರಣೆ (ವಿವಿಧ ಲೇಖಕರು)
೧೯೯೨ ಸಂ : ನಾ. ಗೀತಾಚಾರ್ಯ
ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೭. **ಕಲಾರಾಘವ (ಸಂಸ್ಮರಣ ಸಂಚಿಕೆ) ೧೯೯೧**
ಸಂ : ಬಿ.ಎಸ್. ವೆಂಕಟರಾಜು, ನಾ ಗೀತಾಚಾರ್ಯ
ಪ್ರ : ಎಂ.ವಿ.ಸೀ. ಸಂಸ್ಮರಣ ಸಮಿತಿ, ಬೆಂಗಳೂರು

೮. **ಎಂ.ವಿ.ಸೀ ನೀತಿ ಮುತ್ತು**
–ಎಸ್.ವಿ. ಶ್ರೀನಿವಾಸರಾವ್
ಪ್ರ. ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಪ್ರಕಟನೆ

೯. ಲೋಚನ (ಜನವರಿ–ಜೂನ್ ೨೦೧೧) ನಂ ೨೫, ಸಂ.೦೧
ಎಂವಿಸೀ ಜನ್ಮಶತಮಾನೋತ್ಸವ ವಿಶೇಷ ಸಂಚಿಕೆ.

೧೦. ಕನ್ನಡ ಪತ್ಯ ಪುಸಕ್ತ ಪ್ರದೀಪಿಕೆ (ವಿಮರ್ಶಾತ್ಮಕ ಲೇಖಗಳ ಸಂಕಲನ)
ಸಂ : ಕೆ.ವೆಂಕಟರಾಮಪ್ಪ, ಎಂ.ವಿ.ಸೀ ಜಿ ವೆಂಕಟಸುಬ್ಬಯ್ಯ
ಪ್ರ : ಇಂಟರ್ ಮಿಡಿಯೇಟ್ ಕಾಲೇಜ್, ಬೆಂಗಳೂರು ೧೯೫೭

೧೧. ಕೆಳಕಂಡ ೧೨ ಎಂವಿಸೀ ಸಮಗ್ರ ಸಾಹಿತ್ಯ ಸಂಪುಟಗಳಿಗೆ ಸಂಪಾದಕರು ಬರೆದ ಪ್ರಸ್ತಾವನೆಗಳು.
ಅ) ಎಂವಿಸೀ ಕಾವ್ಯಸಂಪುಟ
ಆ) ಎಂವಿಸೀ ಸಣ್ಣಕಥೆಗಳ ಸಂಪುಟ
ಇ) ಎಂವಿಸೀ ಪ್ರಬಂಧಗಳು, ವ್ಯಕ್ತಿ ಚಿತ್ರಗಳ ಸಂಪುಟ
ಈ) ಎಂವಿಸೀ ಕಾವ್ಯ ಮೀಮಾಂಸೆ–ಸಾಹಿತ್ಯ ವಿಮರ್ಶೆ ಸಂಪುಟ
ಉ) ಎಂವಿಸೀ ಮಕ್ಕಳ ಸಾಹಿತ್ಯ ಮತ್ತು ನಾಟಕ ಸಂಪುಟ
ಊ) ಎಂವಿಸೀ ವ್ಯಾಕರಣ ಮತ್ತು ಛಂದಸ್ಸ ಸಂಪುಟ
ಋ) ಎಂವಿಸೀ ಮುನ್ನುಡಿ ಲೇಖನ ಭಾಷಣ ಸಂಪುಟ
ೠ) ಎಂವಿಸೀ ಜೀವನಚರಿತ್ರೆ–ಅನುವಾದ ಸಂಪುಟ
ಎ) ಎಂವಿಸೀ ಗ್ರಂಥಸಂಪಾದನೆ ಹಸ್ತಪ್ರತಿ ಸಂಪುಟ
ಏ) ಎಂವಿಸೀ ವಿಚಾರಸಾಹಿತ್ಯ ಸಂಪುಟ
ಐ) ಎಂವಿಸೀ ಇಂಗ್ಲಿಷ್ ಲೇಖನ ಸಂಪುಟ
ಓ) ಎಂವಿಸೀ ಕಾದಂಬರಿ ಸಂಪುಟ

* * * *

'ರಾಘವ' ಎಂಬ ಕಾವ್ಯನಾಮದಿಂದ ಖ್ಯಾತರಾಗಿದ್ದ ಪ್ರೊ. ಎಂ.ವಿ. ಸೀತಾರಾಮಯ್ಯ ಅವರು ಕವನ, ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ಗ್ರಂಥ ಸಂಪಾದನೆ, ಕಾವ್ಯ ಮೀಮಾಂಸೆ, ಸಂಶೋಧನೆ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದವರು. ಗಾಢ ಅಧ್ಯಯನ ಹಾಗೂ ಬರವಣಿಗೆಯ ಅಚ್ಚುಕಟ್ಟಿನಿಂದ ಐದು ದಶಕಗಳ ಕಾಲ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸುವುದರ ಜೊತೆಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ಹಸ್ತಪ್ರತಿಶಾಸ್ತ್ರ ಎಂಬ ನೂತನ ಸಂಶೋಧನಾ ಕ್ಷೇತ್ರವನ್ನು ಆರಂಭಿಸಿ ಅಳಿಸಿ ಹೋಗುತ್ತಿದ್ದ ಪ್ರಾಚೀನ ಸಾಹಿತ್ಯದ ಸಂಗ್ರಹ, ಸಂರಕ್ಷಣೆಯತ್ತ ನಾಡಿನ ಗಮನವನ್ನು ಸೆಳೆದ ಪ್ರೊ. ಎಂ.ವಿ. ಸೀತಾರಾಮಯ್ಯ ಅವರದು ಬಹುಮುಖ ಪ್ರತಿಭೆ.

ಪ್ರಸಕ್ತ ಪ್ರೊ. ಎಂ.ವಿ. ಸೀತಾರಾಮಯ್ಯನವರ ಜನ್ಮಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಸಾಹಿತ್ಯವನ್ನು ಹೊರತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಉದ್ದೇಶಿಸಿದೆ. ಈ ಲೇಖಕರ ಸಮಗ್ರ ಅಧ್ಯಯನ ಮಾಡಲು ಅನುಕೂಲವಾಗಬೇಕೆಂಬುದು ಈ ಯೋಜನೆಯ ಆಶಯ.

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002